




ವಿಶ್ವಪ್ರಭೆ



ಶ್ರೀ ಜಗದ್ಗುರು ಮ



ವಿರಮಠ, ಹುಬ್ಬಳ್ಳಿ



ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ ನಂ. ೩೯

ವಿಶ್ವಪ್ರಭೆ

ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಮಹಾಭಿನಂದನ ಗ್ರಂಥ

ಸಂಪುಟ: ೧

ಸಂಪಾದಕರು:

ಪ್ರೊ. ಜಿ. ಎಚ್. ಹನ್ನೆರಡುಮಠ

ಪ್ರಕಾಶಕರು:

ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳಿ

ಮೂರುಸಾವಿರಮಠ ಹುಬ್ಬಳ್ಳಿ

VISHVAPRABHE: an Anthology of Miscellaneous writings of SHREE MOOJAGAM one of the anthologies in MOOJAGAM MAHABHINANDAN SAMPUTA Vol. I Edited By Prof. G. H. Hanneradumath, Published by Shri Jagadguru Gangadhar Dharma Pracharaka Mandali Moorusavirmath ABHINANDAN SAMITI Hubli-28.

Pages : 608 + 16

Printed at :
Twaritha Mudranalaya Gangapurpet, Gadag.

ಬೆಲೆ : ೨೫೦ ರೂಪಾಯಿಗಳು

೧೯೯೧

ಸಮಗ್ರ ಮೂರೂ ಸಂಪುಟಗಳಿಗೆ ಒಟ್ಟು ಬೆಲೆ: ಒಂದುಸಾವಿರ ರೂಪಾಯಿ

ಮುದ್ರಕರು:
ಕುಂಬಾರಗರಡಿ ಹತ್ತಿರ, ಗಂಗಾಪೂರ ಓಣಿ,
ಫ. ಶಿ.ಯವರ ತ್ವರಿತ ಮುದ್ರಣಾಲಯ,
ಗದಗ–೫೮೨ ೧೦೧

ಮುದ್ರಣ ಅವಧಿ
ಒಂದು ತಿಂಗಳು

ಸಂಪಾದನೆ

"ಚಿತ್ರಭೆ" "ರಜತದೀಪ್ತಿ"ಗಳ ನಂತರ "ವಿಶ್ವಪ್ರಭೆ"ಯನ್ನು ಅಭಿಮಾನಿ ಓದುಗರ ಕೈಗೆ ನೀಡಲು ತುಂಬ ಹರ್ಷವಾಗುತ್ತಿದೆ. ಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ತಮ್ಮ ಷಷ್ಟ್ಯಬ್ದಿಯ ಶ್ರೀಶಿಖರದಲ್ಲಿ ಪೂರ್ಣಜ್ಞ ಗಂಗಾಧರರಾಗಿ ನಿಂತ ನಿಲುವಿನಲ್ಲಿ ಈ ಸುದೀರ್ಘ ಸಂಪಾದನೆಯು ಹೆಬ್ಬೊತ್ತಿಗೆ ಹಬ್ಬಿ ಬರುತ್ತಿದೆ. ಪೂಜ್ಯರಿಗೆ ಸಮಸ್ತ ಚಿಂತನಶೀಲರ ಹಾಗೂ ಅಭಿಮಾನಿಗಳ ಕೊಡುಗೆಯಾಗಿ ಈ "ಮಹಾಭಿನಂದನ" ಸಂಪಾದನ ಸಂಪುಟ ಮೈದಾಳಿದೆ.

ಈ ಮಹಾಭಿನಂದನ ಗ್ರಂಥ ತ್ರಿವಳಿಯ ಗುರಿ ಗಮನ ಇಂತಿದೆ. ಮೊದಲ ಸಂಪುಟದಲ್ಲಿ ಈ ಹೆಬ್ಬೊತ್ತಿಗೆ ಎರಡು ಒಳ ಮೈಗಳನ್ನು ಒಳಗೊಂಡಿದ್ದು; ಪ್ರಥಮ ಭಾಗದಲ್ಲಿ ಪೂಜ್ಯ ಜಗದ್ಗುರುಗಳ ಸಾಧನೆ-ಕಾರ್ಯರಂಗಗಳ ಸಮಗ್ರ ಚಿತ್ರಣ ಬಂದಿದೆ. ಹಲವರು ಹತ್ತಿರದ ಬರಹಗಾರರು ಹೃದಯತುಂಬಿ ಬರೆದ ಲೇಖನ-ಕವನಗಳ ಭಾವಮಾಲೆ ಇದು. ಎಲ್ಲರ ಮಮತೆಯೋ ಹೂಬಳ್ಳಿ ಫಲಪುಷ್ಪವಾಗಿ ಈ ಗೊಂಚಲು ತುಂಬಿದೆ. ಮೊದಲ ಸಂಪುಟದ ಉತ್ತರ ಭಾಗದಲ್ಲಿ ಬಹುಮುಖ್ಯವಾದ ಚಿಂತನಶೀಲ ಲೇಖನಗಳ ಸಂಗ್ರಹವಿದೆ. ಕರ್ನಾಟಕದ ಹಾಗೂ ಹೊರನಾಡಿನ ಹೆಸರಾಂತ ಲೇಖಕರ ತುಂಬ ಉಪಯುಕ್ತ ಲೇಖನಗಳು ಇಲ್ಲಿ ಹಂದರಿಸಿವೆ.

ಮಹಾಭಿನಂದನ ಸಂಪಾದನೆಯ ಎರಡನೆಯ ಸಂಪುಟ ತುಂಬ ವಿಶಿಷ್ಟವೂ ಗಮನಾರ್ಹವೂ ಆಗಿದೆ. ಇಲ್ಲಿ ಈ ಸಂಪಾದಕನ ಪ್ರಾಮಾಣಿಕ ಅಭಿಲಾಷೆ ಹಾಗೂ ಪ್ರಯತ್ನ ರೂಪಗೊಂಡದ್ದನ್ನು ತಾವು ಗಮನಿಸಬಹುದು. ಕಾರಣ ಪೂಜ್ಯ ಜಗದ್ಗುರುಗಳಿಂದ ರಚಿತವಾದ ಸಮಗ್ರ ಗ್ರಂಥಗಳು ಎಲ್ಲೆಲ್ಲೋ ಹೋಗಿಬಿಟ್ಟಿದ್ದವು. ಕೆಲ ಪುಸ್ತಕಗಳು ನಾಶವೂ ಆಗಿವೆ. ಆದ್ದರಿಂದ ಅವರ ಸಮಗ್ರ ಸಾಧನೆಯು ಸಾಹಸ ನಾಶವಾಗಿ ಲೋಪವಾಗಬಾರದೆಂದು ಎಲ್ಲ ಪುಸ್ತಕಗಳನ್ನು ಒಂದೆಡೆ ವೈಜ್ಞಾನಿಕವಾಗಿ ಕಾಲಕ್ರಮಗೊಳಿಸಿ ಅಚ್ಚುಹಾಕಲಾಗಿದೆ.

ಪ್ರಾರಂಭದಲ್ಲಿ ಸಂಪಾದಕರಿಂದ ಬರೆದ ಸಮಗ್ರ ಪುಸ್ತಕಗಳ ಸಾರ ದರ್ಶನವನ್ನು ನೀಡುವ ಲೇಖನವನ್ನು ಅಚ್ಚುಹಾಕಲಾಗಿದೆ. ಕೊನೆಯಲ್ಲಿ ಆಯಾ ಗ್ರಂಥಗಳ ಬಗ್ಗೆ ಅಲ್ಲಲ್ಲಿ ಪ್ರಕಟವಾದ ಕೆಲವು ವಿಮರ್ಶಾ ಲೇಖನಗಳನ್ನು ಅಚ್ಚುಹಾಕಿದ್ದೇವೆ ಈ ಸಮಗ್ರ ಗ್ರಂಥಗಳ ದ್ವಿತೀಯ ಸಂಪುಟವು ಅನಿವಾರ್ಯವಾಗಿ ತುಂಬಾ ದೊಡ್ಡ ದಾಯಿತು. ಆದ್ದರಿಂದ ಮುದ್ರಣಾಲಯದವರ ಸೂಚನೆಯಂತೆ ಇದನ್ನು ಎರಡು ಪ್ರತ್ಯೇಕ ಹೆಬ್ಬೊತ್ತಿಗೆಗಳಲ್ಲಿ ಅಚ್ಚುಹಾಕಿದ್ದೇವೆ.

ಮಹಾಭಿನಂದನ ಸಂಪುಟದ ಮೂರನೆಯ ಸಂಪುಟವು ಈ ಗ್ರಂಥತ್ರಯಕ್ಕೆ ಕಲಶಪ್ರಾಯವಾದದ್ದು. ಕಾರಣ ವೀರಶೈವ ಸಿದ್ಧಾಂತವನ್ನು ಸಮಸ್ತ ಓದುಗರಿಗೆ ಒದಗಿಸುವ ನಮ್ಮ ಹಿರಿಯ ಕನಸು ಇಲ್ಲಿ ನನಸಾಗಿದೆ. ಕರ್ನಾಟಕದ ಹಾಗೂ ಹೊರನಾಡಿನ ಹೆಸರಾಂತ ಲೇಖಕರೆಲ್ಲ ಇಲ್ಲಿ ಪಾಲ್ಗೊಂಡಿರುವದನ್ನು ಇಲ್ಲಿ ಕಾಣಬಹುದು.

ಈ ಸಂಪಾದನೆಯ ವೈಶಿಷ್ಟ್ಯ

ಅನೇಕ ಕಾರಣಗಳಿಂದ ಬಹುಶಃ ಕರ್ನಾಟಕದ ಸಾಹಿತ್ಯೇತಿಹಾಸದಲ್ಲಿಯೇ ಈ ಮಹಾಭಿನಂದನ ಗ್ರಂಥ ಸಂಪುಟವು ವೈಶಿಷ್ಟ್ಯವನ್ನು ಮೆರೆದಿದೆ. ಷಷ್ಟ್ಯಬ್ದಿ ಗ್ರಂಥಗಳ ಗಾತ್ರದಲ್ಲಿಯೂ ಇದು ಕರ್ನಾಟಕದಲ್ಲಿ ಪ್ರಥಮಸ್ಥಾನ ಪಡೆದಿದೆ. ಈ ಒಂದು ಸಮಸ್ತ ಪುಸ್ತಕಕ್ಕೆ ವೆಚ್ಚವಾದ ಮುದ್ರಣ ಹಾಗೂ ಹಾಳಿಯ ವೆಚ್ಚವೂ ೫ ಲಕ್ಷ ನಿಲುಕಿದೆ. ಇದಕ್ಕೆಲ್ಲ ಮುಖ್ಯಕಾರಣ ಪೂಜ್ಯ ಜಗದ್ಗುರುಗಳಿಗಿರುವ ಕೊನೆಯಿಲ್ಲದ ಪುಸ್ತಕ ಪ್ರೀತಿ. ಜಗದ್ಗುರುಗಳು ಸ್ವಯಂ ಕವಿಗಳೂ ಲೇಖಕರೂ ಆಗಿದ್ದು ಸಾಹಿತ್ಯ ಗ್ರಂಥಗಳ ಅಭಿಮಾನಿಗಳೂ ಆಗಿದ್ದಾರೆ. ಅವರ ೬೦೦ ಗ್ರಂಥಗಳ ಮುದ್ರಣದ ಬೃಹದ್ಯೋಜನೆಯನ್ನು ಪ್ರಾರಂಭದಲ್ಲಿ ಸಿದ್ಧಪಡಿಸುವ ಭಾಗ್ಯ ಈ ಸಂಪಾದಕನ ಪಾಲಿಗೆ ಬಂತು. ಆ ಯೋಜನೆಯ ಅಡಿಯಲ್ಲಿ ಈಗಾಗಲೇ ನಾಲ್ಕು ನೂರು ಗ್ರಂಥಗಳು ಅಚ್ಚಾಗಿದ್ದು ಒಂದು ಪವಾಡವೇ ಸರಿ. ಈಗಾಗಲೇ ಈ ಗ್ರಂಥಗಳಿಗೆ ಅಜಮಾಸು ಒಂದು ಕೋಟಿ ಹಣ ಖರ್ಚಾಗಿದ್ದು ಭಾರತದ ಮಠಗಳ ಇತಿಹಾಸದಲ್ಲಿಯೇ ಅಚ್ಚರಿಯ ಸಂಗತಿ.

ಗ್ರಂಥ ಸಂಪಾದನೆಯ ಉದ್ದಕ್ಕೂ ಪೂಜ್ಯ ಜಗದ್ಗುರುಗಳಿಂದ ನನಗೆ ನಿರಂತರ ಮಾರ್ಗದರ್ಶನ ಹಾಗೂ ಪ್ರೋತ್ಸಾಹ ದೊರೆಯಿತು.

ನಮ್ಮೊಂದಿಗೆ ಚರ್ಚೆಯಲ್ಲಿ ಹತ್ತಿರವಾಗಿ ಪಾಲ್ಗೊಂಡ "ತ್ವರಿತ ಮುದ್ರಣಾಲಯ"ದ ಶ್ರೀ ಫ. ಶಿ. ಭಾಂಡಗೆಯವರು ತುಂಬ ಪರಿಶ್ರಮದಿಂದ ಈ ಗ್ರಂಥ ಮುದ್ರಣವನ್ನು ಚಾಲೇಂಜ ಆಗಿ ಸ್ವೀಕರಿಸಿ ಸಹಕರಿಸಿದರು. ನಮ್ಮ ಕೋರಿಕೆಯಂತೆ ಅನೇಕ ಮಠಗಳ ಶ್ರೀಗಳೂ ಹೆಸರಾಂತ ಲೇಖಕರೂ ಕವಿಗಳೂ ತಮ್ಮ ಲೇಖನಗಳನ್ನೂ ಕವನಗಳನ್ನೂ ಸಕಾಲದಲ್ಲಿ ಕಳಿಸಿ ಸಹಕರಿಸಿದರು. ಅವರೆಲ್ಲರಿಗೂ ಈ ಸಂಪಾದಕ ತುಂಬ ಋಣಿಯಾಗಿದ್ದಾನೆ.

ಮಹಾಭಿನಂದನ ಸಂಪಾದನೆಯ ಸಂಪುಟಗಳು ಸಮಸ್ತ ಅಭಿಮಾನಿಗಳನ್ನು ತಲುಪಲಿ. ಅನಿವಾರ್ಯವಾಗಿ ಗ್ರಂಥದ ಬೆಲೆ ಹೆಚ್ಚಿಗಿದೆ. ದಯವಿಟ್ಟು ಎಲ್ಲರೂ ಸಹಕರಿಸಿ ಪ್ರೋತ್ಸಾಹಿಸುವಿರಾಗಿ ನಂಬಿದ್ದೇವೆ.

ಹುಬ್ಬಳ್ಳಿ
೧೪–೭–೧೯೯೨

—**ಪ್ರೊ. ಜಿ. ಎಚ್. ಹನ್ನೆರಡುಮಠ**
(ಸಂಪಾದಕ)

ಪ್ರಕಾಶಕರ ಮಾತು

ಹುಬ್ಬಳ್ಳಿಯ ಪ್ರಣ್ಯದೇವರಾದ ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಷಷ್ಟ್ಯಬ್ದಿ ಸಮಾರಂಭದ ಸಂಸ್ಮರಣೆಯಲ್ಲಿ ಮಹಾಭಿನಂದನ ಸಂಪುಟವೊಂದನ್ನು ಸಂಪಾದಿಸಲು ತುಂಬ ಸಮರ್ಥರಾದ ಪ್ರೊ. ಜಿ. ಎಚ್. ಹನ್ನೆರಡುಮಠ ಅವರಿಗೇ ಕೇಳಿಕೊಳ್ಳಲಾಯಿತು. ಇದೊಂದು ಬಹಳ ಜವಾಬ್ದಾರಿಯುತವಾದ ಕಠಿಣ ಪರಿಶ್ರಮದ ಕಾರ್ಯ. ಪೂಜ್ಯ ಜಗದ್ಗುರುಗಳೂ ಈ ಮಹಾಸಂಪುಟವು ಮುಖ್ಯವಾಗಿ ಬಹು ಜನೋಪಯೋಗಿಯಾಗಿ; ಜೊತೆಗೆ ವೀರಶೈವ ಧರ್ಮದ ಸಾರ ದರ್ಶನವನ್ನು ಒದಗಿಸಲೆಂದು ಹೃದಯಾರೆ ಹಾರೈಸಿದರು. ಪೂಜ್ಯರ ಅಪ್ಪಣೆಯಂತೆ ಈ ಗ್ರಂಥವನ್ನು ವೈಜ್ಞಾನಿಕವಾಗಿ ಸಂಪಾದಿಸಿ ಕೊಡಲು ಪ್ರೊ. ಹನ್ನೆರಡುಮಠರು ಮುಂದಾದರು. ಮೊದಲು ಅವರು ಈ ಗ್ರಂಥ ಸಂಪುಟದ ಪೂರ್ವ ಯೋಜನೆಯೊಂದನ್ನು ವಿಸ್ತೃತವಾಗಿ ತಯಾರಿಸಿ ಮುಂದಿಟ್ಟರು. ಆ ಯೋಜನಾ ಪ್ರತಿಯನ್ನು ಹಿರಿಯರಾದ ಡಾ. ಆರ್. ಸಿ. ಹಿರೇಮಠ, ಡಾ. ಎಚ್. ತಿಪ್ಪೇರುದ್ರಸ್ವಾಮಿಗಳು, ಪಂ. ನಾಗಭೂಷಣ ಶಾಸ್ತ್ರಿಗಳು, ಡಾ. ವೃಷಭೇಂದ್ರ ಸ್ವಾಮಿಗಳು, ಡಾ. ಎಂ. ಎಂ. ಕಲಬುರ್ಗಿ ಮುಂತಾದವರಿಗೆಲ್ಲ ತೋರಿಸಲಾಯಿತು. ಎಲ್ಲರೂ ತುಂಬ ಪ್ರೀತಿಯಿಂದ ಒಪ್ಪಿ ಮುಂದುವರೆಯಲು ಹೇಳಿದರು. ಪ್ರೊ. ಜಿ.ಎಚ್. ಹನ್ನೆರಡುಮಠರು ಪೂಜ್ಯ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ಸತತ ಎರಡು ವರ್ಷಗಳ ಕಠಿಣ ಪರಿಶ್ರಮದಿಂದ ಇಡೀ ಗ್ರಂಥ ಯಶಸ್ವಿಯಾಗಿ ಸಂಪಾದಿಸಿಕೊಟ್ಟರು. ನಂತರ ನಾವು ಎಷ್ಟೇ ಅವಸರ ಮಾಡಿದರೂ ಹಾಳಿಯ ತುಟಾಗ್ರತೆಯಿಂದ ಮುದ್ರಣಕ್ಕೆ ಎರಡು ವರ್ಷವೇ ಬೇಕಾಯಿತು. ಹೀಗೆ ಸತತ ನಾಲ್ಕು ವರ್ಷಗಳ ಕಠಿಣ ಪರಿಶ್ರಮದ ಫಲವಾಗಿ ಈ ಮಹಾಗ್ರಂಥ ಅಚ್ಚಾಗಿ ಬಂದಿದೆ. ಇದಕ್ಕೆ ಜೀವನಾಡಿಯಾಗಿ ಮಠದ ಭಕ್ತರೆಲ್ಲಾ ಪ್ರೀತಿಯ ಪ್ರೋತ್ಸಾಹ ಸಹಕಾರ ನೀಡಿದ್ದಾರೆ.

ಕರ್ನಾಟಕದ ಷಷ್ಟ್ಯಬ್ದಿ ಗ್ರಂಥ ಸಂಪಾದನೆಯ ಇತಿಹಾಸದಲ್ಲೇ ಈ ಗ್ರಂಥ ದಾಖಲೆ ಸಾಧಿಸಿದೆ. ಬೃಹತ್ತಿನಲ್ಲೂ ಮಹತ್ತಿನಲ್ಲೂ ಇದು ಅನ್ಯಾದೃಶ್ಯವಾಗಿದ್ದು: ವೈಜ್ಞಾನಿಕವಾಗಿ ಸಂಪಾದಿತವಾಗಿದೆ. ಅಲ್ಲದೆ

ಇನ್ನೊಂದು ಹೆಗ್ಗುರಿಯನ್ನೂ ಇಲ್ಲಿ ಸಾಧಿಸಲಾಗಿದೆ. ಪ್ರತಿಯೊಂದು ಗದ್ಯ ಲೇಖಕರಿಗೆ ನಾಲ್ಕುನೂರರಿಂದ ಐದುನೂರರವರೆಗೆ ಹಣ ಕಳಿಸುವದು! ಈಗಾಗಲೆ ಹಲವರಿಗೆ ಹಣ ಸಂದಾಯವಾಗಿದ್ದು ಇನ್ನು ಕೆಲವರಿಗೆ ಈ ಗ್ರಂಥ ಪ್ರಕಟವಾಗುತ್ತಿದ್ದಂತೆ ಹಣ ಕಳಿಸಲಾಗುವದು. ಹೀಗೆ ಲೇಖಕರಿಗೆ ಸಂಭಾವನೆ ಕಳಿಸಬೇಕಾದ ಹಣವೇ ನಾಲ್ವತ್ತು ಸಾವಿರ ರೂಪಾಯಿ ದಾಟುತ್ತಿರುವದು ಈ ನಿಟ್ಟಿನಲ್ಲೂ ಈ ಹೆಬ್ಬೊತ್ತಿಗೆ ದಾಖಲೆ ಸಾಧಿಸಿದೆ. ಜೊತೆಗೆ ಮುದ್ರಣದಲ್ಲೂ ಖರ್ಚಿಗೆ ಪೂಜ್ಯ ಜಗದ್ಗುರುಗಳು ಹಿಂದೆ ಮುಂದೆ ನೋಡಿಲ್ಲ. ಕರ್ನಾಟಕದ ಹೆಸರಾಂತ ಹಿರಿಯ ಮುದ್ರಕರಾದ ಗದುಗಿನ ತ್ವರಿತ ಮುದ್ರಣಾಲಯದ ಒಡೆಯರಾದ ಶ್ರೀ ಫ. ಶಿ.ಯವರು ಈ ಗ್ರಂಥ ಮುದ್ರಣವನ್ನು ಚಾಲೇಂಜ ಆಗಿ ಸ್ವೀಕರಿಸಿದರು. ಅಷ್ಟೇ ಅಚ್ಚುಕಟ್ಟಾಗಿ ಇದನ್ನು ಒಂದೇ ತಿಂಗಳಲ್ಲಿ ಮುದ್ರಿಸಿದರು; ಈ ಮಹಾಸಂಪುಟ ಒಂದೊಂದು ಭಾಗವನ್ನೂ ಹೀಗೆಯೆ ತೀರಾ ಅಲ್ಪಾವಧಿಯಲ್ಲಿ ಮುಗಿಸಿಕೊಟ್ಟರು: ಅವರ ವೇಗ, ಶಿಸ್ತು ಅಪರೂಪದ್ದು.

ಸಮಸ್ತ ಅಭಿಮಾನಿಗಳು, ಲೇಖಕರು, ಪೀಠದ ಪರಮ ಭಕ್ತರು ಈ ಗ್ರಂಥವನ್ನು ಪ್ರೀತಿಯಿಂದ ಕೊಳ್ಳಲಿ, ಓದಲಿ ಎಂದು ಕರ್ತೃ-ಶ್ರೀ ಜಗದ್ಗುರು ಗುರುಸಿದ್ಧೇಶ್ವರನಲ್ಲಿ ಪ್ರಾರ್ಥಿಸುತ್ತೇವೆ.

ಷಷ್ಟ್ಯಬ್ದಿ ಸಂಸ್ಮರಣ ಗ್ರಂಥವನ್ನು ಕಂಡ ಪೂಜ್ಯ ಜಗದ್ಗುರುಗಳು ಮುಂದೆ ಶಿವನ ಕರುಣೆಯಿಂದ ಶತಮಾನೋತ್ಸವ ಮಹಾಕೃತಿಯನ್ನೂ ಕಾಣಲೆಂದು ಹಾರೈಸುತ್ತೇವೆ.

ಪ್ರಕಾಶಕರು:

ಹುಬ್ಬಳ್ಳಿ **ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕಮಂಡಳಿ**
೧೫-೭-೧೯೬೨ **ಹಾಗೂ ಮಹಾಭಿನಂದನ ಪ್ರಕಾಶನ ಸಮಿತಿ**

ಪರಿವಿಡಿ

ಕಾವ್ಯಪ್ರಭೆ


ಜೀವನ ಪ್ರಭೆ

ಅ.ನಂ. ಪುಟ ಸಂಖ್ಯೆ

ಚಿಂತನ ಪ್ರಭೆ

ಅ.ನಂ. ಪುಟ ಸಂಖ್ಯೆ

ಶ್ರೀ ಮೂಜಗಂ ಮಹಾಭಿನಂದನ ಸಂಪುಟ: ಒಂದು



ಶ್ರೀ ಜಗಜ್ಯೋತಿ ಬಸವೇಶ್ವರರು



ಮೂರುಸಾವಿರಮಠದ ನಿರ್ವಿಕಲ್ಪ ಸಮಾಧಿಸ್ಥ ಕರ್ತೃ
ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಗದ್ದುಗೆ.



ಪರಮಪೂಜ್ಯ ಲಿಂ|| ಶ್ರೀಮನ್ಮಹಾರಾಜ ಸಿರಂಜನ
ಜಗದ್ಗುರು ಶ್ರೀ ಗಂಗಾಧರ ಮಹಾಸ್ವಾಮಿಗಳು
ಮೂರುಸಾವಿರಮಠ, ಹುಬ್ಬಳ್ಳಿ.



ಶೈಕ್ಷಣಿಕ ಕ್ಷೇತ್ರದಲ್ಲಿ ಅದ್ಭುತ ಕಾರ್ಯ ಮಾಡಿದ
ಲಿಂ॥ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗುರುಸಿದ್ಧ ರಾಜಯೋಗೀಂದ್ರ
ಮಹಾಸ್ವಾಮಿಗಳು, ಮೂರುಸಾವಿರಮಠ, ಹುಬ್ಬಳ್ಳಿ.



ಅಖಿಲ ಭಾರತ ವೀರಶೈವ ಮಹಾಸಭೆ, ಶ್ರೀ ಶಿವಯೋಗ ಮಂದಿರ ಸಂಸ್ಥಾಪಕರಾದ
ಲಿಂ॥ ಶ್ರೀ ಮ. ನಿ. ಪ್ರ. ಕುಮಾರಮಹಾಸ್ವಾಮಿಗಳು ವಿರಕ್ತಮಠ, ಹಾನಗಲ್ಲ.



ಮೂರುಸಾವಿರಮಠದ
ಶ್ರೀ ಜಗದ್ಗುರುಗಳು
ಶಿವಯೋಗ ಮಂದಿರದಲ್ಲಿ
ವಟುವಾಗಿದ್ದಾಗ.



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ-
ಸ್ವಾಮಿಗಳು ಸಾಧಕರಿದ್ದಾಗ ಶ್ರೀ ವಿನೋಭಾಭಾವೆಯವರ ಜೊತೆಯಲ್ಲಿ
ಭಾಷಣ ಮಾಡುತ್ತಿರುವಾಗಿನ ದೃಶ್ಯ.



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಹುಬ್ಬಳ್ಳಿ ಮೂರುಸಾವಿರಮಠಕ್ಕೆ ಪಟ್ಟಾಭಿಷೇಕವಾದ ನಂತರ ಹುಬ್ಬಳ್ಳಿ ನಗರದಲ್ಲಿ ಅಡ್ಡಪಲ್ಲಕ್ಕಿ ಉತ್ಸವದ ದೃಶ್ಯ.



ರಾಷ್ಟ್ರಪತಿಗಳಾಗಿದ್ದ ದಿ|| ಡಾ|| ರಾಜೇಂದ್ರ ಪ್ರಸಾದರು
ಜಗದ್ಗುರು ಮೂರುಸಾವಿರಮಠದಲ್ಲಿ (1959).



ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು,
ಮೂರುಸಾವಿರಮಠ, ಹುಬ್ಬಳ್ಳಿ.

ನಿಶ್ವಪ್ರಭೆ

ಸಂಪುಟ: ಒಂದು

ಕಾವ್ಯ ಪ್ರಭೆ

ಜೀವನ ಪ್ರಭೆ

ಚಿಂತನ ಪ್ರಭೆ

ಕಾವ್ಯ ಪ್ರಭೆ

ಮೂರುಸಾವಿರಮಠದ ಮಹತ್ತು

—ಸಿಂಪಿ ಲಿಂಗಣ್ಣ

ಜಗದಗಲ ಮುಗಿಲಗಲ ಮೂರುಸಾವಿರಮಠವು ಕೂಡಲದ ಸಂಗನಂತೆ|
ಜಗಕ್ಕಿಂತ ಮಿಗೆಯುಗಲು ಈ ಮಠದ ಸತ್ಕೀರ್ತಿ ಸಾಂಬಶಿವಲಿಂಗದಂತೆ ॥ ೧ ॥

ಬಸವಕಲ್ಯಾಣ ನಿಧಿ ಆ ಭಕ್ತಿಭಾಂಡಾರ ಬಂತು ಈ ಹೂಬಳ್ಳಿಗೆ|
ಮಸೆದಿಟ್ಟನೀಯಲಗು ಪ್ರಭುದೇವ ಮುಂದರಿದು ಕಳೆಬಂತು ಆ ಬಳ್ಳಿಗೆ ॥ ೨ ॥

ಬೀಡುಬಿಟ್ಟನು ಕರ್ತೃಗದ್ದುಗೆಯು ಗುರುದೇವ ಜಿಟ್ಟೋಡುವಂತೆ ಕುತ್ತು|
ಕೇಡಿಲ್ಲದಾ ಒಸಗೆ ಮಠಕೆ ಸಂಗಳಿಸಿರಲು ಕೊರೆಕೊರತೆ ಕಾಣದಾಯ್ತು ॥ ೩ ॥

ಏರುತಿದೆ ಹಾರುತಿದೆ ಈ ಮಠದ ಸಾಧನವು ಕಂಡವರು ತಣಿಯುವಂತೆ|
ಪಾರ ಲೌಕಿಕದಾರಿ ಸುಗಮಗೊಳ್ಳುತ್ತಿಹುದು ಈ ಬಾಳು ಕುಣಿಯುವಂತೆ ॥ ೪ ॥

ಒಂದಲ್ಲ ಎರಡಲ್ಲ ಮೂರುಸಾವಿರ ಸಂಖ್ಯೆ ಸಂದಿರದ ಪಾರಂಬಿಗಳನು ನೋಡು|
ಅಂದೆದಾಲದ ಮರವೆ ನೆನಪುಗೊಡುತಿದೆ ಅಮಮ ತಣ್ಣೆಳಲ ತೀಟಿನಾಡು ॥ ೫ ॥

ಗಂಧವಾಹಕನಲ್ಲೆ ಬೀಡುಬಿಟ್ಟಿಹನೇನೊ ಗಿಳಿಕೋಗಿಲೆಗಳ ಹಾಡು|
ಬಂಧುರದ ತವಸಿಗಳ ಗಾಢದೇಕಾಗ್ರತೆಗೆ ಗೂಢ ಗಂಹರದ ಬೀಡು ॥ ೬ ॥

ಒಳಗಾತ್ಮದೃಷ್ಟಿಯಿದೆ ಹೊರನೋಟಕೆಣೆಯಾಗಿ ದಿನದ ವ್ಯವಹಾರದಲ್ಲಿ|
ಬಳಿಸಾರಿ ಬರುತಲಿದೆ ಅಧ್ಯಾತ್ಮ-ವ್ಯವಹಾರ ಎಡೆಬಿಡದೆ ಹೆಜ್ಜೆ ಚೆಲ್ಲಿ ॥ ೭ ॥

ಅದೊ ಅಲ್ಲಿ ಸರಸತಿಯು ಸಿರಿಬೀಡಿಸೌರಣಕೆ ಬಂದಿಳಿಯುತಿಹವು ತುಂಬಿ|
ಇದೋ ಇಲ್ಲಿ ಧನಲಕ್ಷ್ಮಿ ಶ್ರೀಘನತೆ ಏಸಿಮಯಕೆ ಬಂದವರ ಸಾಲು ನಂಬಿ ॥ ೮ ॥

ಎಡೆಯುಂಟು ಆರೋಗ್ಯಧಾಮಕ್ಕೆ ಮತ್ತಲ್ಲಿ ಕೆಡೆಯುಂಟು ಗರಡಿಮನೆಗೆ|
ಇಡಿಬಾಳಯೋಗಕ್ಕೆ ಒಂದೆಡೆಯೊಳಿಂಬುಂಟು ಅಂಗೈಗೆ ಮೋಕ್ಷ ಕೊನೆಗೆ ॥ ೯ ॥

ಕಡುಬಡವ ಶಂಕರನ ಮೈಬೂದಿಯಾ ಬಿಳುಪು ಥಳಥಳನೆ ಹೊಳೆವುದಲ್ಲಿ|
ಎಡೆಬಿಡದೆ ಈಶ್ವರನ ತವನಿಧಿಯು ತಿಳಿಹೊಳಪು ಸಂಧಿಸಿದೆ ಮಿಂಚುಚೆಲ್ಲಿ ॥ ೧೦ ॥

ಹುಬ್ಬಳ್ಳಿಯಾಗಿತ್ತು ಹೂಬಳ್ಳಿ ಸಲಿಬಿಗುರಿ ಮೂಗಿಗೆರಚುವದು ಕಂಪು|
ಅಬ್ಬಬ್ಬ ಸುರಲೋಕವಿಳಿದಂತೆ ಕಡುಬೆಡಗು ಕಂಗಳಿಗೆ ಹಬ್ಬ ಸೊಂಪು ॥ ೧೧ ॥

ಸ್ವಾಮಿ ನಿರ್ವಹಿಸುವರು ಲೀಲೆಯಲಿ ಪೈದುಂಬಿ ಹಲವಾರು ಮಾಟದಾಟ।
ಶ್ರೀಮಂತರಾರಯಿಕೆ ಕನ್ನಾಡ ಕುಲಕೆಲ್ಲ ನೀಡುವುದೆ ಹೃದಯಸಪೋಟ ॥ ೧೨ ॥

ಜಾತಿಮತ-ಪಂಥಬಣ ಭೇದವೆಣಿಸದೆ ಮಠಕೆ ಬಿಚ್ಚಿದೆದೆಯಲ್ಲಿ ಕರೆದು।
ನೀತಿ ಸಿದ್ಧಾಂತವನೆ ಬೋಧಿಸುವ ಸದ್ಧರ್ಮ ತಿಳಿಸುವರು ಭೇದ ತೊರೆದು ॥ ೧೩ ॥

ಹನ್ನೆರಡನೇ ಶತಕ ಹಾಕಿಟ್ಟ ದಾರಿಯಲಿ ನಡೆವ ಸುಖ ಮಂತ್ರವನ್ನು।
ಅನ್ನಿಗರು ತಾವೊಲಿದು ಬರುವಂತೆ ಉಸುರುವರು ತಮ್ಮೆದೆಯ ತಂತ್ರವನ್ನು ॥ ೧೪ ॥

ಶಿವಯೋಗಕಾಯಿತ್ತು ಉಪಯೋಗ ನೆಲಗಟ್ಟು ಉಪಯೋಗ ಅದಕು ಮೊದಲು।
ಭವಬಾಧೆ ಹಿಂಗಿತ್ತು ಸುಗಮಗೊಂಡಿತು ಬಾಳು ಇಲ್ಲದಿರೆ ಪೂರ್ಣಹುದಿಲು ॥ ೧೫ ॥

ಜಗವ ಸುತ್ತಿದರೇನು ಮಾಯೆ ತಾನೆಷ್ಟರಡು ಶಿವಶಿಶುವಿಗಿಲ್ಲ ಕೇಡು।
ಮುಗುಳುನಗೆಯನ್ನಾವ ಹಗೆ ತಾನು ಗೆಲ್ಲುವದು ಕಳಚಿ ಬೀಳುವದು ನೋಡು ॥ ೧೬ ॥

ಆ ಯುಗದ ಬುತ್ತಿಯನು ಈ ವರೆಗು ಕಾಪಾಡಿ ನವಯುಗಕೆ ತಂದ ಕೀರ್ತಿ।
ಬಾಯೆನ್ನುವದು ಬಿಡದೆ ಸಾವಿರದ ತಾಣಕ್ಕೆ ತಲಪಿಸುವೆ ತುಂಬಿ ಸ್ಫೂರ್ತಿ ॥ ೧೭ ॥

ಈ ವರೆಗೆ ತಾಳಿದ್ದು ಮುಂದೆ ಅಜರಾಮರವು ಇದು ಸುಪ್ರಮಾಸಸದ ಸೀಮೆ।
ತಾವರೆಗೆ ಬೆಳದಿಂಗಳಾದಂತೆ ಸೊಗಬಾಳು ಈ ಜಗದ ಒಲವಿನೊಲುಮೆ ॥ ೧೮ ॥

ಕನ್ನಾಡು ಭಾರತದ ಹೃದಯವಾಗಿರುವಂತೆ ಹುಬ್ಬಳ್ಳಿ ನಾಡಹೃದಯ।
ಚೆನ್ನಾಗಿ ಮಿಡಿಯುತಿದೆ ಮಠದಂತರಾಳದಲಿ ಕಾಣುವದು ದಿವ್ಯದುದಯ ॥ ೧೯ ॥

ಜಡದ ವಿಜ್ಞಾನಕ್ಕೆ ಮನಸೋತ ನಾವೆಲ್ಲ ಆತ್ಮವಿಜ್ಞಾನ ಕಂಡು।
ಕುಡಿಬಿಟ್ಟ ಹೂಬಳ್ಳಿ ಗಂಧವಾಹಕನೆಮಗೆ ಹಿಗ್ಗುವೆವು ನಲುಮೆಯುಂಡು ॥ ೨೦ ॥

ಆದಿಯಾಧಾರ ಘನವನ್ನೆ ವೇಧಿಸಬಲ್ಲ ಈ ಮನದ ಮೋಡಿಯಾಟ।
ಬೀದಿಗೆಳೆಯಲು ಬಿಡದೆ ಮಹದಲ್ಲಿ ನಿಲ್ಲಿಸಲು ಭಕ್ತಿ ಹೂಡುವದು ತೀಟ ॥ ೨೧ ॥

ಮೊಳಕೆಗೊಂಡಾ ಭಕ್ತಿ ಚಿಗುರಾಗಿ ನಿಲ್ಲುವದು ಎಡಬಲಕೆ ಎರಡು ಪಕಳೆ।
ತಿಳಿದು ಬರುವದು ಒಂದು ಕರ್ಮತಾನಿನ್ನೊಂದು ಜ್ಞಾನದೆಸಳೆ ॥ ೨೨ ॥

ಜ್ಞಾನ ಕರ್ಮಗಳನ್ನು ಈಸುಗುಂಬಳವಾಡಿ ಮಡುವಿಗಿಳಿ ಇಲ್ಲ ಬಾಧೆ।
ಮಾನವನ ಕುಲಕೋಟಿಗಾಯಿತ್ತು ಸಂಗಡಿಯೆ ಇದೆ ಮಠದ ಧರ್ಮಬೋಧೆ ॥ ೨೩ ॥

ಭಕ್ತಿಮಾಗಲು ದಿವ್ಯ ಪ್ರೇಮವೆನಿಸುವುದಯ್ಯ ಆ ನೆಲೆಯ ದೇವಜನ್ಮ।
ಮುಕ್ತ ಜಪ-ತಪ ಬೇಡ ಪ್ರೇಮವೊಂದೇ ಸಾಕು ಅದಕೆ ಸರಿ ಇನ್ನಾವ ಜನ್ಮ ॥ ೨೪ ॥

ಒಳಹೊರಗು ದೇವನನು ಕಾಣುವವನಿಗೆ ಬೇರೆ ಜಪತಪದ ಗೊಡವೆಯೇಕೆ।
ಒಳಗೊಂದು ಹೊರಗೊಂದು ವಿಷಬಾಧೆ ಸಾವಿಗೆಡೆ ಇದನರಿಯೆ ಬೇರೆ ಬೇಕೆ ॥ ೨೫ ॥

ಮರಣವೇ ಮಾನವಮಿಯೆನಿಸಿತ್ತು ಶರಣರಿಗೆ ಆದನೆ ಸಾಧಿಸಿಕೊಂಡರು।
ಶರಣರಾ ಗುಣಮಟ್ಟ ತಿಳಿಯುವದು ಮರಣದಲಿ ಶಿವನೆಂದು ಶಿವನಾದರು ॥ ೨೬ ॥

ಆ ಸಿದ್ಧಿ ಸಾಧನೆಗೆ ಭಕ್ತತತಿ ಶ್ರಮಿಸಿದರೆ ನಿಶ್ಚಯವು ಸುಖದ ಸಾವು।
ಭಾಷೆ ಕೊಟ್ಟಂತೆ ಅದು ಕೈಗೆ ಬರುವುದು ಗಟ್ಟಿ ಮರೆಸಿ ಸಂಸಾರ ನೋವು ॥ ೨೭ ॥

ಸುಖಕರದ ಸಾವಿನಾ ಯುಕ್ತಿ ಮೊರೆಯಿರಿ ತಂದೆ ಅದುವೆಮಗೆ ಸೂಕ್ತ ಧರ್ಮ।
ಅಖಿಲ ಜನಕೋಟಿಗದೆ ಬಾಳ-ಭರವಸೆ ಮತ್ತೆ ಮೂರುಸಾವಿರದ ಮರ್ಮ ॥ ೨೮ ॥

ಸುಖದ ಸಾವೇ ನಮಗೆ ಬಾಳಗುರಿಯಾದಾಗ ದೊರೆತಂತೆ ಬಾಳಗೆಲವು।
ಸಕಲ ಲಿಂಗಾಂಗಿಗಳ ಅಮೃತಪುತ್ರರ ಮಾಡಿ ಕೈಗೊಳಿಸುತಿಹುದು ಬಲವು ॥ ೨೯ ॥

ಕಾಯ್ದ ಹಾಲಿಗೆ ಹೆಪ್ಪು ಹಾಕಿದರೆ ಮೊಸರಾಯ್ತು ಅದರಿಂದ ಬೆಣ್ಣೆ ಮಾಡಿ।
ಬಾಯ್ದೆರೆದ ನೀರಲ್ಲಿ ಚೆಲ್ಲಿದರೆ ತೇಲುವದು ಇದೆ ಬಾಳಗೆಲಪ ನೋಡಿ ॥ ೩೦ ॥

ಈ ಸೂತ್ರವನೆ ಪಲವು ಬಗೆಯಲ್ಲಿ ಹೇಳುವರು ಗುರುವರ್ಗ ಯುಕ್ತಿಯಿಂದ।
ಬೇಸರಿಲ್ಲದೆ ಸತತ ಬಾಳಿನಲಿ ಸಾಧಿಸಲು ಹೇಳುವದು ಅರ್ತಿಯಿಂದ ॥ ೩೧ ॥

□ □

ಲೋಕಕಲ್ಯಾಣಕ್ಕೆ ಮೀಸಲು

—ಗಂಗಪ್ಪ ವಾಲಿ

೧

ಲೋಕಕಲ್ಯಾಣಕ್ಕೆ ಮೀಸಲು
ನಿಮ್ಮ ಬಾಳಿನ ಪ್ರತಿಕ್ಷಣ
ನೀವು ಕೈಕೊಂಡಿರುವ ಮಣಿಹಗ-
ಳೆಲ್ಲ ಜನಹಿತಪೂರಣ

೨

ಏಕಕಾಲಕೆ ನೂರು ತೇಜಿಗ-
ಳನ್ನು ಏರುವ ಸಾಹಸ
ತೂಕವನು ಸಮನಾಗಿ ಹಿಡಿಯುವ
ಹಿಡಿತ ನಿಮಗಾಗಿದೆ ವಶ

೩

ದಣಿವನರಿಯದ ಕಾರ್ಯಶಕ್ತಿಯ
ಸಾಗರವು ನಿಮ್ಮೊಳಗಿದೆ
ಕೊನೆತನಕ ಎಡೆಬಿಡದೆ ದುಡಿಯುತ
ಗೆಲುವ ಛಲ ಬಲ ನಿಮಗಿದೆ

೪

ನಿಮ್ಮ ಚಿತ್ತದಿ ನಿತ್ಯ ಹೊಳೆವವು
ಭವ್ಯತರ ಯೋಜನೆಗಳು
ನಿಮ್ಮ ಕೀರ್ತಿಯ ಕಲಶವಾಗಿವೆ
ಗುರುತರದ ಸಾಧನೆಗಳು

೫

ಒಂದೆ ಎರಡೇ ನೀವು ಕಟ್ಟಿಹ
ಸಂಸ್ಥೆಗಳು ನೂರಾರಿವೆ
ಅವರು ಇವರೆನ್ನದಲೆ ಎಲ್ಲರ
ಹಿತಕೆ ಕೃತಿಗೈಯುತಲಿವೆ

೬

ದಂತ ಗೋಪುರದಲ್ಲಿ ಕುಳಿತರು
ಚಿಂತನವು ದೀನರ ಹಿತ
ತಂತಿಯನು ಪೂರ್ಣಜ್ಞ ಮಿಡಿವನು
ಅಂತರಂಗದಿ ಸಂತತ

೭

ಭಕ್ತಕೋಟಿಯ ಅಭ್ಯುದಯಕರ
ಕಾರ್ಯಗಳು ದಾಂಗುಡಿಸಿವೆ
ಕರ್ತೃ ಗುರುಸಿದ್ಧೇಶ್ವರನ ಹೊಂ
ಗನಸುಗಳು ಸುಫಲಿಸುತಿವೆ

೮

ಯೋಗವೆನೆ ಸತ್ಕರ್ಮ ಕೌಶಲ
ಇದಕೆ ನೀವು ನಿದರ್ಶನ
ಕ್ಷಣ ಕ್ಷಣಂಗಳ ಸ್ವರ್ಣಕಣಗಳ
ಮಾಡುತಿದೆ ತವ ಜೀವನ

೯

ನಾಡ ವಿಸ್ತಾರದಲಿ ಹರಡಿದೆ
ನಿಮ್ಮ ಸಾಮರ್ಥ್ಯದ ಪ್ರಭೆ
ನಿಮ್ಮ ಕೀರ್ತಿಯ ಗಾನ ಹಾಡುತ
ಲಿಹಳು ಅಲ್ಲಿ ಘಟಪ್ರಭೆ

೧೦

ಅರಿವಿನರುವತ್ಮೂರು ನೆಲೆಗಳ
ಏರಿ ಏರುತಲಿರುವಿರಿ
ಬರಲಿರುವ ಶತಮಾನ ಪರ್ವದ
ಕುರುಹು ತೋರುತಲಿರುವಿರಿ

□ □

ಸಾಧು ಸಮನ್ವಯ ಸಾಧಕರು

—ಎನ್ಕೆ

ಈ ಸಮನ್ವಯ ಸಿದ್ಧಿ
ಈ ಸಮನ್ವಯ ಬುದ್ಧಿ
ಸಾಧಿಸಿದ ಗುರುಗಳತಿವಿರಳ।
ಜಾತ್ಯತೀತದ ಸೃಷ್ಟಿ
ಗದ್ಯ-ಪದ್ಯದ ಸೃಷ್ಟಿ
ಕಾವ್ಯ ಜೀವನಯೋಗ ಮಾರ್ಗ ಸರಳ॥

ಆಧುನಿಕ ಸುವಿಚಾರ
ಸನಾತನದ ಆಚಾರ
ಉಭಯ ವಿಷಯದ ರೀತಿ ವೈಜ್ಞಾನಿಕ।
ಕಾಶಿ ವಿದ್ಯಾಪೀಠ
ಹೂಬಳ್ಳಿ ಗುರುಪೀಠ
ಕಡಲಿನಾಚೆಯ ಪಯಣ ವೈಚಾರಿಕ॥

ಪ್ರಥಮದಲಿ ಪ್ರಥಮ
ಮೇಣ್ ಪ್ರಮಥರಲಿ ಪ್ರಮಥ
ಪ್ರಾಗತಿಕ ಪ್ರಾಕ್ತನದ ಮಧ್ಯ ನಿಲುವು।
ಕಡು ಬಡವರೂ ಒಂದೆ
ಸಿರಿ ಕುಬೇರರು ಒಂದೆ
ಭಕ್ತಿ ಭಾಂಡಾರಕ್ಕೆ ಸಮತೆಗೆಲುವು॥

ಮೂರುಸಾವಿರಮಠದ
ಸ್ಥಾವರಕೆ ಜಂಗಮದ
ಕ್ಯೂಟೊ ಕಿರೀಟ ಪಡುವಣದ ಮುಕುಟ।
ಸ್ಥಾವರಕು ಅಳಿವಿಲ್ಲ
ಜಂಗಮಕು ಅಳಿವಿಲ್ಲ
ಸಂಗಮದ ಸಂಪದದ ಶಾಂತಿ ಶಕಟ॥

ವಿಶ್ವ ಮಂಟಪದೊಳಗು
ವೀರಶೈವದ ಮೊಳಗು
ವೇದ ವೇದಿಕೆಯಾಯ್ತು ವಚನ ಮಿಂಚು।
ವಿಭೂತಿ ರುದ್ರಾಕ್ಷಿ
ತೆರೆದಿತ್ತು ಚೈತ್ಯಾಕ್ಷೀ
ಶ್ರೋತೃವಿಗೆ ಸೋಂಕಿತ್ತು ಶ್ರುತಿಯ ಅಂಚು॥

ಪುಬ್ಬಳ್ಳಿ ಸೌಗಂಧ
ಹಿಂದು ಮುಸ್ಲಿಂ ಬಂಧ
ಸಿದ್ಧೇಶ್ವರಾನುಗ್ರಹದ ಪೂರಣ।
ಗುರುವಿನಾಶೀರ್ವಚನ
ಹಗೆಗೆ ರಾಮನ ಬಾಣ
ಆ ಕತೆಯು ಈ ಕತೆಯು ಏಕತೆಯು ಗಾನ॥

ಸಂಸ್ಕೃತಿಯ ವಿಸ್ತಾರ
ಧರ್ಮತತ್ವದ ಸಾರ
ರಾಜಕಾರಣಕಿಂತ ಧರ್ಮಕಾರ್ಯವು ಮಿಗಿಲು।
ಅಣು ಬಾಂಬು ತ್ಯಾಜ್ಯ
ಅಣುಗರಿಗದೇ ವ್ಯಾಜ್ಯ
ಶ್ರೀಗಳಮೃತ ಬಿಂದು ಜಗದ ಹಗಲು॥

ಸತ್ಯವೇ ಸಾಹಿತ್ಯ
ತತ್ವವೇ ಪಾಂಡಿತ್ಯ
ಉತ್ಥಾನವೇ ಊರ್ಧ್ವ ಗುರಿಯು ನಿತ್ಯ।
ಬೋಧದಲಿ ಆದರ್ಶ
ಮೂಜಗಂ ಧೀಃ ಸ್ಪರ್ಶ
ಅಧ್ಯಾತ್ಮ ಸಾಧನೆಯು ಧನ್ಯ ಕೃತಕೃತ್ಯ॥
ಮೂರುಸಾವಿರದವರು
ಸಮನ್ವಯದ ಸಾಧಕರು
ಇವರ ನುಡಿ ಇರುಳಿನಲಿ ಹಗಲ ಪಂಜು।
ಇಳೆಗೆ ಕರುಣೆಯ ಮಳೆಯು
ನಾಳಿನೆಳೆಯರ ಬೆಳೆಯು
ಹೃದಯ ಹದಗೊಳಿಸುವುದು ಕಳೆದು ಸಂಜು॥

□ □

ಚಿಮ್ಮುತಿರಲಿ ಚಿದ್ಬೆಳಕು!

—ಡಾ. ಪಂಚಾಕ್ಷರಿ ಹಿರೇಮಠ

'ನೀಗು ಲೋಲುಪ್ತಿ' 'ಅಂಗಗುಣಗಳನಳಿ'
ಎಂದು ಸಾರಿ 'ಲಿಂಗಚಾರಿ'ಯ ಧ್ಯಾನದಲಿರೆಂದ
ಈ 'ಪೂರ್ಣಜ್ಞ' ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!
ದೇಹೇಂದ್ರಿಯಗಳೆಲ್ಲ ಲಿಂಗೇಂದ್ರಿಯಂಗಳಾದಾಗ
ವಿಷಯಂಗಳೆಲ್ಲ ಲಿಂಗವಿಷಯಂಗಳೆಂದುಸುರಿದ
ಈ 'ಪೂರ್ಣಜ್ಞ'ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!
ಮೌನಿಯಾದವ ಸುವಿಧಾನಿಯಾಗಿರಬೇಕು
ಸಾನುರಾಗದಿ ಶಿವಧ್ಯಾನದಲಿರಬೇಕೆಂದ
ಈ 'ಪೂರ್ಣಜ್ಞ'ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!
ಧ್ಯಾನ ಧಾರಣ ಸಮಾಧಿಗಳ ಇಂಬಿಲ್ಲದೆ
ಆಶ್ರಯಿಸಿರುವುದೇ ಶಿವಯೋಗವೆಂದು ಸಾರಿದ
ಈ 'ಪೂರ್ಣಜ್ಞ'ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!
ಶ್ರೀಗುರುಸಿದ್ಧೇಶನ ಕೃಪೆ ಶ್ರೀ ವಿಜಯಮಹಾಂತೇಶನೊಲುಮೆ
ತ್ಯಾಗಾಂಗ ಭೋಗಾಂಗ ಯೋಗಾಂಗಕೆ ಮೂಲವೆಂದರುಹಿದ
ಈ 'ಪೂರ್ಣಜ್ಞ'ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!
ಘನತೇಜೋಮೂರುತಿ 'ಒಳಮನೆಯ ಗೌಪ್ಯದಲಿ ಕುಳಿತು'
ಅಂತರಂಗದ ಅನುಭವದ ಪದರ ಬಿಚ್ಚಿ ವಚಿಸಿದ
ಈ 'ಪೂರ್ಣಜ್ಞ'ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!

ಚಿತ್ಪ್ರಕಾಶದಿಂ ಬೆಳಗಿ ತಾನೇ ತಾನಾಗಿ
ಶಿವಾತ್ಮನಾಗುವುದೇ ಶಿವಯೋಗ ಸಿದ್ಧಿಯೆಂದು ಸಾರಿದ
ಈ 'ಪೂರ್ಣಪ್ರಜ್ಞ' ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!

ಆ ಅದೂ ಪೂರ್ಣ ಈ ಇದೂ ಪೂರ್ಣವಯ್ಯ
ಸರ್ವವೂ ಪೂರ್ಣವೆಂದು ಉಸುರಿದ
ಈ 'ಪೂರ್ಣಪ್ರಜ್ಞ' ನಡಿಗಡಿಗೆ ಚಿಮ್ಮುತಿರಲಿ
ಚಿದ್ಬೆಳಕು ಹೀಗೆಯೇ ನಿರಂತರದಲಿ!

□ □

ತುಂಗ ಗಂಗಾಧರ

—ಶಾರದಾ ಜಡೆ

೧

ಶ್ರೀ 'ಮೂಜಗಂ' ಗುರುವೆ,
ಎನ್ನರಿವಿಗರಿವಿತ್ತ ಸದ್ಗುರುವೆ,
ಅನುಮತಿಸು, ಅನುಗ್ರಹಿಸು,
ನಾನರಿತದನಿತನೇ ಒರೆಯುತಿರುವೆ!

೨

ಶಶಿವಾಳದ ಶಿಶುವಾಗಿ ನೀ ಜನಿಸಿ,
ಶಶಿಧರನ ಆಣತಿಯ ಶಿರದಲ್ಲಿ ಧರಿಸಿ,
ಇಳೆಗಿಳಿದು ನೀ ಬಂದೆ ಬೆಳಕಿನಂತೆ;
ಮುಂಬೆಳಗ ಸೂಚಿಸುವ ಅರುಣನಂತೆ!

೩

'ಶಿವಯೋಗ ಮಂದಿರ'ದ ಹೊಂಗಿರಣ ಕಂಡು
ಗಳಿಸಿದ್ದೆ ಕಾಶಿಯಲಿ 'ಕಾವ್ಯತೀರ್ಥ'ದ ಖ್ಯಾತಿ,
ಮತ್ತೆನಿತೊ ತೇಜಗಳ ಮೈಗೂಡಿಕೊಂಡು,
ಮೈದಳೆದೆ ನೀ ಚಿತ್ಪ್ರಭೆಯ ಜ್ಯೋತಿ!

೪

ಇಂತು ಶಿವನಾಣತಿಗೆ ಸನ್ನದ್ಧನಾಗಿರಲು,
ಚಿತ್ತರಗಿ ಗುರುಪೀಠ ನಿನ್ನತ್ತ ಕರೆದಿತ್ತು;
ಉತ್ತಮೋತ್ತಮ ಸೇವೆ ಅಲ್ಲಿ ಸಲ್ಲಿಸುತಿರಲು,
ಹೂಬಳ್ಳಿ ಶ್ರೀಮಠದ ಸ್ವಾಗತವು ಕಾದಿತ್ತು!

೫

ಹುಬ್ಬಳ್ಳಿ ನಗರಕ್ಕೆ ಹೃದಯವೇ ಈ ಮಠವು,
'ಮೂರುಸಾವಿರಮಠ' ವೆಂಬಭಿದಾನವಿದಕೆ;
ಅಧ್ಯಾತ್ಮ ಸಿರಿಗೆ, ಮೇರು ಇದರುನ್ನತವು;
ಶ್ರೀ ಗುರು ಸಿದ್ಧ ಸಭೆಯು ಪ್ರಥಾಸವಿದಕೆ!

೬

ಇಂತಪ್ಪ ಶ್ರೀಗಿರಿಯ ನೇರಲೆಳಸಿಹ ಗುರುವೆ,
ಏರಿರುವೆ ನೀನಾಗಲೇ ಅರವತ್ತೊಂರು ಪಾವಟಿಗೆ;
ಇಟ್ಟ ಹೆಜ್ಜೆಗಳೆಲ್ಲ, ಹಚ್ಚಿಟ್ಟ ಬೆಳಕಾಗಿ,
ಬೆಳಗುತಿವೆ ನೂರಾರು ಸಾಲ್ವಿಡಿದ ದೀವಟಿಗೆ!

೭

ಗೌರೀಶಂಕರದೆತ್ತರಕೆ ಗೋಚರಿಸುತಿದೆ,
ಶ್ರೀ ಗುರುಸಿದ್ಧನ ಮಹಾದ್ವಾರ ಗೋಪುರ!
ಹೊಂಗಿರಣ ಹೊಮ್ಮಿಸುತ, ಷಟ್‌ಸ್ಥಲವ ಬಿಂಬಿಸುತ,
ಕರ್ತವ್ಯಗೈಯುತಿದೆ, ಆ ಗೋಪುರದ ಗಡಿಯಾರ!

೮

'ಅನ್ನದಾನಕ್ಕಿಂತ ಇನ್ನು ದಾನಗಳುಂಟೆ',
ಎನ್ನುತಿದೆ ಆ 'ಉಚಿತ ಪ್ರಸಾದ ನಿಲಯ',
ಬಹುರೋಗಕೀಡಾಗಿ, ಬಸ್ನಗೆಟ್ಟರಿಗುಂಟು,
'ಆರೋಗ್ಯಧಾಮ' ವಸತಿ ನಿಲಯ!

೯

ಬಾಳಬಟ್ಟೆಗೆ ಬೆಳಕ ಬಯಸುವ,
ಮಹಿಳೆಗಿಲ್ಲಿದೆ, 'ಮಹಿಳಾ ವಿದ್ಯಾಲಯ';
ತನ್ನ ತಾನೇ ಅರಿಯಲೆಳೆಸುವ,
ತರಳಗಿಲ್ಲಿದೆ, 'ಯೋಗ ವಿದ್ಯಾಲಯ'!

೧೦

ಘನ ತತ್ವಸುವಿಚಾರ, ಸಾಹಿತ್ಯವಿಸ್ತಾರ,
ಹೊತ್ತು ತರುತಿವೆ, ಪತ್ರಿಕಾ 'ಪರಂಜ್ಯೋತಿ',
'ಆಶೀರ್ವಾಣಿ' 'ಪೂರ್ಣಜ್ಞವಚನ'
ದಾರಿದೀಪದ ಬೆಳಕು, ಲೋಕನೀತಿ!

೧೧

ಎಣಿಸುವಂತಹುದಲ್ಲ, ಬಣ್ಣಿಸಲು ಅಳವಲ್ಲ,
ನೀ ಹಮ್ಮಿಕೊಂಡಿರುವ ಕಾರ್ಯವಿಸ್ತಾರ;
ದೀನ ದಲಿತೋದ್ಧಾರ, ಹರಿಜನೋದ್ಧಾರ,
ಮುದ್ದು ಕಂದರಿಗೆಂದೇ ಇಹುದು 'ಶಿಶುವಿಹಾರ'!

೧೨

'ನಹಿ ಜ್ಞಾನೇನ ಸದೃಶಂ' ಎನ್ನುತಿದೆ,
'ಶಿವಯೋಗ ಮಂದಿರ'ದ ಧ್ಯಾನ ಧಾಮ;
ವಿಶ್ವಶಾಂತಿಯೇ ತನ್ನಗುರಿ, ಎನ್ನುತಿದೆ,
ಶ್ರೀಮಠವೆ ತಾನಾಗಿ ಬೃಹತ್ ಶಾಂತಿ ಧಾಮ!

೧೩

ನೀರು ಕಾಣದ ನೆಲ, ಹಸಿರುಕಾಣದ ಹೊಲ,
ಬಡರೈತ ಬಿಡುತಿದ್ದ ಬಾಯಿ ಬಾಯಿ,
'ಗಂಗಾಧರ'ನಾಗಿ ಉಕ್ಕಿಸಿದೆ ಗಂಗೆಯನು!
ನಿನ್ನ ಕಾರುಣ್ಯವೇ ಮೈಪತ್ತ ಚೈತನ್ಯದಾಯಿ!

೧೪

ಮೇವು ಕಾಣದೆ ಗೋವು, ಅನ್ನಕಾಣದೆ ಜೀವ,
ಬೇಸತ್ತು, ತತ್ತರಿಸುತಿರಲಾಗಿ;
ದೇಹಭಾನವ ತೊರೆದು, ಕೈಗೊಂಡೆ ಪಾದಯಾತ್ರೆ;
ಕರಗಿತ್ತು ನಿನ್ನೆದೆಯು ಕಾರಂಜಿಯಾಗಿ!

೧೫

ಹಳ್ಳಿಹಳ್ಳಿಗಳಲ್ಲಿ ಬೆಳಗಿತ್ತು 'ದೀವಟಿಗೆ' ಸಾಲು,
ಮೂಲೆ ಮೂಲೆಗಳಲ್ಲಿ ಜರುಗಿತ್ತು ಧರ್ಮಪ್ರಚಾರ,
ಹಳ್ಳಿದಿಳ್ಳಿಯ ದಾಟಿ, ಕಡಲಾಚೆಗೂ ಹಾರಿ,
ದುಂದುಭಿಯ ಮೊಳಗಿತ್ತು ಶಾಂತಿಪ್ರಸಾರ!

೧೬

ಇಂತು ಚಂದ್ರಿಕೆಯಂತೆ ದಿಗ್ದೆಸೆಯ ಬೆಳಗಿರಲು,
ಕಾರ್ಮೋಡ ಕವಿದಿತೇಕೋ, ನಗರದಲ್ಲಿ;
ಕೋಮುಕೋಮಿನ ನಡುವೆ, ಭುಗಿಲೆದ್ದ ಜ್ವಾಲೆ,
ನುಂಗಿತ್ತು ಶಾಂತಿಯನು, ನಿಮಿಷದಲ್ಲಿ!

೧೭

ಸಕಲ ಮತ ಬಾಂಧವರ, ಸುತರಂತೆ ಕಾಣುತಿಹ,
ನಿನ್ನೆದೆಯ ದಹಿಸಿತ್ತು, ಆ ಉಗ್ರಜ್ವಾಲೆ!
ಆಗ, ನೀ ಬೆಚ್ಚದೆ, ಕೆಚ್ಚೆದೆಯ ಶಿವನಾದೆ!
ಪವಾಡವೇ ಮೆರೆದಿತ್ತು, ಅಡಗಿತ್ತು ವಿಷ ಜ್ವಾಲೆ!

೧೮

ಮತ್ಸರದ ವಿಷಹೀರಿ, ಅಮೃತವನೆರೆದಿರಲು,
ಭಾವೈಕ್ಯ ಮೈದೋರಿ, ಬಾಂಧವ್ಯ ಬೆಳೆದಿತ್ತು,
‘ಅಣ್ಣ-ತಮ್ಮ’ರು ಕೂಡಿ, ಬಿಗಿದಪ್ಪಿ ನಿಂತಿರಲು,
ನಿನ್ನ ಹೃದಯವೂ ತುಂಬಿ ತುಳುಕಿತ್ತು!

೧೯

“ಪ್ರೀತಿಗೆಲ್ಲಿಯ ಜಾತಿ, ನೀತಿಗೇತರ ಭೀತಿ;”
“ಮರೆಯದಿರಿ ಮಾನವತೆ ಮಿಗಿಲೆಂಬುದನ್ನು;”
ಎಂದು ಆದಿನ, ನೀನಿತ್ತ ಆದೇಶ,
ಎಂದೆಂದಿಗೂ ಆಹುದು ಮಹತ್ಸಂದೇಶ!

೨೦

ಇಂತು ಶಿವನಾಣತಿಯ ಸಲ್ಲಿಸುತ್ತಿಹ ಗುರುವೆ:
ಪರಶಿವನ ಕೃಪಾರಕ್ಷೆ ಸರ್ವಕಾಲ ನಿನಗಿರಲಿ,
ತುಂಗ ಗಂಗಾಧರ ಶ್ರೀಜಗದ್ಗುರುವೇ;
ನಿನ್ನ ಜ್ಯೋತಿಯ ಬೆಳಕು ಚಿರಕಾಲ ನಮಗಿರಲಿ!

□ □

ಪುಣ್ಯಮಯಿ

—ಶಿಶುನಾಳದ ಶ್ರೀ ಚನ್ನವೀರ ದೇವರು

ನಿಮಗಿದೋ! ನಮನ
ಓ! ಪುಣ್ಯಮಯಿ ಮು. ಜ. ಗಂ.
ಸಾಸಿರ ಸಾಸಿರ ನೆನಹಿನೊಳ,
ನನ್ನದೊಂದು ನೆನವು ನಿಮಗೆ

ಸಕಾಮ ಕರ್ಮವಳಿದ
ನಿಷ್ಕಾಮ ಕರ್ಮಯೋಗಿ
ಮೇಲು-ಕೀಳು ಬೇರಗಿದ
ಕಾರುಣ್ಯ ಸಿಂಧು.

ನ್ಯಾಯ-ನೀತಿ-ಧರ್ಮ
ಎದೆಯಂಗಳದಿ ಬಿರಿದ ಮಲ್ಲಿಗೆ
ನಿತ್ಯ ನೂತನ ಶ್ರೀಮಠಕೆ
ಗಂಧ-ಸುಗಂಧ ಮನೆಮನೆಗೆ

ಈ ನೆಲ, ಜಲ, ಭಾನು
ತುಂಬಿ ತುಳುಕಿದೆ
ಶಾಂತಿ ಮಂತ್ರದ ಬೆಳಕು
ಸಾಹಿತ್ಯ ಸಂಸ್ಕೃತಿಯ ಹೊಳಪು

ಕರುಣೆ ಕಂಗಳ ನಂದಾದೀಪ
ವಟು ಸಾಧಕರ ದಾರಿ ದೀಪ
ತಾಯಿ ಕರುಳ ಮಿಡಿಯುತಿದೆ
ಪ್ರೀತಿ-ವಾತ್ಸಲ್ಯ ಮಮತೆ ತುಂಬಿ.

ವಿಶ್ವಕಲ್ಯಾಣ ಸುಭೋದಯಕೆ
ಹಗಲಿರುಳು ಶ್ರಮಿಸುವ ನೀವು
ನಾಡಿನ ಮಹಾಚೈತನ್ಯ ಮೂರುತಿ
ಹರಡಲಿ ದಶದಿಕ್ಕಿಗೆ ನಿಮ್ಮಯ ಕೀರ್ತಿ

ಓ!! ಶ್ರಮ ಜೀವಿ ಮೂಜಗಂ
ಇದೋ ಎನ್ನ ಬಯಕೆ
ಚುಂಬಿಸಲಿ ನೂರು ವಸಂತಗಳು
ನಿಮ್ಮ ಹೊನ್ನ ಚರಣಗಳ.

□ □

ಈ ಗುರುವಿನ ಪರಿ....

—ಡಾ. ಎಸ್. ಪಿ. ಪದ್ಮಪ್ರಸಾದ

ಬರಿ ಮೂರು ಸಾವಿರವಲ್ಲ-
ನೂರಾರು ಸಾವಿರ ಮನೆ ಮನಗಳಲ್ಲಿ
ನಿತ್ಯ ನಂದಾದೀಪ!
ಗುಡಿಗುಂಡಾರಗಳ ಅರ್ಥಹಿಗ್ಗಿಸಿ, ದ್ವಾರವಗಲಿಸಿ
ಎಲ್ಲರಿಗು ಕದ ತೆರೆದು ಬೆಳಕಿತ್ತು ಬದುಕಿತ್ತು
ಶರಣತೆಯು ಮೆರೆದ ಸಾಧುಶ್ರೇಷ್ಠ!

ನಾಡ ನೆಲ ಬೆಂಡಾಗಿ ಬರಡಾಗಿ
ಕೊರಗುತಿರೆ ಕೊಳಡಸಿ ನೀರ ನೆನಸಿ,
'ಬಯಲೆ ಗುಡಿ' ಎಂದು ಮಠದಿಂದ ಬಂದು
ಹಸಿದವರಿಗಳನವನು ನೀಡಿದಾತ
'ಜೀವ ಉಳಿಸುವ ಕೆಲಸ ಮೊಟ್ಟಮೊದಲಿನ ಧರ್ಮ' ಎಂದರುಹಿ
ವಿಶ್ವಗೋಷ್ಠಿಯವಕಾಶ ಬೇಡವೆಂದಾತ
ಪೋಪರಿಂದಲು ಮೆಚ್ಚುಗೆಯ ಗಳಿಸಿದಾತ!

ಮೂರ್ಖಿಥಾಂದಲೆಯುಲಿ ಹಿಂದು ಮುಸಲರು ಬೆಂದು
ಮತ್ತೆ ಕುರುಕ್ಷೇತ್ರಕ್ಕೆಂದು ಅಣಿಯಾಗುತಿರಲು,
ಚಾಕಚಕ್ಯದ ಕೃಷ್ಣಾನುಸಂಧಾನದಲಿ
ಇಬ್ಬರಿಗು ಮನವೊಲಿಸಿ ಬೆಂಕಿಯಾರಿಸಿದಾತ

ರಕ್ತ ಹೊಳೆಯಾಗಿ ಹರಿವುದನು
ಹೆಣದ ಬಣವೆಯಾಗುವುದನು
ತನ್ನ ಶಕ್ತಿಯಿಂದಲೆ ನಿಲಿಸಿದಾತ,
ಹಿಂದು ಮುಸಲರ ಹೃದಯ ಜಯಿಸಿದಾತ!

ಮೆಲು ನುಡಿಯು ಸಿಹಿನುಡಿಯು ಸರಳ ಮಾತಿನ ಸಂತ
ಸಭಿಕರನು ಸೆಳೆವ ಮೋಡಿಕಾರ
ಬಾಳಿನೌನ್ನತ್ಯವನು ಬರಹದಲಿ ತಂದು
ಸಾಹಿತ್ಯ ಸೃಷ್ಟಿಸಿದ ರಚನಕಾರ!

ಬ್ರಹ್ಮಚರ್ಯದ ಹರಿತ ಕತ್ತಿಯ ಮೇಲೆ
ಬಾಲ್ಯದಿಂದಲು ನಡೆದ ನಿಷ್ಠಲೀಲೆ.
ಅರವತ್ತು ಸಂವತ್ಸರದ ಕಲ್ಯಾಣ ಚೇತನವು
ಶತಮಾನ ಕಾಣಲೆಂಬುದು ಭಕ್ತ ಬಯಕೆ!

□ □

ಮೂಜಗಂ–ನೀನು ಬೆಳೆ

—ಅಂಬುಜಾಕ್ಷಿ ಬಿಜ್ಜಳ

ಮೂರಕ್ಕೆ ಆರಾಗಿ
ಆರಕ್ಕೆ ಹನ್ನೆರಡಾಗಿ
ಹನ್ನೆರಡಕ್ಕೆ ಇಪ್ಪತ್ನಾಲ್ಕಾಗಿ
ಹೀಗೆ ಹೀಗೆಯೇ
ನೀನು ಬೆಳೆಯುತ್ತಿರು ಮೂಜಗಂ

ದಶದಿಕ್ಕುಗಳಲಿ ನಿನ್ನ
ಕೀರ್ತಿ ಪತಾಕೆ ಹಾರಲಿ
ಮೂಜಗಗಳು ನಿನ್ನ
ಹೊಗಳಿ ಹೊಗಳಿ ಹಾಡಲಿ

ನಿನ್ನ ಕಾರ್ಯಕ್ಷೇತ್ರವು
ಹೂಬಳ್ಳಿಯನು ದಾಟಿ
ಕನ್ನಡನಾಡನ್ನು ಮೀರಿ
ಭಾರತವನ್ನು ಆವರಿಸಿ

ಸಮುದ್ರಲಂಘನ ಮಾಡಿ
ಗಾಳಿಯಲಿ ತೇಲಿ ಹಾರಿ
ಬೆಟ್ಟಗುಡ್ಡಗಳನು ಜಿಗಿದು ನೆಗೆದು
ಜಗತ್ತಿನ ತುಂಬೆಲ್ಲಾ ಹರಡಲಿ.

ಹೂಬಳ್ಳಿಯಲ್ಲಿ ಬಿಟ್ಟ
ಮೂಜಗಂ ಮಲ್ಲಿಗೆಯ
ಸದ್ ಸುವಾಸನೆ
ಹೊರಜಗತ್ತಿನ ತುಂಬೆಲ್ಲಾ
ಘಮ್ಮೆಂದು ಪಸರಿಸಲಿ
ಸದ್‌ಭಕ್ತರ ಮನಸ್ಸನ್ನು ಆವರಿಸಲಿ.
ನಿನ್ನ ಜ್ಞಾನ ಸೂರ್ಯ
ಕಣ್ಣ ಕಮಲಗಳನು

ತೆರೆದು ಅರಳಿಸಲಿ
ಸದ್ ಭಕ್ತರ ಬದುಕಿಗೆ
ದಾರಿ ತೋರಿಸಲಿ
ಮತ್ತೆ ಮತ್ತೆ
ಶಾಲೆ–ಕಾಲೇಜುಗಳು
ಆಸ್ಪತ್ರೆಗಳು
ಧರ್ಮಛತ್ರಗಳು
ಗ್ರಂಥಾಲಯಗಳು
ಎಲ್ಲೆಲ್ಲಿಯೂ ಪ್ರಾರಂಭವಾಗಲಿ.
ನಿನ್ನ ಹೆಸರಿನಲ್ಲಿ
ನಿನ್ನ ಆಶೀರ್ವಾದದಲಿ
ಸಾಹಿತ್ಯ ಕ್ಷೇತ್ರವು
ಹುಲುಸಾಗಿ ಬೆಳೆಯಲಿ
ನಿನ್ನ ಸೇವೆಯಲಿ
ನಮ್ಮೆಲ್ಲರ ಪುಣ್ಯದ
ಬಾಗಿಲು ತೆರೆಯಲಿ
ಮೂಜಗಂ ನೀನು ಬೆಳೆ
ಮೂರು ಜಗವನೂ ಮೀರಿ
ನೀನು ಬೆಳೆದಷ್ಟೂ
ನಾವು ಬೆಳೆಯುವೆವು
ನಿನ್ನ ಅಭಿವೃದ್ಧಿಯಲಿ
ನಮ್ಮೆಲ್ಲರ ಅಭಿವೃದ್ಧಿಯನು
ಸಾಧಿಸುವ
ಪಾರಮಾರ್ಥ ಜೀವಿ ನೀನು
ನಿನ್ನ ನಿಸ್ವಾರ್ಥ ಸೇವೆಯೇ
ನಮ್ಮೆಲ್ಲರಿಗೆ ಗೊಬ್ಬರ ನೀರು
"ಎಲ್ಲರಿಗಾಗಿ ನಾನು"
ತತ್ವದ ಆರಾಧಕ ನೀನು
ನಿನಗೆ ನಮ್ಮ ವಂದನೆ
ನಿನಗೆ ನಮ್ಮ ವಂದನೆ.

□ □

ಸಮತಾ ಶಿವಯೋಗಿ

—ಎಂ. ಡಿ. ಗೋಗೇರಿ

ದಾನ ಧರ್ಮ ಖುಷಿಯೆ
ಕಾವ್ಯ ಕರ್ಮ ಕೃಷಿಯೆ

ವೀರಶೈವ ಧರ್ಮವನೆ
ವಿಶ್ವಧರ್ಮ ಗೈವ
ಮಾನವೀಯ ಮೌಲ್ಯಗಳನೆ
ಎತ್ತಿ ಹಿಡಿದು ಕಾವ
ಸರ್ವಮತಗಳಿಂಗಿತವನೆ
ಎದೆಯೊಳಿಟ್ಟ ಭಾವ
"ಮೂಜಗಂ" ಅಕ್ಷರದಲಿ
ಮೂಲೋಕದ ಜೀವ

ಎಲ್ಲಿ ನಿನ್ನ ಅಡಿಯನಿಡುವೆ
ಅಲ್ಲಿ ಭಕ್ತಿ ಚಿಲುಮೆ
ಎಲ್ಲಿ ನಿನ್ನ ಕರವನಿಡುವೆ
ಅಲ್ಲಿ ಕಾವ್ಯ ಕುಲುಮೆ
ಸಾಹಿತ್ಯಕೆ ಸಂಗೀತಕೆ
ನಿನ್ನ ಹೃದಯದೊಲುಮೆ
ಸಂಘರ್ಷವ ತೊರೆದರೇನೆ
ಸ್ವರ್ಗ ಎಂಬ ನಿಲುಮೆ

ಶಿಕ್ಷಣದ ಸೇವೆಯೊಂದು
ಶಿವನ ಸೇವೆ ಎಂಬೆ
ಶುಶ್ರೂಷೆಯ ಕಾಯಕದಲಿ
ಮಹಾದೇವನ ಕಾಂಬೆ

ಪೂರ್ಣಜ್ಞಾನ ವಚನ ರಚನೆ
ಯಲ್ಲಿ ಸೌಖ್ಯ ಉಂಡೆ
ಯತಿ ಬಾಳಲಿ ಧೃತಿಗೆಡದಿಹ
ಹೃದಯ ಹಾಸು ಬಂಡೆ

ದಿಗ್‌ದಿಗಂತಗಳಲಿ ಧರ್ಮ
ಗ್ರಂಥಗಳನು ಮೆರೆಸಿ
ಸರ್ವ ಧರ್ಮ ಪಂಡಿತರನು
ಸಮಭಾವದಿ ಕರೆಸಿ
ಸಾಮರಸ್ಯ ಏರ್ಪಡಿಸಲು
ಸತತವಾಗಿ ಶ್ರಮಿಸಿ
ಅರವತ್ತು ಮೂರರಲ್ಲಿ
ಪಾದಾರ್ಪಣೆ ಬೆಳಸಿ

ಕೊಸರಾಡುವ ಹಸಿರೂಡುವ
ಶಕ್ತಿಗಳನು ಗೆಲಿದೆ
ಮಠದುನ್ನತಿ ಗೈಯುವಲ್ಲಿ
ಸಕಲರನ್ನು ಕರೆದೆ
ಗುರುಸಿದ್ಧೇಶನ ಹೆಸರಲಿ
ಬ್ಯಾಂಕನು ಸ್ಥಾಪಿಸಿದೆ
ಧನ ಸಹಾಯವನಿತ್ತು ಜನರ
ಬಾಳಿಗೆ ಬೆಳಕಾದೆ

ಕಾಯಕದಲಿ ಸಿದ್ಧರಾಮನಂತೆ
ಕರ್ಮಯೋಗಿ
ಸಾಮಾಜಿಕ ಉನ್ನತಿಗೆ
ಬಸವನಂತೆ ತ್ಯಾಗಿ
ಮಠದ ಪೀಠ ತೂಗಿಸಲಿಕೆ
ಅಲ್ಲಮ ವಿರಾಗಿ
ಜಾತಿಯತೆಯ ತೊರೆದು ನಿಂತ
ಸಮತಾ ಶಿವಯೋಗಿ

□ □

ಮನುಕುಲದ ಕಣ್ಣು!

—ಕೊಟ್ರೇಶ್ ಗು. ಆರಾಧ್ಯಮಠ

ನೋಡಿಲ್ಲಿ! ಓ ಗುರುಸಿದ್ಧ ಹುಚ್ಚ;
ನಿನ್ನ ಕಂದ ಗಂಗಾಧರರ ಕೀರ್ತಿ ಗುಚ್ಛ.

ನಾಲ್ದೆಸೆಗೂ ಹರಡಿದೆ ಅವರ ಹೆಸರು;
ತೊಳೆದು ಬಿಟ್ಟರು ಜಾತಿವಾದದ ಹೊಲಸು ಕೆಸರು.

ಶಾಂತಿ–ಸೌಹಾರ್ದದ ಮಳೆಯನು ಸುರಿಸಿ;
ಕೋಮು ಬಿರುಕನು ಮುಚ್ಚಿಸಿ.

ಬಾಯಿ ಬಾಯಿ ಬಡಕೊಂಡವರು ಅಂದು;
ಭಾಯೀ ಭಾಯೀ ಆದರವರು ಇಂದು

ನಿನ್ನ ಕನಸು ನನಸಾಗಿಸಿದರು ಈ ಗಂಗಾಧರರು;
ಈ ನಾಡಿನಾಚೆಗೆ ಧರ್ಮ ಸಂದೇಶ ಬೀರಿದರು.

ಗುರುಕುಮಾರನ ಕರುಣೆಯ ಕಂದರಿವರು;
ಕುಮಾರ ಕಟ್ಟಿದ ಸಮಾಜ ಮಂದಿರಕೆ ಕಲಶವಿಟ್ಟಿಹರು.

ನೋಡಿಲ್ಲಿ! ನಿಮ್ಮ ಕಂದರ ಸಾಹಸದ ಸಾಧನೆಗಳ;
ಮುಗಿಲೆತ್ತರಕೆ ತಲೆಯೆತ್ತಿ ನಿಂತ ವಿದ್ಯಾ ಸೌಧಗಳ

ಸಾಹಿತ್ಯದೋಕುಳಿಯ ರಂಗನೆಲ್ಲೆಡೆ ಚೆಲ್ಲಿ;
ಕರ್ಪೂರದಂತೆ ಉರಿದು ಬೆಳಕಾಗಿಹರಿಲ್ಲಿ.

ಓ! ಭಾರತಾಂಬೆ ನೀನೆಷ್ಟು ಧನ್ಯೆ ಪಡೆದೆ ಶ್ರೀ ಗಂಗಾಧರರ;
ತಿರು ತಿರುಗಿ ಬರುತಿರಲಿ ಇಂತ ಪುಣ್ಯ; ಧನ್ಯವಾಯ್ತು ನಿನ್ನುದರ.

ಗಂಧದ ಕೊರಡಾದರು ಈ ಗಂಗಾಧರರು.
ಗುರುವಿನ ಕೃಪೆಯಿಂದ ತೇದರು; ಸಣ್ಣಾದರು ಕಂಪ ಬೀರಿಹರು;
ಜ್ಯೋತಿಯಾಗಿ ಬೆಳಗಿಹರು; ಮನುಕುಲದ ಕಣ್ಣಾಗಿಹರು.

□ □

ಪೂರ್ಣಜ್ಞ

—ಶಾಂತಕ್ಕ ಮಠದ

ಬಂದ ಗಂಗಾಧರಯೋಗಿ।
ಮೂರುಸಾವಿರ ಪೀಠ ಏರಿ ॥ಪ॥

ರಜತೋತ್ಸವದ ನಗಾರಿ।
ರಾಷ್ಟ್ರದಲ್ಲಿ ಜಯಭೇರಿ।
ಏರಿ ಪುಟಿಯಿತು ಗುಂಜಾರವ।
ನಿನಾದಿಸಿ ನಭೋಮಂಡಲವ ॥ ೧ ॥

ಕನ್ನಡ ನೆಲ ಭಾರತ ಜಲವ।
ಹೀರಿ ಹೂಬಳ್ಳಿ ಅರಳಲು।
ಬರೆಯಿತು ಇತಿಹಾಸ ಚರಣ।
ಸತ್ಯ ಸೌಂದರ್ಯ ವೀತಾಣ ॥ ೨ ॥

ಇಲ್ಲಿ ಅವತರಿಸಿದ ಈಶ।
ಧರಿಸಿ ಹುಚ್ಚನ ವೇಶ।
ಬೆಳಗಿದ ವರ ಗುರುಸಿದ್ಧೇಶ।
ಬೀರುತ ಧರ್ಮಪ್ರಕಾಶ ॥ ೩ ॥

ಇಂಥ ಘನವಂತ ಮಠಕೆ।
ವರ ಗಂಗಾಧರ ಯೋಗಿ।
ಬೆಳಕಿನ ಪ್ರಭಾವಳಿಯಾಗಿ।
ಜಗಕೆ ಜಂಗಮ ಪುಂಗನಾಗಿ ॥ ೪ ॥

ಜೀವನದ ನಿಮಿಷ ನಿಮಿಷವ।
ಭಕ್ತರ ಹಿತಕೆ ಶ್ರಮಿಸುವ।
ಮಹಿಮ ಮಹಾ ಮಹಾಂತ।
ಏರಿದ ಪೂರ್ಣಜ್ಞನ ಹಂತ ॥ ೫ ॥

ಅರವತ್ತರರಿವಿನ ಮೂಜಗಂ ಪರಿಚಯ ಪರಿಮಳ

—'ಶಿವಕವಿ' ಸಂಗನೇಶ ಹೊಸಮನಿ

ನಾನಾಗ ಶಿಕ್ಷಕನು
ಆಶ್ರಮದ ವಟು ನೀವು
'ಶಿವಯೋಗ ಮಂದಿರ'ದ ಸಿರಿಬನದಲಿ।
ಕವಿತೆ ಬರೆಯುವ ಹುಚ್ಚು
ನಿಮಗೂ ನನಗೂ ಮೆಚ್ಚು
ನನಗಾಗ ಹಿಡಿಸಿತ್ತು ನಿಮ್ಮಾತ್ಮ ಕೆಚ್ಚು ॥ ೧ ॥

ಜಗವು ಸಂತೆಯ ಮಂದಿ,
ಅಂತವಿಹ ಬಾಳಿಹುದು।
'ಮಹಾಂತ ದೇವರು' ಎಂಬ ಹೆಸರು ನಿಮಗೆ!
ರಸಬಳ್ಳಿ ಕುಡಿಗಟ್ಟಿ
ಜೀವ ಹಂದರ ಪುಷ್ಪ
ಮಗಮಗಿಪ ಮಂದಾರ ಸಾಹಿತ್ಯ ಸಿರಿಗೆ ॥ ೨ ॥

ಕೂಸಾಗಿ ಬಂದವರು
ಶಿಸುವಾಗಿ ಮೆರೆದವರು
ಬಸವಳಿಯುದಲೆ ನಿಂತ ನೆಲಕಾದಿರಯ್ಯ।
ಸಾಹಿತ್ಯ ಶಿಕ್ಷಣಕೆ
ಧರ್ಮ ಸಂಸ್ಕೃತಿ ಬೆರಕೆ
ಕವಿಯಾಗಿ, ಭವಿಯಾಗಿ ಮುನ್ನಡಿದಿರಯ್ಯ ॥ ೩ ॥

'ವಿಜಯ ಮಹಂತೇಶ್ವರ'ರ
ವಂಶವೃಕ್ಷದ ಪುಷ್ಪ
ಸುಕುಮಾರ ಕೃಪೆಯಲ್ಲಿ ಅರಳರಳಿತು।
ವಟುವಾಗಿ ದಿಟವಾಗಿ
ಸಂಸ್ಕೃತಿಗೆ ಶಿರಬಾಗಿ,
ಶಿವಾಳ ಶಿಸುವಾಗಿ ರಸಪೊಸರಿತು ॥ ೪ ॥

ಕಾಶಿಯಾತ್ರೆಯ ಪಯಣ
ಕಾಲ ಬಂದಿರೆ ಕೂಡಿ,
ಸಂಸ್ಕೃತದಿ ಪಾಂಡಿತ್ಯ ಪಡೆಯಲೆಂದು।
ಚಿತ್ತರಗಿ ವರ ಪೀಠ
ಚಿತ್ತಾರ ಬರೆದಿತ್ತು
ಭಾಗ್ಯ ಬಾಳಿನ ಭವ್ಯ ಪಟವನಂದು ॥ ೫ ॥

ಸಂಸ್ಕೃತಿಯ ಶಿವಯೋಗ
ಸಾಹಿತ್ಯ ಸಂಸ್ಕಾರ
ಸಂಸ್ಕೃತದಿ ಇಂಗ್ಲೀಷದಿ ಪಳಗಿ ಬಂತು।
ಆಚಾರ್ಯ ಪ್ರಾಚಾರ್ಯ
ವಿಶ್ವವಿದ್ಯಾಲಯದ
ಸಕಲಕ್ಕು ಸೆಲೆಯಾದ ಶಿವಯೋಗ ನಿಂತು ॥ ೬ ॥

ಹದಿನೈದು ವರುಷಗಳ
ಸುದೀರ್ಘ ಪಯಣದಲಿ
ವಿದ್ಯಾರ್ಥಿ ಜೀವನವು ಮುನ್ನಡೆದಿರೆ।
ಅರವತ್ತರರಿವಿನೊಳೂ
ನಗೆಯ ನಂದಾ ದೀಪ
ಶಿವಬಾಳಸಿರಿಗಿರಣ ಬೆಳ್ಬೆಳಗಿರೆ ॥ ೭ ॥

ಕರುನಾಡ ವರ ಪುಣ್ಯ
ಕರುಳ ಕರುಣೆಯ ನಿತ್ತು
ಮಹಾಂತದೇವರ ಬಳ್ಳಿ ಕುಡಿಗಟ್ಟಿತು।
ಚಿತ್ತರಗಿ ಇಲಕಲ್ಲ
ವರಭಕ್ತ ಸಿರಿಸೊಲ್ಲಿ
ವಿಜಯಮಹಾಂತರಪೀಠ ನಿಮಗೆಂದಿತು ॥ ೮ ॥

ಮನಸು ಮಂಗಳದಲ್ಲಿ
ಕನಸು ಕಲ್ಯಾಣದೆಡೆ
ಹೃದಯ ಕುಸುಮದ ಕಂಪು ಸೂಸಿ ಬರಲು।
ವನವೆಲ್ಲ ಹಣ್ಣಾಗಿ
ವೈರಾಗ್ಯ ಕಣ್ಣಾಗಿ
ಆತ್ಮ ಆಧ್ಯಾತ್ಮವನೆ ಮೂಸುತಿರಲು ॥ ೯ ॥

ಈ ಸ್ವಾಮಿ ಯಾರಿವರು?
ನಾಡ ಕಣ್ ಕುಕ್ಕಿದರು,
ಮೂರುಸಾವಿರಮಠದ ಕರೆ ಬಂದಿತು।
ಗುರುಸಿದ್ಧ ವರಸಿದ್ಧ,
ಪ್ರಸಿದ್ಧ ಪರಸಿದ್ಧ
ನಾಡದೈವದ ಪುಣ್ಯವಿದು ಎಂದಿತು ॥ ೧೦ ॥

ಗಂಗಾಧರನ ತೇಜ
ಶರಣ ಜೀವನ ದೋಜ
ಕವಿಗಣಕೆ ಭೋಜರಾಜ ಮಾನ್ಯ।
ನಿಮ್ಮ ಕಾಯಕ ದೀಕ್ಷೆ
ಮಂಗಳದ ಮಣಿ ರಕ್ಷೆ
ವಿಶ್ವದಂಗಳ ಹಾರಿ ಶಾಂತಿ ಸನ್ಮಾನ ॥ ೧೧ ॥

ವಿದೇಶ ಯಾತ್ರೆಯಿದು
ನಿಮಗೆ ಆಮಂತ್ರಣವು
ಕ್ಯೊಟೋದ ಜಾಗತಿಕ ಶಾಂತಿ ಸಮ್ಮೇಲನ।
ಪ್ರತಿಷ್ಠೆ ಪರಿಮಳವೆ?
ಕಳಕಳಿಯು ಸಂದೇಶ
ವೀರಶೈವಕೆ ಸಂದ ಸ್ಥಾನಮಾನ ॥ ೧೨ ॥

ವಿಶ್ವ ಶಾಂತಿಗೆ ಬೇಕು
ಜಾಗತಿಕ ಪರಿಷತ್ತು
ಸಕಲ ಧರ್ಮಕು ಇಲ್ಲಿ ಶುಭ ಸುಸ್ವರ।
ಸಭೆಗೆ ಕಣ್ಮಣಿ ನೀವು
ಸೂಚನೆಗೆ ಮನ್ನಣೆಯು
ಜಯಜಯತು, ಜಯಜಯತು ಗಂಗಾಧರ ॥ ೧೩ ॥

ಹಳ್ಳಿ ದಿಳ್ಳಿಯವರೆಗೆ
ಮನೆ ಮಠಕೆ ಮಂದಿರಕೆ
ಸಂಚರಿಸಿ ಸಾರಿದರು ಸಂದೇಶ ಶಾಂತಿ।
ಅಣ್ವಸ್ತ್ರ ಯುಗದಲ್ಲಿ
ತತ್ತರಿಸುತಿಹ ಜಗಕೆ
ಬೇಕಾಯ್ತು ಬೇಗದಿ ಆ ದಿವ್ಯ ಕ್ರಾಂತಿ ॥ ೧೪ ॥

ಸಮತೆ ಸಮರಸ ರಾಗ,
ಹೂಬಳ್ಳಿ ಅನುರಾಗ
ಹೂವಿಟ್ಟ ಪರಾಗ ನಾಂದಿಯಾಗಿ।
ಮೂರುಸಾವಿರಮಠದ
ಶಿವಯೋಗ ಸಿರಿಪಟ್ಟ
ಒಂದೆ ದ್ವಾದಶದಲ್ಲಿ ಜಗದ ಉಸಿರಾಗಿ ॥ ೧೫ ॥

ವಿದೇಶ ಪಯಣವದು
ಐತಿಹಾಸಿಕ ಸ್ಮರಣೆ,
ವಿಶ್ವ ಶಾಂತಿಗೆ ನಾಂದಿ ಹಾಡುತ್ತಿದೆ।
ಸಮತೆ ಸ್ವಾತಂತ್ರ್ಯದಲಿ
ಕಾಯಕದ ನೇತಿಯಲಿ,
ಕಲ್ಯಾಣ ಕ್ರಾಂತಿಯಿದು ಮೊಳಗುತ್ತಿದೆ ॥ ೧೬ ॥

ವಿಶ್ವ ಶಾಂತಿಯ ಪೂಜೆ,
ಯುಕ್ತ ರಾಷ್ಟ್ರದ ಸೇವೆ,
ಕನವರಿಕೆಯಾಗಿಹುದು ಜಗಜೀವಕೆಲ್ಲ।
ಶಾಂತಿ ನಂದಾದೀಪ
ಬೆಳ್ಬೆಳಗು ಧರೆಗಾಗಿ
ತೈಲ ಸುರಿಸಲುಬೇಕು ನಾವು ನೀವೆಲ್ಲ ॥ ೧೭ ॥

ಮೂರುಸಾವಿರಮಠದ
ಅಂಗಳಗಳುಪ್ಪರಿಗೆ
ಎಣಿಸಿ ಗುಣಿಸಲು ಬೇಕು ಅಂಗಡಿಯ ಸಾಲು।
ಜ್ಯೋತಿ ಪರಂಜ್ಯೋತಿ
ಪತ್ರಿಕೆಯು ಬೆಳಗುತಿರೆ
ಧರ್ಮ ಸಂಸ್ಕೃತಿ ಕೊಡುಗೆ ಇದಕೆಲ್ಲಿ ಸೋಲು? ॥ ೧೮ ॥

ಎರಡುವರೆ ದಶಕಗಳ
ಮುದ್ರಣದ ಮುದ್ದಣ್ಣ
ಧರ್ಮ ಸಂಸ್ಕೃತಿ ಬೆಳೆಯ ಬೆಳಿಸಿದಣ್ಣ।
ಶಿಕ್ಷಣದ ಬನದಲ್ಲಿ
ಹಲವಾರು ಹೆಮ್ಮರವು
ನಾಡು ನುಡಿ ಜೀವಕ್ಕೆ ಇನಿದಾದ ಹಣ್ಣು ॥ ೧೯ ॥

ಹತ್ತೆಂಟು ಸಂಸ್ಥೆಗಳ
ಶಿಕ್ಷಣದ ಚಟುವಟಿಕೆ,
ಉದಾರ ಹೃದಯದಲಿ ದತ್ತಿದಾನ।
ಬಡವರಾಸರೆಗೆಂದು
ಘಟಪ್ರಭಾ ಅಂಗಳದಿ
ಸೇವೆಗೈಯ್ಯುವ ಸ್ತುತ್ಯ ಆರೋಗ್ಯಧಾಮ ॥ ೨೦ ॥

ಮಹಿಳೆಯರ ಕಾಲೇಜು
ಸಂಸ್ಕೃತ ಪಾಠಶಾಲೆ,
ಪ್ರಸಾದನಿಲಯ, ಅನ್ನದಾಸೋಹ।
ಒಂದೆರಡೆ ಹನ್ನೆರಡೆ
ಲೆಕ್ಕಾ ಮಾಡಲು ಬೇಕೆ?
ಸಂಗೀತ, ಕೀರ್ತನೆಯು, ಜ್ಞಾನ ದಾಸೋಹ ॥ ೨೧ ॥

ಶಿವಯೋಗ ಮಂದಿರಕೆ
'ಧ್ಯಾನ ಧಾಮ'ದ ಸೇವೆ,
ಅನವರತ ಅನುರಾಗ ಸೂಸಿ ಬಂತು।
ದೀನ ದಲಿತರ ಪೂಜೆ
ಸಕಲ ಜೀವಿಗಳಲ್ಲಿ
ಮದುವೆಗಳ ಸಂಭ್ರಮವು ವರುವರುಷಗಿಂತು ॥ ೨೨ ॥

ನೂರೊಂದು ನೆಲೆಯಲ್ಲಿ
ನಿರ್ಮಿಸಿದ ಮಹಾದ್ವಾರ
'ಮೂಜಗಂ' ಕರ್ತೃತ್ವ ಶ್ರೇಷ್ಠ ನೆನವು।
ಭಕ್ತ ಬಳಗದ ಸೇವೆ
ನೂರೆಂಟು ತೆರದಲ್ಲಿ
ತ್ಯಾಗ ದಾನಕೆ ಇಹುದು ಆಗಲೂ ಗೆಲುವು ॥ ೨೩ ॥

ನುಡಿಯುತಿವೆ ಚಣಕೊಮ್ಮೆ
ಕರ್ತೃ ಗದ್ದುಗೆ ಗಂಟೆ,
ಹಗಲಿರುಳ ನೆನೆಸದಲೆ ಭಕ್ತರ ಮೊರೆ।
ಹುಬ್ಬಳ್ಳಿ ಮಹಾನಗರ
ಕೈಮುಗಿದು ನಿಂತಿರುವ
ದೃಶ್ಯ ಅನುಪಮವಲ್ತೆ? ಮೆಚ್ಚಿನಕರೆ ॥ ೨೪ ॥

ಆಲೋಚನೆಯು ಒಮ್ಮೆ
ಯೋಜನೆಯು ಇನ್ನೊಮ್ಮೆ
ಐನೂರು ಗ್ರಂಥಗಳ ಪ್ರಕಟನಾಲೀಲೆ।
ಧರ್ಮ ಪ್ರಕಾಶನದ
ಕಟ್ಟಡದ ನಿಧಿಯಿಂದ
'ಬಾಲಭಾರತಿ' ಕಾರ್ಯ ಈ ಹಣದ ಮೇಲೆ ॥ ೨೫ ॥

ಕೈಕೊಂಡ ಕಾರ್ಯಗಳ
ಮಾಡಿ ಮುಗಿಸುವ ಛಲವು
ಅಂದಿಗಿಂದಿಗು ಬಂದ ರುದ್ರ ಶಕ್ತಿ।
ಹಗಲಿರುಳು ಚಿಂತನವು
ಒಳಗೊಳಗೆ ಮಂಥನವು
ಸಕಲರೊಳೂ ಒಪ್ಪಿಗೆಯ ಪಡೆವಂಥ ಯುಕ್ತಿ ॥ ೨೬ ॥

ವೀರಶೈವದ ತತ್ವ
ಸಂಘಟನಾ ಸಂಘವನು
ಕಟ್ಟಿ ಬೆಳಿಸುವ ಕೀರ್ತಿ ಹುಬ್ಬಳ್ಳಿಗೆ।
ಗುರುಸಿದ್ಧನಾಶ್ರಯದಿ
ಬ್ಯಾಂಕು ಬೆಳಿಸುವ ಶಕ್ತಿ
ನಿಮ್ಮಾಸೆ ಅನವರತ ಆದರ್ಶ ಕೃತಿಗೆ ॥ ೨೭ ॥

ಕಲ್ಯಾಣಮಂಟಪವ
ಕಟ್ಟಿ ಕಾಪಾಡುವದು
ನಿಮ್ಮ ಭಾಗ್ಯದ ಬಯಕೆ ಹೆರುವ ಕೂಸು।
ತಾಳವೋಲೆಯ ಗ್ರಂಥ
ರಕ್ಷಿಸುವ ಹಿರಿ ಹೊಣೆಯು
ಇನ್ನೇಸೊ ಸಂಕಲ್ಪ ಸಾಗರದ ಈಸು ॥ ೨೮ ॥

ವಿಶ್ವಧರ್ಮಕೆ ತೇಜ
ಬಸವ ತತ್ವದ ಸತ್ವ
ಆಂಗ್ಲ ನುಡಿಯೊಳು ವಚನ ಅನುವಾದ ಮಾಡಿ।
ದೇಶ ಪರದೇಶದಲಿ
ಹಂಚುವಂತಹ ಸೇವೆ
ಗಂಗಾಧರರ ನಿಷ್ಠೆ, ಭಕ್ತಿ ನೋಡಿ ॥ ೨೯ ॥

ಸರಳ ಅವಿರಳ ಭಾವ
ಮೃದು ಮಧುರತಮ ಜೀವ
ನಿರಾಳ ಹೃದಯಗಿರಿ ಅನುಭಾವನೆನಿಕೆ।
ಏರಿದಷ್ಟೆತ್ತರಕೆ
ಸಾಗಿದಷ್ಟಗಲಕ್ಕೆ
ಇಣಿಕಿದರೆ ಕಣ್ಣೆಂಬು, ಮನಕಿಂಬು ಹರಕೆ ॥ ೩೦ ॥

ದುಡಿತದೊಳು ದಣಿವಿಲ್ಲ
ಮಿಡಿತದೆಣಿಕೆಗಳಿಲ್ಲ
ಬಾಳಿಗಾದರ್ಶಗಳ ಕರುಣಿಸುವ ಮನಸು।
ಜೀವ ಜೀವನದುದ್ದ
ಸಾಗಿಬಂದಿಹ ಮಣಿಹ
ಕನಸು ನನಸುಗಳಲ್ಲಿ ಇದರದೇ ಸೊಗಸು ॥ ೩೧ ॥

ಕಾಯಕದ ಕರುಣಾಳು
ನಾಯಕರ ಕೃತಶಕ್ತಿ
ತುಂಬು ಹೃದಯದ ಶರಣ, ಕರುಣ ಕಿರಣ।
ಗುರು ಜಗದ್ಗುರು ಎಂಬ
ಅಭಿಮಾನ ಸೋಂಕಿರದ
ಮಕ್ಕಳಲಿ ಮಗುವಾಗಿ ನಲಿವಂಥ ಹರಣ ॥ ೩೨ ॥

ಬಯಲು ನಾಡಿಗೆ ಬಂದ
ಭೀಕರದ ಬರಗಾಲ
ನಿಲ್ಲದಲೆ ಸಾಗಿದಿರಿ ಅನ್ನ ಹೊತ್ತು।
ಹಸಿವೆಯನು ತಣಿಸಿದಿರಿ
ಗಂಜಿ ಕೇಂದ್ರವ ತೆರೆದು
ಬಡವರಿಗೆ ಮೈತುಂಬ ಬಟ್ಟೆಯಿತ್ತು ॥ ೩೩ ॥

ಕವನ ರಚಿಸಲುಬೇಕು
ಹಿರಿದಾದ ಎದೆಯಾಸೆ
ಕೈಬಿಡದ ಕಾರ್ಯದೊಳು ಸಿಕ್ಕ ಕೊರಗು।
ವಚನವುಕ್ಕಿಸಬೇಕು
ಅನುಭಾವದಾಳದಲಿ
ಅನಗಾಲ ಕನವರಿಕೆ ಮೂಜಗಂ ಮರುಗು ॥ ೩೪ ॥

ಕವಿಯ ಹೃದಯದ ಕೊರಗು
ಕವಿಯೇ ತಿಳಿಯಲು ಸಾಧ್ಯ
ಸಾಹಿತಿಗಳೊಳ ಬಾಳನರಿತವರು ವಿರಳ।
ಸ್ವಾಮಿ ಸಂಭ್ರಮವೆಲ್ಲಿ?
ವೈಭವದ ಸೊಬಗೆಲ್ಲಿ?
ಕಲೆಯ ಸಾಮ್ರಾಜ್ಯದಲಿ ಸಂಚಾರ ಸರಳ || ೩೫ ||

ಸ್ವಾಮಿ ನಾನಾಗಿರಲಿ
ಸಿರಿವಂತನೆನುತಿರಲಿ
ಏನಾದರೇನಯ್ಯ ಶಾಂತಿ ಎಲ್ಲಿ।
ಹೃದಯರಸ–ಕವಿ ಕಾವ್ಯ
ಸವಿವ ಭಾಗ್ಯವೆ ದಿವ್ಯ
'ಮೂಜಗಂ' ಕನವರಿಕೆ ನಿಡುಗಾಲದಲ್ಲಿ || ೩೬ ||

ಸಾಹಿತಿಯು ಕವಿಬಳಗ
ಕಲಾವಿದರು ಬಂದು
ಕೈಯೊಡ್ಡುವದು ಕಂಡು ಕಣ್ಣೀರು ಬಂತು।
ಏತಕೀ ಪರಿತಾಪ?
ಎನಿತು ಬಾಳಿನ ಶಾಪ
ಪರಿಹಾರ ನೀಡದೇ ಸಮಾಜ ನಿಂತು || ೩೭ ||

ಏಸೊ ಸಲ ಬಡವರಿಗೆ
ಸ್ವಾಮಿ ಕರುಳಿನ ಕೊಡುಗೆ
ಕೈಯ್ಯ ಚಾಚಲು ಬೇಕೆ? ಕಲಾವಿದರ ಜೀವ।
ದುಡಿದು ಪಡೆದಿಹ ಕೀರ್ತಿ
ಬೇಡಿ ಕಳೆಯುವುದೇಕೊ?
ಮೈಮುರಿದು ದುಡಿಮಣ್ಣು ಹೇಳಿ ತನು ಭಾವ || ೩೮ ||

ಹೊತ್ತಗೆಯ ಬರೆದವಗೆ
ಹೆತ್ತವ್ವನಾದಾರು
ಐನೂರು ಗ್ರಂಥಗಳ ಮುದ್ರಣದ ಬಯಕೆ।
ಕವಿಯ ಎದೆಗುದಿ ಕಂಡು
ಕೈಗಿತ್ತು ಹರಸುವರು
ಅವರವರ ಅಡಚಣೆಯ ಏರಿಳಿತ ಕಂಡು || ೩೯ ||

ಗ್ರಂಥ ಪುರಸ್ಕಾರ
ಬಹುಮಾನ ಸತ್ಕಾರ
ಗ್ರಂಥಕರ್ತ್ತರಿಗುಂಟು ಪ್ರತಿವರುಷದಲ್ಲಿ।
ವಣಿಕರಿಗೆ ಕೃಷಿಕರಿಗೆ
ಕೈಗಾರಿಕೋದ್ಯಮಿಗೆ
ಸಕಲಕಲೆಗಾಶ್ರಯವು 'ಮೂಜಗಂ'ರಲ್ಲಿ ॥ ೪೦ ॥

ಬಾಲ ಮಕ್ಕಳ ಹಾಡು
ಪ್ರೌಢ ಕಾವ್ಯದ ಜಾಡು
ವಚನ, ಆಶೀರ್ವ್ವಚನ, ಹುಲುಸಾಗಿ ನೀಡಿ।
'ಪೂರ್ಣ್ಣಜ್ಞ' ಪರಿಕರದ
ತ್ರಿಪದಿ ಹೆದ್ದಾರಿಯಲಿ
ಪದ್ಯ ಹೃದಯಂಗಮವು ಶಿವ ಕೊಡುಗೆ ನೋಡಿ ॥ ೪೧ ॥

ಧರ್ಮ ಶಿಕ್ಷಣದರಿವು
ಸಂಸ್ಕೃತಿಯ ಚಿಂತನೆಗೆ
ಜನಸೇವೆ, ಜಗಸೇವೆ ಕಾವ್ಯಸೃಷ್ಟಿ।
ಅಂತರಂಗದ ಸುಳಿವು
ಮುಂಬಾಳಿಗಿದು ಉಳಿವು
ಸರ್ವ್ವತ್ರ ಚಿಂತನೆಯ ಸುವಿಶಾಲದೃಷ್ಟಿ ॥ ೪೨ ॥

ಹೃದಯಭೂಮಿಯೊಳೊಂದು
'ಚಿತ್ಸುಮನ'ವರಳಿತ್ತು
ಆಂತರಿಕ ಕಳಕಳಿಯ ಶಾಂತಿ ಸಂಪದವು।
ನಾಡ ಕಾಣಿಕೆಯಾಗಿ
'ಪೂರ್ಣ್ಣಜ್ಞ'ನದು ಸೇವೆ
ದಿವ್ಯ ಜೀವನಕಾದ ಭಾಗ್ಯನಿಧಿಯು ॥ ೪೩ ॥

ಜ್ಯೋತಿ 'ಪರಂಜ್ಯೋತಿ'
ಪತ್ರಿಕಾ ಪ್ರಪಂಚ
ಸಾರ್ಥಕದ ಸೇವೆಯಲಿ ಸಾಗಿ ಬಂತು।
ಧರ್ಮ ಸಂಸ್ಕೃತಿಕಿರಣ
ಸಂಸ್ಕಾರ ವರಕರುಣ
ಶರಣ ಹರಣದ ತೇಜವಾಗಿ ನಿಂತು ॥ ೪೪ ॥

‘ಪಥಿಕ’ ಬೇಕೆನಿಸುವದು
ಅರಿವಿನಾರತಿ ಬೆಳಗು
ಬಾಲ–ಭಾವನೆ ಬೆಳಕು ಚಲ್ಲಿದಂತೆ।
ಭಕ್ತಿ ಶಕ್ತಿಯ ಬೆಡಗು
ವಾಣಿ–ಆಶೀರ್ವಾಣಿ
ಶ್ರದ್ಧೆ ಬಾಳಿಗೆ ಆತ್ಮ ತೇಜದಂತೆ ॥ ೪೫ ॥

ಕವಿ ಬಳಗದೊಳು ಕೂಡಿ
ಕವಿಯಾಗಿ ಬಾಳುವದು
ಸತ್ಕಾರ ಸಂಪದವ ನೀಡಿ ತಣಿಯುವದು।
‘ಮೂಜಗಂ’ ಹವ್ಯಾಸ
ಇದೆ ಸ್ವಾಮಿ ನಿಧಿ ಧ್ಯಾಸ
ಸಂಭ್ರಮದಿ ಸಭೆಗಳನು ಕರೆದು ಹಿಗ್ಗುವದು ॥ ೪೬ ॥

ಗದಗು–ಡಂಬಳ ಮಠದ
‘ಸಿದ್ಧಲಿಂಗ ಪ್ರಭುವು’
‘ಸುಕುಮಾರ ಶಿವಯೋಗ’ ಅಧ್ಯಯನದವರು।
ಕಸಿಗೊಂಡ ಸಿಸುವಾಗಿ
ಗುರು ಜಗದ್ಗುರುವಾಗಿ
ಬೆಳೆದುಳಿವ ಕನ್ನಡದ ಕುಲಪುತ್ರರು ॥ ೪೭ ॥

ಶ್ರೀಶೈಲ ಪೀಠಕ್ಕೆ
ಪಂಡಿತಾರಾಧ್ಯರು
‘ಆನಂದಪುರ’ ಮುರುಘಾ ರಾಜೇಂದ್ರರು।
‘ನಿಂಬಾಳಕರೆ’ ಜಡಿಯ
ಶಾಂತಲಿಂಗ ಸ್ವಾಮಿ
ಕಲಬುರ್ಗಿ ಪೀಠಕ್ಕೆ ಸಿದ್ಧರೇವಣರು ॥ ೪೮ ॥

ಚರ ಚರಂತಿಯ ಮಠ ನಿಡಶೇಸಿ ಪೀಠಕ್ಕೆ
‘ಪ್ರಭುಸ್ವಾಮಿ’ ಆಗಮನ
ಬಂಧನಾಳಿಗೆ ನಿಂತ ವೃಷಭೇಂದ್ರರು।
ನಾಡು, ಗಡಿ ಆಂಧ್ರದುಡಿ
ನಾಡ ಗುಡಿ, ತಾಯ್ಮುಡಿಗೆ
ನೂರೆಂಟು ವಟುವರರು ಹೂ ತಂದರು ॥ ೪೯ ॥

ಕರುನಾಡ ದೆಸೆದೆಸೆಗೆ
ಸ್ವಾಮಿ ಬಳಗವನೀಡಿ
ಹೆಸರಾದ ವರ ಗುರುವೆ ನಾಡಿನಾ ಸಂತ।
ವಟುಗಳನು ಕರೆ ತಂದು
ಉಣಿಸಿ ವಿದ್ಯೆಯ ನೀಡಿ
ಮಠಕೆ ಸಲಿಸಿದ ಪುಣ್ಯ ಪೀಠ ಧೀಮಂತ ॥ ೫೦ ॥

ದ್ವಾದಶದ ಉತ್ಸವಕೆ
ನಿಮ್ಮ ಒಲುವಿನ ಗೆಲುವು
ಬಾಳ–ಸ್ಮೃತಿ ಸಂಪುಟವು ಮೆರೆದಿದ್ದಿತು।
ಶಿವಯೋಗ ಮಂದಿರದ
'ಪಾದಯಾತ್ರೆ'ಯ ಹರಹು
ಶರಣ ಸಂಘಟನೆಗಿದು ತಿರುವಾಯಿತು ॥ ೫೧ ॥

ನಾಡ ನಾಡಿಯ ಭಕ್ತಿ
ಶಿವಶರಣರನುರಕ್ತಿ
ಪುಟಿದೆದ್ದ–ಆಧ್ಯಾತ್ಮ ಸೆಲೆಯಾಗಿರೆ।
ಶಾಂತಿ ಸಮತೆಯ ವೃಕ್ಷ
ಬೆಳೆಯುತಿದೆ ಅಂಗಳದಿ
ಉತ್ಸವದ ಉತ್ಸಾಹ ನೆಲೆಯಾಗಿರೆ ॥ ೫೨ ॥

ಹಗಲಿರುಳು ನಿಧಿ ಧ್ಯಾಸ
ಬಿಡುವಿರದ ಅಭ್ಯಾಸ
ಕರ್ತವ್ಯ ದೀಕ್ಷೆಯನೆ ತೊಟ್ಟ ಸನ್ಯಾಸ।
ಅರವತ್ತು ವರುಷಗಳ
ಹೆಗಲೇರಿ ಸಾಗುತಿದೆ
ಮುಂದೆಲ್ಲಿಗೋ ಪಯಣ ತಿಳಿಯೆ ಹವ್ಯಾಸ ॥ ೫೩ ॥

ಇಂದು ಶಿಕ್ಷಣ ಸೇವೆ
ನಾಳೆ ಕವಿ, ಸಾಹಿತ್ಯ
ಮುಂದೆ ಸಾಗಲು ಬೇಕು ಧರ್ಮ ಕಾರ್ಯಕ್ಕೆ।
ಎಂದೆಂದು ಕಂಡರೂ
ಕೈ ಬಿಡದ ಕಾರ್ಯಗಳು
ತುಂಬು ಜೀವನ ಮುಡಿಪು ಹೃದಯ ಪೀಠಕ್ಕೆ ॥ ೫೪ ॥

ಸ್ವಾತಂತ್ರ್ಯ ಬಂದಿಹುದು
ಸಮರಸವತಂದಿಹುದೆ?
ಜಾತಿ ಜಾತಿಗಳಲ್ಲಿ ವೈರ ಮಾತ್ಸರ್ಯ।
ಕಿಚ್ಚೆದ್ದು ದಹಿಸಿತ್ತು
ಹುಬ್ಬಳ್ಳಿ ನಡುಗಿತ್ತು
ಬೀರಿದರು ಶಾಂತಿ ಶ್ರೀ ಜಗದ್ಗುರುವರ್ಯ ॥ ೫೫ ॥

ಮೇಲು ಕೀಳಿನ ರೊಚ್ಚು
ಜಾತಿ ಜಾತಿಯ ಕಿಚ್ಚು
ಎಂದಿಗೂ ಭಾರತಕೆ ಬಡಿದ ಹುಚ್ಚು।
ಭೂತ ಬಿಡಿಸುವರಾರು?
ಧೂಪಗಳ ಹೊಗೆ ಹಾಕಿ
ಸ್ವಾಮಿಃ ಮಂತ್ರವ ಪಠಿಸೆ ಎಲ್ಲರಿಗೂ ಮೆಚ್ಚು ॥ ೫೬ ॥

ಹಿಂಸೆಯಂಗಳದಲ್ಲಿ
ಮಂಗಳವು ಮೊಳಗುವದೆ?
ಶಾಂತಿ ಮಂತ್ರವೇ ನಿತ್ಯ ಪಾರಾಯಣ।
ಅಂದು ಮನ, ಮನೆ ಬೆಳಗು
ವಿಶ್ವ ಶಾಂತಿಯ ಸೊಬಗು
ಎಂದಾರೆ ತಪ್ಪೀತು ಬಂದ ಹೈರಾಣ ॥ ೫೭ ॥

ಎದೆ ದುಂಬಿ ನುಡಿದ ನುಡಿ
ನೆರೆನಂಬಿ ನಡೆದನಡೆ
ಪರಿಹಾರ ಕಂಡಿತ್ತು ಮೃದು ಹೃದಯದಿಂದ।
ಕರುನಾಡ ಕುಲಬಳಗ
ಕುತ್ತಿನೊಳು ಪಾರಾಗಿ
ಉಪಕಾರ ಸ್ಮರಿಸಿತ್ತು ಮುಗಿದ ಕೈಯ್ಯಿಂದ ॥ ೫೮ ॥

ಸಹಜ ಸರಳತೆ–ಜೀವ
ನಿರಾಳ ಶಿವ ಭಾವ
ನಿರ್ಮಲಂತಃಕರುಣ, ಉಕ್ಕಿದನುಭಾವ।
ಬಸವ ಶರಣರ ಬೆಳಗು
ಕಾಯಕದ ಕಲೆಯೊಳಗು
ತೊಳಗುತಿದೆ, ಬೆಳಗುತಿದೆ, ಸ್ವಾಮಿ ಒಳಹೊರಗು ॥ ೫೯ ॥

ಎಂದಾರೆ ಬಂದೀತು
ಮಠ, ಮತಗಳಲಿ ಐಕ್ಯ
ಎಂದಾರೆ ಕಂಡೇವು ಶಿವಶರಣ ಬಾಳು।
ಹಗಲಿರುಳು ಚಿಂತನೆಯು
ಒಳಗೊಳಗೆ ಮಂಥನವು
ಶಿವಯೋಗಿ ಕೊರಗಿಸಿದೆ ಅಮೃತದ ಗೋಡು ॥ ೬೦ ॥

ಮನೆ ಬೇಕು, ಮಠ ಬೇಕು
ಭಕ್ತ ಬಳಗವು ಬೇಕು
ಸಿರಿಬೇಕು, ಗಿರಿಬೇಕು, ಶಿವಬಾಳಿಗಾಗಿ।
ಕವಿಬೇಕು, ಕಲೆಬೇಕು
ಸಾಹಿತ್ಯ ಸಂಸ್ಕೃತಿಗೆ
ನಮಗೆ ಎಲ್ಲವೂ ಬೇಕು ಶುಭ ಜೀವಕಾಗಿ ॥ ೬೧ ॥

ಒಮ್ಮೆ ಬಂದವರೆನ್ನ
ಶ್ರೀ ಮಠಕೆ ಬರಬೇಕು
ಒಮ್ಮೆ ಕಂಡರೆ ಮತ್ತೆ ಕಾಣಲೇಬೇಕು।
ನಗೆ ನುಡಿಯಲಿರಬೇಕು
ಮಡಿ ಭಾವ ತರಬೇಕು
ತೆರೆದ ಹೃದಯದಿ ಕೂಡಿ ನಾನಲಿಯಬೇಕು ॥ ೬೨ ॥

ಮಲ್ಲಿಗೆಯ ಮೃದು ಹೃದಯ
ಮಗುವಿನಂತಹ ಮನಸು,
ಎಲ್ಲರೊಳಗೊಂದಾದ ಚೆಲುವಿನೊಲವು।
ಮೂಸಿದರೆ ಮಕರಂದ
ತಟ್ಟಿದರೆ ತಾಯಿ ಕೃಪೆ
ಕಂಡಿದ್ದೆ ಅನಗಾಲ ಹಿರಿದಾದ ಗೆಲುವು ॥ ೬೩ ॥

ಅಂದು ನೋಡಿದ ನಿಲುವು
ಅಂದು ಬೆಳಗಿದ ಒಲವು
ಇಂದಿಗೂ ಬೆಳಗುತಿದೆ ಕವಿ-ಸ್ನೇಹದಲ್ಲಿ।
ಅಜ್ಜನನುಭವವಾಣಿ
ಅಭಯ ನೀಡುವ ಹಸ್ತ
ಸಮತೆ-ಸಮರಸ ಕಂಡೆ ಗುರು ಚರಣದಲ್ಲಿ ॥ ೬೪ ॥

ಮೂರುಸಾವಿರಮಠವು
ಮುಂಬಾಳಿಗನು ವಿತ್ತು
ತಂಗಾಳಿ ಸೂಸುತಿದೆ ಘಮಘಮಘಮ।
ಗುರುಸಿದ್ಧ ವರಸಿದ್ಧ
ನಿರಂತರದ ನೆನಪು
'ಮೂಜಗಂ' ಸಂಗೀತ ವರ ಸರಿಗಮ ॥ ೬೫ ॥

5852

ಸೇವೆ ಭಾಗ್ಯದ ಕಿರಣ
ಶರಣ–ಕರುಣೆಯ ಹರಣ
ಬಾಳಬದುಕಿಗೆ ಸ್ಫೂರ್ತಿ ನೀಡುತಿಹುದು।
ಭಾವಭಕ್ತಿಯ ಸ್ಮರಣೆ
ಶಿವ–ಜೀವ ಸಂಸ್ಮರಣೆ
ಭಕ್ತ ಬಳಗದ ಜೀವ ತಣಿಸುತಿಹುದು ॥ ೬೬ ॥

ಬಸವತತ್ವದ ಜೀವ
ಗುರುಸಿದ್ಧರನುಭಾವ
ಸಕಲ ಜೀವಿಗು ಲೇಸ ಬಯಸುತ್ತಿದೆ।
ಹುಬ್ಬಳ್ಳಿ ಸ್ಮರಣೆಯಲಿ
ಮೂರುಸಾವಿರಮಠದ
'ಮೂಜಗಂ' ಅನುರಾಗ ಸ್ಮರಿಸುತ್ತಿದೆ ॥ ೬೭ ॥

'ರಜತ ಮಹೋತ್ಸವ'ದ
ಮಣಿಹವದು ಮರೆತಿಲ್ಲ
ಶಾಂತಿ ಸಮತೆಯ ಬೀಜ ಬೆಳೆಯಾಯಿತು।
ಧರ್ಮ ಸಾಹಿತ್ಯಸಿರಿ
ಸಂಸ್ಕೃತಿಯ ಮೇರುಗಿರಿ
ಅರವತ್ತರರಿವಿನಲಿ ಮೆಲುಕಾಡಿತು ॥ ೬೮ ॥

ಮಠದ ಪಿಸ್ತಾರವೊ?
'ಸಾಹಿತ್ಯ' ಪುಟದ ವಿಸ್ತಾರವೊ?
ಶಿಕ್ಷಣಕೆ, ಸಂಸ್ಕೃತಿಗೆ, ಹಿರಿಪಟ್ಟವೆನಲೆ।
ವ್ಯಷ್ಟಿ, ಸಮಷ್ಟಿಗಳ
ಜಾಗೃತಿಗೆ ಐಕ್ಯತೆಗೆ
ಶ್ರೀ ಮಠವು ರೂಪಿಸಿಹ ಪ್ರಸ್ತಾರವೆನಲೆ ॥ ೬೯ ॥

ಆಂಧ್ರ, ಮಹಾರಾಷ್ಟ್ರ ಗಡಿ
ಬಸವತತ್ವದ ಬೆಳಕು
ಬೆಳಗುವರು ಸ್ವಾಮಿಗಳ ಸಹಕಾರದಲ್ಲಿ।
ದುಷ್ಟ ಚಟಗಳ ಬಿಡುವ
ಕಾರ್ಯದಲಿ ಕೈಕೊಂಡ
ಕಾಯಕವು ಭಾಗ್ಯದರಂಗವಲ್ಲಿ ॥ ೨೦ ॥

ಬಾಲಕರ ಭಾಗ್ಯಸಿರಿ
'ರೆಸಿಡೆನ್ಸಿ' ಸ್ಕೂಲಾಗಿ
ಸಂಕಲ್ಪ ಶಿಲ್ಪದಲಿ ಮೂಡುತಿಹುದು।
ವೀರಶೈವರ ಧರ್ಮ
ಸಂಸ್ಕೃತಿಯ ಸಾಹಿತ್ಯ
ಗ್ರಂಥಗಳ ಶೇಖರಣೆ ಬೆಳೆಯುತಿಹುದು ॥ ೨೧ ॥

ನಾಡ ಪುಣ್ಯದ ಫಲವೊ?
ಸ್ವಾಮಿ ಸಂತರ ಗೆಲುವೊ?
ಮೇಳೈಸಿ ಬಂದಂತೆ 'ಮೂಜಗಂ' ಶಕ್ತಿ।
ಕಾಲಕಾಲಕ್ಕೆ ಇಳಿವ
ನಾಗರಿಕತೆಯ ನಕ್ಷೆ
ಮೈಗೂಡಿ ಬೆಳೆಯುತಿಹುದಾವ ಅನುರಕ್ತಿ ॥ ೨೨ ॥

ಮುಪ್ಪಿನವರಿಗೆ ಬೇಕು
ಮುದ್ದು ಮಮತೆಯ ಸೇವೆ
ಈ ಕಾಲದಲಿ ಕೊರತೆ ಕಾಣುತಿಹುದು।
'ವೃದ್ಧ ಸೇವಾಶ್ರಮ'ವ
ಕಟ್ಟ ಬೇಕೆಂಬಾಸೆ
ಸ್ವಾಮಿಗಳ ಹೃದಯದಲಿ ಬೆಳೆಯುತಿಹುದು ॥ ೨೩ ॥

ದೂರದಾರಿಯ ಪಯಣ
ಅರಿವಿನಾರತಿ ಕಿರಣ
ಮರಿಗೊಂಡ ಹರಣದಲಿ ಅನುಭಾವದೀಪ್ತಿ।
ಕಾಯಕವೆ ಕಳೆಗೊಂಡು
ನಾಡು ತಣಿಯಲುಬೇಕು
'ಮೂಜಗಂ' ಹರಣಕ್ಕೆ ಆಗ ತೃಪ್ತಿ ॥ ೨೪ ॥

ಮೂರುಸಾವಿರಮಠದ
ಪುಣ್ಯಾತ್ಮ ಶಕ್ತಿಯೇ
ಸಾಹಿತ್ಯ ಸಂಸ್ಕೃತಿಗೆ ಬಾಗಿನಿಂತು।
ಕರುಳ ಕರುಣೆಯು ಚಿತ್ರ
ನೂರೆಂಟು ಬಗೆಯಲ್ಲಿ
ದಯೆಯ ಧರ್ಮದ ತೇರು ಸಾಗಿಬಂತು ॥ ೭೫ ॥

ದೀರ್ಘಬಾಳಿನ ಪಯಣ
ನಿಮಗಿನಿತು ಬಿಡುವಿಲ್ಲ
ಅರವತ್ತಾರರಿವಿನೊಳು ಶಿವಸಿದ್ಧ ಶಕ್ತಿ।
ತೊಳಗಿ ಬೆಳಗುತಲಿರಲಿ
ಗುರುಸಿದ್ಧ ಕೃಪೆಯಲ್ಲಿ
ನಿಡುಗಾಲ ನೆಲೆಯಾದ ದಿವ್ಯಾನುರಕ್ತಿ ॥ ೭೬ ॥

ದ್ವಾದಶದ ಉತ್ಸವವೆ
ರಜತಮಹೋತ್ಸವವೆ
ಸ್ವರ್ಣಗಳೆ, ವಜ್ರಗಳೆ ಬನ್ನಿ ಬನ್ನಿ।
ಅರಿವಿನ್ನೈ ಸಿರಿಯಲ್ಲಿ
ಶತಮಾನ ಗಿರಿಯಲ್ಲಿ
ಜಯವನ್ನಿ ಜಯವನ್ನಿ ಜಯತು ಜಯವನ್ನಿ ॥ ೭೭ ॥

'ಶಿವಕವಿ'ಯ ಸಂಕಲ್ಪ
'ಸಂಗಮೇಶ'ನ ಅಲ್ಪ
ಸೇವೆಯಲಿ ಭಕ್ತಕವಿ ಧನ್ಯ ಧನ್ಯ।
'ಪರಿಚಯದ ಪರಿಮಳ'ವು
ಪಾಂಡಿತ್ಯವಿದಕೇಕೆ?
ಹೃದಯಹಸ, ಜೀವರಸ ಇನ್ನೇಕೆ ಅನ್ಯ ॥ ೭೮ ॥

ಪಡೆದಷ್ಟು ಪುಣ್ಯಫಲ
ನಡೆಯೆ ದಾರಿಯ ಬುತ್ತಿ
ದುಡಿದಷ್ಟು, ಮಿಡಿದಷ್ಟು ಕರುಳ ಕೃಪೆ ಎಂಬೆ।
ಕಾಡಿಸುವೆ, ಆಡಿಸುವೆ
ಕೈನೀಡಿ ಬರೆಯಿಸುವೆ
'ಸಂಗಯ್ಯ!' ಇದರಲ್ಲಿ ನಿಮ್ಮಾಟಕಾಂಬೆ ॥ ೭೯ ॥

□ □

ಅರವತ್ತೊಂದರ ಅರುಹಿನ ಹಬ್ಬ

—ಶ್ರೀಮತಿ ಶಿವಲಿಂಗಮ್ಮ ಕಟ್ಟಿ

೧

ಅರವತ್ತೊಂದರ ಅರುಹಿನ ಹಬ್ಬ
ಆರು ಪತ್ತು, ಮೇಲೆ ಒಂದರೊಳು ನಿಂದಹಬ್ಬ
ಮರೆವು ಮರೆದು ಕುರುಹು ಹಿಡಿದು
ಅರುಹಿನೊಳು ಆಚರಿಪ ಹಬ್ಬ
ಎನಿತು ಸುಬ್ಬರ; ಏನದರ ಸಂಭ್ರಮ!?
ಕರ್ತೃ ಗುರು ಸಿದ್ಧೇಶನ ಕರಕಂಜಾತ
ಜ್ಞಾನಗಂಗೆ ಧರಿಸಿದ ಜಗದಗುರು
ಗಂಗಾಧರ ರಾಜ ಯೋಗೀಂದ್ರನ
ಅರವತ್ತೊಂದರ ಹುಟ್ಟು ಹಬ್ಬ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ಕರುಣೆಯ ಕಂದ
ಹುಟ್ಟಳಿದು ಸಾವಗೆಲಿದವನ ಹಬ್ಬ ನೋಡಾ.

೨

ಜೀವನದ ಕಲ್ಲು ಮುಳ್ಳಿನ ಪಥದೊಳು
ಅರು ದಶಕಗಳವರೆಗೆ ಸಾರ್ಥಕವಾಗಿ
ಸಾಗಿ ಬರುವದು ಸುಲಭವೇನಯ್ಯ?
ಜೀವನದಿ ಬಾಲ್ಯ; ಆಟದೊಳು ಮರೆದು
ಯೌವನ ನೋಟದೊಳು ಮಾಟ ಅರಿದು
ಅರವತ್ತರೊಳು ಆಟ, ನೋಟ, ಮಾಟ, ಕೂಟದೊಳು
ಬೆರಸಿ ಬೇರೊಂದಾಗಿಸಿ
ಅನುಭವದಣಿ ಮುತ್ತುಗಳೆಂದು ಸುರುವುತಿಪರು
ಆಯ್ದುಕೊಂಡು ನಿತ್ಯಾನಂದದೊಳೋ ಲಾಡಿರೊ;
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ಈ ಸುಗ್ಗಿಯ ಹಿಗ್ಗು ನೋಡು ತಂದೆ;

೩

ಹೊಬಳ್ಳಿ ಪುರದ ಜಗದ್ಗುರು ಸನ್ನಿಧಿಯವರ
ಹೊನ್ನು ಹಬ್ಬ
ಅವರ ಮೈ ಬಣ್ಣ, ಬಟ್ಟೆ ಬಂಗಾರ
ಅವರ ಮನ, ಹೃದಯ ಬಂಗಾರ
ಮಾತು ಸಿಂಗಾರ
ಬಂಗಾರ ತೂಗುವರು ಕಲ್ಲಿನೊಡನೆ
ಇವರನ್ನು ತೂಗುವರು
ಶ್ರೀಗುರು ಗುರುಸಿದ್ಧೇಶನೊಡನೆ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ಗುರುಶಿಷ್ಯರ ಮಹಿಮೆ ಅನುಪಮವಯ್ಯ

೪

ಸಾಹಿತ್ಯ ರಚಿಸಿ, ರಚಯಿಸಿಸಿ
ಸೂರೆಗೈಯ್ಯುತ್ತಿರುವ ಸಾಹಸಿ
ಸೌಧಗಳ ಮಾಲೆಯನೆ ನಿರ್ಮಿಸುತ್ತಿರುವ
ಮಹಾಶಿಲ್ಪಿ, ಅಭಿನವ ಜಕ್ಕಣ
ವಿದ್ಯಾ, ಬುದ್ಧಿ, ಕಲೆ, ನೆಲೆ, ದಾನಗೈಯ್ಯುತ್ತಿರುವ
ಸರಸತಿಯ ವರಪುತ್ರ
ಪರದೇಶದೊಳು ಪರಮತದವರಲ್ಲಿ
ಸ್ವಮತ ಧ್ವಜ ಹಾರಿಸಿದ ವರವೀರಶೈವಿ
ಪರದೇಶಕೆ ಪಯಣಿಸಿದ ಈ ಶತಕದ
ಪ್ರಥಮ ಜಂಗಮಾಪುಂಗವ
ವಿರಾಟ್ ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ಕನಸು, ನನಸು ಮಾಡುತಿಹರಯ್ಯ

೫

ವಿರಾಟ್ ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ಕರುಣೆಯಿಂದ, ಶಲವಾಳ ಗ್ರಾಮದೊಳು
ಚೆಲು ಭಕ್ತಿ ಚೆನ್ನಮ್ಮ ಮರುಳಸಿದ್ಧ ದಂಪತಿಗಳಿಗೆ
ಶಿಶುವಾಗಿ ಜನಿಸಿತು; ಗುರುಸಿದ್ಧೇಶನ
ಗುರುತರದ ಕುಡಿ.
ಮರುಳ ಸಿದ್ಧರ ಬೀಜ, ಹುಬ್ಬಳ್ಳಿ ಹುಚ್ಚನ ಮಠದೊಳು

ಫಲ ಕೊಡುವದೆಂದಾರು ಬಲ್ಲರಯ್ಯ?
ಚಿತ್ತರಗಿ ಚಿದ್ವಿಲಾಸ ಚಿದ್‌ಘನ ಮೂರ್ತಿ
ವಿಜಯ ಮಹಾಂತೇಶನ
ಹೆಸರಿಟ್ಟು ಶಿಶುವಿಗೆ, ಜೋಗುಳ ಹಾಡಿದರಯ್ಯಾ
ಮುತ್ತೈದೆಯರು
ಕೆಂದಾವರೆಯ ಮುದ್ದು ಮಗುವನ್ನು
ಶಿವಯೋಗ ಮಂದಿರಕೆ ಕೊಡುವ ಹರಕೆ
ಮರೆತಳಯ್ಯ ಚೆನ್ನಮ್ಮ ತಾಯಿ
ಮಾತೆಯ ಮೋಹ ಕಳಚಲು
ಮಗುವಿನ ಕಣ್ಣ ಕಳೆಯ ಕಳೆದನಯ್ಯ; ದೇವನು
ತಾಯ್ಗರುಳು ಮಮ್ಮಲಿಟ್ಟು ಕೂಗಿತು; ಮರೆದ ತಪ್ಪಿಗೆ
ಗೋಳಿಟ್ಟು ಗೋಗರೆಯಿತು.
ಆರ್ತ ಧ್ವನಿ ತಲುಪಿತು ದೇವಗೆ, ಕಣ್ಣ ಕಳೆ ಮರಳಿತು
ತಾಯಿ ಹೃದಯ ಹಿಗ್ಗಿ ಹೊನಲಾಯಿತು
ಪಂಚ ಆಚಾರಗಳ ಪ್ರತೀಕನಾಗಲೆಂದು
ಪಂಚಮದ ವಯದೊಳು ಶಿವಮಂದಿರಕೆ
ಕರೆತಂದು ನಿನ್ನ ಪಾದಕೆ ಸಮರ್ಪಿಸಿದರಯ್ಯ
ಮಾತಾ ಪಿತರು ಕಂದನ
ನೆನಗೆ ಸಂಪ್ರೀತರಾದರಯ್ಯ

೬

ಶಿವಾಳ ಶಿಶು, ಶಿವಮಂದಿರದೊಳು
ಮಹಂತ ವಟುವಾಗಿ, ಬಿಳಿಯ
ಕಿವಿ ಟೋಪಿ ಕಫನಿ ಧರಸಿದನಯ್ಯ
ತಾಯಿಯ ಮೋಹ ಮರೆದು, ತಂದೆಯ ಬಂಧನ ಮುರಿದು
ಮಹಂತ ದೇವರಾದನಯ್ಯ.
ಪ್ರಕೃತಿ ಸೌಂದರ್ಯಸವಿದು, ಅಧ್ಯಾತ್ಮದೋಗರವನುಂಡು
ಮಹತ್ ಸಾಧಿಸಲಣಿಯಾದನಯ್ಯ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ತಾಣದೊಳು
ಮಹಂತ ದೇಶಿಗನ, ಚೈತನ್ಯ ಚಿಲುಮೆ ಚಲುವಾಗಿ
ಚಿಮ್ಮತೊಡಗಿತಯ್ಯ

೭

ಮಹಂತ ದೇಶಿಗನ, ವಿದ್ಯೆ ಬುದ್ಧಿ
ತೇಜಸ್ಸು, ಓಜಸ್ಸು, ಪ್ರತಿಭೆ ನೋಡಿ
ಚಿತ್ತರಗಿ ಪೀಠಕೆಬೇಕೆಂದೆತ್ತಿಕೊಂಡರಯ್ಯ
ಮುಂದಿನ ಓದಿಗಾಗಿ ಕಾಶಿಗೆ ಕಳುಹಿದರಯ್ಯ
ಅಲ್ಲಿ ಸಂಸ್ಕೃತ, ಹಿಂದಿ, ಇಂಗ್ಲೀಷ ಭಾಷೆಯೊಳು
ಪದವಿ ಪಡೆದು ಪರಣಿತರಾದರಯ್ಯ
ಚಿತ್ರ ಕಲಾ, ಸಾಹಿತ್ಯ, ಕವನ ರಚನೆ, ಶಿವಪೂಜೆ
ಅವರ ಪಂಚಪ್ರಾಣವಾಮುವಯ್ಯ
ಮರಳಿ ತಾಯ್ನಾಡಿಗೆ ಬರುವದರೊಳು
ಹುಬ್ಬಳ್ಳಿ ಜಗದ್ಗುರು ಪೀಠ ಕೈ ಬೀಸಿ ಕರೆಯಿತಯ್ಯ
ವಿರಾಟ್ ಪುರಾಧೀಶ ಶ್ರೀಗುರು ಕುಮಾರೇಶ್ವರ

೮

ಹೂಬಳ್ಳಿ ಪುರದ ಶ್ರೀ ಮ. ನಿ. ಪ್ರ. ಜಗದ್ಗುರು
ಗುರುಸಿದ್ಧ ರಾಜಯೋಗಿಂದ್ರರಿಗೆ
ಶಿವನ ಕರೆ ಬಂದಿಹುದಯ್ಯ
ಜಗದ್ಗುರು ಪೀಠದ ಗುರುತರದ ಹೊರೆ ಹೊರುವ
ಸಮರ್ಥ ಶಿಷ್ಯ ಮಹಂತ ದೇವರನ್ನೇ
ಆಯ್ಕೆ ಮಾಡಿಕೊಂಡರಯ್ಯ
ಒಂದು, ಒಂಬತ್ತು, ಐದು, ಎಂಟು, ವೀರಶೈವ ಧರ್ಮದ
ಮಹಾನ್ ಸಂಖ್ಯೆಗಳಿಂದೊಡಗೂಡಿದ ಶುಭದಿನದಂದು
ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳಿಂದು
ವೈಭವದಿಂದ ಪೀಠಾರೋಹಣ ಮಾಡಿದರಯ್ಯ
ವಿರಾಟ್ ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ಹರಕೆಯ ಹದುಳಿಗ
ಜಗದ್ಗುರು ಪೀಠವಲಂಕರಿಸಿದರಯ್ಯ
ಹೂಬಳ್ಳಿ ಹರುಷ ಸಾಗರದೊಳು, ತೇಲಾಡಿತಯ್ಯ

೯

ಜಗದ್ಗುರು ಪೀಠವಲಂಕರಿಸಿದರೂ
ಸುಖದ ಸುಪ್ಪತ್ತಿಗೆಯೊಳು ಲೋಲಾಡಲಿಲ್ಲವಯ್ಯ

ಹಗಲು ಹನ್ನೆರಡು ಗಂಟೆ ಸಮಾಜದ ಚಿಂತೆ
ಇರುಳು ಹನ್ನೆರಡು ಗಂಟೆ ಸಾಹಿತ್ಯ ಶಿವಪೂಜೆ ಚಿಂತನೆ
ಮಕ್ಕಳಿಗೆ ವಿದ್ಯೆ ನೀಡುವ ಚಿಂತೆ
ಯುವಕರಿಗೆ ಕಸಬು ಕೊಡುವ ಚಿಂತೆ
ಹಿರಿಕಿರಿಯರಿಗೆ ಅಸನ ವಸನ ವಸತಿಯ ಚಿಂತೆ
ಬಡವರ ಆರೋಗ್ಯದ ಚಿಂತೆ
ಸ್ವಧರ್ಮದವರ ಸಂಕುಚಿತದ ಹಿರಿ ಚಿಂತೆ
ಹೀಗೆ ಹಲವಾರ ಚಿಂತೆಯು, ಚಿಂತೆಯೊಳು ಬೇಯುತಿರಲು
ವಿರಾಟ್‌ಪುರಾಧೀಶ ಶ್ರೀ ಗುರು ಕುಮಾರೇಶ್ವರ
ಕರ್ತೃ ಗುರುಸಿದ್ಧೇಶ್ವರ
ಅವರನ್ನು ಕೈ ಹಿಡಿದು ನಡೆಸುತಿಹರಯ್ಯ

೧೦

ಆರೋಗ್ಯವಿರಲು ಸರ್ವಸಾಧಿಸಬಹುದೆಂದು
ಗುರುಗಳಿಂದ ಪ್ರಾರಂಭವಾದ ಘಟಪ್ರಭೆಯ ಆಸ್ಪತ್ರೆಯನು
ಭರದಿಂದ ಉಜ್ವಲಗೊಳಿಸಿದರಯ್ಯ
ಕಷ್ಟನಷ್ಟಗಳ ಎದುರಿಸಿ, ಹೊಸಹಾದಿ ಕಲಿಸಿದರಯ್ಯ
ರೋಗಿಗಳಿಗೆ, ವೈದ್ಯರಿಗೆ, ದಾಯಿ ಮೊದಲಾದವರಿಗೆ
ವಸತಿ ನಿರ್ಮಿಸಿದರಯ್ಯ, ನವ ಸಲಕರಣೆಗಳ ಪೂರೈಸಿದರಯ್ಯ
ಪ್ರಸಾದನಿಲಯ ಪ್ರಾರಂಭಿಸಿದರಯ್ಯ, ಬಡವರಿಗಾಗಿ,
ವಿರಾಟ್ ಪುರಾಧೀಶ ಶ್ರೀ ಗುರು ಕುಮಾರೇಶ್ವರ
ಅಳುತ ಆಸ್ಪತ್ರೆಗೆ ಬಂದವರು, ನಗುತ ಹೋಗುವರಯ್ಯ

೧೧

ಕುಂಚ ಬ್ರಹ್ಮ ಮಿಣಜಿಗಿಯವರ
"ಲಲಿತ ಕಲಾ ಮಹಾವಿದ್ಯಾಲಯ" ಅಸ್ತಂಗತ
ಸಮಯದೊಳು; ಲಕ್ಷ್ಯದಿಂದ ಲಕ್ಷ್ಯಕೊಟ್ಟು
ಉಳಿಸಿ ಬೆಳೆಸಿದರಯ್ಯ ಮಹಾಸನ್ನಿಧಿ
"ಗುರುಸಿದ್ಧೇಶ್ವರ ಗ್ರಂಥಾಲಯ" ಲಿಂಗರಾಜ ಪ್ರಸಾದ ನಿಲಯ,
ವಿದ್ಯಾರ್ಥಿ, ವಿದ್ಯಾರ್ಥಿನಿಯರನಿಲಯ,ಗುರುಸಿದ್ಧೇಶ್ವರ ಅತಿಥಿಗೃಹ
ಬ್ಯಾಂಕು, ದುಡಿವ ಮಹಿಳೆಯರ ವಸತಿ ಗೃಹ
ಪ್ರಾಥಮಿಕ ಶಾಲೆಯಿಂದ ಮಹಾವಿದ್ಯಾಲಯದವರೆಗೆ
ಬೃಹತ್ ಕಟ್ಟಡಗಳು

ಆರ್ಥಿಕವಮಟ್ಟ ಏರಿಸಲು ಅನೇಕಾನೇಕ
ಮಳಿಗೆಗಳ ಗುಂಪುಗಳು
ಮೂರುಸಾವಿರಮಠದ ಜೀರ್ಣೋದ್ಧಾರ, ಶಾಖಾಮಠಗಳ ಉದ್ಧಾರ
ಆರಂತಸ್ತಿನ ನೂರೊಂದು ಅಡಿಯ
ಮಹಾನ್ ಮಹಾದ್ವಾರ
ಅದರೊಳು ಕಾಲನಗತಿ ಅಳವಡಿಸಿಹರಯ್ಯ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ಶ್ರೀಮಠ, ಇಂದ್ರಭವನ ಮೀರಿಸಿಹುದಯ್ಯ.

೧೨

ಗುರು ವಿರತರು ಸಮಾಜ ಪುರುಷನ
ಎರಡು ಕಣ್ಣುಗಳೆನುವರಯ್ಯ
ಅಂದಂತೆ ಆಚರಿಸಲು 'ಕುಮಾರೇಶ್ವರ ಶಿವಯೋಗಿ ಸಂಘ'
ಸ್ಥಾಪಿಸಿಹರಯ್ಯ
ಅದರೊಳು ರೂಪಗೊಂಡವರು
ಜಗದ್ಗುರು ಪೀಠವಲಂಕರಿಸಿಹರಯ್ಯ
ನೂರಾರು ಮಠಗಳಿಗೆ ಗುರು ವಿರತರ ನೀಡಿಹರಯ್ಯ
ಅವರಿಗೆ ವಿದ್ಯೆ, ಬುದ್ಧಿ, ಆಚಾರ-ವಿಚಾರ
ಸ್ವಧರ್ಮನಿಷ್ಠೆ ಪರಧರ್ಮ ಸಹಿಷ್ಣುತೆ
ಕೀರ್ತನ, ಪುರಾಣ, ಪ್ರವಚನ, ಕಾಯಕ
ಮುಂತಾದವುಗಳ ಕಲಿಸುವರಯ್ಯ
ಗುರುವಿರತರ ಏಳ್ಗೆ, ವೀರಶೈವದ ಏಳ್ಗೆ
ಎಂದು ತ್ರಿಕರಣ ಪೂರ್ವಕ ದುಡಿವರಯ್ಯ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ನಿನ್ನ ಆದೇಶ ಪಾಲಿಸುತಿಹರಯ್ಯ.

೧೩

ಹೆಂಗಳೆಯರು ವಿಚಾರಶೀಲರಾದರೆ
ಎರಡುಮನೆ ಬೆಳಗುವರೆಂದು
ಪ್ರಾಥಮಿಕದಿಂದ ಪದವಿ ಪಡೆವ ಅನುಕೂಲತೆ
ನೀಡಿಹರಯ್ಯ

ಹೆಣ್ಣು ಮಕ್ಕಳಿಗೆಂದು ತಾಂತ್ರಿಕ ಶಾಲೆ ತೆರೆದವರಯ್ಯ
ಅವರ ಸಾಹಿತ್ಯಕ್ಕೆ ಹೆಚ್ಚಿನ ಪ್ರಾಶಸ್ತ್ಯ ಕೊಡುವರಯ್ಯ
ಆಚಾರವಂತರ, ಸತ್ಯ, ನಿಷ್ಠೆಯುಳ್ಳವರ ಕಂಡರೆ
ಬಹು ಸಂತಸಪಡುವರಯ್ಯ
ಅವರ ಸಂಕುಚಿತ ಭಾವಕ್ಕೆ
ಮರ ಮರ ಮರಗುವರಯ್ಯ
ವನಿತೆಯರ ಸಂಸ್ಥೆಗಳಿಗೆ ಸ್ಥಳ ನೀಡಿ, ಧನ ನೀಡಿ
ಹೆಚ್ಚಿನ ಪ್ರೋತ್ಸಾಹ ನೀಡಿ ಮುನ್ನಡೆಸುವರಯ್ಯ
ಕಣ್ದೆರೆದು ವರದಕ್ಷಿಣೆ ಪಿಡುಗು
ನಿವಾರಿಸಲು ಸಾರಿ ಹೇಳುವರಯ್ಯ, ಜಾತಿ ಜಗಳ ಪರಿಹರಿಸಿ,
ಹೊಂದುಗೂಡಿಸಿಹರಯ್ಯ
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ಹನ್ನೆರಡನೆಯ ಶತಮಾನ ಸನ್ನಿಧಿಯವರ ಸಾನ್ನಿಧ್ಯಕ್ಕೆ
ಮತ್ತೆ ಮರಳಿಹುದಯ್ಯ.

೧೪

ಜಗದ್ಗುರು ಮಹಾ ಸನ್ನಿಧಿಯವರ
ಸಾಹಿತ್ಯ ಸರಸತಿಯ ಸೇವೆನೆಂತು ವರ್ಣಿಸಲಯ್ಯ?
ಪೀಠವಲಂಕರಿಸಿ ೩೩ ವರುಷದೊಳು ೩೩ ಗ್ರಂಥಗಳ ರಚಿಸಿಹರಯ್ಯ
ಗದ್ಯ, ಪದ್ಯ, ಪ್ರಬಂಧ,
ವಚನ ಮೊದಲಾದರೊಳು ಅವರ ಆಸಕ್ತಿಯಯ್ಯ
ಸಾಹಿತ್ಯ ಸೌರಭ ದಶದಿಕ್ಕುಗಳಿಗೆ ಹರಡಲೆಂದು
'ಪರಂಜ್ಯೋತಿ ಮಾಸಪತ್ರಿಕೆ' ಪ್ರಚಾರೋಪನ್ಯಾಸ ಮಾಲೆ'
'ವೀರಶೈವ ಭಾರತಿ' 'ವಚನಗಳ ಮುದ್ರಣ'
ಸಂಶೋಧನ ಗ್ರಂಥಗಳ ಮುದ್ರಣ'
ಗ್ರಂಥಗಳಿಗೆ ಪಾರಿತೋಷಕ ನೀಡುವದು
ಒಂದಲ್ಲ, ಎರಡಲ್ಲ, ಹತ್ತಿಪ್ಪತ್ತಲ್ಲ, ಕೋಟಿ ಕೋಟಿ ಹಣ
ವ್ಯಯಿಸುವರಯ್ಯ:
ಸಾಹಿತ್ಯ, ಸಂಸ್ಕೃತಿ, ವೀರಶೈವಕ್ಕಾಗಿ.
ವಿಶ್ವವಿದ್ಯಾಲಯಗಳು ಮಾಡುವ ಕಾರ್ಯವನ್ನು
ಒಬ್ಬಂಟಿಗರಾಗಿ ನಿರ್ವಹಿಸುತ್ತಿಹರಯ್ಯ

ಅವರಿಗೆ ಹತ್ತುಜನ ನೆರವಾದರೆ, ನೂರು ಜನ
ಹೊರೆಯಾಗುವರಯ್ಯ
ನೂರುಜನ ನೆರವಾದರೆ!?
ವಿರಾಟ್‌ಪುರಾಧೀಶ ಶ್ರೀಗುರು ಕುಮಾರೇಶ್ವರ
ಅವರ ಪಡುವಿರದ ಬದುಕು, ಪರೋಪಕಾರದ ಘನಸಂಪತ್ತು
ಘನತರದ ಧರ್ಮಕಾರ್ಯ ಅವಿರತ ಸಾಗಿಹವಯ್ಯ
ನಿನ್ನ ಕೃಪೆಯಿಂದ.

□ □

ವಿಶ್ವ ಗಂಗಾಧರ

—ಜಿ. ಎಚ್. ಹನ್ನೆರಡುಮಠ

ದೂರದಾರಿಯ ನಡೆದು ಸೋತು ಹೋದವು ಕಾಲು
ಎತ್ತಿಕೊಳ್ಳುವ ತಾಯಿ ಯಾರು ಹೇಳು
ಎದೆಯುಮುಸಿ ಪೆನ್ನುಮುಸಿ ತಲೆಯುಮುಸಿ ನುಸಿಯಾಯ್ತು
ಹಸಿವು ತುಂಬುವ ತಾಯಿ ಯಾರು ಹೇಳು||

ಹಸಿಯು ಸುಳ್ಳಿನ ಕೌದಿ ಹೊದ್ದು ಮೇಲಕೆ ಎದ್ದ
ಓ ಯೋಗಿ ಗುರುಸಿದ್ಧ ಕೇಳು ಕೇಳು
ಕೇಳಲಾರದ ಆಚೆ ನೋಡಲಾರದ ಆಚೆ
ಕಲ್ಪನೆಯ ಕಡಲಾಚೆ ಸೀಳಿ ಕೇಳು||

ವ್ಯಕ್ತಿ ಪೂಜೆಯ ಹೂಜೆ ಒಡೆದುಹೋಯಿತು ಒಳಗೆ
ಸಾವು ಮೀರಿದ ಸತ್ಯ ಕಕ್ಕಿ ನಕ್ಕೆ
ವಿಶ್ವಗಂಗಾಧರನೆ ಸತ್ಯಗಂಗಾಧರನೆ
ಮೂಜಗಂ ಪೂರ್ಣಜ್ಞ ಉಕ್ಕಿ ನಕ್ಕೆ||

ಸಾಕು ಚಿನ್ನದ ದಾರಿ ನೂಕು ಕನಸಿನ ಮಾರಿ
ಬೇಕು ತಂಪಿನ ತಂಪು ಆತ್ಮ ಸೊಂಪು
ಗಾನಗಂಗಾಧರನೆ ಯೋಗಗಂಗಾಧರನೆ
ಆದಿ ಗಂಗಾಧರನೆ ಹೇಳು ಎಂತು||

ನಿನ್ನ ಪಟ್ಟಿಯದಾರಿ ನೂರು ಮೆಟ್ಟಿಲಿಗಟ್ಟಿ
ಹಗ್ಗ ಹರಿಯುವ ಮೊದಲು ತೇರುಸಾಗಲಿ
ಜಯಜಯಾ ಜಯಜಯಾ ಜಯಕಾರ ಹಾಡುವೆನು
ಸೋತು ಹೋದರು ಬಿಡೆನು ಜಯವಾಗಲಿ||

□ □

ದಿವ್ಯ ದೀಪ್ತಿ

—ಎಂ. ಡಿ. ಗೋಗೇರಿ

ಯಾವ ಶಕ್ತಿಗೆ ನಿನ್ನ
ಹೋಲಿಸಲಿ ಗುರುದೇವ
ಮನುಕುಲುವೆ ನಿನ್ನನ್ನು ಸ್ಮರಿಸುತ್ತಿದೆ
ಯಾವ ಭಕ್ತಿಯು ನಿಟ್ಟು
ಆಲಿಸಲಿ ಶ್ರೀಸುಡಿಯ
'ಮೂಜಗಂ' ರ ಹರಕೆ ಬಯಸುತ್ತಿಹೆ ॥ ೧ ॥

ಕಾಯಕದ ಜಗದಲ್ಲಿ
ಮಿಗಿಲಾದ ತಪಗೈದೆ
ಸಿದ್ಧರಾಮನ ತೆರದಿ ಕರ್ಮಯೋಗಿ
ಸರ್ವ ಜೀವಿಗಳಲ್ಲಿ
ಸರ್ವೇಶನಿಪನೆಂದು
ಸಕಲರುದ್ಧಾರಕ್ಕೆ ನಿಂತ ತ್ಯಾಗಿ ॥ ೨ ॥

ಭಾವ ಬಾಂದಳದಲ್ಲಿ
ಶಶಿಯಂತೆ ತಂಪೆರೆದ
ಶಿಸುವಿನೋಪಾದಿಯಲಿ ಹರ್ಷ ತುಂಬಿ
ಕಾವ್ಯ ಲೋಕದಿ ನಿತ್ಯ
ಸತ್ವ ಬೀಜವ ಬಿತ್ತಿ
ಸಾಹಿತ್ಯ ಸಂಪದವ ಉದ್ಧರಿಸಿ ನಿಂದೆ ॥ ೩ ॥

ಜಾತಿ ಮತ ಪಂಗಡದ
ಹಂಗೆನಿತು ನಿನಗಿಲ್ಲ
ಬಸವಾದಿ ಪ್ರಮಥರಾ ಪಥವ ಹಿಡಿದಿ
ಧರ್ಮ ದೀಪ್ತಿಯು ಬೆಳಕ
ದೀನ ದಲಿತರ ಬಳಿಗೆ
ಒಯ್ದು ಬೆಳಗುತ ಬಾಳು ಹಸನ ಗೈದಿ ॥ ೪ ॥

ಕಾಲು ಶತಮಾನದಲಿ
ಕೈವಲ್ಯ ತಂದಿಹಿರಿ
ಮೂರುಸಾವಿರ ಮಠಕೆ ಒಡೆಯನಾಗಿ
ಪಟ್ಟವಾದೊಡೆ ಕಲ್ಲು
ಇಟ್ಟಿಗೆ ಸಿಮೆಂಟುಗಳು
ಗಟ್ಟಿಗೊಂಡವು ಭದ್ರಬಾಹುವಾಗಿ || ೫ ||

ಜೀರ್ಣವಾಗಿಹ ಗೋಡೆ
ಪೂರ್ಣ ಬೀಳುವ ಮಳಿಗೆ
ಕೊಳಕು ತೊಲೆ ಕಂಬಗಳು ಮಾಯವಾಗಿ
ಕಬ್ಬಿಣದ ನೆಲೆಗಟ್ಟು
ಆರ್.ಸಿ.ಸಿ. ಮೇಲ್‌ಛತ್ತು
ಸಂಗಮವರಿ ಕಲ್ಲುಗಳೇ ಪರಸಿಯಾಗಿ || ೬ ||

ಮಹಾಮಹಿಮ ಗುರುಸಿದ್ಧ
ನಡಿಗೆ ಹೋಗುವ ದ್ವಾರ
ಮಹಾದ್ವಾರವಾಗಲೇ ಬೇಕೆಂದಿರಿ
ಕಟೆದ ಬಿಳಿ ಕಲ್ಲುಗಳ
ಬೆಟ್ಟದಂತೆದ್ದಿರುವ
ಗೋಪುರವೇ ಹುಬ್ಬಳ್ಳಿ ಮಹದೈಸಿರಿ || ೭ ||

ವಿದ್ಯೆ ಕಲಿಯಲು ಬಂದ
ಪರ ಊರ ಬಾಲಕರು
ತಮ್ಮ ಆಶ್ರಯ ನಂಬಿ ನೆಲೆ ನಿಂತರು
ನೆರೆ ನಂಬಿ ಬಂದವರ
ಊಟ ವಸತಿಯ ವಹಿಸಿ
ಅನ್ನದಾನವ ಮಾಳ್ಪ ಮಹಾ ಸಂತರು || ೮ ||

ಮಠದ ಎದುರಿನ ಬಯಲು
ಶಿಕ್ಷಣಕೇ ಮೀಸಲು
ಪ್ರೌಢ ಶಾಲೆಗಳೆರಡು ನಿಂತಿರುವವು
ತಮ್ಮ ನಾಮದ ಮಹಿಮೆ
ಹೊತ್ತು ಬಿತ್ತರಗೊಂಡು
ಸತ್ವ ಶಿಕ್ಷಣವನ್ನು ನೀಡುತಿಹವು || ೯ ||

ಅಕ್ಕ ತಂಗಿಯರೆಲ್ಲ
ಅಕ್ಕರೋದುಗಳಲ್ಲಿ
ಪುರುಷರಿಗೆ ಸರಿಸಾಟಿಯಾಗಲೆಂದು
ಮಹಿಳೆಯರಿಗಾಗಿಯೇ
ಮಹಾವಿದ್ಯಾಲಯುವ
ಸ್ಥಾಪಿಸಿದ ಸತ್ಕೀರ್ತಿ ತಮಗೆ ಇಂದು ॥ ೧೦ ॥

ಸದ್ಧರ್ಮ ಸಂಘಟಣೆ
ತಮ್ಮ ಹಿರಿ ಗುರಿಯಾಗೆ
ಶಿವಯೋಗಿ ಸಂಗವದು ನೆಲೆ ನಿಂತಿತು
ಶ್ರೀ ಕುಮಾರೇಶನಿಗೆ
ತಮ್ಮ ಘನ ಕಾರ್ಯವಿದು
ಪರದಲ್ಲಿ ಸುಖ ಶಾಂತಿ ತಾ ತಂದಿತು ॥ ೧೧ ॥

ಪಟ್ಟಕಟ್ಟ ಚಿನ್ನದೋಲು
ಸನ್ಮಾರ್ಗ ಸಾಧಕರು
ತಮ್ಮ ಗರಡಿಯಲಿಂದು ಪಳಗುತಿಹರು
ಗದಗು ಮೊದಲಾದೆಡೆಗೆ
ಎಷ್ಟೋ ಪೀಠಗಳಲ್ಲಿ
ತಮ್ಮ ಕೀರುತಿ ಹೆಚ್ಚಿ ಬೆಳಗುತಿಹರು ॥ ೧೨ ॥

ನರಳುವರ ಹೃದಯದಲಿ
ಅರಳು ಮಲ್ಲಿಗೆಯಾಗಿ
ಕರುಳ ಸಾಂತ್ವನಗೊಳಿಪ ಕಾರುಣ್ಯವು
ಕೈಂಕರ್ಯವನೆ ಕೊಂಡು
ಕ್ಷಯರೋಗದಾಸ್ಪತ್ರೆ
ಸ್ಥಾಪನೆಯು ಬಡವರಿಗೆ ಮಹಾ ಪುಣ್ಯವು ॥ ೧೩ ॥

ಕ್ಷಯರೋಗ ಬಂದಡರಿ
ಮಡಿವ ಬಡವರಿಗಾಗಿ
ಘಟಪ್ರಭೆಯ ಆಸ್ಪತ್ರೆ ಸಂಜೀವಿನಿ
ಉಚಿತ ಉಪಚಾರುಂಟು
ಮೇಲೆ ವಸತಿಯು ನಂಟು
ರೋಗಿಗಳ ಪಾಲಿಗಿದು ಜೀವದಾನಿ ॥ ೧೪ ॥

ಪೆಪ್ಪು ಗಟ್ಟಿದ ತುಪ್ಪ
ದಂತಿರುವ ಧನ ಕನಕ
ಕರಗಿ ಹರಿಯಲಿ ದೀನ ದಲಿತರೆಡೆಗೆ
ಸಹಕಾರ ತತ್ತ್ವವನೆ
ಜೀವನದಿ ಅಳವಡಿಸಿ
ಸಮತೋಲ ಕಾಯಲಿಕೆ ಮನವಿತ್ತೊಡೆ ॥ ೧೫ ॥

ಗುರುಸಿದ್ಧೇಶ್ವರ ಬ್ಯಾಂಕು
ಸಿರವೆತ್ತಿ ನಿಂತಿಹುದು
ನೂರಾರು ಭಕ್ತರಾ ಶಕ್ತಿಯಾಗಿ
ಸನ್ನಿಧಿಯ ಹಿರಿಯಾಶೆ
ಕಲ್ಪತರುವಿನ ತೆರದಿ
ದುಡಿಯುತಿದೆ ಬಡತನದ ಮುಕ್ತಿಗಾಗಿ ॥ ೧೬ ॥

ಶರಣರಾ ಸಂದೇಶ
ಹಳ್ಳಿ ಹಳ್ಳಿಗೆ ತಲುಪಿ
ಸಂಸ್ಕೃತಿಯ ಸಂಸ್ಕಾರವಾಗಲೆಂದು
ಪ್ರಚಾರೋಪನ್ಯಾಸ
ಮಾಲೆಯನು ಪ್ರಾರಂಭ
ಮಾಡಿದಿರಿ ಧರ್ಮದುದ್ಧಾರವಿಂದು ॥ ೧೭ ॥

ಕಥೆ ಕಾವ್ಯ ಸಾಹಿತ್ಯ
ನಿತ್ಯ ಝರಿ ಝರಿಯಾಗಿ
ಹರಿದು ಹೃದಯಕೆ ತಂಪು ನೀಡುತಿಹುದು
ಪರಂಜ್ಯೋತಿ ಮಾಸಿಕವು
ಮನೆ ಮನೆಯ ಮನ ಬೆಳಗಿ
ಸಾಹಿತ್ಯ ಸಂಸ್ಕಾರ ತೀಡುತಿಹುದು ॥ ೧೮ ॥

ಅನ್ನದಾನಕ್ಕಿಂತ
ಇನ್ನು ದಾನಗಳಿಲ್ಲ
ಎನ್ನು ವಂಥಹ ತಮ್ಮ ದಿಟ್ಟ ನಿಲುವು
ದಾಸೋಹ ಸಮಿತಿಯದೊ
ಬಳಿಕೆಯಲಿ ಬಂದಿಹುದು
ಜನರುಂಡು ತೇಗುತಿರೆ ತೃಪ್ತಿ ತಮಗೆ ॥ ೧೯ ॥

ಮದುವೆ ಮಂಗಲಕಾರ್ಯ
ಮುದವ ಬೀರುತ ಜರುಗಿ
ಸುಗಮಗೊಳ್ಳಲಿ ಎಂಬ ಹಿರಿಯಾಶೆಗೆ
ಕಲ್ಯಾಣ ಮಂಟಪದ
ನಿರ್ಮಾಣ ನಡೆದಿಹುದು
ಲಕ್ಷಾವಧಿ ಜನರ ಆಕ್ಷತೆಗೆಗೆ ॥ ೨೦ ॥

ಹತ್ತಾರು ಸಂಸ್ಥೆಗಳು
ತಮ್ಮ ನೆರವಿನ ಹಸ್ತ
ದಾಶ್ರಯದಿ ಅಭಿವೃದ್ಧಿ ಪಡೆದಿರುವವು
ಶಿಕ್ಷಣದ ಜೊತೆ ಜೊತೆಗೆ
ಮಾನವೀಯತೆಗಾಗಿ
ತಮ್ಮ ಹೃದಯವು ನಿತ್ಯ ತುಡಿಯುತಿಹುದು ॥ ೨೧ ॥

ಹುಟ್ಟುವಾಗಲೆ ಹೃದಯ
ಕುಸುಮ ಕೋಮಲವಹುದು
ನವುರಾದ ಕವಿಭಾವ ಪಡೆದ ಆಕ್ಷಿ
ಹದಿನಾರನೇ ವಯದಿ
ಹದವುಳ್ಳ ಕಾವ್ಯಕೃಷಿ
ನಡೆದಿಹುದೇ ಕಾವ್ಯತ್ವಕ್ಕಿದುವೇ ಸಾಕ್ಷಿ ॥ ೨೨ ॥

ತನ್ನವರ ಸಲುವಾಗಿ
ಬನ್ನ ಪಡುತಿರುವಾಗ
ತಲೆ ತಿನ್ನುವಂಥಹ ನೂರೆಂಟು ಚಿಂತೆ
ಎಡಬಿಡದ ಕಾಯಕದಿ
ಬಿಡುವು ಗಡುವಿರುವಾಗ
ಸಾಹಿತ್ಯ ಕೃಷಿ ಬಂತು ಕಂತೆ ಕಂತೆ ॥ ೨೩ ॥

ನಿನ್ನವರ ಏಳಿಗೆಗೆ
ನೀ ಸುಣ್ಣವಾದರೂ
ಸಣ್ಣ ಮನಸಿನ ಸ್ವಾರ್ಥ ಬಿರುಕಿಟ್ಟಿತು
ಈ ಬಿರುಕ ಮರೆಯಲಿಕೆ
ಅಂತರಾಳದ ಅರಿವು
ಬರವಣಿಗೆ ರೂಪದಲಿ ಧುಮ್ಮಿಕ್ಕಿತು ॥ ೨೪ ॥

ಎದೆ ತುಂಬಿ ಬಂದಾಗ
ಬರದದ್ದೆ ಬಹುದಿನದ
ವಾಸ್ತವಿಕ ಸಾಹಿತ್ಯವಲ್ಲವೇನು!
ಎಂಬ ನಿಲುವಿಗೆ ಆತ್ಮ
ಬಲಗೊಂಡು ನಿಂತಿಹುದು
ಕಹಿ ಸಮಯವೇನಿರಲಿ ಹಾಲು ಜೇನು || ೨೫ ||

ಭಾವ ಜೀವಿಗಳಾಗಿ
ಬರೆದ ವಚನಗಳಲ್ಲಿ
ನೋವು ನಲುವಿನ ಛಾಯೆ ಚಿಮ್ಮುತಿಹುದು
ಗಂಭೀರ ಚಿಂತನೆಯ
ಚಿಲುಮೆಗಳು ಅಲ್ಲಲ್ಲಿ
ಓದುಗರ ಮನದುಂಬಿ ಹೊಮ್ಮುತಿಹವು || ೨೬ ||

ಮೊಗ್ಗೆಯಾ ಮಾಲೆಯಲಿ
ಹಿಡಿದಿಟ್ಟ ಭಾವಗಳು
ಹಿಗ್ಗಿ ಅರಳುತ ಗಂಧ ಸುತ್ತ ಸೂಸಿ
ನೊಂದವರ ಬೆಂದವರ
ಎದೆದುಂಬಿ ನಿಲ್ಲುವವು
ಮಾನವೀಯತೆಯತ್ತ ಕೈಯ ಬೀಸಿ || ೨೭ ||

ಮಾಸ ಮಾಸಕೆ ಹೊಸದು
ಹೊಸತಾಗಿ ಬರುತಿರುವ
ಆಶೀರ್ವಾಣಿಯೇ ಜನಕೆ ಅಮರವಾಣಿ
ಸರ್ವ ಧರ್ಮದ ಸಾರ
ಸಂಪ್ರೀತಿ ಸಂಸ್ಕಾರ
ವೈಚಾರ ಪ್ರಜ್ಞೆಗಳ ದಿವ್ಯವಾಣಿ || ೨೮ ||

ಬದುಕೊಂದು ಶಿವನಿತ್ತ
ನೋವು ನಲುವಿನ ಹಾದಿ
ಮುನ್ನಡೆದು ಸಾಗುವನೆ ಧೀರಪಥಿಕ
ಹೊಳೆ ಹಳ್ಳಗಳ ಸೆಳೆತ
ಹರಳು ಮುಳ್ಳಿನ ತಿವಿತ
ಏನಿದ್ದರೂ ಮುಟ್ಟು ಗುರಿಯತನಕ || ೨೯ ||

ಎಡರಡರಿ ಕಾಲ್ತೊಡಕಿ
ಹಿಂಜಗ್ಗಿ ಕೆಡುವುತಿರೆ
ಅಂಜದೆಯೆ ಅಳುಕದೆಯೆ ಮುಂದೆ ಸಾಗು
ಎನ್ನುವಾ ಅಭಿಲಾಷೆ
ಅಭಿವ್ಯಕ್ತಿ ಗೊಂಡಿಹುದು
ಪಥಿಕನಾ ಎದೆಯಲ್ಲಿ ತುಮುಲ ತೂಗು ‖ ೩೦ ‖

ಅಭ್ಯಾಸ ಅನುಭವದ
ಚೇತನೆಯ ಚೆಲುವೆಗಳು
ಅಮೃತ ಬಿಂದುವಿನಲ್ಲಿ ಅಲೆಯಾಗಿವೆ
ನೀ ಬರೆದ ಮುತ್ತಿನಾ
ನಾಮಾವಳಿಗಳು ಜನಕೆ
ಭಕ್ತಿ ಗಂಗೆಗೆ ನಿತ್ಯ ಸೆಲೆಯಾಗಿವೆ. ‖ ೩೧ ‖

'ಪೂರ್ಣಜ್ಞ' ನಾಮದಲಿ
ತ್ರಿಪದಿಗಳ ತೇರೆಳೆದು
ಬರುವ ಕೌಶಲಕಾಗಿ ಅಭಿನಂದನೆ
ಪರಿಪೂರ್ಣ ಭಾವತೊರೆ
ಭೋರ್ಗರೆದು ಹರಿಯುತಿದೆ
ಸಾಹಿತ್ಯ ಕ್ಷೇತ್ರದಲಿ ನವಸ್ಥಾಪನೆ ‖ ೩೨ ‖

ವೀರಶೈವದ ತತ್ವ
ವಿಶ್ವದಂಚಿಗೆ ತಲುಪಿ
ವಿಶ್ವಧರ್ಮವೆ ಆಗಿ ಮೆರೆಯಲೆಂದು
ಪಾಶ್ಚಾತ್ಯ ಪೌರ್ವಾತ್ಯ
ಆಧ್ಯಾತ್ಮದಿಚ್ಛೆಯನು
ಪೂರೈಸಿದಂತಹ ವಿಶ್ವಬಂದು ‖ ೩೩ ‖

ಚಿತ್ತವೆಂಬುದು ಬಾಳ
ಬಟ್ಟೆಯಲಿ ನೆಲೆಗಟ್ಟು
ಚಿತ್ಕಿರಣ ಸೇರಿಹವು ಅಂತರಂಗ
ಅರುಹಿ ನಾಗರದಲ್ಲಿ
ಸತ್‌ಪರಂಪರೆ ತೋರಿ
ಕಟ್ಟಿಹವು ಕಿರಣಗಳು ಶಾಂತಸಂಗ ‖ ೩೪ ‖

ಹೂಬಳ್ಳಿ ಹೆಸರಿಂದ
ಹೊರ ಬಂದ ಈ ಗ್ರಂಥ
ಶ್ರೀ ಹೃದಯವನೆ ತೆರೆದು ತೋರುತಿಹುದು
ಹೂಬಳ್ಳಿ ನಮಗೆಲ್ಲ
ಶ್ರೀಗಂಧ ಕೊಡುವಂತೆ
ಅರುಹಿನರಳನು ನೀಡಿ ಪೊರೆಯುತಿಹುದು ॥ ೩೫ ॥

ಅಷ್ಟ ಶತಮಾನಗಳ
ಆಚೆಗೆ ಕಟ್ಟಿಸಿದ
ಮೂಲಮಠ ಗುಹೆಯಂತೆ ಕಾಂಬುತಿತ್ತು
ನಿಜಭಕ್ತಿ ಉಳ್ಳವರ
ಸೇವೆಯನು ಪಡಕೊಂಡು
ಅನುಷ್ಠಾನ ಸ್ಥಾನವದು ಮಾರ್ಪಟ್ಟಿತು ॥ ೩೬ ॥

ಜಾತಿ ಜ್ವಾಲೆಯು ಹಬ್ಬಿ
ಹುಬ್ಬಳ್ಳಿ ದಳ್ಳುರಿಗೆ
ಕಮರಿ ಹೋಗುವ ಮುನ್ನ ಕೈಯಿಕ್ಕಿದೆ
ಹಿಂದು ಮುಸ್ಲಿಮರನು
ಒಂದು ಗೂಡಿಸಿ ಶಾಂತಿ
ಮಂತ್ರವನು ಎಲ್ಲರಿಗೂ ನೀ ಕಲಿಸಿದೆ ॥ ೩೭ ॥

ನನ್ನ ಧರ್ಮವು ಬೇರೆ
ನಿನ್ನ ಧರ್ಮವು ಬೇರೆ
ಎನ್ನುವಂಥಹ ತಾರತಮ್ಯವೇಕೆ!
ಸರ್ವಧರ್ಮದ ಜನರ
ಉಚಿತ ಮದುವೆ ಮಾಳ್ಪ
ಶರಣ ಸಂದೇಶಗಳ ದಿವ್ಯ ಬೆಳಕೆ ॥ ೩೮ ॥

ಗುರುವಿರಕ್ತರು ಒಡೆದು
ಬಿರುಕುಗಳು ಬಿಟ್ಟಾಗ
ಒಂದುಗೂಡಲು ಸತತ ಶ್ರಮವ ಪಟ್ಟೆ
ಬಿರುಕು ಬಲಿಯುತ ಸಾಗೆ
ಮನನೊಂದು ತನು ಬೆಂದು
ಗುರುಸಿದ್ಧನಲಿ ನಿನ್ನ ಭಾರ ಇಟ್ಟೆ ॥ ೩೯ ॥

ಸಿಟ್ಟಿಲ್ಲ ಸೆಡುವಿಲ್ಲ
ಬೇಸರಿಕೆ ಇನಿತಿಲ್ಲ
ಕೈಯಿಟ್ಟ ಕಾರ್ಯದಲಿ ನಿರಾಶೆಯಿಲ್ಲ
ಸಕಲ ಭಕ್ತರನೊಲಿಸಿ
ಸಹಕಾರವನೆ ನಿಲಿಸಿ
ಸಿದ್ಧಿಯನು ಪಡೆದಂದೇ ನಿದ್ರೆಯಿಲ್ಲ ॥ ೪೦ ॥

ತುಂಗಭದ್ರೆಯ ಆಚೆ
ನೆಲೆಸಿರುವ ಶಶಿವಾಳ
ದಲ್ಲುದಿಸಿ ಬಂದಿರುವ ಕಾರುಣ್ಯವು
ಮಾನವತೆ ಮೈದಳೆದು
ಮೂರುಸಾವಿರ ಮಠಕೆ
ಪಟ್ಟವಾದುದೆ ಪುರದ ಮಹಾಪುಣ್ಯವು ॥ ೪೧ ॥

ಶಿವಯೋಗ ಮಂದಿರದಿ
ಶಿಕ್ಷಣವ ಪಡೆವಾಗ
ಹುಡಿಯಲ್ಲಿ ಹರಗುರುಗಳನ್ನೇ ಕಂಡೆ
ತರುಮರಗಳೆಲೆಯಲ್ಲಿ
ಬಿರಿದ ಹೂ ಬಳ್ಳಿಯಲಿ
ಅನುಭಾವಿ ಬಸವಣ್ಣನುಸಿರು ಉಂಡೆ ॥ ೪೨ ॥

ನಿನ್ನ ಜಾಣ್ಮೆಗೆ ಮೆಚ್ಚಿ
ಹೊನ್ನ ಹೃದಯಕೆ ನೆಚ್ಚಿ
ಕಾಶಿ ಕರೆಯಿತು ಉಚ್ಚ ವ್ಯಾಸಂಗಕೆ
ಪರನಿಚ್ಛೆಯಲಿ ಸಾಗಿ
ಗುರು ಕರುಣೆಯಲಿ ತೂಗಿ
ಸಾಧಿಸಿದ ವಿದ್ಯೆಗಳಿಗೆಂತು ಎಣಿಕೆ! ॥ ೪೩ ॥

ಹದಿನೈದು ವರುಷಗಳ
ಸಾಧನೆಯ ಸಿದ್ಧಿಯಲಿ
ಹಿಂದಿ ಇಂಗ್ಲೀಷಿನಲಿ ಪಾಂಡಿತ್ಯವು
ವೇದಾಗಮಗಳನ್ನೆಲ್ಲ
ಹೃದ್ಭಾಂಡದಲಿ ತುಂಬಿ
ಸಂಸ್ಕೃತಾಭ್ಯಾಸದಲಿ ಲಾಲಿತ್ಯವು ॥ ೪೪ ॥

ಕುಡಿಯಿಟ್ಟು ಕವಲೊಡೆದು
ಜ್ಞಾನ ನಿಧಿ ಫಲ ಬಿಡಲು
ವಿಜಯ ಮಹಂತನ ಪೀಠ ಕೈ ಬೀಸಿತು
ಅನಿತರಲಿ ಮಹಾಪೀಠ
ಮೂರುಸಾವಿರ ಮಠದ
ಗುರುಸಿದ್ಧ ಸ್ವಾಮಿಗಳ ಆಶೆಯಾಯ್ತು ॥ ೪೫ ॥

ಮೂರುಸಾವಿರುವಠಕೆ
ವರಗುರುವೆ ನೀವೆಂದು
ಸ್ಥಿರವಾದ ನಂಬುಗೆಯ ಆಮಂತ್ರಣ
ಗುರುಹಿರಿಯರಾಶೆಗಳ
ಪೂರೈಸಿ ಅಡಿಯಿಡುತ
ಸಂಭ್ರಮದಿ ಮಾಡಿದಿರಿ ಆರೋಹಣ ॥ ೪೬ ॥

ಅಂದಿನಿಂದೀವರೆಗೆ
ಸಾಧಿಸಿದ ಸಿದ್ಧಿಗಳು
ತಲೆಯೆತ್ತಿ ನಿಂತಿಹವು ಅಜರಾಮರ
ಇಷ್ಟಾದರೂ ಕೂಡ
ಭಕ್ತರಿಷ್ಟವೇ ನೋಡ
ಎನ್ನುವಂತಹ ತಾವು ಶಿವ ಕಿಂಕರ ॥ ೪೭ ॥

ವರುಣ ದೇವನ ಕರುಣೆ
ಒಣಗಿ ಬಣಗುಡುವಾಗ
ಬರಬಿದ್ದು ಕಣ್ಣೀರು ಕೋಡಿಯಾಯ್ತು
ಬಡವರಾ ಒಡಲಿಂಗೆ
ಹಸಿವಿನುರಿಯದೊ ತಾಕಿ
ಕಸವಿಸಿಯಕುದಿಯೆದ್ದು ಘಾಸಿಯಾಯ್ತು ॥ ೪೮ ॥

ಗೋವು ದನ ಕರು ಎಲ್ಲ
ಮೇವು ನೀರಿಲ್ಲದೆಯೆ
ಸಾವಿನಂಚಿಗೆ ಸೊರಗಿ ಸಾಗುತಿರಲು
ಶಿವ ಕಳೆಯು ಹೊರ ಹೊಮ್ಮಿ
ದಯೆ ಕರುಣೆ ಹೊಳೆಯಾಗಿ
ಬರವ ಪರಿಹರಿಸಲಿಕೆ ಮುಂದಾಗಲು ॥ ೪೯ ॥

ಭಕ್ತರಾ ಬಾಗಿಲಿಗೆ
ಬಂದಾಗ ಜೋಳಿಗೆಗೆ
ಲಕ್ಷಗಟ್ಟಳೆ ನಿಧಿಯು ಕೂಡಿಬಿತ್ತು
ಬಡವರಾ ಹಸಿದೊಡಲು
ಸಂತೃಪ್ತಿಗೊಳಿಸಲಿಕೆ
ಗಂಜಿ ಕೇಂದ್ರವ ತೆರೆದು ಉಣಿಸಿದಿರಿ ತುತ್ತು || ೫೦ ||

ಧರ್ಮ ಜಾಗ್ರತಿಗಾಗಿ
ಹಳ್ಳಿ ಹಳ್ಳಿಗೆ ಸಾಗಿ
ಪಾದಯಾತ್ರೆಯ ಮಾಡಿ ಪರಿವರ್ತನ
ದುರ್ಭಾವ ದುಶ್ಚಟದ
ಪರಿಮಾರ್ಜನೆಯ ಮಾಡಿ
ಹಾಡಿದಿರಿ ಮಾನವತೆ ಸಂಕೀರ್ತನ || ೫೧ ||

ಕಲ್ಲು ಕಂಬಗಳಿಲ್ಲಿ
ಶಿಲೆ ತೊಲೆಗಳಲ್ಲಲ್ಲಿ
ಉಲಿಯುತಿವೆ ಸನ್ನಿಧಿಯ ಸಾಧನೆಗಳು
ಶರಣ ಸಾಹಿತ್ಯಕ್ಕೆ
ಸಲ್ಲಿಸಿದ ಸೇವೆಯನು
ಮೆಲುಕುತಿವೆ ಗ್ರಂಥಗಳ ಪುಟಪುಟಗಳು || ೫೨ ||

ಯಾರೆ ಕರೆದರೂ ಬಂದು
ಹರಸಿ ಬೆನ್ ಚಪ್ಪರಿಸಿ
ಸನ್ಮಾರ್ಗದಲಿ ಚಲನೆ ಇರಲಿ ಎಂದು
ತಿಳಿಯಾದ ನುಡಿಯಲ್ಲಿ
ಭಾವೈಕ್ಯದಡಿಯಲ್ಲಿ
ಕೂಡಿ ಬಾಳಲು ಕರೆವ ದೀನ ಬಂಧು || ೫೩ ||

ಸಾಹಿತ್ಯ ಸಂಗೀತ
ಕಹಿ ಭಾವ ಸಿಹಿ ಜೀವ
ಹುಟ್ಟಿನೊಡೆ ಪಡೆದಿರುವ ಭಾವ ಜೀವಿ
ಕವಿಯನ್ನು ಕಾಣಲಿಕೆ
ಹಾತೊರೆವ ಸ್ನೇಹಮಯಿ
ಕವಿಯಲ್ಲಿ ಶಿವನನ್ನೇ ನೀ ಕಾಣುವಿ || ೫೪ ||

ಅಂತೆಯೆ ಗ್ರಂಥಗಳ
ಕಟ್ಟುಕಟ್ಟಿನ ನಿಟ್ಟು
ನಿಂತಿಹವು ಭಕ್ತರಾ ಎದೆಯ ತಟ್ಟಿ
ಮಠದ ವಿಸ್ತಾರದಲಿ
ಪ್ರಟದ ವಿಸ್ತಾರಕ್ಕೂ
ಸಮಪಾಲು ಕೊಟ್ಟಿರುವುದಿದಕೆ ಸಾಕ್ಷಿ || ೫೫ ||

ನಿನ್ನ ಮನದಾಳದಲಿ
ಪ್ರಗತಿಪರ ಪ್ರಜ್ಞೆಗಳು
ತುಮುಲಗೊಳ್ಳುವುದು ಸೂಕ್ಷ್ಮವಾಗಿ ಒಳ್ಳೆ
ಪ್ರಜ್ಞೆಗಳು ಪರಿಧಿಯನು
ಸಾರುತ್ತ ಬರುತಿಹವು
ಪೂರ್ಣಜ್ಞಾನೊಚನಗಳ ಸಾಲಿನಲ್ಲಿ || ೫೬ ||

ನೀ ತುಳಿದ ಹೆಜ್ಜೆಯಲಿ
ಪಸರಿಸಿದ ಬಿಜ್ಜೆಯಲಿ
ಸಾಗುವಾ ಯೋಗಿಯನು ಹುಡುಕುತಿರುವಿ
ನಿನ್ನಾಶೆ ಪೂರೈಪ
ಉತ್ತರಾಧಿಕಾರಿ
ದೇವರಾ ದಯದಿಂದ ಪಡೆಯುತಿರುವಿ || ೫೭ ||

ರಜತೋತ್ಸವ ನಡೆದಿಹುದು
ವಿಜಯೋತ್ಸವವೂ ಆಹುದು
ಹರುಷ ತುಂಬಿದ ಭಕ್ತರೆದೆಯ ನೋಡು
ಗುರುಸಿದ್ಧ ಕರುಣಿಸಲಿ
ಸುವರ್ಣ ಮಹೋತ್ಸವಕಾಗಿ
ಆಗ ಭಕ್ತರ ಹೃದಯ ಜೇನುಗೂಡು || ೫೮ ||

ಮೂರುಸಾವಿರ ಮಠಕೆ
ಬಂದ ಮೇಲೀ ಕ್ಷೇತ್ರ
ಕಣ್ಮನಕೆ ಕಂಗೊಳಿಪ ಹಸಿರು ಚೈತ್ರ
ಅರವತ್ತು ನುಡಿಗಳಾ
ಕಿರು ಹೊತ್ತಿಗೆಯ ಬರೆದು
ಹಾಡಿರುವೆ ನೀಗೈದ ಮಹಾಯಾತ್ರೆಯ || ೫೯ ||

ಸುಮ್ಮಾನ ಭಾವದಲಿ
ಮುಹಮ್ಮದಲಿ ಗೋಗೇರಿ
ಬರೆದ ಈ ಕಿರು ಕಾವ್ಯ ಇದೋ ಅರ್ಪಣ
ನಾಡಿನಲಿ ಅಡಿಗಡಿಗೆ
ಹಬ್ಬಿರುವ ಪೀಠಗಳ
'ಶ್ರೀ'ಗಳಿಗೆ ಈ ಚರಿತ ನವ ದರ್ಪಣ || ೬೦ ||

□ □

ಜೀವನ ಪ್ರಭೆ

[ಪೂಜ್ಯ ಜಗದ್ಗುರುಗಳ ಸಮಗ್ರ ಜೀವನದ ಕಾರ್ಯರಂಗ: ಸಾಧನೆ]

ಪೂಜ್ಯ ಜಗದ್ಗುರುಗಳು: ನಾನು ಕಂಡಂತೆ

—ಡಾ. ಬಿ. ಡಿ. ಜತ್ತಿ

ಮೂರುಸಾವಿರಮಠದ ಪೂಜ್ಯ ಜಗದ್ಗುರುಗಳು ದಿನಾಂಕ ೧-೫-೧೯೫೮ರಲ್ಲಿ ನಿರಾಭಾರಿ ಜಗದ್ಗುರು ಪಟ್ಟವನ್ನೇರಿದರು. ನಾನು ದಿನಾಂಕ ೧೬-೫-೧೯೫೮ರಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾದೆನು. ಹೆಚ್ಚು ಕಡಿಮೆ ಅಂದಿನಿಂದ ಇಂದಿನವರೆಗೆ ಹಲವಾರು ಸಲ ಅವರನ್ನು ಕಂಡಿದ್ದೇನೆ ಮತ್ತು ಅನೇಕ ವಿಷಯಗಳ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿದ್ದೇನೆ. ಅವರ ಕೂಡ ಚರ್ಚೆ ಮಾಡುವಾಗ ಅವರು ತಾವು ಜಗದ್ಗುರುಗಳು ಎಂಬ ಭಾವವನ್ನು ಎಂದೂ ವ್ಯಕ್ತಪಡಿಸಿದವರಲ್ಲ. ಅವರು ಮನಬಿಚ್ಚಿ ಎಲ್ಲಾ ವಿಷಯವನ್ನು ನನ್ನೊಂದಿಗೆ ಚರ್ಚಿಸುತ್ತಿದ್ದರು ಮತ್ತು ಕೆಲವು ಸಲ ನನ್ನ ಸಲಹೆಯನ್ನು ಕೇಳುತ್ತಿದ್ದರು.

ಒಮ್ಮೆ ಜಗದ್ಗುರುಗಳು ವಿದೇಶಕ್ಕೆ ಹೋಗಬೇಕಾಗಿತ್ತು. ಅವರು ಅಲ್ಲಿ ವಿಶ್ವ ಧರ್ಮ ಸಮ್ಮೇಳನದಲ್ಲಿ ಭಾಗವಹಿಸುವವರಿದ್ದರು. ಆ ಕಾಲಕ್ಕೆ ಕೆಲವರು ಅವರು ವಿದೇಶಕ್ಕೆ ಹೋಗಿ ತಿರುಗಿ ಬಂದರೆ ಬಹಿಷ್ಕಾರ ಹಾಕುವೆವೆಂದು ಬೆದರಿಕೆಯನ್ನು ಹಾಕಿದರು. ಪೂಜ್ಯ ಜಗದ್ಗುರುಗಳವರು ದೂರವಾಣಿ ಮೂಲಕ ಈ ವಿಷಯವಾಗಿ ನನ್ನ ಅಭಿಪ್ರಾಯವನ್ನು ಕೇಳಿದರು. ನಾನು ಅವರಿಗೆ "ಸಾಮಾನ್ಯವಾಗಿ ಈ ತರಹದ ಬೆದರಿಕೆಯನ್ನು ಹಾಕುವ ಪರಿಪಾಠ ನಮ್ಮಲ್ಲಿ ಇದೆ. ನೀವು ವಿದೇಶಕ್ಕೆ ಹೋಗಿ ತಿರುಗಿ ಬಂದ ನಂತರ ಇವರೇ ನಿಮ್ಮನ್ನು ಸತ್ಕಾರ ಮಾಡುವರು. ಆದುದರಿಂದ ನೀವು ಬೆದರಿಕೆಗೆ ಹೆದರದೆ ವಿದೇಶಕ್ಕೆ ಹೋಗಿ ಸಮ್ಮೇಳನದಲ್ಲಿ ಭಾಗವಹಿಸಿರಿ" ಎಂದು ಹೇಳಿದೆ. ಅವರು ಅದಕ್ಕೆ ಒಪ್ಪಿ ವಿದೇಶಕ್ಕೆ ಹೋದರು. ಅವರು ತಿರುಗಿ ಬಂದ ನಂತರ ನನಗೆ ಜ್ಞಾಪಕವಿದ್ದಂತೆ ಅವರನ್ನು ಮೈಸೂರಿನಲ್ಲಿಯ ಸುತ್ತೂರು ಶ್ರೀಗಳ ಮಠದಲ್ಲಿ ಸನ್ಮಾನಿಸಲಾಯಿತು. ನಂತರ ಪೂಜ್ಯ ಜಗದ್ಗುರುಗಳು ನನಗೆ ದೂರವಾಣಿ ಮೂಲಕ ಸಂಪರ್ಕಿಸಿ "ನೀವು ನನಗೆ ಹೇಳಿದಂತೆ ಆಯಿತು" ಎಂದು ಹೇಳಿದರು.

ಇನ್ನೊಮ್ಮೆ ಶಿವಯೋಗ ಮಂದಿರದ ವಿಷಯವಾಗಿ ಕೆಲಕಾಲ ಒಂದು ವ್ಯಾಜ್ಯ ನಡೆದಿತ್ತು. ನಾನು ಅವರ ದರ್ಶನಕ್ಕೆ ಹೋದಾಗ "ಬುದ್ಧಿ ನೀವು ಇದುವರೆಗೆ ವ್ಯಾಜ್ಯದಲ್ಲಿ ಭಾಗವಹಿಸಿದ್ದು ನನಗೆ ಸರಿಕಾಣುವುದಿಲ್ಲ. ನೀವು ಆ ವ್ಯಾಜ್ಯದಲ್ಲಿ ಭಾಗವಹಿಸುವುದನ್ನು ಬಿಟ್ಟುಬಿಡಿರಿ" ಎಂದು ಹೇಳಿದೆ. ಅದಕ್ಕೆ ಅವರು ಒಂದು ಕ್ಷಣಮಾತ್ರವಾದರೂ ವಿಚಾರ ಮಾಡದೆ ಆಗಲಿ ಎಂದು ಹೇಳಿ ಆ ವಿಷಯದಿಂದ ದೂರ ಸರಿದರು. ಇದರಿಂದ ಅವರ ಗೌರವ ಹೆಚ್ಚಿತೇ ಹೊರತು ಕಡಿಮೆಯಾಗಲಿಲ್ಲ.

ಇನ್ನೊಮ್ಮೆ ನಾನು ಅವರ ದರ್ಶನಕ್ಕೆ ಹೋದಾಗ ಒಂದು ಸಹಕಾರಿ ಬ್ಯಾಂಕಿನ ವಿಷಯವಾಗಿ ಚುನಾವಣೆ ಆಗಬೇಕೋ? ಆಗಬಾರದೋ? ಎಂಬ ಬಗ್ಗೆ ಚರ್ಚೆ ನಡೆದಿತ್ತು. ಕೆಲವರು ಜಗದ್ಗುರುಗಳು ಈ ಗೊಂದಲದಲ್ಲಿ ಸೇರಿ ಚುನಾವಣೆ ಆಗದಂತೆ ನೋಡಿಕೊಳ್ಳಬೇಕೆಂದು ಹೇಳಿದ್ದರು. ಪೂಜ್ಯ ಜಗದ್ಗುರುಗಳು ಈ ವಿಷಯವಾಗಿ ನಡೆದ ವಸ್ತುಸ್ಥಿತಿಯನ್ನು ನನಗೆ ತಿಳಿಸಿ, ನನ್ನ ಅಭಿಪ್ರಾಯ ಕೇಳಿದರು. ನಾನು ಅವರಿಗೆ "ನೀವು ಈ ವಿಷಯದಲ್ಲಿ ಭಾಗವಹಿಸಬೇಡಿರಿ. ಬೇಕಾದರೆ ಚುನಾವಣೆ ನಡೆಯಲಿ. ನೀವು ಚುನಾವಣೆ ನಡೆಯುವಂತೆ ಮಾಡಿ ಯಾರಾದರೂ ಒಬ್ಬರ ಹೆಸರನ್ನು ಸಲಹೆ ಮಾಡಿ ಅದಕ್ಕೆ ಅವರು ಒಪ್ಪದಿದ್ದರೆ ನಿಮ್ಮ ಗೌರವಕ್ಕೆ ಕುಂದು ಬರುವುದು. ಅದುದರಿಂದ ಆ ವಿಷಯವನ್ನು ಸಂಬಂಧಪಟ್ಟ ಸದಸ್ಯರಿಗೆ ಬಿಟ್ಟುಬಿಡಿರಿ" ಎಂದು ಹೇಳಿದೆ. ಅವರು "ನೀವು ಹೇಳಿದ ಸಲಹೆ ಸಮಂಜಸವಿದೆ. ನಾನು ಅದರಲ್ಲಿ ಮಧ್ಯಸ್ಥಿಕೆ ವಹಿಸುವುದಿಲ್ಲ" ಎಂದು ಹೇಳಿದರು.

ಪೂಜ್ಯ ಜಗದ್ಗುರುಗಳು ಧರ್ಮಕಾರ್ಯವನ್ನಷ್ಟೇ ಅಲ್ಲದೆ, ಸಾಮಾಜಿಕ, ಶೈಕ್ಷಣಿಕ, ಆಧ್ಯಾತ್ಮಿಕ ಕ್ಷೇತ್ರಗಳಲ್ಲಿಯೂ ತುಂಬು ಮನಸ್ಸಿನಿಂದ ಕಾರ್ಯಮಾಡುತ್ತಲಿದ್ದಾರೆ. ಅವರು ಕೇವಲ ಜನರು ಸುಶಿಕ್ಷಿತ ಮತ್ತು ಶ್ರೀಮಂತರಾದರೆ ಸಾಲದು, ಆರೋಗ್ಯವಂತರಾಗಬೇಕೆಂದು ಘಟಪ್ರಭೆಯ ತಟದಲ್ಲಿ ಶ್ರೀಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆಯನ್ನು ನಿರ್ಮಾಣ ಮಾಡಿ ಅದನ್ನು ವಿಸ್ತರಿಸುತ್ತಿದ್ದಾರೆ. ಅವರು ಮಹಿಳೆಯರ ಶಿಕ್ಷಣಕ್ಕೂ ಸಾಕಷ್ಟು ಗಮನಹರಿಸಿ ಅವರ ವಿದ್ಯಾಭ್ಯಾಸಕ್ಕಾಗಿ 'ಮಹಿಳಾ ಮಹಾವಿದ್ಯಾಲಯ', 'ಮಹಿಳಾ ತಾಂತ್ರಿಕ ಶಿಕ್ಷಣ ಕೇಂದ್ರ' ಇವೇ ಮೊದಲಾದ ಅನೇಕ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ.

ಪೂಜ್ಯ ಜಗದ್ಗುರುಗಳು ಯಾವುದೇ ಕಾರ್ಯವನ್ನು ಮಾಡಿದರೂ ಆಧ್ಯಾತ್ಮಿಕ ತಳಹದಿಯ ಮೇಲೆ ಸಾಗಬೇಕೆಂದು ಹಂಬಲಿಸುತ್ತಾರೆ. ಈ ಎಲ್ಲಾ ಕೆಲಸಗಳ ಜೊತೆಯಲ್ಲಿ ಅವರು ಲೇಖನಗಳನ್ನು, ಕವಿತೆಗಳನ್ನು ಮತ್ತು ವಚನಗಳನ್ನು ಬರೆಯುತ್ತಲಿದ್ದಾರೆ. ಅವರು ಸಾಹಿತಿಗಳಿಗೆ ಸಾಕಷ್ಟು ಪ್ರೋತ್ಸಾಹ ಕೊಟ್ಟು ಅನೇಕ ಗ್ರಂಥಗಳನ್ನು ಬರೆಸುತ್ತಿದ್ದಾರೆ. ಇದಲ್ಲದೆ ಸಂಶೋಧನಾ ಕೇಂದ್ರವನ್ನು ಪ್ರಾರಂಭ ಮಾಡಿ ಇದುವರೆಗೆ ಅಚ್ಚು ಆಗದೆ ಇರುವ ತಾಡವೋಲೆಗಳನ್ನು ಮತ್ತು ಹಸ್ತಪ್ರತಿಗಳನ್ನು ಬೆಳಕಿಗೆ ತರಲು ಪ್ರಾರಂಭಿಸಿದ್ದಾರೆ. ಅವರು ತಾವು ನಡೆಸಿದ ಅನೇಕ ಚಟುವಟಿಕೆಗಳನ್ನು ತಮ್ಮಿಂದಲೇ ಸಾಗಿವೆ ಎಂಬ ಅಭಿಪ್ರಾಯಕ್ಕೆ ಎಡೆಗೊಡದೆ ಒಂದೊಂದು ಕ್ಷೇತ್ರದ ಕಾರ್ಯ ಸುಗಮವಾಗಿ ಸಾಗುವುದಕ್ಕೆ ಬೇರೆ ಬೇರೆ ಟ್ರಸ್ಟ್‌ಗಳನ್ನು ಮಾಡಿ ಒಳ್ಳೆಯ ಜನರನ್ನು ಆರಿಸಿ ಟ್ರಸ್ಟಿನ ಸದಸ್ಯರನ್ನಾಗಿ ಮಾಡಿದ್ದಾರೆ.

ಶ್ರೀಗಳವರು ಹಮ್ಮಿಕೊಂಡಿರುವ ಅನೇಕ ಕಾರ್ಯಗಳ ಲಾಭ ಕೇವಲ ವೀರಶೈವರಿಗೆ ಮುಟ್ಟಬೇಕೆಂಬ ಅಭಿಪ್ರಾಯದವರಲ್ಲ. ಅವರು ಬಸವಣ್ಣನವರು ಹೇಳಿದಂತೆ ಸಕಲ

ಜೀವಾವಳಿಗೂ ಲೇಸನ್ನೇ ಬಯಸುವವರು. ಅವರು ಇನ್ನಿತರ ಸಮಾಜ ಬಾಂಧವ ರಲ್ಲಿಯೂ ಮಧುರ ಬಾಂಧವ್ಯವನ್ನು ಇರಿಸಿಕೊಂಡಿದ್ದಾರೆ. ಹಿಂದೂ–ಮುಸಲ್ಮಾನ ರಲ್ಲಿಯ ವ್ಯತ್ಯಾಸಗಳನ್ನು ತೆಗೆದುಹಾಕಿ ಅವರಲ್ಲಿ ಏಕತೆಯನ್ನು ತರಲು ಸತತ ಪ್ರಯತ್ನ ಮಾಡುತ್ತಲಿದ್ದಾರೆ. ಅವರು ಎಲ್ಲಕ್ಕೂ ಮಿಗಿಲಾಗಿ ವೀರಶೈವ ಧರ್ಮವು ವಿಶ್ವಧರ್ಮ ವೆಂದು ಮತ್ತು ವೀರಶೈವ ಸಿದ್ಧಾಂತವು ಸಕಲ ಮಾನವರಿಗೂ ಒಪ್ಪಿಗೆಯಾಗಬೇಕೆಂದು ಭಾರತದ ಎಲ್ಲಾ ರಾಜ್ಯ ಭಾಷೆಗಳಲ್ಲಿ ವೀರಶೈವ ಗ್ರಂಥಗಳನ್ನು ಪ್ರಕಟಿಸಿ ಶರಣ ತತ್ವ ಪ್ರಚಾರ ಮಾಡಲು ಒಂದು ಯೋಜನೆಯನ್ನು ಹಾಕಿಕೊಂಡಿದ್ದಾರೆ.

ಶ್ರೀಮಠದಲ್ಲಿ ಅಂತರ್ಜಾತೀಯ ವಿವಾಹವನ್ನು ಏರ್ಪಡಿಸಿ ಜಾತಿ–ಜಾತಿಗಳಲ್ಲಿಯ ಭೇದವನ್ನು ಕಡಿಮೆ ಮಾಡಲು ಪ್ರಯತ್ನ ಪಟ್ಟಿದ್ದಾರೆ. ಇದುವರೆಗೆ ಅವರು ಸುಮಾರು ೫೦೦ಕ್ಕೂ ಹೆಚ್ಚು ಅಂತರ್ಜಾತೀಯ ವಿವಾಹಗಳನ್ನು ಏರ್ಪಡಿಸಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಅವರು ಒಂದೇ ಜಾತಿ, ಪಂಥಗಳಿಗೆ ಸೀಮಿತವಾಗದೆ ಸರ್ವರಿಗೂ ಕಲ್ಯಾಣವಾಗಬೇಕೆಂಬ ದೃಷ್ಟಿಯಿಂದ ಬಸವಣ್ಣನವರು ೧೨ನೇ ಶತಮಾನದಲ್ಲಿ ಪ್ರಾರಂಭ ಮಾಡಿದ ಕ್ರಾಂತಿಯನ್ನು ಮುಂದುವರೆಸಲು ಸತತ ಪ್ರಯತ್ನ ಮಾಡುತ್ತಲಿದ್ದಾರೆ. ಪೂಜ್ಯ ಜಗದ್ಗುರುಗಳವರು ಬಹು ಕಾಲ ಬಾಳಲಿ ಮತ್ತು ಅವರು ಕೈಗೊಂಡ ಎಲ್ಲಾ ಕಾರ್ಯಗಳು ಯಶಸ್ವಿಯಾಗಲಿ ಎಂದು ಹಾರೈಸುವೆ.

□ □

ಪೂಜ್ಯ ಜಗದ್ಗುರುಗಳವರ ಕಾವ್ಯಜೀವನದ ಒಲವುಗಳು ಹಾಗೂ ಸಾಹಿತ್ಯಿಕ ಸಾಧನೆ

—ಶ್ರೀಮತಿ ಶಾಂತಾದೇವಿ ಮಾಳವಾಡ

ಸಸಿವಾಳದ ಕೋಳಗಲ್ಲು ಮಠದ ಮರುಳಸಿದ್ಧಯ್ಯ ಚೆನ್ನಮ್ಮ ದಂಪತಿಗಳು ಅಪೂರ್ವವಾದ ಸಸಿಯೊಂದನ್ನು ಕನ್ನಡನಾಡಿಗೆ ಕೊಟ್ಟರು. ಹಾನಗಲ್ಲ ಕುಮಾರ ಸ್ವಾಮೀಜಿಯವರ ಕೃಪಾಶೀರ್ವಾದದಿಂದ, ಸಸಿವಾಳದಲ್ಲಿ ಹುಟ್ಟಿದ ಆ ಸಸಿ ಶಿಶು ಮಹಾಂತೇಶರನ್ನು, ಹೆತ್ತವರು ಶಿವಯೋಗ ಮಂದಿರಕ್ಕೆ ಕರೆತಂದು ಕುಮಾರೇಶನ ಗದ್ದುಗೆಗೆ ಅರ್ಪಿಸಿದರು. ಆ ಮಗು ಮಲಾಪಹಾರಿಯ ತೀರದಲ್ಲಿರುವ ಸುಂದರವಾದ, ಶಿವಯೋಗಮಂದಿರದ ತಪೋಭೂಮಿಯಲ್ಲಿ, ಆಚಾರ ನಿಷ್ಠರಾದ ಹಾವೇರಿ ಶಿವಬಸವ ಮಹಾಸ್ವಾಮಿಗಳವರ ಸನ್ನಿಧಿಯಲ್ಲಿ ಬೆಳೆದರು, ಸಸಿವಾಳದ ಈ ಸಸಿ, ಮಲಾಪಹಾರಿಯ ನೀರನ್ನು ಕುಡಿದು, ಅಧ್ಯಾತ್ಮದ ತನಿರಸವನ್ನುಂಡು, ಚಿತ್ತರಗಿ ಮಹಾಂತ ಶಿವಯೋಗಿಯ ಕೃಪೆಗೆ ಪಾತ್ರರಾಗಿ ಹೂಬಳ್ಳಿಯ ಮೂರುಸಾವಿರಮಠವನ್ನಲಂಕರಿಸಿ, ಪಲ್ಲವಿಸಿ ಬೆಳೆದು ಕನ್ನಡನಾಡಿಗೆ ಆಧ್ಯಾತ್ಮದ ಕಂಪನ್ನು ಸೂಸುತ್ತಿದೆ.

ಶಿವಯೋಗ ಮಂದಿರದಲ್ಲಿ ಶ್ರೀಮಹಾಂತೇಶರ ಸಾಧಕ ಜೀವನ ಸಾರ್ಥಕವಾಯಿತು. ಕನ್ನಡ, ಸಂಸ್ಕೃತ, ಹಿಂದಿ ಭಾಷೆಗಳಲ್ಲಿ ಪರಿಣತರಾದರು. ಯೋಗಾಸನಗಳಲ್ಲಿ ಬಲ್ಲಿದರಾದರು. ಶಿವಯೋಗ ಸಾಧನೆಯಲ್ಲಿ ಸಿದ್ಧಿ ಪಡೆದರು. ಶಿವಯೋಗಮಂದಿರದ ಬಿಲ್ವವನ, ಹೂಬಳ್ಳಿ, ನದೀತೀರದ ಲತಾಮಂಟಪ, ಪಕ್ಷಿಗಳ ಇಂಚರಗಾನದ, ಪರಿಸರದಲ್ಲಿ ನದಿಯ ತರಂಗಗಳಲ್ಲಿ ಹೊರಹೊಮ್ಮುವ ಓಂಕಾರನಾದ, ಕೇಳುತ್ತ, ಪಂಚಾಕ್ಷರಿ ಮಂತ್ರ ಜಪಿಸುತ್ತ, ಹರಪೂಜೆ, ಗುರುಸೇವೆಯಲ್ಲಿ ನಿರತರಾಗುತ್ತಿದ್ದ ಮಹಾಂತೇಶರ ಅಂತರಂಗದಲ್ಲಿ ಹುದುಗಿದ್ದ ಕಾವ್ಯಪ್ರತಿಭೆ ಪುಟಿದೇಳತೊಡಗಿತ್ತು. 'ನೆಲದ ಮರೆಯ ನಿಧಾನದಂತೆ, ಫಲದಮರೆಯ ರುಚಿಯಂತೆ, ಸುತ್ತಲಿನ ಪವಿತ್ರ ಪರಿಸರದ ಪ್ರಭಾವದಿಂದ ಗದ್ಯ-ಪದ್ಯ ಸಾಹಿತ್ಯ ನದಿಯ ಪ್ರವಾಹದಂತೆ ಮಹಂತೇಶರಿಂದ ಹರಿದು ಬಂದಿತು. 'ಮೊಗ್ಗೆಯ ಮಾಲೆ' 'ಹೂಮಾಲೆ' 'ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ' ಕವನ ಸಂಕಲನಗಳು ಪೂಜ್ಯರ ಜೀವನ ಚರಿತ್ರೆಗಳು ರಚಿತಗೊಂಡವು; ಸುಕುಮಾರ ಮಾಸಪತ್ರಿಕೆಯ ಸಂಪಾದಕರಾಗಿ ಕಾರ್ಯಗೈದರು ಹಲವಾರು ಲೇಖನಗಳನ್ನು ಬರೆದರು. ನಾಟಕಗಳನ್ನು ರಚಿಸಿ ಪಟುಗಳಿಂದ ಆಡಿಸಿದರು. ಮಹಂತೇಶ ಒಳ್ಳೆ ಭಾಷಣಕಾರರೆಂದು ಪ್ರಸಿದ್ಧರಾದರು. ಚಿತ್ರಕಲೆಯಲ್ಲಿಯೂ ಬಲ್ಲಿದರಾಗಿದ್ದರು.

ಬಾಲ್ಯದಿಂದಲೂ ಮಹಂತೇಶ ಪರಿಶ್ರಮಜೀವಿ. ಹಾಳು ಹರಟೆ, ಆಲಸ್ಯತನಕ್ಕೆ ಅವರ ಬಾಳಿನಲ್ಲಿ ಆಸ್ಪದವಿಲ್ಲ, ಸತತಾಭ್ಯಾಸಿಗಳಾದ ಅವರಿಗೆ ಜೀವನದಲ್ಲಿ ಸೋಲೆಂಬುದಿಲ್ಲ. ಶಿವಯೋಗ ಮಂದಿರದ ನಿಸರ್ಗ ಸೌಂದರ್ಯ ಮಹಂತೇಶರನ್ನು ಸೌಂದರ್ಯೋಪಾಸಕರನ್ನಾಗಿಸಿತು. ಅಲ್ಲಿಯ ಶಿಕ್ಷಣ ಅವರನ್ನು ವೀರಶೈವ ಧರ್ಮಾಚರಣೆಯಲ್ಲಿ ಪಾರಂಗತರನ್ನಾಗಿಸಿತು. ಆತ್ಮೋನ್ನತಿಗೆ ಮಾರ್ಗ ಮಾಡಿಕೊಟ್ಟಿತು. ಬಾಲಕ ೬ನೆಯ ವರುಷದಲ್ಲಿ ಹೆತ್ತವರನ್ನು ತೊರೆದು ಬಂದು ಗುರುಪುತ್ರರಾದರು ಸಂನ್ಯಾಸ ಜೀವನವನ್ನು ಮೈಗೂಡಿಸಿಕೊಂಡು ಬೆಳೆದರು, ಯೌವ್ವನದ ಹೊಸ್ತಿಲಲ್ಲಿ ಕಾಲಿರಿಸಿದರು. ಆಗ ಇಳಕಲ್ಲಿನ ಕೊಪ್ಪದ ಮಹಾಂತಸ್ವಾಮೀಜಿಯವರು. ಈ ಮಹಂತೇಶರ ಸೌಜನ್ಯ, ಶಿಸ್ತಿನ ಜೀವನ, ವಿದ್ಯೆ, ಬುದ್ಧಿಗಳನ್ನು ಮೆಚ್ಚಿಕೊಂಡರು, ಇವರನ್ನು ಇಳಕಲ್ಲ ಪೀಠಾಧಿಕಾರಕ್ಕೆ ಆಯ್ಕೆ ಮಾಡಿದರು. ಮಹಾಂತೇಶ, ಮಹಾಂತಮರಿದೇವರಾದರು. ಸಂಸ್ಕೃತ ವಿದ್ಯಾಭ್ಯಾಸದ ಹಂಬಲದಿಂದ ಕಾಶಿಗೆ ಹೋದರು. ಹಿಂದು ವಿಶ್ವವಿದ್ಯಾಲಯದಲ್ಲಿ "ಸಾಹಿತ್ಯ ರತ್ನ" 'ವೇದಾಂತ ಶಾಸ್ತ್ರಿ' 'ವೇದಾಂತಾಚಾರ್ಯ'ರಾದರು. ಇಂಗ್ಲೀಷನ್ನೂ ಕಲಿತರು, ಮಲಾಪಹಾರಿ ತೀರದಿಂದ ಗಂಗಾ ತೀರಕ್ಕೆ ಬಂದಾಗ ಕಾವ್ಯ ಪಕ್ಷಿ ಗರಿಗೆದರಿ ಹಾರಿತು, ವಿಶಾಲ ವಿಶ್ವದ ಪರಿಚಯ ಹೃದಯ ವೈಶಾಲ್ಯವನ್ನುಂಟು ಮಾಡಿತು, 'ಪಥಿಕ' ಕವನ ಸಂಕಲನ ರೂಪುಗೊಂಡಿತು, ಶಿಕ್ಷಣ ಮುಗಿದೊಡನೆ ಇಳಕಲ್ಲ-ಚಿತ್ತರಗಿ ಪೀಠಾಧಿಪತಿಗಳಾದರು.

ಪೂಜ್ಯ ವಿಜಯಮಹಂತೇಶರಿಂದ ನಾಡಿಗೆ ಹೆಚ್ಚಿನ ಸೇವೆ ಸಲ್ಲಬೇಕಾದುದರಿಂದ ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಪೀಠ ಅವರನ್ನು ಕೈಮಾಡಿ ಕರೆಯಿತು. ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರರಾಗಿ ಈ ಪೀಠವನ್ನಲಂಕರಿಸಿದರು. ಆಗಿನಿಂದ ಪೂಜ್ಯ ಶ್ರೀಗಳವರ ಕಾರ್ಯಶಕ್ತಿ ಅಗಾಧವಾಗಿ ಬೆಳೆದಿದೆ. ಪ್ರತಿಭೆ, ಪಾಂಡಿತ್ಯ, ಸಂಘಟನಾ ಶಕ್ತಿಗಳ ತ್ರಿವೇಣಿ ಸಂಗಮವಾಗಿದ್ದಾರೆ. ಶ್ರೀಗಳವರು, ಹಿಂದಿನ ಶ್ರೀಗಳವರು ಪ್ರಾರಂಭಿಸಿದ ಕಾರ್ಯಗಳನ್ನು ಪೂಜ್ಯರು ವೈವಿಧ್ಯಮಯವಾಗಿ ಮುನ್ನಡಿಸಿಕೊಂಡು ಬರುತ್ತಿದ್ದಾರೆ. ಯೋಚನೆ ಮಾಡಿ, ಯೋಜನೆಗಳನ್ನು ಸಿದ್ಧಗೊಳಿಸುವ ಚಾತುರ್ಯ ಶ್ರೀಗಳವರಲ್ಲಿದೆ. ಆ ಯೋಜನೆಗಳು ಕಾರ್ಯ ರೂಪದಲ್ಲಿ ಬರುವವರೆಗೆ ಹಗಲಿರುಳೆನ್ನದೆ ಪರಿಶ್ರಮಿಸುತ್ತಾರೆ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಹಿತ್ಯಿಕ ಪ್ರಗತಿಗೆ ಪೂಜ್ಯರು ಆದ್ಯ ಗಮನವಿತ್ತಿದ್ದಾರೆ. ಶ್ರೀ ಜಗದ್ಗುರುಗಳವರ ಪಟ್ಟಾಧಿಕಾರದ ೨೫ ವರುಷಗಳ ಅವಧಿಯಲ್ಲಿ ಆದ ಪ್ರಗತಿಯು ಎತ್ತರ, ಬಿತ್ತರದ ಕುರುಹಾಗಿದೆ ಮೂರುಸಾವಿರಮಠದ ಮಹಾದ್ವಾರ. ಅದು ಏಕೋತ್ತರ ಶತಸ್ಥಲದ ನೆನಪಿಗಾಗಿ ನಿರ್ಮಾಣವಾಗಿದೆ. ಷಟ್‌ಸ್ಥಲದ ಕುರುಹಾಗಿ ಆರು ಅಂತಸ್ತನ್ನು ಹೊಂದಿದೆ. ಒಳಗಿನ ಮಹಾದ್ವಾರ ಕಲಾಪೂರ್ಣವಾಗಿದೆ. ವಿಶಾಲವಾದ ಮಠದ ಆವರಣದಲ್ಲಿ ವಿದ್ಯಾ ಸಂಸ್ಥೆಗಳು, ಪ್ರಸಾದ ನಿಲಯಗಳು ರೂಪುಗೊಂಡಿವೆ. ಸುಸಜ್ಜಿತ ಗ್ರಂಥ ಭಂಡಾರ ಪೂಜ್ಯರ ಸಾಹಿತ್ಯವೊಲವಿಗೆ ಸಾಕ್ಷಿಯಾಗಿದೆ. ಸಿದ್ಧರಾಮೇಶನಂತೆ ಕರ್ಮಯೋಗಿಗಳಾಗಿರುವ ಶ್ರೀ ಜಗದ್ಗುರುಗಳವರಿಂದ ಹೊಸ ಹೊಸ

ಕಟ್ಟಡಗಳ ಕಾರ್ಯ ನಡೆಸುತ್ತಾರೆ. ಜೊತೆಗೆ 'ಸಕಲ ಜೀವಾತ್ಮರಿಗೆ ಲೇಸ'ನ್ನು ಬಯಸುವ ಕಾರ್ಯ ಸಾಗಿರುತ್ತದೆ. ಕರ್ನಾಟಕದ ಹಲವೆಡೆ ಅನ್ನದಾಸೋಹ ಜ್ಞಾನದಾಸೋಹ ಸೈನ್ಯಗಳು ನೆರವಿನ ವ್ಯವಸ್ಥೆ ಮಾಡಿದ್ದಾರೆ.

ಧಾರವಾಡ ವಿದ್ಯಾಕೇಂದ್ರ ಹುಬ್ಬಳ್ಳಿ ವಾಣಿಜ್ಯ ಕೇಂದ್ರ ಎಂಬ ಮಾತು ಶ್ರೀಗಳವರು ಪೀಠಾರೋಹಣಗೈದ ಮೇಲೆ ಬದಲಾಗಿದೆ. ಈಗ ಹುಬ್ಬಳ್ಳಿಯೂ ಶಿಕ್ಷಣ ಕೇಂದ್ರವಾಗಿದೆ. ಈ ಭಾಗದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾಲೇಜ ಇರಲಿಲ್ಲ, ಸ್ತ್ರೀ ಶಿಕ್ಷಣದ ಮಹತ್ವ ವನ್ನರಿತ ಪೂಜ್ಯರು ಮಹಿಳಾ ಕಾಲೇಜನ್ನು, ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿಗೃಹ ವನ್ನೂ ಪ್ರಾರಂಭಿಸಿದ್ದಾರೆ. ಹಲವಾರು ಶಾಲೆ, ಕಾಲೇಜ, ಲಲಿತ ಕಲಾ ವಿದ್ಯಾಲಯ ಗಳನ್ನು ನಡೆಸುತ್ತಿದ್ದಾರೆ. ನೂರಾರು ಪ್ರಕಟಿತ ಅಪ್ರಕಟಿತ ಪುಸ್ತಕಗಳ ಪ್ರಕಟಣೆಗೆ ಲಕ್ಷಾಂತರ ಹಣ ವಿನಿಯೋಗಿಸಿದ್ದಾರೆ. ಮಕ್ಕಳಿಗಾಗಿ 'ವೀರಶೈವ ಭಾರತಿ ಪುಸ್ತಕ ಸಂಪದ' ಮಾಲೆಯನ್ನು ಪ್ರಾರಂಭಿಸಿ ಹಿರಿ, ಕಿರಿಯ ಲೇಖಕರಿಗೆ ಪ್ರೋತ್ಸಾಹವನ್ನಿತ್ತಿದ್ದಾರೆ. 'ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಗ್ರಂಥಮಾಲೆ'ಯು ಮೂಲಕ ಅಮೌಲ್ಯ ಸಾಹಿತ್ಯ ಪ್ರಕಟ ಗೊಂಡಿವೆ. ಪೂಜ್ಯರ ಭಕ್ತ ಸಮೂಹ ಅಪಾರವಾಗಿದೆ. ಪೂಜ್ಯರು ಯಾವುದೇ ಕೆಲಸ ಕೈಗೆತ್ತಿಕೊಳ್ಳಲಿ, ಆ ಕೆಲಸಕ್ಕೆ ಭಕ್ತ ಸಮೂಹದ ಹಣ ಗಂಗಾ ನದಿಯಂತೆ ಹರಿದು ಬರುತ್ತದೆ. ಗುರುಗಳ ಕಾರ್ಯ ಸಮಾಜಕ್ಕೆ ನಾಡಿಗೆ ಭೂಷಣವಾದುದು ಎಂದು ನಂಬಿದ ಭಕ್ತರು ಭಕ್ತಿಯ ಕಾಣಿಕೆಯನ್ನು ಸಲ್ಲಿಸುತ್ತಾರೆ. ಗುರುವಿನ ಆತ್ಮ ಶಕ್ತಿ-ಭಕ್ತರ ಭಕ್ತಿ ಒಂದುಗೂಡಿ ಮೂರುಸಾವಿರಮಠದ ಕಾರ್ಯಗಳೆಲ್ಲ ಯಶಸ್ವಿಯಾಗಿ ಭರದಿಂದ ಸಾಗಿವೆ.

ಪೂಜ್ಯ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮೀಜಿಯವರ ಪೀಠಾರೋಹಣ ದ್ವಾದಶ ವಾರ್ಷಿಕೋತ್ಸವದ ಸಂದರ್ಭದಲ್ಲಿ 'ಅಖಿಲ ಭಾರತ ಅಕ್ಕನ ಬಳಗಗಳ ಎಂಟನೆಯ ಸಮ್ಮೇಳನವನ್ನು ಶ್ರೀಮಠದಲ್ಲಿ ಆಚರಿಸಬೇಕೆಂದು ನಾನು ಸೋದರಿ ಸರಸ್ವತಿದೇವಿ ಗೌಡರ ಅವರು ಭಿನ್ನವಿಸಿಕೊಂಡಾಗ ಪೂಜ್ಯರು ಸಂತೋಷದಿಂದ ಒಪ್ಪಿಕೊಂಡರು, ಸಮ್ಮೇಳನ ಯಶಸ್ವಿಯಾಗಲು ಬೇಕಾದ ನೆರವನ್ನೆಲ್ಲ ದಯಪಾಲಿಸಿದರು. ಆಗ ನಾನು ಕಾರ್ಯಾಧ್ಯಕ್ಷಳಾಗಿ ಕಾರ್ಯ ನಿರ್ವಹಿಸಿದೆ. ಸಮ್ಮೇಳನಕ್ಕೆ ಬಂದ ಮಹಿಳೆಯ ರೆಲ್ಲ ತೌರಮನೆಯ ಸುಖವನ್ನನುಭವಿಸಿದರು. ನಾಲ್ಕು ವರುಷಗಳ ಹಿಂದೆ ಉತ್ತರ ಕರ್ನಾಟಕ ಲೇಖಿಕೆಯರ ಸಮ್ಮೇಳನವನ್ನು ಸೋದರಿ ಸರೋಜನಿ ಚವಲಾರ ಶ್ರೀಮಠದಲ್ಲಿ ಹಮ್ಮಿಕೊಂಡಿದ್ದರು. ಪೂಜ್ಯ ಜಗದ್ಗುರುಗಳವರ ನೇತೃತ್ವದಲ್ಲಿ ಸಮ್ಮೇಳನ ಎರಡು ದಿನ ವೈಭವ ಪೂರಿತವಾಗಿ ನಡೆಯಿತು, "ಉತ್ತರ ಕರ್ನಾಟಕ ಲೇಖಿಕೆಯರ ಸಂಘ" ಸ್ಥಾಪನೆ ಗೊಂಡಿತು. ಮಹಿಳೆಯರ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಪ್ರಗತಿಗೆ ಆವಶ್ಯಕವಾದ ಸಹಾಯ ಸಹಕಾರವನ್ನು ಪೂಜ್ಯರು ಸದಾ ಕೊಡುತ್ತ ಬಂದಿದ್ದಾರೆ.

ಪೂಜ್ಯ ಜಗದ್ಗುರುಗಳವರು ತಮ್ಮ ನೂರೆಂಟು ಸಾರ್ವಜನಿಕ ಕಾರ್ಯಕ್ರಮಗಳಲ್ಲಿ ವೇಳೆಯನ್ನುಳಿಸಿಕೊಂಡು, ಸಾಹಿತ್ಯ ರಚನೆಯಲ್ಲಿ ಮಗ್ನರಾಗುತ್ತಾರೆ. ಶಿವಯೋಗ

ಮಂದಿರದಲ್ಲಿ ಹೊರಹೊಮ್ಮಿದ ಕಾವ್ಯ ರಚನಾ ಶಕ್ತಿ ದಿನಗಳೆದಂತೆ ಅನುಭವ ಮಾಗಿದಂತೆ ಬೆಳೆಯುತ್ತ ಸಾಗಿದೆ. ಲಾವಣಿ, ಭಾವಗೀತಗಳನ್ನು ರಚಿಸಿದ್ದಾರೆ. ಪೂಜ್ಯರ "ಪಥಿಕ" ಸಂಕಲನದ ಬಗೆಗೆ ಮಾಳವಾಡರು "ವ್ಯಕ್ತಿ ನಿಷ್ಠತೆ, ಸೌಂದರ್ಯಾನುಭವ, ಭಾವಪರವಶತೆ, ನೇಮಿತೆಗಳು ಭಾವಗೀತೆಯ ಪ್ರಮುಖ ಲಕ್ಷಣಗಳಾಗಿವೆ" ಎಂದು ಬರೆದಿದ್ದಾರೆ. ಸ್ವಾನುಭವ ಕಲ್ಪನೆ, ಚಿಂತನೆಗಳ ತ್ರಿವೇಣಿ ಸಂಗಮವಾದಾಗ ಒಳ್ಳೆಯ ಕಾವ್ಯ ರಚನೆ ಸಾಧ್ಯ. ಜೀವನದ ಬಗೆಗೆ ಗೌರವ, ಮಾನವತೆಯ ಬಗೆಗೆ ಅನುಕಂಪಗಳನ್ನು ರೂಢಿಸಿಕೊಂಡಾಗ ಕಾವ್ಯ ರಸ ಗಂಗೆ ಹರಿದು ಬರುವಳು. ಜೀವನ ಬೇರೆ, ಕಾವ್ಯ ಬೇರೆ ಎಂದು ಭಾವಿಸಿದರೆ ಸತ್ವಯುತ ಸಾಹಿತ್ಯ ರಚನೆಯಾಗುವದಿಲ್ಲ. ವ್ಯಕ್ತಿಯ ಮನೋಭಾವದ ನೆರಳು ಅವರ ಕಾವ್ಯದಲ್ಲಿ ಮೂಡಿಬರುವದು.

ಮಹತ್ವಪೂರ್ಣ ಅನುಭವವು ರಮ್ಯವಾದ ರೀತಿಯಲ್ಲಿ ಸಮುಚಿತ ಶಬ್ದಗಳ ಮೂಲಕ ಅಭಿವ್ಯಕ್ತಿ ಪಡೆಯುವದೇ ಸಾಹಿತ್ಯ. ಅಂತಹ ಸಾಹಿತ್ಯ ನಂದನದ ಮಂದಾರವೇ ಕವಿತೆ. ನಾದ ಲಯಗಳಿಂದ ಕೂಡಿದ ಛಂದಸ್ಸು ಕಾವ್ಯಕ್ಕೆ ಸಂಗೀತದ ಸವಿಯನ್ನು ತರುತ್ತದೆ. ಸಮುಚಿತ ಪದಗಳ ಬಳಕೆ, ಅರ್ಥಪುಷ್ಟಿಯನ್ನು ಒದಗಿಸುತ್ತದೆ. ಕವಿಯ ಕಲ್ಪಕತೆ ಪ್ರತಿಮೆಗಳಿಂದ ಕಾವ್ಯ ಕಮನೀಯವಾಗುತ್ತದೆ. ಇಂದಿನ ಕವನಗಳಿಗೆ ಪ್ರಾಸದ ಅವಶ್ಯಕತೆ ಇಲ್ಲ. ಭಾವ ಮುಖ್ಯ. ಲಯಬದ್ಧವಾಗಿ ಕಾವ್ಯ ರಚನೆಗೊಳ್ಳುವಾಗ, ಕಾವ್ಯದ ಅರ್ಥ ವ್ಯರ್ಥವಾಗುವದು ಎಂದು ಹೇಳುವವರೂ ಇದ್ದಾರೆ. ನನ್ನ ದೃಷ್ಟಿಯಲ್ಲಿ ತಾಳ ಲಯ ಬದ್ಧವಾದ ಕವನಗಳನ್ನು ಸಂಗೀತಕ್ಕೆ ಅಳವಡಿಸಿದಾಗ ಹಾಲಿಗೆ ಜೇನು ಬೆರೆಸಿದಂತೆ ಮಧುರ ವೆನಿಸುವದು. ಸಾಹಿತ್ಯಕ್ಕೆ ಸಂಗೀತದ ಜೋಡಣೆ ಸರಿಯಾದಾಗ ಕೇಳುಗರಿಗೆ ಹೆಚ್ಚಿನ ಆನಂದವನ್ನೊದಗಿಸುವದು. ಡಾ. ಮಲ್ಲಿಕಾರ್ಜುನ ಮನ್ಸೂರರರು ಹರಿಹರನ "ಶ್ರೀ ಪಂಪಾ ನಗರಿ ನಿವಾಸ ಜೈ" ಎನ್ನುವ ಜಯ ರಗಳೆಯನ್ನು ಭೈರವಿ ರಾಗದಲ್ಲಿ ಹಾಡಿದಾಗ ಕನ್ನಡ ಭಾಷೆ ತಿಳಿಯದವರು ಸಹ ಆ ಶಬ್ದ ಸಂಪತ್ತಿಗೆ, ರಾಗ ಮಾಧುರ್ಯಕ್ಕೆ ತಲೆದೂಗುತ್ತಾರೆ. ಕನ್ನಡಿಗರಂತೂ ಈ ಗೀತೆ ಕೇಳಿದಾಗ ಸಂತಸಭರಿತರಾಗುತ್ತಾರೆ. ಸಾಹಿತ್ಯ–ಸಂಗೀತ ಎರಡೂ ಪರಸ್ಪರ ಪೋಷಕವಾಗಿವೆ.

ಕಾವ್ಯ ನಿರ್ಮಾಣ ಕೈಗೊಳ್ಳಬೇಕಾದರೆ ಸಂವೇದನೆ, ಅನುಭವ, ವಿಚಾರಗಳ ಸಂಘಟನೆಗೊಂಡು ಅಭಿವ್ಯಕ್ತಿ ಪಡೆಯಬೇಕಾಗುತ್ತದೆ. "ಆಕಾಶದಲ್ಲಿ ಮೋಡಗವಿದು, ಮಳೆ ಧರೆಗಿಳಿದು ಬರಬೇಕಾದರೆ ಸಮುದ್ರದ ಆವಿ ಆಕಾಶದತ್ತ ಸಾಗಿ ಮೋಡವಾಗಿ ರೂಪುಗೊಂಡು ಮಳೆಯ ರೂಪದಲ್ಲಿ ಧರೆಗಿಳಿದು ಬರುತ್ತದೆ. ಅಂತೆಯೆ ಕವಿಯ ಅನುಭವವೆಂಬ ಮೋಡವು ಕಾವ್ಯ ರೂಪದಲ್ಲಿ ಹೊರಹೊಮ್ಮುತ್ತದೆ" ಎಂದು ಕವೀಂದ್ರ ರವೀಂದ್ರರು ಕಾವ್ಯ ಸಂಭವವನ್ನು ಕುರಿತು ಹೇಳಿದ್ದಾರೆ. ಮಳೆಯಿಂದ ಕಂಪು ಸೂಸುವ ಹೂವುಗಳು, ರಸಭರಿತವಾದ ಹಣ್ಣುಗಳು ಬೆಳೆಯುವಂತೆ, ಕವಿಯ ಅನುಭವ ಶಬ್ದ ರೂಪ ತಾಳಿ ಕಾವ್ಯವಾಗುತ್ತದೆ. ಆ ಕಾವ್ಯವು ಓದುಗರ ಮನದ ಕೊಳೆಯನ್ನು ಕಳೆದು ಸುಸಂಸ್ಕಾರವನ್ನೊದಗಿ

ಸುತ್ತನೆ ಎನ್ನುವುದಕ್ಕೆ ಪೂಜ್ಯ ಜಗದ್ಗುರುಗಳವರ ಕವನಗಳನ್ನು ಅವಲೋಕಿಸಬಹುದು. ಹೊರಗೆ ಕಾಣುವ ದೀಪ, ಅಂತರಂಗದ ಜ್ಞಾನಜ್ಯೋತಿಯು ಸಂಕೇತವಂತೆ 'ಪಥಿಕ' ಕವನ ಸಂಕಲನದಲ್ಲಿ, ಅಜ್ಞಾನ ಅಳಿದು ಚಿತ್ಪಕ್ಷಿ ಊರ್ಧ್ವಮುಖವಾಗಿ ಹಾರಿದಾಗ ಕತ್ತಲೆ ಯಳಿದು, ಬೆಳಗು ಬರಲೆಂಬ ಹಂಬಲವಿದೆ. ಸಾಧನೆಯ ಮೂಲಕ ಸಿದ್ಧಿಯನ್ನು ಪಡೆಯುವ ಸಂಕಲ್ಪ ವಟುವಿದ್ದಾಗಲೇ ಪೂಜ್ಯರದಾಗಿತ್ತು. ಮಲಾಪಹಾರಿ ತೀರದಲ್ಲಿ ಚಿತ್ತಪಕ್ಷಿ ಹಾರಲು ಕಲಿಯಿತು. ಮುಂದೆ ಕಾಶಿಯಲ್ಲಿ ಗಂಗಾ ತೀರದ ಅನುಭವ ಹೀಗಿದೆ:

"ಹಸಿರು ವನ ಬಳಿಸಾರು
ಬಿಸುಟು ನೀಕಸ, ಬೇರು
ಜ್ಞಾನ ಪರಿಮಳ ಹೀರು
ಸತ್ಯ ಶಿವನೊಳು ಸೇರು."

ಈ 'ಪಥಿಕ'ದ 'ರತ್ನಪಕ್ಷಿ' ಕವಿಯು ಸ್ವಾನುಭವ, ಲೋಕಾನುಭವ, ಕಾವ್ಯಾನುಭವಗಳ ನ್ನೊಂದುಗೂಡಿಸಿದೆ. ಚಿತ್ತರಗಿ ಪೀಠಾಧಿಪತಿಗಳಾಗಿದ್ದಾಗ ಶಿವಯೋಗ ಮಂದಿರದ ಕುಮಾರ ಶಿವಯೋಗಿಗಳನ್ನು ಕುರಿತು ರಚಿಸಿದ 'ಪೂಮಾಲೆ' ಭಕ್ತಿ ಗೀತ ಸೊಗಸಾಗಿದೆ.

"ನಿನ್ನಡಿಯ ಧ್ಯಾನಿಸುತ್ತ
ನಿನ್ನ ಸುನಾಮವನೆ ಪಾಡಿ ಪರಿಣಮಿಸುತ್ತಂ
ನಿನ್ನ ಕೃಪೆಯಿಂದ ಪೇಳ್ದೀ
ಸನ್ನತ ಪದ್ಯಗಳ ಪಾದಕರ್ಪಿಸುವೆಂ."

ಧ್ಯಾನ ಬಲಗೊಂಡಾಗ, ಮನಸ್ಸು ಸ್ತಬ್ಧವಾದಾಗ, ಸಮತಾಭಾವ ತಲೆದೋರಿದಾಗ;

"ಮನದೊಳ್ ಸಮತೆಯುದಳವಡೆ,
ಮನೆ ಮಾಡಿಹುದಯ್ಯ ಶಾಂತಿ, ಸುಖ, ಸಂಪದವು
ಘನವಾದ ಸುಧೆಯ ಸೇವನೆ
ಯನುಕೂಲಿಸಿದಂಗೆ ಹಸಿವು ಬಾಧಿಪುದಂತೈ."

ಮಾನವ ಜೀವನದಲ್ಲಿ ಶಾಂತಿ, ಸುಖ, ಸಂಪದವೇ ಮುಖ್ಯ. ಈ ಸಂತೃಪ್ತಿ ಸಮಾಧಾನ ದೊರೆತಾಗ ಮಾನವಜನ್ಮ ಸಾರ್ಥಕವಾಗುವದು. ದೃವೀ ಸುಧೆಯನ್ನು ಸವಿದ ಮೇಲೆ, ಹಸಿವಿನ ಬಾಧೆಯು ತೋಂದರೆಯಾದೀತೇ? ಪೂಜ್ಯರು ಮೊಗ್ಗೆಯ ಮಾಲೆ, ಪೂಮಾಲೆ ಗಳನ್ನು ಕಟ್ಟುತ್ತ ಆಧ್ಯಾತ್ಮ ಜೀವನದ 'ಪಥಿಕ'ರಾಗಿದ್ದರು. ಮೂರುಸಾವಿರಮಠದ ಪೀಠಾರೋಹಣದ ನಂತರ, ಅವರು ವಿಶಾಲ ಪರಿಸರದ ಪ್ರಭಾವಕ್ಕೊಳಗಾದರು. ಹಲ ವಾರು ಶಾಲೆ ಕಾಲೇಜುಗಳನ್ನು ಪ್ರಾರಂಭಿಸಿದರು, ಸಂಘ ಸಂಸ್ಥೆಗಳನ್ನು ಕಟ್ಟಿದರು. ಪುಸ್ತಕ ಪ್ರಕಾಶನ ಕಾರ್ಯ ಕೈಕೊಂಡರು. ದೇಶ ವಿದೇಶಗಳಲ್ಲಿ ಸುತ್ತಾಡಿದರು. ಸಾವಿರಾರು ಜನ ಭಕ್ತರ ಸುಖ ದುಃಖದಲ್ಲಿ ಪಾಲ್ಗೊಂಡರು. ಸಂಘ–ಸಂಸ್ಥೆಗಳನ್ನು ಕಟ್ಟಿ ಕಹಿ–ಸಿಹಿ

ಅನುಭವ ಪಡೆದರು. ಅರಿವು, ಅನುಭವಗಳಿಂದ ವ್ಯಕ್ತಿತ್ವ ಪರಿಪೂರ್ಣಗೊಂಡಿತು, ಆಗ ಪೂಜ್ಯರ ಅನುಭವವೆಲ್ಲ 'ಚಿತ್ಸುಮನ'ಗಳಾಗಿ ಅರಳಿದವು, ಆ 'ಚಿತ್ಸುಮನ'ಗಳ ಪರಿಮಳ ನಾಡಿನ ನಾಲ್ಕೂ ದಿಕ್ಕಿಗೆ ಪಸರಿಸಿದೆ, ಅಂತರಂಗ, ಬಹಿರಂಗದ ಅನುಭವಗಳು ೨೦೦ ವಚನಗಳಲ್ಲಿ ಹೊರಹೊಮ್ಮಿವೆ, ಅವರ ವಚನದ ಅಂಕಿತ "ಭ್ರೂಲತಾ ಪುರೀಶ ಕರ್ತೃ ಜಗದ್ಗುರು ಗುರುಸಿದ್ಧೇಶ್ವರ" ಎಂದಿದೆ. 'ಚಿತ್ಸುಮನ'ದ ಒಂಭತ್ತನೇ ವಚನ ಅವರ ಆತ್ಮಕಥೆಯಂತಿದೆ.

"ಜನಿಸಿದೆನಯ್ಯಾ ನಾನು
ಹಾನಗಲ್ಲ ಕುಮಾರೇಶನ ವರದಿಂದ;
ವಟುವಾಗಿ ಓದಿದೆನಯ್ಯಾ
ಶ್ರೀಮದ್ ವೀರಶೈವ ಶಿವಯೋಗಮಂದಿರವಲಿ,
ತ್ರಿಕರಣದಿಂದ,
ಶಿವಪೂಜೆ ಶಿವಾನುಭವದ ಪರಿಯನರಿದುಕೊಂಡೆನಯ್ಯಾ,
ಶ್ರೀಮದ್ ವೀರಶೈವ ಶಿವಯೋಗಮಂದಿರದ ಯತಿಗಳಿಂದ,
ವಿದ್ಯಾಧ್ಯಯನವ ಬೆಳೆಸಿಕೊಂಡೆನಯ್ಯಾ
ಕಾಶೀ ಕ್ಷೇತ್ರದೊಳು; ವಿಜಯ ಮಹಂತೇಶನ
ಸದ್‌ಭಕ್ತರ ಸಹಾಯದಿಂದ,
ಜಗದ್ಗುರು ಪೀಠವನೇರಿದೆನಯ್ಯಾ
ನಿನ್ನ, ಗುರುಸಿದ್ಧ-ಕುಮಾರನ ಕರುಣೆಯಿಂದ
ಭ್ರೂಲತಾ ಪುರೀಶ ಕರ್ತೃ
ಜಗದ್ಗುರು ಗುರುಸಿದ್ಧೇಶ್ವರಾ
ನಿರಂತರ ಸಮಾಜಸೇವೆಯ ಮಾಡುತಿರುವೆನಯ್ಯಾ
ತವಕೃಪಾ ವಿಶೇಷದಿಂದ."

ಎಂದು ತಮ್ಮ ಜೀವನ ಚಿತ್ರವನ್ನು, ವಚನದ ರೂಪದಲ್ಲಿ ನಿವೇದಿಸಿದ್ದಾರೆ, "ಗುರು-ವಿರಕ್ತರೆಂಬವರು ಸಮಾಜ ಪುರುಷಂಗೆ ಕಣ್ಣೆರಡು" ಎಂದು ಇನ್ನೊಂದು ವಚನದಲ್ಲಿ ಅರ್ಥವತ್ತಾಗಿ ವಿವರಿಸಿದ್ದಾರೆ. ಹಿಂದು ಮುಸ್ಲಿಂ ಭಾವೈಕ್ಯಕ್ಕೆ ಆಧಾರಸ್ತಂಭವಾಗಿದ್ದಾರೆ, ನಾಡಿನಲ್ಲಿ ಶಿಕ್ಷಣ ಪ್ರಗತಿ, ಸಾಹಿತ್ಯದ ಅಭಿವೃದ್ಧಿ, ಧರ್ಮದ ಏಳಿಗೆ, ಆಧ್ಯಾತ್ಮದ ಪ್ರಗತಿಗಾಗಿ ಪರಿಶ್ರಮಿಸುತ್ತಿದ್ದಾರೆ. 'ಸಮಾಜ ಸೇವೆಯೆ ಲಿಂಗಪೂಜೆ' ಎಂದು ಹಲವಾರು ಸಂದರ್ಭಗಳಲ್ಲಿ ಹೇಳಿದ್ದಾರೆ. ಮೊದಲಿನಿಂದಲೂ ಶ್ರೀಮಂತಿಕೆಗೆ ಹೆಸರಾದುದು ಮೂರುಸಾವಿರಮಠ "ಸಂಪತ್ತೆಂಬುದು ಆಪತ್ತು ನೋಡಾ! ಸಂಪತ್ತು ಹೆಚ್ಚಿದಂತೆ ಕಾಯುವ ಚಿಂತೆ ಹೆಚ್ಚುವದಯ್ಯಾ!" ಎಂಬುದನ್ನರಿತ ಪೂಜ್ಯರು ಸಂಪತ್ತಿನ ಸದ್ವಿನಿಯೋಗ ಮಾಡುತ್ತ, ಆತ್ಮ ಸಂಪತ್ತನ್ನು ಹೆಚ್ಚಿಸಿಕೊಳ್ಳುತ್ತ ಸಾಗಿದ್ದಾರೆ. ಇನ್ನೊಂದು ವಚನದಲ್ಲಿ

"ಹೃದಯ ಕಲ್ಮಷ ನಿವಾರಿಸಲು, ನಿಂದಕರಿರಬೇಕಯ್ಯಾ," ಎಂದು ಅಭಿಪ್ರಾಯಪಟ್ಟಿದ್ದಾರೆ. ಪೂಜ್ಯರಿಗೆ "ಶಿವಶರಣರ ಸಾಹಿತ್ಯ ಸೃಷ್ಟಿ, ಆತ್ಮ ತುಷ್ಟಿಗೆ ಆಹಾರ"ವಾಗಿದೆ. ಷಟ್‌ಸ್ಥಲ ಮಾರ್ಗವನ್ನು ಕೆಲವಚನಗಳಲ್ಲಿ ಸುಲಭವಾಗಿ ತಿಳಿಹೇಳಿದ್ದಾರೆ. "ಮಾತೆಂಬುದು ಜ್ಯೋತಿರ್ಲಿಂಗವಯ್ಯಾ!" ಎಂಬ ವಚನದ ಮೂಲಕ "ಮಾತು ಹಿತವಾಗಿರಬೇಕು, ಮಿತವಾಗಿರಬೇಕು, ಸತ್ಯವಾಗಿರಬೇಕು, ಸ್ವಾನುಭವಯುಕ್ತವಾಗಿರಬೇಕು" ಎಂದು ವಿವರಿಸಿದ್ದಾರೆ. 'ಅನ್ನವ ನೀಡುವುದು ಧರ್ಮಸ್ಥಳದಲಿ ನೋಡಿ ಸಂತಸಪಡಬೇಕಯ್ಯಾ' ಎಂಬ ವಚನ ಶ್ರೀಗಳವರ ಪರಧರ್ಮ ಸಹಿಷ್ಣುತೆಗೆ ಸಾಕ್ಷಿಯಾಗಿದೆ. "ಜಂಗಮನಾದವನು ಅರಿವಿನರಿವೆಯ ಹೊದ್ದಿರಬೇಕು, ಭಕ್ತನಾದೊಡೆ ಸದಾಚಾರ ಸಂಪನ್ನನಾಗಿರಬೇಕು" ಎಂಬ ವಚನಗಳನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರೆ ನಮ್ಮ ನಾಡು, ಭ್ರಷ್ಟಾಚಾರ, ಅನಾಚಾರಗಳಿಂದ ಮುಕ್ತವಾಗಬಹುದಾಗಿದೆ, 'ಚಿತ್‌ಸುಮನ' ವಚನ ಸಂಗ್ರಹದಲ್ಲಿ ಸಮತಾಭಾವ, ಅರ್ಪಣಭಾವ, ಅಭೀಪ್ಸೆ, ಸಂಕಲ್ಪ, ಭಾವೈಕ್ಯತೆ, ವ್ಯಕ್ತಿತ್ವ ಪರಿಪೂರ್ಣತೆ ಮೊದಲಾದ ಹಲವಾರು ಉಪಯುಕ್ತ ವಿಷಯಗಳನ್ನೊಳಗೊಂಡ ವಚನಗಳಿವೆ. ಅರ್ಥಪೂರ್ಣವಾಗಿವೆ.

ಮೂರುಸಾವಿರ ಮಠಕ್ಕೆ ಹೋದೊಡನೆ ನಮ್ಮ ಕಣ್ಣಿಗೆ ಕಾಣುವದು ಆರಂತಸ್ತಿನ ಷಟ್‌ಸ್ಥಲಸೂಚಕ ಗೋಪುರ.

"ಹೃನ್ಮಂದಿರ ಗೋಪುರದೊಳು
ಪ್ರಣವಾಕಾರದ ಘಂಟೆ
ಓಂಕಾರ ಸ್ವರದೊಡನೆ
ನಿನದಿಸುತ್ತಿಹುದು ಆಲಿಸಿರೋ".

ಎಂದು ಉಸುರುತ್ತಿದೆ 'ಚಿತ್‌ಸುಮನ' ಸಂಗ್ರಹದ ವಚನ ಮಾನವ ಅಂತರ್ಮುಖಿಯಾದಾಗ ಈ ಓಂಕಾರನಾದ ಕೇಳಬಹುದಾಗಿದೆ. ಆಧುನಿಕ ವಚನಸಂಗ್ರಹಗಳಲ್ಲಿ 'ಚಿತ್‌ಸುಮನ' ಹಿರಿಯಸ್ಥಾನ ಪಡೆದಿದೆ. ಈ ವಚನಗಳ ಸರಳ ಶೈಲಿ ಓದುಗರ ಗಮನವನ್ನು ಸೆಳೆಯುತ್ತದೆ. ಪುಸ್ತಕದ ಕೊನೆಗೆ ಕೊಟ್ಟಿರುವ ಪಾರಿಭಾಷಿಕ ಶಬ್ದಗಳ ಅರ್ಥ ವಿವರಣೆ ಉಪಯುಕ್ತವಾಗಿದೆ.

'ಆಶೀರ್ವಾಣಿ' 'ಜೀನಹನಿ' 'ಅಮೃತಬಿಂದು' 'ಹೂಬಳ್ಳಿ' 'ಚಿತ್‌ಕಿರಣ' ಗ್ರಂಥಗಳು ಶ್ರೀ ಜಗದ್ಗುರುಗಳವರ ಆಶೀರ್ವಚನ ಹಾಗೂ ಪರಂಜ್ಯೋತಿಗೆ ಪ್ರತಿತಿಂಗಳು ಬರೆಯುವ 'ಆಶೀರ್ವಾಣಿ'ಯ ಸಂಗ್ರಹಗಳಾಗಿವೆ. ಪೂಜ್ಯರ ಅನುಭಾವದ ಚಿಂತನ, ಮಂಥನಗಳನ್ನೊಳಗೊಂಡಿವೆ. ಸುಂದರವಾದ ಗದ್ಯಶೈಲಿ ಮನವನ್ನರಳಿಸುತ್ತದೆ.

ಕನ್ನಡ ನಾಡಿನ ಅನುಭಾವಿ, ಜನಪ್ರಿಯ ಕವಿ 'ಸರ್ವಜ್ಞ' ವಚನಗಳನ್ನು ತ್ರಿಪದಿಯಲ್ಲಿ ರಚಿಸಿದ್ದಾನೆ. ಅದೇ ರೀತಿ ಪೂಜ್ಯರು ತ್ರಿಪದಿಯಲ್ಲಿ 'ಪೂರ್ಣಜ್ಞನ ವಚನಗಳು'

ಎಂದು ರಚಿಸಿದ್ದಾರೆ. 'ಪರಂಜ್ಯೋತಿ' ಮಾಸಪತ್ರಿಕೆಯಲ್ಲಿ 'ಪೂರ್ಣಜ್ಞನ ವಚನಗಳು' ಹೋದ ವರುಷದಿಂದ ಪ್ರಕಟವಾಗುತ್ತಿವೆ. ಈ ವಚನಗಳನ್ನು ಮಹಿಳೆಯರು ಮಕ್ಕಳು ರಾಗಬದ್ಧವಾಗಿ ಹಾಡಬಹುದಾಗಿದೆ. ಶ್ರೀಗಳವರ ಲೋಕಾನುಭವ, ಅನುಭಾವಗಳೇ ತ್ರಿಪದಿ ರೂಪದಲ್ಲಿ ಮೂಡಿಬಂದಿದೆ. ಈಗಾಗಲೆ ೬೬೧ ತ್ರಿಪದಿಗಳು ಪ್ರಕಟವಾಗಿವೆ, ಕವಿಯಿತ್ರಿ ಜಯದೇವಿತಾಯಿ ಲಿಗಾಡೆಯವರ 'ಸಿದ್ಧರಾಮ ಪುರಾಣ' ತ್ರಿಪದಿಯಲ್ಲಿಯೇ ರೂಪುಗೊಂಡಿದೆ. 'ಪೂರ್ಣಜ್ಞನ ವಚನಗಳು' ಈ ಶತಮಾನದಲ್ಲಿ ತ್ರಿಪದಿಗಳ ಮಹಾ ಸಂಪುಟವಾಗಬಹುದಾಗಿದೆ. ಈ ವಚನಗಳ ವಿಷಯ ವೈವಿಧ್ಯಪೂರ್ಣವಾಗಿದೆ, ಎಂಬು ದನ್ನು ಕೆಲವು ವಚನಗಳಿಂದ ಅರಿಯಬಹುದಾಗಿದೆ.

"ಜೀವನದಿ ಸಿಹಿಕಹಿಗ| ಳಾವರಿಸಿ ಬರುತಿರಲು
ಭಾವ ಸಮತೆಯನು ಸಾಧಿಸಿದರಾ ಮನುಜ
ದೇವನಾಗುವನು| ಪೂರ್ಣಜ್ಞ"

"ಸತ್ಯದಿಂ ನಡೆವವಗೆ| ಕುತ್ತುಗಳು ಬರಬಹುದು
ನಿತ್ಯ ನಿಷ್ಠೆಯಲಿ ನಡೆಯುತ್ತಿದ್ದರೆ ಕೊನೆಗೆ
ಸತ್ಯಕ್ಕೆ ಜಯವು ಪೂರ್ಣಜ್ಞ."

"ಶುದ್ಧಕಾಯಕದಿಂದ| ಎದ್ದು ಬಂದಿರುವ ಧನವ
ಬಿದ್ದ ಬಡಜನಕೆ ವಿತರಿಸಲು ಅಜ್ಜಗುರು
ಸಿದ್ಧ ಮೆಚ್ಚುವನು| ಪೂರ್ಣಜ್ಞ"

ಈ ವಚನಗಳಿಂದ ಮಾನವನು ದೇವರ ಒಲುಮೆ ಪಡೆಯಬೇಕಾದರೆ, ದೇವನಾಗಬೇಕಾದರೆ ಸಮತಾಭಾವ, ಸತ್ಯ ನಿಷ್ಠೆ, ಶುದ್ಧಕಾಯಕ ಮೊದಲಾದ ಸದ್ಗುಣಗಳು ಅವಶ್ಯ ಎಂಬು ದನ್ನು ವ್ಯಕ್ತಗೊಳಿಸಿವೆ. ಪ್ರಭುದೇವರು ಹಾಗೂ ಹಲವು ಶರಣರನ್ನು ಕುರಿತು ಶ್ರೀಗಳವರು ರಚಿಸಿದ ತ್ರಿಪದಿಗಳು ಭಾವಪೂರ್ಣವಾಗಿವೆ. 'ಸಾಹಿತ್ಯರತ್ನ' 'ವೇದಾಂತಾ ಚಾರ್ಯ' ಪದವಿಗಳನ್ನು ಪಡೆದವರಿಗೆ ಸಂಸ್ಕೃತ ವ್ಯಾಮೋಹ ಅತಿಯಾಗಿರುತ್ತದೆ. ಅಂಥ ವರು ಕನ್ನಡ ಸಾಹಿತ್ಯದಲ್ಲಿ ಮರುಳಿಲ್ಲ ಎನ್ನುತ್ತಾರೆ. ಆದರೆ ಪೂಜ್ಯರು ಸಂಸ್ಕೃತ ಭಾಷಾ ಪಂಡಿತರಾದರೂ ತಾಯ್ನುಡಿಯ ಅಭಿಮಾನವುಳ್ಳವರು—

"ಕನ್ನಡಿಗರೇ ಏಳಿ| ಕನ್ನಡಿಗರೇ ಕೇಳಿ
ಕನ್ನಡದ ಕಹಳೆ ಕರೆಯುತಿದೆ ಮುನ್ನಡೆಗೆ
ಪುಣ್ಯ ಭಾರತದಿ ಪೂರ್ಣಜ್ಞ"

"ನುಡಿಯಲಿ ರುಚಿತುಂಬಿ| ನಡೆಯಲ್ಲಿ ಶುಚಿತುಂಬಿ
ಬಡವರಿಗೆ ಬಲತುಂಬಿ ಕಾರ್ಯಗೈವವರು
ದೃಢ ನಿಷ್ಠೆಯವರು ಪೂರ್ಣಜ್ಞ"

ಈ ರೀತಿ ನಾಡು-ನುಡಿಗಳನ್ನು ಕುರಿತು ಹಲವಾರು ವಚನಗಳನ್ನು ರಚಿಸಿದ್ದಾರೆ. ನಾಡಿನ ಬಗೆಗೆ ಪ್ರೀತಿ ಅಭಿಮಾನ, ನುಡಿಯ ಬಗೆಗೆ ಹೆಮ್ಮೆ. ನಡೆ-ನುಡಿಯ ಬಗೆಗೆ ಮಾರ್ಗ ದರ್ಶನವಿದೆ ಕೆಲವು ವಚನಗಳಲ್ಲಿ. ಲಂಚ-ವಂಚನೆಗಳಿಂದ ದೂರಾಗಿ ಸಂಸಾರದಲ್ಲಿ ಪತಿ-ಪತ್ನಿ, ಅತ್ತೆ-ಸೊಸೆ ಮೊದಲಾದವರು ಜೀವನದಲ್ಲಿ ಹೇಗಿರಬೇಕು ಎಂಬ ಹಿತವಚನಗಳಿವೆ.

"ಸಾಲವನು ಮಾಡದಿರು| ಸಾಲವನು ನೀ ಕೊಡದಿರು
ಕಾಲಕಳೆಯದಲೆ ದುಡಿವವಗೆ ಲಕ್ಷ್ಮೀ ಹೂ
ಮಾಲೆ ಹಾಕುವಳು| ಪೂರ್ಣಜ್ಞ"

ಸಾಲದ ಸಂಸಾರ ಒಳ್ಳೆಯದಲ್ಲ, ಕಾಯಕಷ್ಟದಿಂದ ದುಡಿದಾಗ ಲಕ್ಷ್ಮೀ ಒಲಿದುಬರುವಳು' 'ಕಾಯಕವೇ ಕೈಲಾಸ' ಎಂಬುದನ್ನು ಬಿಂಬಿಸಿದ್ದಾರೆ. ಹಲವಾರು ಕಾರ್ಯಗಳಲ್ಲಿ ಬಿಡುವು ಮಾಡಿಕೊಂಡು ಕಾವ್ಯರಚನೆಗೆ ತೊಡಗಿದಾಗ, ಭಕ್ತರು ಅಲ್ಲಿಗೂ ಬಂದು ಪೂಜ್ಯರ ಸ್ಫೂರ್ತಿ ದೇವತೆಯನ್ನು ಓಡಿಸಿದಾಗ ಮನನೊಂದು ವಚನ ರಚಿಸಿದ್ದಾರೆ. ಕಾವ್ಯರಚನೆಗೆ ಪ್ರಶಾಂತ ವಾತಾವರಣ, ಸ್ಫೂರ್ತಿ, ಪ್ರತಿಭೆ-ತಪಸ್ಸು ಅವಶ್ಯ ಎಂಬುದನ್ನು ಅವರ ಈ ಕೆಳಗಿನ ವಚನಗಳಿಂದ ಅರಿಯಬಹುದಾಗಿದೆ.

"ಬಿಡುವಿಯಲ್ಲದವನಲ್ಲಿ| ರಸಕಾವ್ಯ ಸ್ಫುರಿಸುವುದೇ?
ರಸಭಾವ ಜೀವಿ ಭಾವಜೀವನದಿಂದ
ಹೊಸ ಸೃಷ್ಟಿಗೈವ| ಪೂರ್ಣಜ್ಞ"
"ಚಿತ್ತ ಭೂಮಿಯ ಮೇಲೆ| ಬಿತ್ತು ಜ್ಞಾನದ ಬೀಜ
ಮುತ್ತಿರುವ ಅಜ್ಞಾನ ಕಸಕಂಟಿ ಕಿತ್ತಿ
ಕತ್ತಲೆಯ ಕಳೆಯೊ| ಪೂರ್ಣಜ್ಞ"

ಇಂದು ನಮ್ಮ ಸುತ್ತಲೂ ನಿತ್ಯ ಜೀವನದಲ್ಲಿ ಕಲಬೆರಕೆ ಎಷ್ಟೊಂದು ಬಗೆಯಾಗಿ ನಡೆದಿದೆ ಎಂಬುದನ್ನು ಪೂಜ್ಯರು ಸೂಕ್ಷ್ಮವಾಗಿ ಅವಲೋಕಿಸಿ ಹೀಗೆ ಬರೆದಿದ್ದಾರೆ:

"ಅನ್ನದೊಳಗೆ ನೋಡಾ| ಮಣ್ಣನ್ನು ಹಿಟ್ಟಿನೊಳು
ಬೆಣ್ಣೆಯೊಳು ಮೈದಾ ಹಿಟ್ಟನ್ನು ಹಾಕುತ್ತ
ಹೊನ್ನು ಗಳಿಸುವರು ಪೂರ್ಣಜ್ಞ"

ಈ ವಿಷಯವಾಗಿ ಹಲವಾರು ವಚನಗಳನ್ನು ರಚಿಸಿದ್ದಾರೆ. ಕಲಬೆರಕೆ, ಲಂಚವಂಚನೆ, ಶೋಷಣೆಗಳಿಂದ ಕೂಡಿಟ್ಟ ಹಣ ಮುಂದೆ ಕಷ್ಟಕ್ಕೆ ಕಾರಣ ಎಂಬುದನ್ನು ಸ್ಪಷ್ಟಗೊಳಿಸಿದ್ದಾರೆ. ವಿದ್ಯಾರ್ಥಿಗಳಿಗೆ, ಹಿತೋಪದೇಶದಂತಿರುವ ವಚನಗಳು ಹೃದಯ ಸ್ಪರ್ಶಿಯಾಗಿವೆ.

"ಸದ್ವಿದ್ಯೆ ಸುವಿಚಾರ| ಸದ್ವಿನಯ ಸುವಿವೇಕ
ಸದ್ಭಕ್ತಿ ಭಾವ ಬೆಳೆಸಿಕೊಂಡವ ಶ್ರೇಷ್ಠ
ವಿದ್ಯಾರ್ಥಿ ಜಗಕೆ| ಪೂರ್ಣಜ್ಞ"

ಇಂಥ ವಚನಗಳೂ ಸಾಕಷ್ಟಿವೆ. ಪೂಜ್ಯ ಜಗದ್ಗುರುಗಳವರ ಭಕ್ತಿಭರಿತ ಭಾವಗೀತಗಳು ಅನುಭಾವದ ವಚನಗಳು, ಆಶೀರ್ವಾಣಿಗಳು, ಸಾಹಿತ್ಯ ಸಾಧನೆಯ ಸಂಪತ್ತಾಗಿವೆ, ಪೂಜ್ಯರ ಕಾವ್ಯದ ಒಲವು, ಜನಮನ ಹಸನಾಗಬೇಕು. ದುಡಿಮೆಯೇ ದೇವರಾಗಬೇಕು. ಸಮಾಜಸೇವೆಯೆ ಲಿಂಗಪೂಜೆಯಾಗಬೇಕು. ಲಂಚ ವಂಚನೆ, ಭ್ರಷ್ಟಾಚಾರ ಶೋಷಣೆ ಅಳಿಯಬೇಕು. ಜನರಲ್ಲಿ ಭಕ್ತಿ-ಜ್ಞಾನ ಬೆಳೆಯಬೇಕು. ಬಡತನ ಅಳಿಯಬೇಕು, ಸರ್ವರೂ ಸುಖದಿಂದ ಬಾಳಬೇಕು ಎಂಬುದನ್ನೇ ಅವರು ತಮ್ಮ ಸ್ವರಚಿತ ಸಾಹಿತ್ಯದ ಮೂಲಕ ತೋರಿಸಿ ಕೊಟ್ಟಿದ್ದಾರೆ. ಅವರ ಕಾವ್ಯ ಜೀವನದ ಒಲವು ಅಂತರಂಗದ ಶಾಂತಿ, ಸಂತೃಪ್ತಿ ಆತ್ಮೋನ್ನತಿಯಾಗಿದೆ. ಬಿಡುವಿಲ್ಲದ ಕಾರ್ಯದಲ್ಲಿಯೂ ಅವರ ಸಾಹಿತ್ಯದೊಲವೆ ಅವರನ್ನು ಸಾಹಿತ್ಯ ರಚನೆಗೆ ತೊಡಗಿಸುತ್ತದೆ. ಪೂಜ್ಯರು ಸರಳ ಸುಂದರ ಶೈಲಿಯಲ್ಲಿ ಅರ್ಥಪೂರ್ಣವಾದ ಗದ್ಯ-ಪದ್ಯ ರಚಿಸಿ, ಸಾಹಿತ್ಯ ಸಾಧನೆಗೈದು, ಸಿದ್ಧಿಯನ್ನು ಪಡೆದಿದ್ದಾರೆ. ನಾಡಿಗೆ ಸತ್ವಯುತ ಸಾಹಿತ್ಯವನ್ನೊದಗಿಸಿದ್ದಾರೆ. ಹೂಬಳ್ಳಿಯ ಮೂಲಕ ಸಾಹಿತ್ಯ ಸೌರಭ ಎಲ್ಲೆಡೆ ಪಸರಿಸುವ ಯೋಜನೆಯನ್ನು ಕೈಕೊಂಡು ಯಶಸ್ವಿಗಳಾಗಿದ್ದಾರೆ.

□ □

ಹಿಂದೂ ಮುಸ್ಲೀಮ ಬಾಂಧವ್ಯದಲ್ಲಿ ಜಗದ್ಗುರುಗಳ ಪಾತ್ರ

—ಶ್ರೀ ಎನ್. ಟಿ. ಜಿತೂರಿ

ಪರಮ ಪೂಜ್ಯ ಪರಮ ಗುರುಗಳು ಈ ವಿಷಯದ ಮೇಲೆ ಲೇಖನ ಬರೆಯಲು ನನಗೆ ಆಜ್ಞಾಪಿಸಿದ್ದಕ್ಕೆ ನಾನು ಅವರಿಗೆ ಚಿರಋಣಿಯಾಗಿದ್ದೇನೆ. ನನಗೂ ಮತ್ತು ಶ್ರೀಗುರು ಸಿದ್ಧೇಶ್ವರಮಠಕ್ಕೂ ನನ್ನ ಬಾಲ್ಯದಿಂದಲೇ ಸಂಬಂಧವಿದೆ. ಈ ಮಠದ ಪೂಜಾರಿಯ ಮಗನೂ ಮತ್ತು ನಾನು ಕೂಡಿ ಕನ್ನಡ ೬ನೇ ನಂಬರ ಶಾಲೆಯಲ್ಲಿ ಕಲಿಯುತ್ತಿದ್ದುದರಿಂದ ಮತ್ತು ನನ್ನ ಮನೆ ಮಠದ ಬದಿಗೆ ಇದ್ದುದರಿಂದ ನಾನು ಮಠದ ಆವಾರದಲ್ಲಿಯೇ ಆಟವಾಡಿ ಬೆಳೆದಿದ್ದೇನೆ. ನಾನು ಪೋಲಿಸ ಖಾತೆಯ ನಿವೃತ್ತ ಸೇವಕನಾಗಿದ್ದರಿಂದ ಲೇಖನಗಳನ್ನು ಬರೆಯುವ ವೃತ್ತಿ ನನ್ನದು ಇಲ್ಲದ್ದರಿಂದ ನಾನು ಬರೆಯಬೇಕೆಂದಿರುವ ಲೇಖವು ಪಂಡಿತರ ಗಮನಕ್ಕೆ ಸೇರಲಿಕ್ಕಿಲ್ಲ. ಆದರೆ ಗುರುಗಳ ಆಜ್ಞೆಯನ್ನು ನಮ್ರದಿಂದ ಪಾಲಿಸಲು ಉದ್ದೇಶಿಸಿ ಈ ಲೇಖವನ್ನು ಬರೆಯುತ್ತಿದ್ದೇನೆ.

ಹಿಂದೂ-ಮುಸ್ಲೀಮ್ ಬಾಂಧವ್ಯದಲ್ಲಿ ಜಗದ್ಗುರುಗಳ ಪಾತ್ರ ತಿಳಿಯಬೇಕಾದರೆ ಅದರ ಕೆಲವು ಹಿನ್ನೆಲೆಯನ್ನು ತಿಳಿಯುವುದು ಅವಶ್ಯವಿದೆ. ಕಾರಣ ಕೆಳಗಿನ ವಿವರಗಳನ್ನು ಕೊಡಬಯಸುತ್ತೇನೆ.

ಶ್ರೀಗುರು ಸಿದ್ಧೇಶ್ವರ ಮೂರುಸಾವಿರಮಠದ ಇತಿಹಾಸವು ಕಳೆದ ನೂರಾರು ವರ್ಷಗಳಿಂದ ಮಹತ್ವದ ಪಾತ್ರವಹಿಸುತ್ತಿದೆ. ಇದರ ಸುತ್ತಮುತ್ತಲೂ ನೂರಾರು ಎಕರೆ ಜಮೀನು ಈ ಮಠಕ್ಕೆ ಸೇರಿದ ಮಾಲ್ಕಿಯವಾದವುಗಳು. ಇದು ಹಿಂದಿನ ಕಾಲಕ್ಕೆ ಹಿಂದೂಗಳು ವಾಸಿಸುವ ಕೇಂದ್ರ ಸ್ಥಾನ ಆಗಿತ್ತಲ್ಲದೆ ಈಗಲೂ ಸಹ ಅದೇ ಸ್ಥಿತಿಯಲ್ಲಿ ಇದೆ. ಮಠದ ಹತ್ತಿರ ಒಂದು ವಿಶಾಲವಾದ ಹೊಂಡವು ಸುತ್ತಲೂ ಕಲ್ಲಿನಿಂದ ಕಟ್ಟಿದ್ದು ಅದಕ್ಕೆ ಸುಮಾರು ೨೫ ಗಡಗಡಿಗಳು ಇದ್ದವು. ಊರ ಜನರು ಇದರಲ್ಲಿ ಈಜಾಡಲಿಕ್ಕೆ ಬರುತ್ತಿದ್ದರು. ಮೊಹರಂ ಹಬ್ಬದ ಕಡೆಯ ದಿವಸ ದೇವರಿಗೆ ಕಳಿಸಲಿಕ್ಕೆ ಈ ಹೊಂಡಕ್ಕೆ ತಾಬೂತಗಳು ತೆಗೆದುಕೊಂಡು ಬರುತ್ತಿದ್ದರು.

ಸುಮಾರು ೨೦೦ ವರ್ಷಗಳ ಹಿಂದೆ ಹಿಂದೂಸ್ಥಾನದ ಉತ್ತರ ಭಾಗದಲ್ಲಿ ಮೊಗಲ್ ಬಾದಶಹರ ಆಳಿಕೆಯು ಶಿಥಿಲವಾಗಿ ಎಲ್ಲಿ ಕಡೆಯೂ ಅಶಾಂತಿಯು ವ್ಯಾಪಿಸಿ ಜನಜೀವನವು ಗಂಡಾಂತರದಲ್ಲಿ ಒದಗಿದಾಗ, ಅನೇಕ ಹಿಂದೂಗಳು ದಕ್ಷಿಣಕ್ಕೆ ವಲಸೆ ಬಂದರು. ಅವರಲ್ಲಿ ಸೋಮವಂಶಿಯ ಸಹಸ್ರಾರ್ಜುನ ಕ್ಷತ್ರಿಯ ಸಮಾಜದವರು ಸಹಾ ಸೇರಿದ್ದರು. ಅವರು ತಮ್ಮ ಬಂಧು ಬಳಗದವರನ್ನು ಕರೆಕೊಂಡು, ಗುಂಪು-ಗುಂಪಾಗಿ ತಮ್ಮ ಆಪ್ತ ಬಾಂಧವರನ್ನು ಕರಕೊಂಡು ಹುಬ್ಬಳ್ಳಿಗೆ ಬಂದರು. ಶ್ರೀಗುರು ಸಿದ್ಧೇಶ್ವರ ಕೃಪಾದಿಂದ ಮಠದ

ಸ್ವಾಮಿಯ ಸಂರಕ್ಷಣೆ ಪಡೆದು ಮಠದ ಸುತ್ತಲೂ ಬಿಡಾರ ಹಾಕಿ ನೇಕಾರಿಕೆ ಉದ್ಯೋಗದಿಂದ ಉದರ ಪೋಷಣೆ ಮಾಡಲಿಕ್ಕೆ ಹತ್ತಿದರು. ಕಾಲಾಂತರದಲ್ಲಿ ಹೊಂಡದ ಸುತ್ತಲೂ ಕೂಡಿ ಬಿದ್ದ ಕ್ಯಾಂಪಿಕಲ್ಲು ಮತ್ತು ಮಣ್ಣಿನ ರಾಶಿಯನ್ನು ಉಪಯೋಗಿಸಿ ತಮ್ಮ ಮನೆಗಳನ್ನು ಕಟ್ಟಿಸಿಕೊಂಡು ಇರಲಿಕ್ಕೆ ಹತ್ತಿದರು. ಕೆಲವು ಮನೆತನಗಳು ಹೊರ ಕಿಲ್ಲೆಯ ಹೊರಗೆ ಗಣೇಶ ಪೇಟೆಯಲ್ಲಿ ಮತ್ತು ಹಳೇ ಕಿಲ್ಲೆಯ ಹತ್ತಿರ ಹಳೇ ಹುಬ್ಬಳ್ಳಿಯಲ್ಲಿ ವಾಸಿಸ ಹತ್ತಿದರು. ಇವರು ಮೂಲತಃ ಮಾಂಸಾಹಾರಿಗಳಾಗಿದ್ದರು. ಶಾಂತಪ್ರಿಯರೂ ಬ್ರಾಹ್ಮಣರೇ ಇವರ ಗುರುಗಳು. ಇವರು ವಾಸಿಸುವ ಸ್ಥಾನಗಳ ಸಮೀಪ ಮುಸಲ್ಮಾನರೂ ಸಹ ವಾಸಿಸುತ್ತಿದ್ದರು, ಮನೆ ಮತ್ತು ಮಸೂದೆಗಳು ಇದ್ದವು. ಕ್ಷತ್ರಿಯರು ಹಿಂದೂಗಳ ಎಲ್ಲ ಹಬ್ಬವನ್ನು ಆಚರಿಸುವರು. ಆಗಿನ ಹುಬ್ಬಳ್ಳಿಯ ಜನಸಂಖ್ಯೆಯು ಹಳೇ ಹುಬ್ಬಳ್ಳಿಯನ್ನು ಕೂಡಿಸಿ ೨೫,೦೦೦-೦೦ದಷ್ಟು ಇರಬಹುದು. ಕ್ಷತ್ರಿಯರು ನೇಯ್ದು ತಯಾರು ಮಾಡಿದ ಸೀರೆ ಮತ್ತು ಕುಬುಸಗಳ ವ್ಯಾಪಾರವು ದಿನೇ ದಿನೇ ಬೆಳೆದು ಅವರ ಆರ್ಥಿಕ ಸ್ಥಿತಿಯು ಸುಧಾರಿಸಿತು.

ಮುಸಲ್ಮಾನ ಸಮಾಜವಲ್ಲಿ ಸಹ ಅನೇಕರು ನೇಕಾರಿಕೆ ಮತ್ತು ರೇಶ್ಮೆ ಉದ್ಯೋಗದಿಂದ ಉಪಜೀವಿಸುತ್ತಿದ್ದುದರಿಂದ ಎಲ್ಲರೂ ಪರಸ್ಪರ ಪ್ರೇಮದಿಂದ ನಡೆಯುತ್ತಿದ್ದರು. ಆದರೆ, ಹಿಂದೂಗಳು ಭಾಜಾ ಭಜಂತ್ರಿಗಳಿಂದ ಮೆರವಣಿಗೆ ತೆಗೆದಾಗ ಮಶೀದೆ ಮುಂದೆ ಅದು ನಿಲ್ಲಿಸಬೇಕಂತಾ ಕಟ್ಟುನಿಟ್ಟಾಗಿ ಮುಸಲ್ಮಾನರು ಜುಲ್ಮಿ ಮಾಡುತ್ತಿದ್ದರು. ನನಗೆ ತಿಳಿದಂತೆ ಇವೇ ಘಟನೆಗಳು ಮುಂದೆ ಹಿಂದೂಗಳು ಮುಸಲ್ಮಾನರ ಬಗ್ಗೆ ಮನಸ್ಸು ಕೆಡಲು ಮೂಲ ಕಾರಣವಾಗಿರಬೇಕು ಅಂತಾ ಅನ್ನಿಸುತ್ತದೆ. ಈ ಕಾರಣದಿಂದ ಹಿಂದುಸ್ಥಾನದಲ್ಲಿ ಅಲ್ಲಲ್ಲಿ ಹಿಂದೂ ಮುಸಲ್ಮಾನರಲ್ಲಿ ದಂಗೆಗಳು ಆದ ಬಗ್ಗೆ ವರ್ತಮಾನ ಪತ್ರದಲ್ಲಿ ಪ್ರಸಿದ್ಧವಾಗುತ್ತಿದ್ದವು. ಹುಬ್ಬಳ್ಳಿಯಲ್ಲಿ ಸಹ ಇಂತಹ ಶಾಂತಿ-ಭಂಗಗಳ ಘಟನೆಗಳು ನಡೆದವು.

ಇತ್ತಿತ್ತಲಾಗಿ ಹುಬ್ಬಳ್ಳಿಯಲ್ಲಿ ಹಿಂದೂ-ಮುಸಲ್ಮಾನರ ನಡುವೆ, ವಿಶೇಷತಃ ಎಸ್. ಎಸ್. ಕೆ. ಸಮಾಜದ ನಡುವೆ ವೈರತ್ವ ಬೆಳೆಯಲು ಕೆಳಗಿನ ಕಾರಣಗಳು ಮೂಲವಾದವು.

೧) ಹುಬ್ಬಳ್ಳಿಯ ಈದಗಾ ಮೈದಾನವು ಮುಸ್ಲೀಮರಿಗೆ ರಮಜಾನ್ ಮತ್ತು ಮೊಹರಂಗಳಲ್ಲಿ ಸಾಮೂಹಿಕ ನಮಾಜ ಮಾಡುವ ಸಲುವಾಗಿ ಈ ಜಾಗೆಯನ್ನು ಮುನಿಸಿಪಾಲ್ಟಿಯಿಂದ ಒಂದು ವರ್ಷಕ್ಕೆ ಒಂದು ರೂಪಾಯಿ ಬಾಡಿಗೆಯಂತೆ ಪಡೆಯಲಾಗಿತ್ತು. ಆದರೆ ಮುಸಲ್ಮಾನರ ಜನಸಂಖ್ಯೆಯು ದಿನೇ ದಿನೇ ಅತ್ಯಂತ ಬೆಳೆದಿದ್ದುದರಿಂದ ಈ ಮೈದಾನವು ಬಹಳೇ ಸಣ್ಣದಾಗಿ ನೂರಾರು ಜನರು ಮೈದಾನದ ಹೊರಗೆ ಪ್ರಾರ್ಥನೆ ಮಾಡಬೇಕಾಯಿತು. ಆದ್ದರಿಂದ ಈ ಜಾಗಾ ಬದಲಾಯಿಸಿ ಬೇರೆ ಕಡೆಗೆ ಹೋಗಬೇಕು. ಅಂತಾ ನಿಶ್ಚಯ ಮಾಡಿ ಈದಗಾ ಮೈದಾನವನ್ನು ಅಂಗಡಿ ವಗೈರೆ ಕಟ್ಟಲು ಮುನ್ಸಿಪಾಲಿಟಿ

ಯಿಂದ ಪರವಾನಿಗೆ ಪಡೆದುಕೊಂಡು ಅಂಗಡಿ ಕಟ್ಟಲು ಶುರು ಮಾಡಿದರು. ಈ ಸಂಗತಿಯೂ ಬೇರೆ ಸಮಾಜದವರಿಗೆ ತಿಳಿದು ಈ ಜಾಗಾ ಮುಸ್ಲೀಮ್ ಸಮಾಜದ ಪ್ರಾರ್ಥನೆಗೆ ಅಷ್ಟೇ ಉಪಯೋಗಿಸಬೇಕು. ಅಲ್ಲದೇ ಅಂಗಡಿ ಕಟ್ಟಲಿಕ್ಕೆ ಕೊಡಬಾರದು ಅಂತಾ ಕೋರ್ಟಿನಿಂದ ತಡೆಯಾಜ್ಞೆ ತಂದರು.

೨) ಸುಮಾರು ೨೦ ವರ್ಷಗಳ ಹಿಂದೆ ಶ್ರೀ ಬರ್ಮನ್ ಅಂಬುವ ಅಸಿಸ್ಟಂಟ್ ಪೋಲೀಸ ಸುಪರಿಂಟೆಂಡೆಂಟ ಅವರು ಹುಬ್ಬಳ್ಳಿಯಲ್ಲಿದ್ದಾಗ, ಕಮರಿಪೇಟೆ, ಸಿದ್ದೀರಪ್ಪನ ಪೇಟೆ, ದಿವಟಗಲ್ಲಿಯಲ್ಲಿ ಹಿಂದೂ-ಮುಸ್ಲೀಮರ ನಡುವೆ ದಂಗೆ ಶುರುವಾಯಿತು. ಕೂಡಲೇ ಬೆಳಗಾವದಿಂದ ಶ್ರೀ ಚಂದ್ರಶೇಖರ ಡಿ.ಆಯ್.ಜಿ. ಸಾಹೇಬರು, ಬಹುಸಂಖ್ಯೆಯಲ್ಲಿ ಪೋಲಿಸರನ್ನು ಕರೆತಂದು ಶಾಂತಿ ಸ್ಥಾಪಿಸಿದರು.

೩) ಶ್ರೀ ಭಟ್ ಅನ್ನುವವರು ಧಾರವಾಡದಲ್ಲಿ ಎಸ್.ಪಿ. ಇದ್ದಾಗ ದಾಜೀಬಾನ ಪೇಟೆಯಲ್ಲಿ ಒಬ್ಬ ಮುಸ್ಲೀಮ್ ರಿಕ್ಷಾ ಡ್ರೈವರನು ಆ್ಯಕ್ಸಿಡೆಂಟ್ ಮಾಡಿ ಒಬ್ಬ ಹಿಂದೂ ದಾರಿಕಾರನಿಗೆ ಗಾಯಪಡಿಸಿದಾಗ ಅವನಿಗೆ ಅಲ್ಲಿ ನೆರೆದ ಕೆಲವು ಹಿಂದೂಗಳು ಹೊಡೆದದ್ದರಿಂದ ಅವನು ಕೂಡಲೇ ಓಡುತ್ತಾ ಹೋಗಿ ಬೇರೆ ಮುಸ್ಲೀಮ್ ರಿಕ್ಷಾ ಡ್ರೈವರಿಗೆ ತಿಳಿಸಲು ಅವರೆಲ್ಲರೂ ಅಲ್ಲಿಗೆ ಬಂದು ಹಿಂದೂಗಳ ಸಂಗಡ ಹೊಡದಾಡಲಿಕ್ಕೆ ಶುರು ಮಾಡಿದರು. ಪರಸ್ಪರರಲ್ಲಿ ಕೈ ಕೈ ಹತ್ತಿ ವಿಕೋಪಕ್ಕೆ ಹೋಯಿತು. ಸಬರಬನ್ ಪೋಲಿಸ ಸ್ಟೇಶನ್‌ದಿಂದ ಧಾವಿಸಿ ಬಂದ ಒಬ್ಬ ಪೋಲಿಸ ಸಬ್ ಇನ್ಸಪೆಕ್ಟರ್ ಮತ್ತು ೨-೩ ಕಾನ್‌ಸ್ಟೇಬಲ್‌ಗಳಿಗೆ ಶಾಂತಿ ಸ್ಥಾಪಿಸಲು ಮಾಡಿದ ಪ್ರಯತ್ನ ವಿಫಲವಾಯಿತು.

ಶ್ರೀ ಭಟ್ ಎಸ್. ಪಿ. ಸಾಹೇಬರು ಹೆಚ್ಚಿನ ಪಾರ್ಟಿ ಸಹಿತ ಧಾವಿಸಿ ಬಂದು ಶಾಂತಿ ಸ್ಥಾಪಿಸಿದರು.

೪) ಮುಸಲ್ಮಾನ ಸಮಾಜದ ಸ್ಮಶಾನ ಭೂಮಿ ಸುತ್ತಲೂ ಕಂಪೌಂಡ ಗೋಡೆ ಕಟ್ಟಲು ಮುನ್ಸಿಪಾಲ್ಟಿಯಿಂದ ತೆಗೆದುಕೊಂಡ ಪರವಾನಿಗೆ ಹಿಂದೂಗಳು ಕೋರ್ಟಿನಲ್ಲಿ ದಾವೇ ಮಾಡಿ ತಡೆಯಾಜ್ಞೆ ತಂದರು.

೫) ದಾಜೀಬಾನ ಪೇಟೆಯಲ್ಲಿರುವ ಚಾಂಗದೇವ ಮಹಾರಾಜರ ರಾಜಾ ಬಾಗ ಸವಾರ ಮಂದಿರದಲ್ಲಿ ಹಿಂದೂಗಳು ಒಂದು ದೊಡ್ಡ ಘಂಟೆಯನ್ನು ತೂಗೂ ಹಾಕಿದ್ದಕ್ಕೆ ಮುಸಲ್ಮಾನರೂ ಪ್ರತಿಭಟಿಸಿದರು ಮತ್ತು ಅದನ್ನು ತೆಗೆದು ಹಾಕಬೇಕಂತ ಆಗ್ರಹಿಸಿದರು. ಆದರೆ ಯಮನೂರಲ್ಲಿ ಇರುವ ಚಾಂಗದೇವ ಮಹಾರಾಜರ ಮಂದಿರದಲ್ಲಿ ಅನೇಕ ಘಂಟಿಗಳು ಇದ್ದರೂ ಸಹ ಅಲ್ಲಿ ಹಿಂದೂ-ಮುಸಲ್ಮಾನರೂ ಕೂಡಿ ಮಂದಿರಕ್ಕೆ ಹೋಗುತ್ತಾರೆ. ಆದ್ದರಿಂದ ಒಂದು ಘಂಟಿ ಕಟ್ಟಿದ್ದಕ್ಕೆ ಮುಸಲ್ಮಾನರೂ ಮಾಡಿದ ತಕರಾರಿಗೆ ಹಿಂದೂಗಳು ಮತ್ತು ಮಂದಿರದ ಪೂಜಾರಿಗಳು ಘಂಟಿ ತೆಗೆಯಲು ಒಪ್ಪಲಿಲ್ಲ. ಇದರಿಂದ ಮುಸಲ್ಮಾನರೂ ಮಂದಿರಕ್ಕೆ ಬರುವದು ಕಡಿಮೆಯಾಯಿತು.

ಮೇಲೆ ನಮೂದ್ ಮಾಡಿದ ಪ್ರಮುಖ ಕಾರಣಗಳಿಂದ ಮುಸಲ್ಮಾನ ಬಾಂಧವರು ಒಳಗೊಳಗೆ ದ್ವೇಷ ಮಾಡಲಿಕ್ಕೆ ಕಾರಣವಾಯಿತು. ಯಾವ ವೇಳೆಗೆ ಇದು ದಂಗೆಯು ಕಾರಣವಾಗುವದೋ ಅನ್ನುವದು ಸಂಶಯ ಬರಲಿಕ್ಕೆ ಹತ್ತಿತ್ತು. ಪೋಲೀಸರು ಇತ್ತ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟು ಹಿಂದೂ ಮತ್ತು ಮುಸ್ಲೀಮರ ಹಬ್ಬಗಳಲ್ಲಿ ಬಂದೋಬಸ್ತು ಮಾಡುತ್ತಿದ್ದರು. ಈ ಸ್ಥಿತಿಯಲ್ಲಿ ೧೯೮೪ನೆಯ ವರ್ಷ ನಡೆದ ಹೋಳಿಹುಣ್ಣಿಮೆಯಲ್ಲಿ ಪೋಲೀಸರು ವಿಶೇಷ ರೀತಿಯಿಂದ ಬಂದೋಬಸ್ತ ಮಾಡಿದರು. ರಂಗಪಂಚಮಿಯು ೨-೩ ದಿನಗಳ ಮುಂಚೆ ಕಮರೀಪೇಟೆಯಲ್ಲಿ ಒಂದು ಚಿಕ್ಕ ತಂಟೆ ಹಿಂದೂ ಮತ್ತು ಮುಸ್ಲೀಮರ ನಡುವೆ ಆಯಿತು. ಕೂಡಲೇ ಸುಮಾರು ಮುಸ್ಲೀಮ್ ಕೋಮಿನವರು ಬಂದು ಹಿಂದೂಗಳ ಅಂಗಡಿಗಳಿಗೆ ಕೊಳ್ಳಿ ಹೊಡೆಯುವಷ್ಟರಲ್ಲಿ ಸಕಾಲಕ್ಕೆ ಪೋಲೀಸರ ಆಗಮನದಿಂದ ಮುಂದಿನ ಘಟನೆಗಳು ನಡೆಯಲಿಲ್ಲ. ಆದರೆ ಇದರಿಂದ ಎರಡೂ ಕೋಮಿನವರು ಯಾವ ಕಾಲಕ್ಕೆ ಏನು ಮಾಡುವರೆಂಬ ಭಯದಿಂದ ಇರಲಿಕ್ಕೆ ಹತ್ತಿದರು. ವಿಶೇಷತಃ ಕಮರೀಪೇಟೆಯಲ್ಲಿರುವ ಎಸ್. ಎಸ್. ಕೆ. ಕೋಮಿನವರ ಮೇಲೆ ವಕ್ರ ದೃಷ್ಟಿ ಇದ್ದುದರಿಂದ ಪೋಲೀಸ ಅಧಿಕಾರಿಗಳು ಸಮೀಪದ ಮುಲ್ಲಾನ ಓಣಿ ಮತ್ತು ಕಮರೀಪೇಟೆಯಲ್ಲಿ ಜಾಗೃತರಾಗಿದ್ದರು. ದಿನಾಲೂ ಇಡೀ ರಾತ್ರಿ ಕಮರೀಪೇಟೆಯವರು ಆಳಿ-ಪಾಳಿಯಂತೆ ಜಾಗೃತರಾಗಿದ್ದರು. ಹೋಳಿಹುಣ್ಣಿಮೆಯ ನಿಮಿತ್ತ ಟಮಕಿ ಬಾರಿಸುತ್ತ ರಸ್ತೆಯಲ್ಲಿ ಅಲೆದಾಡುತಿದ್ದಾಗ್ಗೆ ಎಲ್ಲಿಂದಲೋ ರಾತ್ರಿ ಸುಮಾರು ಒಂದು ಘಂಟೆಗೆ ಕೆಲವು ಕಲ್ಲುಗಳು ಬೀಳಲಿಕ್ಕೆ ಹತ್ತಿದವು. ಕಮರೀಪೇಟೆಯವರು ಮುಲ್ಲಾನ ಓಣಿ ಕಡೆಯಿಂದಾ ಕಲ್ಲುಗಳು ಬರುವದನ್ನು ನೋಡಿ ತಾವು ಅವರ ಕಡೆಗೆ ಕಲ್ಲುಗಳನ್ನು ಒಗೆಯಹತ್ತಿದರು. ಕೂಡಲೇ ಪೋಲೀಸರು ಲಾಠಿ ಪ್ರಹಾರ ಮಾಡಿ ಹಿಂದೂಗಳನ್ನು ಚದುರಿಸಿದರು. ಇಷ್ಟರಲ್ಲಿ ಗವಿ ಓಣಿಯಲ್ಲಿರುವ ಎಸ್. ಎಸ್. ಕೆ. ಕೋಮಿನ ನಿವೃತ್ತ ಹೆಡ್‌ಕಾನಸ್ಟೇಬಲ್ ಮತ್ತು ಮೂರುಸಾವಿರಮಠದ ಹಿಂದೆ ಇರುವ ಇದೇ ಕೋಮಿಗೆ ಸೇರಿದ ಮನಿ ಮತ್ತು ತೋರವಿ ಹಕ್ಕಲ್‌ದಲ್ಲಿರುವ ಒಂದು ಟಿಂಬರ ಡಿಪೋಗೆ ಬೆಂಕಿ ಹಚ್ಚಿದ ವರದಿಗಳು ಬಂದವು.

ಇದನ್ನು ತಿಳಿದ ಕೂಡಲೇ ಮಾನ್ಯ ಮಂತ್ರಿ ಮಹೋದಯ ಶ್ರೀ ಬೊಮ್ಮಾಯಿ ಇವರು ಹುಬ್ಬಳ್ಳಿಗೆ ಆಗಮಿಸಿ ಪಾದಯಾತ್ರೆಯಿಂದ ದಂಗೆಯೆದ್ದ ಓಣಿಗಳಲ್ಲಿ ತಿರುಗಾಡಿ ಎರಡೂ ಕೋಮಿನವರಿಗೆ ಶಾಂತಿ ಕಾಪಾಡಲು ಬಿನ್ನವಿಸಿ ಶಾಂತಿ ಕಮೀಟಿಯನ್ನು ಸ್ಥಾಪಿಸಲು ಅಧಿಕಾರಿಗಳಿಗೆ ತಿಳಿಸಿ ಹೋದರು.

ಇದಾದ ನಂತರ ಎಲ್ಲವೂ ಇನ್ನು ಮುಂದೆ ಸರಿಹೋಗುತ್ತದೆ ಅಂತಾ ಭಾವಿಸಿದಾಗ ಶುಕ್ರವಾರ ತಾ. ೪-೫-೮೪ನೇ ದಿನದ ಮಧ್ಯಾಹ್ನ ಸುಮಾರಕ್ಕೆ ೧-೩೦ ಘಂಟೆಗೆ ಸುಮಾರು ಮುಸ್ಲೀಮ್ ಕೋಮಿನವರು ಹಿಂಡು-ಹಿಂಡಾಗಿ ಪೆಟ್ರೋಲ್ ಮತ್ತು ಚಿಮಣಿ ಎಣ್ಣೆಯಿಂದ ಮನೆ ಮತ್ತು ಅಂಗಡಿಗಳಲ್ಲಿ ಕೊಳ್ಳಿ ಹಚ್ಚಿ ಲೂಟಿ ಮಾಡಿದರು. ಈ

ಘಟನೆಗಳು ಪೂರ್ವದಿಂದ ಪಶ್ಚಿಮಕ್ಕೆ ಅಂದರೆ ಗಣೇಶ ಪೇಟೆಯಿಂದ ಹಳೇಹುಬ್ಬಳ್ಳಿವರೆಗೆ ಏಕ ಕಾಲಕ್ಕೆ ನಡೆದವು.

ಪೋಲೀಸ ಸ್ಟೇಶನಕ್ಕೆ ವರದಿ ಕಳಿಸಿದಾಗ ಮಧ್ಯಾಹ್ನ ಊಟಕ್ಕೆ ಪೋಲೀಸರು ಹೋಗಿದ್ದರಿಂದ ೮-೧೦ ಪೋಲೀಸರ ಹೊರತು ಹೆಚ್ಚಿಗೆ ಜನರು ಇರಲಿಲ್ಲ. ಸಾಯಂಕಾಲದ ವರೆಗೆ ಸುಮಾರು ೧ ಕೋಟಿ ಕಿಮ್ಮತ್ತಿನಷ್ಟು ಹಿಂದೂಗಳ ಆಸ್ತಿಪಾಸ್ತಿಗಳ ಲೂಟಿ ಮತ್ತು ಕೊಳ್ಳಿಯಿಂದ ಹಾನಿಯಾಯಿತು. ಶ್ರೀಮಾನ್ ಮಿರಜಿ ಏಡಿಶನಲ್ ಎಸ್. ಪಿ. ಯವರು ತಮಗೆ ಸಿಕ್ಕಷ್ಟು ಪೋಲೀಸರೊಂದಿಗೆ ಸ್ಥಳಕ್ಕೆ ಧಾವಿಸಿ ದೊಡ್ಡ ಪ್ರಮಾಣದಲ್ಲಿ ದಂಗೆ ನಡೆದದ್ದು ಕಂಡು ಗುಂಡು ಹಾರಿಸಿ ದಂಗೆಕೋರರಿಗೆ ಚದುರಿಸಿದರು. ಹೆಚ್ಚಿನ ಪೋಲೀಸರು ಬೆಳಗಾವಿಯಿಂದ ಮತ್ತು ಇತರ ಕಡೆಯಿಂದ ಆಗಮಿಸಿದರು.

ಮಾನ್ಯ ಡೆಪ್ಯೂಟಿ ಕಮೀಶನರ್ ಧಾರವಾಡ ಅವರು ೧೪೪ ಕ್ರಿ. ಪ್ರೊ. ಕೋ. ಪ್ರಕಾರ ೯ ಗಂಟೆಯಿಂದ ಬೆಳಗಿನವರೆಗೆ ಕರ್ಫ್ಯೂ ಆಜ್ಞೆ ಜಾರಿ ಮಾಡಿದರು. ಪೋಲೀಸರು ಸುಮಾರು ೩೮ ಗುಂಡುಗಳನ್ನು ಶಾಂತಿ ಸ್ಥಾಪಿಸಲಿಕ್ಕೆ ಹಾರಿಸಬೇಕಾಯಿತು. ನಡೆದ ದಂಗೆಯಲ್ಲಿ ೫ ಮಂದಿ ಮೃತರಾದರು ಮತ್ತು ಮೂವರು ದವಾಖಾನೆಯಲ್ಲಿ ಮೃತರಾದರು.

ಮುಸ್ಲೀಮ್ ಕೋಮಿನವರು ದಂಗೆಯಲ್ಲಿ ಮೃತನಾದ ಒಬ್ಬನ ಪಾರ್ಥಿವ ಶರೀರವನ್ನು ದೊಡ್ಡ ಮೆರವಣಿಗೆಯಿಂದ ಸ್ಮಶಾನಕ್ಕೆ ಒಯ್ಯುವಾಗ ಅಶಾಂತಿಯ ವಾತಾವರಣವು ಭಯಾನಕವಾಗಿತ್ತು. ಆದರೆ ಪೋಲೀಸ ಬಂದೋಬಸ್ತಿಯಿಂದ ಶಾಂತಿಯಿಂದ ಪಾರಾಯಿತು.

ಮೇಲೆ ನಮೂದ್ ಮಾಡಿದ ಲೂಟಿ ಮತ್ತು ಕೊಳ್ಳಿ ಹೊಡೆದ ಪರಿಣಾಮವಾಗಿ ಹಿಂದೂಗಳು ಸಹ ಮುಸ್ಲೀಮ್‌ರ ಕೆಲವು ಮನೆ ಮತ್ತು ಅಂಗಡಿಗಳಿಗೆ ಕೊಳ್ಳಿ ಹಚ್ಚಲು ಲೂಟಿ ಮಾಡಲು ಸುರುಮಾಡಿದರು ಮತ್ತು ಚಾಕುದಿಂದ ಇರಿದು ಕೊಂದ ಎರಡು-ಮೂರು ಘಟನೆಗಳು ನಡೆದವು. ಇದರಿಂದ ಗಂಭೀರ ಸ್ವರೂಪ ತಾಳಲು ಅವಕಾಶ ಕೊಡದೇ ಹಗಲು ಮತ್ತು ರಾತ್ರಿ ಕರ್ಫ್ಯೂ ಜಾರಿ ಮಾಡಿ ಶಾಂತಿಯನ್ನು ಕಾಪಾಡಲಾಯಿತು. ಹುಬ್ಬಳ್ಳಿ ಶಹರವು ಭಯಭೀತಿಯಿಂದ ವ್ಯಾಪಾರ ಉದ್ದಿಮೆಗಳು ನಿಂತುಹೋದವು. ಹೊರಗಿನಿಂದ ಊರಿಗೆ ಜನರು ಬರಲು ಅಂಜಲಿಕ್ಕೆ ಹತ್ತಿದರು. ರಸ್ತೆಗಳು ಜನ ಮತ್ತು ವಾಹನಗಳು ನಡೆಯದೇ ಬಣಬಣ ತೋರಿರುತ್ತಿತ್ತು. ಬಂದೋಬಸ್ತಗಾಗಿ ಎಂಟು ಕಾದಿಟ್ಟ ಪೋಲೀಸರು ೯ ಸಶಸ್ತ್ರ ಪೋಲೀಸ ದಳಗಳು ಮತ್ತು ಹೀಗೆ ಸುಮಾರು ೫೦೦ ಪೋಲೀಸರು ಅಗ್ನಿಶಾಮಕ ದಳಗಳು ವಾಹನಗಳು ಸಜ್ಜಾಗಿದ್ದವು

ಪ್ರತಿ ದಿನ ಏನಾದರೂ ಒಂದು ಸುಳ್ಳು ಸುದ್ದಿ ಹರಡಿಸಿ ಜನರಲ್ಲಿ ಭೀತಿ ಅಲೆಗಳನ್ನು ತರುತ್ತಿದ್ದರು.

ಇಂಥಹ ಭೀಕರ ಪರಿಸ್ಥಿತಿಗಳಲ್ಲಿ ಮೂರುಸಾವಿರಮಠದ ಜಗದ್ಗುರುಗಳು ಕೂಡಲೇ

ಮುಂದಾಗಿ ಶಾಂತಿ ಕಾಪಾಡಲು ಮುಸ್ಲೀಮ್ ಮತ್ತು ಹಿಂದೂಗಳ ಕೋಮಿನ ಪ್ರಮುಖರನ್ನು ಮತ್ತು ಅಧಿಕಾರಿಗಳನ್ನು ತಮ್ಮ ಮಠಕ್ಕೆ ಕರೆಯಿಸಿ ಒಳ್ಳೆಯ ಮನವಿ ಮಾಡಿ ಶಾಂತಿ ಸುವ್ಯವಸ್ಥೆಯನ್ನು ಕಾಪಾಡಲು ಅತ್ಯಂತ ಕಳಕಳಿಯಿಂದ ಅವರ ಮನಸ್ಸಿಗೆ ಬಿಂಬಿಸುವಂತೆ ಹೇಳಿದರು. ಹುಬ್ಬಳ್ಳಿಯ ಹೆಸರು ಕೆಡದಂತೆ ಎಲ್ಲ ಕೋಮಿನವರು ಸರ್ಕಾರದ ಅಧಿಕಾರಿಗಳ ಸಂಗಡ ಶಾಂತಿ ಸುವ್ಯವಸ್ಥೆ ಕಾಪಾಡಲು ಕಳಕಳಿಯಿಂದ ತಿಳಿಸಿದರು. ಇದರ ಪರಿಣಾಮ ಎಲ್ಲರ ಮನಸ್ಸಿಗೆ ಹಿಡಿಸಿ ಎಲ್ಲರೂ ಶಾಂತಿ ಕಾಪಾಡುವದಾಗಿ ಪ್ರತಿಜ್ಞೆ ಪೂರಕವಾಗಿ ವಚನ ವಿತ್ತರು. ಇದರ ಪರಿಣಾಮವಾಗಿ ಊರಲ್ಲಿ ಎಲ್ಲ ಹಿಂದೂ ಮತ್ತು ಮುಸ್ಲೀಮ ಕೋಮಿನವರು ಒಂದುಗೂಡಿ ಜಿಲ್ಲಾಧಿಕಾರಿಗಳು ಕಳೆದ ಶಾಂತಿ ಸಮಿತಿಗಳಲ್ಲಿ ಭಾಗವಹಿಸಿ ಶಾಂತಿ ಕಾಪಾಡಲು ಟೊಂಕ ಕಟ್ಟಿ ನಿಂತರು. ಸಂತೋಷದ ಸಂಗತಿಯೆಂದರೆ ಮಾತಾಡಿದಂತೆ ಎಲ್ಲರೂ ನಡಿದು ವಚನವನ್ನು ಪಾಲಿಸಿದರು. ನಮ್ಮ ಪ್ರಾಂತದ ಡೈರೆಕ್ಟರ ಜನರಲ್ ಆಫ್ ಪೋಲೀಸ ಶ್ರೀ ಗೌಡಾಚಾರ ಮತ್ತು ಮಾನ್ಯಮಂತ್ರಿ ಶ್ರೀ ಬೊಮ್ಮಾಯಿಯವರು ಹುಬ್ಬಳ್ಳಿಗೆ ಆಗಮಿಸಿ ಶಾಂತಿ ಸಮಿತಿ ಸೇರಿಸಿ ಶಾಂತಿ ಸುವ್ಯವಸ್ಥೆ ಕಾಪಾಡಲು ಬಿನ್ನವಿಸಿದರು.

ತಾ. ೧-೬-೧೯೮೮ನೆಯ ದಿವಸ ರಮಜಾನ ಹಬ್ಬದ ಮೂಲಕ ಮುಸ್ಲೀಮ್ ಬಾಂಧವರು ಪ್ರಾರ್ಥನೆಗಾಗಿ ಈದಗಾ ಮೈದಾನದಲ್ಲಿ ವಾಡಿಕೆಯಂತೆ ಸೇರಬೇಕಾಗಿತ್ತು. ಪುನಃ ಪೂಜ್ಯ ಜಗದ್ಗುರುಗಳು ಎರಡು ಕೋಮಿನವರಿಗೆ ಕರೆಯಿಸಿ ಶಾಂತಿ ಕಾಪಾಡಲು ಮನವಿ ಮಾಡಿದರು. ಅಂದು ಅವಿರತವಾಗಿ ಮಳೆ ಸುರಿದರೂ ಸಹ ಸಾವಿರಾರೂ ಮುಸ್ಲೀಮ್ ಬಾಂಧವರು ಸಾಮೂಹಿಕ ಪ್ರಾರ್ಥನೆಯನ್ನು ಈದ್‌ಗಾ ಮೈದಾನದಲ್ಲಿ ಶಾಂತವಾಗಿ ನೆರವೇರಿಸಿದರು. ಈ ಘಟನೆಯಿಂದ ನಗರದಲ್ಲಿ ನೆಮ್ಮದಿ ಮತ್ತು ವಿಶ್ವಾಸ ವಾತಾವರಣ ತಂದಿತು. ಮುಸ್ಲೀಮ ಮತ್ತು ಹಿಂದೂ ಜನರು ಪರಸ್ಪರ ಕೈ ಕುಲುಕಿಸಿ ಅಪ್ಪಿಕೊಂಡು ಸದ್ಭಾವನೆ ತೋರಿಸಿ ಸಂತೋಷದಿಂದ ಸೌಹಾರ್ದ ಭಾವನೆ ಮತ್ತು ಸದ್ಬುದ್ಧಿ ಪರಮಾತ್ಮನು ದಯಪಾಲಿಸಲೆಂದು ಪ್ರಾರ್ಥಿಸಿದರು. ಶ್ರೀಮಾನ್ ಗೂಡ್‌ವಾಲಾ ವಕೀಲರು ಈದ್‌ಗಾ ಮೈದಾನದಲ್ಲಿ ಪ್ರಾರ್ಥನೆಯ ನಂತರ ಎಲ್ಲ ಸಮಾಜದವರು ಪರಸ್ಪರ ಸದ್ಭಾವನೆಯಿಂದ ನಡೆಯುವಂತೆ ಅಲ್ಲಾನನ್ನು ಪ್ರಾರ್ಥಿಸಿದರು. ಅದರಂತೆ ಉಳಿದ ಹಿಂದೂ ಪ್ರಮುಖ ಬಾಂಧವರು ಸಹ ಅಣ್ಣ-ತಮ್ಮಂದಿರಂತೆ ಕೂಡಿ ನಡೆದು ಶಾಂತಿ ಕಾಪಾಡಲು ಮನವಿ ಮಾಡಿದರು.

ಪ್ರಾರ್ಥನೆಯ ನಂತರ ಹಿಂದೂ ಮತ್ತು ಮುಸ್ಲೀಮ್ ಪ್ರಮುಖರು ಪೂಜ್ಯ ಜಗದ್ಗುರುಗಳ ಮಠಕ್ಕೆ ಆಗಮಿಸಿ ಅವರ ಆಶೀರ್ವಾದದಿಂದ ಎಲ್ಲವೂ ಶಾಂತಿ ಮತ್ತು ಪ್ರೇಮದಿಂದ ತಮ್ಮ ಪ್ರಾರ್ಥನೆಯು ನಡೆದು ಹೋದ ಬಗ್ಗೆ ವಿವರಿಸಿದಾಗ ಜಗದ್ಗುರುಗಳಿಗೆ ಹಿಡಿಸಲಾರದಷ್ಟು ಆನಂದವಾಯಿತು. ಇದೇ ರೀತಿಯಾಗಿ ಇನ್ನು ಮುಂದೆಯೂ ಸಹ ಹಿಂದೂ ಮತ್ತು ಮುಸ್ಲೀಮ್ ಬಾಂಧವರು ಪರಸ್ಪರ ಹಬ್ಬಗಳಲ್ಲಿ ಭಾಗವಹಿಸಿ

ನಾವೆಲ್ಲರೂ ಸಂತೋಷದಿಂದ ಇರೋಣಂತಾ ಆಶೀರ್ವದಿಸಿದರು. ಅವರ ಈ ಆತ್ಮೀಯ ಮಾತುಗಳು ಮತ್ತು ಆನಂದದಿಂದ ಸೇರಿದ ಸನ್ನಿವೇಶವು ಅತ್ಯಂತ ಸೌಹಾರ್ದಯುತವಾಗಿತ್ತು. ಈ ಘಟನೆಯೂ ಯಾರು ಮರೆಯುವಂತೆ ಇಲ್ಲ. ಮಹಾಪೌರರಾದ ಶ್ರೀ ಯಾವಗಲ್‌ರವರು ತಮ್ಮ ಸ್ನೇಹ ಮತ್ತು ಪ್ರೀತಿಯ ದ್ಯೋತಕವಾಗಿ ಸಿಹಿ ಹಂಚಿದರು.

ಪೂಜ್ಯ ಜಗದ್ಗುರುಗಳು ಮಾಡಿದ ಉಪಕಾರಕ್ಕಾಗಿ ಮುಸ್ಲೀಮ್ ಬಾಂಧವರು ಅವರಿಗೆ ತಾ. ೧೩-೭-೧೯೮೭ ರಂದು ನೆಹರೂ ಕಾಲೇಜದಲ್ಲಿ ಅವರ ಸತ್ಕಾರ ಸಮಾರಂಭವನ್ನು ಏರ್ಪಡಿಸಿದರು.

ಇದೇ ರೀತಿಯಾಗಿ ಪೂಜ್ಯ ಜಗದ್ಗುರುಗಳು ಹಿಂದೂಗಳ ಹಬ್ಬಗಳಾದ ದಸರೇ, ಹೋಳಿಹುಣ್ಣಿವೆ ಮತ್ತು ಗಣೇಶೋತ್ಸವಗಳ ಕಾಲಕ್ಕೆ ಹಿಂದೂ-ಮುಸ್ಲೀಮ್ ಕೋಮಿನ ಕೆಲವು ಪ್ರಮುಖರಿಗೆ ಮತ್ತು ಅಧಿಕಾರಿಗಳಿಗೆ ತಮ್ಮ ಮಠಕ್ಕೆ ಕರೆಸಿಕೊಂಡು ಶಾಂತಿ ಕಾಪಾಡಲು ಮತ್ತು ಬಂಧು ಭಾವನೆಗಳಿಂದ ಎಲ್ಲರೂ ಭಾಗವಹಿಸಿ ಹಬ್ಬಗಳನ್ನು ಆಚರಿಸಲು ಆತ್ಮೀಯವಾಗಿ ಬುದ್ಧಿ ಮಾತುಗಳನ್ನು ಹೇಳಿದ ಪರಿಣಾಮವಾಗಿ ಇವತ್ತಿನವರೆಗೂ ಅಶಾಂತಿಯ ದುರ್ಘಟನೆಗಳು ನಡೆಯದಂತೆ ಹುಬ್ಬಳ್ಳಿಯ ನಾಗರಿಕರು ನಡೆದು ಬರುತ್ತಲಿದ್ದಾರೆ. ಪೂಜ್ಯ ಜಗದ್ಗುರುಗಳು ಹುಬ್ಬಳ್ಳಿಯ ನಾಗರಿಕರಿಗೆ ಮಾಡಿದ ಉಪಕಾರ ವರ್ಣಿಸಲು ಶಬ್ದಗಳು ಸಾಲುವುದಿಲ್ಲ. ಅವರಿಗೆ ಅನೇಕ ಬಿಡುವಿಲ್ಲದ ಕಾರ್ಯಕ್ರಮಗಳಿದ್ದರೂ ಮರೆಯದೇ ಹಿಂದೂ-ಮುಸ್ಲೀಮ್ ಹಬ್ಬಗಳು ನಡೆಯುವ ಮೊದಲು ತಾವೇ ಮುಂದಾಗಿ ಪ್ರಮುಖರಿಗೆ ಅಧಿಕಾರಿಗಳಿಗೆ ಮಠಕ್ಕೆ ಕರೆಸಿಕೊಂಡು ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ. ಶ್ರೀ ಗುರುಸಿದ್ಧೇಶ್ವರನು ಜಗದ್ಗುರುಗಳ ಹೃದಯದಲ್ಲಿ ಹೊಕ್ಕು ಅವರಿಗೆ ಶಾಂತಿ ಕಾಪಾಡಲು ಮುಂದಾಳುತನ ವದಗಿಸಿ ಹುಬ್ಬಳ್ಳಿ ನಾಗರಿಕರಿಗೆ ಮಾಡಿದ ಉಪಕಾರಕ್ಕೆ ನಾವೆಲ್ಲ ನಾಗರಿಕರು; ಶ್ರೀ ಗುರುಸಿದ್ಧೇಶ್ವರನಿಗೆ ಮತ್ತು ಜಗದ್ಗುರುಗಳಿಗೆ ವಂದಿಸೋಣ.

ಪೂಜ್ಯ ಜಗದ್ಗುರುಗಳು ಬೆಳಗಿನ ಪೂಜೆ ಪುನಸ್ಕಾರಗಳನ್ನು ಮುಗಿಸಿ ಸುಮಾರು ೧೦ ಗಂಟೆಯಿಂದ ಕೆಲವು ಸಾರಿ ಮಧ್ಯರಾತ್ರಿಯವರೆಗೆ ವಿಶ್ರಾಂತಿ ಇಲ್ಲದೇ ಅವಿರತವಾಗಿ ಭಕ್ತರಿಗೆ ಭೆಟ್ಟಿಕೊಟ್ಟು ಆಶೀರ್ವದಿಸುವದು ಮತ್ತು ಮಠದಿಂದ ನಡೆಯುವವದರ ಶಾಲೆ-ಕಾಲೇಜುಗಳ ಬಗ್ಗೆ ಮಾರ್ಗದರ್ಶನ ಮಾಡುವುದಕ್ಕೆ ಹಗಲಿರುಳು ಶ್ರಮಿಸುತ್ತಿದ್ದಾರೆ. ಸದಾ ಸಾರ್ವಜನಿಕರ ಕಲ್ಯಾಣಕ್ಕಾಗಿ ಎಡೆಬಿಡದೆ ಕಾರ್ಯಕರ್ತರಾಗಿರುತ್ತಾರೆ. "ಸರ್ವೇ ಭವಂತು ಸುಖಿನಃ ಸರ್ವೆ ಸಂತು ನಿರಾಮಯಾಃ, ಸರ್ವೆ ಭದ್ರಾನ್ ಪಶ್ಯಂತು. ಮಾ ಕಶ್ಚಿದ್ ದುಃಖ ಬಾಕ್ ಬವೇತ್" ಅಂಬುವ ಮಂತ್ರವನ್ನು ಅವರ ಜೀವನದ ಕಣಕಣಗಳಲ್ಲಿ ಕಾರ್ಯರೂಪದಲ್ಲಿ ಮಿನುಗುತ್ತಿರುವದು ನಾವು ನೋಡುತ್ತೇವೆ. ಅವರು ಮಹಾ ದಯಾಳುಗಳು. ತಮ್ಮ ಆಯುಷ್ಯವನ್ನು ಜನರ ಸುಖಕ್ಕಾಗಿ ಮುಡುಪಾಗಿಟ್ಟಿದ್ದಾರೆ.

ಇಂತಹ ಕರುಣಾಳು ಮೂರ್ತಿಗಳು ಕರ್ನಾಟಕಕ್ಕೆ ಮತ್ತು ವಿಶೇಷವಾಗಿ ಹುಬ್ಬಳ್ಳಿ ನಾಗರಿಕರಿಗೆ ಲಭಿಸಿದ್ದು ನಮ್ಮ ಭಾಗ್ಯವೆಂದೇ ತಿಳಿಯಬೇಕು.

ಆದ್ದರಿಂದ ಪೂಜ್ಯ ಜಗದ್ಗುರುಗಳವರಿಗೆ ಆಯುರಾರೋಗ್ಯವನ್ನು ದಯಪಾಲಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸಿ ಈ ಲೇಖನವನ್ನು ಮುಗಿಸುತ್ತೇನೆ.

ಪರಮಪೂಜ್ಯ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳಿಗೆ ಜಯವಾಗಲಿ.

ಜಯಹಿಂದ ಹರಿ ಓಂ

□ □

ವೈದ್ಯಕೀಯ ರಂಗಕ್ಕೆ ಪೂಜ್ಯ ಜಗದ್ಗುರುಗಳ ಕೊಡುಗೆ

—ಡಾ. ಆರ್. ಬಿ. ಪಾಟೀಲ

ಜಗದ್ಗುರುಗಳನ್ನು ನಾ ಕಂಡದ್ದು ಸಾವಿರದಾ ಒಂಬೈನೂರಾ ಐವತ್ತೇಳರಲ್ಲಿ. ಇನ್ನೂ ಈ ಮಠದ ಪೀಠಾರೋಹಣವಾಗದ ಹೊಸದೇ ಅವರಲ್ಲಿದ್ದ ತೇಜಸ್ಸು, ಅನುಕಂಪ, ನಗೆಮುಖ ನನ್ನನ್ನು ಆಕರ್ಷಿಸಿತು. ಅವರು ಹುಬ್ಬಳ್ಳಿಗೆ ಬಂದಾಗಿನಿಂದ ಅನೇಕ ಬಾರಿಗೆ ಅವರ ದರ್ಶನವಾಗಿದೆ. ಆಶೀರ್ವಾದ ಪಡೆದಿದ್ದೇನೆ. ಅದೇ ಹಸನ್ಮುಖಿ, ಅದೇ ಆತ್ಮೀಯತೆ, ಅದೇ ಉತ್ಸಾಹ, ಶಿಕ್ಷಣ, ವಿಜ್ಞಾನ, ಆಧ್ಯಾತ್ಮಿಕ, ಧಾರ್ಮಿಕ, ಔದ್ಯಮಿಕ ಮುಂತಾದ ರಂಗಗಳಿಗೆ ಉತ್ತರ ಕರ್ನಾಟಕಕ್ಕೆ ಅವರ ಕೊಡುಗೆಗಳು ಚಿರಸ್ಮರಣೀಯ. ಅದರಂತೆ ವೈದ್ಯಕೀಯ ರಂಗಕ್ಕೂ ಪ್ರೋತ್ಸಾಹವಿತ್ತಿದ್ದಾರೆ. ೨೫ ರಿಂದ ೩೦ ಎಂ.ಬಿ.ಬಿ.ಎಸ್. ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ ನೀಡಿ ಬಡ ವಿದ್ಯಾರ್ಥಿಗಳಿಗೆ ಪ್ರೋತ್ಸಾಹವಿತ್ತಿದ್ದಾರೆ. ಧಾರವಾಡದಲ್ಲಿ ಆಯುರ್ವೇದ ಹಾಸ್ಪಿಟಲಿಗೆ ಮೂರು ಎಕರೆ ಉಚಿತ ಸ್ಥಳ ನೀಡಿ ಅದು ಬೆಳೆಯಲು ಸಹಾಯಕರಾಗಿದ್ದಾರೆ. ಉತ್ತರ ಕರ್ನಾಟಕದ ಹೆಮ್ಮೆಯ ಸಂಸ್ಥೆಯಾದ ಹುಬ್ಬಳ್ಳಿಯ ಕರ್ನಾಟಕ ಕ್ಯಾನ್ಸರ ಹಾಸ್ಪಿಟಲನ್ನು ಉದ್ಘಾಟಿಸಿ ಅನ್ನದಾನದ ವಿಭಾಗಕ್ಕೆ ಸಾಕಷ್ಟು ದಾನ ನೀಡಿ ಒಂದು ದಶಕದ ಮೇಲ್ಪಟ್ಟು ಸುಗಮವಾಗಿ ಸಾಗಲು ಪ್ರೋತ್ಸಾಹ ನೀಡಿದ್ದಾರೆ. ಅವರ ಪಾದಧೂಳಿಯಲ್ಲೊಂದು ದೈವೀಶಕ್ತಿ ಇದೆ. ನಮಗೊಂದು ಅನುಭವ ಎತ್ತರದ ಗುಡ್ಡದ ಮೇಲೆ ಎದ್ದುನಿಂತ ಸಂಸ್ಥೆಗೆ ನೀರಿನ ಕೊರತೆ. ಗುರುಗಳು ಅಲ್ಲಿಗೆ ಆಗಮಿಸಿ, ಆಶೀರ್ವದಿಸಿದ ದಿನವೇ ರಿಗ್ಗಬೋರಿನಲ್ಲಿ ಸಾಕಷ್ಟು ನೀರು! ಅದೇ ತರಹದ ಜಲ. ಹನ್ನೆರಡು ವರುಷವಾದರೂ ಬತ್ತದ ಜಲ!

ಉತ್ತರ ಕರ್ನಾಟಕದ ಎಲ್ಲಕ್ಕೂ ಅಗ್ರಗಣ್ಯ ಕೊಡುಗೆ ಎಂದರೆ ಘಟಪ್ರಭಾದ ಕೋ-ಆಪರೇಟಿವ್ ಹಾಸ್ಪಿಟಲ್. ಹಳ್ಳಿಯ ಬಡ ಜನತೆಗೆ ಬಹಳ ಉಪಯುಕ್ತವಾದ ದೊಡ್ಡದೊಂದು ಸುಸಜ್ಜಿತ ಹಾಸ್ಪಿಟಲ್. ಅವರು ಬಂದಾಗ ಕೇವಲ ೨೫ ಹಾಸಿಗೆ ಉಳ್ಳದ್ದು ಈಗ ೧೫೦ರ ಮೇಲ್ಪಟ್ಟು ಹಾಸಿಗೆಗಳ ವಿಸ್ತಾರವಾಗಿ, ಸುಂದರವಾಗಿ ಬೆಳೆದುನಿಂತಿದೆ. ಅದಕ್ಕೆ ಆಧಾರಸ್ತಂಭವೇ ಗುರುಗಳು. ನನಗೆ ಆ ಹಾಸ್ಪಿಟಲನ್ನು ನೋಡಲೊಂದು ಸುಸಂಧಿ ಒದಗಿತ್ತು. ಹಣದ ಅಭಾವ! ಎಲ್ಲ ಸದಸ್ಯರ ಸಂಗಮವಾದ ಸಮಯದಲ್ಲಿ ಜಗದ್ಗುರುಗಳ ಒಂದು ವಾಕ್ಯ ಸಾಕು. ೨-೩ ಲಕ್ಷಕ್ಕೂ ಅಧಿಕ ಹಣ ಸಂಗ್ರಹವಾದದ್ದನ್ನು ಕಂಡು ನನಗೊಂದು ಆನಂದ; ಆಶ್ಚರ್ಯ!

ಇಂಥ ಘಟನೆಗಳು ಜನರಲ್ಲಿ ಅವರಲ್ಲಿರುವ ಅಪಾರ ಭಕ್ತಿ, ಅಭಿಮಾನ ಹಾಗೂ ನಂಬುಗೆಗಳನ್ನು ಎತ್ತಿ ತೋರಿಸಿದವು. ಹಣದ ಸದುಪಯೋಗ, ಪ್ರಾಮಾಣಿಕ, ವಿತರಣೆ

ಮಾಡಿದರೆ ಕೊಡುವ ದೊರೆಗಳಿಗೆ ಕಡಿಮೆಯಿಲ್ಲ ಎಂಬ ಮಾತು ನನಗೆ ಪೂಜ್ಯ ಜಗದ್ಗುರುಗಳ ಜೀವನ ಪುಟದಿಂದ ಅರ್ಥವಾಯಿತು.

ಈ ಹಾಸ್ಪಿಟಲಿನಲ್ಲಿ ಎಲ್ಲ ವಿಭಾಗಗಳಿವೆ ಶಸ್ತ್ರಚಿಕಿತ್ಸೆ, ಸ್ತ್ರೀ ರೋಗ, ಔಷಧಿ, ಎಲುವು ಕೀಲುಗಳ, ಮಕ್ಕಳ ಮುಂತಾದ ವಿಭಾಗಗಳು ಒಳ್ಳೇ ಸ್ಫೂರ್ತಿಯಿಂದ ಬಡರೋಗಿಗಳಿಗೆ ಸ್ವಲ್ಪೇ ವೆಚ್ಚದಲ್ಲಿ ವೈದ್ಯಕೀಯ ಸಲಹೆ ನೀಡುತ್ತಿವೆ ಎಲ್ಲ ತರಹದ ದೊಡ್ಡ ದೊಡ್ಡ ಆಪರೇಶನ್ ಯಶಸ್ವಿಯಾಗಿ ಪೂರೈಸಿ ಸಂಸ್ಥೆಗೆ ಒಳ್ಳೇ ಹೆಸರು ತಂದಿದ್ದಾಗಿವೆ. ಕ್ಷಯರೋಗದ ವಿಭಾಗ ಅನುಕರಣೀಯವಾಗಿದೆ. ೫೦ ರಿಂದ ೬೦ ರೋಗಿಗಳಿಗೆ ಉಚಿತ ಅನ್ನದಾನ ೫-೬ ವರುಷಗಳಿಂದ ನೀಡಲಾಗುತ್ತದೆ. ಬಡವರಿಗಿದೊಂದು ವರದಾನ!

ಇತ್ತಿತ್ತಲಾಗಿ ನರ್ಸಿಂಗ ಟ್ರೇನಿಂಗ ಸುರುವಾಗಿ ೨೫ ರಿಂದ ೩೦ ವಿದ್ಯಾರ್ಥಿಗಳು ಒಳ್ಳೇ ಶಿಕ್ಷಣ ಪಡೆದು ಗ್ರಾಮ ನಿವಾಸಿಗಳಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಜಗದ್ಗುರುಗಳ ಪ್ರೋತ್ಸಾಹದಿಂದ ಈ ಸಂಸ್ಥೆ ಮಹಾನ್ ಸಂಸ್ಥೆಯಾಗಿದೆ ದಿನೇ ದಿನೇ ಹೆಚ್ಚೆಚ್ಚು ಬೆಳೆದು ಹೆಮ್ಮರವಾಗುವದರಲ್ಲಿ ಸಂದೇಹವಿಲ್ಲ.

ಆಧ್ಯಾತ್ಮ ಜೀವಿಗಳೂ ಸಾಹಿತಿಗಳೂ ಲೋಕಹಿತಚಿಂತಕರೂ ಆದ ಪೂಜ್ಯರು ವೈದ್ಯಕೀಯ ರಂಗದಲ್ಲಿ ಸಾಧಿಸಿದ, ಸಲ್ಲಿಸಿದ ಅಖಂಡ ಸೇವೆ ಅಸದೃಶವಾದದ್ದು. ಮುಖ್ಯವಾಗಿ ಅವರಲ್ಲಿ ಮಾನವೀಯ ಕಂಪನವಿದೆ. ಅವರಿಗೆ ಜಾತಿ ಮುಖ್ಯವಲ್ಲ. ಜನಾಂಗ ಮುಖ್ಯ. ಸಕಲರ ಸೇವೆಯೇ ಶಿವಪೂಜೆಯೆಂದು ಅಖಂಡವಾಗಿ ನಂಬಿದ ಇಂಥ ಪೂಜ್ಯರು ಕರ್ನಾಟಕಕ್ಕೆ ಮಾತ್ರವಲ್ಲ ಸಮಗ್ರ ಭಾರತಕ್ಕೆ ಬೇಕು. ದೇಶ ಇಂಥ ಶಿವಾನುಭವಿಗಳ ಲೋಕಸೇವೆಯಿಂದ ಮರಳಿ ಸತ್ಯಕೈಲಾಸವಾಗಲೆಂದು ಹೃದಯಾರೆ ಹಾರೈಸುತ್ತೇನೆ.

ಇಂದು ಸರ್ವರ ಸಹಯೋಗದಿಂದ ವಿಶ್ವ ಪರಿವರ್ತನೆಯ ದಾರಿಯಲ್ಲಿ ನಾವು ಸಾಗಿದ್ದೇವೆ. ಈ ದಾರಿಯಲ್ಲಿ ಸಾಗಿರುವ ದುಡಿಮೆಗಾರರಾದ ಪೂಜ್ಯ ಜಗದ್ಗುರುಗಳು ಸಮಾಜದ ಸಮತೋಲನ ಕಾಯ್ದುಕೊಂಡಿದ್ದಾರೆ. ಕರ್ತವ್ಯ ಪ್ರಜ್ಞೆಯಲ್ಲಿ ಶಿವ ಪ್ರಜ್ಞೆಯನ್ನು ಅರಳಿಸಿ ವ್ಯಕ್ತಿ ಪರಿವರ್ತನೆ (Individual Transformation) ದಿಂದ ವಿಶ್ವ ಪರಿವರ್ತನೆ (International Transformation) ಮತ್ತು ಮೂರುಸಾವಿರಮಠವು ಮುನ್ನಡೆದು ಈ ಧರಣಿಯಲ್ಲಿ ಸತ್ಯಯುಗದ ಬೆಳದಿಂಗಳನ್ನು ಹರಡಲೆಂದು ಹಾರೈಸುತ್ತೇನೆ.

ಸಾಹಿತ್ಯ ಕ್ಷೇತ್ರಕ್ಕೆ ಜಗದ್ಗುರುಗಳ ಕೊಡುಗೆ

—ಪ್ರೊ. ಎಸ್. ಎಸ್. ಭೂಸರೆಡ್ಡಿ

ಆಧುನಿಕ ಭಾರತೀಯ ಆಧ್ಯಾತ್ಮಿಕ ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶೇಷವಾಗಿ ನವ ಮನ್ವಂತರದ ಕರ್ನಾಟಕದ ಧಾರ್ಮಿಕೇತಿಹಾಸದಲ್ಲಿ ಅಪೂರ್ವ ಸೇವೆ ಸಲ್ಲಿಸುತ್ತಿರುವ ಅಪರೂಪದ ವಿರಳ ಧಾರ್ಮಿಕ ಜಾಗೃತ ವೀರಶೈವ ಪೀಠಗಳಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠವೂ ಒಂದಾಗಿದೆ. ಜಾಗತಿಕ ಧಾರ್ಮಿಕ ಕ್ಷೇತ್ರದಲ್ಲಿ ವಿಶಿಷ್ಟಸ್ಥಾನ ಪಡೆದಿದೆ. ಹನ್ನೆರಡನೆಯ ಶತಮಾನದಲ್ಲಿ ಬಾಳಿ ಬೆಳಗಿದ ಬಸವಾದಿ ಪ್ರಮಥ ಪುಂಗವರ ಮಹಾಕ್ರಾಂತಿಯ ಅಮೃತ ಫಲವಾಗಿ ವೀರಶೈವ ಧರ್ಮಕ್ಕೆ ಭದ್ರವಾದ ನೆಲೆಯುಂಟಾಯಿತು. ವಿಶ್ವವಿನೂತನವಾದ ಮಾನವೀಯ ಮೌಲಿಕ ಚಿರಂತನ ಮೌಲ್ಯಗಳನ್ನು ತಮ್ಮ ಆಚಾರ–ವಿಚಾರ ನಡೆ–ನುಡಿಗಳ ಸುಂದರ ಸಮನ್ವಯದ ಮೂಲಕ ಸಮಗ್ರ ಲೋಕದ ಜನತೆಯ ಮನಸ್ಸನ್ನು ಲೋಹ ಚುಂಬಕದಂತೆ ಆಕರ್ಷಿಸಿದರು. ಕಲ್ಯಾಣದ ಅನುಭವ ಮಂಟಪದ ಕೀರ್ತಿವಾರ್ತೆಯನ್ನು ಕೇಳಿ ದೇಶ–ವಿದೇಶಗಳಿಂದ ಜಿಜ್ಞಾಸುಗಳು ಆಗಮಿಸಿದರು. ಜಾತಿಮತವೆನ್ನಲಿಲ್ಲ, ವೇಷಭಾಷೆವೆನ್ನಲಿಲ್ಲ, ದೇಶಕೋಶವೆನ್ನಲಿಲ್ಲ, ಕೇವಲ ಆತ್ಮಜ್ಞಾನ ಪಡೆಯುವ ಹಿರಿದಾದ ಹಂಬಲವೇ ಅವರೆಲ್ಲರ ಏಕಮೇವ ಗುರಿಯಾಗಿತ್ತು. ಅನುಭವ ಮಂಟಪದ ಚಿಂತನ–ಮಂಥನದಿಂದ ಹೊರಹೊಮ್ಮಿದ ಮಹತ್ತ್ವದ ತತ್ತ್ವಗಳಾದ ಏಕದೇವೋಪಾಸನೆ, ಮಹಿಳಾ ವಿಮೋಚನೆ, ಸಮಾನತೆ, ಸಹೋದರತೆ ಸ್ವಾತಂತ್ರ್ಯತೆ, ವಿಶ್ವಬಾಂಧವ್ಯ, ಆರ್ಥಿಕಸಮಾನತೆ, ಕಾಯಕ ಸಿದ್ಧಾಂತ, ದಾಸೋಹಂಭಾವನೆ, ಮೊದಲಾದ ತತ್ತ್ವಗಳಿಂದ ಜಾಗತಿಕ ದಾರ್ಶನಿಕ ಲೋಕದಲ್ಲಿ ಹೊಸದೊಂದು ಅಧ್ಯಾಯವನ್ನೇ ನಿರ್ಮಿಸಿದ ಕೀರ್ತಿ ಅವರದಾಗಿದೆ. ಮಾನವನು ಮಹಾಮಾನವನಾಗುವ ದೇವಮಾನವನಾಗುವ ಮಾರ್ಗದರ್ಶನ ಸೂತ್ರಗಳನ್ನು ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಮೂಲಕ ಪ್ರತಿಪಾದಿಸಿದ ತತ್ತ್ವಗಳು ಸರ್ವಮಾನ್ಯತೆಯನ್ನು ಪಡೆದವು. ಮಹಾದಾರ್ಶನಿಕರ ಮನಸ್ಸನ್ನು ಸೆಳೆದವು. ಇದರಿಂದಾಗಿ ಅಪಾರವಾದ ವಚನಸಾಹಿತ್ಯ ಸೃಷ್ಟಿಯಾಯಿತು. ಜೀವನದ ಸಮಸ್ತ ಸಮಸ್ಯೆಗಳನ್ನು, ಬರುವ ಎಡರು-ತೊಡರುಗಳನ್ನು ತಾಪತ್ರಯಗಳನ್ನು ದೂರಮಾಡಿ ಬಾಳಿಗೆ ಬೆಳದಿಂಗಳನ್ನು ತೋರುವ ವಿಚಾರಶ್ರೇಣಿಯನ್ನು ಜನಸಾಮಾನ್ಯರ ಭಾಷೆಯಲ್ಲಿಯೇ ರೂಪಿಸಿದರು. ಅಂತೆಯೇ ವಚನಸಾಹಿತ್ಯವು ಜಾಗತಿಕ ಸಾಹಿತ್ಯಲೋಕದಲ್ಲಿ ಅಪೂರ್ವವಿರಳ ಸಾಹಿತ್ಯಪ್ರಕಾರವಾಯಿತು. ತನ್ಮೂಲಕ ವೀರಶೈವ ಧರ್ಮವು ಆಚಾರ ಪ್ರಧಾನವಾದ ಹೃದಯಪ್ರಧಾನವಾದ ಮಾನವ ಧರ್ಮವಾಯಿತು. 'ಜಗತ್ತಿನಲ್ಲಿ ದೇವರನ್ನು ಕೈಯಲ್ಲಿ ಕೊಟ್ಟ ಧರ್ಮ

ಯಾವುದಾದರೂ ಇದ್ದರೆ, ಅದೇ ವೀರಶೈವ ಧರ್ಮ' ಎಂದ ರಂ. ರಾ. ದಿವಾಕರರ ಮಾತು ಇಲ್ಲಿ ಗಮನಿಸಬಹುದು. ಕಲ್ಯಾಣಕ್ರಾಂತಿಯ ನಂತರ ಶರಣ–ಶರಣೆಯರೆಲ್ಲ ದಿಕ್ಕುದಿಕ್ಕಿಗೆ ಚದುರಿಹೋದರು. ಅದರಲ್ಲೊಂದು ಗುಂಪು ಚನ್ನಬಸವಣ್ಣನವರ ನೇತೃತ್ವದಲ್ಲಿ ಅಕ್ಕ ನಾಗಮ್ಮ, ಮಡಿವಾಳಮಾಚಿದೇವ, ಗಂಗಾಂಬಿಕೆ, ಸುಲಿಯಚಂದಯ್ಯ, ಕೂಗಿನ ಮಾರಿ ತಂದೆ, ಸೊಡ್ಡಳಬಾಚರಸ, ಕಿನ್ನರಿಬೊಮ್ಮಯ್ಯ, ರುದ್ರಮುನಿದೇವ, ಹಡಪದ ರೇಚಯ್ಯ ಮೇದಾರಕೇತಯ್ಯ ಮೊದಲಾದವರು ಉಳವಿಯ ಮಾರ್ಗವಾಗಿ ಹೊರಟರಷ್ಟೆ; ಹಾಗೆ ಬಂದವರನ್ನು ರಕ್ಷಣೆ ಪೋಷಣೆ ಮಾಡಿದ ಮಠವೇ ಮೂರುಸಾವಿರಮಠ; ಈ ಮಠದ ಮಹಾಮಹಿಮರು ಗುರುಸಿದ್ಧೇಶ್ವರರು. ಜನತೆಯ ಹೃದಯದಲ್ಲಿ ಇಂದಿಗೂ ಹುಚ್ಚ ನೆಂದೇ ಪ್ರಚಲಿತವಿದೆ. ಅಂದು ಅದು ವಿಶಾಲವಾದ, ನಿರ್ಜನವಾದ ರಮ್ಯಮನೋಹರ ವಾದ ಪುಣ್ಯ ತಾಣವಾಗಿತ್ತು. ಗುರುಸಿದ್ಧೇಶ್ವರನ ತಪೋಬಲದಿಂದ ಅದೊಂದು ಅವಿಮುಕ್ತ ಕ್ಷೇತ್ರವಾಯಿತು. ಶರಣರು ಹೊತ್ತುತಂದ ತಾಡೋಲೆಗಳನ್ನು ಗುಪ್ತವಾಗಿಟ್ಟ ಸ್ಥಳವೇ ಓಲೆಯಮಠ ಎಂದೇ ಕರೆಯಲಾಗುತ್ತಿದೆ. ಇದೀಗ ಅಲ್ಲೊಂದು ಸಮಗ್ರ ವೀರಶೈವ ಸಾಹಿತ್ಯವನ್ನು ಕುರಿತಾದ ಗ್ರಂಥಗಳ ಪ್ರಾಚೀನ ತಾಡೋಲೆಗಳ, ಮಹತ್ತ್ವದ ಕಡತಗಳ,ಹಸ್ತ ಪ್ರತಿಗಳ ಬೃಹತ್ ಗ್ರಂಥಾಲಯವಾಗಿ ರೂಪುಗೊಳ್ಳುತ್ತಲಿದೆ. ಅದರೊಂದಿಗೆ ಭವ್ಯವಾದ ಕಲ್ಯಾಣಮಂಟಪವೂ ರಚನೆಗೊಳ್ಳುತ್ತಿದೆ. ಇಂಥ ಉಜ್ವಲ ಪರಂಪರೆಯನ್ನು ರೋಮಾಂಚಕ ಇತಿಹಾಸವನ್ನು ಬಳಸಿಕೊಂಡು ಬೆಳೆಸಿಕೊಂಡು ಬಂದ ಮೂರುಸಾವಿರಮಠದ ಪ್ರಾಚೀನತೆ ಯೊಂದಿಗೆ ಅರ್ವಾಚೀನತೆಯ ಇತಿಹಾಸವೂ ಆಧುನಿಕ ಕರ್ನಾಟಕದ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಇತಿಹಾಸದಲ್ಲಿ ಒಂದು ಅಪೂರ್ವವಾದ ದಾಖಲೆಯನ್ನೇ ನಿರ್ಮಿಸಿದೆ. ಸುವರ್ಣ ಮಯ ಸಂಪುಟವಾಗಲಿದೆ.

ಹುಬ್ಬಳ್ಳಿಯ ಮಹಾನಗರದ ಹೃದಯಸ್ಥಾನದಲ್ಲಿ ಹಬ್ಬಿ ಹರಡಿ ದಾಂಗುಡಿಯಿಟ್ಟ ಮೂರುಸಾವಿರಮಠದ ದ್ವಾರಬಾಗಿಲ ಷಟ್‌ಸ್ಥಲಗಳ ಸಂಕೇತವನ್ನೇ ಹೊತ್ತುನಿಂತಂತ ನಗರಕ್ಕೆ ಶಿಖರಪ್ರಾಯವಾಗಿ ಶೋಭಿಸುತ್ತದೆ. ಗೋಪುರದ ಮೇಲ್ಭಾವಣಿಯ ನಾಲ್ಕೂ ನಿಟ್ಟಿನಲ್ಲಿಯೂ ಭವ್ಯವಾದ ಗಡಿಯಾರಗಳು ಭಕ್ತಿಯೋಗದ ಪ್ರಣವಾಕಾರದ ಗಂಟೆಯನ್ನು ಬಾರಿಸುತ್ತ ಜನಮನದಲ್ಲಿ ನಿರಂತರ ಜಾಗೃತಿಯನ್ನುಂಟು ಮಾಡುವ ಸಂಕೇತಗಳಾಗಿವೆ. ಮೂರುಸಾವಿರಮಠವು ವೀರಶೈವಮಠವಾದರೂ ಸರ್ವಧರ್ಮ ಸಮನ್ವಯದ ತವರುಮನೆ ಯಾಗಿದೆ. ಆಶ್ರಯತಾಣವಾಗಿದೆ. ಸಕಲ ಜಾತಿಯ ಜನರೂ ಭಯಭಕ್ತಿಯಿಂದ ಕರ್ತೃ ಗದ್ದುಗೆಗೆ ನಡೆದುಕೊಳ್ಳುತ್ತಿರುವುದೇ ಈ ಮಾತಿಗೆ ನಿದರ್ಶನವಾಗಿದೆ. ಮಹಾಮಹಿಮನಾದ ಗುರುಸಿದ್ಧೇಶ್ವರನ ನಿರ್ವಿಕಲ್ಪ ಸಮಾಧಿಯು 'ನಿಷ್ಠೆಯಿಂದ ನಡೆದುಕೊಳ್ಳುವ ಭಕ್ತರಿಗೆ ಕಾಮಧೇನು, ಕಲ್ಪವೃಕ್ಷ ಚಿಂತಾಮಣಿಯಾಗಿದೆ.' ನಾಡಿನ ಮೂಲೆ ಮೂಲೆಗಳಿಂದ ಭಕ್ತಾ ದಿಗಳು ಪ್ರವಾಹ ರೂಪವಾಗಿ ಪ್ರತಿನಿತ್ಯ ಸ್ವಾಮಿಗಳ ದರ್ಶನಕ್ಕಾಗಿ ಹಾತೊರೆದು ವರ್ಷ ದುದ್ದಕ್ಕೂ ಬಂದೇ ಬರುತ್ತಾರೆ. ತಮ್ಮ ಮನದ ಸಂಕಲ್ಪಗಳನ್ನು ಈಡೇರಿಸಿಕೊಳ್ಳುತ್ತಾರೆ.

ಶ್ರೀ ಮಠದ ಕೀರ್ತಿಪತಾಕೆಯನ್ನು ಎತ್ತಿ ಹಿಡಿಯುವ ಅನೇಕ ಅನನ್ಯಸದೃಶ್ಯವಾದ ಅದ್ಭುತ ಸಹಜ ಲೀಲೆಗಳು ಜರುಗುತ್ತಿವೆ. ಭಕ್ತರ ಬಂಧುವಾಗಿ ಕಾರುಣ್ಯಸಿಂಧುವಾಗಿ ಕರುಣಾಳುವಾಗಿ ಕೈಹಿಡಿದು ಮುನ್ನಡೆಸುವ ಮಹಾಚೈತನ್ಯ ಶಕ್ತಿಯೇ ಮಹಾಮಹಿಮ ಗುರುಸಿದ್ಧ ಶಿವಯೋಗಿಗಳು. ಅಂದಿನಿಂದ ಇಂದಿನವರೆಗೂ ಬೆಳೆದುಬಂದ ಶ್ರೀಮಠದ ಉಜ್ವಲ ಪರಂಪರೆಯನ್ನು ಸಮರ್ಥವಾಗಿ ಪ್ರಗತಿಯಿಂದ ಪ್ರಗತಿಯ ಕಡೆಗೆ ಸಾಗಿಸಿಕೊಂಡು ಬಂದ ಕೀರ್ತಿ ಲಿಂಗೈಕ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು (೧೯೩೦), ಲಿಂಗೈಕ್ಯ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳು (೧೯೩೫ ರಿಂದ ೧೯೫೭) ಸದ್ಯ ಪೀಠಸ್ಥರಾದ (೨-೧೧-೧೯೫೭) ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳಿಗೂ ಸಲ್ಲುತ್ತದೆ.

ಶ್ರೀಮನ್ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ತಮ್ಮ ಅದ್ಭುತ ಸಂಘಟನಾ ಶಕ್ತಿಯಿಂದ ನಿರಂತರವಾದ ಅವಿಶ್ರಾಂತ ಪರಿಶ್ರಮದಿಂದ ಶ್ರೀಮಠದ ಸಮಗ್ರವಾದ ಸ್ವರೂಪವನ್ನೇ ಬದಲಾಯಿಸಿದ್ದಾರೆ. ಬಹುಮುಖಿ ವ್ಯಕ್ತಿತ್ವವುಳ್ಳ ಶ್ರೀಗಳು ಅನೇಕ ವಿಧಾಯಕ ರಚನಾತ್ಮಕ ಕಾರ್ಯಕ್ರಮಗಳನ್ನು ಬಹುವ್ಯವಸ್ಥಿತವಾಗಿ ಹಮ್ಮಿಕೊಂಡು ಹಂತಹಂತವಾಗಿ ಕಾರ್ಯಗತ ಮಾಡುತ್ತಿರುವುದನ್ನು ಸಮಗ್ರನಾಡೇಬಲ್ಲದು. ವ್ಯಾಪಾರ, ವಾಣಿಜ್ಯ ಕೇಂದ್ರವಾದ ಹುಬ್ಬಳ್ಳಿಯು ಇಂದು ವಿದ್ಯಾನಗರಿಯಾಗಿ ವಿಜೃಂಭಿಸುತ್ತಿದ್ದರೆ, ಅದರ ಕಾರಣ ಪುರುಷರು ಜಗದ್ಗುರುಗಳೇ ಸರಿ. ಸಿದ್ಧರಾಮನ ಕಾಯಕವೆಂದು ಒಂದರಮೇಲೊಂದು ಕಟ್ಟಡಗಳನ್ನು ಕಟ್ಟಿಸುವುದರಲ್ಲಿ ಶ್ರೀಗಳವರ ಕೈಯನ್ನು ಹಿಡಿದವರೇ ಇಲ್ಲವೆಂದರೆ ತಪ್ಪಾಗಲಾರದು. ಮಹಿಳೆಯರ ಸರ್ವತೋಮುಖವಾದ ಏಳ್ಗೆಗಾಗಿ ಹುಬ್ಬಳ್ಳಿಯಲ್ಲಿ ಪ್ರಪ್ರಥಮವಾಗಿ ಮಹಿಳಾ ಕಾಲೇಜನ್ನು ಪ್ರಾರಂಭಿಸಿದ ಕೀರ್ತಿ ಇವರದಾಗಿದೆ. ಇಂದು ಆ ಮಹಿಳಾ ವಿದ್ಯಾಲಯವು ಕರ್ನಾಟಕದ ಒಂದು ಪ್ರಖ್ಯಾತ ವಿದ್ಯಾಲಯವಾಗಿ ಹೆಸರುಪಡೆದಿದೆ. ಶ್ರೀ ಜಗದ್ಗುರು ಮೂರುಸಾವಿರಮಠದ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿ, ತನ್ಮೂಲಕ ಹುಬ್ಬಳ್ಳಿಯ ಶೈಕ್ಷಣಿಕ ರಂಗದಲ್ಲಿ ವಿನೂತನ ಕ್ರಾಂತಿಯನ್ನೇ ಮಾಡಿದ್ದಾರೆ. ಮಹಿಳೆಯರಿಗಾಗಿ ಪ್ರತ್ಯೇಕ ವಿಶ್ವವಿದ್ಯಾಲಯವನ್ನೆ ಸ್ಥಾಪಿಸುವ ಯೋಜನೆ ಅವರದಾಗಿದೆ. ನಮ್ಮ ನಾಡಿನ ಮಕ್ಕಳು ಸ್ವತಂತ್ರವಾಗಿ, ಸ್ವಾವಲಂಬಿಯಾಗಿ ಬಾಳಬೇಕೆಂಬ ಹಿರಿದಾದ ಉದ್ದೇಶದಿಂದ ವಿವಿಧ ಔದ್ಯೋಗಿಕ ತರಬೇತಿ ಕೇಂದ್ರವನ್ನು ತೆರೆದಿದ್ದಾರೆ. ಹೀಗೆ ಹಲವು ಹನ್ನೊಂದು ಸಂಘ-ಸಂಸ್ಥೆಗಳನ್ನು ಸ್ಥಾಪಿಸಿ, ಹುಬ್ಬಳ್ಳಿಯ ಕೀರ್ತಿವಾರ್ತೆಯನ್ನು ಜಗತ್ತಿನಾದ್ಯಂತವಾಗಿ ಹರಡಿದ್ದಾರೆ. ಇದೀಗ ಪ್ರಶಾಂತ ಪರಿಸರದಲ್ಲಿ ವಸತಿಶಾಲೆಗಳನ್ನು ಸ್ಥಾಪಿಸುವ ಯೋಜನೆಯೊಂದು ರೂಪಗೊಳ್ಳಲಿದೆ.

ಜಗದ್ಗುರುಗಳ ಸಂಕಲ್ಪಶಕ್ತಿ ಪವಾಡ ಸದೃಶ್ಯವಾದುದು. ಈ ಮಾತಿಗೆ ಆರನೂರು ಗ್ರಂಥಗಳಪ್ರಕಟನೆಯ ಯೋಜನೆಯೇ ಜ್ವಲಂತ ನಿದರ್ಶನ.ನಾಗಾಲೋಟದಿಂದ ಓಡುತ್ತಿರುವ

ಇಂದಿನ ವೈಜ್ಞಾನಿಕ ಪ್ರಗತಿಯೊಂದಿಗೆ ಆತ್ಮಕಲ್ಯಾಣ ಸಾಧಿಸುವ ಆಧ್ಯಾತ್ಮಿಕ ವಿಚಾರ ವಾಹಿನಿಯನ್ನು, ಶರಣ ಸಂಸ್ಕೃತಿಯ ಸೌರಭವನ್ನು ಸೂಸುವ ವೀರಶೈವ ಸಿದ್ಧಾಂತವನ್ನು ತಿಳಿಯಪಡಿಸುವ, ಲೋಕಕ್ಕೆ ತಮ್ಮ ಆದರ್ಶ ಬದುಕಿನಿಂದ ಅನುಕರಣೀಯರಾದ ಮಹಾ ಮಹಿಮರ ಪುಣ್ಯಚರಿತ್ರೆಗಳನ್ನು ಪ್ರಕಟಿಸಲು ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳವನ್ನು ಸ್ಥಾಪಿಸಿದುದು ಕರ್ನಾಟಕದ ಪ್ರಕಾಶನ ಕ್ಷೇತ್ರದಲ್ಲಿ ಒಂದು ವಿಕ್ರಮವೇ ಸರಿ. (೧೯೫೬) ಮೂರುಸಾವಿರಮಠವು ಕೈಗೆತ್ತಿಕೊಂಡ ಮಹಾ ಯೋಜನೆ ಗಳಲ್ಲಿ ಇದೊಂದು ಅತ್ಯಂತ ಪ್ರಮುಖ ಸಂಸ್ಥೆಯಾಗಿದೆ. ಹಿಂದಿನ ಜಗದ್ಗುರುಗಳು ಪ್ರಾರಂಭಿಸಿದ ಗ್ರಂಥ ಪ್ರಕಟನಾ ಕಾರ್ಯವನ್ನು ತಮ್ಮ ದೂರದರ್ಶಿತ್ವದಿಂದ ಮುನ್ನಡೆಸಿ ಕೊಂಡು ಬಂದಿದ್ದಾರೆ. ಈ ಗ್ರಂಥ ಪ್ರಕಟನೆಯ ಯೋಜನೆಯ ವಿಂಗಡನೆಯನ್ನು ಹೀಗೆ ಮಾಡಬಹುದು.

೧) ವೀರಶೈವ ಸಿದ್ಧಾಂತವನ್ನು ಪ್ರತಿಪಾದಿಸುವ ಪ್ರಾಚೀನ ಸಂಸ್ಕೃತ ಗ್ರಂಥಗಳ ಪರಿಷ್ಕರಣ.
೨) ಕನ್ನಡದಲ್ಲಿರುವ ಪ್ರಸಿದ್ಧ ಪ್ರಾಚೀನ ಕೃತಿಗಳ ಸಂಪಾದನೆ.
೩) ಸಂಸ್ಕೃತಿ ಪ್ರಚಾರೋಪನ್ಯಾಸಮಾಲೆ.
೪) ವೀರಶೈವ ಭಾರತಿ.
೫) ವೀರಶೈವ ಮಹಾಪುರುಷರ ಪುಣ್ಯಚರಿತ್ರೆಗಳು.
೬) ಗ್ರಂಥ ಪುರಸ್ಕಾರ.

ಈ ದಿಸೆಯಲ್ಲಿ ಕನ್ನಡ ನಾಡಿನ ಖ್ಯಾತ ವಿದ್ವಾಂಸರ ಸಹಾಯ ಸಲಹೆ-ಸೂಚನೆಗಳ ಮೇರೆಗೆ ಈ ಯೋಜನೆಯನ್ನು ಮುಂದುವರಿಸಿಕೊಂಡು ಬಂದಿರುವುದು ಕನ್ನಡಿಗರ ಪುಣ್ಯ ವಿಶೇಷವೇ ಸರಿ. ಸಂಸ್ಕೃತಿಯ ನಂದಾದೀಪವನ್ನು ತತ್ತ್ವಜ್ಞಾನದ ಬೆಳದಿಂಗಳನ್ನು ಸಾಹಿತ್ಯ ಸರಸ್ವತಿಯ ಕಂಪನ್ನು ಹರಡಿಸುವ ಪುಣ್ಯಕಾರ್ಯ ಸಾಮಾನ್ಯವಾದುದಲ್ಲ. ವಿಶೇಷವಾಗಿ ಆಧ್ಯಾತ್ಮಿಕ ಧಾರ್ಮಿಕ ತತ್ತ್ವಗಳನ್ನು ಪ್ರತಿಪಾದಿಸುವ ಗ್ರಂಥಗಳ ಪ್ರಕಟಣೆ ಮಾಡುವವರು ಎಂಟೆದೆಯ ಬಂಟರೇ ಸರಿ. ಈ ದಿಸೆಯಲ್ಲಿ ಜಗದ್ಗುರುಗಳು ಬಹುದೂರ ಸಾಗಿಬಂದಿ ದ್ದಾರೆ. ಮಹಾಸಾಹಸ ಮಾಡಿದ್ದಾರೆ. ಅವರ ಸಂಕಲ್ಪಿತ ಕೃತಶಕ್ತಿಗೆ ಒಂದು ಉದಾ ಹರಣೆಯಲ್ಲಿ ಇಲ್ಲಿ ಉಲ್ಲೇಖಿಸಬಹುದು. ತಮ್ಮ ಪೀಠಾರೋಹಣದ ರಜತಮಹೋತ್ಸವದ ಅಂಗವಾಗಿ ಏಕಕಾಲದಲ್ಲಿ ಕರ್ನಾಟಕದ ಹತ್ತು ಜಿಲ್ಲೆಗಳ ಇಪ್ಪತ್ತೈದು ಗ್ರಾಮಗಳಲ್ಲಿ ಇಪ್ಪತ್ತೈದು ಗ್ರಂಥಗಳನ್ನು ಏಕಕಾಲದಲ್ಲಿ ಪ್ರಕಟಿಸಿದುದು-ಒಂದು ಐತಿಹಾಸಿಕ ಸಾಂಸ್ಕೃತಿಕ ಕ್ರಾಂತಿಯೇ ಸರಿ. ಮತ್ತೊಂದು ಸುಸಂದರ್ಭದಲ್ಲಿ ಹನ್ನೆರಡನೆಯ ಶತಮಾನದ ಇಪ್ಪತ್ತೆರಡು ಜನ ಶರಣ-ಶರಣೆಯರ ನೂರಾಮೊಂದು ವಚನಗಳ ಸಂಗ್ರಹಗಳನ್ನು ಜನಸಾಮಾನ್ಯರ ಸಲುವಾಗಿ ಬಿಡುಗಡೆ ಮಾಡಿದುದು ಪ್ರಕಾಶನ ಕ್ಷೇತ್ರದಲ್ಲಿ ಇನ್ನೊಂದು ಅಧ್ಯಾಯ.

ಪ್ರಾಚೀನ ಭಾಷೆಯಾದ ಸಂಸ್ಕೃತದಲ್ಲಿ ಪ್ರಕಟವಾದ ಕೆಲವು ಮಹತ್ವದ ಕೃತಿಗಳಿವು. ಅವು ಆಧಾರ ಗ್ರಂಥಗಳಾಗಿವೆ.

೧) ವೀರಶೈವಾನಂದ ಚಂದ್ರಿಕೆ, ೨) ವಿಶೇಷಾರ್ಥ ಪ್ರಕಾಶಿಕಾ, ೩) ತಂತ್ರ ಸಂಗ್ರಹ, ೪) ಶಿವಮಂತ್ರ ಜಪವಿಧಿ, ೫) ಸಂಸ್ಕೃತ ಪ್ರವೇಶ, ೬) ಸಂಸ್ಕೃತ ವ್ಯಾಕರಣ ದರ್ಪಣ, ೭) ಸಂಸ್ಕೃತ ಮಾರ್ಗದರ್ಶ, ೮) ವೀರಶೈವ ಸದಾಚಾರ ಸಂಗ್ರಹ, ೯) ಶ್ರೀಮತ್ ಕುಮಾರ ಗೀತಾ, ೧೦) ಹಾನಗಲ್ ಶ್ರೀ ಕುಮಾರ ಸ್ವಾಮಿನಾಂ ಜೀವನ ಚರಿತಂ, ೧೧) ಶಿವಾದ್ಯಷ್ಟಕ ಸ್ತೋತ್ರಮಣಿಮಾಲಾ, ೧೨) ಶ್ರೀ ಕರಡೀಶ ಚರಿತಾಮೃತ ಚಂಪೂ ಪ್ರಬಂಧ, ೧೩) ಮಲ್ಹಣ ಸ್ತೋತ್ರ.

ಕಾಲಗರ್ಭದಲ್ಲಿ ಅಡಗಿಹೋಗುತ್ತಿದ್ದ, ಹುಳಹತ್ತಿ ಹಾಳಾಗುತ್ತಿದ್ದ ತಾಡೋಲೆಗಳಲ್ಲಿ ಹುದುಗಿದ್ದ ಅಮೂಲ್ಯ ಕೃತಿರತ್ನಗಳನ್ನು ತಜ್ಞರಿಂದ ಪರಿಶೀಲಿಸಿ, ಪರಿಷ್ಕರಿಸಿ, ಸೂಕ್ತ ವಿಸ್ತಾರವಾದ ಪ್ರಸ್ತಾವನೆ, ಕವಿಪರಿಚಯದೊಂದಿಗೆ ತಿಳಿಗನ್ನಡದಲ್ಲಿ ಅನುವಾದಿಸಿ ಕನ್ನಡ ಸಾಹಿತ್ಯ ಪ್ರಪಂಚದ ವ್ಯಾಪ್ತಿಯನ್ನು ಹಿಗ್ಗಿಸಿದ್ದಾರೆ. ಸಂಸ್ಕೃತ ಸಾಹಿತ್ಯದಲ್ಲಿರುವ ಅನುಭವಾಮೃತವನ್ನು ಉಣಬಡಿಸಿದ್ದಾರೆ. ಇದರೊಂದಿಗೆ ಸಮಸಮವಾಗಿ ಹನ್ನೆರಡನೆಯ ಶತಮಾನದ ವಚನಕಾರರ ಅಮೂಲ್ಯ ವಚನಗಳನ್ನು ಶಾಸ್ತ್ರೀಯವಾಗಿ, ಆಧುನಿಕ ಸಂಪಾದನಾ ಶಾಸ್ತ್ರದ ತಳಹದಿಯ ಮೇಲೆ ವಿಷಯ ಪರಿಣಿತರ ಸಹಾಯದಿಂದ ಹೊರತಂದು ತಮ್ಮ ಧರ್ಮಪ್ರಚಾರಕ ಮಂಡಳದ ಪರವಾಗಿ ಪ್ರಕಟಿಸಿರುವುದು ಜಗದ್ಗುರುಗಳ ಸಮಯ ಪ್ರಜ್ಞೆಗೆ, ಶರಣತತ್ತ್ವ ನಿಷ್ಠೆಗೆ ಜ್ವಲಂತ ನಿದರ್ಶನವಾಗಿದೆ. ಅಜ್ಞಾತ ವಚನಕಾರರ ವಚನಗಳನ್ನು ಈ ದಿಸೆಯಲ್ಲಿ ಪ್ರಕಟಿಸುವದರಲ್ಲಿ ಜಗದ್ಗುರುಗಳಿಗೆ ಇನ್ನಿಲ್ಲದ ಹುರುಪು ಉತ್ಸಾಹ.

ಇದೂವರೆಗೆ ಪ್ರಕಟವಾದ ಕೃತಿಗಳು ಹೀಗಿವೆ:

೧. ಕಾಡ ಸಿದ್ಧೇಶ್ವರ ವಚನ, ೨. ಸ್ವತಂತ್ರ ಸಿದ್ಧಲಿಂಗೇಶ್ವರ ವಚನ, ೩. ಗಣದಾಸಿ ವೀರಣ್ಣನ ವಚನಗಳು, ೪. ಸರ್ವಜ್ಞನ ವೀರಗಣ ಸ್ತೋತ್ರದ ವಚನಗಳು, ೫. ಅಪ್ಪುಕ್ಕಿ ಲಕ್ಕಮ್ಮನ ವಚನಗಳು ಮುಂತಾದವುಗಳು.

ಇಂದಿನ ನಾಗಾಲೋಟದ ಅವಸರದಲ್ಲಿ ಬೃಹತ್ ಕೃತಿಗಳನ್ನು ಓದುವದಕ್ಕೆ ಸಮಯವಿಲ್ಲ ತಾಳ್ಮೆಯೂ ಇಲ್ಲ ಸಂಕ್ಷಿಪ್ತವಾದರೂ ಸಮಗ್ರವಾದ ಪರಿಚಯದೊಂದಿಗೆ ಇತ್ತೀಚೆ ನೂರೊಂದು ವಚನಗಳ ಸಂಕಲನಗಳನ್ನು ಹೊರತಂದ ಸಾಹಸ ಜಗದ್ಗುರುಗಳಿಗೆ ಸಲ್ಲಬೇಕು. ಶ್ರೀಮಠದ ಪುನರುಜ್ಜೀವನದ ಚರಿತ್ರೆಯಲ್ಲಿ ಒಂದು ಹೊಸ ಅಧ್ಯಾಯವನ್ನು ತೆರೆದಂತೆ ವಚನ ಸಾಹಿತ್ಯ ಪ್ರಕಟನೆಯಲ್ಲಿಯೂ ಶ್ರೀಗಳು ದಾಖಲೆ ಸ್ಥಾಪಿಸಿದ್ದಾರೆ. ತಮ್ಮ ಪೀಠಾರೋಹಣ ರಜತ ಮಹೋತ್ಸವ ಅಂಗವಾಗಿ ಈ ಕೆಳಗಿನ ವಚನಕಾರರ ನೂರೊಂದು ವಚನಗಳ ಸಂಕಲನಗಳನ್ನು ಬೆಳಕಿಗೆ ತಂದು ಓದುಗರಿಗೆ ಅನುಕೂಲಮಾಡಿಕೊಟ್ಟಿರುವದು-ಮಹತ್ವಪೂರ್ಣ ಘಟನೆ.

ಧರ್ಮಜಾಗೃತಿಯೊಂದಿಗೆ ಜನಜಾಗೃತಿ ಮಾಡುವ ಉದ್ದೇಶದಿಂದ ಜನಸಾಮಾನ್ಯರ ಹೃದಯದಲ್ಲಿ ಭಕ್ತಿ, ಶ್ರದ್ಧೆ, ನಿಷ್ಠೆಯು ಬೆಳೆಯಲು ಶರಣ ಸಂಸ್ಕೃತಿಯು ಸೌರಭ ಸೂಸುವ ಈ ಕೃತಿ ಕುಸುಮಗಳು ವೀರಶೈವ ಸಿದ್ಧಾಂತವನ್ನು ತಿಳಿಪಡಿಸುವಲ್ಲಿ ಮಹತ್ವದ ಪಾತ್ರವಹಿಸಿವೆ ಯೆಂಬುದನ್ನು ಮರೆಯಲಾಗದು; ಮರೆಯಬಾರದು.

ಈ ಶೀರ್ಷಿಕೆಗಳಲ್ಲಿ ಪ್ರಕಟಿಸಿದ ಕೃತಿಗಳಿವು:

೧. ಅಮುಗೆಯ ರಾಯಮ್ಮನ ವಚನಗಳು
೨. ಅಕ್ಕಮ್ಮನ ವಚನಗಳು
೩. ನೀಲಲೋಚನೆಯ ವಚನಗಳು
೪. ಅರಿವಿನ ಮಾರಿತಂದೆಗಳ ವಚನಗಳು
೫. ಮೋಳಿಗೆಯ ಮಾರಯ್ಯನ ವಚನಗಳು
೬. ಶಿವಲೆಂಕ ಮಂಚಣ್ಣನ ವಚನಗಳು
೭. ಉರಿಲಿಂಗ ಪೆದ್ದಿಗಳ ವಚನಗಳು
೮. ಮಾದಾರ ಧೂಳಯ್ಯನ ವಚನಗಳು
೯. ಶಿವಯೋಗಿ ಸಿದ್ಧರಾಮನ ವಚನಗಳು
೧೦. ಅಖಂಡೇಶ್ವರ ವಚನಗಳು
೧೧. ಆದಯ್ಯನ ವಚನಗಳು
೧೨. ಮಹಾದೇವಿಯಕ್ಕನ ವಚನಗಳು
೧೩. ಚೆನ್ನಬಸವಣ್ಣನವರ ವಚನಗಳು
೧೪. ಹಡಪದಪ್ಪಣ್ಣನ ವಚನಗಳು
೧೫. ಸಕಲೇಶ ಮಾದರಸರ ವಚನಗಳು
೧೬. ಜೇಡರದಾಸಯ್ಯನ ವಚನಗಳು
೧೭. ಕೋಲಶಾಂತಯ್ಯನ ವಚನಗಳು
೧೮. ಮಡಿವಾಳಮಾಚಿದೇವನ ವಚನಗಳು
೧೯. ಲಿಂಗಮ್ಮನ ವಚನಗಳು
೨೦. ಸೊಡ್ಡಳ ಬಾಚರಸನ ವಚನಗಳು

–ಹೀಗೆ ಸಾಮಾನ್ಯ ಓದುಗರ ಹೃದಯದಲ್ಲಿ ಶಿವಶರಣರ ಪವಿತ್ರಜೀವನ ಚರಿತ್ರೆ ಅಚ್ಚೊತ್ತಿ ಮೂಡುವಂತೆ ಮಾಡಿರುವುದು ಅತ್ಯಂತ ಶ್ಲಾಘನೀಯ ಕಾರ್ಯವೇ ಸರಿ.

ಪ್ರಾಚೀನ ವೀರಶೈವ ಬೃಹತ್ ಕೃತಿಗಳ ಪ್ರಕಾಶನ :

ಅನುಪಲಬ್ಧ ಪ್ರಾಚೀನ ವೀರಶೈವ ಮಹಾಕೃತಿಗಳನ್ನು ವಿನೂತನವಾಗಿ ಪರಿಷ್ಕರಿಸಿ ಅಚ್ಚುಕಟ್ಟಾಗಿ ಮುದ್ರಿಸಿ ಪ್ರಕಟಿಸುವುದರಲ್ಲಿಯೂ ಜಗದ್ಗುರುಗಳು ಹಿಂದೆಬಿದ್ದಿಲ್ಲ. ಅತ್ಯಂತ ಜನಪ್ರಿಯವಾದ ನಿಜಗುಣ ಶಿವಯೋಗಿಗಳ ವಿವೇಕ ಚಿಂತಾಮಣಿ, ಕ್ಷೇತ್ರಜ್ಞ, ಸುಮನೋವಾದಂ, ಮೊದಲಾದವುಗಳು.

ಸಂಸ್ಮರಣ ಗ್ರಂಥಗಳು :

ಮಹಾಕವಿ ಹರಿಹರನನ್ನು ಕುರಿತಾಗಿ ಕನ್ನಡಿಗರಿಗೆ ಸಮಗ್ರ ಪರಿಚಯ ಮಾಡಿಕೊಟ್ಟ ಹಿರಿಮೆ ಮೂರುಸಾವಿರ ಮಠಕ್ಕೆ ಸಲ್ಲುತ್ತದೆ. ಹಿರಿಯ ಶ್ರೇಷ್ಠ ಸಾಹಿತಿಗಳಾದ ಕೆ. ಜಿ. ಕುಂದಣಗಾರ ಹಾಗೂ ಸ. ಸ. ಮಾಳವಾಡ ಅವರ ಸಮರ್ಥ ಸಂಪಾದಕತ್ವದಲ್ಲಿ ಹೊರ ಬಂದ 'ಹರಿಹರದೇವ' ಬೃಹತ್‌ಕೃತಿ ಇಂದಿಗೂ ಕನ್ನಡ ಅಭ್ಯಾಸಿಗಳಿಗೆ ಆಧಾರಗ್ರಂಥ ವಾಗಿದೆ. ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಪೀಠಾ

ರೋಹಣ ದ್ವಾದಶ ವಾರ್ಷಿಕ ಮಹೋತ್ಸವ (೧೯೭೭), ಸುಸಂದರ್ಭದಲ್ಲಿ ಹೊರಬಂದ ಎಂಟನೂರು ಪುಟಗಳ 'ಚಿತ್ಪ್ರಭೆ' ಇನ್ನೊಂದು ಸಂಸ್ಮರಣ ಸಂಪುಟ. ಕನ್ನಡ ನಾಡಿನ ಪ್ರಖ್ಯಾತ ಸಾಹಿತಿಗಳ ಸಂಶೋಧನಾತ್ಮಕ ಲೇಖನಗಳಿಂದೊಡಗೂಡಿದೆ. 'ಮಹಾನುಭಾವಿ ಚೆನ್ನಮಲ್ಲಿಕಾರ್ಜುನ' ಇತ್ತೀಚೆಗೆ ಪ್ರಕಟವಾದ ಮಗದೊಂದು ಸಂಸ್ಮರಣೀಯ ಬೃಹತ್ಕೃತಿ ಸಾವಿರಕ್ಕೂ ಮಿಕ್ಕಿ ಪುಟಗಳುಳ್ಳ ಈ ಕೃತಿಯನ್ನು ಸಾಹಸದಿಂದ ಹೊರತಂದು ಮರೆತು ಹೋಗುತ್ತಿದ್ದ ಮಹಾನುಭಾವನನ್ನು ಗ್ರಂಥ ರೂಪವಾಗಿ ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದುದು ಜಗದ್ಗುರುಗಳ ಅಪ್ರತಿಮ ಸಾಹಿತ್ಯಾಭಿಮಾನವೇ ಸರಿ. ಈ ದಿಸೆಯಲ್ಲಿ ಇನ್ನೊಂದು ಕೃತಿ 'ರಜತ ದೀಪ್ತಿ' ಉಲ್ಲೇಖನೀಯವಾಗಿದೆ. ಪೀಠಾರೋಹಣದ ಇಪ್ಪತ್ತೈದನೆಯ ಸಂಸ್ಮರಣೆಯಲ್ಲಿ ಅರಳಿ ಬಂದಿದೆ ನಾಲ್ಕುನೂರಕ್ಕೂ ಮಿಕ್ಕ ಪುಟಗಳುಳ್ಳ ಈ ಕೃತಿಯಲ್ಲಿ ಮೂರುಸಾವಿರ ಮಠವು ವಿವಿಧ ರಂಗಗಳಲ್ಲಿ ಸಲ್ಲಿಸಿದ ಸೇವೆಯನ್ನು ಸ್ಫುಟವಾಗಿ ಚಿತ್ರಿಸಲಾಗಿದೆ. ಇಂದಿನ ಪೀಠಸ್ಥರಾದ ಶ್ರೀಮನ್ ನಿರಂಜನ ಜಗದ್ಗುರು ಗಂಗಾಧರ ಮಹಾ ಸ್ವಾಮಿಗಳವರ ಬಹುಮುಖ ವ್ಯಕ್ತಿತ್ವವನ್ನು ಕುರಿತಾಗಿಯೇ ಒಂದನೂರಾಐವತ್ತು ಪುಟಗಳು ಮೀಸಲಾಗಿವೆ. ಕೊನೆಯ ವಿಭಾಗ 'ರಜತ ರಸ್ಮಿ'ಯಲ್ಲಿ ಸುಮಾರು ಇಪ್ಪತ್ತೊಂದು ವೈಚಾರಿಕತೆಯ ನಿಲುವಿನಲ್ಲಿ ಪ್ರತಿಪಾದಿಸಿದ ಮೌಲಿಕ ಲೇಖನಗಳಿವೆ.

ಸಂಸ್ಕೃತಿ ಪ್ರಚಾರೋಪನ್ಯಾಸ ಮಾಲೆ :

ನಮ್ಮ ನಾಡಿನ ವಿಶ್ವವಿದ್ಯಾಲಯದ ಪ್ರಮುಖ ಅಂಗಗಳು ಮೂರು. ಒಂದು ಬೋಧನಾಂಗ, ಇನ್ನೊಂದು ಸಂಶೋಧನಾಂಗ, ಮತ್ತೊಂದು ಪ್ರಸಾರಾಂಗ. ಇದರಲ್ಲಿ ಪ್ರಸಾರಾಂಗವು ಜನಸಾಮಾನ್ಯರಿಗೆ ತಿಳುವಳಿಕೆಯನ್ನು ಮಾಡಿಕೊಡುವುದರಲ್ಲಿ ಸಮಕಾಲೀನ ಸಮಸ್ಯೆಗಳ ಮೇಲೆ ಹೊಸಬೆಳಕು ಬೀರುವಲ್ಲಿ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತಿವೆ. ಈ ಹಿನ್ನೆಲೆಯಲ್ಲಿ ದೂರದರ್ಶಿಗಳಾದ, ಪ್ರಜ್ಞಾವಂತರಾದ ಜಗದ್ಗುರುಗಳು ಅನುಭವಿಕ ಪ್ರಾಧ್ಯಾಪಕರ ಸಮಯೋಜಿತ ಸಲಹೆ-ಸಹಕಾರಗಳನ್ನು ಪಡೆದುಕೊಂಡು ತಮ್ಮ ಧರ್ಮ ಪ್ರಚಾರಕ ಮಂಡಳದ ಪರವಾಗಿ ಸಂಸ್ಕೃತಿ ಪ್ರಸಾರೋಪನ್ಯಾಸ ಮಾಲೆಯನ್ನು ಪ್ರಾರಂಭಿಸಿ ಇನ್ನೊಂದು ಅಧ್ಯಾಯ ನಿರ್ಮಿಸಿದರು. ತನ್ಮೂಲಕ ಈಗಾಗಲೇ ಸುಮಾರು ಎಪ್ಪತ್ತು ಕಿರು ಕೃತಿಗಳು ಹೊರಬಂದಿವೆ. ಕನ್ನಡ ನಾಡಿನ ಮನೆ ಮನಗಳನ್ನು ಮುಟ್ಟಿವೆ ವೀರಶೈವ ಧರ್ಮದ ಹಿರಿಮೆಯನ್ನು ಹೆಚ್ಚಿಸಿವೆ. ಇದರೊಂದಿಗೆ ವಿಜ್ಞಾನ, ಆರೋಗ್ಯ, ಸಂಸ್ಕೃತಿ, ನಾಡಿಗೆ ಅಪೂರ್ವ ಸೇವೆಸಲ್ಲಿಸಿದ ಮಹಾನುಭಾವಿಗಳ ಚರಿತ್ರೆ. ಹೀಗೆ ವಿವಿಧ ವಿಷಯಗಳನ್ನು ಕುರಿತು ಗ್ರಂಥಗಳು ಹೊರಬಂದು ಸಕಲಾದರಣೀಯವಾಗಿವೆ. ಈ ಪ್ರಚಾರೋಪನ್ಯಾಸ ಮಾಲೆಯಲ್ಲಿ ಖ್ಯಾತ ಸಾಹಿತಿಗಳೊಂದಿಗೆ ಉದಯೋನ್ಮುಖ ಸಾಹಿತಿಗಳೂ ಭಾಗವಹಿಸಿರುವುದು ಒಂದು ವೈಶಿಷ್ಟ್ಯವೇ ಆಗಿದೆ. ಇದಕ್ಕೆ ಪೂಜ್ಯ ಜಗದ್ಗುರುಗಳ ವೈಶಾಲ್ಯತೆಯೇ ಕಾರಣ. ಎಲ್ಲ ಧರ್ಮಕ್ಕೆ ಸೇರಿದ ಲೇಖಕರಿಂದಲೂ ಗ್ರಂಥಗಳನ್ನು ಬರೆಯಿಸಿ, ಪ್ರೋತ್ಸಾಹಿಸಿ, ಬೆನ್ನು ಚಪ್ಪರಿಸಿದ್ದಾರೆ. ವೀರಶೈವ ಸಿದ್ಧಾಂತವನ್ನು ತಿಳಿಯಾಗಿ ವಿವರಿಸುವ

ಗುರು-ಲಿಂಗ–ಜಂಗಮ–ವಿಭೂತಿ–ರುದ್ರಾಕ್ಷಿ–ಪಾದೋದಕ–ಪ್ರಸಾದ–ಮಂತ್ರ-ಮೊದಲಾದ ತಾತ್ವಿಕ ವಿಷಯಗಳನ್ನು ಕುರಿತಾಗಿ ಅನುಭವಿಕರಿಂದ ಬರೆಯಿಸಿದ್ದಾರೆ. ಅನೇಕ ಅಜ್ಞಾತ ಶಿವಶರಣರ ಸಂಕ್ಷಿಪ್ತ ಜೀವನ ಚರಿತ್ರೆಗಳನ್ನು ತಜ್ಞರಿಂದ ಬರೆಯಿಸಿ ಬೆಳಕಿಗೆ ತಂದಿದ್ದಾರೆ.

ವೀರಶೈವ ಭಾರತಿ :

ಜಗದ್ಗುರುಗಳು ಸಾಹಿತ್ಯ ಕ್ಷೇತ್ರದಲ್ಲಿ ಮಾಡಿದ ಇನ್ನೊಂದು ಸಾಹಿತ್ಯಿಕ ಮಹಾ ಕ್ರಾಂತಿ 'ವೀರಶೈವ ಭಾರತಿ'ಯ ಯೋಜನೆ. ನಮ್ಮ ನಾಡಿನ ಮಕ್ಕಳಿಗೆ ಸರಿಯಾದ ಸಂಸ್ಕಾರ ನೀಡುವ ಸುಲಭ ಬೆಲೆಯ, ಸರಳ ಶೈಲಿಯ ದಪ್ಪಕ್ಷರದಲ್ಲಿ ಅಂದವಾದ ವರ್ಣಮಯ ಚಿತ್ರಗಳಿಂದ ಕೂಡಿದ ಮುದ್ದಾದ ಮುಖಪುಟಗಳಿಂದ, ಚಿಕ್ಕ ಚಿಕ್ಕ ಪುಸ್ತಕಗಳನ್ನು ಪ್ರಕಟಿಸುವ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ನಿಜವಾಗಿಯೂ ಸಾಹಸವೇ ಸರಿ. ಮಕ್ಕಳ ಸಾಹಿತ್ಯದ ಕೊರತೆಯನ್ನು ಬಹುಮಟ್ಟಿಗೆ ತುಂಬಿಕೊಡು ವುದರಲ್ಲಿ ಈ ಮಾಲೆ ಮಹತ್ವದ ಪಾತ್ರ ವಹಿಸಿವೆ. ಈಗಾಗಲೇ ನಾಲ್ವತ್ತು ಕಿರುಕೃತಿಗಳು ಮಕ್ಕಳ ಕೈಸೇರಿ. ಮಾನವತೆಯ ಮಂದಾರವಾಗಿವೆ. ನಿಜವಾಗಿಯೂ ಇದೊಂದು ವಿಶಿಷ್ಟ ಅರ್ಥಪೂರ್ಣವಾದ ಪ್ರಯೋಜನಕಾರಿಯಾದ ಯೋಜನೆ. ಈ ಯೋಜನೆಯನ್ನು ಕೈಗೆತ್ತಿಕೊಂಡ ಏಕಮೇವ ಮಠವಾಗಿದೆ. ಎಳೆಯ ಕೋಮಲ ಮನಸ್ಸಿನ ಮಕ್ಕಳ ವ್ಯಕ್ತಿತ್ವ ನಿರ್ಮಾಣಕ್ಕೆ ಸರಿಯಾದ ಸಂಸ್ಕಾರ ನೀಡುವ ಸಮರ್ಥ ಮಾಧ್ಯಮ ಶ್ರೇಷ್ಠ ಸಾಹಿತ್ಯವೇ ಸರಿ. ಹನ್ನೆರಡನೆಯ ಶತಮಾನದಲ್ಲಿ ಸಾಲುದೀಪದಂತೆ ಬೆಳಗಿನ ಶಿವಶರಣರ ಚೇತೋಹಾರಿ ಸ್ಫೂರ್ತಿದಾಯಕ ಆದರ್ಶ ಜೀವನಚರಿತ್ರೆಗಳನ್ನು ಪ್ರಕಟಿಸಿರುವುದು ಈ ನಾಡಿನ ಸತ್ವದ ಶಕ್ತಿಯ ಪ್ರತೀಕವಾಗಿದೆ. ಮೇದಾರ ಕೇತಯ್ಯ, ಮೋಳಿಗೆಯ ಮಹಾದೇವಿ, ಹರಳಯ್ಯ, ಮರುಳಶಂಕರದೇವ, ಗಂಗಾಂಬಿಕೆ–ನೀಲಾಂಬಿಕೆ, ಮುಕ್ತಾಯಕ್ಕ, ನುಲಿಯಚಂದಯ್ಯ, ಮಾದಾರ ಚನ್ನಯ್ಯ ಮೊದಲಾದ ಶರಣರ ಚರಿತ್ರೆಗಳು ಮಕ್ಕಳ ಮನಸ್ಸನ್ನು ಮಿಡಿದಿವೆ. ಸಕಲ ಜೀವಿಗಳಿಗೆ ಲೇಸನೇ ಬಯಸಿದ ಶಿವಯೋಗಿ ಪುಂಗವರ ಪಾವನ ಜೀವನ ಚರಿತ್ರೆಗಳು ಈ ಮಾಲೆಯಿಂದ ಅರಳಿವೆ. ಪ್ರತಿವರ್ಷ ವೀರಶೈವ ಭಾರತಿ ಪುಸ್ತಕ ಪ್ರಕಟನೆಗಾಗಿ ಒಂದು ಲಕ್ಷಕ್ಕೂ ಮೀರಿ ಹಣ ಖರ್ಚಾಗುತ್ತಿದೆ. ಮಕ್ಕಳ ಮನಸ್ಸಿಗೆ ಮುದ ನೀಡುವ ಹೃದಯ ಅರಳಿಸುವ ಸದ್ಭಾವ ಸದ್ಭಕ್ತಿ ಮೂಡಿಸುವ ಈ ಕಿರು ಕೃತಿಗಳು ನಾಡಿನ ಜನತೆಗೆ ಅಚ್ಚುಮೆಚ್ಚಾಗಿವೆ.

ವೀರಶೈವ ಮಹಾಪುರುಷರ ಚರಿತ್ರೆಗಳು :

ವೀರಶೈವ ಧರ್ಮದ ಸರ್ವತೋಮುಖವಾದ ಬೆಳವಣಿಗೆಗಾಗಿ ಕಂಕಣಕಟ್ಟಿ ಸರ್ವಾರ್ಪಣ ಭಾವದಿಂದ ಕಾರ್ಯಮಾಡಿದ, ಇತ್ತೀಚೆಗೆ ಆಗಿಹೋದ ಮಹಾನುಭಾವರ ಚರಿತ್ರೆಗಳನ್ನು ಪ್ರಕಟಿಸಿರುವುದು ಜಗದ್ಗುರುಗಳ ಐತಿಹಾಸಿಕ ಪ್ರಜ್ಞೆಗೆ ನಿದರ್ಶನ. ಶ್ರೀ ಮೂರುಸಾವಿರಮಠದ ಸಲುವಾಗಿ ಸರ್ವತೋಮುಖ ಏಳ್ಗೆಗಾಗಿ ಶ್ರಮಿಸಿದ

ಪರಮಭಕ್ತರ ಚರಿತ್ರೆಗಳನ್ನು ಬರೆಯುತ್ತಿರುವುದು ಶ್ರೀಗಳ ಉದಾರ ಮನೋಧರ್ಮಕ್ಕೆ ಕನ್ನಡಿ ಹಿಡಿದಿದೆ. ವರ್ಷವಿಡೀ ಒಂದರಮೇಲೊಂದು ನೂತನ ಬೃಹತ್ ಕಟ್ಟಡಗಳನ್ನು ಕಟ್ಟಿಸುವ ಕಾರ್ಯದಲ್ಲಿ ನಿರತರಾಗಿದ್ದರೂ ಬಿಡುವು ಮಾಡಿಕೊಂಡು ಈ ಬಗೆಯ ಸೃಜನಾತ್ಮಕ ಸಾಹಿತ್ಯಸೃಷ್ಟಿಗೆ ಕಾರಣಪುರುಷರಾಗಿದ್ದಾರೆ. ಪ್ರವೃತ್ತಿಯಿಂದ ಕವಿಹೃದಯಿಗಳಾದ ಶ್ರೀಗಳು ಆಧುನಿಕ ಕನ್ನಡ ಸಾಹಿತ್ಯ ಲೋಕದಲ್ಲಿ ಮೂವತ್ತೈದಕ್ಕೂ ಮಿಕ್ಕಿ ಕೃತಿರಚನೆಮಾಡಿ ಕನ್ನಡ ಆಧ್ಯಾತ್ಮಿಕ ಸಾಹಿತ್ಯಲೋಕಕ್ಕೆ ಅಮೋಘವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ. ಪರದೇಶ ಪರ್ಯಟನ ಮಾಡಿದ ವೀರಶೈವ ಸ್ವಾಮಿಗಳಲ್ಲಿ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳೇ ಮೊದಲಿಗರು. ವೀರಶೈವ ಧರ್ಮದ ಹಿರಿಮೆ, ವಿಶ್ವಶಾಂತಿ, ಮೊದಲಾದ ವಿಷಯಗಳನ್ನು ಕುರಿತು ವಿದ್ವತ್ಪೂರ್ಣ ಭಾಷಣ ಮಾಡಿ ಅಲ್ಲಿಯ ಜನರ ಮನಗೆದ್ದಿದ್ದಾರೆ. ತಮ್ಮ ಪ್ರವಾಸದ ನೆನಪುಗಳನ್ನು ಅವರೇ ಬರೆದ 'ನಮ್ಮ ವಿದೇಶಯಾತ್ರೆ'ಯಲ್ಲಿ ಸವಿಸ್ತಾರವಾಗಿ ವಿವರಿಸಿದ್ದಾರೆ. 'ಮೂಜಗಂ' ಎಂಬ ಕಾವ್ಯನಾಮದಿಂದ ಅವರ ಕೃತಿಗಳು ಪ್ರಕಟವಾಗಿವೆ. ಅವು ಹೀಗಿವೆ:

ಮೊಗ್ಗೆಯಮಾಲೆ (ಕವನಸಂಗ್ರಹ, ಹೂಮಾಲೆ (ಕಂದಪದ್ಯಗಳು), ಮರುಳಸಿದ್ಧೇಶ್ವರ ಅಷ್ಟೋತ್ತರ ಶತನಾಮಾವಳಿ, ಶ್ರೀ ಶಿವಬಸವೇಶ್ವರ ಅಷ್ಟೋತ್ತರ ಶತನಾಮಾವಳಿ, ಶ್ರೀ ವಿಜಯಮಹಾಂತೇಶ್ವರ ಅಷ್ಟೋತ್ತರ ಶತನಾಮಾವಳಿ, ಅಪ್ಪಯ್ಯಸ್ವಾಮಿಗಳ ಜೀವನ ಚರಿತ್ರೆ (ಗದ್ಯ), ವಿಜಯ ಮಹಾಂತೇಶ ಲಾವಣಿ, ಪಥಿಕ (ಕವನಸಂಕಲನ), ಜೀವನ ವಿಕಾಸ (ಗದ್ಯ), ಅಮೃತಬಿಂದು, ಆಶೀರ್ವಾಣಿ (ಭಾಗ-೧) (ಭಾಷಣಗಳ ಸಂಗ್ರಹ), ಆಶೀರ್ವಾಣಿ (ಭಾಗ-೨), ಹೊಂಗಿರಣ (ಗದ್ಯಸಂಕಲನ), ಚಿತ್ಕಿರಣ (ಗದ್ಯಸಂಕಲನ) ನಮ್ಮ ವಿದೇಶ ಯಾತ್ರೆ, ಸಂಸ್ಕೃತ ಕವಿಚರ್ಚಾ, ಸಾಹಿತ್ಯ (ವಿವೇಚನಾತ್ಮಕ ಪ್ರಬಂಧ), ಯುಗಪುರುಷ ಯೋಗಿಕುಮಾರ, ಜೇನಹನಿ (ಗದ್ಯ) ಚಿತ್ಸುಮನ (ವಚನ ಸಂಗ್ರಹ), ವಿವಿಧತಾ ಮೇ ಏಕತಾ (ಹಿಂದೀ ಭಾಷಣಗಳ ಸಂಗ್ರಹ), Yogiraja of Karanatak, ಶಿವಯೋಗ ಮಂದಿರ ಮರುಳಶಂಕರದೇವರು, ರತ್ನಪಕ್ಷಿ (ಕವನಸಂಕಲನ), ವಚನವಾರಿಧಿ, Heart's Blossoms (ಚಿತ್ಸುಮನದ ಅನುವಾದ), ಪೂರ್ಣಜ್ಞಾನ ವಚನಗಳು (ತ್ರಿಪದಿ), ಹೂಬಳ್ಳಿ (ಗದ್ಯಸಂಕಲನ) ಇವುಗಳಲ್ಲಿ ಅನೇಕ ಪುಸ್ತಕಗಳು ಐದು ಆರು ಆವೃತ್ತಿಗಳನ್ನು ಕಂಡಿವೆ. ಸಮಕಾಲೀನ ಸಮಸ್ಯೆಗಳನ್ನು ಎತ್ತಿಕೊಂಡು ವೈಚಾರಿಕ, ವೈಜ್ಞಾನಿಕ, ವಿಶ್ಲೇಷಣಾತ್ಮಕ, ಹೃದ್ಯವಾದ ಗದ್ಯದಲ್ಲಿ ಪ್ರತಿತಿಂಗಳೂ ಪ್ರಕಟವಾಗುತ್ತಿರುವ 'ಪರಂಜ್ಯೋತಿ' ಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಆಶೀರ್ವಾಣಿ ಪ್ರತಿಯೊಬ್ಬ ಕನ್ನಡಿಗನು ಓದುವಂತಿವೆ. ಅಲ್ಪದರಲ್ಲಿಯೇ ಅಪಾರ ಅನುಭವದ ಅಮೃತಕಿರಣ ಸೂಸುವಂತಿವೆ. ವ್ಯಾಪಕವಾದ ದೂರದೃಷ್ಟಿ, ವಿಷಯ ವೈವಿಧ್ಯ, ಸರ್ವಧರ್ಮ ಸಮನ್ವಯದೃಷ್ಟಿ, ನಿರೂಪಣಾ ಸಾಮರ್ಥ್ಯ, ಸೂತ್ರರೂಪವಾದ ಮುತ್ತಿನಂಥ ಮಾತುಗಳು ಮತ್ತೆ ಮತ್ತೆ ಮನನ

ಮಾಡುವಂತಿವೆ. 'ಯುಗಪುರುಷ ಯೋಗಿಕುಮಾರ' ಸಂಸ್ಕೃತಿ ಪ್ರಚಾರೋಪನ್ಯಾಸ ಮಾಲೆಯ ಮೊದಲ ಹೊತ್ತಿಗೆ, ಡಾ. ಕೆ. ಕೃಷ್ಣಮೂರ್ತಿಯವರು ಈ ಕೃತಿಯ ಬಗೆಗೆ ಹೀಗೆ ಬರೆದಿದ್ದಾರೆ, "ಇದನ್ನು ಸ್ವಯಂ ಶ್ರೀಪಾದಂಗಳವರೇ ಬಹಳ ಮಾರ್ಮಿಕವಾಗಿ, ಮನೋವೇದಕವಾಗಿ ರಚಿಸಿದ್ದಾರೆ. ಅಲ್ಪಾವಧಿಯಲ್ಲೇ ಮೂರನೆಯ ಮುದ್ರಣವನ್ನು ಕಾಣುತ್ತಿರುವುದು ಜನಾದರಣೆಯಕ್ಕೆ ಸಾಕ್ಷಿಯಾಗಿದೆ. 'ಚಿತ್ಸುಮನ'ವನ್ನು ಕುರಿತು ಡಾ. ಗ್ರೀಲೇ ಅವರ ಅಭಿಪ್ರಾಯ ಹೀಗಿದೆ: "A very beautiful and spring book with real spiritual sensitivity in the new volume tittled Heart's Blossoms."

ಇತ್ತೀಚೆಗೆ 'ಪೂರ್ಣಜ್ಞಾನ ವಚನಗಳು' ಪರಂಜ್ಯೋತಿಯ ಮೂಲಕ ಧಾರಾವಾಹಿಯಾಗಿ ಪ್ರಕಟವಾಗುತ್ತಿವೆ; ಈಗಾಗಲೇ ಅವು ವಿಮರ್ಶಕ ತಜ್ಞರ ವಿಶೇಷ ಗಮನವನ್ನು ಸೆಳೆದಿವೆ. ತಮ್ಮ ಜೀವನಾನುಭವಗಳನ್ನು ಬಿಚ್ಚುಮನಸ್ಸಿನಿಂದ ತೆರೆದ ಪುಸ್ತಕದಂತೆ ಈ ತ್ರಿಪದಿಗಳಲ್ಲಿ ವ್ಯಕ್ತಪಡಿಸಿದ್ದಾರೆ. ಇಂದಿನ ಸಾಮಾಜಿಕ ಜೀವನದ ಏರುಪೇರುಗಳನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಅನುವು ದೊರೆತಾಗ ಹೊರಹೊಮ್ಮಿ ಬಂದ ಈ ವಚನಗಳು ಸರ್ವಜ್ಞನ ವಚನಗಳನ್ನು ಸ್ಮರಣೆಗೆ ತರುತ್ತವೆ. ತ್ರಿಪದಿ ಛಂದಸ್ಸನ್ನು ಬೆಳೆಸಿಕೊಂಡು ಬಂದ ಹಿರಿಮೆ ಜಗದ್ಗುರುಗಳಿಗೆ ಸಲ್ಲುತ್ತದೆ.

ಜಗದ್ಗುರುಗಳು ಹಮ್ಮಿಕೊಂಡ ಸಾಹಿತ್ಯ ಸರಸ್ವತಿಯ ಲೋಕದಲ್ಲಿ ವೀರಶೈವ ಸಿದ್ಧಾಂತದ ಪ್ರತಿಪಾದನಾ ಗ್ರಂಥ ರಚಿಸುವಲ್ಲಿ ನಾಡಿನಾದ್ಯಂತವಾಗಿ ಪ್ರಖ್ಯಾತ ಸಾಹಿತಿಗಳು ಭಾಗವಹಿಸಿದ್ದಾರೆ. ಉತ್ತಮೋತ್ತಮ ಕೃತಿ ಕುಸುಮಗಳನ್ನು ಸಾಹಿತ್ಯ ಸರಸ್ವತಿಯ ಅಡಿದಾವರೆಗೆ ಅರ್ಪಿಸಿದ್ದಾರೆ. ಅವರ ಹೆಸರುಗಳು ಹೀಗಿವೆ: ೧. ಪಂಡಿತ ಬಸವರಾಜ ಶಾಸ್ತ್ರಿಗಳು, ಹಗಡದಿನ್ನಿ, ೨. ಗುರುಲಿಂಗದೇವರು, ೩. ಡಾ. ಪುಟ್ಟರಾಜ ಗವಾಯಿಗಳು, ೪. ಡಾ.ಗುರುಸಿದ್ಧದೇವರು ಕೆಳದಿ, ೫. ಪಂಡಿತ ಚಂದ್ರಶೇಖರ ಶಾಸ್ತ್ರಿಗಳು ಹೊಳಲು, ೬. ಪಂಡಿತ ಸದಾಶಿವ ಶಾಸ್ತ್ರಿಗಳು ಹುಕ್ಕೇರಿ, ೭. ಡಾ. ಜ.ಚ.ನಿ, ೮. ಪ್ರೊ. ಜಿ. ಎಂ. ಉಮಾಪತಿಶಾಸ್ತ್ರಿ, ೯. ಪಂಡಿತ ನಾಗಭೂಷಣ ಶಾಸ್ತ್ರಿಗಳು, ೧೦. ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು, ೧೧. ಶ್ರೀ ಮ. ನಿ. ಪ್ರ. ರುದ್ರಸ್ವಾಮಿಗಳು, ಕರ್ಜಗಿ, ೧೨. ಶ್ರೀ ಮ.ನಿ.ಪ್ರ. ಶಿವಲಿಂಗಸ್ವಾಮಿಗಳು, ೧೩. ಶ್ರೀ ಮ.ನಿ.ಪ್ರ. ಕುಮಾರಸ್ವಾಮಿಗಳು, ೧೪. ಪಂಡಿತ ಬಸವಲಿಂಗ ಪಟ್ಟಾಧ್ಯಕ್ಷರು, ೧೫. ಪಂಡಿತ ನಂಜುಂಡಾರಾಧ್ಯರು, ೧೬. ಡಾ. ರಂಗನಾಥ ದಿವಾಕರ, ೧೭. ಸಂಗಮೇಶ ಹೊಸಮನಿ, ೧೮. ರಂಗಪ್ಪ ವಾಲಿ, ೧೯. ಪ್ರೊ. ಸ. ಸ. ಮಾಳವಾಡ, ೨೦. ಸಂಗಣ್ಣ ಕಲ್ಲೂರ, ೨೧. ಪ್ರೊ. ಜಿ. ಎಚ್. ಹನ್ನೆರಡುಮಠ, ೨೨. ಡಾ. ಡಿ. ಎಸ್. ಕರ್ಕಿ, ೨೩. ಬಾಳೇಶ ಲಕ್ಷಟ್ಟಿ, ೨೪. ಪ್ರೊ. ಎಸ್.ಎಸ್. ಭೂಸರಡ್ಡಿ, ೨೫. ಬಸವರಾಜ ತೆಗ್ಗಿನಮಠ, ೨೬. ಬಸವರಾಜ ತಾಳಕೇರಿ, ೨೭. ಡಾ. ಪಂಚಾಕ್ಷರಿ ಹಿರೇಮಠ, ೨೮. ಡಾ. ತಿಪ್ಪೇರುದ್ರಸ್ವಾಮಿ,

೨೯. ಡಾ. ಎಂ. ಎಂ. ಜೋಶಿ, ೩೦. ಪ್ರೊ. ಭಾಗೋಜಿ, ೩೧. ಡಾ. ಎಂ. ಎಸ್. ಸುಂಕಾಪುರ, ೩೨. ಡಾ. ಎಂ. ಎಸ್. ಲಠ್ಠೆ, ೩೩. ಡಾ. ದೇವೇಂದ್ರಕುಮಾರ ಹಕಾರಿ, ೩೪. ಡಾ. ಬಿ.ಸಿ. ಜವಳಿ, ೩೫. ಪ್ರೊ. ಎಚ್. ಮೃತ್ಯುಂಜಯ, ೩೬. ಪ್ರೊ. ಸಂಗಮೇಶ ಹಂಡಿಗಿ, ೩೭. ಡಾ. ಎಸ್. ಬಿ. ತೋಟದ, ೩೮. ಪ್ರೊ. ಎಸ್. ವಾಯ್. ಹುಂಜಿ, ೩೯. ಈಶ್ವರಚಂದ್ರ ಚಿಂತಾಮಣಿ, ೪೦. ಪ್ರೊ. ಬಿ. ಎಂ. ರೂಗಿ, ೪೧. ಪಿ. ಎಸ್. ಸ್ವಾಮಿ, ೪೨. ಸಿಂಪಿ ಲಿಂಗಣ್ಣ, ೪೩. ಡಾ. ಎಂ. ಬಿ. ಪರಡ್ಡಿ, ೪೪. ಕೆ. ಪಿ. ಶಿವಲಿಂಗಯ್ಯ, ೪೫. ಪಂಡಿತ ಷಣ್ಮುಖಯ್ಯ ಅಕ್ಕೂರಮಠ, ೪೬. ಪಂಡಿತ ಚೆನ್ನಪ್ಪ ಎರೆಸೀಮಿ, ೪೭. ಹಿ ಚಿ. ಶಾಂತವೀರಯ್ಯ, ೪೮. ಡಾ. ಸಂಗಮೇಶ ಸವದತ್ತಿಮಠ, ೪೯. ಡಾ. ದೇ. ಜ. ಗೌ., ೫೦. ಆರ್. ಟಿ. ಮಜ್ಜಗಿ, ೫೧. ಎ. ಎಲ್. ಹಿರೇಮಠ, ೫೨. ದು. ನಿಂ. ಬೆಳಗಲಿ, ೫೩. ಎಸ್. ಸಿ. ಚರಂತಿಮಠ, ೫೪. ಪ್ರೊ. ಎಸ್. ಎಂ. ಹುಲ್ಲೋಳಿ, ೫೫. ಡಾ. ಬಿ. ವಿ. ಮಲ್ಲಾಪುರ, ೫೬. ಡಾ. ಆರ್. ಸಿ. ಹಿರೇಮಠ, ೫೭. ಡಾ ಎಸ್. ಎಂ. ವೃಷಭೇಂದ್ರಸ್ವಾಮಿ, ೫೮. ಡಾ. ಎಲ್. ಬಸವರಾಜು, ೫೯. ಡಾ. ನಿಂಗಣ್ಣ ಸಣ್ಣಕ್ಕಿ, ೬೦. ಡಾ. ಬಿ. ಆರ್. ಹಿರೇಮಠ, ೬೧. ಡಾ. ವೀರಣ್ಣಾ ರಾಜೂರ, ೬೨. ಡಾ.ಬಿ. ವಿ. ಶಿರೂರ, ೬೩. ಶಂ. ಗು. ಬಿರಾದಾರ–ಮೊದಲಾದವರು.

ಮಹಿಳೆಯರೂ ಸಾಹಿತ್ಯರಂಗದಲ್ಲಿ ಮುಂದೆ ಬರಲಿ ಎಂಬ ಹೆಬ್ಬಯಕೆಯಿಂದ ಅವರಿಗೂ ಪ್ರೋತ್ಸಾಹ, ಬೆಂಬಲ ಕೊಟ್ಟಿರುವುದು ಜಗದ್ಗುರುಗಳ ಹೆಗ್ಗಳಿಕೆಯೇ ಸರಿ. ಶಾಂತಾದೇವಿ ಮಾಳವಾಡ, ಸಂಗಮ್ಮ ಕರವೀರಶೆಟ್ಟರ, ಶಿವಲಿಂಗಮ್ಮ ಕಟ್ಟಿ, ನೀಲಮ್ಮ ತಾಯಿ ಅಸುಂಡಿ, ಶಾಂತಲಾ ಯಡ್ರಾಮಿ, ಜಗದಂಬಾ ಮಲ್ಲೀದೇವರು, ನಿರ್ಮಲಾ ಪಟ್ಟಣಶೆಟ್ಟಿ, ಸುವರ್ಣಾ ವಾಲಿಶೆಟ್ಟಿ, ಸರೋಜಿನಿ ಚವಲಾರ ಇತ್ಯಾದಿ–

೬೦೦ ಗ್ರಂಥಗಳ ಪ್ರಕಟನೆಯ ಯೋಜನೆಯಲ್ಲಿ ಈಗಾಗಲೇ ೩೦೦ ಗ್ರಂಥಗಳು ಹೊರಬಂದಿವೆ. ಇನ್ನೂ ಮುನ್ನೂರು ಕೃತಿಗಳು ಅರಳಬೇಕಾಗಿವೆ. ಗ್ರಂಥಗಳನ್ನು ಪ್ರಕಟಿಸುವ ಪೂರ್ವದಲ್ಲಿ ಈ ಕೆಳಗಿನ ವಿಷಯಗಳಿಗೆ ಮಹತ್ವ ಕೊಟ್ಟು ಬರೆದ ಕೃತಿಗಳಿಗೆ ವಿಶೇಷ ಮನ್ನಣೆ ಕೊಡಲಾಗುವದು:

೧) ಅಪ್ರಕಟಿತ ವಚನಸಾಹಿತ್ಯ, ೨, ಡಾ. ಫ. ಗು. ಹಳಕಟ್ಟಿಯವರು ಹಾಗೂ ಸೊನ್ನಲಾಪುರದ ವಾರದ ಮಲ್ಲಪ್ಪನವರ ಗ್ರಂಥಮಾಲಿಕೆಯಿಂದ ಪ್ರಕಟವಾದ ಅಲಭ್ಯ ಗ್ರಂಥಗಳ ಪುನರ್‌ಮುದ್ರಣ, ೩) ಶಿವಶರಣರ, ಶಿವಭಕ್ತರ, ಶಿವಯೋಗಿಗಳ, ಸ್ವಾಮಿಗಳವರ, ಪಂಡಿತರ, ಕವಿಗಳ ಚರಿತ್ರೆಗಳು, ೪) ವೀರಶೈವ ಅಪ್ರಕಟಿತ ಪ್ರಾಚೀನ ಸಾಹಿತ್ಯ ಕೃತಿಗಳು, ೫) ವೀರಶೈವ ಸಾಹಿತ್ಯ ಪರಿಚಯ ಗ್ರಂಥಗಳು, ೬) ವೀರಶೈವ ತತ್ವ–ಶಾಸ್ತ್ರಪರ ಗ್ರಂಥಗಳು, ೭) ವೀರಶೈವ ಇತಿಹಾಸ ಸಂಬಂಧ ಗ್ರಂಥಗಳು, ೮) ವೀರಶೈವ ಸಮಾಜ ವಿಜ್ಞಾನ, ೯) ಬಸವಪೂರ್ವ ಕಾಲೀನ ಶರಣ ಶರಣೆಯರ ಚರಿತ್ರೆ, ೧೦) ವಿಮರ್ಶಾತ್ಮಕ ಹಾಗೂ ಸಂಪಾದನ ಗ್ರಂಥಗಳು, ೧೧) ತುಲನಾತ್ಮಕ

ಗ್ರಂಥಗಳು, ೧೨) ಶಿವಪೂಜಾ ಪದ್ಧತಿ–ಆಚಾರಕ್ರಮ, ೧೩) ಶ್ರೀ ಜಗದ್ಗುರು ಮೂರು ಸಾವಿರ ಮಠದ ಬಗ್ಗೆ ಗ್ರಂಥಗಳು, ೧೪) ಕವಿ–ಕಾವ್ಯ ಪರಿಚಯ, ೧೫) ಆಧುನಿಕ ಸಾಹಿತಿಗಳ ಸೃಜನಾತ್ಮಕ ಕೃತಿಗಳು, ೧೬) ಮೂರುಸಾವಿರಮಠದ ಜಗದ್ಗುರುಗಳ ಕೃತಿಗಳು, ೧೭) 'ಪರಂಜ್ಯೋತಿ'ಯಲ್ಲಿ ಪ್ರಕಟವಾದ ಉತ್ತಮ ಲೇಖನಗಳ ಸಂಪಾದನೆ, ೧೮) ವೀರಶೈವ ಸಂಸ್ಕೃತ ಗ್ರಂಥಗಳು, ೧೯) ಹಿಂದಿ, ಇಂಗ್ಲೀಷ, ತೆಲಗು, ತಮಿಳು, ಮರಾಠಿಯಲ್ಲಿ ಬರೆದ ಉತ್ತಮ ವೀರಶೈವ ಕೃತಿಗಳು, ೨೦) ಆರೋಗ್ಯಕ್ಕೆ ಸಂಬಂಧಿಸಿದ ಕೃತಿಗಳು, ೨೧) ಅನುವಾದಿತ ಕೃತಿಗಳು.

ಪರಂಜ್ಯೋತಿ ಮಾಸಪತ್ರಿಕೆ:

ಪತ್ರಿಕೋದ್ಯಮದಲ್ಲಿಯೂ ಜಗದ್ಗುರುಗಳಿಗೆ ವಿಶೇಷ ಆಸ್ಥೆ. ವೀರಶೈವ ಧರ್ಮದ ತತ್ವಗಳು ಕನ್ನಡ ನಾಡಿನ ಮನೆ ಮನೆಗೆ ಮುಟ್ಟಬೇಕೆಂಬ ಮಹತ್ವಾಕಾಂಕ್ಷೆಯಿಂದ ಹತ್ತೊಂಬತ್ತನೂರಾ ಅರವತ್ತೆಂಟನೆಯ ಅಗಸ್ಟ ಒಂದರಿಂದ (೧–೮–೧೯೬೮) ಪರಂಜ್ಯೋತಿ ಮಾಸಿಕವನ್ನು ಪ್ರಾರಂಭಿಸಿದರು. ಅದು ಇಂದಿನವರೆಗೂ ತಪ್ಪದೇ ಪ್ರತಿತಿಂಗಳು ಒಂದನೆಯ ತಾರೀಖಿಗೆ ಸಕಾಲಕವಾಗಿ ಪ್ರಕಟಿಸುತ್ತಿರುವುದು ಮಹಾ ಸಾಹಸವೇ ಸರಿ. ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ವಿಷಯಗಳ ಬಗೆಗೆ ನಾಡಿನ ಪ್ರಸಿದ್ಧ ಲೇಖಕರ ವಿಚಾರ ಪರಿಪೂರ್ಣ ಲೇಖನಗಳು ಪ್ರಕಟವಾಗುತ್ತಿವೆ. ಆರೋಗ್ಯ ಸ್ವಾಸ್ಥ್ಯದ ಬಗೆಗೂ ವಿಶೇಷವಾಗಿ ಗಮನಹರಿಸಿ ಲೇಖನಗಳು ಪ್ರಕಟವಾಗುತ್ತಿವೆ. ಇದಕ್ಕಾಗಿ 'ಪರಂಜ್ಯೋತಿ ಸ್ವತಂತ್ರ ಮುದ್ರಣಾಲಯ' ಸ್ಥಾಪಿಸಲಾಗಿದೆ. ಪತ್ರಿಕೆ ಹದಿನಾಲ್ಕನೆಯ ವರುಷದಲ್ಲಿ ಪಾದಾರ್ಪಣೆ ಮಾಡುವ ಸಂದರ್ಭದಲ್ಲಿ ಪರಂಜ್ಯೋತಿ ಪ್ರಕಾಶನದ ಉದ್ದೇಶಗಳನ್ನು ಪುನರಪಿ ಓದುಗರ ಮುಂದೆ ಇಟ್ಟಿದ್ದಾರೆ. ಪರಂಜ್ಯೋತಿಯು ಸಾಹಿತ್ಯ ಸಂಸ್ಕೃತಿಯ ಉಳುಮೆಗಾಗಿ, ಸಮಾಜಸುಧಾರಣೆಗಾಗಿ ಹದಿಮೂರು ವರುಷಗಳಿಂದಲೂ ಹಂಬ್ರಮಿ ಸುತ್ತಿದೆ; ಕಲೆ, ಕಾಯಕ, ಆರೋಗ್ಯ, ಧರ್ಮ, ತತ್ತ್ವಜ್ಞಾನ ಮುಂತಾದ ಹಲವಾರು ವಿಚಾರ ಪ್ರಚೋದಕ ಸಮಸ್ಯೆಗಳ ಬಗ್ಗೆ ನೂರಾರು ಉಪಯುಕ್ತ ಲೇಖನಗಳನ್ನು ಪ್ರಕಟಿಸಿದೆ. ಸುಂದರ ಕಥೆ ಕವನಗಳನ್ನು ಅಚ್ಚುಮಾಡಿ ಪ್ರೋತ್ಸಾಹಿಸಿದೆ. ನುರಿತ ಬರಹ ಗಾರರಿಂದ ಪರಂಜ್ಯೋತಿ ಬೆಳಗಿದ್ದರೆ, ಕಿರಿಯ ಬರಹಗಾರರಿಗೂ ಸಹ ಸಹಕಾರ ನೀಡಿ ಪ್ರೋತ್ಸಾಹಿಸಿದೆ. ಸರ್ವಧರ್ಮಸಮನ್ವಯ ದೃಷ್ಟಿಯನ್ನು ಬೆಳೆಸಿಕೊಂಡು ಬಂದಿದೆ, ಯಾವ ರಾಜಕಾರಣಕ್ಕೂ ಇಳಿಯದೇ ತನ್ನ ತನದ ಮಾನವೀಯ ಮೌಲ್ಯಗಳನ್ನು ಜನತೆಗೆ ಬಿತ್ತರಿಸಿದೆ. ಭಾವೈಕ್ಯತೆಯನ್ನು ಬಲಗೊಳಿಸಿದೆ. ಹೃದಯ ಹಸನಾಗುವ ಒಳ್ಳೆಯ ವಿಚಾರಗಳನ್ನು ಬಿತ್ತಿದೆ, ಬಿತ್ತರಿಸಿದೆ. ಪರಂಜ್ಯೋತಿಯನ್ನು ಈ ವರುಷ ಸ್ವಲ್ಪ ಬದಲಾವಣೆಯನ್ನು ವಾಚಕರ ಅಪೇಕ್ಷೆಯಂತೆ ಮಾಡಲಾಗಿದೆ. ಆಕಾರ ಚಿಕ್ಕದಾಗಿದ್ದರೂ ಪುಟ್ಟಗಳನ್ನು ಹೆಚ್ಚಿಸಿದೆ. ಪರಂಜ್ಯೋತಿಯು ಈ ವರೆಗೂ ಎಂಟುಸಾವಿರ ಪುಟದಷ್ಟು ಸಾಹಿತ್ಯವನ್ನು ನೀಡಿದೆ. ಪತ್ರಿಕೆ ಪ್ರಕಟಿಸುವುದು ಎಷ್ಟು ಕಷ್ಟವೆಂಬುದು ಪತ್ರಿಕೆಯನ್ನು

ನಡೆಸುವವರೇ ಬಲ್ಲರು. ಅದರಲ್ಲಿಯೂ, ಧಾರ್ಮಿಕ ಸಾಂಸ್ಕೃತಿಕ ಪ್ರಗತಿಯ ವಿಚಾರಗಳನ್ನು ನೀಡುತ್ತಿರುವ ಪತ್ರಿಕೆಗಳ ಗೋಳಾಟವನ್ನು ದೇವರೇ ಬಲ್ಲ. ಭಾರತದ ಹಿರಿಯ ಮಾಸಿಕ ಪತ್ರಿಕೆಗಳಲ್ಲಿ ಈ ರೀತಿ ಕಂಡುಬರುವುದು ವಿರಳವೆಂದು ಹೇಳುತ್ತಿರುವ ವಾಚಕರ ನುಡಿ ಗಮನಾರ್ಹವಾಗಿದೆ. ಪರಂಜ್ಯೋತಿಯು ಒಬ್ಬನನ್ನು ಹೊಗಳಿ ಮತ್ತೊಬ್ಬನನ್ನು ತೆಗಳಿ ಜನಜೀವನವನ್ನು ಕದಡುವ ಗೋಜಿಗೆ ಹೋಗದೇ ಸಮಾಜದಲ್ಲಿ ನಿಜವಾದ ಪ್ರಜ್ಞೆಯನ್ನು ಒಡಮೂಡಿಸುವುದೇ ಪರಂಜ್ಯೋತಿಯ ಉದ್ದೇಶವಾಗಿದೆ. ಕಳೆದ ಇಪ್ಪತ್ತೆರಡು ವರ್ಷಗಳ ಅವಧಿಯಲ್ಲಿ ಇಪ್ಪತ್ತೆರಡು ಸಾವಿರ ಪುಟದಷ್ಟು ಸಾಹಿತ್ಯವನ್ನು ಕನ್ನಡಿಗರಿಗೆ ಉಣಬಡಿಸಲಾಗಿದೆ. ಪರಂಜ್ಯೋತಿ ಪತ್ರಿಕೆಯು ಶಾಶ್ವತವಾಗಿ ನಡೆಯಲು ಪ್ರತ್ಯೇಕ ಅರ್ಥವ್ಯವಸ್ಥೆಯನ್ನು ಮಾಡಲಾಗಿದೆ. ಈಗಾಗಲೇ ಎರಡು ಸಾವಿರಕ್ಕೂ ಮಿಕ್ಕಿ ಅಜೀವ ಸದಸ್ಯರಾಗಿದ್ದಾರೆ. ತನ್ಮೂಲಕ ಶ್ರೀಮಠದ ಪರವಾಗಿ ವರ್ಷದಾದ್ಯಂತವೂ ನಡೆಯುವ ಚಟುವಟಿಕೆಗಳನ್ನು ಪ್ರಚಾರ ಮಾಡಲು ಅನುಕೂಲವಾಗಿದೆ. ಈ ಪತ್ರಿಕೆಯನ್ನು ಹಿಂದಿ ಹಾಗೂ ಇಂಗ್ಲೀಷಿನಲ್ಲಿಯೂ ಪ್ರಾರಂಭಿಸಬೇಕೆಂಬ ಯೋಜನೆಯೂ ಜಗದ್ಗುರುಗಳ ಮನಸ್ಸಿನಲ್ಲಿದೆ. ಪರಂಜ್ಯೋತಿ ಪತ್ರಿಕೆಯು ಹೊರನಾಡಿನಲ್ಲಿಯೂ ಪ್ರಚಾರವಾಗುತ್ತಿರುವುದು ನಿಜವಾಗಿಯೂ ಅಭಿಮಾನದ ಮಾತಾಗಿದೆ. ಈ ಮೂಲಕ ಅನೇಕ ಕಿರಿಯ ಲೇಖಕರು ಬೆಳಕಿಗೆ ಬರಲು ಈ ಪತ್ರಿಕೆಯೇ ಕಾರಣವಾಗಿದೆ. ಕರ್ನಾಟಕದಲ್ಲಿ ಪ್ರಕಟವಾಗುತ್ತಿರುವ ಧಾರ್ಮಿಕ ಪತ್ರಿಕೆಗಳಲ್ಲಿ 'ಪರಂಜ್ಯೋತಿ'ಗೆ ವಿಶಿಷ್ಟ ಬೆಲೆ ಇದೆ. ಪ್ರತಿವರುಷ ಶ್ರಾವಣಮಾಸದ ಕೊನೆಯದಿನ ಪತ್ರಿಕಾಗೋಷ್ಠಿ ಕರೆಯುವ ಉಜ್ವಲ ಸಂಪ್ರದಾಯವಿಟ್ಟುಕೊಂಡಿರುವುದು ಅವರು ಪತ್ರಿಕೋದ್ಯಮದ ಬಗೆಗಿನ ಕಳಕಳಿ ವ್ಯಕ್ತಗೊಳಿಸುತ್ತದೆ. ಉತ್ತಮ ಕಾರ್ಯಮಾಡಿದ ಪತ್ರಿಕಾಕರ್ತರನ್ನು ಸಂದರ್ಭಾನುಸಾರ ಗೌರವಿಸಿ ಪ್ರೋತ್ಸಾಹಿಸುತ್ತಾರೆ. ಶರಣ ಸಂಸ್ಕೃತಿಯ ಸೌರಭ ಸೂಸುವ 'ಪರಂಜ್ಯೋತಿ'ಗೆ ಉಜ್ವಲವಾದ ಭವಿಷ್ಯ ಕಾದಿದೆಯೆಂದು ಧಾರಾಳವಾಗಿ ಹೇಳಬಹುದು. ಹಿಂದಿ, ಇಂಗ್ಲೀಷ ಭಾಷೆಗಳಲ್ಲಿಯೂ 'ಪರಂಜ್ಯೋತಿ' ಪ್ರಕಟಿಸುವ ಯೋಜನೆಯೂ ಶ್ರೀಗಳ ಮನಸ್ಸಿನಲ್ಲಿದೆ.

ಹಿರಿದಾದ ಹಂಬಲ:

ಭಾರತದ ಎಲ್ಲ ರಾಜ್ಯಗಳಲ್ಲಿಯೂ ಆಯಾ ರಾಜ್ಯದ ಭಾಷೆಗಳಲ್ಲಿ ಶರಣ ಸಂಸ್ಕೃತಿಯ ಗ್ರಂಥಗಳನ್ನು ಪ್ರಕಟಿಸುವ ಹಿರಿದಾದ ಹಂಬಲ ಜಗದ್ಗುರುಗಳ ಮನದಲ್ಲಿ ಮನೆಮಾಡಿಕೊಂಡಿದೆ. ಅಲ್ಲದೆ ಸಭೆ-ಸಮ್ಮೇಳನಗಳನ್ನು ಸಂಸ್ಕೃತಿ ಪ್ರಚಾರೋಪನ್ಯಾಸ ಶಿಬಿರಗಳನ್ನು ಏರ್ಪಡಿಸುವ ಪೂರ್ವಸಿದ್ಧತೆ ನಡೆದಿದೆ. ಈಗಾಗಲೇ ಹಿಂದಿ, ಇಂಗ್ಲೀಷ್, ತೆಲಗು, ತಮಿಳು ಭಾಷೆಗಳಲ್ಲಿ ಅನೇಕ ಕೃತಿಗಳು ಅನುವಾದಗೊಂಡಿವೆ. ಅಭ್ಯಾಸ ಅನುಭವ ಚಿಂತನ-ಮಂಥನಗಳ ಅಮೃತಫಲವಾಗಿ ಜಗದ್ಗುರುಗಳಲ್ಲಿ ಅಧ್ಯಾತ್ಮದ ಹೊನಲಿದೆ, ಸಾಹಿತ್ಯದ ಪ್ರವಾಹವಿದೆ, ತತ್ವಜ್ಞಾನದ ಮಡುವಿದೆ; ಸಮಾಜ ಸುಧಾರಣೆಯ

ಮನಸ್ಸಿದೆ. ಅಂತೆಯೇ ಪರಮಪೂಜ್ಯ ಜಗದ್ಗುರುಗಳು ಹಮ್ಮಿಕೊಂಡ ಪ್ರತಿಯೊಂದು ಕಾರ್ಯಗಳು ಯಶಸ್ವಿಯಾಗಿ ಪೂರ್ತಿಗೊಂಡಿವೆ. ಅದಮ್ಯ ಉತ್ಸಾಹದಿಂದ ತಾವು ಕೈಕೊಂಡ ಸತ್ಯಸಂಕಲ್ಪಗಳನ್ನು ಕಾರ್ಯಗತ ಮಾಡುವಲ್ಲಿ 'ಗಣಾಚಾರಿ'ಗಳೇ ಸರಿ. ಸಾಹಿತ್ಯ ಸರಸ್ವತಿಯ ವರಪುತ್ರರಾಗಿ ಸರ್ವಧರ್ಮಸಮನ್ವಯಾಚಾರ್ಯರಾಗಿ ಕರ್ನಾಟಕದ ಧಾರ್ಮಿಕ ಕ್ಷೇತ್ರದಲ್ಲಿ ವಿನೂತನ ಕ್ರಾಂತಿ ಮಾಡುತ್ತಿರುವ ಶ್ರೀ ಮನ್ನಿರಂಜನ ಜಗದ್ಗುರುಗಳು ನೂರಾರು ವರುಷದ ಬಾಳು ಬೆಳಗುವಂತಾಗಲೆಂದು ಹೃದಯತುಂಬಿ ಹಾರೈಸುತ್ತೇವೆ.

□ □

ಆಂಗ್ಲ ಸಾಹಿತ್ಯಕ್ಕೆ ಮೂರುಸಾವಿರಮಠದ ಕೊಡುಗೆ

—ಸಿ. ಎನ್. ಹಿರೇಮಠ

ನಾಡಿಗೇ ಕಳಶಪ್ರಾಯವಾದ ಮೂರುಸಾವಿರಮಠವು ನಿರಂತರವಾಗಿ ದಾಸೋಹ ಸೇವೆಗೈಯುತ್ತಾ ಜನಸೇವೆ ಮಾಡುತ್ತಾ ಬಂದಿದೆ. ನಮ್ಮ ನಾಡಿನಲ್ಲಿ ಅನೇಕ ಮಹನೀಯರು ಮಹಾಸ್ವಾಮಿಗಳು ನಾಡಿನ ಸಮಗ್ರ ಕಲ್ಯಾಣಕ್ಕಾಗಿ ಸರ್ವತೋಮುಖ ಅಭಿವೃದ್ಧಿಗಾಗಿ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ವಿದ್ಯಾದೃಷ್ಟಿಯಿಂದ ಹಗಲಿರುಳೂ ದುಡಿಯುತ್ತ ಬಂದಿದ್ದಾರೆ. ಅಂಥ ಮಹನೀಯರಲ್ಲಿ ಇಂದಿನ ಶತಮಾನದಲ್ಲಿ ಮೂರುಸಾವಿರ ಮಠದ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಅಗ್ರಸ್ಥಾನದಲ್ಲಿದ್ದಾರೆ. ಪರಮ ಪೂಜ್ಯ ಜಗದ್ಗುರುಗಳು ಅಪ್ರತಿಮ ಮೇಧಾವಿಗಳು ನಿಷ್ಕಲಂಕ ಚಾರಿತ್ರರು. ಸಂಯಮಿಗಳು, ವೈರಾಗ್ಯ ಸಂಪನ್ನರು, ಲಿಂಗಪೂಜಾ ನಿಷ್ಠರು, ನಿಸ್ಪೃಹಿಗಳು, ಭಕ್ತವತ್ಸಲರು, ಲೋಕೋದ್ಧಾರಕರು, ಪರಮ ತಪಸ್ವಿಗಳು, **ಜಗದ್ವಂದ್ಯರು.** ಕನ್ನಡನಾಡು ನುಡಿ ಸಾಹಿತ್ಯ ಧರ್ಮ ಸಮಾಜದ ಉತ್ತರೋತ್ತರ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿಯುತ್ತಿರುವವರು. ಈಗಿನ ಜಗದ್ಗುರುಗಳು ವಿದ್ವಾಂಸರು ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ ಹೀಗೆ ಚತುರ್ಭಾಷಾ ಪಂಡಿತರು ವೀರಶೈವ ಸಿದ್ಧಾಂತದಲ್ಲಿ ಪಾರಂಗತರು, ಉತ್ತಮ ವಾಗ್ಮಿಗಳು, ಉತ್ತಮ ಲೇಖಕರು, ಅತ್ಯಂತ ಮೇಧಾವಿಗಳು, ಲೌಕಿಕ ವ್ಯವಹಾರದಲ್ಲಿ ಚತುರರು ಗುಣಪಕ್ಷಪಾತಿಗಳು, ಭಕ್ತವತ್ಸಲರು, ಶಾಂತ ಸ್ವಭಾವಿಗಳು, ಕರ್ತೃತ್ವ ಶಾಲಿಗಳು, ನಿಸ್ಪೃಹರು ಮನಸ್ಯೇಕಂ, ವಚಸ್ಯೇಕಂ, ಧರ್ಮಣ್ಯೇಕಂ ಎಂಬ ಅದ್ವಿತೀಯ ಮಹಾಂತರು.

ಅವರು ಅಮೋಘ ಕರ್ತೃತ್ವ ಶಕ್ತಿಯುಳ್ಳವರು, ಅವರು ಪಟ್ಟಾಭಿಷಿಕ್ತರಾದ ವರ್ಷದಿಂದ ಇಲ್ಲಿಯವರೆಗೆ ನಾಡು ನುಡಿ, ಸಾಹಿತ್ಯ ಸಂಸ್ಕೃತಿ, ಧರ್ಮದ ಸರ್ವತೋಮುಖ ಅಭಿವೃದ್ಧಿಗಾಗಿ ಅನವರತ ದುಡಿಯುತ್ತ ಬಂದಿದ್ದಾರೆ. ಈ ದಿಶೆಯಲ್ಲಿ ಅವರು ಹಮ್ಮಿಕೊಂಡ ಮಹಾನ್ ಕಾರ್ಯಗಳಲ್ಲಿ ಧರ್ಮ ಪ್ರಸಾರ ಮಂಡಳಿಯೂ ಒಂದು ಅದು ಧರ್ಮ ಸಾಹಿತ್ಯ ಸಂಸ್ಕೃತಿಗೆ ಸಂಬಂಧಪಟ್ಟ ಪುಸ್ತಕಗಳ ಪ್ರಕಟಣೆಯಲ್ಲಿ ಒಂದು ಅಭೂತಪೂರ್ವ ಯಶಸ್ಸನ್ನು ಸಂಪಾದಿಸಿದೆ. ಬಹುಶಃ ಯಾವ ವಿಶ್ವವಿದ್ಯಾಲಯವೂ ಮಾಡದ ಮಹಾನ್ ಕಾರ್ಯವನ್ನು ಈ ಸಂಸ್ಥೆ ಮಾಡಿದೆ ಮಾಡುತ್ತಿದೆ. ಎಂದರೆ ಯಾವ ಅತಿಶಯೋಕ್ತಿಯೂ ಅಲ್ಲ.

ಪರಮ ಪೂಜ್ಯ ಶ್ರೀಗಳನ್ನು ನೆನೆದಾಗಲೆಲ್ಲ 'ಶಿವಯೋಗಿಯ ಶರೀರಂ ವೃಥಾ

ಕೆಡಲಾಗದು. ಅನುದಿನವೂ ಕಾಯಕಂ ನಡೆಯುತ್ತಿರಬೇಕು' ಎಂಬ ಸಿದ್ಧರಾಮನ ಆದರ್ಶ ನೆನಪಾಗುತ್ತದೆ. ಆ ಆದರ್ಶವನ್ನು ಶ್ರೀಗಳು ಅಕ್ಷರಶಃ ನನಸಾಗಿಸಿದ್ದಾರೆ.

ಧರ್ಮ ಪ್ರಸಾರಕ ಮಂಡಳಿಯ ಮುಖಾಂತರ ಜಗದ್ಗುರುಗಳು ಧರ್ಮ ಜಾಗ್ರತೆಯ ಕಾರ್ಯವನ್ನು ಬಹಳ ಸಮರ್ಪಕವಾಗಿ ಮಾಡುತ್ತ ಬಂದಿದ್ದಾರೆ. ಅನ್ನ ದಾಸೋಹ, ಜ್ಞಾನ ದಾಸೋಹವನ್ನು ಶ್ರೀ ಮಠವು ನಿರಂತರವೂ ನಡೆಸುತ್ತ ಬಂದಿದೆ. ಹೊಟ್ಟೆಯ ಹಸಿವು ಮೂರು ತಾಸಿನದು ನೆತ್ತಿಯ ಹಸಿವು ನಿರಂತರ. ಜನಮನದ ಈ ನೆತ್ತಿಯ ಹಸಿವನ್ನು ಹಿಂಗಿಸುವಲ್ಲಿ ಶ್ರೀ ಮಠವು ಕೃತ ಕೃತ್ಯವಾಗಿದೆ. ಈ ಅನ್ನ ದಾಸೋಹ ಮತ್ತು ಜ್ಞಾನ ದಾಸೋಹದಿಂದ ಜನರ ತನು ಮನ ಭಾವದ ಕಾಳಿಕೆ ಕಳೆದು ಅರಿವು ಮೂಡಿಸಿ ಧರ್ಮ ದೀಪ್ತಿಯನ್ನು ಬೆಳಗಿಸಿ ಧರ್ಮ ಜಾಗ್ರತೆಯನ್ನುಂಟು ಮಾಡುವಲ್ಲಿ ಶ್ರೀ ಮಠವು ಕೃತ ಕೃತ್ಯವಾಗಿದೆ.

ಈಗಾಗಲೇ ಧರ್ಮ ಪ್ರಸಾರಕ ಮಂಡಳಿಯು ಹಲವಾರು ಮಹತ್ವಪೂರ್ಣ ಗ್ರಂಥಗಳ ಇಂಗ್ಲೀಷ ಅನುವಾದಗಳನ್ನು ಸಮರ್ಥವಾದ ಪ್ರತಿಭಾನ್ವಿತ ವಿದ್ವಾಂಸರಿಂದ ಮಾಡಿಸಿ ಅವುಗಳ ಪ್ರಕಟಣೆ ಕೈಗೊಂಡಿದೆ. ಅವು ಅನುವಾದಿತ ಕೃತಿಗಳಾದರೂ ಮೂಲಗಳ ಅಂತಃಸತ್ವವನ್ನು ಯಥಾವತ್ತಾಗಿ ಪ್ರತಿಬಿಂಬಿಸುವಲ್ಲಿ ಯಶಸ್ವಿಯಾಗಿವೆ. ಮೂಲ ಕೃತಿಯ ದರ್ಶನಕ್ಕೆ ಚ್ಯುತಿ ಬಾರದಂತೆ ಎಚ್ಚರಿಕೆ ವಹಿಸಿದ್ದಾರೆ. ಜನರಲ್ಲಿ ಧಾರ್ಮಿಕ ಜಾಗ್ರತಿ ಮತ್ತು ಧರ್ಮ ಪ್ರಸಾರ ಮಾಡುವಲ್ಲಿ ಈ ಅನುವಾದಗಳು ಸಾಕಷ್ಟು ಪ್ರಗತಿ ಮಾಡಿವೆ. ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ವೀರಶೈವ ಧರ್ಮದ ಮಹಾ ಸೌಧದ ಆಧಾರ ಸ್ತಂಭರೆನಿಸಿದ ಐದು ವೀರಶೈವ ಮಹಾ ಸಂತರ ಜೀವನ ಸಂದೇಶವನ್ನೊಳಗೊಂಡ ಐದು ಮಹಾ ಕಾದಂಬರಿಗಳನ್ನು ಬರೆದಿದ್ದಾರೆ. ಅವು 'ಕದಳಿಯ ಕರ್ಪೂರ' 'ಪರಿಪೂರ್ಣ ದೆಡೆಗೆ' 'ನೆರಳಾಚೆಯ ಬೆಳಕು' 'ಕರ್ತಾರನ ಕಮ್ಮಟ' 'ಜ್ಯೋತಿ ಬೆಳಗುತಿದೆ'–ಇವು ಕ್ರಮವಾಗಿ ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧರಾಮ, ಬಸವಣ್ಣ ಮತ್ತು ನಿಜಗುಣ ಶಿವಯೋಗಿಗಳ ಜೀವನ, ಸಂದೇಶ ಕುರಿತಾಗಿವೆ. ಕನ್ನಡ ನಾಡ ಜನತೆ ಅವರಿಗೆ ನಿರಂತರವೂ ಕೃತಜ್ಞರಾಗುವಂತೆ ಮಾಡಿದ್ದಾರೆ. ಇಂಥ ಬರವಣಿಗೆಗಳ ಮುಖಾಂತರ ಅವರು ಕನ್ನಡ ನಾಡು, ನುಡಿ, ಸಾಹಿತ್ಯ, ಧರ್ಮ, ಸಂಸ್ಕೃತಿಗಳಿಗೆ ಅಮೂಲ್ಯವಾದ ಕೊಡುಗೆಗಳನ್ನು ಕೊಟ್ಟಿದ್ದಾರೆ. ನಮ್ಮ ಶರಣರು ವಿಶ್ವ ಮಾನವರು ಅವರು ಸಾಂದುದು ವಿಶ್ವ ಧರ್ಮ ಅವರು ಎಸಗಿದ ಮಹತ್ತರ ಕ್ರಾಂತಿ ಸಾಧನೆಗಳು, ಸಾರಿದ ಸಂದೇಶ ಎಲ್ಲ ಮಾನವರಿಗೂ ಮುಟ್ಟಬೇಕು. ಶೀತಲ ಯುದ್ಧದ ಇಂದಿನ ಭೀಕರ ಪರಿಸ್ಥಿತಿಯಲ್ಲಿ ಜಗತ್ತು ಸರ್ವ ವಿನಾಶದ ಪ್ರಪಾತದತ್ತ ಧುಮುಕುತ್ತಿರುವಾಗ ಶರಣ ಜೀವನ, ಶರಣ ಸಂದೇಶ ಇಂದಿನ ಜನತೆಗೆ ತಾರಕ ಮಂತ್ರವಾಗಬಹುದು. ಆದ್ದರಿಂದ ಇವು ಕನ್ನಡಕ್ಕಷ್ಟೇ ಕನ್ನಡಿಗರಿಗಷ್ಟೆ ಸೀಮಿತವಾಗಬಾರದು. ಜಗತ್ತಿನ ಜನ ಮನಕ್ಕೂ ಮುಟ್ಟಬೇಕು. ಆದ್ದರಿಂದ ಅಂತರರಾಷ್ಟ್ರೀಯ ಭಾಷೆಯಲ್ಲಿ ಅನುವಾದಿತವಾಗಬೇಕು ಎಂಬ ಹೃದಯದ

ತೀರದ ಹಂಬಲ ನನಗಿತ್ತು. ಆದ್ದರಿಂದ ತುಂಬಾ ಅಧೈರ್ಯದಿಂದಲೇ ಅನುವಾದದ ಈ ಕಾರ್ಯವನ್ನು ಕೈಕೊಂಡೆ.

ನಾನು ಮೊದಲು ಅನುವಾದಗೊಳಿಸಿದ್ದು 'ಕದಳಿಯ ಕರ್ಪೂರ'. ನಮ್ಮ ಶರಣ ಬಸವೇಶ್ವರ ಕಲಾ ಕಾಲೇಜಿನ ವಾಚನಾಲಯದಿಂದ ಆ ಕಾದಂಬರಿಯನ್ನು ಓದಲಿಕ್ಕೆ ತೆಗೆದುಕೊಂಡು ಬಂದಿದ್ದೆ. ಆಗ ಆ ಕಾದಂಬರಿಯನ್ನು ಅನುವಾದ ಮಾಡುವ ಯಾವ ವಿಚಾರವೂ ನನಗಿರಲಿಲ್ಲ. ಓದುತ್ತ ಹೋದಂತೆ ಅಕ್ಕನ ಜೀವನ, ವ್ಯಕ್ತಿತ್ವ ಅಪೂರ್ವ ಸಾಧನೆ ಮತ್ತು ಸಂದೇಶ ನನ್ನ ಮೇಲೆ ಅವರ್ಣನೀಯ ಪರಿಣಾಮ ಬೀರಿತು. ಆಕೆಯ ಜೀವನ, ವ್ಯಕ್ತಿತ್ವ ಮತ್ತು ಸಂದೇಶ ಜಗತ್ತಿನ ಎಲ್ಲ ಮಾನವರಿಗೆ ದಾರಿ ದೀಪವಾಗಬಹುದು. ಆದ್ದರಿಂದ ಅಂತರರಾಷ್ಟ್ರೀಯ ಭಾಷೆಯಾದ ಇಂಗ್ಲೀಷಿನಲ್ಲಿ ಇದು ಅನುವಾದಿತವಾದರೆ ಆ ಸಂದೇಶ ಎಲ್ಲರ ಮನವನ್ನು ಮುಟ್ಟಬಹುದು ಎಂದೆನಿಸಿತು. ಆದ್ದರಿಂದ ಹೆದರುತ್ತಲೇ ಈ ಅನುವಾದ ಕೆಲಸವನ್ನು ಕೈಕೊಂಡೆ. ವೀರಶೈವ ಧರ್ಮದ ಧಾರ್ಮಿಕ, ಆಧ್ಯಾತ್ಮಿಕ, ಪಾರಿಭಾಷಿಕ, ಶಬ್ದಗಳಿಗೆ ಸರಿ ದೊರೆಯಾದ ಶಬ್ದಗಳು ಇಂಗ್ಲೀಷಿನಲ್ಲಿ ದೊರೆಯುವದು ಕಠಿಣ ಮೂಲ ದರ್ಶನಕ್ಕೆ ಚ್ಯುತಿಬಾರದಂತೆ ಅದರ ಅಂತಃಸತ್ವಕ್ಕೆ ಯಾವ ರೀತಿಯ ಕುಂದು ಬಾರದಂತೆ ಅನುವಾದಿಸುವ ಶಕ್ತಿ ನನಗಿದೆಯೇ? ಎಂಬ ಸಂದೇಹ ಸ್ವಾಭಾವಿಕವಾಗಿಯೇ ಕಾಡಿತು. ಆದ್ದರಿಂದ ಮೊದಲು ಕೆಲವು ಸಾಲುಗಳನ್ನು ಅನುವಾದಿಸಿ ನೋಡಿದೆ. ಹಾಗೆಯೇ ಕುಂಟುತ್ತ ಎಡವುತ್ತ ಸಾಗಿದೆ. ಇಂಗ್ಲೀಷಿನಲ್ಲಿ ಒಂದು ಮಾತು ಬರುತ್ತದೆ. "ದೇವತೆಗಳು ಹೆಜ್ಜೆ ಇಡಲು ಹೆದರುವಲ್ಲಿ ಮೂರ್ಖರು ಮುನ್ನುಗ್ಗುತ್ತಾರೆ". ಇಲ್ಲಿಯವರೆಗೂ ಯಾರೂ ಕೈ ಕೊಳ್ಳದ ಈ ಕೆಲಸಕ್ಕೆ ಕೈ ಹಾಕಿ ತಪ್ಪು ಮಾಡಿದೆನೆ? ಎನಿಸಿತು. ಆದರೆ ಅಕ್ಕನೆ ಕರುಣಾಳು ಬೆಳಕಾಗಿ ಮುಸುಗಿದ ಮಬ್ಬಿನಲ್ಲಿ ಕೈ ಹಿಡಿದು ನಡೆಸಿರಬೇಕು. ಹೆಚ್ಚಿನ ಅಡೆ ತಡೆ ಇಲ್ಲದೆ ಭಾಷಾಂತರ ಕಾರ್ಯ ನಡೆಯಿತು. ಕೈ ಹಿಡಿದು ನನ್ನಿಂದ ಬರೆಸಿದವಳು ಆ ಪರಾಶಕ್ತಿ ಸ್ವರೂಪಿಣಿಯಾದ ಅಕ್ಕಮಹಾದೇವಿಯೇ ಎಂಬ ದೃಢವಾದ ನಂಬಿಗೆ ನನಗಿದೆ. ನಾನು ಹಮ್ಮಿಕೊಂಡ ಈ ಕಾರ್ಯವನ್ನು ನೆನೆದಾಗಲೆಲ್ಲ ನನಗೆ ಸಂತೋಷವೆನಿಸಿದೆ. ಜೀವನ ಸಾರ್ಥಕವೆನಿಸಿದೆ. ಶರಣ ಧರ್ಮ, ಜೀವನ, ಸಂದೇಶವನ್ನು ಕನ್ನಡ ಬಾರದ ಜನರಿಗೆ, ಅದರಲ್ಲಿಯೂ ಹೊರ ನಾಡಿನವರಿಗೆ ಮುಟ್ಟಿಸುವಲ್ಲಿ ತಕ್ಕಮಟ್ಟಿಗೆ ಯಶಸ್ವಿಯಾಗಿದ್ದೇನೆ ಎನಿಸುತ್ತದೆ.

ಒಂದು ಭಾಷೆಯ ಸಾಹಿತ್ಯ ಶ್ರೀಮಂತವಾಗಬೇಕಾದರೆ ಬೇರೆ ಭಾಷೆಗಳಿಂದ ಭಾಷಾಂತರ ಅತ್ಯವಶ್ಯವಾದುದು. ಎರಡೂ ಭಾಷೆಗಳ ವಿಚಾರ ವಿನಿಮಯ ಅವಶ್ಯವಾಗಬೇಕು. ಈ ರೀತಿಯ ಭಾಷಾ ಭಾವ ಸಂಗಮ ಪರಸ್ಪರ ಸೌಹಾರ್ದತೆಗೆ ತಿಳುವಳಿಕೆಯ ಹೃದಯ ಸಂಗಮವಾಗುವದರಲ್ಲಿ ಸಂದೇಹವಿಲ್ಲ.

ನನಗೆ ಅತ್ಯಂತ ಮೆಚ್ಚಿನ ಮತ್ತು ಅತ್ಯಂತ ಸಂತೋಷ ಕೊಟ್ಟ ಕಾದಂಬರಿ

'ಕರ್ತಾರನ ಕಮ್ಮಟ'. ಬಸವಣ್ಣನವರ ಬದುಕು, ಬರಹ, ಸಾಧನೆ, ಸಿದ್ಧಿ, ಸಂದೇಶಗಳ ಸುಂದರ ಹಂದರದ ಮೇಲೆ ನಿರ್ಮಿತವಾದ ಕಾದಂಬರಿಯದು. 'ಜ್ಯೋತಿ ಬೆಳಗುತಿದೆ'ಯ ಅನುವಾದ ಮುಗಿದ ನಂತರ ಅದನ್ನು ಎತ್ತಿಕೊಂಡೆ. ಅನುವಾದಕ್ಕೆ ತೊಡಗುವ ಮುನ್ನ ಒಮ್ಮೆ ಸಮಗ್ರ ಓದಿ ಆನಂದಿಸಿದೆ, ಅನುಭವಿಸಿದೆ, ರೋಮಾಂಚನಗೊಂಡೆ. ಗದ್ಯ ಮಹಾ ಕಾವ್ಯವೆಂದೇ ಕರೆಯಬಹುದಾದ ಆ ಮಹಾ ಕಾದಂಬರಿ ಏನೆಲ್ಲ ಒಳಗೊಂಡಿದೆ. ಆ ಕಾಲದ ಸಾಮಾಜಿಕ ವ್ಯವಸ್ಥೆ, ರಾಜಕೀಯ, ಜನಜೀವನ, ಸಂಸ್ಕೃತಿ, ಬಸವಣ್ಣನವರ ಜೀವನ, ಸಾಧನೆ, ಸಿದ್ಧಿ, ಹನ್ನೆರಡನೆಯ ಶತಮಾನದ ಅಭೂತಪೂರ್ವ ಕ್ರಾಂತಿ, ಎಲ್ಲ ಶರಣರ ದಿಗ್ದರ್ಶನ ಇವೆಲ್ಲವನ್ನೂ ಅದು ಒಳಗೊಂಡಿದೆ. ಆ ಮಹಾ ಕಾದಂಬರಿಯನ್ನು ಓದಿ 'ಧನ್ಯೋಽಸ್ಮಿ' ಎಂಬ ಭಾವನೆ ತುಂಬಿಕೊಂಡೆ. ಹನ್ನೆರಡನೆಯ ಶತಮಾನದ ಈ ಅಭೂತಪೂರ್ವ ಮಹಾನ್ ಕ್ರಾಂತಿಗೆ ಬಸವಣ್ಣನವರ ನೇತೃತ್ವದಲ್ಲಿ ಕಾರಣರಾದ ಮಹಾ ಚೇತನರಾದ ವಿಶ್ವ ಮಾನವರಾದ ಶರಣರ ದಿಗ್ದರ್ಶನದಿಂದ ಜಗತ್ತಿನ ಮಾನವರೇ ಪುನೀತರಾಗಬಹುದು ಎಂಬ ಭಾವನೆ ನನಗೆ ಬಂದಿತು. ಆದ್ದರಿಂದ ಈ ಮಹಾ ಕಾದಂಬರಿಯ ಇಂಗ್ಲೀಷ ಅನುವಾದಕ್ಕೆ ಅಣಿಯಾದೆ. ಅನುವಾದದಲ್ಲಿ ಅನಂತ ವಿಘ್ನಗಳು ಅಡೆತಡೆಗಳು ಉಂಟಾದವು. ಆ ಕಾದಂಬರಿಯ ಬೃಹದ್ಗಾತ್ರವೇ ನನ್ನನ್ನು ಮೊದಲು ಅಧೀರನನ್ನಾಗಿಸಿತು. ಆದರೂ ಕುಂಟುತ್ತ, ಎಡವುತ್ತ ಹೇಗೋ ಸಾಗಿದೆ. ನನ್ನ ಆರಾಧ್ಯ ದೈವರಾದ ಬಸವಣ್ಣನವರೇ ನನ್ನನ್ನು ಕೈಹಿಡಿದು ನಡೆಸಿರಬೇಕು ಎಂಬ ಅಚಲ ವಿಶ್ವಾಸ ನನಗಿದೆ. ಈ ಅನುವಾದ ಕೃತಿಯ ಹಿಂದೆ ಕಾಣದ ಕೈಯಾಗಿ ನನ್ನಿಂದ ಬರೆಸಿದ, ಮುನ್ನಡೆಸಿದ ವಿಶ್ವ ಚೈತನ್ಯ ಶಕ್ತಿ ಬಸವಣ್ಣನವರು ನಾನು ಇಲ್ಲಿಯವರೆಗೂ ಅನುವಾದಿಸಿದ ಕಾದಂಬರಿಗಳಲ್ಲಿ ಬೃಹತ್ತಿನಲ್ಲಿ, ಮಹತ್ತಿನಲ್ಲಿ ಈ ಕಾದಂಬರಿಗೆ ಅತ್ಯಂತ ಹಿರಿದಾದ ಸ್ಥಾನವಿದೆ. ಬಸವಣ್ಣನವರ ಜೀವನ, ಸಾಧನೆ, ಸಿದ್ಧಿ, ಸಂದೇಶ ಜಗತ್ತಿನ ಜನಕ್ಕೆ ತಲುಪುವಂತಾಗಿದೆ. ಬಸವಣ್ಣನವರ ಸಂದೇಶ ವಿಶ್ವ ಮಾನವ ಸಂದೇಶವಾಗಿದೆ. ಆದ್ದರಿಂದ ಈ ಸಂದೇಶ ಜಗತ್ತಿನ ಎಲ್ಲ ಮಾನವರಿಗೂ ತಲುಪುವಂತಾಗಬೇಕು. ಈ ಸದುದ್ದೇಶದಿಂದಲೇ ನಾನು ಬಸವಣ್ಣನವರ ಜೀವನ, ಸಾಧನೆ, ಸಿದ್ಧಿ ಕುರಿತಾದ ಈ ಕಾದಂಬರಿಯ ಇಂಗ್ಲೀಷ ಅನುವಾದದ ಸಾಹಸಕ್ಕಿಳಿದೆ.

'ಕರ್ತಾರನ ಕಮ್ಮಟ'ದ ನಂತರ ಕರ್ಮಯೋಗಿ ಸೊನ್ನಲಿಗೆಯ ಸಿದ್ಧರಾಮನ ಜೀವನ, ಸಾಧನೆ, ಸಿದ್ಧಿ, ಸಂದೇಶಗಳನ್ನು ಕುರಿತಾದ ಇನ್ನೊಂದು ಬೃಹತ್, ಮಹತ್ ಕಾದಂಬರಿ 'ನೆರಳಾಚೆಯ ಬೆಳಕು' ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಶೂನ್ಯ ಸಿಂಹಾಸನಾಧಿಪತಿ ಅಲ್ಲಮ ಪ್ರಭುವಿನ ಅಧ್ಯಕ್ಷತೆಯಲ್ಲಿ ಅಸಂಖ್ಯಾತ ಶರಣರು ಎಸಗಿದ ಅಭೂತ ಪೂರ್ವ ರಕ್ತರಹಿತ ಕ್ರಾಂತಿಯ ಚರಮ ಸಿದ್ಧಿಯನ್ನು 'ನೆರಳಾಚೆಯ ಬೆಳಕಿ'ನಲ್ಲಿ ಕಾಣುತ್ತೇವೆ. ಅಲ್ಲಮ, ಚನ್ನಬಸವಣ್ಣ, ಬಸವಣ್ಣನವರ ನಂತರ ಸಿದ್ಧರಾಮನ ನೇತೃತ್ವದಲ್ಲಿ ಈ ಧಾರ್ಮಿಕ ಆಂದೋಲನ ಮುನ್ನಡೆಯಿತು. ಆ ಮಹಾನ್ ಕಾಯಕ ಯೋಗಿಯ 'ಶಿವಯೋಗಿಯ ಶರೀರಂ ವೃಥಾ ಕೆಡಲಾಗದು. ಅನುದಿನವೂ ಕಾಯಕಂ

ಮಾಡುತ್ತಿರಬೇಕು' ಎಂಬ ತತ್ವ ಪ್ರಣಾಲಿಯೇ ಜೀವನಮುಕ್ತರಾಗಿದ್ದ ಸಿದ್ಧರಾಮನ ಸಮಗ್ರ ಸುಂದರ ವ್ಯಕ್ತಿತ್ವವನ್ನು ಈ ಕಾದಂಬರಿ ಬಹು ಸಮರ್ಥವಾಗಿ ಕಟೆದು ನಿಲ್ಲಿಸಿದೆ. ಈ ಕಾದಂಬರಿಯ ಅನುವಾದವನ್ನು 'ಕರ್ತಾರನ ಕಮ್ಮಟ'ದ ಅನುವಾದ ಪೂರ್ಣಗೊಂಡ ನಂತರ ತೆಗೆದುಕೊಂಡೆ. ಈ ಕಾದಂಬರಿಯ ಅನುವಾದದಲ್ಲಿ ಸಂಪೂರ್ಣ ಸಾರ್ಥಕ್ಯವನ್ನು ಕಂಡಿದ್ದೇನೆ. ಈ ಕಾದಂಬರಿಯ ಅನುವಾದದಲ್ಲಿ ನಾನು ಪಟ್ಟ ಪಾಡು ಹೇಳತೀರದು. ಅನುವಾದ ಮಾಡುವುದು ಒಂದು ವ್ಯಥೆಯಾದರೆ ಅವುಗಳನ್ನು ದೋಷ ರಹಿತವಾಗಿ ಬೆರಳಚ್ಚು ಮಾಡಿಸಿ ಬೈಂಡ್ ಮಾಡಿಸಿ ಸಿದ್ಧಗೊಳಿಸುವದೇ ಒಂದು ಕಥೆಯಾಯಿತು. ನಂತರ ಅವುಗಳನ್ನು ಸಿದ್ಧಪಡಿಸಿ ಮೂಲ ಲೇಖಕರಿಗೆ ಕಳಿಸಿಕೊಡಬೇಕಾಯಿತು. ಅವರ ಪರಿಚಯ ನನಗಿರಲಿಲ್ಲ. ಶರಣ ಜೀವನ ಕುರಿತಾದ ಅವರ ಕಾದಂಬರಿಗಳಿಂದಲೇ ನನಗೆ ಅವರ ಶರಣ ವ್ಯಕ್ತಿತ್ವದ ಪರಿಚಯವಾಗಿತ್ತು. ಏನೆನ್ನುವರೋ? ಹೇಗೆ ಸ್ವೀಕರಿಸುವರೋ? ಎಂಬ ಭಯ ನನಗೆ ಕಾಡುತ್ತಿತ್ತು. ಮೊದಲು ನಾನು ಕಳಿಸಿದ್ದು ಕದಳಿಯ ಕರ್ಪೂರದ ಅನುವಾದ ಉತ್ತರ ಬರಬೇಕಾದರೆ ಸ್ವಲ್ಪ ಕಾಲಾವಕಾಶವೇ ಬೇಕಾಯಿತು. ಯಾಕಂದರೆ ಅವರು ಅನುವಾದವನ್ನು ಸಮೂಲಾಗ್ರವಾಗಿ ಓದಿ ತಮ್ಮ ಸಹೃದಯ ಮಿತ್ರರಾದ ಪ್ರೊ. ಎಸ್. ಅನಂತ ನಾರಾಯಣರಿಗೂ ತೋರಿಸಿದರು. ಪ್ರೊ. ಎಸ್. ಅನಂತ ನಾರಾಯಣರು ಮಹಾರಾಜಾ ಕಾಲೇಜಿನಲ್ಲಿ ಇಂಗ್ಲೀಷ ಪ್ರಾಧ್ಯಾಪಕರಾಗಿ ಅದೇ ತಾನೆ ನಿವೃತ್ತರಾಗಿದ್ದರು. ಅವರು ಇಂಗ್ಲೀಷ ಕನ್ನಡ ಎರಡೂ ಭಾಷೆಗಳಲ್ಲಿ ಉದ್ದಾಮ ಪಂಡಿತರು ಮತ್ತು ಪ್ರಸಿದ್ಧ ಲೇಖಕರೂ ಅಹುದು. ಅವರು ಕೂಡಾ ಓದಿ ತಮ್ಮ ಒಪ್ಪಿಗೆಯ ಮುದ್ರೆಯನ್ನು ಒತ್ತಿದ ಮೇಲೆ ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರು ಅನುವಾದವನ್ನು ಮೆಚ್ಚಿ ಪತ್ರ ಬರೆದರು.

ಇನ್ನೂ ಈ ಅನುವಾದ ಕೃತಿಯ ಮುದ್ರಣ ಪ್ರಕಟಣೆಯ ಸಮಸ್ಯೆ ಧುತ್ತೆಂದು ಮುಂದೆ ನಿಂತಿತು. ಈ ಅನುವಾದ ಕೃತಿಯನ್ನು ಕೈಯಲ್ಲಿ ಹಿಡಿದು ಹಲವಾರು ಶ್ರೀಮಂತರ ಮನೆಗಳಿಗೆ ಮಠ ಮಾನ್ಯಗಳ ಸ್ವಾಮಿಗಳ ಕಡೆಗೆ ಓಡಿಯಾಡಿದೆ. ಈ ಕೃತಿಯ ಅಚ್ಚಿಗಾಗಿ ಧನ ಸಹಾಯ ಮಾಡಿ ಎಂದು ಅಂಗಲಾಚಿದೆ. ಆ ಕೃತಿಯನ್ನು ಅವರ ಅವಗಾಹನೆಗೆ ಅವರ ಕೈಯಲ್ಲಿ ಕೊಟ್ಟೆ ಅಲ್ಲಲ್ಲಿ ಕೆಲವು ಭಾಗಗಳನ್ನು ಓದಿಯೂ ತೋರಿಸಿದೆ. ಮೆಚ್ಚುಗೆಯ ಮಾತುಗಳನ್ನೇನೋ ಆಡಿದರು. ಹೊಗಳಿಕೆಯ ಮಾತುಗಳನ್ನು ಬಾಯ್ತುಂಬ ಆಡಿದರು. ಅಚ್ಚಿನ ಪ್ರಕಟಣೆಯ ಸಮಸ್ಯೆ ಎತ್ತಿದಾಗ ಅನುಕಂಪೆಯ ಮಾತುಗಳನ್ನು ತುಟಿಯಿಂದ ಹೊರಗೆ ಆಡಿದರೇನೋ ನಿಜ. ಆ ಹೊಣೆಯನ್ನು ಹೊತ್ತುಕೊಳ್ಳಲು ಯಾರೂ ಮುಂದಾಗಲಿಲ್ಲ. ಸ್ವಾಭಾವಿಕವಾಗಿಯೇ ದೂರ ಸರಿದರು, ಎಲ್ಲಿ ಹೋದರೂ ಯಾರನ್ನೇ ಕೇಳಿದರೂ ನಿರಾಶೆಯ ಮುಖ ಹೊತ್ತು ಮನೆಗೆ ಬರಬೇಕಾಯಿತು. ಮೆಚ್ಚಿಗೆಯ ಮಾತುಗಳನ್ನಾಡಿ ಮೇಲುಪ್ಪರಿಗೆಯ ಮೇಲೆ ಕುಳ್ಳಿರಿಸಿ ಮಹತ್ವದ್ದೇನೋ ಸಾಧಿಸಿದೆವು ತಮ್ಮ ಹೊಣೆಗಾರಿಕೆ ತೀರಿತು ಎಂದು ತಿಳಿಯುವವರು ಬಹಳಷ್ಟು ಜನ. ಇಂಥ ತೀವ್ರತಮ ನಿರಾಶೆಯ ಆಘಾತದಲ್ಲಿ ನಾನು ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡಾಗ ಪರಮ

ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮೂರು ಸಾವಿರ ಮಠ ಹುಬ್ಬಳ್ಳಿ ಯವರ ಆಗಮನ ಕಲ್ಬುರ್ಗಿಗೆ ಆಕಸ್ಮಿಕವಾಗಿ ಆಯಿತು. ಅವರ ದರ್ಶನ ಕಲಬುರ್ಗಿಯ ಶ್ರೇಷ್ಠ ವರ್ತಕರ ಮನೆಯಲ್ಲಿ ನನಗಾಯಿತು. ಅವರನ್ನು ತುಂಬಾ ಹೆದರಿಕೆಯಿಂದಲೇ ಕಂಡೆ. ಪುಸ್ತಕದ ಮುದ್ರಣ ಪ್ರಕಟಣೆಯ ಬಗ್ಗೆ ಕೇಳಿದರೆ ಏನನ್ನುವರೋ? ಎಂಬ ಹೆದರಿಕೆ ನನಗುಂಟಾಯಿತು. ಆದರೂ ಹೇಗೋ ಧೈರ್ಯ ತೆಗೆದುಕೊಂಡು ಕೇಳಿದೆ. ಪೂಜ್ಯರು ಮುಗುಳ್ನಕ್ಕರು. ಆ ಮುಗುಳ್ನಗೆಯಲ್ಲಿಯೇ ಅಭಯ ಹಸ್ತ ಅಡಗಿದ್ದಿತು. ಡಾ. ಎಚ್. ತಿಪ್ಪೇರುದ್ರ ಸ್ವಾಮಿಯವರಿಂದ 'ನಿಮ್ಮ ಭಾಷಾಂತರ ಚನ್ನಾಗಿದೆ ನನ್ನದೇನೂ ಅಭ್ಯಂತರವಿಲ್ಲ' ಎಂಬ ಪತ್ರ ಬಂದರೆ, ನಾವು ಈ ಪ್ರಕಟಣೆಯನ್ನು ಒಪ್ಪಿಕೊಳ್ಳುವೆವು ಎಂದು ಅಪ್ಪಣೆಯಾಯಿತು. ಸುದೈವಕ್ಕೆ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ ಒಪ್ಪಿಗೆಯನ್ನು ಕಳಿಸಿಯೇ ಇದ್ದರು. ಆ ಪತ್ರವನ್ನು ಸಂಗಡ ಒಯ್ದಿದ್ದೆ. ಅದನ್ನು ತೋರಿಸಿದೆ. ಬಹಳ ಖುಶಿ ಪಟ್ಟರು. ಆ ಹಸ್ತಪ್ರತಿಯನ್ನು ಜೆರಾಕ್ಸ್ ಮಾಡಿಸಿ ಕಳಿಸಿ ಕೊಡಿ ಎಂದರು. ಈ ರೀತಿ ಮೂರುಸಾವಿರಮಠ ಜಗದ್ಗುರು ಗಂಗಾಧರ ಧರ್ಮ ಪ್ರಸಾರ ಮಂಡಳಿಯಿಂದ ಪ್ರಕಟಗೊಂಡ ನನ್ನ ಪ್ರಥಮ ಅನುವಾದ ಕದಳಿಯ ಕರ್ಪೂರದ ಅನುವಾದ Soul unto The Sublime. Soul unto The Sublime ಬಿಡುಗಡೆ ಅಂದಿನ ಕರ್ನಾಟಕದ ಗವ್ಹರ್ನರರಾದ ಗೋವಿಂದ ನಾರಾಯಣರವರಿಂದಾಯಿತು. ಅಭೂತ ಪೂರ್ವ ವೈಭವದಿಂದ ಪುಸ್ತಕದ ಬಿಡುಗಡೆಯಾಯಿತು. ನಂತರ 'ಪರಿಪೂರ್ಣ ದೆಡೆಗೆ' 'ಜ್ಯೋತಿ ಬೆಳಗುತಿದೆ' ಕ್ರಮವಾಗಿ 'Towards Perfection, The Light That Never was....' ಎಂಬ ಶೀರ್ಷಿಕೆಗಳಲ್ಲಿ ಬೆಳಕು ಕಂಡವು. ಎಲ್ಲ ಅನುವಾದಗಳ ಪ್ರಕಟಣೆಗಳಿಗೂ ಅದ್ಧೂರಿಯ ಸ್ವಾಗತವು ದೊರೆಯಿತು. 'ಧನ್ಯೋಸ್ಮಿ' ಎಂಬ ಭಾವ ಮೊಳಗಿತು.

ಕರ್ತಾರನ ಕಮ್ಮಟದ ಇಂಗ್ಲೀಷ ಅನುವಾದ The Maker's Mint ಇದೀಗ ಪ್ರಕಟವಾಗುತ್ತಿದೆ. ನಂತರ ನೆರಳಾಚೆಯ ಬೆಳಕಿನ ಅನುವಾದ Light Beyond The Shadow ಮುದ್ರಣ ಮತ್ತು ಪ್ರಕಟಣೆಗಳನ್ನು ಎತ್ತಿಕೊಳ್ಳುವವರಿದ್ದಾರೆ. ಹೀಗೆ ಶರಣ ಜೀವನದ ಮುಖಾಂತರ ಶರಣ ತತ್ವಗಳು, ಶರಣ ಧರ್ಮದ ಪ್ರಚಾರ ಅಂತರರಾಷ್ಟ್ರೀಯ ಮಟ್ಟದಲ್ಲಿ ಯಶಸ್ವಿಯಾಗಿ ಆಗುತ್ತದೆಂದು ಮನಃಪೂರ್ವಕ ನಂಬಿದ್ದೇನೆ.

ಈ ಅನುವಾದಗಳಲ್ಲದೆ ಇನ್ನೂ ಹಲವಾರು ಮಹತ್ವದ ಗ್ರಂಥಗಳ ಇಂಗ್ಲೀಷ ಅನುವಾದಗಳ ಪ್ರಕಟಣೆಗಳನ್ನು ಶ್ರೀ ಮೂರುಸಾವಿರಮಠದ ಧರ್ಮ ಪ್ರಚಾರಕ ಮಂಡಳಿಯು ಕೈಗೊಂಡಿದೆ.

ಪರಮ ಪೂಜ್ಯರಾದ ಜಗದ್ಗುರು ಗಂಗಾಧರ ರಾಜಯೋಗೀಂದ್ರರ ವಚನಗಳ ಸಂಗ್ರಹ 'ಚಿತ್ಸುಮನ' Heart's Blossoms ಎಂಬ ಶೀರ್ಷಿಕೆಯಲ್ಲಿ ಅನುವಾದಿಸಲ್ಪಟ್ಟು

ಪ್ರಕಟಗೊಂಡಿವೆ. ಪ್ರೊ. ಅರ್ಮಾಂಡೋ ಮೆನೆಝೆಸ್‌ಮತ್ತು ಅಂಗಡಿಯವರು ಒಳ್ಳೆ ಸಮರ್ಥ ರೀತಿಯಲ್ಲಿ ಅನುವಾದ ಮಾಡಿದ್ದಾರೆ. ಪೂಜ್ಯ ಗುರುಗಳು ಆಧುನಿಕ ಮಾನವ ಪ್ರಪಂಚಕ್ಕೆ ಶರಣಧರ್ಮ ಹೇಗೆ ತಾರಕ ಮಂತ್ರವಾಗಬಹುದು ಎಂಬುದನ್ನು [illegible]ಯಾಗಿ ತೋರಿಸಿದ್ದಾರೆ. ಶರಣ ವಿಚಾರಗಳು ಆಧುನಿಕ ಜೀವನಕ್ಕೆ ಒಗ್ಗುವಂತ ಸರಳ ಸುಂದರ ಶೈಲಿಯಲ್ಲಿ ವಚನಗಳನ್ನು ಬರೆದಿದ್ದಾರೆ. ಶ್ರೀಗಳವರ ಶೈಲಿ ಹೃದಯಂಗಮವಾಗಿದೆ. ಈರ್ವರು ಮಹಾ ವಿದ್ವಾಂಸರಿಂದ ತರ್ಜುಮೆಗೊಂಡ ಅವರ ಈ ಕೃತಿಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಅಭೂತಪೂರ್ವ ಸ್ವಾಗತ ದೊರಕಿದೆ. ಈ ಪುಸ್ತಕದ ಬಿಡುಗಡೆಯನ್ನು ಡಾ. ಹೋಮರ್ ಜಾಕ್ ಅವರು ಡಬ್ಲ್ಯು. ಸಿ. ಆರ್. ಪಿಯ ಉಪಾಧ್ಯಕ್ಷರಾದ ಅಮೇರಿಕೆಯ ಡಾ. ಡಾಗ್ರೀಲೆ ಅವರ ಅಧ್ಯಕ್ಷತೆಯಲ್ಲಿ ಮಾಡಿದರು. ಪ್ರೊ. ಎ. ಎಲ್. ಹಿರೇಮಠರು ಪುಸ್ತಕ ಪರಿಚಯ ಮಾಡಿದರು. ಆ ಮಂಗಲಮಯ ರೋಮಾಂಚಕಾರೀ ಸನ್ನಿವೇಶದಲ್ಲಿ ಶ್ರೀ ಜಗದ್ಗುರುಗಳು ಅಪ್ಪಣೆಕೊಡಿಸಿದಂತೆ Hearts Blossoms ದಲ್ಲಿ ಹೆಚ್ಚಾಗಿ ಜೀವನದ ಅನುಭವಗಳೇ ಶಬ್ದರೂಪ ತೊಟ್ಟಿವೆ. ಸಾಧಕ ಜೀವನದಲ್ಲಿಯ ಕಷ್ಟ ಸುಖಗಳೇ ಇಲ್ಲಿ ಕಾಣುತ್ತೇವೆ. ಪ್ರಮುಖರಾದ ವೀರಶೈವ ಶರಣರ ಆಯ್ದ ವಚನಗಳ ಇಂಗ್ಲೀಷ ಅನುವಾದವನ್ನು ಪ್ರೊ. ಅನಂತ ನಾರಾಯಣರವರಿಂದ ಮಾಡಿಸಿ ಪೂಜ್ಯ ಜಗದ್ಗುರುಗಳು ತಮ್ಮ ಧರ್ಮ ಪ್ರಚಾರಕ ಮಂಡಳಿಯಿಂದ ಪ್ರಕಟಿಸಿದ್ದಾರೆ. Thus Sang the Veerashaiva Mystics ಎಂಬ ಶೀರ್ಷಿಕೆಯಲ್ಲಿ ಈಗಾಗಲೇ ಅಲ್ಲಮ ಪ್ರಭು, ಬಸವಣ್ಣ, ಅಕ್ಕಮಹಾದೇವಿಯವರ ಆಯ್ದ ವಚನಗಳ ಇಂಗ್ಲೀಷ ಅನುವಾದಗಳು ಶ್ರೀ ಮಠದಿಂದ ಪ್ರಕಟವಾಗಿವೆ. ಇವು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಮುನ್ನುಡಿಯನ್ನು ಒಳಗೊಂಡಿವೆ. ಈ ಭಾಷಾಂತರಗಳ ಪ್ರಕಟಣೆಯ ಮೂಲಕ ಪೂಜ್ಯ ಜಗದ್ಗುರುಗಳು ಅಭೂತಪೂರ್ವ ರೀತಿಯಲ್ಲಿ ಧರ್ಮ, ಸಮಾಜ, ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ.

ಇವುಗಳಲ್ಲದೆ ಶ್ರೀಮಠದಿಂದ ಇನ್ನೂ ಮಹತ್ವಪೂರ್ಣ ಗ್ರಂಥಗಳು ಇಂಗ್ಲೀಷಿನಲ್ಲಿ ಪ್ರಕಟವಾಗಿವೆ. ಹಾನಗಲ್ ಶ್ರೀ ಕುಮಾರ ಶಿವಯೋಗಿಗಳನ್ನು ಕುರಿತು ಎರಡು ಗ್ರಂಥಗಳು Shri Kumara Shivayogi of Hanagal-A Life Sketch ಮತ್ತು Yuga Purusha ಎಂಬ ಶೀರ್ಷಿಕೆಯಲ್ಲಿ ಪ್ರೊ. ಎಲ್.ಜಿ. ಹಿರೇಮಠ ಮತ್ತು ಪಂಚಾಕ್ಷರಿ ಹಿರೇಮಠ ಅವರಿಂದ ಬರೆಯಲ್ಪಟ್ಟು ಪ್ರಕಟಗೊಂಡಿವೆ ಮತ್ತು ಬೆಳಗಾವಿಯ ಪ್ರಸಿದ್ಧ ಡಾಕ್ಟರರಾದ ಪಿ. ಉಮಾಶಂಕರರು ಬರೆದ A Garland of Pearls or Basava Mala ಮತ್ತು Shiva Geeta ಎಂಬ ಎರಡು ಪುಸ್ತಕಗಳು ಪ್ರಕಟವಾಗಿವೆ. ಮೊದಲನೆಯದು ಬಸವಣ್ಣನವರ ಕೆಲವು ಮುಖ್ಯ ವಚನಗಳನ್ನು ಸರಳ ಸುಂದರ ಶೈಲಿಯಲ್ಲಿ ವಿಶ್ಲೇಷಿಸುತ್ತದೆ. ಎರಡನೆಯದು ಗುರುವು ಶಿಷ್ಯನಿಗೆ ಮಾಡುವ ಬೋಧಾಮೃತವಾಗಿದೆ.

ಪ್ರೊ. ಎ. ಎಲ್. ಹಿರೇಮಠರು ಬರೆದ Religion and Social Justice

ಎಂಬ ಗ್ರಂಥ ೧೯೭೫ ರಲ್ಲಿ ಶ್ರೀಮಠದಿಂದ ಪ್ರಕಟಗೊಂಡಿದೆ. ಈ ಪುಸ್ತಕವು ಒಂದು ಮಹತ್ವದ ಚರ್ಚೆಯಾಗಿದ್ದು ಧರ್ಮ ಮತ್ತು ಸಾಮಾಜಿಕ ನ್ಯಾಯದ ವೇದಿಕೆಯ ಮೇಲೆ ಎಲ್ಲ ಧರ್ಮದ ಎಲ್ಲ ಜಾತಿ ಪಂಗಡಗಳ ಜನರಲ್ಲಿ ಭಾವೈಕ್ಯತೆಯನ್ನುಂಟುಮಾಡಿ ಜಗತ್ತಿನಲ್ಲಿ ಶಾಂತಿಯ ಅವಶ್ಯಕತೆಯನ್ನು ಚರ್ಚಿಸುತ್ತದೆ. ಧರ್ಮ ಜಾಗತಿಕ ಜ್ವಲಂತ ಸಮಸ್ಯೆಗಳಿಗೆ ಹೇಗೆ ತಾರಕಮಂತ್ರವಾಗಬಹುದು ಎಂಬ ವಿಚಾರಗಳ ಅನ್ವೇಷಣೆಯನ್ನು **Confernce on Religion and Peace–Findings** ಎಂಬ ಕಿರುಹೊತ್ತಿಗೆಯಲ್ಲಿ ಕಾಣುತ್ತೇವೆ.

ಹೀಗೆ ಇಂಗ್ಲೀಷಿನಲ್ಲಿ ಪ್ರಕಟವಾದ ಪುಸ್ತಕಗಳು ವಿಶ್ವಮಾನವ ಕಲ್ಯಾಣಕ್ಕಾಗಿ ಮೂರುಸಾವಿರಮಠವು ಇಟ್ಟ ಬಹು ದಿಟ್ಟ ಬೆಳಕಿನ ಹೆಜ್ಜೆಗಳು. ಈ ಪುಸ್ತಕಗಳ ಪ್ರಕಟಣೆಗಳ ಮೂಲಕ ಜಗದ್ಗುರುಗಳು ಜನಮನವನ್ನು ತಟ್ಟಿದ್ದಾರೆ. ವಿಶ್ವಮಾನವ ಧರ್ಮದ ಶ್ರೇಷ್ಠತೆಯನ್ನು ಸಾರಿದ್ದಾರೆ. ಧರ್ಮ ಸಮಾಜ, ಸಾಹಿತ್ಯ, ಸೇವೆಯಲ್ಲಿ ತಮ್ಮದೇ ಆದ ವಿಶಿಷ್ಟ ಸೇವೆಯನ್ನು ಈ ಪುಸ್ತಕಗಳು ಸಲ್ಲಿಸಿವೆ. ಈ ರೀತಿ ಇಂಗ್ಲೀಷ ಪುಸ್ತಕಗಳ ಪ್ರಕಟಣೆ ಒಂದು ಬೃಹತ್, ಮಹತ್ ಯೋಜನೆ. ಈ ಯೋಜನೆಯನ್ನು ಯಶಸ್ವಿಗೊಳಿಸುವಲ್ಲಿ ಶ್ರೀ ಮೂರುಸಾವಿರಮಠವು ದಿಗಂತದಲ್ಲಿ ತನ್ನ ಧ್ವಜ ಪತಾಕೆಯನ್ನು ಹಾರಿಸಿದೆ. ಯಶೋದುಂದುಭಿ ಮೊಳಗಿಸಿದೆ.

ಶಿವಂ ಭೂಯಾತ್

ಮಹಿಳಾ ಕಾಲೇಜು: ಬೋಧನೆ-ಸಾಧನೆಗಳ ಪಕ್ಷಿನೋಟ

—ಶ್ರೀಮತಿ ಎಚ್. ಕೆ. ಪಾರ್ವತಿಮ್ಮ

ಶ್ರೀ ಜಗದ್ಗುರು ಮೂರುಸಾವಿರಮಠವು ಪ್ರಾಚೀನ ಪರಂಪರೆಯ ಜಾಗೃತ ಪೀಠವಾಗಿರುವುದರೊಂದಿಗೆ ಕರ್ನಾಟಕದ ಸಾಂಸ್ಕೃತಿಕ ಕೇಂದ್ರವೂ ಆಗಿದೆಯೆಂದರೆ ಅತಿಶಯೋಕ್ತಿಯಾಗಲಾರದು. ಭಾರತೀಯ ಸಂಸ್ಕೃತಿಯ ಜಾಗೃತ ಧಾರ್ಮಿಕ ಪೀಠವೆಂದು ನಾಡಿನಲ್ಲೆಲ್ಲಾ ಪ್ರಸಿದ್ಧಿ ಪಡೆದಿದೆ. ಮಾನವ ಕಲ್ಯಾಣವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ವೈದ್ಯಕೀಯ ರಂಗಗಳಲ್ಲಿಯೂ ಅನುಪಮ ಕಾರ್ಯವನ್ನೆಸಗಿ ಭಾರತೀಯ ಧರ್ಮದ ಬಾವುಟವನ್ನು ಎತ್ತಿ ಹಿಡಿದ ಮಹಾಮಠವಾಗಿದೆ. ೧೨ನೇ ಶತಮಾನದಿಂದಲೂ ಧರ್ಮಧ್ವಜವನ್ನು ಎತ್ತಿ ಹಿಡಿದು ಭಕ್ತಜನಕೋಟಿಯನ್ನು ಉದ್ಧಾರ ಮಾಡುತ್ತಿರುವ ಈ ಮಠದ ಇಂದಿನ ಜಗದ್ಗುರುಗಳಾದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ೧೯೫೮ ರಲ್ಲಿ ಶ್ರೀ ಜಗದ್ಗುರು ಪೀಠವನ್ನಲಂಕರಿಸಿದರು.

ಜಾತಿ, ಮತ, ಮೇಲು-ಕೀಳು, ಬಡವ-ಬಲ್ಲಿದವನೆಂಬ ಭೇದಭಾವವಿಲ್ಲದೆ ಸರ್ವ ಧರ್ಮದವರನ್ನೂ ಉದ್ಧರಿಸುವ ಪುಣ್ಯಕ್ಷೇತ್ರವಿದು. ಈಗಿನ ಶ್ರೀ ಜಗದ್ಗುರು ಸನ್ನಿಧಿಯವರು ೧೯೫೮ ರಲ್ಲಿ ಪಟ್ಟಕ್ಕೆ ಬಂದಂದಿನಿಂದ ಇಲ್ಲಿಯವರೆಗೆ ಕೈಕೊಂಡಿರುವ ಪವಾಡ ಸದೃಶ ಮಹಾ ಕಾರ್ಯಗಳನ್ನು ನೋಡಿದರೆ ಶ್ರೀ ಸನ್ನಿಧಿಯವರು ಒಬ್ಬ ವ್ಯಕ್ತಿಯಲ್ಲ ಶಕ್ತಿ ಎಂದರೆ ಅತಿಶಯೋಕ್ತಿಯಾಗಲಾರದು. ವಾಣಿಜ್ಯ ಕೇಂದ್ರವಾಗಿದ್ದ ಹುಬ್ಬಳ್ಳಿಯನ್ನು ಶೈಕ್ಷಣಿಕ ಕೇಂದ್ರವನ್ನಾಗಿ ಪರಿವರ್ತಿಸಿದ ಹಿರಿಮೆ ಶ್ರೀ ಮಠಕ್ಕೆ ಸಲ್ಲುತ್ತದೆ. ಶ್ರೀಮಠದ ಹಿಂದಿನ ಜಗದ್ಗುರುಗಳು, ಹುಬ್ಬಳ್ಳಿಯಲ್ಲಿ ಹಾಗೂ ಮತ್ತಿತರ ಸ್ಥಳಗಳಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳಿಗೆ ಆರ್ಥಿಕ ಸಹಾಯವನ್ನು ಹಾಗೂ ಸ್ಥಳ ದಾನವನ್ನೂ ಮಾಡಿದ್ದಾರೆ. ಈಗಿನ ಗುರುಗಳು ಶ್ರೀಮಠದಿಂದಲೇ ಹಲವಾರು ಶಿಕ್ಷಣ ಸಂಸ್ಥೆಗಳನ್ನು ತಾವೇ ಖುದ್ದಾಗಿ ನಡೆಸುವ ಸದುದ್ದೇಶದಿಂದ ೧೯೬೬ ರಲ್ಲಿ ಶ್ರೀ ಮೂರುಸಾವಿರಮಠ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಪ್ರಾರಂಭದಲ್ಲಿ ಡಾ. ಟಿ. ಎ. ಕಾಸಾಳಿಯವರೂ, ನಂತರ ಶ್ರೀ ವಿ.ಎಂ.ಮಿರ್ಜಿಯವರೂ ಈ ಸಂಘದ ಕಾರ್ಯಾಧ್ಯಕ್ಷರಾಗಿದ್ದು, ಸಂಘದ ಉತ್ತರೋತ್ತರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಈವರೆಗೆ ಶ್ರೀಮಠದ ಸಹಾಯ ಪಡೆದು ಅಭಿವೃದ್ಧಿ ಹೊಂದಿರುವ ಶೈಕ್ಷಣಿಕ ಹಾಗೂ ಧಾರ್ಮಿಕ ಸಂಸ್ಥೆಗಳು ಒಟ್ಟು ೩೯.

ಸದ್ಯಕ್ಕೆ ಸಂಘವು ಪ್ರಾಥಮಿಕ ಶಾಲೆಯಿಂದ ಮೊದಲ್ಗೊಂಡು ಪದವೀಯವರೆಗೆ ಶಿಕ್ಷಣವನ್ನು ನೀಡುತ್ತಿದೆ.

ನಮ್ಮ ದೇಶದ ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಹೆಣ್ಣುಮಕ್ಕಳ ಶೈಕ್ಷಣಿಕ ವಿಕಾಸದ ಬಗ್ಗೆ ಪೂಜ್ಯ ಸನ್ನಿಧಿಯವರು ನೈಜ ಕಳಕಳಿಯನ್ನು ಹೊಂದಿದ್ದು, ಕೇವಲ ನುಡಿಯಲ್ಲಿ ಸಹಾನುಭೂತಿಯನ್ನು ತೋರದೆ, ಅನೇಕ ಉಪಯುಕ್ತ ಯೋಜನೆಗಳನ್ನು ಕಾರ್ಯರೂಪದಲ್ಲಿ ತಂದಿರುವುದು ಶ್ಲಾಘನೀಯವಾದುದು. ಅವುಗಳಲ್ಲಿ ಮಹಿಳಾ ಮಹಾ ವಿದ್ಯಾಲಯದ ಸ್ಥಾಪನೆಯೂ ಒಂದು.

ಉತ್ತರ ಕರ್ನಾಟಕದಲ್ಲಿ ಮಹಿಳೆಯರ ಉಚ್ಚ ಶಿಕ್ಷಣಕ್ಕೆ ಪ್ರತ್ಯೇಕ ಶಿಕ್ಷಣ ಸಂಸ್ಥೆ ಇಲ್ಲದ್ದನ್ನು ಮನಗಂಡು, ಈ ಕೊರತೆಯನ್ನು ನಿವಾರಿಸುವ ಸಲುವಾಗಿ ಮತ್ತು "ಸ್ತ್ರೀ ಶಿಕ್ಷಣ ಸರ್ವಾಂಗ ಸುಂದರ ಸಮಾಜದ ಭವ್ಯ ಬುನಾದಿ" ಎಂಬ ಘನ ಉದ್ದೇಶವನ್ನಿಟ್ಟು, ಕೊಂಡು ೧೯೬೭ ರಲ್ಲಿ ಶ್ರೀ ಜಗದ್ಗುರು ಮೂರುಸಾವಿರಮಠ ಮಹಿಳಾ ಮಹಾವಿದ್ಯಾಲಯವನ್ನು ಸ್ಥಾಪಿಸಿದರು.

ಪ್ರಾರಂಭದಲ್ಲಿ ೧೩೫ ವಿದ್ಯಾರ್ಥಿನಿಯರು ಹಾಗೂ ೧೧ ಜನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯೊಂದಿಗೆ ಪ್ರಾರಂಭವಾದ ಈ ಸಂಸ್ಥೆ ಕಲಾ ವಿಭಾಗವನ್ನು ಮಾತ್ರ ಹೊಂದಿತ್ತು. ೧೯೭೪ ರಲ್ಲಿ ವಾಣಿಜ್ಯ ವಿಭಾಗದ ಸೇರ್ಪಡೆಯೊಂದಿಗೆ ವಿದ್ಯಾರ್ಥಿನಿಯರ ಮತ್ತು ಬೋಧಕರ ವ ಬೋಧಕೇತರ ಸಿಬ್ಬಂದಿಯ ಸಂಖ್ಯೆ ದ್ವಿಗುಣವಾಯಿತು.

ಕಲಾ ವಿಭಾಗದಲ್ಲಿ ಇಂಗ್ಲೀಷ, ಕನ್ನಡ, ಹಿಂದಿ, ಇತಿಹಾಸ, ಸಮಾಜಶಾಸ್ತ್ರ, ರಾಜನೀತಿಶಾಸ್ತ್ರ, ಅರ್ಥಶಾಸ್ತ್ರ ಮತ್ತು ಹಿಂದೂಸ್ತಾನಿ ಸಂಗೀತ, ಈ ಎಂಟು ವಿಷಯಗಳನ್ನು ಪ್ರಧಾನ ವಿಷಯಗಳಾಗಿಯೂ ಮತ್ತು ಉಪವಿಷಯಗಳಾಗಿಯೂ ವ್ಯಾಸಂಗ ಮಾಡಲವಕಾಶವಿದೆ. ಇವುಗಳೊಂದಿಗೆ ತರ್ಕಶಾಸ್ತ್ರ, ಮಾನಸಶಾಸ್ತ್ರ, ಸಂಸ್ಕೃತ, ಜಾನಪದ ಸಾಹಿತ್ಯ ಮತ್ತು ಎಲಿಮೆಂಟ್ಸ್ ಆಫ್ ಮೆಥೆಮೆಟಿಕ್ಸ ಮತ್ತು ಸ್ಟ್ಯಾಟಿಸ್ಟಿಕ್ಸ ಇವುಗಳನ್ನು ಉಪ ವಿಷಯಗಳೆಂದು ಕಲಿಸುವ ವ್ಯವಸ್ಥೆ ಇವೆ. ವಾಣಿಜ್ಯ ಶಾಸ್ತ್ರವನ್ನು ಪ್ರಿಯೂನಿವರ್ಸಿಟಿಯಿಂದ ಬಿ.ಕಾಂ. ಫೈನಲ್‌ವರೆಗೆ ಕಲಿಸುವ ವ್ಯವಸ್ಥೆ ಇವೆ. ಕಾಲೇಜ ಗ್ರಂಥ ಭಂಡಾರದಲ್ಲಿ ೨೫,೦೦೦ ಕ್ಕೂ ಮಿಕ್ಕಿ ಪುಸ್ತಕಗಳೂ, ೬೫ ನಿಯತಕಾಲಿಕೆಗಳೂ ಇದ್ದು ವಿದ್ಯಾರ್ಥಿನಿಯರ ಜ್ಞಾನಾಭಿವೃದ್ಧಿಗೆ ನೆರವಾಗುತ್ತಿವೆ.

ಪ್ರಾರಂಭದಿಂದಲೂ ಕಾಲೇಜಿನ ಪರೀಕ್ಷಾ ಫಲಿತಾಂಶಗಳು ಉತ್ತಮವಾಗಿದ್ದು, ಪ್ರಿಯೂನಿವರ್ಸಿಟಿ ಬೋರ್ಡ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಶೇಕಡಾವಾರಿಗಿಂತ ಹೆಚ್ಚಿನ ಮಟ್ಟದಲ್ಲಿವೆ. ೧೯೭೫ ರಿಂದ ಸತತವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪದವಿ ಪರೀಕ್ಷೆಯಲ್ಲಿ ರ್‍ಯಾಂಕ ಗಳಿಸುತ್ತಿದ್ದು, ಕರ್ನಾಟಕ ವಿಶ್ವವಿದ್ಯಾಲಯದ ಮಹಿಳಾ ವಿದ್ಯಾಲಯಗಳಲ್ಲಿ ಪ್ರಪ್ರಥಮ ಸ್ಥಾನ ಹೊಂದಿರುವುದು ಹೆಮ್ಮೆಯ ವಿಷಯ. ಬೋಧಕ ವರ್ಗದಲ್ಲಿ ೨೫ ಜನರು ಇದ್ದು ಕಾಲೇಜಿನ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಬೋಧಕ ವೃಂದದಲ್ಲಿ ೩ ಜನ ಪಿ.ಎಚ್.ಡಿ. ಪದವೀಧರರೂ, ಒಬ್ಬರು ಎಂ.ಫಿಲ್.

ಪದವೀಧರರೂ, ಒಬ್ಬರು ಎಂ.ಎಡ್. ಪದವೀಧರರೂ ಇದ್ದಾರೆ. ಸದ್ಯದಲ್ಲಿ ೩ ಜನ ಪಿ.ಎಚ್.ಡಿ. ಅಧ್ಯಯನವನ್ನು ನಡೆಸಿರುವರು. ಇನ್ನೂ ಕೆಲವರು ಸದ್ಯದಲ್ಲಿ ಎಂ.ಫಿಲ್. ಅಭ್ಯಾಸ ಕೈಗೊಳ್ಳಲಿರುವರು. ಇಬ್ಬರು ಪ್ರೊಫೆಸರರೂ, ೬ ಜನ ಪ್ರವಾಚಕರೂ ಇರುವರು.

ವ್ಯಕ್ತಿತ್ವದ ಸರ್ವಾಂಗೀಣ ಅಭಿವೃದ್ಧಿಯೇ ಶಿಕ್ಷಣದ ಗುರಿ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಪಾಠ ಪ್ರವಚನದೊಂದಿಗೆ ಪಠ್ಯೇತರ ಚಟುವಟಿಕೆಗಳ ಅಭಿವೃದ್ಧಿಗಾಗಿ ಸಾಕಷ್ಟು ಉತ್ತೇಜನ ಕೊಡಲಾಗಿದೆ. ಇದಕ್ಕಾಗಿ ಜಮಖಾನ, ಚರ್ಚಾಕೂಟ, ಕಲಾ ಸಂಘ, ಕರ್ನಾಟಕ ಸಂಘ, ರಾಷ್ಟ್ರೀಯ ಸೇವಾ ಘಟಕ, ವಯಸ್ಕರ ಶಿಕ್ಷಣ, ಯೋಜನಾ ವೇದಿಕೆ ಮುಂತಾದವುಗಳನ್ನು ರಚಿಸಿದ್ದು, ವಿದ್ಯಾರ್ಥಿನಿಯರು ತಮ್ಮ ಸುಪ್ತ ಪ್ರತಿಭೆಯನ್ನು ಇವುಗಳ ಮೂಲಕ ವ್ಯಕ್ತಪಡಿಸಬಹುದಾಗಿದೆ. ಗಾಯನ, ಚರ್ಚಾ ಸ್ಪರ್ಧೆ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ನಮ್ಮ ವಿದ್ಯಾರ್ಥಿನಿಯರು ಅಂತರ ಕಾಲೇಜು ಸ್ಪರ್ಧೆಗಳಲ್ಲಿಯೂ, ರಾಜ್ಯಮಟ್ಟದ ಸ್ಪರ್ಧೆಗಳಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಬಹುಮಾನಗಳನ್ನು ಗಿಟ್ಟಿಸಿ ತಮಗೂ ಮತ್ತು ಸಂಸ್ಥೆಗೂ ಕೀರ್ತಿ ತಂದಿರುವರು.

ಕಾಲೇಜಿಗೇ ಹೊಂದಿಕೊಂಡಂತಹ ಒಂದು ಸುಸಜ್ಜಿತ ವಸತಿಗೃಹವು ಇದೆ.

ಕಾಲೇಜು ಪ್ರಾರಂಭವಾದ ಮೊದಲ ಹತ್ತು ವರ್ಷಗಳವರೆಗೆ ಮೂರುಸಾವಿರ ಮಠದ ಆವರಣದಲ್ಲಿರುವ ಗಂಗಾಧರ ಹೈಸ್ಕೂಲಿನಲ್ಲಿಯೇ ಕಾಲೇಜು ನಡೆಸಲಾಗುತ್ತಿತ್ತು. ೧೯೭೭ ಹುಬ್ಬಳ್ಳಿಯ ಹೃದಯವಾದ ಜಯಚಾಮರಾಜನ ನಗರದಲ್ಲಿ ೨೫ ಲಕ್ಷ ರೂಪಾಯಿ ವೆಚ್ಚದಲ್ಲಿ ಕಟ್ಟಲಾಗಿರುವ ಸುಂದರ ಸುಸಜ್ಜಿತ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲಾಯಿತು. ಪೂಜ್ಯ ಸನ್ನಿಧಿಯವರ ಉದಾರ ದಾನ ಹಾಗೂ ಹುಬ್ಬಳ್ಳಿ ದಾನಿಗಳ ಸಹಕಾರದಿಂದ ಕಟ್ಟಡ ಕಾರ್ಯರೂಪಕ್ಕೆ ಬಂದಿತು. ಯುನಿವರ್ಸಿಟಿ ಗ್ರ್ಯಾಂಟ್ಸ್ ಕಮಿಷನ್ನಿನ ಸಹಾಯವು ದೊರೆತಿದೆ. ಬೆಳೆಯುತ್ತಿರುವ ವಿದ್ಯಾರ್ಥಿನಿಯರ ಸಂಖ್ಯೆಗೆ ಈ ಕಟ್ಟಡವು ಸಾಲದಾಗಿದೆ. ಆದ್ದರಿಂದ ಕಾಮರ್ಸ ವಿಭಾಗದ ತರಗತಿಗಳನ್ನು ಮುಂಜಾನೆ ನಡೆಸಲಾಗುತ್ತಿದೆ. ಕಾಲೇಜು ಆರಂಭದಿಂದ ಇಂದಿನವರೆಗೆ ಸುಮಾರು ೨೧,೦೦೦ ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಇಲ್ಲಿ ಕಲಿತಿದ್ದಾರೆ. ೧೦,೦೦೦ ಕ್ಕೂ ಮಿಕ್ಕಿ ಪದವೀಧರೆಯರಾಗಿದ್ದಾರೆ.

ಮೊದಲ ೬ ವರ್ಷಗಳವರೆಗೆ ಕ್ರಮವಾಗಿ ದಿ. ಡಾ. ಡಿ. ಎಸ್. ಕರ್ಕಿಯವರು; ಶ್ರೀಮತಿ ಶಾಲಿನಿ ತಿನೇಕರ್ ಮತ್ತು ಶ್ರೀಮತಿ ಎಸ್. ಕೆ. ಹಂಜಿಯವರೂ ಪ್ರಾಚಾರ್ಯ ಹುದ್ದೆಯನ್ನಲಂಕರಿಸಿದ್ದರು. ೧೯೭೪ ರಿಂದ ಶ್ರೀಮತಿ ಹೆಚ್. ಕೆ. ಪಾರ್ವತೆಮ್ಮನವರು ಪ್ರಾಚಾರ್ಯ ಕಾರ್ಯಭಾರವನ್ನು ನಿರ್ವಹಿಸುತ್ತಿದ್ದಾರೆ.

ಕಾಲೇಜಿನಲ್ಲಿ ಆಗಬೇಕಾದಂತಹ ಕೆಲಸಗಳು ಇನ್ನೂ ಹಲವಾರು ಇವೆ. ಅವುಗಳಲ್ಲಿ ಪ್ರತ್ಯೇಕ ಲೈಬ್ರರಿ ಕಟ್ಟಡ, ಒಂದು ಸಭಾ ಭವನ, ವಿಜ್ಞಾನ ವಿಭಾಗ ಮುಖ್ಯವಾದವು.

ಪೂಜ್ಯ ಸನ್ನಿಧಿಯವರೂ, ಕಾರ್ಯಾಧ್ಯಕ್ಷರಾದ ಶ್ರೀ ವೀರಚಂದ ನಾರಾಣಜಿ ಕಾನಜಿ

ಯವರೂ ಮತ್ತು ಆಡಳಿತ ಮಂಡಳಿಯ ಇನ್ನಿತರ ಸದಸ್ಯರೂ ಆಗಾಗ್ಗೆ ಸೂಕ್ತ ಮಾರ್ಗ ದರ್ಶನವನ್ನು ಮಾಡುತ್ತ ಕಾಲೇಜಿನ ಉತ್ತರೋತ್ತರ ಅಭಿವೃದ್ಧಿಗೆ ಕಾರಣ ಕರ್ತ ರಾಗಿದ್ದಾರೆ.

ಪರಮಪೂಜ್ಯ ಗುರುಸಿದ್ಧೇಶ್ವರರ ಆಶೀರ್ವಾದದಿಂದ ಈ ಸಂಸ್ಥೆ ಇನ್ನೂ ಎತ್ತರ ಕ್ಕೆತ್ತರಕ್ಕೆ ಬೆಳೆದು ಮುಂದೆ ಮಹಿಳಾ ಯುನಿವರ್ಸಿಟಿಗೆ ನಾಂದಿಯಾಗಲೆಂಬುದು ಪೂಜ್ಯ ಸನ್ನಿಧಿಯವರ ಮಹಾದಾಸೆ. ಈ ಆಕಾಂಕ್ಷೆಯು ಆದಷ್ಟು ಶೀಘ್ರವಾಗಿ ನನಸಾಗಲೆಂದು ಶ್ರೀ ಗುರುಸಿದ್ಧೇಶ್ವರರಲ್ಲಿ ಪ್ರಾರ್ಥಿಸುವೆನು.

□ □

ಕಲಾ ವ್ಯಾಸಂಗ ಪ್ರಸಾರ ಹಾಗೂ ಮೂಜಗಂ

—ಶ್ರೀ ಪಿ. ಎಸ್. ಹಿರೇಮಠ

ಕಲೆಗಳಿಲ್ಲದ ದೇಶವಿಲ್ಲ ಸಾಹಿತ್ಯವಿಲ್ಲದ ಭಾಷೆಯಿಲ್ಲ.

ವಿಶ್ವದ ವ್ಯಾಪ್ತಿಯಿಲ್ಲದೇ ಯಾವ ಯಾವ ಶಿಕ್ಷಣವು ಸಮಗ್ರ ಎನ್ನಿಸುವದಿಲ್ಲ.

ಪೂರ್ವ–ಪಶ್ಚಿಮ ಎಂಬ ಭೇದಕ್ಕಾಗಲೀ ಭಾಷೆಗಳ ಬಗೆಗಿನ ತರತಮ ಭಾವಕ್ಕಾಗಲೀ ಇಲ್ಲಿ ಸ್ಥಾನವಿಲ್ಲ, ವೈಯಕ್ತಿಕ ಒಲವು ಏನೇ ಇರಲಿ ಜ್ಞಾನ ಜ್ಞಾನವೇ ಇಂಥದು ಸ್ವೀಕಾರ ಯೋಗ್ಯ ಇಂಥದು ಅಲ್ಲ ಎನ್ನುವಂತೆಯೇ ಇಲ್ಲ. ಎಲ್ಲ ಅರಿವೂ ಕೈಗೆ ದೊರೆತಾಗ ಮಾತ್ರ, ವೈಯಕ್ತಿಕ ಆಯ್ಕೆ ಸುಲಭ.

ತನ್ನಲ್ಲಿ ಹುದುಗಿರುವ ಈಶ್ವರ ಚೈತನ್ಯದ ವಿಶ್ವತೋಮುಖ ವ್ಯಾಪ್ತಿಯನ್ನು ಮಾನವ ಅರ್ಥ ಮಾಡಿಕೊಂಡು ಆ ಚೈತನ್ಯ ಪ್ರಸರಣದಲ್ಲಿ ನಿರತನಾಗುವದೇ ಸಂಸ್ಕೃತಿ. ಧರ್ಮ, ಸಾಹಿತ್ಯ, ಲಲಿತಕಲೆ, ಜೀವನದ ಕಲೆಯ ಮೂಲಕ ಮಾನವನ ಆತ್ಮಜ್ಞಾನ ಪೂರ್ಣವಾಗುತ್ತದೆ.

ಧರ್ಮ, ಸಾಹಿತ್ಯ, ಲಲಿತಕಲೆ, ಜೀವನದ ಕಲೆಯ ಮೂಲಕ ಮಾನವನ ಆತ್ಮಜ್ಞಾನ ಅಭಿವ್ಯಕ್ತವಾಗುತ್ತದೆ. ಯಾವದೋ ದೈವಿಶಕ್ತಿ ಅವುಗಳ ಪ್ರತಿಭಾ ಪ್ರಕಾಶನಕ್ಕೆ ನೆರವಾಗಿದೆ ಎಂದು ನಾವು ನಂಬುತ್ತೇವೆ. ಹೋಮರ್, ವಾಲ್ಮಿಕಿ, ಗಯಟೆ ಇವರ ಕಾವ್ಯಗಳನ್ನು ಓದುವಾಗ ಬುದ್ಧ, ಯೇಸು, ಶಂಕರ, ಬಸವ ಇವರ ಧಾರ್ಮಿಕ ವಿಚಾರಗಳನ್ನು ಅರಿಯುವಾಗ, ಸಿಸ್ಟೈನ್ ಚಾಪೆಲ್, ಮೆಡಿಚಿ ಅರಮನೆ, ಅಜಂತಾ, ಕಾಂಗರಾ, ರಾಗ–ರಾಗಿಣಿ ಚಿತ್ರಗಳನ್ನು ನೋಡುವಾಗ, ಶ್ರೀ ನಿಜಗುಣ ಶಿವಯೋಗಿಗಳ ಪುರಂದರದಾಸ, ತ್ಯಾಗರಾಜರ ಕೃತಿಗಳನ್ನು ಹೇಳುವಾಗ ಗಾಂಧೀಜಿಯ ಅನ್ಯಾದೃಶ್ಯ ಜೀವನ ನೋಡುವಾಗ ಕೌತುಕಗೊಂಡು ನಾವು ಅವ್ಯಕ್ತವಾದ ಒಂದು ವಿಚಿತ್ರ ಅನುಭವ ಪಡೆಯುತ್ತೇವೆ. ಈ ಅನುಭವದಿಂದ "ಭ್ರಾಂತಿ ಕಳೆದು ಸಂದೇಹ ನಿವೃತ್ತಿಯಾಗಿ ಸ್ಮೃತಿ ಲಭಿಸುತ್ತದೆ. (ಗೀತ್ ೧೮–೭೩) ಶಾಂತ ಸ್ಥಿತಿಗೆ ಬಂದ ಮನಸ್ಸು ಅವ್ಯಕ್ತಾನುಭವ ಪಡೆಯುತ್ತದೆ. ಮನಸ್ಸಿಗೆ ಶಾಂತಸ್ಥಿತಿಯನ್ನು ತಂದೊದಗಿಸಿ ರಸಾನುಭವ ಮೂಲಕ ದಿವ್ಯ ಸತ್ಯ ದರ್ಶನ ಮೂಡಿಸುವದೇ ಭಾರತೀಯ ಲಲಿತ ಕಲೆಗಳ ಗುರಿ. ಮಾನವನ ಆಧ್ಯಾತ್ಮಿಕ ಜೀವನದಲ್ಲಿ ರಸಗಳ ಅವಶ್ಯಕತೆಯನ್ನು ಗ್ರಹಿಸಿದ ಉಪನಿಷತ್ತು ಅವುಗಳಿಗೆ ದೇವತ್ವ ಸ್ಥಾನವನ್ನು ಕೊಟ್ಟಿದೆ. "ರಸೋವೈಸ" ಭಾರತೀಯ ಜೀವನದ ಎಲ್ಲಾ ಆವಿಷ್ಕಾರಗಳಲ್ಲಿಯೂ ಅಧ್ಯಾತ್ಮ ಹಾಸುಹೊಕ್ಕಾಗಿ ಸೇರಿಕೊಂಡಿದೆ. ಲಲಿತ ಕಲೆಗಳು ಈ ನಿಯಮದಿಂದ ದೂರವಾಗಿಲ್ಲ.

ಭಾರತೀಯ ಶಿಲ್ಪ, ವಾಸ್ತು ಶಿಲ್ಪ, ಸಂಗೀತ, ಚಿತ್ರಕಲೆ ಭಾರತೀಯ ಆಧ್ಯಾತ್ಮಿಕ ಜೀವನದ ಹೊರ ಮುಖಗಳಾಗಿವೆ ಎಂದು ನಾವು ನಿಸ್ಸಂಕೋಚವಾಗಿ ಹೇಳಬಹುದು. ಪೂರ್ವಗ್ರಹ ರಹಿತನಾದ ರಸಿಕ ಎಂದು ವಿಶಿಷ್ಟ ಸಂಪ್ರದಾಯಗಳಲ್ಲಿಯೂ ಚೆಲುವನ್ನು ಅಲ್ಹಾದವನ್ನು ಮಾನವ ಕ್ರಿಯಾ ಶಕ್ತಿಯ ಅಭಿವ್ಯಕ್ತಿಯನ್ನು ಕಂಡು ಆನಂದಿಸಬಲ್ಲ, ಭಾರತೀಯ ಜೀವನ ವಿಕಾಸವಾದಂತೆ ಭಾರತೀಯರ ಲಲಿತ ಕಲೆಗಳು ವಿಕಾಸವಾದುದನ್ನು ನಾವು ನೋಡ ಬಹುದು. ಭಾರತೀಯರು ಅಭಿಜಾತವೆಂದು ಪರಿಗಣಿಸಿರುವ ಬೇಲೂರು, ಬಾದಾಮಿ, ಹಂಪೆಯ ದೇವಾಲಯಗಳೂ ಅಜಂತಾ, ಪಹಾರಿ ಕಲಂ ಚಿತ್ರಗಳೂ ದಕ್ಷಿಣ ಭಾರತದ (ಲೋಹ) ಶಿವ ಮೂರ್ತಿಗಳು ಜನ ಸಾಮಾನ್ಯರದೇ ಆಗಿವೆ. ರಚಿಸಿದವರು ಜನಸಾಮಾನ್ಯರ ಪ್ರತಿನಿಧಿಗಳಾದ ರೂವಾರಿಗಳು ಭಕ್ತರು ಸನ್ಯಾಸಿಗಳು.

ಜೀವನವನ್ನು ಹಸನು ಮಾಡುವದಕ್ಕೆ ಕ್ಷೋಭೆ, ನಿವಾರಿಸಿ ಶಾಂತಿ ಸ್ಥಾಪಿಸುವದಕ್ಕೆ ಮಾನವನಿಗೆ ಸ್ವರೂಪ ಜ್ಞಾನವನ್ನುಂಟು ಮಾಡಿಕೊಡುವದಕ್ಕೆ ಜೀವನವನ್ನು ಹೋಲಬು ಗೊಳಿಸುತ್ತಿದ್ದ ಅರಿಷಡ್ವರ್ಗಗಳ ಉಪಟಳ ತೊಲಗಿಸುವದಕ್ಕೆ ಭಾರತೀಯ ಕಲಾವಿದರು ಪ್ರಯತ್ನಿಸುತ್ತಿದ್ದರು. ಭಾರತೀಯ ಜೀವನದಲ್ಲಿ ಕಲಾವಿದ ಕೇವಲ ಬಿಂಬಗ್ರಾಹಿಯಲ್ಲ ಅವನು ದಾರ್ಶನಿಕನೂ ಗುರುವೂ ಆಗಿದ್ದಾನೆ. ಜೀವನದ ಭವ್ಯತೆಯ ಆರಾಧನೆ, ಸತ್ಯಾನು ಷ್ಠಾನದ ಬಗ್ಗೆ ಅಚಲ ಶ್ರದ್ಧೆ, ಪರೋಕ್ಷ ಜೀವನದ ಬಗ್ಗೆ ಕೌತುಕ, ಕುತೂಹಲ ಈ ಕಾಲದ ಎಲ್ಲ ಲಲಿತ ಕಲೆಗಳಲ್ಲಿಯೂ ಮೂರ್ತೀಭವಿಸಿವೆ. ಜೀವನದ ಸರ್ವತೋಮುಖ ವಿಕಾಸದಲ್ಲಿ ಮೂಲ ಭೂತ ಅಧ್ಯಾತ್ಮಕ ದೃಷ್ಟಿಯನ್ನು ಗುರಿಯಾಗಿಟ್ಟುಕೊಂಡಿದ್ದು, ಭಾರತೀಯ ಲಲಿತ ಕಲೆ ಹೊಸ ಹೊಸ ಆವಿಷ್ಕಾರಗಳನ್ನು ತನ್ನ ವಿರಾಟ ಗರ್ಭದಲ್ಲಿ ಅಡಗಿಸಿಕೊಳ್ಳುತ್ತ ಬಂದಿದೆ. ಭಾರತೀಯ ಸಂಸ್ಕೃತಿ ವೈವಿಧ್ಯಪೂರ್ಣವಾಗಿದ್ದರೂ ಏಕಸೂತ್ರ ಏಕಧ್ಯೇಯವನ್ನೇ ಅರಸ ತೊಡಗಿತು.

ಭಾರತೀಯ ಲಲಿತ ಕಲೆಗಳ ನಿತ್ಯ ತತ್ವಗಳ ಪ್ರೇರಕ ಶಕ್ತಿಯಾಗಿರುವ ಸೂತ್ರ ಗಳೆಂದರೆ,

೧) ಭಾರತೀಯ ಜೀವನದಲ್ಲಿ ಅಧ್ಯಾತ್ಮಕ್ಕೆ ವಿಶಿಷ್ಟಸ್ಥಾನವಿದೆ. ಜಗತ್ತಿನ ಯಾವ ರಾಷ್ಟ್ರವು ಭಾರತದಂತೆ ಅಧ್ಯಾತ್ಮಕ್ಕೆ ಈ ಸ್ಥಾನವನ್ನಿತ್ತಿಲ್ಲ.

೨) ಭಾರತೀಯ ಸಾಹಿತ್ಯ ಲಲಿತ ಕಲೆಗಳು ಭಾರತದ ಆಧ್ಯಾತ್ಮಿಕ ಸಿದ್ಧಿಯ ಪ್ರತೀಕ ಗಳಾಗಿವೆ.

೩) ಭಾರತೀಯ ಲಲಿತ ಕಲೆಗಳು "ಜೀವ-ಶಿವ"ರಲ್ಲಿರುವ ಅಂತರವನ್ನು ಹೋಗಲಾಡಿಸಿ, ಜೀವವನ್ನು ಶಿವನನ್ನಾಗಿ ಮಾರ್ಪಡಿಸುವ ಪ್ರಯತ್ನ ನಡೆಸಿವೆ.

೪) ಭಾರತೀಯ ಲಲಿತ ಕಲೆಗಳು ಶಾಂತಿಧಾಮ ಇಹ ಜೀವನವನ್ನು ರಾಗ ದ್ವೇಷ ರಹಿತ ವನ್ನಾಗಿ ಮಾಡುವುದೇ ಅವುಗಳ ಗುರಿ.

೫) ಭಾರತೀಯ ಲಲಿತ ಕಲೆಗಳು ಅನೇಕತ್ವವನ್ನು ನಿರಾಕರಿಸದಿದ್ದರೂ ಅವುಗಳನ್ನು ಒಟ್ಟು ಕೂಡಿಸುವ ಏಕ ಸೂತ್ರಕ್ಕೆ ಪ್ರಾಧಾನ್ಯ ಕೊಟ್ಟಿದೆ.

೬) ಭಾರತೀಯ ಲಲಿತ ಕಲೆಗಳು ವರ್ಗ, ಜಾತಿ, ಮತ, ರಾಷ್ಟ್ರಗಳ ಸೊತ್ತಲ್ಲ. ಅವು ವಿಶ್ವದ ಮಹಾ ನಿಧಿ, ಅವುಗಳ ಪರಮ ಗುರಿ ಲೋಕ ಕಲ್ಯಾಣವೇ ವಿನಾ, ಜಾತಿ, ಮತ, ವರ್ಗಗಳ ಕಲ್ಯಾಣವಲ್ಲ.

ಜಗತ್ತಿನ ಹಿತವನ್ನೆ ಗುರಿಯಾಗಿಟ್ಟು ಸಹಸ್ರಾರು ವರ್ಷಗಳ ಸಾಮಾಜಿಕ, ರಾಜಕೀಯ ವಿಚಾರ ಕ್ರಾಂತಿಯನ್ನು ಮೈಗೂಡಿಸಿಕೊಂಡು ಬೆಳೆದು ಬಂದಿರುವ ಭಾರತೀಯ ಲಲಿತ ಕಲೆಗಳು ಭಾರತಕ್ಕಾಗಿ ವಿಶ್ವಕ್ಕಾಗಿ ಬದುಕಬೇಕು ಬಾಳಬೇಕು ಎನ್ನುವ ಘನ ಉದ್ದೇಶದಿಂದ ಹುಬ್ಬಳ್ಳಿಯ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರುಸಾವಿರಮಠ ಇವರು ತಮ್ಮ ಕವಿ ಹೃದಯಕ್ಕೆ ಸ್ವರ್ಗದ ಬೆಳಕು ಸೋಂಕಿದ ಎಲ್ಲ ಮನುಷ್ಯರ ಹೃದಯಗಳಲ್ಲೂ ಕಲೆ ಇರುತ್ತದೆ. ಒಮ್ಮೆ ಕಲೆಯ ಸವಿ ಉಂಡವರು ಯಾವ ಕಾಲಕ್ಕೂ ಜೀವನವನ್ನು ಕಲೆಗೆ ಸಮರ್ಪಿಸುತ್ತಾರೆ. (ಗೋಗಿನ) ಅಂಥಬೆಳಕು ಕಂಡ ಲಲಿತ ಕಲೆಯ ಮರ್ಮವನರಿತು, ಹುಬ್ಬಳ್ಳಿಯಲ್ಲಿ ಡಾ. ಎಂ. ವ್ಹಿ. ಮಿಣಜಗಿಯವರು ೧೯೫೦ರಲ್ಲಿ ಸ್ಥಾಪಿಸಿ ಬೆಳೆಸುತ್ತ ಬಂದು ಆರ್ಥಿಕ ಮುಗ್ಗಟ್ಟಿನಿಂದ ತೊಂದರೆಯಲ್ಲಿದ್ದಾಗ ಶ್ರೀ ಜಗದ್ಗುರುಗಳ ಕೃಪೆಯಿಂದ ಕಲಾಮಂದಿರ ೧೯೬೮ರಲ್ಲಿ ಶ್ರೀ ವಿಜಯಮಹಾಂತೇಶ ಲಲಿತ ಕಲಾ ಮಹಾವಿದ್ಯಾಲಯ ಎಂಬ ನೂತನ ನಾಮಕರಣ ಹೊಂದಿ ಪ್ರಗತಿಯತ್ತ ಸಾಗುತ್ತ ನಡೆಯಿತು. ಡಾ. ಎಂ ವ್ಹಿ. ಮಿಣಜಗಿಯವರು ಅನಾರೋಗ್ಯದಿಂದ ಮಹಾವಿದ್ಯಾಲಯದ ಪ್ರಗತಿ ತೋರದೇ ಇದ್ದುದ ಕಂಡು ಶ್ರೀ ಜಗದ್ಗುರುಗಳು ತಮ್ಮದೇ ಆದ ಸಂಸ್ಥೆಯ ಅಡಿಯಲ್ಲಿ ಈ ವಿದ್ಯಾಲಯ ಬಂದಾಗ ಅದರ ಶ್ರೇಯೋಭಿವೃದ್ಧಿಗಾಗಿ ಅನುಕೂಲವಾಗುವದೆಂದು ಆಲೋಚಿಸಿ ೧೯೮೪ರಲ್ಲಿ ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘಕ್ಕೆ ಸೇರ್ಪಡೆ ಮಾಡಿಕೊಂಡು ನಾಡಿನ ಕಲೆ ಉಚ್ಛ್ರಾಯ ಸ್ಥಾನ ಪಡೆದು ಉತ್ತಮ ಸಂಸ್ಕೃತಿ ಪ್ರಸಾರವಾಗಲೆಂದು ಪೂಜ್ಯ ಜಗದ್ಗುರುಗಳು ತುಂಬು ಹೃದಯದಿಂದ ಆಶೀರ್ವಾದ ಮಾಡಿ ತಮ್ಮ ವಶಕ್ಕೆ ತೆಗೆದುಕೊಂಡು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಡಾ. ಎಂ. ವ್ಹಿ. ಮಿಣಜಗಿಯವರು ಸ್ಥಾಪಿಸಿ ಪ್ರಥಮ ಪ್ರಾಚಾರ್ಯರಾಗಿ ೧೯೬೫ ರಲ್ಲಿ ತಮ್ಮ ಪರಮ ಶಿಷ್ಯರಾದ ಶ್ರೀ ಬಿ. ಎಂ. ಹಳಿಜೋಳ ಅವರಿಗೆ ವಹಿಸಿಕೊಟ್ಟರು. ಅವರು ನಿವೃತ್ತಿ ಆದ ನಂತರ ದಿ. ಶ್ರೀ ಆಯ್. ಬಿ. ಕಂಜೆಪ್ಪಗೌಡರ ೧೯೭೮ ರಿಂದ ಪ್ರಾಚಾರ್ಯರಾಗಿ, ಸದ್ಯ ೧೯೬೩ ರಿಂದ ಈ ಮಹಾವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದ ಶ್ರೀ ಪಿ. ಎಸ್. ಹಿರೇಮಠರು ೧೯೮೭ ರಿಂದ ಪ್ರಾಚಾರ್ಯರಾಗಿದ್ದಾರೆ. ಈ ಕಲಾ ಮಹಾವಿದ್ಯಾಲಯದಲ್ಲಿ ತೀರ ಕಡಿಮೆ ಇದ್ದ ವಿದ್ಯಾರ್ಥಿಗಳ ಸಂಖ್ಯೆ ಈಗ ೧೦೦ಕ್ಕೂ ಹೆಚ್ಚಾಗಿದೆ. ಈ ವಿದ್ಯಾಲಯ ಉನ್ನತಿಗಾಗಿ ಎಲ್ಲ ಸಿಬ್ಬಂದಿ ವರ್ಗದವರು ಸತತ ಪ್ರಯತ್ನ ಪಡುತ್ತಿದ್ದಾರೆ.

ಶ್ರೀ ಜಗದ್ಗುರುಗಳು ನಾಡಿನ ಕಲೆ ಅಳಿದು ಹೋಗಬಾರದು, ನಾಡು ಸಂಸ್ಕೃತ ವಾಗಿದೆ ಅನ್ನಲು ಅಲ್ಲಿನ ಸಾಹಿತ್ಯ, ಧರ್ಮ, ಚಿತ್ರ ಕಲೆ, ಸಂಗೀತ, ನೃತ್ಯಗಳ ಶಾಸ್ತ್ರೀಯ ಕೊಡುಗೆಯಾಗಿರಬೇಕು ಅಂಥವುಗಳು ಬೆಳೆದು ಬರಲಿ ಜಗತ್ತಿನಾದ್ಯಂತ ಉಳಿಯಲಿ ಎಂಬ ಘನ ಉದ್ದೇಶದಿಂದ ಯಾವದೇ ಕಾರಣದಿಂದ ಎಷ್ಟೇ ತೊಂದರೆ ಬಂದರೂ ಸಹಿಸಿ ಶಾಂತ ರೀತಿಯಿಂದ ಅವುಗಳ ಬೆಳವಣಿಗೆಗೆ ಕಾರಣರಾಗಿ ಕಲೆ, ಸಾಹಿತ್ಯ ಸಂಗೀತ ಅಮರ ವಾಗುವಂತೆ ಮಹಾವಿದ್ಯಾಲಯಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಉಚ್ಛ್ರಾಯ ಸ್ಥಿತಿ ಹೊಂದಲು ಹಗಲಿರುಳು ಶ್ರಮ ವಹಿಸುತ್ತಿದ್ದಾರೆ. ಹಿಂದೆ ಬೌದ್ಧ, ಕ್ರಿಸ್ತ ಮತಗಳ ಪ್ರಸಾರಕ್ಕೆ ಚಿತ್ರ ಕಲೆಯು ಪ್ರಮುಖ ಪಾತ್ರ ವಹಿಸಿದೆ ಎಂದು ಎಲ್ಲರೂ ಹೊಗಳುತ್ತಾರೆ. ಪರದೇಶಗಳ ಪರ್ಯಟನ ಮಾಡಿ ಕೆಲವು ಆರ್ಟ ಗ್ಯಾಲರಿ ಸಂದರ್ಶಿಸಿದ ಶ್ರೀ ಪೂಜ್ಯರು ನಮ್ಮ ನಾಡಿನಲ್ಲಿ ಈ ತರದ ಕಲಾ ಶಾಲೆ ಆರ್ಟ ಗ್ಯಾಲರಿಗಳನ್ನು ಏಕೆ ಬೆಳೆಸಬಾರದೆಂದು ವಿಚಾರಿಸಿ ಶ್ರೀ ವಿಜಯ ಮಹಂತೇಶ ಲಲಿತ ಕಲಾ ಮಹಾವಿದ್ಯಾಲಯಕ್ಕೆ ಲಕ್ಷಾಂತರ ಹಣ ಖರ್ಚು ಮಾಡಿದ್ದು ನೋಡಿದರೆ ಶ್ರೀ ಜಗದ್ಗುರುಗಳ ಕಲೆಯ ಮೇಲಿನ ಅಭಿಮಾನ ಅವರಲ್ಲಿದ್ದ ಕಲಾಭಿರುಚಿ ವ್ಯಕ್ತವಾಗುವದು. ಕಲಾವಿದರನ್ನೂ ಶ್ರೀ ಮಠಕ್ಕೆ ಗೌರವಾದರ ದಿಂದ ಕರೆಸಿ ಅವರಿಗೆ ಸನ್ಮಾನಿಸುತ್ತಿದ್ದಾರೆ. ಕಲಾವಿದರ ಜೀವನ ಚರಿತ್ರೆ ಪ್ರಕಟಿಸಿ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ ಪವಿತ್ರ ಕಾರ್ಯ ಕೈಕೊಂಡಿದ್ದಾರೆ. ಇದು ಎಲ್ಲ ನಮ್ಮ ನಾಡಿನ ಭಾಗ್ಯ. ಶ್ರೀಗಳು ಕಲೆ ಸಂಸ್ಕೃತಿಗಳಿಗೆ ಪ್ರೋತ್ಸಾಹ ನೀಡಿದಷ್ಟು ಕರ್ನಾಟಕ ದಲ್ಲಿ ಯಾವ ಧರ್ಮ ಪೀಠಗಳಿಲ್ಲ ಎಂದು ಹೇಳಲಡ್ಡಿಯಿಲ್ಲ. ನಾಡಿನ ಜನತೆಗೆ ಶಿಕ್ಷಣ, ಆರೋಗ್ಯ, ಕಲೆ, ಉದ್ಯೋಗ ದೊರೆಯುವಂತೆ ಮಾಡಿದ್ದಾರೆ. ಶ್ರೀ ಪೂಜ್ಯರು ಧವಳ ಕೀರ್ತಿ ಬೆಳೆಯಲಿ. ಅಂತಃಕರುಣೆಯಿಂದ ಸಕಲ ಜೀವರಾಶಿಗೆ ಹರುಸಲಿ ಎಂದು ಪ್ರಾರ್ಥಿಸುವೆ.

□ □

ಮಹಿಳೆಯರಿಗಾಗಿ ಪ್ರಪ್ರಥಮ ಕೈಗಾರಿಕಾ ತರಬೇತಿ ಸಂಸ್ಥೆ: ಪೂಜ್ಯ ಜಗದ್ಗುರುಗಳ ಪ್ರೇರಣೆ: ಪ್ರಗತಿ

—ಭಾನುಮತಿ ಗು ಅಳಗವಾಡಿ ಬಿ.ಎ.[illegible]

"ಹೆಣ್ಣು ಶಕ್ತಿಗಳ ಮುಂದೆ ಇನ್ನಾವ ಶಕ್ತಿಗಳು
ಹೆಣ್ಣು ಸಂಸ್ಕೃತಿಯ ಶುಭ ಶಕ್ತಿ, ಚಿಚ್ಛಕ್ತಿ
ಹೆಣ್ಮಹಿಮೆಯರಿತ ಪೂರ್ಣಜ್ಞ".

ಪೂಜ್ಯ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಈ ದಿವ್ಯ ವಚನ ನಮ್ಮ ಕನ್ನಡ ನಾಡಿನ ಹೆಣ್ಣುಮಕ್ಕಳಿಗಷ್ಟೇ ಅನ್ವಯಿಸದೇ, ಇಡೀ ಸ್ತ್ರೀ ಸಂಕುಲಕ್ಕೆ ನೀಡಿದ ದಿವ್ಯವಾಣಿ. ಪ್ರತಿಯೊಬ್ಬ ಸ್ತ್ರೀಯನ್ನು ಮಹಾದೇವಿಯೆಂದ ವಿಶ್ವಪ್ರೇಮಿ ಬಸವಣ್ಣ, ಸ್ತ್ರೀ ಸಾಕ್ಷಾತ್ ದೇವರ ಸ್ವರೂಪವೆಂದ ಅಲ್ಲಮಪ್ರಭುಗಳು, ಸ್ತ್ರೀ ಸಮಾನತೆಗೆ ಪ್ರಾಮುಖ್ಯತೆ ನೀಡಿದ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರು ಅಲ್ಲದೆ ಸ್ತ್ರೀ ವ್ಯಕ್ತಿತ್ವವನ್ನು ಸಮಾನ ದೃಷ್ಟಿಯಿಂದ ಕಂಡ ಅನೇಕ ಮಹಾನ್ ವ್ಯಕ್ತಿಗಳ ಸ್ಮರಣೆಯ ಜೊತೆಗೆ ನಾವಿಂದು ವಿವಿಧ ರಂಗಗಳಲ್ಲಿ ಶ್ರೀ ಜಗದ್ಗುರುಗಳ ಮಹಿಳಾ ವಿಕಾಸದ ಬಗೆಗಿನ ಹೋರಾಟವನ್ನು ಪ್ರತ್ಯಕ್ಷ ಕಾಣಬಹುದು. ಶ್ರೀ ಪೂಜ್ಯರು ಸಿರಿ ಕರ್ನಾಟಕದ ಸುಂದರ ನಗರ ಹುಬ್ಬಳ್ಳಿಯ ನಡುವೆ ದೃಢತೆಯಿಂದ ಮುಗಿಲೆತ್ತರಕ್ಕೆ ತಲೆ ಎತ್ತಿ ನಿಂತು, ಧಾರ್ಮಿಕತೆಯ ಸಂಕೇತವಾದ ಮೂರುಸಾವಿರಮಠದ ಗೋಪುರವನ್ನೊಳಗೊಂಡ ಶ್ರೀ ಗುರುಸಿದ್ಧೇಶ್ವರ ಸ್ವಾಮಿಯ ದಿವ್ಯ ಸನ್ನಿಧಾನದಲ್ಲಿ ಧಾರ್ಮಿಕತೆ, ಸಾಮಾಜಿಕತೆ, ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ, ವೈದ್ಯಕೀಯ ಹಾಗೂ ವಾಣಿಜ್ಯ ಕೇಂದ್ರಗಳ ಆಡಳಿತ ಕಾರ್ಯಗಳಲ್ಲಿ ಒಂದಾಗಿ ಹಗಲಿರುಳು ಶ್ರಮಿಸುತ್ತಿರುವ ದಿವ್ಯ ಚೇತನ. ತಮ್ಮದಾದ ಬದುಕನ್ನು ಹಾಗೂ ಸ್ವಂತ ಅಭಿವೃದ್ಧಿಯನ್ನು ಯಾವತ್ತೂ ಅಲಕ್ಷಿಸಿ, ಸತತ ಪರಹಿತ ಕಾರ್ಯಗಳಲ್ಲಿ ತೊಡಗಿ ಜನಹಿತ, ಸಮಾಜ ಸೇವೆ ಮಾಡುತ್ತ ಇವುಗಳ ಜೊತೆಗೆ ಸ್ತ್ರೀ ಕುಲದ ಉದ್ಧಾರಕ್ಕಾಗಿ ಚಿಂತಿಸಿ, ಅನೇಕ ಬಗೆಯ ಪರಿಹಾರ ಕಾರ್ಯಕ್ರಮಗಳನ್ನು ಯೋಜಿಸಿ ಅವುಗಳನ್ನು ಕಾರ್ಯ ರೂಪಕ್ಕೆ ತರಲು ಯತ್ನಿಸುತ್ತಿರುವ ಪೂಜ್ಯ ಮಹಾಸನ್ನಿಧಿಯವರು ವೈಯಕ್ತಿಕವಾಗಿ ಮಹಿಳೆಯರ ಉದ್ಧಾರವಷ್ಟೆ ಅಲ್ಲ; ತನ್ಮೂಲಕ ನಮ್ಮ ರಾಷ್ಟ್ರದ ಬೆಳವಣಿಗೆಗೆ ಭದ್ರ ಬುನಾದಿ ಹಾಕುತ್ತಿದ್ದಾರೆ. ಒಬ್ಬ ಹೆಣ್ಣು ಮಗಳನ್ನು ವಿದ್ಯಾವಂತಳನ್ನಾಗಿ ಮಾಡಿದರೆ ಅವಳಲ್ಲಿನ ಜ್ಞಾನಪ್ರಜ್ಞೆ ಕೇವಲ ಒಂದು ಮನೆಯನ್ನಷ್ಟೇ ಬೆಳಗದೇ, ಒಂದು ದೇಶ

ವನ್ನು ಬೆಳಗಬಹುದು. ಈ ನಿಜವನ್ನು ಅರಿತ ಗುರುಗಳು ಸ್ತ್ರೀ ಶಿಕ್ಷಣಕ್ಕಾಗಿ ಪ್ರತ್ಯೇಕವಾಗಿ ಪ್ರೌಢಶಾಲೆ, ವಿದ್ಯಾನಿಲಯಗಳನ್ನು ನಿರ್ಮಿಸುವಲ್ಲಿ ಸಮರ್ಥರಾದರು.

ಮಹಿಳೆ ಕೇವಲ ಶಿಕ್ಷಣ ಪಡೆದರೆ ಸಾಲದು, ಆ ವಿದ್ಯೆಯು ಸದುಪಯೋಗ ಮಾಡಿಕೊಳ್ಳಬೇಕೆಂಬುವುದೇ ಶ್ರೀ ಪೂಜ್ಯರ ಬಯಕೆ. ಒಂದು ವಿಷಯದಲ್ಲಿ ಪರಿಪೂರ್ಣತೆ ಹೊಂದಿದ ನಂತರ ಅದೇ ವಿಷಯಕ್ಕೆ ಸಂಬಂಧಿಸಿದ ಕೆಲಸವನ್ನು ಆಕೆ ಮಾಡಬಹುದು. ದಿನನಿತ್ಯದ ಕಾರ್ಯಗಳ ಜೊತೆಗೆ ಮಾಡುವ ಈ ವೃತ್ತಿ ಅವಳಿಗೆ ಸಂತೋಷ ನೀಡುವುದಲ್ಲದೆ ಆರ್ಥಿಕವಾಗಿಯೂ ಆಕೆ ಸ್ವಾತಂತ್ರ್ಯ ಪಡೆಯಬಹುದು. ಈ ಮೂಲಕ ಒಬ್ಬ ಸ್ತ್ರೀ ಪರಾವಲಂಬಿ ಆಗದೇ ವೈಯಕ್ತಿಕ ನಿರ್ಣಯಗಳನ್ನು ಹೊಂದಿ, ತನ್ನದೇ ಆದ ದಾರಿಯಲ್ಲಿ ನೆಮ್ಮದಿಯಿಂದ ಸಾಗಬಹುದು. ಆರ್ಥಿಕ ಸ್ವಾವಲಂಬನೆಯಿಂದ ಸ್ತ್ರೀಯ ಮನೋಸ್ಥೈರ್ಯ ಹೆಚ್ಚಾಗುತ್ತದೆ ಹಾಗೂ ಅವಳು ತನಗೆ ಆಸಕ್ತಿಯಿರುವ ರಂಗಗಳಲ್ಲಿ ಪ್ರಗತಿ ಹೊಂದಲು ಸಾಧ್ಯ ಎನ್ನುವುದು ಶ್ರೀ ಪೂಜ್ಯರ ದೃಢ ನಂಬಿಕೆ. ಪ್ರತಿಯೊಬ್ಬ ಸ್ತ್ರೀಗೆ ಉದ್ಯೋಗ ಒದಗಿಸುವುದು ಅಸಾಧ್ಯದ ಕೆಲಸವಾದರೂ ಮಹಿಳೆಯರು ಹೆಚ್ಚು ಸಂಖ್ಯೆಯಲ್ಲಿ ಸ್ವಾವಲಂಬಿಯಾಗಬೇಕೆನ್ನುವುದೇ ಶ್ರೀ ಪೂಜ್ಯರ ಗುರಿ. ಈ ಗುರಿ ಸಾಧನೆಗಾಗಿ ಜಗದ್ಗುರುಗಳು ಮಾಡಿದ ವಿಚಾರಗಳು, ಅನಿಸಿಕೆಗಳು ಮತ್ತು ಯೋಜಿಸಿಕೊಂಡ ಕಾರ್ಯಕ್ರಮಗಳು ಬಹಳ. ಈ ಎಲ್ಲ ವಿಚಾರ ಬೀಜಗಳ ಮಧ್ಯ ಮೊಳಕೆಯೊಡೆದು ಪುಟ್ಟ ಸಸಿಯಾಗಿ ಹೊರ ಬಂದ ಸಂಸ್ಥೆ ಕರ್ನಾಟಕದ ಪ್ರಪ್ರಥಮ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರ.

ಈ ಆಧುನಿಕ ಜಗತ್ತಿನಲ್ಲಿ ಮಾನವಶಕ್ತಿಯನ್ನು ಸಂಪೂರ್ಣವಾಗಿ ಅಳವಡಿಸದೇ ಕೇವಲ ಯಂತ್ರಗಳ ಮೇಲೆ ಅವಲಂಬಿಸಬೇಕಾದ ಪ್ರಸಂಗ ಬಂದಿದೆ. ಜನಸಂಖ್ಯಾ ರಾಷ್ಟ್ರವಾದ ನಮ್ಮ ದೇಶದಲ್ಲಿ ಯಂತ್ರಗಳ ಬಳಕೆಯಿಂದ ಜನಸಾಮಾನ್ಯರ ಸ್ವಸಾಮರ್ಥ್ಯ ಕಳೆಗುಂದಿದೆ. ಪ್ರತಿಯೊಬ್ಬ ಪ್ರಜೆಯು ಕರಕುಶಲ ಕಾರ್ಯದ ಮಹತ್ವವನ್ನು ತಿಳಿಸಲು ಸರಕಾರ ಹಾಕಿಕೊಂಡ ಯೋಜನೆಗಳಲ್ಲಿ ಕೈಗಾರಿಕಾ ತರಬೇತಿ ಕೇಂದ್ರವೂ ಒಂದು. ಇಡೀ ದೇಶದಾದ್ಯಂತ, ಎಲ್ಲ ರಾಜ್ಯಗಳಲ್ಲಿ ತಾಲ್ಲೂಕು ಹಾಗೂ ಪ್ರತಿ ಗ್ರಾಮಗಳಲ್ಲಿ ಸರಕಾರಿ ಅಥವಾ ಖಾಸಗೀ ಕೈಗಾರಿಕಾ ತರಬೇತಿ ಕೇಂದ್ರಗಳನ್ನು ತೆರೆದು ತಾಂತ್ರಿಕತೆಯ ಬಗೆಗೆ ವಿದ್ಯಾರ್ಥಿಗಳಿಗೆ ತಿಳಿಸಿ, ಪ್ರಯೋಗಗಳಿಂದ ಅವರಿಗೆ ಬೇಕಾದ ವೃತ್ತಿಗಳಲ್ಲಿ ತರಬೇತಿ ನೀಡುವುದೇ ಈ ಯೋಜನೆಯ ಉದ್ದೇಶ. ಅಂತಹದೇ ಒಂದು ವೃತ್ತಿ ಪರ ಶಿಕ್ಷಣದ ಕೇಂದ್ರವನ್ನೂ ಕೇವಲ ಮಹಿಳೆಯರಿಗಾಗಿ ನಿರ್ಮಿಸಲು ಶ್ರೀ ಪೂಜ್ಯರಲ್ಲಿ ಆಸಕ್ತಿ ಮೂಡಿದ್ದು, ನಮ್ಮ ಕರ್ನಾಟಕದ ಹೆಣ್ಣು ಮಕ್ಕಳಿಗೆ ಅದರಲ್ಲೂ 'ಟೆಕ್ನಿಕಲ್ ಎಜ್ಯುಕೇಶನ್' ನಲ್ಲಿ ಆಸಕ್ತಿ ಇರುವವರಿಗೆ ಭಾಗ್ಯ ದೊರಕಿದಂತೆಯೇ ಸರಿ. ಮಹಿಳೆಯರ ಪ್ರಗತಿಗೆ ಯೋಗ್ಯವಾಗುವ, ಅವರ ವ್ಯಕ್ತಿತ್ವ ವಿಕಾಸಗೊಳ್ಳುವ ಹಾಗೂ ಸ್ವಾವಲಂಬನೆಯನ್ನು ತಂದು ಕೊಡುವ ಈ ಶಿಕ್ಷಣವನ್ನು ಪಡೆಯಲು ಅವಕಾಶ ಒದಗಿಸಿದ ಕೀರ್ತಿ ಶ್ರೀ ಪೂಜ್ಯರಿಗೂ

ಹಾಗೂ ಶ್ರೀ ಜಗದ್ಗುರು ಮೂರುಸಾವಿರಮಠ, ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಶ್ರೀಯುತ ವೀರಚಂದ ಸಾರಂಜಿ ಕಾನಜಿಯವರಿಗೂ ಸಲ್ಲಬೇಕು.

ಸ್ತ್ರೀಸ್ವಾತಂತ್ರ್ಯವನ್ನು ಬಲಗೊಳಿಸುವ ಆರ್ಥಿಕ ಸ್ವಾತಂತ್ರ್ಯ ಪ್ರತಿ ಹೆಣ್ಣುಮಕ್ಕಳಿಗೆ ದೊರಕಬೇಕೆನ್ನುವ ಛಲದಿಂದ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಪೂರ್ವದಲ್ಲಿಯೇ ಪೂಜ್ಯ ಶ್ರೀಗಳು ಹುಬ್ಬಳ್ಳಿ ನಗರದಲ್ಲಿ ಅತಿ ದೊಡ್ಡದೆನಿಸಿದ ಮಹಿಳಾ ವಾಣಿಜ್ಯ ಹಾಗೂ ಕಲಾ ಮಹಾವಿದ್ಯಾಲಯವನ್ನು ಸ್ಥಾಪಿಸಿ ಸಾವಿರಾರು ಹೆಣ್ಣು ಹುಡುಗಿಯರಿಗೆ ವಾಣಿಜ್ಯ ಮತ್ತು ಸಾಹಿತ್ಯದಲ್ಲಿ ಪದವಿಯನ್ನು ಹೊಂದಲು ಅವಕಾಶ ಮಾಡಿಕೊಟ್ಟಿದ್ದರು. ಪದವಿ ಪೂರೈಸಿ, ವೃತ್ತಿಯನ್ನು ಹೊಂದಬೇಕೆನ್ನುವ ಗುರಿ ಇಟ್ಟುಕೊಂಡು ಅನೇಕ ಜನ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ಈ ಮಹಾವಿದ್ಯಾಲಯದಲ್ಲಿ ಅಧ್ಯಯನ ಮಾಡಿದರು, ಇನ್ನೂ ಮಾಡುತ್ತಿದ್ದಾರೆ. ಅವರ ಉದ್ದೇಶದಂತೆ ಕೆಲವರು ವೃತ್ತಿಪರರಾದರೂ ಅನೇಕರಿಗೆ ಕೆಲಸ ಪಡೆಯಲು ಅಸಾಧ್ಯವೆನಿಸಿತ್ತು. ಕಾರಣ, ಪದವಿ ಹೊಂದಿದ ಅನೇಕ ಪುರುಷ ಸ್ತ್ರೀಯರ ಸಮೂಹದಲ್ಲಿ ಇವರಿಗೆ ಕೆಲಸ ಸಿಗುವುದು ಕನಸಿನ ಮಾತಾಗಿತ್ತು. ಆಗ ಎಲ್ಲ ವಿದ್ಯಾರ್ಥಿನಿಯರಿಗೆ ತಮ್ಮ ಉದ್ಯೋಗಾಭಿಲಾಷೆಯನ್ನು ಈಡೇರಿಸಲು, ತಮ್ಮ ವಿದ್ಯಾಭ್ಯಾಸಕ್ಕೆ ಅಭಿದಾನ ವ್ಯಕ್ತಿಯಾದ ಶ್ರೀ ಮಹಾಸ್ವಾಮಿಗಳ ಆಶ್ರಯವನ್ನು ಪಡೆದರೆ ಹೇಗೆ? ಎನ್ನುವ ವಿಚಾರ ಬಂದಿತ್ತು. ಅದರಂತೆಯೇ ಅವರು ಪೂಜ್ಯ ಮಹಾಸ್ವಾಮಿಗಳ ಸನ್ನಿಧಿಗೆ ಆಗಮಿಸಿ ತಮ್ಮ ಬೇಡಿಕೆಯನ್ನು ಮಂಡಿಸಿದರು. ಆಗ ಗುರೂಜಿಯವರ ಮನಸ್ಸಿನಲ್ಲಿ ನಾನಾ ಬಗೆಯ ವಿಚಾರಗಳು! ತಮ್ಮ ನೆರವು ಕೇಳಲು ಬಂದ ಹೆಣ್ಣುಮಕ್ಕಳಿಗೆಲ್ಲ ಉದ್ಯೋಗ ಒದಗಿಸಿ ಕೊಡುವುದು ಹೇಗೆ? ಎನ್ನುವ ಯೋಚನೆಯೊಂದಿಗೆ ಇದೇ ರೀತಿ ಪ್ರತಿವರ್ಷ ವೃತ್ತಿಪರರಾಗಬಯಸುವ ಅನೇಕ ವಿದ್ಯಾರ್ಥಿನಿಯರ ಬಗ್ಗೆ ಏನು ಮಾಡಬೇಕು ಅನ್ನುವ ಆಲೋಚನೆ ಅವರಲ್ಲಿ ಹುಟ್ಟಿಕೊಂಡಿತು. ಆ ಸಮಯದಲ್ಲಿ ಕೆಲವರಿಗೆ ಸಹಾಯ ಮಾಡಬಹುದಾದರೂ, ಇನ್ನು ಮುಂದೆ ಯಾವ ದಾರಿ ಹುಡುಕಬೇಕೆನ್ನುವ ಸಮಯದಲ್ಲಿ, ತಾಂತ್ರಿಕ ಶಿಕ್ಷಣ ಪಡೆದ ಅನೇಕ ಯುವಕ, ಯುವತಿಯರು ಯಾವ ತೊಂದರೆಯೂ ಇಲ್ಲದೆ, ಸರಕಾರೀ, ಖಾಸಗಿ ಇಲ್ಲವೇ ಸ್ವಂತವಾಗಿ ಉದ್ಯೋಗ ಹೊಂದುತ್ತಿರುವರೆಂಬುದು ಶ್ರೀ ಪೂಜ್ಯರಿಗೆ ಅರಿವಾಯಿತು. ವಿಜ್ಞಾನ ಯುಗವಾದ ಇಂದು, ವಿಜ್ಞಾನವನ್ನು ಒಳಗೊಂಡ ತಾಂತ್ರಿಕ ಶಿಕ್ಷಣದ ಮಹತ್ವ ಶ್ರೀ ಪೂಜ್ಯರ ಮನವನ್ನು ಮಧುರ ಸುವಾಸನೆಯನ್ನು ಬೀರುವ ಕುಸುಮದಂತೆ ಆಕರ್ಷಿಸಿತು. ತಾಂತ್ರಿಕ ವಿಜ್ಞಾನದ ಪ್ರತಿಭೆಯನ್ನು, ಅದನ್ನು ಬಯಸುವ ಸ್ತ್ರೀ ಸಮೂಹಕ್ಕೆ ಪಸರಿಸಲು ತಾವು ಸಹಾಯ ಮಾಡಬೇಕೆನ್ನುವ ನಿರ್ಣಯವನ್ನು ಕೈಗೆತ್ತಿಕೊಂಡರು. ಈ ನಿರ್ಧಾರವನ್ನು ಮಾಡುವ ಪೂರ್ವದಲ್ಲಿ ನಗರದ ಅನೇಕ ಗಣ್ಯವ್ಯಕ್ತಿಗಳ ಜೊತೆಗೆ ಸಮಾಲೋಚನೆ ನಡೆಸಿ ತಾಂತ್ರಿಕ ಶಿಕ್ಷಣವನ್ನು ಕೇವಲ ಸ್ತ್ರೀಯರಿಗೋಸ್ಕರ ಪ್ರಾರಂಭಿಸಬೇಕೆನ್ನುವ ಒಂದು ನಿರ್ಣಯವನ್ನು ಕೈಗೊಂಡರು. ಈ ನಿರ್ಣಯಕ್ಕೆ ಬೆಂಬಲಿಗರಾಗಿ ನಿಂತ ಶ್ರೀ ಎಸ್. ಆರ್. ಬೊಮ್ಮಾಯಿಯವರು,

ಶ್ರೀ ವೀರೇಂದ್ರ ಪಾಟೀಲರು, ಶ್ರೀ ಎಸ್. ಆರ್. ಶೆಟ್ಟರ ಹಾಗೂ ಶ್ರೀಯುತ ಗಂಗಣ್ಣ ಬತ್ತಿ ಮುಂತಾದ ಗಣ್ಯರನ್ನು ಕೂಡ ನಾವು ಶ್ರೀ ಪೂಜ್ಯರ ಮಹತ್ಸಾಧನೆಗೆ ಮತ್ತು ಸ್ತ್ರೀ ಸಂಕುಲದ ಉದ್ಧಾರಕ್ಕಾಗಿ ಆಗಮಿಸಿದ ಅವತಾರೀ ಪುರುಷರೆನ್ನಬಹುದು. ಇವರುಗಳ ಜೊತೆಗೆ, ಸ್ವಾಮೀಜಿಯವರ ಬಲಗೈಯಂತಿರುವ, ಅವರ ಪ್ರತಿ ಕಾರ್ಯಗಳಲ್ಲೂ, ನಿರ್ಣಯಗಳಲ್ಲೂ ಸಹಭಾಗಿಯಾಗಿರುವ ಶ್ರೀಯುತ ವೀರಚಂದ ನಾರಣಜಿ ಕಾನಜಿಯವರು ಗುರೂಜಿಯವರಿಗೆ ಆ ಸಮಯದಲ್ಲಿ ನೀಡಿದ ಪ್ರೋತ್ಸಾಹ ಅವರ ಕಾರ್ಯಗಳಿಗೆ ಆನೆ ಬಲ ನೀಡಿದಂತಾಯಿತು. ಈ ರೀತಿ ಶ್ರೀ ಪೂಜ್ಯರ ಮುಖಂಡತ್ವದಲ್ಲಿ, ಶ್ರೀ ಗಣ್ಯರ ಸಮೂಹದ ಜೊತೆಗೆ ನಡೆದ ಸಮಾಲೋಚನೆಯ ಪರಿಣಾಮವಾಗಿ ಮಹಿಳೆಯರಿಗಾಗಿ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಹುಬ್ಬಳ್ಳಿ ನಗರದಲ್ಲಿ ಸ್ಥಾಪಿಸಬೇಕೆನ್ನುವ ಕಾರ್ಯಕ್ರಮ ಪ್ರಾರಂಭವಾಯಿತು. ಸಂಸ್ಥೆಯನ್ನು ಪ್ರಾರಂಭಿಸಲು ಸರಕಾರದಿಂದ ದೊರಕಿಸಿಕೊಳ್ಳ ಬೇಕಾದ ಮನ್ನಣೆಯ ಕಾರ್ಯದಿಂದ ಹಿಡಿದು, ಅದರ ಪ್ರಾರಂಭೋತ್ಸವ, ಪ್ರತ್ಯೇಕ ಕಟ್ಟಡ, ಪ್ರಾಯೋಗಿಕ ಸಲಕರಣೆಗಳ ಜೋಡಣೆ, ಪುಸ್ತಕಗಳ ಖರೀದಿ ಹಾಗೂ ಶಿಕ್ಷಕರ ನೇಮಕಾತಿ ಇನ್ನೂ ಮುಂತಾದ ಕೆಲಸಗಳುಳ್ಳ ಭಾರ ಶ್ರೀ ಪೂಜ್ಯರ ಮೇಲೆಯೇ ಬಿತ್ತು. ತಮ್ಮ ಇತರ ಅನೇಕ ಕಾರ್ಯ ಒತ್ತಡಗಳ ನಡುವೆ ಈ ವಿಚಾರ ಭಾರವನ್ನು ಅವರು ಕ್ಷಣ ಮಾತ್ರವೂ ನಿರ್ಲಕ್ಷಿಸದೇ ಕಾರ್ಯರೂಪಕ್ಕೆ ತರಲು ಸರ್ವ ಪ್ರಯತ್ನ ಮಾಡುತ್ತಿದ್ದರು. ಕೈಗೊಂಡ ಕಾರ್ಯವನ್ನು ಯಾವತ್ತೂ ಮರೆಯದೇ ಎಲ್ಲ ತೊಂದರೆಗಳನ್ನು ನಿವಾರಿಸಿ ಅದನ್ನು ಪೂರೈಸಲು ಶ್ರೀ ಪೂಜ್ಯರು ನಮಗೆ ದಾರಿ ದೀಪವಾಗಿದ್ದಾರೆ. ಶ್ರೀ ಗುರುಗಳ ಕಾರ್ಯಪರತೆಯನ್ನು ಅವರೇ ರಚಿಸಿದ ವಚನ ಭಂಡಾರದೊಳಗಿನ ಒಂದು ವಚನ ನಿರೂಪಿಸುತ್ತದೆ.

> "ಹಿಡಿದ ಕೆಲಸ ಬಿಡದೆ ಕಡು ಜವದಿ ಮಾಡಿದರೆ
> ತೊಡಕುಗಳು ದೂರಹವು ಸುಖ ಶಾಂತಿ ದೊರೆತು
> ಜಡತೆ ತೊಲಗುವುದು ಪೂರ್ಣಜ್ಞ."

ಸತತೋದ್ಯೋಗಿ ಶ್ರೀ ಗುರುಗಳು ಜೇನುನೊಣದಂತೆ ಸದಾ ಕಾರ್ಯ ಪ್ರವರ್ತಕ ರಾಗಿ ದುಡಿಯುವದು ಮಾತ್ರವಲ್ಲದೇ, ವಿಶ್ರಾಂತಿ ಸಮಯದಲ್ಲೂ ಕೂಡಾ ಅವರು ಚಿಂತನಾ ಶೀಲರಾಗಿ ಎಲ್ಲ ಬಗೆಯ ತೊಡಕುಗಳನ್ನೂ ನಿವಾರಿಸಿ, ಜಡತೆಯನ್ನು ತೊಲಗಿಸಿ, ಜಗಕೆ ಶಾಂತಿ ದೊರಕಿಸಲು ಜೀವ ತೇಯುವ ಗುರುಗಳಾಗಿದ್ದಾರೆ.

ಬಹುಮುಖ ಪ್ರತಿಭೆಯುಳ್ಳ ಶ್ರೀ ಪೂಜ್ಯರ ಕಾರ್ಯಕ್ಷೇತ್ರ ಅಸೀಮಿತ. ಪುಟ್ಟ ಮಗುವಿನ ಮುಗ್ಧ ಮನವನ್ನರಿಯುವದರಿಂದ ಮೊದಲು ಮಾಡಿ ರಾಷ್ಟ್ರದ ಅಧಿಪತಿಯವ ರೊಡನೆ ಯಾವ ರೀತಿ ಮಾತನಾಡಿ, ಅವರ ಮನವನ್ನು ಗೆಲ್ಲುವುದನ್ನು ಅರಿತ ಶ್ರೀಗುರು ಗಳು ಮಾಡಲಾರದ ಕಾರ್ಯವಿಲ್ಲ. ಮುಕ್ತ ಮನಸ್ಸಿನಿಂದ ಮಾತನಾಡುವುದನ್ನು ಕಂಡರೆ,

ಅವರನ್ನು ಚಿಕ್ಕ ಮಕ್ಕಳಿಗೆ ಹೋಲಿಸಬಹುದಾದರೂ, ಎಂತಹ ದೊಡ್ಡ ರಾಜಕೀಯ ವ್ಯಕ್ತಿ ಯೊಡನೆಯಾದರೂ ನಿರರ್ಗಳವಾಗಿ ಮಾತನಾಡಿ ತಮ್ಮ ಅಭಿಪ್ರಾಯವನ್ನು ಹೇಳುವ ರೀತಿ ನೋಡಿದರೆ, ಅವರ ಸಾಮರ್ಥ್ಯವನ್ನು ಅಳೆಯುವ ಸಾಹಸ ನಮ್ಮ ಮೂರ್ಖತನವೆನಿಸು ವದು. ತಮ್ಮ ಸ್ವಸಾಮರ್ಥ್ಯದಿಂದ ಹಾಗೂ ಶ್ರೀಯುತ ವೀರಚಂದ ನಾರಣಜಿ ಕಾನಜಿ ಯವರ ಬೆಂಬಲದಿಂದ ಶ್ರೀ ಗುರುಗಳು ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾರಂಭಕ್ಕಾಗಿ ಸರಕಾರದಿಂದ ಮನ್ನಣೆ ಪಡೆಯಲು ಪ್ರಯತ್ನ ಮಾಡತೊಡಗಿದರು. ಕಾರ್ಯವು ಯಾವಾಗಲೂ ಮಾಡುವ ವ್ಯಕ್ತಿಯ ಸಾಮರ್ಥ್ಯವನ್ನು ಅವಲಂಬಿಸಿರುತ್ತದೆ. ಸಮರ್ಥರಿಗೆ ಎಂತಹ ಕೆಲಸವಾದರೂ, ಅದು ಸರಳ ಹಾಗೂ ಸುಲಭವಾಗಿ ತೋರುತ್ತದೆ. ಸೂರ್ಯ ತನ್ನ ಪ್ರಕಾಶವನ್ನು ಜಗತ್ತಿನ ಸದ್ಗುಣಗಳ ವಿಲೀನಗೊಂಡ ಸ್ವಭಾವದಿಂದ ನಮ್ಮ ನಾಡಿನ ರವಿಯಾಗಿ ಎಲ್ಲರ ಚಿರಪರಿಚಿತ ಮಹಾನ್ ವ್ಯಕ್ತಿಯಾಗಿದ್ದಾರೆ ಇಂತಹ ಮಹಾ ಪುರುಷರಿಗೆ ಕೈಗಾರಿಕಾ ತರಬೇತಿ ಕೇಂದ್ರಕ್ಕಾಗಿ ಸರಕಾರದಿಂದ ಮನ್ನಣೆಯನ್ನು ಪಡೆಯು ವುದು ಅತಿ ಸುಲಭವಾಯಿತು. ಸರಕಾರವು ನಿರೂಪಿಸಿದ ಎಲ್ಲ ಅವಶ್ಯಕತೆಗಳನ್ನು ಅಂದರೆ, ಶಿಕ್ಷಕವರ್ಗ, ಪ್ರಾಯೋಗಿಕ ಸಲಕರಣೆಗಳನ್ನು ಹೊಂದಿಸಲು ನಮ್ಮ ಗುರುಗಳಿಗೆ ಅಸಾಧ್ಯ ವಲ್ಲ ಅವರು ಪ್ರತಿಯೊಂದು ನಿಯಮಗಳನ್ನು ಸಮರ್ಪಕವಾಗಿ ಪೂರೈಸುತ್ತಾರೆ ಎನ್ನುವ ದೃಢ ನಂಬಿಕೆ ಸರಕಾರಕ್ಕಿತ್ತು. ಆದರಿಂದ ಬಹುಬೇಗನೇ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾರಂಭಕ್ಕೆ ರಾಜ್ಯ ಹಾಗೂ ಕೇಂದ್ರ ಸರಕಾರದಿಂದ ಮನ್ನಣೆ ದೊರೆಯಿತು. ಇದಕ್ಕಾಗಿ ಶ್ರೀ ಪೂಜ್ಯರಿಗೆ ಸಹಕಾರಿಗಳಾಗಿ ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾ ವರ್ಧಕ ಸಂಘದ ಪ್ರತಿಯೊಬ್ಬ ಸದಸ್ಯರು ಪ್ರಯತ್ನಪಟ್ಟಿದ್ದಾರೆ.

ರಾಜ್ಯ ಉದ್ಯೋಗ ಮತ್ತು ತರಬೇತಿ ಇಲಾಖೆ ಹಾಗೂ ಕೇಂದ್ರ ಉದ್ಯೋಗ ಮತ್ತು ತರಬೇತಿ ಇಲಾಖೆ ಎರಡರಿಂದಲೂ ಮನ್ನಣೆ ಪಡೆದ ನಮ್ಮ ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾರಂಭೋತ್ಸವವನ್ನು ೧೯೮೩ ನವಂಬರ್ ತಿಂಗಳ ೨೪ನೇ ತಾರೀಕಿ ನಂದು ಮಾಡಬೇಕೆಂದು ಶ್ರೀ ಪೂಜ್ಯರು ಸಂಘದ ಎಲ್ಲ ಸದಸ್ಯರೊಡಗೂಡಿ ತೀರ್ಮಾನ ಮಾಡಿದಾಗ, ಎಲ್ಲರಿಗೂ ಅವರ ಆಡಳಿತದಲ್ಲಿ ಕೆಲಸ ಮಾಡಲು ಉತ್ಸಾಹ ತುಂಬಿ ಬಂದಿತು.

"ಭಾರವನು ಹೊತ್ತಿಹೆನು! ದಾರಿಯಲಿ ನಡೆದಿಹೆನು
ವೀರಶೈವರು ಸಂಘಟಿಪ ಮಣಿಹದಲಿ
ಕೋರುವೆನು ಯಶವ ಪೂರ್ಣಜ್ಞ"

ಎನ್ನುವ ಶ್ರೀಗುರುಗಳು ತಾವೊಬ್ಬರು ಮಾತ್ರ ಯಶಸ್ಸಿನ ಹಾದಿ ಹಿಡಿಯದೇ, ತಮ್ಮೊಡನೆ ಇನ್ನೂ ಕೆಲವು ಪ್ರತಿಭಾವಂತ ಗಣ್ಯ ವ್ಯಕ್ತಿಗಳನ್ನು ಜೊತೆ ಮಾಡಿಕೊಂಡರು. ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಗೌರವ ಕಾರ್ಯಾಧ್ಯಕ್ಷ ಶ್ರೀ ವೀರಚಂದ ನಾರಣಜಿ ಕಾನಜಿಯವರು, ಗೌರವ ಕಾರ್ಯದರ್ಶಿ ಶ್ರೀ ಜಿ.ಎಸ್.

ಕಲ್ಲಯ್ಯನಮಠ ಹಾಗೂ ಇತರ ಸದಸ್ಯ ಬಂಧುಗಳೊಡಗೂಡಿ ಶ್ರೀ ಗುರುಗಳು ಸಂಸ್ಥೆಯ ಪ್ರಾರಂಭೋತ್ಸವದ ವ್ಯವಸ್ಥೆ ಮಾಡತೊಡಗಿದರು.

ಈ ಸಂಸ್ಥೆಯಲ್ಲಿ ಎರಡು ವಿಭಾಗಗಳನ್ನು ತೆರೆಯಲು ಅನುಮತಿ ದೊರೆತಿತ್ತು. ೧. ಡ್ರಾಪ್ಟ್ಸಮನ್ ಸಿವಿಲ್.... (ವಾಸ್ತು ಕಟ್ಟಡಗಳ ನಕ್ಷೆ ನಿರ್ಮಿಸುವುದರಲ್ಲಿ ತರಬೇತಿ) ೨. ಮೆಕ್ಯಾನಿಕ್ ರೇಡಿಯೋ ಮತ್ತು ಟಿ.ವಿ. (ರೇಡಿಯೋ ಹಾಗೂ ಟೆಲಿವಿಜನ್ ರಿಪೇರಿ ಮಾಡುವುದರಲ್ಲಿ ತರಬೇತಿ) ಈ ಎರಡು ವರ್ಗಗಳನ್ನು ನಡೆಸಲು ಸರಕಾರವು ಹಲವು ರೀತಿಯ ನಿಯಮಗಳನ್ನು ನೀಡಿತ್ತು. ಆ ಪ್ರಕಾರ ತರಗತಿಗಳನ್ನು ತೆಗೆದುಕೊಳ್ಳುವ ಕೋಣೆಗಳು ಹಾಗೂ ಪ್ರಾಯೋಗಿಕ ಕೋಣೆಗಳ ಹೊಂದಾಣಿಕೆ, ಶಿಕ್ಷಕ ವರ್ಗದ ನೇಮಕಾತಿ ಪ್ರಾಯೋಗಿಕ ಸಲಕರಣೆಗಳ ಜೋಡಣೆ ಹಾಗೂ ಇನ್ನಿತರ ಕಾರ್ಯಗಳನ್ನು ಶ್ರೀಯುತ ಜಿ. ಎಸ್. ಕಲ್ಲಯ್ಯನಮಠ ಅವರು ನಿರ್ವಹಿಸಿಕೊಂಡರು. ದಿನಾಂಕ ೨೪-೧೧-೧೯೮೩ ರಂದು ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ದಿವ್ಯ ಸನ್ನಿಧಿಯಲ್ಲಿ ಜರುಗಿದ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಯ ಉದ್ಘಾಟನಾ ಸಮಾರಂಭಕ್ಕೆ ಉದ್ಘಾಟಕರಾಗಿ ಶ್ರೀ ಎಂ. ಮಹೇಶನ್ ಸಹಾಯಕ ಜಿಲ್ಲಾಧಿಕಾರಿ ಹಾಗೂ ಮುಖ್ಯಾಧ್ಯಕ್ಷರಾಗಿ ಶ್ರೀಯುತ ಈ. ಎಸ್. ಹೊನ್ನಳ್ಳಿ–ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಹಿರಿಯ ಅಭಿಯಂತರು, ಇವರು ಆಗಮಿಸಿ ಆ ಕಾರ್ಯಕ್ರಮಕ್ಕೆ ಶೋಭೆ ತಂದಿದ್ದರು. ಕೇವಲ ಮಹಿಳೆಯರಿಗಾಗಿ ಕೈಗಾರಿಕಾ ತರಬೇತಿ ಕೇಂದ್ರವನ್ನು ಸ್ಥಾಪಿಸಿದ್ದರಿಂದ, ಇಂತಹ ಗಣ್ಯ ವ್ಯಕ್ತಿಗಳಿಂದ ಮೆಚ್ಚುಗೆ ಪಡೆದ ಪೂಜ್ಯ ಮಹಾಸ್ವಾಮಿಗಳು ಅಲ್ಲಿ ನೆರೆದ ಹುಬ್ಬಳ್ಳಿ ನಗರದ ಜನ ಸಮೂಹಕ್ಕೆ ತಾಂತ್ರಿಕ ಶಿಕ್ಷಣವನ್ನೂ ಪಡೆಯುವ ಬಗ್ಗೆ ತಮ್ಮ ಆಶೀರ್ವಚನದಲ್ಲಿ ತಿಳಿಸಿ ಹೇಳಿದರು. ಅತಿಥಿಗಳಾಗಿ ಆಗಮಿಸಿದ ಎನ್. ಪದ್ಮರಾಜ್—ಸರಕಾರಿ ಕೈಗಾರಿಕಾ ತರಬೇತಿ ಕೇಂದ್ರದ ಪ್ರಾಚಾರ್ಯರು ಕೂಡಾ ಈ ಸಂಸ್ಥೆಯು ಮಹಿಳೆಯರ ಅಭಿವೃದ್ಧಿಗೆ ಹೇಗೆ ಪೂರಕವಾಗಬಲ್ಲದು ಅಂತ ತಿಳಿಸಿ ಹೇಳಿದರು. ಸಕಲ ಜನಗಣದ ಸಹಕಾರದಿಂದ ಅಂದಿನ ಕಾರ್ಯವು ಯಶಸ್ವಿಯಾಗಿ ನಡೆದು ಅದನ್ನು ವೀಕ್ಷಿಸಿದ ಸಕಲರ ಚಿತ್ತಭಿತ್ತಿಯಲ್ಲಿ ಇನ್ನೂ ಹಸಿರಾಗಿದೆ.

೧೯೮೩–೮೪ ರ ವಿದ್ಯಾರ್ಥಿನಿಯ ದಾಖಲಾತಿಯು ಎರಡೂ ವಿಭಾಗಗಳಲ್ಲಿ ಅತಿ ಬೇಗನೇ ಪೂರ್ಣವಾಯಿತು. ಆ ಸಮಯದಲ್ಲಿ ನಾಲ್ವರು ಶಿಕ್ಷಕರನ್ನು ನಿಯಮಿಸಿಕೊಳ್ಳಲಾಯಿತು ಹಾಗೂ ಪ್ರಾಧ್ಯಾಪಕರಾಗಿ ಶ್ರೀಮತಿ ಬಿ. ಬಿಜ್ಜರಗಿಯವರು ಕಾರ್ಯನಿರ್ವಹಿಸಿಕೊಂಡರು. ತರಗತಿಯು ಪ್ರಾರಂಭವಾದ ದಿನದಂದ, ಈ ಸಂಸ್ಥೆಯು ಒಂದು ಮಟ್ಟಕ್ಕೆ ಹೊಂದಿಕೊಳ್ಳುವವರೆಗೂ ಶ್ರೀ ಪೂಜ್ಯರು ದಿನಚರಿಯಂತೆ ತಪ್ಪದೆ ದಿನನಿತ್ಯವೂ ಸಂಸ್ಥೆಯ ಆಗುಹೋಗುಗಳನ್ನು ನೋಡಿ ಕೊಳ್ಳುತ್ತಿದ್ದರು.

ಅವರು ಸಂಸ್ಥೆಯ ಮೇಲೆ ಇಟ್ಟಿರುವ ಪ್ರೀತಿ, ವಿದ್ಯಾರ್ಥಿನಿಯರ ಮೇಲಿನ ಅಕ್ಕರೆಯನ್ನು ನೋಡಿದಲೆ, ತಾಯಿ ಬೆಳೆಯುತ್ತಿರುವ ತನ್ನ ಮಗುವನ್ನು ನೋಡಿ ಆನಂದಿಸುವ

ರೀತಿಯಂತಿತ್ತು. ಅಷ್ಟೇ ಅಲ್ಲದೆ ಶ್ರೀ ಪೂಜ್ಯರು ಪ್ರತಿಯೊಬ್ಬ ಶಿಕ್ಷಕರನ್ನು ಬಹಳ ಆಸಕ್ತಿಯಿಂದ ವಿಚಾರಿಸಿಕೊಂಡು, ಸಂಸ್ಥೆಯು ನಿಯಮಿತವಾಗಿ ಯಾವ ತೊಂದರೆಗಳಿಲ್ಲದೆ ನಡೆಯುವಂತೆ ಮಾಡಿದರು.

ಯಾವುದೇ ಕೈಗಾರಿಕಾ ತರಬೇತಿ ಸಂಸ್ಥೆಯು ಪ್ರಾರಂಭವಾದ ಐದು ವರ್ಷಗಳಲ್ಲಿ ಕೇಂದ್ರ ಉದ್ಯೋಗ ಮತ್ತು ತರಬೇತಿ ಇಲಾಖೆ, ಹೊಸದಿಲ್ಲಿ ಇವರ ನಿಯಮಾನುಸಾರ ಶಾಶ್ವತ ಸಂಯೋಜನೆಯನ್ನು ಪಡೆಯಬೇಕಾಗಿತ್ತು. ಅದಕ್ಕೋಸ್ಕರ ಸಂಸ್ಥೆಯ ಪ್ರಾಚಾರ್ಯರ ಬೇಡಿಕೆಗಳನ್ನು ಮನ್ನಿಸಿ, ಶ್ರೀಗುರುಗಳು ಸಂಸ್ಥೆಗೆ ಇನ್ನೂ ಹಲವು ಕೋಣೆ ಗಳನ್ನು, ಹೆಚ್ಚಿನ ಸಂಖ್ಯೆಯಲ್ಲಿ ಸಲಕರಣೆಗಳನ್ನು ಜೋಡಿಸಲು ಸಂಸ್ಥೆಯ ಹಾಗೂ ಸಂಘದ ಕಾರ್ಯಾಧ್ಯಕ್ಷರಾದ ಶ್ರೀಯುತ ವೀರಚಂದ ನಾರಣಜಿ ಕಾನಜಿಯವರ ಜೊತೆ ವಿಮರ್ಶಿಸಿ, ಅವುಗಳನ್ನು ಪೂರೈಸಿದರು. ಶ್ರೀಯುತ ಕಾನಜಿಯವರೂ ಕೂಡಾ ಪ್ರತಿ ಯೊಂದು ಅವಶ್ಯಕತೆಗಳಿಗೆ ಬೇಕಾದಷ್ಟು ಧನ ಸಹಾಯವನ್ನು ಮಾಡಿದರು. ಇದರ ಜೊತೆಗೆ ಶಿಕ್ಷಕ ವೃಂದದ ಸಹಕಾರದಿಂದ ನಮ್ಮ ಸಂಸ್ಥೆ ಪ್ರಾರಂಭವಾದ ಮೂರು ವರ್ಷ ಗಳಲ್ಲಿ ೧೯೮೩-೮೭ರಲ್ಲಿ ಶಾಶ್ವತ ಸಂಯೋಜನೆಯನ್ನು ಪಡೆಯಿತು. ಈ ಯಶಸ್ಸು ನಮ್ಮ ಸಂಸ್ಥೆಯ ಬೆಳವಣಿಗೆಗೆ ಅಡಿಪಾಯವಿದ್ದಂತೆ ಹಾಗೂ ಅದಕ್ಕೆ ಮುಖ್ಯ ಕಾರಣ ಶ್ರೀ ಪೂಜ್ಯ ಮಹಾಸ್ವಾಮಿಗಳ ಕಾರ್ಯ ಸಮರ್ಥತೆ ಎನ್ನುವದು ಪ್ರತಿಯೊಬ್ಬರು ಒಪ್ಪ ಬೇಕಾದ ಸಂಗತಿ; ಈ ರೀತಿ ಶ್ರೀ ಪೂಜ್ಯ ನಿಯಮಿತ ಅವಧಿಯಲ್ಲಿ ಸಂಸ್ಥೆಗೆ ಶಾಶ್ವತ ಸಂಯೋಜನೆ ದೊರಕಿಸಿಕೊಡುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.

ವಿದ್ಯಾರ್ಥಿನಿಯರು ಕೇವಲ ಅಧ್ಯಯನ ಪಾಠಗಳಲ್ಲಿ ತಮ್ಮ ಪೂರ್ತಿ ಸಮಯ ವನ್ನು ವಿನಿಯೋಗಿಸಿದರೆ ಅವರ ದೈನಂದಿನ ಚಟುವಟಿಕೆಗಳು ಉತ್ಸಾಹದಾಯಕವಾಗಿರು ವುದಿಲ್ಲವೆಂದು ನಿರ್ಧರಿಸಿ ಶ್ರೀ ಗುರುಗಳು ವಿದ್ಯಾರ್ಥಿನಿಯರಿಗೋಸ್ಕರ ಅನೇಕ ಬಗೆಯ ಕ್ರೀಡಾ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ೧೯೮೪-೮೫ರಲ್ಲಿ ಹುಬ್ಬಳ್ಳಿ ನಗರದಲ್ಲಿ ನಡೆದ ಜಿಲ್ಲಾ ಮಟ್ಟದ ಕೈಗಾರಿಕಾ ಪ್ರದರ್ಶನದಲ್ಲಿ ನಮ್ಮ ಸಂಸ್ಥೆಯ ವಿದ್ಯಾರ್ಥಿನಿ ಯರು ಭಾಗವಹಿಸಿದ್ದರು. ಅವರೇ ಸ್ವತಃ ನಿರ್ಮಿಸಿದ ಕೆಲವು ಎಲೆಕ್ಟ್ರಾನಿಕ್ಸ್ ವಸ್ತುಗಳು ಮತ್ತು ಚಿಕ್ಕ ಆಕಾರದಲ್ಲಿರುವ ನೀರಾವರಿ ಅಣೆಕಟ್ಟುಗಳು, ಕಟ್ಟಡಗಳ ನಮೂನೆಗಳು ವೀಕ್ಷಕರ ಮನ ಸೆಳೆದಿದ್ದವು. ಇವೆಲ್ಲವುಗಳ ತಯಾರಿಕೆಗಾಗಿ ವಿದ್ಯಾರ್ಥಿನಿಯರಿಗೆ ಎಲ್ಲ ರೀತಿಯ ಸಲಕರಣೆಗಳನ್ನು ಕೊಡಿಸಿ ಶ್ರೀ ಪೂಜ್ಯರು ಆಸಕ್ತಿಯಿಂದ ಕೆಲಸ ಮಾಡಲು ಪ್ರೋತ್ಸಾಹ ನೀಡಿದ್ದರು. ಅವರ ಶುಭ ಹಾರೈಕೆಯಿಂದ ನಮ್ಮ ಸಂಸ್ಥೆಯ ವಿದ್ಯಾರ್ಥಿನಿ ಯರು ಮಹಿಳಾ ವಿಭಾಗದ ಪ್ರದರ್ಶನದಲ್ಲಿ ಪ್ರಥಮ ಸ್ಥಾನಗಳಿಸಿದ್ದರು. ಅದು ಗುರೂಜಿ ಯವರ ಪಾಲಿಗೆ ಹೆಚ್ಚಿನ ಸಂತೋಷ ತಂದಿತ್ತು.

ಇವೆಲ್ಲವುಗಳಿಗಿಂತ ಮುಖ್ಯವಾಗಿ ಶ್ರೀ ಪೂಜ್ಯರು ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗೆ ಆರ್ಥಿಕ ಭದ್ರತೆಯನ್ನು ನೀಡಲು ಕೇಂದ್ರ ಸಮಾಜ ಕಲ್ಯಾಣ ಇಲಾಖೆಯಿಂದ

ಧನಸಹಾಯಕ್ಕಾಗಿ ಹೆಚ್ಚು ಹೆಚ್ಚಾಗಿ ಪ್ರಯತ್ನಿಸಿ ಸಫಲರಾದರು. ಗುರೂಜಿಯವರ ಈ ಕಾರ್ಯವು ನಮ್ಮ ಸಂಸ್ಥೆಯ ಕೆಲವು ಆರ್ಥಿಕ ತೊಂದರೆಗಳನ್ನು ನಿವಾರಿಸಿ, ಸಿಬ್ಬಂದಿ ವರ್ಗವು ನೆಮ್ಮದಿಯಾಗಿರುವಂತೆ ಮಾಡಿದೆ. ಯಾವುದೇ ವಿದ್ಯಾಸಂಸ್ಥೆಯು ಕೇವಲ ಸಲಕರಣೆಗಳು, ಧನ ಸಹಾಯ ಅಥವಾ ಬೇಕಾದ ಸಿಬ್ಬಂದಿಗಳು ಇದ್ದರೆ ಮಾತ್ರ ಪ್ರಗತಿ ಸಿಕ್ಕಂತಲ್ಲ, ವಿದ್ಯಾ ಸಂಸ್ಥೆಯ ಪ್ರಾಮುಖ್ಯತೆ ಬೆಳಕಿಗೆ ಬರುವುದು, ಅದರ ಬೇಡಿಕೆ ಹೆಚ್ಚಿ ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿನಿಯರು ದಾಖಲಾದಾಗ ಮಾತ್ರ ಎಂಬುದು ಶ್ರೀ ಪೂಜ್ಯರಿಗೆ ಅರಿಯದ ವಿಷಯವಲ್ಲ. ಅದನ್ನು ಕಾರ್ಯರೂಪಕ್ಕೆ ತರಲು ತಮ್ಮ ಭಕ್ತಾದಿಗಳಿಗೆಲ್ಲ, ಪುರಾಣ ಪ್ರವಚನಗಳಲ್ಲಿ, ಸಭೆ ಗೋಷ್ಠಿಗಳಲ್ಲಿ ತಮ್ಮಿಂದ ನಿರ್ಮಿತವಾದ ಈ ವೃತ್ತಿ ಶಿಕ್ಷಣ ಕೇಂದ್ರದ ಮಹತ್ವವನ್ನು ಸಾರುವುದನ್ನು ಧ್ಯೇಯವನ್ನಾಗಿ ಮಾಡಿ ಕೊಂಡರು. ಶ್ರೀ ಪೂಜ್ಯರ ಹೇಳಿಕೆಯನುಸಾರ ಅನೇಕರು ಅದರಲ್ಲೂ ತಾಂತ್ರಿಕ ಶಿಕ್ಷಣ ದಲ್ಲಿ ಆಸಕ್ತಿಯುಳ್ಳವರು ತಮ್ಮ ಹೆಣ್ಣುಮಕ್ಕಳ ಬಾಳಿಗೆ ವೃತ್ತಿ ಫಲ ನೀಡುವ ಈ ಮಾರ್ಗಕ್ಕೆ ಸೇರಿಸತೊಡಗಿದರು. ಶ್ರೀ ಪೂಜ್ಯರ ಅನುಗ್ರಹವಂತೆ ವಿದ್ಯಾರ್ಥಿನಿಯರು ಹೆಚ್ಚಿನ ಸಂಖ್ಯೆಯಲ್ಲಿ ತರಬೇತಿ ಮುಗಿಸಿ ವೃತ್ತಿಶೀಲರಾಗಿ ಮೂರುಸಾವಿರಮಠ, ಮಹಿಳಾ ತರಬೇತಿ ಕೇಂದ್ರದ ಕೀರ್ತಿಯನ್ನು ಎಲ್ಲೆಡೆಗೆ ಹರಡುವಂತೆ ಮಾಡಿದ್ದಾರೆ. ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರವು ಶ್ರೀ ಪೂಜ್ಯರ ಅನೇಕ ಮಹತ್ಕಾರ್ಯಗಳಲ್ಲಿ ಒಂದು ಚಿಕ್ಕ ಸಾಧನೆ ಮಾತ್ರ, ನಾವು ಈ ಸಂಸ್ಥೆಯನ್ನು ಸೂರ್ಯನು ಭೂಮಿಗಾಗಿ ನೀಡುವ ಅಸಂಖ್ಯಾತ ಕಿರಣಗಳಲ್ಲಿ ಒಂದಾಗಿ ಪರಿಗಣಿಸಬಹುದು. ಈ ಸಂಸ್ಥೆಯಲ್ಲದೇ ಅನೇಕ ಶಿಕ್ಷಣ ಸಂಸ್ಥೆಗಳನ್ನು ನಿರ್ಮಿಸಿ ಶ್ರೀ ಪೂಜ್ಯರು ತಮ್ಮ ಶಕ್ತಿಯನ್ನು ಬಹುದೂರದವರೆಗೂ ಪಸರಿಸಿದ್ದಾರೆ. ಶಿಕ್ಷಣಕ್ಕಾಗಿ ಅವರು ನೀಡುವ ಬೆಲೆ, ದುಡಿಯುವ ಪರಿ, ತೋರುವ ಕಕ್ಕುಲತೆ ಅಪಾರ. ಶ್ರೀ ಪೂಜ್ಯರ ವಾಣಿಯಂತೆ,

"ಶಿಕ್ಷಣವ ಬೆಳೆಯಿಸಲು ಶೈಕ್ಷಣಿಕ ಸಂಸ್ಥೆಗಳ
ಕಕ್ಕುಲತೆಯಿಂದ ಕಟ್ಟಿಹೆವು ಗುರುಸಿದ್ಧ,
ಸತ್ಪ್ರಜೆಯ ಬಲದಿ ಪೂರ್ಣಜ್ಞ"

ಶಿಕ್ಷಣದ ಬೆಳವಣಿಗೆಗೆ ರಾಷ್ಟ್ರದ ಬೆಳವಣಿಗೆಗೆ ಒಂದು ಪ್ರಮುಖ ಮಾರ್ಗವಿದ್ದಂತೆ. ಅದಕ್ಕಾಗಿ ಅನೇಕ ಸಂಸ್ಥೆಗಳನ್ನು ನಿರ್ಮಿಸಿ, ಅವುಗಳ ಹಲವು ರೀತಿಯ ಯೋಜನೆಗಳನ್ನು ರಚಿಸಿ, ಸದಾ ಅವುಗಳಿಗಾಗಿ ಚಿಂತಿಸುವ ಚಿನ್ಮಯ ಪುರುಷ ಶ್ರೀ ಜಗದ್ಗುರು ಮಹಾರಾಜ ನಿರಂಜನ ರಾಜಯೋಗೀಂದ್ರ ಮಹಾಸ್ವಾಮಿಗಳಿಗೆ ಕರ್ತೃ ಶ್ರೀಗುರು ಸಿದ್ಧೇಶ್ವರನು ಸಕಲ ಶಕ್ತಿಯನ್ನು ನೀಡಲೆಂದು ಬೇಡಿಕೊಳ್ಳೋಣ.

□□

ಸರ್ವಧರ್ಮ ಸಮನ್ವಯದ ಸಾಕಾರಮೂರ್ತಿ: ಮೂಜಗಂ

—ಶ್ರೀ ಜಿ. ಎಸ್. ಉಮದಿ

ಹುಬ್ಬಳ್ಳಿಗೂ ಒಂದು ಇತಿಹಾಸವಿದೆ. ಒಂದೊಂದು ಇತಿಹಾಸ ಒಂದೊಂದು ಅಂಶಗಳನ್ನು ಹೊರಗೆಡುತ್ತವೆ. ಹಾಗೆಯೇ ಹುಬ್ಬಳ್ಳಿಯ ಮೂರುಸಾವಿರಮಠಕ್ಕೂ ಒಂದು ಐತಿಹಾಸಿಕ ಹಿನ್ನೆಲೆಯಿದೆ. ಅದನ್ನು ಯಾರೊಬ್ಬರೂ ಪ್ರಶ್ನಿಸುವಂತೆಯೇ ಇಲ್ಲ. ಹನ್ನೆರಡನೆಯ ಶತಮಾನದಲ್ಲಿ ಕಲ್ಯಾಣದಿಂದ ನಡೆದು ಹೋದ ಬಸವ ಕ್ರಾಂತಿಯ ಹಿನ್ನೆಲೆಯಲ್ಲಿ ಶರಣ-ಶರಣೆಯರೆಲ್ಲರೂ ಚೆಲ್ಲಾಪಿಲ್ಲಿಯಾಗಿ ನಾಡಿನುದ್ದಗಲಕ್ಕೂ ಹರಿದು ಹಂಚಿ ಹೋದರೆಂಬುದನ್ನು ಓದುತ್ತೇವೆ. ಅದೇ ರೀತಿ ಹುಬ್ಬಳ್ಳಿಗೆ ಮೂರುಸಾವಿರ ಜಂಗಮರು, ಶರಣರು ಕಾಡು ಪ್ರದೇಶವಾಗಿದ್ದ ಈ ನೆಲದಲ್ಲಿ ನೆಲೆಸಿ ಪೂಜಾ ವಿಧಿ ಕಾರ್ಯಕ್ರಮ ನಡೆಸಿ ಮುಂದೆ ತಮಗೆ ತೋರಿದ ದಾರಿಯಲ್ಲಿ ಸಾಗಿದರೆಂಬುದು ಇತಿಹಾಸ. ಅದೇ ಮೂರು ಸಾವಿರಮಠ. ಈ ಮಠಕ್ಕೂ ಸಾವಿರಾರು ಶಾಖೆಗಳು. ಕರ್ತೃ ಶ್ರೀ ಗುರುಸಿದ್ಧೇಶನ ಗದ್ದುಗೆ ಇಡೀ ಹುಬ್ಬಳ್ಳಿ ಜನಾಂಗಕ್ಕೆ ಕರುಣಾಮೂರ್ತಿಯಾಗಿದೆ. ಬೇಡಿದ ವರವ ಕೊಡುವ ತಂದೆಯಾಗಿದ್ದಾನೆ. ಈ ಗದ್ದುಗೆಗೆ ಸರ್ವ ಧರ್ಮದವರೂ ತಲೆಬಾಗುತ್ತಾರೆ, ನಡೆದುಕೊಳ್ಳುತ್ತಾರೆ. ಇಂದು ಇಡೀ ನಾಡಿನ ಜನ-ಮನವನ್ನು ಆಕರ್ಷಿಸುವಂತಹ ರೀತಿಯಲ್ಲಿ ಗದ್ದುಗೆಯ ಪ್ರಭಾವ ಬೀರಿ ಹೋಗಿದೆ. ಲಿಂ|| ಪೂಜ್ಯ ಜಗದ್ಗುರು ಶ್ರೀಗುರುಸಿದ್ಧ ಮಹಾಸ್ವಾಮಿಗಳು ಕ್ರಿಯಾಶೀಲರಾಗಿದ್ದರೂ ಪೂಜಾ ನಿಷ್ಠರಾಗಿದ್ದರೂ, ಸಮಾಜದ ಮೇಲೆ ಹಿಡಿತ-ಪ್ರಭಾವ ಇರಿಸಿಕೊಂಡು ಬಂದವರು. ಸಾಕಷ್ಟು ಸಿರಿ-ಸಂಪತ್ತು ಅವರ ಪಾದವಡಿಗೆ ಬಂದು ಬೀಳುತ್ತಿತ್ತು. ಅವರ ತಪಸ್ಸಿನ ಪ್ರಭಾವ ಅಪಾರವಾಗಿತ್ತು.

ಲಿಂ|| ಶ್ರೀ ಗುರುಸಿದ್ಧ ಸ್ವಾಮಿಗಳವರ ಉತ್ತರಾಧಿಕಾರಿಯಾಗಿ ಶ್ರೀಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಬಹು ಮುಖದಿಂದ ಕಾರ್ಯಮಾಡುತ್ತಿರುವ ಪರಮ ಪೂಜ್ಯ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರ ಬದುಕು ಬಹು ವೈಶಿಷ್ಟ್ಯಪೂರ್ಣವಾದುದು, ವೈಭವಪೂರಿತವಾದುದು. ಪೂಜ್ಯರು ಪಟ್ಟಕ್ಕೆ ಬಂದಾಗಿನಿಂದಲೂ ಅವರೊಂದಿಗೆ ನಿಕಟ ಸಂಪರ್ಕ ಹೊಂದಿದ ನನಗೆ ಅವರ ಜೀವನದ ದೃಷ್ಟಿಯಲ್ಲಿ ಬಹು ಎತ್ತರವನ್ನು ಕಂಡಿದ್ದೇನೆ. ಸಂಕುಚಿತ ಮನೋಭಾವನೆ, ವಿಚಾರ, ಇನ್ನೊಬ್ಬರಿಗೆ ಅನ್ಯಾಯ ಮಾಡಬೇಕು. ತಮ್ಮದನ್ನು ಸಾಧಿಸಬೇಕು ಎಂಬುದರಿಂದ ಬಲು ದೂರವಾಗಿ ನಿಂತುಕೊಂಡು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುವ ತತ್ವವನ್ನು ಅಡಿ-ಅಡಿಗೂ ಅನುಸರಿಸುತ್ತ ಬಂದವರು. ಅವರ ನಡೆ ಚೆನ್ನ, ನುಡಿ ಚೆನ್ನ, ಎಲ್ಲರೊಂದಿಗೆ ಬೆರತು

ಹೋಗುವ ಮೂಲಕ ಧಾರ್ಮಿಕ ಕ್ಷೇತ್ರದ ಹಿರಿಮೆ-ಗರಿಮೆ ಹಾಗೂ ವೈಭವವನ್ನು ಎತ್ತರಿಸಿ ಕೊಂಡು ಬಂದವರು. ಅವರ ದೃಷ್ಟಿ ಯಾವಾಗಲೂ ಸಮನ್ವಯ ಭಾವನೆಯೊಂದಿಗೆ ಕೂಡಿದೆ. ಎಲ್ಲಿಯೇ ಹೋಗಲಿ, ಯಾವುದೇ ಧಾರ್ಮಿಕ ಸಮಾರಂಭಕ್ಕೆ ಹೋಗಿವೆ, ಎಲ್ಲ ಧರ್ಮಗಳ ಸಾರ, ತತ್ವ, ಸಂದೇಶ ಒಂದೇಯಾಗಿದ್ದರೂ ನಾವು ನಡೆದುಕೊಂಡು ಹೋಗುವ ದಾರಿ ಬೇರೆ ಬೇರೆ. ಅದು ಅವರವರ ಧರ್ಮದಾಚರಣೆಗೆ ಸಂಬಂಧಿಸಿದ್ದು. "ದೇವನೊಬ್ಬ ನಾಮ ಹಲವು" ಎನ್ನುವಂತೆ ಹಿಂದು, ಮುಸ್ಲಿಂ, ಕ್ರೈಸ್ತ, ವೀರಶೈವ, ಬ್ರಾಹ್ಮಣ ಮುಂತಾದ ಜಾತಿ-ವಿಜಾತಿಗಳಲ್ಲಿರುವ ಧರ್ಮ ಬೇರೆ ಬೇರೆಯಾಗಿದ್ದರೂ, ಗುರು ಪರಂಪರೆ ಬೇರೆ ಬೇರೆಯಾಗಿದ್ದರೂ ನಾವೆಲ್ಲ ಮುಟ್ಟತಕ್ಕಂಥ ಗುರಿ ಒಂದೇಯಾಗಿದೆ ಎನ್ನುವ ಭಾವನೆ ಅವರದಾಗಿದೆ. ಪೂಜ್ಯ ಜಗದ್ಗುರುಗಳವರ ಉದಾತ್ತವಾದ ದೃಷ್ಟಿಕೋನದಿಂದ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ವೈದ್ಯಕೀಯ ರಂಗಗಳು ವಿಕಾಸಗೊಳ್ಳಲು ಕಾರಣವಾದವು. ಅವರು ಸಮಾಜಕ್ಕಾಗಿ ಮಾಡಿದ ತ್ಯಾಗ ದೊಡ್ಡದು. ಶ್ರೀಮಠಕ್ಕೆ ಯಾರೇ ಬರಲಿ, ಯಾವುದೇ ಜಾತಿ, ಮತ, ಪಂಥದವರಿರಲಿ, ಅವರನ್ನು ಬರಮಾಡಿಕೊಳ್ಳುವಂಥ ವಿಶಾಲ ಮನೋ ಭಾವನೆಯ ಜಗದ್ಗುರುಗಳವರನ್ನು ನಾವು ಕಾಣುವುದಾದರೆ ಹುಬ್ಬಳ್ಳಿ ಮೂರುಸಾವಿರಮಠ ದಲ್ಲಿ ಕಾಣಬಹುದು ಎಂದು ಅನೇಕರು ಅಭಿಮಾನದಿಂದ ಆಡಿಕೊಳ್ಳುವ ಮಾತನ್ನು ಕೇಳಿ ದಾಗ ಯಾರಿಗಾದರೂ ಎದೆ ತುಂಬಿ ಬರುತ್ತದೆ.

ಸರ್ವ ಧರ್ಮದವರ ಸಮನ್ವಯದ ಜೀವಂತ ಅನುಭವ ಇಡೀ ನಗರಕ್ಕೆ ಇಡೀ ಜನಾಂಗಕ್ಕೆ ಚಿರಪರಿಚಿತವಾಗಿದೆ. ೧೯೬೪ರ ರಲ್ಲಿ ಬಸವ ಜಯಂತಿ ಉತ್ಸವದ ದಿನ ನಾವೆಲ್ಲ ಮೆರವಣಿಗೆ ಸಿದ್ಧತೆಯಲ್ಲಿದ್ದಾಗ ಒಮ್ಮೆಲೇ ನಗರದಲ್ಲಿ ಜಾತೀಯತೆಯ ಗಲಭೆ ಭುಗಿಲ್ಲೆದ್ದಿತು. ಎಲ್ಲಿ ಕಂಡಲ್ಲಿ ಬೆಂಕಿ, ಲೂಟಿ, ದರೋಡೆ, ಪೋಲೀಸರ ಲಾಠಿ ಪ್ರಹಾರ, ಅಶ್ರುವಾಯು, ಗೋಳಿ ಬಾರ್ ಎಲ್ಲವೂ ಎಲ್ಲ ಕಡೆಗೂ ನಡೆದಾಗ ಇಡೀ ನಗರದ ಜೀವನ ತತ್ತರಿಸಿಹೋಗಿತ್ತು. ಚಾಕು, ಚೂರಿಗಳ ಇರಿತ, ಹಿಂದು-ಮುಸ್ಲಿಂ ಬಾಂಧವರ ಬಾಂಧವ್ಯಕ್ಕೆ ಭಾರೀ ಧಕ್ಕೆ ತಗಲಿತು. ಮಂದಿರ-ಮಸೀದೆಗಳಿಗೆ ಬೆಂಕಿಯಿಟ್ಟಲ್ಲದೇ ಅನೇಕ ನಿರಪರಾಧಿ ಹಿಂದೂ- ಮುಸ್ಲಿಂ ಬಾಂಧವರ ಮನೆಗಳು ಅಗ್ನಿಗೆ ಆಹುತಿಯಾದವು. ಮೂರುಸಾವಿರಮಠದ ಮೇಲ್ಭಾಗದಲ್ಲಿ ನಿಂತು ಎಲ್ಲವನ್ನು ಕಣ್ಣಾರೆ ಕಂಡು "ಏನಪ್ಪಾ! ಈ ಜನ, ಈ ನಗರ ಗುರುಸಿದ್ಧೇಶನೇ ಎಲ್ಲರನ್ನು ಕಾಪಾಡಲಿ" ಎಂದು ಕೆಳಗಿಳಿದು ಬಂದು ತಮ್ಮ ಸಿಂಹಾಸನದಲ್ಲಿ ಕುಳಿತು ಬರುತ್ತಿರುವ ಸುದ್ದಿಗಳನ್ನೆಲ್ಲ ಕೇಳಿ ಮನಸ್ಸಿಗೆ ಭಾರೀ ನೋವುಮಾಡಿಕೊಂಡರು. ಪೋಲೀಸ ಅಧಿಕಾರಿಗಳಿಗೆ, ಸರಕಾರದ ಹಿತ ವಚನಕ್ಕೆ, ರಾಜಕೀಯ ಮುಖಂಡರ ಮಾತಿಗೆ ಸಾರ್ವಜನಿಕ ಜೀವನದ ನಾಯಕರು ಹೇಳುತ್ತಿದ್ದ ಕಿವಿ ಮಾತುಗಳಿಗೆ ಯಾರು ಓ! ಗೊಡ ದಂಥ ಸ್ಥಿತಿಯಲ್ಲಿದ್ದಾಗ ಇಂಥ ಪರಿಸ್ಥಿತಿಯಲ್ಲಿ ಧರ್ಮ ಗುರುಗಳೇ ಮಧ್ಯಸ್ಥಿಕೆ ವಹಿಸ ಬೇಕೆಂಬ ಸಲಹೆ ಬಂದು ತಕ್ಷಣ ಪೂಜ್ಯರು ಎಲ್ಲ ಧರ್ಮದವರ ಮುಖಂಡರ ಪೋಲೀಸ ಅಧಿಕಾರಿಗಳ, ಜಿಲ್ಲಾಧಿಕಾರಿಗಳ ಸಭೆ ಕರೆದು ಮುಕ್ತ ಮನಸ್ಸಿನಿಂದ ಚರ್ಚೆ ಮಾಡಿ ಇನ್ನು

ಮೇಲೆ ಹುಬ್ಬಳ್ಳಿ ಮಹಾನಗರದಲ್ಲಿ ಯಾವುದೇ ಬಗೆಯ ಜಾತೀಯ ಗಲಭೆಗಳನ್ನೆಬ್ಬಿಸುವುದಿಲ್ಲವೆಂದು ಎಲ್ಲರ ಕಡೆಯಿಂದಲೂ ಪ್ರತಿಜ್ಞೆ ಮಾಡಿಸಿದರು. ರಾಜಕೀಯ ಪರಿಸ್ಥಿತಿ ಹದಗೆಟ್ಟಾಗ, ಜಾತೀಯತೆಯ ಜ್ವಾಲೆ ಎದ್ದಾಗ, ಧರ್ಮ ಅಲ್ಲಿ ಹಸ್ತಕ್ಷೇಪ ಮಾಡಲೇಬೇಕಾಗುತ್ತದೆ. ಆ ರೀತಿ ಪೂಜ್ಯರು ಉರಿವ ಜ್ವಾಲೆಯ ಮಧ್ಯನಿಂತು ಎಲ್ಲವನ್ನು ಸಾಂತ್ವನಗೊಳಿಸಿದರು. ಅಂದಿನಿಂದ ಇಂದಿನವರೆಗೆ ಹಿಂದೂಗಳು ಬೇರೆ ಅಲ್ಲ, ಮುಸ್ಲಿಂರು ಬೇರೆ ಅಲ್ಲ. ಅವರ ಹಬ್ಬದಲ್ಲಿ ಇವರು, ಇವರ ಹಬ್ಬದಲ್ಲಿ ಅವರು ಹರ್ಷದಿಂದ ಪಾಲ್ಗೊಳ್ಳುತ್ತ ಬಂದಿದ್ದಾರೆ. ಯಾವುದೇ ಮಠಾಧೀಶರು, ಧರ್ಮಗುರುಗಳು, ಜಗದ್ಗುರು ಪೀಠದಲ್ಲಿದ್ದವರು ಮಾಡದೇ ಇರತಕ್ಕಂಥ ಅಭೂತ ಪೂರ್ವವಾದ ಜಾತೀಯ ಸಾಮರಸ್ಯದ ಜ್ಯೋತಿಯನ್ನು ಹೊತ್ತಿಸಿ ಬೆಳಗಿಸಿದ ಕೀರ್ತಿ ಅದು ಯಾರಿಗಾದರೂ ಸಲ್ಲುತ್ತಿದ್ದರೆ ಹುಬ್ಬಳ್ಳಿ ಮೂರುಸಾವಿರಮಠದ ಪೂಜ್ಯ ಜಗದ್ಗುರು ಶ್ರೀ ಗಂಗಾಧರ ಮಹಾಸ್ವಾಮಿಗಳಿಗೆ ಎಂದು ಎದೆ ತಟ್ಟಿ ಹೇಳಬೇಕು. ಸಣ್ಣವರೊಂದಿಗೆ ಸಣ್ಣವರಾಗಿ, ದೊಡ್ಡವರೊಂದಿಗೆ ದೊಡ್ಡವರಾಗಿ ಮಾತನಾಡಿ ಜನ-ಮನವನ್ನು ಗೆದ್ದುಕೊಂಡಿರುವ ಪೂಜ್ಯರು ಇಪ್ಪತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಸರ್ವ ಧರ್ಮದವರ ಸಮನ್ವಯದ ಸಾಕಾರಮೂರ್ತಿಯಾಗಿ ಕಂಗೊಳಿಸುತ್ತಿದ್ದಾರೆ. ಇತಿಹಾಸದ ಪುಟಗಳಲ್ಲಿ ಹೊಸ ದಾಖಲೆ ಮೂಡಿಸಿದ ಗೌರವ ಮೂರುಸಾವಿರಮಠ, ಹುಬ್ಬಳ್ಳಿ ಮಹಾನಗರದ ಜನತೆಗೆ ಸಲ್ಲಬೇಕು ಎಂದೆಂದಿಗೂ ಯಾವ ಕಾಲಕ್ಕೂ ಯಾರೂ ಮರೆಯದಂಥ ಕಾರ್ಯ ಮಾಡಿದ ಧರ್ಮ ಗುರು ಪೂಜ್ಯ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ಅನಂತ ಅನಂತ ಶರಣು.

ಇತಿಹಾಸ ನಿರ್ಮಿಸಿದ ಲೋಕ ಕಲ್ಯಾಣದ ಪಾದಯಾತ್ರೆ

—ಕೀರ್ತನಾಚಾರ್ಯ ಬಸವಕುಮಾರಶಾಸ್ತ್ರಿ

ಸರ್ವಲೋಕೋಪಕಾರಾಯ ಯೋದೇವಃ ಪರಮೇಶ್ವರಃ
ಚರತ್ಯತಿಥಿ ರೂಪೇಣ ನಮಸ್ತೇ ಜಂಗಮಾತ್ಮನೇ||

ಯಾತ್ರೆಗಳಲ್ಲಿ ತೀರ್ಥಯಾತ್ರೆ, ಕ್ಷೇತ್ರಯಾತ್ರೆಗಳು ಪ್ರಸಿದ್ಧವಾಗಿವೆ. ಆದರೆ ತೀರ್ಥ ಯಾತ್ರೆ, ಕ್ಷೇತ್ರಯಾತ್ರೆಗಳಿಗಿಂತ, ಪಾದಯಾತ್ರೆಯು ವಿಶಿಷ್ಟವೂ, ಮಹತ್ವದ್ದೂ ಆಗಿದೆ. ತೀರ್ಥಯಾತ್ರೆ, ಕ್ಷೇತ್ರಯಾತ್ರೆಗಳು- ಅವುಗಳಿರುವ ಸ್ಥಳಗಳಿಗೆ ಭಕ್ತಾದಿಗಳು ತಾವಾಗಿ ಕಾಲ್ನಡಿಗೆಯಿಂದಲೋ ವಾಹನಗಳ ಸಹಾಯದಿಂದಲೋ ಸಂದರ್ಶಿಸಿ, ಸಮಾಧಾನಪಟ್ಟು ಕೊಂಡು ಬರುವುದಾಗಿದೆ. ಆದರೆ ಪಾದಯಾತ್ರೆಯು ಹಾಗಲ್ಲ, ಮಹಾತ್ಮರು, ಶರಣರು, ತಪಸ್ವಿಗಳು, ಲೋಕ ಕಲ್ಯಾಣಾರ್ಥವಾಗಿ, ಕಾಲ್ನಡಿಗೆಯಿಂದ ಸಂಚರಿಸುತ್ತಾ ಭಕ್ತರಿದ್ದೆಡೆಗೆ ತಾವೇ ಸ್ವತಃ ಬಿಜಯಂಗೈದು ಅವರವರ ಮನೆಯ ಬಾಗಿಲಿಗೆ ಧರ್ಮೋಪದೇಶವನ್ನು ತತ್ತ್ವೋಪದೇಶವನ್ನು ಮುಟ್ಟಿಸುವ ಗುರಿಹೊಂದಿರುವುದೇ ಪಾದಯಾತ್ರೆ. ಮಹಾತ್ಮರ ಚರಣಗಳಿಗೆ ಮಾತ್ರಮರ್ಯಾದೆಯಿಂದ ಪಾದ ಎಂದು ಕರೆಯಲ್ಪಡುತ್ತದೆ. ಜನ ಸಾಮಾನ್ಯರು ತಿರುಗಾಡಿದರೆ ಅದಕ್ಕೆ ಕಾಲ್ನಡಿಗೆ ಎನ್ನುತ್ತಾರೆ. ಕಠಿಣತರವಾದ ತಪಸ್ಸನ್ನಾಚರಿಸಿ ತಮಗಾದ ಅನುಭವವನ್ನು ಭಕ್ತರಿಗೆ ಅರುಹಿ ಉಪದೇಶಿಸಿ ಉದ್ಧಾರ ಗೈಯ್ಯಲು ಮಹಾತ್ಮರು ಹೀಗೆ ವಿಶ್ವಪರ್ಯಟನ, ಕೈಗೊಳ್ಳುತ್ತಾರೆ.

ಈ ಪಾದಯಾತ್ರೆಯು ಪುರಾತನ ಕಾಲದಿಂದಲೂ ರೂಢಿಯಲ್ಲಿದೆ. ಬುದ್ಧ, ಶಂಕರ, ಮಧ್ವ, ರಾಮಾನುಜಾಚಾರ್ಯರು ಮೊದಲಾದ ಭಾಷ್ಯಕಾರರು, ಅಲ್ಲಮಪ್ರಭು ದೇವರು, ಅವರ ಅನುಯಾಯಿಗಳಾದ ಮೂರುಸಾವಿರ ಜಂಗಮರು ಜಗದ್ಗುರು ತೋಂಟದ ಸಿದ್ಧಲಿಂಗೇಶ್ವರರು ಮೊದಲಾದವರು ಪಾದಯಾತ್ರೆಯಿಂದ ಲೋಕೋದ್ಧಾರ ಕಾರ್ಯ ಮಾಡಿದ್ದಾರೆ.

ಇಪ್ಪತ್ತನೆಯ ಶತಮಾನದಲ್ಲಿ ಹಾನಗಲ್ಲ ಕುಮಾರ ಸ್ವಾಮಿಗಳವರು ಧಾರವಾಡದ ಮೃತ್ಯುಂಜಯ ಮಹಾಸ್ವಾಮಿಗಳವರು ಸಮಾಜೋದ್ಧಾರಕ್ಕಾಗಿ ಪಾದಯಾತ್ರೆ ಗೈದಿದ್ದಾರೆ ಅಥವಾ ಪಾದಯಾತ್ರೆಯಿಂದಲೇ ಸಮಾಜ ಸುಧಾರಣೆ ಮಾಡಿದ್ದಾರೆ ಎಂದು ಹೇಳ ಬಹುದು.

ಹೀಗೆ ಸರ್ವಸಂಗ ಪರಿತ್ಯಾಗಿಗಳಾಗಿ, ಅಹರ್ನಿಶಿ ಲೋಕೋದ್ಧಾರಕ್ಕಾಗಿ ಸಂಚರಿಸುವ ಮಹಾತ್ಮರಿಗೆ ವೀರಶೈವ ಪರಿಭಾಷೆಯಲ್ಲಿ ಜಂಗಮರು ಎಂದು ಕರೆಯುವ ವಾಡಿಕೆಯಿದೆ ಆದ್ದರಿಂದಲೇ.

ಸರ್ವಲೋಕೋಪಕಾರಾಯ ಯೋದೇವಃ ಪರಮೇಶ್ವರಃ
ಚರತ್ಯತಿಥಿರೂಪೇಣ ನಮಸ್ತೇ ಜಂಗಮಾತ್ಮನೇ

ಎಂದು ಜಂಗಮವನ್ನು ಸ್ತುತಿಸಿಕೊಂಡಾಡಿದ್ದಾರೆ.

ಹೀಗೆ ಭಕ್ತರಿದ್ದೆಡೆಗೆ ಮಹಾತ್ಮರು ತಾವೇ ಸ್ವತಃ ದಯಮಾಡಿಸಿ ಧರ್ಮೋಪದೇಶ ಮಾಡುವ ಪದ್ಧತಿ ಕಲಿಯುಗದಲ್ಲಿ ಪ್ರಾರಂಭವಾಯಿತು.

ಇದನ್ನೇ ಶ್ರೀ ಮದನಾದಿ ನಿರಂಜನ ಜಗದ್ಗುರುಗಳಾದ ಅಲ್ಲಮಪ್ರಭುದೇವರು ತಮ್ಮದೊಂದು ವಚನದಲ್ಲಿ ಹೀಗೆ ಅಪ್ಪಣೆ ಕೊಡಿಸಿದ್ದಾರೆ.

ವಚನ: ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯಾ!
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಝಂಕಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯಾ!
ದ್ವಾಪರ ಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ
ಆಗಲಿ ಮಹಾಪ್ರಸಾದವೆಂದೆನಯ್ಯಾ!
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ
ಆಗಲಿ ಮಹಾ ಪ್ರಸಾದವೆಂದೆನಯ್ಯಾ!
ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ಆನು ಬೆರಗಾದೆನಯ್ಯ ಗುಹೇಶ್ವರಾ!

ಹೀಗೆ ಅಪ್ಪಣೆ ಕೊಡಿಸಿದ್ದಾರೆ.

ಈ ಕಾರಣದಿಂದ ಈ ಕಾಲದಲ್ಲಿ ಭಕ್ತರಿದ್ದೆಡೆಗೇ ಜಂಗಮರು ಬಿಜಯಂಗೈದು ಭಕ್ತರಿಗೆ ಮನಂಬುಗುವಂತೆ ಪರಿಣಾಮ ಬೀರುವಂತೆ ಧರ್ಮೋಪದೇಶ ಗೈಯ್ಯುವುದು ಅವಶ್ಯವಾಗಿದೆ.

ಹೀಗೆ ಪಾದಯಾತ್ರೆಯಿಂದ ಲೋಕೋದ್ಧಾರಗೈದ ವೀರಶೈವ ಸಮಾಜದ ಮಹಾತ್ಮರಲ್ಲಿ (ಜಂಗಮರಲ್ಲಿ) ಶ್ರೀಮದನಾದಿ ನಿರಂಜನ ಜಗದ್ಗುರು ಅಲ್ಲಮಪ್ರಭುದೇವರು ಮೊಟ್ಟ ಮೊದಲಿಗರು.

ಚಾಮರಸ ಕವಿಯ "ಪ್ರಭುಲಿಂಗ ಲೀಲೆ"ಯಲ್ಲಿ ಸವಿಸ್ತಾರವಾಗಿ ನಾವು ಇದನ್ನು ಕಾಣಬಹುದು.

ತದನಂತರ ಶ್ರೀಮದನಾದಿ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಯತಿಗಳು ನೂರಾರು ವಿರಕ್ತರೊಂದಿಗೆ ಪಾದಯಾತ್ರೆ ಕೈಗೊಂಡು ಲೋಕ ಕಲ್ಯಾಣ ಸಾಧಿಸಿದರು.

ಆನಂತರ ಕೆಲವು ಕಾರಣಗಳಿಂದ ಮುಸಲ್ಮಾನರ ದಬ್ಬಾಳಿಕೆಯಿಂದಲೂ, ಆಂಗ್ಲರ ಆಡಳಿತದ ದುಷ್ಪರಿಣಾಮದಿಂದಲೂ, ಮುಖ್ಯವಾಗಿ ವೀರಶೈವ ಮಠಾಧಿಪತಿಗಳ ಉದಾ

ಹೀನತೆಯಿಂದಲೂ ವೀರಶೈವ ಸಮಾಜದವರಲ್ಲಿ ಒಗ್ಗಟ್ಟಿಲ್ಲದೆ ಅವರುಗಳಿಗೆ ಸರಿಯಾದ ಮಾರ್ಗದರ್ಶನವಿಲ್ಲದೆ ಮತ್ತೆ ಸಮಾಜವು ಮೂಲೆಗುಂಪಾಯಿತು.

ಬಸವಾದಿ ಪ್ರಮಥರ ಕಾಲದಲ್ಲಿ ಸಂಸ್ಥಾಪಿತವಾಗಿದ್ದ ಮಠಗಳಿಗೆ ತಕ್ಕ ಯೋಗ್ಯ, ಅರ್ಹ ಮಠಾಧಿಪತಿಗಳಿಲ್ಲದೆ, ಆಚಾರಹೀನರೂ, ಸ್ವೇಚ್ಛಾಚಾರಿಗಳೂ, ಅಸಂಸ್ಕೃತರೂ, ಅಕ್ಷರಶೂನ್ಯರೂ, ಆದವರ ಕೈಯಲ್ಲಿ ಮಠಾಧಿಕಾರಗಳು ಸಿಕ್ಕು ಮಠಗಳೆಲ್ಲ ಗೃಹಸ್ಥರ ಮನೆಗಳಾದವು. ಹೀಗೆ ಅನಾಯಕತ್ವದಲ್ಲಿ ಝುರ್ಝುರಿತವಾಗಿ ಸಮಾಜವು ಹೀನಸ್ಥಿತಿಯಲ್ಲಿರುವಾಗ ಇಪ್ಪತ್ತನೇ ಶತಮಾನದ ಆದಿಯಲ್ಲಿ ಕರ್ನಾಟಕದಲ್ಲಿ ಪರಮಪೂಜ್ಯರಾದ ಶ್ರೀ ಹಾನಗಲ್ಲ ಕುಮಾರ ಶಿವಯೋಗೀಶ್ವರರು ಹಾಗೂ ಧಾರವಾಡದ ಮೃತ್ಯುಂಜಯಪ್ಪಗಳವರ ಅವತಾರವಾಯಿತು. ಈ ಉಭಯ ಮಹಾತ್ಮರಿಂದ ಮತ್ತೆ ಸಮಾಜವು ಚೇತರಿಸಿಕೊಂಡಿತು. ನಿಶ್ಚೇಷ್ಟಿತವಾಗಿ ಮೂಲೆಗುಂಪಾಗಿದ್ದ ಸಮಾಜವನ್ನು ತಮ್ಮ ತಪಃ ಪ್ರಭಾವದಿಂದ ಬಡಿದೆಬ್ಬಿಸಿದರು. ಈ ಉಭಯ ಮಹಾತ್ಮರು ಈ ಉಭಯ ಜಂಗಮ ಪುಂಗವರಿಗೆ ಇಂದು ಮುಂದೆ, ಎಂದೆಂದಿಗೂ ಚಿರಋಣಿಯಾಗಿದೆ ವೀರಶೈವ ಸಮಾಜ.

ಪರಮಪೂಜ್ಯ ಹಾನಗಲ್ಲ ಕುಮಾರ ಶಿವಯೋಗೀಶ್ವರರು ಸಂಸ್ಥಾಪಿಸಿದ ಶ್ರೀ ಶಿವಯೋಗ ಮಂದಿರದಲ್ಲಿ ಅಂದಿನಿಂದ ಇಂದಿನವರೆಗೆ ಅನೇಕ ಅಗಣಿತ ವಟುಗಳು ತರಬೇತಿ ಹೊಂದಿ ಕರ್ನಾಟಕದ ನಾನಾ ಭಾಗಗಳಲ್ಲಿ ಮಠಗಳಿಗೆ ಉತ್ತರಾಧಿಕಾರಿಗಳಾಗಿದ್ದಾರಲ್ಲದೆ ಕೆಲವರು ಜಗದ್ಗುರು ಪೀಠವನ್ನಲಂಕರಿಸಿ ಹಾನಗಲ್ಲ ಕುಮಾರಸ್ವಾಮಿಗಳವರ ಆಶೀರ್ವಾದ ಬಲದಿಂದಲೂ ಮಾರ್ಗದರ್ಶನದಿಂದಲೂ, ಸಾಮಾಜಿಕ, ಧಾರ್ಮಿಕ ಶೈಕ್ಷಣಿಕ ಮೊದಲಾದ ಹಲವು ರಂಗಗಳಲ್ಲಿ ಸಮಾಜ ಸುಧಾರಣೆಗಳನ್ನು ಮಾಡಿ ಇಂದು ವೀರಶೈವ ಧರ್ಮದವರು ನಾಡಿನಲ್ಲಿ, ರಾಷ್ಟ್ರದಲ್ಲಿ ಎಲ್ಲ ಮತ ಬಾಂಧವರಂತೆ ಹೆಮ್ಮೆಯಿಂದ ತಲೆಯೆತ್ತಿ ನಿಲ್ಲುವಂತೆ ಮಾಡಿದ್ದಾರೆ. ಅಂಥ ಮಠಾಧಿಪತಿಗಳ ಸಾಲಿನಲ್ಲಿ ಅಗ್ರಗಣ್ಯರಾದವರು. ಇಂದಿನ ನಮ್ಮ ಹುಬ್ಬಳ್ಳಿಯ ಮೂರುಸಾವಿರಮಠದ ಪರಮಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು.

ಹುಬ್ಬಳ್ಳಿ ಜಗದ್ಗುರು ಮಹಾಸನ್ನಿಧಿಯವರು ಅಧಿಕಾರ ವಹಿಸಿಕೊಂಡ ಕೆಲವೇ ವರ್ಷಗಳಲ್ಲಿ ಅನೇಕ ಸುಧಾರಣೆಗಳನ್ನು ಕೈಗೆತ್ತಿಕೊಂಡು ಯಶಸ್ವಿಯಾಗಿದ್ದಾರೆ. ಶೈಕ್ಷಣಿಕ ರಂಗದ ಸುಧಾರಣೆಯಲ್ಲಿ ಇತರರಿಗೆ ಮಾರ್ಗದರ್ಶಕರಾಗಿದ್ದಾರೆ. ಹುಬ್ಬಳ್ಳಿಯ ಮಹಾನಗರದ ಇತಿಹಾಸದಲ್ಲಿ ಮೊಟ್ಟ ಮೊದಲನೆಯದಾಗಿ ಮಹಿಳೆಯರಿಗಾಗಿ ಪ್ರತ್ಯೇಕ ಮಹಾವಿದ್ಯಾಲಯವನ್ನು (ಮಹಿಳಾ ಕಾಲೇಜ) ಸಂಸ್ಥಾಪಿಸಿ ಮಹಿಳೆಯರಿಗಿದ್ದ ಒಂದು ದೊಡ್ಡ ಕೊರತೆಯನ್ನು ನಿವಾರಿಸಿದ್ದಾರೆ.

ಧಾರ್ಮಿಕ ಸುಧಾರಣೆಯಲ್ಲಂತೂ ಊಹೆಗೂ ನಿಲುಕದಷ್ಟು ಸುಧಾರಣೆಗಳನ್ನು ಮಾಡಿ ಮೂರುಸಾವಿರಮಠದ (ಪೀಠದ) ಕೀರ್ತಿಯು ದಿಗ್ದೆಸೆಗಳಿಗೆ ಪಸರಿಸುವಂತೆ ಮಾಡಿದ್ದಾರೆ.

ವಿಶ್ವವಿದ್ಯಾಲಯದವರಿಗೂ ಅಸಾಧ್ಯವಾಗುವಷ್ಟು ಧಾರ್ಮಿಕ ಗ್ರಂಥಗಳನ್ನು ಶೀಘ್ರದ ಪತಿಯಿಂದ ಪ್ರಕಟಿಸಿದ್ದಾರೆ.

ಹುಬ್ಬಳ್ಳಿಯ ಮೂರುಸಾವಿರಮಠದ ಜಗದ್ಗುರು ಮಹಾಸನ್ನಿಧಿಯವರ ಸಮಾಜ ಸುಧಾರಣೆಯಲ್ಲಿ ಮಹತ್ವವಾದ ಎರಡು ಮಹತ್ಕಾರ್ಯಗಳನ್ನು ಇಲ್ಲಿ ನಾವು ಸ್ಮರಿಸಲೇಬೇಕು.

ಮೊದಲನೆಯದು: ಕನ್ನಡ ನಾಡಿನಾಚೆ ತಮಿಳುನಾಡಿಗೆ ದಯಮಾಡಿಸಿ, ಕನ್ಯಾಕುಮಾರಿಯವರೆಗೆ ಬಸವತತ್ತ್ವವನ್ನು ಉಪದೇಶಿಸಿ ಸಹಸ್ರಾರು ಜನರಿಗೆ ಲಿಂಗಧಾರಣೆ ಮಾಡಿ ತಮಿಳುನಾಡಿನ ಸೇಲಂ ಮಹಾನಗರದಲ್ಲಿ ಶಾಖಾ ಮೂರುಸಾವಿರಮಠ ಸಂಸ್ಥಾಪಿಸಿ ಬಂದದ್ದು.

ಎರಡನೆಯದಾಗಿ: ೨೬-೧೧-೭೮ರಂದು ನೂರೊಂದು ಗುರುವಿರಕ್ತರೊಂದಿಗೆ ಶಿವಯೋಗ ಮಂದಿರದವರೆಗೈದ ಪಾದಯಾತ್ರೆ-ಕರ್ನಾಟಕದ ಧಾರ್ಮಿಕ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದಂಥ ಪವಿತ್ರಯಾತ್ರೆ ಶುಭಯಾತ್ರೆ.

ಪಾದಯಾತ್ರೆ ಪ್ರಾರಂಭ: ಪಾದಯಾತ್ರೆಯ ಹಿನ್ನೆಲೆ:

೨೮-೯-೭೭ ರಿಂದ ೧೨-೧೦-೭೭ರವರೆಗೆ, ತಮಿಳುನಾಡಿನ ಧರ್ಮ ಪ್ರಚಾರ ಮುಗಿದ ನಂತರ ವಾಹನಗಳ ಸಹಾಯವಿಲ್ಲದೆ ಪಾದಚಾರಿಗಳಾಗಿ ನಮ್ಮ ಕನ್ನಡನಾಡಿನಲ್ಲಿ ಸಂಚರಿಸಿ ಧರ್ಮ ಪ್ರಚಾರಗೈಯ್ಯುವ ಸಂಕಲ್ಪ ಮಾಡಿದ ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಮಹಾಸನ್ನಿಧಿಯವರು ಅದನ್ನು ಕಾರ್ಯರೂಪಕ್ಕೆ ತರಲು ಆತುರರಾದರು. ಪ್ರತಿ ಹಳ್ಳಿ ಪಟ್ಟಣಗಳಿಗೆ ಪಾದಚಾರಿಗಳಾಗಿ ಹೋಗಿ ಜನರೊಡನೆ ಬೆರೆತು ಅವರ ಕಷ್ಟ, ಸುಖಗಳನ್ನೂ, ಅವರ ಕುಂದು ಕೊರತೆಗಳನ್ನೂ ಅರಿಯಬಹುದು, ಜಾತಿ ಮತ ಪಂಥಗಳ ಭೇದಗಳೆಣಿಸದೆ ಎಲ್ಲ ಮತೀಯರನ್ನೂ ಸ್ವತಃ ಅವರವರ ಊರಿನಲ್ಲಿ ಅವರವರ ಮನೆಯ ಬಾಗಿಲಿಗೆ ಹೋಗಿ ಅವರಿಗೆ ದರ್ಶನ ಭಾಗ್ಯ ನೀಡಿ ಧರ್ಮ ಪ್ರಚಾರಗೈದು ಸಂಪರ್ಕ ಬೆಳೆಸಿದರೆ ನಾವು ಮಠಾಧಿಪತಿಗಳಾಗಿದ್ದಕ್ಕೆ ಸಾರ್ಥಕವಾಗುತ್ತದೆ. ಈ ಮಹಾಕಾರ್ಯವನ್ನು ಮೊದಲು ನಾವು ಮಾಡಬೇಕು. ಇದು ನಮ್ಮ ಆದ್ಯ ಕರ್ತವ್ಯ. ಯಾರಾದರೂ ನನ್ನನ್ನು ಹಿಂಬಾಲಿಸಿ ಬಂದರೆ ಬಹಳ ಸಂತೋಷ ಯಾರೂ ಬರದಿದ್ದರೆ, ನಾನೊಬ್ಬನೇ ಆದರೂ ಹೊರಟೇ ಬಿಡುತ್ತೇನೆ ಎಂಬ ತೀರ್ಮಾನಕ್ಕೆ ಬಂದುಬಿಟ್ಟರು. ಅದಾದನಂತರ ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಮಹಾಸನ್ನಿಧಿಯವರ ಪಾದಯಾತ್ರೆ ಸಂಕಲ್ಪ ತಿಳಿದ, ಇಲಕಲ್ಲಿನ ಶ್ರೀಗಳವರು, ಚಿಂಚಣಿ ಶ್ರೀಗಳವರು, ಕೆಳದಿ ಪಟ್ಟಾಧ್ಯಕ್ಷರು ಹೀಗೆ ಮೂರು ನಾಲ್ಕು ಜನ ಮಠಾಧಿಪತಿಗಳು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ, ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿದರು. ಬರಬರುತ್ತಾ ನೂರಾರು ಗುರು ವಿರಕ್ತ ಮಠಾಧಿಪತಿಗಳು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ತಮ್ಮ ಇಚ್ಛೆಯನ್ನು ಅರಿಕೆಮಾಡಿಕೊಂಡರು.

ಅನೇಕ ಮಠಾಧಿಪತಿಗಳ ಅರಿಕೆಯನ್ನು ಕೇಳಿ ಜಗದ್ಗುರು ಮಹಾಸನ್ನಿಧಿಯವರಿಗೆ ಎಲ್ಲಿಲ್ಲದ ಆನಂದವಾಯಿತು. ಹರ್ಷಭರಿತರಾಗಿ ಶುಭಸ್ಯಶೀಘ್ರಂ ಎಂದು ಕೂಡಲೇ ಕಾರ್ಯ ಪ್ರವೃತ್ತರಾಗಲು ಸಿದ್ಧರಾದರು. ಪಾದಯಾತ್ರೆಯು ಎಲ್ಲಿಂದ ಎಲ್ಲಿಯವರೆಗೆ ಎಷ್ಟು ದಿನಗಳವರೆಗೆ ಎಂಬುದನ್ನು ನಿಶ್ಚಯಿಸಲು ಎಲ್ಲ ಮಠಾಧಿಪತಿಗಳನ್ನು ಕರೆಸಿ ವಿಚಾರ (ಮೀಟಿಂಗ್) ವಿನಿಮಯ ನಡೆಸಿದರು. ನೂರೊಂದು ಗುರುವಿರಕ್ತ ಮಠಾಧಿಪತಿಗಳು ಪಾದಯಾತ್ರೆಯಲ್ಲಿ ಪಾಲ್ಗೊಳ್ಳುವ ನಿರ್ಣಯ ಸ್ವೀಕಾರವಾಯಿತು. ಹೆಚ್ಚಾಗಿ ಎಲ್ಲರೂ ಶಿವಯೋಗ ಮಂದಿರದ ಸಂಸ್ಥೆಯಲ್ಲಿ ತರಬೇತಿ ಪಡೆದವರೇ ಆಗಿದ್ದುದರಿಂದಲೂ ಮುಖ್ಯವಾಗಿ ಈ ಪಾದಯಾತ್ರೆಗೆ ಸೂತ್ರಧಾರಿಗಳೂ, ನಿರ್ಮಾಪಕರೂ, ಆದ ಹುಬ್ಬಳ್ಳಿ ಜಗದ್ಗುರು ಮಹಾಸನ್ನಿಧಿಯವರೂ ಸಹ ಶಿವಯೋಗ ಮಂದಿರದಲ್ಲೇ ತರಬೇತಿ ಹೊಂದಿರುವುದರಿಂದಲೂ, ಜಗದ್ಗುರು ಮಹಾಸನ್ನಿಧಿಯವರ ಸಂಕಲ್ಪದಂತೆ ಹುಬ್ಬಳ್ಳಿಯಿಂದ ಶಿವಯೋಗ ಮಂದಿರದವರೆಗೆ ಪಾದಯಾತ್ರೆ ಕೈಕೊಳ್ಳುವ ನಿರ್ಧಾರವಾಯಿತು.

ದಿನಾಂಕ ೨೭-೧೧-೧೯೭೮ರಂದು ಹುಬ್ಬಳ್ಳಿಯಿಂದ ಪಾದಯಾತ್ರೆ ಪ್ರಾರಂಭವಾಗಬೇಕೆಂದು ನಿಶ್ಚಯಿಸಲಾಯಿತು. ಹುಬ್ಬಳ್ಳಿಯಿಂದ ಶ್ರೀ ಶಿವಯೋಗ ಮಂದಿರದವರೆಗೆ ಹನ್ನೊಂದು ದಿನಗಳ ಪ್ರಯಾಣ ನಿಶ್ಚಯವಾಯಿತು. ಈ ಹನ್ನೊಂದು ದಿವಸಗಳಲ್ಲಿ ಹನ್ನೊಂದು ಊರುಗಳಲ್ಲಿ ಪ್ರತಿದಿನ ಒಂದು ಊರಲ್ಲಿ ರಾತ್ರಿ ವಾಸ್ತವ್ಯ, ಶಿವಾನುಭವ ಸಭೆ ಭಜನೆ, ಕೀರ್ತನೆ, ಉಪನ್ಯಾಸ, ಭಾಷಣ, ವಚನ ಗಾಯನ ಇತ್ಯಾದಿ ಧಾರ್ಮಿಕ ಕಾರ್ಯಕ್ರಮಗಳು ತಪ್ಪದೇ ನಡೆಯುವಂತೆ ಯೋಜನೆ ಸಿದ್ಧಪಡಿಸಿದ್ದಾಯಿತು. ಈ ಹನ್ನೊಂದು ನಿಶ್ಚಿತ ಊರುಗಳಲ್ಲದೆ ಮಾರ್ಗ ಮಧ್ಯದಲ್ಲಿ ಬರುವ ಗ್ರಾಮಗಳಲ್ಲೂ ಸಹ ಕೆಲವು ಗಂಟೆಗಳು ತಂಗಿ ಅಲ್ಲಿಯೂ ಸಹ ಶಿವಾನುಭವ ಸಭೆ ಜರುಗಿಸಬೇಕೆಂಬ ಗೊತ್ತುವಳಿ ಪಾಸಾಯಿತು.

ಹೀಗೆ ಎಲ್ಲಾ ವಿಚಾರ ವಿನಿಮಯದನಂತರ ಹುಬ್ಬಳ್ಳಿಯಿಂದ ಶಿವಯೋಗಮಂದಿರದವರೆಗೆ ಆರಿಸಿದ ಹನ್ನೊಂದು ಊರುಗಳು ಇಂತಿವೆ.

೨೭-೧೧-೧೯೭೮ ಕುಸುಗಲ್ಲ (ವಾಸ್ತವ್ಯ)
೨೮-೧೧-೧೯೭೮ ಹೆಬಸೂರು (ವಾಸ್ತವ್ಯ) ಮಾರ್ಗಮಧ್ಯದಲ್ಲಿ
ಮುಂಜಾನೆ ೮ ಗಂಟೆಗೆ ಕರೇಸೂರಿನಲ್ಲಿ ಧರ್ಮಬೋಧಕ ಸಭೆ
೨೯-೧೧-೧೯೭೮ ನವಲಗುಂದ
೩೦-೧೧-೧೯೭೮ ಶಲವಡಿ
೧-೧೨-೧೯೭೮ ಶುಕ್ರವಾರ ಬೆಳವಣಕಿ
೨-೧೨-೧೯೭೮ ಶನಿವಾರ ರೋಣ
೩-೧೨-೧೯೭೮ ರವಿವಾರ ಹಿರೇಹಾಳ
೪-೧೨-೧೯೭೮ ಸೋಮವಾರ ಬೇಲೂರದ ಜಾಲಿಹಾಳ

೫-೧೨-೧೯೭೮ ಮಂಗಳವಾರ ಚೊಳಚಗುಡ್ಡ
೬-೧೨-೧೯೭೮ ಬುಧವಾರ ಬದಾಮಿ
೭-೧೨-೧೯೭೮ ಗುರುವಾರ ಮಹಾಕೂಟ, ನಂದಿಕೇಶ್ವರ, ನೆಲವಗಿ, ಮಾರ್ಗವಾಗಿ ಶಿವಯೋಗಮಂದಿರ ತಲುಪುವುದು. ಸಾಯಂಕಾಲ ಶಿವಯೋಗಮಂದಿರವಲ್ಲಿ ಶಿವಾನುಭವ ಕಾರ್ಯಕ್ರಮ.

ಪಾದಯಾತ್ರೆಯ ದಿನಚರಿ:

ಬೆಳಿಗ್ಗೆ ನಾಲ್ಕುಗಂಟೆಗೆ ಎದ್ದು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಐದು ಘಂಟೆಗೆ ಪಾದಯಾತ್ರೆ ಪ್ರಾರಂಭ. ಎಂಟು ಹತ್ತು ಮೈಲಿಗಳು ಪ್ರಯಾಣಿಸಿ ೯-೧೦ ಘಂಟೆಯೊಳಗೆ ಮುಂದಿನ ಊರು ತಲುಪುವುದು. ಮಾರ್ಗದಲ್ಲಿ ಶರಣರ ವಚನಗಳನ್ನು ಹಾಡುತ್ತಾ, ವಚನಗಳ ಅರ್ಥಗಳನ್ನು ಚರ್ಚಿಸುತ್ತಾ ನಡೆಯುವುದು, ೧೨ ಘಂಟೆಯೊಳಗೆ ಸ್ನಾನ, ಲಿಂಗಾರ್ಚನೆ, ಪ್ರಸಾದ ಮುಗಿಸಿ ಸ್ವಲ್ಪಹೊತ್ತು ವಿಶ್ರಾಂತಿ ಪಡೆದು ಸಾಯಂಕಾಲದ ಶಿವಾನುಭವ ಸಭೆಗೆ ಸಜ್ಜಾಗುವುದು.

ಕಾವಿಯ ರೈಲು:

ಶಿವಾನುಭವ ಸಭೆ ಮುಗಿದನಂತರ ಸ್ನಾನ ಲಿಂಗಾರ್ಚನೆ, ರಾತ್ರಿ ವಿಶ್ರಾಂತಿ ಹೀಗೆ ದಿನಚರಿಯಿತ್ತು. ಮಠಾಧಿಪತಿಗಳಲ್ಲಿ ಆಂಧ್ರ, ಮಹಾರಾಷ್ಟ್ರದವರೂ ಪಾಲ್ಗೊಂಡಿದ್ದರು. ತಮಿಳುನಾಡಿನ ಈರೋಡದ ಶ್ರೀ ಎಂ. ಸದಾಶಿವಂ ಎಂ.ಎ.ಪಿಎಚ್.ಡಿ.(ವಾಸವಿ ಕಾಲೇಜ ಪ್ರೊಫೆಸರ್)ರವರೂ ಒಂದು ಭಾಗಿಗಳಾಗಿದ್ದರು. ನೂರೊಂದು ಗುರುವಿರಕ್ತರು ಸಾಲು ಗಟ್ಟಿ ನಡೆಯುತ್ತಿದ್ದ ಪಾದಯಾತ್ರೆಯು ಸಾಗಿರುವುದನ್ನು ನೋಡಿದವರಿಗೆ ಕಾವಿಯ ಬಣ್ಣದ ರೈಲು ಚಲಿಸುತ್ತಿದ್ದಂತೆ ಕಾಣುತ್ತಿತ್ತು. ರಸ್ತೆ ಬದಿಯ ಅಕ್ಕಪಕ್ಕದ ಹೊಲ ಗಳಲ್ಲಿಯ ರೈತರು ಓಡೋಡಿ ಬಂದು ಭಕ್ತಿಪರವಶರಾಗಿ ಸಾಷ್ಟಾಂಗ ಹಾಕುತ್ತಿದ್ದರು.

ಧರೆ ಪಾವನ:

ನೂರಕ್ಕೂ ಹೆಚ್ಚು ಜನ, ಗುರುವಿರಕ್ತರು ಅಡಿಯಿಟ್ಟ ನೂರು ಮೈಲುದ್ದದ, ಆ ನೆಲ ಪಾವನವಾಯ್ತು ದರ್ಶನ ಪಡೆದ, ಲಕ್ಷಾಂತರ ಭಕ್ತರು ಪುನೀತರಾದರು-ಹುಬ್ಬಳ್ಳಿಯಿಂದ ಶಿವಯೋಗಮಂದಿರದವರೆಗೆ ಅಲ್ಲಲ್ಲಿ ನಡೆದ, ಪ್ರಸಾದ ವಿತರಣೆಯಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನ ಭಾಗಿಗಳಾಗಿ ಪ್ರಸಾದ ಸೇವಿಸಿ ತೃಪ್ತರಾದರು. ಹಿಂದೆಂದೂ ಕಂಡು ಕೇಳರಿ ಯದ ಈ ನೂರೊಂದು ಗುರುವಿರಕ್ತರ ದರ್ಶನಕ್ಕಾಗಿ ಜನ ಹಳ್ಳಿಗಳಿಂದ ತಂಡ ತಂಡೋಪ ವಾಗಿ ಬಂದು ಸೇರುತ್ತಿದ್ದರು.

ಪಾದಯಾತ್ರೆಯಲ್ಲಿ ಕೆಲವು ಆಕರ್ಷಣೀಯ ಪ್ರಸಂಗಗಳು

ಜಂಗಲ ಮೆ ಮಂಗಲ:

ರೋಣ ತಾಲೂಕಿನ ಮಲ್ಲಾಪುರದಲ್ಲಿ ಒಂದು ವಿಶಿಷ್ಟ ಅನುಭವ. ಊರ ಹೊರ

ವಲಯದಲ್ಲಿರುವ ಪ್ರಾಚೀನತಮವಾದ ಬಿಲ್ವವನ, ನೂರಾರು ಬಿಲ್ವವೃಕ್ಷಗಳಿರುವ ಅನೇಕ ಯೋಗಿಗಳ ತಪೋಭೂಮಿಯೂ ಆಗಿದ್ದ ಆ ಬಿಲ್ವವನದಲ್ಲಿಯೇ ನೂರೊಂದು ಗುರು ವಿರಕ್ತರ ಸಾಮೂಹಿಕ ಲಿಂಗಾರ್ಚನೆ, ಪ್ರಸಾದ ಜರುಗಿತು. ಈ ದೃಶ್ಯ ಕಂಡ ಜನರು ಭಕ್ತಿಪರವಶರಾದರು–ಜಗದ್ಗುರು ಮಹಾಸನ್ನಿಧಿಯವರಿಗಂತೂ ಅನಿರ್ವಚನೀಯ ಶಾಂತಿ ಸಮಾಧಾನವಾಗಿ ಇದು ನಿಜವಾಗಿ ಜಂಗಲ ಮೇ ಮಂಗಲ ಎಂದು ಉದ್ಗಾರ ತೆಗೆದರು.

ಉಪನ್ಯಾಸ ಶಿಬಿರ:

ಪಾದಯಾತ್ರೆಯ ಹನ್ನೊಂದು ದಿವಸಗಳಲ್ಲಿ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಲದ ಸಂಸ್ಕೃತಿ ಪ್ರಸಾರೋಪನ್ಯಾಸಮಾಲೆಯ ಎಂಟು ಶಿಬಿರಗಳನ್ನು ವಿವಿಧ ಗ್ರಾಮಗಳಲ್ಲಿ ಏರ್ಪಡಿಸಲಾಗಿತ್ತು.

ಶ್ರೀ ಬಸವಲಿಂಗ ಪಟ್ಟಾಧ್ಯಕ್ಷರು ತೆಲಸಂಗ, ಪ್ರೊ. ಸುಗಮೇಶ ಹಂಡಗಿ ನವಲ ಗುಂದ, ಶ್ರೀ ಎ್ಹ. ಎಸ್. ಅಂಗಡಿ, ಪ್ರೊ.ದೇವೇಂದ್ರಕುಮಾರ ಹಕಾರಿ, ಶ್ರೀ ದಾನಪ್ಪ ಜತ್ತಿ ಶಿಕೋಟ, ಪ್ರೊ. ಎಚ್. ಜಿ. ಮೃತ್ಯುಂಜಯ, ಪ್ರೊ. ಬಿ. ಎಂ. ಮಾಗಿ ಹಾಗೂ ಪಂ. ನಾಗ ಭೂಷಣ ಶಾಸ್ತ್ರಿಗಳು ಶಿಬಿರದ ಮುಖ್ಯ ಉಪನ್ಯಾಸಕರಾಗಿದ್ದರು.

ಡಾ. ಎಂ. ಎಂ. ಕಲಬುರ್ಗಿ ಸಂಪಾದಿತ "ಕೊಂಡಗುಳಿ ಕೇಶಿರಾಜನ ಕೃತಿಗಳು", ಡಾ. ಜ. ಚ. ನಿ. ವಿರಚಿತ ಪ್ರಸಾದ ಹಾಗೂ ಜಿ. ಎಚ್. ಹನ್ನೆರಡುಮಠ ವಿರಚಿತ "ಕಾಡಿನಲ್ಲಿ ಕೈವಲ್ಯ" ಎಂಬ ಗ್ರಂಥಗಳು ಹಾಗೂ ಎಂಟು ವಚನ ಪಟಗಳು ಅಲ್ಲಲ್ಲಿ ಬಿಡುಗಡೆ ಆಯಿತು.

ಅನೇಕ ಪರಗುರು ಚರಮೂರ್ತಿಗಳು ಮಾಡಿದ ಭಾಷಣದಲ್ಲಿ ಶ್ರೀ ಮ.ನಿ.ಪ್ರ. ಶ್ರೀ ಚೆನ್ನವೀರ ಮಹಾಸ್ವಾಮಿಗಳು ಮೂಡಿ, ಬನವಾಸಿ, ಶ್ರೀ ಮ.ನಿ.ಪ್ರ. ಶಿವ ಯೋಗೀಶ್ವರ ಸ್ವಾಮಿಗಳು ಭಾತಂಬ್ರ, ಶ್ರೀ ಮ.ನಿ.ಪ್ರ. ಕುಮಾರ ಪ್ರಭುಸ್ವಾಮಿಗಳು ಜಡೆ, ಶ್ರೀಮಜ್ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳು ಆನಂದಪುರ ಮುಂತಾದವರ ಉಪನ್ಯಾಸಗಳು ಜನಮನವನ್ನು ಆಕರ್ಷಿಸಿತು.

ಕೀರ್ತನೆ ಹಾಗೂ ಭಕ್ತಿಗೀತೆಗಳು:

ಶ್ರೀ ಕುಮಾರ ಶಿವಯೋಗಿ ಸಂಘದ ಸಾಧಕರೇ ಸಂಘಟಿಸಿದ ಭಕ್ತಿಗೀತೆಗಳು ಜನರನ್ನು ರಂಜಿಸಿದವು. ಅಡ್ನೂರಿನ ಶ್ರೀ ಪಂಚಾಕ್ಷರ ಶಿವಾಚಾರ್ಯರು ರಚಿಸಿ ಕಂಠದಾನ ಮಾಡಿದ ಹಾಸಗಲ್ಲ ಕುಮಾರ ಶಿವಯೋಗೀಶ್ವರರ ಭಕ್ತಿಗೀತೆಯಂತೂ ಅತ್ಯಂತ ಜನಪ್ರಿ ಯತೆ ಗಳಿಸಿತು.

ಸುಪ್ರಸಿದ್ಧ ತ್ರಿಭಾಷಾ ಕೀರ್ತನಕಾರರೂ, ಆಕಾಶವಾಣಿ ಕಲಾವಿದರೂ ಆದ ಕೀರ್ತನಾಚಾರ್ಯ ಪಂ. ಬಸವಕುಮಾರ ಶಾಸ್ತ್ರಿಗಳವರ ನವರಸಭರಿತ ಶಿವಕೀರ್ತನೆಯು ಅತ್ಯಂತ ಜನ ಮೆಚ್ಚುಗೆ ಗಳಿಸಿತು.

ಇಷ್ಟಲಿಂಗಧಾರಣೆ:

ಧರ್ಮಪ್ರಸಾರದ ಮಹತ್ವ ಅಂಶ ಇಷ್ಟಲಿಂಗಧಾರಣೆ. ಕೆಳದಿಯ ರಾಜಗುರು ಡಾ. ಗುರುಸಿದ್ಧ ಶಿವಾಚಾರ್ಯ ಮಹಾಸ್ವಾಮಿಗಳವರು ಪಾದಯಾತ್ರೆಯ ಹನ್ನೊಂದು ದಿನದ ಅವಧಿಯಲ್ಲಿ ಸಾವಿರಾರು ಜನರಿಗೆ ಲಿಂಗಧಾರಣೆ ಮಾಡಿದ್ದು ಒಂದು ವಿಶಿಷ್ಟ ದಾಖಲೆಯಾಯಿತು.

ಸಂಗಮ ಸಮನ್ವಯ:

೧೦೧ ಗುರುವಿರಕ್ತರ ಪಾದಯಾತ್ರೆಯು ಕಿರೇಸೂರ ಹತ್ತಿರ ಬರುತ್ತಿದ್ದಾಗ ಬಾಗಲಕೋಟೆಗೆ ಕಾರಿನಲ್ಲಿ ಹೊರಟಿದ್ದ ಪೇಜಾವರ ಮಠದ ಶ್ರೀ ವಿಶ್ವೇಶ್ವರ ಶ್ರೀಪಾದಂಗಳವರು ಮೂರುಸಾವಿರಮಠದ ಜಗದ್ಗುರುಗಳು ಹಾಗೂ ೧೦೧ ಗುರುವಿರಕ್ತರು ಭಾಗವಹಿಸಿದ್ದ ಪಾದಯಾತ್ರೆಯನ್ನು ಕಂಡು ತತ್‌ಕ್ಷಣ ಕಾರಿನಿಂದಿಳಿದು ಜಗದ್ಗುರು ಮಹಾಸನ್ನಿಧಿಯವರನ್ನು ಕಂಡು, ತಾವೂ ಪಾದಯಾತ್ರೆಯಲ್ಲಿ ಸಹಭಾಗಿಗಳಾಗಿ ಮೂರು ಮೈಲುಗಳವರೆಗೆ ನಡೆದು ನಂತರ ತಮ್ಮ ಕಾರಿನಲ್ಲಿ ಮುಂದಿನ ಪ್ರಯಾಣ ಬೆಳೆಸಿದರು. ಪೇಜಾವರ ಮಠದ ಶ್ರೀ ವಿಶ್ವೇಶ್ವರ ಶ್ರೀಪಾದಂಗಳವರ ಹಾಗೂ ಹುಬ್ಬಳ್ಳಿ ಜಗದ್ಗುರುಗಳವರ ಸಂಗಮ ಹರಿಹರರ ಸಂಗಮದಂತಾಗಿತ್ತು.

ಅರವತ್ತು ತುಂಬಿದ ನವಿಲುಗುಂದದ ಪಂಚಗ್ರಹ ಹಿರೇಮಠದ ಪಟ್ಟಾಧ್ಯಕ್ಷರನ್ನು ಹಾಗೂ ಶ್ರೀ ಸಿದ್ಧವೀರ ದೇವರನ್ನು ಜಗದ್ಗುರುಗಳವರು ಶಾಲು ಹೊದಿಸಿ ಸನ್ಮಾನಿಸಿ ಗೌರವಿಸಿದರು. ಇದೊಂದು ಗುರುವಿರಕ್ತರ ಸಮನ್ವಯದ ನಿದರ್ಶನವಾಗಿತ್ತು.

ಹರಿಜನರಿಂದ ಪಾದಪೂಜೆ:

ನೂರೊಂದು ಗುರುವಿರಕ್ತರು ಪಾದಯಾತ್ರೆಯಿಂದ ಕಿರೇಸೂರಿನ ಹರಿಜನಕೇರಿಯಲ್ಲಿ ಪ್ರವೇಶಿಸಿದಾಗ ಕೇರಿಯ ಜನರಿಗೆ ಆನಂದವೇ ಆನಂದ. ಬದಾಮಿಯ ಹರಿಜನ ಕೇರಿಯಲ್ಲಂತೂ ಅಂದು–ಸಂಭ್ರಮವೇ ಸಂಭ್ರಮ ಸಡಗರವೇ ಸಡಗರ ಕೇರಿಯನ್ನೆಲ್ಲ ಸ್ವಚ್ಛಗೊಳಿಸಿ ತಳಿರುತೋರಣಗಳಿಂದ ಅಲಂಕರಿಸಿದ್ದರು. ನೂರೊಂದು ಗುರುವಿರಕ್ತರಿಗೆ ಹೃತ್ಪೂರ್ವಕ ಸ್ವಾಗತನೀಡಿ ಜಗದ್ಗುರುಗಳವರ ಪಾದಪೂಜೆ ಮಾಡಿ ಧನ್ಯತೆ ಅನುಭವಿಸಿದರು. ಹನ್ನೆರಡನೆಯ ಶತಮಾನದ ಹರಳಯ್ಯ ಹಾಗೂ ಬಸವಣ್ಣನವರ ಸಮಾಗಮದ ನೆನಪನ್ನು ಈ ಪ್ರಸಂಗ ತಂದುಕೊಟ್ಟಿತು.

ಹಿಂದೂ ಮುಸ್ಲಿಂ ಭಾವೈಕ್ಯತೆಯ ಸಂಕೇತವಾದ ಯಮನೂರಿನ ಶ್ರೀ ಚಾಂಗದೇವ ಮಂದಿರಕ್ಕೂ ಭೇಟ್ಟಿಯಿತ್ತು ಅನೇಕ ಹಿಂದೂ ಮುಸ್ಲಿಮರಿಗೆ ದರ್ಶನಾಶೀರ್ವಾದ ನೀಡಿದರು.

ಯೋಗಾಸನ ಪ್ರದರ್ಶನ:

ಅಲ್ಲಲ್ಲಿ ನಡೆಯುತ್ತಿದ್ದ ಶಿವಾನುಭವ ಸಭೆಗಳಲ್ಲಿ ಶ್ರೀಮಲ್ಲಿನಾಥ ದೇವರು ಶಿವಯೋಗ ಮಂದಿರ ಶ್ರೀ ಚಂದ್ರಶೇಖರದೇವರು ಒಡೆಯರ ಮಠ ಚೌಡದಾನಪುರ ಹಾಗೂ

ಶಿವಲಿಂಗ ದೇವರು ಮುಧೋಳ ಅವರುಗಳ ಯೋಗಾಸನ ಪ್ರದರ್ಶನ ಅತ್ಯಂತ ಕುತೂಹಲ ಕಾರಿಯಾಗಿತ್ತು.

ಹನ್ನೊಂದು ದಿನಗಳವರೆಗೆ ಈ ಅಭೂತಪೂರ್ವ ಪಾದಯಾತ್ರೆಯು ಶ್ರೀ ಶಿವ ಯೋಗ ಮಂದಿರಕ್ಕೆ ಬಂದು ತಲುಪಿತು. ಇಲ್ಲಿಗೆ ಪಾದಯಾತ್ರೆಯು ಸಮಾಪ್ತಿಗೊಂಡಿತು. (೭-೧೨-೭೮) ಶಿವಯೋಗಮಂದಿರದ ಸಂಸ್ಥಾಪಕರಾದ ಲಿಂ|| ಹಾನಗಲ್ಲ ಕುಮಾರ ಶಿವಯೋಗಿಗಳವರ ಪವಿತ್ರ ಗದ್ದುಗೆಯನ್ನು ಕಂಡು ಎಲ್ಲ ಗುರು ವಿರಕ್ತರೂ ಭಾವ ಪರವಶರಾಗಿ ಆನಂದಭಾಷ್ಪ ಸುರಿಸಿದರು.

ಪಾದಯಾತ್ರೆಯ ಸೂತ್ರಧಾರಿಗಳೂ, ನೇತೃತ್ವವಹಿಸಿದವರೂ ಆದ ಪರಮ ಪೂಜ್ಯ ಮೂರುಸಾವಿರಮಠದ ಜಗದ್ಗುರುಗಳಿಗಂತೂ ಗುರುವಿನೆಡೆಗೆ ಬಂದು ಸೇರಿದ ಸಂತೃಪ್ತಿ, ಪಾದಯಾತ್ರೆಯ ಸಂಕಲ್ಪ ಸಿದ್ಧಿಯ ಸಂತೋಷವೂ ಸೇರಿ ಭಾವಪರವಶರನ್ನಾಗಿ ಮಾಡಿತು.

ಪಾದಯಾತ್ರೆಯು ಯಶಸ್ವಿಯಾಗಿ ಶಿವಯೋಗ ಮಂದಿರಕ್ಕೆ ತಲುಪಿದ ರಾತ್ರಿ ಬೃಹತ್ ಸಭಾ ಮಂಟಪದಲ್ಲಿ ನೆರೆದಿದ್ದ ಲಕ್ಷಾಂತರ ಜನಭಕ್ತರಿಗೆ ಹುಬ್ಬಳ್ಳಿ ಜಗದ್ಗುರು ಮಹಾಸನ್ನಿಧಿಯವರು ನೀಡಿದ ಸಂದೇಶ, ಮಾಡಿದ ಉಪದೇಶ, ಸುವರ್ಣಾಕ್ಷರಗಳಿಂದ ಬರೆದಿಡತಕ್ಕಂತಹದು.

ಜಗದ್ಗುರು ಮಹಾಸನ್ನಿಧಿಯವರ ಸಂದೇಶ:

೧) ಹಳ್ಳಿಗಳಲ್ಲಿ ಒಳಜಗಳಗಳಿಗಾಗಿ ಕೋರ್ಟ್ ಕಚೇರಿ ಕಟ್ಟೆ ಹತ್ತಿ ಹಣವನ್ನು ವ್ಯರ್ಥ ವ್ಯಯ ಮಾಡಬೇಡಿರಿ.

೨) ಧರ್ಮಗುರುಗಳನ್ನು ನಿಮ್ಮಲ್ಲಿಗೆ ಕರೆಸಿಕೊಂಡು ನ್ಯಾಯ ಬಗೆಹರಿಸಿಕೊಳ್ಳಿರಿ.

೩) ಹಣವನ್ನು ಉಳಿತಾಯ ಮಾಡಿ ಸತ್ಕಾರ್ಯಕ್ಕೆ ವಿನಿಯೋಗಿಸಿರಿ.

೪) ಧರ್ಮವನ್ನು ಕಾಪಾಡಿಕೊಂಡು ಹೋಗಿರಿ.

೫) ದ್ವೇಷ, ಅಸೂಯೆ ಮರೆತು ಭಾವೈಕ್ಯದಿಂದ ಬಾಳಿ ರಾಷ್ಟ್ರ ನಿರ್ಮಾಣಕಾರ್ಯಕ್ಕೆ ನೆರವಾಗಿರಿ.

೬) ದುಶ್ಚಟ, ದುರ್ವ್ಯಸನಗಳನ್ನು ತ್ಯಜಿಸಿ ಆಚಾರವಂತರಾಗಿರಿ.

ಎಂದು ಸಂದೇಶ ನೀಡಿದ್ದಲ್ಲದೆ ತಾವು ಕೈಕೊಂಡ ಈ ಪಾದಯಾತ್ರೆ ಮಹತ್ಕಾರ್ಯವು ಯಶಸ್ವಿಯಾಗಲು ಹಾನಗಲ್ಲ ಕುಮಾರೇಶ ಹಾಗೂ ಗುರುಸಿದ್ಧೇಶ್ವರರೇ ಕಾರಣರು ಎಂದು ಆನಂದ ಭಾಷ್ಪಗಳನ್ನು ಸುರಿಸಿದರು.

ಪಾದಯಾತ್ರೆಯ ಪರಿಣಾಮ (ಕುಲಶೃತಿ):

೧) ಜನಮನದಲ್ಲಿ ಧಾರ್ಮಿಕ ಶ್ರದ್ಧೆ ಮೂಡಿದ್ದು.

೨) ಸಾವಿರಾರು ಜನರು ತಮ್ಮ ದುಶ್ಚಟಗಳನ್ನು ಬಿಡಲು ಪ್ರತಿಜ್ಞೆಮಾಡಿದ್ದು.

೩) ಹಿರೇಹಾಳ ಶಾಖಾ ಮಂದಿರದ ಜೀರ್ಣೋದ್ಧಾರಕ್ಕಾಗಿ ನಿಧಿ ಸಂಗ್ರಹ.

೪) ಕೌಜಗೇರಿ, ಕಿರೇಸೂರು, ಗ್ರಾಮಗಳಲ್ಲಿ ಕಲ್ಯಾಣಮಂಟಪದ ಸ್ಥಾಪನೆ.

೫) ಹೆಬಸೂರಲ್ಲಿ ಅನುಭವ ಮಂಟಪ ಸ್ಥಾಪನೆ.

೬) ಮಲ್ಲಾಪುರ ಹಾಗೂ ಕುಸುಗಲ್‌ಗಳಲ್ಲಿ ಶಿವಾನುಭವ ಸಂಘ ಸ್ಥಾಪನೆ.

೭) ಕೆಲವು ಗ್ರಾಮಗಳಲ್ಲಿಯ ಒಳಜಗಳ ನಿವಾರಿಸಿ ಭಾವೈಕ್ಯತೆ ಬೆಳೆಸಿದ್ದು.

೮) ಹರಿಜನಕೇರಿಯಲ್ಲಿ ಜಗದ್ಗುರುಗಳವರು ಪಾದಪೂಜೆ ಮಾಡಿಸಿಕೊಂಡಿದ್ದು ಇಂದಿಗೂ ಬಸವಾದಿ ಪ್ರಮಥರ ತತ್ತ್ವಗಳು ಜೀವಂತವಾಗಿ ಉಳಿದಿವೆ ಎಂಬುದಕ್ಕೆ ಸಾಕ್ಷಿ.

ಆಂಧ್ರ, ಮಹಾರಾಷ್ಟ್ರ ಹಾಗೂ ತಮಿಳುನಾಡುಗಳಿಂದ ಪಾದಯಾತ್ರೆಯಲ್ಲಿ ಭಾಗ ವಹಿಸಿದ್ದ ಅನೇಕ ಭಕ್ತರಲ್ಲಿ ತಮಿಳುನಾಡಿನ ಈ ರೋಡು ವಾಸವೀ ಕಾಲೇಜಿನ ತಮಿಳು ಪಂಡಿತರಾದ ಪ್ರೊ. ಎಂ. ಸದಾಶಿವಂ ಎಮ್.ಎ.ಪಿ.ಎಚ್.ಡಿ.ರವರು ತಮ್ಮ ಅನುಭವವನ್ನು ವಿವರಿಸುತ್ತಾ ನನ್ನ ಆಯುಷ್ಯದಲ್ಲಿ ಇಷ್ಟೊಂದು ಮಠಾಧಿಪತಿಗಳನ್ನು ಏಕಕಾಲಕ್ಕೆ ಕಂಡದ್ದು ಇದೇ ಮೊದಲು ಹರಿಜನ ಕೇರಿಯಲ್ಲಿ ಜಗದ್ಗುರುಗಳವರು ಪಾದಪೂಜೆ ಮಾಡಿಸಿಕೊಂಡದ್ದು; ಇಂದಿಗೂ ಬಸವಾದಿ ಪ್ರಮಥರ ತತ್ತ್ವಗಳು ಜೀವಂತವಾಗಿ ಉಳಿದಿವೆ ಎಂಬುದಕ್ಕೆ ಸಾಕ್ಷಿ. ಜಾತಿ, ಮತ, ಭೇದಗಳನ್ನು ಮರೆತು ಎಲ್ಲ ಜಾತಿಯ ಜನರೂ ಸಹ ಕರಿಸಿದ್ದನ್ನು ಕಂಡು ನನಗೆ ಅತ್ಯಾನಂದವಾಗಿದೆ ಎಂದು ಉದ್ಗಾರ ತೆಗೆದರು.

□ □

ದ್ವಾದಶ ಪೀಠಾರೋಹಣದಿಂದ ರಜತ ಮಹೋತ್ಸವದೆಡೆಗೆ (೧೯೭೨–೮೭) ಪೂಜ್ಯ ಶ್ರೀ ಜಗದ್ಗುರುಗಳವರ ಸಾಧನೆಗಳು–ಸಾಗಿ ಬಂದ ದಾರಿ

—ಕೊಟ್ರೇಶ್ ಗು. ಆರಾಧ್ಯಮಠ, (ಕುಮಾರತನಯ)

ಭವ್ಯ ಭಾರತಕ್ಕೆ ಕನ್ನಡನಾಡಿನಿಂದ ಸಂದ ಸೇವೆ ಅನುಪಮ. ಭಾರತಾಂಬೆಯ ಹಿರಿಮೆಗಳು ಈ ಕನ್ನಡಾಂಬೆಯ ವರಪುತ್ರರನೇಕರು ದೇಶದ ಹಲವಾರು ಕ್ಷೇತ್ರಗಳಲ್ಲಿ ದುಡಿದು ಅವಳ ಕೀರ್ತಿಯನ್ನು ಗೌರೀಶಂಕರವೆತ್ತರಕೆ ಎತ್ತಿ ಹಿಡಿದಿದ್ದಾರೆ. ಅಂತೆಯೇ ಅವಳು ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿದಾಕೆ. ಇಲ್ಲಿನ ಧಾರ್ಮಿಕ, ರಾಜಕೀಯ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಹೀಗೆ ಒಂದೇ ಎರಡೇ, ಹಲವು ಹತ್ತು ರಂಗಗಳಲ್ಲಿ ಕರ್ನಾಟಕದ ಹೆಸರು ಅಜರಾಮರವಾಗಿದೆ. ಇಲ್ಲಿನ ಧಾರ್ಮಿಕ ಸಂಸ್ಥೆಗಳು, ಮಠ–ಮಂದಿರಗಳು ಯಾವುದೇ ಸದ್ದುಗದ್ದಲವಿಲ್ಲದೆ, ಎಲೆ ಮರೆಯ ಹೂವಿನಂತೆ ಕ್ರಿಯಾತ್ಮಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ನಾಡಿಗೆ ಅನುಪಮ ಸೇವೆಯನ್ನು ಸಲ್ಲಿಸುತ್ತಾ ಬಂದಿವೆ. ಕರ್ನಾಟಕದ ನೆಲ–ಜಲಗಳೆಲ್ಲವೂ ಪರಮ ಪಾವನವಾದಂತೆ, ಇಲ್ಲಿ ಜನ್ಮತಾಳಿ ಬಂದ ಪುಣ್ಯ ಪುರುಷರ ಸತ್ಕಾರ್ಯ ಸಾಧನೆಗಳು ಇಲ್ಲಿನ ಶ್ರೀಗಂಧದಷ್ಟೇ ಕಂಪು ಬೀರಿ, ಜನಮನದಲ್ಲಿ ಅಚ್ಚಳಿಯದ ಹಾಗೂ ತಮ್ಮದೇ ಆದ ಒಂದು ರೀತಿಯ ನವೀನ ಮುದ್ರೆಯನ್ನೊತ್ತಿವೆ ಎನ್ನಬಹುದು.

ಇಂಥಹ ಸಂಸ್ಥೆ ಹಾಗೂ ಪುಣ್ಯ ಪುರುಷರಲ್ಲಿ ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರ ಮಹಾ ಸಂಸ್ಥಾನಮಠದ ಜಗದ್ಗುರುಗಳಾದ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರದು ಎದ್ದು ಕಾಣುವ ಧೀಮಂತ ವ್ಯಕ್ತಿತ್ವ.

ಶ್ರೀಮೂರುಸಾವಿರಮಠವು ಇಂದು ದೇಶದ ತುಂಬೆಲ್ಲಾ ಹಾಗೂ ದೇಶದ ಗಡಿ ಯಾಚೆಗೂ ಪ್ರಸಿದ್ಧವಾದ ಸಂಸ್ಥೆ. ಈ ಸಂಸ್ಥೆಯ ಸಕಲ ಚಟುವಟಿಕೆಗಳ ಕೇಂದ್ರ ಹಾಗೂ ಚೇತನ ಇಲ್ಲಿನ ಜಗದ್ಗುರುಗಳವರು. ಬಹುಪ್ರಾಚೀನ ಇತಿಹಾಸ ಹೊಂದಿದ ಈ ಶ್ರೀ ಮಠವು ಸ್ಥಾಪಿತವಾದಂದಿನಿಂದ ಇಂದಿನವರೆಗೂ ಮನುಕುಲದ ಉದ್ಧಾರ ಮಾಡುತ್ತಾ ಬಂದಿದೆ. ಈ ಮಾತಿಗೆ ಈ ಮಠದ ಸರ್ವಾಂಗೀಣ ಪ್ರಗತಿ–ಸಾಧನೆಗಳೇ ಸಾಕ್ಷಿಯಾಗಿವೆ.

ಸುಂದರ ಕನ್ನಡ ನಾಡಿನ ಹಾಸನ ಸೀಮೆಯ ಶಿವಾಚಾರದ ಶಿಶುವಾಗಿ, ಶಿವಯೋಗ ಮಂದಿರದ ವಟುವಾಗಿ, ಕಾಶಿಯ ಸಂಸ್ಕೃತ–ಇಂಗ್ಲೀಷ–ಹಿಂದೀ ಭಾಷೆಗಳ ಪಂಡಿತರಾಗಿ ಶ್ರೀ ಮೂರುಸಾವಿರಮಠದ ಪೀಠವನ್ನೇರಿದ ಶ್ರೀ ಜಗದ್ಗುರುಗಳು ಈ ನಾಡಿನ–ಜನದ ಪುಣ್ಯ ವಿಶೇಷ ಹಾಗೂ ಭಾಗ್ಯದ ಕುರುಹಾಗಿದ್ದಾರೆ. ಅವರದು ಬಹುಮುಖ ವ್ಯಕ್ತಿತ್ವ. ಒಂದು ಧಾರ್ಮಿಕ ಪೀಠದ ಜಗದ್ಗುರುಗಳಾಗಿ ಅವರು ಸಲ್ಲಿಸುತ್ತಿರುವ ಸೇವೆ ಬಹು ಮುಖವಾಗಿದೆ. ತಾವು ಮೂರುಸಾವಿರಮಠಕ್ಕೆ ಜಗದ್ಗುರುಗಳಾಗಿ ಬಂದ ನಂತರ ಇಲ್ಲಿನ ಕೆಲವೊಂದು ಚಟುವಟಿಕೆಗಳಿಗೆ ಚಾಲನ ಶಕ್ತಿಯಾಗಿ, ಅವೆಲ್ಲವನ್ನು ಒಂದು ನಿರ್ದಿಷ್ಟ ಪಥದಲ್ಲಿ ಮುನ್ನೆಡಿಸಿಕೊಂಡು, ಧೀರೋದಾತ್ತವಾಗಿ ಸಾಗುತ್ತಿರುವ ಪೂಜ್ಯರ ಬದುಕು ನಿಜಕ್ಕೂ ವರ್ಣಮಯ!

ಪೂಜ್ಯ ಜಗದ್ಗುರುಗಳವರದು ಮೂರುಸಾವಿರಮಠದ ಇತಿಹಾಸದಲ್ಲಿ ಸುವರ್ಣಾಕ್ಷರ ಗಳಿಂದ ಬರೆದಿಡಬೇಕಾದ ಕ್ರಿಯಾಶೀಲತೆ. ಅವರದು ಗಡಿಯಾರದ ದುಡಿಮೆಯಂತೆ ಕರಾರುವಕ್ಕಾದ, ಬಿಡುವಿಲ್ಲದ ಚಟುವಟಿಕೆಯ ಜೀವನ. ಅವರು ಒಂದು ವ್ಯಕ್ತಿಯಲ್ಲ, ಅನೇಕ ಶಕ್ತಿಗಳ ಪುಣ್ಯ ಸಂಗಮ. ಶಿವ ಶರಣರ ಬದುಕನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಸಿದ್ಧರಾಮನ ಕರ್ಮಯೋಗ, ಬಸವಣ್ಣನ ಭಕ್ತಿಯೋಗ, ಪ್ರಭುವಿನ ಜ್ಞಾನ ಯೋಗಗಳನ್ನು ಸಂಪಾದಿಸಿಕೊಂಡ ಪೂಜ್ಯರು ಆ ಎಲ್ಲ ಶಕ್ತಿಗಳ ಚೇತನದ ಜೀವ ವಾಗಿದ್ದಾರೆ.

ದೇಶದಾಚೆಗೆ ಧರ್ಮ–ಶಾಂತಿಗಳ ಸಂದೇಶ ಬೀರಿದ ಪೂಜ್ಯ ಜಗದ್ಗುರುಗಳು ವಿಶ್ವಮಾಲಿಕೆಯಲ್ಲಿ ನಿಲ್ಲಬಲ್ಲ ಮಹಾನ್ ವ್ಯಕ್ತಿ. "Love is god" ಎಂಬುದರಲ್ಲಿ ಪೂಜ್ಯರಿಗೆ ಅಚಲ ವಿಶ್ವಾಸ. ಶ್ರೀಗಳವರ ಸಮಾಜ ಸೇವೆ, ದೀನ–ದಲಿತರ ಬಗೆಗಿನ ಅಂತಃಕರುಣ, ದಯೆ, ಅನುಕಂಪಗಳು ಅನುಕರಣೀಯವಾಗಿವೆ. ಅಂತೆಯೇ ಅವರದು ಯಾವುದೇ ಕಾರ್ಯಗಳಲ್ಲಿ ಸಿದ್ಧಹಸ್ತ. ಅವೆಲ್ಲವುಗಳೊಂದಿಗೆ ಅವರಿಗೆ ಸಾಹಿತ್ಯ ಶಾರದೆಯ ಕೃಪೆ ಮೇಳವಿಸಿ ಬಂದಿದ್ದು ಯೋಗಾಯೋಗ. ಬಂದ ಕಷ್ಟ ನಷ್ಟಗಳಿಗೆಲ್ಲ ಎದೆಯೊಡ್ಡಿ ನಿಂತು ಕೈ ಹಾಕಿದ ಯೋಜನೆಗಳಲ್ಲಿ ಯಶ ಸಂಪಾದಿಸಿದಾಗಲೇ ಅವರಿಗೆ ನೆಮ್ಮದಿ.

"ಹೂಗಳ ತಂದಿಹರು "ಮೂಜಗಂ" ಇವರು
ಮೂರುಸಾವಿರಮಠ ಪೀಠಕೆ
ವಿದ್ಯೆ, ಧರ್ಮ, ಸಾಹಿತ್ಯ ಕ್ಷೇತ್ರದೊಳು
ಸ್ಫುರಣ ನೀಡಿಹರು ಪ್ರಗತಿಗೆ."

ಎನ್ನುವ ಡಾ. ಡಿ. ಎಸ್. ಕರ್ಕಿಯವರ ಕವಿವಾಣಿಯು ನಿಜಕ್ಕೂ ಅರ್ಥಪೂರ್ಣ ಹಾಗೂ ಕಿರಿದರಲಿ ಹಿರಿದರ್ಥ ತುಂಬಿದ ನುಡಿಗಳಿವು.

ಶ್ರೀ ಜಗದ್ಗುರುಗಳವರು ೧೯೫೮ ರಲ್ಲಿ ಮೂರುಸಾವಿರಮಠದ ಮಹಾಪೀಠವನ್ನ ಲಂಕರಿಸಿದರು. ಅಲ್ಲಿಂದ ಇಲ್ಲಿಯುವರೆಗೆ ಅವರು ಗೈದ ಸಾಧನೆಗಳು ನಿಜಕ್ಕೂ ನಿಬ್ಬೆರಗು ಗೊಳಿಸುವಂತಹವು. ಅವರ ಪೀಠಾರೋಹಣ ಸಾರ್ಥಕ ದ್ವಾದಶ ವಸಂತಗಳು ಮೂರು ಸಾವಿರಮಠದ ಇತಿಹಾಸದಲ್ಲಿನ ಅತ್ಯಂತ ಸುಂದರ ಹಾಗೂ ಯಶಸ್ವೀ ವರ್ಷಗಳು. ೧೯೭೦ ರಲ್ಲಿ ಪೂಜ್ಯ ಜಗದ್ಗುರುಗಳವರ ಪೀಠಾರೋಹಣದ ದ್ವಾದಶ ವಾರ್ಷಿಕ ಮಹೋತ್ಸವವು ವೈವಿಧ್ಯಪೂರ್ಣವಾಗಿ, ವೈಭವಯುತವಾಗಿ, ಅರ್ಥಪೂರ್ಣವಾಗಿ, ನಿರಾಡಂಬರವಾಗಿ ಹಲವಾರು ಕ್ರಿಯಾತ್ಮಕ ಚಟುವಟಿಕೆಗಳೊಂದಿಗೆ ಜರುಗಿತು. ನಾಡಿನ ಹಲವಾರು ಗಣ್ಯರು, ಸಾಹಿತಿಗಳು, ಪೂಜ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಿದರು. ನೆರೆದ ಜನಸಮೂಹ ಪೂಜ್ಯ ಜಗದ್ಗುರುಗಳವರ ಹೃದಯ ವೈಶಾಲ್ಯತೆ, ಕ್ರಿಯಾ ಸಾಮರ್ಥ್ಯ, ವಿಚಾರ ಚೈತನ್ಯ, ಚಾರಿತ್ರಿಕ ಶುದ್ಧಿಗಳನ್ನು ಹಾಡಿ ಹೊಗಳಿದರು. ಅವರ ದಿವ್ಯ ಚೇತನಕ್ಕೆ ನಮಿಸಿ ನಲಿದಾಡಿದರು.

ಈ ದ್ವಾದಶ ಪೀಠಾರೋಹಣ ಮಹೋತ್ಸವ (೧೯೭೦) ದಿಂದ ಪೀಠಾರೋಹಣದ ರಜತಮಹೋತ್ಸವದವರೆಗೆ (೧೯೮೩) ೧೩ ವರ್ಷಗಳಲ್ಲಿ ಪರಮಪೂಜ್ಯರು ಹಿಂದೆಂದಿಗಿಂತಲೂ ಅನುಪಮ ಸೇವೆ ಸಲ್ಲಿಸಿ ಅದ್ಭುತ ಸಾಧನೆಗಳನ್ನೇ ಗೈದಿದ್ದಾರೆ. ಅವರು ಸಾಧಿಸಿದ ಕೆಲಸಗಳು ವರ್ಣಿಸುತ್ತ ಹೋದಲ್ಲಿ ಪುಟಗಳೇ ಸಾಲದಾದಾವು!

ಶ್ರೀ ಜಗದ್ಗುರುಗಳವರು ತಮ್ಮ ಪೀಠಾರೋಹಣದ ಬೆಳ್ಳಿ ಹಬ್ಬಕ್ಕೆ ಒಂದು ವಿಶಿಷ್ಟ ಮೆರಗು ತಂದು ಕೊಡುವಲ್ಲಿ ಸಫಲರಾಗಿದ್ದಾರೆ; ಅವರ ಕ್ರಿಯಾಶೀಲ ಚಟುವಟಿಕೆಗಳೆಲ್ಲವೂ ಈ ರಜತ ಮಹೋತ್ಸವದ ಸ್ಮಾರಕಗಳಾಗಿವೆಯೆಂದರೆ ತಪ್ಪಿಲ್ಲ. ಈ ಎಲ್ಲ ಸಾಧನೆಗಳನ್ನು ಪ್ರಮುಖವಾಗಿ ನಾಲ್ಕು ವಿಭಾಗಗಳಲ್ಲಿ ವಿವರಿಸಬಹುದು. ಅವು ಹೀಗಿವೆ:

೧) ಪೂಜ್ಯ ಜಗದ್ಗುರುಗಳವರ ಶೈಕ್ಷಣಿಕ ಸಾಧನೆಗಳು
೨) ಧಾರ್ಮಿಕ ಸಾಧನೆಗಳು
೩) ಸಾಮಾಜಿಕ ಸಾಧನೆಗಳು
೪) ಸಾಹಿತ್ಯಕ ಸಾಧನೆಗಳು.

ಅವರು ಸಾಗಿಬಂದ ದಾರಿ (೧೯೭೦–೧೯೮೩) ದೀರ್ಘವಾದಂತೆಯೇ ಅವರ ಸಮಗ್ರ ಸಾಧನೆಗಳೂ ಕೂಡಾ ಅರ್ಥಪೂರ್ಣ ಹಾಗೂ ಸುದೀರ್ಘವಾದವುಗಳಾಗಿವೆ.

ಪೂಜ್ಯರ ಸುಮಾರು ೧೪ ವರ್ಷಗಳ ಸಮಗ್ರ ಸಾಧನೆಗಳ ಪ್ರಗತಿ ಚಿತ್ರಣ ಇಲ್ಲಿದೆ.

ಶ್ರೀ ಜಗದ್ಗುರುಗಳವರ ಶೈಕ್ಷಣಿಕ ಸಾಧನೆಗಳು (೧೯೭೦–೮೩)

"Education is the Light of Life"— ಎಂಬುದರಲ್ಲಿ ಪೂಜ್ಯರಿಗೆ ಅಚಲ ವಿಶ್ವಾಸ. ತಮಸಿನಿಂದ ಪ್ರಕಾಶದತ್ತ ಒಯ್ಯು, ಬಾಳ್ವೆಳಕಿಗೆ ಕಾರಣವಾಗುವ ಶಿಕ್ಷಣದ

ಮೇಲೆ ಅವರಿಗೆ ಇದ್ದಂಥ ಪ್ರೇಮ ಹಾಗೂ ಕಾಳಜಿ. ಕೇವಲ ಓದು-ಬರಹವಷ್ಟೇ ಶಿಕ್ಷಣವಾಗ ಬಾರದೆಂಬುದನ್ನು ಮನಗಂಡ ಶ್ರೀ ಜಗದ್ಗುರುಗಳವರು ವೃತ್ತಿ ಶಿಕ್ಷಣವನ್ನು ಜಾರಿಗೆ ತರುವಲ್ಲಿ ಶ್ರಮಿಸಿದರು. ಅಂತೆಯೇ ಅವರು ಸ್ಥಾಪಿಸಿದ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಕೀರ್ತನ ಕಾಲೇಜು ಒಂದು ವಿನೂತನ ಉಪಕ್ರಮ. ಪರಂಪರಾನುಗತವಾಗಿ ಬಂದ ಕೀರ್ತನ ಕಲೆಯು ಜನತೆಯಲ್ಲಿ ಸಾಮಾಜಿಕ-ಸಾಂಸ್ಕೃತಿಕ-ಧಾರ್ಮಿಕ ನಿಷ್ಠೆಗಳನ್ನು ಬೆಳೆಸುತ್ತ ಬಂದಿದೆ. ಅದನ್ನರಿತ ಪೂಜ್ಯರು ಈ ಕೀರ್ತನ ಕಲೆಯನ್ನು ಉಳಿಸಿ-ಬೆಳೆಸಿಕೊಂಡು ಬರಲೆಕ್ಕಾಗಿ ಒಂದು ಕೀರ್ತನ ಕಾಲೇಜನ್ನು ಸ್ಥಾಪಿಸಿ, ತನ್ಮೂಲಕ ವಿವಿಧ ಉದ್ದೇಶಗಳನ್ನು ಹಮ್ಮಿಕೊಂಡರು. ಈ ಕಾಲೇಜಿನಿಂದ ಪವಿತ್ರ ವಿದ್ಯಾರ್ಥಿಗಳು ತಯಾರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಕಾಲೇಜಿಗಾಗಿ ಪೂಜ್ಯರು ಒಂದು ಪ್ರತ್ಯೇಕ ಖಾತೆಯನ್ನು ಬ್ಯಾಂಕಿನಲ್ಲಿ ಪ್ರಾರಂಭಿಸಿ ಅದರ ಆರ್ಥಿಕ ಭದ್ರತೆ ಬಗ್ಗೆ ಯೋಚಿಸುತ್ತಿದ್ದಾರೆ. ಈ ಕಾಲೇಜಿಗಾಗಿ ಪತ್ರ, ಪುಸ್ತಕಗಳನ್ನು ಪ್ರತ್ಯೇಕವಾಗಿಯೇ ಮಾಡಿಸುವ ಯೋಜನೆಯಿದೆ.

ಪರಮ ಪೂಜ್ಯ ಜಗದ್ಗುರುಗಳವರು ತಾಂತ್ರಿಕ ಶಿಕ್ಷಣದಲ್ಲಿ ಹೊಸ ಹೆಜ್ಜೆಯನ್ನಿರಿಸಿ ಯಶಸ್ವಿಯಾದರು, ನಿರುದ್ಯೋಗ ಸಮಸ್ಯೆಯನ್ನರಿತ ಅವರು ದಿನನಿತ್ಯದ ಜೀವನಕ್ಕೆ ಉಪಯೋಗವಾಗುವಂತಹ ತಾಂತ್ರಿಕ ಜ್ಞಾನ ಕೊಡಲು ಪೂಜ್ಯರು ಸಂಕಲ್ಪಿಸಿದರು. ಸರ್ಕಾರದಿಂದ ಗಂಡುಮಕ್ಕಳಿಗಾಗಿ ಆಗಲೇ I. T. I. ಕಾಲೇಜುಗಳು ನಡೆಯುತ್ತಿದ್ದು, ಮಹಿಳೆಯರಿಗೆ, I. T. I. ಕಾಲೇಜುಗಳಿಲ್ಲದ್ದನ್ನು ಮನಗಂಡ ಪೂಜ್ಯರು ಮಹಿಳಾ ಕೈಗಾರಿಕಾ ತರಬೇತಿ ಕೇಂದ್ರ ಸ್ಥಾಪಿಸುವ ಬಗ್ಗೆ ನೂತನ ಯೋಜನೆ ಹಮ್ಮಿಕೊಂಡು ಕಾರ್ಯಗತರಾಗಿ, ಸರಕಾರದಿಂದ ಅನುಮತಿ ಪಡೆದು ದಿನಾಂಕ ೨೯-೧೧-೧೯೮೩ ರಂದು ಈ ಕಾಲೇಜನ್ನು ಪ್ರಾರಂಭಿಸಿದರು.

ಮೊದಮೊದಲು ಈ ಕಾಲೇಜಿಗೆ ಬರುವ ಮಹಿಳೆಯರನ್ನು ಮನವೊಲಿಸುವ ಮೂಲಕ ಪ್ರಾರಂಭವಾದ ತರಗತಿಗಳು ಇಂದು ಹುಬ್ಬಳ್ಳಿ ಹಾಗೂ ಸುತ್ತಮುತ್ತಲೂ ಈಗ ಜನಪ್ರಿಯವಾಗುತ್ತಲಿವೆ. ರೇಡಿಯೋ, ಟಿ. ವ್ಹಿ ಡ್ರಾಫ್ಟ್ಸಮನ್ ಸಿವ್ಹಿಲ್ ತರಗತಿಗಳು ಇಲ್ಲಿ ನಡೆಯುತ್ತಿದ್ದು ಈಗಿನ ವಿದ್ಯಾರ್ಥಿನಿಯರ ಸಂಖ್ಯೆ ಒಟ್ಟು ೫೦. ಇಂದು ಈ ಕಾಲೇಜು ಸುಸಜ್ಜಿತ ಸಲಕರಣೆಗಳಿಂದ, ನುರಿತ ಬೋಧಕರಿಂದೊಡಗೂಡಿ ಬೆಳೆಯುತ್ತ ನಡೆದಿದೆ. ಶ್ರೀಮಠದ ವತಿಯಿಂದ ಈ ಕಾಲೇಜಿನಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿ ವೇತನದ ಸೌಲಭ್ಯಗಳನ್ನು ಒದಗಿಸಿದ ಪರಮಪೂಜ್ಯ ಜಗದ್ಗುರುಗಳು ಈ ಕಾಲೇಜಿನ ಅಭಿವೃದ್ಧಿಗಾಗಿ ಅವಿರತ ಶ್ರಮಿಸುತ್ತಿರುವರು.

ಇಲಕಲ್ಲಿನ ಶ್ರೀ ವಿಜಯಮಹಾಂತೇಶ್ವರ ವಿದ್ಯಾವರ್ಧಕ ಸಂಸ್ಥೆಯು ಜಗದ್ಗುರುಗಳವರ ಪರಿಶ್ರಮದ ಫಲ. ಅದೀಗ ಬೃಹತ್ಪ್ರಮಾಣದ ಸಂಸ್ಥೆಯಾಗಿ ಬಿಜಾಪೂರ ಜಿಲ್ಲೆಗೆ ಶೋಭೆ ತಂದಿದೆ, ಅಲ್ಲಿರುವ ಆರ್ಟ್ಸ್, ಸೈನ್ಸ್ ಹಾಗೂ ಕಾಮರ್ಸ್ ಕಾಲೇಜುಗಳು

ಸುವ್ಯವಸ್ಥಿತವಾಗಿ ಸಾಗುತ್ತಲಿವೆ. ಜಗದ್ಗುರುಗಳವರು ಇಲಕಲ್ಲಿನಲ್ಲಿ ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರ ಮಠ ಕೈಗಾರಿಕಾ ತರಬೇತಿ ಸಂಸ್ಥೆ ಎಂಬ ಹೆಸರಿನ ಒಂದು **I. T. I.** ಕಾಲೇಜು ಪ್ರಾರಂಭವಾಗಲು ಕಾರಣೀಭೂತರಾಗಿದ್ದಾರೆ. ಆರ್ಥಿಕವಾಗಿ ಈ ವಿದ್ಯಾಸಂಸ್ಥೆಯನ್ನು ಸುಭದ್ರಗೊಳಿಸಿ, ಅದೀಗ ತನ್ನದೇ ಆದ ನೂತನ ಕಟ್ಟಡವನ್ನು ಹೊಂದುತ್ತಲಿದೆ. ಅನುಭವಿಕ ಹಾಗೂ ನುರಿತ ಅಧ್ಯಾಪಕರ ಬೋಧನೆ, ಅತ್ಯುತ್ತಮ ಸಲಕರಣೆಗಳ ವ್ಯವಸ್ಥೆ ಈ ಕಾಲೇಜಿನಲ್ಲಿದ್ದು, ನಾಡಿನ ಆದರ್ಶ ಕೈಗಾರಿಕಾ ತರಬೇತಿ ಸಂಸ್ಥೆಯಾಗಿ ರೂಪಗೊಳ್ಳುವತ್ತ ಹೆಜ್ಜೆಯನ್ನಿರಿಸಿ, ಕಾಯಕದ ಮಹತ್ವವನ್ನು ತಿಳಿಸುತ್ತಿರುವದು ಹೆಮ್ಮೆಯ ಸಂಗತಿಯಾಗಿದೆ.

ಚಿಕ್ಕಚಿಕ್ಕಮಕ್ಕಳಿಗೆ ಸಂಸ್ಕಾರ ಕೊಟ್ಟರೆ ಅವರ ಬಾಳ ಭವಿಷ್ಯ ಹಸನಾಗಲು ಸಾಧ್ಯವೆಂಬುದನ್ನರಿತ ಜಗದ್ಗುರುಗಳವರು ಶ್ರೀಮಠದ ವಿದ್ಯಾಸಂಸ್ಥೆಯಲ್ಲಿ ಶಿಶುವಿಹಾರವಿಲ್ಲದನ್ನರಿತು–"ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಶಿಶುವಿಹಾರ" ಎಂಬ ಚಿಕ್ಕಮಕ್ಕಳ ಶಿಕ್ಷಣ ಕೇಂದ್ರವೊಂದನ್ನು ಸ್ಥಾಪಿಸುವಲ್ಲಿ ಮುಂದಾದರು.

ಈ ಶಿಶುವಿಹಾರವು ಮಕ್ಕಳ ಮುಂದಿನ ಶಿಕ್ಷಣಕ್ಕೆ ಭದ್ರ ಬುನಾದಿಯನ್ನು ಹಾಕಬಲ್ಲದೆಂದರಿತ ಪೂಜ್ಯರು ಚಿಕ್ಕಮಕ್ಕಳಿಗೆ ಅಲ್ಲಿ ಶಿಸ್ತು, ಸಂಸ್ಕಾರಗಳನ್ನು ಕಲಿಸಿ, ಸುವ್ಯವಸ್ಥೆಯೆಡೆಗೆ ಸಾಗಿಸುತ್ತಿರುವದು ಸಂತಸದ ಸಂಗತಿ. ಮಕ್ಕಳೆಂದರೆ ಪೂಜ್ಯರಿಗೆ ಮಮತೆ-ಪ್ರೀತಿ, ಎಳೆಯ ಹೃದಯಗಳ ಮನೋಭೂಮಿಕೆಯಲ್ಲಿ ಸದ್ಗುಣಗಳ ಬೀಜ ಬಿತ್ತುವ ಅವರ ಈ ;ಕಾರ್ಯ ಅಭಿನಂದನೀಯ.

ಭಾರತೀಯರಾದ ನಮ್ಮಲ್ಲಿ ಭಾಷಾ ಬಾಂಧವ್ಯವಿರಬೇಕಾದುದು ಅತ್ಯಾವಶ್ಯ. ರಾಷ್ಟ್ರದ ಶಕ್ತಿಯ ಬೆಳವಣಿಗೆಗೆ ಭಾಷೆ ಕಾಲ್ತೊಡಕಾಗಬಾರದು. ಇದರಿಂದ ಇನ್ನೊಂದು ಭಾಷೆ–ಸಾಹಿತ್ಯದ ಬಗ್ಗೆ ಅಭಿಮಾನ ಮೂಡಿಬರಲು ಸಾಧ್ಯ.

ಜಗದ್ಗುರುಗಳವರು ಮೊದಲಿನಿಂದಲೂ ಹಿಂದೀ ಭಾಷಾ ಪ್ರೇಮಿಗಳು ಭಾಷಾ ಮೈತ್ರಿಯ ದೃಷ್ಟಿಯಿಂದ ಹಿಂದೀ ಭಾಷೆಗೆ ಮಹತ್ವ ನೀಡಿ 'ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯ'ವನ್ನು ಸ್ಥಾಪಿಸಿದರು. ಮೊದಲು ಈ ಹಿಂದೀ ವಿದ್ಯಾಲಯವು ಮೊದಲು ಸ್ವತಂತ್ರ ರೂಪದಲ್ಲಿದ್ದು, ಅದನ್ನು ಶ್ರೀ ಎಂ. ವ್ಹಿ. ಮಹಾಲೆಯವರು ನಡೆಸುತ್ತಿದ್ದುದನ್ನು ಮೂರುಸಾವಿರಮಠ ವಿದ್ಯಾವರ್ಧಕ ಸಂಘಕ್ಕೆ ಸೇರ್ಪಡೆ ಮಾಡಿ, ಸರಕಾರದಿಂದ, ಮನ್ನಣೆ ಪಡೆದು ಇದೀಗ ಪ್ರಗತಿಯತ್ತ ನಡೆಯುತ್ತಿದೆ. ಮುಂದೆ ಈ ಹಿಂದೀ ಮಹಾವಿದ್ಯಾಲಯವನ್ನೇ ಬಿ. ಎಡ್. (ಹಿಂದೀ) ಕಾಲೇಜನ್ನಾಗಿ ಮಾಡುವ ಯೋಜನೆಯೂ ಇದೆ.

ಹುಬ್ಬಳ್ಳಿಯ ಶ್ರೀ ವಿಜಯಮಹಾಂತೇಶ್ವರ ಲಲಿತ ಕಲಾ ಮಹಾವಿದ್ಯಾಲಯವನ್ನು ಕರ್ನಾಟಕ ಫೈನ್ ಆರ್ಟ್ ಎಜ್ಯುಕೇಶನ್ ಸೊಸೈಟಿ ಹುಬ್ಬಳ್ಳಿ ಅವರು ಮೊದಲು ನಡೆಸು

ತ್ತಿದ್ದರು. ಪೂಜ್ಯ ಜಗದ್ಗುರುಗಳು ಈ ಕಾಲೇಜಿಗೆ ತಾವು ಪಟ್ಟಾಭಿಷಿಕ್ತರಾಗಿ ಬಂದ ಕೂಡಲೇ ೨೫ ಸಾವಿರ ರೂಪಾಯಿಗಳನ್ನು ನೀಡಿದ್ದರು. ಅದರ ಪ್ರೇರಕ ಕುಟುಂಬಸ್ಥ ರಾದ ಶ್ರೀ ಎಂ. ವಿ. ಮೀಣಜಗಿಯವರ ವೃದ್ಧಾಪ್ಯದಿಂದಾಗಿ ಕಷ್ಟವುಂಟಾದಾಗ ಅವರ ಸದಿಚ್ಛೆಯಂತೆ ಪೂಜ್ಯ ಜಗದ್ಗುರುಗಳವರು ಈ ಲಲಿತ ಕಲಾ ಆರ್ಟ್ಸ್ ಮಹಾವಿದ್ಯಾಲಯ ವನ್ನು ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘಕ್ಕೆ ಸೇರ್ಪಡೆ ಮಾಡಿ ಕೊಂಡು ಉತ್ತೇಜನ ನೀಡಿ ಪ್ರೋತ್ಸಾಹದಾಯಕರಾದರು. ಇಂದು ಈ ಸಂಸ್ಥೆ ಉತ್ತರೋತ್ತರ ಅಭಿವೃದ್ಧಿ ಹೊಂದುತ್ತ ಸಾಗಿದ್ದು, ಅದು ಪೂಜ್ಯರ ಲಲಿತ ಕಲೆಗಳ ಪ್ರೇಮಕ್ಕೆ ಸಾಕ್ಷಿಯಾಗಿದೆ.

ಬೆಳಗಾಂವ ಜಿಲ್ಲೆಯ ಹುಕ್ಕೇರಿಯಲ್ಲಿ ೫–೬ ವರ್ಷಗಳಿಂದ ಅಲ್ಲಿನ ಸರಕಾರಿ ಅಧಿಕಾರಿಗಳೆಲ್ಲ ಸೇರಿ (Hukkeri Gyamakhana) ಒಂದು ಇಂಗ್ಲೀಷ ಮೀಡಿಯಮ್ ಸ್ಕೂಲನ್ನು ನಡೆಸುತ್ತ ಬಂದಿದ್ದರು. ಅಲ್ಲಿನ ಆಡಳಿತ ನೋಡಿಕೊಳ್ಳುವ ಅಧಿಕಾರಿಗಳು ೩ ವರ್ಷಗಳಿಗೊಮ್ಮೆ ವರ್ಗವಾಗುತ್ತಿರುವುದರಿಂದ ಸ್ಕೂಲಿನ ಆಡಳಿತಕ್ಕೆ ತೊಂದರೆಯಾಗಿ ಮೂರುಸಾವಿರಮಠ ವಿದ್ಯಾವರ್ಧಕ ಸಂಘಕ್ಕೆ ವರ್ಗಾಯಿಸಲು ನಿರ್ಣಯಿಸಿದರು. ಅದರಂತೆ ಈಗ ಈ ಇಂಗ್ಲೀಷ ಮೀಡಿಯಮ್ ಶಾಲೆಯು ಪೂಜ್ಯ ಜಗದ್ಗುರುಗಳವರ ಕೃಪಾಶೀರ್ವಾದದಿಂದ ಚೆನ್ನಾಗಿ ನಡೆದಿದ್ದು, ಬೆಳಗಾಂವ ಜಿಲ್ಲೆಯ ಭಕ್ತರ ಮನಸ್ಸಿಗೆ ಆನಂದವಾಗಿದೆ. ಇದೇ ಶಾಲೆಯನ್ನೇ ಮುಂದೆ ಬೃಹತ್ಪ್ರಮಾಣದ ಹಾಗೂ ಆದರ್ಶಯುತ ವಾದ ಶ್ರೀ ರಾಮಕೃಷ್ಣ ಮಿಶನ್ ಮಾದರಿಯ ರೆಸಿಡೆನ್ಸಿಯಲ್ ಸ್ಕೂಲನ್ನಾಗಿ ಮಾರ್ಪಡಿಸುವ ಹಿರಿದಾದ ಆಶೆ ಪೂಜ್ಯ ಜಗದ್ಗುರುಗಳವರಿಗಿದೆ. ಆ ಭಾಗದ ಭಕ್ತರ, ಪ್ರೇಮಿಗಳ, ಶಿಕ್ಷಣ ತಜ್ಞರ ಸಹಾಯ–ಸಹಕಾರ ಇದಕ್ಕೆ ಅತ್ಯವಶ್ಯವಾಗಿದೆ. ಇಂದು ಈ ಶಾಲೆಯು ಸುವ್ಯವಸ್ಥಿತವಾಗಿ ನಡೆದಿದೆ.

ಪೂಜ್ಯ ಜಗದ್ಗುರುಗಳವರು ಯಾವದೇ ಸಂಘ–ಸಂಸ್ಥೆಗಳನ್ನು ಸ್ಥಾಪಿಸಿದರೂ ಮೊದಲು ಅವುಗಳ ಆರ್ಥಿಕ ಭದ್ರತೆ ಬಗ್ಗೆ ಯೋಚಿಸುತ್ತಾರೆ. ಆರ್ಥಿಕ ಭದ್ರತೆಯಿಲ್ಲದ ಸಂಘ–ಸಂಸ್ಥೆಗಳು ಪ್ರಾರಂಭವಾದ ಕೆಲವು ದಿನಗಳಲ್ಲೇ ದಿವಾಳಿ ತೆಗೆಯುವುವು. ಅದನ್ನರಿತ ಪೂಜ್ಯರು ಶ್ರೀ ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಆರ್ಥಿಕ ಭದ್ರತೆ ಗಾಗಿ ಬುನಾದಿ ಹಾಕಿದರು. ಇದಕ್ಕಾಗಿ ಮೂರುಸಾವಿರಮಠ ಹೈಸ್ಕೂಲಿನ ಪ್ಲೇಗ್ರೌಂಡಿನ ದಂಡೆಗುಂಟ ೩೩ ಸುಂದರ ಅಂಗಡಿಗಳ ಸಂಕೀರ್ಣ (Shopping Complex) ಕಟ್ಟಿ ಅದರ ಬಾಡಿಗೆಯಿಂದ ಬಂದ ಹಣವನ್ನು ವಿದ್ಯಾವರ್ಧಕ ಸಂಘಕ್ಕೆ ಬಳಸಿಕೊಳ್ಳಲು ಒಂದು ರೂಪು–ರೇಷೆಯನ್ನು ನಿರೂಪಿಸಿ, ಎಷ್ಟೇ ಕಷ್ಟ ಬಂದರೂ ಎದೆಗುಂದದೇ ಕಾರ್ಯನಿರ್ವಹಿಸಿ ಪೂರೈಸಿದರು. ಇಂದು ಈ ಅಂಗಡಿಗಳ ಬಾಡಿಗೆ ಹಣದಿಂದ ಶೈಕ್ಷಣಿಕ ಸಂಸ್ಥೆಗಳಿಗೆ ಸಹಾಯ ವಾಗಿದೆ. ಇದೆಲ್ಲವೂ ಪೂಜ್ಯರ ದೂರದೃಷ್ಟಿಯ ಫಲ. ಈ ಶಾಪಿಂಗ್ ಕಾಂಪ್ಲೆಕ್ಸ್

ಈಗ ಹೊರಗೆ ಲಕ್ಷ್ಮೀ ನಿವಾಸವಾಗಿದ್ದು, ಒಳಗೆ ಶಾರದಾ ಮಂದಿರವಾಗಿ ಕಂಗೊಳಿಸುತ್ತಲಿದೆ.

ಈ ಎಲ್ಲ ಶೈಕ್ಷಣಿಕ ಚಟುವಟಿಕೆಗಳೊಂದಿಗೇ ಹೈಸ್ಕೂಲು ಕಾಲೇಜುಗಳ ಸುಧಾರಣೆ, ಬಡ ವಿದ್ಯಾರ್ಥಿಗಳಿಗೆ ಸಹಾಯ-ಪೂಜ್ಯ ಜಗದ್ಗುರುಗಳು ಹಮ್ಮಿಕೊಂಡ ಕಾರ್ಯಗಳು ಇದರೊಂದಿಗೆ ರಾಮಕೃಷ್ಣ ಮಿಶನ್ ಮಾದರಿಯ ರೆಸಿಡೆನ್ಸಿಯಲ್ ಸ್ಕೂಲ್‌ನ ಸ್ಥಾಪನೆಯು ಪೂಜ್ಯರ ಕನಸು ನನಸಾಗುವುದರಲ್ಲಿದೆ.

"A mother equal to hundred teachers" ಎಂಬುದನ್ನರಿತ ಪೂಜ್ಯರು ಸ್ತ್ರೀ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಟ್ಟಿದ್ದಾರೆ. ಸ್ತ್ರೀಯರು ಶಿಕ್ಷಣ ಪಡೆದರೆ ಅದು ಅವಳ ಕುಟುಂಬ, ರಾಜ್ಯ, ದೇಶಕ್ಕೆ ಒಳ್ಳೆಯದಾಗುವದೆಂದು ಪೂಜ್ಯರ ಅಭಿಮತ. ಸ್ತ್ರೀ ಶಿಕ್ಷಣ ನಿಷೇಧದ ಕಾಲವೊಂದಿತ್ತು. ಆದರೆ ತ್ವರಿತ ಗತಿಯಲ್ಲಿ ಬದಲಾವಣೆಯಾಗುತ್ತಿರುವ ಇಂದಿನ ದಿನಮಾನಗಳಲ್ಲಿನ, ಬದಲಾಗುತ್ತಿರುವ ನವ ಮನ್ವಂತರದ ಆಶೋತ್ತರಗಳಿಗೆ ಸ್ಪಂದಿಸಲು ಸ್ತ್ರೀ ಶಿಕ್ಷಣ ಅವಶ್ಯವೆಂದರಿತ ಅವರು ಮಹಿಳಾ ಕಾಲೇಜನ್ನು ಪ್ರಾರಂಭಿಸಿದರು. ಪೂಜ್ಯರಿರಿಸಿಕೊಂಡ ಧ್ಯೇಯೋದ್ದೇಶಗಳಿಗನುಗುಣವಾಗಿ ಈ ಕಾಲೇಜು ವರ್ಷದಿಂದ ವರ್ಷಕ್ಕೆ ಪ್ರಗತಿಯತ್ತ ಸಾಗಿರುವದು ಅವರಿಗೆ ಹೆಮ್ಮೆಯ ವಿಷಯವಾಗಿದೆ. ಅಂತೆಯೇ ಈ ಕಾಲೇಜು ಇಡೀ ಉತ್ತರ ಕರ್ನಾಟಕದಲ್ಲೇ ಪ್ರಥಮವೆನಿಸಿದ, ದೊಡ್ಡದಾದ ಮಹಿಳಾ ಕಾಲೇಜಿನ ಪ್ರಗತಿಯ ಹಿಂದೆ ಪರಮ ಪೂಜ್ಯರ ಶೈಕ್ಷಣಿಕ ಪರಿಶ್ರಮದ ಫಲವಿದೆ ತ್ಯಾಗದ ಹಿರಿಮೆಯಿದೆ.

ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿನ ಸಾಧನೆಗಳು:

ಪೂಜ್ಯ ಜಗದ್ಗುರುಗಳವರು ಧಾರ್ಮಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಗಣನೀಯ ಸೇವೆ ಸಲ್ಲಿಸಿ ಸಾಧನೆಗೈದಿದ್ದಾರೆ. "ಮಠಗಳು ಸಮಾಜದ ಕಣ್ಣಾಗಬೇಕೆಂಬುದು" ಪೂಜ್ಯರ ಹಿರಿಯಾಶೆ. ಶ್ರೀ ಮೂರುಸಾವಿರಮಠದಲ್ಲಿ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ ಎಂಬ ಹೆಸರಿನ ಸಾಧಕರ ಸಂಘವೊಂದನ್ನು ಸ್ಥಾಪಿಸಿ, ತನ್ಮೂಲಕ ನಾಡಿನ ಮಠಗಳಿಗೆ ಉತ್ತರಾಧಿಕಾರಿಗಳನ್ನು ನಿಯಮಿಸುವ ಮಹತ್ಕಾರ್ಯ ಹಮ್ಮಿಕೊಂಡಿದ್ದಾರೆ. ಗುರು-ವಿರಕ್ತರೆಂಬ ಭಾವನೆಯಿಲ್ಲದೇ ಮಠದಲ್ಲಿಟ್ಟುಕೊಂಡು ಆಶ್ರಯ ನೀಡಿ ಅವರ ಬಾಳ್ಬೆಳಕಿಗೆ ಕಾರಣರಾಗಿದ್ದಾರೆ. ಕರ್ನಾಟಕದ ಹೊರ ರಾಜ್ಯಗಳ ಮಠಗಳಿಗೂ ಮರಿ ದೇವರನ್ನು ನೀಡುವಲ್ಲಿ ಪೂಜ್ಯರ ಸಾಧನೆ ಹಿರಿದು. ಮರಿ ದೇವರುಗಳಿಗೆ ಯೋಗ್ಯ ತರಬೇತಿ ನೀಡಿ ಸಮಾಜ ಸೇವೆಗೆ ಅವರನ್ನು ಅಣಿಗೊಳಿಸಿದ ಶ್ರೇಯಸ್ಸು ಅವರದು. ಇಂದಿಗೂ ಈ ಸಂಘವು ಮಹತ್ಕಾರ್ಯವನ್ನು ಮುನ್ನಡಿಸಿಕೊಂಡು ಬರುತ್ತಿದೆ. ಧರ್ಮ ಸಂಸ್ಕೃತಿಗಳಿಗೆ ಭದ್ರ ಬುನಾದಿ ಹಾಕುತ್ತಲಿದೆ.

ಶ್ರೀ ಜಗದ್ಗುರುಗಳವರು ಶಿವಯೋಗ ಮಂದಿರ ಸಂಸ್ಥೆಯ ಹೆಮ್ಮೆಯ ಮಕ್ಕಳು. ಅಂತೆಯೇ ಅವರಿಗೆ ಮಂದಿರದ ಮೇಲೆ ವಿಶೇಷ ಅಭಿಮಾನ. ಅಲ್ಲಿ ಬರ ಹೋಗುವ

ಸ್ವಾಮಿಗಳವರಿಗೆ, ಸದ್ಭಕ್ತರಿಗೆ, ಪೂಜಾ–ವಸತಿ ವ್ಯವಸ್ಥೆಗಾಗಿ ಶ್ರೀ ಮೂರುಸಾವಿರಮಠದ ವತಿಯಿಂದ ಒಂದು ಭವ್ಯ "ಧ್ಯಾನಧಾಮ"ವನ್ನು ಕಟ್ಟಿಸಿ ಕೃತಾರ್ಥರಾಗಿದ್ದಾರೆ. ಅದು ಸುಂದರ ಗಿಡ–ಮರ–ಬಳ್ಳಿಗಳಿಂದ ಸುಶೋಭಿತವಾಗಿದೆ.

ಹಿಂದಿನಿಂದಲೂ ಪ್ರತಿವರ್ಷ ಶ್ರೀ ಜಗದ್ಗುರುಗಳವರಿಗೆ ಪೌರ್ವಾತ್ಯ ಪಾಶ್ಚಾತ್ಯ ದೇಶಗಳಿಂದ ಧಾರ್ಮಿಕ ಸಭೆಗಳಲ್ಲಿ ಉಪನ್ಯಾಸ ನೀಡಲು ಆಮಂತ್ರಣ ಬಂದೇ ಬರುತ್ತಿವೆ. ಕಾರ್ಯ ಬಾಹುಲ್ಯಗಳಿಂದ ಪೂಜ್ಯರು ಒಪ್ಪೊಟ್ಟೀ ಸಾರೆ ಹೋಗುವದಾಗಲಿಲ್ಲ. ೧೯೭೫ರಲ್ಲಿ ಯುರೋಪದ ಬೆಲ್ಜಿಯಂನಲ್ಲಿರುವ ಲುವೆನ್‌ದಲ್ಲಿ ಜರುಗಿದ ಜಾಗತಿಕ ಧರ್ಮ ಶಾಂತಿ ಸಮ್ಮೇಲನಕ್ಕಾಗಿ ಒತ್ತಾಯದ ಹಾಗೂ ಕಳಕಳಿಯ ಕರೆ ಬಂದಾಗ ಪೂಜ್ಯರು ಮನ್ನಣೆ ನೀಡಿ ಅಲ್ಲಿಗೆ ದಯಮಾಡಿಸಿದರು. ಅಲ್ಲಿನ ಸಮಾರಂಭದಲ್ಲಿ ಅನೇಕ ಗ್ರಂಥಗಳ ಬಿಡುಗಡೆಯೊಂದಿಗೆ ಅರ್ಥವತ್ತಾದ ಕಾರ್ಯಕ್ರಮಗಳು ಜರುಗಿ, ಪೂಜ್ಯರು ಇಂಗ್ಲೀಷಿನಲ್ಲಿ ದಿವ್ಯ ಸಂದೇಶ ನೀಡಿದರು. ಸಮಾರಂಭದ ವ್ಯವಸ್ಥಾಪಕರು-ನಾಗರಿಕರು ಮನದುಂಬಿ ಮಾತನಾಡಿದರು.

೧೯೭೭ರಲ್ಲಿ ಸಿಂಗಾಪೂರ್‌ನಲ್ಲಿ ಜರುಗಿದ "ಏಷ್ಯಾ ರಾಷ್ಟ್ರಗಳ ಧರ್ಮ ಮತ್ತು ಶಾಂತಿ ಸಮ್ಮೇಲನ"ಕ್ಕೆ ಪುನಃ ಕರೆ ಬಂದಾಗ ನಾಡಿನ ತುಂಬೆಲ್ಲ ಬರಗಾಲವಿತ್ತು. ಬರಗಾಲ ಪ್ರದೇಶದಲ್ಲಿ ಸೇವೆ ಮಾಡುವ ಸತ್ಕಾರ್ಯವಿದ್ದುದರಿಂದ ಪೂಜ್ಯರು ಆಮಂತ್ರಣವನ್ನು ಸ್ವೀಕರಿಸುವದಾಗಲಿಲ್ಲ. ಆದರೂ ಶ್ರೀಮಠದಿಂದ ತಮ್ಮ ಪರವಾಗಿ ಈಗಿನ ಆನಂದಪುರಂ ಜಗದ್ಗುರುಗಳವರನ್ನು ಪ್ರತಿನಿಧಿಗಳನ್ನಾಗಿ ಕಳಿಸಿದರು. ಇದು ಅವರ ಮಾನವೀಯ ಅನುಕಂಪೆಗೆ ಸಾಕ್ಷಿ.

ಧರ್ಮ ಪ್ರಚಾರಕ್ಕೆಂದೇ ಸ್ಥಾಪಿತವಾದ ಶ್ರೀ ಜಗದ್ಗುರು ಗಂಗಾಧರ ಧರ್ಮ-ಪ್ರಚಾರಕ ಮಂಡಳವು ಸಾಹಿತ್ಯಿಕ, ಸಾಂಸ್ಕೃತಿಕ, ಚಟುವಟಿಕೆಗಳ ಮೂಲಕ ಧಾರ್ಮಿಕ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಈ ಧರ್ಮಪ್ರಚಾರಕ ಮಂಡಳದ ಈ ಎಲ್ಲ ಕಾರ್ಯಗಳಿಗೆ ಬೇಕಾಗುವ ಆರ್ಥಿಕ ಅನುಕೂಲಗಳಿಗಾಗಿ ಧಾರವಾಡ ರಸ್ತೆಯಲ್ಲಿರುವ ಶ್ರೀ ಮೂರುಸಾವಿರಮಠದ ಆಸ್ತಿಯಲ್ಲಿ ಭವ್ಯವಾದ ಒಂದು ಶಾಪಿಂಗ್ ಕಾಂಪ್ಲೆಕ್ಸನ್ನು ಕಟ್ಟಿಸಿ, ಅದರಿಂದ ಬಂದ ಭಾಡಿಗೆ ಹಣದಿಂದ ಧರ್ಮಪ್ರಚಾರ, ಗ್ರಂಥ ಪ್ರಕಟನೆ, ವಿದ್ಯಾಭ್ಯಾಸಕ್ಕೆ ಸಹಾಯ ಮುಂತಾದ ಅತ್ಯುತ್ತಮ ಕಾರ್ಯಗಳಿಗೆ ವಿನಿಯೋಗಿಸುತ್ತ ಬಂದಿದ್ದಾರೆ.

ಹುಬ್ಬಳ್ಳಿಯ ಮೂರುಸಾವಿರಮಠದ ಶಾಖಾ ಮಠವೊಂದು ಧಾರವಾಡದಲ್ಲಿದ್ದು, ಅಲ್ಲಿಯೂ ಧಾರ್ಮಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ಬಸವ ಮಂಗಲ ಭವನ ನಿರ್ಮಾಣ ಮಾಡಲು ಪೂಜ್ಯ ಜಗದ್ಗುರುಗಳವರು ಯೋಜಿಸಿ ಅದರೊಂದಿಗೆ ಶಾಖಾ ಮಠದ ಜೀರ್ಣೋದ್ಧಾರ ಮಾಡಿದರು. ಅಲ್ಲೊಂದು ಶಿಶುವಿಹಾರವೂ ನಡೆಯುತ್ತಲಿದೆ.

ಜನತೆಯಲ್ಲಿ ಧಾರ್ಮಿಕ ಮನೋಭಾವನೆ ಭಕ್ತಿ–ಭಾವಗಳನ್ನುಂಟುಮಾಡುವ ದೃಷ್ಟಿಯಿಂದ ಪೂಜ್ಯಶ್ರೀ ಜಗದ್ಗುರುಗಳವರು ೧೯೭೪ರಲ್ಲಿ ಶ್ರೀಮಠದಲ್ಲಿ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪೂಜಾ ಸೇವಾ ಸಮಿತಿಯೊಂದನ್ನು ಸ್ಥಾಪಿಸಿ, ಪೂಜೆ–ಅಭಿಷೇಕಗಳು ದಿನನಿತ್ಯವೂ ನಡೆದು ಬರಲು ಅನುಕೂಲ ಮಾಡಿಕೊಟ್ಟಿದ್ದಾರೆ. ತನ್ಮೂಲಕ ವೀರಶೈವ ಧರ್ಮದ ತಳಹದಿಯಾದ ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ ತತ್ವಗಳಿಗೆ ಚ್ಯುತಿ ಬಾರದಂತೆ 'ಘನತೆ ಗೌರವ' ಕಾಯ್ದುಕೊಂಡು ಹೋಗುವ ಉದಾತ್ತ ವಿಚಾರದಿಂದಲೂ ಸರ್ವಧರ್ಮದವರಿಗೆ ಧರ್ಮದ ಆಚಾರ, ವಿಚಾರಗಳನ್ನು ಬೆಳೆಸುವ ಸದುದ್ದೇಶವನ್ನಿರಿಸಿಕೊಂಡು ಪೂಜ್ಯ ಜಗದ್ಗುರುಗಳು ಈ ಪೂಜಾ ಸೇವಾ ಸಮಿತಿಯನ್ನು ಸ್ಥಾಪಿಸಿ ಸಫಲರಾದರು. ಈ ಬದುಕಿನ ನಿರಂತರ ಜಂಜಾಟಗಳಿಂದ ಬಳಲಿದ ಭಕ್ತರಿಗೆ ಈ ಪೂಜಾ ಸೇವೆಗಳು ಸಮಾಧಾನವನ್ನುಂಟು ಮಾಡಿವೆ.

ಪೂಜ್ಯ ಜಗದ್ಗುರುಗಳವರಿಗೆ ವಿಶಾಲವಾದ ಧರ್ಮ ಸಮನ್ವಯ ದೃಷ್ಟಿಯಿದ್ದರೂ ಅವರವರು ಸ್ವಧರ್ಮನಿಷ್ಠೆಗಾಗಿ ತಮ್ಮ ತಮ್ಮ ಧರ್ಮದಂತೆ ನಡೆದು ಸಂಘಟಿತರಾಗಬೇಕೆಂದು ಅವರ ಮಹದಾಶೆ. ಈ ಅಪೇಕ್ಷೆಯಂತೆ ಶ್ರೀ ಮೂರುಸಾವಿರಮಠದ ಆವರಣದಲ್ಲಿ ವೀರಶೈವರ ಸಂಘಟನೆಗಾಗಿ ಒಂದು ಸಮಿತಿಯನ್ನು ಸ್ಥಾಪಿಸಿ, ಪದಾಧಿಕಾರಿಗಳನ್ನು ನಿಯಮಿಸಿದರು. ಪ್ರತಿ ವರ್ಷವೂ, ವೈಭವದಿಂದ ಬಸವ ಜಯಂತಿಯ ಆಚರಣೆ ಹಾಗೂ ಆಗಾಗ ಉಪನ್ಯಾಸಗಳನ್ನೇರ್ಪಡಿಸುತ್ತ ಧರ್ಮ ಸಂಘಟನೆಗೆ ಕಾರಣರಾಗಿದ್ದಾರೆ.

ಶ್ರೀ ಜಗದ್ಗುರುಗಳು ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲದೆ ಹೊರರಾಜ್ಯಗಳಲ್ಲೂ ಧರ್ಮಪ್ರಚಾರಗೈದಿದ್ದಾರೆ. ೧೯೭೯ ರಲ್ಲಿ ಕೆಲವು ಪೂಜ್ಯರೊಂದಿಗೆ ದಕ್ಷಿಣ ಭಾರತದ ತಮಿಳು ನಾಡಿಗೆ ಧರ್ಮಪ್ರಚಾರಕ್ಕೆಂದು ಹೋಗಿ ಬಂದರು. ತಮಿಳು ಭಾಷಾ ಪ್ರವೀಣರಿಂದ ಕೀರ್ತನೆ ಉಪನ್ಯಾಸಗಳನ್ನೇರ್ಪಡಿಸಿದರು. ಸೇಲಂ, ಭವಾನಿ, ತಿರುಚನಾಪಳ್ಳಿ, ಕುಂಭಕೋಣಂ ಮುಂತಾದೆಡೆಗಳಲ್ಲಿ ಅದ್ಭುತ ಸ್ವಾಗತದೊಂದಿಗೆ ಧಾರ್ಮಿಕ ಕಾರ್ಯಕ್ರಮಗಳು ಜರುಗಿದವು. ದಿನನಿತ್ಯವೂ ಉಚಿತ ಲಿಂಗಧಾರಣೆ, ಧಾರ್ಮಿಕ ಆಚಾರ–ವಿಚಾರಗಳ ಬಗ್ಗೆ ತಿಳಿಸುವುದು ಇತ್ಯಾದಿ ಉಪಯುಕ್ತ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳು ಆ ಭಾಗದ ಜನತೆಯಲ್ಲಿ ಒಂದು ಶಾಖಾ ಮೂರುಸಾವಿರಮಠವನ್ನು ಸ್ಥಾಪಿಸಿ, ಅಲ್ಲಿ ನಿರಂತರ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಪೂಜೆ ನಡೆಯಬೇಕೆಂಬ ಮಹದಾಶೆ ಆನಂದವನ್ನುಂಟುಮಾಡಿದವು. ಈಗಲೂ ಅಲ್ಲಿನ ಸಿದ್ದರ್‌ಕೊಯಿಲ್ (ಸೇಲಂ) ಯಲ್ಲಿ ದಿನನಿತ್ಯ ಪೂಜೆ–ಮುಂತಾದ ಧಾರ್ಮಿಕ ಕಾರ್ಯಗಳು ನಡೆಯುತ್ತಿವೆ. ಅಲ್ಲಿನ ಸದ್ಭಕ್ತ ಜನತೆ ಮೂರುಸಾವಿರಮಠದೊಂದಿಗೆ ಸತತವಾದ ಅನ್ಯೋನ್ಯ ಸಂಬಂಧವನ್ನಿರಿಸಿಕೊಂಡಿದ್ದಾರೆ.

ವಿವಿಧೋದ್ದೇಶವನ್ನಿರಿಸಿಕೊಂಡು ಸ್ಥಾಪಿತವಾದ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘವು ಸಾರ್ಥಕವಾದ ದ್ವಾದಶ ವಸಂತಗಳನ್ನು ಕಂಡು ಯಶಸ್ವಿಯತ್ತ ಸಾಗಿದ್ದು ಪೂಜ್ಯ

ಜಗದ್ಗುರುಗಳವರಿಗೆ ಸಂತಸವನ್ನುಂಟು ಮಾಡಿತು. ತನ್ನಿಮಿತ್ಯವಾಗಿ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ದ್ವಾದಶ ವಾರ್ಷಿಕೋತ್ಸವವನ್ನು ಶಿವಯೋಗಿ ಸಂಘದ ಸಾಧಕರು ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಅತೀ ವಿಜೃಂಭಣೆಯಿಂದ ಅನೇಕ ಕ್ರಿಯಾತ್ಮಕ ಚಟುವಟಿಕೆಗಳ ಮೂಲಕ ಆಚರಿಸಿದರು. ನಾಡಿನ ಎಲ್ಲ ಹಿರಿ ಕಿರಿ ಸ್ವಾಮಿಗಳು, ಭಕ್ತಾದಿಗಳು ಶ್ರೀ ಜಗದ್ಗುರುಗಳವರ ಸಾಧನೆಗೆ ಕೃತಜ್ಞತೆ ಸಮರ್ಪಿಸಿದರು.

ಈ ಸಂದರ್ಭದಲ್ಲಿ ಇನ್ನೊಂದು ವೈಶಿಷ್ಟ್ಯಪೂರ್ಣ ಸಮಾರಂಭವನ್ನು ಜರುಗಿಸಲಾಯಿತು. ಅದುವೇ ಪೂಜ್ಯ ಜಗದ್ಗುರುಗಳವರ ೫೦ನೇ ಜನ್ಮ ದಿನೋತ್ಸವ. ನಾಡಿನ ಸಮಸ್ತ ಜನತೆ ಅಂದು ಜಗದ್ಗುರುಗಳವರ ಪುಣ್ಯ ಚೇತನಕ್ಕೆ ನಮನಗಳನ್ನರ್ಪಿಸಿ ಧನ್ಯವಾಯಿತು. ಈ ಎಲ್ಲ ಕಾರ್ಯಕ್ರಮಗಳ ಸಂಸ್ಮರಣೆಯಲ್ಲಿ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಸಾಧಕರು "ಅರ್ಚನ" ಎಂಬ ಗ್ರಂಥವನ್ನು ಹೊರತಂದರು. ಹಲವು ಜನ ಗಣ್ಯರನ್ನು, ಕವಿ ಸಾಹಿತಿಗಳನ್ನು ಈ ಸಂದರ್ಭದಲ್ಲಿ ಸತ್ಕರಿಸಿದರು.

ಮೂಲ ಮೂರುಸಾವಿರಮಠವು ಜೀರ್ಣವಾಗಿದ್ದದನ್ನು ಮತ್ತೆ ಜಗದ್ಗುರುಗಳವರು ಹಲವು ಜನ ಭಕ್ತರ ಸಹಾಯ-ಸಹಕಾರಗಳೊಂದಿಗೆ ಜೀರ್ಣೋದ್ಧಾರ ಮಾಡಿಸಿದರು. ಹಾಳುಬಿದ್ದ ಪ್ರಾಚೀನ ಮೂಲ ಮೂರುಸಾವಿರಮಠವನ್ನುಳಿಸಿ ಪ್ರಾಚೀನ ಸಂಸ್ಕೃತಿಯನ್ನು ಬೆಳೆಸಿದ್ದು ಪೂಜ್ಯ ಜಗದ್ಗುರುಗಳವರ ದೂರದೃಷ್ಟಿ.

೧೨ ನೇ ಶತಮಾನದಲ್ಲಿ ಬಸವತತ್ವ ಪ್ರಚಾರಗೊಳಿಸಿದ ಶ್ರೀ ಜಗದ್ಗುರು ಮೂರುಸಾವಿರಮಠವು ತನ್ನ ಐತಿಹಾಸಿಕ ಪರಂಪರೆಗೆ ಸಾಕ್ಷಿಯಾಗಿ ಇಂದು ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಿಕ ಶೈಕ್ಷಣಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಕನ್ನಡ ನಾಡಿನಲ್ಲಿ ಅಗ್ರಸ್ಥಾನದಲ್ಲಿದೆ. ಧರ್ಮ ಪ್ರಚಾರಕ್ಕೆಂದೇ ಸ್ಥಾಪಿತವಾದ ಧರ್ಮಪ್ರಚಾರಕ ಮಂಡಳದ ಸಕಲ ಕಾರ್ಯಚಟುವಟಿಕೆಗಳಿಗೆ ಅನುಕೂಲವಾಗಲೆಂದು ಪೂಜ್ಯರು ವಿಚಾರಿಸಿ ಒಂದು ವಾಹನ ಖರೀದಿಸಿದರು. ಅದರ ಮೂಲಕ ಹಳ್ಳಿಗಳಲ್ಲಿ ಉಪನ್ಯಾಸ ಕೀರ್ತನೆಗಳನ್ನೇರ್ಪಡಿಸುವುದರೊಂದಿಗೆ ಶ್ರೀ ಮಠದಿಂದ ಪ್ರಕಟವಾದ ಗ್ರಂಥಗಳ ಮಾರಾಟ ವ್ಯವಸ್ಥೆಯನ್ನು ಮಾಡಿದರು.

ವೀರಶೈವ ಧರ್ಮದ "ಗುರು" ಹಾಗೂ "ವಿರಕ್ತ" ಪರಂಪರೆಯ ಮಠಗಳಿದ್ದು, ಈ ಎರಡೂ ಮಠಗಳು ಭಾವೈಕ್ಯದಿಂದಿರಲು ಜಗದ್ಗುರುಗಳು ವಿಶೇಷ ಶ್ರಮವಹಿಸಿದ್ದಾರೆ. "ಗುರುವಿರಕ್ತರು ಸಮಾಜಕ್ಕೆ ಎರಡು ಕಣ್ಣುಗಳಿದ್ದಂತೆ" ಎಂಬುದು ಅವರ ಅಭಿಮತ. ಶ್ರೀಮಠದಿಂದ ಹಿಂದಿನಿಂದಲೂ ಯಾರೇ ಜಗದ್ಗುರುಗಳು ಬರಲಿ ಅವರಿಗೆ ಸಕಲ ಮರ್ಯಾದೆಗಳೊಂದಿಗೆ ಭವ್ಯ ಸ್ವಾಗತವಿದೆ. ಈ ರೀತಿಯಾಗಿ ಕಾಶಿ, ಶ್ರೀಶೈಲ ಮುಂತಾದ ಪೀಠಗಳ ಜಗದ್ಗುರುಗಳೊಂದಿಗೆ ಅನ್ಯೋನ್ಯ ಸಂಬಂಧವೇ ಇದಕ್ಕೆ ಸಾಕ್ಷಿ. ಶ್ರೀಶೈಲ ಪೀಠದ ಇಂದಿನ ಜಗದ್ಗುರುಗಳು ಹಿಂದೆ ಮೂರುಸಾವಿರ ಮಠದ ಕುಮಾರೇಶ್ವರ

ಶಿವಯೋಗಿ ಸಂಘವಲ್ಲಿ ಸಾಧಕರಾಗಿದ್ದರು. ಶ್ರೀಗುರು ಕುಮಾರೇಶನ ಕನಸಾಸ ಗುರು ವಿರಕ್ತ ಭಾಪೈಕ್ಯದಲ್ಲಿ ಪೂಜ್ಯ ಜಗದ್ಗುರುಗಳ ಪ್ರಯತ್ನವೊಂದು ಸಾರ್ಥಕ ಸಾಧನೆ.

ಹುಬ್ಬಳ್ಳಿಯ ಮೂರುಸಾವಿರಮಠದಲ್ಲಷ್ಟೇ ಧಾರ್ಮಿಕ ಚಟುವಟಿಕೆಗಳು ನಡೆಯು ತ್ತಿದ್ದರೆ ಸಾಲದೆಂಬುದನ್ನರಿತ ಪೂಜ್ಯರು ಚೌಲಗುಡ್ಡದ ಶಾಖಾ ಮೂರುಸಾವಿರಮಠದಲ್ಲಿ ಜೀರ್ಣೋದ್ಧಾರ ಮಾಡಿಸಿ ಅಲ್ಲಿನ ಧಾರ್ಮಿಕ ಕಾರ್ಯಕ್ರಮಗಳು ನಡೆಯುವಂತೆ ಮಾಡಿದರು.

"ಧರ್ಮೋ ರಕ್ಷತಿ ರಕ್ಷಿತಃ" ಎಂಬುದನ್ನರಿತ ಜಗದ್ಗುರುಗಳು ಈ ವಿಧವಾಗಿ ಧಾರ್ಮಿಕ ಸೇವೆಗಳಲ್ಲಿ ಸಾಧನೆಗೈದಿದ್ದಾರೆ.

ಸಾಮಾಜಿಕ ರಂಗದ ಸಾಧನೆಗಳು:

ಪೂಜ್ಯ ಶ್ರೀ ಜಗದ್ಗುರುಗಳವರ ಸಾಮಾಜಿಕ ಚಿಂತನೆ ಗಾಢವಾದುದು. ಸಮಾಜದ ಹಿತ-ಕ್ಷೇಮಗಳಿಗೆ ಅವರು ಅಹರ್ನಿಶಿ ದುಡಿಯುತ್ತಿದ್ದಾರೆ. ಸಾಮಾಜಿಕ ರಂಗಕ್ಕೆ ಅವರು ಸದಾ ಸ್ಪಂದನಶೀಲರಾಗಿದ್ದಾರೆಂಬುದಕ್ಕೆ ಈ ಕೆಳಗಿನ ಸಾಲುಗಳೇ ಉದಾಹರಣೆ.

"ಸಾರ್ಥಕವಾಗಿದೆಯಲ್ಲಿ "ಮೂಜಗಂ" ಸನ್ನಿಧಿಃ
ಸಮಾಜ ಸೇವೆಗೇ ಮೈವೆತ್ತು ಬಂದ ದಯಾನಿಧಿ".

(ಕೊಟ್ರೇಶ ಆರಾಧ್ಯಮಠ "ರಜತದೀಪ್ತಿ"ಯಲ್ಲಿ)

ವೈಜ್ಞಾನಿಕವಾಗಿ ಮುಂದುವರೆಯುತ್ತಿರುವವೆಂಬ ಸಂಜಿಕೆಯ ಇಂದಿನ ಸಮಾಜ ಅನೇಕ ಸಮಸ್ಯೆಗಳಲ್ಲಿ ತೊಳಲಾಡುತ್ತಿರುವಾಗ ಪೂಜ್ಯರು ಈ ಸಮಸ್ಯೆಗಳೆಡೆ ದೃಷ್ಟಿ ಹರಿಸಿದ್ದು ಅವರ ಸಾಮಾಜಿಕ ಕಳಕಳಿಗೆ ಹಿಡಿದಕನ್ನಡಿ.

ಗುಲ್ಬರ್ಗಾ, ಬೀದರ್, ರಾಯಚೂರು, ವಿಜಾಪೂರ ಮುಂತಾದ ಜಿಲ್ಲೆಗಳಲ್ಲಿ ಈ ಭೀಕರ ಬರಗಾಲ ೧೯೭೭ರ ಸುಮಾರಿಗೆ ತಾಂಡವವಾಡುತ್ತಿದ್ದ ಕಾಲ. ಪೂಜ್ಯ ಜಗದ್ಗುರು ಗಳಿಗೆ ಸಿಂಗಾಪೂರದ ಬೃಹತ್ ಧಾರ್ಮಿಕ ಸಮ್ಮೇಳನವೊಂದಕ್ಕೆ ಕರೆ ಬಂದರೂ, ಮಾನ ವೀಯ ಅನುಕಂಪವುಳ್ಳ ಪೂಜ್ಯರು ಆ ಕಡೆ ಲಕ್ಷಗೊಡದೇ ಬರಗಾಲದಿಂದ ನೊಂದ ಹೃದಯಗಳತ್ತ ದೃಷ್ಟಿ ಹರಿಸಿ ತೀವ್ರವಾಗಿ ನೊಂದು ಅವರ ನೆರವಿಗಾಗಿ ಧಾವಿಸಿದ್ದು ಅವರ ಹೃದಯವಂತಿಕೆಗೆ ಸಾಕ್ಷಿ.

ಬರಗಾಲದಿಂದ ಪರಿತಪಿಸುತ್ತಿದ್ದ ಪ್ರದೇಶಗಳಲ್ಲಿ ಪೂಜ್ಯರು ಹುಬ್ಬಳ್ಳಿ-ಧಾರವಾಡ ನಗರಗಳ ಪ್ರಮುಖ ಭಕ್ತರ ಸಹಾಯ-ಸಹಕಾರಗಳೊಂದಿಗೆ ಅನ್ನ-ಬಟ್ಟೆ-ಹಣದೊಂದಿಗೆ ಪಾದಯಾತ್ರೆ ಮಾಡಿದರು. ಬರಗಾಲದಿಂದಾಗಿ ನೊಂದ ಹೃದಯಗಳಿಗೆ ಸಾಂತ್ವನ ಹೇಳಿ, ಅಂತಃಕರುಣದ ಹೊಳೆ ಹರಿಸಿದ್ದರು. ದನಕರುಗಳಿಗಾಗಿ ಮೇವನ್ನೂ ಒದಗಿಸಿದರು. ಉದಾರ ದಾನಿಗಳಿಂದ ದಾನರೂಪವಾಗಿ ಬಂದ ವಸ್ತುಗಳನ್ನು ದೀನ-ದಲಿತರಿಗೆ ವಿತರಿಸಿ,

'ದೀನರ ಸೇವೆಯಲ್ಲಿ ಭಗವಂತನನ್ನು ಕಂಡ' ಜಗದ್ಗುರುಗಳ ಹೃದಯ ವೈಶಾಲ್ಯತೆ ಎಂಥ ವರೂ ಮೆಚ್ಚುವಂತಹದು. ಎಲ್ಲೆಡೆ ಗಂಜೀ ಕೇಂದ್ರಗಳನ್ನು ತೆರೆದು ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್.)ದವರ ಸಹಕಾರದೊಂದಿಗೆ ಅನ್ನ ನೀಡಿದು ದನ್ನು ಕಂಡು ಮಾನವೀಯ ಅನುಕಂಪನೆಗೆ, ಎಲ್ಲರೂ ಮೆಚ್ಚಿಕೊಂಡರು. ಅವರ ಈ ಸೇವೆಯನ್ನು ಇಂದಿಗೂ ಆ ಜನ ಸ್ಮರಿಸುತ್ತಲಿದೆ. ಅಂದು ಭಾರತದ ಪ್ರಧಾನಿಗಳಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ಈ ಕಾರ್ಯವನ್ನು ಮೆಚ್ಚಿ ಶ್ಲಾಘಿಸಿದರು.

ಪೂಜ್ಯರು ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದಂತೆ ನಡೆದುಕೊಂಡು, ಧಾರ್ಮಿಕ ಸಂಸ್ಕಾರ ಪಡೆದು ಆದರ್ಶಪ್ರಾಯರಾಗಬೇಕೆಂಬ ಮಹೋದ್ದೇಶದಿಂದ ಶ್ರೀ ಜಗದ್ಗುರು ಗಳು ಲಿಂಗವಿಲ್ಲದ ಲಿಂಗಾಯತರಿಗೆ ಉಚಿತ ಲಿಂಗಧಾರಣ ಮಾಡಿಸುತ್ತಾ ಬಂದಿದ್ದಾರೆ. ಈ ರೀತಿ ಇವರೆಗೆ ಸುಮಾರು ೭೦ ಸಾವಿರದಷ್ಟು ಲಿಂಗಧಾರಣೆಯಾಗುತ್ತಾ ಬಂದಿದ್ದು, ಈಗಲೂ ಆಗುತ್ತಿವೆ. ಇದರೊಂದಿಗೆ ಬಯಸಿ ಬಂದ ಅರ್ಹರಿಗೆ ಅಂತರ್ಜಾತಿ ವಿವಾಹ ಗಳನ್ನು ಮಾಡಿಸುವ ಮೂಲಕ ಸಮಾಜದಲ್ಲಿ ವಿನೂತನ ಪಥದತ್ತ ಸಾಗಿದ್ದಾರೆ, ಇಂದಿಗೂ ಶ್ರೀ ಮೂರುಸಾವಿರಮಠದಲ್ಲಿ ಈ ತೆರನಾದ ವಿವಾಹಗಳು ನಡೆಸುತ್ತಿದ್ದು, ಸರ್ವರಿಗೂ ಜಗದ್ಗುರುಗಳು ಚೈತನ್ಯ ಸ್ವರೂಪರಾಗಿದ್ದಾರೆ. ಈ ವಿವಾಹಕ್ಕಾಗಿ ಒಂದು ಪ್ರತ್ಯೇಕ ವ್ಯವಸ್ಥೆಯನ್ನು ಶ್ರೀಮಠದಲ್ಲಿ ಮಾಡಿಸಿದ್ದಾರೆ.

ಪರಮಪೂಜ್ಯರ ಜೀವ ಎಂದೆಂದಿಗೂ ದೀನ-ದಲಿತರಿಗೆ, ರೋಗಿಗಳಿಗೆ ಅವರ ಕಷ್ಟಗಳ ಬಗ್ಗೆ ಮಿಡಿತದ ನಾದವನ್ನು ಹೊಂದಿಕೊಂಡೇ ಬಂದಿದೆ. ಮೊದಲಿನ ಲಿಂ|| ಜಗದ್ಗುರುಗಳು ಸ್ಥಾಪಿಸಿದ ಘಟಪ್ರಭಾ ಆಸ್ಪತ್ರೆಗೆ ಹೊಂದಿಕೊಂಡಂತೆ ಜಗದ್ಗುರು ಗಳು ಒಂದು ಕ್ಷಯರೋಗ ನಿವಾರಣಾ ಆಸ್ಪತ್ರೆಯೊಂದನ್ನು ಪ್ರಾರಂಭಿಸುವಲ್ಲಿ ಮುಂದಾಗಿ ಯಶಸ್ವಿಯಾದರು. ಅದಕ್ಕೆಂದು ಪೂಜ್ಯರು ಅಲ್ಲಲ್ಲಿ ಪಾದಯಾತ್ರೆ ಮಾಡಿ ನಿಧಿ ಸಂಗ್ರಹಿ ಸಿದರು. ಅನೇಕ ಸಹಕಾರಿ ಬಂಧುಗಳ ವಿಪುಲ ಸಹಾಯದೊಂದಿಗೆ, ಸಹಕಾರಿ ತತ್ವದ ತಳಹದಿ ಮೇಲೆ ಭಾರತದಲ್ಲಿಯೇ ಪ್ರಪ್ರಥಮವಾಗಿ ಪ್ರಾರಂಭಗೊಂಡ ಈ ಆಸ್ಪತ್ರೆ ಯೊಂದು ಕನ್ನಡ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ರೂಪುಗೊಂಡಿದೆ.

"ದಾರಿದ್ರವಿದ್ದವರಲ್ಲಿ ದೈವತ್ವ ದರ್ಶನ ಪಡೆಯಬೇಕೆಂಬುದು" ಪೂಜ್ಯರ ಮಹಾ ದಾಶೆ. ಅಂತೆಯೇ ಘಟಪ್ರಭಾದ ಈ ಆಸ್ಪತ್ರೆಯು ಮಾನವೀಯ ಅನುಕಂಪ ಸೆಲೆ ಯಾಗಿ ಅಲ್ಲೊಂದು ಪುಟ್ಟ ಗ್ರಾಮವು ಸಕಲ ಸೌಲಭ್ಯಗಳೊಂದಿಗೆ ಮೈವೆತ್ತು ನಿಂತಿದೆ! ರೋಗಿಗಳ ಸೇವೆಯಲ್ಲಿ ದೇವರ ಸೇವೆಯನ್ನು ಕಂಡ ಪೂಜ್ಯರಿಗೆ ಆ ಭಾಗದ ಜನತೆ ತುಂಬು ಹೃದಯದ ಸಹಾಯ-ಸಹಕಾರ, ನಮನಗಳನ್ನರ್ಪಿಸಿ ಕೃತಜ್ಞರಾಗಿದ್ದಾರೆ.

ಪೂಜ್ಯ ಜಗದ್ಗುಗಳವರ ಹೃದಯ ಸರ್ವಧರ್ಮ ಸಮಾನತೆಯ ತತ್ವದ ತವರು. ಅಂತೆಯೇ ಎಲ್ಲದರಿಂದಲೂ ಹಿಂದುಳಿದವರೆಂದು ಪರಿಗಣಿಸಲ್ಪಟ್ಟ ಹರಿಜನರ ಉದ್ಧಾರದ

ಕಡೆಗೆ ಪೂಜ್ಯರು ಮನಸ್ಸು ಹಾಕಿ ಅವರನ್ನು ಸುಸಂಸ್ಕೃತರನ್ನಾಗಿ ಮಾಡಲು ಪರಿಶ್ರಮಿಸಿದರು ಹರಿಜನರ ಕೇರಿಗಳಿಗೆ, ಮನೆ-ಮನೆಗೆ ಹೋಗಿ ಅವರಿಗೆ ತಿಳಿ ಹೇಳಿ ಸ್ವಚ್ಛತೆ, ಶಿಸ್ತುಗಳನ್ನು ರೂಢಿಸಿಕೊಳ್ಳಲು ತಿಳಿಸಿ ಯಶಸ್ವಿಯಾದರು. ಅವರ ಧಾರ್ಮಿಕ-ಸಾಮಾಜಿಕ ಚಟುವಟಿಕೆಗಳಿಗಾಗಿ ವಿಪುಲ ಸಹಾಯ ಮಾಡಿದರು. ತನ್ಮೂಲಕ ಅವರ ಶ್ರದ್ಧೆ ನಿಷ್ಠೆಗಳಿಗೆ ಅನುಸರಿಸಿ ಅವರವರ ಮನೋಬಲ ಬೆಳೆಸಿದ್ದಾರೆ.

ಶ್ರೀ ಜಗದ್ಗುರುಗಳವರ ಧಾರ್ಮಿಕ-ಸಾಮಾಜಿಕ ಸಾಧನೆಗಳಲ್ಲಿ ಮತ್ತೊಂದು ಕ್ರಾಂತಿಕಾರಕ ಹೆಜ್ಜೆಯೆಂದರೆ ಈ ಶತಮಾನದಲ್ಲಿ ಮೊಟ್ಟ ಮೊದಲಿಗೆ ೧೬೩ ಗುರು-ವಿರಕ್ತರೊಂದಿಗೆ ಸ್ವತಃ ತಮ್ಮ ಉಪಸ್ಥಿತಿಯಲ್ಲಿ ಹುಬ್ಬಳ್ಳಿಯಿಂದ-ಶಿವಯೋಗಮಂದಿರದ ವರೆಗೆ ೧೯೭೪ ರಲ್ಲಿ ಸಹಸ್ರಾರು ಜನ ಸದ್ಭಕ್ತರೊಂದಿಗೆ ಕಾಲ್ನಡಿಗೆಯಿಂದಲೇ ಪಾದ ಯಾತ್ರೆ ಮಾಡಿದ್ದು ನಾಡಿನ ಧಾರ್ಮಿಕ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಿಡ ಬೇಕಾದುದು.

ವಿಜ್ಞಾನದ ಸೌಲಭ್ಯಗಳಿಂದಾಗಿ ಜಗತ್ತು ತೀರಾ ಚಿಕ್ಕದಾದಂತೆ, ಇಲ್ಲಿನ ಮಾನವರೂ ಸಂಕುಚಿತವೆಡೆಗೆ ಸಾಗುತ್ತಾ, ಬಾಳಿನಲ್ಲಿ ಶಾಂತಿ-ನೆಮ್ಮದಿಗಳಿಲ್ಲದೇ ತೊಳಲಾಡುತ್ತಿರುವಾಗ ಪೂಜ್ಯರು ಮನನೊಂದು, ಮರುಕ ಪಟ್ಟು ಈ ಶಾಂತಿ ನೆಮ್ಮದಿ ನೀಡುವೆಡೆ ಕಾರ್ಯ ಪ್ರವೃತ್ತರಾಗಿ ಯಶಸ್ವಿಯಾದರು. 'ಹಳ್ಳಿಯಿಂದಲೇ ಭಾರತ' ಎಂಬುದನ್ನರಿತ ಪೂಜ್ಯರು ಪಾದಯಾತ್ರೆಯ ದಾರಿಯಲ್ಲಿನ ಎಲ್ಲ ಹಳ್ಳಿಗಳಲ್ಲಿ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಜನಜಾಗೃತಿಗೈದರು. ಈ ಮಹಾನ್ ಪಾದಯಾತ್ರೆ ಅತ್ಯಂತ ವೈಭವದೊಂದಿಗೆ ಮಲಪಹಾರಿಯ ಪುಣ್ಯ ತಟಾಕದ ಶ್ರೀ ಶಿವಯೋಗ ಮಂದಿರದ ಗುರು ಕುಮಾರೇಶನ ಪುಣ್ಯ ಪಾವನ ಭೂಮಿಯಲ್ಲಿ ಮಂಗಲವಾಯಿತು.

ಲಿಂ. ಹಾನಗಲ್ಲ ಸದಾಶಿವ ಮಹಾಸ್ವಾಮಿಗಳವರು ಶಿವಯೋಗ ಮಂದಿರದ ಏಳ್ಗೆಗಾಗಿ ದುಡಿದವರು. ಅವರ ವಜ್ರ ಮಹೋತ್ಸವವನ್ನು ಶ್ರೀ ಜಗದ್ಗುರುಗಳವರು ಶಿವಯೋಗ ಮಂದಿರದಲ್ಲಿ ಸಾರ್ಥಕವಾಗಿ ಜರುಗಿಸಿ, ಅದರ ಸಂಸ್ಮರಣೆಯಲ್ಲಿ 'ಸಂಸ್ಮರಣ ಗ್ರಂಥ' ಹಾಗೂ ಕುಮಾರೇಶ್ವರರ ಹೆಸರಿನಲ್ಲಿ ಗದ್ದುಗೆ ಪೂಜಾ ಸೇವಾ ಸಮಿತಿಯನ್ನು ಸ್ಥಾಪಿಸಿದರು.

ಶ್ರೀ ಸದಾಶಿವಸ್ವಾಮಿಗಳೆಂದರೆ ಜಗದ್ಗುರುಗಳಿಗೆ "ಅವರು ಶ್ರೀ ಕುಮಾರೇಶ್ವರನ ಸ್ಥಾನದಲ್ಲಿದ್ದಾರೆಂದ ಮೇಲೆ ಅವರ ಸೇವೆ ನಮ್ಮ ಧರ್ಮ" ಎಂಬ ನಂಬಿಕೆ. ಈ ವಜ್ರ ಮಹೋತ್ಸವದ ಸಂಬಂಧವಾಗಿ ಸಂಗ್ರಹಿಸಿದ ಹಣವನ್ನು ಕೇವಲ ಸಭೆ-ಸಮಾರಂಭಗಳಿಗೆ ಬಳಸದೇ-ಶಿವಯೋಗ ಮಂದಿರದಲ್ಲಿ ದಾಸೋಹ ಪ್ರಸಾದ ಮಂದಿರ 'ಅತಿಥಿಗೃಹ' ಹಾಗೂ ಉಳಿದ ಕಟ್ಟಡಗಳಿಗೆ ವಿನಿಯೋಗಿಸಲಾಯಿತು. ಇದು ಪೂಜ್ಯರು ಸಮಾಜದ ಬಗೆಗೆ ಇರಿಸಿಕೊಂಡ ದೂರದೃಷ್ಟಿಯ ಸಂಕೇತ.

ಮೂರುಸಾವಿರಮಠದ ಒಂದಿನ ಜಗದ್ಗುರುಗಳಾದ ಲಿಂ. ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರ, ಘಟಪ್ರಭೆಯಲ್ಲಿ ಆಸ್ಪತ್ರೆ ಸ್ಥಾಪಿಸುವ ಕನಸನ್ನು ಇಂದಿನ ಜಗದ್ಗುರುಗಳು ನನಸಾಗಿಸಿ ಅವರ ಆತ್ಮಕ್ಕೆ ಶಾಂತಿ ಸಿಗುವಂತೆ ಮಾಡಿದರು. ಆಸ್ಪತ್ರೆಯನ್ನು ಎಲ್ಲ ವಿಧಗಳಿಂದ ಸುಸಜ್ಜಿತವಾಗಿ, ಸುವ್ಯವಸ್ಥೆಗೊಳಿಸುವಲ್ಲಿ ಶ್ರಮಿಸಿದರು.

ಪೂಜ್ಯ ಜಗದ್ಗುರುಗಳವರದು "ದೈವೀಯ ಅತೃಪ್ತಿಯ" ಮನಸ್ಸು. ಅದಕ್ಕೆಂದೇ ಅವರು ಕೇವಲ ಆಸ್ಪತ್ರೆಯನ್ನು ನಡೆಸುವುದರಿಂದಲೇ ತೃಪ್ತರಾಗದೇ ಅಲ್ಲಿ ಇನ್ನೊಂದು ವಿನೂತನ ಹೆಜ್ಜೆಯನ್ನಿರಿಸಿ ಅಲ್ಲಿ ಶುಶ್ರೂಷೆಗೆಂದು ಬರುವ ಬಡ ರೋಗಿಗಳಿಗೆ ಪೌಷ್ಟಿಕ ಆಹಾರದ ಕೊರತೆಯನ್ನು ಮನಗಂಡು ಅಲ್ಲೊಂದು "ಬಡರೋಗಿಗಳ ಉಚಿತ ಪ್ರಸಾದ ನಿಲಯ"ವನ್ನು ೧೯೮೩ ರಲ್ಲಿ ಸ್ಥಾಪಿಸಿದರು. ಇಂದು ಈ ಪ್ರಸಾದ ನಿಲಯದಲ್ಲಿ ಉಚಿತ ವಾಗಿ ಪ್ರಸಾದ ಪಡೆಯುವ ರೋಗಿಗಳು ತುತ್ತಿಗೊಮ್ಮೆ ಪೂಜ್ಯರ ಹೆಸರನ್ನು ಸ್ಮರಿಸಿ, ಕೃತಜ್ಞತೆಯನ್ನರ್ಪಿಸುತ್ತಿದ್ದಾರೆ. ಪೂಜ್ಯರಿಗೆ ಅದನ್ನು ಕಂಡು ಅತ್ಯಂತ ಸಂತಸವಾಗಿದೆ. ತಮ್ಮ ಮಠಕ್ಕೆ ಸಂಬಂಧಿಸಿದ ಸುಮಾರು ೪೩ ಎಕರೆ ಜಮೀನು (ಯಾದವಾಡ) ಈ ಪ್ರಸಾದ ನಿಲಯದ ಅನ್ನ ವ್ಯವಸ್ಥೆಗಾಗಿ ಮೀಸಲಿರಿಸಿದ್ದಾರೆ. ಇತ್ತೀಚೆಗೆ ಭಕ್ತರೊಬ್ಬರು ದಾನವಾಗಿ ಕೊಟ್ಟ ಬಂಗ್ಲೆಯನ್ನು ಈ ಪ್ರಸಾದ ನಿಲಯಕ್ಕೆ ಕೊಟ್ಟಿದ್ದಾರೆ. ಅದರೊಂದಿಗೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜಗದ್ಗುರುಗಳೇ ಸ್ವತಃ ಭಿಕ್ಷೆ ಮಾಡಿ ರೋಗಿಗಳ ತುತ್ತಿನ ಚೀಲ ತುಂಬುವಲ್ಲಿ ಕೃತಾರ್ಥರಾಗಿದ್ದಾರೆ. ಅದಕ್ಕೆ ತಕ್ಕಂತೆ ಅಲ್ಲಿನ ಸದ್ಭಕ್ತರೆಲ್ಲ ಸೇರಿ ಪೂಜ್ಯರ ಈ ಮಾನವೀಯ ಸೇವೆಗೆ ಹೆಗಲು ಕೊಟ್ಟಿದ್ದಾರೆ. ಅಲ್ಲಿನ ಸಿಬ್ಬಂದಿಯವರೂ ಈ ಪುಣ್ಯಪ್ರದ ಕಾರ್ಯದಲ್ಲಿ ಅವಿರತ ಶ್ರಮಿಸುತ್ತಿದ್ದಾರೆ.

ಪೂಜ್ಯ ಜಗದ್ಗುರುಗಳವರು ತಮ್ಮ ಬದುಕಿನ ಎಲ್ಲ ಹಂತಗಳಲ್ಲೂ ವಿವಿಧ ಸಮಸ್ಯೆ ಕಷ್ಟ-ನಷ್ಟಗಳನ್ನು ಎದುರಿಸಿಕೊಂಡೇ ಬಂದವರು. ಅಂತೆಯೇ ಅವರಿಗೆ ತಮ್ಮ ಸುತ್ತ ಮುತ್ತಲಿನ ಜನತೆಯ ಸಮಸ್ಯೆಗಳೂ, ತೊಂದರೆಗಳೂ ಅತೀ ಹತ್ತಿರದಿಂದ ಗೋಚರವಾಗಿ ಅವುಗಳ ಪರಿಹಾರಕ್ಕೆ ಸತತ ಚಿಂತನೆ-ಪರಿಶ್ರಮ ವಹಿಸುತ್ತಾರೆ. ಪ್ರಜಾಪ್ರಭುತ್ವದ ಆರ್ಥಿಕ ಕಾರ್ಯ ನಿರ್ವಹಣೆಯಲ್ಲಿ ಸಹಕಾರವು ದೊಡ್ಡ ಸಾಧನವಾಗಿದೆ. ಇದನ್ನರಿತ ಪೂಜ್ಯರು, ತಮ್ಮ ಸಿದ್ಧರಾಮ ಕಾಯಕದಿಂದ ಆರ್ಥಿಕ ಸಂಪನ್ಮೂಲಗಳಿಗೆ ಒಂದು ಪ್ರತ್ಯೇಕ ಬ್ಯಾಂಕ್‌ನ ಅವಶ್ಯಕತೆಯನ್ನರಿತು ಅದರ ಸ್ಥಾಪನೆಗೆ ಮುಂದಾದರು. ಅದರಂತೆ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಹೆಸರಿನಲ್ಲಿ ೧೯೭೯ರಲ್ಲಿ ಒಂದು ಸಹಕಾರಿ ಬ್ಯಾಂಕನ್ನು ಸ್ಥಾಪಿಸಿ ಆರ್ಥಿಕ ಕ್ಷೇತ್ರದಲ್ಲಿ ಸಾಧನೆಗೈದರು.

ಇಂದು ಈ ಬ್ಯಾಂಕು ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಹಾಗೂ ಪೂಜ್ಯರ ಕೃಪೆ ಯಿಂದ, ದಿಗ್ದರ್ಶಕ ಮಂಡಳಿ, ಸಿಬ್ಬಂದಿ ವರ್ಗದವರ ಪರಿಶ್ರಮದಿಂದ ಸುಮಾರು ೨೫೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಮೊತ್ತದ ವ್ಯವಹಾರ ಹಾಗೂ ಒಂದೆರಡು

ಶಾಖೆಗಳನ್ನೂ ಸ್ಥಾಪಿಸುವತ್ತ ಭರದಿಂದ ಮುನ್ನಡೆದದ್ದನ್ನು ನೋಡಿದರೆ ಪೂಜ್ಯರು ಕೈ ಹಾಕಿದ ಕೆಲಸಗಳ ಯಶಸ್ವಿಯು ಬಗ್ಗೆ ತಿಳಿಯುತ್ತದೆ.

ಜಾತ್ಯಾತೀತ ರಾಷ್ಟ್ರ ನಮ್ಮದೆಂದು ಹೇಳಿಕೊಂಡು ಬೀಗುತ್ತಿರುವ ನಮ್ಮಲ್ಲಿ ಆಗಾಗ ಜಾತಿಯ ಹೆಸರಿನಲ್ಲಿ ಪರಿಸ್ಥಿತಿ ತ್ವೇಷಮಯವಾಗುತ್ತಿದೆ. ೧೯೭೮ರಲ್ಲಿ ಹುಬ್ಬಳ್ಳಿಯು ಇಂತಹವುದೇ ಒಂದು ಪರಿಸ್ಥಿತಿಯಲ್ಲಿ ಸಿಲುಕಿ, ಹಿಂದೂ-ಮುಸ್ಲಿಂರಲ್ಲಿ ದ್ವೇಷವುಂಟಾಗಿ ಜನಸಾಮಾನ್ಯರ ಬದುಕಿನ ಅಧ್ಯಾಯಗಳಿಗೆ ಕರಾಳ ಛಾಯೆ ಕವಿಯಿತು. ಈ ಅಂಧಕಾರ ವನ್ನು ತೊಲಗಿಸಲೆಂದೇ ಪೂಜ್ಯ ಜಗದ್ಗುರುಗಳ ಶಾಂತಿ ರವಿಯಾಗಿ ಉದಿಸಿ ಬಂದು, ಪರಸ್ಪರರಲ್ಲಿದ್ದ ಮನದ ಕಾಳಿಕೆಯನ್ನು ಕಳೆಯುವಲ್ಲಿ ಯಶಸ್ವಿಯಾದರು. ಅಂದು ಎಲ್ಲಿ ನೋಡಿದಲ್ಲಿ ಹಾಹಾಕಾರ, ಬೆಂಕಿ, ಕೊಲೆ-ಸುಲಿಗೆ, ಲೂಟಿಗಳೇ ತಾಂಡವವಾಡುತ್ತಿದ್ದಾಗ ಪೂಜ್ಯರು ಶಾಂತಿಯ ಮಳೆಗರೆದು ಎಲ್ಲರನ್ನೂ ಸಮಾಧಾನಪಡಿಸಿ ಸುಮಧುರ ಬಾಂಧವ್ಯ ವನ್ನೇರ್ಪಡಿಸಿ ಸಮಾಜೋನ್ನತಿಗೆ ಕಾರಣರಾದರು. ಪರಸ್ಪರರಲ್ಲಿ, ಸರ್ವಧರ್ಮದವರಲ್ಲಿ ಬಾಂಧವ್ಯವನ್ನು ಗಟ್ಟಿಯಾಗಿ ಹೊಸೆಯುವ ಪಣ ತೊಟ್ಟು ಕಾರ್ಯೋನ್ಮುಖರಾದರು. ಅನೇಕ ಅಡ್ಡಿ ಆತಂಕ, ವೈಮನಸ್ಸುಗಳಿದ್ದರೂ ಎದೆಗುಂದದೇ ಇದರಲ್ಲಿ ಯಶಸ್ವಿಯಾದರು. ಇದೊಂದು ಪವಾಡ ಸದೃಶ ಕಾರ್ಯದಂತಾಗಿ, ಇತಿಹಾಸದ ಪುಟಗಳಲ್ಲಿ ಎಂದೆಂದಿಗೂ ಅಜರಾಮರವಾಗುವಂತಾಗಿದೆ.

ಈ ಅಸಮಾನ್ಯ ಕಾರ್ಯಕ್ಕಾಗಿ ಪೂಜ್ಯರಿಗೆ ಎಲ್ಲೆಡೆಗಳಿಂದ, ಎಲ್ಲರಿಂದ ಪ್ರಶಂಸೆಯ ನುಡಿಗಳು ಬಂದವು. ಸರ್ವ ಮತೀಯರಲ್ಲಿ ಬಾಂಧವ್ಯವನ್ನುಂಟು ಮಾಡಿದ್ದು ಪೂಜ್ಯರು ಗೈದ ಒಂದು ಮಹಾನ್ ಕಾರ್ಯ. ಯಾವ ಸರಕಾರಕ್ಕೂ, ಕಟ್ಟಾಜ್ಞೆಗಳಿಗೂ ಜಗ್ಗದ ಪಾಶವೀ ಕೃತ್ಯಗಳು, ಒಬ್ಬ ಮಠಾಧೀಶರ ಶಾಂತಿ ಸಂದೇಶದಿಂದ ತಕ್ಷಣವೇ ನಿಂತು ಬಿಟ್ಟವು. ಅಂದು ಗಾಂಧಿ, ಬುದ್ಧ, ಏಸು, ಪೈಗಂಬರ, ಮಹಾವೀರ, ಬಸವಣ್ಣನವರು ಹೇಳಿದ್ದನ್ನೇ ಇಂದು ಜಗದ್ಗುರುಗಳು ಮಾಡಿ ತೋರಿಸಿದರು.

ಪೂಜ್ಯ ಜಗದ್ಗುರುಗಳವರ ಬದುಕಿನ ಅತ್ಯಂತ ಮಹೋನ್ನತ ಸಾಧನೆಯಾದ ಈ ಶಾಂತಿಸಂದೇಶದ ಫಲವಾಗಿ ಇಂದಿಗೂ ಹುಬ್ಬಳ್ಳಿಮಹಾನಗರದಲ್ಲಿ ಯಾವುದೇ ಹಬ್ಬ-ಧಾರ್ಮಿಕ ಆಚರಣೆಗಳಿರಲಿ, ಅಲ್ಲಿ ಯಾವುದೇ ಭೇದ, ಭಾವಗಳಿಲ್ಲದೆ ಸಮರಸ ಜೀವನ ಕಂಡು ಬರುತ್ತಲಿರುವದು ಎಲ್ಲರಿಗೂ ಸಂತಸದ ಹೆಮ್ಮೆಯ ಸಂಗತಿಯಾಗಿದೆ. ಶ್ರೀ ಜಗದ್ಗುರುಗಳೊಂದಿಗೆ ಈ ಕಾರ್ಯದಲ್ಲಿ ಭಾಗಿಗಳಾದ ಸರಕಾರ, ಸದ್ಭಕ್ತರೆಲ್ಲರೂ ಇಲ್ಲಿ ಸ್ಮರಣೀಯರು.

ನಮ್ಮ ನಾಡಿನ ಎಲ್ಲ ರಂಗಗಳಲ್ಲೂ ಮಠಗಳು ಹಿಂದಿನಿಂದಲೂ ಘನಸೇವೆ ಸಲ್ಲಿಸುತ್ತ ಬಂದಿವೆ. ಈ ಮಠಗಳ ಉದ್ಧಾರವನ್ನೇ ಧ್ಯೇಯವಾಗಿರಿಸಿಕೊಂಡ ಪೂಜ್ಯ ಜಗದ್ಗುರುಗಳು ಕೇವಲ ತಮ್ಮ ಪೀಠದ ಬೆಳವಣಿಗೆಯ ಸ್ವಾರ್ಥವನ್ನು ನೋಡದೇ, ಇತರೆ ಮಠಗಳಿಗೂ ಉದ್ಧಾರ ಬಯಸಿ, ಆಯಾ ಮಠಗಳಲ್ಲಿನ ಸಮಸ್ಯೆಗಳನ್ನೆಲ್ಲ ಬಗೆಹರಿಸಿ ಅಲ್ಲಿ ಪಟ್ಟಾಭಿಷೇಕ

ಮಹೋತ್ಸವಗಳನ್ನು ಜರುಗಿಸಲು ಸ್ವತಃ ಓಡಾಡಿ ಉತ್ತರಾಧಿಕಾರಿಗಳನ್ನು ನಿಯಮಿಸಿದರು. ಈ ತೆರನಾಗಿ ಪೂಜ್ಯರು ಈ ಎಲ್ಲ ಪಟ್ಟ ಮಹೋತ್ಸವಗಳಿಗೂ ಗಟ್ಟಿ ತಳಹದಿ ಹಾಕಿದರೆಂದೇ ಹೇಳಬಹುದು.

ಹುಬ್ಬಳ್ಳಿ ಮಹಾನಗರವು ಕರ್ನಾಟಕದ ಎರಡನೆಯ ದೊಡ್ಡ ಪಟ್ಟಣ. ವ್ಯಾಪಾರೋದ್ಯಮ ಬ್ಯಾಂಕ್, ಶಾಲೆ–ಕಾಲೇಜು, ಹೀಗೆ ದುಡಿಮೆಯ ಅವಕಾಶಗಳು ದಿನೇ ದಿನೇ ಹೆಚ್ಚುತ್ತಲಿವೆ. ಹೊರಗಿನಿಂದ ಹುಬ್ಬಳ್ಳಿಗೆ ಬಂದು ಉದ್ಯೋಗ ಮಾಡುತ್ತಿರುವ ಮಹಿಳೆಯರಿಗಾಗಿ ವಾಸಕ್ಕೆಂದು ವಸತಿ ಗೃಹಗಳು ಇಲ್ಲದ್ದನ್ನು ಕಂಡು ಪೂಜ್ಯರು ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ ಗೃಹವೊಂದನ್ನು ಸ್ಥಾಪಿಸಿದರು. ಸರ್ಕಾರದ ಸಹಾಯದೊಂದಿಗೆ ಈ ವಸತಿ ಗೃಹವಿಂದು ಬೆಂಡಿಗೇರಿ ಓಣಿಯಲ್ಲಿರುವ ಶ್ರೀಮತಿ ಚೆನ್ನಬಸವ್ವ ಸಿದ್ದಪ್ಪ ಬೆಂಡಿಗೇರಿ ಇವರು ದಾನವಾಗಿ ಕೊಟ್ಟ ಜಾಗೆಯಲ್ಲಿ ಲಕ್ಷಾಂತರ ರೂಪಾಯಿ ವೆಚ್ಚದಿಂದ ನಿರ್ಮಾಣವಾಗಿ, ಸುವ್ಯವಸ್ಥಿತವಾಗಿ ವಸತಿ ಸೌಲಭ್ಯಗಳನ್ನು ಹೊಂದಿವೆ.

ನಾಡಿನಲ್ಲಿನ ಸತತ ಬರಗಾಲದಿಂದಾಗಿ ರೈತರು ತಮ್ಮ ದನಕರುಗಳನ್ನು ಕಟುಕರಿಗೆ ಮಾರುವ ಪ್ರಸಂಗವೊದಗಿ ಬಂದಾಗ ಪೂಜ್ಯರು ಮುಂದಾಗಿ, ಭಕ್ತರ ಸಹಾಯ–ಸಹಕಾರಗಳೊಂದಿಗೆ, ಗೋರಕ್ಷಣಾ ಸೇವಾ ಸಮಿತಿಯೊಂದನ್ನು ಸ್ಥಾಪಿಸಿ, ಲಕ್ಷಾಂತರ ರೂಪಾಯಿ ಹಣ ಸೇರಿಸಿ ಜಾನುವಾರುಗಳಿಗೆ ಮೇವು–ನೀರು ವಸತಿ ಸೌಲಭ್ಯ ಮಾಡಿದರು. ಇದು ಪೂಜ್ಯರಿಗಿದ್ದ ಪ್ರಾಣಿ ದಯೆಗೆ ಸಾಕ್ಷಿಯಾಗಿದೆ. ಮೂಕ ಪ್ರಾಣಿಗಳ ಹಿಂಸೆಯನ್ನು ತಡೆದು ಅವುಗಳಿಗೆ ಜೀವ ದಾನ ಮಾಡಿದ ಭಾಗ್ಯ ಪೂಜ್ಯ ಜಗದ್ಗುರುಗಳವರದಾಗಿದೆ.

ಪೂಜ್ಯ ಜಗದ್ಗುರುಗಳವರ ಜನ್ಮ ಸ್ಥಳವು ಹಾಸನ ಜಿಲ್ಲೆಯ ನಿಸರ್ಗದ ತೌರಾದ ಶಶಿವಾಳ ಗ್ರಾಮ. ಚಿತ್ತರಗಿಯ ಚಿಜ್ಜ್ಯೋತಿ ಇಲಕಲ್ಲ ವಿಜಯ ಮಹಾಂತೇಶ್ವರರ ಜನ್ಮ ಸ್ಥಳವೂ ಇದೇ ಆಗಿದೆ. ಶಶಿವಾಳದ ಜನತೆಯ ಬಹು ದಿನಗಳ ಬೇಡಿಕೆಯಂತೆ ಪೂಜ್ಯರು ಅಲ್ಲೊಂದು ಆಸ್ಪತ್ರೆಯನ್ನು ತೆರೆದು, ಮಾನವೀಯ ಸೇವೆಗೈಯುವಲ್ಲಿ ಮುಂದಾದರು. ಅದಕ್ಕೆಂದು ಸಹಸ್ರಾರು ರೂಪಾಯಿಗಳನ್ನು ಸಲ್ಲಿಸಿ ಕೃತಾರ್ಥರಾದರು. ಈ ಆಸ್ಪತ್ರೆಯನ್ನು ಕಟ್ಟುವ ಕಾರ್ಯವೀಗ ನಡೆದಿದ್ದು ಪೂಜ್ಯರ ಇಚ್ಛೆ ನೆರವೇರಲಿದೆ.

ಪೂಜ್ಯ ಜಗದ್ಗುರುಗಳ ಬಹು ದಿನಗಳ ಕನಸೊಂದು ನನಸಾಗುವತ್ತ ನಡೆದದ್ದು ಅವರಿಗೆ, ಸದ್ಭಕ್ತ ಜನರಿಗೆ ಸಂತಸವನ್ನುಂಟು ಮಾಡಿದೆ. ಅದೇ ಶ್ರೀ ಜಗದ್ಗುರು ಗುರು ಸಿದ್ಧೇಶ್ವರ ಕಲ್ಯಾಣ ಮಂಟಪ ಹಾಗೂ ವೀರಶೈವ ಸಂಶೋಧನ ಮಂದಿರ, ಈಗಾಗಲೇ ಮೂರುಸಾವಿರಮಠದಲ್ಲಿ ಚಿಕ್ಕದೊಂದು ಕಲ್ಯಾಣ ಮಂಟಪವಿದ್ದು ಅದರ ಉಪಯೋಗವಾಗುತ್ತಲಿದೆ. ನಗರದ ಮಧ್ಯವರ್ತಿಯ ಸ್ಥಳದಲ್ಲೊಂದು ಭವ್ಯ ಕಲ್ಯಾಣ ಮಂಟಪದ ಅಗತ್ಯವನ್ನರಿತ ಪೂಜ್ಯರು ಅದಕ್ಕಾಗಿ ತಮ್ಮ ಮಠದಿಂದ ಹಾಗೂ ಸದ್ಭಕ್ತ ಜನರಿಂದ ಲಕ್ಷಾಂತರ ಹಣ ಸಂಗ್ರಹಿಸಿ ಆ ಕಟ್ಟಡವನ್ನು ಕಟ್ಟಿಸುವಲ್ಲಿ ನಿರತರಾಗಿದ್ದಾರೆ. ಅವರದು ಅಹರ್ನಿಶಿ ದುಡಿತದ ಜೀವ. ಆ ಕಟ್ಟಡದ ಮೇಲ್ವಿಚಾರಣೆಗಾಗಿ, ಅವರು ಹಗಲಿರುಳು

ಶ್ರಮಿಸಿ, ಸ್ವತಃ ತಾವೇ ನಿಂತು ಕಟ್ಟಡದ ಐದು ಅಂತಸ್ತುಗಳನ್ನು ಪೂರ್ಣಗೊಳಿಸುವಲ್ಲಿ ನಿರತರಾಗಿದ್ದಾರೆ.

ಈ ಕಟ್ಟಡಕ್ಕಾಗಿ ಮೂರುಸಾವಿರಮಠದ ಶಾಖಾ ಮಠವಾದ ಪುರಾತನ ಓಲೆ ಮಠವನ್ನು ತೆಗೆಯಿಸಿ ಅದರ ಜಾಗೆಯಲ್ಲಿ ಕಲ್ಯಾಣ ಮಂಟಪ ಹಾಗೂ ಶ್ರೀ ಉಳವಿ ಚೆನ್ನಬಸವೇಶ್ವರರ ಹೆಸರಿನಲ್ಲಿ "ವೀರಶೈವ ಸಂಶೋಧನ ಕೇಂದ್ರ"ವನ್ನು ಪ್ರಾರಂಭಿಸಲು ಯೋಜಿಸಲಾಗಿದೆ.

"ವೀರಶೈವ ಸಂಶೋಧನ ಕೇಂದ್ರ" ಪೂಜ್ಯರ ಬಹು ದಿನದ ಮಹದಾಶೆಯಾಗಿದ್ದು, ಇನ್ನು ಕೆಲವೇ ದಿನಗಳಲ್ಲಿ ಕಾರ್ಯ ಪ್ರಾರಂಭಿಸಲಿದೆ. ಸಮಗ್ರ ವೀರಶೈವ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿಡುವ ಬೃಹತ್ಕಾರ್ಯ ಅಲ್ಲಿ ಜರುಗುತ್ತದೆ. ಈ ಸಂಶೋಧನ ಕೇಂದ್ರವು ನಾಡಿನಲ್ಲೇ ಪ್ರಪ್ರಥಮವಾಗಿದ್ದು, ಪೂಜ್ಯರ ಪರಿಶ್ರಮದಿಂದ ಸರ್ವಾಂಗ ಸುಂದರಗೊಳ್ಳಲಿದೆ.

ಈ ತೆರನಾಗಿ ಪರಮಪೂಜ್ಯರ ಧಾರ್ಮಿಕ ಹಾಗೂ ಸಾಮಾಜಿಕ ಸಾಧನೆಗಳಲ್ಲಿ ಅವರ ಹಿರಿದಾದ ತ್ಯಾಗ, ಮಮತೆಗಳ ಪುಣ್ಯ ಸಂಗಮವಿದೆ. ಸಮಾಜಕ್ಕಾಗಿ ಗಡಿಯಾರದಂತೆ ಸದಾ ಕ್ರಿಯಾಶೀಲರಾಗಿರುವ ಶ್ರೀ ಜಗದ್ಗುರುಗಳವರು ಈ ನಾಡಿನ ಒಂದು ವ್ಯಕ್ತಿಯಲ್ಲ, ಅನೇಕ ಶಕ್ತಿಗಳ ಸಂಗಮ ಹಾಗೂ ದೇಶದ ಮಹಾಭಾಗ್ಯ.

ಶ್ರೀ ಜಗದ್ಗುರು ಮಹಾಸನ್ನಿಧಿಯವರು ಗೈದ ಸಾಹಿತ್ಯ ಕ್ಷೇತ್ರದಲ್ಲಿನ ಸಾಧನೆಗಳು (೧೯೭೨-೧೯೮೭)

ಸಾಹಿತ್ಯಕ್ಕೂ ಪೂಜ್ಯ ಜಗದ್ಗುರುಗಳವರಿಗೂ ಹಿಂದಿನಿಂದಲೂ ಬಿಡಿಸಲಾರದ ನಂಟು. ಸಾಹಿತ್ಯಾಸಕ್ತರಾಗಿ ಸ್ವತಃ ಸಾಹಿತ್ಯ ರಚನಾಕಾರರಾಗಿ ಪೂಜ್ಯರು ಶಿವಯೋಗ ಮಂದಿರದ ಪುಣ್ಯ ಪರಿಸರದಲ್ಲಿ, ನಿಸರ್ಗದ ಮಡಿಲಲ್ಲಿ, 'ಸುಕುಮಾರ' ಕೈಬರಹ ಮಾಸ ಪತ್ರಿಕೆ ಹೊರಡಿಸುವಲ್ಲಿ ಮುಂದಾದರು. ಸಂಸ್ಕೃತದ ಉಚ್ಚ ಶಿಕ್ಷಣದೊಂದಿಗೆ ಕಾಶಿಯಲ್ಲಿ ಕೆಲವು ಪತ್ರಿಕೆಗಳಿಗೆ ಆಗಾಗ ಸಣ್ಣ ಲೇಖನ, ಕವನ ಬರೆಯುತ್ತಿದ್ದರು. ಆಗ ಅವರೊಬ್ಬ ಸುಂದರ ಚಿತ್ರ ಕಲಾವಿದರೂ ಆಗಿದ್ದರೆಂಬುದು ಇಲ್ಲಿ ಗಮನಾರ್ಹ. ಅವರ ಅಂತರಂಗವು ಶಿವಾನುಭವ, ಕಾವ್ಯಾನುಭವಗಳ ಸ್ಪಂದನಗಳ ಮಿಡಿತವಾಗಿದೆ.

ಈಗಾಗಲೇ ಪೂಜ್ಯರು ಸುಮಾರು ೨೫ ಗ್ರಂಥಗಳನ್ನು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆದು ಸಾಹಿತ್ಯ ಶಾರದೆಯ ಉಡಿ ತುಂಬಿದ್ದಾರೆ. ಅವರ ಇತ್ತೀಚಿನ ರಚನೆಗಳಾದ "ಪೂರ್ಣಜ್ಞಾನ ವಚನಗಳು" ಅವರ ಸಾಹಿತ್ಯ ಜೀವನದಲ್ಲಿ ಒಂದು ವಿಶಿಷ್ಟವಾದ ಸ್ಥಾನ ಪಡೆದಿವೆ. ತಾವು ಸ್ವತಃ ಲೇಖಕ-ಕವಿಗಳಾಗಿ ಅನುಭವವಿರುವುದರಿಂದಲೇ ಅವರ ಸಾಹಿತ್ಯಕ ಸಾಧನೆಗಳೂ ವೈಶಿಷ್ಟ್ಯಪೂರ್ಣವಾಗಿವೆ. ಅಂತೆಯೇ ಅವರು ಸಾಹಿತ್ಯ ಸೂರ್ಯರೆಂದರೆ ಅತಿಶಯೋಕ್ತಿಯಲ್ಲ.

"ವೀರಶೈವ ಭಾರತಿ" ಎಂಬ ಪುಸ್ತಕ ಮಾಲೆಯು ಪೂಜ್ಯರ ಸಾಹಿತ್ಯಕ ಚಟುವಟಿಕೆಗಳಲ್ಲಿ ಒಂದು ಮೈಲುಗಲ್ಲು. ಸಾಹಿತ್ಯ ಪ್ರಸಾರಕ್ಕೆಂದೇ ಸ್ಥಾಪಿತವಾದ ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳ (ಜೆ.ಜಿ.ಡಿ.ಪಿ.ಎಂ.) ವತಿಯಿಂದ ಚಿಕ್ಕಮಕ್ಕಳ ಮನೋವಿಕಾಸಕ್ಕಾಗಿ ಸುಂದರ ಮುಖಪುಟಗಳಿಂದ ಹಾಗೂ ಆಕರ್ಷಕ ಚಿತ್ರಗಳಿಂದ ಕೂಡಿದ ಚಿಕ್ಕ ಚಿಕ್ಕ ಚರಿತ್ರಾಂಶ ಪುಸ್ತಕಗಳೇ ಈ "ವೀರಶೈವ ಭಾರತಿ" ನಾಡಿನ ಗಣ್ಯ ಸಾಹಿತಿಗಳನೇಕರ ಸಲಹೆ-ಮಾರ್ಗದರ್ಶನ-ಕರ್ತವ್ಯ ನಿಷ್ಠೆಗಳಿಂದ, ಇಂದು ಈ ಸಂಪುಟದಡಿ ೫೦ಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿ ನಮ್ಮ ಚಿಣ್ಣರ ಕೈಸೇರಿವೆ. ಮಕ್ಕಳ ಅಂತರಂಗದ ಕೋಮಲ ಮೊಗ್ಗುಗಳನ್ನು ಸುವಾಸನಭರಿತ ಪುಷ್ಪಗಳನ್ನಾಗಿ ಅರಳಿಸುವತ್ತ, ಈ ಚಿಕ್ಕ ಹೊತ್ತಿಗೆಗಳ ಸಾಧನೆ ನಿಜಕ್ಕೂ ಅಭಿನಂದನೀಯ.

ಪೂಜ್ಯರು ಸುಂದರ ಸಾಹಿತ್ಯಾರಾಧಕರು. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಗುಣಮಟ್ಟವನ್ನೆತ್ತರಿಸಲು ಪೂಜ್ಯರು "ಗ್ರಂಥ ಪುರಸ್ಕಾರ" ಸಮಿತಿಯೊಂದನ್ನು ಸ್ಥಾಪಿಸಿ ತನ್ಮೂಲಕ ಆಯಾ ವರ್ಷದ ಸಾಹಿತ್ಯದ ವಿವಿಧ ಪ್ರಕಾರದ ಅತ್ಯುತ್ತಮವೆಂದು ಪರಿಗಣಿಸಿದ ೬ ಗ್ರಂಥಗಳಿಗೆ ತಲಾ ಒಂದೊಂದು ಸಾವಿರ ರೂಪಾಯಿಗಳು ಹಾಗೂ ಪ್ರಶಸ್ತಿ ಪತ್ರ ವಿತರಿಸುತ್ತಾ ಬಂದಿದ್ದಾರೆ. ಸಾಹಿತ್ಯಕ್ಕೆ ಈ ರೀತಿ ಪ್ರೋತ್ಸಾಹಿಸುತ್ತಿರುವ ಪೂಜ್ಯರ ಸಾಹಿತ್ಯ ಪ್ರೇಮ ಅನುಕರಣೀಯ.

ಶ್ರೀ ಮೂರುಸಾವಿರಮಠದ ಸರ್ವಾಂಗೀಣ ಪ್ರಗತಿಗಾಗಿ ಅವಿರತ ಶ್ರಮಿಸುತ್ತಿರುವ ಪರಮ ಪೂಜ್ಯರು ಸಾಹಿತ್ಯಕ ಹಾಗೂ ಧಾರ್ಮಿಕ ಗ್ರಂಥಗಳನ್ನು ಪ್ರಕಟಿಸುವಲ್ಲಿ ನಿರತರಾಗಿದ್ದಾರೆ. ತಾವು ಸ್ವತಃ ಗ್ರಂಥ ರಚಿಸುವುದಲ್ಲದೇ, ನಾಡಿನ ಅನೇಕ ಕಿರಿಯ ಹಿರಿಯ ಕವಿ ಲೇಖಕರಿಗೆ ಸಾಹಿತ್ಯ ರಚಿಸಲು ತಿಳಿಸಿ, ಅವರ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಕೇವಲ ಕನ್ನಡದಲ್ಲಷ್ಟೇ ಅಲ್ಲದೇ ಹಿಂದಿ, ಸಂಸ್ಕೃತ, ಮರಾಠಿ, ಇಂಗ್ಲೀಷ ಬೆಂಗಾಲಿ, ತೆಲಗು, ತಮಿಳು ಮುಂತಾದ ಭಾಷೆಗಳಲ್ಲಿನ ಸಾಹಿತ್ಯ ರಚನೆಗೆ ಕಾರಣರಾಗಿದ್ದಾರೆ. ಇದಕ್ಕೆ ಸದ್ಭಕ್ತರ ಸಹಾಯವೂ ಇದೆ. ಜೆ.ಜಿ.ಡಿ.ಪಿ.ಎಂ.ನ ಮುಖಾಂತರ ಗಮ್ಯ ಗುರಿಯನ್ನು ಸಾಧಿಸಿ ಜ್ಞಾನಾನುಭವ ಪ್ರದೀಪ ಪ್ರಕಾಶಿಸುವಂತಹ ಸಕ್ರಿಯಾಶೀಲತೆಯನ್ನು ಪಡೆದು ಸಾಹಿತ್ಯ ಕ್ಷೇತ್ರದ ಶಕ್ತಿಯನ್ನು ಬಲಪಡಿಸಿದ್ದಾರೆ.

ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥ ಮಾಲೆಯ ಮೂಲಕ ವಿಶೇಷ ಪ್ರಚಾರೋಪನ್ಯಾಸ ಮಾಲೆಗಳ ಉಪನ್ಯಾಸಗಳನ್ನು ಚಿಕ್ಕ ಚಿಕ್ಕ ಹೊತ್ತಿಗೆಯ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಶರಣ ಸಾಹಿತ್ಯ, ಸಂಶೋಧನಾ ಸಾಹಿತ್ಯ, ಜಾನಪದ ಹೀಗೆ ಸಾಹಿತ್ಯದ ಹಲವು ಪ್ರಕಾರಗಳ ಪ್ರಕಟಣೆಯಾಗುತ್ತಲಿವೆ. ಇದರೊಂದಿಗೆ ತಜ್ಞರಿಂದ ಪ್ರಾಚೀನ ತಾಡೋಲೆಗಳ ಸಂಶೋಧನ ಕಾರ್ಯವೂ ನಡೆದಿವೆ. ಅವಕ್ಕಾಗಿ ಸಂಶೋಧನ ಮಂದಿರವೊಂದು ಕಟ್ಟಲ್ಪಡುತ್ತಲಿವೆ. ಇಷ್ಟರಲ್ಲೇ ಮೂರುಸಾವಿರಮಠದ ತ್ರಿಶತಕ ಗ್ರಂಥ ಮಹೋತ್ಸವವೂ ಜರುಗಲಿರುವದು ಹೆಮ್ಮೆಯ ಸಂಗತಿ!

ಶ್ರೀ ಜಗದ್ಗುರುಗಳವರಿಗೆ ಎಡಬಿಡದ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸಮಸ್ಯೆಗಳ ಅಡೆತಡೆ ಇರದಿದ್ದಲ್ಲಿ ಅವರೊಬ್ಬ ಉದ್ದಾಮ ಸಾಹಿತಿಗಳಾಗುತ್ತಿದ್ದರು. ಅವರು ರಚಿಸಿದ ವಚನಗಳು, ತ್ರಿಪದಿಗಳು ಹೃದಯಸ್ಪರ್ಶಿಯಾಗಿವೆ. ಅವರ ಕೆಲವು ಗ್ರಂಥಗಳು ದ್ವಿತೀಯ ತೃತೀಯ ಮುದ್ರಣಗಳನ್ನು ಕಂಡಿವೆ. ಅವರ ಪೀಠಾರೋಹಣದ ರಜತ ಮಹೋತ್ಸವದ ಸಂಸ್ಮರಣೆಯಲ್ಲಿ ಕೇವಲ ಸಭೆ-ಸಮಾರಂಭ-ಮೆರವಣಿಗೆಗಳಿಗೆ ಮಹತ್ವ ಕೊಡದೇ ಒಂದು ವಿಶಿಷ್ಟ "ಸಾಹಿತ್ಯ ರಥ ಯಾತ್ರೆ" ಹೊರಡಿಸಿ ಬೀದರನಿಂದ ಮೈಸೂರವರೆಗೆ ಕರ್ನಾಟಕದ ವಿವಿಧ ಸ್ಥಳಗಳಲ್ಲಿ ವಿವಿಧ ಪ್ರಕಾರದ ಗ್ರಂಥ ಹಾಗೂ ೨೫ ವಚನ ಗ್ರಂಥಗಳನ್ನು ನಾಡಿನ ಹಿರಿ ಕಿರಿಯ ಲೇಖಕರಿಂದ ಸಂಪಾದನೆ ಮಾಡಿಸಿ ಬಿಡುಗಡೆ ಮಾಡಿಸಿದರು. ಶ್ರೀ ಜಗದ್ಗುರುಗಳವರು ಬರೆದ ಗ್ರಂಥಗಳ ಬಗ್ಗೆ ನಾಡಿನ ಗಣ್ಯ ಸಾಹಿತಿಗಳು ಸದಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಶ್ರೀ ಜಗದ್ಗುರುಗಳವರ ಹೆಮ್ಮೆಯ "ಪರಂಜ್ಯೋತಿ" ಮಾಸಪತ್ರಿಕೆಯು ನಾಡಿನ ಸಾಹಿತ್ತಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಾ ಪತ್ರಿಕಾ ರಂಗದಲ್ಲಿನ ಪೂಜ್ಯರ ಸಾಧನೆಗೆ ಸಾಕ್ಷಿಯಾಗಿ ನಿಂತಿದೆ. "ಪರಂಜ್ಯೋತಿ"ಯ ಹೆಚ್ಚುತ್ತಿರುವ ಪ್ರಸಾರ ಸಂಖ್ಯೆ ಇದಕ್ಕೆ ನಿದರ್ಶನವಾಗಿದೆ.

ಹೀಗೆ ಪರಮಪೂಜ್ಯರ ದ್ವಾದಶ ಪೀಠಾರೋಹಣ ಮಹೋತ್ಸವ (೧೯೬೨) ದಿಂದ ರಜತ ಮಹೋತ್ಸವದ (೧೯೭೫) ವರೆಗಿನ ಸಮಗ್ರ ಸಾಧನೆಗಳ, ಸಿಂಹಾವಲೋಕನ ಮಾಡಿದಲ್ಲಿ ಅವುಗಳ ವರ್ಣನೆಗೆ ಪುಟಗಳೇ ಸಾಲದಾದಾವು!

ಎತ್ತರಕ್ಕೆ ಏರಿದಂತೆ ಅನುಭವ ಗಟ್ಟಿಯಾಗುವಂತೆ ಪೂಜ್ಯಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳ ಜೀವನ ಪುಟಗಳು ಎಂದೆಂದಿಗೂ ಅನುಭವ ಪೂರ್ಣ. ಅವರು ಎಂದೆಂದಿಗೂ ದುಡಿಯುತ್ತಿರುವ ಮಾನವಯಂತ್ರ. ಈ ದೃಷ್ಟಿಯಿಂದ ಜಗದ್ಗುರುಗಳವರ ಬದುಕು ಕರ್ಮಯೋಗದ ಆಶಾಶೀಲ ಪುಷ್ಪ.

ಪೂಜ್ಯರ ಬೆಂಬಲಕ್ಕೆಯಾಗಿ ಅವರ ಸದ್ಭಕ್ತ ಜನತೆ, ಶ್ರೀ ಮಠದ ಸಿಬ್ಬಂದಿ ವರ್ಗ, ನಾಡಿನ ಗಣ್ಯರು, ಪ್ರಮುಖರೆಲ್ಲರೂ ಸಹಕರಿಸುತ್ತಾ ಬಂದಿದ್ದಾರೆ. 'ಅರವತ್ತರ ಅರುಹಿನ ಶಿಖರವನ್ನೇರುತ್ತಿರುವ ಪೂಜ್ಯರು ಇತ್ತೀಚಿತ್ತಲಾಗಿ ಅಂತರ್ಮುಖಿಗಳಾಗುತ್ತಿದ್ದಾರೆನ್ನಲೂ ಬಹುದು.

"ಶಿವನೊಬ್ಬನೇ ಸತ್ಯ" "LOVE IS GOD" ಎಂಬುವರಲ್ಲಿ ಅಚಲ ವಿಶ್ವಾಸವನ್ನಿರಿಸಿಕೊಂಡ ಪೂಜ್ಯರು ಈ ನಾಡಿನ ಒಂದು ಮಹಾಭಾಗ್ಯ. ಪುಣ್ಯ ವಿಶೇಷ. ಇಂತಹ ಪುಣ್ಯ ಪುರುಷರು ಜನ್ಮತಾಳಿ ಬಂದ ನಾಡು, ಪಡೆದ ಜನ ಧನ್ಯರು. ಇವರಿಂದಾಗಿ ಇಲ್ಲಿನ ನೆಲ-ಜಲ-ಗಾಳಿಗಳೂ ಧನ್ಯವಾಗುತ್ತವೆ. ಇಂತಹ ಮಹಾಪುರುಷರು ಈ ನಾಡಿನ ಏಳಿಗೆಗಾಗಿ ಸರ್ವತೋಮುಖವಾಗಿ ಶ್ರಮಿಸುತ್ತ ಬಂದಿರುವದು ನಮ್ಮೆಲ್ಲರಿಗೆ ಅತ್ಯಂತ ಅಭಿ

ಮಾನದ ವಿಷಯ. ಅವರು ಯಾವುದೇ ಕಟ್ಟುಪಾಡುಗಳಿಗೆ ಒಳಪಟ್ಟವರಲ್ಲ. ವಿಶಾಲ ಹೃದಯದ ಈ ಧೀಮಂತ ಪ್ರಾಜ್ಞ ಪುರುಷರು ಚೆನ್ನ ಚೆನ್ನಾಗಿ ನೂರ್ಕಾಲ ಬಾಳಿ ಬೆಳಗಲೆಂದು ನಾವೆಲ್ಲ ಹಾರೈಸೋಣ. ಬಸವನ ಭಕ್ತಿಯೋಗ, ಸಿದ್ಧರಾಮನ ಕರ್ಮಯೋಗ, ಪ್ರಭುವಿನ ಜ್ಞಾನಯೋಗಗಳು ಮೇಳವಿಸಿದಂತೆ ಈ ಪ್ರಾಜ್ಞ ಸಂಗಮದ ಹೃದಯ ಇಂದಿನಂತೆ ಕ್ರಿಯಾಶೀಲವಾಗಿ, ಸದಾ ಸ್ಪಂದನಶೀಲವಾಗಿರಲೆಂಬುದೇ ನಮ್ಮೆಲ್ಲರ ಬಯಕೆ. ಆ ದಿವ್ಯ ತೇಜೋಮೂರ್ತಿಯ ಪಾದ ಪದ್ಮಗಳಿಗೆ ಸಾಸಿರ ಸಾಸಿರ ನಮನಗಳು.

ಇಲಕಲ್ಲ ಶೈಕ್ಷಣಿಕ ಕ್ಷೇತ್ರಕ್ಕೆ
ಪೂಜ್ಯ ಜಗದ್ಗುರುಗಳವರ ಕೊಡುಗೆ

—ಬಾ. ಅ. ಬಿಜ್ಜಳ

ಹುಬ್ಬಳ್ಳಿ ಮೂರುಸಾವಿರಮಠದ ಜಗದ್ಗುರು ಮಹಾಸನ್ನಿಧಿಯವರು ಪುರಾತನ, ಸುಪ್ರಸಿದ್ಧ ಜಗದ್ಗುರು ಪೀಠವನ್ನಲಂಕರಿಸಿ ತಮ್ಮ ಚಟುವಟಿಕೆಗಳನ್ನು ಕೇವಲ ಧಾರ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತಗೊಳಿಸಲಿಲ್ಲ. ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ಆರೋಗ್ಯ ಮೊದಲಾದ ಅನೇಕ ಕ್ಷೇತ್ರಗಳಿಗೂ ತಮ್ಮ ಚಟುವಟಿಕೆಗಳನ್ನು ವಿಸ್ತರಿಸಿದ್ದಾರೆ. ಅವರ ಶಕ್ತಿ ಕಿರಣಗಳ ಮೂಲಕ ಬೆಳಕು ಕಂಡ ನಭೋಮಂಡಲ ವ್ಯಾಪಕವಾಗಿದೆ. ಹಿರಿಯ ಧರ್ಮ ಪೀಠದ ಧರ್ಮಾಧಿಕಾರಿಗಳಾಗಿ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಿದ್ದಾರೆ. ಆ ಮೂಲಕ ಜಗದ್ಗುರು ಪೀಠದ ಪ್ರಭೆಯನ್ನು ಹೆಚ್ಚು ಜಾಜ್ವಲ್ಯಮಾನಗೊಳಿಸಿದ್ದಾರೆ. ಮಾನವ ಕಲ್ಯಾಣದ ಚಿಂತನಕಾರರಾದ ಪೂಜ್ಯ 'ಮೂಜಗಂ' ಅವರು ಸದಾಕಾಲ ಪ್ರಯೋಜನಕಾರಿ ರಚನಾತ್ಮಕ ಕಾರ್ಯಗಳಲ್ಲಿ ಮಗ್ನರಾಗಿದ್ದಾರೆ. ಸನ್ನಿಧಿಯವರ ಷಷ್ಟ್ಯಬ್ದಿ ಸಮಾರಂಭ ಈ ಹಿನ್ನೆಲೆಯಲ್ಲಿ ಅರ್ಥಪೂರ್ಣವಾದುದು.

ಪೂಜ್ಯ ಜಗದ್ಗುರುಗಳ ರಚನಾತ್ಮಕ ಕಾರ್ಯಗಳ ಸಫಲತೆಯನ್ನು ಸಮೃದ್ಧವಾಗಿ ಅನುಭವಿಸಿದ ಊರುಗಳಲ್ಲಿ ವಿಜಾಪೂರ ಜಿಲ್ಲೆಯ ಇಲಕಲ್ಲ ನಗರವು ಮಹತ್ವಪೂರ್ಣವಾದುದು. ಜಿಲ್ಲೆಯ ಇತಿಹಾಸದಲ್ಲಿ ಇಲಕಲ್ಲಿಗೆ ಒಂದು ವೈಶಿಷ್ಟ್ಯಪೂರ್ಣ ಸ್ಥಾನವಿದೆ. ಸ್ವಾತಂತ್ರ್ಯ ಚಳವಳಿ, ಸಮಾಜ ಸುಧಾರಣೆ, ಸಾಂಸ್ಕೃತಿಕ ಸಮುನ್ನತಿ, ಧಾರ್ಮಿಕ ಜಾಗ್ರತಿ ಮೊದಲಾದ ಅನೇಕ ಚಟುವಟಿಕೆಗಳಲ್ಲಿ ಈ ನಗರ ಅತ್ಯಂತ ಸಂಸ್ಮರಣೀಯ, ಮಹತ್ವಪೂರ್ಣ ಪಾತ್ರವಹಿಸುತ್ತ ಬಂದಿದೆ. ನಗರಕ್ಕೆ ಈ ವೈಶಿಷ್ಟ್ಯ ಪ್ರಾಪ್ತವಾಗಲು ಇದರ ಸರ್ವಾಂಗೀಣ ಅಭಿವೃದ್ಧಿಗೆ ಕಾಯಾ, ವಾಚಾ, ಮನಸಾ ಶ್ರಮಿಸಿದ ಹಲವರಲ್ಲಿ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಅಗ್ರಗಣ್ಯರು. ಇಲಕಲ್ಲಿನ ಸುದೈವವೋ ಏನೋ! ಸನ್ನಿಧಿಯವರೊಡನೆ ಅವಿನಾಭಾವ ಸಂಬಂಧ ಹೊಂದಿದ ಈ ನಗರ ಅವರ ಅಂತಃಕರಣದ ಔದಾರ್ಯದಲ್ಲಿ ಬಹುಮುಖವಾಗಿ ಬೆಳೆಯಲು ಸಾಧ್ಯವಾಗಿದೆ.

ಉತ್ಕಟ ವಿದ್ಯಾಭಿಮಾನಿಗಳಾದ ಜಗದ್ಗುರು ಸನ್ನಿಧಿಯವರು ಇಲಕಲ್ಲಿನ ಶ್ರೀವಿಜಯ ಮಹಾಂತೇಶ್ವರ ಸಂಸ್ಥಾನಪೀಠದ ನಿಯೋಜಿತ ಪೀಠಾಧಿಪತಿಗಳಾಗಿ, ಮಹಾಂತ ದೇವರಾಗಿ ಬನಾರಸ ಹಿಂದೂ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿದ್ದರು. ಕೊಪ್ಪದ ಶ್ರೀ ಮಹಾಂತ ಸ್ವಾಮಿಗಳವರು ಇಲಕಲ್ಲ ಶ್ರೀಮಠದ ಉಸ್ತುವಾರಿಯನ್ನು ನೋಡಿಕೊಳ್ಳು,

ತ್ತಿದ್ದರು. ಅಧ್ಯಯನ ಪೂರೈಸುವ ಪೂರ್ವದಲ್ಲಿಯೇ ಪಟ್ಟಕಟ್ಟಬೇಕೆಂದು ಆಲೋಚಿಸಿದ ಇಲ್ಲಿಯ ಭಕ್ತರು ಸನ್ನಿಧಿಯವರನ್ನು ಇಲಕಲ್ಲಿಗೆ ಬರಮಾಡಿಕೊಂಡಿದ್ದರು. ಆಗ 'ಮೂಜಗಂ' ಅವರು ಶ್ರೀಮಠಕ್ಕೆ ನನ್ನನ್ನು ಕರೆಸಿ, ಹಲವು ವಿಷಯಗಳ ಬಗ್ಗೆ ಮುಕ್ತ ಸಮಾಲೋಚನೆ ನಡೆಸಿದರು. 'ನಾನು ಪಟ್ಟಕ್ಕೆ ಬಂದ ಮೇಲೆ ಇಲಕಲ್ಲಿನಲ್ಲಿ ಒಂದು ಮಹಾವಿದ್ಯಾಲಯ ವನ್ನು ಸ್ಥಾಪಿಸಿ, ನಗರದ ಹಾಗೂ ಸುತ್ತಮುತ್ತಲಿನ ಜನತೆಗೆ ಉಚ್ಚ ಶಿಕ್ಷಣದ ಸೌಲಭ್ಯ ಒದಗಿಸಬೇಕೆಂದಿದ್ದೇನೆ. ನನ್ನ ಈ ಮಹದಾಶೆ ಕಾರ್ಯಗತವಾಗಲು ನಿಮ್ಮ ಸಹಕಾರ ಅಗತ್ಯವಾಗಿರಬೇಕು' ಎಂದು ಮಹಾಸನ್ನಿಧಿಯವರು ಅಪ್ಪಣೆ ಕೊಡಿಸಿದರು. ಸಾಂಸ್ಕೃತಿ, ಆಧ್ಯಾತ್ಮಿಕ ಹಾಗೂ ಔದ್ಯಮಿಕ ರಂಗಗಳಲ್ಲಿ ಬೆಳೆದು ಸೀರೆಗಳಿಗಾಗಿ ಸುಪ್ರಸಿದ್ಧವಾದ ಇಲಕಲ್ಲ ನಗರವು ಶೈಕ್ಷಣಿಕ ಕೇಂದ್ರವೂ ಆಗಿ ಬೆಳೆಯಬೇಕೆಂದು ಜಗದ್ಗುರು ಮಹಾಸನ್ನಿಧಿ ಯವರು ಆಗಲೇ ಕನಸು ಕಂಡಿದ್ದರು. ಅವರ ಕನಸು ಈಗ ನನಸಾಗಿದೆ.

ಇಲಕಲ್ಲ ನಗರದಲ್ಲಿ 'ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘ'ವು ೧೯೬೩ ರಲ್ಲಿ ಸ್ಥಾಪನೆಗೊಳ್ಳಲು, ಗರಿಗೆದರಿ ಬೆಳೆಯಲು ಸನ್ನಿಧಿಯವರ ಕೃಪಾಶೀರ್ವಾದ ಶ್ರೀರಕ್ಷೆ ಯಾಗಿದೆ. ಅಂದಿನಿಂದ ಇಂದಿನವರೆಗೆ ಸನ್ನಿಧಿಯವರು ಸಂಘದ ಮಾರ್ಗದರ್ಶಿಗಳಾಗಿ, ಧರ್ಮದರ್ಶಿಗಳಾಗಿ ಇಲಕಲ್ಲಿನ ಶಿಕ್ಷಣ ರಂಗಕ್ಕೆ ಅನನ್ಯ ಸೇವೆ ಸಲ್ಲಿಸಿದ್ದಾರೆ. ಈ ಸಂಘದ ಆಶ್ರಯದಲ್ಲಿ ೧೯೬೪ ರಲ್ಲಿ ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಶುಭಾರಂಭವಾಯಿತು. ಇಲಕಲ್ಲ ಚಿತ್ತರಗಿ ಸಂಸ್ಥಾನಮಠದ ಪೀಠಾಧಿಪತಿಗಳಾದ ಲಿಂಗೈಕ್ಯ ಪೂಜ್ಯ ಶ್ರೀಗುರು ಮಹಾಂತಸ್ವಾಮಿಗಳವರ ತೀವ್ರ ಆಕಾಂಕ್ಷೆ, ಲಿಂ. ಶ್ರೀ ಎಸ್. ಆರ್. ಕಂಠಿಯವರ ಹಾಗೂ ಲಿಂ. ಶ್ರೀ ಪಿ. ಎಂ. ನಾಡಗೌಡರ ನಿಶ್ಚಲ ಪ್ರಯತ್ನಕ್ಕೆ ಶ್ರೀ 'ಮೂಜಗಂ' ಅವರ ಹೃತ್ಪೂರ್ವಕ ಬೆಂಬಲ, ಆಶೀರ್ವಾದಗಳು ಲಭಿಸ ದಿದ್ದರೆ ಈ ಮಹಾವಿದ್ಯಾಲಯ ಅಸ್ತಿತ್ವದಲ್ಲಿ ಬರುತ್ತಿರಲಿಲ್ಲವೆಂದರೆ ಅತಿಶಯೋಕ್ತಿ ಯಾಗದು. ಆ ಪರಿಸ್ಥಿತಿಯಲ್ಲಿ ಚಿತ್ತರಗಿ ಸಂಸ್ಥಾನ ಪೀಠಾಧಿಪತಿಗಳಾದ ಲಿಂ. ಪೂಜ್ಯ ಶ್ರೀಗುರು ಮಹಾಂತಸ್ವಾಮಿಗಳವರು ವಹಿಸಿದ ಗುರುತರ ಪಾತ್ರ ಚಿರಸ್ಮರಣೀಯವಾದುದು. ಮಹಾವಿದ್ಯಾಲಯದ ಸ್ಥಾಪನೆಗೆ ಜಗದ್ಗುರು ಮಹಾಸನ್ನಿಧಿಯವರು ೨೫ ಸಾವಿರ ರೂಪಾಯಿಗಳ ಆರಂಭದ ದೇಣಿಗೆ ನೀಡಿ ಆಶೀರ್ವದಿಸಿದರು. ಈ ದೇಣಿಗೆ ಅಕ್ಷಯ ನಿಧಿ ಯಾಯಿತು; ಇಲಕಲ್ಲಿನ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಅಧ್ಯಾಯವನ್ನು ಆರಂಭಿಸಿತು. ನಗರದ ಹಾಗೂ ಸುತ್ತಮುತ್ತಲಿನ ಗ್ರಾಮೀಣ ಭಾಗದ ಜನತೆಗೆ ಸಕಲ ಸೌಕರ್ಯಗಳೊಂದಿಗೆ ಸುವ್ಯವಸ್ಥಿತವಾಗಿ ಪದವಿ ಶಿಕ್ಷಣ ಪಡೆಯುವ ಸದವಕಾಶ ಲಭಿಸಿತು. ಇಂದು ೧೬೦೦ ವಿದ್ಯಾರ್ಥಿಗಳಿಗೆ ವಿದ್ಯಾವಿತರಣೆ ಮಾಡುತ್ತಿರುವ ಶ್ರೀ ವಿಜಯ ಮಹಾಂತೇಶ ಮಹಾ ವಿದ್ಯಾಲಯವು ಗ್ರಾಮೀಣ ಪರಿಸರದ ಮಹಾವಿದ್ಯಾಲಯಗಳಲ್ಲಿಯೇ ಅತ್ಯಂತ ಬೃಹತ್ ಸಂಸ್ಥೆಯಾಗಿ ಬೆಳೆದಿದೆ; ಬೆಳೆಯುತ್ತಿದೆ. ಇಲ್ಲಿ ಶಿಕ್ಷಣ ಪಡೆದ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಜೀವನದ ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತ ಶ್ರೀ ವಿಜಯ ಮಹಾಂತೇಶ

ವಿದ್ಯಾವರ್ಧಕ ಸಂಘದ ಹಾಗೂ ಮಹಾವಿದ್ಯಾಲಯದ ಸ್ಥಾಪನೆಯ ಸಾರ್ಥಕತೆಯನ್ನು ಮೆರೆಯುತ್ತಿದ್ದಾರೆ.

ವ್ಯಕ್ತಿಯ ಜೀವನದಲ್ಲಿ ಹೇಗೋ ಹಾಗೆ ಸಂಸ್ಥೆಯ ಜೀವನದಲ್ಲೂ ಏರಿಳಿತಗಳು ಸಹಜವೇನೋ! ಜಗದ್ಗುರು ಸನ್ನಿಧಿಯವರ ಕಲ್ಪನೆಯ ಕೂಸಾದ ಶ್ರೀ ವಿಜಯ ಮಹಾಂತೇಶ ಮಹಾವಿದ್ಯಾಲಯವು ಒಮ್ಮೆ ಆರ್ಥಿಕ ಮುಗ್ಗಟ್ಟಿನಿಂದ ತೀವ್ರ ತೊಂದರೆ ಗೀಡಾದಾಗ ಸಾಂತ್ವನ ನೀಡಿ ಮುನ್ನಡೆಸಲು ಸನ್ನಿಧಿಯವರು ಇಲಕಲ್ಲಿಗೆ ಧಾವಿಸಿ ಬಂದರು. ಚಿತ್ತರಗಿ ಸಂಸ್ಥಾನ ಪೀಠದ ಅಧಿಪತಿಗಳೂ, ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಘನ ಅಧ್ಯಕ್ಷರೂ ಆದ ಪೂಜ್ಯ ಶ್ರೀ ನಿ. ಪ್ರ. ಮಹಾಂತಸ್ವಾಮಿಗಳವರ ಜೊತೆಗೆ ಸಮಾಲೋಚನೆ ನಡೆಸಿದರು. ಉಭಯ ಶ್ರೀಗಳವರು ಸಮಸ್ಯೆಯ ಪರಿಹಾರಕ್ಕೆ ಸನ್ನದ್ಧ ರಾದರು. ಸನ್ನಿಧಿಯವರು ಹಾಗೂ ಪೂಜ್ಯ ಮಹಾಂತಸ್ವಾಮಿಗಳವರು ಜೊತೆಗೂಡಿ ಇಲಕಲ್ಲಿನ ಸಂದಿಗೊಂದಿಗಳಲ್ಲಿ ಪಾದಯಾತ್ರೆ ಕೈಕೊಂಡು ಇಡೀ ನಗರವನ್ನು ಪಾವನಗೊಳಿಸಿ ದ್ದಲ್ಲದೆ ಒಂದುಲಕ್ಷ ರೂಪಾಯಿಗಳಿಗೂ ಮೇಲ್ಪಟ್ಟು ನಿಧಿ ಸಂಗ್ರಹಿಸಿ ಕೊಟ್ಟರು. ಇದು ಅಕ್ಷಯ ನಿಧಿಯಾಗಿ, ಸಂಸ್ಥೆ ಆರ್ಥಿಕವಾಗಿ ಚೇತರಿಸಿಕೊಳ್ಳಲು ಸಂಜೀವಿನಿ ಶಕ್ತಿಯಾಯಿತು.

ತಾಂತ್ರಿಕ ಶಿಕ್ಷಣ ಹಾಗೂ ತರಬೇತಿ ನೀಡಿ ಉದ್ಯೋಗಾವಕಾಶಗಳನ್ನು ಕಲ್ಪಿಸುವ, ಸ್ವಾವಲಂಬಿ ಜೀವನ ಬದುಕಲು ಸಹಾಯಕವಾಗುವ ಹಾಗೂ ಯುವ ಜನಾಂಗದ ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಪ್ರಯತ್ನಿಸುವ ಉದಾತ್ತ ಉದ್ದೇಶದಿಂದ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಬೇಕೆಂದು ನಮ್ಮ ಸಂಘವು ಆಲೋಚಿಸಿದಾಗ ಸಂಘದ ಧರ್ಮದರ್ಶಿಗಳಾದ ಜಗದ್ಗುರು ಮಹಾ ಸನ್ನಿಧಿಯವರು ಈ ಮಹಾಕಾರ್ಯಕ್ಕೆ ಎರಡು ಲಕ್ಷಕ್ಕೂ ಹೆಚ್ಚಿನ ಮೊತ್ತದ ದೇಣಿಗೆ ನೀಡಿ ಆಶೀರ್ವದಿಸಿದರು. ಇದರ ಫಲವಾಗಿ ೧೯೮೪-೮೫ನೇ ವರ್ಷದಲ್ಲಿ 'ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರಮಠ ಕೈಗಾರಿಕಾ ತರಬೇತಿ ಸಂಸ್ಥೆ' ಮೈದಾಳಿದೆ. ಈ ಕೈಗಾರಿಕಾ ಸಂಸ್ಥೆ ನಮ್ಮ ಸಂಘದ ಉದ್ದೇಶಗಳ ಈಡೇರಿಕೆಯಲ್ಲಿ ಹಾಗೂ ಬೆಳವಣಿಗೆಯಲ್ಲಿ ಮಹತ್ವದ ಸಾಧನೆಯಾಗಿದೆ. ತಾಂತ್ರಿಕ ತರಬೇತಿಗೆ ಅವಶ್ಯಕವಾದ ಸುಮಾರು ೩ ಲಕ್ಷ ರೂಪಾಯಿಗಳ ಅತ್ಯಾಧುನಿಕ ಉಪಕರಣ ಗಳನ್ನು ಹಾಗೂ ಸಲಕರಣೆಗಳನ್ನು ಹೊಂದಿದ ಈ ಸಂಸ್ಥೆಯು ಮಹಾಸನ್ನಿಧಿಯವರ ಕೃಪಾಶೀರ್ವಾದಗಳಿಂದ ವರ್ಷ ವರ್ಷವೂ ಪ್ರಗತಿಯತ್ತ ಸಾಗಿದೆ. ೧೧ ಲಕ್ಷ ರೂಪಾಯಿ ಗಳ ವೆಚ್ಚದಲ್ಲಿ ನಿರ್ಮಿಸಿದ ಭವ್ಯವಾದ, ನೂತನ ಕಟ್ಟಡದಲ್ಲಿ ಕೈಗಾರಿಕಾ ಸಂಸ್ಥೆ ಪಾದಾರ್ಪಣ ಮಾಡಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಲು ಅಭಿಮಾನವೆನಿಸುತ್ತದೆ. ಸನ್ನಿಧಿಯವರು ತೋರುತ್ತಿರುವ ಅಪಾರ ಆಸಕ್ತಿ, ನೀಡುತ್ತಿರುವ ಉಪಯುಕ್ತ ಸಲಹೆ ಸೂಚನೆಗಳು ಈ ಸಂಸ್ಥೆಯ ತೀವ್ರ ಬೆಳವಣಿಗೆಯಲ್ಲಿ ಗಮನಾರ್ಹ ಪಾತ್ರವಹಿಸಿವೆ ಎಂದರೆ ಅತಿಶಯೋಕ್ತಿ ಆಗದು.

ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಇಲಕಲ್ಲಿನಲ್ಲಿ ಆರಂಭವಾಗಿ ಮುನ್ನಡೆದಿರುವ ಹಿರಿಯ ಸಂಸ್ಥೆ ಶ್ರೀ ವಿಜಯ ಮಹಾಂತೇಶ ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮಹಾ ವಿದ್ಯಾಲಯ, ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರ ಮಠ ಕೈಗಾರಿಕಾ ತರಬೇತಿ ಸಂಸ್ಥೆ, ಎಸ್. ಆರ್. ಕಂಠಿ ಶಿಕ್ಷಣ ಮಹಾವಿದ್ಯಾಲಯ, ಎಸ್ ಆರ್. ಕಂಠಿ ಬಾಲಿಕೆಯರ ಪ್ರೌಢ ಶಾಲೆ, ಶ್ರೀ ವಿಜಯ ಮಹಾಂತೇಶ ಕಲೆ ಹಾಗೂ ವಾಣಿಜ್ಯ ಮಹಿಳಾ ಮಹಾವಿದ್ಯಾಲಯ ಈ ಎಲ್ಲ ಶಿಕ್ಷಣ ಸಂಸ್ಥೆಗಳ ಅಭ್ಯುದಯ, ಉತ್ತರೋತ್ತರ ಪ್ರಗತಿಗೆ ಮೂಲ ಕಾರಣ ಕರ್ತರು ಜಗದ್ಗುರು ಮಹಾ ಸನ್ನಿಧಿಯವರು. ಇಲಕಲ್ಲಿನ ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಸಂಸ್ಥಾಪಕ ಧರ್ಮದರ್ಶಿಗಳಾದ ಜಗದ್ಗುರುಗಳವರು ಕಳೆದ ೨೫ ವರ್ಷಗಳಿಂದಲೂ ಅತ್ಯಮೂಲ್ಯ ಮಾರ್ಗದರ್ಶನ ನೀಡುತ್ತಿರುವುದರಿಂದ ಸಂಘದ ರಚನಾತ್ಮಕ ಚಟುವಟಿಕೆಗಳೆಲ್ಲವೂ ಸುಗಮವಾಗಿ, ಫಲಪ್ರದವಾಗಿ ಸಾಗಿವೆ. ಸದಸ್ಯರಲ್ಲಿ ಸ್ನೇಹ, ಸಹಕಾರ, ಸೌಹಾರ್ದ ವಾತಾವರಣ ಬೆಳೆದು ಬಂದಿವೆ. ನಗರದಲ್ಲಿ ಹಾಗೂ ಸುತ್ತಲಿನ ಗ್ರಾಮೀಣ ಭಾಗದಲ್ಲಿ ಶೈಕ್ಷಣಿಕ ಪರಿಸರ ರೂಪುಗೊಂಡಿದೆ. ಈ ದೃಷ್ಟಿಯಿಂದ ಇಲಕಲ್ಲ ನಗರದ ಶೈಕ್ಷಣಿಕ ಕ್ಷೇತ್ರಕ್ಕೆ ಉತ್ಕಟ ವಿದ್ಯಾಪ್ರೇಮಿಗಳಾದ ಜಗದ್ಗುರು ಮಹಾ ಸನ್ನಿಧಿಯವರ ಕೊಡುಗೆ ಅತ್ಯಮೂಲ್ಯವಾದುದು; ಚಿರಸ್ಮರಣೀಯವಾದುದು.

□ □

ಪರಂಜ್ಯೋತಿ: ಬೆಳೆದು ಬಂದ ದಾರಿ

—ಡಾ. ವಸಂತ ಎಸ್. ಪಾಟೀಲ

ಮೂರುಸಾವಿರಮಠದ ಮುಖವಾಣಿ, ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ನೈತಿಕ ಸೌರಭವನ್ನು ಸೂಸುವ ಕನ್ನಡ ಮಾಸಿಕವು ತನ್ನ ಜನ್ಮದಿಂದ (೧೯೬೯) ಇಂದಿನವರೆಗೆ (೧೯೯೦) ಸುಮಾರು ಇಪ್ಪತ್ತೊಂದು ವರ್ಷ ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ಹೋರಾಡುತ್ತಿರುವುದು ಕನ್ನಡ ನಾಡಿಗೇ ಹೆಮ್ಮೆಯ ವಿಷಯ, ಸಂತಸದ ಸಂಗತಿ. ಪರಂಜ್ಯೋತಿಯು "ಮಾತು ಮನಂಗಳನ್ನು ಬುದ್ಧಿ ಭಾವಗಳನ್ನು ಬಳಸಿ ಬೆಳಗುವ ಜ್ಯೋತಿಯಾಗಿ ಬಂತು. ಆ ನಿರುಪಾಧಿಕ ಜ್ಯೋತಿಯನ್ನು ಶಾಬ್ದಿಕವಾಗಿ ಹೊತ್ತು ತಂದಿತು. ಶಬ್ದ ಬ್ರಹ್ಮದ ಸಾಕ್ಷಾತ್ಕಾರವನ್ನು ಪರಾತ್ಪರ ಕಳೆಯಲ್ಲಿ ಮೂಡಿಸಲು ಪ್ರವೃತ್ತಿತು.[೧] ಡಾ. ಜ. ಚ. ನಿ. ಯವರು "ಇದೊಂದು ಸತ್ಯ ಸುಂದರವಾದ ಶಿವಾಲಯ....ಒಂದು ಹೂವಿನ ಮಂಜರಿ. ಹತ್ತಾರು ನರುಗಂಪಿನ ಹೂಗಳನ್ನು ಹೊತ್ತು ನಿಲುವಾಗಿದೆ. ತನ್ನ ಉದ್ದೇಶದಂತೆ ಸಾಂಸ್ಕೃತಿಕ ಸೌರಭವನ್ನು ಹಿತಮಿತವಾಗಿ ಹರಡುವ ಶಕ್ತಿ ಸಂಪನ್ನವಾಗುವ ಆಸೆಯಿದೆ. ಗೌರವದ ಗುಡಿಯನ್ನು ಬಾನೆತ್ತರಕೆ ಹಿಡಿದು ಹಾರಿಸಲಿ[೨]" ಎಂದು ಹಾರೈಸಿ ಹರಸಿದುದುಂಟು. ಆ ಹರಕೆ ತನ್ನ ಸಫಲತೆಯನ್ನು ಕಂಡಿದೆ.

ಹುಬ್ಬಳ್ಳಿಯ ಮೂರುಸಾವಿರಮಠವು ತನ್ನದೇ ಆದ ಇತಿಹಾಸವನ್ನು ಪಡೆದಿದೆ. ಹಿಂದಿನ 'ಪೂವಳ್ಳಿ'[೩]ಯಿಂದ ಇಂದಿನ ಹುಬ್ಬಳ್ಳಿಯವರೆಗಿನ ಇತಿಹಾಸದುದ್ದಕ್ಕೂ ಮೂಲಕರ್ತೃ ಗದ್ದುಗೆಯ ಮುಚ್ಚೀಶ್ವರರ ಪಾತ್ರವು ಅತಿ ಹಿರಿದಾಗಿದೆ.[೪] ತಪೋನಿಧಿ ಮುಚ್ಚೀಶ್ವರರ ಪವಾಡಪೂರಿತ ಈ ಸುಕ್ಷೇತ್ರ "ಪೂವಳ್ಳಿ"ಗಳಿಂದೊಡಗೂಡಿ ಒಂದು ಹಳ್ಳಿಯಾಗಿ ಅದೇ ಮುಂದೆ ಪಟ್ಟಣವಾಗಿ ಬೆಳೆಯುತ್ತ ಬಂದು ಈಗದು ಹುಬ್ಬಳ್ಳಿಯಾಗಿದೆ. ಈ ಧಾರ್ಮಿಕ ಕ್ಷೇತ್ರ ತೀರ್ಥಿಕವಾಗಿಯೂ ಬೆಳೆದು ಶೈಕ್ಷಣಿಕತೆಯತ್ತ ದಾಪುಗಾಲಿಡುತ್ತಲಿದೆ. ಕರ್ನಾಟಕದ ಒಂದ ಹೆಮ್ಮೆಯ ನಗರವಾಗಿದೆ.

---

೧ ಎ. ಎಸ್. ಹೂಗಾರ, "ಜಗದ್ಗುರು ಮೂರುಸಾವಿರಮಠದ ಶ್ರೀ ಸನ್ನಿಧಿ", ಪರಂಜ್ಯೋತಿ, ಸಂಪುಟ: ೪, ಸಂಚಿಕೆ: ೯, ಏಪ್ರಿಲ್ ೧೯೭೩, ಪು. ೩೩೫.

೨ ಅದೇ.

೩ ಕಲಚೂರ್ಯರ ೧೨ನೆಯ ಶತಮಾನದ ಶಿರಸಿಯ ಶಾಸನ (ಅದೇ ಪು. ೩೨೯)

೪ ಪ್ರೊ. ಜಿ. ಎಚ್. ಹನ್ನೆರಡುಮಠ, ಕಾಡಿನಲ್ಲಿ ಕೈವಲ್ಯ.

ಹನ್ನೆರಡನೆಯ ಶತಮಾನದ ಕಲ್ಯಾಣದ ಕ್ರಾಂತಿಯ ನಂತರ ಚೂರಾಚೂರಾದ ಮೂರುಸಾವಿರ ಶರಣರ ಒಂದು ಗುಂಪು ಗಂಗಾಧರ, ಗುರುಸಿದ್ಧೇಶ್ವರರ ಮುಂದಾಳ್ತನದಲ್ಲಿ೫ ಅದರಗುಂಚಿಯ ಮಾರ್ಗವಾಗಿ ಹುಚ್ಚೇಶ್ವರರ ಪ್ರದೇಶಕ್ಕೆ ಬಂದು ವಿಶ್ರಮಿಸಿ ಕೆಲದಿನಗಳ ನಂತರ ಉಳುವಿಯತ್ತ ಧಾವಿಸಿತು.೬ ಆ ಮೂರುಸಾವಿರ ಶರಣರು ವಿಶ್ರಮಿಸಿದ ತಾಣವೇ ಹುಚ್ಚೇಶ್ವರನ ಕರ್ತೃ ಗದ್ದುಗೆಗೆ ಮೂರುಸಾವಿರ ಮಠವಾಗಿ ಬೆಳೆದು ನಿಂತಿದೆ. ಈಗದು ಶಾಲೆ, ಕಾಲೇಜು ಮುಂತಾದ ನೂರಾರು ಸಂಸ್ಥೆಗಳಿಂದೊಡಗೂಡಿ ಗುಡಿ ಗೋಪುರಗಳಿಂದೊಡಗೂಡಿ ಇಡೀ ನಾಡಿಗೇ "ಪರಂಜ್ಯೋತಿ"ಯಾಗಿರುವ ಜಗದ್ಗುರು ಪೀಠ.

ಮೂರುಸಾವಿರಮಠದ ಕಾರ್ಯಕ್ಷೇತ್ರ:

ಕರ್ನಾಟಕದ ವೀರಶೈವ ಮಠಗಳಲ್ಲಿ ಇದೊಂದು ಎಲ್ಲ ರೀತಿಯಿಂದಲೂ ವಿಜೃಂಭಿಸುವ ಒಂದು ಶ್ರೀಮಂತಮಠ. ಸಿದ್ಧಗಂಗಾ ಮಠ (ಎಡೆಯೂರು) ಕ್ಕೂ ಈ ಈ ಮೂರುಸಾವಿರಮಠಕ್ಕೂ ಒಂದು ರೀತಿಯಲ್ಲಿ ಪೈಪೋಟಿ ಶ್ರೀಮಂತಿಕೆಯಲ್ಲಿ ಹಾಗೂ ಬಹುಮುಖ ಕಾರ್ಯ ಕ್ಷೇತ್ರದಲ್ಲಿ. ಎಲ್ಲ ಮಠಗಳೂ ಈ ರೀತಿ ಪೈಪೋಟಿಯಿಂದ ಬೆಳೆದರೆ ಇಡೀ ನಾಡೆ ಉತ್ಕರ್ಷೆಯ ಬೆಳಕನ್ನು ಕಾಣುವುದು.

ಮಠದ ಜೀರ್ಣೋದ್ಧಾರದಿಂದ ಹಿಡಿದು, ಸಂಘ, ಸಂಸ್ಥೆ, ಶಾಲೆ, ಕಲೇಜು, ಉಪನ್ಯಾಸ ಮಾಲೆ, ಗ್ರಂಥ ಪ್ರಕಟನೆ, ಪಾದಯಾತ್ರೆ, ಆರ್ಥಿಕ ನೆರವು, ಅನ್ನ ದಾಸೋಹ, ಉಚಿತ ಸಾಮೂಹಿಕ ವಿವಾಹ, ಆರೋಗ್ಯಧಾಮ ಮುಂತಾದ ಹಲವಾರು ಕಾರ್ಯ ಕ್ಷೇತ್ರ ಗಳಿಂದ ಮೂರುಸಾವಿರಮಠವು ಬಹುಮುಖ ಪ್ರತಿಭೆಯನ್ನು ಪಡೆದಿದೆ. ಧಾರ್ಮಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ, ನೈತಿಕ ಮುಂತಾದ ಎಲ್ಲ ರಂಗಗಳಲ್ಲಿಯೂ ತನ್ನ ಪಾತ್ರವನ್ನಾಡಿ ನಾಡಿನ ಸರ್ವತೋಮುಖ ಏಳ್ಗೆಗೆ ಅನರ್ಘ್ಯ ದುಡಿದುದರಲ್ಲಿ ತಿಲಮಾತ್ರವೂ ಅತಿಶಯೋಕ್ತಿ ಇಲ್ಲ.

ಸದ್ಯದ ಪೀಠಾಧಿಕಾರಿಗಳಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ಮಹಾಸ್ವಾಮಿಗಳವರು ೧೯೫೮ ರಲ್ಲಿ ಪಟ್ಟಕ್ಕೆ ಬಂದಂದಿನಿಂದ ಮೂರುಸಾವಿರಮಠದ ಬಹುಮುಖ ಪ್ರತಿಭೆಗೆ ಮತ್ತಷ್ಟು ಹೆಚ್ಚು ಕಳೆ ಬಂದಿದೆ. ಘನತೆ, ಗೌರವಗಳು ಹೆಚ್ಚಿವೆ. ಶ್ರೀ ಜಗದ್ಗುರುಗಳವರ ಪೀಠಾರೋಹಣ ದ್ವಾದಶ ವಾರ್ಷಿಕೋತ್ಸವ ಸಂದರ್ಭದಲ್ಲಿ ಬರ

---

೫ ಆ ಕಾರಣ ಈ ಪೀಠದ ಜಗದ್ಗುರುಗಳು "ಗಂಗಾಧರ", "ಗುರುಸಿದ್ಧೇಶ್ವರ"ರೆದು ನಾಮಾಂಕಿತರಾಗಿರುವರು. ಸದ್ಯದ ಜಗದ್ಗುರುಗಳು ಗಂಗಾಧರ ಮಹಾ ಸ್ವಾಮಿಗಳು.

೬ ಪ್ರೊ. ಜಿ. ಎಚ್. ಹನ್ನೆರಡುಮಠ, ಕಾಡಿನಲ್ಲಿ ಕೈವಲ್ಯ.

ಕಾರ್ಯರಂಗದ ಮೇಲೆ ವಿಹಂಗಮ ದೃಷ್ಟಿ ಹಾಯಿಸಿದಾಗ, ಅವರು ಸಾಧಿಸಿದ ಕಾರ್ಯದ ಅರಿವು ಯಾರಿಗಾದರೂ ಆಗುವುದು.[೭] ಅವುಗಳಲ್ಲಿ "ಪರಂಜ್ಯೋತಿ" ಕನ್ನಡ ಮಾಸಿಕವನ್ನು ಪ್ರಾರಂಭಿಸಿದುದು ಒಂದು ಮಹತ್ಸಾಧನೆಯು. ಅದಕ್ಕಾಗಿಯೆ "ಪರಂಜ್ಯೋತಿ" ಮುದ್ರಣಾಲಯವೂ ಸ್ಥಾಪನೆಯಾಯಿತು. ಈ ಕಾರ್ಯ ಚಟುವಟಿಕೆಗಳಿಗೆ ಅನುಕೂಲವಾಗಲು "ಪರಂಜ್ಯೋತಿ" ಕಾರ್ಯಾಲಯದ ಬೃಹತ್ ಕಟ್ಟಡ ನಿರ್ಮಾಣವಾಯಿತು. ಒಟ್ಟಿನಲ್ಲಿ ಸಮಾಜದ, ನಾಡಿನ ಸರ್ವಾಂಗೀಣ ಕಾರ್ಯ ಚಟುವಟಿಕೆಗಳಿಗೆ ಮುಖವಾಣಿಯಾಗಿ, ಪ್ರೇರಣ ಶಕ್ತಿಯಾಗಿ, ಸಮೂಹ ಮಾಧ್ಯಮವಾಗಿ ಮೂರುಸಾವಿರಮಠದ ಕೇಂದ್ರದಿಂದ ಶ್ರೀ ಜಗದ್ಗುರುಗಳವರ ಆಶೀರ್ವಾಣಿಯಾಗಿ ಪರಂಜ್ಯೋತಿಯು ಸುತ್ತೆತ್ತಲೂ ಪ್ರಕಾಶ ಬೀರಿತು.

ಪರಂಜ್ಯೋತಿ ಸ್ಥಾಪನೆ:

ಮೂರುಸಾವಿರಮಠವು ಧಾರ್ಮಿಕ ಕೃತಿಯ ಜೊತೆಗೆ ಸಾಹಿತ್ಯಿಕ ರಂಗಕ್ಕೂ ಸುಮಾರು ೧೯೨೦ರಲ್ಲಿ ಪಾದಾರ್ಪಣ ಮಾಡಿತು. ಲಿಂ. ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರುಸಾವಿರಮಠದ ಗ್ರಂಥಮಾಲೆಯನ್ನು ಪ್ರಾರಂಭಿಸಿ "ವಿಶೇಷಾರ್ಥ ಪ್ರಕಾಶಿಕೆ", "ತಂತ್ರ ಸಂಗ್ರಹ," "ಶಿವಮಂತ್ರ ಜಪವಿಧಿ" ಗ್ರಂಥಗಳನ್ನು ಪ್ರಕಟಿಸಿದರು.[೮] ಲಿಂ. ಶ್ರೀ ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರು ೧೯೫೬ರಲ್ಲಿ ತಮ್ಮ ಗುರುಗಳ ಹೆಸರಿನಲ್ಲಿ "ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರ ಮಂಡಳಿ"ಯನ್ನು ಸ್ಥಾಪಿಸಿದರು. ಇದು ಮೂರುಸಾವಿರಮಠದ ಕಾರ್ಯ ಕ್ರಮಗಳಿಗೆ ಒಂದು ಮೂರ್ತ ಸ್ವರೂಪವನ್ನು ಕೊಡುವ ಕ್ಯಾಬಿನೆಟ್ ಆಯಿತು. ಇದರ ಮುಖಾಂತರ ಧರ್ಮ ಪ್ರಚಾರವು ನಾನಾ ವಿನ್ಯಾಸಗಳನ್ನು ಪಡೆದು ಜನತೆಯ ಸರ್ವಾಂಗೀಣ ಸುಂದರತೆಯತ್ತ ಕಾಲಿರಿಸಿತು. ಈ ಕಾರ್ಯಕ್ಕಾಗಿ ಹತ್ತು ಸಾವಿರ ರೂಪಾಯಿಗಳ ಮೂಲ ನಿಧಿಯನ್ನಿಟ್ಟು ಮತ್ತೆ ಅರವತ್ತು ಸಾವಿರ ರೂಪಾಯಿಗಳ ವಿಮೆಯನ್ನೂ ಇಳಿಸಿದರು.

ಸದ್ಯದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು "ಧರ್ಮ ಪ್ರಚಾರಕ ಮಂಡಳಿ"ಗೆ ಮತ್ತಷ್ಟು ಹೆಚ್ಚು

---

೭ "೧೨ ವರ್ಷಗಳಲ್ಲಿ ಶ್ರೀ ಜಗದ್ಗುರು ಮೂರುಸಾವಿರಮಠವು ಸಾಧಿಸಿದ ಕಾರ್ಯ ರಂಗದ ಹಕ್ಕಿನೋಟ", ಪರಂಜ್ಯೋತಿ, ಶ್ರೀ ಜಗದ್ಗುರುಗಳ ಪೀಠಾರೋಹಣ ದ್ವಾದಶ ವಾರ್ಷಿಕೋತ್ಸವದ ಸಂಸ್ಮರಣ ಸಂಚಿಕೆ: ೯, ಸಂಪುಟ: ೪. ಎಪ್ರಿಲ್ ೧೯೭೨, ಪು. ೪೪೩.

೮ ಶಂಕರ ಪಾಟೀಲ, "ಕನ್ನಡ ಧಾರ್ಮಿಕ ಸಾಹಿತ್ಯದ ಬೆಳವಣಿಗೆಗೆ ಅಪೂರ್ವ ದೇಣಿಗೆ", ಶ್ರೀ ಜಗದ್ಗುರು ಗಂಗಾಧರ ಧರ್ಮ ಪ್ರಚಾರಕ ಮಂಡಳದ ರಜತ ಮಹೋತ್ಸವದ ವಿಶೇಷ ಸಂಚಿಕೆ, ಫೆ. ೧೯೮೨. ಪು. ೩೬೯-೭೦.

ಪ್ರೇರಣೆ, ಚಿಂತನೆಗಳನ್ನಿತ್ತು ಮುನ್ನಡೆಸಿಕೊಂಡು ಬಂದಿರುವರು. ಧಾರ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಶ್ರೀ ಜಗದ್ಗುರುಗಳವರು ಪತ್ರಿಕಾ ರಂಗಕ್ಕೂ ಪ್ರವೇಶಿಸಲು ಮುಂಚಳಿಗೆ ಅನುಮತಿಯನ್ನಿತ್ತಿರುವರು. ಸ್ವತಃ ಲೇಖಕರು, ಕವಿಗಳು ಹಾಗೂ ಸಂಸ್ಕೃತ ಪಂಡಿತರೂ ಆಗಿರುವ ಶ್ರೀ ಜಗದ್ಗುರುಗಳವರು ಪತ್ರಿಕೆಯ ಮಹತ್ವವನ್ನರಿತವರಾಗಿದ್ದರು. ಅದರಲ್ಲಿಯೂ ಮುಖ್ಯವಾಗಿ ಕನ್ನಡ ಪತ್ರಿಕೆಯ ಕೊರತೆಯ ಅರಿವು ಅವರಿಗಿತ್ತು. "ಭಾರತದ ಒಟ್ಟು ಪತ್ರಿಕಾ ಪ್ರಸಾರದಲ್ಲಿ ಕನ್ನಡ ಪತ್ರಿಕೆಗಳ ಪಾಲು ಬರೀ ಶೇಕಡಾ ಆರು"–ಎಂಬುದನ್ನು ಅವರು ಮನಗಂಡಿದ್ದರು.೯ ಕೇರಳ, ತಮಿಳುನಾಡಿಗಿಂತಲೂ ಕರ್ನಾಟಕದಲ್ಲಿ ಪತ್ರಿಕೆಗಳ ಪ್ರಸಾರ ಸಂಖ್ಯೆ ಕಡಿಮೆ ಇರುವುದು ಅವರ ಮನವನ್ನು ಮಿಡಿದಿತ್ತು.೧೦

"ಒಂದು ದೇಶದ ಹಾಗೂ ಧರ್ಮ ಸಂಸ್ಕೃತಿಯ ಸಂವರ್ಧನೆಗೆ ಪತ್ರಿಕೋದ್ಯಮವೇ" ತಾರಕವೆಂಬುದನ್ನು ಶ್ರೀ ಜಗದ್ಗುರುಗಳು ಮನಗಂಡಿದ್ದರು. ವಿಶ್ವದ ಉದ್ಯಮಗಳಲ್ಲಿಯೇ ಇದೊಂದು ಪ್ರಮುಖ ಉದ್ಯಮವೆಂಬುದು ಅವರಿಗೆ ಮನದಟ್ಟಾಗಿತ್ತು. ಇವುಗಳ ಜೊತೆಗೆ ಪತ್ರಿಕಾ ಧರ್ಮವು ಒಂದು ಪವಿತ್ರವಾದ ಧರ್ಮವೆಂಬುದನ್ನು ತಿಳಿದಿದ್ದರು. ಈ ಎಲ್ಲ ಹಿನ್ನೆಲೆಯಲ್ಲಿ ಮೂರುಸಾವಿರಮಠಕ್ಕೆ ಒಂದು ಮುಖವಾಣಿಯನ್ನಿತ್ತು ಕನ್ನಡನಾಡಿಗೆ ಒಂದು ಉಪಕಾರ ಮಾಡಿದರು. "ಪರಂಜ್ಯೋತಿ"ಯನ್ನು ೧೯೬೮ರ ಶ್ರಾವಣದಲ್ಲಿ ಬೆಳಗಿ ಉದ್ಘಾಟಿಸಿ ಹೊಸ ಅಧ್ಯಾಯ ಪ್ರಾರಂಭಿಸಿದರು.

ಪರಂಜ್ಯೋತಿಯ ಬೆಳವಣಿಗೆ:

ಪರಂಜ್ಯೋತಿಯ ಬೆಳವಣಿಗೆಯಲ್ಲಿ ಶ್ರೀ ಜಗದ್ಗುರುಗಳವರ ಪಾತ್ರ ಬಲು ಹಿರಿದು. ಪರಂಜ್ಯೋತಿಯ ಮುಖಾಂತರ ಶ್ರೀ ಜಗದ್ಗುರುಗಳು ಪತ್ರಿಕಾ ರಂಗಕ್ಕೆ ಕಾಲಿರಿಸಿದರು. ಪರಂಜ್ಯೋತಿಯು ಅವರ ಮನದಾಸೆಯ ಪ್ರೀತಿಯ ಕೂಸು. ಅದರ ಸರ್ವಾಂಗ ಸುಂದರದ ಬೆಳವಣಿಗೆಯ ಹೊಂಗನಸು ನನಸಾಗತೊಡಗಿತು. ತಮ್ಮ ಮನದಿಚ್ಛೆಯನ್ನು ಚೊಕ್ಕ ರೀತಿಯಲ್ಲಿ ಕಾರ್ಯರೂಪಕ್ಕೆ ತರುವಂಥ ಸಮರ್ಥ ಸಂಪಾದಕರೂ (ಪ್ರೊ. ಜಿ. ಎಚ್. ಹನ್ನೆರಡುಮಠ, ಕನ್ನಡ ಪ್ರಾಧ್ಯಾಪಕರು, ಇಲಕಲ್ಲ) ಅವರಿಗೆ ದೊರೆತರು. ಲೇಖನಗಳನ್ನು ಸ್ವತಃ ನೋಡಿ, ಆಯ್ಕೆಮಾಡಿ, ಅವು ಚೆನ್ನಾಗಿ ಮುದ್ರಣವಾಗುವಂತೆ ನೋಡಿ, ಅವು ಕೊನೆಗೆ ಸರಿಯಾಗಿ ವಿತರಣೆಯಾಗುವವರೆಗೂ ಸ್ವತಃ ಶ್ರೀ ಜಗದ್ಗುರುಗಳು ಆಸ್ಥೆವಹಿಸಿದುದು ಪರಂಜ್ಯೋತಿ ಬೆಳವಣಿಗೆಗೆ ಮೂಲ ಕಾರಣವು.

---

೯ "ಕನ್ನಡ ಪತ್ರಿಕೋದ್ಯಮದ ಬೆಳವಣಿಗೆ", ಆಶೀರ್ವಾಣಿ, ಭಾಗ–೨, ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರುಗಳ ಭಾಷಣ ಸಂಗ್ರಹ, ಪು. ೧೨೭.

೧೦ ಅದೇ ಪು. ೧೨೬

ಪರಂಜ್ಯೋತಿಗಾಗಿ ಚಂದಾದಾರರನ್ನು ಹಾಗೂ ಆಜೀವ ಸದಸ್ಯರನ್ನು ಭಕ್ತರು ಹಾಗೂ ಅಭಿಮಾನಿ ವರ್ಗದವರಿಂದಾಯ್ದು ಪಟ್ಟಿ ಮಾಡಿದರು. ಪತ್ರಿಕೆಗಾಗಿಯೇ ಒಂದು ನಿಧಿ ರೂಪ ತಾಳತೊಡಗಿತು. ಪತ್ರಿಕೆಗಾಗಿಯೇ ಒಂದು ಮುದ್ರಣಾಲಯ ಸ್ಥಾಪನೆಯಾಯಿತು. ಅದಕ್ಕಾಗಿ ಒಂದು ಬೃಹತ್ ಕಟ್ಟಡ ಎದ್ದು ನಿಂತಿತು. ಮಠದ ಪಕ್ಕಕ್ಕೆ ಕರ್ತೃ ಗದ್ದುಗೆಯ ಮುಂದೆ ಪರಂಜ್ಯೋತಿ ಕಾರ್ಯಾಲಯ ತನ್ನ ಕಾರ್ಯದಲ್ಲಿ ತತ್ಪರವಾಗಿದೆ.

"ಪತ್ರಿಕೆ ಹುಟ್ಟಿದ್ದು ಜನಸೇವೆಗಾಗಿ, ಜ್ಞಾನ ಪ್ರಸಾರಕ್ಕಾಗಿ ಎಂಬುದನ್ನು ತಿಳಿದು ಕೊಂಡರೆ ಸಾಕು ಆ ಪತ್ರಿಕೆಯ ಭವಿಷ್ಯ ಹಾಗೂ ನಾಡಿನ ಭವಿಷ್ಯ ಸುಂದರವಾಗುವುದರಲ್ಲಿ ಸಂದೇಹವಿಲ್ಲ. ಇದು ಜಗದ್ಗುರುಗಳವರ ಖಚಿತ ಮತ.೧೧ ಸತ್ಯವನ್ನು ಬರೆಯುವ ಛಲಬೇಕು. "ಸುದ್ದಿ ಎಲ್ಲರಿಗೂ ಬೇಕು. ಆದರೆ ಅದು ಸತ್ಯಾಂಶದಿಂದ ಕೂಡಿರಬೇಕು "ದ್ವೇಷಾಸೂಯೆಗಳಿಂದ ಕೂಡಿದ ಸುದ್ದಿ....ಪತ್ರಿಕೆಯ ಘನತೆ–ಗೌರವಕ್ಕೆ ಕುಂದು"೧೨ "ಪತ್ರಿಕೆಗಳು ಬದುಕನ್ನು ಬಂಗಾರ ಮಾಡುವಂತಹವುಗಳಾಗಿರಬೇಕು. ಭಾಷೆ ಸರಳವಾಗಿದ್ದು ಭಾವ ಎತ್ತರವಾಗಿರಬೇಕು. ರಾಷ್ಟ್ರಾಭಿಮಾನವನ್ನು ಜಾಗೃತಗೊಳಿಸುವಂತಿರಬೇಕು. ಕನ್ನಡತನವನ್ನು ಹೆಚ್ಚಿಸುವಂತಿರಬೇಕು. ಅಂದಾಗ ಪತ್ರಿಕೋದ್ಯಮಕ್ಕೆ ಬಲ ಹಾಗೂ ಬೆಲೆ ಬರುತ್ತದೆ.೧೩ ಇಂಥ ಧ್ಯೇಯ ಧೋರಣೆಗಳನ್ನು ಇಟ್ಟುಕೊಂಡು ಬಂದ ಪರಂಜ್ಯೋತಿ ಇಲ್ಲಿಯವರೆಗೆ ನಿಯತಕಾಲಿಕವಾಗಿ ಬಂದಿರುವುದಲ್ಲದೆ ಇನ್ನು ಮುಂದೆಯೂ ಅದರ ಭವಿಷ್ಯ ಉಜ್ವಲವಾಗಿದೆ.

ತಮ್ಮಿಚ್ಛೆಯಂತೆ ಶ್ರೀ ಜಗದ್ಗುರುಗಳವರು ತಮ್ಮ ಪತ್ರಿಕೆಗೆ ವೈವಿಧ್ಯತೆಯನ್ನು ನೀಡಿರುವರು. "ವಿವೇಚನಾತ್ಮಕ ವಿಷಯ ಸಂಗ್ರಹ" ನಿಸರ್ಗ ಸೌಂದರ್ಯದೊಡಗೂಡಿದ ಆಕರ್ಷಕ ಚಿತ್ರ, ವಿವಿಧ ಕಲೆಗಳ ಸಮಾಲೋಚನೆ, ವೈಜ್ಞಾನಿಕ ಹಾಗೂ ಮನೋವೈಜ್ಞಾನಿಕ ಸಂಶೋಧನೆಯ ಲೇಖನಗಳು....ಸರಳ ಭಾಷೆಯಲ್ಲಿ ಸಹಜತೆಯ ನಿರೂಪಣೆ....ಸಂಸ್ಕೃತಿಯ ಪುನರುತ್ಥಾನದ ವಿಚಾರಗಳನ್ನು ಚಿತ್ರಗಳ ಮೂಲಕ ತಿಳಿಸುವದು"–ಮುಂತಾದವುಗಳೆಲ್ಲವನ್ನೂ ಅಳವಡಿಸಿಕೊಂಡು ಪರಂಜ್ಯೋತಿಯು ಬೆಳಗುತ್ತಿದೆ.೧೪ ಮನವಿದ್ದಲ್ಲಿ ಮಾರ್ಗವಿದೆ. ಪರಂಜ್ಯೋತಿಯು ಶ್ರೀ ಜಗದ್ಗುರುಗಳ ಇಚ್ಛಾ ಕೂಸಾಗಿರುವುದರಿಂದ ಅದರ ಬೆಳವಣಿಗೆಯ ಬಗೆಗೆ ಚಿಂತಿಸಬೇಕಿಲ್ಲ.

ಧಾರ್ಮಿಕ ರಂಗದಲ್ಲಿ:

ಶ್ರೀ ಜಗದ್ಗುರುಗಳ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿ ಪರಂಜ್ಯೋತಿಯು ಬಹು

---

೧೧ ಅದೇ ಪು. ೧೨೭

೧೨ ಅದೇ ಪು. ೧೨೬

೧೩ ಅದೇ ಪು. ೧೨೮

೧೪ ಅದೇ.

ಮುಖವಾಗಿ ಪ್ರತಿಭಾ ಸಂಪನ್ನವಾಗಿದೆ. ಪರಂಜ್ಯೋತಿಯು ಶ್ರೀ ಮೂರುಸಾವಿರಮಠದ ಮುಖವಾಣಿ. ಇದು ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ಪ್ರಕಟಣೆಯು. ಧರ್ಮಪ್ರಚಾರಕ ಮಂಡಳವು "ದೇಶ ವಿದೇಶಗಳಲ್ಲಿ ಬಸವಧರ್ಮ ತತ್ವಪ್ರಚಾರ ಮಾಡಲು ಸಂಸ್ಥಾಪಿತವಾದ ಧರ್ಮ ಸಂಸ್ಥೆ"[೧೫] ಅಂದಬಳಿಕ ಪರಂಜ್ಯೋತಿಯು ಸ್ವಾಭಾವಿಕವಾಗಿ ಧಾರ್ಮಿಕ ಮಾಸಿಕವು. ಬಸವ ಧರ್ಮ ತತ್ವಪ್ರಚಾರವೇ ಇದರ ಘನ ಉದ್ದೇಶ. ಬಸವ ಧರ್ಮ ವಿಶ್ವಧರ್ಮವಾದ ಕಾರಣ ಈ ಪತ್ರಿಕೆಯು ಮಾನವಧರ್ಮದ ಪತಾಕೆಯನ್ನು ಎತ್ತಿ ಹಿಡಿದು ಮುನ್ನಡೆದಿದೆ.

ಧಾರ್ಮಿಕ ಜಾಗೃತಿಗಾಗಿಯೇ ಪ್ರವೃತ್ತಿ ಬಂದ ಪತ್ರಿಕೆಯಿದು.[೧೬] ಸ್ವತಃ ಜಗದ್ಗುರುಗಳವರು ತಮ್ಮ ಆಶೀರ್ವಾಣಿ ರೂಪದಲ್ಲಿ ಧಾರ್ಮಿಕ ವಿಚಾರಗಳನ್ನು ಬರೆದು ಪ್ರತಿ ಸಂಚಿಕೆಯಲ್ಲಿ ಪ್ರಕಟಿಸುತ್ತಿರುವರು. ಪ್ರತಿ ಸಂಚಿಕೆಯ ಎರಡನೆಯ ಲೇಖನವಿದು. ಈ ಲೇಖನಗಳ ಸಂಗ್ರಹವೇ "ಆಶೀರ್ವಾಣಿ"ಯಾಗಿ ಎರಡು ಭಾಗಗಳಲ್ಲಿ ಪ್ರತ್ಯೇಕವಾಗಿ ಪ್ರಕಟಗೊಂಡಿದೆ.[೧೭] ಶಾಲೆ, ಕಾಲೇಜ, ವಿಶ್ವವಿದ್ಯಾಲಯಗಳಲ್ಲಿ ಪಠ್ಯವಾಗಲು ಯೋಗ್ಯವಾದ ಸಂಗ್ರಹವಿದು.

ಪರಂಜ್ಯೋತಿಯ ಪ್ರತಿ ಸಂಚಿಕೆಯ ಮೊದಲ ಲೇಖನವೆಂದರೆ ಶರಣರ ಒಂದು ಪದ್ಯ. ಓದುಗನೇ ಭಕ್ತಿಯಿಂದ ಕೈಮುಗಿದು ಪ್ರಾರ್ಥಿಸಿ, ಎರಡನೆಯದಾಗಿ ಜಗದ್ಗುರುಗಳವರಿಂದ ಆಶೀರ್ವಾದ ಪಡೆದು, ಒಳಗೆ ಬಾ. ಬಸ್‌ಸ್ಟ್ಯಾಂಡ್, ರೇಲ್ವೆ ಪ್ಲಾಟ್‌ಫಾರ್ಮಿನ ಮೇಲೆ ಸಿಗುವ ಪತ್ರಿಕೆಯಿದಲ್ಲ. ಆಜೀವ ಸದಸ್ಯನಾಗಿ ಮನೆಗೆ ತರಿಸಿಕೊಳ್ಳುವ ಧಾರ್ಮಿಕ ಪತ್ರಿಕೆ.

ಕೇವಲ ಮೊದಲಿನೆರಡು ಲೇಖನಗಳು ಮಾತ್ರವಲ್ಲ, ಇನ್ನುಳಿದೆಲ್ಲ ಲೇಖನಗಳೂ ಧಾರ್ಮಿಕ ವಿಚಾರಗಳನ್ನೇ ಹೊತ್ತ ತಾತ್ವಿಕ ಚಿಂತನ ಪರವಾಗಿರುವವು. ಆಧ್ಯಾತ್ಮಿಕ ಲೇಖಕರಿಗೆ ತಮ್ಮ ಆತ್ಮನನ್ನು ಗರಿಗೆದರಿ ಪರಂಜ್ಯೋತಿಯ ಬೆಳಗಿನಲ್ಲಿ ಇಲ್ಲಿ ಹಾರಿಬಿಡಲು ಅನುವಾಗಿದೆ. ಈ ಎತ್ತರಕ್ಕೆ ತಮ್ಮ ದೃಷ್ಟಿ ಹಾಯಿಸಿ ತಮ್ಮ ಜೀವನವನ್ನು ಸಫಲಗೊಳಿಸಲು ಆಧ್ಯಾತ್ಮಿಕ ಓದುಗನಿಗೆ ಇದೊಂದು, ಶ್ರೀ ಜ.ಚ.ನಿ.ಯವರ ಮಾತಿನಲ್ಲಿ ಹೇಳುವುದಾದರೆ, ಸತ್ಯ ಸುಂದರವಾದ ಶಿವಾಲಯವಾಗಿದೆ."[೧೮]

---

೧೫ ಅದೇ ಪು. ೧೨೯

೧೬ ಶಂಕರ ಪಾಟೀಲ, ಮೇಲೆ ಉದ್ಧರಿಸಿದೆ, ಪು. ೩೭೩

೧೭ ಆಶೀರ್ವಾಣಿ, ಭಾಗ-೧,....ಭಾಗ-೨, ೧೯೮೨, ಹುಬ್ಬಳ್ಳಿ ಮೂರುಸಾವಿರ ಮಠದ ಶ್ರೀ ಜಗದ್ಗುರುಗಳವರ ಭಾಷಣ ಸಂಗ್ರಹ, ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಲ, ಮೂರುಸಾವಿರಮಠ, ಹುಬ್ಬಳ್ಳಿ

೧೮ ಎ. ಸ್. ಹೂಗಾರ ಮೇಲೆ ಉದ್ಧರಿಸಿದೆ.

ಸಂದರ್ಭಕ್ಕನುಸಾರವಾಗಿ ಶರಣರ ವರ್ಣರಂಜಿತ ಮುಖಚಿತ್ರದೊಂದಿಗೆ ಸಂಸ್ಮರಣ ಅಥವಾ ವಿಶೇಷ ಸಂಚಿಕೆಗಳು ಹೊರಬಂದಿವೆ. ಉದಾಹರಣಾರ್ಥವಾಗಿ–ಲಿಂ. ಶ್ರೀ ವಿಜಯ ಮಹಾಂತ ಶಿವಯೋಗಿಗಳವರ ೬೩ನೆಯ ಪುಣ್ಯತಿಥಿ ಸಂಸ್ಮರಣ ಸಂಚಿಕೆ (ನವೆಂಬರ ೧೯೭೪), ಶ್ರೀ ಜಗದ್ಗುರುಗಳ ಪೀಠಾರೋಹಣ ದ್ವಾದಶ ವಾರ್ಷಿಕೋತ್ಸವದ ಸಂಸ್ಮರಣ ಸಂಚಿಕೆ (ಏಪ್ರಿಲ್ ೧೯೭೨), ಚಿತ್ತರಗಿ ಸಂಸ್ಥಾನಮಠದ ಇಲಕಲ್ಲಿನ ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳವರ ಪಟ್ಟಾಭಿಷೇಕ ದ್ವಾದಶ ವಾರ್ಷಿಕೋತ್ಸವದ ವಿಶೇಷ ಸಂಚಿಕೆ (ಮಾರ್ಚ ೧೯೮೪) ಮತ್ತು ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ರಜತ ಮಹೋತ್ಸವದ ವಿಶೇಷ ಸಂಚಿಕೆ (ಫೆ. ೧೯೮೨) ಮುಂತಾದವುಗಳು.

ಸಾಹಿತ್ಯಿಕ ರಂಗದಲ್ಲಿ:

ಪರಂಜ್ಯೋತಿಯು ಸಾಹಿತ್ಯಿಕ ಮಾಸಿಕವೂ ಸಹ ಆಗಿದೆ. ಮೂರುಸಾವಿರಮಠವು ಸಾಹಿತ್ಯಿಕ ಕ್ಷೇತ್ರದಲ್ಲಿ ಅಮೋಘ ಕಾರ್ಯಕೈಕೊಂಡಿದೆ. ಈ ಹಿಂದೆ ಹೇಳಿದಂತೆ, ಸುಮಾರು ೧೯೨೦ ರಲ್ಲಿಯೇ ಲಿಂ. ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರುಸಾವಿರಮಠದ ಗ್ರಂಥಮಾಲೆಯನ್ನು ಪ್ರಾರಂಭಿಸಿ ಮೂರು ಗ್ರಂಥಗಳನ್ನು ಪ್ರಕಾಶನಗೊಳಿಸಿದರು.[೧೯] ಲಿಂ.ಶ್ರೀ ಗುರುಸಿದ್ಧರಾಜಯೋಗೀಂದ್ರ ಮಹಾಸ್ವಾಮಿಗಳವರು ೧೯೫೬ರಲ್ಲಿ ತಮ್ಮ ಗುರುಗಳ ಹೆಸರಿನಲ್ಲಿ "ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರ ಮಂಡಳ"ವನ್ನು ಸ್ಥಾಪಿಸಿ ಅದಕ್ಕೆ ಸುಮಾರು ೬೦ ಸಾವಿರ ರೂಪಾಯಿಗಳ ನಿಧಿಯನ್ನು ಕೊಡಿಟ್ಟರು. ಈ ಮಂಡಳವು ಮೂರುಸಾವಿರಮಠದ ಹಾಗೂ ಅದರ ಜಗದ್ಗುರುಗಳ ಬಹುಮುಖ ಪ್ರತಿಭೆಯನ್ನು ಸರ್ವರಂಗದಲ್ಲಿ ಸುತ್ತೆತ್ತಲೂ ಪಸರಿಸತೊಡಗಿತು.

ಪರಂಜ್ಯೋತಿಯು ಧರ್ಮಪ್ರಚಾರಕ ಮಂಡಳಿಯ ಒಂದು ಅಂಗ. ಇದರೊಂದಿಗೆ ಶ್ರೀಮಠ ಹಾಗೂ ಶ್ರೀ ಜಗದ್ಗುರುಗಳು ಪತ್ರಿಕಾ ರಂಗಕ್ಕೆ ಪಾದಾರ್ಪಣ ಮಾಡಿದರು. ನಾಡಿನ ಹಿರಿ ಕಿರಿಯ ಸಾಹಿತಿಗಳು ಈ ಮಾಸಿಕದ ಆಸುವು ಪಡೆದು ತಮ್ಮ ಚಿಂತನಪರ ಸಾಹಿತ್ಯವನ್ನು ಇದರ ಮುಖಾಂತರ ಚೆಲ್ಲವರಿದಿರುವರು. ಶರಣರ ಸಾಹಿತ್ಯ ಇಲ್ಲಿ ಓತ ಪ್ರೋತವಾಗಿ ಬಂದಿದೆ. ಲೇಖಕರ ಜೊತೆಗೆ ಓದುಗರನ್ನು ಸಾಹಿತ್ಯದೆಡೆಗೆ ಎಳೆದು ಅವರಲ್ಲಿ ಒಳ್ಳೆಯ ಅಭಿರುಚಿಯನ್ನು ಹುಟ್ಟಿಸಿದುದು. ಈ ಪರಂಜ್ಯೋತಿಯು ಅಮೋಘ ಕಾರ್ಯ ಮಾನವ ಮನಕ್ಕೆ ಶುದ್ಧ ಸಾಹಿತ್ಯದ ತರಬೇತಿ ದೊರೆತರೆ–ಮನುಜ ಕುಲವೇ ಉದ್ಧಾರವಾಗುವುದು. ಯುನೆಸ್ಕೋ (UNESCO)ದ ಪೀಠಿಕೆಯಲ್ಲಿ ಇದೇ ಮಾತು ಬರುವುದು. ಜಗತ್ತಿನಲ್ಲಿ ಯುದ್ಧಗಳಿಗೆ ಮೂಲ ಕಾರಣ ಮಾನವರ ಮನಸ್ಸು. ಆ ಮನಸ್ಸಿಗೇ ಸರಿಯಾದ ಮಾರ್ಗದರ್ಶನ ದೊರೆತರೆ ಯುದ್ಧಗಳಿಗೆ ಆಸ್ಪದವೇ ಇಲ್ಲ.

ಇಲ್ಲಿ ಸಾಹಿತ್ಯ ನಾನಾ ವಿನ್ಯಾಸದಲ್ಲಿ ಗರಿಗೆದರಿ ತನು, ಮನ, ಬುದ್ಧಿ, ಆತ್ಮಕ್ಕೆ

---

೧೯ ಮೇಲೆ ಟಿಪ್ಪಣಿ 'ಲ'ನ್ನು ನೋಡಿರಿ.

ಸಾಂತ್ವನ ನೀಡಿ ಜೀವನಕ್ಕೆ ಒಂದು ಶಿಸ್ತು ಕೊಡಲು ಪ್ರಯತ್ನಿಸಿದೆ.[೨೦] ಈ ಪರಂಜ್ಯೋತಿಯ ಮೂಲ ಪ್ರೇರಕ ಶಕ್ತಿಯಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಸ್ವತಃ ಕವಿ, ಲೇಖಕ ಗ್ರಂಥಕರ್ತ ಸಂಸ್ಕೃತ ಪಂಡಿತ. ಒಟ್ಟಿನಲ್ಲಿ ಕನ್ನಡದ ಒಬ್ಬ ಶ್ರೇಷ್ಠ ಧಾರ್ಮಿಕ ಸಾಹಿತಿ. ಅದೇ ರೀತಿ ಈ ಮಾಸಿಕಕ್ಕೆ ಸಂಪಾದಕತ್ವದ ಭದ್ರ ಬುನಾದಿ ಹಾಕಿದವರು ಕನ್ನಡದ ಹೆಸರಾಂತ ಸಾಹಿತಿ (ಕವಿ, ಲೇಖಕ, ಗ್ರಂಥಕರ್ತ, ಕಾದಂಬರಿಕಾರ, ನಾಟಕಕಾರ) ಪ್ರೊ. ಜಿ. ಎಚ್. ಹನ್ನೆರಡುಮಠರು ಮೂರುಸಾವಿರಮಠಕ್ಕೆ ಹನ್ನೆರಡುಮಠ ತೊರೆಯು ಬಂದು ಕೂಡಿದುದು ಸಾಹಿತ್ಯಕ್ಕೆ ಸೌರಭ ನೀಡಿದೆ. ಇವರೀರ್ವರ ಪ್ರೇರಕ ಶಕ್ತಿಯು ನೂರಾರು ಸಾಹಿತಿಗಳಿಗೆ ಚೇತನಾಶಕ್ತಿ ನೀಡಿದೆ, ಓದುಗರಿಗೆ ಸಂತೃಪ್ತಿ ನೀಡಿದೆ. ಈ ರೀತಿಯತ್ತ ಪತ್ರಿಕೆ ಸಾರ್ಥಕ ಪಡೆದಿದೆ.

ಸಾಂಸ್ಕೃತಿಕ ರಂಗದಲ್ಲಿ:

ಪರಂಜ್ಯೋತಿಯು ತನ್ನ ಮುಖಪುಟದ ಹಣೆಪಟ್ಟಿಯಲ್ಲಿ ಬರೆದಂತೆ "ಸಂಸ್ಕೃತಿ ಸೌರಭ ಸೂಸುವ ಮಾಸಿಕ". ನಾಡಿನ ಘನತೆ ಗೌರವಗಳು ಅಲ್ಲಿಯ ಜನರ ಸಂಸ್ಕೃತಿಯ ಮೇಲೆ ಅವಲಂಬಿಸಿವೆ. ಸುಸಂಸ್ಕೃತ ಜನರು ಒಳ್ಳೇ ನಾಡನ್ನು, ರಾಷ್ಟ್ರವನ್ನು ಕಟ್ಟಬಲ್ಲರು. ಗ್ರೀಕ್ ತತ್ವಜ್ಞಾನಿ ಅರಿಸ್ಟಾಟಲನು "ಒಳ್ಳೆಯ ಜನರು ಒಳ್ಳೆಯ ರಾಜ್ಯವನ್ನು ಹಾಗೂ ಕೆಟ್ಟ ಜನರು ಕೆಟ್ಟ ರಾಜ್ಯವನ್ನು ಕಟ್ಟುವರು" ಎಂದು ಹೇಳಿರುವನು. ಒಳ್ಳೆಯದು ಮತ್ತು ಕೆಟ್ಟದು ಜನರ ನಡತೆಯನ್ನು ಅವಲಂಬಿಸಿದೆ. ನಡತೆಯೇ ನೀತಿ, ನೈತಿಕತೆ. ನೀತಿವಂತ ಒಂದು ದೃಷ್ಟಿಯಲ್ಲಿ ಧರ್ಮವಂತನಿಗಿಂತ ಶ್ರೇಷ್ಠ. ಧರ್ಮಾಂಧತೆಯಂತೂ ತೀರ ಕನಿಷ್ಠ. ಧರ್ಮ, ನೀತಿ, ಮಾನವತೆ ಮೇಳೈಸಿ ಸಂಸ್ಕೃತಿಯಾಗುವುದು—ಪರಿಮಳ ಬೀರುವ ಹೂವುಗಳಿಂದ ಮಾಲೆಯಾಗುವಂತೆ. ಅಂಥ ಸಂಸ್ಕೃತಿ ಸೌರಭ ಸೂಸುವ ಮಾಸಪತ್ರಿಕೆಯಿದು– "ಪರಂಜ್ಯೋತಿ". ಅದಕ್ಕೆ ಪೂಜ್ಯ ಶ್ರೀ ಜ. ಚ. ನಿ.ಯವರು "ಪರಂಜ್ಯೋತಿ ಒಂದು ಹೂವಿನ ಮಂಜರಿ. ಪತ್ತಾರು ನರುಗಂಪಿನ ಹೂಗಳನ್ನು ಹೊತ್ತು ಚೆಲುವಾಗಿದೆ. ತನ್ನ ಉದ್ದೇಶದಂತೆ ಸಾಂಸ್ಕೃತಿಕ ಸೌರಭವನ್ನು ಹಿತಮಿತವಾಗಿ ಹರಡುವ ಶಕ್ತಿ ಸಂಪನ್ನವಾಗುವ ಆಸೆಯಿದೆ" ಎಂದು ಮುಂತಾಗಿ ಹೇಳಿ ಹರಿಸಿರುವರು.[೨೧]

ಧಾರ್ಮಿಕನು ಸಾಮಾನ್ಯವಾಗಿ ನೀತಿವಂತನು. ಪರಂಜ್ಯೋತಿ ಧಾರ್ಮಿಕ ಪತ್ರಿಕೆ, ಅಂದ ಬಳಿಕ ಇದು ನೈತಿಕ ಪತ್ರಿಕೆಯೂ ಹೌದು. ಲೇಖಕ ಓದುಗ–ಇಬ್ಬರಿಗೂ ಇಲ್ಲಿ

---

೨೦ ವಿಜ್ಞಾನ, ವೈದ್ಯಕೀಯ, ಮನಶ್ಶಾಸ್ತ್ರ, ಕಲೆಗಳ ಪರಿಚಯ ಇತಿಹಾಸ, ಭೂಗೋಲ, ಗ್ರಾಮೀಣ ಅಭಿವೃದ್ಧಿ ಯೋಜನೆ ಮುಂತಾದವುಗಳ ಬಗೆಗೂ ಇದರಲ್ಲಿ ಲೇಖನಗಳು ಪ್ರಕಟವಾಗಿವೆ.

೨೧ ಟಿಪ್ಪಣಿ ೨ನ್ನು ನೋಡಿರಿ.

ಒಂದು ಸಂಸ್ಕೃತಿ ಇದೆ. ಇದುವೇ ಈ ಪತ್ರಿಕೆಯ ಘನ ಉದ್ದೇಶ ಅದುವೇ ಶ್ರೀಜಗದ್ಗುರು ಗಳವರ ಶ್ರಮದ ಸಫಲತೆ. ಶ್ರೀ ಜಗದ್ಗುರುಗಳವರ "ಆಶೀರ್ವಾಣಿ"ಯಲ್ಲಿ, ಅವರ ಪೂರ್ಣಜ್ಞ ವಚನಗಳಲ್ಲಿ ಹಾಗೂ ಇನ್ನುಳಿದ ಲೇಖನಗಳಲ್ಲಿ ಈ ನೀತಿಯ, ಸಂಸ್ಕೃತಿಯ ಸೌರಭ ಸೂಸುತ್ತ ಬಂದಿದೆ.

ಪರಂಜ್ಯೋತಿಯು ಶೈಕ್ಷಣಿಕ ಮಾಸಿಕವೂ ಸಹ. ಧರ್ಮ, ನೀತಿ, ಜ್ಞಾನಗಳನ್ನು ಇಲ್ಲಿ ಬಿತ್ತಿ ಓದುಗ-ಸಮಾಜದಲ್ಲಿ ಸಂಸ್ಕೃತಿಯನ್ನು ಬೆಳೆಸಲು ಶ್ರೀ ಜಗದ್ಗುರುಗಳವರು ಈ ಮಾಸಿಕದ ಮುಖಾಂತರ ಕೃಷಿ ಗೈಯ್ಯುತ್ತಿರುವರು. ಜನತೆ ಇದರ ಸದುಪಯೋಗ ಪಡೆಯುವುದರಲ್ಲಿ ಶ್ರೀ ಜಗದ್ಗುರುಗಳವರ ಶ್ರಮದ ಸಫಲತೆ ಅಡಗಿದೆ.

ಮೂರುಸಾವಿರಮಠದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಈ ಪರಂಜ್ಯೋತಿ ಯಲ್ಲಿ ಬೆಳಗು ಕಾಣುವವು. ವಿದ್ವಜ್ಜನರ ಭಾಷಣಗಳು, ವಿಶೇಷೋಪನ್ಯಾಸಗಳು ಸುಪ್ರಭಾತಗಳು ವಿವಿಧ ಕಲಾಕಾರರ ಕಲೆಗಳು ಇಲ್ಲಿ ಮಾರ್ದವಗೊಂಡು ಸಮಾಜದಲ್ಲಿ ಸಂಸ್ಕೃತಿಯನ್ನು ಮಿಡಿಯುತ್ತಿರುವವು. ಹಲವಾರು ಸಂಘ-ಸಂಸ್ಥೆಗಳು, ಶಾಲೆ-ಕಾಲೇಜು ಗಳು ಸಹ ತಮ್ಮ ಸಾಂಸ್ಕೃತಿಕ ಚಟುವಟಿಕೆಗಳನ್ನು ಈ ಮಾಸಿಕದ ಮಾಧ್ಯಮದಿಂದ ಪ್ರಕಟಿಸಿ ಮೆರುಗು ಪಡೆಯುತ್ತಿರುವವು.

ಕೆಲ ಸೂಚನೆಗಳು:

ಪರಂಜ್ಯೋತಿಯು ಇನ್ನೂ ಹೆಚ್ಚು ಪ್ರಕಾಶಮಾನವಾಗಬೇಕೆಂಬ ದೃಷ್ಟಿಯಲ್ಲಿ ಕೆಲ ಸೂಚನೆಗಳನ್ನು ಕೊಡಲಿಚ್ಛಿಸುವೆ.

೧) ಗಾತ್ರವು ಸಧ್ಯದ ಡೆಮಿಗಿಂತ ದೊಡ್ಡದಿರಬೇಕು ನವೆಂಬರ ೧೯೭೪ರ (ಲಿಂ. ಶ್ರೀ ವಿಜಯಮಹಾಂತ ಶಿವಯೋಗಿಗಳವರ ೬೩ನೆಯ ಪುಣ್ಯತಿಥಿ ಸಂಸ್ಮರಣ) ಸಂಚಿಕೆಯಷ್ಟು.

೨) ಮುಖಪುಟವು ತ್ರಿವರ್ಣ ರಂಜಿತವಾಗಿರಬೇಕು ಉದಾ: ನವಂಬರ್ ೧೯೭೪ರ ಸಂಚಿಕೆ ಮತ್ತು ಆ ಮಾಸಿಕದ ವಿಶೇಷ ವ್ಯಕ್ತಿಯ ಬ್ಲಾಕಿನೊಂದಿಗಿರಬೇಕು.

೩) ಆಯಾ ಮಾಸಿಕವು ಆ ಮಾಸಿಕದ ವಿಶೇಷಾಂಕವಾಗಿರಬೇಕು. ಅಂದರೆ ಆ ಮಾಸಿಕದಲ್ಲಿ ಬರುವ ಸಂಗತಿಗಳ ಬಗೆಗೆ ವಿಶೇಷವಾದ ಲೇಖನಗಳಿರಬೇಕು. ಆ ರೀತಿ ಪೂರ್ವಭಾವಿಯಾಗಿ ಅಂಥ ಲೇಖನಗಳನ್ನು ಆಹ್ವಾನಿಸಬೇಕು.

೪) ಪ್ರತಿ ಮಾಸಿಕದಲ್ಲೂ ಸಂಪಾದಕೀಯವಿರಬೇಕು. ಅದು ಪ್ರಚಲಿತ ಘಟನೆ ಗಳನ್ನು ಧಾರ್ಮಿಕ ದೃಷ್ಟಿಯಲ್ಲಿ ಸ್ಪಂದಿಸಬೇಕು.

೫) ಇದಕ್ಕಾಗಿ ಒಬ್ಬ ಅನುಭವಿ ಸಂಪಾದಕನನ್ನು ಪ್ರತ್ಯೇಕವಾಗಿ ಪಗಾರದ ಮೇಲೆ ನೇಮಿಸಬೇಕು.

೬) ಸಂಶೋಧನಾತ್ಮಕ, ಚಿಂತನ ಪರ, ಪ್ರಚಲಿತ ಘಟನೆಗಳಿಗೆ ಸಂಬಂಧಿಸಿದ

ಲೇಖನಗಳು ಬರುವಂತೆ ವಿಶೇಷವಾಗಿ ಆಹ್ವಾನಿಸಬೇಕು ಹಾಗೂ ಅವಕ್ಕೆ ಧಾರಾಳವಾದ ಸಂಭಾವನೆ ನೀಡಬೇಕು.

೭) ಪ್ರಕಟಿತ ವಿಶೇಷ ಲೇಖನಗಳ ಸುಮಾರು ಹತ್ತುಪ್ರತಿಗಳನ್ನು ಉಚಿತವಾಗಿ ಲೇಖಕರಿಗೆ ನೀಡಬೇಕು.

೮) ಮುಖಪುಟ ಮತ್ತು ಹಿಂದಿನ ಪುಟಗಳ ಮೇಲೆ ಆ ಮಾಸಿಕದ ವಿಶೇಷ ವ್ಯಕ್ತಿಯ ಅಥವಾ ಸಂಗತಿಯ ತ್ರಿವರ್ಣರಂಜಿತ ಬ್ಲಾಕುಗಳಿರಬೇಕು. ಈ ಎರಡು ಪುಟಗಳಲ್ಲಿ ಜಾಹೀರಾತುಗಳು ಬರಲೇಬಾರದು.

೯) ನಾಡಿನ ಎಲ್ಲ ವೀರಶೈವ ಮಠಗಳಲ್ಲಿಯ ಸಾಂಸ್ಕೃತಿಕ ಚಟುವಟಿಕೆಗಳ ವರದಿಗಳು ಸಂಬಂಧಪಟ್ಟ ಬ್ಲಾಕುಗಳೊಂದಿಗೆ ಪ್ರಕಟವಾಗಬೇಕು.

೧೦) ಶರಣ, ಶರಣೆಯರ: ಯುವಕ, ಯುವತಿಯರ; ಬಾಲಕ ಬಾಲಕಿಯರ ಸಾಧನೆ, ಸಿದ್ಧಿಗಳ ವಿವರಗಳನ್ನು ಸಂಬಂಧಪಟ್ಟ ಬ್ಲಾಕುಗಳೊಂದಿಗೆ ಹಾಕಬೇಕು. ಇದರಿಂದ ಪತ್ರಿಕೆಯು ಹೆಚ್ಚು ಪ್ರಚಾರವಾಗುವುದಲ್ಲದೆ ಜನತೆಯಲ್ಲಿ ಸ್ಪರ್ಧಾ ಮನೋಭಾವ ಬರುವುದು. ಅದು ಸಮಾಜದ ಏಳ್ಗೆಗೆ ಅನುಕೂಲವಾಗುವುದು.

ಈ ರೀತಿಯ "ಬೇಕು"ಗಳಿಗೆ ಕೊನೆಯಿಲ್ಲ. ಈ ಎಲ್ಲ "ಬೇಕು"ಗಳಿಗೆ ಮುಖ್ಯವಾಗಿ ಬೇಕಾಗಿರುವುದು ಅರ್ಥ. ಅದಕ್ಕೆ ಶ್ರೀಮಠಕ್ಕೆ ಕೊರತೆ ಕಾಣೆ. ಪತ್ರಿಕೆಯು ತನ್ನ "ಬಲ" ಬೆಳೆಸಿಕೊಂಡರೆ ಓದುಗರು ಅದಕ್ಕೆ ಸ್ವಾಭಾವಿಕವಾಗಿ "ಬೆಲೆ"ಕೊಡುವರು.

ವಿದ್ವಾಂಸರಾದ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಇಚ್ಛಾಶಕ್ತಿಯಿಂದ ಬೆಳಗುತ್ತಿರುವ ಈ ಪರಂಜ್ಯೋತಿಯು ಶ್ರೀಗಳವರ ಘನತೆ, ಗೌರವವನ್ನೂ ಪರಿಚಯಿಸುತ್ತಿರುವುದು–ತನ್ನ ಸಾಂಸ್ಕೃತಿಕ ಸೌರಭವನ್ನು ಹೊರಸೂಸುತ್ತ ಧಾರ್ಮಿಕ ಪತ್ರಿಕಾ ರಂಗಕ್ಕೆ ಇದೊಂದು ಶ್ರೀಗಳವರ ಅತ್ಯುತ್ತಮ ಕೊಡುಗೆ. ೧೯೬೮ರಿಂದ ಇಲ್ಲಿಯವರೆಗೆ ಅವ್ಯಾಹತವಾಗಿ ಈ ಪತ್ರಿಕೆಯು ತನ್ನ ಘನಧ್ಯೇಯದತ್ತ ದಾಪುಗಾಲಿಡುತ್ತ ಬಂದಿದೆ. ಅದರ ಹಿಂದೆ ಅಡಕವಾಗಿರುವ ಶ್ರೀಗಳವರ ದಣಿವರಿಯದ ಘನ ಪಾತ್ರದ ಅರಿವು ಯಾರಿಗಾದರೂ ಆಗಿರಲು ಸಾಕು. ಶ್ರೀ ಮಠದ ಘನತೆ, ಗೌರವಕ್ಕೆ ತಕ್ಕಂತೆ ನಾಡಿನ ಜನತೆಯನ್ನು ತಮ್ಮ ಬಹುಮುಖ ಪ್ರತಿಭೆಯಿಂದ ಶ್ರೀಗಳವರು ಸರ್ವಾಂಗ ಸುಂದರರನ್ನಾಗಿ ಮಾಡುತ್ತಿರುವುದು ಹೆಮ್ಮೆಯ ಸಂಗತಿ. ಈ ರೀತಿ ತಮ್ಮ ಜೀವನವನ್ನು "ಜಂಗಮ"ಕ್ಕರ್ಪಿಸಿರುವ ಶ್ರೀಗಳವರು ಈಗ ಅರವತ್ತು ವಸಂತಗಳನ್ನು ದಾಟಿ ಶತಕ ಬಾರಿಸಲು ಸನ್ನದ್ಧರಾಗಿರುವರು. ಈ ಸಂದರ್ಭದಲ್ಲಿ ಪೂಜ್ಯರ ಪಾದಪದ್ಮಗಳಲ್ಲಿ ಭಕ್ತಿಯಿಂದ ಪೊಡಮಟ್ಟು ಅರ್ಪಿಸುವ ವಸಂತನ ವಿಶೇಷ ಲೇಖನವಿದು.

ಈ ಲೇಖನವನ್ನು ಬರೆಯಲು ಪ್ರೋತ್ಸಾಹಿಸಿದ 'ಪರಂಜ್ಯೋತಿ'ಯ ಪ್ರಥಮ ಸಂಪಾದಕರಾದ ನನ್ನ ಆತ್ಮೀಯ ಮಿತ್ರ ಪ್ರೊ. ಜಿ. ಎಚ್. ಹನ್ನೆರಡುಮಠರಿಗೆ ಹನ್ನೆರಡು ನಮನಗಳು! ಈ ಲೇಖನಕ್ಕಾಗಿ ಅತಿ ಆತ್ಮೀಯತೆಯಿಂದ ಸಾಹಿತ್ಯವನ್ನು ಒದಗಿಸಿ ಸಹಕರಿಸಿದ ಪೂಜ್ಯ ವಾಮದೇವರಿಗೆ ನನ್ನ ಅನಂತ ವಂದನೆಗಳು.೨೨

□ □

೨೨ ಶ್ರೀ ವಾಮದೇವರು ಪರಂಜ್ಯೋತಿ ಕಾರ್ಯಾಲಯದ ಮೇಲ್ವಿಚಾರಕರಾಗಿ ದಿನ ನಿತ್ಯದ ಕಾರ್ಯದ ಹೊಣೆ ಹೊತ್ತು ಉತ್ಸುಕತೆಯಿಂದ ಕಾರ್ಯ ಮಾಡು ತ್ತಿರುವರು.

ಹಿಂದೀ ವಿದ್ಯಾಲಯದ ಸ್ಥಾಪನೆ ಹಾಗೂ ಅದರ ಬೆಳವಣಿಗೆ

—ಶ್ರೀ ಎಮ್. ವಿ. ಮಹಾಲೆ

ಉತ್ತರ ಕರ್ನಾಟಕದ ವಿದ್ಯಾ ಮತ್ತು ವ್ಯಾಪಾರದ ಮಹತ್ವಪೂರ್ಣ ಕೇಂದ್ರವಾದ ಹುಬ್ಬಳ್ಳಿ ಮಹಾನಗರವು ಧಾರ್ಮಿಕ ಕ್ಷೇತ್ರವೂ ಆಗಿದೆ. ಸರ್ವ ಧರ್ಮ ಸಹಿಷ್ಣುವಾದ, ಸರ್ವ ಜನರಿಗೂ ಪೂಜ್ಯವಾದ ವೀರಶೈವ ಮಹಾನ್ ಪೀಠವಾದ ಶ್ರೀ ಜಗದ್ಗುರು ಮೂರುಸಾವಿರಮಠವು ಹುಬ್ಬಳ್ಳಿಯ ಒಂದು ವಿಶೇಷ ಆಕರ್ಷಕ ಕೇಂದ್ರವಾಗಿದೆ.

ಹುಬ್ಬಳ್ಳಿಯ ಶ್ರೀ ಜಗದ್ಗುರು ಮೂರುಸಾವಿರಮಠದ ಪೀಠಾಧೀಶರಾಗಿ ಇಂದಿನ ಶ್ರೀಮನ್ ಮಹಾರಾಜ ನಿರಂಜನ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ೧೯೫೮ರಲ್ಲಿ ಸಿಂಹಾಸನಾರೂಢರಾದರು. ಭಾರತದ ಪವಿತ್ರ ಕ್ಷೇತ್ರವಾದ ವಾರಣಾಸಿ (ಕಾಶಿ)ಯಲ್ಲಿದ್ದು ಧಾರ್ಮಿಕ ಅಧ್ಯಯನ ನಡೆಯಿಸಿದ ಶ್ರೀಗಳವರು ಹಿಂದೀ ಭಾಷೆ ಹಾಗೂ ಹಿಂದೀ ಸಾಹಿತ್ಯದಲ್ಲಿ ಸಾಕಷ್ಟು ಅಭಿರುಚಿ ಉಳ್ಳವರಾಗಿದ್ದಾರೆ. ಹಿಂದೀ ಪ್ರದೇಶದಲ್ಲಿ ವಿದ್ಯಾಧ್ಯಯನ ನಡೆಸಿದ ಶ್ರೀಗಳವರು ಹುಬ್ಬಳ್ಳಿಯ ಮೂರುಸಾವಿರ ಮಠದ ಮಠಾಧೀಶರಾದ ನಂತರ ಸಂಸ್ಕೃತ, ಕನ್ನಡ ಇಂಗ್ಲೀಷ ಭಾಷೆಯ ಜೊತೆಗೆ ಹಿಂದೀ ಭಾಷೆಯಲ್ಲಿಯೂ ಸಹ ತಮ್ಮ ಸಾಹಿತ್ಯಾಭಿವೃದ್ಧಿಯ ಕಾರ್ಯವನ್ನು ಬಹು ತೀವ್ರಗತಿಯಲ್ಲಿ ಮುಂದುವರಿಸಿದರು. ಅಂತೆಯೇ ಇಂದು ಶ್ರೀಮಠದ ಪರಂಜ್ಯೋತಿ ಹಾಗೂ ಧರ್ಮಪ್ರಚಾರಕ ಮಂಡಳದ ವತಿಯಿಂದ ಇತರ ಭಾಷಾ ಸಾಹಿತ್ಯದೊಂದಿಗೆ ಹಿಂದೀ ಭಾಷೆಯಲ್ಲಿ ಸಹ ತಮ್ಮ ವಿಚಾರಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಚತುರ್ಮುಖಿ ಭಾಷಾ ಪ್ರವೀಣರಾದ ಶ್ರೀಗಳವರು ಹಿಂದೀ ಭಾಷಾ, ಸಭೆ–ಸಮಾಜಗಳಲ್ಲಿ ಸಹ ಹಿಂದಿ ಭಾಷೆಯಲ್ಲಿಯೇ ಭಾಷಣ ಮಾಡಿ ಜನತೆ ಹಾಗೂ ವಿದ್ಯಾವಂತರಿಗೆ ತಮ್ಮ ವಿಚಾರಗಳನ್ನು ಮನ ಮುಟ್ಟುವಂತೆ ಮಾಡಿದ್ದಾರೆ. ಇದು ಶ್ರೀಗಳವರ ಹಿಂದೀ ಭಾಷೆಯ ಬಗ್ಗೆ ಇರುವ ಅಪಾರ ಪ್ರೀತಿ–ವಿಶ್ವಾಸದ ಹೆಗ್ಗುರುತು ಆಗಿದೆ.

ಭಾರತ ದೇಶದ ರಾಷ್ಟ್ರಭಾಷೆ ಹಾಗೂ ರಾಜಭಾಷೆಯಾದ ಹಿಂದಿಯ ಪ್ರಚಾರ–ಪ್ರಸಾರವಾಗಬೇಕೆಂಬುದು ಶ್ರೀಗಳವರ ಮಹದಿಚ್ಛೆಯಾಗಿತ್ತು. ವಿದ್ಯಾಪ್ರೇಮಿಗಳಾದ ಶ್ರೀಗಳವರು ತಮ್ಮ ವಿದ್ಯಾ ಸಂಸ್ಥೆಗಳಲ್ಲಿ ಸರಕಾರದ ನೀತಿ–ಸಂಹಿತೆಗಳ ಪ್ರಕಾರ ಶಾಲಾ–ಕಾಲೇಜಗಳಲ್ಲಿ ಇತರ ಭಾಷೆಗಳೊಂದಿಗೆ ಹಿಂದೀ ಭಾಷೆಯ ಜ್ಞಾನವೂ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಲಭಿಸಬೇಕೆಂದು ಪೂಜ್ಯರ ಮನೋಕಾಂಕ್ಷೆಯಾಗಿದೆ ೧೯೫೮ರಲ್ಲಿ ಶ್ರೀ ಜಗದ್ಗುರು ಗಂಗಾಧರ ಹೈಸ್ಕೂಲಿನಲ್ಲಿ ಹಿಂದೀ ಶಿಕ್ಷಕರಾಗಿ ಶ್ರೀ ಎಮ್. ವಿ. ಮಹಾಲೆ

ಇವರು ಹಿಂದೀ ಭಾಷೆಯನ್ನು ಕಲಿಸುತ್ತಿದ್ದರು. ಶ್ರೀಗಳವರು ಉತ್ತರ ಭಾರತದ ನಾಗರಿಕ ಪ್ರಚಾರ ಸಭಾ ಹಾಗೂ ಇತರ ಧಾರ್ಮಿಕ-ಸಂಘ-ಸಂಸ್ಥೆಗಳ ಜೊತೆಗೆ ಸಂಪರ್ಕ ಇಟ್ಟು ಕೊಂಡಿದ್ದರು. ಅನೇಕ ಹಿಂದೀ ಸಂಸ್ಥೆಗಳ ಜೊತೆಯಲ್ಲಿ ಪತ್ರ ವ್ಯವಹಾರ ಮಾಡುತ್ತಿದ್ದರು. ಈ ಕಾರ್ಯದಲ್ಲಿ ಶಿಕ್ಷಕರಾದ ಶ್ರೀ ಮಹಾಲೆ ಇವರೊಂದಿಗೆ ವಿಚಾರ-ವಿನಿಮಯ ಮಾಡಿ ಪತ್ರಗಳನ್ನು ಬರೆಯಿಸುತ್ತಿದ್ದರು. ಇಂಥ ಸಂದರ್ಭಗಳಲ್ಲಿ ಶ್ರೀಗಳವರು ತಮ್ಮ ಹಿಂದೀ ಭಾಷೆಯ ಪ್ರಚಾರ-ಪ್ರಸಾರದ ಬಗ್ಗೆ ತಮ್ಮ ವಿಚಾರಗಳನ್ನು ತಿಳಿಸುತ್ತಿದ್ದರು. ಶ್ರೀ ಮಹಾಲೆಯವರು ಶ್ರೀ ಜಗದ್ಗುರುಗಳವರ ಅಪ್ಪಣೆಯಂತೆ ಜಗದ್ಗುರು ಗಂಗಾಧರ ಹೈಸ್ಕೂಲಿನಲ್ಲಿ 'ರಾಷ್ಟ್ರಭಾಷಾ ಪ್ರಚಾರ ಸಮಿತಿ ವರ್ಧಾ' ಈ ಸಂಸ್ಥೆಯ ಹಿಂದೀ ಪ್ರಥಮಾ, ಮಧ್ಯಮಾ ಪರೀಕ್ಷೆಗಳ ವರ್ಗಗಳನ್ನು ಆರಂಭಿಸಿದರು. ಕ್ರಮೇಣ ಹಿಂದೀ ವರ್ಗಗಳಲ್ಲಿ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಹೆಚ್ಚಾಗತೊಡಗಿತು. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ವಿವಿಧ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತೊಡಗಿದರು. ಇದನ್ನು ಅರಿತ ಶ್ರೀಗಳವರು ಹಿಂದಿಯ ಉಚ್ಚ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳನ್ನು ತರಬೇತು ಗೊಳಿಸುವಂತೆ ಪ್ರೋತ್ಸಾಹಿಸಿದರು. ಇದರ ಪರಿಣಾಮವಾಗಿ ಹಿಂದಿಯಲ್ಲಿ ಮೆಟ್ರಿಕ್, ಇಂಟರ ಮತ್ತು ಬಿ.ಎ. ತತ್ಸಮವಾದ ಹಿಂದೀ ಪರೀಕ್ಷೆಗಳಿಗೆ ವಿದ್ಯಾರ್ಥಿಗಳು ಕುಳಿತು ಹೆಚ್ಚಿನ ಸಂಖ್ಯೆಯಲ್ಲಿ ಉತ್ತೀರ್ಣರಾಗಹತ್ತಿದರು. ಉತ್ತರ ಪುಸ್ತಕಗಳು ಪರೀಕ್ಷೆ ಮುಗಿದ ತಕ್ಷಣ ವರ್ಧಾ ಸಮಿತಿಗೆ ಕಳಿಸಲಾಗುತ್ತಿತ್ತು. ಅಲ್ಲಿಯೇ ಅವುಗಳ ತಪಾಸಣೆ ಆಗಿ ಪರಿಣಾಮ ಸಾರಲಾಗುತ್ತಿತ್ತು. ಶ್ರೀ ಜಗದ್ಗುರು ಗಂಗಾಧರ ಹೈಸ್ಕೂಲ ಹಿಂದೀ ಪರೀಕ್ಷೆಯ ಪ್ರಧಾನ ಹಿಂದೀ ಪರೀಕ್ಷಾ ಕೇಂದ್ರವಾಯಿತು. ಹೀಗೆ ೧೯೫೮ರಿಂದ ೧೯೬೧ರ ವರೆಗೆ ವರ್ಧಾ ಸಮಿತಿಯ ಹಿಂದೀ ಪರೀಕ್ಷೆಗಳು ಇಲ್ಲಿ ನಡೆದವು. ಸುಮಾರು ಒಂದುವರೆ ಸಾವಿರ ಪರೀಕ್ಷಾರ್ಥಿಗಳು ಈ ಹಿಂದೀ ಪರೀಕ್ಷೆಗಳಿಂದ ಲಾಭಾನ್ವಿತರಾದರು. ಇದನ್ನು ನೋಡಿ ಶ್ರೀಗಳವರು ಸಂತೋಷಪಟ್ಟರು.

೧೯೬೨ರಲ್ಲಿ ಕರ್ನಾಟಕ ರಾಜ್ಯದ ರಾಜಧಾನಿಯಾದ ಬೆಂಗಳೂರಿನ 'ಮೈಸೂರ ಹಿಂದೀ ಪ್ರಚಾರ ಪರಿಷತ್ತು ಬೆಂಗಳೂರ' ಈ ಸಂಸ್ಥೆಯ ಪ್ರಧಾನ ಸಚಿವರು ತಮ್ಮ ಸಂಸ್ಥೆಯ ಪರೀಕ್ಷೆಗಳನ್ನು ನಡೆಯಿಸುವಂತೆ ಕೇಳಿಕೊಂಡರು. ಆಗಿನ ಮುಖ್ಯಾಧ್ಯಾಪಕರಾದ ಶ್ರೀ ಎ. ಎಮ್. ಮಠರವರಿಂದ ಅನುಮತಿ ಪಡೆದು ಶ್ರೀಗಳವರ ಮುಂದೆ ಈ ಪ್ರಸ್ತಾವನೆ ಇಟ್ಟರು. ಪೂಜ್ಯರು ಸಂತೋಷದಿಂದ ತಮ್ಮ ಅಪ್ಪಣೆಯನ್ನು ನೀಡಿ ಈ ಹಿಂದೀ ಪ್ರಸಾರ ಕಾರ್ಯ ಚೆನ್ನಾಗಿ ನಡೆಯಲೆಂದು ಶುಭಾಶೀರ್ವಾದ ಮಾಡಿದರು. ೧೯೬೨ರಿಂದ ಹಿಂದೀ ಪ್ರಚಾರ ಪರಿಷತ್ತಿನ ನಿಮ್ನ ಹಾಗೂ ಉಚ್ಚ ಪರೀಕ್ಷೆಗಳಿಗೆ ವಿದ್ಯಾರ್ಥಿ-ವಿದ್ಯಾರ್ಥಿನಿಯ ರನ್ನು ತರಬೇತುಗೊಳಿಸುವ ಕಾರ್ಯ ಒಳ್ಳೆ ಚುರುಕಿನಿಂದ ನಡೆಯಿತು. ಶ್ರೀಗಳವರು ಪ್ರತಿಯೊಂದು ಪರೀಕ್ಷೆಗಳ ಫಲಿತಾಂಶ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಕಂಡು ಇದಕ್ಕೆ ಹೆಚ್ಚಿನ ಪ್ರೋತ್ಸಾಹನೆ ನೀಡಹತ್ತಿದರು. ಶ್ರೀ ಜ. ಗಂಗಾಧರ ಹೈಸ್ಕೂಲಿನ ಹಿಂದೀ

ಕೇಂದ್ರದಿಂದ ವಿವಿಧ ಪರೀಕ್ಷೆಗಳಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನಗಳನ್ನು ಪಡೆಯುವ ಪರೀಕ್ಷಾರ್ಥಿಗಳ ಸಂಖ್ಯೆ ಹೆಚ್ಚಾಗತೊಡಗಿತು ಕೆಲ ವಿದ್ಯಾರ್ಥಿ-ವಿದ್ಯಾರ್ಥಿನಿಯರು ರಾಜ್ಯ ಮಟ್ಟದಲ್ಲಿ ಬೆಳ್ಳಿ ಮತ್ತು ಬಂಗಾರದ ಪದಕಗಳನ್ನು ಬಹುಮಾನವಾಗಿ ಪಡೆದರು. ಅತಿ ಹೆಚ್ಚಿನ ಸಂಖ್ಯೆಯಲ್ಲಿ ಪರಿಷತ್ತಿಗೆ ರಾಜ್ಯಮಟ್ಟದಲ್ಲಿ ಪರೀಕ್ಷಾರ್ಥಿಗಳನ್ನು ತರಬೇತುಗೊಳಿಸಿದ್ದಕ್ಕಾಗಿ ಪ್ರಚಾರಕರಾದ ಶ್ರೀ ಎಮ್. ಬಿ. ಮಹಾಲೆ ಇವರಿಗೆ ಗಾಂಧೀ ಶತಮಾನೋತ್ಸವದ ಪುರಸ್ಕಾರ, ಬೆಳ್ಳಿ ಪದಕ ಹಾಗೂ ಬಂಗಾರದ ಪದಕಗಳು ಲಭಿಸಿದವು. ಇದೆಲ್ಲಾ ಶ್ರೀ ಜಗದ್ಗುರುಗಳವರ ಪ್ರೋತ್ಸಾಹನೆ ಮಾರ್ಗದರ್ಶನದ ಫಲಶ್ರುತಿಯಾಗಿದೆ. ಹೀಗೆ ೧೯೮೪ರ ವರೆಗೆ ಸುಮಾರು ೯೦೦ ಪರೀಕ್ಷಾರ್ಥಿಗಳು ಈ ಕೇಂದ್ರದಿಂದ ವಿವಿಧ ಹಿಂದೀ ಪರೀಕ್ಷೆಗೆ ಕುಳಿತು ಹಿಂದೀ ಭಾಷೆಯಲ್ಲಿ ಜ್ಞಾನ ಹಾಗೂ ಪದವಿಗಳನ್ನು ಪಡೆದರು.

ಇತ್ತೀಚೆಗೆ ಭಾರತ ಸರಕಾರ ಹಾಗೂ ರಾಜ್ಯ ಸರಕಾರಗಳಿಂದ ಹಿಂದೀ ಪ್ರಚಾರ-ಪ್ರಸಾರ ಕಾರ್ಯಕ್ಕೆ ಹೆಚ್ಚಿನ ಪ್ರೋತ್ಸಾಹನೆ ಸಿಗಹತ್ತಿತು. ಶ್ರೀ ಜಗದ್ಗುರು ಗಂಗಾಧರ ಹೈಸ್ಕೂಲಿನ ಹಿಂದೀ ಕೇಂದ್ರದಲ್ಲಿ ಕಲಿಯುವ ಪರೀಕ್ಷಾರ್ಥಿಗಳ ಸಂಖ್ಯೆ ಹೆಚ್ಚಾಗತೊಡಗಿತು. ಇದನ್ನು ಅರಿತ ಶ್ರೀಗಳವರು ಶ್ರೀ ಜಗದ್ಗುರು ಮೂರುಸಾವಿರಮಠದ ವಿದ್ಯಾವರ್ಧಕ ಸಂಘದ ಗೌರವ ಕಾರ್ಯಾಧ್ಯಕ್ಷರಾದ ಶ್ರೀ ವೀರಚಂದ ನಾರಾಣಜಿ ಕಾನಜಿ ಇವರೊಂದಿಗೆ ಸಮಾಲೋಚಿಸಿದರು. ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ತತ್ವಾವಧಾನದಲ್ಲಿ ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯವನ್ನು ಸ್ಥಾಪಿಸುವ ನಿರ್ಣಯ ಕೈಕೊಳ್ಳಲಾಯಿತು. ಶ್ರೀಗಳವರು ಈ ಹಿಂದೀ ವಿದ್ಯಾಲಯಕ್ಕೆ ಸ್ವತಂತ್ರವಾದ ಒಂದು ಕಾರ್ಯಾಲಯ ಕಟ್ಟಿಸಿಕೊಡುವ ಹಾಗೂ ವಿದ್ಯಾವರ್ಧಕ ಸಂಘದ ಕಟ್ಟಡದ ಶಾಲೆಗಳಲ್ಲಿ ಹಿಂದೀ ವರ್ಗಗಳನ್ನು ನಡೆಯಿಸುವ ಏರ್ಪಾಡನ್ನು ಮಾಡಿದರು. ಶ್ರೀಗಳವರ ಹಾಗೂ ಕಾರ್ಯಾಧ್ಯಕ್ಷ ವೀರಚಂದ ಕಾನಜಿ ಇವರ ಸಲಹೆ-ಸೂಚನೆಗಳಂತೆ ಮಹಾಲೆಯವರು ವಿದ್ಯಾಲಯವನ್ನು ಸರಕಾರದ ನಿಯಮಗಳಂತೆ ನಡೆಯಿಸುವ ಚಟುವಟಿಕೆ ನಡೆಯಿಸಿದರು. ಕರ್ನಾಟಕ ರಾಜ್ಯ ಸರಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ವರಿಷ್ಠ ಹಿಂದೀ ಅಧಿಕಾರಿಗಳಿಗೆ ವಿದ್ಯಾಲಯದ ಸ್ಥಾಪನೆ ಕುರಿತು ಅರ್ಜಿಯನ್ನು ಸಲ್ಲಿಸಲಾಯಿತು. ಬೆಂಗಳೂರಿನಿಂದ ಇಲಾಖೆಯ ಹಿಂದೀ ವರಿಷ್ಠ ಅಧಿಕಾರಿಗಳು ವಿದ್ಯಾಲಯದ ತಪಾಸಣೆಗೆ ಬಂದರು. ಈ ಮೂರುಸಾವಿರಮಠದ ಆವರಣದ ಶಾಲೆಯಲ್ಲಿ ಕಳೆದ ೨೬ ವರ್ಷಗಳಿಂದ ಸ್ವತಂತ್ರವಾಗಿ ಸರಕಾರದ ಅನುದಾನ-ಸಹಾಯ ಇಲ್ಲದೇ ನಿಃಶುಲ್ಕವಾಗಿ ಹಿಂದೀ ವರ್ಗಗಳನ್ನು ನಡೆಯಿಸಿ ಒಂಬತ್ತು ಸಾವಿರ ಪರೀಕ್ಷಾರ್ಥಿಗಳನ್ನು ತರಬೇತುಗೊಳಿಸಿದ್ದು ವೀಕ್ಷಿಸಿ ಅಧಿಕಾರಿಗಳು ಆಶ್ಚರ್ಯ ಹಾಗೂ ಸಂತೋಷವನ್ನು ವ್ಯಕ್ತಪಡಿಸಿದರು. ಶ್ರೀ ಜಗದ್ಗುರುಗಳವರು ತಮ್ಮ ಶ್ರೀ ಮಠಕ್ಕೆ ಅಧಿಕಾರಿಗಳನ್ನು ಬರಮಾಡಿಕೊಂಡಾಗ ಅಧಿಕಾರಿಗಳು

ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯಕ್ಕೆ ಸರಕಾರದ ಅನುದಾನ ಸಂಹಿತೆಯ ಪ್ರಕಾರ ಅರೆಕಾಲಿಕ ಶಿಕ್ಷಕರ ವೇತನ ಅನುದಾನ ನೀಡುವ ಶಿಫಾರಸ್ಸನ್ನು ಸರಕಾರಕ್ಕೆ ತಿಳಿಸುವದಾಗಿ ತಿಳಿಸಿದರು.

೧೯೮೪ನೇ ಇಸ್ವಿಯ ಅಗಸ್ಟ ತಿಂಗಳಲ್ಲಿ ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯದ ಉದ್ಘಾಟನೆಯನ್ನು ಅಂದಿನ ಕರ್ನಾಟಕ ರಾಜ್ಯ ಸರಕಾರದ ಮಾನ್ಯ ಶಿಕ್ಷಣ ಮಂತ್ರಿಗಳಾದ ಶ್ರೀ ಎಮ್. ರಘುಪತಿಯವರು ನೆರವೇರಿಸಿಕೊಟ್ಟರು. ಸಮಾರಂಭವು ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳವರ ದಿವ್ಯ ಸನ್ನಿಧಾನದಲ್ಲಿ ನಡೆಯಿತು. ಶ್ರೀಗಳವರು ಈ ಸಂದರ್ಭದಲ್ಲಿ ನೀಡಿದ ಆಶೀರ್ವಚನವು ಸ್ತುತ್ಯವಾದದ್ದು. ದೇಶದ ಏಕತೆ ಹಾಗೂ ರಾಷ್ಟ್ರೀಯ ಸೇವಾ ಭಾವನೆ ಪ್ರತಿಯೊಬ್ಬನ ಹೃದಯದಲ್ಲಿ ಮೂಡಿಯ ಬೇಕಾದರೆ ರಾಷ್ಟ್ರಭಾಷೆಯಾದ ಹಿಂದೀಯನ್ನು ಪ್ರತಿಯೊಬ್ಬನು ಕಲಿಯಬೇಕು. ಕಲಿತು ದೇಶದ ಸೇವಾಕಾರ್ಯದಲ್ಲಿ ಭಾಗಿಯಾಗಬೇಕು. ಈ ಮಾತಿನಂತೆ ಶ್ರೀಗಳವರು ನುಡಿದಂತೆ ಮಾಡಿ ತೋರಿಸಿದ್ದಾರೆ. ಹಿಂದೀ ವಿದ್ಯಾಲಯವನ್ನು ಸ್ಥಾಪಿಸಿ ಇಂದಿನ ಮಕ್ಕಳೇ ಮುಂದಿನ ಪ್ರಜೆಗಳಾಗಿದ್ದರಿಂದ ಅವರಲ್ಲಿ ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳಗಲು ಪ್ರೋತ್ಸಾಹಿಸಿದ್ದಾರೆ.

೧೯೮೫-೮೬ರಲ್ಲಿ ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯಕ್ಕೆ ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆಯಿಂದ ಅನುಮತಿ ಹಾಗೂ ಮಾನ್ಯತೆ ಪ್ರಾಪ್ತವಾಯಿತು. ಐದು ವರ್ಗಗಳಿಂದ ಆರಂಭವಾದ ಈ ವಿದ್ಯಾಲಯವು ಈಗ ಹತ್ತು ನಿಃಶುಲ್ಕ ಹಿಂದೀ ವರ್ಗಗಳನ್ನು ನಡೆಯಿಸುತ್ತಿದೆ. ಶ್ರೀಗಳವರ ಮಾರ್ಗದರ್ಶನ ಹಾಗೂ ಕೃಪಾಶೀರ್ವಾದ ದಿಂದ ಈ ವಿದ್ಯಾಲಯದಲ್ಲಿ ಹಿಂದೀ ಕಲಿಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಲಿದೆ. ಘನ ಸರಕಾರದಿಂದ ಹತ್ತು ಅರೆಕಾಲಿಕ ಶಿಕ್ಷಕ-ಶಿಕ್ಷಕಿಯರಿಗೆ ಅರೆಕಾಲಿಕ ವೇತನ ಅನುದಾನವು ಸಿಗುತ್ತಲಿದೆ. ೧೯೯೯ರ ವರೆಗೆ ಈ ವಿದ್ಯಾಲಯದ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಸಂಖ್ಯೆ ಹನ್ನೆರಡು ಸಾವಿರಕ್ಕಿಂತ ಹೆಚ್ಚಾಗಿದೆ. ಈ ವಿದ್ಯಾಲಯದ ಪ್ರಗತಿಯನ್ನು ಕಂಡು ಶ್ರೀಗಳವರು ಇದಕ್ಕೆ ಎಲ್ಲ ರೀತಿಯ ಪಾಠ-ಪೀಠೋಪಕರಣದ ವ್ಯವಸ್ಥೆಯನ್ನು ಮಾಡಿಕೊಟ್ಟು ಇದು ಸುವ್ಯವಸ್ಥಿತ ರೀತಿಯಲ್ಲಿ ನಡೆಯುವಂತೆ ಮಾಡಿದ್ದಾರೆ.

ಪ್ರತಿವರ್ಷ ಸೆಪ್ಟೆಂಬರ ತಿಂಗಳಲ್ಲಿ ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯದ ತತ್ವಾವಧಾನದಲ್ಲಿ ಹಿಂದೀ ದಿನಾಚರಣೆ, ಶಿಕ್ಷಕ ದಿನಾಚರಣೆ ಹಾಗೂ ಶಾರದಾ ಪೂಜೆಯ ಮಹಾ ಸಮಾರಂಭವನ್ನು ಶ್ರೀ ಜಗದ್ಗುರು ಗಂಗಾಧರ ಮಹಾಸ್ವಾಮಿಗಳವರ ದಿವ್ಯ ಸನ್ನಿಧಾನದಲ್ಲಿ ಜರುಗುತ್ತದೆ. ಹಿಂದೀ ದಿವಸದ ಮಹತ್ವ ಹಾಗೂ ರಾಷ್ಟ್ರೀಯ ಭಾವೈಕ್ಯತೆಯ ಬಗ್ಗೆ ತಜ್ಞರಿಂದ ಭಾಷಣಗಳನ್ನು ಏರ್ಪಡಿಸಲಾಗುತ್ತದೆ.

ಶ್ರೀ ಮೂರುಸಾವಿರಮಠದ ಪವಿತ್ರ ಆವರಣದಲ್ಲಿರುವ ತಮ್ಮ ವಿವಿಧ ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳ ಹಾಗೂ ಕಟ್ಟಡಗಳ ಪರಿವೀಕ್ಷಣೆಯನ್ನು ಶ್ರೀಗಳವರು ಮೇಲಿಂದ ಮೇಲೆ ಮಾಡುತ್ತಿರುತ್ತಾರೆ. ಪ್ರಾತಃಕಾಲ ಹಾಗೂ ಸಾಯಂಕಾಲದಲ್ಲಿ ತಮ್ಮ ವೀಕ್ಷಣೆಯ ಸಮಯದಲ್ಲಿ ವಿದ್ಯಾಲಯದಲ್ಲಿ ಕಲಿಯುವ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಕಂಡು ಅವರ ವಿದ್ಯಾಭ್ಯಾಸದ ಬಗ್ಗೆ ತಿಳಿದುಕೊಳ್ಳುತ್ತಾರೆ. ವಿದ್ಯಾರ್ಥಿಗಳ ಹೆಚ್ಚುತ್ತಿರುವ ಸಂಖ್ಯೆ, ಅವರ ಹೆಚ್ಚಿನ ಕ್ರಮಾಂಕಗಳನ್ನು ಪಡೆದು ಕೇಂದ್ರ ಮತ್ತು ರಾಜ್ಯಮಟ್ಟದಲ್ಲಿ ಬೆಳ್ಳಿ-ಬಂಗಾರದ ಪದಕಗಳನ್ನು ಪಡೆಯುತ್ತಿರುವದನ್ನು ಕಂಡು ತಾವು ಸ್ಥಾಪಿಸಿದ ಹಿಂದೀ ವಿದ್ಯಾಲಯದ ಬಗ್ಗೆ ಶ್ರೀಗಳವರು ಸಂತೋಷ ಹಾಗೂ ಹೆಮ್ಮೆಯನ್ನು ಪಡೆಯುತ್ತಾರೆ. ಒಂದು ವಿದ್ಯಾಸಂಸ್ಥೆಯನ್ನು ಕಟ್ಟಬೇಕಾದರೆ ಯಾವ ರೀತಿಯಲ್ಲಿ ಪರಿಶ್ರಮಿಸಬೇಕಾಗುತ್ತದೆ ಅನ್ನುವದು ಶ್ರೀಗಳವರು ಅರಿತಿದ್ದಾರೆ. ಯಾಕಂದರೆ ಅವರು ಪ್ರಾಥಮಿಕ ಶಾಲೆಯಿಂದ ಕಾಲೇಜ ಮಟ್ಟದ ಅನೇಕ ವಿದ್ಯಾಲಯಗಳನ್ನು ಸ್ಥಾಪಿಸಿದ್ದಾರೆ. ಸಂಸ್ಥೆಗಳನ್ನು ಕಟ್ಟುವದು ಮೊದಲು ಸುಲಭವೆನಿಸುವದು. ಮುಂದೆ ಅದರ ಬೆಳವಣಿಗೆ ಆಗುತ್ತ ಹೋದಂತೆ ಅನೇಕ ಸಮಸ್ಯೆಗಳನ್ನು ಎದುರಿಸಿ ಅವುಗಳ ನಿವಾರಣೆಗೆ ಶ್ರಮಿಸಬೇಕಾಗುತ್ತದೆ. ಈ ಹಿಂದೀ ವಿದ್ಯಾಲಯವು ಶ್ರೀಗಳವರ ಕೃಪಾಶೀರ್ವಾದದಿಂದ ಉತ್ತರೋತ್ತರ ಬೆಳವಣಿಗೆ ಮಾಡುತ್ತಲಿದೆ. ಈಗ ಕೇವಲ ರಾಜ್ಯ ಸರಕಾರದ ನಿಯಮಾವಳಿಗೆ ಅನುಗುಣವಾಗಿ ಕಾರ್ಯ ಮಾಡುತ್ತಲಿದೆ. ಇನ್ನೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲು ಕೇಂದ್ರ ಸರಕಾರದ ನೀತಿ ಸಂಹಿತೆಗಳಂತೆ ಮಹಾವಿದ್ಯಾಲಯವನ್ನಾಗಿ ಪರಿವರ್ತಿಸುವ ವಿಚಾರ ಶ್ರೀಗಳವರು ಇಟ್ಟುಕೊಂಡಿದ್ದಾರೆ. ಹಿಂದೀ ಭಾಷೆಯಲ್ಲಿಯ ಬೆರಳಚ್ಚುಗಳ ಯಂತ್ರಗಳನ್ನು ತರಿಸಿ ಅವುಗಳ ತರಬೇತು ವಿದ್ಯಾರ್ಥಿಗಳಿಗೆ ಕೊಡುವ ವಿಚಾರ ಇದೆ. ಹಿಂದೀ ಬಿ.ಎಡ್. (ಶಿಕ್ಷಕ ತರಬೇತು) ಕಾಲೇಜನ್ನು ಸ್ಥಾಪಿಸಿ ಹಿಂದೀ ಭಾಷೆಯಲ್ಲಿ ಉತ್ತಮ ಶಿಕ್ಷಕರನ್ನು ಸಿದ್ಧಗೊಳಿಸುವ ವಿಚಾರಗಳು ಸಹ ಶ್ರೀಗಳವರು ಇಟ್ಟುಕೊಂಡಿದ್ದಾರೆ. ಇದಕ್ಕಾಗಿ ತಮ್ಮ ಪವಿತ್ರ ಧಾರ್ಮಿಕ ಹಾಗೂ ಶೈಕ್ಷಣಿಕ ಸ್ಥಳವಾದ ಶ್ರೀ ಜಗದ್ಗುರು ಮೂರುಸಾವಿರಮಠದ ಕ್ಷೇತ್ರದಲ್ಲಿಯೇ ಒಂದು ಭವ್ಯವಾದ ಕಟ್ಟಡವನ್ನು ಕಟ್ಟಿಸುವ ಹೆಬ್ಬಯಕೆಯನ್ನು ಹೊಂದಿದ್ದಾರೆ.

ಈ ಪ್ರಕಾರ ಶ್ರೀ ಜಗದ್ಗುರುಗಳವರು ಹಿಂದೀ ಭಾಷಾ ಕ್ಷೇತ್ರದಲ್ಲಿ ತಮ್ಮ ಪ್ರೀತಿ, ವಿಶ್ವಾಸ ಮತ್ತು ಅನುಭವಗಳಿಂದ ಸ್ವತಃ ಒಂದು ಹಿಂದೀ ವಿದ್ಯಾಲಯವನ್ನು ಸ್ಥಾಪಿಸಿ ಅದರ ಬೆಳವಣಿಗೆಯನ್ನು ಮಾಡಿದ್ದಾರೆ ಮತ್ತು ಮಾಡುತ್ತಲಿದ್ದಾರೆ. ಧಾರ್ಮಿಕ ಕ್ಷೇತ್ರದೊಂದಿಗೆ ಶೈಕ್ಷಣಿಕ ರಂಗದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸುವ ಗುರುತರ ಕಾರ್ಯ ಶ್ರೀಗಳವರು ಮಾಡಿತೋರಿಸುತ್ತಿದ್ದಾರೆ. ಯಾವ ರೀತಿಯಲ್ಲಿ ಶಿಲ್ಪಿಯು ಕಾಡುಗಲ್ಲನ್ನು ಕೆತ್ತಿ ಸುಂದರ ನಯವಾದ ಮೂರ್ತಿಯನ್ನು ನಿರ್ಮಿಸಿ ಅದರಲ್ಲಿ ಜೀವಕಳೆಯನ್ನು ತುಂಬಿ ಬರುವಂತೆ ಮಾಡುತ್ತಾನೆಯೋ ಇದೇ ಪ್ರಕಾರ ಶ್ರೀಗಳವರು ಧಾರ್ಮಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ ಅದರಲ್ಲಿ ನವಚೈತನ್ಯ ತುಂಬುವ ಕಾರ್ಯವನ್ನು ಮಾಡಿದ್ದಾರೆ.

ಶ್ರೀಗಳವರು ಎಲ್ಲರನ್ನು ಸಮಾನ ಪ್ರೀತಿ-ವಿಶ್ವಾಸದಿಂದ ಕಂಡು ಅವರವರ ಕಾರ್ಯ ಸೇವಾಭಾವನೆಗೆ ತಕ್ಕಂತೆ ಮಾನಸನ್ಮಾನ-ಪುರಸ್ಕಾರಗಳನ್ನು ನೀಡುತ್ತಿದ್ದಾರೆ. "ಕಾಯಕವೇ ಕೈಲಾಸ" ಎಂಬ ನೀತಿಯಂತೆ ಎಲ್ಲರಿಗೂ ಕಾಯಕದ ಮಹತ್ವ ತಿಳಿಹೇಳಿ ಕಾರ್ಯ ಕರ್ತವ್ಯಗಳನ್ನು ಮಾಡಿಸಿ ಜೀವನದಲ್ಲಿ ಸುಖ-ಶಾಂತಿ ಸಿಗುವಂತೆ ಮಾಡಿದ್ದಾರೆ.

ಶ್ರೀ ಜಗದ್ಗುರು ಗಂಗಾಧರ ಹಿಂದೀ ವಿದ್ಯಾಲಯವನ್ನು ಸ್ಥಾಪಿಸಿ, ವಿದ್ಯಾ ಹಾಗೂ ಧರ್ಮ ಕ್ಷೇತ್ರಗಳಲ್ಲಿ ಶ್ರಮಿಸುತ್ತಿರುವ ಹಾಗೂ ಇವುಗಳ ಬೆಳವಣಿಗೆಯನ್ನು ಮಾಡಲು ತಮ್ಮ ಸಲಹೆ ಸೂಚನೆಗಳನ್ನು ನೀಡುತ್ತಿರುವ ಮತ್ತು ಹಗಲಿರುಳು ಸಾಮಾಜಿಕ ಶೈಕ್ಷಣಿಕ ಮತ್ತು ಸಾಹಿತ್ಯಿಕ ಚಟುವಟಿಕೆಗಳಲ್ಲಿ ತಮ್ಮ ಸಂಪೂರ್ಣ ಸಹಕಾರ ನೀಡುವಂಥ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಪ್ರಾತಃಸ್ಮರಣೀಯರಾಗಿದ್ದಾರೆ. ಪೂಜನೀಯರಾಗಿದ್ದಾರೆ.

□ □

ಪೂಜ್ಯ ಜಗದ್ಗುರುಗಳ ಸಾಧನೆ: ಸಂಸ್ಕೃತ ಕಾಲೇಜ

— ಸೋಮಶೇಖರ ಮಠದ

ಶ್ರೀ ಜಗದ್ಗುರು ಮೂರುಸಾವಿರಮಠವು ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ವೈದ್ಯಕೀಯ ರಂಗಗಳಲ್ಲಿ ತನ್ನದೇ ಆದ ವಿಶಿಷ್ಟ ಸೇವೆಯಿಂದ ದೇಶ ವಿದೇಶಗಳಲ್ಲಿ ಪ್ರಖ್ಯಾತವಾಗಿದೆ. ವೀರಶೈವ ಧರ್ಮದ ಪ್ರಮುಖ ಕೇಂದ್ರವಾಗಿರುವ ಶ್ರೀ ಮಠದ ಕೀರ್ತಿಯು ಜಗತ್ತಿನಾದ್ಯಂತವಾಗಿ ಜಾಜ್ವಲ್ಯಮಾನವಾಗಿ ಬೆಳಗುತ್ತಿದೆ. ೧೨ನೇ ಶತಮಾನದಿಂದಲೇ ಬಸವಾದಿ ಪ್ರಮಥರ ತತ್ವಗಳನ್ನು ಇಂದಿಗೂ ಪ್ರಸಾರ, ಪ್ರಚಾರ ಮಾಡುತ್ತಿರುವ ಶ್ರೀ ಮಠವು ಭಾರತದ ಸಂಸ್ಕೃತಿಯ ಸಾಕಾರಮೂರ್ತಿಯಾಗಿ ತಲೆಯೆತ್ತಿ ನಿಂತಿದೆ.

೧೯೫೮ ಅದೊಂದು ಸುವರ್ಣಕಾಲ, ಪರ್ವಕಾಲ; ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಶ್ರೀ ಜ. ಮೂರುಸಾವಿರಮಠದ ಶೂನ್ಯ ಸಿಂಹಾಸನಾರೋಹಣ ಮಾಡಿದ ಪುಣ್ಯಕಾಲ. ಶ್ರೀಗಳವರು ಶ್ರೀ ಜಗದ್ಗುರು ಮೂರುಸಾವಿರಮಠದ ಪೀಠಾಧೀಶ್ವರರಾಗುತ್ತಲೇ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ವೈದ್ಯಕೀಯ ರಂಗಗಳಲ್ಲಿ ಇನ್ನಷ್ಟು ಸಮರ್ಥ ರೀತಿಯಿಂದ ಶ್ರೀ ಮಠವನ್ನು ಮುನ್ನಡೆಸಿ, ಅದ್ಭುತ ರೀತಿಯಲ್ಲಿ ಪ್ರಗತಿ ಸಾಧಿಸಿರುವದು ಶ್ರೀಗಳವರ ಕರ್ತೃತ್ವಶಕ್ತಿಯೇ ಕಾರಣವಾಗಿದೆಯೆಂದರೆ ತಪ್ಪಾಗಲಿಕ್ಕಿಲ್ಲ.

ಪೂಜ್ಯ ಶ್ರೀ ಮನ್‌ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ವಿದ್ಯೆಯ ತವರಾದ ಶ್ರೀ ಕ್ಷೇತ್ರ ಕಾಶಿ(ವಾರಣಾಸಿ)ಯಲ್ಲಿ ಸಂಸ್ಕೃತ ಭಾಷೆಯನ್ನು ಅಧ್ಯಯನ ಮಾಡಿದ್ದಾರೆ. ಸಂಸ್ಕೃತ ಭಾಷಾಪರೀಕ್ಷೆಗಳಲ್ಲಿ ಅನೇಕ ಉನ್ನತ ಪದವಿಗಳನ್ನು ಪ್ರಶಸ್ತಿ ಸಹಿತ ಪಾಸಾಗಿ ಪಾಂಡಿತ್ಯಪೂರ್ಣರಾಗಿದ್ದಾರೆ. ಕೇವಲ ಸಂಸ್ಕೃತ ಭಾಷೆಯನ್ನಲ್ಲದೆ, ಕನ್ನಡ, ಹಿಂದೀ, ಇಂಗ್ಲೀಷ ಭಾಷೆಗಳಲ್ಲಿ ಪೂಜ್ಯರು ಉತ್ತಮ ಪಾಂಡಿತ್ಯ ಪಡೆದವರಾಗಿದ್ದಾರೆ. ಶ್ರೀಗಳವರಿಗೆ ಸಂಸ್ಕೃತ ಭಾಷೆಯ ಮೇಲೆ ವಿಶೇಷವಾದ ಪ್ರೀತಿ. ಕಳೆದ ಇಪ್ಪತ್ತು ವರ್ಷಗಳಿಂದ ಧಾರ್ಮಿಕ ಸಾಂಸ್ಕೃತಿಕ ಸೌರಭ ಸೂಸುವ ಶ್ರೀ ಮಠದಿಂದ ಪ್ರಕಟಿಸುವ ಮಾಸಿಕ "ಪರಂಜ್ಯೋತಿ"ಯಲ್ಲಿ ಶ್ರೀ ವಾಣಿಯನ್ನು ಸಂಸ್ಕೃತ ಶಿರೋವಾಣಿಯನ್ನು ಸಂಸ್ಕೃತದಲ್ಲೆ ಬರೆಯುತ್ತಿರುವುದು ಪೂಜ್ಯರ ಸಂಸ್ಕೃತ ಪ್ರೇಮಕ್ಕೆ ಸಾಕ್ಷಿಯಾಗಿದೆ.

ಸಂಸ್ಕೃತ ಭಾಷೆ ಎಲ್ಲ ಭಾಷೆಗಳಿಗೆ 'ಮಾತೃಭಾಷೆ'ಯಾಗಿದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯನು ಸಂಸ್ಕೃತವನ್ನು ಅಧ್ಯಯನ ಮಾಡಬೇಕೆಂಬುದು ಶ್ರೀಗಳವರ ಅಭಿಲಾಷೆಯಾಗಿದೆ. ಸಂಸ್ಕೃತವನ್ನು ಅಧ್ಯಯನ ಮಾಡುವದರಿಂದ ನಮ್ಮ ಭಾರತೀಯ ಸಂಸ್ಕೃತಿಯನ್ನು ತಿಳಿಯಲು ಸಹಾಯಕವಾಗುತ್ತದೆಂಬುದು ಪೂಜ್ಯ ಶ್ರೀಗಳ ಅಭಿಪ್ರಾಯ

ವಾಗಿದೆ. ಅಷ್ಟೇ ಅಲ್ಲದೆ ಸಂಸ್ಕೃತ ಭಾಷೆಯನ್ನು ಅಭ್ಯಸಿಸುವದರಿಂದ ಇನ್ನುಳಿದ ಭಾಷೆಗಳಾದ ಕನ್ನಡ, ಹಿಂದಿ ಮುಂತಾದ ಭಾಷೆಗಳ ಜ್ಞಾನಕ್ಕೆ ಸಹಾಯವಾಗುತ್ತದೆಂಬುದಾಗಿ ಪೂಜ್ಯರು ಅಪ್ಪಣೆ ಕೊಡಿಸುತ್ತಾರೆ.

ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜಿನ ಬಗ್ಗೆ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರದು ಅಪಾರವಾದ, ಅನನ್ಯ ಸದೃಶವಾದ ಪ್ರೀತಿ. ಇದು ಕಳೆದ ೬೦ ವರ್ಷಗಳಿಂದಲೂ ಶ್ರೀ ಮಠದ ಆಶ್ರಯದಲ್ಲಿ ನಡೆದುಕೊಂಡು ಬಂದ ವಿದ್ಯಾಮಂದಿರವಾಗಿದೆ. ಆರಂಭದಲ್ಲಿ ಶ್ರೀ ಜ. ಗಂಗಾಧರ ಸಂಸ್ಕೃತ ಕಾಲೇಜಿಗೆ ಪ್ರತ್ಯೇಕವಾದ ಕಟ್ಟಡವಿದ್ದಿಲ್ಲ. ಪೂಜ್ಯ ಶ್ರೀ ಜಗದ್ಗುರುಗಳು ಈ ಕೊರತೆಯನ್ನು ಮನಗಂಡು ಈ ಮಹಾವಿದ್ಯಾಲಯಕ್ಕೆ ಭವ್ಯವಾದ ಪ್ರತ್ಯೇಕವಾದ ಕಟ್ಟಡವನ್ನು ಲಕ್ಷಾಂತರ ರೂಪಾಯಿ ಖರ್ಚು ಮಾಡಿಸಿ ಕಟ್ಟಿಸಿ ಕೊಟ್ಟಿದ್ದಾರೆ.

ಶ್ರೀ ಜಗದ್ಗುರು ಮೂರುಸಾವಿರಮಠದ ಪೀಠಾರೋಹಣ ಮಾಡಿದ ತರುವಾಯ ಶ್ರೀಗಳವರು ಸಂಸ್ಕೃತ ಭಾಷಾ ಪ್ರಚಾರಕ್ಕಾಗಿ ಮಾಡಿದ ಕಾರ್ಯ ಅಪಾರ ಹಾಗೂ ಅನನ್ಯ ಸದೃಶವಾದುದು. ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಕಾಲೇಜಿನ ಪ್ರಾಚಾರ್ಯರಾಗಿದ್ದ ಪಂ. ಬಸವರಾಜ ಶಾಸ್ತ್ರಿಗಳು ಪಗಡದಿನ್ನಿ ಅವರ ಕಡೆಯಿಂದ ಸಂಸ್ಕೃತ ಪರೀಕ್ಷೆಗಳಿಗೆ ಅನುಕೂಲವಾಗುವಂತೆ ಸಂಸ್ಕೃತ ಪ್ರವೇಶ, ಸಂಸ್ಕೃತ ಪ್ರಕಾಶ, ವ್ಯಾಕರಣ ದರ್ಪಣ ಮುಂತಾದ ಪುಸ್ತಕಗಳನ್ನು ಬರೆಯಿಸಿ ಪ್ರಕಟಿಸಿದ್ದಾರೆ. ಈ ಪಠ್ಯ ಪುಸ್ತಕಗಳನ್ನು ಆಧರಿಸಿ ಸಂಸ್ಕೃತ ಪ್ರವೇಶ, ಸಂಸ್ಕೃತ ಪ್ರಕಾಶ, ಸಂಸ್ಕೃತಾಭಿಜ್ಞ ಮತ್ತು ಸಂಸ್ಕೃತ ಪ್ರವೀಣ ಎಂಬ ನಾಲ್ಕು ಪರೀಕ್ಷೆಗಳನ್ನು ಧಾರವಾಡ, ಬೆಳಗಾಂವ, ವಿಜಾಪೂರ ಮುಂತಾದ ಜಿಲ್ಹೆಗಳಲ್ಲಿ ೪೦ಕ್ಕೂ ಹೆಚ್ಚು ಪರೀಕ್ಷಾ ಕೇಂದ್ರಗಳನ್ನು ಪ್ರಾರಂಭಿಸಿ ಸಾವಿರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಸಂಸ್ಕೃತ ಪರೀಕ್ಷೆಗಳಿಗೆ ಕೂಡ್ರಿಸಿ ಸಂಸ್ಕೃತದ ಮೇಲೆ ಪ್ರೇಮ ಹುಟ್ಟುವಂತೆ ಮಾಡಿದ್ದಾರೆ.

ಶ್ರೀ ಜ. ಮೂರುಸಾವಿರಮಠದ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಹಾಗೂ ಶ್ರೀ ಗುರುಸಿದ್ಧೇಶ್ವರ ವೈದಿಕ ಹಾಗೂ ಕೀರ್ತನ ಮಹಾವಿದ್ಯಾಲಯದ ಸಾಧಕರಿಗೆ ಸಂಸ್ಕೃತ ಅಧ್ಯಯನ ಗೈಯ್ಯಲು ಕಡ್ಡಾಯ ಮಾಡಿದ್ದಾರೆ. ಇಷ್ಟೆ ಅಲ್ಲದೆ ಶ್ರೀ ಮಠದಲ್ಲಿ ಸಂಸ್ಕೃತ ಕಲಿಯತಕ್ಕ ಬಡಮಕ್ಕಳಿಗೆ ಉಚಿತ ಊಟ, ವಸತಿಯ ಏರ್ಪಾಡು ಮಾಡುತ್ತಿರುವದು ಪೂಜ್ಯ ಶ್ರೀ ಜಗದ್ಗುರು ಮಹಾಸನ್ನಿಧಿಯವರ ಅಪಾರವಾದ ಸಂಸ್ಕೃತ ವಿದ್ಯಾಪ್ರೇಮಕ್ಕೆ ನಿದರ್ಶನವಾಗಿದೆ. ಇಂದು ಶ್ರೀ ಜಗದ್ಗುರು ಮೂರುಸಾವಿರ ಮಠದಲ್ಲಿ ಸಾವಿರಾರು ಬಡ ಮಕ್ಕಳು ಉಚಿತವಾಗಿ ಸಂಸ್ಕೃತ, ಹಿಂದಿ, ವೈದಿಕ, ಜ್ಯೋತಿಷ್ಯ ಮುಂತಾದ ಅಭ್ಯಾಸವನ್ನು ಪೂಜ್ಯ ಸನ್ನಿಧಿಯವರ ಕೃಪಾಛತ್ರದಲ್ಲಿ ಪುಕ್ಕಟೆಯಾಗಿ ಯಾವದೇ ರೀತಿಯ ಶುಲ್ಕವಿಲ್ಲದೆ ಅಧ್ಯಯನ ಮಾಡುತ್ತಿರುವದು ಪೂಜ್ಯರ ವಿದ್ಯಾ ದಾಸೋಹಕ್ಕೆ ಉತ್ತಮ ಉದಾಹರಣೆಯಾಗಿದೆ.

ಸಂಸ್ಕೃತ ಭಾಷೆಯ ಅಧ್ಯಯನಕ್ಕೆ ಅನುಕೂಲ ಮಾಡಿಕೊಡುವ ಸದುದ್ದೇಶದಿಂದ ಸಂಸ್ಕೃತ ಗ್ರಂಥಗಳ ಹಾಗೂ ತಾಡೋಲೆಗಳ ಬೃಹತ್ ಸಂಗ್ರಹ ಇರುವ ಸಾವಿರಾರು ಉತ್ತಮ ಗ್ರಂಥಗಳುಳ್ಳ ಪ್ರತ್ಯೇಕವಾದ ಸುಸಜ್ಜಿತ ಭವ್ಯ ಕಟ್ಟಡ ನಿರ್ಮಾಣ ಮಾಡಿ "ಶ್ರೀ ಗುರುಸಿದ್ಧೇಶ್ವರ ಗ್ರಂಥಾಲಯ" ನಿರ್ಮಾಣ ಮಾಡಿಸಿದ್ದಾರೆ. ದಿನಾಲು ವೇಳೆಯಲ್ಲಿ ವಿದ್ಯಾರ್ಥಿಗಳು ಇಲ್ಲಿ ಸಂಸ್ಕೃತದ ಉತ್ತಮ ಗ್ರಂಥಗಳನ್ನು ಅಧ್ಯಯಿಸಲು ಅನುಕೂಲವಿದೆ. ಮಠಶ್ಛಾತ್ರಾದಿ ನಿಲಯಃ ಶಬ್ದಶಾಸ್ತ್ರಾರ್ಥಿ ನಿಕಾಯಃ 'ಮಠವು ವಿದ್ಯಾರ್ಥಿಗಳ ಮನೆ' ಎಂಬ ಉಕ್ತಿಗೆ ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ ಪ್ರತ್ಯಕ್ಷವಾಗಿ ಕಾಣುವಂತೆ ಮಾಡಿದ್ದು ಪರಮ ಪೂಜ್ಯರ ಕೃಪಾಶೀರ್ವಾದದ ಬಲದಿಂದಲೇ ಎಂಬುದು ನಿರ್ವಿವಾದದ ಉಕ್ತಿಯಾಗಿದೆ.

ಶ್ರೀ ಜಗದ್ಗುರು ಮೂರುಸಾವಿರ ಮಠದ ಸಂಸ್ಕೃತ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಅಧ್ಯಯನ ಮಾಡಿ ಇಂದು ನಾಡಿನಲ್ಲಿ ಅನೇಕರು ಉನ್ನತ ಹುದ್ದೆಯಲ್ಲಿ ವಿಜೃಂಭಿಸಿದ್ದಾರೆ. ಅನೇಕ ಸಾಧಕರು ಜಗದ್ಗುರುಗಳಾಗಿದ್ದಾರೆ. ಪೀಠಾಧೀಶ್ವರರಾಗಿದ್ದಾರೆ. ಮಠಾಧಿಸ್ವಾಮಿಗಳಾಗಿದ್ದಾರೆ. ಶಿವಾಚಾರ್ಯರಾಗಿದ್ದಾರೆ ಅವರಲ್ಲಿ ಪ್ರಮುಖರೆಂದರೆ ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು ತೋಂಟದಾರ್ಯ ಮಠ ಡಂಬಳ ಗದಗ, ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು, ಶ್ರೀ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಮಹಾಸ್ವಾಮಿಗಳು ಆನಂದಪುರಂ ಶ್ರೀ ಜಗದ್ಗುರು, ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಶ್ರೀಶೈಲ ಮನ್ನಿರಂಜನ ಜಗದ್ಗುರು ಶ್ರೀ ಫಕೀರ ಚೆನ್ನವೀರ ದೇವರು ಶಿರಹಟ್ಟಿ, ಶ್ರೀ ಮ.ನಿ.ಪ್ರ. ಪ್ರಭುಮಹಾಸ್ವಾಮಿಗಳು ಬಾಗಲಕೋಟ ಶ್ರೀ ಮ.ನಿ.ಪ್ರ. ಚಂದ್ರಶೇಖರ ಮಹಾಸ್ವಾಮಿಗಳು ಹೊಸಮಠ ಇನ್ನು ಮುಂತಾದ ಹಲವಾರು ನಾಡಿನ ಅನೇಕ ಮಹಾಸ್ವಾಮಿಗಳು ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ವಿದ್ಯಾಲಯದಲ್ಲಿ ಅಧ್ಯಯನ ಗೈದು ಶ್ರೀ ಜಗದ್ಗುರು ಮೂರುಸಾವಿರಮಠಕ್ಕೆ ಹಾಗೂ ವಿದ್ಯಾಲಯಕ್ಕೆ ಕೀರ್ತಿ ತಂದುಕೊಟ್ಟಿದ್ದಾರೆ, ಈ ಎಲ್ಲ ಕೀರ್ತಿ ಶ್ರೀ ಜಗದ್ಗುರು ಮಹಾಸನ್ನಿಧಿಯವರಿಗೆ ಸಲ್ಲಬೇಕು ಸಲ್ಲುತ್ತದೆ.

ಪರೋಪಕಾರಾಯ ಫಲಂತಿ ವೃಕ್ಷಾಃ ಪರೋಪಕಾರಾಯ ವಹಂತಿ ನದ್ಯಃ। ಪರೋಪಕಾರಾಯ ದುಹಂತಿ ಗಾವಃ ಪರೋಪಕಾರಾರ್ಥ ಮಿದಂ ಶರೀರಮ್॥

ಪರೋಪಕಾರಕ್ಕಾಗಿ ಗಿಡಗಳು ಹಣ್ಣುಗಳನ್ನು ಕೊಡುತ್ತವೆ. ಪರೋಪಕಾರಕ್ಕಾಗಿ ನದಿಗಳು ಹರಿಯುತ್ತವೆ. ಪರೋಪಕಾರಕ್ಕಾಗಿ ಹಸುಗಳು ಹಾಲನ್ನು ಕರೆಯುತ್ತವೆ. ಅದರಂತೆಯೇ ಪೂಜ್ಯ ಶ್ರೀ ಸನ್ನಿಧಿಯವರು ವಿದ್ಯಾದಾನಕ್ಕಾಗಿ, ಅನ್ನದಾನಕ್ಕಾಗಿ, ಸಮಾಜ ಸೇವೆಗಾಗಿ ತಮ್ಮ ದೇಹವನ್ನೇ ಅರ್ಪಿಸಿರುವುದು ನಾಡಿನ ಶುಭೋದಯದ ಸಂಕೇತವಾಗಿದೆ.

□ □

ಪರಮ ಪೂಜ್ಯ ಶ್ರೀ ಮೂ.ಜ.ಗಂ. ರವರ ತಾಯಿಗುಣ, ಶಿವಗುಣ, ಶಿವಾನುಭವ

—ಶಿವಶರಣೆ ನೀಲಮ್ಮತಾಯಿ ಅಸುಂಡಿ

ಭಾರತದ ಅಸುಪೆನಿಸಿದ ಈ ಕರ್ನಾಟಕದಲ್ಲಿ, ಯಾವ ಮಠಾಧೀಶರಾದರೂ ಬಸವಾದಿ ಪ್ರಮಥರ ತತ್ತ್ವಗಳನ್ನು ಚಾಚೂ ತಪ್ಪದಂತೆ, ನರನಾಡಿಗಳ ಮಿಡಿತದಲ್ಲಿ, ರಕ್ತದ ಧಮನಿಗಳಲ್ಲಿ ರೋಮ ರೋಮಗಳಲ್ಲಿ ಅಳವಡಿಸಿಕೊಂಡು, ಕಾರ್ಯರೂಪದಲ್ಲಿ ಜೀವಂತ ಸ್ವರೂಪಕ್ಕಿಳಿಸಿ ವಿಶ್ವವಿಖ್ಯಾತರಾಗಿ ಕನ್ನಡನಾಡಿನ ಸಾಂಸ್ಕೃತಿಕ, ಸಾಹಿತ್ತಿಕ, ಶೈಕ್ಷಣಿಕ, ಆರ್ಥಿಕ, ವೈದ್ಯಕೀಯ, ಧಾರ್ಮಿಕ ಕ್ಷೇತ್ರಗಳಲ್ಲಿ ಈ ಶತಮಾನದ ಪ್ರಾರಂಭದಿಂದಲೂ ಅಸಾಧಾರಣವಾದ ಕಾರ್ಯಗೈದಿದ್ದಾರೆ. ಆ ಪ್ರಪ್ರಥಮ ಶ್ರೇಯಸ್ಸು ಹುಬ್ಬಳ್ಳಿಯ ಮೂರುಸಾವಿರಮಠದ ಪರಮ ಪೂಜ್ಯ ಶ್ರೀ ಮ.ನಿ.ಪ್ರ. ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಗೆ ಸಲ್ಲತಕ್ಕದ್ದು.

ಪೂಜ್ಯ ಶ್ರೀ ಜಗದ್ಗುರುಗಳಲ್ಲಿರುವ 'ತಾಯಿಗುಣ' ಉಪಮಾರಹಿತವಾದದ್ದು. ಗುರುವಿನಲ್ಲಿರಬೇಕಾದ ಮೊದಲನೇ ಲಕ್ಷಣವೇ ಕರುಣೆ, "ಕರುಣಾ ರಸದ ಕೋಡಿವರಿಯುವ ಕಟಾಕ್ಷದ ಪರತತ್ತ್ವ ಅರಪ್ರಮಾಲಾಪದ ಸಿರಾಭಾರಿ ಸದ್ಗುರು ವಿರಳೆನ್ನ ಮಾನಸದಲ್ಲಿ" ಎಂದು ನಿಜವನರಿದ ಶ್ರೀ ನಿಜಗುಣ ಶಿವಯೋಗಿಗಳು ಹೇಳಿದ್ದುಂಟು. ಪೂಜ್ಯ ಶ್ರೀಗಳವರ ಹೃದಯ ತಾಯಿಯು, ದೀನ-ದಲಿತರ ಕಡು ಬಡವ ಕಂಗಾಲರ, ಪಾಪಿಗಳ ಓಂದುಳಿದವರ ಬದುಕನ್ನು ನೋಡಿದಾಗ, ಕರುಣೆಯ ರಸದ ಕೋಡಿ ಪ್ರವಹಿಸುತ್ತಿದೆ. ಉದಾಹರಣೆಗೆ- ಹಿಂದೊಮ್ಮೆ ನಾಡಿನಲ್ಲಿ ಕಲಬುರ್ಗಿ, ರಾಯಚೂರ, ಬೀದರ, ವಿಜಾಪೂರ, ಮುಂತಾದ ಕೆಲ ಜಿಲ್ಹೆಗಳಲ್ಲಿ ಅನಾವೃಷ್ಟಿಯಿಂದಾದ ಭೀಕರ ಬರಗಾಲ ಬಿದ್ದು ಜನ ಆರ್ಥಿಕ ಪರಿಸ್ಥಿತಿಯಿಂದಾಗಿ ಸಾವಿಗೆ ಮುಖಮಾಗಿರುವಾಗ ಈ ಆರ್ತಧ್ವನಿಯು ಕೂಗು ಶ್ರೀ ಜಗದ್ಗುರುಗಳ ಹೃದಯವನ್ನೇ ಮಿಡಿಯಿತು ಮಾನವೀಯತೆಯ ಸಾಕಾರ ಮೂರುತಿಯಾದ ಪೂಜ್ಯರು ಹುಬ್ಬಳ್ಳಿಯ ಪ್ರಮುಖ ಭಕ್ತರನ್ನು ಕರೆಯಿಸಿ, ಭೀಕರ ಬರಗಾಲದ ನಿವಾರಣೆಗಾಗಿ, ಹುಬ್ಬಳ್ಳಿಯಲ್ಲಿ ಸ್ವತಃ ಜಗದ್ಗುರುಗಳೇ ಪಾದಯಾತ್ರೆ ಕೈಕೊಂಡರು ಮನೆ ಮನೆಗೆ ಪಾದಯಾತ್ರೆ ಪ್ರಯಾಣ ಬೆಳೆಸಿದಾಗ ಶ್ರೀ ಗುರುಸಿದ್ಧೇಶ್ವರರ ಜೋಳಿಗೆಗೆ ನೀಡದವರಾರು? ಎಲ್ಲರೂ ಮುಕ್ತ ಹಸ್ತದಿಂದ ನೀಡಿದರು. ೯ ದಿನಗಳಲ್ಲಿ ೧೨ ಲಕ್ಷ ೫೪ ಸಾವಿರ ಸಾವಿರ ಚೀಲ ದವಸ ಧಾನ್ಯಗಳು ೪ ಟ್ರಕ್ಕಿನಷ್ಟು ಅರಿವೆಗಳು ಸಂಗ್ರಹಿತವಾದವು. ಹಳ್ಳಿ ಹಳ್ಳಿಗೆ ಪಾದಯಾತ್ರೆ ಗೈದು ದನ-ಕರುಗಳಿಗೆ ಮೇವು ಸಂಗ್ರಹಿಸಿ ಸ್ವತಃ ಜಗದ್ಗುರುಗಳೇ ಭಕ್ತರೊಡನೆ

ಬರಗಾಲ ಪೀಡಿತ ಪ್ರದೇಶಗಳಿಗೆ ಹೋಗಿ, ಅನ್ನ ಅರಿವೆ ದನಕರುಗಳಿಗೆ ಮೇವು ಹಂಚಿದರು. ಕೆಲವಡೆ ಗಂಜಿ ಕೇಂದ್ರಗಳನ್ನೂ ಪ್ರಾರಂಭಿಸಿದರು. ಪೂಜ್ಯರ ತಾಯಿಗುಣಕ್ಕೆ ಸರಿದೂಗಬಲ್ಲ ಹೃದಯ ವಿಶ್ವಕೌಟುಂಬಿಕ. ಔದಾರ್ಯತ್ವ ಇನ್ನಾವ ಮಠ ಪೀಠಾಧೀಶರಲ್ಲಿಯೂ ಕಾಣಲಾರೆವು. ವೇದಿಕೆಯ ಮೇಲೆ ಕರುಣೆ ರಸದ ಮಾತುಗಳನ್ನಾಡಿ ದೊಡ್ಡಸ್ತಿಕೆ ಉಳಿಸಿಕೊಳ್ಳುವ, ಮಾತಿನ ಕರುಣೆಯ ವಾಗ್ಜಾಲದವರಿಂದ ಸಮಾಜಕ್ಕೆ ಯಾವ ಲಾಭವೂ ಇಲ್ಲ. ಪೂಜ್ಯರ ಬದುಕು ಸರ್ವಧರ್ಮದ ಅನುಯಾಯಿಗಳಿಗೂ ಸರ್ವಧರ್ಮದ ಗುರುಗಳಿಗೂ ಅನುಕರಣೀಯ.

ಲೌಕಿಕ ಜೀವನದಲ್ಲಿ ನೊಂದು ಬೆಂದು ಬಸವಳಿದು ಬೆಂಡಾದ ಅರ್ಥಿಗಳಿಗೆ ಅಷ್ಟೇ ಶ್ರೀ ಜಗದ್ಗುರುಗಳವರ ಕರುಣೆ ಸೀಮಿತವಾದದ್ದಲ್ಲ. ಅಲೌಕಿಕ ಜೀವನದಲ್ಲಿ ಸಾಧಕರಾಗಿ ಸಾಧಿಸಿ, ಸಿದ್ಧರಾಗಿ ಕರ್ತವ್ಯದ ಮಣಿಹವನ್ನೂ "ತನ್ನಂ ಮೊದಲರಿಯುವದೇ ಆದ್ಯ ಕರ್ತವ್ಯ" ಪೂರೈಸಿಕೊಳ್ಳಬೇಕೆಂದು ಜಿಜ್ಞಾಸುಗಳಾಗಿ ಶ್ರೀಮಠಕ್ಕೆ ಬಂದ ಸಾಧಕರಿಗೆ– ಶ್ರೀಗಳವರ ತಾಯಿಯ ಹೃದಯ ಅವಕಾಶವನ್ನಿತ್ತಿದೆ. ಗುರುವೆಂಬ ತಾಯಿ, ದೇವನೆಂಬ ತಂದೆಗಿಂತಲೂ ದೊಡ್ಡವಸ್ತು. ಉದಾಹರಣೆಗೆ– ಸಣ್ಣ ಮಗುವೊಂದು ಬೀದಿಯ ಧೂಳಿನಲ್ಲಿ ಆಟವಾಡಿ ಮೈಗೆಲ್ಲ ಧೂಳು ಕೆಸರು ಹಚ್ಚಿಕೊಂಡಿತ್ತು. ಒಳಗಿನಿಂದ ತಂದೆಯು ಶುಭ್ರ ಬಟ್ಟೆ ಧರಿಸಿ ಪೇಟೆಗೆ ಹೊರಟ ತಂದೆಯನ್ನು ನೋಡಿದ ಮಗು ಹಿಂದಿನಿಂದ ಓಡಿತು. ನಾನು ನಿನ್ನ ಜೊತೆ ಬರುವೆನೆಂದು ಹಟ ಹಿಡಿಯಿತು. ತಂದೆ ಗದರಿಸಿದ, ನೀನು ಬಹಳ ಹೊಲಸಾಗಿರುವಿ ನಿನ್ನನ್ನು ಎತ್ತಿಕೊಳ್ಳುದಿಲ್ಲ ನಡಿಯಾಚೆ ಎಂದು ಹೆದರಿಸಿ, ಮನೆಯೊಳಗೆ ಕಳಿಸಿದ, ಅಳುತ್ತಾ ತಂದೆ ತನ್ನನ್ನು ಪೇಟೆಗೆ ಕರೆದುಕೊಂಡು ಹೋಗದಿರುವ ಕಾರಣವನ್ನು ತಾಯಿಯ ಮುಂದೆ ಹೇಳಿತು. ತಾಯಿ ಆ ಮಗುವಿಗೆ ಹೇಳುತ್ತಾಳೆ. ಮಗು ಅಳಬೇಡ ನಿನ್ನ ಗಲೀಜು ತೊಳೆಯಲು ಸಿದ್ಧಳಿರುವ–

"ಆಡಿ ಬಾ ನನ ಕಂದ ಅಂಗಾಲ ತೊಳೆದೇನಿ
ತೆಂಗಿನ ನೀರಿನಿಂದ ಬಂಗಾರ ಪಾದವ ತೊಳೆಯುವೆ"

ಇದು ತಾಯಿಯ ವಾತ್ಸಲ್ಯಪೂರಿತ ಹೃದಯದಿಂದ ಚಿಮ್ಮಿಬಂದ ಮಾತು. ಆ ಮಗುವಿಗೆ ನೀರಿನಿಂದ ಸ್ನಾನ ಮಾಡಿಸಿ, ಮಡಿ ಬಟ್ಟೆ ಧರಿಸಿ, ಹಣೆಗೆ ಚುಕ್ಕೆಯಿಟ್ಟು ಶೃಂಗಾರ ಮಾಡಿ, ಅಂಗಳಕ್ಕೆ ಕಳಿಸುತ್ತಾಳೆ. ಆಗ ಪೇಟೆಯಿಂದ ಮರಳಿ ಬಂದ ತಂದೆ ಮಗುವಿನ ಶೃಂಗಾರ ಸ್ವಚ್ಛತೆ ನೋಡಿ ಸಂತೋಷಪಟ್ಟು ಎತ್ತಿ ಮುದ್ದಾಡಿದ ಇದೊಂದು ಲೌಕಿಕ ದೃಷ್ಟಾಂತವಾದರೆ ಅಲೌಕಿಕ ಕ್ಷೇತ್ರದಲ್ಲೂ ನಾವೆಲ್ಲರೂ ದೇವನ ಮಕ್ಕಳೇ ನಿಜ ಆದರೆ, ಆತ ನಮ್ಮನ್ನು ಒಮ್ಮೆಲೇ ಅನುಗ್ರಹಿಸಿ ಕಾಪಾಡುದಿಲ್ಲ. ಯಾಕೆ? ಈ ಮಕ್ಕಳು ಕಾಮಕ್ರೋಧಾದಿಗಳೆಂಬ ಬೀದಿಯ ಧೂಳಿನಲ್ಲಿ ಆಟವಾಡಿ, ಅಣು ಮಲ, ಮಾಯಾ ಮಲ, ಕಾರ್ಮಿಕ ಮಲವೆಂಬ ಮಲತ್ರಯಗಳನ್ನು ಅಂತಃಕರಣದಲ್ಲಿರಿಸಿಕೊಂಡು, ದೇವನೆಂಬ ತಂದೆಯ ಬೆನ್ನುಹತ್ತಿದರೆ ಆತ ಹೇಳುತ್ತಾನೆ– ಎಲೋ ನೀನು ರಂಜಕ, ನಾನು ನಿರಂಜನ, ನೀನು ಮರವೆಯ ಮರಳು ನಾನು ಅರವಿನ ತಿರುಳು, ನೀನು ಮಲತ್ರಯ ಸಹಿತ, ನಾನು ಮಲತ್ರಯ ರಹಿತ, ನನಗೂ ನಿನಗೂ

ಸಾಮರಸ್ಯ ಅಳವಡದು ಎಂದು, ದೇವನೆಂಬ ತಂದೆ ದೂರಿಕರಿಸಿದಾಗ, ಗುರುವೆಂಬ ತಾಯಿಯು ತನ್ನ ಕರುಣೆಯ ಕೃಪಾದೃಷ್ಟಿಯಲ್ಲಿ, ಜ್ಞಾನವೆಂಬ ನೀರಿನಿಂದ ಸ್ನಾನ ಮಾಡಿಸಿ ಅಂತಃಕರಣದಲ್ಲಿರುವ ಮಲತ್ರಯಗಳೆಂಬ ದೋಷಗಳನ್ನು ಕಳೆದು ತ್ರಿವಿಧ ದೀಕ್ಷೆಗಳಿಂದ ಅಂಗ ತ್ರಯಕ್ಕೆ ಲಿಂಗತ್ರಯಗಳನ್ನು ಸಂಬಂಧಗೊಳಿಸಿ, "ನೀನು ನರಲ್ಲೇಳೋ ಬಾಲಾ ವರಮಂತ್ರದ ಮೂಲ" ಎಂದು ಎಚ್ಚರಿಸಿ, ಅರುವಿನ ಶೃಂಗಾರಗೊಳಿಸಿ, ವೈರಾಗ್ಯವೆಂಬ ಚುಕ್ಕೆಯನ್ನಿಟ್ಟು ಸದ್ಗುಣಗಳೆಂಬ (ದೈವೀ ಸಂಪತ್ತು) ಆಭರಣಗಳನ್ನಿರಿಸಿ ಸಚ್ಚಿದಾನಂದ ಅಂಗಳದಲ್ಲಿ ಆಡಲು ಬಿಟ್ಟಾಗ, ದೇವನೆಂಬ ತಂದೆ ನೋಡಿ ಸಂತೋಷ ಪಟ್ಟು ಈಗ ನನ್ನ ಕೃಪೆಗೆ ಅರ್ಹನಾಗಿದ್ದಿ ಎಂದು ಎತ್ತಿ ಮುದ್ದು ಕೊಡುತ್ತಾನೆ ಇದೇ ಲಿಂಗಾಂಗ ಸಾಮರಸ್ಯ.

ಗುರು ತಾಯಿಯೆನಿಸಿದ ಪೂಜ್ಯ ಶ್ರೀ ಜಗದ್ಗುರುಗಳಲ್ಲಿರುವ ಮಾತೃ ಹೃದಯ ಬಹಳ ದೊಡ್ಡದು. ನಂಬಿ ಬಂದ ಸಾಧಕರಿಗೆ ಸದವಕಾಶದ ಭೂಮಿ, ಶಿಕ್ಷಣದ ನೀರು, ಪರಿಸರದ ರವಿಕಿರಣ, ಸತ್ವಯುತ ಸಾಧನೆಯ ಗೊಬ್ಬರವನ್ನೊದಗಿಸಿ ಶ್ರೀ ಮಠದಲ್ಲಿ ಸಂಸ್ಕೃತ ಪಾಠಶಾಲೆ, ವೈದಿಕ ಅಭ್ಯಾಸದ ಅನುಕೂಲತೆ, ಕೀರ್ತನ ಕಾಲೇಜು, ಸಂಸ್ಕೃತ ಕನ್ನಡ ಇಂಗ್ಲೀಷ ಹಿಂದಿ ಭಾಷೆ ಕಲಿಯಲು ಅವಕಾಶ ಅಂತರಂಗದ ಅನ್ವೇಷಣೆಗೆ ಪ್ರಶಾಂತ ಪರಿಸರದ ಧ್ಯಾನ ಮಂದಿರ, ಪೂಜಾಮಂದಿರ ಇತ್ಯಾದಿ ಹಲವಾರು ಅನುಕೂಲತೆಗಳನ್ನು ವ್ಯವಸ್ಥೆ ಮಾಡಿದ್ದಾರೆ. ಶ್ರೀಗಳವರ ಅನುಕೂಲತೆಯನ್ನು ಸದುಪಯೋಗ ಮಾಡಿಕೊಳ್ಳುವ ಸೂತ್ರ ಸಾಧಕರ ಕೈಯಲ್ಲಿ ಇದೆ.

ಪೂಜ್ಯರು ಬಸವಾದಿ ಪ್ರಮಥರ ತತ್ತ್ವಗಳನ್ನು ಹಾಗೂ ಹಾನಗಲ್ಲ ಶ್ರೀ ಕುಮಾರ ಶಿವಯೋಗಿಶ್ವರರ ತತ್ತ್ವಗಳನ್ನು ಪ್ರಚಾರ ಮಾಡುವದಕ್ಕಾಗಿ, ಹಳ್ಳಿ ಹಳ್ಳಿಗೂ ಅವರ ಅಮರ ಸಂದೇಶಗಳನ್ನು ಮುಟ್ಟಿಸುವದಕ್ಕಾಗಿ ಶ್ರೀ ಮಠದಲ್ಲಿ 'ಕುಮಾರೇಶ್ವರ ಶಿವಯೋಗಿ ಸಂಘ'ವನ್ನು ಸ್ಥಾಪಿಸಿದ್ದಾರೆ. ಆ ಸಂಘದಲ್ಲಿ ಬೆಳೆದು ಅಧ್ಯಾತ್ಮಿಕತೆಯ ಗರಡಿಯಲ್ಲಿ ಪಳಗಿ ಪೂಜ್ಯ ಜಗದ್ಗುರುಗಳವರ ಮಾರ್ಗದರ್ಶನದಲ್ಲಿ ತತ್ತ್ವದ ರೂಹಾಗಿ ಈ ನಾಡಿನಲ್ಲಿ ಪರ ನಾಡಿನಲ್ಲಿ ವೀರಶೈವ ಮಠಗಳಿಗೆ ಮಠಾಧಿಪತಿಗಳನ್ನಾಗಿ ಮಾಡಿ, ಧರ್ಮಜಾಗ್ರತಿ ಮಾಡಿದ ಮಾಡುತ್ತಿರುವ ಶ್ರೇಯಸ್ಸು ಗುರು ತಾಯಿಯೆನಿಸಿದ ಪೂಜ್ಯ ಜಗದ್ಗುರುಗಳಿಗೆ ಸಲ್ಲತಕ್ಕದ್ದು, ಪೂಜ್ಯ ಶ್ರೀ ಜಗದ್ಗುರುಗಳಲ್ಲಿರುವ 'ಶಿವಗುಣ' 'ಸರ್ವಂ ಶಿವಮಯಂ ಜಗತ್' ಈ ಜಗ ವನು ಭಗವನ್ಮಯವಾಗಿ ಕಾಣುವ 'ಶಿವಗುಣ' ಶ್ರೀಗಳವರ ಬದುಕಿನಲ್ಲಿ ಹಾಸು ಹೊದ್ದಾ ಗಿದೆ. ಅನೇಕದರಲ್ಲಿ ಏಕತೆಯನ್ನು ಕಾಣುವ 'ವಿಶ್ವತೋ ಚಕ್ಷುಃ' ಉನ್ಮೀಲನವಾಗಿವೆ.

ಇತ್ತೀಚೆಗೆ ೧೯೮೪ ರಲ್ಲಿ ಹುಬ್ಬಳ್ಳಿ ನಗರದಲ್ಲಿ ನಡೆದ ಹಿಂದೂ ಮುಸ್ಲಿಂ ಬಾಂಧವ ರಲ್ಲಿ ದ್ವೇಷಾಸೂಯೆಗಳ ದಳ್ಳುರಿ, ಇಡೀ ಹುಬ್ಬಳ್ಳಿ ನಗರವನ್ನೇ ಹುಡಿ ಮಾಡುವ ಸಾಹಸ ಕ್ಕಿಳಿದಿರುವಾಗ ಶ್ರೀಗಳವರ 'ಶಿವಗುಣ'ವು ಹುಬ್ಬಳ್ಳಿ ಮರಿ ಪಂಜಾಬವಾಗುವ ದುರಂತ ವನ್ನು ತಪ್ಪಿಸಿತು. ಅವರ ಲಿಂಗಪೂಜೆಯ ಅಂತಃ ಸಾಧನೆಯ ತಪಸ್ಸಿನ ಫಲವಾದ 'ಶಿವಗುಣ'ದ ದಿವ್ಯಶಕ್ತಿ, ದ್ವೇಷಾಸೂಯೆಗಳ ದಳ್ಳುರಿಗೆ ಶಾಂತಿ ಜಲವನ್ನೆರೆಯಿತು.

'ಪಾಪವು ಗೆಲ್ಲಲಾರದ್ದನ್ನು ವಾತ್ಸಲ್ಯವು ಗೆಲ್ಲಬಲ್ಲುದು' ಎಂಬ ನುಡಿ ಪೂಜ್ಯ ಶ್ರೀಗಳವರಲ್ಲಿ ಫಲಿಸಿತು. 'ಎಲ್ಲ ಧರ್ಮಗಳೂ ಸಮಾನ ದೇವನು ಮಾತ್ರ ಒಬ್ಬ' ಧರ್ಮದ ಹೆಸರಿನಲ್ಲಿ ಜಪ್ಪು, ರಂಪಾಟ್ಟು ಬೇಡ, ದೇವನಿಗೆ ಯಾವ ನಾಮ ರೂಪಗಳೂ ಇಲ್ಲ, ನಮ್ಮ ನಮ್ಮ ಸಾಧನೆಗೋಸ್ಕರ ನಿರಾಕಾರನಾದ ದೇವನಿಗೆ, ಕಲ್ಲಿನಲ್ಲಿ ಕೆತ್ತಿಯೋ ಕಟ್ಟಿಗೆಯಲ್ಲಿ ಕೊರೆದೊ, ಬಟ್ಟೆಯಲ್ಲಿ ಬರೆದೊ, ಮಣ್ಣಿನಲ್ಲಿ ನಿರ್ಮಿಸಿಯೋ ಆಯಾ ನಾಮ ರೂಪಗಳನ್ನು ಕೊಟ್ಟಿದೆ. ಎಲ್ಲ ಧರ್ಮಗಳ ಮೂಲ ಸ್ವರೂಪನಾದ ದೇವರು, ಯಾವ ಮತ ಧರ್ಮ ಸಂಪ್ರದಾಯಗಳ ಸೊತ್ತು ಅಲ್ಲ ಎಂಬ ವಿವೇಕದ ಪ್ರಜ್ಞೆಯನ್ನು ಹಿಂದೂ-ಮುಸ್ಲಿಂ ಬಾಂಧವರಲ್ಲಿ ಜಾಗ್ರತಗೊಳಿಸಿ, ಶಾಂತಿ ಸೌಹಾರ್ದತೆಯನ್ನು ಕಾಪಾಡಿದ ಶ್ರೇಯಸ್ಸು 'ಶಿವಗುಣ'ಗಳ ಸಮನ್ವಯದ ಮೂರುತಿಯಾದ ಶ್ರೀ ಜಗದ್ಗುರುಗಳವರಿಗೆ ಅರ್ಪಿತವಾದದ್ದು.

ಸರ್ವಧರ್ಮಗಳ ಅಂತಃಸಾರ ಸತ್ತ್ವವೇ ಒಂದು ರೂಪಾಗಿ ಸೃಷ್ಟಿಗಿಳಿದು ಬಂದ ಪೂಜ್ಯರ 'ಶಿವಗುಣ'ವು ಹೀಗಿದೆ. **ಕ್ರೈಸ್ತರ ಕರ್ತವ್ಯನಿಷ್ಠೆ, ಮುಹಮ್ಮದಿಯರ ತತ್ವನಿಷ್ಠೆ, ಬೌದ್ಧರ ಮಾನವತಾವಾದ, ಜೈನರ ಅಹಿಂಸೆ, ಶ್ರೀ ಶಂಕರಾಚಾರ್ಯರ ಸತ್ಯಜ್ಞಾನ, ಮಧ್ವರ ಅನುಭವ, ಬಸವಣ್ಣನ ಭಕ್ತಿಯೋಗ, ಪ್ರಭುದೇವರ ಜ್ಞಾನಯೋಗ, ಸಿದ್ಧರಾಮೇಶ್ವರನ ಕರ್ಮಯೋಗ, ಚನ್ನಬಸವಣ್ಣನ ಷಟ್‌ಸ್ಥಲ ಜ್ಞಾನ, ಅಕ್ಕನ ವೈರಾಗ್ಯ, ಸಾಕ್ರೆಟಿಸ್‌ನ ಸತ್ಯ, ಅರಿಸ್ಟಾಟಲ್‌ನ ವಾದಶಕ್ತಿ, ಅರವಿಂದರ ಪೂರ್ಣಯೋಗ, ಸ್ವಾಮಿ ವಿವೇಕಾನಂದರ ಪೂರ್ಣ ಸಾಹಿತ್ಯ, ವಿದ್ಯಾರಣ್ಯರ ಸರ್ವಜ್ಞತ್ವ, ಗಾಂಧೀಜಿಯವರ ಅನಾಸಕ್ತಯೋಗ ಇವೆಲ್ಲವುಗಳ ಸಾಕಾರ ಸಂಗಮವೇ ಹುಬ್ಬಳ್ಳಿಯ ಮೂರುಸಾವಿರ ಮಠದ ಜಗದ್ಗುರುಗಳವರು ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.** ತತ್ತ್ವನಿಷ್ಠರಾಗಿ ಸಮಾಜದ ಹಿತಚಿಂತಕರಾಗಿ ಇರುಳು-ಹಗಲೆನ್ನದೆ ಅವಿಶ್ರಾಂತ ಚೇತನವಾಗಿ, ನಾಡಿನ ನಾಡಿಗಳಿಗೆ, ಧರ್ಮ ಸಮನ್ವಯದ ತಿರುಳನ್ನು ಸಾಧಿಸಿ ಬೋಧಿಸುತ್ತಿರುವ ಆ ಬೋಧನೆಯ ಫಲ ಎಲ್ಲ ಧರ್ಮದ ಅನುಯಾಯಿಗಳಿಗೆ ಅಮೃತ ಸಿಂಚನವಾಗಿದೆ. ಅವರಲ್ಲಿರುವ 'ಶಿವಗುಣ'ಕ್ಕೆ, ಸಾಕ್ಷಿಯಾಗಿದೆ. "ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಸರ್ವಜ್ಞ" ಎಂಬ ನುಡಿ ಶ್ರೀಗಳವರಲ್ಲಿ ರಕ್ತಗತವಾಗಿ ಬಂದಿದೆ.

'ಮನೆ ಗೆದ್ದು ಮಾರು ಗೆಲ್ಲು' ಎಂಬ ನಾಡು ನುಡಿ, ಮೂ, ಜ, ಗಂ, ರವರಲ್ಲಿ ಕಾಣಬಹುದಾಗಿದೆ. ಯುರೋಪದ ಲಾವಲ್‌ದಲ್ಲಿ ಜರುಗಿದ 'ವಿಶ್ವ ಶಾಂತಿಯ' ಸಮ್ಮೇಳನದಲ್ಲಿ ಸಕ್ರಿಯವಾಗಿ ಶ್ರೀಗಳವರು ಭಾಗವಹಿಸಿ, "ವಿಶ್ವ ಶಾಂತಿಗೆ ವೀರಶೈವ ಧರ್ಮದ ಕೊಡುಗೆ" ಎಂಬ ವಿಷಯವಾಗಿ ಮಹಾ ಅಧಿವೇಶನದಲ್ಲಿ ಆಶೀರ್ವಚನ ಭಾಷಣ ಮಾಡಿದ್ದು ಚಾರಿತ್ರಿಕ ಘಟನೆಯಾಗಿದೆ, ತಮ್ಮ ವಿದೇಶ ಪ್ರವಾಸದಲ್ಲಿ ಅನೇಕ ದೇಶಗಳಲ್ಲಿ ಸಂಚರಿಸಿ ಭಾರತೀಯ ಧರ್ಮ ಸಂಸ್ಕೃತಿಗಳ ಸಂದೇಶವನ್ನು ಬೀರಿ ಕರ್ನಾಟಕಕ್ಕೆ ಕೀರ್ತಿ ತಂದ ಮಠಾಧಿಪತಿಗಳಲ್ಲಿ ಮೊದಲಿಗರು ಪೂಜ್ಯ ಶ್ರೀ ಮೂ, ಜ, ಗಂ, ರವರು, ಅವರ

ಬಹುಮುಖದ ವ್ಯಾಪ್ತಿಯನ್ನೂ ನೋಡಿ, ಅಸೂಯೆ ಪಟ್ಟವರಲ್ಲಿಯೂ ಶಿವಭಾವನ್ನಿರಿಸಿದ 'ಶಿವಗುಣಿ'ಗಳು.

"ದೇಶವನು ಬಿಟ್ಟು ಪರದೇಶಕ್ಕೆ ಹೋಗಿ ಬರೆ
ರೋಷ ಕಾರುವರು ಕುರುಡು ನಂಬಿಗೆಯಿಂದ
ಲೇಸಿಲ್ಲ ಜಗಕೆ? ಪೂರ್ಣಜ್ಞ. ಮೂ, ಜ, ಗಂ.

ರೋಷಿಗಳಲ್ಲಿಯೂ ದೋಷಿಗಳಲ್ಲಿಯೂ ಶಿವನನ್ನು
ಕಂಡವರು ಪೂಜ್ಯ ಶ್ರೀಗಳವರು.

ಪೂಜ್ಯ ಶ್ರೀ ಜಗದ್ಗುರುಗಳವರ "ಶಿವಾನುಭವ"ದ ನಿಲವು, ಮಹೋನ್ನತವಾದದ್ದು, ಶಿವಸ್ಯ-ಅನುಭವ=ಶಿವಾನುಭವ, ಲೋಕ ಲೌಕಿಕದಾಚೆಯ ಅನುಭವದ ಸಾಕ್ಷಾತ್ಕಾರ ಪಡೆದವರು. ಹೃದಯದಲ್ಲಿ ಅನುಭವಿಸಿದ ಆನಂದವನ್ನು ಶಬ್ದಗಳ ಸೋಪಾನದ ಬಲದಿಂದ ವ್ಯಕ್ತಗೊಳಿಸುವ ಶಿವಾನುಭವಿಗಳು ಅನುಭಾವವೇ ಎಲ್ಲ ಆಧ್ಯಾತ್ಮಿಕ ಸಾಧನೆಗಳ ಉಗಮ ಸ್ಥಾನವು. "ಕಲ್ಲೊಳಗಿನ ಕಿಚ್ಚಿನಂತೆ ಬೀಜದೊಳಗಣ ವೃಕ್ಷದಂತೆ" ಇರುವ ದೇವನ ನಿಲವನ್ನು ಅನುಭಾವಿ ಸುಳಿಯೇ ಬಲ್ಲ. ಎಂಬ ಶರಣರ ನುಡಿಯಂತೆ. ಪೂಜ್ಯರ 'ಶಿವಾನುಭವ'ದ ಲೋಕೋತ್ತರ ಅನುಭವ ಅವರ ಸಾಹಿತ್ಯ ಕೃತಿಗಳಲ್ಲಿ ಮಹಾಪೂರವಾಗಿ ಹರಿದು ಹೊರಸೂಸಿದೆ. ಕೇಳಿ ಇಲ್ಲಿ ಶ್ರೀಗಳವರ ಅಮೃತ ವಾಣಿಯನ್ನು,

ಮಿಥ್ಯೆ ಮಾಯೆಗಳಳಿದು। ಸತ್ಯರೂಪವ ತಿಳಿದು
ಸತ್ತು ಚಿತ್ತಾನಂದದಲಿ ಸುಖಿಸುವವಗೆ
ಮೃತ್ಯುಭಯವಿಲ್ಲ ಪೂರ್ಣಜ್ಞ.

ತತ್ತ್ವಗಳ ಕೈಬಿಟ್ಟು। ಸತ್ಯವನು ಬಚ್ಚಿಟ್ಟು
ಮಿಥ್ಯೆವನೆ ಸತ್ಯವೆಂದು ಪ್ರತಿಪಾದಿಪರು
ಸ್ವಾರ್ಥ ಸಾಧಕರು ಪೂರ್ಣಜ್ಞ. ಮೂ. ಜ. ಗಂ.

ಸತ್ಯದ ಸಾಕ್ಷಾತ್ಕಾರ ಪಡೆದನುಭವಿಗೆ ಮೃತ್ಯುವಿನ ಭಯವೂ ಸಹ ಇಲ್ಲ. ಸತ್ಯದ ಪೂರ್ಣ ನಿಶ್ಚಯ ವಿಲ್ಲದೆ ಮಿಥ್ಯವನ್ನು ಸತ್ಯವೆಂದು ಪ್ರತಿಪಾದಿಸುವವರಿಗೆ ಛೀ ಹಾಕಿದ್ದಾರೆ ಶ್ರೀಗಳವರು. ಶಿವಾನುಭವವನ್ನು ಲೋಕಾನುಭವದಲ್ಲಿ ಅಳವಡಿಸಿಕೊಂಡು ಪ್ರತ್ಯಕ್ಷ ಆಚರಿಸಿ ಕಾರ್ಯರೂಪದಲ್ಲಿ ಸಾಧಿಸಿ ತೋರಿಸುತ್ತಿರುವ, ಮಾತೆಂಬ ಜ್ಯೋತಿರ್ಲಿಂಗವಲ್ಲಿ ನಿಶ್ಶಬ್ದದನುಭವಕ್ಕೆ ಶಬ್ದ ಸೋಪಾನವ ಕಟ್ಟಿದವರು. ಬುದ್ಧಿಗಿಂತ ಭಾವಕ್ಕೆ, ತರ್ಕಕ್ಕಿಂತ ಅನುಭಾವಕ್ಕೆ ಹೆಚ್ಚು ಮಹತ್ವ ಕೊಟ್ಟ ಪೂಜ್ಯರು, ಅರಿವು ಆಚಾರ ಅನುಭವಗಳ ಸ್ವರೂಪವೇ ತಾವಾಗಿ ತನ್ಮಯವಾದ ಪವಿತ್ರ ಅಂತಃಕರಣದಲ್ಲಿ ಮೂಡಿ ಬಂದಿವೆ, 'ಪೂರ್ಣಜ್ಞ', ಎಂಬ ಅಂಕಿತ ನಾಮದಿಂದ "೩೦೦೦ ಸಾವಿರ" ಅನರ್ಘ್ಯ ರತ್ನಗಳು, ವಚನ ರೂಪದಲ್ಲಿ ಹೊರಸೂಸಿ ಹರಿದಿವೆ ಶಿವಾನುಭವ ಲೋಕಾನುಭವದಲ್ಲಿ ಪ್ರವಹಿ

ಸಿದೆ. "ವೇದಾಂತ ವಿಜ್ಞಾನ ಸುನಿಶ್ಚಿತಾರ್ಥಾಃ" ಎಂಬ ಉಪನಿಷದ್ವಾಣಿಯಂತೆ-ವೇದದ ಕೊನೆಯ ನಿರ್ಣಯದರ್ಥವನ್ನೂ, ನಿಶ್ಚಿತವಾಗಿ ತಿಳಿದು ಕೊಂಡ ಶಿವಾನುಭವಿಗಳು. ಅವರ್ಣನೀಯವಾದ ದ್ವಂದ್ವಗಳಾಚೆಗಿರುವ ನಿಜವಾದ ಸಾಕ್ಷಾತ್ಕಾರವು ಎಲ್ಲ ವಾದ-ವಿವಾದಗಳನ್ನೂ ದಾಟಿ ಇರುವದು. ಈ ಎಲ್ಲ ದ್ವಂದ್ವ ವಾದ-ವಿವಾದಗಳನ್ನೂ ದಾಟಿ ಸತ್ಯದ ಕೊನೆಯ ಸ್ಥಿತಿಯನ್ನು ಪಡೆದ ಶಿವಾನುಭವಿಗಳು ಪೂಜ್ಯರು. ತರ್ಕದ ಟಗರಿನ ಕಾದಾಟವು ಅವರಿಗೆ ಬೇಕಾಗಿಲ್ಲ. ಶಿವಾನುಭವವನ್ನು ತರ್ಕದಿಂದ ಪಡೆಯಲಾಗುವದಿಲ್ಲ ಎಂಬುದನ್ನು ಕಠೋಪ ನಿಷತ್ತು ಹೀಗೆ ಹೇಳಿದೆ.

"ನೈಷಾ ತರ್ಕೇಣ ಮತಿಪರಯಾ, ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ।
ಯಾಂ ತ್ವಮಾಪಃ ಸತ್ಯದೃತಿರ್ಬತಾಸಿ, ತ್ವಾದೃಙ್ನೋ ಭೂಯಾನ್‌ಚಿಕೇತಃಪ್ರಷ್ಟಾ"॥

ಆತ್ಮಾನುಭವವಾದ ಶಿವಾನುಭವವನ್ನು ತರ್ಕದಿಂದ ಪಡೆಯಲಾಗುವದಿಲ್ಲ. ಯಾರು ಆತ್ಮಸಾಕ್ಷಾತ್ಕಾರ ಪಡೆದಿರುವರೋ ಅವರಿಂದಲೇ ಹೇಳಲ್ಪಟ್ಟರೆ ತಿಳಿದುಕೊಳ್ಳಲು ಸಾಧ್ಯ. ಅಂತಹ ಸಾಕ್ಷಾತ್ಕಾರದ ನಿಲವನ್ನೂ ಪಡೆದ, ಪೂಜ್ಯ ಶ್ರೀ ಜಗದ್ಗುರುಗಳವರ ೬೩ನೇ ಷಷ್ಠ್ಯಬ್ಧಿ ಸಮಾರಂಭವು ೬+೩=೬೩- ಆತ್ಮಾನುಭವದರಿವು ೬-೩ ಅಂದರೆ, ೩ ಅವಸ್ಥೆ ಗಳು. ಜಾಗ್ರ, ಸ್ವಪ್ನ, ಸುಷುಪ್ತಿ. ಈ ೩ ಅವಸ್ಥೆಗಳಲ್ಲಿಯೂ ಆತ್ಮಾನುಭವದರಿವು ಕರಗತ ಮಾಡಿಕೊಂಡ ಸಂಕೇತವಾಗಿ ೬೩ನೇ ವರ್ಷದ ಷಷ್ಠ್ಯಬ್ಧಿ ಸಮಾರಂಭವನ್ನು ಆಚರಿಸುತ್ತಿರುವದು. ನಾಡಿನ ನಾಡಿಗಳಿಗೆಲ್ಲ ಹೆಮ್ಮೆಯ ವಿಷಯ. ಪೂಜ್ಯ ಶ್ರೀ ಜಗದ್ಗುರು ಗಳು ಶತಾಯುಷಿಗಳಾಗಿ ಬದುಕಿ ವಿಶ್ವಪ್ರಪಂಚಕ್ಕೆಲ್ಲ ತಮ್ಮ ಮಹೋನ್ನತ ಕೊಡುಗೆ ಯನ್ನು ಇನ್ನೂ ನೀಡಲಿ, ಎಂದು ಕರ್ತೃ ಶ್ರೀ ಗುರುಸಿದ್ಧೇಶ್ವರನ ಶ್ರೀ ಪಾದಂಗಳಲ್ಲಿ ಪ್ರಾರ್ಥಿಸುವೆ.

□ □

ಗ್ರಂಥ ಪ್ರಕಟಣೆಯಲ್ಲಿ ಶ್ರೀ ಜಗದ್ಗುರುಗಳ ಪಾತ್ರ

—ಎನ್. ಬಿ. ಯಜುರ್ವೇದಿ

ಶ್ರೀಮನ್ ಮಹಾರಾಜ ನಿರಂಜನ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾ ಸ್ವಾಮಿಗಳು ಮೂರುಸಾವಿರಮಠ ಹುಬ್ಬಳ್ಳಿ ಇವರ ಪರಿಚಯು ನನಗಾದುದು ಸುಮಾರು ೨೫ ವರ್ಷಗಳ ಹಿಂದೆ ಅದು ಒಂದು ಮಹತ್ವದ ಕಾರ್ಯದ ಸಂದರ್ಭದಲ್ಲಿ ಜಗದ್ಗುರುಗಳು ಯಾವುದೇ ಒಂದು ಕೆಲಸ ಹಿಡಿದರೆಂದರೆ ಅದನ್ನು ಪೂರ್ತಿ ಮುಗಿಸುವ ತನಕ ಅವರಿಗೆ ಸಮಾಧಾನವಿಲ್ಲ. **'ವಿವೇಕ ಚಿಂತಾಮಣಿ'** ಎಂಬ ಒಂದು ಬೃಹದ್ಗ್ರಂಥವನ್ನು ಮುದ್ರಿಸಿ ಹೊರತರಬೇಕಾಗಿತ್ತು. ಈ ಪುಸ್ತಕದ ಮುದ್ರಣದ ಕೆಲಸ ಅರ್ಧಕ್ಕೆ ನಿಂತಿತ್ತು. ಎಷ್ಟೋ ದಿನಗಳಿಂದ ಅದೇಕೋ ಪೂರ್ತಿಯಾಗಿರಲಿಲ್ಲ. ಅದನ್ನು ಹೇಗಾದರೂ ಮಾಡಿ ತೀವ್ರ ಹೊರ ತರಬೇಕೆಂಬ ಹೆಬ್ಬಯಕೆ ಜಗದ್ಗುರುಗಳದು ಇದೇ ಕೆಲಸದ ಸಲುವಾಗಿ 'ಸಂಯುಕ್ತ ಕರ್ನಾಟಕಕ್ಕೆ' ಫೋನು ಮಾಡಿ ನಿಮ್ಮಲ್ಲಿ ಪುಸ್ತಕದ ಮುದ್ರಣ ಮಾಡುವಿರೋ ಹೇಗೆ? ಮಾಡುತ್ತಿದ್ದರೆ ನಮ್ಮದೊಂದು ಪುಸ್ತಕವಿದೆ. ಅದನ್ನು ಮುದ್ರಿಸಿಕೊಡುವಿರೋ ಹೇಗೆ? ಎಂದು ಪ್ರಶ್ನಿಸಿದರು. ಆಗಿನ ಜಾಬವಿಭಾಗದ ಅಧಿಕಾರಿಗಳು ಮುದ್ರಿಸಿಕೊಡುವುದಾಗಿ ತಿಳಿಸಿದರು ಕೂಡಲೇ ಮಠಕ್ಕೆ ಬರಲು ತಿಳಿಸಿದರು. ಆಗ ಮಠಕ್ಕೆ ಹೋಗುವ ಸರತಿ ನನ್ನ ಪಾಲಿಗೇ ಬಂತು. ಜಗದ್ಗುರುಗಳನ್ನು ಕಾಣಲು ಬೃಹದ್ ಮಠಕ್ಕೆ ಬಂದೆನು. ಮಠದ ಹೊರ ಭಾಗವನ್ನು ಸಾಕಷ್ಟು ಸಲ ನೋಡಿದ್ದೆನು. ಒಳಗಡೆ ಮಾತ್ರ ಪ್ರವೇಶ ಮಾಡಿರಲಿಲ್ಲ. ಈ ಒಳ್ಳೇ ಸಂದರ್ಭದಿಂದ ಒಳ ಪ್ರವೇಶಕ್ಕೆ ಅನುಕೂಲವಾಯಿತು. ಸ್ವಾಮಿಗಳ ದರುಶನಕ್ಕೆ ಹೋದೆನು. ದುಂಡು ಮುಖದ, ಶಾಂತ ಸ್ವಭಾವದ ಕಾವಿ ಬಟ್ಟೆಯುಳ್ಳ ಆಕರ್ಷಿತ ಮಹಾನ್ ವ್ಯಕ್ತಿ ನಗು ಮುಖದಿಂದ ನನ್ನನ್ನು ಬರಮಾಡಿಕೊಂಡು ಕೂಡ್ರಲು ತಿಳಿಸಿದರು. ಸ್ವಾಮಿಗಳ ದರುಶನದಿಂದ ನನಗೆ ಬಹಳ ಸಂತೋಷವಾಗಿತ್ತು. ನನ್ನನ್ನು ಕೂಡ್ರಿಸಿ ತಾವು ಸರಸರನೇ ಅಟ್ಟವೇರಿ ಭರ ಭರನೇ ಕೆಳಗಿಳಿದು ಬಂದು ಕೈಬರಹದ ಒಂದು ದೊಡ್ಡ ಹೊತ್ತಿಗೆಯನ್ನು ನನ್ನ ಕೈಯಲ್ಲಿ ಕೊಟ್ಟು ಇದನ್ನು ನೋಡಿ ಇದೇ ಮುದ್ರಿತವಾಗ ಬೇಕಾದ ಪುಸ್ತಕದ ವಿಷಯ ಈಗಿದು ಅರ್ಧ ಮುದ್ರಣವಾಗಿದೆ. ಮುದ್ರಣದ ಫಾರ್ಮ ನಮ್ಮಲ್ಲಿವೆ ಈ ವಿಷಯವನ್ನು ಮುದ್ರಿಸಿ ಆ ಫಾರ್ಮುಗಳೊಂದಿಗೆ ಜೋಡಿಸಿ ಒಳಗೆ ಬಣ್ಣದ ಒಂದು ಚಿತ್ರಹಾಕಿ ಬೈಂಡ್ ಮಾಡಿಕೊಡಲು ನಿಮಗೆಷ್ಟು ದಿನ ಬೇಕೆಂದು ಕೇಳಿದರು. ನಾನು ಎಲ್ಲ ಪುಟ ತಿರುವಿಹಾಕಿ ವಿಷಯ ತಿಳಿದುಕೊಂಡು ಇದು ಪೂರ್ತಿ ಮುದ್ರಿಸಿ ಪುಸ್ತಕ

ಮಾಡಿಕೊಡಲು ಸುಮಾರು ೨-೩ ತಿಂಗಳು ಬೇಕಾಗುವುದೆಂದು ತಿಳಿಸಿದೆ ಅದೇಕೋ ಅವರಿಗೆ ಆಶ್ಚರ್ಯವಾಯಿತೋ ಏನೋ ೨-೩ ತಿಂಗಳಲ್ಲಿಯೇ ಪುಸ್ತಕ ತಯಾರು ಮಾಡಿಕೊಡುತ್ತಿರಾ? ಎಂದು ಕೇಳಿದರು. ಹೌದೆಂದು ಗೋಣುಹಾಕಿದೆ ನೀವು ಕೇವಲ ಪತ್ರಿಕೆಯನ್ನಷ್ಟೇ ಮುದ್ರಿಸುವಿರೆಂದು ತಿಳಿದಿದ್ದೇನು. ಪುಸ್ತಕಗಳ ಮುದ್ರಣವನ್ನು ಮಾಡುವಿರೆಂದ ಮೇಲೆ ನಮ್ಮ ಎಲ್ಲ ಮಠದ ಪುಸ್ತಕಗಳ ಮುದ್ರಣ ನಿಮ್ಮಲ್ಲಿಯೇ ಮಾಡಿಸುತ್ತೇನೆಂದು ತಿಳಿಸಿದರು. ಸರಿ ಮುದ್ರಣವಾಗಬೇಕಾದ ಪುಸ್ತಕದ ಎಲ್ಲ ಸಾಹಿತ್ಯದೊಂದಿಗೆ ಪ್ರೆಸ್ಸಿಗೆ ಬಂದೆನು ಮುಂದೆ ಸ್ವಲ್ಪ ದಿನದಲ್ಲಿ ಕೆಲಸ ಪ್ರಾರಂಭಿಸಿ ಅವರ ಅವಧಿಯಲ್ಲಿಯೇ ಪುಸ್ತಕ ಬೈಂಡ್ ಮಾಡಿಕೊಡಲಾಯಿತು. ಜಗದ್ಗುರುಗಳು ಇದಕ್ಕೆ ಬೇಕಾದ ಎಲ್ಲ ಸಹಾಯ ಸಹಕಾರಗಳನ್ನು ನೀಡುತ್ತಿದ್ದರು. ಅಂದಿನಿಂದ ಇಂದಿನ ತನಕ ಮಠದ ಎಷ್ಟೋ ಗ್ರಂಥಗಳನ್ನು ಮುದ್ರಿಸಿಕೊಟ್ಟದ್ದಾಗಿದೆ. ಸಾಹಿತ್ಯಾಭಿರುಚಿಯುಳ್ಳ ಜಗದ್ಗುರುಗಳು ಅನೇಕ ಗ್ರಂಥಗಳ ಪ್ರಕಟಣೆ ಬಿಡುಗಡೆ ಮಾಡಿದ್ದಾರೆ. ಅವುಗಳಲ್ಲಿ ಕೆಲವು ಗ್ರಂಥಗಳ ಹೆಸರುಗಳನ್ನು ನನಗೆ ನೆನಪಿದ್ದಷ್ಟನ್ನು ಮಾತ್ರ ಇಲ್ಲಿ ಕಾಣಿಸಲಾಗಿದೆ.

೧) ವಿವೇಕ ಚಿಂತಾಮಣಿ ೨) ವಚನಶಾಸ್ತ್ರರಹಸ್ಯ ೩) ಹೊಂಗೀರಣ ೪) ವಿಶ್ವಾತ್ಮನಿಗೆ ೫) ಚಿತ್ಸುಮನ ೬) ಚಿತ್‌ಕಿರಣ ೭) ಆಶೀರ್ವಾಣಿ ೮) ಚಿತ್ರಭೆ ೯) ಆಯ್ದಕ್ಕಿ ಲಕ್ಕಮ್ಮನ ವಚನಗಳು ೧೦) ಸುಧಾರ್ಝರಿ ೧೧) ಹೂಬಳ್ಳಿ ೧೨) ಜೇನು ಹನಿ ೧೩) ನಮ್ಮ ವಿದೇಶಯಾತ್ರೆ ೧೪) ಹಾರ್ಟ್‌ಬ್ಲೂಜಂ ೧೫) ಚಿತ್ತರಗಿ ಚಿಜ್ಜ್ಯೋತಿ ೧೬) ಪೂರ್ಣತ್ವ ೧೭) ಸೋಮನಾಥ ಚರಿತ್ರೆ ೧೮) ಪ್ರಭುಲಿಂಗಲೀಲೆ ೧೯) ನುಡಿಲಿಂಗದಾರತಿ ೨೦) ಸೂಚಿಪತ್ರ ಇನ್ನೂ ಅನೇಕ ಗ್ರಂಥಗಳು:

ಮಹಾಸ್ವಾಮಿಗಳು ಸಾರ್ವಜನಿಕ, ಶೈಕ್ಷಣಿಕ, ಧಾರ್ಮಿಕ, ವೈದ್ಯಕೀಯ ಕಾರ್ಯಗಳಲ್ಲಿ ಎಡೆಬಿಡದೆ ತೊಡಗಿದ್ದು, ಅದರಲ್ಲಿಯೇ ಬಿಡುವು ಮಾಡಿಕೊಂಡು ಅನೇಕ ಗ್ರಂಥಗಳನ್ನು ಬರೆದು ಪ್ರಕಟಿಸಿ ಸಾಹಿತ್ಯ ಸೇವೆಯಲ್ಲಿಯೂ ಅಗ್ರಗಣ್ಯರೆನಿಸಿದ್ದಾರೆ. ಕೇವಲ ಗ್ರಂಥಗಳ ರಚನಾಕಾರ್ಯದಲ್ಲಿಯೇ ಮಗ್ನರಾಗಿದ್ದಾರೆ ಈ ಹೊತ್ತಿಗೆ ಅನೇಕ ಗ್ರಂಥಗಳನ್ನು ಬರೆದು ಬಿಡುಗಡೆ ಮಾಡಬಹುದಿತ್ತು. ಅದರ ಜೊತೆಗೆ ಸಮಾಜ ಸೇವೆಯೂ ಅಷ್ಟೇ ಮಹತ್ವದ್ದೆಂದು ತಿಳಿದಿದ್ದಾರೆ. ಅವರು ಹುಟ್ಟು ಕವಿಗಳಿರಬೇಕೆಂದು ಅವರ ರಚನೆಯಿಂದ ತಿಳಿದು ಬರುತ್ತದೆ. ಕಂದ ಪದ್ಯ, ಆಧುನಿಕ ಕವನ, ಭಾವಗೀತೆ, ಇತ್ತಿತ್ತಲಾಗಿ ಪೂರ್ಣಜ್ಞ ವಚನಗಳು ಬಹಳ ಮಾರ್ಮಿಕವಾಗಿವೆ.

ಇವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಕವಿತೆಗಳನ್ನು ರಚಿಸಲು ಪ್ರಾರಂಭಿಸಿರುವೆನೆಂದು ಒಂದೊಮ್ಮೆ ಹೇಳಿದ ನೆನಪಿದೆ ಅಷ್ಟೇ ಅಲ್ಲದೆ ಚಿತ್ರಗಳ ಮೇಲೂ ಬಹಳ ಆಸಕ್ತಿ ಇದೆ ತಾವು ತೆಗೆದ ಕೆಲವು ಚಿತ್ರಗಳನ್ನು ತೋರಿಸಿದ್ದುಂಟು. ಅಷ್ಟೇ ಅಲ್ಲದೆ ಒಂದೊಂದು ಪತ್ರಿಕೆಯ ಸಂಪಾದಕತ್ವವನ್ನು ಹೊಂದಿದ್ದರು. ಬಾಲ್ಯದ ಪರಿಸರದಲ್ಲಿಯೇ ಇವೆಲ್ಲ ಹವ್ಯಾಸಗಳು ಅಂಟಿಕೊಂಡಿದ್ದವೆನ್ನಬಹುದು. ಸ್ವಾಮಿಗಳದು ಮುಕ್ತ

ಮನಸ್ಸು ಸಮಾಜ ಸೇವೆಯಲ್ಲಿ ಕಳಕಳಿ, ಶಾಂತ ಸ್ವಭಾವ ಎಲ್ಲ ಜಾತಿ ಮತಗಳವರಲ್ಲಿ ಪ್ರೀತಿ ವಿಶ್ವಾಸ ಇವೆಲ್ಲ ಬೃಹದ್ಗುಣಗಳಿಂದಲೇ ಜಗದ್ಗುರು ಪೀಠವನ್ನಲಂಕರಿಸಿದ್ದಾರೆನ್ನಬಹುದು.

ಇವರು ಹುಟ್ಟಿದ್ದು ಅತಿ ಚಿಕ್ಕ ಹಳ್ಳಿ **'ಶಿಶುವಾಳ'** ತಮ್ಮ ಊರ ಸಮ್ಮಂದಿಕರನ್ನು ಹಚ್ಚಿಕೊಳ್ಳದೇ ದೂರವಿದ್ದ ವಿದ್ಯಾ ಸಂಪಾದನೆ ಮಾಡಿದ ಧೀರ ವ್ಯಕ್ತಿಯುವರು ತಾವಷ್ಟೇ ವಿದ್ಯೆ ಕಲಿತರೆ ಸಾಲದೆಂಬಂತೆ ಎಲ್ಲರಿಗಾಗಿ ಸಂಸ್ಕೃತ ಪಾಠಶಾಲೆ, ಮಾಧ್ಯಮಿಕ ಶಾಲೆ, ಪ್ರಾಥಮಿಕ ಶಾಲೆ, ಕಾಲೇಜು ಕೀರ್ತನ ಕಾಲೇಜು ಶಿಶುವಿಹಾರ ಹೆಣ್ಣುಮಕ್ಕಳಿಗಾಗಿ ಪಾಲಿಟೆಕ್ನಿಕ್ ಹೀಗೆ ಅನೇಕ ವಿದ್ಯಾ ಸಂಸ್ಥೆಗಳನ್ನು ಸ್ಥಾಪಿಸಿದ ಇವರ ವ್ಯಕ್ತಿತ್ವ ಅಳೆಯುಲು ಸಾಧ್ಯವಿಲ್ಲ.

ಜಗದ್ಗುರು ಧರ್ಮಪ್ರಚಾರಕ ಮಂಡಳದಿಂದ ಸಂಸ್ಕೃತ ಪ್ರಚಾರೋಪನ್ಯಾಸ ಕನ್ನಡ ಗ್ರಂಥಗಳಿಗೆ ಪುರಸ್ಕಾರ ನೀಡಿವ್ದಲ್ಲದೆ ಪ್ರತಿತಿಂಗಳು ಪರಂಜ್ಯೋತಿ ಎಂಬ ಮಾಸ ಪತ್ರಿಕೆಯನ್ನು ಹೊರಡಿಸುತ್ತಿದ್ದಾರೆ. ಇಷ್ಟಕ್ಕೆ ಸಮಾಧಾನವಾಗದೆ ಧರ್ಮ ಜಾಗೃತಿಗಾಗಿ ಅಲ್ಲಲ್ಲಿ ಧರ್ಮಗ್ರಂಥಗಳ ಮುಖಾಂತರ ಧರ್ಮ ಜಾಗೃತಿಗಾಗಿ ಪರಿಶ್ರಮಿಸಿದ್ದಾರಲ್ಲದೇ ತಮ್ಮ ವಿಚಾರಗಳನ್ನು ಆಗಾಗ ಪರಂಜ್ಯೋತಿಯಲ್ಲಿ ಓದುಗರ ಮುಂದಿಡುತ್ತಿದ್ದಾರೆ. ಅಹಂಕಾರ, ಸ್ವಪ್ರತಿಷ್ಠೆ ಮಮಕಾರಗಳಿಂದ ದೂರವಿದ್ದು ಜಗದ್ಗುರು ಪೀಠದ ಕೀರ್ತಿ ಎತ್ತರಕ್ಕೇರಿಸಿದ್ದಾರೆ. ಯಾವ ಜಾತಿಯುವರೇ ಇರಲಿ ಕಿರಿಯರಿಂದ ಹಿರಿಯರ ತನಕ ಗುರುಗಳ ದರುಶನಕ್ಕೆ ಬಂದರೆ ಅವರನ್ನು ನಗುನಗುತ್ತಲೇ ಸ್ವಾಗತಿಸಿ ಅವರ ಸುಖ ದುಃಖ ಕೇಳಿ ಸೂಕ್ತ ಸಲಹೆ ನೀಡಿ ಆಶೀರ್ವದಿಸಿ ಕಳಿಸುವರು. ಹೀಗಾಗಿ ಎಲ್ಲ ಜನರ ಪ್ರೀತಿಗೆ ಪಾತ್ರರಾಗಿದ್ದಾರೆ. ಸದ್ಭಾವನೆ, ಸುವಿಚಾರವುಳ್ಳ ಹೂ ಅರಳುತ್ತಿರುವಂತೆಯೇ ಅವರ ಕಂಪನ್ನು ಸವಿಯುಲು ನಾಮುಂದ ನೀಮುಂದ ಎನ್ನುವುದರಲ್ಲಿ ಆಶ್ಚರ್ಯವೇನಿಲ್ಲ. ಸಮಾಜದ ಬಗ್ಗೆ ಹೆಚ್ಚು ಆಸ್ಥೆವಹಿಸಿ ಸಮಾಜ ಉಳಿಸಿ ಬೆಳೆಸಲು ಬಂದವರಿವರು ನಿಜವಾಗಿ ಇವರೊಬ್ಬ ಮಹಾನ್‌ವ್ಯಕ್ತಿ ಮಹಾನ್‌ಶಕ್ತಿ ಎಂದೆನ್ನಬಹುದು.

ಇವರು ಪೀಠಕ್ಕೆ ಬಂದ ನಂತರ ಈ ಬೃಹನ್ಮಠಕ್ಕೆ ಬರಹೋಗುವವರ ಸಂಖ್ಯೆ ವಿಪರೀತವಾಗಿದ್ದುದರಿಂದ ಅವರಿಗೆಲ್ಲ ಪ್ರಸಾರಕ್ಕೆ ತೊಂದರೆಯಾಗಬಾರದೆಂದು ಪ್ರಸಾದ ನಿಲಯವನ್ನು ವ್ಯವಸ್ಥೆ ಮಾಡಿದ್ದಾರೆ.

ಜಗದ್ಗುರುಗಳು ಮಠದ ಪರಂಪರೆಯನ್ನು ನಡೆಸುತ್ತಲೇ ಬಂದಿದ್ದಾರೆ. ಅದಕ್ಕೆ ಉದಾಹರಣೆಯಾಗಿ ಪ್ರತಿಶ್ರಾವಣಮಾಸದಲ್ಲಿ ಲಕ್ಷಾಂತರ ಜನರಿಗೆ ಅನ್ನಸಂತರ್ಪಣೆ ಪುರಾಣ ಪ್ರವಚನ ಕೀರ್ತನೆ ಗ್ರಂಥಗಳ ಬಿಡುಗಡೆ ನಡೆವೇ ಇರುತ್ತವೆ. ಎಲ್ಲ ವೃತ್ತಿಯುವರನ್ನು ಸಮಯೋಚಿತ ಸಂದರ್ಭಕ್ಕೆ ಸರಿಯಾದ ವೇಳೆಗೆ ಕರೆಸಿ ಪ್ರಸಾದ ನೀಡಿ ಆಶೀರ್ವದಿಸಿ ಸಮಯೋಚಿತ ಸಂದೇಶ ನೀಡುವರು. ಅದರಲ್ಲಿಯೂ ಸಂಯುಕ್ತ ಕರ್ನಾಟಕದವರೆಂದರೆ

ಎಲ್ಲಿಲ್ಲದ ಪ್ರೀತಿ ವಿಶ್ವಾಸ ಇವರೊಬ್ಬ ಪವಾಡ ಪುರುಷರೆಂದೇ ಹೇಳಬಹುದು. ಒಂದೊಮ್ಮೆ ಹುಬ್ಬಳ್ಳಿ ಮಹಾನಗರದಲ್ಲಿ ಹಿಂದೂ–ಮುಸ್ಲಿಮರ ವೈಷಮ್ಯದಲ್ಲಿ ಜಗದ್ಗುರುಗಳು ಪಾತ್ರವಹಿಸಿ ಉಭಯಮತರನ್ನು ಮಠಕ್ಕೆ ಕರೆಸಿ ಶಾಂತಿ ಮಂತ್ರ ಹೇಳಿ ಸಹಜೀವನದ ಬಾಳಿನ ಗುಟ್ಟು ತಿಳಿಸಿ ಶಾಂತಿ ಸ್ಥಾಪನೆ ಮಾಡಿದ್ದರು.

ಒಟ್ಟಿನಲ್ಲಿ ಜಗದ್ಗುರುಗಳು ಎಲ್ಲ ಕಾರ್ಯಗಳಲ್ಲಿಯೂ ಆಸಕ್ತಿ ವಹಿಸಿ ಮಠದ ಕೀರ್ತಿಯನ್ನು ಬೆಳಗಿಸಿದ್ದಾರೆ. ಬೆಳಗಿಸುತ್ತಿದ್ದಾರೆನ್ನಬಹುದು.

□ □

ಬರಗಾಲದಲ್ಲಿ ಗಂಜಿ ಕೇಂದ್ರಗಳು

—ಶ್ರೀಮತಿ ಶಾಂತಕ್ಕ ಮಠದ

ಗುರುವು ಸಾಕ್ಷಾತ್ ಪರಬ್ರಹ್ಮನೆಂಬ ನುಡಿಯು ನಮ್ಮ ನಾಡಿನಲ್ಲಿ ಇನ್ನೂ ನಿನಾದಿಸುತ್ತಿದೆ. ಅಂತೆಯೇ ವಿಜ್ಞಾನದಲ್ಲಿ ಶಿಖರ ಮುಟ್ಟಿದ ಶ್ರೀಮಂತ ರಾಷ್ಟ್ರಗಳಲ್ಲಿ ಭಾರತವು ತಲೆ ಎತ್ತಿದೆ. ಧರ್ಮದ ಬೀಡಾಗಿ ಜಗಕ್ಕೆ ದಾರದೀಪವಾಗಿದೆ. ಮಾನವಕೋಟಿ ಆಪತ್ತಿನ ಅಂಚಿನಲ್ಲಿ ಸಿಲುಕಿ ಏಳಲಿ ತೊಳಲುವಾಗ ತಪೋನಿಧರು ಆಗಾಗ ಅವತರಿಸಿ ಬಂದು ಜನಜೀವಿಗೆ ಬಂದಂತಹ ಸಂಕಷ್ಟಗಳನ್ನು ತಮ್ಮ ತಪೋಬಲದಿಂದ ಲೀಲಾಜಾಲವಾಗಿ ಪರಿಹರಿಸುತ್ತಾ ಬಂದಿದ್ದಾರೆ. "ಹರ ಮುನಿದರೆ ಗುರು ಕಾಯುವ"ನೆಂಬುದನ್ನು ಪ್ರತ್ಯಕ್ಷಗೊಳಿಸುತ್ತಾ ಬಂದಿದ್ದಾರೆ.

ಇದಕ್ಕೆ ಸಾಕ್ಷಿಯಂತೆ ಜಪಾನಿನ ಟೋಕಿಯೋದಲ್ಲಿ ನಡೆದ ಶಾಂತಿ ಪರಿಷತ್ತಿಗೆ ಹುಬ್ಬಳ್ಳಿಯ ಮೂರುಸಾವಿರಮಠದ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಬುದ್ಧ ಬಸವನ ತತ್ವಗಳನ್ನು ಹೊತ್ತು ಶಾಂತಿ ದೂತರಾಗಿ ಭಾಗವಹಿಸಿ ಸತ್ಯ, ಅಹಿಂಸೆ, ಶಾಂತಿಯ ಮಂತ್ರವನ್ನು ಸಾರಿ ಬಂದ ಇಪ್ಪತ್ತನೆಯ ಶತಮಾನದ ವಿವೇಕಾನಂದರೆಂಬುದು ನಿದರ್ಶನವಲ್ಲದೇ ಮತ್ತೇನು?

ಮತ್ತೆ ಗುರುವಿನ ಮಹಿಮೆಯನ್ನು ಪ್ರಕಟಿಸಲೋ ಏನೋ ಶರಣರು ಬೆಳಗಿದ ಈ ನಾಡಿನಲ್ಲಿ ದುರ್ಘಟನೆ ಮಿಂಚಿ ಮೂಡಿ ನಿಂತಿತು. ೧೯೭೨ರಲ್ಲಿ ಎಂದೂ ಕಾಣದ ಭೀಕರ ಬರಗಾಲ ಭುಗಿಲ್ಲೆಂದು ಭೂತಾಕಾರವಾಗಿ ಉದ್ಭವಿಸಿತು. ನಿಸರ್ಗವು ತನ್ನ ಕೋಪ ಪ್ರಕೋಪದ ಕಿಡಿಯನ್ನು ಕಾರುತ್ತ ಮೂಲೆ ಮೂಲೆಗೂ ಹಬ್ಬಿ ಹರಡಿ ದಹಿಸಹತ್ತಿತು. ನಾಡೆಲ್ಲಾ ಕಾಡಾದವು. ಜನರೆಲ್ಲ ಕಂಗಾಲಾಗಿ ತಲ್ಲಣಿಸಹತ್ತಿದರು. ಅನ್ನದ ಹಾಹಾಕಾರ ಅಬ್ಬರಿಸಿ ಅಟ್ಟ ಏರಿತು.

ರೈತ ಹಿಡಿಹಿಟ್ಟಿಗೂ ಗತಿಯಿಲ್ಲದಾದ ಸಾವಿರದ ಬೆಲೆಯ ದನಗಳನ್ನು ರೂಪಾಯಿಗಳಿಗೆ ಮಾರಿದ. ಲಕ್ಷದ ಬೆಲೆಯ ಭೂಮಿಯನ್ನು ಸಾವಿರಕ್ಕೆ ಮಾರಲು ಮುಂದಾದ. ನೀರು ಕುಡಿದು ಬದುಕಬೇಕೆಂದರೆ ಎಲ್ಲೋ ಮುಕ್ಕು ನೀರು ಕಾಣದಾದ ಶ್ರೀಮಂತರ ಬಲ ಉಡುಗಿತು. ದುರ್ಬಲರ ಜೀವ ನಿರ್ಜೀವವಾಯಿತು. ಬರಗಾಲದ ಭೀಕರತೆಯು ಅಟ್ಟಹಾಸ ಬೆಟ್ಟವೇರಿ ಕುಣಿಯಿತು. ಪಟ್ಟಣವೆಲ್ಲ ಚಿಕ್ಕೋ ಎನ್ನಹತ್ತಿದವು. ಹೊಬಳ್ಳಿಯು ಕಮರಿ ನಿಂತಿತು.

ಜೀವಕೋಟಿಯ ಈ ಘನಘೋರ ಬಳಲಿಕೆಯನ್ನು ಕಂಡು ಪದುಳ ತುಂಬಿದ ಭ್ರೂಲತಾಪುರೀಶನ ಹೃದಯ ಮಿಡಿಯದೇ ಬಿಟ್ಟೀತೇ? ಮಮ್ಮಲನೇ ಮರುಗಿ ಹೋಗಿದ್ದರು. ತಮ್ಮ ಪಟ್ಟಸ್ಥಳದ ಶೂನ್ಯ ಸಿಂಹಾಸನ ಪೀಠದಿಂದ ಜನಜೀವಿಗಳ ಬಳಲಿಕೆಯನ್ನು ಪರಿಹರಿಸಲು ಸಂಕಲ್ಪಿಸಿದರು ಪಾದಚಾರಿಯಾಗಿ ಊರು, ಊರು. ಓಣಿ, ಓಣಿ ಸಂಚರಿಸಲು ನಡಕಟ್ಟಿ ಮುಂದಾದರು. ಲಿಂಗರೂಪದ ಜಂಗಮರೇ ಪ್ರತ್ಯಕ್ಷವಾಗಿ ಬರುವದನ್ನು ಕಂಡು ಜನ ಬೆಚ್ಚಿ ಬೆರಗಾಗಿ ನಿಂತರು. ಅವರಲ್ಲಿಯ ಭಕ್ತಿ ಉಕ್ಕಿ ಹರಿಯಿತು. ನಾಸ್ತಿಕರು ಚಕಿತಗೊಂಡರು. ಶ್ರೀಮಂತರು ಸಿರಿಯ ಸುಪ್ಪತ್ತಿಗೆಯಿಂದ ಜಿಗಿದೆದ್ದರು. ಎಲ್ಲರೂ ಪುಣ್ಯಪುರುಷನ ಜೋಳಿಗೆಗೆ ತಮ್ಮ ಧನಧಾನ್ಯ ಅರ್ಪಿಸಿ ಧನ್ಯರಾಗಬೇಕೆಂದರು. ಮಹಿಳೆಯರು ತಮ್ಮ ಗುಪ್ತನಿಧಿಯನ್ನು ಜಂಗಮ ಜೋಳಿಗೆಗೆ ನೀಡಿ ಪುನೀತರಾಗ ಬೇಕೆಂದರು.

ದೊಡ್ಡ ಮಠದ ಮಹಾಂತರೊಬ್ಬರು ನೊಂದ ಜೀವಿಗಳ ನೆರವಿಗಾಗಿ ಜೋಳಿಗೆ ಹಿಡಿದು ನಿಂತಿದ್ದನ್ನು ನೋಡಿ ಪರಗುರುಚರಮೂರ್ತಿಗಳು ತಾವೂ ಜಗದ್ಗುರುವರ್ಯರ ಹೆಗಲಿಗೆ ಹೆಗಲಚ್ಚಿ ನಿಂತರು. ಶ್ರೀಕುಮಾರೇಶ್ವರ ಸಂಘದ ಸಾಧಕರು ಸಾಲುಗಟ್ಟಿ ಸಾಗಿ ಬಂದರು. ಹುಬ್ಬಳ್ಳಿ ಹುಚ್ಚೇಶನ ಪುಣ್ಯವುಂಡ ಜನರು ನಾ ಮುಂದು ನೀ ಮುಂದು ಎಂದರು. ಶ್ರೀಮಂತರು ಧಾವಿಸಿ ಬಂದರು. ಅಧಿಕಾರಿಗಳು, ವಿಧಾನಸಭಾ, ಮಹಾನಗರ ಸಭಾ ಸದಸ್ಯರು ಹಿಂಡುಗಟ್ಟಿ ಬಂದರು. ಮೇಘರಾಜನ ಹಿಂದೆ ಮೇಘಗಳ ಮೇಳ, ಮೇಳಯಿಸಿಗೊಂಡು ಬಂದಂತೆ ಶ್ರೀಕುಮಾರೇಶನ ಕೃಪೆಯಿಂದ ಗುರು ಗಂಗಾಧರ ಯೋಗಿಗಳ ಹಿಂದೆ ಒಂದು ದೊಡ್ಡ ದಂಡೇ ಹೊರಟಿತು. ಟ್ರ್ಯಾಕ್ಟರು, ಟ್ರಕ್ಕುಗಳು ಕಾಣಿಕೆಗಳನ್ನು ಹೊತ್ತು ತರಲು ಹಿಂದೆ ಹಿಂದೆ ಬರುತ್ತಿದ್ದವು. ಈ ಜನಸಮೂಹದ ಸೇನಾನಿಯಾಗಿ ನಿವೃತ್ತ ಅಸಿಸ್ಟಂಟ ಕಮೀಶನರರಾದ ಎಂ. ಎಸ್. ದಂಡಾವತಿಮಠ ಅವರು ಪ್ರಧಾನ ಕಾರ್ಯದರ್ಶಿಯ ಪಾತ್ರವನ್ನು ವಹಿಸಿ ನಡಕಟ್ಟಿ ದುಡಿಯಲು ಮುಂದಾದರು. ಇವರಂತೆ ಮಹನೀಯರಾದ ಸಂಗಪ್ಪ ನೀಲೂಗಲ್ಲ, ಬಸಪ್ಪ ಕ್ಯಾತನವರ, ಶಿವರುದ್ರಪ್ಪ, ಕಿನ್ನಾಳ, ಹುಬ್ಬಳ್ಳಿ ಮಹಾನಗರಸಭೆಯ ಮೇಯರರಾದ ಶ್ರೀ ಅಂಗಡಿಯವರು, ಜರತಾರಘರ ಮಾಜಿ ಎಂ. ಎಲ್. ಎ., ಎನ್. ಟಿ. ಹಬೀಬ, ಆರ್. ಜಿ. ವಾಲಿ, ಎಸ್. ಜಿ. ಕವಳಿ, ವೀರಭದ್ರಪ್ಪ ಬೊಬ್ಬಿ, ಶ್ರೀ ಬಳ್ಳೊಳ್ಳಿ, ಉಮದಿ ಮುಂತಾದ ಗಣ್ಯರು ಶ್ರೀಗಳವರಿಗೆ ಬಲಗೈಯಾಗಿ ದುಡಿಯಲು ಮುಂದಾಗಿದ್ದರು.

ಜಗದ್ಗುರುಗಳ ಲಿಂಗಪ್ರಭೆಯ ತುಂಗೆಯು ಪೈದಾಳಿ ಹರಿದುಬಂದಂತೆ ಜೋಳಿಗೆಯು ತುಂಬಿ ತುಂಬಿ ಲಕ್ಷದ ಮೇಲೆ ಲಕ್ಷ, ಹದಿನೈದು ಲಕ್ಷ ಮಿಕ್ಕಿ ಹಣ ಹೊಳೆಯಾಗಿ ಹರಿದು ಬಂದಿತು. ದವಸದಾನ್ಯಗಳು ರಾಶಿಯಾಗಿ ನೂರಾರು ಟ್ರಕ್ಕುಗಳು ತುಂಬಿ ಬಂದವು. ಬಟ್ಟೆ ಬರೆಗಳು ಮಠ ಹಿಡಿಯದಷ್ಟು ಎಂಟು, ಹತ್ತು ಟ್ರಕ್ಕು ತುಂಬಿ ಬಂದವು. ಮೇವು ತುಂಬಿದ ಲಾರಿಗಳು ಎಣಿಕೆಗೆ ಮೀರಿ ನಿಂತವು. ಗುರುವಿನ ಬಯಕೆ ಗಿರಿಯೇರಿ

ಗುರಿದಾಟಿ ನಿಂತಿತು. ಸಂಕಲ್ಪವೃದ್ಧಿಯಾಗಿ ಸಿದ್ಧಿಯಾಗಿ ಗೋಚರಿಸಿತು. ಹುಚ್ಚೇಶನ ಕೃಪೆ ಹುಸಿಯಾದೀತೇ? ಘನಪೀಠದ ಹಿರಿಯ ಮಠಾಧೀಶರೊಬ್ಬರು ಹೀಗೆ ಸಾಮಾಜಿಕವಾಗಿ ಮಾಡಿದ ಕಾರ್ಯ ಇತಿಹಾಸದ ಪುಟಕ್ಕೊಂದು ಹೊಸ ಅಧ್ಯಾಯ.

ಹುಬ್ಬಳ್ಳಿಯಲ್ಲಿ ಪಾದಯಾತ್ರೆಗೆ ಹೊರಟಾಗ ನಡೆದ ಒಂದು ಅಚ್ಚರಿಯ ಸಂಗತಿ ಎಂದರೆ ಪೇಟೆಯಲ್ಲಿ ಒಬ್ಬ ಮಹಮ್ಮದೀಯನ ಅಂಗಡಿಯ ಮುಂದೆ ಶ್ರೀಗಳವರು ದಯಮಾಡಿಸುತ್ತಿರುವಾಗ ಆ ಅಂಗಡಿಯ ಮಾಲಕನು ಓಡಿಬಂದವನೇ ಗುರುವಿನ ಪಾದಕ್ಕೆರಗಿ, "ನಮ್ಮ ಅಂಗಡಿಯಲ್ಲಿರುವ ಎಲ್ಲ ಸೀರಿ, ಖಣ, ಬಟ್ಟೆಗಳನ್ನು ತಮ್ಮ ಪಾದಕ್ಕೆ ಅರ್ಪಿಸುತ್ತೇನೆ, ದಯಮಾಡಿ ಸ್ವೀಕರಿಸಿ" ಎಂದು ಕೈಮುಗಿದು ಪ್ರಾರ್ಥಿಸಿ ಒಳಗೆ ಕರೆದು ಕೊಂಡು ಹೋಗಿ ಅಂಗಡಿಯಲ್ಲಿಯ ಒಂದು ತುಂಡು ಬಟ್ಟೆಯನ್ನು ಬಿಡದೆ ಎಲ್ಲವನ್ನೂ ತೆಗೆದುಕೊಟ್ಟುಬಿಟ್ಟನು. ಇನ್ನುಳಿದ ವರ್ತಕರು ತಮ್ಮ ಶಕ್ತ್ಯಾನುಸಾರ ಬೆಲ್ಲದ ಪೆಂಟಿ ಎಣ್ಣೆ ಡಬ್ಬಿ, ಜೋಳ, ಗೋಧಿ ಚೀಲ, ಅಕ್ಕಡಿಕಾಳು ಹೀಗೆ ತಮ್ಮಲ್ಲಿರುವ ವಸ್ತುಗಳನ್ನು ಭಕ್ತಿಯಿಂದ ಬಾಗಿ ಶ್ರೀಗಳ ಪಾದಕ್ಕೆ ಅರ್ಪಿಸಿದರು.

ಹುಬ್ಬಳ್ಳಿಯಲ್ಲಿಯ ಪಾದಯಾತ್ರೆಯು ವಿಸ್ತಾರಗೊಂಡು ರಾಮದುರ್ಗ, ಗುಳೇದಗುಡ್ಡದವರೆಗೆ ನಡೆಯಿತು. ಚಿಕ್ಕ ಊರಾದ ಗುಳೇದಗುಡ್ಡದಲ್ಲಿ ನಲವತ್ತು ಸಾವಿರಕ್ಕೂ ಮಿಕ್ಕಿ ನಿಧಿ ಸಂಗ್ರಹವಾಯಿತು.

ಅಲ್ಲಿ ನಡೆದ ಒಂದು ವಿಶೇಷ ಘಟನೆಯೆಂದರೆ ಅಲ್ಲಿಯ ವರ್ತಕರೊಬ್ಬರು ಪಾದಯಾತ್ರೆಯಲ್ಲಿ ಗುರುವಿನ ಪಾದ ನೆಲಕ್ಕೆ ಮುಟ್ಟಬಾರದೆಂದು ಶ್ರೀಗಳ ಪಾದಗಳಿಗೆ ಪಾದಯಾತ್ರೆಯ ಉದ್ದಕ್ಕೂ ಹೊಸ ಧೋತರ ಜೋಡಿಗಳ ಹಾಸುತ್ತ ನಡೆದರು. ಕೊನೆಗೆ ಆ ಎಲ್ಲ ಧೋತರಗಳನ್ನು ಗುರುವಿನ ಪಾದಕ್ಕರ್ಪಿಸಿ ಕೃತಾರ್ಥರಾದರು. ಬೆಂಗಳೂರಿನ ಬಜಾಜ ಕಂಪನಿಯವರ ಏಳು ಬೇಲ್ ಬಟ್ಟೆಗಳನ್ನು ಕಳುಹಿಸಿ ಗುರುವಿನ ಪುಣ್ಯಕಾರ್ಯದಲ್ಲಿ ತಾವೂ ಭಾಗಿಗಳಾಗುವ ಭಾಗ್ಯ ಪಡೆದುಕೊಂಡರು. ಹಣ ಇಡಲು ಬ್ಯಾಂಕಿಗೆ ಹೋಗುತ್ತಿರುವ ಶ್ರೀಮಂತರೊಬ್ಬರು ಪಾದಯಾತ್ರೆಯಲ್ಲಿಯ ಗುರುಗಳನ್ನು ಕಂಡು ಅವರ ಜೋಳಿಗೆಗೆ ಆ ಎಲ್ಲ ಹಣ ನೀಡಿ ಧನ್ಯನಾದೆ ಎಂದರು. ನಾಸ್ತಿಕರು ಹೃದಯವು ಕರಗಿ–ಕಂಪಿಸಿ ಧನ ಧಾನ್ಯ ಎರೆದು ಪುನೀತರಾದೆವೆಂದರು.

ಹೀಗೆ ಹೊಳೆಯಾಗಿ ಹರಿದು ಬಂದು ಸಂಗ್ರಹವಾದಂತಹ ವಸ್ತುಗಳನ್ನು ಬರ ಪೀಡಿತ ಪ್ರದೇಶಕ್ಕೆ ಕಳುಹಿಸುವ ಕಾರ್ಯ ಭರದಿಂದ ಕೈಕೊಳ್ಳಲಾಯಿತು. "ಬರಗಾಲಕ್ಕೆ ಬುತ್ತಿ ಕಟ್ಟುವರುಂಟೆ" ಎಂಬ ನುಡಿಗೆ ಸವಾಲಾಗಿ ನಿಂತಿತು ಗುರುಕೃಪೆ.

ಕರ್ನಾಟಕ ಮಹಾರಾಷ್ಟ್ರದ ಆರು ಜಿಲ್ಲೆಗಳಲ್ಲಿ ಹುಬ್ಬಳ್ಳಿಯ ಮೂರುಸಾವಿರ ಮಠದ ಪಾದಯಾತ್ರಾ ವತಿಯಿಂದ ಗುಲಬರ್ಗಾ, ಬೀದರ, ಬೆಳಗಾಂವ, ವಿಜಾಪೂರ, ಧಾರವಾಡ, ಸೊಲ್ಲಾಪೂರಗಳಲ್ಲಿ ನೂರು ಅನ್ನದಾನ ಕೇಂದ್ರಗಳು [ಗುಂಜೀಕೇಂದ್ರ] ತಲೆ ಎತ್ತಿ ನಿಂತವು. ಅಲ್ಲದೆ ಪೂಜ್ಯ ಜಗದ್ಗುರುಗಳವರು ತಮ್ಮ ಮೂರುಸಾವಿರಮಠ

ದಿಂದ ನಲವತ್ತೈದು ಸಾವಿರ [೪೫,೦೦೦] ರೂಪಾಯಿ ವೆಚ್ಚ ಮಾಡಿ, ಶಿವಯೋಗ ಮಂದಿರ ದಲ್ಲಿ "ಧ್ಯಾನಧಾಮ" ಎಂಬ ಮಂದಿರವನ್ನು ಕಟ್ಟಲು ಪ್ರಾರಂಭಿಸಿದರು. ಇದರಿಂದ ನಿತ್ಯ ಐವತ್ತು ಜನರ ಮೂರುತಿಂಗಳ ಉಪಜೀವನ ನಡೆಯುವಂತಾಯಿತು. ಮೂರುಸಾವಿರ ಮಠದ ಪಾದಯಾತ್ರಾ ಸಮಿತಿಯಿಂದ ಪ್ರಾರಂಭವಾದ "ಗಂಜೀಕೇಂದ್ರದ ಮೇಲ್ವಿಚಾರಣೆ ಯನ್ನು ಆ ಊರಲ್ಲಿಯ ಮಠಾಧೀಶರು, ರಾಷ್ಟ್ರೀಯ ಸ್ವಯಂ ಸೇವಾ ಸಂಘದವರು, ವಿಶ್ವಹಿಂದೂ ಪರಿಷತ್ತಿನವರು, ತಾಲೂಕಾ ಪ್ರೆಸಿಡೆಂಟರು, ಬಸವ ಸಮಿತಿಯ, ಬರಗಾಲ ಸಮಿತಿ ಯುವಕ ಸಂಘ, ಮಹಿಳಾ ಸಂಘ, ಹೀಗೆ ಹತ್ತು ಹಲವು ಸಂಘ ಸಂಸ್ಥೆಯವರು ಸ್ವಯಂ ಸ್ಫೂರ್ತಿಯಿಂದ ಸೇವೆ ಸಲ್ಲಿಸಲು ಮುಂದಾದರು. ನಿಯಮಿತವಾಗಿ ಹುಬ್ಬಳ್ಳಿಯ ಮೂರುಸಾವಿರಮಠದಿಂದ ಕೇಂದ್ರಗಳಿಗೆ ಕಳುಹಿಸುತ್ತಿರುವ ಹಣ, ಕಾಳು ಕಡಿ, ಬಟ್ಟೆಬರೆ ಗಳನ್ನು ಈ ಸ್ಥಳಿಕ ಸಂಸ್ಥೆಯವರು ಯೋಗ್ಯರಿಗೆ ಯೋಗ್ಯವಾಗಿ ಹಂಚುತ್ತಿದ್ದರು. ಇವ ರಿಂದ ಸಂಗ್ರಹಿಸಿದ ಕಾಣಿಕೆಗಳೆಲ್ಲ ಸದುಪಯೋಗ ಸದ್ವಿನಿಯೋಗವಾದವೆಂದು ಸಂತಸ ದಿಂದ ಹೇಳಬಹುದು ಇದನ್ನು ಕಂಡು ಸರಕಾರವು ತನ್ನ ಸೇವೆಯನ್ನು ನೀಡಿತು. ಗಂಜೀಕೇಂದ್ರಗಳ ಜೊತೆಗೆ ದನಕರುಗಳಿಗಾಗಿ ಎಂಟ್ಹತ್ತು ಗೋಶಾಲೆಗಳು ಮೇವಿನ ಕೇಂದ್ರ ಗಳು ಪ್ರಾರಂಭಗೊಂಡವು.

ಬಸವ ಕಲ್ಯಾಣದ ಹಳ್ಳಿಯಲ್ಲಿ ಒಂದು ಹೃದಯದ್ರಾವಕ ದೃಶ್ಯ ಕಂಡಿತು. ನಾಲ್ಕಾರು ದಿನಗಳಿಂದ ಅಲ್ಲಿಯ ಜನರು ಎಷ್ಟೋ ಅನ್ನ ಕಾಣದೆ ಕಂಗಾಲಾಗಿ ಹಸಿವೆ ತಾಳ ಲಾರದೇ ಹುಣಸೀ ಎಲೆ, ಮಾವಿನ ಎಲೆ ಹರಿದು ಅರೆದು ತಿಂದು ಜೀವ ಹಿಡಿವ ಸಮಯದಲ್ಲಿ ಗಂಜೀ ಕೇಂದ್ರದವರು ಟ್ರಕ್ಕಿನಿಂದ ಅನ್ನವನ್ನು ತೆಗೆದುಕೊಂಡು ಹೋದಾಗ ಧಾವಿಸಿ ಬಂದು ಅಬ್ಬರಿಸಿ ಅನ್ನ ಉಣ್ಣುವ ದೃಶ್ಯ ನಿಜಕ್ಕೂ ಕರುಳು ಕಿತ್ತು ಬರುವಂತಿತ್ತು. "ಅನ್ನದೇವರ ಮುಂದೆ ಇನ್ನು ದೇವರುಂಟೆ" ಎಷ್ಟೋ ಕೇಂದ್ರಗಳಿಗೆ ಹುಬ್ಬಳ್ಳಿ ಮೂರುಸಾವಿರಮಠದಲ್ಲಿಯೇ ಅಡಿಗೆ ಮಾಡಿಸಿ ನಸುಕಿನಲ್ಲಿಯೇ ಟ್ರಕ್ಕಿನಲ್ಲಿ ತುಂಬಿಕೊಂಡು ಹೋಗಿ ಗಂಜೀಕೇಂದ್ರಕ್ಕೆ ಪೂರೈಸುತ್ತಿದ್ದರು.

ಹೀಗೆ ಸಂಗ್ರಹಿಸಿದ ಸಾಮಗ್ರಿಗಳನ್ನು ಮುಟ್ಟಿಸುವ ಹೊಣೆ ಇನ್ನೂ ಹಿರಿದಾದ್ದು. ಸರಿಯಾದ ವೇಳೆಗೆ ಯೋಗ್ಯವಾದ ಸ್ಥಳಕ್ಕೆ ಸಾಮಗ್ರಿಗಳನ್ನು ರವಾನಿಸುವದು ಸಣ್ಣ ಕೆಲಸವೆನಿಸದು. ಹೊಣೆ ಹೊತ್ತವರಿಗೆ ಗೊತ್ತು ಅದರ ಹೊಣೆ ಹಿಡಿದ ಕಾರ್ಯ ದಂಡೆಗೆ ಹಚ್ಚಿ ಮುಗಿಸುವವರೆಗೆ, ಪೂಜ್ಯ ಗುರುವಿನ ಮನಕೆ ನೆಮ್ಮದಿ ಎಂತು ಸಿಕ್ಕೀತು! ಹೀಗಾಗಿ ಅವಿಶ್ರಾಂತ ದುಡಿಮೆಯಿಂದ ದೈಹಿಕ ಶಾರೀರ ಸೊರಗಿ ಕಂದಿತು, ಕಾಲು ಸೋತವು, ದೇಹ ಇಳಿಗೊಂಡಿತು. ಆದರೆ ಒಳಗಿನ ತೇಜೋಪುಂಜವಾದ ಅಂತರಾತ್ಮ ಚೈತನ್ಯ ಶೀಲವಾಗಿ ಉತ್ಸಾಹದಿಂದ ತುಂಬಿ ತುಳುಕುತ್ತ ಮುನ್ನಡೆಯಿತು.

ಹುಬ್ಬಳ್ಳಿಯ ಮೂರುಸಾವಿರಮಠದಿಂದ ನಡೆಯುವ ಗಂಜೀಕೇಂದ್ರಕ್ಕೆ ಕರ್ನಾಟಕ ಮತ್ತು ಮಹಾರಾಷ್ಟ್ರದ ಆರು ಜಿಲ್ಲೆಗಳ ನೂರು ಕೇಂದ್ರಗಳಲ್ಲಿ ಪ್ರತಿದಿನ ಐವತ್ತು ಸಾವಿರ

ಜನರು ಪ್ರಸಾದ ಸೇವಿಸುತ್ತಿದ್ದರು. ಅದರಲ್ಲಿ ಏಳೆಂಟು ಸಾವಿರ ಜನ ಸ್ತ್ರೀಯರು ಮೂರು-ನಾಲ್ಕು ಸಾವಿರ ಜನ ಅಂಗವಿಕಲರು ಇದ್ದರು. ಈ ಕಾರ್ಯವನ್ನು ಬರಗಾಲ ಮುಗಿಯುವ ವರೆಗೆ ಪೂರೈಸಲಾಯಿತು. ಇದೇ ರೀತಿ ಮೂರುಸಾವಿರಮಠದ ಪಾದಯಾತ್ರಾ ಸಮಿತಿಯವರಿಂದ ನಡೆಯುವ ಗೋರಕ್ಷಣಾ ಕೇಂದ್ರಗಳಲ್ಲದೇ ಉಳಿದ ಗೋರಕ್ಷಣಾ ಕೇಂದ್ರಗಳಾದ ಬಿಜಾಪೂರ ಜಿಲ್ಲೆಯ 'ಬಸಪಟ್ಟ ಅನ್ನಕೇಂದ್ರ' 'ಅಂಜುಮಾನ' ಸಂಸ್ಥೆ, ಗುಲಬರ್ಗಾ ಜಿಲ್ಲೆಯ ಶ್ರೀನಿವಾಸ ಸಾರಡಗಿಯ ಸರ್ವೋದಯ ಸಂಸ್ಥೆಗಳಿಗೆ ಸೈಜ ಪರಿಹಾರ ಸಮಿತಿಗೆ ಹೀಗೆ ಇನ್ನೂ ಅನೇಕ ಸಂಘ ಸಂಸ್ಥೆಗಳಿಗೆ ಸಮಿತಿಯ ವತಿಯಿಂದ ಧನ ಹಾಗೂ ದವಸಗಳನ್ನು ಸಹಾಯ ಮಾಡಲಾಯಿತು.

ಬಿಜಾಪೂರ ಜಿಲ್ಲೆಯಲ್ಲಿ ಸಿಂದಗಿ ತಾಲೂಕ 'ಬಸವ ಸಮಿತಿಯವರು' ಸಿಂದಗಿ ತಾಲೂಕ ದೇವರಹಿಪ್ಪರಗಿಯ 'ವಿರಕ್ತಮಠದವರು' ಸಿಂದಗಿ ತಾಲೂಕಿನ ಆಲಮೇಲದಲ್ಲಿಯ 'ನಾಗರಿಕ ಸಮಿತಿ'ಯ ಬಿಜಾಪೂರ ತಾಲೂಕಿನ ನಿಡೋಣಿಯಲ್ಲಿ ವಿರಕ್ತಮಠದವರು ಬಿಜಾಪೂರ ತಾಲೂಕಿನ ಇಲಕಲ್‌ದ ಆರ್.ಎಸ್.ಎಸ್.ದವರು, ಇಂಡಿ ತಾಲೂಕಿನ ಅಗರಖೇಡದ ಆರ್. ಎಸ್. ಎಸ್. ದವರು ಬಿಜಾಪೂರ ತಾಲೂಕಿನ ಜಿಮ್ಮನಹಳ್ಳಿ 'ಕ್ಷಾಮ ಪರಿಹಾರ ಸಮಿತಿ' ಬದಾಮಿ ತಾಲೂಕಿನ ಗುಳೇದಗುಡ್ಡದ ಆರ್.ಎಸ್.ಎಸ್. ದವರು ಬದಾಮಿಯ ಟಿ. ಡಿ. ಬಿ. ಪ್ರೆಸಿಡೆಂಟರು, ಹುನಗುಂದ ತಾಲೂಕಿನ ಗೂಡೂರು ಆರ್.ಎಸ್.ಎಸ್.ದವರು, ಬಿಜಾಪೂರ ಜಿಲ್ಲೆಯ ಕ್ವಾಟ್ಯಾಳ ತೆಲಸಂಗ ಶ್ರೀಗಳು. ಹೀಗೆ ಈ ಜಿಲ್ಲೆಯಲ್ಲಿ ಇನ್ನೂ ಅನೇಕ ಊರುಗಳಲ್ಲಿ ಗಂಜೀಕೇಂದ್ರಗಳು ನಡೆಯಲ್ಪಟ್ಟವು.

ಗುಲಬರ್ಗಾ ಜಿಲ್ಲೆಯಲ್ಲಿ ಅನ್ನದಾಸ ಕೇಂದ್ರಗಳು ಈ ರೀತಿ ನಡೆದವು. ಅಫಜಲಪೂರ ತಾಲೂಕ ಅಫಜಲಪೂರದಲ್ಲಿ ಹಿರೇಮಠರು, ಅತನೂರದ ಕ್ಷಾಮ ಪರಿಹಾರ ಸಮಿತಿ, ಬೀಳೂರಿನ ಕ್ಷಾಮಪರಿಹಾರ ಸಮಿತಿ, ಗಬ್ಬೂರಿನ ಆರ್.ಎಸ್.ಎಸ್. ದವರು, ಆಳಂದ ತಾಲೂಕಿನ ಆಳಂದದ ಹಿರೇಮಠರು, ಗುಲಬರ್ಗಾ ತಾಲೂಕಿನ ಕುರಿಕೋಟಾದ ವಿರಕ್ತಮಠರು.ಆಳಂದ ತಾಲೂಕಿನ ಮಾದ್ಯಾಳದ ವಿರಕ್ತಮಠರು,ಚಿತಾಪೂರ ತಾಲೂಕಿನ ಚಿತಾಪೂರದ ಕ್ಷಾಮ ಪರಿಹಾರ ಸಮಿತಿ, ಆಳಂದ ತಾಲೂಕಿನ ಸಾವಳೇಶ್ವರ ಹಿರೇಮಠದವರು, ಆಳಂದ ತಾಲೂಕಿನ ರಾಮತೀರ್ಥದ ಮಲ್ಲಯ್ಯಸ್ವಾಮಿಗಳು, ಜೇವರಗಿ ತಾಲೂಕಿನ ಸೊನ್ನದ ವಿರಕ್ತಮಠದವರು, ಗುಲಬರ್ಗಾ ತಾಲೂಕಿನ ಮಹಾಗಾಂವದ ಪರಿಹಾರ ಸಮಿತಿಯವರು, ಚಿತಾಪೂರ ತಾಲೂಕಿನ ಸುಲಹಳ್ಳಿ ಯುವಕ ಸಂಘ, ಚಿತಾಪೂರ ತಾಲೂಕಿನ ಕಮ್ಮರವಾಡದಲ್ಲಿ ಯುವಕ ಸಂಘದವರಿಂದ ಗಂಜೀಕೇಂದ್ರಗಳು ನಡೆದವು. ಹೀಗೆ ಈ ಜಿಲ್ಲೆಯಲ್ಲಿ ಇನ್ನೂ ಅನೇಕ ಕಡೆ ಗಂಜೀಕೇಂದ್ರಗಳು ನಡೆದವು.

ಬೀದರ ಜಿಲ್ಲೆಯಲ್ಲಿ ಶ್ರೀ ಮೂರುಸಾವಿರಮಠದ ಜಗದ್ಗುರುಗಳಿಂದ ನಡೆಯುವ ಗಂಜೀಕೇಂದ್ರಗಳು ಅನೇಕ. ಅವುಗಳಲ್ಲಿ ಈ ಕೆಳಗಿನ ಕೇಂದ್ರಗಳು ಮುಖ್ಯವಾದವುಗಳು.

ಹುಮನಾಬಾದ ತಾಲೂಕಿನ 'ಮಂಗಲಗಿ'ಯಲ್ಲಿ ಆರ್. ಎಸ್. ಎಸ್. ದವರು,

ಬಸವಕಲ್ಯಾಣ ತಾಲೂಕಿನ ಬಸವಕಲ್ಯಾಣದಲ್ಲಿ ಭಾಲ್ಕಿ ಶ್ರೀಗಳು. ಬಸವಕಲ್ಯಾಣ ತಾಲೂಕಿನ 'ಬೇಳಗಿ'ಯಲ್ಲಿ ವಿರಕ್ತಮಠದವರು. ಭಾಲ್ಕೀ ತಾಲೂಕಿನಲ್ಲಿ ಹೆದಗಾಪೂರದ ಹಿರೇಮಠ, ಭಾಲ್ಕೀಯ ಹಿರೇಮಠರು, ಕಮಾಲನಗರದ ಹಿರೇಮಠರು, ಇಂಚೂರದ ಆರ್.ಎಸ್.ಎಸ್.ದವರು ನಡೆಸಿದರು. ಹುಮನಾಬಾದ ತಾಲೂಕಿನ ಚಿನಕೇರಾದ ಆರ್.ಎಸ್.ಎಸ್.ದವರು ಹುಮನಾಬಾದ ತಾಲೂಕಿನಲ್ಲಿ ಇನ್ನೊಂದು ಮಾದಗಾಂವ್‌ದಲ್ಲಿ ಆರ್.ಎಸ್.ಎಸ್.ದವರು ನಡೆಸಿದರು. ಬಸವಕಲ್ಯಾಣ ತಾಲೂಕಿನ ಬನಾಪೂರದ ಆರ್.ಎಸ್.ಎಸ್.ದವರು ನಡೆಸಿದರು. ಹೀಗೆ ಈ ಜಿಲ್ಲೆಯಲ್ಲಿ ಜಗದ್ಗುರುಗಳಿಂದ ಇನ್ನೂ ಅನೇಕ ಕೇಂದ್ರಗಳು ನಡೆದವು.

ಬೆಳಗಾಂವ ಜಿಲ್ಲೆಯಲ್ಲಿ ಅನ್ನದಾನ ಕೇಂದ್ರಗಳು ಜಗದ್ಗುರುಗಳಿಂದ ನಡೆಯಲ್ಪಟ್ಟವು. ಚಿಕ್ಕೋಡಿ ತಾಲೂಕಿನ ಚಿಂಚಣಿಯಲ್ಲಿ "ಸಿದ್ಧಸಂಸ್ಥಾನಮಠ"ದವರು ಬೆಂಡವಾಡದ ರೇವಣಸಿದ್ಧೇಶ್ವರ ಮಠದಲ್ಲಿ, ಚಿಕ್ಕೋಡಿಯಲ್ಲಿ ಚರಮೂರ್ತಿಮಠ, ಕೆರೂರಿನಲ್ಲಿ ಬಸವ ಸಮಿತಿ, ಹುಕ್ಕೇರಿ ತಾಲೂಕಿನ ಘಟಪ್ರಭಾದಲ್ಲಿ ಜೇ. ಜಿ. ಹಾಸ್ಪಿಟಲ್‌ದಲ್ಲಿಯೂ, ಅಥಣಿ ತಾಲೂಕಿನ ತೆಲಸಂಗದಲ್ಲಿ ಹಿರೇಮಠ, ಹಾಲಳ್ಳಿಯ ಹಿರೇಮಠ, ಕನ್ನಾಳದ ಹಿರೇಮಠ, ಅಥಣಿಯ ಶೆಟ್ಟರಮಠದಲ್ಲಿ ನಡೆದವು. ರಾಯಬಾಗ ತಾಲೂಕಿನ ಸೌಸುದ್ದಿಯ ಕ್ಷಾಮ ಪರಿಹಾರ ಸಮಿತಿ, ಮುಟೂರ ಕ್ಷಾಮ ಪರಿಹಾರ ಸಮಿತಿ, ಜೋಡಟ್ಟಿಯ ಚಿಂಚಣಿ ಸಂಸ್ಥಾನಮಠ ಹೀಗೆ ಈ ಜಿಲ್ಲೆಯಲ್ಲಿ ಅನೇಕ ಕೇಂದ್ರಗಳು ಜಗದ್ಗುರುಗಳಿಂದ ನಡೆದವು.

ಮಹಾರಾಷ್ಟ್ರದಲ್ಲಿ ನಡೆದ ಮುಖ್ಯವಾದ ಗಂಜೀಕೇಂದ್ರಗಳು. ಅಕ್ಕಲಕೋಟ ತಾಲೂಕಿನ ಧುಧಗಿ ಎಂಬ ಊರಿನಲ್ಲಿ ವಿರಕ್ತಮಠದಲ್ಲಿ ಅನ್ನದಾನ ಕೇಂದ್ರವು ನಡೆಯಿತು. ಈ ಜಿಲ್ಲೆಯಲ್ಲಿ ಇನ್ನೂ ಅನೇಕ ಕಡೆ ನಡೆದವು.

ಧಾರವಾಡ ಜಿಲ್ಲೆಯಲ್ಲಿ ಅದು ರೋಣ ತಾಲೂಕಿನಲ್ಲಿ "ಮುನಸಿಗೇರಿ" ವಿಶ್ವಹಿಂದೂ ಪರಿಷತ್‌ದವರು ನಡೆಸಿದರು.

೧೯೭೨ರಲ್ಲಿ ಬಂದ ಈ ಬರಗಾಲಕ್ಕೆ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಅನ್ನಪೂರ್ಣೆಯ ಅವತಾರ ತಾಳಿ ಅನ್ನ ಒದಗಿಸಿದ್ದು ಒಂದು ದೊಡ್ಡ ಪವಾಡವಾಗಿ ಮೆರೆದಿದೆ.

□ □

ಪೂಜ್ಯ ಜಗದ್ಗುರುಗಳು ಏರ್ಪಡಿಸಿದ ಮಂಟಪ ಪೂಜೆಗಳು: ವೈಭವ, ಉತ್ಸಾಹ, ಪರಿಣಾಮ

—ಶ್ರೀ ಚನ್ನವೀರ ಶಿವಾಚಾರ್ಯರು

ವೈಜ್ಞಾನಿಕವಾಗಿ ಮುಂದುವರಿದ ಇಂದಿನ ಸಮಾಜದಲ್ಲಿ ಧರ್ಮದ ಶಕ್ತಿ ಕಡಿಮೆಯಾಗುತ್ತಿರುವ ಪರಿಸ್ಥಿತಿಯಲ್ಲಿ, ಧರ್ಮದ ಧ್ವಜವ ಎತ್ತಿ-ಹಿಡಿಯಲು ಮಠಮಂದಿರಗಳ, ಸ್ವಾಮಿಗಳ, ಕರ್ತವ್ಯನಿಷ್ಠೆ ಅವಶ್ಯಕವಾಗಿದೆ. ಪ್ರಾಚೀನ ಕಾಲದಿಂದಲೂ ನಮ್ಮ ಸಂಸ್ಕೃತಿಯ ಕೇಂದ್ರ ಬಿಂದುಗಳಾದ ಮಠಗಳು, ಶರಣ ಸಂಸ್ಕೃತಿಯನ್ನು ನಾಡಿನ ತುಂಬೆಲ್ಲ ಪಸರಿಸುತ್ತಲೇ ಬಂದಿವೆ. ಕರ್ನಾಟಕದ ಕೆಲವೇ ಪ್ರಮುಖ ಮಠಗಳಲ್ಲಿ ಒಂದಾದ ಹುಬ್ಬಳ್ಳಿಯ ಜಗದ್ಗುರು ಮೂರುಸಾವಿರಮಠವು ಒಂದು. ಅರಮನೆಯಂತೆ ಕಂಗೊಳಿಸುತ್ತಿರುವ ಮೂರುಸಾವಿರಮಠ, ಕುಮಾರ ಸಮಯದ ಮೂಲಪೀಠ. ಭಾರತೀಯ ಭವ್ಯ ಸಂಸ್ಕೃತಿಯನ್ನೊಳಗೊಂಡ ಈ ಪೀಠವು ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ರಂಗಗಳಲ್ಲಿ ಮೊದಲಿನಿಂದಲೂ ಕಾರ್ಯ ಮಾಡುತ್ತ ಬಂದಿದೆ.

ಈಗಿನ ಮೂರುಸಾವಿರಮಠದ ಶ್ರೀ ಮನ್ಮಹಾರಾಜನಿರಂಜನ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಕನ್ನಡ ನಾಡಿನ ಕಣ್ಮಣಿಯಾಗಿದ್ದಾರೆ. ಲಿಂ. ಹಾನಗಲ್ಲ ಕುಮಾರ ಶಿವಯೋಗಿಗಳ ಸಂಪೂರ್ಣ ಕೃಪಾಕಟಾಕ್ಷೆಯನ್ನು ಪಡೆದ ಜಗದ್ಗುರುಗಳು, ಯಾವ ಕಾರ್ಯವನ್ನೇ ಆರಂಭಿಸಲಿ ಅದರಲ್ಲಿ ಯಶಸ್ಸನ್ನು ಪಡೆಯುವ ಶಕ್ತಿ ಪಡೆದಿದ್ದಾರೆ. ಅಲ್ಲದೆ ಸರಳ ಹೃದಯ, ದೀನದಲಿತರ ಬಗ್ಗೆ ಅನುಕಂಪ, ಶ್ರೇಷ್ಠ ವಿದ್ವತ್ತು ಮತ್ತು ದಿವ್ಯಾನುಭವವನ್ನು ಪಡೆದ ಜಗದ್ಗುರುಗಳು ಸರ್ವ ಭಕ್ತರನ್ನು ತಮ್ಮ ಕಡೆಗೆ ಆಕರ್ಷಿಸಿ ಉದ್ಧಾರಮಾಡುವ ಶಕ್ತಿ ಪಡೆದಿದ್ದಾರೆ. ಭಕ್ತರ ಶ್ರದ್ಧೆ ಭಕ್ತಿ, ಎಷ್ಟಿದೆ ಎನ್ನುವದಕ್ಕೆ ಏಪ್ರಿಲ್ ೧೯೮೭ ರಲ್ಲಿ ಜರುಗಿದ, ಜಗದ್ಗುರು ಮಹಾಸನ್ನಿಧಿಯವರ ಪೀಠಾರೋಹಣ ರಜತ ಮಹೋತ್ಸವದ ಕಾರ್ಯಕ್ರಮವೇ ಸಾಕ್ಷಿ.

'ನ ಭೂತೋ ನ ಭವಿಷ್ಯತಿ' ಎನ್ನುವಂತೆ, ರಜತ ಮಹೋತ್ಸವದ ಕಾರ್ಯಕ್ರಮ ಅತಿ ವಿಜೃಂಭಣೆಯಿಂದ ಕೂಡಿತ್ತು. ಆಧ್ಯಾತ್ಮಿಕ ಕೇಂದ್ರದಂತಿರುವ ಮೂರುಸಾವಿರಮಠದಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಾದ, ಕವಿಗೋಷ್ಠಿ, ಮಹಿಳಾ ಸಮ್ಮೇಳನ, ಜಾನಪದ ಗೋಷ್ಠಿ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಎದ್ದುಕಾಣುವ ಕಾರ್ಯಕ್ರಮವೆಂದರೆ, ಒಂದು ನೂರಾ ಒಂದು ಗುರು-ವಿರಕ್ತರ ಮಂಟಪ ಪೂಜೆಗಳು. ಮೂರುಸಾವಿರಮಠದ ಭವ್ಯ ಪ್ರಾಂಗಣದಲ್ಲಿ ಸುಂದರವಾದ

ಮಂಟಪಗಳನ್ನು ರಚಿಸಲಾಗಿತ್ತು. ಪ್ರತಿಯೊಬ್ಬ ಪೂಜ್ಯರಿಗಾಗಿ ಒಂದೊಂದು ಮಂಟಪ ರಚಿಸಲಾಗಿತ್ತು. ಮಂಟಪಗಳನ್ನು ಹೂವಿನಿಂದ ಅಲಂಕಾರಗೊಳಿಸಿ, ತಳಿರು ತೋರಣ ಗಳನ್ನು ಕಟ್ಟಿದ್ದರು, ಮಂಟಪಗಳನ್ನು ನೋಡಿದರೆ, ಶಿವನ ಒಡ್ಡೋಲಗವೇ ಇದಾಗಿರ ಬಹುದೇ ಎನಿಸುವಂತಿತ್ತು ಒಂದು ನೂರಾ ಒಂದು ಮಂಟಪಗಳಲ್ಲಿ, ಆಂಧ್ರ, ಕರ್ನಾಟಕ, ಮಹಾರಾಷ್ಟ್ರಗಳಿಂದ ಒಂದು ನೂರಾ ಒಂದು, ಆಚಾರನಿಷ್ಠ ಪೂಜ್ಯರನ್ನು ಬರಮಾಡಿಕೊಳ್ಳ ಲಾಗಿತ್ತು. ಈ ಮಂಟಪ ಪೂಜೆಯಲ್ಲಿ ಗುರು-ವಿರಕ್ತರು ಎನ್ನುವ ತರತಮಭಾವವಿಲ್ಲದೆ ಎಲ್ಲರನ್ನು ಆಮಂತ್ರಿಸಲಾಗಿತ್ತು.

ಮಂಟಪದ ಪೂಜೆಯಲ್ಲಿ ಪ್ರತಿಯೊಬ್ಬ ಪೂಜ್ಯರಿಗೆ ಪಾದಪೂಜೆಯನ್ನು ಮಾಡಲು ಭಕ್ತಾದಿಗಳು ದಂಪತಿ ಸಮೇತವಾಗಿ ಶುಭ್ರ ಮನಸ್ಕರಾಗಿ, ಹೊಸ ಬಟ್ಟೆಯನ್ನು ಧರಿಸಿ ಕೊಂಡು ಧಾರ್ಮಿಕ ಮನೋಭಾವನೆಯಿಂದ ಪಾದ ಪೂಜೆಯನ್ನು ಮಾಡಲು ಸಿದ್ಧ ರಾಗಿದ್ದರು.

ಗುರು-ಜಂಗಮರ ಪಾದಪೂಜೆ ಹಿಂದಿನಿಂದಲೂ ನಮ್ಮ ವೀರಶೈವ ಧರ್ಮದಲ್ಲಿ ನಡೆದುಕೊಂಡು ಬಂದಿದೆ. ಅಷ್ಟಾವರ್ಣಗಳಲ್ಲಿ ಗುರು ಪಾದೋದಕವೂ ಒಂದು. ಈ ಕಾರ್ಯಕ್ರಮದಲ್ಲಿ ಒಂದು ನೂರಾ ಒಂದು ಗುರು-ವಿರಕ್ತರ ಪಾದಪೂಜೆಯು ಮಂತ್ರ ಘೋಷಣೆಯೊಂದಿಗೆ ಪ್ರಾರಂಭಿಸಲಾಯಿತು.

ಮಂತ್ರಕ್ಕೆ ತಕ್ಕಂತೆ ಎಲ್ಲ ಸದ್ಭಕ್ತಾದಿಗಳು ಪೂಜೆಯನ್ನು ಮಾಡುತ್ತಿದ್ದರು. ಕೊನೆಗೆ ಗುರು-ಜಂಗಮರ ಪಾದೋದಕವನ್ನು ಮಾಡಿಕೊಂಡು ಭಕ್ತಾದಿಗಳು ಸಂತೋಷದಿಂದ ಪಾದೋದಕ ಸ್ವೀಕರಿಸಿದರು. ಪಾದೋದಕದ ಮಹಿತಿಯನ್ನು ಕುರಿತು ಒಂದೆಡೆ ಹೀಗೆ ಬರುತ್ತದೆ.

'ಪಾಕಾರಂ ಪರಮಂ ಜ್ಞಾನಂ ದೋಕಾರಂ ದೋಷನಾಶನಂ
ದಕಾರಂ ದಹತೇ ಜನ್ಮಂ ಕಕಾರಂ ಕರ್ಮಭೇದನಂ'

ಪಾದೋದಕವು ಪರಮಜ್ಞಾನವನ್ನು ಕೊಡುತ್ತದೆ. ಮಲತ್ರಯವನ್ನು ಕಳೆಯು ತ್ತದೆ. ಭವ ಬಂಧನವನ್ನು ಬಿಡಿಸುತ್ತದೆ. ಕರ್ಮನಿವಾರಣೆ ಮಾಡುತ್ತದೆ. ಪಾದೋದಕ ವನ್ನು ಸರ್ವ ಭಕ್ತಾದಿಗಳು, ಸಂತೋಷದಿಂದ ಸೇವಿಸುತ್ತಿದ್ದರು. ಗುರುಪಾದದ ಮಹತಿ ಯನ್ನು ಕುರಿತು ಮೈಲಾರ ಬಸವಲಿಂಗ ಶರಣರು "ಗುರು ಚರಣದ ಮೇಲೆ ತನುವ ತಂದಿ ಡಲು ಆತನ ಸರ್ವಾಂಗವೆಲ್ಲ ಲಿಂಗಮಯ" ಎಂದಿದ್ದಾರೆ. ವೀರಶೈವ ಧರ್ಮದಲ್ಲಿ ಗುರು ಜಂಗಮರ ದರ್ಶನದಿಂದ ಅಂಗವನ್ನು ಲಿಂಗಮಯವನ್ನಾಗಿ ಮಾಡಿಕೊಳ್ಳಲು ಬರುವದೆಂಬು ದನ್ನು ಇಲ್ಲಿ ತಿಳಿಸಿದ್ದಾರೆ. ಆಗಮಿಸಿದ ಪೂಜ್ಯರಿಗೆ ಈ ಸಂದರ್ಭದಲ್ಲಿ ಒಂದೊಂದು ಬೆಳ್ಳಿಯ ಗ್ಲಾಸ್ ಹಾಗೂ ಪೂಜಾಸಾಮಗ್ರಿ ಮತ್ತು ಹೊಸದಾದ ರೇಶ್ಮೆಯ ಮಡಿಯನ್ನು ಮೂರುಸಾವಿರಮಠದ ವತಿಯಿಂದ ಜಗದ್ಗುರುಗಳು ಆಶೀರ್ವದಿಸಿದರು. ಒಂದೊಂದ್ಸು

ಮಂಟಪಕ್ಕೆ ಒಬ್ಬೊಬ್ಬ ಪ್ರಮುಖ ಶರಣರ ಹೆಸರನ್ನು ಇಟ್ಟಿದ್ದರು.

ಈ ಕಾರ್ಯಕ್ರಮದಲ್ಲಿ ಯಾವ ಜಾತಿಮತಗಳ ಭೇದವಿಲ್ಲದೆ ಸರ್ವ ಮತೀಯರೂ ಭಾಗವಹಿಸಿದ್ದರು. ವೀರಶೈವರಷ್ಟೇ ಅಲ್ಲದೆ, ಕ್ಷತ್ರಿಯರು, ಜೈನರು, ಭಾಗವಹಿಸಿ, ಶ್ರದ್ಧೆ ಭಕ್ತಿಯನ್ನು ತೋರ್ಪಡಿಸಿದ್ದು ನೋಡಿದರೆ, ಮೂರುಸಾವಿರಮಠದಲ್ಲಿ ಮತ ಭೇದದ ಕಲ್ಪನೆಯೆ ಸ್ವಲ್ಪಮಟ್ಟಿಗೂ ಇಲ್ಲ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಲಿಂಗ ಭೇದವಿಲ್ಲದೆ ಸ್ತ್ರೀ-ಪುರುಷರು ಸೇರಿದಂತೆ ಸುಮಾರು ಐವತ್ತು ಸಾವಿರಕ್ಕೂ ಮೇಲ್ಪಟ್ಟು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಮಹಿಳೆಯರು, ಮಕ್ಕಳು, ವೃದ್ಧರು, ಅನುಭವಿಗಳು, ಅಲ್ಲಿಗೆ ದರ್ಶನಕ್ಕೆ ಬರುತ್ತಿರುವದನ್ನು ನೋಡಿದಾಗ ಎಂಥ ನಾಸ್ತಿಕನೂ ಕೂಡಾ ಆಸ್ತಿಕನಾಗಬೇಕೆಂಬ ಭಾವ ಬರುವಂತಿತ್ತು.

ದರ್ಶನಕ್ಕೆ ಬರುವ ಭಕ್ತಾದಿಗಳು ಸಾಲುಸಾಲಾಗಿ ಶಿಸ್ತಿನ ಸೈನಿಕರಂತೆ ಗದ್ದಲು ಮಾಡದೆ, ಬಿಸಿಲುಗಾಳಿಯನ್ನು ಮರೆತು ಎಲ್ಲ ಪೂಜ್ಯರ ಆಶೀರ್ವಾದವನ್ನು ಪಡೆದು ತೆರಳುತ್ತಿದ್ದರು. ಬಂದ ಭಕ್ತಾದಿಗಳು ದರ್ಶನ ಪಡೆದು ಪ್ರಸಾದ ಸ್ವೀಕರಿಸಿ, ಜಗದ್ಗುರು ಮಹಾಸನ್ನಿಧಿಯವರ ಜಯಘೋಷಮಾಡಿ ಸಂಭ್ರಮದಿಂದ ಹಾಡಿ ಹರಸುತ್ತಿದ್ದರು.

ಈ ಕಾರ್ಯಕ್ರಮದ ಇನ್ನೊಂದು ವೈಶಿಷ್ಟ್ಯವೇನೆಂದರೆ, ಒಂದು ನೂರಾ ಒಂದು ಮಂಟಪ ಪೂಜೆಯಲ್ಲಿ ಗುರು-ವಿರಕ್ತರಿಬ್ಬರಿಗೂ ಅವಕಾಶಕೊಟ್ಟಿದ್ದರು. ಪೂಜ್ಯ ಜಗದ್ಗುರು ಮಹಾಸನ್ನಿಧಿಯವರು ತಾವು ನಿರಂಜನ ಪೀಠದ ಅಧಿಪತಿಗಳಾಗಿ, ಗುರು ಪರಂಪರೆ ಯವರನ್ನು ಮಂಟಪದ ಪೂಜೆಯಲ್ಲಿ ಅವಕಾಶ ಕೊಟ್ಟಿದ್ದು ನೋಡಿದರೆ, ಜಗದ್ಗುರುಗಳ ಹೃದಯ ವೈಶಾಲ್ಯ ಎಷ್ಟು ಶ್ರೇಷ್ಠ ಮಟ್ಟದಾಗಿದೆ ಎನ್ನುವದು ವ್ಯಕ್ತವಾಗುತ್ತದೆ. ಸಮಾಜದ ಉದ್ಧಾರವಾಗಬೇಕಾದರೆ ಮೊದಲು ಗುರು-ವಿರಕ್ತರು ಒಂದಾಗಬೇಕು ಎನ್ನುವ ಲಿಂ: ಹಾನಗಲ್ಲ ಕುಮಾರ ಶಿವಯೋಗಿಗಳ ಆಶೆಯನ್ನು ಜಗದ್ಗುರುಗಳು ಈಡೇರಿಸಿದ್ದಾರೆ. ಜಗದ್ಗುರು ಮಹಾಸನ್ನಿಧಿಯವರ ಈ ಸಮನ್ವಯ ಭಾವವನ್ನು ಸಮಾಜದ ಜನತೆ, ಮಠಾಧಿ ಪತಿಗಳು ಅರ್ಥಮಾಡಿಕೊಳ್ಳಬೇಕು.

ಧರ್ಮವೆಂದರೆ ಮೈಮುರಿಯುವ ಇಂದಿನ ಸಮಾಜದಲ್ಲಿ, ಇಂತಹ ಮಂಟಪ ಪೂಜೆ ಗಳು ನಡೆಯಬೇಕು. ಜನತೆಗೆ ಧಾರ್ಮಿಕ ಸಂಸ್ಕಾರ, ಭಕ್ತಿಯನ್ನು ಹುಟ್ಟಿಸುವಲ್ಲಿ ಮಂಟಪ ಪೂಜೆಗಳು ಹೆಚ್ಚಿನ ಕಾರ್ಯವನ್ನು ನಿರ್ವಹಿಸುತ್ತವೆ. ಇಂದಿನ ಸಮಾಜದಲ್ಲಿ ಜನತೆ ನಾಗರಿಕರಾಗುತ್ತಿದ್ದಾರೆ ವಿನಃ ಸುಸಂಸ್ಕೃತರಾಗುತ್ತಿಲ್ಲ. ಯಾಕೆಂದರೆ ವಿವೇಕಾನಂದರು ಹೇಳುವಂತೆ "ಒಂದು ದೇಶದ ಭವ್ಯತೆಯನ್ನು ಅಳೆಯಬೇಕಾದರೆ ಅಲ್ಲಿಯ ಸುಂದರವಾದ ನಗರಗಳಿಂದಲ್ಲ, ದೊಡ್ಡ ದೊಡ್ಡ ಮಹಲ್‌ಗಳಿಂದಲ್ಲ, ಸುಂದರ ಉದ್ಯಾನಗಳಿಂದಲ್ಲ,ಅಲ್ಲಿಯ ಜನಾಂಗದಿಂದ."....ದೇಶದ ಜನತೆಯಿಂದ ಅಲ್ಲಿಯ ಸಂಸ್ಕೃತಿಯನ್ನು ಅಳೆಯಬಹುದು ಸುಸಂಸ್ಕೃತರಾದರೂ ಧಾರ್ಮಿಕ ಸಂಸ್ಕಾರಬರಲು ಈ ಮಂಟಪ ಪೂಜೆಗಳು ಹೆಚ್ಚಿನ ಪರಿ ಣಾಮವನ್ನು ಬೀರುತ್ತವೆ. ಜಗದ್ಗುರು ಮಹಾಸನ್ನಿಧಿಯವರ ರಜತ ಮಹೋತ್ಸವದ ಅಂಗ

ವಾಗಿ ಏರ್ಪಡಿಸಿದ ಮಂಟಪ ಪೂಜೆಗಳು ನಾಡಿನ ಸ್ವಾಮಿಗಳಿಗೆ, ಜನತೆಗೆ ಮಾರ್ಗದರ್ಶಿಯಾಗಿವೆ. "ಶಿವ ಪಥವ ನರಿವಡೆ ಗುರು ಪಥವೇ ಮೊದಲು" ಎನ್ನುವ ಶರಣರ ಅಮರ ವಾಣಿಯನ್ನು ಗುರು-ವಿರಕ್ತರ ಒಂದು ನೂರಾ ಒಂದು ಮಂಟಪ ಪೂಜೆಯಲ್ಲಿ ಅರಿಯುಲಾಯಿತು.

ಅರಿವನ್ನು ಕಾಣಲು ಗುರುವಿನ ಸಾನ್ನಿಧ್ಯಕ್ಕೆ ಹೋಗಬೇಕು ಗುರುಸೇವೆಗಿಂತ ಅಧಿಕ ತಪವಿಲ್ಲ, ಎನ್ನುವ ದಿವ್ಯ ಸಂದೇಶ ಮಂಟಪ ಪೂಜೆಯ ಆಧ್ಯಾತ್ಮಿಕ ಪರಿಸರದಲ್ಲಿ ಕಾಣಲಾಯಿತು. ಒಂದು ನೂರಾ ಒಂದು ಮಂಟಪ ಪೂಜೆಯ ಎಲ್ಲಾ ಕಾರ್ಯಕ್ರಮವು ಜಗದ್ಗುರು ಮಹಾಸನ್ನಿಧಿಯವರ ಚೈತನ್ಯ ಶಕ್ತಿಯಿಂದ ಸಂಭ್ರಮದಿಂದ ನೆರವೇರಿತು. ಜಗದ್ಗುರು ಮಹಾಸನ್ನಿಧಿಯವರ ಷಷ್ಟ್ಯಬ್ದಿ ಸಂಸ್ಮರಣೆಯಲ್ಲಿ, ಅಭಿನಂದನ ಮಹಾಸಂಪುಟಕ್ಕಾಗಿ ಬರೆಯಲಿರುವ ಈ ಕಿರು ಲೇಖನವನ್ನು ಜಗದ್ಗುರುಗಳ ಚರಣ ಕಮಲಗಳಿಗೆ ಅರ್ಪಿಸುತ್ತೇನೆ.

□ □

ಶ್ರೀ ಸನ್ನಿಧಿಯವರ ದೃಷ್ಟಿಯಲ್ಲಿ ಶಿವಾನುಭವ

—ಶ್ರೀಮತಿ ಶಿವಲಿಂಗಮ್ಮ ಕಟ್ಟಿ

ಶಿವನ ಅನುಭವ ಶಿವಾನುಭವ ಪಾರ್ವತಿ ಪತಿ ಶಿವ, ಅಪರ ಶಿವ ಪರಶಿವ ಬೇರೆ ಬೇರೆ. ಶಿವವೆಂದರೆ ಒಳ್ಳೆಯ, ಮಂಗಲ, ಶುಭ ಮೊದಲಾದ ಅರ್ಥಗಳಾಗುತ್ತವೆ. ಒಳ್ಳೆಯ ಕಾರ್ಯ ಮಾಡಿದರೆ, ಒಳ್ಳೆಯ ಮಾತು ಆಡಿದರೆ, ಕೇಳಿದರೆ ಶಿವಾನುಭವವೆನಿಸುತ್ತದೆ. ಹತ್ತು ಜನರ ಕುತ್ತಿಗೆ ಮುರಿದು ಒಬ್ಬನಿಗೆ ತುತ್ತು ನಿಟ್ಟರೆ ಅದು ಒಳಿತಲ್ಲ. ಹತ್ತು ಜನರಿಗೆ ತುತ್ತು ನಿಟ್ಟು, ತನಗೆ ಕೊರತೆಯಾದರೂ ಪರಿವೆ ಇಲ್ಲದಿರುವದು ಶಿವಾನುಭವ. ಅದು ಹೇಳಿ ಕೇಳಿದರೆ ಬರುವದಲ್ಲ, ಒತ್ತಿ ಒತ್ತಿ ತುಂಬುವದಲ್ಲ, ಬೆಲೆ ಕೊಟ್ಟು ಕೊಳ್ಳುವದಲ್ಲ, ಕಳ್ಳ ಸುಳ್ಳರಿಗೆ ದೊರೆವುದಲ್ಲ. "ತಾನುಂಬ ಊಟವನು, ತಾ ಕೈ ಕೊಂಬ ರತಿ ಸುಖವನು ಬೇರೊಬ್ಬರಿಂದ ಮಾಡಿಸಲುಂಟೆ?" ಎಂಬ ಶರಣ ವಾಣಿಯಂತೆ ಶಿವಾನುಭವ, ಅದನ್ನು ತಾನೇ ಅರಿತು ಆಚರಿಸಿ, ಅನುಭವಿಸಿ ತೃಪ್ತಿ ಪಡೆಯಬೇಕು. ಶರಣರ ದೃಷ್ಟಿಯಲ್ಲಿ ಶಿವಾನುಭವ ಸತ್ಯಶುದ್ಧ ಕಾಯಕ. ಅಂದಂದಿನ ಪ್ರಸಾದ ನಾಳಿಗೆ ತಂಗುಳ. ನಿತ್ಯ ವೀರಶೈವ ಸಿದ್ಧಾಂತ ಚರ್ಚೆ, ಕ್ರಿಯಾ ಜ್ಞಾನ ಸಮುಚ್ಚಯವಾಗಿ ಸಾಗಿ ಬರುವದು, ಮೇಲು ಕೀಳಿಲ್ಲ, ಬಡವ ಬಲ್ಲಿದನಿಲ್ಲ, ಸ್ತ್ರೀ ಪುರುಷ ಭೇದ ಕೂಡ ಇರುವದಿಲ್ಲ. ಎಲ್ಲ ಅನುಭವಿಗಳೂ ಸರಿಸಮಾನರು. ಅಲ್ಲಿಗೊಬ್ಬರು, ಇಲ್ಲಿಗೊಬ್ಬರು ಇದ್ದರೆ ಶಿವಾನುಭವ ಸಾಧಿಸದೆಂದು, ಎಲ್ಲರೂ ಕಲ್ಯಾಣದೊಳು ಒಟ್ಟುಗೂಡಿ, ಕಾಯಕ, ಪ್ರಸಾದ, ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ನಿತ್ಯ ಬಳಕೆ, ಅದರೊಳು ಬರುವ ಕ್ಲಿಷ್ಟ ವಿಷಯಗಳ ಚರ್ಚೆ ಆಚರಣೆಯೊಳು ಬರುವ ತೊಂದರೆಗಳ ನಿವಾರಣೆ, ವ್ಯಕ್ತಿ, ಸಮಷ್ಟಿಯ ಸುಖ ಶಾಂತಿ ಮೊದಲಾದ ವಿಶಿಷ್ಟ ವಿಷಯಗಳ ಚರ್ಚೆಗೆ ಶಿವಾನುಭವ ಮಂಟಪ ಸ್ಥಾಪಿಸಿದರು ಶರಣರು. ಅದರ ಮುಖಾಂತರ ನಿತ್ಯ ಶಿವಾನುಭವ ಸಾಗುತ್ತಿತ್ತು. ಅನುಭವಿಸಿ ಆನಂದಿಸಿ ಶರಣರು ಶಿವಾನುಭಾವಿಗಳಾಗಿದ್ದರು.

ಶಿವ–ಅನು–ಭವ, ಶಿವನೊಡ ಹುಟ್ಟು, ಶಿವನೊಳಿತು, ಶಿವನೊಳು ಬೇರೆ, ಇದು ಶಿವಾನುಭವ. ಪೂಜ್ಯ ಶ್ರೀ ಸನ್ನಿಧಿಯವರು ಶಿವನೊಳು ಜನ್ಮ ತಳೆದಿದ್ದಾರೆ. ಪರಮ ಪೂಜ್ಯ ಲಿಂ| ಚಿತ್ತರಗಿ ಶ್ರೀ ಮ. ನಿ. ಪ್ರ. ವಿಜಯಮಹಾಂತ ಶಿವಯೋಗಿಗಳ ಮನಸ್ಥರಾದ, ಕೊಳಗಲ್ಲ ಹಿರೇಮಠ ಮರುಳ ಸಿದ್ಧಯ್ಯನವರು ಮತ್ತು ಚೆನ್ನಮ್ಮ ದಂಪತಿಗಳಿಗೆ ಶಿಶುವಾಗಿ ಜನಿಸಿದರು ಶಶಿವಾಳದೊಳು. ಕಾರಣಿಕ ಪುರುಷ, ಶಿವಮಂದಿರ ಸಂಸ್ಥಾಪಕ, ವೀರಶೈವ ಮಹಾಸಭೆಯ ಜನಕ ಪರಮ ಪೂಜ್ಯ ಲಿಂ| ಹಾನಗಲ್ಲ ಕುಮಾರ ಮಹಾಸ್ವಾಮಿ

ಗಳವರ ವರಪ್ರಸಾದದಿಂದ ಜನಿಸಿದ ಈ ಕಂದನಿಗೆ 'ಮಹಂತ' ನೆಂದು ನಾಮಕರಣ ಮಾಡಿದರು. ಪೂಜ್ಯ ಕುಮಾರ ಸ್ವಾಮಿಗಳವರು ಈ ಕಂದನನ್ನು ಶಿವಮಂದಿರಕ್ಕರ್ಪಿಸಲು ಅಪ್ಪಣೆ ಮಾಡಿದ್ದರು. ಅವರು ಲಿಂಗದೊಳಗಾದ ಕೂಡಲೇ ತಾಯಿ ಚೆನ್ನಮ್ಮಗೆ, ಪುತ್ರನ ಅಂದ ಚಂದ, ತೊದಲ್ನುಡಿ, ಆಟ ಪಾಟ ನೋಡಿ ಶಿವಮಂದಿರಕ್ಕೆ ಕಂದನ ಕೊಡಲು ನಿರಾಕರಿಸಿದಳು. ಮರುದಿನವೆ ಕಂದನ ಕಣ್‌ಬೆಳಕು ಕತ್ತಲಾಯಿತು. ತಾಯಿ ಹೌಹಾರಿದಳು ತನ್ನ ವ್ಯಾಮೋಹಕ್ಕೆ ಮರುಗಿದಳು. "ಕುಮಾರೇಶ ನನ್ನ ಕಂದನನ್ನು ಕಾಪಾಡು, ನನ್ನ ಅಜ್ಞಾನಕ್ಕೆ ನನಗೆ ಶಿಕ್ಷಿಸು ತಂದೆ! ನನ್ನ ಕಂದ ಎಲ್ಲಾದರೂ ಬೆಳೆ, ಜಗಕೆ ಕಣ್ಣಾಗಿ ವೃಳಿ, ಪರೋಪಕಾರಕ್ಕೆ ಪೇಳೆಕಳಿ, ಶಿವಯೋಗಕ್ಕೆ ಮೈತಳಿ" ಎಂದು ಹರಸಿ ಕುಮಾರೇಶನ ಹೆಸರಿನಿಂದ ಮಗುವಿನ ಮೈತುಂಬ ಭಸ್ಮ ಧರಿಸಿ, ಬಾಯೊಳು ಪಾದೋದಕ ಹಾಕಿದಾಗ ಕಣ್ಣು ಕಾಣತೊಡಗಿದವು. ದಂಪತಿಗಳಿಗಾದ ಸಂತಸ ವರ್ಣಿಸಲ ಸಾಧ್ಯ. ದಂಪತಿಗಳಿಬ್ಬರೂ ಮಗನನ್ನು ಶಿವಯೋಗ ಮಂದಿರಕ್ಕೆ ತಂದು ಒಪ್ಪಿಸಿದರು, ಐದನೆಯ ವಯದಲ್ಲಿ. ಶಿವದೊಳು ಜನ್ಮ ತಳೆದ ಮಹಂತ ಶಿವದೊಳಿರಲು ಶಿವಮಂದಿರಕ್ಕೆ ಬಂದ.

ಶಿವಯೋಗ ಮಂದಿರದ ಪ್ರಕೃತಿ ಮಡಿಲೊಳು, ಮಲಾಪಹಾರಿ ಜುಳು ಜುಳು ನಾದದೊಳು ಪಸುವಿನ ಕೆಂಧೂಳಿಯ ಕಣದೊಳು, ವಟುಗಳ ಜತೆಯೊಳು, ಬೆಳೆಯ ತೊಡಗಿದ ಬಾಲಕ ಮಹಂತ. ಪರಮಪೂಜ್ಯ ಲಿಂ| ಹಾವೇರಿ ಶಿವಬಸವ ಮಹಾಸ್ವಾಮಿ ಗಳವರ ಮಾರ್ಗದರ್ಶನದಲ್ಲಿ ಮುಂದುವರಿಯತೊಡಗಿದ. ಕನ್ನಡ, ಸಂಸ್ಕೃತ, ಹಿಂದಿ ಕಲಿ ಯಲು ಪ್ರಾರಂಭಿಸಿದ. ದೊಡ್ಡವನಾಗಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಾಶಿಗೆ ತೆರಳಿದ, ಅಲ್ಲಿ ಪ್ರಶಸ್ತಿ ಪಡೆದು ವಿದ್ಯೆ ಬುದ್ಧಿ ಗಳಿಸಿಗೊಂಡು ತಾಯ್ನಾಡಿಗೆ ಮರಳಿದ. ಶಿವನೊಡು ಪಟ್ಟಿ, ಶಿವದೊಳಿರುವ ಯುವಕ ಮಹಂತನನ್ನು ಹೂಬಳ್ಳಿ ಪೀಠ ಕೈಬೀಸಿ ಕರೆಯಿತು. ೧೯೫೮ ಮೇ ಒಂದರಂದು ಹುಬ್ಬಳ್ಳಿ ದೊಡ್ಡ ಮಠದ ಅಧಿಕಾರವಹಿಸಿ "ಶ್ರೀ ಮನ್ಮಹಾರಾಜ ನಿರಂಜನ" ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರೆಂದು ನಾಮಾಂಕಿತರಾ ದರು. ಶ್ರೀ ಜಗದ್ಗುರು ಗುರುಸಿದ್ಧೇಶ್ವರನ ಪೀಠದ ಗುರುತರದ ಹೊಣೆ ಹೊತ್ತರು ಎಳೆ ಹೆಗಲಿಗೆ.

ಶ್ರೀ ಸನ್ನಿಧಿಯವರ ಈ ಅಖಂಡ ೩೨ ವರುಷಗಳ ಸಾಧನೆ ಸೀಮಾತೀತವಾದುದು. ಶಿವನಿರುಪಿಕೆ ಅಂದಿನಿಂದಿನವರೆಗೂ ಅವ್ಯಾಹತವಾಗಿ ಸಾಗಿ ಬಂದಿದೆ, ಬರುತ್ತಲಿದೆ. ಅವರು ಕೇವಲ ಅನುಷ್ಠಾನ, ಮಂತ್ರ, ಜಪ ತಪದೊಳು ಕಾಲಕಳೆಯಲಿಲ್ಲ. ಅವರ ದೃಷ್ಟಿಯಲ್ಲಿ ಎಡಬಿಡದ ಕಾಯಕವೇ ಅನುಷ್ಠಾನ, ಸಾಹಿತ್ಯ ಪ್ರಸಾರವೇ ಜಪ ತಪ, ಬಡವರ ಕಲ್ಯಾಣದ ಚಿಂತೆಯೇ ಧ್ಯಾನ. ಸರ್ವರೂ ಸಮನಾಗಿ ಸುಖ ಶಾಂತಿಯಿಂದ ಬಾಳುವದೇ ಅವರ ಶಿವ ಪೂಜೆ, ಇವುಗಳ ಫಲದ ತೃಪ್ತಿ ಆನಂದವಾದುದೇ ಅವರ ಶಿವಾನುಭವ. ಸನ್ನಿಧಿ

ಯವರ ಶಿವಪೂಜೆಯಿಂದ ಎಷ್ಟು ಜನ ಉದ್ಧಾರವಾಗುತ್ತಿದ್ದರೋ! ಹೇಳಲರಿಯೆ. ಅವರ ಸತ್ಕಾಯಕದಿಂದ ಲಕ್ಷಾನುಜನ ಉದ್ಧಾರವಾಗಿದ್ದಾರೆ, ಆಗುತ್ತಲಿದ್ದಾರೆ.

ಶ್ರೀ ಸನ್ನಿಧಿಯವರು ತಮ್ಮ ತವರಿಗೆ ಹೋದಂತೆ ಶಿವಮಂದಿರಕ್ಕೆ ಮೇಲಿಂದ ಮೇಲೆ ದಯೆಮಾಡಿಸುತ್ತಾರೆ. ಆ ಸಂಸ್ಥೆ ಬೆಳೆಸಲು ಸಾಕಷ್ಟು ಶ್ರಮಪಟ್ಟರು. ಅಲ್ಲಿ 'ಧ್ಯಾನ-ಧಾಮ'ವೆಂದು ಸುಂದರವಾದ ಕಟ್ಟಡ ಕಟ್ಟಿಸಿದ್ದಾರೆ. ತಾಯ್ನೆಲದ ಋಣ ತೀರಿಸುವ ಅವಕಾಶ ಸಾಕಷ್ಟು ದೊರೆಯಲಿಲ್ಲವರಿಗೆ. ಅದೊಂದು ಕಳವಳ. ಅವರಿಗಾದ ಹಾನಿ ಇಲ್ಲ, ಆದರೆ ವಟುಗಳಿಗೆ, ಅಧ್ಯಾತ್ಮ ಸಾಧಿಪರಿಗೆ, ಸಾಹಿತ್ಯ ಪ್ರಚಾರಕ್ಕೆ, ನಿಜವಾದ ಹಾನಿ ತಟ್ಟಿ ಶ್ರೀ ಕುಮಾರೇಶನ ಕನಸು ನನಸಾಗದೇ ಉಳಿಯಿತು. ಅದು ಅವರಿಗೆ ನೋವನ್ನುಂಟು ಮಾಡಿತು. ಆ ಕೊರತೆ ತುಂಬಿಕೊಳ್ಳಲು ತಮ್ಮ ಶ್ರೀ ಮಠದಲ್ಲಿ "ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ" ಸ್ಥಾಪನೆ ಮಾಡಿದರು. ಆ ಸಂಘದ ಸಾಧಕರು ಗದಗ, ಶಿರಹಟ್ಟಿ, ಆನಂದಪುರ, ಶ್ರೀ ಶೈಲ ಮೊದಲಾದ ಜಗದ್ಗುರು ಪೀಠಕ್ಕೂ ಮತ್ತು ಅನೇಕ ಹಿರಗುರು ವಿರತ ಪೀಠಕ್ಕೂ ಅಧಿಕಾರಿಗಳಾಗಿದ್ದಾರೆ. ಅವರೆಲ್ಲ ಬಿ.ಎ. ಎಂ.ಎ.ದವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ಸಂಸ್ಕೃತ, ಸಾಹಿತ್ಯ. ಶಿವಯೋಗ ಸಾಧನೆ, ಆಸನ ಮೊದಲಾದವುಗಳಲ್ಲಿ ಪರಿಣತರಾಗಿದ್ದಾರೆ. ಅವರೆಲ್ಲರ ಅಭ್ಯುದಯ ಕಂಡಾಗ ಸ್ವಂತ ಮಕ್ಕಳಿಗಿಂತಲೂ ಸಂತಸ ಅಭಿಮಾನ ಶ್ರೀ ಸನ್ನಿಧಿಯವರಿಗೆ. ತಮ್ಮ ಮಠದ ಏಳ್ಗೆ ದೊಡ್ಡದಲ್ಲ, ತಮ್ಮಂತೆ ಎಲ್ಲ ಜಗದ್ಗುರು ಪೀಠಗಳು ಭೇದ ಭಾವ ಮರೆತು ಒಂದುಗೂಡಿ ಆದರ್ಶಪ್ರಾಯರಾಗಬೇಕೆಂಬುದೇ ಅವರ ಅಂತಃಕರಣದ ಅಭಿಲಾಷೆ. ಗುರು ವಿರತರೊಂದಾಗ ಬೇಕು, ಇಲ್ಲದಿರೆ ವೀರಶೈವ ಧರ್ಮ ಹರಿದ ಪಟವಾಗುತ್ತದೆ. ಹಿರಿಯರು ಅನುಭವಿಗಳು ಸುಸುಭದ್ರವಾಗಿ ಈ ಧರ್ಮಕ್ಕೆ ರೂಪರೇಷೆ ಕೊಟ್ಟಿದ್ದಾರೆ. ಶರಣರೋ ಪಾಲಿಸಿಗೊಂಡು ಬಂದಿದ್ದಾರೆ. ನಾವೆಲ್ಲ ಒಗ್ಗಟ್ಟಿನಿಂದ ಸಾಗೋಣ. ಅನ್ಯರಿಗೆ ಆದರ್ಶರಾಗೋಣವೆಂದು ಹಗಲಿರಳು ಪ್ರಯತ್ನಿಸುತ್ತಾರೆ. ಸರಿ ಫಲ ಕಾಣದೆ ಕೊರಗುತ್ತಾರೆ. ಅದರ ಆಗು ಹೋಗುಗಳನ್ನು ಗುರು ಗುರುಸಿದ್ಧೇಶ್ವರನ ಪಾದಕ್ಕರ್ಪಿಸಿ ನಿಶ್ಚಿಂತರಾಗುತ್ತಾರೆ. ಶ್ರೀ ಮಠಕ್ಕೆ ಗುರುಗಳೇ ಬರಲಿ ವಿರತರೇ ಬರಲಿ ಅಷ್ಟೇ ಆದರದಿಂದ ಕಾಣುತ್ತಾರೆ. ಅವರ ಬೇಕು ಬೇಡಗಳ ಕೇಳಿ ಪರಿಹಾರ ಹೇಳುತ್ತಾರೆ ನೀಡುತ್ತಾರೆ. ಮಠಗಳ ಏಳ್ಗೆಯಾದರೆ ಸಾಕು. ಬೀಳಗೊಡಬೇಡಿ ರೆನ್ನುವರು. ಅದೇ ಅವರಿಗೆ ಶಿವಪೂಜೆ ಶಿವಾನುಭವ.

ಶ್ರೀ ಸನ್ನಿಧಿಯವರ ಗುರುಗಳು ಘಟಪ್ರಭೆಯೊಳು ಸ್ಥಾಪಿಸಿದ "ಶ್ರೀ ಜಗದ್ಗುರು ಗುರುಸಿದ್ಧೇಶ್ವರ" ಆಸ್ಪತ್ರೆಯನ್ನು ಕರ್ನಾಟಕದಲ್ಲಿ ಬೃಹತ್ ಆಸ್ಪತ್ರೆಯನ್ನಾಗಿ ಬೆಳೆಸಿದ್ದಾರೆ. ಎಲ್ಲ ಔಷಧಿ, ಉಪಕರಣಗಳನ್ನು ಒದಗಿಸುತ್ತಾರೆ. ಕಾಲಕಾಲಕ್ಕೆ, ಬಡವರಿಗೆ ಅಲ್ಲಿ ಉಚಿತ ಪ್ರಸಾದ ಅಲ್ಲಿಯ ಸ್ವಚ್ಛ ಹವೆ, ಶುದ್ಧ ನೀರು, ನುರಿತ ವೈದ್ಯರ ಉಪಚಾರ ಮುಂತಾದ ಅನುಕೂಲತೆಯಿಂದ ಅಳುತ್ತ ಬಂದವರು, ನಗುತ್ತ ಹೋಗುತ್ತಾರೆ. ನಿತ್ಯ

ನೂರಾರು ಜನರಿಗೆ ಪ್ರಸಾದ, ನೂರಾರು ಜನರಿಗೆ ಉದ್ಯೋಗ ದೊರಕಿಸಿ ಕೊಟ್ಟ ಸಂತೃಪ್ತಿ ಶ್ರೀಗಳವರಿಗೆ ಅದೇ ಮಹಾದಾನಂದದ ಶಿವಪೂಜೆ.

ಶ್ರೀ ಸನ್ನಿಧಿಯವರದು ಮಾತೃಹೃದಯ. ಸಣ್ಣವರಿರುವಾಗ ಮಾತೆಯ ಮಮತೆಯಿಂದ ದೂರಾದ ಕೊರತೆ. ಇಂದಿಗೂ ಮಹಿಳೆಯರೊಳು ಮಾತೆಯ ಮಮತೆಯನ್ನಿರಿಸುತ್ತಾರೆ. ಗಂಡು ಮಗ ಒಂದು ಮನೆ ಉದ್ಧಾರ ಮಾಡಿದರೆ ಹೆಣ್ಣು ಮಗಳು ೨ ಮನೆ ಉದ್ಧಾರ ಮಾಡುತ್ತಾಳೆ. ತೊಟ್ಟಿಲು ತೂಗುವ ಕೈ ಜಗವನ್ನೇ ತೂಗುಬಲ್ಲದು. ಶ್ರೀಮತಿ ಇಂದಿರಾಗಾಂಧಿ ನಮ್ಮ ದೇಶದ ಪ್ರಪ್ರಥಮ ಮಹಿಳಾ ಪ್ರಧಾನಿಯಾದಳು. ಹೆಣ್ಣು ಮಕ್ಕಳು ವಿದ್ಯಾವಂತರಾದರೆ, ಶೀಲವತಿಯರಾದರೆ, ಆಚಾರ ವಿಚಾರವಂತರಾದರೆ, ಸದ್ಗುಣಿಗಳಾದರೆ ಏನು! ಎಷ್ಟು!! ಸಾಧಿಸ ಬಲ್ಲರು? ಎಂದು ವಿಚಾರಿಸಿ ಹೆಣ್ಣು ಮಕ್ಕಳಿಗಾಗಿ ಪ್ರಾಥಮಿಕ ಶಾಲೆಯಿಂದ ಪ್ರೌಢ ಶಾಲೆಯವರೆಗೆ ಸ್ಥಾಪಿಸಿದರು. ಇಂದು ಬಾಲವಾಡಿಯಿಂದ ಮಹಾವಿದ್ಯಾಲಯದ ವರೆಗೆ ಸಹಸ್ರಾರು ವಿದ್ಯಾರ್ಥಿನಿಯರು ವ್ಯಾಸಂಗ ಮಾಡಿದ್ದಾರೆ, ಮಾಡುತಲಿದ್ದಾರೆ, ಮಾಡುವವರಿದ್ದಾರೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢ(ಕಾಲೇಜ) ವಿದ್ಯಾರ್ಥಿನಿಯರು ಜಿಲ್ಲಾ ಮಟ್ಟದಲ್ಲಿ, ರಾಜ್ಯಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಬಹುಮಾನಿತರಾದಾಗ ಸನ್ನಿಧಿಯವರಿಗೆ ಆಗುವ ಸಂತಸ ಅಷ್ಟಿಷ್ಟಲ್ಲ. ತಾವು ನೆಟ್ಟ ಬೀಜ ಇಂದು ಬೃಹತ್ ಭೂಜವಾಗಿ ಬೆಳೆದು ಪರಿಪಕ್ವ ಫಲ ಕೊಡುತ್ತಲಿವೆ. ಅದರ ಜತೆಗೆ ಬರುವ ಕಷ್ಟನಷ್ಟಗಳು ಅಪಾರ. ಒಂದೊಂದು ಸಲ ಸ್ಥಿತಿ ವಿಪರೀತ ಕೆಟ್ಟಾಗ "ಶಿವಲಿಂಗಮ್ಮ: ನೀವು ಏನೇ ತಿಳಿಯಿರಿ ಹೆಣ್ಣುಮಕ್ಕಳಲ್ಲಿರುವಷ್ಟು ವೈಷಮ್ಯ, ಮಾತ್ಸರ್ಯ, ಅಸಹಕಾರ, ಮತ್ತೆಲ್ಲಿಯೂ ಕಾಣೆ, ಹೇಗೆ ಇವರನ್ನು ಸುಧಾರಿಸ ಬೇಕು ತಿಳಿಯದು" ಎಂದು ಕಳವಳಪಡುತ್ತಾರೆ. ಅವರಿಗೆ ಗುರುಸಿದ್ಧೇಶನ ಕೃಪೆ, ಕುಮಾರೇಶನ ಆಶೀರ್ವಾದ ಬೆಳಕು ತೋರಿ ನಡೆಯ ಹಚ್ಚುತ್ತಿವೆ. ಆಗಾಗ ಅಪ್ಪಣೆ ಮಾಡುತ್ತಾರೆ "ಇವೆಲ್ಲ ಸಂಘ ಸಂಸ್ಥೆಗಳು ಸರಿಯಾಗಿ ಸಾಗಿದುವೇ ಶಿವಾನುಭವ, ಅವು ಎಡವಟ್ಟಾದರೆ ಅದೇ ಭವಾನುಭವ" ಎಂದು ಶ್ರೀ ಮಠದಿಂದ ನೂರಾರು ಸಂಘ ಸಂಸ್ಥೆಗಳು ಅಚ್ಚುಕಟ್ಟಾಗಿ ಸನ್ನಿಧಿಯವರ ನೇತೃತ್ವದಲ್ಲಿ ಸರಾಗವಾಗಿ ಸಾಗುತ್ತಲಿವೆ.

"ಉಳ್ಳವರು ಶಿವಾಲಯ ಮಾಡುವರು ನಾನೇನು ಮಾಡಲಿ ಬಡವನಯ್ಯಾ, ಕಾಲೇ ಕಂಭ, ದೇಹವೇ ದೇಗುಲ, ಶಿರವೇ ಹೊನ್ನ ಕಳಸವಯ್ಯಾ ಕೂಡಲಸಂಗಮದೇವ" ಎಂದು ಮಹಾಮಂತ್ರಿ ಬಸವಣ್ಣನವರು ಹೇಳಿದ್ದಾರೆ. ಮಹಾಮಂತ್ರಿಯ ಕಾಯಕದಿಂದ ಬಂದ ಹಣ ಗುರುಲಿಂಗ ಜಂಗಮ ದಾಸೋಹಕ್ಕೆ ವಿನಿಯೋಗಿಸಿದ್ದಾರೆ. ಶ್ರೀ ಸನ್ನಿಧಿಯವರು ತಮ್ಮ ಜೋಳಿಗಿಗೆ ಬಂದ ಸಂಪತ್ತೆಲ್ಲವನ್ನು ಕಟ್ಟಡಕ್ಕೆ, ವಿದ್ಯೆಗೆ, ಉದ್ಯೋಗಕ್ಕೆ, ಕಲೆ, ಸಾಹಿತ್ಯ ಮೊದಲಾದವುಗಳಿಗೆ ವಿನಿಯೋಗಿಸುತ್ತಾರೆ. "ಆರಂಭ ಮಾಡುವೆನಯ್ಯ ಗುರುಪೂಜೆಗೆಂದು, ಪರಸೇವೆ ಮಾಡುವೆನಯ್ಯ ಲಿಂಗಪೂಜೆಗೆಂದು, ಬೆವಹಾರವ ಮಾಡುವೆ

ನಯ್ಯ ಜಂಗಮ ದಾಸೋಹಕ್ಕೆಂದು" ಅಣ್ಣನ ವಾಣಿಯಂತೆ ಶ್ರೀ ಸನ್ನಿಧಿಯವರಿಗೆ ಕಟ್ಟಡ ನಿರ್ಮಿಸುವದೇ ಗುರುಪೂಜೆ, ವಿದ್ಯೆ ನೀಡಲಣಿಗೊಳಿಸುವದೇ ಲಿಂಗಪೂಜೆ, ಅವೆಲ್ಲ ಅನುಗಾಲ ಸಾಗಿ ಬರಲು ಆರ್ಥಿಕ ಭದ್ರತೆ ಒದಗಿಸುವದೇ ಜಂಗಮ ದಾಸೋಹ. ಆದ್ದರಿಂದ ಇವರ ಸ್ಥಾವರಕ್ಕಳಿವಿಲ್ಲ, ಜಂಗಮಕ್ಕಳಿವಿಲ್ಲ. ವೀರಶೈವರೊಳು 'ಅಳಿವ' ಶಬ್ದಕ್ಕೆ ಸ್ಥಾನವಿಲ್ಲ. ಶಿವ ಸೃಷ್ಟಿ ಶಿವ ಪ್ರಸಾದವಾದಾಗ ಅಳಿವ ಶಬ್ದಕ್ಕೆಂಬೆಲ್ಲಿ? ಉದಾಹರಣೆ- ಶೇಂಗಾಕಾಯಿ ಸುಲಿದು ಕಾಳನ್ನು ಉಪಯೋಗಿಸುತ್ತೇವೆ. ಆ ಸಿಪ್ಪೆಯನ್ನು ಒಲೆಗೆ ಇಲ್ಲವೆ ಗೊಬ್ಬರಕ್ಕೆ ಹಾಕುತ್ತೇವೆ. ಒಂದು ಸ್ವಚ್ಛ ಕಾಳನ್ನು ಮಣ್ಣಿನಲ್ಲಿ ಬಿತ್ತಿದಾಗ ಮೊಳಕೆ ದೋರಿ ಗಿಡವಾಗಿ ಗೊಂಚಲಾಗಿ ಶೇಂಗಾ ಬಿಡುತ್ತದೆ. ಸುಟ್ಟ ಸಿಪ್ಪೆ ಮತ್ತೆ ಹೇಗೆ ಬಂದಿತು? ಕಾಳಿನೊಳು ಸಿಪ್ಪೆಯ ಅಂಶ ಸೂಕ್ಷ್ಮವಾಗಿರುತ್ತದೆ. ಮಣ್ಣು, ನೀರು, ಬೆಳಕಿನ ಸಂಗದಿಂದ ಸೂಕ್ಷ್ಮವಾದದ್ದು ಬೃಹದ್ ರೂಪ ತಾಳಿತು. ಅಂದರೆ ಒಂದು ಸೂಕ್ಷ್ಮ ಮತ್ತೊಂದು ಘನ ರೂಪದಲ್ಲಿರುತ್ತದ. ಎಲ್ಲವೂ ಶಿವ ಪ್ರಸಾದ ಶಾಶ್ವತ. ಇದು ವೀರಶೈವ ಧರ್ಮದ ಮರ್ಮ.

ಶ್ರೀ ಸನ್ನಿಧಿಯವರಿಗೆ ಸಿದ್ಧರಾಮನ ಕಾಯಕ ಬಲು ಇಷ್ಟವಾಗಿದೆ. ಸಜೀವಗಳೊಡನೆ ಗುದ್ದಾಡುವದಕ್ಕಿಂತ ನಿರ್ಜೀವಿ ಕಲ್ಲು, ಕಟ್ಟಿಗೆ, ಉಸುಕು, ಸಿಮೆಂಟು, ಕಬ್ಬಿಣ, ಇಟ್ಟಿಗೆ ಜತೆಗಿರುವದು ಬಹಳ ಸಂತಸ ಅವರಿಗೆ. "ಚಿಲಿಪಿಲಿ ಎಂದೋದುವ ಗಿಳಿಗಳಿರಾ ನೀವು ಕಾಣಿರೆ ಕಾಣಿರೆ, ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ ನೀವು ಕಾಣಿರೆ, ಸರೋವರ ದೊಳಾಡುವ ಹಂಸಗಳಿರಾ ನೀವು ಕಾಣಿರೆ!... ಚೆನ್ನಮಲ್ಲಿಕಾರ್ಜುನ ಕಂಡರೆ ಕರೆದು ತೋರಿರೆ" ಎಂದು ಅಕ್ಕಮಹಾದೇವಿ ಪಕ್ಷಿಗಳನ್ನು, ತರುಮರಗಳನ್ನು ಪ್ರಶ್ನಿಸಿದ್ದಾಳೆ. ಮತ್ತಾರನ್ನೂ ಕೇಳಲಿಲ್ಲ ಅಕ್ಕ ಮಲ್ಲಿಕಾರ್ಜುನನ ಇರವನ್ನು. ಅನುಭವ ಮಂಟಪದಲ್ಲಿ ಮಾತ್ರ ತನ್ನ ಮಾರ್ಗ ಕೇಳಿ ತಿಳಿದು ಸಾಗಿದ್ದಾಳೆ. ಹಂಬಲಿಸಿ ಹಲವರ ಕೇಳಿ ಹದಗೆಟ್ಟಿಲ್ಲ ತಾಯಿ. ಸನ್ನಿಧಿಯವರು ತಮ್ಮ ಗುರಿಯನ್ನೂ, ತಮ್ಮ ಇರವನ್ನೂ. ಕಾರ್ಯದಲ್ಲಿ ಮಾಡಿ ತೋರಿಸುತ್ತ ಸಾಗಿದ್ದಾರೆ, ಸ್ಥೂಲವಾಗಿ. ಅವರಿಗೆ ಇನ್ನೂ ಸೂಕ್ಷ್ಮಕ್ಕೆ ಬರುವದು ತಡವಾಗುವದಿಲ್ಲ. ಅವರು ಸೂಕ್ಷ್ಮಕ್ಕೆ ಬಂದರೆಂದರೆ ಸ್ಥೂಲ ನಿಶ್ಶಬ್ದವಾಗುತ್ತದೆ. ಕ್ರಿಯೆ ಗೌಣವಾಗಿ ಜ್ಞಾನ ತಾನೆ ತಾನಾಗಿ ಬೆಳಗುತ್ತದೆ. ಅವುಗೆ ಆ ಬಯಕೆಯೂ ಇದೆ. "ಬಯಕೆ ಮುಂದೆ ಬರುವದಕೆ ಕಣ್ಸನ್ನೆ ಕಣಾ" ಎಂದು ಮಧುರ ಚೆನ್ನರ ವಾಣಿ ಸತ್ಯ ವಾಗಲಿದೆ.

ಸಿದ್ಧರಾಮನ ಕಾಯಕ ಕೈಗೆತ್ತಿಕೊಂಡ ಶ್ರೀ ಸನ್ನಿಧಿಯವರು ದೊಡ್ಡ ಮಠದ ಪುನಃ ನಿರ್ಮಾಣ, ಸಾಲುಗದ್ದಿಗೆಗಳ ಕಟ್ಟಡ, ಪ್ರಾಥಮಿಕ ಶಾಲೆಯಿಂದ ಮಹಾ ವಿದ್ಯಾಲಯದ ವರೆಗೆ ಕಟ್ಟಡಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ತಂಗುದಾಣ, (Hostels) ಪ್ರಸಾದ ನಿಲಯಗಳು, ಕಲ್ಯಾಣ ಮಂಟಪ, ದಾಸೋಹ ಕಟ್ಟಡ, ಅತಿಥಿಗಳ ಗೃಹ, ಮಹಾದ್ವಾರ ನಿರ್ಮಾಣ, ಶಾಖಾ ಮಠಗಳ ದುರಸ್ತಿ, ಮಠದ ಸಾಲು ಮಳಿಗೆಗಳು (Complex)

ಪರಂಜ್ಯೋತಿ ಕಾರ್ಯಾಲಯ, ತಾಂತ್ರಿಕ ವಿದ್ಯಾಲಯ, ಕಲಾ (Art & Arowing) ಶಾಲೆ, ಒಂದಲ್ಲ ನಾಲ್ಕಲ್ಲ ಹತ್ತಲ್ಲ ಖರ್ಚು ಮಾಡಿದ್ದಾರೆ ಕಟ್ಟಡಗಳ ನಿರ್ಮಾಣಕ್ಕೆ. ಸಿದ್ಧರಾಮ ಒಂದು ಕೆರೆ ಕಟ್ಟಿ ಕೈ ಬಿಟ್ಟನೆ, ಸನ್ನಿಧಿಯವರ ಕಾಯಕ ಇನ್ನೂ ಸಾಗುತ್ತಲೇ ಇದೆ. ಈಗ ಷಷ್ಟ್ಯಬ್ದಿ ಸಮಾರಂಭಕ್ಕೆ ದೊಡ್ಡ ಮಠಕ್ಕೆ ಬಣ್ಣ ಕೊಡಿಸಿದರೆ ೧೦ ಲಕ್ಷ ರೂ. ಖರ್ಚು ಬಂದಿತಂತೆ. ಆ ಮಠದ ಬೆಲೆ ಇಂದು ೩ ಕೋಟಿ ರೂ.ಗಳಿಗೂ ಮಿಕ್ಕುವವೆಂದು ಹಿರಿಯ ಇಂಜಿನಿಯರು ಅಭಿಪ್ರಾಯ ನೀಡಿದರು. ಈಗ ಅಷ್ಟು ವ್ಯಯ ಮಾಡಿದರೂ ಆ ಕಂಭಗಳ ವೈಭವ, ತೊಲೆಗಳ ಚಿತ್ತಾರ, ಗೋಡೆಗಳ ಚೆಲುವು, ಬಾಗಿಲದ ಭವ್ಯತೆ ಬರಲು ಸಾಧ್ಯವಿಲ್ಲವೆಂದರು. ಸಾಲು ಮಳಿಗೆಗಳನ್ನು ನಿರ್ಮಿಸಿ ಭಾಡಿಗೆ ಕೊಟ್ಟಿದ್ದಾರೆ. ಆ ಉತ್ಪನ್ನ ಸಾಹಿತ್ಯಕ್ಕೆ ಮೀಸಲಾಗಿಟ್ಟಿದ್ದಾರೆ. ಅವರ ತರುವಾಯ, ಅವರು ರೂಪಿಸಿದ ಪ್ರತಿಯೊಂದು ಕಾರ್ಯವೂ ಸುಗಮವಾಗಿ ಸಾಗುವಂತೆ ಆರ್ಥಿಕ ಭದ್ರತೆ ಒದಗಿಸಿದ್ದಾರೆ. ಅವರ ದೂರ ದೃಷ್ಟಿಗೆ ಎಣೆ ಇಲ್ಲ. ಸರಕಾರ ಮಾಡುವಷ್ಟು ಕಾರ್ಯವನ್ನು ಒಬ್ಬ ವ್ಯಕ್ತಿ ಮಾಡುವವೆಂದರೆ! ಸಾಮಾನ್ಯವೆ? ಹುಬ್ಬಳ್ಳಿ ನಗರದಲ್ಲಿ ಅವರದೇ ಅರ್ಧ ಪಾಲಿದೆ ಎಂದರೆ ಅತಿಶಯೋಕ್ತಿ ಅಲ್ಲ. ಅವರು ಕಟ್ಟಡಗಳ ಕಟ್ಟಿ ಅಲ್ಲಿ ಕಣ್ಣು ಕಪ್ಪಡಿ, ತೊವಲ ಬಾವಲಿ ಆಡಲು ಬಿಟ್ಟಿಲ್ಲ. ಆ ಕಟ್ಟಡಗಳಲ್ಲಿ ಹಗಲು ರಾತ್ರಿ ಗಿಜಿ ಗಿಜಿಯಾಗಿ ಕಾರ್ಯಕ್ರಮಗಳು ಸಾಗಿರುತ್ತವೆ. ಇನ್ನು ಗ್ರಂಥ ಭಾಂಡಾರಕ್ಕೆ, ಅತಿಥಿಗಳಿಗೆ ಸ್ಥಳ ಸಾಲದು ಎನ್ನುತ್ತಾರೆ ಶ್ರೀ ಸನ್ನಿಧಿಯವರು. ಈ ಶಿವಾಲಯಗಳನ್ನು ನಿರ್ಮಿಸುವದೆ ಶಿವಾನುಭವ ಸನ್ನಿಧಿಗೆ.

ಶ್ರೀ ಸನ್ನಿಧಿಯವರಿಗೆ ಸಾಹಿತ್ಯವೇ ಶಿವಾನುಭವ. ಅವರು ಸ್ವತಃ ಸಾಹಿತಿಗಳು, ಕವಿಗಳು, ಚಿತ್ರಗಾರರು, ಚೆಲು ಮನದವರು. 'ಪರಂಜ್ಯೋತಿ' ಮಾಸಿಕ ಪ್ರಾರಂಭಿಸಿದರು. ಅದು ಸಂಸ್ಕೃತಿ ಸೌರಭ ಸೂಸುತ್ತ ಸುಗಮವಾಗಿ ಸಾಗಿದೆ. ಪ್ರಚಾರೋಪನ್ಯಾಸ ಮಾಲೆಯನ್ನು ಸ್ಥಾಪಿಸಿ, ಅದರಂಗವಾಗಿ ನೂರಾರು ಪುಸ್ತಕಗಳನ್ನು ಅಚ್ಚುಗೊಳಿಸಿ ಪ್ರಕಟ ಮಾಡಿದರು. 'ವೀರಶೈವ ಭಾರತಿ' ಎಂದು ಆರಂಭಿಸಿ ಅದರ ಮುಖಾಂತರ ಶರಣರ ಚಿಕ್ಕ ಚಿಕ್ಕ ಕಥೆಗಳನ್ನು ಬರೆಯಿಸಿ ಪ್ರಕಾಶಗೊಳಿಸಿದರು. ಹಿರಿ ಕಿರಿ ಸಾಹಿತಿಗಳಿಗೆ ಇದೊಂದು ಸದವಕಾಶ ದೊರೆಯಿತು. ಪ್ರಚಾರೋಪನ್ಯಾಸ ಮಾಲೆ ಕೇವಲ ಕರ್ನಾಟಕಕ್ಕೆ ಸೀಮಿತವಲ್ಲ. ಮಹಾರಾಷ್ಟ್ರ, ತೆಲುಗು, ತಮಿಳು ದೇಶಗಳಲ್ಲಿ ಆಯಾ ಭಾಷೆಯೊಳು ಧಾರ್ಮಿಕ ಗ್ರಂಥ ಬರೆಯಿಸಿ ಪ್ರಕಟಗೊಳಿಸಿದರು. ಪ್ರಾಚೀನ ಗ್ರಂಥಗಳನ್ನು ಪರಿಷ್ಕರಿಸಿ ಪ್ರಿಂಟು ಮಾಡಿಸಿದ್ದಾರೆ. ಜ್ಞಾನ ಭಾಂಡಾರ ತುಂಬಿ ತುಳುಕುತ್ತಲಿದೆ. ಒಂದು ವಿಶ್ವವಿದ್ಯಾಲಯ ಮಾಡುವಷ್ಟು ಕಾರ್ಯವನ್ನು ಒಬ್ಬ ವ್ಯಕ್ತಿ ಮಾಡಿರುವರೆಂದರೆ ಆಶ್ಚರ್ಯ ಆನಂದ. ಮುಂದಿನ ಪೀಳಿಗೆ ನಂಬಲಸಾಧ್ಯವೆನಿಸುತ್ತದೆ. ಅವರು ಸ್ವತಃ ಬರೆದ ವಚನ ಮಾಲೆ 'ಚಿತ್ಸುಮನ' ಪುನಃ ಪುನಃ ಮುದ್ರಣ ಕಂಡು ಜನ ಮೆಚ್ಚಿಗೆ ಪಡೆದಿದೆ. ಅವರು ೨೯ ಗ್ರಂಥಗಳನ್ನು ರಚಿಸಿದ್ದಾರೆ. ಆದರೂ ತೃಪ್ತಿ ಇಲ್ಲ. "ತಾಯಿ ನನಗೆ ಹದು ದೊರೆತರೆ

ನೂರಾರು ಗ್ರಂಥ ಬರೆಯುತ್ತಿದ್ದೆ, ಈ ಪೀಠದ ಬದುಕು ಬಿಡುವಿಲ್ಲದಾಗಿದೆ" ಎಂದು ಸಾಹಿತ್ಯ ಸೃಷ್ಟಿಗೆ ಆದ ಅನಾನುಕೂಲತೆಯ ಬಗ್ಗೆ ಮರುಗುತ್ತಾರೆ. "ಪೂರ್ಣಜ್ಞ" ತ್ರಿಪದಿಯೊಳು ತಮ್ಮ ಕಷ್ಟ ನಷ್ಟ, ಭಕ್ತರ ಭಕ್ತಿ, ಭವಣೆ, ಮುಂದೊಂದು ಹೇಳಿ ಹಿಂದೆ ಇರಿವ ಕುಟಿಲರ ಕಥೆ, ನಿಸರ್ಗ ಸೌಂದರ್ಯ, ಗರತಿ, ಶಿವಯೋಗದ ಹಂಬಲ ಮೊದಲಾದವುಗಳನ್ನು ಹೃದಯಂಗಮವಾಗಿ ಚಿತ್ರಿಸಿದ್ದಾರೆ. ಜಗದ್ಗುರು ಪೀಠ ಹೊರ ನೋಟಕ್ಕೆ ಬಲು ಚೆಂದ, ಒಳ ಹೊಕ್ಕು ಅನುಭವಿಸಿದಾಗ ಅದರ ತೀಕ್ಷ್ಣತೆಯ ಅರಿವಾಗುತ್ತದೆ. "ಬುದ್ಧೀ ನಾನೇ ನಿಮ್ಮ ಮಠದ ಆಡಳಿತ ನೋಡುವೆ ನೀವು ಸಾಹಿತ್ಯ ರಚಿಸಿರೆಂದೆ." "ನೀವು ಮಠದ ಮ್ಯಾನೇಜರರಾದರೆ ಮೂರೊಪ್ಪತ್ತಿನಲ್ಲಿ ಮಠದೊಳು ನಾವು ನೀವು ಇಬ್ಬರೇ ಉಳಿಯುವೆವು" ಎಂದು ನಗತೊಡಗಿದರು ಸನ್ನಿಧಿಯವರು. ಮಠದೊಳು ಎಂತೆಂಥವರಿರುವರೆಂಬುದನ್ನು ಸೂಕ್ಷ್ಮವಾಗಿ ತಿಳಿಸಿದರು. ಅಂಥವರನ್ನು ಹೇಗೆ ಇವರು ಸುಧಾರಿಸಿಗೊಂಡು ಸಾಗುತ್ತಾರೆಂಬುದು ಇಂದಿಗೂ ಒಡೆಯದ ಒಗಟಾಗಿದೆ ಎನಗೆ. ಸನ್ನಿಧಿಯವರು ಸಾಹಿತಿಗಳಾಗಿರುವದರಿಂದ ಅವರ ಹೃದಯ ಬಹು ಮೃದು. ಅದಕ್ಕೆ ಅಂಗಾರದ ಬಿಸಿ ತಾಳಲಾಗದು ತೀರ್ಥದ ಹಸಿ ಸಹಿಸದು. ತಮ್ಮ ಮಠದಿಂದ ಒಳ್ಳೆಯ ಗ್ರಂಥಗಳಿಗೆ ಪ್ರತಿ ವರುಷ ಪುರಸ್ಕಾರ ನೀಡಿ ಶಾಲು ಹೊದಿಸಿ ಫಲಪುಷ್ಪ ಹಣವಿತ್ತು ಗೌರವಿಸುತ್ತಾರೆ. ಈ ಲೇಖಕಿಯ ನಾಲ್ಕು ಗ್ರಂಥಗಳನ್ನು ಮುದ್ರಿಸಿ ಬಿಡುಗಡೆ ಮಾಡಿದ್ದಾರೆ. ಅವರಿಗೆ ಸಾಹಿತ್ಯ ರಚಿಸುವದೇ ಶಿವ ಪೂಜೆ. ಪುಸ್ತಕಗಳನ್ನು ಓದುವದು ಶಿವಧ್ಯಾನ. ಅದಕ್ಕಾಗಿ ರವಿವಾರ ಮೀಸಲು. ಅಂದು ಪೂರ್ತಿ ಮೌನ. ಸಾಹಿತ್ಯದೊಳಗೆ ಮಗ್ನರು ಸಾಹಿತಿಗಳೊಡನಾಟವೇ ಅವರಿಗೆ ಶಿವಾನುಭವ.

ಶ್ರೀ ಸನ್ನಿಧಿಯವರಿಗೆ ಶಿವಯೋಗ, ಶಿವಾನುಭವವೆಂದರೆ ಪಂಚ ಪ್ರಾಣ. ೧೯೮೦ರೊಳು ಈ ಲೇಖಕಿ ಅನುಷ್ಠಾನ ಕೈಗೊಂಡಿದ್ದಳು, ೯ ತಿಂಗಳು. ಸಮಾಪ್ತಿಗೆ ಶ್ರೀ ಸನ್ನಿಧಿಯವರು ದಯಮಾಡಿಸಬೇಕೆಂಬ ಇಚ್ಛೆ ಬಲವಾಗಿದ್ದಿತು. ಮಠಕ್ಕೆ ಹೋಗಿ ಸನ್ನಿಧಿಯವರ ಮುಂದೆ ನನ್ನ ಬಯಕೆ ತಿಳಿಸಿದಾಗ "ಹೇಗೆ ಬರಲಿಮ್ಮ, ಮಠದ ಸಂಪ್ರದಾಯ ಪಾಲಕಿ, ಮೇಣೆಯ ಬಿನ್ನಹವಿಲ್ಲದೆ ಈ ಊರೊಳು ಯಾರ ಮನೆಗೂ ದಯೆ ಮಾಡಿಸುವಂತಿಲ್ಲ" ಎಂದರು. "ಬುದ್ಧಿ ಸಾಲವಾದರೂ ಪಾಲಕಿ ಬಿನ್ನಹ ಮಾಡಿ ಕರೆದೊಯ್ಯುತ್ತಿದ್ದೆ. ಆದರೆ ತಮ್ಮ ಮಠದಿಂದ 'ಶ್ರೀ ಕುಮಾರ ಕೃಪೆ' (ಮನೆ) ೭.೮ ಕಿಲೋ ಮೀಟರ ದೂರವಿದೆ. ಮೆರವಣಿಗೆ ಅಷ್ಟು ದೂರ ಬರಲು ಹೇಗೆ ಸಾಧ್ಯ" ಎಂದೆ. ಇಲಕಲ್ಲ ಶ್ರೀಗಳವರು "ಪಾಲಕಿ ಹೊತ್ತವರು ಮಧ್ಯದಲ್ಲಿಳಿಸಿ ಹೋದರೆ ಗತಿ ಏನು?" ಎಂದು ಚೇಷ್ಟೆ ಮಾಡಿದರು. "ಎರಡು ದಿನ ವೇಳೆ ಕೊಡಿರಿ ತಾಯಿ ವಿಚಾರಿಸಿ ಹೇಳುವೆ" ಎಂದು ಅಪ್ಪಣೆ ಮಾಡಿದರು. ಅರ್ಧ ನೆಮ್ಮದಿಯಿಂದ ಮನೆಗೆ ಬಂದೆ. ಮತ್ತೆರಡು ದಿನಗಳೆದು ಹೋದೆ ಆಗ ಶಿವಯೋಗಿ ಸಂಘದ ದ್ವಾದಶ ವಾರ್ಷಿಕೋತ್ಸವವಿತ್ತು. ಬಹು ಜನ ಗುರು ವಿರತರು ಸೇರಿದ್ದರು "ತಾಯಿ, ನೀನು ಅನುಷ್ಠಾನ ಮಾಡಿರುವ ಇಂದಿನ

ಸ್ವಾಮಿಗಳಿಗೂ ಅನುಷ್ಠಾನ ಮಾಡಲಾಗುವದಿಲ್ಲ. ನೀನು ಪ್ರಪಂಚದೊಳಗಿದ್ದು ಪಾರ ಮಾರ್ಥ ಸಾಧಿಸುತ್ತಿರುವೆ. ಗುರುವಿನಪ್ಪಣೆಯಾಗಿದೆ ನಿಮ್ಮ ಬಿನ್ನಹಕ್ಕೆ ಬರುವೆವು. ಆದರೆ.... ಸ್ವಾಮಿಗಳವರು ಬಹಳ ಜನವಿರುವರು...." ಎಂದು ಅಪ್ಪಣೆಯಾದಾಗ ಆದ ಸಂತಸ ವರ್ಣಿಸಲಸಾಧ್ಯ. "ಬುದ್ಧೀ ಎಲ್ಲ ಸ್ವಾಮಿಗಳನ್ನು, ಶಿವಯೋಗಿ ಸಂಘ ದವರನ್ನೂ, ಸೇವಾದವರನ್ನೂ ಎಲ್ಲರೂ ಬನ್ನಿರಿ" ಎಂದು ಸಾಷ್ಟಾಂಗ ಹಾಕಿದೆ. ಮಾರ ನೆಯ ದಿನ ಎಲ್ಲರೊಡಗೂಡಿ ಶ್ರೀ ಸನ್ನಿಧಿಯವರು ಕಾರಿನೊಳು ದಯ ಮಾಡಿಸಿದರು. ಅರ್ಚನ ಅರ್ಪಣ, ಅನುಭವವಾಯ್ತು. "ಯಾರಾದರೂ ಮಠದ ಸಾಂಪ್ರದಾಯ ಮುರಿದಿರೆಂದರೆ, ಅವರಿಗುತ್ತರಿಸುವೆ ಯಾರು ಕೋಟಿ ಕೋಟಿ ಜಪಗೈದು ಅನುಷ್ಠಾನ ಗೈಯುವವರ ಮನೆಗೆ ಪಾದಯಾತ್ರೆಯಿಂದ ಹೋಗುವೆನೆಂದು" ಹೃದಯದುಂಬಿ ಹೇಳಿ ದರು. ಅವರಿಗಿರುವ ಅನುಷ್ಠಾನದ ಒಲವು, ಶಿವಯೋಗದ ಬಲ, ಶಿವಾನುಭವದ ಹಂಬಲದರಿವಾಗದೇ ಇರದು.

೧೯೬೯ ರಲ್ಲಿ ನಮ್ಮ ಮಗನ ಮದುವೆಗೆ ಶ್ರೀ ಸನ್ನಿಧಿಯವರು ದಯೆ ಮಾಡಿಸಿ ದ್ದರು. ಪೂಜ್ಯ ಡಾ|| ಜ. ಚ. ನಿ. ಯವರು ಶ್ರೀ ಮ. ನಿ. ಪ್ರ ಹಾನಗಲ್ಲ ಸದಾಶಿವ ಮಹಾಸ್ವಾಮಿಗಳವರು, ಇಲಕಲ್ಲ ಮಹಂತ ಸ್ವಾಮಿಗಳವರು, ಮುರುಘಾ ಮಠದ ಮಹಂತಪ್ಪಗಳವರು ಮೊದಲಾದ ೧೮ ಜನ ಗುರು ವಿರತರು ದಯಮಾಡಿಸಿದ್ದರು. ಅಕ್ಷತಾರೋಪಣವಾದ ಮೇಲೆ ಶ್ರೀ ಸನ್ನಿಧಿಯವರು, ಜ. ಚ. ನಿ. ಯವರು, ಹಾನಗಲ್ಲ ಶ್ರೀಗಳವರು ಮೊದಲಾದವರು ಆಶೀರ್ವಚನ ನೀಡಿದರು. ಹುಬ್ಬಳ್ಳಿ ಶ್ರೀ ಸನ್ನಿಧಿಯವರು ಆಶೀರ್ವಚನ ನೀಡುತ್ತ "ನೀವೆಲ್ಲರೂ (೮.೧೦೦೦೦ ಜನ ಸೇರಿದ್ದರು) ಹತ್ತಿಪ್ಪತ್ತು ಮದುವೆ ಮಾಡಿರಬಹುದು. ನಾನು ನೂರಾರು ಮದುವೆಗೆ ಹೋಗಿದ್ದೇನೆ. ಮದುವೆಯ ಮನೆಯೊಳು ನಮಗೊಂದು ಆಸನ ನಿರ್ಮಿಸಿ, ಕೂಡ್ರಿಸಿ ಹೋದರೆಂದರೆ, ತಮ್ಮ ಗದ್ದಲ ದೊಳಗೆ ತಾವೇ ಇರುತ್ತಾರೆ. ಶ್ರೀಮತಿ ಶಿವಲಿಂಗಮ್ಮನ ಮಗ ಚಿ. ಪ್ರಭುವಿನ ಮದುವೆ ಹಾಗಲ್ಲ. ಮದುವೆ ಮಂಟಪ ಶಾಂತವಿದೆ ನಮ್ಮದೇ ಮಾತು ಸಾಗಿದೆ. ಶ್ರೀಮಠ ಗಳೊಳಗೆ ಗುರು ವಿರತರ ಸೇರಿಸುವದು ಸಾಧ್ಯವಾಗಲೊಲ್ಲದು. ಈ ಮದುವೆ ಮಂಟಪದ ವೇದಿಕೆಯ ಮೇಲೆ ಹದಿನೆಂಟು ಜನ ಗುರು ವಿರತರು ಸೇರಿ ಸಮನಾದ ಆಸನಗಳ ಮೇಲೆ ಮಂಡಿಸಿದ್ದೇವೆ. ಇದು ಕೇವಲ ಮದುವೆ ಮಂಟಪವಲ್ಲ ಗುರು ವಿರಕ್ತರ ಸಮ್ಮೇಲನ ವಾಗಿದೆ. ಇದು ಈ ದಂಪತಿಗಳ ಭಕ್ತಿಗೆ ಸಾಧ್ಯವಾಗಿದೆ. ಎಲ್ಲರ ಅರ್ಚನ ಅರ್ಪಣ ಅನುಭವಕ್ಕೆ ಬಹಳ ವ್ಯವಸ್ಥೆಯನ್ನು ಮಾಡಿದ್ದಾರೆ. ಇದು ಪ್ರಪಂಚದೊಳಿರ್ದು ಪಾರ ಮಾರ್ಥಸಾಧಿಸುವ ಕಲೆ. ಇಂಥಹ ಒಂದು ಯೋಗ ಹಿಂದೆಯೂ ದೊರೆತಿಲ್ಲ. ಮುಂದೆಯೂ ಸಂಶಯ. ಶುದ್ಧವಾದ ಜೀವನವೇ ಶಿವಯೋಗ, ಅದೇ ಶಿವಾನುಭವ"ವೆಂದು ೩೫ ನಿಮಿಷಗಳವರೆಗೆ ಹೃದಯತುಂಬಿ ಹೇಳಿದರು.

ಶಿವಯೋಗ ಮಂದಿರ, ಇಲಕಲ್ಲ, ಭೈರಾಪುಡಿಗೆ, ಬಾಗಲಕೋಟಿ, ಬೆಂಗಳೂರ ಮೊದಲಾದೆಡೆ ಶ್ರೀ ಸನ್ನಿಧಿಯವರ ಜತೆ ಸಭೆ ಸಮಾರಂಭಗಳಲ್ಲಿ ಪಾಲ್ಗೊಳ್ಳುವದು ದೊರೆತಿತ್ತು ಎನಗೆ. ಮಂದಿರಕ್ಕೆ ದಯಮಾಡಿಸಿದರೆ ತವರಿಗೆ ಬಂದಷ್ಟು ಸಂತಸ ಸನ್ನಿಧಿಗೆ. ತಮ್ಮ ಬಾಲ್ಯದ ನೆನಪುಗಳನ್ನು ಹೇಳುತ್ತಾರೆ. ಗದ್ದುಗೆಯ ಮೇಲೆ ಅಪಾರ ಭಕುತಿ. ವಟುಗಳ ಜತೆಗೆ ಬಹಳ ವಾತ್ಸಲ್ಯದಿಂದಿರುವರು. ಶಿವಮಂದಿರದ ಮೇಲ್ಮೆಗಾಗಿ ಹಗಲಿರುಳು ಚಿಂತನೆ. ಅಲ್ಲಿ ಗುರು ವಿರತರೆಂಬ ಭೇದವಿಲ್ಲ. ಎಲ್ಲರೂ ಆ ಕುಮಾರೇಶನ ಮಕ್ಕಳೇ. ಎಲ್ಲರಿಗೂ ತವರ ಮನೆಗೆ ಬಂದ ಆನಂದ. ೧೯೭೦ರನೆಯ ಸಾಲಿನಲ್ಲಿ ಶ್ರೀ ಸನ್ನಿಧಿಯವರ ೧೬೩ ಗುರು ವಿರಕ್ತರೊಂದಿಗೆ ಹುಬ್ಬಳ್ಳಿ ಶ್ರೀ ಮಠದಿಂದ ಶಿವಯೋಗ ಮಂದಿರದ ವರೆಗೆ ಪಾದಯಾತ್ರೆ ಮಾಡಿ ಜನ ಜಾಗೃತಿ ಮಾಡಿದರು. ಅಲ್ಲಲ್ಲಿಗೆ ಅರ್ಚನಾರ್ಪಣಾನುಭವ ಸರಾಗವಾಗಿ ಸಾಗುತ್ತಿತ್ತು. ವಚನ ಪಟಗಳ ಬಿಡುಗಡೆ, ಪುಸ್ತಕಗಳ ಬಿಡುಗಡೆ, ಕೀರ್ತನ ಕಾರರು ಬಾಜಾ ಭಜಂತ್ರಿಯವರು, ತಾಳ ಮೇಳದವರು, ಎಲ್ಲರಿಗೂ ಪ್ರಸಾದದ ಶಿವ ಪೂಜೆಯ ವ್ಯವಸ್ಥೆ, ಬಹಳ ಸುಂದರವಾದ ಐತಿಹಾಸಿಕ ಘಟನೆ ಇದು. ಕಾವಿ ಧರಿಸಿದವ ರೆಲ್ಲರೂ ಸಾಲಾಗಿ ಹೊರಟರೆ ಶಾಂತಿ, ಸಾತ್ವಿಕ, ಅಹಿಂಸೆ, ತ್ಯಾಗದ ಸಾಕಾರ ರೂಪವೇ ಮೈದಳೆದು ರೈಲು ಸಾಗಿದಂತೆ ಕಾಣುವವರ ಕಂಗಳಿಗೆ ಕಂಗೊಳಿಸುತ್ತಿತ್ತು. ಮಂದಿರ ತಲುಪಿ ಶ್ರೀ ಗದ್ದುಗೆ ಅಭಿಷೇಕ ಗಣಾರಾಧನೆ ಸಾಯಂಕಾಲ ಶಿವಾನುಭವ ಮಾಡಿ ಸಂತಸ ಪಟ್ಟರು.

ಎಲ್ಲ ಶ್ರೀಗಳವರು ಶ್ರೀ ಮಠದೊಳು ಸೇರಿದಾಗ ಚೇಷ್ಟೆ ಮಾಡಿ ನಗುವದೇ ಒಂದು ಶಿವಾನುಭವ ಸನ್ನಿಧಿಯವರಿಗೆ. ಇಲಕಲ್ಲ ಶ್ರೀಗಳವರು "ನೀವು ಕಾಶಿಯಲ್ಲಿ ವಿದ್ಯೆ ಕಲಿತದ್ದು ಇಲಕಲ್ಲ ಮಠದ ಖರ್ಚಿನಿಂದ. ಅಂದಿನಿಂದ ಈವರೆಗೆ ಆ ಹಣಕ್ಕೆ ಬಡ್ಡಿ ಹಾಕಿ ಕೊಡಿರಿ" ಎಂದರೆ, ಸನ್ನಿಧಿಯವರು ನಗುತ್ತ "ಇಲಕಲ್ಲದವರು ಹುಬ್ಬಳ್ಳಿಗೆ ಬಿಟ್ಟು ಕೊಟ್ಟಿರಿ, ಅದಕ್ಕೆ ನಾನೇನು ಮಾಡಲಿ? ಹುಬ್ಬಳ್ಳಿ ಮಠದಿಂದಲೂ ಸಾಕಷ್ಟು ಸೇವೆ ಸಂದಿದೆ ನಿಮ್ಮ ಮಠಕ್ಕೆ, ಜಗಳ ಕಾಯುವ ದಾರಿ" ಎಂದು ಚೇಷ್ಟೆ ಮಾಡುವರು. ಪ್ರಸಾದಕ್ಕೆ ಕೂತರೆ ಎಲ್ಲರಿಗೂ ಬಹಳ ಜುಲುಮೆಯಿಂದ ಎಡೆ ಮಾಡಿಸುವರು, ಅಂಗಸ್ಥ ಗಣಾಧೀಶ್ವರರು ನಾವೆಲ್ಲ ಅನುಮಾನವೇಕೆ? ತೆಗೆದುಕೊಳ್ಳಿರಿ ಎಂದು ಬೆಟ್ಟು ಕಟ್ಟುವಂತೆ ಪ್ರಚೋದಿಸುವದು ಹೆಚ್ಚೆಚ್ಚು ಪ್ರಸಾದ ತೆಗೆದುಕೊಂಡಂತೆ ಬಹಳ ಖುಷಿಯಿಂದ ನಗುವರು. ಗೊಗ್ಗಿಹಳ್ಳಿ ಶಿವಾಚಾರ್ಯರಿಗೆ "ಎಂಥ ಹರಕ ಅಂಗಿ ಹಾಕ್ಕೊಂಡು ಬರ್ತಿರೆಪಾ ಸಂಸ್ಥಾನ ಮಠದವರು?" ಎಂದು ನಗುತ್ತ ಸ್ವಲ್ಪ ತೂತು ಬಿದ್ದರೆ ಬೆರಳಿಟ್ಟು ಹರಿದು ನಗುವರು. "ಶಿವಾಚಾರ್ಯರು ಬಹಳ ಸಂಪನ್ನರು, ಶಿವಯೋಗ ಸಾಧಿಸಿದವರು ತಮ್ಮಂಥವರು ನಮ್ಮ ಮಠದಾಗ ಶಿವಪೂಜೆ ಮಾಡಬೇಕ್ರೆಪಾ, ನಾವಂತು ಕಾಯಕದೊಳು ಮಗ್ನರಾಗೇವಿ, ನೀವು ಭಕ್ತರ ಮನೆಗೆ ಬಿನ್ನಹಕ್ಕೆ ಏಕೆ ಹೋಗ್ತಿರೆಪಾ?" ಎಂದು ಪ್ರಶ್ನಿಸುವರು. "ಬುದ್ಧೀ,

ಭಕ್ತರಿಗೆ ಜಂಗಮರ ಕೊರತೆ ನಿಮಗೇನು? ಅವರೆಲ್ಲರೂ ದಯೆಮಾಡಿಸಲ್ರಿಪಾ ಮನೆಗೆ" ಎನುವೆ. "ನೀನು ಇಲ್ಲಿಗೆ ಬಂದು ಬಿಡಪ್ಪ, ಶಿವಾನುಭವ ಚೆಂದಾಗಿ ಸಾಗತೈತಿ" ಎಂದು ಅಪ್ಪಣೆ ಮಾಡುವರು. ಸ್ವಾಮಿಗಳಿಗೆ ಯಾರಿಗಾದರೂ ಆರೋಗ್ಯ ಸರಿ ಇರದಿದ್ದರೆ, ಅವರವರ ಆಚಾರ ತಕ್ಕಂತೆ ಮಠದೊಳಗೆ ಅವರಿಗೆ ಉಪಚಾರ ಮಾಡಿಸುವರು.

ಶ್ರೀ ಸನ್ನಿಧಿಯವರು ಯಾವ ಸಭೆ ಸಮಾರಂಭಕ್ಕೆ ಹೋದರೂ ಅಲ್ಲಿಯ ಕಾರ್ಯಕರ್ತರ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತ ಪಡಿಸುವರು. ಅಲ್ಪವಿದ್ದರೂ ಮಹಾನ್‌ವಾಗಿ ಕಾಣುವದು ಅವರ ಹಿರಿಯ ಗುಣ. ಅಲ್ಲಿಯ ಸಂದರ್ಭಾನುಸಾರವಾಗಿ ಆಶೀರ್ವಚನ ನೀಡಿದರು, ಕೊನೆಗೆ ಶಿವಯೋಗ ಶಿವಾನುಭವದಿಂದಲೇ ನಮಗೆ ದೇಶಕ್ಕೆ ಶಾಂತಿ ಸಮಾಧಾನವೆಂದು ಸಮಾಪ್ತಿಗೊಳಿಸುವರು. ಇವರು ಭಾಗವಹಿಸಿದಷ್ಟು ಸಭೆ ಸಮ್ಮೇಲನ ಗಳಲ್ಲಿ ಯಾವ ಸ್ವಾಮಿಗಳೂ ಪಾಲ್ಗೊಂಡಿಲ್ಲವೆಂದರೆ ಅತಿಶಯೋಕ್ತಿಯಾಗದು. ಶಿವಾನುಭವದ ಬಗ್ಗೆ ನಿರರ್ಗಳವಾಗಿ ಹೇಳಿ "ನನಗೂ ಶಿವಾನುಭವದೊಳಿರುವ ಮನವಿದೆ. ಈ ಮಠದ ಭಾರ ಉತ್ತರಾಧಿಕಾರಿಗೊಪ್ಪಿಸಿ ಶಿವಯೋಗಾನುಸಂಧಾನದೊಳುಳಿವೆ" ಎಂದು ಮುಗಿಸುವರು. ಆದರೆ ಅವರು ಕಾಯಕಯೋಗಿ. ಒಂದೇ ಕಾಯಕವಲ್ಲ. ಹಲವಾರು ಕಾಯಕ. ಅವೆಲ್ಲವುಗಳನ್ನೆಲ್ಲ ನಗೆ ಮುಖದಿಂದ ನಿರ್ವಹಿಸುತ್ತಾರೆ. ಕಟ್ಟಡ ಕಲ್ಪಿಸುವ ಕಾಯಕ ಬಹು ಪ್ರಿಯವಾದುದು. "ಇನ್ನು ಹತ್ತು ಅಂತಸ್ತು ಕಟ್ಟಿಸಿರೆಂದರೆ, ಸಂತೋಷ ದಿಂದ ಕಟ್ಟಿಸಿ ಕೊಡುವೆ ಆದರೆ ಕಟ್ಟಡದೊಳಗಿನವರ ತರಲೆ ತಂಟೆ ಬಂದರೆ (ಹೈಸ್ಕೂಲ, ಕಾಲೇಜ, ಬ್ಯಾಂಕ, ಅಂಗಡಿ ಮೊದಲಾದವುಗಳು) ತಲೆ ಕೆಟ್ಟು ಹೋಗುತ್ತದೆ. ಇವರ ಅಸಹಕಾರ, ಸಣ್ಣ ಬುದ್ಧಿ, ಮತ್ಸರ, ಹೀನತೆಗೆ ಬೇಜಾರೆನಿಸುತ್ತದೆ. ಗುರುಸಿದ್ಧೇಶನ ಕೃಪೆಯಿಂದ ಗುಡ್ಡದಂತೆರಗಿದ ಆಪತ್ತುಗಳು ಕಡ್ಡಿಯಂತೆ ಕರಗಿ ಹೋಗುತ್ತವೆ" ಎನ್ನುವರು. ಅವರ ಹಸ್ತದೊಳು ಸರಸ್ವತಿ ಲಕ್ಷ್ಮೀ ನಾ ಮುಂದು ನೀ ಮುಂದು ಎಂದು ಕುಣಿವರು. ಅವರಿಬ್ಬರನ್ನು ಅಷ್ಟೇ ಜಾಣಾಕ್ಷತೆಯಿಂದ ಬಳಸಿಕೊಳ್ಳುತ್ತಾರೆ.

ಕಾಯಕ ಶಿವಾನುಭವ ಒಂದೇ ನಾಣ್ಯದ ಎರಡು ಮುಖಗಳು. ಕಾಯಕದ ಸಾಕಾರ ರೂಪವೇ ಶ್ರೀ ಸನ್ನಿಧಿಯವರೆಂದರೆ ಹೆಚ್ಚೇನಲ್ಲ. ಕಾಯಕದೊಳಗೆ ಗುರು ದರುಶನ ಪಡೆವರು. ಕಾಯಕದೊಳು ಲಿಂಗ ಪೂಜೆಯಾಗುವದು. ಕಾಯಕದೊಳು ಸಂತೃಪ್ತಿ ಪಡೆದು ಚರದಾಸೋಹ ಮಾಡುವರು. ಶುದ್ಧ ಕಾಯಕದಿಂದ ಶಿವನನ್ನೇ ಮಗನಾಗಿ, ಪತಿಯಾಗಿ, ತಂದೆಯಾಗಿ ಕೊನೆಗೆ ಆಳಾಗಿ ದುಡಿಸಿಗೊಂಡವರುಂಟು ಶರಣರು. "ವೃತ್ತಿ ಶ್ಚೈತನ್ಯ ರೂಪಿಣೀ" ಎಂದು ಶಿವಯೋಗಿ ಶಿವಾಚಾರ್ಯರು ಎಂಟನೆಯ ಶತಮಾನದೊಳು ಸಾರಿದ್ದಾರೆ. "ಕಾಯಕ ಕೈಲಾಸ"ವೆಂದು ಹನ್ನೆರಡನೆಯ ಶತಮಾನದೊಳು ಶರಣರು ಸಾರಿದ್ದಾರೆ. ಇಂದು "ಕಾಯಕವೇ ಕಲಾಚೈತನ್ಯ"ವೆಂದು ಡಾ. ಜ. ಚ. ನಿ. ಯವರು ಸಾರಿದ್ದಾರೆ, ಸಾರುತ್ತಲಿದ್ದಾರೆ. ಅವರೆಲ್ಲರು ಸಾರಿದ ಸಾಕಾರ ರೂಪ ಕಾಣಬೇಕು

ಶ್ರೀ ಸನ್ನಿಧಿಯವರಲ್ಲಿ. ಶ್ರೀ ಮನ್ಮಹಾರಾಜ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾ ಸನ್ನಿಧಿಯವರಿಗೆ ಕಾಯಕವೇ ಶಿವಪೂಜೆ ಕಾಯಕವೇ ಶಿವಯೋಗ. ಅವರ ದೃಷ್ಟಿಯೊಳು ಕಾಯಕವೇ ಶಿವಾನುಭವ. ಅರವತ್ಮೂರರ ಅರುಹಿನ ಹಬ್ಬದೊಳು, ಫಲ ಪಕ್ವವಾಗಿ ತೊಟ್ಟು ಬಿಡುವಲ್ಲಿ ತನಗೆ ಬೇಕೆಂದು ಗುರು ಸಿದ್ಧೇಶ ತನಗೆ ಬೇಕೆಂದೆತ್ತಿಕೊಂಡಿರುವ ಆ ಅನುಭವವೇ ಶಿವಾನುಭವ.

ಪೂಜೆ ಹಾಗೂ ಪ್ರಸಾದ

—ಶ್ರೀ ಎಸ್. ಎಸ್. ಕವಡೊಳ್ಳಿ ಶೆಟ್ರು

ಶ್ರೀ ಮೂರುಸಾವಿರಮಠದ ಶ್ರೀ ಜಗದ್ಗುರುಗಳಾದ ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಸಾಹಿತ್ಯ ರಂಗದಲ್ಲಿ ಅಮೋಘವಾದ ಸೇವೆಯನ್ನು ಸಲ್ಲಿಸಿ ಇಡೀ ಕನ್ನಡನಾಡಿಗೆ ಭಾರತ ದೇಶಕ್ಕೆ ಚಿರಪರಿಚಿತರಾಗಿದ್ದಾರೆ. ಲಿಂ. ಹಾನಗಲ್ ಕುಮಾರಸ್ವಾಮಿಗಳ ನಡೆದು ಹೋದ ದಾರಿಯಲ್ಲಿ ಮುನ್ನಡೆದು ಸಮಾಜದ ಅಭಿವೃದ್ಧಿಗಾಗಿ ಹಗಲಿರುಳು ದುಡಿದು ಅವರ ಕನಸನ್ನು ನನಸನ್ನಾಗಿ ಮಾಡುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ತವ್ಯವೇ ದೇವರೆಂದು ನಂಬಿರುವ ಜಗದ್ಗುರುಗಳು ಅನೇಕ ಯೋಜನೆಗಳನ್ನು ಹಮ್ಮಿಕೊಂಡು ಅವಿಶ್ರಾಂತವಾಗಿ ದುಡಿದು ಅವುಗಳನ್ನು ಪರಿಪೂರ್ಣಗೊಳಿಸಿ ಶ್ರೀ ಮಠದ ಘನತೆಯನ್ನು ಹೆಚ್ಚಿಸಿದ್ದಾರೆ. ಇವರು ಕಟ್ಟಿಸಿದ ಕಟ್ಟಡಗಳು ಸ್ಥಾಪಿಸಿದ ಶಾಲೆ ಕಾಲೇಜುಗಳು ಇವರಿಂದ ಸಹಾಯ ಪಡೆದ ಸಂಘ ಸಂಸ್ಥೆಗಳು ಇವರ ಮಾರ್ಗದರ್ಶನದಲ್ಲಿ ಶಿವಯೋಗ ತತ್ವದಲ್ಲಿ ಪರಿಪೂರ್ಣಗೊಂಡು ದೇಶದ ನಾನಾ ಮಠಗಳ ಅಧಿಕಾರವನ್ನು ಹೊಂದಿದ ಮಠಾಧೀಶರೇ. ಶ್ರೀ ಜಗದ್ಗುರುಗಳ ಕರ್ತೃತ್ವ ಶಕ್ತಿಯ ಪ್ರತೀಕವಾಗಿದ್ದಾರೆ. ಇಂಥ ಮಹಾನ್ ಪುರುಷನ ಷಷ್ಟ್ಯಬ್ದಿ ಸಂಸ್ಮರಣೆಯ ಅಭಿನಂದನ ಮಹಾ ಸಂಪುಟ ಹೊರಬರುತ್ತಿರುವದು ತುಂಬಾ ಅಭಿಮಾನಾಸ್ಪದ ಸಂಗತಿಯಾಗಿರುತ್ತದೆ. ಮಹಾನ್ ಪುರುಷರ ಬಗ್ಗೆ ಬರೆದ ಗ್ರಂಥಗಳು ಚರಿತ್ರೆಗಳು ಐತಿಹಾಸಿಕವಾಗುಳಿದು ಮುಂದಿನ ಪೀಳಿಗೆಗೆ ಮಾರ್ಗದರ್ಶನವಾಗುತ್ತವೆ. ಸದ್ಯದಲ್ಲಿ ಹೊರಬರುವ ಸಂಪುಟದಲ್ಲಿ ಶ್ರೀ ಜಗದ್ಗುರುಗಳ ಸಮಗ್ರ ಜೀವನದ ದೃಷ್ಟಾಂತ ಹಾಗೂ ಅವರ ಬಹುಮುಖದ ವ್ಯಕ್ತಿತ್ವದೊಂದಿಗೆ ಹೊರಬರಲೆಂದು ಹೃದಯಾರೆ ಹಾರೈಸುತ್ತೇವೆ.

ಶ್ರೀ ಜಗದ್ಗುರುಗಳ ಮುಂಧೋರಣೆ:

ಶ್ರೀ ಜಗದ್ಗುರುಗಳವರು ಯಾವಾಗಲೂ ದೂರದೃಷ್ಟಿಯುಳ್ಳವರೂ, ಆಳವಾಗಿ ಚಿಂತನೆಯುಳ್ಳವರೂ ಆಗಿದ್ದಾರೆ. ಅವರು ಯಾವದೇ ಕೆಲಸವನ್ನು ಅವಸರದಿಂದ ಮಾಡದೇ, ಪ್ರತಿಯೊಂದು ದೃಷ್ಟಿಯಿಂದ ಪರಿಶೀಲಿಸಿ ಹಾಗೂ ಪ್ರತಿಯೊಬ್ಬರ ಸಲಹೆ ಸೂಚನೆಗಳನ್ನಾಲಿಸಿ ಯೋಜನೆಯನ್ನು ಹಾಕಿಕೊಳ್ಳುತ್ತಾರೆ. ಒಮ್ಮೆ ನಿರ್ಧರಿಸಿದ ಯೋಜನೆಗಳಿಗೆ ಎಷ್ಟೇ ಎಡರು ತೊಡರು ಬಂದರೂ, ಅವುಗಳನ್ನು ಲೆಕ್ಕಿಸದೇ ಪರಿಶ್ರಮಿಸಿ ಯಶಸ್ವಿಗೊಳಿಸುತ್ತಾರೆ. ಇಂಥ ಅನೇಕ ಯೋಜನೆಗಳಲ್ಲಿ ಒಂದಾದ 'ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪೂಜಾಸೇವಾ ಸಮಿತಿ' ಎಂಬ ಯೋಜನೆಯು ನಾಡಿನಾದ್ಯಂತ ಜನಪ್ರಿಯ

ವಾಗಿ ನಾಡಿನ ಜನರನ್ನು ತುಂಬಾ ಆಕರ್ಷಿಸಿದೆ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರ ಹಾಗೂ ತಮಿಳುನಾಡಿನಲ್ಲಿಯೂ ಸಹ ತುಂಬಾ ಜನಪ್ರಿಯವಾಗಿದೆ. ಇಂದು ಎಲ್ಲಿ ನೋಡಿದಲ್ಲಿ ತೀರ್ಥಕ್ಷೇತ್ರಗಳಲ್ಲಿ, ದೇವಸ್ಥಾನಗಳಲ್ಲಿ ಮಠ ಮಂದಿರಗಳಲ್ಲಿ ಈ ಯೋಜನೆಗಳು ಕಂಡು ಬರುತ್ತಿವೆ. ಈ ಯೋಜನೆಯ ಶ್ರೇಯಸ್ಸೆಲ್ಲವೂ ಶ್ರೀ ಜಗದ್ಗುರುಗಳಿಗೆ ಸಲ್ಲುತ್ತದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯಾಕೆಂದರೆ ೧೫ ವರ್ಷಗಳ ಹಿಂದೆಯೇ ಪ್ರಪ್ರಥಮವಾಗಿ ಈ ಯೋಜನೆಯನ್ನು ಕಂಡು ಹಿಡಿದು ನಾಡಿಗೆ ಪರಿಚಯಿಸಿದ್ದಕ್ಕಾಗಿ ಇಂದು ನಾಡಿನ ಜನ ಶ್ರೀ ಜಗದ್ಗುರುಗಳಿಗೆ ಋಣಿಯಾಗಿದ್ದಾರೆ.

ಭಕ್ತರಲ್ಲಿ ಶ್ರೀ ಜಗದ್ಗುರುಗಳ ವಿಶ್ವಾಸ:

ಶ್ರೀ ಜಗದ್ಗುರುಗಳು ಭಕ್ತರಲ್ಲಿ ಅಪಾರ ನಂಬುಗೆ ಪ್ರೀತಿ ವಿಶ್ವಾಸವುಳ್ಳವರಾಗಿದ್ದಾರೆ. "ಭಕ್ತರಿಲ್ಲದ ಮಠ ಮಕ್ಕಳಿಲ್ಲದ ಮನೆ" ಎಂದು ಎಷ್ಟೋ ಸಾರೆ ಹೇಳುವದನ್ನು ಕೇಳಿದ್ದೇವೆ. ಭಕ್ತರ ಸಹಾಯ ಮತ್ತು ಸಹಕಾರ ಮಠದ ಪ್ರಗತಿಗೆ ಅತ್ಯವಶ್ಯವೆಂದು ತಿಳಿದು, ಜಗದ್ಗುರುಗಳು ಯಾವದೇ ಕೆಲಸ ಮಾಡುವ ಪೂರ್ವದಲ್ಲಿ ಭಕ್ತರಿಗೆ ತಿಳಿಸಿ ಅವರ ಸಲಹೆಗಳನ್ನು ತೆಗೆದುಕೊಳ್ಳುತ್ತಾರೆ. ಇದರಿಂದಾಗಿ ಮಠದ ಮೇಲೆ ಭಕ್ತರ ಅಭಿಮಾನ ಹಾಗೂ ಭಕ್ತಿ ಶ್ರದ್ಧೆಗಳು ಹೆಚ್ಚುತ್ತಿವೆ. ಶ್ರೀಮಠದಿಂದ ಸ್ಥಾಪಿತವಾದ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸಂಘ ಸಂಸ್ಥೆಗಳು ಭಕ್ತರ ಮೇಲ್ವಿಚಾರದಲ್ಲಿ ನಡೆಯಬೇಕೆಂಬ ಉದ್ದೇಶದಿಂದ ಮಠದ ಸಂಸ್ಥೆಗಳನ್ನು ವಿಭಾಗಿಸಿ ಅವುಗಳಿಗೆ ಭಕ್ತರನ್ನೊಳಗೊಂಡ ಆಡಳಿತ ಸಮಿತಿಗಳನ್ನು ಮಾಡಿ ಭಕ್ತರ ಆಡಳಿತಕ್ಕೆ ಒಪ್ಪಿಸಿದ್ದಾರೆ ಮತ್ತು ಪ್ರತಿಯೊಂದು ಸಮಿತಿಗಳಿಗೆ ಶ್ರೀ ಮಠದ ಸ್ಥಿರಚರ ಆಸ್ತಿಗಳನ್ನೂ ಹಾಗೂ ಆರ್ಥಿಕ ಸಹಾಯವನ್ನು ನೀಡಿ ಭದ್ರವಾದ ತಳಪಾಯವನ್ನು ಹಾಕಿದ್ದಾರೆ ಹಾಗೂ ಮಾರ್ಗದರ್ಶನ ಮಾಡುತ್ತಿದ್ದಾರೆ. ಈ ಸಂಸ್ಥೆಗಳಿಂದ ಬರುವ ಉತ್ಪನ್ನವು ಆಯಾ ಸಂಸ್ಥೆಗಳಿಗೆ ವಿನಿಯೋಗವಾಗಬೇಕೆಂದೂ, ಅದನ್ನು ಮಠದ ಅಧ್ಯಕ್ಷರಾದಿಯಾಗಿ ಯಾರೂ ಈ ಹಣವನ್ನು ಬಳಸಿಕೊಳ್ಳತಕ್ಕದ್ದಲ್ಲ ಎಂದು ನಿಯಮವನ್ನು ಹಾಕಿದ್ದು ಜಗದ್ಗುರುಗಳ ಮನಸ್ಸಿನ ವಿಶಾಲತೆಯ ಸಂಕೇತವಾಗಿದೆ. ಇದರಿಂದ ಉತ್ಸಾಹಗೊಂಡ ಭಕ್ತರು ತಮಗೆ ವಹಿಸಿಕೊಟ್ಟ ಕೆಲಸಗಳನ್ನು ತನುಮನಧನದಿಂದ ಸೇವೆ ಸಲ್ಲಿಸಿ ಶ್ರೀ ಜಗದ್ಗುರುಗಳ ಕರುಣೆಗೆ ಪಾತ್ರರಾಗಿದ್ದಾರೆ. ಶ್ರೀ ಜಗದ್ಗುರುಗಳು ಸ್ಥಾಪಿಸಿದ ಅನೇಕ ಸಮಿತಿಗಳಲ್ಲಿ "ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪೂಜಾ ಸೇವಾ ಸಮಿತಿ"ಯು ಸಹ ಒಂದಾಗಿರುತ್ತದೆ.

ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪೂಜಾ ಸೇವಾ ಸಮಿತಿ:

ಭಕ್ತರಲ್ಲಿ ಧಾರ್ಮಿಕ ಶ್ರದ್ಧೆ ಬೆಳೆಯಬೇಕೆಂದೂ ಹಾಗೂ ಕರ್ತೃ ಗದ್ದುಗೆಗೆ ಚಿರಕಾಲ ವೈಭವದಿಂದ ಭಕ್ತರಿಂದ ಪೂಜೆ ಸಲ್ಲಬೇಕೆಂಬ ಉದ್ದೇಶದಿಂದ ಈ ಸಮಿತಿಯನ್ನು ೧೯೭೪ರಲ್ಲಿ ಪ್ರಾರಂಭಿಸಿದರು. ಶ್ರೀ ಮಠದ ಕರ್ತೃ ಗದ್ದುಗೆಗೆ ಯಾವುದೇ ಕಾಲಕ್ಕೆ ಯಾವುದೇ ರೀತಿಯಿಂದ ತೊಂದರೆಯಾಗದ ಹಾಗೆ ಪ್ರತಿ ದಿವಸ ಏಕಾದಶ ರುದ್ರಾಭಿಷೇಕ

ಜರುಗಲು ಆರ್ಥಿಕ ಭದ್ರತೆಯನ್ನು ಒದಗಿಸಲು ಈ ಸಮಿತಿಯನ್ನು ಸ್ಥಾಪಿಸಿದರು. ಧರ್ಮಾಭಿಮಾನಿಗಳಾದ ೩೬೫ ಭಕ್ತರಿಂದ ಒಂದೊಂದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಅವರನ್ನು ಸಮಿತಿಯ ಶಾಶ್ವತ ಸದಸ್ಯರನ್ನಾಗಿ ಮಾಡಿ ಅವರು ಕೊಟ್ಟಂತ ಹಣವನ್ನು ಸರಕಾರದಿಂದ ಮನ್ನಣೆ ಪಡೆದ ಬ್ಯಾಂಕಿನಲ್ಲಿ ಠೇವಣಿಯನ್ನಾಗಿಟ್ಟು ಅದರಿಂದ ಬರುವ ಬಡ್ಡಿಯಿಂದ ವರ್ಷಕ್ಕೆ ಒಂದುಸಲ ಭಕ್ತರ ಹೆಸರಿನಲ್ಲಿ ವಂಶಪಾರಂಪರ್ಯವಾಗಿ ನಿರಂತರವಾಗಿ ಕರ್ತೃ ಗದ್ದುಗೆಗೆ ಪೂಜೆ, ಶಿವಯೋಗಿ ಸಂಘದ ಸಾಧಕರಿಗೆ ಹಾಗೂ ಆ ದಿವಸ ಪೂಜೆ ಮಾಡಿಸಿದ ಭಕ್ತ ವೃಂದಕ್ಕೆ ಅನ್ನಪ್ರಸಾದ ನೀಡುವ ಯೋಜನೆಯನ್ನು ಭಕ್ತರ ಮುಂದಿಟ್ಟಾಗ, ಸ್ಥಳೀಯ ಹಾಗೂ ಪರಸ್ಥಳದ ಮತ್ತೂ ವಿದೇಶದಲ್ಲಿದ್ದ ಭಕ್ತರು ತುಂಬು ಹೃದಯದಿಂದ ಸ್ವಾಗತಿಸಿ ಕೆಲವೇ ದಿವಸಗಳಲ್ಲಿ ೩೬೫ ಭಕ್ತರು ಈ ಸಮಿತಿಯ ಸದಸ್ಯರಾದರು. ಈ ಸಮಿತಿಯ ಆಡಳಿತವನ್ನು ಸಮಿತಿಯವರೇ ನಿರ್ವಹಿಸಬೇಕೆಂದು ನಿರ್ಧರಿಸಿ, ಸಮಿತಿಯ ಸದಸ್ಯರಲ್ಲಿ ೧೫ ಜನರ ಮೇಲ್ವಿಚಾರಕ (ಕಾರ್ಯಕಾರಿ ಮಂಡಳ) ಸಮಿತಿಯನ್ನು ಮಾಡಿ ತಾವು ಅಧ್ಯಕ್ಷರಾಗಿ ಕಳೆದ ೧೫ ವರ್ಷಗಳಿಂದ ಮಾರ್ಗದರ್ಶನ ಮಾಡುತ್ತಿದ್ದಾರೆ. ಸಮಿತಿಯ ಉದ್ದೇಶ ಹಾಗೂ ಕಾರ್ಯ ವೈಖರಿಯನ್ನು ನೋಡಿದ ಜನರು ಆಸಕ್ತರಾಗಿ ಸಮಿತಿಯ ಸದಸ್ಯರಾಗುತ್ತಿದ್ದಾರೆ. ಇಂದು ಈ ಸಮಿತಿಯ ಸದಸ್ಯರ ಸಂಖ್ಯೆ ೫೦೦ಕ್ಕೂ ಹೆಚ್ಚಿದ್ದರಿಂದು ಈಗ ಒಂದೊಂದು ದಿವಸ ಇಬ್ಬರ ಪೂಜೆಯಾಗುತ್ತಿರುವದು ಹೆಮ್ಮೆಯ ವಿಷಯವಾಗಿರುತ್ತದೆ. ಪ್ರತಿ ದಿವಸ ಬರುವ ಪೂಜಾರ್ಥಿಗಳ ಸ್ನಾನಕ್ಕೆ ಲಿಂಗಪೂಜೆಗೆ ಹಾಗೂ ವಿಶ್ರಾಂತಿಗಾಗಿ ಒಂದು ಚಿಕ್ಕ ಗೃಹವನ್ನು ಕಟ್ಟಿಸಿದ್ದಲ್ಲದೇ ಪ್ರಸಾದ ನಿಲಯವನ್ನು ನವೀಕರಿಸಿ, ಶ್ರೀ ಕರ್ತೃ ಗುರುಸಿದ್ಧೇಶ್ವರರ ಭಕ್ತಿಯ ಗೀತೆಗಳೊಂದಿಗೆ ಪ್ರಸಾದ ಸ್ವೀಕರಿಸುವ ವ್ಯವಸ್ಥೆಯನ್ನು ಮಾಡಿದ್ದಾರೆ.

ಪ್ರತಿದಿವಸ ಬೆಳಿಗ್ಗೆ ೬ ಘಂಟೆಗೆ ಭಕ್ತರ ಹೆಸರಿನಿಂದ ಸಂಕಲ್ಪದೊಂದಿಗೆ ಪ್ರಾರಂಭವಾದ ಪೂಜೆಯು ಶಾಸ್ತ್ರೋಕ್ತವಾಗಿ ಮೈಸೂರು ಪದ್ಧತಿಯಲ್ಲಿ ವೈದಿಕರಿಂದ ಏಕಾದಶ ರುದ್ರಾಭಿಷೇಕ, ರುದ್ರಪಠಣ, ಅಷ್ಟೋತ್ತರ ಶತನಾಮಾವಳಿ, ಭಕ್ತಿಗೀತೆ ಹಾಗೂ ಮಹಾ ಮಂಗಳಾರತಿಯು ಸಕಲ ಮಂಗಳ ವಾದ್ಯಗಳೊಂದಿಗೆ ಮಧ್ಯಾಹ್ನ ೧೨-೩೦ ಘಂಟೆಯ ವರೆಗೆ ವಿಜೃಂಭಣೆಯಿಂದ ಜರಗುವ ಪೂಜೆಯು ಭಕ್ತರ ಕಣ್ ಮನವನ್ನು ತಣಿಸಿ, ಭಕ್ತಿಯ ಭಾವವನ್ನು ಹೆಚ್ಚಿಸಿ, ಭಕ್ತರ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಮಂಗಳಾರತಿ ನಂತರ ಪೂಜೆ ಮಾಡಿಸಿದ ಭಕ್ತರಿಗೆ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಫಲ ಪುಷ್ಪಗಳ ಪ್ರಸಾದದ ಆಶೀರ್ವಾದವನ್ನು ನೀಡಿದ ನಂತರ ಶಿವಯೋಗಿ ಸಂಘದ ಸಾಧಕರೊಂದಿಗೆ ಸುಗ್ರಾಸ ಭೋಜನದೊಂದಿಗೆ ಪ್ರತಿದಿವಸದ ಪೂಜೆಯ ಕಾರ್ಯಕ್ರಮ ಮುಕ್ತಾಯವಾಗುತ್ತವೆ. ಪೂಜೆ ಹಾಗೂ ಅನ್ನಪ್ರಸಾದದಿಂದ ಸಂತೋಷಭರಿತರಾದ ಭಕ್ತರು ತಾವು ಮಾಡಿಸಿದ ಪೂಜೆ ಸಾರ್ಥಕವಾಯಿತೆಂಬ ಭಾವನೆಯಿಂದ ಶ್ರೀ ಜಗದ್ಗುರುಗಳಿಗೆ ಭಕ್ತಿಯ ನಮನಗಳನ್ನು ಸಲ್ಲಿಸಿ ಇಂತಹ ಅವಕಾಶವನ್ನು ಕಲ್ಪಿಸಿ ಕೊಟ್ಟಿದ್ದಕ್ಕಾಗಿ

ಕೃತಜ್ಞತೆಗಳನ್ನು ಸಲ್ಲಿಸುತ್ತಿದ್ದಾರೆ. ಅನಾನುಕೂಲತೆಯಿಂದ ಪೂಜೆಗೆ ಬಾರವೇ ಇದ್ದ ಭಕ್ತರ ಹೆಸರಿನಲ್ಲಿ ಪೂಜೆ ಮಾಡಿಸಿ ಫಲ-ಪುಷ್ಪಗಳ ಪ್ರಸಾದವನ್ನು ಅವರಿಗೆ ಮುಟ್ಟಿಸುವ ವ್ಯವಸ್ಥೆಯಿಂದ ಪರಸ್ಥಳದ ಭಕ್ತರೂ ಸಹ ಸಂಪ್ರೀತರಾಗಿದ್ದಾರೆ. ಪ್ರತಿನಿತ್ಯ ವೈಭವದ ಪೂಜೆಯನ್ನು ಸ್ವೀಕರಿಸುತ್ತಿರುವ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರು ಸಹ ಸಂತುಷ್ಟರಾಗಿ ಭಕ್ತರ ಮನೋ ಬಯಕೆಗಳನ್ನು ಈಡೇರಿಸುತ್ತಿರುವದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಶ್ರೀ ಮಠದಲ್ಲಿ ನಿತ್ಯ ಅನ್ನಪ್ರಸಾದ (ದಾಸೋಹ):

ಶ್ರೀ ಮಠದಲ್ಲಿ ನಿತ್ಯ ಅನ್ನದಾಸೋಹದ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಸರಿ. ಶ್ರೀ ಮೂರುಸಾವಿರಮಠವು ಮೊದಲಿನಿಂದಲೂ ಪ್ರತಿದಿವಸ ದಾಸೋಹ ನಡೆಸಿಕೊಂಡು ಬಂದದ್ದು ಎಲ್ಲರಿಗೂ ತಿಳಿದ ವಿಷಯವಾಗಿರುತ್ತದೆ. ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು ಅಧಿಕಾರಕ್ಕೆ ಬಂದ ನಂತರ ದೊಡ್ಡ ಪ್ರಮಾಣದಲ್ಲಿ ದಾಸೋಹವನ್ನು ನಡೆಸುತ್ತಿದ್ದಾರೆ. ಪ್ರತಿನಿತ್ಯ ೩೦೦ ಬಡ ವಿದ್ಯಾರ್ಥಿಗಳಿಗೂ ಹಾಗೂ ಪ್ರತಿನಿತ್ಯ ಶ್ರೀ ಕರ್ತೃ ಗದ್ದುಗೆಗೂ ಶ್ರೀ ಜಗದ್ಗುರುಗಳ ದರ್ಶನಕ್ಕೆ ಬಂದ ಪರಸ್ಥಳದ ಭಕ್ತರಿಗೆ ಅನ್ನಪ್ರಸಾದ ನೀಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಶ್ರೀ ಮಠದ ಘನತೆಗೆ ತಕ್ಕಂತೆ ಎರಡೂ ಹೊತ್ತು ಊಟಕ್ಕೆ ಅನ್ನಪ್ರಸಾದ ನೀಡಿ ಅನ್ನಪೂರ್ಣೆಯ ಪ್ರತಿರೂಪವಾಗಿದ್ದಾರೆ. ಅತೀವೃಷ್ಟಿ ಹಾಗೂ ಅನಾವೃಷ್ಟಿಯಿಂದ ಎಂಥ ಬರಗಾಲ ಬಂದರೂ ಎಷ್ಟೇ ಖರ್ಚು ಬಂದರೂ ಬಡ ವಿದ್ಯಾರ್ಥಿಗಳಿಗೆ ದಿನನಿತ್ಯದ ಆಹಾರಕ್ಕೆ ಕೊರತೆ ಬಾರದಂತೆ ಕಳೆದ ೩೦ ವರ್ಷಗಳಿಂದಾ ಮಕ್ಕಳೋಪಾದಿಯಲ್ಲಿ ಉಣಿಸಿ ತಿನಿಸಿ ಪೋಷಿಸುತ್ತಾ ಬಂದಿರುತ್ತಾರೆ. ಹಬ್ಬ ಹುಣ್ಣಿಮೆ, ಅಮವಾಸೆ ಹಾಗೂ ವಿಶೇಷ ದಿನಗಳಲ್ಲಿ ಸಿಹಿ ಅಡುಗೆಯನ್ನು ಮಾಡಿಸಿ ಉಣಿಸುತ್ತಿದ್ದಾರೆ ಮತ್ತು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗದಂತೆ ವೇಳೆಯನ್ನು ಗೊತ್ತುಪಡಿಸಿ ವೇಳೆಗೆ ಸರಿಯಾಗಿ ನೀಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಇದರಿಂದಾಗಿ ಇಲ್ಲಿಯ ವಿದ್ಯಾರ್ಥಿಗಳು ಆರೋಗ್ಯವಂತರಾಗಿ ವಿದ್ಯಾಭ್ಯಾಸದಲ್ಲಿ ಮುನ್ನಡೆಯನ್ನು ಸಾಧಿಸುತ್ತಿದ್ದಾರೆ. ಇಲ್ಲಿಯ ಪ್ರಸಾದವನ್ನುಂಡು ವಿದ್ಯಾಭ್ಯಾಸಗೈದ ಹಳೆಯ ವಿದ್ಯಾರ್ಥಿಗಳು ಇಂದು ನಾಡಿನ ನಾನಾ ಪ್ರಮುಖ ಹುದ್ದೆಗಳಲ್ಲಿದ್ದಾರೆಂದು ಹೇಳಲು ಅತೀ ಸಂತೋಷವೆನಿಸುತ್ತದೆ.

ಶ್ರೀ ಮೂರುಸಾವಿರಮಠವು ನಗರದ ಮಧ್ಯದಲ್ಲಿರುವದರಿಂದ ಶ್ರೀ ಮಠಕ್ಕೆ ಪ್ರತಿನಿತ್ಯ ಪರಸ್ಥಳಗಳಿಂದ ಬಂದ ನೂರಾರು ಜನರಿಗೆ ಅನ್ನಪ್ರಸಾದವನ್ನು ನೀಡಲಾಗುತ್ತದೆ. ಆದರೆ ಸೋಮಾರಿಗಳಿಗೆ, ಅಲೆಮಾರಿಗಳಿಗೆ ಮತ್ತು ಭಿಕ್ಷುಕರಿಗೆ ಇಲ್ಲಿ ಅವಕಾಶವಿಲ್ಲ. ಪ್ರಸಾದವು ಸದ್ವಿನಿಯೋಗವಾಗಬೇಕೆಂಬ ಧೋರಣೆಯಿಂದಲೂ ಹಾಗೂ ಶಿಸ್ತು ಸ್ವಚ್ಛತೆಯ ದೃಷ್ಟಿಯಿಂದ ಇಂಥವರಿಗೆ ನಿರ್ಬಂಧವನ್ನು ಹಾಕಿರುತ್ತದೆ. ಆದರೆ ದರ್ಶನಾಪೇಕ್ಷೆಯಿಂದ ಬಂದ ಯಾವದೇ ಊರಿನ ಅಥವಾ ಯಾವದೇ ಜಾತಿಯ ಭಕ್ತರಿಗೆ ಸುಸ್ವಾಗತದಿಂದ

ಪ್ರಸಾದವನ್ನು ನೀಡುತ್ತಿದೆ. ಇದಲ್ಲದೇ ನಗರದಲ್ಲಿ ಜರುಗುವ ಬೃಹತ್ ಪ್ರಮಾಣದ ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಸಭೆ ಸಮಾರಂಭಗಳಿಗೆ ಬಂದ ಸಾವಿರಾರು ಜನರಿಗೂ, ನಗರದ ರಕ್ಷಣೆಗಾಗಿ ಬಂದ ವಿಶೇಷ ಪೋಲೀಸರಿಗೂ, ಮೌಲ್ಯಮಾಪನಕ್ಕಾಗಿ ಬಂದ ಶಿಕ್ಷಕರಿಗೂ, ಪ್ರವಾಸಕ್ಕಾಗಿ ಬಂದ ವಿದ್ಯಾರ್ಥಿಗಳಿಗೂ, ತೀರ್ಥಯಾತ್ರೆಗಾಗಿ ಬಂದ ಯಾತ್ರಿಕರಿಗೂ ಅವರ ವಿನಂತಿಯಂತೆ ಊಟದ ವ್ಯವಸ್ಥೆಯನ್ನು ಮಾಡುತ್ತಿದೆ. ಬಂದ ಜನರು ಊಟ ಉಪಚಾರದಿಂದ ತೃಪ್ತಿಹೊಂದಿ ಶ್ರೀ ಮಠದ ಘನತೆಯನ್ನು ಹಾಗೂ ಶ್ರೀ ಜಗದ್ಗುರುಗಳ ಔದಾರ್ಯವನ್ನು ಮುಕ್ತಕಂಠದಿಂದ ಪ್ರಶಂಸಿಸಿ ತಮಗಾದ ಆನಂದವನ್ನು ವ್ಯಕ್ತಪಡಿಸುತ್ತಿರುವದು ದಿನನಿತ್ಯದ ದೃಶ್ಯವಾಗಿದೆ.

ಶ್ರೀಮಠದ ಯಾವದೇ ಕೆಲಸವಾಗಲಿ ಅಥವಾ ಯೋಜನೆಯಾಗಲಿ ಭಕ್ತರಿಂದಲೇ ನಡೆಯಬೇಕೆಂಬ ಧೋರಣೆಯುಳ್ಳವರಾದ ಶ್ರೀ ಜಗದ್ಗುರುಗಳು ದಾಸೋಹದ ವ್ಯವಸ್ಥೆಗಾಗಿ "ಶ್ರೀ ಲಿಂಗರಾಜ ಫ್ರೀ ಬೋರ್ಡಿಂಗ್" ಅಂತಾ ಒಂದು ಸಮಿತಿಯನ್ನು ಮಾಡಿ ಅದರ ಆಡಳಿತವನ್ನು ಭಕ್ತರಿಗೆ ವಹಿಸಿಕೊಟ್ಟಿದ್ದಾರೆ. ಇಂದು ಈ ಸಮಿತಿಯು ತುಂಬಾ ಚಟುವಟಿಕೆಯಿಂದ ಕೆಲಸ ಮಾಡುತ್ತಿರುವದು ಕಂಡುಬರುತ್ತದೆ. ಇಷ್ಟಕ್ಕೆ ತೃಪ್ತರಾಗದ ಜಗದ್ಗುರುಗಳು ವಿಶಾಲವಾದ ಅಡುಗೆಮನೆಗಳನ್ನು ಏಕಕಾಲಕ್ಕೆ ೫೦೦ ಜನ ಕೂತು ಊಟ ಮಾಡುವಷ್ಟು ದೊಡ್ಡ ಹಜಾರಗಳನ್ನು ಕಟ್ಟಿಸಿ ಪ್ರತಿ ನಿತ್ಯ ರಾತ್ರಿ ೧೦ ಘಂಟೆಯವರೆಗೆ ಸತತವಾಗಿ ದಾಸೋಹವನ್ನು ನಡೆಸಬೇಕೆಂಬ ಆಸೆಯನ್ನಿಟ್ಟುಕೊಂಡಿದ್ದಾರೆ. ಅವರ ಆಶೆಯು ಬೇಗ ಈಡೇರುವಂತೆ ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.

ಶ್ರೀ ಜಗದ್ಗುರುಗಳ ವ್ಯಕ್ತಿತ್ವ:

ಶ್ರೀ ಜಗದ್ಗುರುಗಳ ವ್ಯಕ್ತಿತ್ವವನ್ನು ಅಳೆಯುವದು ಸಾಮಾನ್ಯ ಸಂಗತಿಯಲ್ಲ. ಅವರ ಜೀವನುದ್ದಕ್ಕೂ ಅವರು ಮಾಡಿದ ಕಾರ್ಯಗಳ ಬಗ್ಗೆ ಬರೆಯಬೇಕಾದರೆ ಇಂಥ ನೂರಾರು ಗ್ರಂಥಗಳೇ ಬೇಕಾಗುತ್ತವೆ. ೩೦೦ ವರ್ಷಗಳಲ್ಲಿ ಮಾಡುವಷ್ಟು ಕಾರ್ಯಗಳನ್ನು ಕಳೆದ ೩೦ ವರ್ಷಗಳಲ್ಲಿ ಮಾಡಿ ಮುಗಿಸಿದ್ದಾರೆಂದು ಎಷ್ಟೋ ಜನ ಸ್ವಾಮಿಗಳು ಹೇಳುತ್ತಿದ್ದಾರೆ. ಇದು ನಿಜಕ್ಕೂ ಸತ್ಯವೆಂದು ಅವರನ್ನು ಅರಿತವರೆಲ್ಲರೂ ಹೇಳುವರು. ಹೀಗೆ ಹೇಳುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಯಾಕಂದರೆ ಕಳೆದ ೩೦ ವರ್ಷಗಳಿಂದ ಶ್ರೀ ಜಗದ್ಗುರುಗಳ ಸಂಪರ್ಕ ನನಗಿದೆ. ಸುಮಾರು ಅವರ ಪ್ರತಿಯೊಂದು ಯೋಜನೆಯಲ್ಲಿ ನಾನು ಭಾಗಿಯಾಗಿ ಸೇವೆ ಸಲ್ಲಿಸುವ ಅವಕಾಶ ದೊರೆತದ್ದು ನನ್ನ ಸುದೈವವಾಗಿರುತ್ತದೆ. ಶ್ರೀ ಜಗದ್ಗುರುಗಳ ವಿಶ್ವಾಸವನ್ನು ಗಳಿಸಿದವರಲ್ಲಿ ನಾನೂ ಒಬ್ಬನೆಂದು ಹೇಳಲು ಹೆಮ್ಮೆ ಎನಿಸುತ್ತದೆ. ಬಹು ಮುಖದ ವ್ಯಕ್ತಿತ್ವವುಳ್ಳ ಇಂಥ ಜಗದ್ಗುರುಗಳ ನಾಡಿಗೆ ನಮ್ಮ ನಗರಕ್ಕೆ ಹಾಗೂ ನಮ್ಮ ಸಮಾಜಕ್ಕೆ ದೊರೆತದ್ದು ಮಹಾಭಾಗ್ಯವಾಗಿದೆ.

□ □

ಘಟಪ್ರಭೆಯ ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ

—ಶ್ರೀ ನಿ. ಪ್ರ. ಸಿದ್ಧಪ್ರಭು ಮಹಾಸ್ವಾಮಿಗಳು

ಸಮಾಜ ಸೇವೆಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಮಹಾಮಾನವತಾವಾದಿ ಹುಬ್ಬಳ್ಳಿಯ ಮೂರುಸಾವಿರಮಠದ ಪೂಜ್ಯ ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಸಮಾಜಕ್ಕೆ ಕಣ್ಣಾಗಿದ್ದಾರೆ, ಉಸಿರಾಗಿದ್ದಾರೆ. ಅವರದು ಬಹುಮುಖ ವ್ಯಕ್ತಿತ್ವ. ಇಂದು ಅವರು ಮಾಡುತ್ತಿರುವ ಹಮ್ಮಿಕೊಂಡಿರುವ ಕೆಲಸ ಕಾರ್ಯಗಳನ್ನು ಅವಲೋಕಿಸಿದಾಗ ಯಾರಿಗಾದರೂ ಅಚ್ಚರಿಯಾಗದಿರದು. ಸಮಾಜದ ಸರ್ವತೋಮುಖ ಅಭಿವೃದ್ಧಿಯು ಮಹಾಮಣಿಹದತ್ತಸಾಗಿರುವ, ಶ್ರೀ ಮಠದ ಭವ್ಯ-ದಿವ್ಯ ಉಜ್ವ ಪರಂಪರೆಯನ್ನು ಮುನ್ನಡೆಸಿಕೊಂಡು ಹೊರಟಿರುವ ಮಹಾಸನ್ನಿಧಿಯವರು ಸಾಧಿಸಿದ-ಸಾಧಿಸುತ್ತಿರುವ ಸಾಧನೆಗಳು ಕಲಶಪ್ರಾಯವಾಗಿವೆ. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯ ಕ್ಷೇತ್ರಗಳಲ್ಲಿ ಸಲ್ಲಿಸಿದ, ಸಲ್ಲಿಸುತ್ತಿರುವ ಸೇವೆ ಅಪ್ರತಿಮ-ಅನುಪಮವಾದುದು. ಆಧುನಿಕ ಸಾಹಿತ್ಯ ಲೋಕದಲ್ಲಿ, ವಚನ ಸಾಹಿತ್ಯಕ್ಕೆ ಹೊಸ ಜೀವ ನೀಡಿದ ಗಣ್ಯ ಸಾಹಿತಿ, ಶ್ರೇಷ್ಠಕವಿ ಮೂಜಗಂ.

ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಸಮಾಜ ಸೇವೆಗೈಯ್ಯುತ್ತಿರುವ ಪೂಜ್ಯರು ಸರ್ವಾಂಗ ಸುಂದರ ಸಮಾಜ ರಚನೆಗೆ ಸಮಾಜದ ಪ್ರತಿ ವ್ಯಕ್ತಿ ಆರೋಗ್ಯವಂತನಿರಬೇಕಾದುದು ಅವಶ್ಯವೆಂಬುದನ್ನು ಅರಿತವರು. ಅಂತೆಯೇ ಸಮಾಜದ ಸ್ವಾಸ್ಥ್ಯದತ್ತ ಗಮನಹರಿಸಿದುದಲ್ಲದೆ, ಬಡತನದ ಬೇಗೆಯಲ್ಲಿ ಬೆಂದು ಬಳಲುತ್ತಿರುವ ಬಡಜನತೆಗಾಗಿ, ವೈದ್ಯಕೀಯ ಸೌಲಭ್ಯ ದೊರೆಯುವಂತಾಗಲು ಮಹಾಸನ್ನಿಧಿಯವರು ಶ್ರಮಿಸುತ್ತಿರುವುದು ಅವರ ಅಂತರಂಗದ ತುಂಬ ತುಂಬಿರುವ ಸಾಮಾಜಿಕ ಕಳಕಳಿಯನ್ನು ಬಿಂಬಿಸುತ್ತದೆ.

ಶ್ರೀ ಮಠದ ಈ ಹಿಂದಿನ ಪೀಠಾಧಿಪತಿಗಳಾದ ಪೂಜ್ಯ ಜಗದ್ಗುರು ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರಿಂದ ಘಟಪ್ರಭಾದಲ್ಲಿ ಸ್ಥಾಪಿಸಲ್ಪಟ್ಟ ಆಸ್ಪತ್ರೆಯನ್ನು "ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ" ಎಂಬ ಹೆಸರಿನೊಂದಿಗೆ ಪ್ರಾರಂಭಿಸಿ, ಗುರುಗಳ ಸಂಕಲ್ಪವನ್ನು ಸಾಕರಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆಸ್ಪತ್ರೆಯನ್ನು ಆರಂಭಿಸುವಲ್ಲಿ ಸಹಕಾರಿ ಸಂಸ್ಥೆಗಳ ಪ್ರಪ್ರಥಮ ರಜಿಸ್ಟ್ರಾರರಾದ ಶಿಂ. ಬಿ. ಪಿ. ಪಾಟೀಲರ ಸಹಾಯ ಪ್ರೇರಣೆಯನ್ನು ಜ್ಞಾಪಿಸುತ್ತಾರೆ.

ಈ ಭಾಗದ ಆರೋಗ್ಯದ ಕಲ್ಪವೃಕ್ಷ ಆರೋಗ್ಯಧಾಮವಾದ ಘಟಪ್ರಭೆಯ ಈ

ಜೆ. ಜಿ. ಆಸ್ಪತ್ರೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ನಿಸರ್ಗದತ್ತ ಘಟಪ್ರಭಾ ಪ್ರಕೃತಿ ಸೌಂದರ್ಯದ ನೆಲೆಯಲ್ಲಿ; ನಿರ್ಮಲ ಪರಿಶುದ್ಧ ಪರಿಸರದಲ್ಲಿ; ಗಾಂಭೀರ್ಯದಿಂದ ತುಂಬಿ ಹರಿಯುತ್ತಿರುವ ಈ ಭಾಗದ ಜನತೆಯ ಭಾಗ್ಯಸಿಧಿ ಎನಿಸಿದ ಘಟಪ್ರಭೆಯ ನದಿಯ ಎಡದಂಡೆಯ ಸೆರಗಿನಲ್ಲಿ; ಬೆಂಗಳೂರು-ಮಿರಜ ರೈಲು ಮಾರ್ಗದ ಮಧ್ಯದಲ್ಲಿ ೬೫ ಎಕರೆಯಷ್ಟು ವಿಶಾಲವಾದ ಪ್ರದೇಶದಲ್ಲಿ ಕಂಗೊಳಿಸುತ್ತಿದ, ಬೆಳಗುತ್ತಿದೆ.

ಪೂಜ್ಯ ಲಿಂ. ಗುರುಸಿದ್ಧ ರಾಜಯೋಗೀಂದ್ರ ಮಹಾಸ್ವಾಮಿಗಳವರ ಕರ್ಮಭೂಮಿ ಯಾದ ಈ ಪುಣ್ಯಭೂಮಿ ಇಂದು ಬಡವರ, ದೀನದಲಿತರ ಜೀವನದ ಆಶಾಕಿರಣವಾಗಿ, ಸಂಪೂರ್ಣ ಸಫಲತೆಯೊಂದಿಗೆ ನಿತ್ಯ ನೂತನವಾಗಿ ಪ್ರಕಾಶಮಾನವಾಗಿ ಬೆಳಗುತ್ತಿದೆ. ಈ ಸಾಧನೆಗೆ ಸಹಾಯ ನೀಡಿದ ಸರ್ವರ ಬಗೆಗೆ ಪೂಜ್ಯರು ಬಿಚ್ಚುಮನಸ್ಸಿನಿಂದ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

ಇಂದು ಇಡೀ ಭಾರತ ದೇಶದಲ್ಲಿಯೇ ಸಹಕಾರಿ ತತ್ತ್ವದ ತಳಹದಿಯ ಮೇಲೆ ಸ್ಥಾಪಿಸಲ್ಪಟ್ಟ ಪ್ರಪ್ರಥಮ ಆಸ್ಪತ್ರೆ ಇದಾಗಿದ್ದು, ಮಹಾಸನ್ನಿಧಿಯವರ ಯತ್ನ-ಪ್ರಯತ್ನ ಪರಿಶ್ರಮಗಳ ಫಲವಾಗಿ ಇಂದು ನಾಡಿಗೆ ಆದರ್ಶಪ್ರಾಯ ಆರೋಗ್ಯಧಾಮವಾಗಿ ದೇಶ ದಾದ್ಯಂತ ಖ್ಯಾತಿಯನ್ನು ಗಳಿಸಿದೆ.

ಅಲ್ಪಾವಧಿಯಲ್ಲಿಯೇ ಬೆಳೆದು ನಿಂತ ಈ ಆಸ್ಪತ್ರೆಯ ಕೊರತೆಯೆಂದೆನಿಸಿದ ಕ್ಷಯರೋಗ ನಿವಾರಣಾ ವಿಭಾಗವನ್ನು ಆರಂಭಿಸಲು ತೀವ್ರವಾಗಿ ಆಲೋಚಿಸಿದ ಪೂಜ್ಯರು ಅಲ್ಲಲ್ಲಿ ಪಾದಯಾತ್ರೆಯನ್ನು ಕೈಕೊಂಡು ಸಂಗ್ರಹಿಸಿದ ನಿಧಿ ಹಾಗೂ ಅನೇಕ ಸಹಕಾರಿ ಬಂಧುಗಳ ಸಹಾಯ-ಸಹಕಾರದೊಂದಿಗೆ ಸುಮಾರು ಇಪ್ಪತ್ತು ಲಕ್ಷ ರೂಪಾಯಿ ಹಣ ವ್ಯಯಮಾಡಿ ಬೃಹತ್ ಕಟ್ಟಡ ನಿರ್ಮಿಸಿದರು. ಇಂದು ಕ್ಷಯ ರೋಗಿಗಳಿಗೆ ಮೃತ್ಯುಂಜಯ ವಾಗಿ ನಿಂತಿದೆ ಈ ಆಸ್ಪತ್ರೆ. ಕ್ಷಯಪೀಡಿತರಾಗಿ ಬಂದವರು ಪುನರ್ಜನ್ಮ ಪಡೆದು ಹಸನ್ಮುಖಿಗಳಾಗಿ, ವೈದ್ಯರ, ದಾದಿಯರ, ನರ್ಸರ ಸೇವೆಯನ್ನು ಪ್ರಶಂಸಿಸುತ್ತ ಹೋಗುವ ದೃಶ್ಯ ಮನಮೋಹಕ. ಇದೇ ಪೂಜ್ಯ ಜಗದ್ಗುರುಗಳಿಗೆ ಆನಂದದ ತೃಪ್ತಿಯ ವಿಷಯ. ಇದರೊಂದಿಗೆ ರಕ್ತಭಂಡಾರ ವಿಭಾಗ, ಉಚಿತ ಹೆರಿಗೆ ವಿಭಾಗ, ಜನರಲ್ ವಾರ್ಡ, ಸ್ಪೇಶಲ್ ವಾರ್ಡಗಳೂ ರೂಪಗೊಂಡಿವೆ.

ಲ್ಯಾಪ್ರೊಸ್ಕೋಪ್, ಗ್ಯಾಸ್ಟ್ರೋಸ್ಕೋಪ್, ಕರ್ಡಿಯೋಗ್ರಾಪ್ ಮೊನೆಟರ್ ಇತ್ಯಾದಿಯಾಗಿ ಬಹು ಬೆಲೆ ಬಾಳುವ, ಆಧುನಿಕ-ವೈದ್ಯಕೀಯ ಉಪಕರಣಗಳೊಂದಿಗೆ ಸುಸಜ್ಜಿತವಾಗಿ, ಸಮಾಜದ ಸ್ವಾಸ್ಥ್ಯಕ್ಕಾಗಿ "ರೋಗಿಯ ಸೇವೆಯೇ ದೇವರ ಸೇವೆ" ಎಂಬ ಉದಾತ್ ಭಾವನೆಯಿಂದ ಸೇವೆ ಸಲ್ಲಿಸುತ್ತ ನಾಡಿನಲ್ಲಿ ಒಂದು ಅತ್ಯುತ್ತಮ ಆರೋಗ್ಯಧಾಮ ವಾಗಿ ಪ್ರಸಿದ್ಧಿ ಪಡೆದಿದೆ. ಅಸಂಖ್ಯಾತ ರೋಗಿಗಳು ಇದರ ಪ್ರಯೋಜನ ಪಡೆದು ಗುಣ ಮುಖರಾಗಿ, ಜೀವನದಲ್ಲಿ ಹೊಸ ಬೆಳಕನ್ನು ಕಂಡಿದ್ದಾರೆ. ಭಕ್ತಿ ಭಾವದಿಂದ ಕೃತಜ್ಞತಾ

ಭಾವದಿಂದ ಶ್ರೀಚರಣಗಳಿಗೆ ನಮೋ ನಮೋ ಎಂದು ಹೃದಯ ತುಂಬಿ ಹಾಡಿ-ಹೊಗಳುತ್ತಲಿದ್ದಾರೆ. ಆದರೂ ಸನ್ನಿಧಿಯವರ ಮಾತೃಹೃದಯ ಇಷ್ಟಕ್ಕೆ ತೃಪ್ತಿ ಹೊಂದಲಿಲ್ಲ. ಈ ಆಸ್ಪತ್ರೆಗೆ ಬರುವ ದೀನ-ದಲಿತರು ಹಾಗೂ ಬಡರೋಗಿಗಳು ಸಂಪೂರ್ಣ ಗುಣಮುಖರಾಗುವವರೆಗೆ, ಅವರಿಗೆ ಉಚಿತ ಪೌಷ್ಟಿಕ ಆಹಾರ ನೀಡಲು ಅಂತರಂಗ ಚಿಂತಿಸಿತು. ಕಾರ್ಯೋನ್ಮುಖರಾಗಲು ಪ್ರಚೋದಿಸಿತು. ಅಂತೆಯೇ ೧೯೮೩ರಲ್ಲಿ "ಶ್ರೀ ಜಗದ್ಗುರು ಗಂಗಾಧರ ಬಡರೋಗಿಗಳ ಉಚಿತ ಪ್ರಸಾದ ನಿಲಯ"ವನ್ನು ಆರಂಭಿಸಿದರು. ಇದಕ್ಕಾಗಿಯೇ ಯಾದವಾಡದಲ್ಲಿರುವ ಶ್ರೀಮಠದ ೩೩ ಎಕರೆಯಷ್ಟು ಭೂಮಿಯನ್ನು ನೀಡಿ, ನಿರಂತರ ಅನ್ನಪ್ರಸಾದ ಸೇವೆ ನಡೆಯುವ ವ್ಯವಸ್ಥೆ ಮಾಡಿದ್ದಾರೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ದಾನಿಗಳ-ಸಹಕಾರಿ ಬಂಧುಗಳ ಸಹಕಾರದೊಂದಿಗೆ ಸಂಸ್ಥೆಯ ಆರ್ಥಿಕ ಸ್ಥಿತಿ ಭದ್ರವಾದಂತೆ, ಬಡ-ಕ್ಷಯ ರೋಗಿಗಳಲ್ಲದೆ ಇತರ ಎಲ್ಲ ವಿಧದ ಬಡ, ದೀನ-ದಲಿತ ರೋಗಿಗಳಿಗೆ ಉಚಿತ ಪೌಷ್ಟಿಕ ಆಹಾರ ಒದಗಿಸುವ ವ್ಯವಸ್ಥೆಯನ್ನು ಮಾಡುವ ಮಹಾಸಂಕಲ್ಪ ಮಹಾಸನ್ನಿಧಿಯವರದಾಗಿದೆ.

ಆಸ್ಪತ್ರೆಯು ಅವಿರತವಾಗಿ ಶಿಷ್ಟ-ಶ್ರದ್ಧೆಗಳಿಂದ ಸಮಾಜ-ಸೇವೆ ಮಾಡಲು ಅನುಕೂಲವಾಗುವಂತೆ ಸರ್ವ ವಿಧದಿಂದ ವ್ಯವಸ್ಥೆಗೊಳಿಸಿದ ಸನ್ನಿಧಿಯವರ ಮುಂದಾಲೋಚನೆ ಮೆಚ್ಚತಕ್ಕವುಗಳಾಗಿವೆ. ಅನುಭವಿಕ ಹಾಗೂ ಸೇವಾ ಮನೋಭಾವವುಳ್ಳ ಸಿಬ್ಬಂದಿ ವರ್ಗ ಸಿಬ್ಬಂದಿಯ ಮಕ್ಕಳಿಗಾಗಿ ಪ್ರಾಥಮಿಕ ಶಾಲೆ, ಅಂಚೆ ಕಚೇರಿ, ಉಪಹಾರ ಗೃಹ, ಅತಿಥಿ ಗೃಹಗಳು ನಿರ್ಮಾಣಗೊಂಡಿವೆ. ಅಲ್ಲದೆ ರೋಗಿಗಳ ಸೇವೆಗಾಗಿ ಎರಡು ವಾಹನಗಳೂ ಇವೆ. ಧರ್ಮಶಾಲೆ, ವಸತಿಗೃಹಗಳು, ವೈದ್ಯಕೀಯ ಮ್ಯೂಜಿಯಂ, ಯೋಗಶಾಲೆ, ಗ್ರಂಥಾಲಯ, ರೋಗಿಗಳಿಗಾಗಿ ಚಿಕ್ಕ ಚಲನಚಿತ್ರಮಂದಿರ, ಅಲ್ಲಲ್ಲಿ ಉಪವನಗಳ ನಿರ್ಮಾಣ, ಇವು ಸನ್ನಿಧಿಯವರ ಸಂಕಲ್ಪಗಳಾಗಿವೆ. ಜ್ಞಾನ-ಇಚ್ಛಾ-ಕ್ರಿಯಾ ಶಕ್ತಿಗಳ ಸಂಗಮವಾದ ಪೂಜ್ಯರ ಈ ಸಂಕಲ್ಪಗಳು ಸಾಕಾರರೂಪ ತಳೆವ ದಿನಗಳೂ ದೂರವಿಲ್ಲ. "ದಾರಿದ್ರ್ಯವಿದ್ದವರಲ್ಲಿ ದೈವತ್ವದರ್ಶನ ಪಡೆಯಬೇಕೆಂಬ" ಹಂಬಲದ ವಿಶಾಲ-ಮನೋಭಾವವುಳ್ಳ ಮಹಾ ಸನ್ನಿಧಿಯವರಿಗೆ ಬೆಳಗಾವಿ, ವಿಜಾಪೂರ, ಧಾರವಾಡ, ಕೊಲ್ಲಾಪೂರ ಸಾಂಗಲಿ ಮುಂತಾಗಿ ಅನೇಕ ಜಿಲ್ಲೆಗಳ ಸಹಕಾರಿ ಬಂಧುಗಳಿಂದ; ಅಲ್ಲದೆ ಸಂಕೇಶ್ವರದ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರಖಾನೆ. ಘಟಪ್ರಭಾ ಸಹಕಾರಿ ಸಕ್ಕರೆ ಕಾರಖಾನೆ ಹೀಗೆ ಅನೇಕ ಸಂಘ-ಸಂಸ್ಥೆಗಳಿಂದಲೂ ಪ್ರೋತ್ಸಾಹ ಸಹಕಾರ ದೊರೆತಿವೆ. ಹುಬ್ಬಳ್ಳಿಯ ಜಾಗೃತ ಪೀಠದ ಮಹಾ ಚೈತನ್ಯಶಕ್ತಿ ಶ್ರೀ ಕರ್ತೃ ಜಗದ್ಗುರು ಗುರು ಸಿದ್ಧೇಶ್ವರನ ಅನುಗ್ರಹ ಬಲದಿಂದ ಸನ್ನಿಧಿಯವರ ಇಚ್ಛೆಗಳು ಬೇಗನೆ ಕ್ರಿಯಾರೂಪಕ್ಕಿಳಿಯಲೆಂದು ಆಶಿಸುತ್ತೇವೆ.

ವೈದ್ಯಕೀಯ ಸೇವೆ-ಸೌಲಭ್ಯಗಳು ನಾಡಿನ ತುಂಬ ವಿಸ್ತರಿಸಬಯಸುವ ಮಹಾ ಸನ್ನಿಧಿಯವರು ನಾಡಿನ ನಾನಾ ಭಾಗಗಳಲ್ಲಿ ವೈದ್ಯಕೀಯ ರಂಗದಲ್ಲಿ ಸೇವೆ ಸಲ್ಲಿಸುತ್ತಿರುವ

ಅನೇಕ ಸಂಘ-ಸಂಸ್ಥೆಗಳಿಗೂ ಉದಾರ ಧನ–ಸಹಾಯ ಸಹಕಾರಗಳನ್ನಿತ್ತು ಆಶೀರ್ವದಿಸಿದ್ದಾರೆ.

ಪೂಜ್ಯರ ಜನ್ಮಸ್ಥಳವಾದ ಹಾಸನ ಜಿಲ್ಲೆಯ ಅರಸೀಕೆರೆ ತಾಲೂಕಿನ "ಶಶಿವಾಳ್" ಗ್ರಾಮದಲ್ಲಿ "ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರಮಠ ಹಾಸ್ಪಿಟಲ್"ನ ಸ್ಥಾಪನೆಗಾಗಿ ಧನಸಹಾಯ ಮಾಡಿ ಆಶೀರ್ವದಿಸಿದ್ದಾರೆ. ಅಲ್ಲದೆ ಅಲ್ಲಿಯ ಸದ್ಭಕ್ತರೊಂದಿಗೆ ಅದರ ಸ್ಥಾಪನೆಗೆ ಸರಕಾರದಿಂದ ಸೌಲಭ್ಯ ದೊರಕಿಸಿಕೊಳ್ಳುವಲ್ಲಿಯೂ ಮುಖ್ಯ ಪಾತ್ರ ವಹಿಸಿದ್ದಾರೆ.

"ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಆಯುರ್ವೇದ ಚಿಕಿತ್ಸಾಲಯ ಧಾರವಾಡ", "ಶ್ರೀ ಕುಮಾರೇಶ್ವರ ಉಚಿತ ಆಯುರ್ವೇದ ಚಿಕಿತ್ಸಾಲಯ ಧಾರವಾಡ", "ಶ್ರೀ ಜಗದ್ಗುರು ಗಂಗಾಧರ ಗಾಂಧೀ ಸ್ಮಾರಕ ನೇತ್ರ ಚಿಕಿತ್ಸಾ ಕೇಂದ್ರ ಹುಬ್ಬಳ್ಳಿ" ಇತ್ಯಾದಿ ಸಂಘ ಸಂಸ್ಥೆಗಳಿಗೂ ಉದಾರ ಸಹಾಯ-ಸಹಕಾರ ನೀಡಿ ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ವೈದ್ಯಕೀಯ ರಂಗದಲ್ಲಿಯೂ ಬಹು ಅಮೂಲ್ಯವಾದ ಸೇವೆ ಸಲ್ಲಿಸುತ್ತಲಿದ್ದಾರೆ.

ಇಂಥ ಪೂಜ್ಯ ಮಹಾಸನ್ನಿಧಿಯವರ ಷಷ್ಟ್ಯಬ್ದಿ ಪೂರ್ತಿಸಮಾರಂಭವನ್ನು ನಾಡಿನ ಭಕ್ತರು ಹಾಗೂ ಅನೇಕ ಮಠಾಧೀಶರುಗಳು ಅತ್ಯುತ್ಸಾಹದಿಂದ ಆಚರಿಸುತ್ತಿರುವುದು, ಅದರಲ್ಲಿಯೂ ಅವರ ಸಾಧನೆ–ಸಿದ್ಧಿಗಳ ಕುರಿತಂತೆ ಗ್ರಂಥ ಹೊರ ತರುತ್ತಿರುವುದು ಅತೀವ ಸಂತೋಷದ ಸಂಗತಿಯಾಗಿದೆ. ಇಷ್ಟೇ ಅಲ್ಲದೆ ಮಹಾ ಸನ್ನಿಧಿಯವರು ವೈದ್ಯಕೀಯ ರಂಗದಲ್ಲಿಯೂ ಮಹತ್ತರ ಕಾರ್ಯಗೈದುದರ ಸ್ಮರಣೆಗೈಯ್ಯುವುದೂ ಅತ್ಯಂತ ಸ್ತುತ್ಯ. ಘಟಪ್ರಭೆಯ ಈ ಆಸ್ಪತ್ರೆಯ ಜೊತೆಗೆ ನಮ್ಮ ಸಂಬಂಧ ಬಂದಾಗಿನಿಂದಲೂ ಹಂತ ಹಂತವಾಗಿ ಅದರ ಬೆಳವಣಿಗೆಯನ್ನು ಕಣ್ಣಾರೆ ಕಂಡಿದ್ದೇವೆ. ಅದರಲ್ಲಿಯೂ ಜೆ.ಜಿ. ಆಸ್ಪತ್ರೆಯ ನಿರ್ದೇಶಕ ಮಂಡಳಿಯ ಸದಸ್ಯರಾಗಿ, ಅದರ ಚೇರ್‌ಮನ್‌ರಾಗಿ ಅನೇಕ ವರ್ಷಗಳಿಂದ ಸಂಪರ್ಕವಿದ್ದುದರಿಂದಾಗಿಯೇ, ಇದರ ಆಗು–ಹೋಗುಗಳ ಸಂಪೂರ್ಣ ಪರಿಚಯವಿರುವುದು ನಮಗೆ ಸಂತೋಷದ ವಿಷಯವಾಗಿದೆ. ಈ ಶುಭ-ಸಂದರ್ಭದಲ್ಲಿ ಶ್ರೀಮಜ್ಜಗದ್ಗುರು ಅಲ್ಲಮಪ್ರಭುದೇವರು, ಕರ್ತೃ ಶ್ರೀ ಜಗದ್ಗುರು ಗುರುಸಿದ್ಧೇಶ್ವರರು ಮಹಾಸನ್ನಿಧಿಯವರಿಗೆ ಸಂಪೂರ್ಣ ಆಯುರಾರೋಗ್ಯ ಶಿವಯೋಗ ಭಾಗ್ಯವನ್ನಿತ್ತು, ಅವರಿಂದ ಸಮಾಜಕ್ಕೆ ಇನ್ನೂ ಹೆಚ್ಚಿನ ಸೇವೆ ಸಲ್ಲಿಸುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ.

ಚಿಂತನ ಪ್ರಭೆ

[ಪರಿಣತರಿಂದ ವೈವಿಧ್ಯಪೂರ್ಣ ಸಾಂಸ್ಕೃತಿಕ ಲೇಖ ಸಂಚಯ]

ಮುಪ್ಪಿನ ಷಡಕ್ಷರಿಯ ಹಾಡುಗಳಲ್ಲಿ ಅನುಭಾವದ ತನಿವೆಳಗು

—ಚೆನ್ನವೀರ ಕಣವಿ

ಕನ್ನಡದಲ್ಲಿ ಹಾಡುಗಬ್ಬಗಳ ಪರಂಪರೆ ಇಂದಿನವರೆಗೆ ಫಲಿಸಿಕೊಂಡು ಬಂದಿರುವುದು ಅದರ ಅಚ್ಚುಮೆಚ್ಚಿಗೆ ಸಾಕ್ಷಿಯಾಗಿದೆ. ವಚನದಲ್ಲಿ ಕುಡಿಯೊಡೆದು, ತ್ರಿಪದಿಯಲ್ಲಿ ಮಿಡಿಯಾಗಿ, ಷಟ್ಪದಿ ಸಾಂಗತ್ಯದಲ್ಲಿ ಪಾಡಾಗಿ ಹಾಡುಗಳಲ್ಲಿ ಹಣ್ಣಾಗಿದೆ ಈ ಗೀತ ಸಂಪ್ರದಾಯ. ನಿಜಗುಣ ಶಿವಯೋಗಿಗಳು ನಿಜಾನಂದದಲ್ಲಿ ನುಡಿಸಿದ ಈ ರಾಗರಸದ ತರಂಗಿಣಿ ಅನೇಕ ಶಾಖೋಪಶಾಖೆಗಳಿಂದ ತುಂಬುಹೊನಲಾಗಿ ಹರಿದುದು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಗಮನಾರ್ಹವಾದ ಸಂಗತಿಯಾಗಿದೆ. ಪ್ರಾರಂಭದಲ್ಲಿಯೇ ಅಪೂರ್ವ ಪ್ರತಿಭೆಯ ಅಸಾಧಾರಣ ವ್ಯಕ್ತಿತ್ವದ ನಿಜಗುಣರಿಂದ ದೀಕ್ಷೆ ದೊರೆತುದು ಅದರ ಸೌಭಾಗ್ಯವೆಂದೇ ಹೇಳಬಹುದು. ಮುಂದೆ ಅನೇಕ ಶಿವಯೋಗಿಗಳೂ ದಾಸವರೇಣ್ಯರೂ ಭಕ್ತಿಯಾವೇಶ, ಶಕ್ತಿಯುತವಾದ ಸಾಮಾಜಿಕ ವಿಮರ್ಶೆಗಳಿಂದ ಈ ಗೀತಪ್ರವಾಹದ ಪಾತ್ರವನ್ನು ವಿಶಾಲಗೊಳಿಸಿದರು.

ವೀರಶೈವ ಶಿವಯೋಗಿಗಳ ಪರಂಪರೆಯಲ್ಲಿ ನಿಜಗುಣಾರ್ಯರ ತರುವಾಯ ಮುಪ್ಪಿನ ಷಡಕ್ಷರದೇವರ ಉಜ್ವಲ ವೈರಾಗ್ಯಮೂರ್ತಿ ನಮ್ಮೆದುರು ಕಂಗೊಳಿಸುತ್ತದೆ. ಧರೆಯ ಭೋಗಭಾಗ್ಯವನ್ನೆಲ್ಲ ತೊರೆದು ಹಲವು ಭವಭೀತಿಯ ಚಿಂತೆಯಿಲ್ಲದೆ ಕಾತುಹರ ಶಿವಷಡಕ್ಷರಿಯ ಲಿಂಗವನ್ನು ತನ್ನೊಳಗೆ ನಿಶ್ಚಿಂತವಾಗಿಟ್ಟುಕೊಂಡು ಸಹಜಾನಂದದಲ್ಲಿ ಮಿಡಿಯುತ್ತಿರುವ ಇವರ ಹೃದಯವೀಣೆಯ ನಾದಸೇತು ಪ್ರಪಂಚದ ಹಲವು ಕೋಟಲೆಗಳಲ್ಲಿ ಮುಳುಗಿದ ಮಾನವನಿಗೆ ಪಾತಾಳಗರುಡಿಯಾಗಿ ಪರಿಣಮಿಸುತ್ತದೆ. ರೂಢಿಗೀಶನನ್ನು ತಮ್ಮ ದೈವವಾಗಿ ಇಟ್ಟುಕೊಂಡ ಮೇಲೆ ನರರನ್ನು ಕಾಡಿ ಬೇಡಿ ಬಳಲುವದಾದರೂ ಏತಕ್ಕೆ? ಮೃಡನ ಪೂಜೆ ಮಾಡುವುದಕ್ಕೆ ಮಡುವಿನ ಅಗ್ಘವಣಿಯುಂಟು. ಅಡವಿಯಲ್ಲಿ ಕಾಡಪತ್ರಿ ಪುಷ್ಪವುಂಟು. ಒಡಲಿಗನ್ನ ದುಡಿದರುಂಟು. ಶಯನಕ್ಕೆ ಗುಡಿಗಳಿವೆ. ಒಡೆಯರು ಬಿಸುಟಿದರುವೆ ಶೀತವೆನಿಸಿದರೆ ಹೊದೆದರಾಯಿತು. ಬುದ್ಧಿಯನ್ನು ಹೇಳುವದಕ್ಕೆ ಆದ್ಯರ ವಚನಗಳಿವೆ; ಉದ್ಧಾರವಾಗಲು ಶಿವನ ಮಂತ್ರವಿದೆ; ಅನುಭಾವಿಗಳನ್ನು ಅಗಲವೆ ಇದ್ದರೆ ಸಾಕು. ಅಂದಮೇಲೆ ನರರ ಮಾಳ್ಕೆಯಿಂದ ಅವರು ಬೆದಗುಗೊಳ್ಳುವ ಪ್ರಮೇಯವೇ ಇಲ್ಲ. ಈ ವೀರ ವಿರತಿಯು ನಿತ್ಯ ತೃಪ್ತಿಯು ಮುಪ್ಪಿನಾರ್ಯರಲ್ಲಿ ಸ್ಫಟಿಕದ ಸಲಾಕೆಯಂತೆ ಒಡೆದು ಕಾಣುತ್ತದೆ.

ಸರ್ವಾರ್ಪಣಭಾವ ಮುಪ್ಪಿನಾರ್ಯರ ವ್ಯಕ್ತಿತ್ವದ ಜೀವಾಳವೆನ್ನಬಹುದು. "ಎನ್ನ ಸರ್ವಾಂಗವನು ನಿನ್ನ ಪರಿಣಾಮಕ್ಕೆ ಚೆನ್ನಾಗಿ ಸವೆಸುವೆನು ಬಸಿ ಲಿಂಗವೆ" ಎಂಬುದು ಇವರ ಜೀವನದ ಪಲ್ಲವಿಯಾಗಿದೆ. ಚೆನ್ನ ಷಡಕ್ಷರ ಲಿಂಗಕ್ಕೆ ಇವರ ಹೃದಯವು ಉನ್ನತದ ಮನೆ; ಮುಖವು ಮುಖಶಾಲೆ; ನವಚಕ್ರಗಳು ನವನೆಲೆಯ ಹೊನ್ನುಪ್ಪರಿಗೆಯಾಗಿವೆ. ಹೃತ್ಕಮಲವು ಮಂಚವಾಗಿ ಜ್ಞಾನವು ತಲೆಗಿಂಬಾಗಿ ಆಚಾರವು ಚರಾಘಟನಾಗಿದ್ದಾನೆ.

"ಎನ್ನ ನಯನವು ನಿಮಗೆ
ರನ್ನವೆಳಗಿನ ಜ್ಯೋತಿ
ಎನ್ನ ಪ್ರಾಣವು ನಿಮಗೆ
ಮನ್ನಣೆಯ ತಾಂಬೂಲ
ಹೊನ್ನಪಡಿಗಮದಾಗಿ ಮೆರೆದಿರ್ಪುದು"

ಎಂದು ಮುಪ್ಪಿನ ಷಡಕ್ಷರಿದೇವರು ಎದೆದುಂಬಿ ಹಾಡಿದ್ದಾರೆ. ಹೀಗೆ ಸರ್ವಾಂಗವನ್ನು–ಮುಂದಾಗಿ ಪ್ರಾಣವನ್ನೂ–ಲಿಂಗಕ್ಕೆ ಸಲ್ಲಿಸಿ ನಿಶ್ಚಿಂತರಾಗಿದ್ದಾರೆ. ತಮ್ಮ ಕಾಯವನ್ನೇ ಲಿಂಗದೇವನಿಗೆ ಉನ್ನತಾಲಯವನ್ನಾಗಿ ಮಾಡಿ ನಿರ್ಭಯರಾಗಿದ್ದಾರೆ. ಅವರ ಸಮತೆಯು ಜಲವಾಗಿ, ಸದ್ಗುಣವೇ ಗಂಧವಾಗಿ, ನಿತ್ಯತ್ವವೇ ಅಕ್ಷತೆಯಾಗಿ, ಜ್ಞಾನವೇ ಪುಷ್ಪವಾಗಿ, ಭಕ್ತಿಯೇ ಭೋಗವಾಗಿ, ಮನವೇ ಪೂಜಾರಿಯಾಗಿ ಅರ್ಪಿತವಾಗಿವೆಯೆಂದಮೇಲೆ 'ನಾನು, ನನ್ನದು' ಎಂಬುದು ಇನ್ನೇನುಳಿಯಿತು? ಕಾಮಕಾಲಗಳಿಂದ ನಿರ್ನಾಮ ಮಾಡುವ ಮಾಯೆಯನ್ನು ಛೀಮಾರಿಮಾಡಿ ಮೊದಲೇ ಲಿಂಗಕ್ಕೆ ಮೊರೆ ಹೊಕ್ಕಿದ್ದಾರೆ. ಲಿಂಗದಲ್ಲಿಯ ಅವರ ನಿಷ್ಠೆ ನಿಸ್ಸೀಮವಾದುದು. 'ಎನ್ನ ಕರದೊಳಗಿರ್ದ ಎನ್ನೊಳೇತಕೆ ನುಡಿಯ ಎನ್ನ ಭವಭವದಲ್ಲಿ ಬಿಡದಾಳ್ವನೆ?' ಎಂದು ಸಲುಗೆಯಿಂದ ಬಿನ್ನವಿಸುತ್ತಾರೆ. 'ಎನ್ನೊಡನೆ ನುಡಿಯದಿರೆ ನಿನ್ನನಾ ಭವಭವದಿ ಬೆನ್ನಬಿಡುವನೆ ಷಡಕ್ಷರಿ ಲಿಂಗವೇ' ಎಂಬ ಹಾಡಿನ ಭಾವಸೌಂದರ್ಯ ಅವರ್ಣನೀಯವಾಗಿದೆ.

ಹರನಲ್ಲಿ ಇವರು ವರವನ್ನು ಬೇಡಿದರೂ ಶರಣರಿಗೆ ಭೃತ್ಯನಾಗಿರಿಸೆಂದೇ ಕೇಳಿಕೊಳ್ಳುವ ಇವರ ಸೇವಾಭಕ್ತಿಯು ಆಧ್ಯಾತ್ಮಿಕ ಪ್ರಗತಿಯ ಉನ್ನತ ಮಟ್ಟಲಾಗಿದೆ. ಶರಣರಲ್ಲಿ ಶಿವನಿರುವುದರಿಂದ ಸಕಲ ಶರಣಗಣ ಅಲ್ಲಿ ಮೆರೆದಿದೆ. ಅವರ ಅಂಗಳ ನಿತ್ಯ ಶಿವಲೋಕವಾಗಿರುವುದರಿಂದ, ಅವರ ಘನತೆಗೆ ಇನ್ನಾವುದನ್ನೂ ಅವರು ಸರಿಗಾಣರು. ಅವರ ಕಿಂಕರನಾಗಿ, ಅವರ ಪಾದವ ತೊಳೆದು, ಪಡಿಗವ ಬೆಳಗಿ ತೊಳೆದು ತಂದು, ಹಾವುಗೆ ಪಿಡಿದು ಅವರಡಿಗಳನ್ನು ಒರೆಸಿ, ಅವರಿಚ್ಛೆಯಲ್ಲಿಯೇ ಇರುವ ವರವನ್ನು ಹಾರೈಸಿದ್ದಾರೆ. ಅವರುಂಡು ಮಿಕ್ಕುದನ್ನು, ಅವರುಂಡು ಬಿಟ್ಟುದನ್ನು, ಅವರುಗುಳ್ದ ತಾಂಬೂಲವನ್ನು ಸವಿದು, ಅವರಂಗಳವನ್ನು ಗುಡಿಸಿ ಬಾಗಿಲ ಕಾಯ್ದು, ಅವರ ಎತ್ತಾಗಿ ತೊತ್ತಾಗಿ ಪಶುವಾಗಿ ಅವರನ್ನು ಭವ ಭವದಲ್ಲಿ ಬಿಡದೆ ಇರುವದನ್ನು ಪಾಲಿಸೆಂದು ಈ

ಋಷಿಕವಿ ಬೇಡಿಕೊಂಡಿದ್ದಾನೆ. ಯಾಕೆಂದರೆ ಶಿವನ ಘನದಿಂದ ಶಿವಶರಣರ ಘನವು ಅತ್ಯಧಿಕ, ಅತ್ಯುನ್ನತ.

ಉದಾತ್ತ ಭಾವದ, ವಿಶಾಲ ಹೃದಯದ ದರ್ಶನಶುದ್ಧಿ ಮುಪ್ಪಿನಾರ್ಯರ ತತ್ವ ಜ್ಞಾನದ ಹೊಂಗಳಸವಾಗಿ ಅವರ ಹಾಡುಗಳಲ್ಲಿ ಕಂಗೊಳಿಸುತ್ತದೆ. ಅನುಭಾವದ ತುತ್ತ ತುದಿಯಲ್ಲಿ ನಿಂತು ತನ್ಮಯತೆಯಿಂದ ನುಡಿಯುವ ಅವರ ಹೃದಯವೀಣೆಯ ಮಂಜುಳ ನಿನಾದ ಇಡಿಯ ವಿಶ್ವವನ್ನೇ ತರಂಗ ತರಂಗವಾಗಿ ವ್ಯಾಪಿಸಿಕೊಳ್ಳುತ್ತದೆ. ಅಪೂರ್ಣ ದೃಷ್ಟಿಯ ಸಂಕುಚಿತತನವನ್ನು ಮುಳುಗಿಸಿ ಪ್ರಪೂರ್ಣ ದೃಷ್ಟಿಯ ವಿಶಾಲಭಾವನೆಯನ್ನು ತಾನೇತಾನಾಗಿ ಪಸರಿಸಲು ಸರ್ವಸಮರ್ಥವಾಗಿದೆ:

"ಅವರವರ ದರುಶನಕೆ
ಅವರವರ ವೇಷದಲಿ
ಅವರವರಿಗೆಲ್ಲ ಗುರು ನೀನೊಬ್ಬನೆ
ಅವರವರ ಭಾವಕ್ಕೆ
ಅವರವರ ಪೂಜೆಗಂ
ಅವರವರಿಗೆಲ್ಲ ಶಿವ ನೀನೊಬ್ಬನೆ.
ಹೋರಾಟವಿಕ್ಕಿಸಲು
ಬೇರಾದೆಯಲ್ಲದೆ
ಬೇರುಂಟೆ ಜಗದೊಳಗೆ ಎಲೆ ದೇವನೆ
ಆರು ಅರಿಯರು ನೀನು
ಬೇರಾದ ಪರಿಗಳನು
ಮಾರಾರಿ ಶಿವಷಡಕ್ಷರಿ ಲಿಂಗವೆ".

'ಬೇರಾದೆ' (ಬೇರು+ಆದೆ) ಪದದ ಶ್ಲೇಷಾರ್ಥವನ್ನೂ ಇಲ್ಲಿ ಗಮನಿಸಬಹುದು. ಯುಗಯುಗಕ್ಕೂ, ದ್ವೇಷಾಸೂಯೆಗಳಲ್ಲಿ ತೊಳಲುವ ಜಗಕ್ಕೂ ಶಾಂತಿಯ ಬಾವುಟವಾಗಿ ನಿಂತಿದೆ ಈ ಪದ್ಯ. ಮುಪ್ಪಿನಾರ್ಯರ ಪ್ರಾಸಾದಿಕ ವಾಣಿಯಲ್ಲಿ ಕಂತುಹರ ಷಡಕ್ಷರಿಲಿಂಗದ ಅಪೂರ್ವ ಕಾಂತಿ ಪಡಿಮೂಡಿದೆ.

ಷಡಕ್ಷರಿಯ ಭಾವತರಂಗಿಣಿ ಅಲ್ಲಲ್ಲಿ ರೂಪಕದಲ್ಲಿ ಏರಕವೊಯ್ದು ಸುಂದರವಾದ ಸರೋವರಗಳನ್ನು ನಿರ್ಮಿಸಿದೆ. ಸೆಲೆನಿಂತ ಆ ತಿಳಿಜಲ ನೀಲಾಗಸವನ್ನೂ, ಅಲ್ಲಿ ಆಡುವ ಮೋಡದ ಬೆಡಗನ್ನೂ ಪಡಿಮೂಡಿಸುವಂತೆ ಇವರ ಭಾವರೂಪಕಗಳು ಓದುಗರ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುತ್ತ ಬೇರೊಂದು ಸೊಗಸನ್ನು ಬೀರುತ್ತದೆ. "ನಿಮ್ಮನ್ನು ನಾನು ನೆಮ್ಮಿಕೊಂಡಿದ್ದೇನೆ, ಗಮ್ಮನೇ ಎನ್ನನ್ನು ಕರೆಯ ಬನ್ನಿ" ಎಂಬ ಹೆಮ್ಮಗಳ ರೂಪಕ ಅದೆಷ್ಟು ಸೊಗಸಾಗಿದೆ; ಪುರಾತನ ಶರಣರಿಗೆಲ್ಲ ಸುವ್ವಿಹಾಡಿ ತಮ್ಮವರನ್ನು ಯಾವಾಗಲೂ

ಹಾಡಿ ಹರಸುತ್ತಿರುವ ಈ ಶರಣ ಜೀವ ತಮ್ಮವರು ಬರುವುದನ್ನು ಉಮ್ಮಳಿಸಿ ನೋಡು ತ್ತಿದೆ. ಕುಟ್ಟುತ್ತ ಬೀಸುತ್ತ ಒಡಹುಟ್ಟಿದ ಪುರಾತನರನ್ನು ನೆಟ್ಟನೇ ನೆನೆಸುತ್ತದೆ. "ಕಷ್ಟ ಮಯವಾದ ಮರ್ತ್ಯದ ಬಟ್ಟೆಯನೊಲ್ಲೆ ಕೃಪೆ ಹುಟ್ಟದೇ, ನಮ್ಮವರು ಕರೆಯಿರಯ್ಯ" ಎಂದು ಮೊರೆಯಿಡುತ್ತದೆ. ನೀರ ಹೊಳೆಯಲಿ ನಿಂತು ದಾರಿ ನೋಡುತ್ತ ಬಾರದಿರೆ ಮತ್ತೊಮ್ಮೆ ದೂರ ನೋಟ ಬೀರಿ ನಿಲುಕಿ ನೋಡುವ ಜೀವ, ಬಂದವರನ್ನು ಬರುವವ ರನ್ನು, ನಿಂದವರನ್ನು ನೆರೆದವರನ್ನು ತಮ್ಮವರ ಸುದ್ದಿಯನ್ನು ಕೇಳುತ್ತದೆ. ಪದುಳವೇ ನಮ್ಮವರ ಪದಪದ್ಮ? ಹಾಗಿದ್ದರೆ ಪದಪಿಂದ ನನ್ನನ್ನು ಕರೆದೊಯ್ಯಲೊಲ್ಲರೇಕೆ? ಉದಯಾಸ್ತಮಾನದಲಿ ಕುದಿದು ಕೋಟಲೆಗೊಂಡರೂ ಅವರ ಹೃದಯ ಕರಗದಿದೆಯಲ್ಲ:

"ಹಿಂದುಳಿಯಿತಮವಾಸ್ಯೆ
ಮುಂದೆ ಹುಣ್ಣಿಮೆ ಬಂತು
ಎಂದಿಗೇ ಎನ್ನನ್ನು ಕರೆಯಬಹರೋ
ನೊಂದು ಸುಯ್ಗರೆಯುವೆನು
ಬೆಂದು ಬೆಂಡಾಗುವೆನು
ಚಂದವೇ ತಮಗೆನ್ನ ನೋಡದಿಹುದು?"

ತರಗೆಲೆಯು ಗಿರುಕೆಂದರೆ ಹೊರಗೆ ಹೋಗಿ ಆಲಿಸುವ, ಬರದಿದ್ದರೆ ಮನದಲ್ಲಿ ಸುಯ್ಗರೆವ ಹೆಣ್ಣು ಜೀವ ಪರರ ಶಿಶುವೆಂದು ನಮ್ಮವರಾದ ಶರಣರೂ ನನ್ನನ್ನು ಮರೆತು ಬಿಟ್ಟರೋ ಎಂದು ಹೆದರುತ್ತಿದೆ. ಪರರಿಗಂತೂ ಇವಳ ಚಿಂತೆ ಅರ್ಥವಾಗದು; ಆದ್ದರಿಂದ ಶರಣರಲ್ಲಿಯೇ ತನ್ನ ಸುಖ-ದುಃಖವನ್ನು ತೋಡಿಕೊಳ್ಳುವ ಅಪೇಕ್ಷೆ. ಷಡಕ್ಷರಿ ದೇವರ ಸತಿಪತಿ ಭಾವದ ಸುಂದರವಾದ ನಿರೂಪಣೆ ಇಲ್ಲಿದೆ. ಅವರ ಕಾವ್ಯದ ಪ್ರಾಣಶಕ್ತಿಯೇ ಇಲ್ಲಿ ಸ್ಪಂದಿಸುತ್ತಿರುವಂತೆ ನಮಗೆ ಭಾಸವಾಗುತ್ತದೆ.

ತಮ್ಮ ಮನಸ್ಸೆಂಬ ಮುದ್ದಿನ ಮಗಳಿಗೆ ಹೇಳಿಕೊಳ್ಳುವ ಈ ಬುದ್ಧಿಯ ಮಾತು ಗಳನ್ನಿಷ್ಟು ಆಲಿಸೋಣ: ಮಗಳೆ, ನಿನ್ನ ಮನದ ವಲ್ಲಭನು ಎಲ್ಲರಂತವನಲ್ಲ, ಅಂಗವಿದ್ಯೆ ಗಳನ್ನೆಲ್ಲವನ್ನು ಬಲ್ಲಿದನು, ಒಳಗೊಳಗೆ ಸಲ್ಲಿಸುತ್ತ ಮೆಲ್ಲಗೆ ಎಡೆಯಾಡುತ್ತಿರುವ; ಹೊರಗೆ ನಿಲ್ಲದಿರು; ಸೂರ್ಯೋದಯದ ಹೊತ್ತಿಗೆ ಮನೆಯ ಕಸವನ್ನು ತೆಗೆದು ಅಣಿಮಾಡಿ ಇಂದ್ರಿಯಗಳ ಅಕ್ಕಿಯನ್ನು ತಳಿಸು. ಮನೆಯಲ್ಲಿ ಕತ್ತಲೆಗೆ ಅವಕಾಶವೀಯಬೇಡ; ಸಿಟ್ಟಿ ಗೆದ್ದರೆ ನಿನ್ನೊಡೆಯ ರಕ್ಕಸನಂತೆ;

"ನೀ ಮುಗ್ಧೆ ನಿನ್ನಾಳ್ದ
ಕಾಮಾರಿ ಆತ್ಮ ಗಿಳಿ-
ರಾಮನನು ಓದಿಸಾ ಹೊರಗಾಡದೆ
ನಾಮುನ್ನಲಂಜುವೆನು

ನೀ ಮಗಳೆ ನಿಜ ಹೇಳು
ಸೋಮಧರ ಕೋಪಿಸಿದಡೆಲ್ಲಡಗುವೆ?"

ಈ ನುಡಿಯಲ್ಲಿ ಅಡಗಿರುವ ಭಾವದ ನವೀನತೆಗೆ ಮಾರು ಹೋಗದವರಾರು? ಇರಲಿ; ಮುಂದಿನ ಮಾತಿಗೆ ಕಿವಿಗೊಡೋಣ: ಅವನು ಕೋಪಿಸಿದಾಗ ಕಾಲು ಹಿಡಿದು ಬೇಡಿಕೊಳ್ಳುವುವೆಂದರೆ ಅವಗೆ ಕಾಲಿಲ್ಲ; ಅಪ್ಪಿಕೊಳ್ಳಬೇಕೆಂದರೆ ಒಡಲಿಲ್ಲ. ಎಳ್ಳಿನಷ್ಟು ಬೇಸರ ಕಂಡರೂ ಅವನು ತಾಳುವವನಲ್ಲ, ಕಟುಶೂಲಿ, ಆದ್ದರಿಂದ ನಿನ್ನ ಮತಿ ಮಸುಳ ದಿರಲಿ, ಎಚ್ಚರಿಕೆ; ಪತಿವ್ರತೆಯರೊಡನೆ ಗೆಳೆತನ ಮಾಡು. ಪತಿ ಕಾಮಜಿತ, ನೀನೋ ಅತಿ ಕಾಮಿ. ಆತನನ್ನು ಅಗಲಬೇಡವ್ವ. ನಿನ್ನ ಪತಿ ಬಹಳ ಆತುರ ಸ್ವಭಾವದವನು. ಬೇಸರಾಡದಿರು, ದಿವರಾತ್ರಿಗಳೆನ್ನದೆ ಒಡಗೂಡು. ಶುದ್ಧ ಮನಸ್ಸಿನಿಂದ ಭಕ್ತಿಯ ಬೋನ ವನ್ನು ಮಾಡಿ ಇನಿಯನಿಗೆ ಎಡೆಮಾಡು; ಅಂದರೆ ಅವನು ಒಲಿಯುವನು. ಹೀಗೆ ಪತಿ ಯೊಡನೆ ಹೊಂದಿಕೊಂಡಿದ್ದರೆ ಷಡಕ್ಷರಿ ಲಿಂಗ ಒಲಿದು ನಿನ್ನನ್ನು ತನ್ನಂತೆ ಮಾಡುವನು. ನೀನು ಬೆದರದೆ ನಂಬಿ ನಚ್ಚಿರು.

ಕವಿ ತಮ್ಮ ಆತ್ಮಹಂಸಕ್ಕೆ ಮತ್ತೆ ಹೀಗೆ ನಿವೇದಿಸುತ್ತಾನೆ: ಆಶಾಪಾಶದೊಳಗೆ ಸಿಲುಕಿ ಮಾಯಾರೋಪ ಕಿಚ್ಚಿನಲ್ಲಿ ಬೇಯದೆ, ಹೇಡಿ ಪಥವ ನೀನು ಮುಟ್ಟದೆ, ಮೂರು ಬಲಿಯೊಳಗೆ ಸಿಲುಕದೆ 'ಹಾರು ಕಂಡ್ಯ ಹಂಸ ಹಾರು ಕಂಡ್ಯ' ಎಂದು:

"ನಿರಯದ ಸರಸಿಯೊಳಾಡದೆ ನೀನು
ಇರದೆ ಘನದತ್ತ ಹಾರು ಕಂಡ್ಯಾ
ಗಿರಿಯ ಸರಸಿಯೊಳಗೊಪ್ಪುವ ನೀನು
ಉರುತರ ಕ್ಷೀರವ ಸವಿ ಕಂಡ್ಯಾ
ಸಾಸಿರದಳ ಕಮಲದ ಕರ್ಣಿಕೆಯೊಳು ಅಲ್ಲಿ
ಭಾಸುರ ಪ್ರಣಮದ ಪ್ರಭೆಯೊಳು
ವಾಸವಾಗಿರ್ಪ ಷಡಕ್ಷರ ಮಹಾ
ಧೀಶನ ನೀ ಹೋಗಿ ನೆರೆ ಕಂಡ್ಯಾ"

ತಾತ್ವಿಕ ದೃಷ್ಟಿಯಿಂದ ಇದರ ವಿವರಣೆ ಏನೇ ಇರಲಿ, ಇಲ್ಲಿ ಒಗುಮಿಗುವ ಭಾವ ನಿರ್ಭರತೆಯಲ್ಲಿ ಮಿಂದು ಮಡಿಯಾಗದವರಾರು?

ಮುಪ್ಪಿನಾರ್ಯರ ಹಾಡುಗಳಲ್ಲಿ ಹೃದಯಂಗಮ ವರ್ಣನೆ, ವಿಶಾಲ ದರ್ಶನವಿರು ವಂತೆಯೇ ನವನವೀನ ಭಾವಗಳ ಆವಿಷ್ಕಾರವಿದೆ. ಅವು ಅತ್ಯಂತ ಮಧುರವಾಗಿ, ನಿರಾಯಾಸವಾಗಿ ಗಿಡದಿಂದ ಹೂ-ಚಿಗುರು ಹೊಮ್ಮುವಂತೆ ಸಹಜವಾಗಿ ಹೊರ ಹೊಮ್ಮು ತ್ತವೆ. ಒಂದೆರಡನ್ನು ಮಾತ್ರ ಇಲ್ಲಿ ಸಮಗ್ರಾಣಿಸಬಹುದು:

"ಎನ್ನ ಕರದೊಳಗಿರ್ದು ಎನ್ನೊಳು ನುಡಿಯನು
ಕೇಳು ಸಖಿಯೇ! ತನ್ನ ನಾವು ಏನು ಬೇಡಿದೆವವ್ವ
ಕೇಳು ಸಖಿಯೇ"

ಸಾಲೋಕ್ಯ ಮೊದಲ್ಗೊಂಡು ನಾಲ್ಕು ಪದಗಳು ಮೇಲೆ ನಮ್ಮವರ ಬಾಗಿಲ ಕಾದು ಕೊಂಡಿವೆ. ನಾನದನ್ನು ಬೇಡಲಿಲ್ಲ. ಅಣಿಮಾದಿ ಅಷ್ಟ ಸಿದ್ಧಿಗಳನ್ನು ನಮ್ಮವರೆಲ್ಲರ ತೃಣಮಾತ್ರ ಲೆಕ್ಕಿಸಿ ಮನದಲ್ಲಿ ಬಗೆಯರು. ಇದು ನನಗೆ ಗೊತ್ತಿಲ್ಲವೇ? ಅವನ್ನು ಬೇಡುವರಾರು? ಅರವತ್ತುನಾಲ್ಕು ವಿದ್ಯೆಗಳು ನಮ್ಮ ಶರಣರ ಚರಣ ರಕ್ಷೆಗೆ ಸಂಬಾರವು, ಅವನಾರು ಬೇಡುವಾರು? ನಮ್ಮ ಪಿಟ್ಟವ್ವೆ ಹೊಟ್ಟೆಗನ್ನ ವಸ್ತ್ರದಳು: ನಮ್ಮ ದಾಸಯ್ಯ ಉಟ್ಟುಕೊಳ್ಳಲು ಬಟ್ಟೆ ಕೊಟ್ಟನು. ಆತ ಬೇಡಿದುದನ್ನೆಲ್ಲ ಶರಣರು ಕೊಟ್ಟರು, ನಾವೇನೂ ಬೇಡದಿದ್ದರೂ ಷಡಕ್ಷರಿಲಿಂಗ ನಮ್ಮೊಳು ನುಡಿಯುವದೇಕವ್ವ ಕೇಳು ಸಖಿಯೇ:

"ಮುನ್ನ ನಮ್ಮ ಶರಣರುಗಳು
ನಿನ್ನ ಕಾಡಿದುದಕ್ಕೆ ಈಗ
ಎನ್ನ ಮೇಲೆ ಹಗೆಯ ಮಗುಚುತಿಹೆಯೋ
ಕಾಣೆನು"

ಎಂಬುದೂ ಇಂಥದೇ ಹೊಸ ಭಾವವನ್ನು ಸೂಚಿಸುತ್ತದೆ. 'ದುಷ್ಟ ನುಡಿಯನು ಬಿಡದೆ, ಒಲಿದು ಮುಟ್ಟಿ ಕೇಳುವ ಹಾಗೆ ಶಿವನ ಶ್ರೇಷ್ಠವಾದ ಶಾಸ್ತ್ರವನ್ನು ಕೇಳದಿರುವ ಕಿವಿಯಲ್ಲಿ ಮೊಳೆಯನ್ನಿಟ್ಟು ಕೊಡತಿಯಿಂದ ತಟ್ಟಿ, ಆಚೆ ಈಚೆಗಾಗುವಷ್ಟು ಬಡಿಯುವನಕ ಎನ್ನ ಸಿಟ್ಟು ಹೋಗದು. ಶಿವನನ್ನು ಹಾಡಿ ಹೊಗಳದೆ ಹಗಲಿರುಳೂ ಕೆಟ್ಟ ಮಾತನ್ನಾಡುವ ನಾಲಿಗೆಯನ್ನು ಸೀಳಿ ಸೀಳಿ ಹೋಳು ಮಾಡಿ ಮೇಲೆ ಸುಣ್ಣದ ನೀರನ್ನೆರೆದು ಮಾಲೆಗಟ್ಟುವವರೆಗೆ ಮನದ ಜ್ವಾಲೆ ಹೋಗದು' ಎಂದವರು ಸಾರಿದ್ದಾರೆ. ಅಂದಿನವರಿಗೆ ಇಂದಿನವರು ಹೊಂದಿ ಹೋಲಲರಿಯರು ಎಂಬ ಕುಂದು ನುಡಿಯನ್ನು ಕಿವಿಯೊಡ್ಡಿ ಕೇಳಲಾಗದು; ಯಾಕೆಂದರೆ ಅಂದಿಗೊಬ್ಬ ಶಿವ, ಇಂದಿಗೊಬ್ಬ ಶಿವ ಉಂಟು ಎಂದು ಎನ್ನಬಹುದೇ?

"ಘನವ ನಾ ನೆನೆವನೆ
ಮನ ಹಲವು ನೆನೆಯುತಿದೆ
ಮನವ ಹಿಡಿತರುವನಕ ನಿಮಗೆ ಮುನಿಸು:
ಮನ ಭೋಗ ಬಯಸುವದು
ತನು ಸೊಬಗಿಗೆಳಸುವದು
ಘನಮಹಿಮ ನಾ ಮುಂದೆ ಏನಪ್ಪೆನೋ"

ಹೀಗೆ ಅವರ ಚಿಂತನಾಲಹರಿ ಸ್ವತಂತ್ರವಾದ ರೀತಿಯಲ್ಲಿ ಹರಿದಿದೆ.

"ಎಲ್ಲಿ ಮೆಚ್ಚು ಎಲ್ಲ ಮೋಹ
ಎಲ್ಲಿ ಪ್ರೀತಿ ಎಲ್ಲಿ ಪ್ರೇಮ
ಅಲ್ಲಿ ಅವರ ವಿಕಳತೆಯಲಿ ಸಾವತೆರನೊಳು
ಇಲ್ಲಿ ಹಿಂದು ಮುಂದು ಮರೆದು

ಅಲ್ಲಿ ಷಡಕ್ಷರಿಯಲಿಂಗ
ದಲ್ಲಿ ಪ್ರಾಣ ಬಿಡುವ ಹಾಗೆ ಎಂದಿಗಪ್ಪುದೋ"

ಎಂಬ ಹಂಬಲದಲ್ಲಿ ಅವರ ಆತ್ಮವಿಕಾಸದ ಪರಿಪಕ್ವತೆ ಬಣ್ಣಗೊಂಡಿದೆ.

ಮುಪ್ಪಿನಾರ್ಯರ ಹಾಡುಗಳಲ್ಲಿ ಅನುಭಾವದ ತನಿವೆಳಗು ನಾದ ಮಾಧುರ್ಯದೊಡನೆ ಹದಗೊಂಡ ಶೈಲಿಯಲ್ಲಿ ಒಡಮೂಡಿದೆ. 'ಗಗನ ಗಿರಿಯ ಶಿಖರದ ಮೇಲೆ ಸೊಗಸುವ ರತ್ನ ಮಂಟಪದಲ್ಲಿ ಝಗಿಝಗಿಸುವ ಶಶಿಸೂರ್ಯ ಪ್ರಭೆಯೊಳಗೆ ಅಗಲದೆ ಬೆಳಗುವ ತೇಜವನ್ನು' ಅವರು ತಮ್ಮ ಗೀತಗಳಲ್ಲಿ ಸೆರೆಹಿಡಿಯಲು ಪ್ರಯತ್ನಿಸಿದ್ದಾರೆ. 'ಶಂಖ, ಕಿನ್ನರಿ, ನಾಗಸರ, ವೀಣೆ, ಝೇಂಕರಿಸುವ ಘಂಟೆ, ಜಾಗಟೆ, ಕಿಂಕಿಣಿ, ಭೇರಿ, ದುಂದುಭಿಯೊಡನೆ ಓಂಕಾರನಾದವಾಗುವದನ್ನು' ಅವರ ನಾದ ಲಹರಿ ತೇಲಿಸಿ, ತಂದಿದೆ; 'ತೊಳಗುವ ಚಂದ್ರಾರ್ಕರ ಮಿಂಚಿನ ಕೋಟಿಯು ಬೆಳಕಿನಿಂದ ಸಕಲವೂ ಬೆಳಗುತ್ತ ಒಲಿದ ಷಡಕ್ಷರಲಿಂಗವು ಅಲ್ಲಿ ನೆಲಸಿರುವದನ್ನು' ತೋರಿಸುವದೇ ಅವರ ಈ ಹಾಡುಗಳ ಗುರಿಯಾಗಿದೆ.

ಶ್ರೀ ಕಾವ್ಯಾನಂದರು ಇವರ ಹಾಡುಗಳಲ್ಲಿಯ ಕಾವ್ಯದ ಭಾವ-ರಸ-ರುಚಿಯನ್ನು ಕ್ರೋಢೀಕರಿಸಿ ಹೀಗೆ ಹೇಳಿದ್ದಾರೆ: "ಮುಪ್ಪಿನಾರ್ಯರ ಹಾಡುಗಳಲ್ಲಿ ಭಾವವೆಲ್ಲ ಅನುಭಾವ, ರಸವೆಲ್ಲ ಸಮರಸ, ರುಚಿಯೆಲ್ಲ ಶುಚಿ; ಅಧ್ಯಾತ್ಮ ಜೀವಿಯ ಅಂತರಂಗದ ಆಕಾಂಕ್ಷೆಗಳೇ ಹಾಡಿನ ಹೊನಲಾಗಿ ಹರಿದಿರುವ ಮೂಲಕ ಸಾಯುಜ್ಯೋನ್ಮುಖರತಿಯ ಮನೋಹರತ್ವವೂ ಅಪರೋಕ್ಷ ಜ್ಞಾನದ ಬೆಳಕೂ, ಸರ್ವಾರ್ಪಣ ಭಾವದ ಸೌಂದರ್ಯವೂ ವೀರವಿರತಿಯ ಗಾಂಭೀರ್ಯವೂ ಮಧುರ ಭಕ್ತಿಯ ಮನೋಜ್ಞತೆಯೂ, ಹಾಡುಗಳ ತುಂಬೆಲ್ಲ ಸಾಂದ್ರವಾಗಿ ಹರಡಿಕೊಂಡಿವೆ. ಋಷಿಕವಿಗಳ ಮಾಹಾತ್ಮ್ಯವನ್ನು ಕುರಿತು ೧೯೩೩ರಲ್ಲಿ ಶ್ರೀ ಬೇಂದ್ರೆಯವರು ವ್ಯಕ್ತಪಡಿಸಿರುವ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನೆನೆಯಬಹುದು: "ನಮಗೆ ಈಗ ಬೇಕಾದವರು ಅಷ್ಟಾದಶವರ್ಣನದ, ಚಕೋರಚಾತಕಗಳ ಸಮಯದ ಕವಿಗಳಲ್ಲ. ಸೃಷ್ಟಿಯ ಪೂಜಾರಿಗಳಾದ, ವಿಕಾರ ಮೂಢ ವಿಕಾರಗಳನ್ನು ತಾಳಲಯಕ್ಕೆ ಹಾಡುವ ಕವಿಗಳಲ್ಲ. ನಮಗೆ ಬೇಕಾದವರು ಋಷಿಗಳು, ಮಂತ್ರ ದ್ರಷ್ಟಾರರಾದ ಋಷಿಗಳು. ಮೊದಲು ಭಾವ ಯೋಗ ಬಲದಿಂದ ಅಪರೋಕ್ಷ ಜ್ಞಾನವನ್ನೂ ಶೋಕನಿವೃತ್ತಿಯನ್ನೂ ನಿರಂಕುಶ ವೃತ್ತಿಯನ್ನೂ ಪಡೆದ ಪ್ರಾಸಾದಿಕ ಕವಿಗಳು ಬೇಕು" ಮುಪ್ಪಿನ ಷಡಕ್ಷರಿ ಇಂಥ ಪ್ರಾಸಾದಿಕ ಕವಿಗಳಲ್ಲಿ ಒಬ್ಬರೆಂದು ಧಾರಾಳವಾಗಿ ಹೇಳಬಹುದು.

ಆಧುನಿಕ ಕನ್ನಡ ಕಾವ್ಯದಲ್ಲಿ ಭಾವಗೀತೆ ಸಮುನ್ನತ ಸ್ಥಿತಿಯಲ್ಲಿರುವ ಕಾವ್ಯರೂಪ. ಹಾಡುಗಬ್ಬಗಳ ಪರಂಪರೆಯ ಸಾರವನ್ನು ತಕ್ಕುದಾಗಿ ಹೀರಿಕೊಂಡು ಇದು ಪುಷ್ಟಿಯನ್ನು ಪಡೆದಿರುವದು ಕಂಡ ಮಾತಾಗಿದೆ. ಆಧುನಿಕ ಕವಿಗಳಲ್ಲಿ ಕೆಲವರು ತಮ್ಮ ಹಾಡು-ಪಾಡುಗಳಲ್ಲಿ ಇಂಥ ಪ್ರತೀತಿಯನ್ನು ತೋರಿಸಿದ್ದಾರೆ; ಈ ಪರಂಪರೆಗೆ ಹೊಸ ಹೊಸ ಕಾಲುವೆ ತೋಡಿ ತಮ್ಮ ಕಬ್ಬದೋಂಟವನ್ನು ಕಂಗೊಳಿಸುವಂತೆ ಮಾಡಿದ್ದಾರೆ. ಕವಿವರ ಬೇಂದ್ರೆ

ಯವರ 'ಕೋಗಿಲೆ' 'ಚೆನ್ನಲಿಂಗವೇ' 'ಬೆಳಕಿನ ಲಿಂಗ' 'ಅಪ್ಪಾಯಸ' 'ಪಡೆದಪ್ಪ' ಹಾಗೂ 'ಹರಕೆ' ಮೊದಲಾದ ಸುಂದರ ಕವನಗಳಲ್ಲಿ ಮುಪ್ಪಿನಾರ್ಯರ ಹಾಗು ನಿಜಗುಣ ಶಿವಯೋಗಿಗಳ ಪ್ರಾಸಾದಿಕ ವಾಣಿಯ ಸ್ಫೂರ್ತಿಯನ್ನು ಕಾಣಬಹುದು. ಮನದಲ್ಲಿ ಅವರ ನೆನಹು ತುಂಬಿ, ಕಿವಿಯಲ್ಲಿ ಅವರ ಕೀರುತಿ ತುಂಬಿ ಹಾಡಿದ ಈ ಅನುಭಾವ ಗೀತಗಳ ನವೋನವತೆಯನ್ನು ಮನಗಾಣಿಸಲು ಅವರ 'ಹೃದಯ ಸಮುದ್ರ'ದ 'ಬೆಳಕಿನ ಲಿಂಗ'ದ ಒಂದು ನುಡಿಯನ್ನು ಇಲ್ಲಿ ಉದಾಹರಿಸಬಹುದು.

"ಮಾತಾಡೊ ಮಾತಾಡೊ ಲಿಂಗವೇ। ನೀ
ಮಾತಾಡಲೊಲ್ಲೇಕೆ ಲಿಂಗವೇ?
ಮಾತಿನ ಬಸಿರಲ್ಲಿ ನೆಲೆಗೊಂಡ ಮೌನದಿ
ಹೂತಂಥ ಬೆಳಕಿನ ಲಿಂಗವೇ."

ಇಂದಿನ ಕನ್ನಡ ಕಾವ್ಯದಲ್ಲಿ ಹೊಸ ಹೊಸ ಪ್ರಯೋಗಗಳು ನಡೆಯುತ್ತಿರುವದು ಅದರ ಬೆಳವಣಿಗೆಯ ಸಜೀವತೆಯ ಲಕ್ಷಣವಾಗಿದ್ದರೂ ಈ ಹಾಡುಗಬ್ಬದ ಹೊನಲು ಬತ್ತಿಹೋಗಬಹುದೆಂಬ ಶಂಕೆ ಮೂಡುವದೂ ಸಹಜ. ಆದರೆ ಭಾವ ಸೌಂದರ್ಯವನ್ನು ನಾದಲಹರಿಯಲ್ಲಿ ತೇಲಿಸಿ ತರುವ ಆತ್ಮದ ರಂಗುರೂಪನ್ನು ನಿರೂಪಿಸುವ ಈ ಗೀತಗಳ ಸಂಪ್ರದಾಯಕ್ಕೆ ಆಗೀಗ ಹೊಸ ಸೆಲೆಯೊಡೆದು ಚೈತನ್ಯ ದೊರಕುವಲ್ಲಿ ಸಂದೇಹವಿಲ್ಲ.

□

ಕವಿ ರವೀಂದ್ರರ ವಿಶ್ವೋನ್ನತ ಚಿಂತನ ಪ್ರಭೆ

—ಸದಾಶಿವ ಒಡೆಯರ

ರವೀಂದ್ರನಾಥರ ಸಾಹಿತ್ಯ ಗುಣದಲ್ಲಿಯೂ ಗಾತ್ರದಲ್ಲಿಯೂ ಸಮೃದ್ಧವಾದದ್ದು. ಕವೀಂದ್ರರೆಂದು ಖ್ಯಾತಿವೆತ್ತ ಅವರು ನಾಟಕ, ಕಾದಂಬರಿ, ಪ್ರಬಂಧ, ವಿಮರ್ಶೆ, ಸಣ್ಣ ಕತೆ, ರಾಜಕೀಯ ಬರಹ ಪತ್ರಲೇಖನ, ಜೀವನ ದರ್ಶನ, ಚುಟುಕು, ಹರಟೆ, ಸಮಾಜ ಸಮೀಕ್ಷೆ, ಈ ಎಲ್ಲ ತರಹದ ಬರವಣಿಗೆಗಳಿಂದ ಸಾಹಿತ್ಯ ಭಂಡಾರವನ್ನು ತುಂಬಿದರು. ಅವರ ಸಾಹಿತ್ಯ ಸೃಷ್ಟಿಯ ವ್ಯಾಪ್ತಿ ವೈವಿಧ್ಯಗಳು ಬೆರಗುಗೊಳಿಸುವಂತಹವು. ಅವರ ಸಮಗ್ರ ಬರಹಗಳು ಸುಮಾರು ೧೬,೦೦೦ ಪುಟಗಳನ್ನು ತುಂಬುವಷ್ಟಾಗಬಹುದೆಂದು ಅಂದಾಜು ಮಾಡಲಾಗಿದೆ. ಈ ಸಾಹಿತ್ಯ ನಿಧಿ ಅನೇಕ ಉದಾತ್ತ ಹಾಗೂ ಮಹೋನ್ನತ ವಿಚಾರಗಳ ಖಣಿ.

ವಿಶ್ವಮಾನವ:

ಕವಿ ರವೀಂದ್ರರು ಶ್ರೇಷ್ಠತಮ ಮಾನವತಾವಾದಿ. ಅವರು ಮಾನವಜನಾಂಗವನ್ನೇ ಪ್ರೀತಿಸಿದರು. ಅದಕ್ಕೆ ದೇಶಗಳ ಜನಾಂಗಗಳ ಶೃಂಖಲೆಯಿಲ್ಲ. ವಿಶ್ವವೇ ತಮ್ಮ ಮನೆಯೆಂದು ಅವರು ಬಗೆದರು. ಅವರು ಸ್ಥಾಪಿಸಿ ಪೋಷಿಸಿದ ಶಾಂತಿನಿಕೇತನದಲ್ಲಿಯ ವಿಶ್ವಭಾರತಿಯ ಕುರುಹಿನಲ್ಲಿ[1] "ಎಲ್ಲಿ ವಿಶ್ವ ಒಂದೆಡೆ ನೆರೆಯುವದೋ"[2] ಎಂದು ಕಾಣಿಸಲಾಗಿದೆ, ರವೀಂದ್ರರು ವಿಶ್ವವು ಈಗ ಒಂದು ಸಮಾಜವಾಗಿದೆಯೆಂಬುದನ್ನು ಮಾನವ ಜನಾಂಗ ಅರಿಯಬೇಕಾಗಿದೆಯೆಂದು ಎಚ್ಚರಿಸಿದರು. ಪಶ್ಚಿಮ ಮತ್ತು ಪೂರ್ವ ಎಂಬ ಕೃತ್ರಿಮವಾದ ಗಡಿಗಳನ್ನು ನಿರ್ಮಿಸುವದು ಅಸಾಧುವಾದುದು. ಪಶ್ಚಿಮ ಹಾಗೂ ಪೂರ್ವಗಳು ಬೆರೆಯಬೇಕು. ಈ ಉದ್ದೇಶವನ್ನು ಸಾಧಿಸಲು ಮೊದಲನೇ ಕ್ರಮವೆಂದರೆ, ದೇಶಗಳ ಜನಾಂಗಗಳ ಜೀವನ ರೀತಿ ಹಾಗೂ ಸಂಸ್ಕೃತಿಗಳ ಬಗ್ಗೆ ಪರಸ್ಪರರಿಗೆ ಪರಿಚಯ ಮಾಡಿಕೊಡುವದು. ಹೀಗೆ ವಿಶ್ವಭಾರತಿಯ ಉದ್ದೇಶವು ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ದೇಶಗಳ ಸಾಂಸ್ಕೃತಿಕ ಸಮ್ಮಿಳನ, ಹಾಗೂ ತನ್ಮೂಲಕ ಮಾನವ ಜನಾಂಗದಲ್ಲಿ ಸೌಹಾರ್ದವನ್ನುಂಟು ಮಾಡುವುದೇ ಆಗಿದ್ದಿತು. ಅದು ವಿಶ್ವ ಸಂಸ್ಕೃತಿಯ ಕೇಂದ್ರವಾಗಬೇಕೆಂದು ಅವರು ಬಗೆದರು. ವಿಶ್ವ ಒಂದಾಗಿ ಬಾಳಬೇಕು. ಇಲ್ಲವಾದರೆ ಸರ್ವನಾಶ ಖಂಡಿತವೆಂದು ಅವರು ಎಚ್ಚರಿಸಿದರು. ರವೀಂದ್ರರು ವಿಶ್ವಕುಟುಂಬದ ವಿಚಾರದ

---

1 Emblem.

2 Where The world meets at one place

ಪ್ರತಿಪಾದಕರಾಗಿದ್ದರು. ರವೀಂದ್ರರು ಅಮೇರಿಕೆಯಲ್ಲಿದ್ದಾಗ ಬರೆದ ಗೀತೆಯೊಂದು ಹೀಗಿದೆ.

"ನಾನು ಪ್ರಪಂಚದ ಕವಿ;
ವಿಶ್ವದ ಎಲ್ಲ ಸ್ವರಗಳು, ನನ್ನ ಕೊಳಲಿನಲ್ಲಿ ಪ್ರತಿಧ್ವನಿಗೊಳ್ಳುತ್ತವೆ."

ವಿಶ್ವಬಂಧುತ್ವ, ವಿಶ್ವಪ್ರೇಮ, ಅವರ ಕಾವ್ಯದ, ಸಾಹಿತ್ಯದ ಮುಖ್ಯ ಸಂದೇಶವಾಗಿತ್ತು. ಅವರು ಪ್ರಪಂಚವನ್ನೇ ಮಾನವ ಜನಾಂಗವನ್ನೇ ಪ್ರೀತಿಸಿದರು. ಅಂತೆಯೇ ಅವರನ್ನು "ವಿಶ್ವಮಾನವ" ಎಂದು ಕರೆಯಲಾಯಿತು. ತಮ್ಮ "ಮಾನವರ ಐಕ್ಯತೆ"[3] ಎಂಬ ಕೊನೆಯ ಭಾಷಣವೊಂದರಲ್ಲಿ ರವೀಂದ್ರರು "ವಿಶ್ವದ ಜನಾಂಗಗಳು ಒಂದು ದಿನ ಬೆರೆಯುವದು ಖಂಡಿತ" ಎಂದು ಹೇಳಿದರು. ರವೀಂದ್ರರ ಈ ವಿಶ್ವಮಾನವ ದೃಷ್ಟಿಯನ್ನು ಪ್ರಪಂಚದ ಅನೇಕ ಮೇಧಾವಿಗಳು ಮೆಚ್ಚಿಕೊಂಡರು. ಖ್ಯಾತ ಫ್ರೆಂಚ ಸಾಹಿತಿ ರೊಮೆ ರೋಲಾ "ಈ ಪೂರ್ವ ಮತ್ತು ಪಶ್ಚಿಮ ಗೋಲಾರ್ಧಗಳ ಆತ್ಮಪ್ರೇಮ ಸೌಹಾರ್ದತೆಗೆ ಎಲ್ಲರಿಗಿಂತ ಹೆಚ್ಚಿನ ಕೊಡುಗೆಯಿತ್ತವರು ರವೀಂದ್ರರು"[4] ಎಂದು ಉದ್ಗರಿಸಿದರು.

ದೇಶಾಭಿಮಾನಿ:

ಮಾನವತಾವಾದಿಯಾದ ರವೀಂದ್ರರು ಉತ್ಕಟ ದೇಶಾಭಿಮಾನಿಯಾಗಿದ್ದರು. ದೇಶಾಭಿಮಾನದ ಹೆಸರಿನಲ್ಲಿ ನಡೆಯುತ್ತಿದ್ದ ಭಾವೋದ್ರೇಕದ ಚಟುವಟಿಕೆಗಳಿಂದ ದೂರ ಉಳಿದರು. ಭಾರತದ ನಿಜವಾದ ಕಲ್ಯಾಣ ಹೇಗೆ ಆದೀತು ಎಂಬುದರ ಬಗ್ಗೆ ಅವರು ಸದಾ ಚಿಂತಿಸುತ್ತಿದ್ದರು. ಭಾರತದ ಮುಂದೆ ಇದ್ದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರ ದೊರಕಿಸಲು ಅವರು ಯೋಚಿಸತೊಡಗಿದರು. ಬಹುದಿನಗಳಿಂದ ರವೀಂದ್ರರು ಪರತಂತ್ರ ಭಾರತದ ದುರ್ದೆಸೆಗೆ ಅಂದಿನ ಹಳ್ಳಿಗಳ ಹೀನಸ್ಥಿತಿ ಒಂದು ಮುಖ್ಯ ಕಾರಣ ಎಂಬುದನ್ನು ಅರಿತಿದ್ದರು. ಭಾರತ ಹಳ್ಳಿಗಳ ದೇಶ, ಹಳ್ಳಿಗಳ ಜೀವನ ಸುಧಾರಿಸದ ಹೊರತು ದೇಶದ ಉದ್ಧಾರವಾಗಲಾರದೆಂದು ಅವರು ಮನಗಂಡು ಕೆಲಕಾಲ ಹಳ್ಳಿಗಳಲ್ಲಿಯೇ ವಾಸವಾಗಿ ಅವರ ಸಂಕಷ್ಟಗಳನ್ನು ಅರಿತರು. ಪಾಶ್ಚಿಮಾತ್ಯ ಸಂಸ್ಕೃತಿಯ ವ್ಯಾಮೋಹಕ್ಕೊಳಗಾಗಿ ದೊಡ್ಡ ದೊಡ್ಡ ಜಮೀನ್‌ದಾರರು ಪಟ್ಟಣಗಳಲ್ಲಿ ವಾಸಿಸ ತೊಡಗಿದರು. ಹಳ್ಳಿಗಳಿಗೆ ಶತಮಾನಗಳಿಂದ ಇದ್ದ ಅವರ ಮುಖಂಡತ್ವ, ಆಶ್ರಯ ಇಲ್ಲದಾಯಿತು. ಹಳ್ಳಿಗರ ಸಾಮಾಜಿಕ ಹಾಗೂ ಆರ್ಥಿಕ ಜೀವನ ಹಾಳಾಯಿತು. ಬೇಸಾಯ, ಕೈಗಾರಿಕೆ ನಾಶವಾದವು ಹಳ್ಳಿಯ ಕಲೆಗಳು ಕ್ಷೀಣಿಸಿದವು. ಸ್ವಾವಲಂಬಿಯಾಗಿದ್ದ ಹಳ್ಳಿಯು ಒಡೆದು ಚೂರಾಯಿತು. ಅದಕ್ಕಾಗಿ ಮೊದಲು ಹಳ್ಳಿಗಳ, ಉದ್ಧಾರವಾಗ ಬೇಕು. ಈ ಉದ್ದೇಶಕ್ಕಾಗಿ ಅವರು 'ಶ್ರೀನಿಕೇತನ'ವಲ್ಲಿ 'ಹಳ್ಳಿಗಳ ಪುನರುದ್ಧಾರ'

3 'Unity of man'

4 Rabindranath Tagore contributed more Than any one else towards The union of These two hemispheres of the spirit

ಕೇಂದ್ರ[5] ಸ್ಥಾಪಿಸಿ ಹಳ್ಳಿಗರ ಜೀವನವನ್ನು ಸುಧಾರಿಸಲು ಯತ್ನಿಸತೊಡಗಿದರು. ಇಲ್ಲಿ ನಾವು ರವೀಂದ್ರರು ಕೇವಲ ವಿಚಾರಶೀಲ ಆದರ್ಶವಾದಿಗಳಾಗಿರದೆ, ಕಾರ್ಯಕುಶಲ ಕರ್ಮಯೋಗಿ ಕೂಡ ಆಗಿದ್ದರೆಂಬುದನ್ನು ಕಾಣಬಹುದು.

ಭಾರತದ ಅಂದಿನ ದೊಡ್ಡ ಸಮಸ್ಯೆಗಳಲ್ಲಿ ಹಿಂದು ಮುಸ್ಲಿಮರಲ್ಲಿ ಅನೈಕ್ಯತೆ ಒಂದಾಗಿತ್ತು. ಭಾರತ ಸ್ವಾತಂತ್ರ್ಯ ಹೋರಾಟಕ್ಕೆ ಹಿಂದು ಮುಸಲ್ಮಾನ ಐಕ್ಯತೆ ನಾಂದಿಯಾಗಬೇಕು ಎಂದು ಅವರು ನಂಬಿದ್ದರು. ಮುಸಲ್ಮಾನ ಧರ್ಮ ಹಾಗೂ ಸಂಸ್ಕೃತಿಗಳು ಭಾರತಕ್ಕೆ ಕೊಟ್ಟ ಕಾಣಿಕೆಗಳನ್ನು ಅವರು ನೆನೆದರು. "ಮಹಮ್ಮದೀಯರು ಹಿಂದುಸ್ಥಾನಕ್ಕೆ ಹೊರಗಿನಿಂದ ಬಂದವರು. ಆದರೆ ಅವರಿಗೆ ತಮ್ಮದೇ ಆದ ಜ್ಞಾನ ಭಂಡಾರವಿದೆ. ಮತ್ತು ಅಗಾಧವಾದ ಧಾರ್ಮಿಕ ಪ್ರಜಾಪ್ರಭುತ್ವವಿದೆ. ನಮ್ಮ ಸಂಗೀತ, ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯಗಳಿಗೆ ಮಹಮ್ಮದೀಯರು ತಮ್ಮ ಬೆಲೆಯುಳ್ಳ ಹಾಗೂ ಶಾಶ್ವತವಾದ ಕಾಣಿಕೆಯನ್ನು ಸಲ್ಲಿಸಿದ್ದಾರೆ."[6] ಎಂದು ಅವರು ಹೇಳಿದರು.

ಆದರೆ ಹಿಂದು ಮುಸಲ್ಮಾನರ ಐಕ್ಯತೆಗೆ ಹೆಣಗುವ ಸಮಾಜ ಸುಧಾರಕರಿಗೆ, ಅವರು ಈ ಸಮಸ್ಯೆಯನ್ನು ಎದುರಿಸುವಾಗ ಸತ್ಯಸಂಗತಿಯ ಅರಿವು ಇರಬೇಕು ಎಂದು ಎಚ್ಚರಿಸಿದರು. ಹಿಂದು ಮುಸಲ್ಮಾನರಲ್ಲಿ ಇದ್ದ ಭಿನ್ನಭೇದಗಳನ್ನು ಮುಚ್ಚಿಡುವವರಲ್ಲಿ ಅರ್ಥವಿಲ್ಲ; ನಮ್ಮ ಭೇದಭಾವಗಳನ್ನು ಕಂಡು, ಅವುಗಳಿದ್ದಾಗಿಯೂ ಕೂಡ ಸಹಕಾರದಿಂದ ಹೇಗೆ ಬಾಳಲು ಸಾಧ್ಯವೆಂಬುದನ್ನು ಜನತೆಯಲ್ಲಿ ಬಿಂಬಿಸಬೇಕು. "ಗೋಡೆಯಲ್ಲಿಯ ಬಿರುಕಿನ ಮೇಲೆ ಬಣ್ಣ ಬಳಿದು, ಅದು ಅಲ್ಲಿ ಇಲ್ಲವೆಂದು ತೋರಿಸಿಕೊಳ್ಳುವವರಲ್ಲಿ ಪ್ರಯೋಜನವಿಲ್ಲ. ಸ್ವಲ್ಪ ಸಮಯದ ಮೇಲೆ ಬಣ್ಣ ಬಳಿದಿದ್ದರೂ ಬಿರುಕು ಸ್ಪಷ್ಟವಾಗಿ ಕಾಣತೊಡಗುತ್ತದೆ. ಅದೇ ರೀತಿಯಲ್ಲಿ ಹಿಂದು ಮುಸ್ಲಿಂರಲ್ಲಿಯ ನಿಜವಾದ ವ್ಯತ್ಯಾಸಗಳನ್ನು ನಾವು ಪ್ರಾಮಾಣಿಕ ಬುದ್ಧಿಯಿಂದ ಮನ್ನಿಸಬೇಕು. ಅವುಗಳನ್ನು ಗುರುತಿಸಿ ಅರ್ಥಮಾಡಿಕೊಳ್ಳುವ ತೊಂದರೆಯನ್ನು ನಾವು ತೆಗೆದುಕೊಂಡರೆ, ಎಷ್ಟೋ ಭಿನ್ನಾಭಿಪ್ರಾಯಗಳಿದ್ದರೂ ನಾವು ಸ್ನೇಹ ಭಾವದಿಂದ ಕೂಡಿಬಾಳಲು ಶಕ್ತರಾಗುತ್ತೇವೆ."[7] ಎಂದು ಅವರು ಹೇಳಿದರು.

---

5 Rural Reconstraction centre

6 'The Mahomedan has come to India from outside laden with his own stores of knowledge, and his wonderful religeous democrecy. In our music, our architecture, our Picture art, our literature The Mahomedans have made their precious and permenonh contribution'

7 ''It is no use to paint over a crack in a wall, and prented it is not There. soon the crack will be seen Plainly inspite of the paint In the same way the real differences between the Hindus and the muslims must be honesty recognised. If we Teke the trouble to recognise and understand, Then we shall be able to live together in a frendly way inspite of the differences.''

ಹೀಗೆ ಭಾರತದ ಜನತೆಯ ಕಲ್ಯಾಣಕ್ಕಾಗಿ ಅಹರ್ನಿಶಿ ಚಿಂತಿಸಿದ ರವೀಂದ್ರರು ಭಾರತದ ಹಿತಕ್ಕೆ ಧಕ್ಕೆಯಾದಾಗ ನಿರ್ಭೀತಿಯಿಂದ ಪ್ರತಿಭಟಿಸುತ್ತಿದ್ದರು. ಅಂಥ ಸಂದರ್ಭಗಳಲ್ಲಿ ಅವರು ಯಾವ ತ್ಯಾಗಕ್ಕಾದರೂ ಸದಾಸಿದ್ಧರಾಗಿದ್ದರು. ಭಾರತೀಯ ಸ್ವಾತಂತ್ರ್ಯ ಸಾಧನೆಯ ಹೋರಾಟವು ಶಕ್ತಿಯುತವಾದ ಹಾಗೂ ವ್ಯಾಪಕವಾದ ಭದ್ರ ತಳಹದಿಯನ್ನು ಪಡೆದದ್ದು ಕ್ರಿ. ಶ. ೧೯೦೫ರಲ್ಲಿ. ಆ ವರ್ಷ ಬಂಗಾಲ ಪ್ರಾಂತವನ್ನು ಇಬ್ಭಾಗಿಸಬೇಕೆಂಬ ಆಂಗ್ಲರ ಯೋಜನೆಯನ್ನು ರವೀಂದ್ರ ಪ್ರಖರವಾಗಿ ಪ್ರತಿಭಟಿಸಿದರು. ಈ ಹೋರಾಟದಲ್ಲಿ ರವೀಂದ್ರರು ಪ್ರಮುಖ ಪಾತ್ರವಹಿಸಿದರು. ಕ್ರಿ ಶ. ೧೯೧೯ರಲ್ಲಿ ಜಾಲಿಯನ್‌ವಾಲಾಬಾಗ ಹತ್ಯಾಕಾಂಡವಾದಾಗ ರವೀಂದ್ರರು ತಮಗೆ ಬ್ರಿಟೀಷ್ ಸರಕಾರದವರು ನೀಡಿದ ನೈಟಪದವಿಯನ್ನು ಬಿಟ್ಟುಕೊಟ್ಟು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಭಾರತದ ರಾಷ್ಟ್ರಗೀತೆಯನ್ನು ನೀಡಿದವರು ಕವೀಂದ್ರ ರವೀಂದ್ರರು. ಈ ರಾಷ್ಟ್ರಗೀತೆಯಲ್ಲಿ ಸರ್ವಶಕ್ತವಾದ ಪರಮಾತ್ಮನ ಸ್ಮರಣೆಯೊಂದಿಗೆ, ಭಾರತದ ಕಹಳೆಯಿದೆ. ಸಂಗೀತದ ಮಾಧುರ್ಯ ಹೊಂದಿದ ಈ ಅರ್ಥಪೂರ್ಣ ಗೀತೆ ಅತ್ಯಂತ ಸ್ಫೂರ್ತಿದಾಯಕವಾದ ರಾಷ್ಟ್ರಗೀತೆಯಾಗಿ ಮೆರೆದಿದೆ.

ವಿಶ್ವಶಾಂತಿಯ ಪ್ರವಾದಿ:

ರವೀಂದ್ರರು ಯಾವಾಗಲೂ ಯುದ್ಧಗಳ ಪ್ರಬಲ ವಿರೋಧಿಯಾಗಿದ್ದರು. ಸ್ವಾರ್ಥ ಹಾಗೂ ಅಧಿಕಾರ ಲಾಲಸೆಗಾಗಿ ಅನ್ಯದೇಶಗಳೊಡನೆ ಯುದ್ಧಕ್ಕೆ ಬಳಸುವ ಪ್ರವೃತ್ತಿಯನ್ನು ಅವರು ಖಂಡಿಸಿದರು. ಕ್ರಿ. ಶ. ೧೯೧೭ರಲ್ಲಿ ಅವರು ಜಪಾನ ದೇಶಕ್ಕೆ ಭೇಟಿಯಿತ್ತಾಗ, ಒಂದು ಪ್ರದರ್ಶನದಲ್ಲಿ ಚೀನಿಯರಿಂದ ಗೆದ್ದುತಂದ ಕೆಲವು ಯುದ್ಧದ ಅವಶೇಷಗಳನ್ನು ಪ್ರದರ್ಶಿಸಲಾಗಿತ್ತು. ಅದನ್ನು ಕಂಡು, ರವೀಂದ್ರರ ಮನಸ್ಸು ನೊಂದಿತು. ಈ ವಿಷಯವನ್ನು ಜಪಾನದಲ್ಲಿ ಅವರು ಟೋಕಿಯೋ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯತ್ವ ಎಂಬ ಭಾಷಣದಲ್ಲಿ ಪ್ರಸ್ತಾಪಮಾಡಿ ಜಪಾನೀಯರು ನಾಚಿಕೆಪಡುವಂತೆ ಮಾಡಿದರು. ಜಪಾನದ ಉನ್ನತ ರಾಷ್ಟ್ರೀಯತೆಯ ಫಲ ಅವರು ಒಂದು ದಿನ ಉಣ್ಣಬೇಕಾದೀತು ಎಂದು ಎಚ್ಚರಿಸಿದರು. ಅವರು ಉಳಿದ ಜನಾಂಗಗಳಿಗೆ ನೀವು ಉಂಟು ಮಾಡುವ ನೋವು ನಿಮ್ಮನ್ನು ಸೋಂಕದೇ ಇದ್ದೀತೇ? ಒಂದು ಕ್ಷಣ ವಿಚಾರಿಸಿರಿ. ನಿಮ್ಮ ಮನೆಯ ಸುತ್ತಲೂ ನೀವು ಬಿತ್ತುವ ದ್ವೇಷದ ಬೀಜಗಳು ಭವಿಷ್ಯದಲ್ಲಿ ನಿಮಗೆ ರಕ್ಷಣೆಯ ಗೋಡೆಗಳನ್ನು ನಿರ್ಮಿಸುವವೆಂದು ಬಗೆದಿರುವಿರಾ? ತನ್ನ ಸ್ವಂತ ಶ್ರೇಷ್ಠತೆಯ ವಿಪರೀತ ಗರ್ವದಿಂದ ಇಡಿಯ ಜನತೆಯ ಮನಸ್ಸನ್ನು ತುಂಬಿ ಹುರಿದುಂಬಿಸುವದು, ತನ್ನ ನೈತಿಕ ನಿರ್ದಯತೆಯಲ್ಲಿಯೂ ಮತ್ತು ಅಧರ್ಮದಿಂದ ಗಳಿಸಿದ ಸಂಪತ್ತಿನಲ್ಲಿಯೂ ಅಭಿಮಾನ ಪಡುವಂತೆ ಬೋಧಿಸುವದು, ಯುದ್ಧದಿಂದ ಗೆದ್ದ ಫಲಕಗಳನ್ನು ಪ್ರದರ್ಶಿಸಿ ಸೋತ ರಾಷ್ಟ್ರಗಳ ತೇಜೋಭಂಗವನ್ನು ಸ್ಥಿರಗೊಳಿಸುವದು, ಮಕ್ಕಳ ಮನಸ್ಸಿನಲ್ಲಿ ಅವರ ಬಗ್ಗೆ

ದ್ವೇಷ ಭಾವನೆ ಬೆಳೆಸಲು ಇವುಗಳನ್ನು ಶಾಲೆಗಳಲ್ಲಿ ಉಪಯೋಗಿಸುವದು ಇವೆಲ್ಲ ಕೊಳೆತ ಹುಣ್ಣನ್ನು ಬೆಳೆಸಿಕೊಂಡಿರುವ ಪಶ್ಚಿಮ ದೇಶಗಳನ್ನು ಅನುಕರಿಸಿದಂತೆ. ಅದು ಉಬ್ಬಿ ಬಾತಿದೆ. ಅದರ ಸಾರವನ್ನೆಲ್ಲ ಹೀರಿ ಕೊಳೆತು ಉಬ್ಬಿರುವ ಬಾವದು.[8] ಎಂದು ಉಚ್ಚರಿಸಿದರು.

ರವೀಂದ್ರರು ಜಪಾನ ದೇಶದ ಆಕ್ರಮಣಶೀಲ ಪ್ರವೃತ್ತಿಯನ್ನು ಅನೇಕ ಸಲ ಬಲವಾಗಿ ಖಂಡಿಸಿದ್ದುಂಟು. ಕ್ರಿ. ಶ. ೧೯೩೯ರಲ್ಲಿ ತಮ್ಮ ಮಿತ್ರರಾದ ಶಾಸ್ತ್ರಜ್ಞ, ಗೋಪಿಯವರಿಗೆ ಬರೆದ ಪತ್ರದಲ್ಲಿ "ನಿಮ್ಮ ಜನತೆಯ ಬಗ್ಗೆ ಅತ್ಯಂತ ದುಃಖದಿಂದ ಬರೆಯುತ್ತಿದ್ದೇನೆ. ಕೊನೆಗೆ ಒಂದು ದಿನ ನಿಮ್ಮ ಜನತೆಗೆ ಸಂಪೂರ್ಣ ಭ್ರಮನಿರಸನವುಂಟಾಗುವದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ಎಷ್ಟೋ ಶತಮಾನಗಳ ವರೆಗೆ ತಮ್ಮವರೇ ಆದ ಯುದ್ಧಖೋರ ಮನೋವೃತ್ತಿಯಿಂದ ಹಾಳಾದ ತಮ್ಮ ನಾಗರಿಕತೆಯ ಭಗ್ನಾವಶೇಷಗಳನ್ನು ಅತ್ಯಂತ ಕಷ್ಟದಿಂದ ಆವರು ಸ್ವಚ್ಛಗೊಳಿಸಬೇಕಾಗುತ್ತದೆ"[9] ಎಂದು ಸ್ಪಷ್ಟವಾಗಿ ಎಚ್ಚರಿಸಿದರು. ಅಂದು ಅವರು ಕೊಟ್ಟ ಎಚ್ಚರಿಕೆ ಕ್ರಿ. ಶ. ೧೯೪೫ರಲ್ಲಿ ಅಮೇರಿಕಾ ನಾಗಾಸಾಕಿಯ ಮೇಲೆ ಎಟಂಬಾಂಬ ಹಾಕಿದಾಗ ಸತ್ಯವಾಗಿ ಪರಿಣಮಿಸಿತು. ರವೀಂದ್ರರ ಈ ಮುನ್ನೆಚ್ಚರಿಕೆ ಪ್ರವಾದಿಯ ಭವಿಷ್ಯವಾಣಿಯಾಗಿದ್ದಿತು.

ಮಾನವೀಯತೆಯನ್ನು ಕಡೆಗಾಣಿಸಿ ಯಾವ ರಾಷ್ಟ್ರವೂ ಉತ್ಕರ್ಷ ಹೊಂದಲಾರದು. ಜಗತ್ತಿನ ಇತಿಹಾಸವೇ ಇದಕ್ಕೆ ನಿದರ್ಶನ. ತಮ್ಮ 'ರಾಷ್ಟ್ರಾಭಿಮಾನ' ಭಾಷಣಮಾಲಿಕೆಯಲ್ಲಿ ಅವರು "ಗ್ರೀಕ ಚಕ್ರಾಧಿಪತ್ಯ, ರೋಮ ಸಾಮ್ರಾಜ್ಯಇಂದು ಹೇಳ ಹೆಸರಿಲ್ಲದಾಗಿವೆ. ಆದರೆ ಚೀನಾ ಬದುಕಿದೆ. ಇದಕ್ಕೆ ಕಾರಣವೆಂದರೆ ಚೀನಾ ಮಾನವತೆಯನ್ನು ಬಿಟ್ಟುಕೊಡಲಿಲ್ಲ" ಎಂದು ಹೇಳಿದರು. "ಯಾವ ದೇಶದಲ್ಲಿ ಮಾನವೀಯತೆಗೆ ಬೆಲೆಯಿಲ್ಲವೋ ಆ ದೇಶ ಹಲವು ಕಾಲ ಭೌತಿಕ ಸಂಪತ್ತನ್ನು ಅನುಭವಿಸಿದರೂ, ಜಯಗಳಿಸಿದಂತೆ

---

8 "Never Think for a moment that the harts you inflict upon other races will not infect yours; or that the enemities that you sow around your home will be a wall of protection to you for all the time to come. To imbue the minds of a whole people with an abnormal vanity of its own superiority, to teach it to lake prido in its moral callousness and ill begotten wealth, To perpetuate the humiliation of defeated nations, by exhibiting trophies won from war and using these in schools in order to breed it children's minds contempt for others is imitating the west where she has a festering sore, whose swellingis swelling of disease eating into its vitality."

9 I speak with ulter sorrw for your people. I know that one day The disillusionment of your People will be complete, and through laborious centuries They will have to clear the debris of their civilisation wrought to rain by their own war-lords run amack."

ಕಂಡರೂ, ಆ ಸಂಪತ್ತು ಆ ಸಮೃದ್ಧಿ ಶಾಶ್ವತವಾಗಲಾರವು" ಎಂದು ಅವರು ಹೇಳಿದ್ದುಂಟು.

ಉತ್ಕಲ ರಾಷ್ಟ್ರೀಯತೆಯ ವಿರೋಧಿ:

'ಒಳ್ಳೆಯದೇ ಆಗಲಿ ಕೆಟ್ಟದ್ದೇ ಆಗಲಿ ನನ್ನ ದೇಶ' ಎಂಬ ರಾಷ್ಟ್ರೀಯತೆಯನ್ನು ರವೀಂದ್ರರು ಎಂದೂ ಒಪ್ಪಲಿಲ್ಲ. ಸ್ವಾರ್ಥಪರ, ಭಾವೋದ್ರೇಕದ ರಾಷ್ಟ್ರಪ್ರೇಮವನ್ನು ರವೀಂದ್ರರು ಎಂದೂ ಪುರಸ್ಕರಿಸಲಿಲ್ಲ. 'ಕೇವಲ ರಾಷ್ಟ್ರೀಯ ಭಾವನೆಗಳನ್ನು ಕೆರಳಿಸುವದೆಂದರೆ ಬೆಂಕಿಯೊಡನೆ ಆಟವಾಡಿದಂತೆ' ಎಂದು ಹೇಳಿದ್ದುಂಟು. ಇನ್ನೊಂದೆಡೆ "ಅವರು ರಾಷ್ಟ್ರೀಯತೆ ಒಂದು ತರಹದ ಭಾವೋದ್ರೇಕ. ಆದರೆ ಈ ಭಾವೋದ್ರೇಕದಲ್ಲಿ ಪ್ರಪಂಚ ನಿರ್ಮಾಣದ ಹಾಗೂ ವಿನಾಶದ ಶಕ್ತಿಗಳು ಅಡಗಿವೆ" ಎಂದು ಹೇಳಿದರು. ರಾಷ್ಟ್ರೀಯತೆಯ ಅನಿಷ್ಟ ಪರಿಣಾಮಗಳನ್ನೇ 'ರಾಷ್ಟ್ರೀಯತೆ' ಎಂಬ ಗ್ರಂಥದಲ್ಲಿ ಕೂಲಂಕಷವಾಗಿ ಚರ್ಚಿಸಿದ್ದಾರೆ. ರಾಷ್ಟ್ರೀಯತೆಯಲ್ಲಿ ಅಚಲ ಶ್ರದ್ಧೆಯುಳ್ಳ ಒಂದು ದೇಶದ ಸರಕಾರದಲ್ಲಿ ಮುಖ್ಯತಃ ಮೂರು ದೋಷಗಳನ್ನು ಅವರು ಎತ್ತಿತೋರಿಸುತ್ತಾರೆ. ಅವೆಂದರೆ, ೧) ಕೇವಲ ರಾಷ್ಟ್ರದ ಅಭ್ಯುದಯವನ್ನೇ ಗುರಿಯಾಗಿಟ್ಟುಕೊಂಡಿರುವ ರಾಷ್ಟ್ರದಲ್ಲಿ ಸರಕಾರ ಒಂದು ನಿರ್ಜೀವ ವಸ್ತುವಾಗಿ ಕಾರ್ಯಮಾಡುತ್ತದೆ. ಆ ಯಂತ್ರ ಮುನ್ನುಗ್ಗಲು ಯಾವ ಶಕ್ತಿಯಾದರೂ, ಯಾವ ನೀತಿಯಾದರೂ ಸರಿ. ೨) ರಾಷ್ಟ್ರೀಯತೆಯಿಂದ ಒಂದು ದೇಶದ ಸ್ವಾರ್ಥ ಮಹತ್ವದ್ದಾಗುತ್ತದೆ. ತಮ್ಮ ಸ್ವಾರ್ಥದಿಂದ ಉಳಿದ ದೇಶಗಳಿಗೆ ಆಗುವ ತೊಂದರೆ ಸಂಕಷ್ಟಗಳ ಬಗೆಗೆ ಈ ನೀತಿ ವಿಚಾರ ಮಾಡಗೊಡುವದಿಲ್ಲ. ೩) ರಾಷ್ಟ್ರದ ಅಭ್ಯುದಯವೇ ಏಕಮಾತ್ರ ಗುರಿಯಾಗಿರುವಾಗ, ಸಾಮಾಜಿಕ ಅನ್ಯಾಯದ ಬಗೆಗೆ ಆ ಸರಕಾರ ಲಕ್ಷ್ಯ ಕೊಡುವದಿಲ್ಲ. ಶ್ರೀಮತಿ ಮೆಜೋರಿ ಸಾಯಿಕ್ಸ ಹೇಳಿದಂತೆ "ರವೀಂದ್ರರಿಗೆ ಉತ್ಕಟ ರಾಷ್ಟ್ರೀಯತೆ ಒಂದು ಹುಚ್ಚು ರಾಕ್ಷಸನಂತೆ ಕಂಡಿತು."[10]

'ಸ್ವದೇಶಿ ಚಳುವಳಿ' ಹಾಗೂ 'ದೇಶಾಭಿಮಾನ' ಇವುಗಳ ಬಗ್ಗೆ ರವೀಂದ್ರರು ಕೆಲವು ಮೂಲಭೂತ ಪ್ರಶ್ನೆಗಳನ್ನೇ ಎತ್ತುತ್ತಾರೆ. 'ಮನೆ ಮತ್ತು ಜಗತ್ತು'[11] ಎಂಬ ಕಾದಂಬರಿಯಲ್ಲಿ ಈ ಸಮಸ್ಯೆಗಳ ಬಗ್ಗೆ ರವೀಂದ್ರರ ವಿಚಾರಗಳು ಸ್ಫುಟವಾಗಿ ಒಡಮೂಡಿವೆ. ದೇಶಾಭಿಮಾನದ ಹೆಸರಿನಲ್ಲಿ ಜಯಘೋಷಗಳನ್ನು ಕೂಗುವ ಬಿಸಿರಕ್ತದ ತರುಣರಿಗೆ ಅವರು ಕೇಳುತ್ತಾರೆ. ದೇಶವೆಂದರೆ ಅದೊಂದು ನಕಾಶವೇ? ಅಥವಾ ಮಣ್ಣು ನೀರಿನಿಂದ ಕೂಡಿದ ಒಂದು ಭೌಗೋಳಿಕ ವಸ್ತುವೇ? "ಅವರೇ ಉತ್ತರಿಸಿ ದೇಶವೆಂದರೆ ಇವುಗಳಲ್ಲ. ಅದು ಅದರಲ್ಲಿರುವ ಜನತೆ." ಜನತೆಯ ಸುಖ ಕಲ್ಯಾಣವನ್ನು ನಿರ್ಲಕ್ಷಿಸುವ ಯಾವದೇ

10 "National pride seemed to him like a mad demon, making man blind to the right of other nations and careless of justice and Truth"

11 "The Home and The world"

ಕಾರ್ಯ ಅಥವಾ ಚಳುವಳಿ ದೇಶಾಭಿಮಾನವಾಗಲಾರದು, ಎಂದು ಅವರು ಹೇಳಿದರು.

ರವೀಂದ್ರರು ರಾಜಕೀಯ ಸ್ವಾತಂತ್ರ್ಯಕ್ಕಿಂತ, ಜನತೆಗೆ ಅತ್ಯವಶ್ಯವಾದದ್ದು ಸ್ವಾವಲಂಬನ ಹಾಗು ಸ್ವಾಭಿಮಾನ ಎಂದು ಬಗೆದರು. ಅವರೇ ಒಮ್ಮೆ ಹೇಳಿದರು "ನಮ್ಮ ದುರ್ದಶೆಗೆ ಪಾರತಂತ್ರ್ಯಕ್ಕಿಂತ ಪ್ರಬಲ ಕಾರಣ ಬೇರೊಂದಿದೆ, ಅದೇನೆಂದರೆ ನಮ್ಮ ಸ್ವಾಭಿಮಾನ ಹೀನತೆ. ನಾವು ಸ್ವಾತಂತ್ರ್ಯಕ್ಕೆ ಮೊದಲು ಅರ್ಹರಾಗಬೇಕು. ಇಂದು ನಾವು ಗುಲಾಮರಾಗಿರುವದು ಬ್ರಿಟೀಷರು ರಾಕ್ಷಸರಾಗಿರುವದರಿಂದ ಅಲ್ಲ-ನಾವು ಬಲಹೀನರಾಗಿರುವದರಿಂದ, ನಮ್ಮಲ್ಲಿ ಸ್ವಾಭಿಮಾನವಿಲ್ಲದ್ದರಿಂದ, ನಮ್ಮ ಶಕ್ತಿಯಲ್ಲಿ ನಾವು ಶ್ರದ್ಧೆಯಿರಿಸುವ ಬದಲು ಪರರ ತಪ್ಪುಗಳನ್ನು ಹುಡುಕಿ ತೆಗೆಯುವದರಲ್ಲಿ ತೊಡಗಿದ್ದೇವೆ"[12] ಎಂದು ಜೀವನ ದಾದ್ಯಂತವೂ ರವೀಂದ್ರರು ಭಾರತೀಯರಲ್ಲಿ ಈ ಸ್ವಾಭಿಮಾನ ಕೆರಳಿಸಲು ಯತ್ನಿಸಿದರು.

ಸಹಜೀವನದ ಹರಿಕಾರ:

ರವೀಂದ್ರರು ಒಂದೆಡೆ "ಜಗತ್ತಿನಲ್ಲಿ ಇತಿಹಾಸವೆಂದರೆ ಅದು ಒಂದೇ, ಅದು ಮಾನವತೆಯ ಇತಿಹಾಸ. ರಾಷ್ಟ್ರದ ಇತಿಹಾಸಗಳು ಅದರಲ್ಲಿ ಕೇವಲ ಅಧ್ಯಾಯಗಳು ಮಾತ್ರ. ಇಲ್ಲಿಯವರೆಗಿನ ಜಗತ್ತಿನ ಇತಿಹಾಸ ವಿಶ್ವಬಂಧುತ್ವದ ಪಾಠವನ್ನೇ ಹೇಳುತ್ತಾರೆ. "ಮಾನವನು ದಿನಗಳೆದಂತೆ, ಹೆಚ್ಚು ಹೆಚ್ಚು ದೊಡ್ಡ ದೊಡ್ಡ ಗುಂಪುಗಳಲ್ಲಿ ಸಹಜೀವನ ಪಾಠವನ್ನು ಕಲಿಯುತ್ತ ಬಂದಿರುವ ಕತೆಯೇ ಜಗತ್ತಿನ ಇತಿಹಾಸದ ಕತೆ"[13] ಎಂದು ಅವರು ಹೇಳಿದರು. "ಭಾರತದಲ್ಲಿ ಎಂದಿನಿಂದಲೂ ಅನೇಕ ಭಾಷೆಗಳನ್ನಾಡುವ,ಅನೇಕ ಮತ ಪಂಥಗಳ, ಅನೇಕ ಸಂಪ್ರದಾಯ ಸಂಸ್ಕೃತಿಗಳ ಜನರು ಕೂಡಿ ಸೌಹಾರ್ದತೆಯಿಂದ ಬಾಳುತ್ತ ಬಂದಿದ್ದಾರೆ ಭಾರತದ ಇತಿಹಾಸದಲ್ಲಿ ವಿಶ್ವಕ್ಕೆ ಏನಾದರೂ ಸಂದೇಶವಿದ್ದರೆ, ಅದು ಈ ಸಹಜೀವನದ ಸಂದೇಶ. ಉಳಿದ ಪೌರ್ವಾತ್ಯ ರಾಷ್ಟ್ರಗಳನ್ನು ಹಾಗೂ ಪಾಶ್ಚಿಮಾತ್ಯ ರಾಷ್ಟ್ರಗಳನ್ನು ಭಾರತ ಯಾವಾಗಲೂ ಸ್ನೇಹದಿಂದ ಕಾಣುತ್ತ ಬಂದಿದೆ. ಜಗತ್ತಿನ ಇಂದಿನ ದ್ವೇಷಮಯತೆಗೆ ಈ ಶಾಂತಿಯ ಸಂದೇಶ ಮಹತ್ವದ್ದಾಗಿದೆ. ಅದಕ್ಕಾಗಿ ಜಗತ್ತು ಇಂದು ಭಾರತದೆಡೆಗೆ ಆಶಾಪೂರ್ಣ ದೃಷ್ಟಿಯಿಂದ ನೋಡುತ್ತಿದೆ" ಎಂದು ರವೀಂದ್ರರು ಹೇಳಿದ ಮಾತು ಇಂದು ಬಹುಮಟ್ಟಿಗೆ ಸತ್ಯವಾಗಿರುವದನ್ನು ನಾವು ಅನುಭವ ದಿಂದ ಕಾಣುತ್ತಿದ್ದೇವೆ.

ಶಿಕ್ಷಣದಲ್ಲಿ ಉದಾತ್ತ ವಿಚಾರಗಳ ಉತ್ತೇಜನ:

ರವೀಂದ್ರರು ಶ್ರೇಷ್ಠ ಮಟ್ಟದ ಶಿಕ್ಷಣ ತಜ್ಞರಾಗಿದ್ದರು. ಪ್ರಪಂಚದ ಶಿಕ್ಷಣ ಕ್ಷೇತ್ರಕ್ಕೆ ಅವರು ತಮ್ಮದೇ ಆದ ಕೆಲವು ಹೊಸ ವಿಚಾರಗಳ ಕೊಡುಗೆಯನ್ನಿತ್ತಿದ್ದಾರೆ. ಅವುಗಳಲ್ಲಿ ಶಿಕ್ಷಣಕ್ಕೆ ಉದಾತ್ತ ಮಾನವೀಯ ಮೌಲ್ಯಗಳ ಮಹತ್ವವನ್ನು ಎತ್ತಿತೋರಿಸಿ, ಅವುಗಳನ್ನು

---

12 ''The country does not mean its soil, but The men on it''

13 History is a record of how man learned to work togehter little by little in larger and larger groups.

ಅವರೇ ಆರಂಭಿಸಿದ ವಿಶ್ವಭಾರತಿಯು ಕಾರ್ಯರೂಪದಲ್ಲಿ ತಂದು ತೋರಿಸಿದ್ದು ಅತಿ ಮಹತ್ವವಾದದ್ದು. ವಿಶ್ವಭಾರತಿ ವಿಶ್ವಸಂಸ್ಕೃತಿಯ ಕೇಂದ್ರವಾಗಬೇಕೆಂದು ಅವರ ಬಗೆದರು. ಶಾಂತಿನಿಕೇತನದಲ್ಲಿ ವಿಶ್ವಭಾರತಿಯನ್ನು ಸಂದರ್ಶಿಸಿದ ಚೀನಾದ ತಾನ್ ಯುನ್‌ಶಾನ್ ಎಂಬ ಶಿಕ್ಷಣತಜ್ಞರು "ಇದು ಮಾನವ ಸಂಸ್ಕೃತಿ ಹಾಗೂ ನಾಗರಿಕತೆಗಳ ಕೇಂದ್ರ" ಎಂದು ಮೆಚ್ಚಿಕೆ ವ್ಯಕ್ತಪಡಿಸಿದ್ದುಂಟು. ಶಿಕ್ಷಣದಲ್ಲಿ ದೇಶಾಭಿಮಾನವನ್ನು ಮೀರಿದ ಮಾನವತೆಯ ಉದಾತ್ತ ವಿಚಾರಗಳನ್ನು ಪುರಸ್ಕರಿಸಿದ ಕೀರ್ತಿ ರವೀಂದ್ರರಿಗೆ ಸಲ್ಲುತ್ತದೆ.

ಸ್ವಾತಂತ್ರ್ಯ ಹಾಗೂ ಹರ್ಷ:

ರವೀಂದ್ರರು ಶಿಕ್ಷಣ ಸಂಸ್ಥೆಗಳು 'ಸ್ವಾತಂತ್ರ್ಯ ಹಾಗೂ ಹರ್ಷದ ತಾಣ'ಗಳಾಗ[14] ಬೇಕೆಂದು ಬಗೆದರು. ಕಲಿಯುವದು ಒಂದು ಹರ್ಷದಾಯಕ ಅನುಭವವಾಗಬೇಕು. ರವೀಂದ್ರರು ಚಿಕ್ಕವರಿದ್ದಾಗ ಶಾಲೆಗಳು ಕಾರಾಗೃಹದಂತಿದ್ದವು. ಅವರು ತಮ್ಮ ಬಾಲ್ಯದ ನೆನಪು ತೆಗೆದಾಗಲೆಲ್ಲ ತಮ್ಮ ಶಾಲೆಯನ್ನು 'ಅಂದಮಾನವ'ವೆಂದೇ ಕರೆಯುತ್ತಿದ್ದರು. ಅವರ ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ ರವೀಂದ್ರರು ಇಂಥ ನಿರ್ಜೀವ ಕಾರಖಾನೆಯ ಶಿಕ್ಷಣ ಪದ್ಧತಿಯಿಂದ ಭಾವೀ ಜನಾಂಗದ ಮಕ್ಕಳನ್ನು ವಿಮುಕ್ತಗೊಳಿಸಬೇಕೆಂದು ರವೀಂದ್ರರು ನಿರ್ಧರಿಸಿದರು. ಮಕ್ಕಳು ಸ್ವತಂತ್ರವಾದ ಸುಂದರ ವಾತಾವರಣದಲ್ಲಿ ಬೆಳೆಯ ಬೇಕು. ಆಟಪಾಡುತ್ತ ಅವರು ಕಲಿಯಬೇಕು. ಎಳೆಯ ಮಕ್ಕಳಲ್ಲಿ ಶಾಲೆಯ ಬಗ್ಗೆ ಜುಗುಪ್ಸೆಗೆ ಮುಖ್ಯ ಕಾರಣವೆಂದರೆ ಶಾಲೆಯಲ್ಲಿ ಇದ್ದ ನಿರ್ಬಂಧಗಳು ತಮ್ಮ ಸುತ್ತ ಮುತ್ತಲಿನ ಜಗತ್ತಿನಿಂದ ಈ ಮಕ್ಕಳನ್ನು ಬೇರ್ಪಡಿಸಿ, ಕೋಟೆಯಂತ ಕಟ್ಟಡಗಳಲ್ಲಿ ಅವರನ್ನು ಕೂಡಿ ಹಾಕಿ, ಪಾಠಗಳನ್ನು ಸುರಿಸುವದರಿಂದ ಅವರ ವಿಚಾರಶಕ್ತಿ ಕಮರು ವದು. ತಮ್ಮ ಶಾಲೆಯ ದಿನಗಳನ್ನು ನೆನೆದು ರವೀಂದ್ರರು ತಾವು "ಶಾಲೆಗೆ ಹೋದೊಡನೆ ಒಂದು ಸುಂದರ ಸೃಷ್ಟಿ ಮಾಯವಾಗಿ ಕಲ್ಲುಗೋಡೆಯ ಕಾರಾಗೃಹದಲ್ಲಿ ತಮ್ಮನ್ನು ಇಳಿಸಿದಂತಾಯಿತು ಎಂದು ಹೇಳುತ್ತಾರೆ.

ಎಳೆಯ ಮಗು ಈ ವಾತಾವರಣವನ್ನು ಮೆಚ್ಚುವದೆಂತು? ಅದಕ್ಕಾಗಿ ನಿಸರ್ಗದ ಸುಂದರ ವಾತಾವರಣದಲ್ಲಿ, ಗಿಡಗಳ ನೆರಳಿನಲ್ಲಿ, ಹಕ್ಕಿಗಳ ಹಾಡಿನ ನಿನಾದ ಕೇಳುತ್ತ, ಅನೇಕ ವಿಷಯಗಳನ್ನು ನೋಡಿ ತಿಳಿದುಕೊಳ್ಳುವ ಕ್ರಮ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಫಲ ಕಾರಿ ಎಂದು ಅವರು ಬಗೆದರು. ರವೀಂದ್ರರು ಶಾಂತಿನಿಕೇತನದಲ್ಲಿ ಎಳೆಯ ಮಕ್ಕಳಿಗೆ ಗಿಡದ ನೆರಳಿನಲ್ಲಿ ಪಾಠ ನಡೆಸುವ ಕ್ರಮವನ್ನು ಪ್ರಾರಂಭ ಮಾಡಿದರು. 'ಮಕ್ಕಳು ಮಣ್ಣನ್ನು ಪ್ರೀತಿಸುವದು ಸಹಜ ಅವರ ಮೈಮನಗಳು ಹೂಗಳಂತೆ ಹವೆ ಬಿಸಿಲಿಗೆ ಹಾತೊರೆಯುತ್ತವೆ' ಎಂದು ರವೀಂದ್ರರು ಹೇಳುತ್ತಿದ್ದರು.

ನಾವು ಮಗವನ್ನು ಭೂಮಿಯಿಂದ ದೂರ ಕರೆದೊಯ್ದು ಕೋಣೆಯಲ್ಲಿ ಬಂಧಿಸಿ

---

14 Places of joy and freedom,

ಭೂಗೋಲ ಕಲಿಸುವದೆಂದರೆ ಆತನ ಕಣ್ಣು ಕಟ್ಟಿ ಕಲಿಸಲಿಕ್ಕೆ ಶ್ರಮಿಸಿದಂತಲ್ಲವೇ? ರವೀಂದ್ರರು ಒಬ್ಬ ಶಾಲೆಯ ಮುಖ್ಯಾಧ್ಯಾಪಕರ ಉದಾಹರಣೆಕೊಟ್ಟು ಈ ಮಾತನ್ನು ಹೇಳುತ್ತಾರೆ. ಈ ಉಪಾಧ್ಯಾಯರು ತಮ್ಮ ವಿದ್ಯಾರ್ಥಿಯೊಬ್ಬ ಗಿಡವ ಕೊಂಬೆಯ ಮೇಲೆ ಕುಳಿತು ಓದುವದನ್ನು ಬಲವಾಗಿ ಖಂಡಿಸುತ್ತಿದ್ದರು. ಆದರೆ ಅದೇ ವಿದ್ಯಾರ್ಥಿಯು ಶಾಲೆಯಲ್ಲಿ ಸಸ್ಯಶಾಸ್ತ್ರ ಅಭ್ಯಾಸ ಮಾಡಬೇಕೆಂದು ಆ ಉಪಾಧ್ಯಾಯರು ಹೇಳುತ್ತಿದ್ದರು. ಅದು ರವೀಂದ್ರರಿಗೆ ಅತೀವ ಆಶ್ಚರ್ಯವನ್ನುಂಟು ಮಾಡುತ್ತಿತ್ತು. ಶಾಂತಿನಿಕೇತನದಲ್ಲಿ ಗಿಡಗಳ ನೆರಳಲ್ಲಿ ನಡೆದ ಸುಂದರ ವರ್ಗಗಳನ್ನು ನೆನೆದು ಡಿ. ಗುರುಮೂರ್ತಿಯವರು "ಸೃಷ್ಟಿಯು ಬಯಲು ಹವೆಯಲ್ಲಿ ಯಾವ ರೀತಿ ಬಂಧನಗಳಿಲ್ಲವೆ, ಮನುಷ್ಯನ ಹಾಗೂ ಸೃಷ್ಟಿಯು ಸುಂದರ ಸಮ್ಮಿಳನದ ವಾತಾವರಣ ಅಲ್ಲವೆ, ಮಗುವಿನ ಪ್ರತಿಭೆಯು ಬೆಳವಣಿಗೆಗೆ ಪೂರ್ಣ ಅವಕಾಶ ಶಾಂತಿನಿಕೇತನದ ಶಾಲೆಯಲ್ಲಿ ದೊರೆಯುತ್ತದೆ" ಎಂದು ಉದ್ಗರಿಸಿದ್ದಾರೆ. ಶಾಂತಿನಿಕೇತನವನ್ನು ಸಂದರ್ಶಿಸಿದವರು ಅಲ್ಲಿ ಎಲ್ಲವೂ ಸಹಜ, ಶಾಂತ ಹಾಗೂ ಆನಂದ ಮಯವಾಗಿರುತ್ತದೆಯೆಂಬುದನ್ನು ಕಂಡು ಸಂತಸ ಹಾಗೂ ಮೆಚ್ಚಿಗೆ ವ್ಯಕ್ತಪಡಿಸಿದ್ದಾರೆ.

ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕು:

ರವೀಂದ್ರರು ಚಿಕ್ಕವರಿದ್ದಾಗ ಎಲ್ಲ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯೇ ಶಿಕ್ಷಣ ಮಾಧ್ಯಮವಾಗಿದ್ದಿತು. ಮಕ್ಕಳಿಗೆ ಶಾಲೆಯ ಬಗ್ಗೆ ಜುಗುಪ್ಸೆಯುಂಟಾಗಲು ಇದೂ ಒಂದು ಕಾರಣವಾಗಿದ್ದಿತು. ಪರಭಾಷೆಯಲ್ಲಿ ಮಗುವಿನ ಪಾಠಕ್ರಮ ಆರಂಭವಾಗುವ ದೆಂದರೆ ಮಕ್ಕಳಿಗೆ ಅದು ಕಠಿಣವಾಗುತ್ತಿತ್ತು. ಅದಕ್ಕಾಗಿಯೇ ರವೀಂದ್ರರು ಒಮ್ಮೆ "ಕಲಿಯುವದೆಂದರೆ ಊಟ ಮಾಡುವದಿದ್ದಂತೆ, ಮೊದಲನೇ ತುತ್ತು ರುಚಿಯಾಗಿದ್ದರೆ, ಮಗುವಿಗೆ ಮುಂದೆ ಊಟ ಇಷ್ಟವಾಗುತ್ತದೆ, ರುಚಿಸುತ್ತದೆ. ಆದರೆ ಮೊದಲನೇ ತುತ್ತನ್ನು ಅರಗಲಾರದ ಪರಭಾಷೆಯ ಹೊದಿಕೆಯಲ್ಲಿ ಹಾಕಿ ತುರುಕಿದರೆ ಮಗುವಿಗೆ ಊಟ ರುಚಿಸುವದೆಂತು? ಹಸಿವೆಯಾಗುವದೆಂತು?" ಎಂದು ಹೇಳಿದ್ದುಂಟು. ಪರಭಾಷೆ ಮಾಧ್ಯಮವಾದರೆ ಅದರಿಂದ ಶಿಕ್ಷಣದ ಮೇಲಾಗುವ ದುಷ್ಪರಿಣಾಮಗಳನ್ನು ರವೀಂದ್ರರು ತಮ್ಮ ಅನುಭವದಿಂದ ಅರಿತಿದ್ದರು. ಕಾರಣ ಅವರು ಶಾಂತಿನಿಕೇತನದಲ್ಲಿ ಬಹು ವಿದ್ಯಾರ್ಥಿಗಳ ಮಾತೃಭಾಷೆಯಾದ ಬಂಗಾಲಿಯಲ್ಲಿಯೇ ಕಲಿಸುವುದನ್ನು ಆರಂಭಿಸಿದರು. ಆದರೆ ಉಳಿದ ಪ್ರಾಂತಗಳಿಂದ ಹಾಗೂ ಪರದೇಶಗಳಿಂದ ಬರುವ ಮಕ್ಕಳ ಸಲುವಾಗಿ ಇಂಗ್ಲೀಷ್ ಮಾಧ್ಯಮದ ವಿಭಾಗಗಳನ್ನು ಕೂಡ ಇಡಲಾಗಿದೆ. ಮಕ್ಕಳ ಶಿಕ್ಷಣ ಮಾತೃಭಾಷೆಯಲ್ಲಿ ದೊರೆತರೆ ಮಗುವು ಸುಲಭವಾಗಿ ವಿಷಯಗಳನ್ನು ತಿಳಿದುಕೊಳ್ಳುವದು. ಇದರಿಂದ ಪಾಠ ಕ್ರಮದಲ್ಲಿ ಆಸ್ಥೆ ಮೂಡುವದೆಂಬುದನ್ನು ರವೀಂದ್ರರು ಕಂಡರಿತು ಆ ತೊಂದರೆಯನ್ನು ತೊಡೆದು ಹಾಕಿದರು.

ಕಲೆಗಳ ಅಭ್ಯಾಸ:

ಶಿಕ್ಷಣವು ಮನುಷ್ಯನ ಬುದ್ಧಿ ಹಾಗೂ ಭಾವಗಳ ಪೂರ್ಣ ಬೆಳವಣಿಗೆಗೆ ಅವಕಾಶ

ಮಾಡಿ ಕೊಡಬೇಕೆಂದು ರವೀಂದ್ರರು ಬಯಸಿದ್ದರು. ಅದು ಅವನ ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ಸಹಾಯವಾಗಬೇಕು. ಕೇವಲ ಬೌದ್ಧಿಕ ಶಿಕ್ಷಣ ಸಾಲದು. ಎಷ್ಟೋ ಬಾರಿ ವ್ಯಕ್ತಿತ್ವ ಕೇವಲ ಶಬ್ದಗಳ ಮೂಲಕ ಪ್ರಕಟವಾಗುವದಿಲ್ಲ. ಅದು ಬೇರೆ ರೀತಿಯಲ್ಲಿ ಹೊರಹೊಮ್ಮಲು ಯತ್ನಿಸುತ್ತಿರುವದುಂಟು. ಅದು ಆಕೃತಿಗಳಲ್ಲಿ, ಬಣ್ಣಗಳಲ್ಲಿ, ಧ್ವನಿಯಲ್ಲಿ ಅಥವಾ ಅಂಗಾಂಗಳ ಚಟುವಟಿಕೆಯಲ್ಲಿ ಹೊರ ಹೊಮ್ಮಬಹುದು. ಈ ಬಗೆಯ ಮಾಧ್ಯಮಗಳ ಅಭ್ಯಾಸದಿಂದ ಮನುಷ್ಯನಲ್ಲಿ ಹುದುಗಿದ ಕಲೆಗಳನ್ನು ನಾವು ಗುರುತಿಸಬಹುದು, ಆತನ ಮನದಾಳದಲ್ಲಿ ಅಡಗಿದ ವಿಚಾರಗಳನ್ನು ನಾವು ಕಂಡುಕೊಳ್ಳಬಹುದು. ಇದರಿಂದ ಜೀವನ ಹೆಚ್ಚು ವೈವಿಧ್ಯಮಯ, ಆನಂದಮಯ ಆಗುತ್ತದೆ. ತಮ್ಮ ಕಾಲದ ಶಿಕ್ಷಣದಲ್ಲಿಯ ಬಹುದೊಡ್ಡ ಕೊರತೆಯೆಂದರೆ ಕಲೆಗಳ ಶಿಕ್ಷಣದ ಅಭಾವವೆಂದು ರವೀಂದ್ರರು ಅರಿತಿದ್ದರು. ತಮ್ಮ "ಪೌರ್ವಾತ್ಯ ವಿಶ್ವವಿದ್ಯಾಲಯ" ಎಂಬ ಲೇಖನದಲ್ಲಿ "ಕಲೆಗಳ ಅಭ್ಯಾಸದ ಅಭಾವದಿಂದಾಗಿ ನಮ್ಮ ಶಿಕ್ಷಣ ಕ್ರಮದಲ್ಲಿ ನಾವು ಈ ಮೂಕ ಜ್ಞಾನದ ಹೊರೆಯನ್ನು ಕೊನೆಯವರೆಗೆ ಹೊರೆಯುವ ಕೂಲಿಗಳಾಗಿದ್ದೇವೆ. ಜಗತ್ತಿನ ಸಾಂಸ್ಕೃತಿಕ ಸಮ್ಮೇಳನಗಳ ದೀಪೋತ್ಸವಗಳಲ್ಲಿ, ಗತಿಗೆಟ್ಟ ಅಸ್ಪೃಶ್ಯರಂತೆ ದೂರ ಸರಿಸಲ್ಪಟ್ಟಿದ್ದೇವೆ, ಅಲ್ಲಿ, ನಮಗೆ ಬಣ್ಣಗಳ ಚೆಲುವಿನ ದೃಶ್ಯಗಳಿಲ್ಲ, ಸಂಗೀತದ ಸುಧೆಯ ಪಾನವಿಲ್ಲ, ನಮ್ಮ ಶಿಕ್ಷಣ ಬಂದಿಖಾನೆಯ ಶಿಕ್ಷಣ. ಅಲ್ಲಿ ನಿರಂತರ ಶ್ರಮ ಮರ್ಯಾದೆಯನ್ನು ಮುಚ್ಚಲು ಕನಿಷ್ಟ ವಸ್ತ್ರ ಬೇಕೋ ಅಷ್ಟೇ ನಮ್ಮ ಹೊದಿಕೆ. ಇಂಥ ಕಲಾಹೀನವಾದ ಅಂದಗೇಡಿ ಶಿಕ್ಷಣ ಕ್ರಮ ನಮ್ಮದು. ಶೆಟ್ಟಿಗೆಯ ವ್ಯಾಪಾರಿ ಹೂಗಳೆಂದರೆ ಗಿಡಕ್ಕೆ ಅನವಶ್ಯವಾದ ಅಲಂಕಾರ ಎಂದು ವಾದಿಸಬಹುದು. ಆದರೆ ಆ ಹೂಗಳನ್ನು ಸವರಿದರೆ ಗಿಡ ಬದುಕಲಾರದೆಂಬುದನ್ನು ಆತ ಅರಿಯ" ಎಂದು ರವೀಂದ್ರರು ಹೇಳಿದರು.

ಮೊಗಲರ ಆಳಿಕೆಯಲ್ಲಿ ಸಂಗೀತ ಹಾಗೂ ಉಳಿದ ಕಲೆಗಳಿಗೆ ಪ್ರೋತ್ಸಾಹ ದೊರೆಯಿತು. ಮೊಗಲರ ಜೀವನ ಭಾರತೀಯರ ಜೀವನದಲ್ಲಿ ಬೆರೆಯಿತು. ಅವರು ಭಾರತವನ್ನು ವಾಸಭೂಮಿಯನ್ನಾಗಿ ಮಾಡಿಕೊಂಡರು. ಅದಕ್ಕಾಗಿ ದೇಶದ ಜೀವನದಲ್ಲಿ ಅವರು ಕಲೆಗೆ ಪ್ರೋತ್ಸಾಹ ಕೊಟ್ಟರು. ಆದರೆ ಬ್ರಿಟಿಷ ಆಳರಸರು ಹಾರುವ ಹಕ್ಕಿಗಳಿದ್ದಂತೆ. ಅವರ ಹೃದಯ ತಮ್ಮ ಗುಲಾಮ ದೇಶವಾದ ಭಾರತದಲ್ಲಿರಲಿಲ್ಲ. ಅದಕ್ಕಾಗಿ ಇಲ್ಲಿಯ ಶಿಕ್ಷಣದ ಬಗ್ಗೆ ಅವರು ಹೆಚ್ಚಿನ ಆಸ್ಥೆ ವಹಿಸಲಿಲ್ಲ. ನಮ್ಮ ಶಿಕ್ಷಣದ ನ್ಯೂನತೆಗಳ ಬಗೆಗೆ ಅವರು ಕಣ್ಣು ತೆರೆಯಲಿಲ್ಲ. ಇಂಥ ನ್ಯೂನತೆಗಳಲ್ಲಿ ಕಲೆಗಳ ಶಿಕ್ಷಣದ ಅಭಾವ ಒಂದಾಗಿತ್ತು. ಆದಕಾರಣ ಕವಿ ತಾವು ಆರಂಭಿಸಿದ ಶಾಂತಿನಿಕೇತನದ ಶಾಲೆಯಲ್ಲಿ ಸಂಗೀತ, ಚಿತ್ರ ಕಲೆಯಂಥ ಕಲೆಗಳ ಅಭ್ಯಾಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟರು. ಭಾರತದಾದ್ಯಂತ ಬೇರೆ ಬೇರೆ ಭಾಗಗಳಲ್ಲಿ ಪ್ರಚಲಿತದಲ್ಲಿರುವ ಸಂಗೀತ ಪದ್ಧತಿಗಳು, ಅದರಲ್ಲಿ ಬೇರೆ ಬೇರೆ ಪ್ರಾಂತಗಳಲ್ಲಿದ್ದ ಕಲೆಗಳ ಹಾಗೂ ಏಷ್ಯಾದ ಉಳಿದ ರಾಷ್ಟ್ರಗಳ ಕಲೆಗಳ ಅಭ್ಯಾಸಕ್ಕೆ ಅನುಕೂಲತೆಯನ್ನು ಒದಗಿಸಲಾಯಿತು. ಬೇರೆ ಬೇರೆ ಕಲೆಗಳ ಅಭ್ಯಾಸಗಳಿಗಾಗಿ ಭಾರತೀಯ ವರ್ಣ

ಚಿತ್ರ ಕಲಾಶಾಲೆ[15]ಯನ್ನು ಆರಂಭಿಸಿದರು. ಅವರು ತಮ್ಮ ಸುತ್ತ ಅನೇಕ ಪ್ರತಿಭಾನ್ವಿತ ಕಲಾವಿದರನ್ನು ಕಲೆ ಹಾಕಿದರು. ಅದರಲ್ಲಿ ನಂದಲಾಲ ಘೋಸ ಒಬ್ಬರಾಗಿದ್ದರು.

ಈ ಶಾಲೆಯಲ್ಲಿ ಕೇವಲ ಪರಂಪರಾಗತ ಕಲೆಗಳಿಗೆ ಮಾತ್ರ ಕಲಾವಿದರು ಅಂಟಿ ಕೊಳ್ಳುವದಿಲ್ಲ. ಅವರು ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾರೆ.

ಅದರಂತೆ ನೃತ್ಯ ಶಾಲೆಯಲ್ಲಿ ತಿರುವಾಂಕೂರಿನ ಜೊತೆ ಮಣಿಪುರಿಯ ನೃತ್ಯ, ಕೂಡ ಕಲಿಸಲ್ಪಡುತ್ತದೆ. ಸಂಗೀತ ಶಾಲೆಯಲ್ಲಿ ರವೀಂದ್ರರ ಆಧುನಿಕ ಬಂಗಾಲಿ ಸಾಹಿತ್ಯದ ಅಭ್ಯಾಸ ನಡೆದಂತೆ ಹಿಂದುಸ್ಥಾನದ ಪ್ರಮುಖ ಸಂಗೀತ ಪದ್ಧತಿಗಳ ಅಭ್ಯಾಸವು ನಡೆಯು ತ್ತದೆ. ಈ ಶಾಲೆಗಳು ಶಾಂತಿನಿಕೇತನದ ಶಾಲೆಯ ಹಾಗೂ ವಿಶ್ವಭಾರತೀಯ ವಿದ್ಯಾರ್ಥಿ ಗಳ ಜೀವನದಲ್ಲಿ ವೈವಿಧ್ಯ ಹಾಗೂ ಆನಂದವನ್ನುಂಟುಮಾಡುವದಲ್ಲದೆ, ಅವರಲ್ಲಿ ಕಲಾ ಪ್ರೇಮ ಹಾಗೂ ಅವರಲ್ಲಿದ್ದ ಕಲೆಗಳಿಗೆ ಉತ್ತೇಜನ ಕೊಡುತ್ತವೆ.

ಶಾಂತಿನಿಕೇತನದ ಪ್ರಸ್ತಾಪ ಬಂದಾಗಲೆಲ್ಲ ರವೀಂದ್ರರು ಭಾವನಾಪರವಶರಾಗುತ್ತಿದ್ದರು. ಅವರು ಈ ಸಂಸ್ಥೆಗಳನ್ನು ಕಟ್ಟುವ ಕಾರ್ಯದಲ್ಲಿ ತಮ್ಮ ತನುಮನಧನಗಳನ್ನು ಧಾರೆಯರೆದರು. ಅವರು ಒಮ್ಮೆ ಶಾಂತಿನಿಕೇತನದ ಬಗ್ಗೆ ಮಾತನಾಡುತ್ತ "ಈ ಮಕ್ಕಳನ್ನು ನಾನು ಒಂದು ದಿನ ಒಂದು ಗಿಡದ ನಾಲಿನ ನೆರಳಿನಲ್ಲಿ ಕೂಡಿ ಹಾಕಿದನು. ಆ ದಿನ ನಾನು ಒಂದು ಕಾವ್ಯ ಬರೆಯಲು ಆರಂಭಿಸಿದೆ, ಆದರೆ ಅದು ಶಬ್ದಗಳಿಂದಲ್ಲ" ಎಂದಿದ್ದಾರೆ. ಶಾಂತಿನಿಕೇತನವನ್ನು ಅವರು ಅನೇಕ ಸಲ ಒಂದು ಕಾವ್ಯವೆಂದೇ ಕರೆದದ್ದುಂಟು. ಶ್ರೀ ಕೆ. ಆರ್. ಕೃಪಲಾನಿಯವರು ಶಾಂತಿನಿಕೇತನವನ್ನು ಕವಿಯ ಶಾಲೆಯೆಂದು ಕರೆದದ್ದು ಸಮಂಜಸವೇ ಆಗಿದೆ.

ತಮ್ಮ ಒಂದು ಲೇಖನದಲ್ಲಿ ರವೀಂದ್ರರು ಶಾಂತಿನಿಕೇತನವನ್ನು ಆರಂಭಿಸುವ ಉದ್ದೇಶವನ್ನು ಚನ್ನಾಗಿ ವಿವರಿಸಿದ್ದಾರೆ. "ಶಾಲೆಯ ಮಕ್ಕಳಲ್ಲಿ, ತಮ್ಮ ಸುತ್ತಲಿನ ಸೃಷ್ಟಿ ಸೌಂದರ್ಯದ ವಾತಾವರಣದಲ್ಲಿ, ಸಾಮರಸ್ಯದಿಂದ ಪ್ರೇಮ, ಕರುಣೆ, ಅನುಕಂಪ, ಮುಂತಾದ ಭಾವನೆಗಳನ್ನು ಬೆಳೆಯಿಸಲು ಯತ್ನಿಸಿದ್ದೇನೆ. ಅದಕ್ಕೆ ಸಾಹಿತ್ಯ, ಹಬ್ಬ ಹುಣ್ಣಿವೆಗಳ ಆಚರಣೆ ಧಾರ್ಮಿಕ ಶಿಕ್ಷಣ ಮುಂತಾದವುಗಳಿಂದ ಮಕ್ಕಳ ಬುದ್ಧಿ ಭಾವಗಳ ವಿಕಾಸವಾಗುವಂತೆ ನೋಡಿಕೊಳ್ಳಲಾಗಿದೆ. ಗಿಡದ ಅಡಿಯಲ್ಲಿ ಕುಳಿತು, ಅವರು ಕೇವಲ ಪುಸ್ತಕ ಪಠಣ ಮಾಡುವದಿಲ್ಲ; ಅಲ್ಲಿ ಸಂಗೀತ, ಚಿತ್ರಕಲೆ, ನಾಟಕ ಮುಂತಾದ ಕಲೆಗಳನ್ನು ಅಳವಡಿಸಿಕೊಳ್ಳುತ್ತಾರೆ." ರವೀಂದ್ರರ ಮನಸ್ಸಿನಲ್ಲಿ ನಮ್ಮ ಋಷಿಗಳ ಕಾಲದ ತಪೋ ಭೂಮಿಗಳಲ್ಲಿಯ ಶಾಲೆಗಳೇ ಕಣ್ಣು ಮುಂದೆ ಇದ್ದವು. ಅಲ್ಲಿ ವಿದ್ಯಾರ್ಥಿಗಳು ಗುರುವಿ ನೊಡನೆ ಸರಳ ಜೀವನ ಸಾಗಿಸುತ್ತಿದ್ದರು. ಜಗತ್ತಿನ ಸಂಸ್ಕೃತಿಯ ಕಣಜಕ್ಕೆ ಭಾರತೀಯರ ನಿಜವಾದ ಕೊಡುಗೆಯೆಂದರೆ, ಸರಳ ಜೀವನ ಹಾಗೂ ಆತ್ಮದ ಸಿರಿವಂತಿಕೆ, ಇವೇ ಆಗಿವೆ ಯೆಂದು ಅವರು ಬಗೆದಿದ್ದರು.

---

15 Indian School of Painting.

ಗ್ರಾಮ ಕೈಗಾರಿಕೆಗಳಿಗೆ ಪ್ರೋತ್ಸಾಹ:

ಚಿತ್ರಶಾಲೆಯ ಸುತ್ತ ಅನೇಕ ಶಾಲೆಗಳು ರೂಪುಗೊಂಡವು. ಬಡಿಗತನ, ಹಾಬ್ರಾಗಿ ಕಲೆ, ಕುಂಬಾರಿಕೆ, ಹೆಣಿಕೆ, ಅಕ್ಕಸಾಲಿಗತನ ಇವೆಲ್ಲ ಬೆಳೆಯತೊಡಗಿದವು. ಶ್ರೀಮತಿ ಪ್ರತಿಮಾ ಠಾಕೂರರು ಯುರೋಪಿನಲ್ಲಿ ಪ್ರವಾಸ ಮಾಡುತ್ತಿದ್ದಾಗ ಗೋಡೆಗಳ ಮೇಲೆ ವರ್ಣ ಚಿತ್ರಗಳನ್ನು ಚಿತ್ರಿಸುವ ಕಲೆಯನ್ನು ಬಹುವಾಗಿ ಮೆಚ್ಚಿಕೊಂಡರು. ಈ ಕಲೆ ಫ್ರಾನ್ಸ್ ದೇಶದಲ್ಲಿ ಬಹಳ ಮುಂದುವರಿದಿತ್ತು. ಅದನ್ನು ಅಭ್ಯಾಸ ಮಾಡಿ ಬಂದು ಶಾಂತಿನಿಕೇತನದಲ್ಲಿ ಆರಂಭಿಸಿದರು. ಗಾಜಿನ ಪಾತ್ರೆ ಮಾಡುವ ಕಲೆ ಸಾವಕಾಶವಾಗಿ ವಿದ್ಯಾರ್ಥಿಗಳನ್ನು ಆಕರ್ಷಿಸತೊಡಗಿತು. ಶಾಂತಿನಿಕೇತನದಲ್ಲಿ ಇವರ ಶಿಕ್ಷಣ ವ್ಯವಸ್ಥೆಯಿದೆ. ಶಾಂತಿನಿಕೇತನದಲ್ಲಿ ಶಿಕ್ಷಣ ಹೊಂದಿದ ಅನೇಕ ವಿದ್ಯಾರ್ಥಿಗಳು ದೇಶದ ಮೂಲೆ ಮೂಲೆಗಳಿಗೆ ಹೋಗಿ ಕಲಾ ಶಾಲೆಗಳನ್ನಾರಂಭಿಸಿ ತಮ್ಮ ಪ್ರಾವೀಣ್ಯವನ್ನು ತೋರಿದ್ದಾರೆ. ಭಾರತೀಯ ಶಿಲ್ಪಕಲೆಯ ಅಭ್ಯಾಸಕ್ಕೆ ಅಲ್ಲಿ ಅನುಕೂಲ ಮಾಡಿಕೊಡಲಾಗಿದೆ. ಶಿಲ್ಪಕಲೆ ಹಲವು ಕಲೆಗಳ ಸಮಾಗಮ. ಅದನ್ನು ಪ್ರೋತ್ಸಾಹಿಸುವದೆಂದರೆ ಹಲವಾರು ಕಲೆಗಳನ್ನು ಪ್ರೋತ್ಸಾಹಿಸಿದಂತೆ. ರವೀಂದ್ರನಾಥರ ಅಮೋಘವಾದ ಸೂಚನೆಗಳನ್ನು ಅಳವಡಿಸಿ, ಸುರೇಂದ್ರನಾಥ ಖಾರ ಅವರು ಈ ಕಲೆಯಲ್ಲಿ ಆಸ್ಥೆವಹಿಸಿ ದುಡಿದರು. ಇಂದು ಶಿಲ್ಪಕಲೆಯಲ್ಲಿ ಅವರು ಬಹುದೊಡ್ಡ ಹೆಸರುಗಳಿಸಿದ್ದಾರೆ. ಶಾಂತಿನಿಕೇತನದಲ್ಲಿ ರವೀಂದ್ರನಾಥರ ಮನೆಯನ್ನು ರೂಪಿಸಿದವರು ಖಾರ ಅವರು. ಅದು ಒಂದು ಅಮರ ಕಲಾಕೃತಿಯಾಗಿದೆ.

ಹೀಗೆ ಇನ್ನು ಅನೇಕ ಕೈಗಾರಿಕೆಗಳು ಅಲ್ಲಿ ಪ್ರಬುದ್ಧ ಅವ್ಯವಸ್ಥೆಗೆ ಬಂದಿವೆ. ತೊಗಲಿನ ಸಾಮಾನುಗಳ ತಯಾರಿಕೆ ಶಾಂತಿನಿಕೇತನದ ಒಂದು ಪ್ರಮುಖ ಕೈಗಾರಿಕೆಯಾಗಿದೆ. ರವೀಂದ್ರನಾಥರ ಮಗ ರಥೀಂದ್ರನಾಥ ಇಂಗ್ಲಂಡಿನಲ್ಲಿದ್ದಾಗ ಈ ಕೈಗಾರಿಕೆಯಲ್ಲಿ ಆಸ್ಥೆ ವಹಿಸಿದರು. ಶಾಂತಿನಿಕೇತನದ ತೊಗಲಿನ ಸಾಮಾನುಗಳು ತಮ್ಮದೇ ಆದ ಅಂದವನ್ನು ಪಡೆದಿವೆ. ಅವು ಒಂದು ವಿಶಿಷ್ಟ ಮಾದರಿಯ ಕಲಾಕೃತಿಗಳಾಗಿವೆ. ಶಾಂತಿನಿಕೇತನದ ಈ ಶಾಲೆಯಲ್ಲಿ ಶಿಕ್ಷಣ ಪೊಂದಿದ ಅನೇಕ ವಿದ್ಯಾರ್ಥಿಗಳು ಮುಂಬಯಿ, ಕಲಕತ್ತಾ, ಮದ್ರಾಸ ಮುಂತಾದ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಒಳ್ಳೇ ಸುಂದರ ವಸ್ತುಗಳನ್ನು ತಯಾರಿಸಿ ಖ್ಯಾತಿ ಪಡೆದಿದ್ದಾರೆ. ಈ ಕೈಗಾರಿಕೆಯು ಒಂದು ಒಳ್ಳೇ ಉದ್ದಿಮೆಯಾಗಿ ಪರಿಣಮಿಸಿದೆ.

ಭಾರತದ ಹಳ್ಳಿಗಳಲ್ಲಿ ನಶಿಸುತ್ತಿದ್ದ ಕೈಗಾರಿಕೆ ಹಾಗೂ ಗೃಹ ಉದ್ದಿಮೆಗಳ ಪುನರುಜ್ಜೀವನ ಕಾರ್ಯದಲ್ಲಿ ಶಾಂತಿನಿಕೇತನ ಮಾಡಿದ ಅಮೋಘವಾದ ಸೇವೆಯನ್ನು ಪ್ರಶಂಸಿಸುತ್ತ ಶ್ರೀ ಶಿಶೀರ ಕುಮಾರ ಮುತ್ತು ಅವರು "ಕಪಿಯ ಕಲೆ ಹಾಗೂ ಕೈಗಾರಿಕೆಗಳ ಶಾಲೆ" ಎಂಬ ಲೇಖನದಲ್ಲಿ "ಶ್ರೀನಿಕೇತನ ಹಳ್ಳಿಗಳ ಕೈಗಾರಿಕೆಯಲ್ಲಿ ಒಂದು ಹೊಸ ಜೀವ ತುಂಬಿದೆ. ಆ ಕಲೆಗಾರರ ರಕ್ತನಾಡಿಗಳಲ್ಲಿ ಮತ್ತೆ ಬಿಸಿರಕ್ತ ಚಲಿಸತೊಡಗಿದೆ. ಅವರಿಗೆ ಮತ್ತೆ ಕೆಲಸ ದೊರಕಿದೆ. ಬಹುದಿನಗಳ ಬಡತನ ಹಾಗೂ ನಿರಾಶೆ ಕಳೆದು ಹೊಸಬಾಳಿನಲ್ಲಿ ಅವರು

ಕಾಲಿಟ್ಟಿದ್ದಾರೆ. ತಮ್ಮ ಮನೆತನದ, ತಮ್ಮ ನಾಡಿನ ಕೈಗಾರಿಕೆಗಳನ್ನು ಮತ್ತೆ ಪುನರುಜ್ಜೀವನಗೊಳಿಸಲು ಅವರು ಉತ್ಸುಕರಾಗಿದ್ದಾರೆ. ನೇಕಾರ ತನ್ನ ನೇಯ್ಗೆಯ ಕೆಲಸದಲ್ಲಿ ಮತ್ತೆ ಕಾರ್ಯೋನ್ಮುಖನಾಗಿದ್ದಾನೆ, ಹಳ್ಳಿಯಲ್ಲಿಯ ಮೋಚಿ ಹೊಸ ಹೊಸ ಬಗೆಯ ತೊಗಲಿನ ಸಾಮಾನುಗಳನ್ನು ಮಾಡಲು ಉದ್ಯುಕ್ತನಾಗಿದ್ದಾನೆ. ಅಕ್ಕಸಾಲಿಗನು ದಿನಬೆಳಗಾದರೆ ಎಷ್ಟು ವಿಧವಾದ ನಕ್ಷೆಯ ಕೆಲಸ ಮಾಡುವನೆಂದು ಆನಂದದಿಂದ ಅಚ್ಚರಿಪಡುತ್ತಿದ್ದಾನೆ. ಅರಗಿನ ಕೆಲಸಗಾರರಿಗೆ ಅನೇಕ ನಮೂನೆಯ ಆಕೃತಿಗಳಲ್ಲಿ ಕೆಲಸ ಮಾಡುವ ಯೋಗ ದೊರೆತಿದೆ. ಬಡಿಗನಿಗೆ ಭಾರತೀಯ ಹಳೆಯ ಕಲೆಗಳ ಸೌಂದರ್ಯವನ್ನು ರೂಪಿಸುವ ಅವಕಾಶ ದೊರೆತಿದೆ. ಹಳ್ಳಿಯ ಹೆಣ್ಣುಮಕ್ಕಳು ತಮ್ಮ ಕಸೂತಿ ಹೆಣಿಕೆ ಕಲೆಗಳನ್ನು ತೋರಿಸಲು ಮುಂದಾಗಿದ್ದಾರೆ...."[16] ಎಂದಿದ್ದಾರೆ. ಹೀಗೆ ರವೀಂದ್ರರ ಕಲಾ ಹಾಗೂ ಕೈಗಾರಿಕಾ ಶಾಲೆಗಳು ಭಾರತೀಯರ ಗ್ರಾಮೀಣ ಕೈಗಾರಿಕೆಯ ಅಭಿವೃದ್ಧಿಯಲ್ಲಿ ಬಹುದೊಡ್ಡ ಪಾತ್ರವನ್ನು ವಹಿಸಿವೆ.

ಪೌರ್ವಾತ್ಯ ಸಂಸ್ಕೃತಿಯ ಹಿರಿಮೆ:

ಪಾಶ್ಚಿಮಾತ್ಯ ರಾಷ್ಟ್ರಗಳು ಭೌತಿಕ ಸಂಪತ್ತನ್ನು ಹೆಚ್ಚಿಸಿಕೊಂಡು ಆರ್ಥಿಕ ಸಮೃದ್ಧಿ ಹೊಂದಿದ್ದರೂ ಅವರಿಗೆ ಮನಃಶಾಂತಿಯಿರಲಿಲ್ಲ. ಅವರ ಮನಸ್ಸಿಗೆ ಒಳ್ಳೇ ಸಂಸ್ಕಾರವಿರಲಿಲ್ಲ. ಅದಕ್ಕಾಗಿ ಅಲ್ಲಿಯ ವಿಚಾರಶೀಲ ಜನ ಪಶ್ಚಿಮದ ಕಡೆಗೆ ನೋಡತೊಡಗಿದರು. ಅವರು ತಮ್ಮ "ಒಂದು ಪೌರ್ವಾತ್ಯ ವಿಶ್ವವಿದ್ಯಾಲಯ" ಎಂಬ ಲೇಖನದಲ್ಲಿ "ನಾನು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಪ್ರವಾಸ ಕೈಕೊಂಡಾಗ ಒಂದು ಸಂಗತಿ ನನಗೆ ಎಲ್ಲೆಡೆ ಕಂಡು ಬಂದಿತು. ಅದೆಂದರೆ ಪೌರ್ವಾತ್ಯ ರಾಷ್ಟ್ರಗಳ ಸಂಸ್ಕೃತಿ ಹಾಗೂ ಕಲೆಗಳ ಬಗ್ಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಬಹಳ ಆಸಕ್ತ ಉಂಟಾಗಿದೆ. ಸತ್ಯ ಹಾಗೂ ಸೌಂದರ್ಯಗಳ ಶೋಧನೆಯ ಕಾರ್ಯದಲ್ಲಿ ಪಾಶ್ಚಿಮಾತ್ಯರು ಪೂರ್ವದ ಸಂಸ್ಕೃತಿಯ ತತ್ವಜ್ಞಾನ ಹಾಗೂ ಕಲೆಗಳ ಅಭ್ಯಾಸದಿಂದ ಹೊಸ ಸ್ಫೂರ್ತಿಯನ್ನು ನಿರೀಕ್ಷಿಸುತ್ತಿದ್ದಾರೆ. ಒಂದು ಕಾಲಕ್ಕೆ ಪೌರ್ವಾತ್ಯ ರಾಷ್ಟ್ರಗಳು ಅಪಾರ ದ್ರವ್ಯ ಸಂಪತ್ತಿಗಾಗಿ ಹೆಸರಾಗಿದ್ದವು. ಆದರೆ ಇಂದು ಲಕ್ಷ್ಮಿ ತನ್ನ ಸ್ಥಾನ ಬದಲಾಯಿಸಿದ್ದಾಳೆ. ಪೂರ್ವವು ತನ್ನ ಜ್ಞಾನ ಭಂಡಾರಕ್ಕಾಗಿ ಹೆಸರುವಾಸಿಯಾಗಿದೆ. ಪೂರ್ವವು ತನ್ನ ಜ್ಞಾನ ಭಾಂಡಾರಕ್ಕೂ ಹೆಸರುವಾಸಿಯಾಗಿತ್ತು. ಅವಳಿಗೆ ಈ ದಿವ್ಯ ಭಾಂಡಾರದ ಸ್ವತ್ತನ್ನು, ಅದರ ಪ್ರಯೋಜನ ಪಡೆಯ ಬಯಸುವ ಜನಾಂಗಕ್ಕೆ ನೀಡಲು ಅವಕಾಶ ದೊರೆತಿದೆ" ಎಂದು ರವೀಂದ್ರರು ಹೇಳಿದ್ದಾರೆ.

ರವೀಂದ್ರರು ವಿಶ್ವಭಾರತೀಯ ಸ್ಥಾಪನೆಯ ಉದ್ದೇಶವನ್ನು ವಿವರಿಸುತ್ತ "ಪಾಶ್ಚಿಮಾತ್ಯ ಹಾಗೂ ಪೌರ್ವಾತ್ಯ ರಾಷ್ಟ್ರಗಳಲ್ಲಿ ಸೌಹಾರ್ದವನ್ನುಂಟುಮಾಡಲು ಬಹುಮಟ್ಟಿಗೆ ಸಹಾಯವಾಗುವದೆಂಬ ಭರವಸೆಯಿಂದ ಭಾರತದಲ್ಲಿ ಅಂತರ್ದೇಶೀಯ ವಿಶ್ವವಿದ್ಯಾಲಯವಾಗಬಹುದಾದ ಈ ಸಂಸ್ಥೆಯನ್ನು ಸ್ಥಾಪಿಸಿದ್ದೇನೆ. ಭಾರತೀಯ ತತ್ವಜ್ಞಾನದ ಬೇರೆ

16 An Eastern University

ಬೇರೆ ಪ್ರಕಾರಗಳಲ್ಲಿ ಸಾಹಿತ್ಯ, ಕಲೆ, ಸಂಗೀತ ಮುಂತಾದವುಗಳ ಅಧ್ಯಯನಕ್ಕೆ ತಕ್ಕವಾತಾವರಣದಲ್ಲಿ ಅಭ್ಯಾಸ ಮಾಡಲು ಪಾಶ್ಚಿಮಾತ್ಯ ರಾಷ್ಟ್ರಗಳಿಂದ ವಿದ್ಯಾರ್ಥಿಗಳನ್ನೂ, ಪಂಡಿತರನ್ನೂ ಕರೆಯಿಸಿಕೊಂಡು ಇಲ್ಲಿ ಆ ವಿಷಯಗಳ ಬಗ್ಗೆ ಅಭ್ಯಾಸ ನಡೆಸಿರುವ ಪಂಡಿತರೊಡನೆ ಸಂಶೋಧನೆ ನಡೆಸಲು ಅವರಿಗೆ ಪ್ರೋತ್ಸಾಹ ಕೊಡುವದೇ ಈ ಸಂಸ್ಥೆಯ ಉದ್ದೇಶವಾಗಿದೆ" ಎಂದರು. ಈ ಉದ್ದೇಶದ ಫಲವೇ 'ವಿದ್ಯಾಭವನ'. ಇದು ರವೀಂದ್ರರ ಆಶೋತ್ತರಗಳ ಪರಮಸಿದ್ಧಿ ಎಂದು ಹೇಳಬಹುದು.

ಪಾಶ್ಚಿಮಾತ್ಯ ರಾಷ್ಟ್ರದ ಜನರು ಮೊದಲು ತಮ್ಮ ರಾಷ್ಟ್ರಗಳಲ್ಲಿ ಪಾಶ್ಚಿಮಾತ್ಯ ಸಂಸ್ಕೃತಿಗೆ ತಮ್ಮ ದೇಶದ ಕಾಣಿಕೆಯನ್ನು ಕೂಲಂಕಷವಾಗಿ ಅಭ್ಯಸಿಸಲು ಅನುಕೂಲತೆಗಳನ್ನು ಒದಗಿಸುತ್ತಾರೆ. ಹೀಗಾಗಿ ಪಾಶ್ಚಿಮಾತ್ಯ ರಾಷ್ಟ್ರಗಳ ಬುದ್ಧಿಯ ವಿಕಾಸ ಹಾಗೂ ಕಾಣಿಕೆಗಳು ಜಗತ್ತಿನಲ್ಲಿ ಸಾಕಷ್ಟು ಪ್ರಕಟಿತವಾಗಿವೆ. ಈಗ ಬೇಕಾದದ್ದೆಂದರೆ ಪೂರ್ವ ತನ್ನ ಸಂಸ್ಕೃತಿಯ ಅನೇಕ ಹಣತೆಗಳನ್ನು ಒಂದೆಡೆ ಕೂಡಿಸಿ ಮಾನವತೆಯ ಕಲ್ಯಾಣಕ್ಕೆ ಆ ದೀಪಗಳ ಬೆಳಕನ್ನು ಒದಗಿಸಬೇಕಾಗಿದೆ.[17]

ಭಾರತೀಯ ಸಂಸ್ಕೃತಿ ಮುಖ್ಯವಾಗಿ ವೈದಿಕ, ಪೌರಾಣಿಕ, ಬೌದ್ಧ ಹಾಗೂ ಜೈನ ಈ ನಾಲ್ಕು ಪ್ರವಾಹಗಳಲ್ಲಿ ಹರಿಯಿತೆಂದು ಹೇಳಬಹುದು. ಆದ ಕಾರಣ ಭಾರತೀಯ ಸಂಸ್ಕೃತಿಗಳ ಅಭ್ಯಾಸದ ಈ ಕೇಂದ್ರದಲ್ಲಿ ಇವೆಲ್ಲ ಸಂಸ್ಕೃತಿಗಳ ಅಭ್ಯಾಸಕ್ಕೆ ಅನುಕೂಲತೆ ಇರಬೇಕು. ಇದಲ್ಲದೆ ಇಸ್ಲಾಮ, ಯುರೋಪಿಯನ್, ಚೈನೀಜ, ಜಪಾನೀಜ ಮತ್ತು ಟಿಬೇಟಿನ್ ಸಂಸ್ಕೃತಿಗಳು, ಭಾರತೀಯ ಸಂಸ್ಕೃತಿಗಳೊಡನೆ ಇವುಗಳ ಸಂಬಂಧ, ಏಶಿಯಾ ಸಂಸ್ಕೃತಿಗೆ ಈ ಸಂಸ್ಕೃತಿಗಳ ಕಾಣಿಕೆ, ಇವುಗಳನ್ನು ಅಭ್ಯಾಸಮಾಡುವದು ಅವಶ್ಯವಿದೆ.

ಏಶಿಯಾ ಖಂಡವು ಯುರೋಪಿನೊಡನೆ ಸಹಕರಿಸುವದಕ್ಕೆ ಮುನ್ನ ತನ್ನ ಸಂಸ್ಕೃತಿಯ ಅಂಗಾಂಗಳಾದ ಎಲ್ಲಾ ಸಂಸ್ಕೃತಿಗಳ ಸಮನ್ವಯ ಸಾಧಿಸಬೇಕೆಂದು ರವೀಂದ್ರರು ಮನಗಂಡು "ಸಾವಕಾಶವಾಗಿ ಸರಳವಾದ ರೀತಿಯಲ್ಲಿ ಎಲ್ಲ ಸಂಸ್ಕೃತಿಗಳ ಅಭ್ಯಾಸಕ್ಕೆ ಅನುಕೂಲತೆಗಳನ್ನು ಬೆಳೆಸುತ್ತ ಹೋಗುವದೇ ನನ್ನ ಉದ್ದೇಶವಾಗಿದೆ. ಇಲ್ಲಿ ಆರ್ಯಾನ್, ಸೆಮೆಟಿಕ್, ಮಂಗೋಲಿಯನ್ ಮುಂತಾದ ಸಂಸ್ಕೃತಿಗಳ ಅಭ್ಯಾಸಕ್ಕೆ ಅನುವು ದೊರೆಯುತ್ತದೆ. ಮುಖ್ಯ ಉದ್ದೇಶವೆಂದರೆ, ಪೌರ್ವಾತ್ಯ ಸಂಸ್ಕೃತಿಯ ಅರಿವನ್ನು ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಮಾಡಿ ಕೊಡುವದು" ಎಂದು ರವೀಂದ್ರರು ಒಂದೆಡೆ ಹೇಳಿದ್ದುಂಟು.

ಆಧುನಿಕ ವಿಜ್ಞಾನದ ಬಗೆಗೆ ರವೀಂದ್ರರಿಗೆ ದ್ವೇಷವಿರಲಿಲ್ಲ. ಆದರೆ ಕೇವಲ ವಿಜ್ಞಾನ ಒಂದೇ ಸಾಲದು. ಅದರ ಜೊತೆಗೆ ಆಧ್ಯಾತ್ಮವು ಬೇಕು. ವಿಜ್ಞಾನ ಮತ್ತು

---

17 Thus the intellectual mind of the west has been luminously revealed to the world. What is needed to complete this illumination is for the East to collect its own sealtered lamps and after them to the enlightenment of the world. An Eastern University.

ಅಧ್ಯಾತ್ಮ ಒಂದೇ ರಥದ ಎರಡು ಗಾಲಿಗಳಿದ್ದಂತೆ. ಭಾರತೀಯರಿಗೆ ಆಧುನಿಕ ವಿಜ್ಞಾನದ ಅವಶ್ಯಕತೆಯಿದ್ದರೆ, ಪಾಶ್ಚಿಮಾತ್ಯರಿಗೆ ಅಧ್ಯಾತ್ಮದ ಅವಶ್ಯಕತೆ ಇರುವುದು.

ಪ್ರಬುದ್ಧ ಚಿಂತನಗಳು:

ಮಾನವ ಜೀವನದ ಬಗ್ಗೆ, ದೇವರ ಬಗ್ಗೆ, ಹೆಣ್ಣಿನ ಸೌಂದರ್ಯದ ಬಗ್ಗೆ, ಮಾನವ ಕೋಟಿಯ ಕಲ್ಯಾಣದ ಬಗ್ಗೆ, ಜೀವನ ಆದರ್ಶಗಳ ಬಗ್ಗೆ, ಪ್ರೇಮದ ಬಗ್ಗೆ, ಜೀವನದ ಅನಂತ ಸಮಸ್ಯೆಗಳ ಬಗ್ಗೆ, ಗೀತಾಂಜಲಿ, ಗಾರ್ಡನರ, ಸ್ಟ್ರೇಬರ್ಡ್ಸ ಮುಂತಾದ ಗ್ರಂಥಗಳಲ್ಲಿ ರವೀಂದ್ರರ ಉದ್ಗಾರಗಳು ಮಿಂಚಿನಂತೆ ಇವುಗಳ ಮೇಲೆ ಬೆಳಕನ್ನು ಚೆಲ್ಲುತ್ತವೆ. ಇವುಗಳನ್ನು ನೆನೆದಾಗ, ಬಸವಣ್ಣನವರ ವಚನದಲ್ಲಿ ನಾವು ಆಡುವ ನುಡಿ ಹೇಗಿರಬೇಕೆಂಬುದರ ಬಗ್ಗೆ ಹೇಳಿದ ಈ ಮಾತು ಸಹಜವಾಗಿ ನೆನಪಾಗುತ್ತದೆ.

"ನುಡಿದರೆ ಮುತ್ತಿನ ಹಾರದಂತಿರಬೇಕು
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು"

ಉದಾಹರಣೆಗಾಗಿ ಕೆಲವು ಇಂಥ ರವೀಂದ್ರರ ಉದ್ಗಾರಗಳನ್ನು ನೆನಸಿಕೊಳ್ಳಬಹುದು.

ಅದಮ್ಯ ಆಶಾವಾದ:

"ಈ ಜಗತ್ತಿನಲ್ಲಿ ಹುಟ್ಟಿಬರುವ ಪ್ರತಿಯೊಂದು ಶಿಶುವು, ದೇವರು ಮನುಷ್ಯನ ಬಗ್ಗೆ ಇನ್ನೂ ಪೂರ್ತಿ ನಿರಾಶನಾಗಿಲ್ಲವೆಂಬ ಸಂದೇಶವನ್ನು ಹೊತ್ತು ತರುತ್ತದೆ."

ಹೆಣ್ಣಿನ ನಗೆ:

"ಹೆಣ್ಣೇ, ನಿನ್ನ ನಗೆಯಲ್ಲಿ ಬದುಕಿನ ಕಾರಂಜಿಯ ಝೇಂಕಾರದ ನಿನಾದವಿದೆ."

ಹೆಣ್ಣಿನ ಸೌಂದರ್ಯ:

"ಸೌಂದರ್ಯವೇ, ಕನ್ನಡಿಯ ಲ್ಲಿ ನಿನ್ನ ವಿಕಸಿತರೂಪವನ್ನು ಕಂಡು ಉಬ್ಬಬೇಡ; ಪ್ರೀತಿಯಲ್ಲಿ ಅದನ್ನು ಕಂಡುಕೊ."

ಆಡಂಬರದ ಭಾರ:

"ನವಿಲು ತನ್ನ ಬಾಲದ ದೊಡ್ಡ ಭಾರವನ್ನು ಹೇಗೆ ಹೊರುವದೆಂದು, ಗುಬ್ಬಿಗೆ ನವಿಲಿನ ಬಗ್ಗೆ ಕನಿಕರವೆನಿಸಿತು."

ಅಧಿಕಾರದ ಅನರ್ಥ:

"ಅಧಿಕಾರವನ್ನು ವೃದ್ಧಿಪಡಿಸಿಕೊಂಡ ಮಾತ್ರಕ್ಕೆ ಸುಳ್ಳು ಸತ್ಯವಾಗಲಾರದು."

ಸತ್ಯದ ಹಿರಿಮೆ:

"ಸತ್ಯವು ಸೋಲನ್ನು ಸಹಿಸಬಲ್ಲುದು, ಆದರೆ ಸುಳ್ಳಿಗೆ ಆ ಸಾಮರ್ಥ್ಯವೆಲ್ಲಿ?"

ಮಾನವ:

"ಮನುಜರು ಕ್ರೂರರಾಗಿರಬಹುದು, ಆದರೆ ಮಾನವ ದಯಾಮಯ"

ಸಾವು:

"ಸಾವು ಎಂಬ ಕಾರಂಜಿಯಿಂದಲೇ ಜೀವನವೆಂಬ ಜಲಾಶಯದಲ್ಲಿ ಆಸಕ್ತಿಯ ಉಲ್ಲಾಸದ ಅಲೆಗಳು ಹೊರಹೊಮ್ಮುತ್ತವೆ."

ನಿರಾಶೆಗೆ ಎಡೆಯೆಲ್ಲಿ:

"ಸೂರ್ಯ ಅಸ್ತನಾದನೆಂದು ಅಳುತ್ತ ಕೂತರೆ, ಚಿಕ್ಕೆಗಳೂ ಕಾಣದೆ ಹೋಗುತ್ತವೆ."

ಅದಮ್ಯ ಆಶಾವಾದಿ:

ರವೀಂದ್ರರು ಉತ್ಕಟ ಆಶಾವಾದಿಗಳು. ಜೀವನದಲ್ಲಿ ಸಾಮಾನ್ಯವಾಗಿ ಕಂಡುಬರುವ ಕ್ರೌರ್ಯ, ಅಸತ್ಯ ಅನ್ಯಾಯಗಳಿಗೆ ಧೃತಿಗೆಡದ ಸ್ಥೈರ್ಯ ಅವರದು. ಅವುಗಳ ಆಘಾತದಿಂದ ಅವರು ವಿಚಲಿತರಾಗಲಿಲ್ಲ. ಅವರ ದೃಷ್ಟಿಯಲ್ಲಿ ದೇವರ ಈ ಸೃಷ್ಟಿಯಲ್ಲಿ ಸತ್ಯ ನ್ಯಾಯ ಸ್ಥಿರವಾದವು; ಕೊನೆಯಲ್ಲಿ ಸುಖದಾಯಿನಿಯಾದವು. ಜೀವನದ ಆಘಾತಗಳನ್ನು ಅವರು ನಿಶ್ಚಲವಾದ ನಿಲುವು ಹಾಗೂ ಸಹನೆಗಳಿಂದ ಎದುರಿಸಿದರು. ಅಂಥ ಸಂದರ್ಭಗಳಲ್ಲಿ ಹೊರಹೊಮ್ಮಿದ ಉದ್ಗಾರಗಳಲ್ಲಿ ಎಂಥ ಪ್ರಬುದ್ಧ ಹಾಗೂ ನೊಂದ ಮನಸ್ಸಿಗೆ ಸಾಂತ್ವನ ನೀಡುವ ಶಕ್ತಿಯಿದೆಯೆಂಬುದನ್ನು ನಾವು ಕಾಣಬಹುದು. ಒಂದು ಕಾಲ ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಮಾನವತೆಯ ಕಲ್ಯಾಣವಾಗುವದೆಂದು ಅವರು ಭರವಸೆ ತಳೆದಿದ್ದರು. ಅವರು ರಶಿಯಾ ಹಾಗೂ ಉಳಿದ ಪಾಶ್ಚಿಮಾತ್ಯ ರಾಷ್ಟ್ರಗಳು ಸಾಧಿಸಿದ ಪ್ರಗತಿಯನ್ನು ಬಹುವಾಗಿ ಮೆಚ್ಚಿದರು. ರಶಿಯಾ ದೇಶಕ್ಕೆ ಅವರು ಭೇಟಿಯಿತ್ತಾಗ ಆ ದೇಶವು ಅತ್ಯಲ್ಪ ಅವಧಿಯಲ್ಲಿ ಸಾಧಿಸಿದ ಪ್ರಗತಿಯನ್ನು, ಶಿಕ್ಷಣ ಕ್ಷೇತ್ರದಲ್ಲಿ ಅವರು ಮುನ್ನಡೆಯನ್ನೂ ಪ್ರಶಂಸಿಸಿದರು. ಆದರೆ ಅವರು ರಶಿಯನ್ನರಿಗೂ ಕೂಡ ಅವರ ಸರಕಾರದ ನೀತಿಯಲ್ಲಿ ಕಂಡುಬಂದ ನ್ಯೂನತೆಗಳನ್ನು ಎತ್ತಿ ತೋರಿಸಿದರು. ರಶಿಯಾದಲ್ಲಿ ವಾಕ್‌ಸ್ವಾತಂತ್ರಕ್ಕೆ ಇದ್ದ ನಿರ್ಬಂಧಗಳನ್ನು ಕಟುವಾಗಿ ಟೀಕಿಸಿದರು. ಪಾಶ್ಚಿಮಾತ್ಯ ರಾಷ್ಟ್ರಗಳಿಂದ ಮಾನವ ಕಲ್ಯಾಣವಾಗುವದೆಂಬ ಅವರು ಇಟ್ಟ ಶ್ರದ್ಧೆ ಅವರನ್ನು ಅಂತ್ಯ ಕಾಲದಲ್ಲಿ ನಿರಾಶೆಗೊಳಿಸಿತು. ಪ್ರಜಾಪ್ರಭುತ್ವದ ಘನ ತತ್ವಗಳಲ್ಲಿ ನಂಬಿಗೆಯುಳ್ಳ ಪಾಶ್ಚಾತ್ಯ ರಾಷ್ಟ್ರಗಳಿಂದ ವಿಶ್ವಕ್ಕೆ ಚಿರಶಾಂತಿ, ಕಲ್ಯಾಣ ಹಾಗೂ ಸಂಸ್ಕೃತಿಯ ಪ್ರಸಾರ ಆಗಬಹುದೆಂದು ಅವರು ನಂಬಿದ್ದರು. ಆದರೆ ಅವರ ಮರಣ ಸಮೀಪಿಸಿ ಕಾಲಕ್ಕೆ ಆಶೆ ನಿರಾಶೆಗೊಳಿಸಿತು. ಅವರು ಸಾಯುವದಕ್ಕಿಂತ ಒಂದು ವರ್ಷ ಮುನ್ನ "ನಾಗರಿಕತೆಯ ಗಂಡಾಂತರ"[೧೮] ಎಂಬ ಚಿಕ್ಕ ಗ್ರಂಥದಲ್ಲಿ ಅವರು ತಮ್ಮ ತೀವ್ರ ನಿರಾಶೆಯನ್ನು ವ್ಯಕ್ತಪಡಿಸಿದ್ದಾರೆ. ಯುರೋಪಿನ ಹೃದಯದಿಂದ ನಾಗರಿಕತೆಯ ಬುಗ್ಗೆಗಳು ಹೊರಹೊಮ್ಮುತ್ತವೆಯೆಂದು ನಾನು ಒಂದು ಕಾಲದಲ್ಲಿ ಭಾವಿಸಿದ್ದೆ. ಜಗತ್ತನ್ನು ನಾನು ಬಿಟ್ಟು ಹೋಗುತ್ತಿರುವ ಸಮಯದಲ್ಲಿ ಆ ನಂಬಿಕೆ ಸಂಪೂರ್ಣ ಬುಡಮೇಲಾಗಿವೆ, ಎಂದು ಉದ್ಗರಿಸಿದರು. ಆದರೆ ರವೀಂದ್ರರು ನಿರಾಶಾವಾದಿಗಳಲ್ಲ. ಭಾರತದ ಪರಂಪರಾಗತ ಆಧ್ಯಾತ್ಮಿಕ ಹಾಗೂ

---

18 Crisis in Civilisation

ತಾತ್ವಿಕ ಹಿರಿಮೆಯನ್ನರಿತ ರವೀಂದ್ರರು ಭಾರತದ ಉಜ್ವಲ ಭವಿಷ್ಯದ ಬಗ್ಗೆ ದೃಢ ವಿಶ್ವಾಸವುಳ್ಳವರಾಗಿದ್ದರು. ಅಂತೆಯೇ ಅವರು ಹಾಡಿದರು.

"ಮೂಡಣ ವಿಶ್ವದಿ ಉಷೆ ಬೆಳಗಿದೆ ನಿಶೆಕರಗಿ
ಹೊಂಬೆಳಗಲಿ ಹಾರಾಡುತಿವೆ ಹಕ್ಕಿಗಳು ಹಾಡಿ."

ಅವರ ಇನ್ನೊಂದು ಕವನದಲ್ಲಿ, ತುಳಿಯಲ್ಪಟ್ಟ ಅವಮಾನಿತ ಮಾನವನ ವಿಜಯೋತ್ಸವಕ್ಕಾಗಿ ಮಾನವ ಇತಿಹಾಸ ಸಹನೆಯಿಂದ ಕಾಯುತ್ತಿದೆ' ಎಂದು ಹೇಳಿದರು. ಇಂದು, ದಕ್ಷಿಣ ಆಫ್ರಿಕಾ ದೇಶಗಳಲ್ಲಿ, ಪ್ಯಾಲೆಸ್ಟಾಯಿನ್, ನಮೀಬಿಯ, ಕ್ಯಾಂಬೋಡಿಯ ಮುಂತಾದ ದೇಶಗಳಲ್ಲಿ ಉದಯಿಸಿದ ಜಾಗೃತಿ ಹಾಗೂ ವಿಶ್ವದ ಗುಲಾಮ ರಾಷ್ಟ್ರಗಳ ಸ್ವಾತಂತ್ರ ಹಾಗೂ ಉದ್ಧಾರಕ್ಕಾಗಿ ಭಾರತ ಆಡುತ್ತಿರುವ ಪಾತ್ರ, ವಿಶ್ವದ ರಾಜಕೀಯ ರಂಗದಲ್ಲಿ ಭಾರತಕ್ಕೆ ಸಲ್ಲುತ್ತಿರುವ ಗೌರವವನ್ನು ಕಂಡಾಗ, ರವೀಂದ್ರರ ಈ ಮಾತುಗಳು ಪ್ರವಾದಿಯ ದರ್ಶನದ ಉದ್ಗಾರಗಳಾಗಿದ್ದವೆಂಬುದನ್ನು ಕಾಣಬಹುದು.

ರವೀಂದ್ರರ ವಿಚಾರಗಳ ಹಿರಿಮೆಯೆಂದರೆ ಅವು ವಿಶ್ವೋನ್ನತವಾದವು. ಯಾವುದೇ ವಿಷಯದ ಬಗ್ಗೆ ಯಾದರೂ ರವೀಂದ್ರರು ಸಮಗ್ರವಾಗಿ ವಿಚಾರಿಸತಕ್ಕವರು. ಅರ್ನಾಲ್ಡ ಕವಿ ಸೊಫೋಕ್ಲಿಸ್‌ನ ಬಗ್ಗೆ "ಅವನು ಜೀವನವನ್ನು ನಿಶ್ಚಲ ದೃಷ್ಟಿಯಿಂದಲೂ, ಸಮಗ್ರವಾಗಿಯೂ ಕಂಡುಕೊಂಡನು" ಎಂದು ಹೇಳಿದರು. ಅದೇ ಮಾತನ್ನು ನಾವು ರವೀಂದ್ರರ ಘನವಾದ ವಿಚಾರಗಳನ್ನು ನೆನೆದು ಹೇಳಬಹುದು. ಅವರು ಜೀವನದ ಸಮಸ್ಯೆಗಳನ್ನು ಸಮಾಧಾನ ಚಿತ್ತದಿಂದ ಸ್ಥಿತ ಪ್ರಜ್ಞರಾಗಿ ಸಮಗ್ರವಾಗಿ ವಿವೇಚಿಸಿದರು. ಆದುದರಿಂದಲೇ ಅವುಗಳಲ್ಲಿ ಮೇಧಾವಿಯ ತೀಕ್ಷ್ಣತೆಯಿದೆ; ದ್ರಷ್ಟಾರನ ದರ್ಶನವಿದೆ.

ಪ್ರಪಂಚದ ಎಲ್ಲೆಡೆಗೆ ಚೆಲ್ಲುವರಿದ ಸೌಂದರ್ಯವನ್ನು, ಮನುಷ್ಯನ ಭಾವನೆಗಳ ಉದಾತ್ತತೆಯನ್ನು ಎತ್ತಿತೋರಿಸಿ, ಬದುಕಿನಲ್ಲಿ ಆಶೆ ಹಾಗೂ ಸಾಹಸ ಪ್ರವೃತ್ತಿಗಳನ್ನು ಪ್ರಚೋದಿಸಿ, ಒಳ್ಳೇ ಬದುಕನ್ನು ಬದುಕಲು ಪ್ರೇರೇಪಿಸುವ ರವೀಂದ್ರರ ಸಾಹಿತ್ಯದಲ್ಲಿ ಒಡಮೂಡಿದ ಚಿಂತನಗಳಲ್ಲಿ ಜೀವನದ ಬಗ್ಗೆ ಆಸಕ್ತಿಯಿದೆ. ಸತ್‌ಪ್ರತೀಕ್ಷೆಯ ಜೀವನದರ್ಶನವಿದೆ. ಅಲ್ಲಿ ನಿರಾಶೆಗೆ ಎಡೆಯಿಲ್ಲ. ಸೌಂದರ್ಯ ಪ್ರಜ್ಞೆಯನ್ನು ಬೆಳೆಸುವ ಶಕ್ತಿ ಅಲ್ಲಿದೆ, ಘನವಾದ ಆದರ್ಶಗಳಿಗೆ ಪ್ರೇರಣೆ ಅಲ್ಲಿದೆ. ಅವರು ತಮ್ಮ ಅಮೋಘವಾದ ಪ್ರತಿಭೆಯಿಂದ, ಓದುಗರ ಹೃದಯಕ್ಕೆ ಆನಂದವನ್ನೂ, ಮನಸ್ಸಿಗೆ ನೆಮ್ಮದಿಯನ್ನೂ, ಕಿವಿಗೆ ಇಂಪನ್ನೂ, ಕಣ್ಣಿಗೆ ಸೌಂದರ್ಯ ರೂಪರಾಶಿಯನ್ನೂ, ಆತ್ಮಕ್ಕೆ ದೇವರ ಪವಿತ್ರ ಸ್ಮರಣೆಯನ್ನೂ, ಬದುಕಿಗೆ ಘನವಾದ ಜೀವನದ ಆದರ್ಶಗಳನ್ನೂ ಒದಗಿಸುತ್ತಾರೆ. ತಮ್ಮ ಕನಸಿನ ಭಾರತದಲ್ಲಿ, ಭಾರತೀಯರ ಬದುಕಿಗೆ ಎಂಥ ಉದಾತ್ತ ಆದರ್ಶಗಳನ್ನು ಅವರು ತೋರಿಸಿದರೆಂಬುದನ್ನು ಗೀತಾಂಜಲಿಯ ಈ ಅಮರ ಗೀತೆಯಲ್ಲಿ ಕಾಣಬಹುದು.

"ಮನವು ನಿರ್ಭೀತವಾಗಿರುವಲ್ಲಿ
ಸ್ವಾಭಿಮಾನದ ಶಿರವು ನಸುಭಾಗವಲ್ಲಿ,

ಜ್ಞಾನದ ಝರಿ ಧಾರಾಳ ಹರಿವಲ್ಲಿ
ಕೀಳ್ತರದ ಸ್ವಾರ್ಥ ಸಂಕುಚಿತ ಭಾವನೆಗಳಿಂದ
ನಾಡು ತುಂಡಾಗದೇ ಅಖಂಡವಾಗಿರುವಲ್ಲಿ,
ಚಿಮ್ಮುತಿಹ ಬುಗ್ಗೆಯಂತೆ ಸಾಹಿತ್ಯ
ಸದಾ ಸತ್ಯದಾಳದಿಂದ ನೆಗೆಯುತಿರುವಲ್ಲಿ,
ಸತತ ಸಾಹಸ, ಪೂರ್ಣತೆಯೆಡೆಗೆ ಕೈಚಾಚುತಿರುವಲ್ಲಿ
ತಿಳಿಯ ಹೊಳೆ, ಮೂಢನಡತೆಗಳ ಕೊಳೆಯುಳಿಹಂದು
ಕಲ್ಮಷವಾಗದಿರುವಲ್ಲಿ,
ವಿವೇಕ ಸಾಧನೆಯು, ವಿಶಾಲತೆಯು ಹಿರಿಯೆಯೆಡೆ
ನೀಂ ಸದಾ ಕೈಹಿಡಿದು ನಡೆಸುತಿರುವಲ್ಲಿ,
ತಂದೆಯೇ ಅಲ್ಲಿ, ಆ ಸ್ವಾತಂತ್ರಸಗ್ಗದಲಿ
ಎನ್ನೊಲುಮೆಯು, ನಾಡು ಕಣ್ದೆರೆಯಲಿ.

□ □

ಭಾವೈಕ್ಯದ ಜೀವಂತ ಸಂಕೇತ ಶಿಶುನಾಳ ಶರೀಫ ಸಾಹೇಬ

—ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್

೧೯೮೯ ರ ಮೇ ತಿಂಗಳ ಹದಿನಾರನೆಯ ತಾರೀಖು ಸಂಜೆ ಆರು ಗಂಟೆ. ಶಿಶುನಾಳ ದಿಂದ ಹೊರಡುವ ಮುಂಚೆ ಮತ್ತೊಮ್ಮೆ ಶರೀಫರ ಗದ್ದುಗೆಯ ಬಳಿ ಹೋಗಿ ನಿಂತೆ. ಸುತ್ತ ಒಮ್ಮೆ ನೋಡಿದೆ. ಕತ್ತಲ ಬೋಗುಣಿಯಾಗುತ್ತಿರುವ ಹಸಿರ ಬಯಲು. ಆದರೊಳಕ್ಕೆ ಬಸಿಯುತ್ತಿರುವ ಕೆಂಪು ಬೆಳಕು. ಹತ್ತು ದಿಕ್ಕಿನಲ್ಲೂ ಉತ್ಸವ ಮುಗಿಸಿ ಹಳ್ಳಿಗೆ ವಾಪಸ್ಸಾಗುತ್ತಿರುವ ನೂರಾರು ಎತ್ತಿನ ಗಾಡಿಗಳು. ಒಳಗೆ ತುರುಗಿ ಕುಳಿತ ಹೆಂಗಸರು ಮಕ್ಕಳು; ಹೊರಗೆ ಹರಟುತ್ತ ಹಾಡುತ್ತ ನಡೆವ ಗಂಡಸರು. ಬಂಡಿಗಳಿಂದ ಮೇಲೇರುತ್ತ ಎತ್ತಿನ ಗಂಟೆದನಿಗೆ ಬೆರೆಯುತ್ತ ಗಾಳಿಯಲ್ಲಿ ನಿಧಾನ ಕರಗುತ್ತ ಹಾಯುವ ಅರ್ಥಸಿಗದ ಹಾಡುಗಳು. ಮನಸ್ಸಿನ ಆಳಕ್ಕೆ ಇಳಿದು ಮುಂದೆಂದೋ ನೆನಪಿಗೆ ಜಿಗಿದು ಕಾಡುವ ಅನುಭವ ಗೂಢಗಳು. ಒಂದು ಕ್ಷಣ ಅಷ್ಟೆ, ವಿಲಕ್ಷಣವಾದ ಶಾಂತಿವಿಸ್ಮಯಗಳಲ್ಲಿ ಮುಳುಗಿ ಹೋಯಿತು ಮನಸ್ಸು.

ಇಂಥ ವಾತಾವರಣಕ್ಕೆ ಬೀಜ ಹಾಕಿ ಹೋದ ಈ ಶರೀಫ ಸಾಹೇಬ ಎಂಥವನು! ಇವನು ಎತ್ತಿಕೊಂಡ ಸವಾಲು ಎಂಥದು! ಘನ್ನ ಘೋರಿಗಳು ಖಡ್ಗದಿಂದ ಸೀಳಿದ್ದನ್ನು ಇವನು ಕವಿತೆಯಿಂದ ಕೂಡಿಸಿಯಾನೇ? ಮತಾಂಧತೆಯ ವಿನಾಶಕಾರೀ ಉರಿಯನ್ನು ಅಂತಃಕರಣದ ಜೀವಜಲದಿಂದ ಆರಿಸಿಯಾನೆ? ಚರಿತ್ರೆಯ ರಕ್ತಸಿಕ್ತ ಪಥವನ್ನು ಸಾಮಾನ್ಯರು ತೊಳೆಯಬಲ್ಲರೆಂದು ಇವನ ವಾದವೆ? ಸಹಿಷ್ಣುತೆಯೇ ಈ ನೆಲದ ನಿಜಗುಣವೆಂದು ಇವನ ಪ್ರತಿಪಾದನೆಯೆ? ಹಿಂದು ಮುಸ್ಲಿಮರು ಭೇದವಿಲ್ಲದೆ ಹೀಗೆ ಲಕ್ಷಗಟ್ಟಲೆ ಜನ ಇವನ ಗದ್ದುಗೆಗೆ ಯಾತ್ರೆ ಬರುತ್ತಾರೆ ಯಾಕೆ? ಈ ಸೆಳೆತದ ಮೂಲ ಏನು?

ಹರಿಹರ ಹಜರತ್ ತತ್ವಗಳ ಸಂಗಮವೆನ್ನಿಸಿ ಬಾಳಿದ ಶರೀಫರು ಹುಟ್ಟಿದ್ದು ಈಗ ನೂರ ಎಪ್ಪತ್ತು ವರ್ಷಗಳ ಹಿಂದೆ, ಧಾರವಾಡ ಜಿಲ್ಲೆಯ ಶಿಶುವಿನಹಾಳ ಗ್ರಾಮದಲ್ಲಿ. ಅವರ ತಂದೆ ಇಮಾಮ್, ತಾಯಿ ಹಜ್ಜುಮಾ. ಕುಟುಂಬ ತೀರ ಬಡತನದ್ದು. ಆದರೆ ಅಪ್ಪ ಅಮ್ಮ ಹುಡುಗನ ಬಾಳಿನಲ್ಲಿ ಸುರಿದ ಸಂಸ್ಕಾರ ಬಹಳ ದೊಡ್ಡದು. ಇಮಾಮ್ ಮುಸ್ಲಿಮನಾದರೂ ಹಿಂದುಗಳ ಮಂತ್ರ ತಂತ್ರ ಶಾಸ್ತ್ರ ಜ್ಯೋತಿಷ್ಯ ಪುರಾಣ ಎಲ್ಲದಕ್ಕೂ ಮನಸ್ಸು ತೆತ್ತವನು. ಹಜರೇಶಾ ಖಾದರಿಯನ್ನು ಗುರು ಎಂದು ಸ್ವೀಕರಿಸಿದವನು. ಹಜರೇಶಾ ಖಾದರಿಯೇನು ಅಂಥಿಂಥವನಲ್ಲ, ಹಿಂದೂ ಮುಸ್ಲಿಮ ಧರ್ಮಗಳ ಸಂಗಮದ ಕನಸು ಕಂಡ ಸಂತ. ಒಮ್ಮೆ ಯಾರೋ ಹಾಕಿದ ಚೇಡಿಕೆಯ ಸವಾಲಿಗೆ ಒಪ್ಪಿ ಬಯಸಿ

ಬಂದವರಿಗೆ ಲಿಂಗದೀಕ್ಷೆಯನ್ನು ಕೊಟ್ಟು 'ಖಾದರಲಿಂಗ' ಎಂದು ಕರೆಸಿಕೊಂಡವನು. ಶರೀಫರ ಹಾಡುಗಳಲ್ಲಿ ಬರುವ ಖಾದರಲಿಂಗ ಇವನೇ ಇಂಥವನನ್ನು ಗುರುವಾಗಿ ಹಿಡಿದು ಅವನ ಉಪದೇಶಕ್ಕೆ ಮನಸ್ಸು ಬಿಚ್ಚಿದ್ದರ ಫಲ ಇರಬಹುದು, ಇಮಾಮನಿಗೆ ಶರೀಫನಂಥ ಬಹದ್ದೂರ್ ಮಗ ಹುಟ್ಟಿದ.

ಶರೀಫ ಹುಡುಗನಾಗಿದ್ದಾಗಲೇ ಎರಡೂ ಧರ್ಮಗಳನ್ನು ಕಲಿಸಿ ಉಂಡವನು. ಇಸ್ಲಾಂ ಧರ್ಮದ ಪರಿಚಯ ಅವನಿಗೆ ಹುಟ್ಟಿನಿಂದಲೇ ಬಂತು. ಜೊತೆಗೆ ಅಪ್ಪ ರಾಮಾಯಣ ಮಹಾಭಾರತಗಳನ್ನು, ಒಂದೂ ಪುರಾಣ ಕಥೆಗಳನ್ನು ಮಗನಿಗೆ ಹೇಳಿದ. ಅಲ್ಲಮನಂಥ ಶಿವಶರಣರ ಜೀವನ ಸಂಗತಿಗಳನ್ನು ತಿಳಿಸಿದ. ಬಾಲ್ಯದಲ್ಲೇ ಶರೀಫ ಎರಡೂ ಮತಗಳ ಅರ್ಥವತ್ತಾದ ಅಂಶಗಳನ್ನು ಹಾಸು ಹೊಕ್ಕಾಗಿ ನೇಯ್ದ. ಮತ ಮರುಳತನದಿಂದ ತನ್ನನ್ನು ಪಾರುಮಾಡಬಲ್ಲ ನಿಜ ಧರ್ಮದ ರಕ್ಷಾವಸ್ತ್ರವೊಂದನ್ನು ತನ್ನ ಅರಿವಿಲ್ಲದೆಯೇ ಸಿದ್ಧಮಾಡಿಕೊಂಡ.

ಶರೀಫ ಚಿಕ್ಕ ಹುಡುಗನಾಗಿದ್ದಾಗ ನಡೆದ ಒಂದು ಘಟನೆ ಅವನ ಜೀವನದ ದಿಕ್ಕನ್ನೇ ಬದಲಿಸಿ ಬಿಟ್ಟಿತು. ಪಕ್ಕದ ಊರಾದ ಕಳಸದಿಂದ ಗೋವಿಂದ ಭಟ್ಟ ಎಂಬ ಬ್ರಾಹ್ಮಣ ಒಮ್ಮೆ ಶಿಶುನಾಳಕ್ಕೆ ಬಂದ. ಗೋವಿಂದ ಭಟ್ಟ ಸ್ಮಾರ್ತ ಶಾಸ್ತ್ರೀಯ ಬ್ರಾಹ್ಮಣ; ದೇವಿ ಉಪಾಸಕ್ಕೆ ಅವನು ಬಹಳ ಮಹಿಮಾವಂತ ಎಂದೂ ಆಡಿದ್ದೆಲ್ಲ ಆಗಿ ಬಿಡುವುದೆಂದೂ ಬಲವಾದ ಪ್ರತೀತಿ ಇತ್ತು. ವೇದ ಶಾಸ್ತ್ರಗಳನ್ನೆಲ್ಲ ಅರೆದು ಕುಡಿದಿದ್ದ ಈ ಬ್ರಾಹ್ಮಣನ ರೀತಿ ಮಾತ್ರ ವಿಚಿತ್ರವಾಗಿತ್ತು. ಅವನು ಬೇರೆ ಬ್ರಾಹ್ಮಣರಂತಿರಲಿಲ್ಲ. ಜಾತಿಮತಗಳ ಪರಿವೆಯೇ ಅವನಿಗಿರಲಿಲ್ಲ. ಎಲ್ಲಿಂದರೆ ಅಲ್ಲಿ ಉಂಡ, ಯಾರೆಂದರೆ ಅವರನ್ನು ಮುಟ್ಟಿಸಿಕೊಂಡ. ಜಾತಿಮತದ ಕಟ್ಟುಪಾಡುಗಳಿಗೆ ಸೊಪ್ಪು ಹಾಕದ ಅವನ ವರ್ತನೆ ಊರಿನ ಬ್ರಾಹ್ಮಣರಿಗೆಲ್ಲ ನುಂಗಲಾರದ ತುತ್ತಾಗಿತ್ತು. "ಸೆರೆ ಕುಡೀತಾನ, ಗಾಂಜಾ ಸೇದ ತಾನ, ಯಾರೆಂದರೆ ಅವರ ಜೊತೆ ಎಲ್ಲಿಂದರೆ ಅಲ್ಲಿ ಅಲೀತಾನ" ಅಂತ ವಿಪ್ರವರ್ಗವೆಲ್ಲ ಅವನನ್ನು ಬಯ್ಯುತ್ತಿದ್ದರೂ ಇವನು ತಮಗೆ ಮೀರಿದವನು ಅಂತ ಅವರಿಗೆ ಒಳಗೊಳಗೇ ಗೊತ್ತಿತ್ತು. ಒಟ್ಟು ಜನಕ್ಕೆ ಮಾತ್ರ ಗೋವಿಂದ ಭಟ್ಟರೆಂದರೆ ಪರಮಗೌರವ. ಅವರ ಜ್ಞಾನ ಸರಳತೆ, ಅನ್ಯರ ಕಷ್ಟಕ್ಕೆ ಕರಗಿ ಹೋಗುತ್ತಿದ್ದ ತಾಯಿಗುಣಕ್ಕೆ ಸುತ್ತಲ ಊರುಗಳ ಜನರೆಲ್ಲ ಮಾರು ಹೋಗಿದ್ದರು.

ಗೋವಿಂದ ಭಟ್ಟ ಶಿಶುನಾಳಕ್ಕೆ ಬಂದು ಒಂದು ಮರದ ಬುಡದ ಕಟ್ಟೆಯ ಮೇಲೆ ಕೂತರು. ಅವರನ್ನು ಕಾಣಲು ಸೇರಿದ ಜನರಲ್ಲಿ ಇಮಾಮನು ಒಬ್ಬ. ತನ್ನ ಮಗನನ್ನು ಭಟ್ಟರ ಪಾದಕ್ಕೆ ಬೀಳಿಸಿ ಅವನಿಗೆ ವಿದ್ಯೆ ಅನುಗ್ರಹಿಸಬೇಕೆಂದು ಇಮಾಮ ಬೇಡಿಕೊಂಡ. ಗೋವಿಂದ ಭಟ್ಟರಿಗೆ ಏನು ತೋಚಿತೋ, ಹುಡುಗನನ್ನು ಹತ್ತಿರ ಕರೆದು 'ಏ ಶರೀಫ ನಿನ್ನ ಅಪ್ಪ ಯಾರೋ' ಅಂತ ಕೇಳಿದರು. ಸುತ್ತ ಇದ್ದ ಜನಕ್ಕೆ ಆಶ್ಚರ್ಯ,

ನಗು–ಇವರೆಂಥ ತಿಕ್ಕಲು ಬ್ರಾಹ್ಮಣ. ಇಮಾಮ ಎದುರಿಗೇ ಇದ್ದಾನೆ, ಆದರೂ ಇಂಥ ಪ್ರಶ್ನೆಯೇ ಅಂತ. ಶರೀಫ ಥಟ್ಟನೆ 'ಇನ್ಯಾರು ಗುರುಗಳೇ, ನಿಮ್ಮಪ್ಪನೆ ನಮ್ಮಪ್ಪ ಅಲ್ಲವೆ?' ಎಂದುಬಿಟ್ಟ. ಜನರೆಲ್ಲ 'ಎಲಾ ಇವನ, ಏನರs ಮಾತಾಡತಾನ!' ಅಂತ ಗಾಬರಿಯಾದರು. ಗೋವಿಂದಭಟ್ಟರಿಗೆ ಮಾತ್ರ ಹುಡುಗನ ವೇದಾಂತಿಕ ನೆಲೆ ಕಂಡು ಆಶ್ಚರ್ಯ ಸಂತೋಷ. ಎಲ್ಲರಿಗೂ ತಂದೆ ಒಬ್ಬನೇ ಅಂತ ಈ ಹುಡುಗನ ವಿಚಾರ ಅಲ್ಲವೆ? ಹುಡುಗ ಜೋರಿದ್ದಾನೆ ಅನ್ನಿಸಿತು. 'ಭಲೇ ಶರೀಫ' ಅಂತ ಬೆನ್ನು ತಟ್ಟಿದರು. ಇಮಾಮನ ಕಡೆ ತಿರುಗಿ 'ಇಮಾಮ, ಭೂಮಿ ಕಡು ಅವ, ಬೀಜ ನಾಟತವ. ಹುಡುಗನನ್ನ ನನ್ನ ಉಡಿಗೆ ಹಾಕಿಬಿಡು. ಇನ್ನು ಇವ ನನ್ನ ಮಗ' ಎಂದರು. ಭಟ್ಟರ ಹತ್ತಿರ ಮಗನನ್ನು ಓದಲು ಬಿಡಬೇಕು ಅಂತ ಇಮಾಮನಿಗೂ ಆಸೆ ಇತ್ತು. ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ! ಶರೀಫ ಗೋವಿಂದ ಭಟ್ಟರ ಬೆನ್ನುಹತ್ತಿ ಕಳಸಕ್ಕೆ ನಡೆದ.

ಗೋವಿಂದಭಟ್ಟರು ಶರೀಫನನ್ನು ಮಗ ಎಂಬಂತೆ ನೋಡಿಕೊಂಡರು; ದೈವ ಕೊಟ್ಟ ವರ ಎಂಬಂತೆ ಜೋಪಾನ ಮಾಡಿದರು. ಶರೀಫನಲ್ಲಿ ತರ್ಕದಾಚೆಗೆ ಜಿಗಿಯುವ, ಅಮೂರ್ತವಾದದ್ದಕ್ಕೆ ಮಿಡಿಯುವ, ಸೃಷ್ಟಿಯ ರಹಸ್ಯಗಳಿಗೆ ತುಡಿಯುವ ಅಲೌಕಿಕದ ಹುಚ್ಚು ಚಿಗುರುತ್ತಿರುವುದು ಅವರಿಗೆ ಕಂಡಿತ್ತು. ಹುಡುಗನ ಈ ಅಲೌಕಿಕ ಅಂಶವನ್ನು ಅವರು ಪೋಷಿಸಿ ಬೆಳೆಸಿದರು. ಶರೀಫ ಕೂಡ ಗೋವಿಂದಭಟ್ಟರೇ ತನಗೆ ತಂದೆ ತಾಯಿ ಗುರು ಸರ್ವಸ್ವ ಎಂಬಂತೆ ಅವರಿಗೆ ಗಂಟುಬಿದ್ದ. ಸುತ್ತಲ ಜನ ತಬ್ಬಿಬ್ಬಾಗುವ ಹಾಗೆ ಅವರ ಆಪ್ತತೆ ಬೆಳೆಯಿತು. ಗುರು ಬ್ರಾಹ್ಮಣ, ಶಿಷ್ಯನೋ ಮುಸ್ಲಿಮ. ಭಟ್ಟರು ಮುಸ್ಲಿಮರ ದೃಷ್ಟಿಯಲ್ಲಿ ಕಾಫಿರ, ಶರೀಫ ಹಿಂದೂಗಳ ದೃಷ್ಟಿಯಲ್ಲಿ ಮ್ಲೇಚ್ಛ. ಆದರೆ ಸದಾ ಕಚ್ಚಾಡುವ ಮತಗಳು ಈ ಇಬ್ಬರಲ್ಲಿ ಮೆಚ್ಚಿಗೆಯಿಂದ ಕೂಡಿಕೊಂಡವು. ಗುರುಶಿಷ್ಯರು ಮತ ವಿವರಗಳ ಹೊರಗಿನ ಕರಟವನ್ನು ತಿರಸ್ಕರಿಸಿ ಧರ್ಮದ ತಿರುಳನ್ನಷ್ಟೇ ಪುರಸ್ಕರಿಸಿದರು; ಪರಸ್ಪರ ಹಾಲುಸಕ್ಕರೆಯಂತೆ ಬೆರೆತರು.

ಕಾಟ–ಕೀಟಲೆ:

ಆದರೆ ಜಾತಿಶಠರಿಗೆ ಇದು ತಿಳಿಯಬೇಕಲ್ಲ! ಸಾಬರ ಹುಡುಗನನ್ನು ಕಟ್ಟಿಕೊಂಡಿದ್ದಾನೆ ಅಂತ ಗೋವಿಂದಭಟ್ಟರಿಗೆ, ಕಾಫಿರನ ಕಾಲಿಗೆ ಬಿದ್ದಿದ್ದಾನೆ ಅಂತ ಶರೀಫನಿಗೆ ಕಾಟ ಕೀಟಲೆ ಶುರುವಾದವು. ಆದರೆ ಸದಾ ಸೃಷ್ಟಿ, ಬ್ರಹ್ಮ, ಜೀವ, ಮಾಯೆ ಅಂತ ಚರ್ಚೆ ಮಾಡುತ್ತ, ಬ್ರಹ್ಮಾನಂದದ ಅಮಲಿನಲ್ಲಿ ಎಂಬಂತೆ ತಿರುಗುತ್ತಿದ್ದ ಈ ಅವಧೂತ ಜೋಡಿ ಅದಕ್ಕೆಲ್ಲ ಸೊಪ್ಪುಹಾಕಲಿಲ್ಲ. ಹಾಗೆ ನೋಡಿದರೆ ಇದ್ದಕ್ಕಿದ್ದಂತೆ ಏನಾದರೋ ಅನಿರೀಕ್ಷಿತವಾದದ್ದನ್ನು ಮಾಡಿ ಅವರನ್ನು ಹೊತ್ತು ಹೊತ್ತಿಗೆ ಬೆಚ್ಚುಬೀಳಿಸುತ್ತಿದ್ದವರು ಈ ಗುರು ಶಿಷ್ಯರೇ! ಅಂಥದ್ದೊಂದು ಘಟನೆ ಇದು.

ಒಮ್ಮೆ ಊರಿನ ಅರಳೀಕಟ್ಟೆಯ ಮೇಲೆ ಗೋವಿಂದಭಟ್ಟರು ಕೂತಿದ್ದಾರೆ. ಕೆಲವರು ಮೇಲು ಜಾತಿಯ ಜನರೂ ಅಲ್ಲೇ ಇದ್ದಾರೆ. ಆ ಹೊತ್ತಿಗೆ ಶರೀಫ ಅಲ್ಲಿಗೆ ಬಂದ. ಭಟ್ಟರು 'ಬಾರೋ ಶರೀಫ' ಅಂತ ಕರೆದು ಅವನನ್ನು ಮೈಗೆ ತಗುಲಿಸಿಕೊಂಡೇ ಕೂತರು. ಅದನ್ನು ನೋಡಿ ಜಾತಿಜನಕ್ಕೆ ಮೈಯಲ್ಲಾ ಉರಿದುಹೋಯಿತು. ತಮ್ಮನ್ನು ಚುಚ್ಚಬೇಕು ಅಂತಲೇ ಭಟ್ಟ ಇದನ್ನೆಲ್ಲ ಮಾಡುತ್ತಿದ್ದಾನೆ ಅಂತ ಅನುಮಾನ ಹುಟ್ಟಿತು. 'ಏನು ಭಟ್ಟರೇ ಆ ಸಾಬರ ಹುಡುಗ ನಿಮಗೆ ಬ್ರಾಹ್ಮಣ ವಟುವಿನ ಹಾಗೆ ಕಾಣಿಸು ತ್ತಾನೋ? ಮಡಿ ಮೈಲಿಗೆ ಮೇಲು ಕೀಳು ಯಾವುದರ ಎಚ್ಚರವೂ ನಿಮಗೆ ಇಲ್ಲ ಅಂತ ಕಾಣುತ್ತೆ' ಅಂತ ಅವರನ್ನು ನಿಂದಿಸಿದರು. ಭಟ್ಟರು ಸಿಟ್ಟಿಗೇಳಲಿಲ್ಲ, ನಕ್ಕುಬಿಟ್ಟರು. 'ಎಲಾ ಏನು ಬೆರಕಿ ಇದೀರಪಾ ನೀವು, ಹುಟ್ಟಿದ್ದಷ್ಟಕ್ಕೇ ಬ್ರಾಹ್ಮಣರಾಗಿಬಿಟ್ಟೀರೋ? ಈ ಗಟ್ಟಿ ಹುಡುಗನ್ನ ನಿಂದಿಸತೀರಲಾ? ಇವನಿಗಿಂತ ದೊಡ್ಡ ಬ್ರಾಹ್ಮಣ ಇಲ್ಲಿ ಅದು ಯಾವೋನು ಇದಾನೆ ಹೇಳ್ರಪಾ' ಎಂದವರೇ ತಮ್ಮ ಮೈಮೇಲಿದ್ದ ಮೂರು ಎಳೆ ಜನಿವಾರ ತೆಗೆದು ಶರೀಫನ ಕೊರಳಿಗೆ ಹಾಕಿ ಅವನನ್ನು ಅಪ್ಪಿಕೊಂಡು ಬಿಟ್ಟರು. ಹಂಗಿಸಿದ್ದವರ ಮುಖ ಕಪ್ಪಿಟ್ಟು ಹೋಯಿತು. ಶರೀಫನೋ ಭಾವಪರವಶನಾಗಿ ಗುರುವಿಗೆ ಉದ್ದಂಡ ನಮಸ್ಕಾರ ಹಾಕಿಬಿಟ್ಟ.

ಹಾಕಿದ ಜನಿವಾರವ ಸದ್ಗುರುನಾಥ
ಹಾಕಿದ ಜನಿವಾರವ
ಹಾಕಿದ ಜನಿವಾರ ನೂಕಿದ ಭವ ಭಾರ
ಲೋಕದಿ ಬ್ರಹ್ಮಜ್ಞಾನ ನೀ ಪಡೆಯೆಂದು

ಸಂಧ್ಯಾವಂದನೆ ಕಲಿಸಿ ಆನಂದದ
ಬಿಂದು ಮಧ್ಯದಿ ನಿಲಿಸಿ
ನಂದಿಸಿ ಮನಸನು ಆತ್ಮದ ಜಲದಲಿ
ಎಂದೆಂದಿಗೂ ಯಮದಂದುಗವಳಿಯೆಂದು

ಶಿಶುನಾಳಾಧೀಶ ಗುರು ತನ್ನೊಡಲೊಳು
ವಶವಿದ್ದ ಸೂತ್ರವನು
ನಸುನಗುತಲಿ ತೆಗೆದಸ್ಥಿಯೆ ತೊಡಿಸಿದ
ಉಸುರಿದ ಮಾತ್ರವ ಹೊಸಬನ ಮಾಡುತ
ಹಾಕಿದ ಜನಿವಾರವ ಸದ್ಗುರುನಾಥ
ಹಾಕಿದ ಜನಿವಾರವ.

ಸಂಧ್ಯಾವಂದನೆ ಕಲಿಸಿ, ಆನಂದದ ಬಿಂದುವಿನ ಮಧ್ಯೆ ನಿಲ್ಲಿಸಿ ಆತ್ಮದ ಜಲದಲ್ಲಿ ಮನಸ್ಸನ್ನು ನಂದಿಸಿ ಎಂದೆಂದಿಗೂ ಯಮನ ಹಿಡಿತದಿಂದ ತನ್ನನ್ನು ಪಾರುಮಾಡಿಬಿಟ್ಟ ತಮ್ಮ

ಗುರುವಿನ ಬಗ್ಗೆ ಶರೀಫರಿಗೆ ಅಪಾರ ಅಭಿಮಾನ. ಗುರುಗಳು ಮತಗಳು ಸಾವಿರ ಇದ್ದಾವು. ಆದರೆ ಶಿಷ್ಯನ ದೃಷ್ಟಿಯ ಪೊರೆ ಕಳಚಿ ಅವನನ್ನು ಸತ್ಯಕ್ಕೆ ಎದುರೆದುರು ನಿಲ್ಲಿಸಬಲ್ಲ ಗುರು ಇವರೊಬ್ಬರೇ ಅಂತ ಶರೀಫರು ನಂಬಿದರು. ಹಾಗೆಂದೇ

ಗುರುವೆಂದರೆ ನಿಜಕೆ ಈತನೆ
ದೊರೆಯೆಂದರೆ ನಿಜಕೆ ಈತನೆ
ದಿಟವ ಹುಸಿಯು ಬೆದಕೆ ನೋಡಿ
ನಟನೆ ಇರದ ಹಾದಿ ತೋರಿ
ಕಟಕಿ ನುಡಿಗೆ ಬಾಗದಿರುವನು
ಏನು ದಿಟ್ಟ!

ಎಂದು ಅವರನ್ನು ಕೀರ್ತಿಸಿದರು. ತಮಗೆ ಬೇಕಾದ ಗುರು ದೊರಕಿದ್ದನ್ನು ಹೇಳುತ್ತ–

ಕರಪಾತ್ರೆ ಪಿಡಿದು ಈ
ನರ ಶರೀರದಿ ತನ್ನ
ಅರಿವ ತನಗೆ ತೋರಿ
ಪರಮ ನಂಬುಗೆಯಲ್ಲಿ
ದೊರಕಿದಾ ಗುರು ದೊರಕಿದ

ಎಂದು ಹಾಡಿದರು. 'ಅರಿವಿನೊಳಗೆ ಬಂದವರು, ದ್ವಂದ್ವವಿಲ್ಲದ ಒಂದೇ ವಸ್ತು ಎನಿಸಿದವರು. ತನಗೆ ಅರಿವು ನೀಡಲೆಂದೇ ಕರಪಾತ್ರೆ ಪಿಡಿದು ನರಶರೀರದಲ್ಲಿ ನಿಂದವರು' ಎಂಬ ಮಾತುಗಳೆಲ್ಲ 'ಗುರು ಸಾಕ್ಷಾತ್ ಪರಬ್ರಹ್ಮ' ಎಂಬ ರೂಢಿಮಾತಿನ ಗತಾರ್ಥವನ್ನು ಹೊಸ ಎಚ್ಚರದಲ್ಲಿ ಪುನರುಜ್ಜೀವಿಸಿಕೊಡುವಂಥವು. ಅವರು ಗುರುವನ್ನು ಕುರಿತು ಬರೆದ 'ಎಲ್ಲರಂಥವನಲ್ಲ ನನಗಂಡ' ಎಂಬ ಪದ್ಯವಂತೂ ಅತ್ಯಂತ ಮಾರ್ಮಿಕವಾದದ್ದು. ಅಲೌಕಿಕದ ಸೆಳೆತ ಅಂತರಂಗದ ಚೀರಾಟವಾದಾಗ ಅವನನ್ನು ಗೊತ್ತು ಗುರಿಗೆ ಹಚ್ಚುವ ಗುರು ತಾನೇ ಶಿಷ್ಯನನ್ನು ಹುಡುಕಿಕೊಂಡು ಬರುತ್ತಾನೆ ಅನ್ನುವ ನಂಬಿಕೆ ಇದೆ. ತೋತಾಪುರಿ, ಭೈರವಿ, ಬ್ರಾಹ್ಮಣಿ, ರಾಮಕೃಷ್ಣ ಪರಮಹಂಸರನ್ನು ಅವರು ಇದ್ದಲ್ಲಿಗೇ ಅರಸಿಬಂದರು. ಶರೀಫರಿಗೆ ಗುರು ಸಿಕ್ಕದ್ದೂ ಹಾಗೆಯೇ. ಪ್ರಾಚೀನ ಕಾಲದ ಗುರುಶಿಷ್ಯರ ಗಾಢಸಂಬಂಧದ ಕಲ್ಪನೆ ಗೋವಿಂದಭಟ್ಟ ಶರೀಫರಲ್ಲಿ ತನ್ನನ್ನು ಇನ್ನೊಮ್ಮೆ ಸಾಕ್ಷಾತ್ಕರಿಸಿಕೊಂಡಿತು ಎನ್ನಬಹುದು.

ಒಮ್ಮೆ ಶರೀಫರು ಕಳಸಕ್ಕೆ ಬರುವಾಗ ಎದುರಿಗೆ ಕೆಲವರು ಬಂದರು. ಶರೀಫರು ತಮ್ಮ ಚಪ್ಪಲಿಗಳನ್ನು ಬಗಲಲ್ಲಿಟ್ಟುಕೊಂಡು ಆನಂದದಿಂದ ಹಾಡುತ್ತ ಬರುತ್ತಿದ್ದಾರೆ! ಎದುರಿಗೆ ಬಂದವರು ಇದನ್ನು ನೋಡಿ ಬೇಗಾದರು. 'ಶುದ್ಧ ಹುಚ್ಚ ತುರುಕ' ಅನ್ನಿಸಿರಬೇಕು. 'ಯಾಕೆ ಶರೀಫರೆ, ಹಿಂಗ್ಯಾಕ ಮಾಡ್ತೀರಿ? ಮೆಟ್ಟು ಬಗಲಾಗ ಯಾಕ ಇಟ್ಟೀರಿ?'

ಎಂದರು. 'ಮತ್ತೆ ಗುಡಿಯೊಳಗ ಮೋಚ್ಚೆ ಹ್ಯಾಂಗ ಹಾಕಿಕೊಳ್ಳೋದಪಾ?' ಎಂದರು ಶರೀಫರು. ಕೇಳಿದವರಿಗೆ ಆಶ್ಚರ್ಯ. 'ಅಲ್ಲಾ ಶರೀಫರೆ, ಇಲ್ಲಿ ಗುಡಿ ಎಲ್ಲಿ ಬಂತು? ನೀವು ರಸ್ತೆಯೊಳಗ ಬರತಿಲ್ಲೇನು?' ಎಂದರು. ಶರೀಫರು ಕಳಸ ಊರಿನತ್ತ ಕೈಮಾಡಿ 'ಹುಚ್ಚಪ್ಪಗಳಾ, ಈ ಊರಾಗ ನನ್ನ ಗುರುದೇವರು ಇಲ್ಲೇನು? ಗೋವಿಂದ ಗುರು ಇರೋ ಈ ಊರೇ ನನಗೆ ದೇವಾಲಯ. ಅಲ್ಲಿ ಮೋಚ್ಚೆ ಹಾಕಿಕೊಳ್ಳೋದು ಹ್ಯಾಂಗ?' ಎಂದವರೇ ಮೋಚ್ಚೆಯನ್ನು ಬಗಲಿಂದ ತೆಗೆಯದೆ ಹಾಗೇ ಹಾಡಿಕೊಳ್ಳುತ್ತ ಹೋಗಿಬಿಟ್ಟರು.

ಮಸೀದಿ, ನಮಾಜು ಎಲ್ಲಾ ಬಿಟ್ಟುಕೊಟ್ಟಿದ್ದ ಶರೀಫರನ್ನು ಒಮ್ಮೆ ಒಬ್ಬ ಮುಲ್ಲಾ ಕೇಳಿದ–'ಏನೋ ಶರೀಫ ಮಸೀದಿಗೆ ಬರೋದು ಬಿಟ್ಟಕೊಟಿ. ನಮಾಜು ಅಂತೂ ಕೇಳಲೇಬೇಡ. ಹೋಗಲಿ ಹಾಗಂದರ ಏನಂತ ಅಂತಲಾದರೂ ನಿನಗೆ ಗೊತ್ತೇನಃ' ಅಂತ. ಶರೀಫರು ಚಟ್ಟನೆ ತಮ್ಮ ಮೈ ತೋರಿಸಿ ಹೇಳಿದರು. "ಇದು ಬಿಟ್ಟು ಇನ್ಯಾವು ದಪ್ಪಾ ಮಸೀದಿ? ನಾನು ಸದಾ ಇದರಾಗೇ ಇರತ ಇನ್ನು ಬರೋದು ಬಿಡೋದು ಏನೈತಿ? 'ನಾನು' ಅನ್ನೋದನ್ನ ಮಾಜಿಕೊಳ್ಳುವ ಈ ಕೆಲಸ ನಡೆಸೇ ಇದ್ದೀನಿ. ಅದು ಬಿಟ್ಟು ಬೇರೆ ನಮಾಜು ಯಾಕೆ ಬೇಕು ಹೇಳಪಾ?" ಇಂಥ ಉತ್ತರ ಕೇಳಿ, ಇವನೊಬ್ಬ ಹುಚ್ಚ ಪ್ಯಾಲಿ ಎಂದುಕೊಂಡು ಹೋದವರೇ ಬಹಳ ಜನ.

ಗಾಳಿ ಬೆಳಕಿಗೆಲ್ಲಿ ಒದ್ದೆ:

ಪ್ರಾಯಕ್ಕೆ ಬಂದರೂ ಶರೀಫರು ಮದುವೆಗೆ ಒಪ್ಪಿರಲಿಲ್ಲ. ಅಪ್ಪ ಅಮ್ಮನ ಒತ್ತಾಯ ದಿನ ದಿನ ಹೆಚ್ಚಿತು. ಶರೀಫರು ಗೋವಿಂದಭಟ್ಟರ ಬಳಿಗೆ ಬಂದು 'ಗುರುಗಳೇ ನಾನು ಸಂಸಾರಿಯಾದರೆ ಮೋಹ ಮಾಯೆಗಳಲ್ಲಿ ಮುಳುಗಿಹೋದೇನು ಅಲ್ಲವಾ' ಅಂತ ಕೇಳಿದರು. 'ಅವರು ನಕ್ಕು ಲೋ ಶರೀಫ ನಿನಗೆ ಯಾಕೋ ಅದರ ಚಿಂತಿ? ಎಷ್ಟು ಮಳಿ ಹೊಯ್ದರೆ ತಾನೇ ಗಾಳಿ ಬೆಳಕು ಒದ್ದೆಯಾದಾವು? ಹೋಗು, ಮದುವೆ ಮಾಡಿಕೋ' ಎಂದರು. ಶರೀಫರು ಕುಂದಗೋಳದ ಫಾತಿಮಾ ಎಂಬ ಹೆಣ್ಣನ್ನು ಮದುವೆಯಾದರು; ಕಾರಡಗಿ ಸ್ಕೂಲಿನಲ್ಲಿ ಶಿಕ್ಷಕರಾಗಿ ಕೆಲಸಕ್ಕೆ ನಿಂತರು. ಒಂದು ಹೆಣ್ಣು ಮಗುವೂ ಆಯಿತು.

ಆದರೆ ಯಾವುದರ ಎಗ್ಗೂ ಇರದೆ, ವ್ಯವಹಾರದ ಚಿಂತೆಯನ್ನೇ ಮಾಡದೆ ಸದಾ ಏನಾದರೊಂದು ಗುಂಗಿನಲ್ಲಿ ಅಲೆಯುವ ವ್ಯಕ್ತಿ ಒಂದು ಕಟ್ಟುಪಾಡಿನಲ್ಲಿ ತಪ್ಪದೆ ಕೆಲಸ ಮಾಡುವುದು ಹೇಗೆ? ಜೊತೆಗೆ ಹೆಂಡತಿ ಬೇರೆ ಸ್ವಲ್ಪಕಾಲದಲ್ಲೇ ತೀರಿಕೊಂಡಳು. ಮಗು ನೆರೆಹೊರೆಯ ಆರೈಕೆಯಲ್ಲಿ ಬೆಳೆಯುತ್ತಿತ್ತು. ಇನ್ನು ಶಿಕ್ಷಕವೃತ್ತಿಯ ಕಿರಿಕಿರಿಯೊಂದು ಯಾಕೆ? ಶರೀಫರು ಅದಕ್ಕೂ ಎಳ್ಳುನೀರು ಬಿಟ್ಟರು. ಅಲಾದಿ ಆಡುತ್ತ, ಹೆಜ್ಜೆ ಮೇಳ ಆಡಿಸುತ್ತ, ಬಯಲಾಟಗಳಲ್ಲಿ ಸೇರುತ್ತ ಎಲ್ಲೆಂದರಲ್ಲಿ ಅಲೆದರು. ಜನಕ್ಕೆ ಸರಳ ಶ್ರದ್ಧೆಯ ಜೀವನ ಬೋಧಿಸುತ್ತ, ಪದ್ಯಗಳ ಮೂಲಕ ಲೋಕಾನುಭವಗಳನ್ನು ಜಗಿಯುತ್ತ ಹಿರಿಯ ಅನುಭಾವಿಗಳ ಜೊತೆ ಜಿಜ್ಞಾಸೆ ನಡೆಸುತ್ತ ಶರೀಫರು ಊರು ಊರು ಅಲೆದರು.

ಬಹಳ ಜನಕ್ಕೆ ಶರೀಫರ ಬಗ್ಗೆ ತುಂಬ ಆದರ ಭಾವವಿತ್ತು ನಿಜ. ಆದರೆ ಯಾರು ಯಾರನ್ನು ಎಲ್ಲ ಕಾಲ ಸಾಕಿಯಾರು ಹೇಗೆ? ಅವರಿವರು ಕೊಂಚ ಕೊಟ್ಟರೂ ಅದು ಎಷ್ಟು ದಿನ ನಡೆದೀತು? ಅಲ್ಲದೆ ಸ್ನೇಹಿತ ಪರಿಚಿತರಿಂದಲೇ ಬಂದರೂ ಅನ್ಯರಿಂದ ಪಡೆಯುವುದು ಅವರಿಗೆ ಬಹಳ ಕಷ್ಟವಾಗಿದ್ದಿರಬೇಕು. ಅದಕ್ಕೆ ಹೇಗೋ ಒಗ್ಗಿಕೊಳ್ಳ ಹೊರಟ ತಮ್ಮ ಮನಸ್ಸನ್ನು ಅವರೇ ಛೇಡಿಸಿ ಶಿಕ್ಷಿಸಿಕೊಂಡದ್ದೂ ಉಂಟು. 'ಕುಲಕರ್ಣಿ ಕೊಟ್ಟ ಪಾವಲಿ ರೊಕ್ಕ' ಎಂಬ ಪದ್ಯದಲ್ಲಿ ಈ ಬವಣೆ ತೊಳಲಾಟವೆಲ್ಲ ಹೊರಗೆ ಬಂದಿದೆ.

ಕುಲಕರ್ಣಿ ಕೊಟ್ಟ ಪಾವಲಿ ರೊಕ್ಕ
ನೆಲ ಕಾಂಬುದು ನೀನು ಹ್ಯಾಂಗೆಲೊ ಮನಸೇ
ಬಲು ದಿನದ ಸಲಿಗೀಲಿ ಸಾಲಿ ಬರೆದ ಸ್ನೇಹ
ಬಳಸಿ ಇಲ್ಲಿಗೆ ಹೀಗೆ ಬಂದೆಲ್ಲೊ ಮನಸೇ

ಕಡೆಕಡೆಯಲ್ಲಿ ಶರೀಫರು ಇದ್ದರೆ ಉಂಡ, ಇಲ್ಲದಿದ್ದರೆ ಬಿಟ್ಟ ಎಂಬ ತೀರ್ಮಾನದಲ್ಲಿ ನಿಂತರು. ಬಡತನವನ್ನು ಕಷ್ಟಪಟ್ಟು ಕಾಪಾಡಿಕೊಂಡ ಜೀವ ಜೀವನದ ಈ ಎಲ್ಲ ಏರಿಳಿತಗಳಲ್ಲಿ ಅವರಿಗೆ ನಿರಂತರ ಸಂತೃಕೆಯಾಗಿ ಉಳಿ ಸಂಬಂಧ ಒಂದೇ, ಗೋವಿಂದ ಭಟ್ಟರದ್ದು.

ಶರೀಫರ ಅನೇಕ ಕವಿತೆಗಳು ಅವರ ಬಾಳಿನ ಘಟನೆಗಳೇ ಕಾರಣವಾಗಿ ಹುಟ್ಟಿದವು ಎಂಬ ಮಾತಿದೆ. ಶಿಶುನಾಳದ ಸುತ್ತಮುತ್ತಲ ಊರುಗಳಲ್ಲಿ ಕಳೆದ ತಲೆಮಾರಿನವರು ಹೇಳುತ್ತಿದ್ದ ಅಂಥ ಅನೇಕ ಸಂಗತಿಗಳು ದಾಖಲಾಗಿವೆ. ಘಟನೆಗಳನ್ನು ಆಧರಿಸಿ ಪದ್ಯ ಹುಟ್ಟಿದುವೋ, ಪದ್ಯ ನೋಡಿ ಕಥೆಗಳು ಹುಟ್ಟಿಕೊಂಡವೋ ಹೇಳುವಂತಿಲ್ಲ. ಶರೀಫರದು ಒಂದು ಬಗೆಯ ಆಶುಕವಿತ್ವವಾದದ್ದರಿಂದ ಮತ್ತು ಪದ್ಯಗಳು ಘಟನಾತ್ಮಕವಾಗಿ ಇರುವುದರಿಂದ ಕೆಲವಾದರೂ ಹಾಗೆ ಹುಟ್ಟಿರಬಹುದು. ಹಾಗೆಯೇ ಅಸಾಧಾರಣ ವ್ಯಕ್ತಿಯೊಬ್ಬ ತೀರಿಕೊಂಡ ಮೇಲೆ ಅವನ ಬಗ್ಗೆ ಮೆಚ್ಚಿಕೆಯಿಂದಾಗಿ ಕಥೆ ಕಟ್ಟಿಬಿಡುವ ಪರಿಪಾಠ ನಮ್ಮಲ್ಲಿರುತ್ತ ಅನೇಕ ಕಥೆಗಳು ಪದ್ಯನೋಡಿ ಸೃಷ್ಟಿಯಾದವೂ ಇರಬಹುದು. ಪದ್ಯಗಳ ಮಾತುಗಾರಿಕೆಯ ರೀತಿ, ನಾಟಕೀಯತೆಗಳಿಂದಾಗಿ ಅವು ಥಟ್ಟನೆ ಅಲ್ಲಿಯೇ ಆಗಲೇ ಹುಟ್ಟಿದುವೇನೋ ಅನ್ನಿಸಿಬಿಡುದಂತೂ ನಿಜ. ಇದು ಅಂಥದೊಂದು.

ಸವಾಲಾದ ಚೆಲುವು:

ಶರೀಫರನ್ನು ಬಹಳ ಮೆಚ್ಚಿಕೊಂಡಿದ್ದ ಹೆಣ್ಣೊಬ್ಬಳು ಅವರ ಸ್ನೇಹವನ್ನು ತೀವ್ರವಾಗಿ ಬಯಸಿದಳು. ಶರೀಫರು ಆಗ ಕಾರಡಗಿ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ದಿನವೂ ಊರಿನಿಂದ ಅಲ್ಲಿಗೆ ಬಂದು ಮತ್ತೆ ಊರಿಗೆ ವಾಪಸ್ಸಾಗುತ್ತಿದ್ದರು. ಒಂದು ರಾತ್ರಿ ಅವರು ಊರಿಗೆ ಹಿಂತಿರುಗುತ್ತಿದ್ದಾರೆ. ಊರ ಹೊರಗೆ ಕತ್ತಲಲ್ಲಿ, ನಿರ್ಜನ ಸ್ಥಳದಲ್ಲಿ ಆ ಹೆಣ್ಣುಮಗಳು ಅವರೆದುರೇ ಬಂದಳು. ತನ್ನ ಮನಸ್ಸಿನ ಮಾತು ಹೇಳಿಕೊಂಡಳು.

ಶರೀಫರು ಒಂದು ಕ್ಷಣ ಅವಾಕ್ಕಾದರು. ಹೆಣ್ಣಿನ ಚೆಲುವು ಪರೀಕ್ಷೆ ಒಡ್ಡಿದಂತೆ ಎದುರು ನಿಂತಿತ್ತು. ಶರೀಫರ ಮನಸ್ಸೂ ಹೊಯ್ದಾಡಿರಬೇಕು. ಆದರೆ ಕೂಡಲೆ ಅವರು ಸಾವರಿಸಿ ಕೊಂಡರು. ಆಕೆಗೆ ನೋವಾಗದಂತೆ ಸಾಂತ್ವನದ ಮಾತು ಹೇಳಿ ಸಂಗ ಬಂದಿದ್ದ ಮೋಹ ದಿಂದ ಪಾರಾದರು. ಈ ಘಟನೆಯೇ 'ಹಾವು ತುಳಿದೆನೇ ಮಾನಿನಿ' ಎಂಬ ಪದ್ಯಕ್ಕೆ ಪ್ರೇರಣೆ ಎನ್ನುತ್ತಾರೆ.

ಹಾವು ತುಳಿದೆನೇ ಮಾನಿನಿ
ಹಾವು ತುಳಿದೆನೇ

ಹಾವು ತುಳಿದು ಹಾರಿ ನಿಂತೆ
ಜೀವ ಕಳವಳಿಸಿತೇ ಗೆಳತಿ
ದೇಹತ್ರಯದ ಸ್ಮೃತಿಯು ತಪ್ಪಿ
ದೇವಾ ನೀನೇ ಗತಿಯು ಎಂದು

'ಕತ್ತಲಲ್ಲಿ ಬಂದು ಕಾಲಿಗೆ ಸುತ್ತಿಕೊಂಡಿತು ಸಣ್ಣ ನಾಗರ' ಎಂಬ ಈ ಪದ್ಯದ ಕಡೆಯ ಸಾಲು ಸಂಕೇತ, ಇಬ್ಬಗೆ ಅರ್ಥ, ಮಾತಿನ ನಾದಮಮತೆ ಎಲ್ಲ ದೃಷ್ಟಿಯಿಂದಲೂ ಚುರುಕಾ ಗಿದೆ. ಈ ಹಾವು ಅಂಥಿಂಥದಲ್ಲ, ಲೋಕವನ್ನೇ ತನ್ನ ಚೆಲುವಿನಿಂದ ಆಡಿಸಿದ್ದು, ದೇವತೆ ಗಳನ್ನು ಬಳಸಿ ನಿಂತದ್ದು.

ಹರಿಗೆ ಹಾಸಿಗೆಯಾದ ಹಾವು
ಹರನ ತೋಳಿನೊಳಿರುವ ಹಾವು
ಧರೆಯ ಹೊತ್ತು ಮೆರೆವ ಹಾವಿನ
ಶಿರವ ಮೆಟ್ಟಿದೆ ಶಿವನ ದಯದಿ

ಎಂದು ಕಾಮಾರಿಯ ಕೃಪೆಯಿಂದ ತಾವು ಪಾರಾದುದನ್ನು ಹೇಳುತ್ತಾರೆ ಶರೀಫರು. ಹಾವು-ಕಾಮಗಳಿಗಿರುವ ಪ್ರತೀಕಾತ್ಮಕ ಸಂಬಂಧ, ಅದರ ಪೌರಾಣಿಕ ಪ್ರಸಿದ್ಧಿ ಎರಡನ್ನೂ ಶರೀಫರು ಪದ್ಯಕ್ಕೆ ಹಾಯಿಸಿಕೊಂಡ ರೀತಿ ಕೌಶಲ ಪೂರ್ಣವಾದದ್ದು. ಅವರ ಶೋಧಕ ಭಾಷೆ ಉಪಪ್ರಜ್ಞೆಯ ಸ್ತರದಲ್ಲೂ ಕೆಲಸ ಮಾಡುತ್ತದೆ. ಹಾಗೆಂದೇ ಅವರು ಬಳಸುವ ಪ್ರಾಣಿ ಪ್ರತೀಕಗಳು ಮನಶ್ಶಾಸ್ತ್ರಜ್ಞರಿಗೂ ಸಮರ್ಪಕ ಚಿತ್ರಗಳಾಗಿ ಕಂಡಾವು.

ಸೃಷ್ಟಿಯ ಒಳಗೆ ಹೊರಗೆ ಅಡಗಿ ನಿಂತು ಅದನ್ನು ಆಡಿಸುತ ಪರಮಾತ್ಮ ತತ್ವದ ಶೋಧಕ್ಕೆ ತಾವು ಹೊರಟಿದ್ದನ್ನು, ಬಳಲಿ ಬೆಂಡಾದದ್ದನ್ನು ಅಂಥ ಹೊತ್ತಿನಲ್ಲಿ ಗುರು ತಮ್ಮನ್ನು ಕಾಪಾಡಿಕೊಂಡದ್ದನ್ನು ಶರೀಫರು ಸರಳವಾದ, ಆದರೆ ಮೂರ್ತವಾದ ಪ್ರತೀಕಾ ತ್ಮಕ ಭಾಷೆಯಲ್ಲಿ ಹಿಡಿಯುತ್ತಾರೆ.

ಹುಡುಕುತ ನಾ ಎಲ್ಲಿಗ್ಹೋಗಲಿ
ಹುಡುಕಿ ಬ್ಯಾಸತ್ತೆ, ಎಲ್ಲಂತ ಕಾಣಲಿ?

ಏಳು ಸಮುದ್ರ ಏಳು ಪರ್ವತಗಳು
ಹಾಳುಬಿದ್ದವು ಕೇಳಿ ಬ್ಯಾಸತ್ತೆ
ನೀರು ತುಂಬಿದ ಬಾವಿ ನವರಿಟ್ಟು ನೋಡಿದೆ
ನದಿ ನದಿ ಕಲಕ್ಯಾಡಿ ಬ್ಯಾಸತ್ತೆ

ಧರೆಯೆಲ್ಲ ತಿರುಗಿದೆ, ಗಿಡ ಗಿಡ ಕಾಡಿದೆ
ಪರಮಾತ್ಮ ಸಿಗದೇನೆ ಬಳಲಿದೆ
ನಡು ಊರೊಳರಸಿದೆ, ಸುಡುಗಾಡ ಚರಿಸಿದೆ
ಪರಮಾತ್ಮ ಸಿಗದೇನೆ ತೊಳಲಿದೆ.

ಸಣ್ಣವನಿರುತಲೆ ಗೋವಿಂದ ಗುರುವು
ಹಣ್ಣು ಸಕ್ಕರೆ ಕೊಟ್ಟು ಉಣಿಸಿದ್ದ
ಶಿಶುನಾಳೇಶನ ಈಗ ಮನದಲ್ಲಿ ಕೂರಿಸಿ
ಬಿಸಿಲಲಿ ನೆರಳಾಗಿ ರಕ್ಷಿಸಿದ.

ಗಿರಿ ಕಡಲು ನದಿ ಊರು ಮಸಣ–ಹೀಗೆ ಪಾರ್ಥಿವ ಜಗತ್ತನ್ನೆಲ್ಲ ಕಲಕಿ ಕೈಯಾಡಿಸಿದರೂ ಸಿಗದ ಪರಮಾತ್ಮ ತತ್ವ ಗುರು ಕೃಪೆಯಿಂದ ತಮಗೆ ದಕ್ಕಿ ಭವದ ಬೇಗೆಯಿಂದ ರಕ್ಷಿಸುತ ನೆರಳಾಯಿತು ಎನ್ನುವ ಆಶಯ ಮನೋಹರವಾಗಿ ಮೂಡಿದೆ ಇಲ್ಲಿ.

ಮನುಷ್ಯನನ್ನು ಆಡಿಸುವ ಕಾಮ ವ್ಯಾಮೋಹಗಳ ಗಾಢ ಪರಿಚಯ ಶರೀಫರಿಗಿದೆ. ಕಾಮ ಎಷ್ಟು ಬಲವತ್ತರವಾದದ್ದು, ದುರ್ದಮ್ಯವಾದದ್ದು, ಮೃಗೀಯವಾದದ್ದು ಎನ್ನುವುದನ್ನು ಅವರು ಪುರಾಣ ಬಳಸಿ ಪ್ರಾಣಿ ಪ್ರತೀಕದ ಮರೆಯಲ್ಲಿ ಹೇಳುತ್ತಾರೆ.

ಮಂಗನ ನೋಡಿದೆ ನಾ–ಅಡಗಿದ
ಮಂಗನ ನೋಡಿದೆ ನಾ

ಮಂಗನ ನೋಡಿದೆ
ಕಂಗೆಡಿಸಿತು ಮನ
ರಂಗಿಲೆ ಕುಣಿದು ಅಂಜಿಸುತಿಹುದು
ಮಂಗನ ನೋಡಿದೆ ನಾ

ಸಿಂಗಳೀಕ ಎನಿಸಿ–ಪರಿಪರಿ
ಭಂಗಕೆನ್ನ ಎಳೆಸಿ
ಲಂಕಾಪುರವ ಬೆಂಕಿಲಿ ಸುಡಿಸಿದ
ಮಂಗನ ನೋಡಿದೆ ನಾ

ಹೆದರಿಕಿಲ್ಲದ ಮಂಗ–ಇದು
ಗುದಗೇರಿಯ ಮಂಗ

ಮದವೇರಿದ ಮನೆ ಕದವ ನೂಕುತಿದೆ
ಮಂಗನ ನೋಡಿದೆ ನಾ

'ಕುಕ್ಷಿಯ ಕೆಳಗಿನ ಇಕ್ಷುವೆ ತಾನಾದ' ಮಂಗ ಎಂದೂ ಶರೀಫರು ಅದನ್ನು ವರ್ಣಿಸುತ್ತಾರೆ! ಇನ್ನೊಂದು ಕವನದಲ್ಲಿ 'ಶಿವನ ತೊಡೆಯ ಕೆಳಗಿರುವಂಥ ಕಪ್ಪೆ' ಎಂದು ಸಂಕೇತಿಸುತ್ತಾರೆ. ಮತ್ತೊಂದು ಕಡೆ 'ಇಳೆಯೊಳೆಲ್ಲರ ತೊಡೆ ಹಿಡಿಯುತ ಹಲ್ಲೊಳು ತಳಮಳಗೊಳಿಸಿತು ಹುಚ್ಚಿಡಿಸಿ' ಎಂದು ಹುಚ್ಚುನಾಯಿಯ ಪ್ರತಿಮೆಯ ಮೂಲಕ ಸೂಚಿಸುತ್ತಾರೆ.

ಶರೀಫರು ತಮಗಿದ್ದ ಕೊಂಚ ನೆಲವನ್ನೂ ಉಪೇಕ್ಷಿಸಿದವರಲ್ಲದೆ ಎಂದೂ ಆಸ್ತಿ, ಹಣದ ಬೆನ್ನು ಹತ್ತಿ ಹೊರಟವರಲ್ಲ. ಹಾಗೆ ಹೊರಟರೆ ಅದು ಎಲ್ಲಿಗೆ ಎತ್ತುತ್ತದೆ, ಹೇಗೆ ಕೆಡುವುತ್ತದೆ ಎನ್ನುವುದನ್ನು ಹೇಳುವುದು ಹೇಗೆ? ದುಡ್ಡು ಎಷ್ಟು ಕೆಟ್ಟದು ಎಂದರೆ ಅದನ್ನು ಹೆಕ್ಕಿಕೊಳ್ಳುವ ಆಸೆಯಲ್ಲಿ ದೊಡ್ಡ ದೊಡ್ಡವರೂ ಹೆಗ್ಗಾಲು ಹಾಕಿ ನಡೆದು ನಗುಪಾಟಲಾದುದುಂಟು. ಹಣ ಏನು ತಾನೇ ಮಾಡಿಸಲಾರದು?

ಹೆಣ್ಣಿನ ಪೂಜೆಗೆ ಇಳಿಸಿ–ಮಣ್ಣಿನ
ಸಂತೇಲಿ ಇಲ್ಲದ ಮರ್ಯಾದೆ ಕೊಡಿಸಿ
ಮಿಣ್ಣನೆ ತಿಂದೀತು ಒಳಗ–ಮೆಲ್ಲನೆ
ಥಣ್ಣಗ ಮಾಡೀತು ಬೆಂಕಿಯ ಕಿಡಿಯ

ರೊಕ್ಕ ಮುಕ್ಕಿಸೀತು ಮಣ್ಣು–ಅದ
ತಕ್ಕಂತೆ ಬಳಸಲು ತೆರೆಸೀತು ಕಣ್ಣು
ಮುಕ್ಕುವ ಚಪಲ ಏಕಿನ್ನು?–ಮುಕ್ಕಿ
ಬಿಕ್ಕಳಿಸಲು ಕುಡಿಸೀತು ನೀರನ್ನು

ರೊಕ್ಕವನ್ನು 'ಮುಕ್ಕಬಾರದು' ಅಷ್ಟೆ. ಅದನ್ನು ತಕ್ಕಂತೆ ಬಳಸಿದರೆ ನಿಜವಾಗಿ ಕಣ್ಣು ತೆರೆಸಬಲ್ಲ ಶಕ್ತಿಯೂ ಅದಕ್ಕಿದೆ ಎಂಬ ವಿಮರ್ಶೆ ಗಮನಿಸಬೇಕಾದದ್ದು. ಕೇವಲ ವೇದಾಂತಿಕ ನಿಂದೆಯಾಗಿ ಅತಿರೇಕದ್ದಾಗಬಹುದಾಗಿದ್ದ ಈ ಪದ್ಯವನ್ನು ವಿಮರ್ಶೆಯ ಜಾಣತನ ಕಾಪಾಡಿಕೊಂಡಿದೆ.

ಶರೀಫರ ಎಲ್ಲ ಪದ್ಯಗಳೂ ಉತ್ತಮ ಕವಿತೆಗಳೆಂದೇನೂ ಅಲ್ಲ. ಪ್ರಧಾನವಾಗಿ ಅವು ತತ್ವ ಪದ್ಯಗಳು; ಉತ್ತಮ ತತ್ವಪದ್ಯಗಳು; ನೀತಿ ಹೇಳಲೆಂದೇ ರಚಿಸಿದ, ಬಹಳ ಸಂದರ್ಭಗಳಲ್ಲಿ ತರ್ಕಬುದ್ಧಿಗಳ ಸೀಮಿತ ಪ್ರಜ್ಞಾವಲಯದೊಳಗೆ ಸಿದ್ಧವಾದ ಅಲಿಗರಿಗಳು. ಅನೇಕ ಕಡೆ ಬಹಳ ಹಿಂದಿನಿಂದ ಬಳಕೆಯಾಗಿ ಬಂದ ವಿಚಾರಗಳನ್ನೇ ಪೋಷಿಸುವಂಥವು. ಎಷ್ಟೋ ಸಲ ಬಳಕೆಯಾಗಿರುವ ಪದಪುಂಜ, ಹೋಲಿಕೆ, ವಿಚಾರ ಎಲ್ಲವೂ ಬೇರೆಲ್ಲೋ ಹಿಂದೆಯೇ ಹೇಳಿದಂಥವು. ಇಷ್ಟಾಗಿಯೂ ಅವು ಜೀವಕಳೆಯಿಂದ ಜ್ವಲಿಸುವುದಕ್ಕೆ ಕಾರಣ ಅವುಗಳನ್ನು ರಚಿಸಿದಾತನ ಎರಡರಿಯದ ಜೀವನ ಶ್ರದ್ಧೆ, ಸತ್ವ ತುಳುಕುವ ದೇಸಿನುಡಿ,

ಅದರ ಅಪ್ಪಟ ಪ್ರಾದೇಶಿಕ ಬಣ್ಣ. ಆದರೆ ಕೆಲವು ಕಡೆ ಇದ್ದಕ್ಕಿದ್ದಂತೆ ಸ್ಫೂರ್ತವಾಗಿ ಹೊಮ್ಮಿಬಿಡುವ, ಅನಿರೀಕ್ಷಿತವಾದ, ಬಿಕ್ಕಟ್ಟಾದ ನವೀನ ರೂಪಕಗಳೂ ಬರುತ್ತವೆ. ನೀತಿ ಪರವಾದ ಇಂಥ ಕೀರ್ತನೆಗಳ ಕವಿಯಾಗಿ ಶರೀಫರು ಪುರಂದರ ಕನಕರಂಥ ಹಿರಿಯರ ಪಕ್ಕದಲ್ಲಿ ನಿಲ್ಲುತ್ತಾರೆ.

ಶರೀಫರ ಅನೇಕ ಪದ್ಯಗಳಲ್ಲಿ ಏನಾದರೊಂದು ಸಂಗತಿಯು ಕಥನ ಇಲ್ಲವೆ ಯಾವುದಾದರೊಂದು ವಸ್ತು, ಪ್ರಾಣಿಗಳ ವರ್ಣನೆ ಬರುತ್ತದೆ. ಆ ಸಂಗತಿಗಳು ಎಲ್ಲೂ ಘಟಿಸಿರಬಹುದಾದವು; ವಸ್ತು ಪ್ರಾಣಿಗಳ ಸ್ವರೂಪ ಸ್ವಭಾವ ಎಲ್ಲರಿಗೂ ತಿಳಿದಿರುವಂಥದು. ಬಣ್ಣಬಣ್ಣವಾದ ಅವುಗಳ ನಿರೂಪಣೆ ತನ್ನಷ್ಟಕ್ಕೇ ರುಚಿಯಾಗಿರುತ್ತ ಇದ್ದಕ್ಕಿದ್ದಂತೆ ಅದು ಮತ್ತೊಂದು ಅರ್ಥಕ್ಕೂ ದಾಟಿಬಿಡುವ ಚಂದವೇ ಚಂದ. ಇಂಥ ಕಡೆ ಮೇಲುನೋಟಕ್ಕೆ ಕಾಣುವ ವಾಚ್ಯಕಥನದ ಜೊತೆಗೆ ಇನ್ನೊಂದು ಅನುಕ್ತ ಧ್ವನಿಕಥನವೂ ಕೂಡಿಕೊಂಡು ಪದ್ಯ ಪಕಾತ್ತನೆ ಎರಡೂ ರೆಕ್ಕೆ ಬಡಿದು ಅರ್ಥಾಂತರಿಕ್ಷಕ್ಕೆ ಜಿಗಿದುಬಿಡುತ್ತದೆ. ಗಿರಣಿ ವಿಸ್ತಾರ, ಅಳಬೇಡ ತಂಗಿ, ಕೋಡಗನ ಕೋಳಿ ನುಂಗಿತ್ತ, ಬಿದ್ದೀಯಬೇ ಮುದುಕಿ, ಚೇಳು ಕಡಿತು, ಅಗ್ಗದ ಅರವಿ, ಮಕ್ಕಳ್ಹಡಿದ ಸೂಳಿ ಸಂಗ–ಇವೆಲ್ಲ ಅಂಥ ಆಕರ್ಷಕ ಕವಿತೆಗಳು. 'ಗಿರಣಿ ವಿಸ್ತಾರ' ಪದ್ಯದಲ್ಲಿ ಗಿರಣಿ ಶರೀರವೂ ಆಗಿ ಗಿರಣಿನ ಕೆಲಸ ಯೋಗ ಕ್ರಿಯೆಯೂ ಆಗುವುದು, 'ಅಳಬೇಡ ತಂಗಿ' ಪದ್ಯದಲ್ಲಿ ತವರು ಬಿಟ್ಟು ಹೊರಟಿರುವ ತಂಗಿ ಮೂಲದಿಂದ ಪ್ರತ್ಯೇಕಗೊಂಡು ಮಾಯೆಯ ಬಲೆಗೆ ಬಿದ್ದ ಜೀವವಾಗುವುದು, 'ಕೋಡಗನ ಕೋಳಿ'ಯಲ್ಲಿ ಕೋಡಗ (ಕಪಿ) ಚಂಚಲ ಮನಸ್ಸಿನ ಶೋಕವಾಗಿ ಬೆಳಗಿನಲ್ಲಿ ಕೂಗುವ ಕೋಳಿ ಜ್ಞಾನೋದಯದ ಸಂಕೇತವಾಗುವುದು ಇಂಥವನ್ನೆಲ್ಲ ಗಮನಿಸಬೇಕು.

ಧ್ವನಿ ವಿಶೇಷ:

ಶಕ್ತನಾದ ಕವಿ ಶಬ್ದಗಳ ಜೊತೆ ಆಟವಾಡುತ್ತ ಅವನ್ನು ಹಲವಾರು ಅರ್ಥಗಳಿಗೆ ಬಣ್ಣಿಸುತ್ತಾನೆ ಎಂಬ ಮಾತಿದೆ. ಶರೀಫರ ಅನೇಕ ಪದ್ಯಗಳಲ್ಲಿ ಈ ಶಬ್ದಲೀಲೆ, ಅರ್ಥದ ಕಣ್ಣುಮುಚ್ಚಾಲೆ ಕಾಣುತ್ತದೆ. 'ನಾನಾವಿದ್ಯೆಯ ಕಲಿತದ್ದಾಯಿತಲ್ಲ' ಎಂಬ ಪದ್ಯ ಇದಕ್ಕೆ ನಿದರ್ಶನ. ನಾನಾ ಎಂಬ ಎರಡಕ್ಷರಗಳನ್ನು ಕೂಡಿಸಿ ಬಿಡಿಸಿ ಹೇಳಿದಾಗ ಬೇರೆ ಬೇರೆ ಅರ್ಥ ಹೊರಡುತ್ತವೆ. ಈ ಎರಡು ಅರ್ಥಗಳೂ ಕವಿತೆಯ ಕೇಂದ್ರ ಆಶಯಕ್ಕೆ ಬೇಕಾದವೇ. 'ನಾ ದನಿ' 'ನಾ ಭಾವ' ಎಂಬ ಮಾತುಗಳೂ ಹೀಗೆಯೇ. ನಾನು ಎಂಬ ದನಿ, ನಾನು ಎಂಬ ಭಾವ ಇದ್ದಕ್ಕಿದ್ದಂತೆ ನಾದಿನಿ, ಭಾವ ಸಹ ಆಗಿಬಿಡುತ್ತವೆ. ಇದು ಬರೀ ಚಮತ್ಕಾರವಷ್ಟೇ ಆಗದೆ ಶಬ್ದಶಕ್ತಿಮೂಲವಾದ ಧ್ವನಿಯಾಗಿ ಬಿಡುವುದು ಒಂದು ವಿಶೇಷ.

ಶರೀಫರ ಕಾವ್ಯ ಅನುಭಾವಮುಖಿವಾದದ್ದು. ಅನುಭಾವ ಸಂಬಂಧವಾದ ಸಂವೇದನೆಗಳು ರಹಸ್ಯಾತ್ಮಕವಾದವು. ನೇರವರ್ಣನೆಗೆ ಸಿಗದ ಇವು ಪ್ರತೀಕಾತ್ಮಕವಾದ

ಅಭಿವ್ಯಕ್ತಿಯನ್ನು ಬೇಡುವುದು ಅನಿವಾರ್ಯವೂ ಹೌದು. ಇಂಥ ಪ್ರತೀಕ ಅರ್ಥದ ಅಂಚಿನೊಳಗೆ ಪೂರ ಮೈಬಿಚ್ಚದೆ ಓದುಗನ ಅರಿವಿನ ಪರಿಧಿಯೊಳಗೆ ತನ್ನ ರಹಸ್ಯವನ್ನು ಪೂರ ದ್ರವಿಸದೆ ಅವನ ಅರಿವನ್ನು ಕೆಣಕುವ, ಕಾಡುವ, ಅದಕ್ಕೆ ಕಚಗುಳಿಯಿಡುವ ಧ್ವನಿ ದಟ್ಟ ಶಬ್ದ ಚಿತ್ರವಾಗುತ್ತದೆ. 'ಚೇಳು ಕಡಿತು' ಇಂಥ ರಹಸ್ಯಾತ್ಮಕ ಸಂವೇದನೆಯ ಪದ್ಯ. ತಮ್ಮನ್ನು ಕಡಿದ ಚೇಳು 'ದೇವರಾಮನಿ ಮೂಲೆಯೊಳಗೆ ಇದ್ದದ್ದು' 'ಕಾಳಕತ್ತಲಿಯೊಳಗೆ ಕೂತದ್ದು, 'ಆಧಾರ ಹಿಡಿದು ಊರ್ಧ್ವಮುಖಕ್ಕೆ ಕೊಂಡಿ ಮಾಡಿದ್ದು'. ಅದು ಕಚ್ಚಿದೊಡನೆ ಎಚ್ಚರಾಗಿ ಹೋಯಿತು, ಹುಚ್ಚೇ ಹಿಡಿಯಿತು ಎನ್ನುತ್ತಾರೆ ಶರೀಫರು. ತನಗೇ ಗೊತ್ತಿಲ್ಲದೆ ತನ್ನ ಆಳ ಮನಸ್ಸಿನ ಕತ್ತಲಲ್ಲಿ ಅಡಗಿದ್ದ ಆಧ್ಯಾತ್ಮಿಕ ದ್ರವ್ಯ ಹಠಾತ್ತನೆ ಹೊರಪರಿದು ತನ್ನ ಲೌಕಿಕ ಬದುಕನ್ನು ಯಾತನಾಮಯವಾಗಿ ಮಾಡಿದ್ದನ್ನು ಇದು ಬಹಳ ಮಾರ್ಮಿಕವಾಗಿ ಹೇಳುತ್ತದೆ. ಅಡಿಗರ 'ಹಿಮಗಿರಿಯ ಕಂದರ'ದಲ್ಲಿ ಬರುವ 'ರತಿತಮೂಲಚ್ಛಾಯೆಯಲ್ಲಿಚ್ಚುವ ಬೋಧಿವೃಕ್ಷದಗ್ನಿಯ ಛತ್ರಿ' ಎಂಬ ಪ್ರತೀಕ ಮತ್ತು ಎಲಿಯಟ್ಟನ ಫೋರ್ ಕ್ವಾರ್ಟೆಟ್ಸ್‌ನಲ್ಲಿ ಬರುವ ಶಸ್ತ್ರಹಿಡಿದ ವೈದ್ಯನ ರಕ್ತಸಿಕ್ತಹಸ್ತದ ಪ್ರತೀಕ ಇಲ್ಲಿ ಕೂಡಲೆ ನೆನಪಾಗುತ್ತವೆ. ಜೀವವನ್ನು ಮೇಲೆತ್ತುವ ಆಧ್ಯಾತ್ಮಿಕ ಜಾಗೃತಿ 'ಅಗ್ನಿ ಛತ್ರಿ'ಯಾಗಿ ಸುಡುತ್ತಲೇ ಕಾಪಾಡುತ್ತದ; ಶಸ್ತ್ರವೈದ್ಯನ ರಕ್ತಸಿಕ್ತಹಸ್ತವಾಗಿ ರೋಗಿಯನ್ನು ನೋಯಿಸುತ್ತಲೇ ರಕ್ಷಿಸುತ್ತದೆ; ದೇವರಾಮನಿ ಮೂಲೆಯೊಳಗಿನ ಚೇಳಾಗಿ ಕಚ್ಚಿ ಜೀವದ ಲೋಕಪಿಪಾಸೆ ಬೊಬ್ಬೆ ಹೊಡೆಯುವಂತೆ ಮಾಡುತ್ತದೆ. ಶರೀಫರ ಪದ್ಯಗಳು ಕೆಲವು ಸಲ ಇಷ್ಟೆಲ್ಲ ಗೂಢವಾಗಿದ್ದು ಮಿಡಿದಂತೆಲ್ಲ ರಸಚಿಮ್ಮುವ ಪರಿಪುಷ್ಟ ಫಲಗಳಾಗಿವೆ.

ಮೀರಲಾಗದ ಮಾತು:

ಗೋವಿಂದಭಟ್ಟರು ತೀರಕೊಂಡ ಮೇಲೆ ಶರೀಫರು ಇಪ್ಪತ್ತು ವರ್ಷ ಕಾಲ ಇದ್ದರು; ನೂರಾರು ತತ್ವಪದ ರಿವಾಯತು ರಚಿಸಿದರು. ತಮ್ಮ ಅವಸಾನದ ಗಳಿಗೆ ಸಮೀಪಿಸಿದ್ದು ತಿಳಿದಾಗ ಶರಣ ಸಂಪ್ರದಾಯದಂತೆ ವಿಭೂತಿ ವೀಳ್ಯ ಆಚರಿಸಿ ದೇಹತ್ಯಾಗ ಕೂಡಲು ಬಯಸಿದರು. ಈ ವಿಧಿಯ ಪ್ರಕಾರ ಅವರು ಜಂಗಮನೊಬ್ಬನನ್ನು ಪೂಜಿಸಿ ಅವನ ಪಾದಗಳ ಮೇಲೆ ತಲೆಯಿಟ್ಟು ಪ್ರಾಣಬಿಡಬೇಕು. ಶರೀಫರಂಥ ದೊಡ್ಡವರಿಂದ ಪೂಜೆ ಮಾಡಿಸಿಕೊಳ್ಳಲು ಅವರ ತಲೆಯನ್ನು ಕಾಲಮೇಲೆ ಇರಿಸಿಕೊಳ್ಳಲು ಯಾವ ಜಂಗಮರೂ ಒಪ್ಪಲಿಲ್ಲ. ಕಡೆಗೆ ಶರೀಫರ ಮಾತು ಮೀರಲಾರದೆ ಹಿರೇಮಠ ಕರಿಬಸಯ್ಯನವರು ಹಿಂಜರಿಯುತ್ತಲೇ ಒಪ್ಪಿ ಆ ಇಚ್ಛೆ ಪೂರೈಸಿದರು.

ಈಗ ಜನರಿಗೆ ಒಂದು ಸಮಸ್ಯೆ ಎದುರಾಯಿತು. ಶರೀಫರು ಹುಟ್ಟಿದ್ದು ಮುಸಲ್ಮಾನ ಕುಟುಂಬದಲ್ಲಿ; ಬಾಳಿದ್ದು ಹಿಂದು-ಮುಸ್ಲಿಮರಾಗಿ; ದೇಹಬಿಟ್ಟದ್ದು ಹಿಂದೂ ವಿಧಿಯೊಂದರ ರೀತಿಯಲ್ಲಿ. ಅವರ ಅಂತ್ಯಕ್ರಿಯೆಯನ್ನು ಹಿಂದೂ ವಿಧಿಯ ಪ್ರಕಾರ ಆಚರಿಸಬೇಕೋ ಅಥವಾ ಮುಸ್ಲಿಮ ವಿಧಿಯ ಪ್ರಕಾರ ನಡೆಸಬೇಕೋ? ದೊಡ್ಡ ಗೊಂದಲ

ಜಿಜ್ಞಾಸೆ ಶುರುವಾಯಿತು. ಕಡೆಯಲ್ಲಿ ಎರಡೂ ಮತಗಳ ಮುಖಂಡರು ಸೇರಿ, ಎರಡೂ ವಿಧಾನಗಳನ್ನು ಶಕ್ಯವಿದ್ದಷ್ಟೂ ಆಚರಿಸುವುದೆಂದು ತೀರ್ಮಾನಿಸಿದರು. ಕುರಾನಿನ ಪಠಣದ ಜೊತೆಗೆ ಮಂತ್ರ ಪಠಣವೂ ನಡೆಯಿತು. ಹರಿ ಹರ ಹಜರತ್ ತತ್ತ್ವಗಳ ಸಂಗಮವೆಂಬಂತೆ ಬಾಳಿದ ಹಿರಿಯ ಚೇತನವೊಂದು ತನ್ನ ಸಾವಿನಲ್ಲಿಯೂ ಹೀಗೆ ಧರ್ಮ ಸಮನ್ವಯವನ್ನು ಸಾಧಿಸಿತು.

ಶಿಶುನಾಳದ ವಿಶಾಲವಾದ ಬಯಲು ಪ್ರದೇಶದಲ್ಲಿ ಶರೀಫರ ಗದ್ದುಗೆಯಿದೆ. ಅದರ ಬೆನ್ನಿಗೇ ಶರೀಫರು ತಂದಿಟ್ಟ ಗೋವಿಂದಭಟ್ಟರ ಭಸ್ಮಾವಶೇಷವಿರುವ ಕಟ್ಟಡವಿದೆ. ಅದರ ಹಿಂದೆ ಈಗ ಹೊಸದಾಗಿ ನಿರ್ಮಾಣವಾಗಿರುವ, ಶರೀಫ ಮತ್ತು ಗೋವಿಂದಭಟ್ಟರ ವಿಗ್ರಹ ಗಳಿರುವ ಗುಡಿ ಇದೆ. ಶರೀಫಗಿರಿಯೆಂದು ಕರೆಸಿಕೊಂಡಿರುವ ಈ ಪ್ರದೇಶದಲ್ಲಿ ಶರೀಫರ ಹೆಸರಿನ ಒಂದು ಹೈಸ್ಕೂಲು, ವಿದ್ಯಾರ್ಥಿನಿಲಯ ಉಚಿತ ಪ್ರಸಾದನಿಲಯ ಇದೆ. ಇಲ್ಲಿಯ ವ್ಯವಸ್ಥೆಯನ್ನೆಲ್ಲ ಶರೀಫ ವಿಶ್ವಸ್ಥ ಸಮಿತಿ ನೋಡಿಕೊಳ್ಳುತ್ತದೆ.

ಶರೀಫರ ಗದ್ದುಗೆಗೆ ಗೌರವ ಸಲ್ಲಿಸುವ ಜನರಲ್ಲಿ ಬೇರೆ ಬೇರೆ ಜಾತಿ ಧರ್ಮದವರು ಇದ್ದಾರೆ. ಗದ್ದುಗೆಯ ಎಡಭಾಗದಲ್ಲಿ ಮುಸಲ್ಮಾನರು ನಮಾಜು ಸಲ್ಲಿಸಿ ಸಕ್ಕರೆ ಓದಿಸು ತ್ತಾರೆ; ಬಲಭಾಗದಲ್ಲಿ ಹಿಂದುಗಳು ಹಣ್ಣು ಕಾಯಿ ಹೂವು ಅರ್ಪಿಸುತ್ತಾರೆ. ಪ್ರತಿವರ್ಷ ನಡೆಯುವ 'ಉರುಸ್' ಉತ್ಸವಕ್ಕೆ ಲಕ್ಷಾಂತರ ಜನ ಬಂದು ಹೋಗುತ್ತಾರೆ.

ಈ ದೇಶದ ಯಾವುದೇ ಮತದವನು ಹೇಗೆ ಬಾಳಬೇಕು ಎನ್ನುವುದನ್ನು ಶರೀಫರು ಬಾಳಿ ತೋರಿಸಿದ್ದಾರೆ. ಭಾವೈಕ್ಯ ಎಂಬ ಮಾತು ಭಾರತದ ರಾಜಕಾರಣದಲ್ಲಿ ಅವತರಿ ಸುವ ಮುಂಚೆಯೇ ಅದನ್ನು ಅರ್ಥವತ್ತಾಗಿ ನಿದರ್ಶಿಸಿಹೋದ ಸಂತ ಅವರು. ಭಾವೈಕ್ಯ ಸಾಧನೆಯ ಪ್ರಯತ್ನ ಬಹಳ ಆಟಾಟೋಪದಿಂದ ಜರುಗುತ್ತಿರುವ ಈ ಹೊತ್ತಿನಲ್ಲಿ ಶರೀಫರ ಗದ್ದುಗೆ 'ಮಾತಾಡಿದರೆ ಚೆನ್ನಲ್ಲ' ಎಂಬಂತೆ ಮೂಕಸಾಕ್ಷಿಯಾಗಿ ಎಲ್ಲ ನೋಡು ತ್ತಿದೆ. ಆದರೆ ಯಾರು ಹೇಳಬಲ್ಲರು? ಸಂತರು ಬದುಕುವುದೇ ಸತ್ತಮೇಲೆ. ಸತ್ತಮೇಲೂ ಗಾಂಧೀಜಿ (ಚಲನ) ಚಿತ್ರವಾಗಿ ಕ್ರಾಂತಿಗಳಿಗೆ ದಾರಿ ತೆರೆಯುತ್ತಿರುವಂತೆ ಶರೀಫರು ತಮ್ಮ ಗೀತೆ, ಚಿತ್ರಗಳ ಮೂಲಕ ಕರ್ನಾಟಕದಲ್ಲಿ ಒಂದು ಹೊಸ ಜಾಗೃತಿ ತಂದಾರೆ?

□ □

ಮಹಾಪುರಾಣದ ಮಹತ್ವ

—ಡಾ. ಹಂಪನಾ

ರಾಮಾಯಣ, ಮಹಾಭಾರತ, ಬೃಹತ್ಕಥಾ, ಮಹಾಪುರಾಣ–ಈ ನಾಲ್ಕು ಮಹಾಕೃತಿಗಳು ಭಾರತೀಯ ವಾಙ್ಮಯಕ್ಕೆ ಮೂಲ ಆಕರ. ವಾಲ್ಮೀಕಿ ರಾಮಾಯಣ, ವ್ಯಾಸ ಭಾರತ, ಗುಣಾಢ್ಯನ ಬೃಹತ್ಕಥೆ ಇವುಗಳಿಗೆ ಸಮತುಲ್ಯವಾದ ಸ್ಥಾನಮಾನ, ಹಿನ್ನೆಲೆ, ಪರಂಪರೆ ಇರುವ ಉದ್ಘಕೃತಿ ಮಹಾಪುರಾಣ ಸಮಸ್ತ ಜೈನ ಗ್ರಂಥ ರಾಶಿಯಲ್ಲಿ ಮಹಾಪುರಾಣ ಮುಡಿಯ ಮಾಣಿಕ್ಯ. ಕರ್ನಾಟಕ ಮತ್ತು ಕನ್ನಡ ಸಾಹಿತ್ಯದೊಂದಿಗೆ ಅದಕ್ಕೊಂದು ಅವಿಭಾಜ್ಯ ಸಂಬಂಧವಿದೆ. ಹತ್ತನೆಯ ಶತಮಾನದ ಅನಂತರ ರಚಿಸಿದ ಭಾರತೀಯ ಭಾಷೆಗಳಲ್ಲಿರುವ ಜೈನ ಪುರಾಣಗಳಿಗೆ ಮಹಾಪುರಾಣ ಮೂಲ ಮಾತೃಕೆ. ಕನ್ನಡ ಜೈನ ಕವಿಗಳಿಗೆ ಅದು ತಾಯಿಬೇರು, ತಲಕಾವೇರಿ. ಪಂಪ ಪೊನ್ನ ರನ್ನ ಜನ್ನ ನಾಗಚಂದ್ರ ನೇಮಿಚಂದ್ರರಾದಿಯಾಗಿ ಅನೇಕ ಕನ್ನಡ ಕವಿಗಳು ಇದರಲ್ಲಿ ಈಸಾಡಿ ಕ್ರೀಡಿಸಿದ್ದಾರೆ. ಜೈನ ಪುರಾಣಗಳ ಪ್ರೇರಣೆ ಪರಿಕಲ್ಪನೆಗಳಿಗೆ ಮಹಾಪುರಾಣವೇ ಮೇಲ್ಪಂಕ್ತಿ, ಸ್ಫೂರ್ತಿ; ಅಲ್ಲಿಯ ಪ್ರಮೇಯ ಪ್ರಕ್ರಿಯೆಗಳು ಇಲ್ಲಿ ಅನುರಣಿತವಾಗಿವೆ. ಅಲ್ಲಿಯ ಶೈಲಿ, ಅಲಂಕಾರ ಪರಿಭಾಷೆ, ಒಟ್ಟು ಚೌಕಟ್ಟು ಕನ್ನಡ ಕವಿಗಳಿಗೆ ಮೇಲ್ಪಂಕ್ತಿಯಾಯಿತು. ಮಹಾಪುರಾಣದ ಋಣಭಾರದಿಂದ ಕನ್ನಡ ಜೈನ ಪುರಾಣಗಳು ಜಗ್ಗಿಹೋಗಿವೆ. ಇಷ್ಟಾಗಿಯೂ ಮಹಾಪುರಾಣವನ್ನು ಪೂರ್ತಿಯಾಗಿ ಸೂರೆಮಾಡಿಲ್ಲ. ಮಹಾಪುರಾಣದ ಮಹಿಮೆ ದೊಡ್ಡದು; ಅದು ಕಾವ್ಯಕ್ಕೆ ಕಾವ್ಯ, ಪುರಾಣಕ್ಕೆ ಪುರಾಣ, ಮೊಗೆಮೊಗೆದಷ್ಟೂ ಮುಗಿಯದ ಅಕ್ಷಯಕಾವ್ಯ ಅದರ ಉದ್ದಕ್ಕೂ ಧರ್ಮ ಪ್ರಧಾನ, ಕಾವ್ಯ ಆನುಷಂಗಿಕ. ಅಲ್ಲಲ್ಲಿ ಕಥೆ–ಕಾವ್ಯ ಪ್ರಮುಖವಾಗಿ, ಧರ್ಮ ಗೌಣ ನೆಲೆ ಸರಿದ ರಸಾದ್ರ್ರ ಭಾಗಗಳೂ ಇವೆ.

ಒಂಬತ್ತನೆಯ ಶತಮಾನದ ಮೇರು ಕೃತಿಯಾದ ಮಹಾಪುರಾಣ ಸಂಸ್ಕೃತದಲ್ಲಿದೆ. ಮಹಾಪುರಾಣವೆಂಬುದು ಅದರ ಗಾತ್ರದಿಂದಾಗಿ ರೂಢಿಗೆ ಬಂದ ಜನಪ್ರಿಯ ಹೆಸರು. ತ್ರಿಷಷ್ಟಿ ಶಲಾಕಾಪುರುಷ ಚರಿತೆ ಎಂಬುದು ಅದರ ನಿಜ ನಾಮಧೇಯ. ಜಿನಸೇನ ಗುಣಭದ್ರರೇ ಅಲ್ಲದೆ ಪುಷ್ಪದಂತ ಚಾವುಂಡರಾಯ ಮೊದಲಾದವರೂ ಆ ಹೆಸರನ್ನು ಬಳಸಿರುತ್ತಾರೆ. ಜೈನರಿಗೆ ಆದರಣೀಯವಾಗಿರುವ ಮಹಾಪುರಾಣದಲ್ಲಿ ಎರಡು ಭಾಗಗಳಿವೆ, ಒಟ್ಟು ಇಪ್ಪತ್ತು ಸಾವಿರ ಶ್ಲೋಕಗಳಿವೆ. ಮೊದಲನೆಯ ಭಾಗಕ್ಕೆ ಪೂರ್ವ ಪುರಾಣವೆಂದೂ, ಎರಡನೆಯ ಭಾಗಕ್ಕೆ ಉತ್ತರ ಪುರಾಣವೆಂದೂ ಅದ್ದು ಹೆಸರು.

ಪೂರ್ವಪುರಾಣದಲ್ಲಿ ೧೨ ಸಾವಿರ, ಉತ್ತರ ಪುರಾಣದಲ್ಲಿ ೮ ಸಾವಿರ ಶ್ಲೋಕಗಳಿವೆ. ಬೃಹತ್ ಕೃತಿಯಾದ ಇಡೀ ಮಹಾ ಪುರಾಣವನ್ನು ಜಿನಸೇನಾಚಾರ್ಯನು ಬರೆಯಲು ತೊಡಗಿ ೧೦, ೩೮೧ ಶ್ಲೋಕಗಳನ್ನು ರಚಿಸಿ ವಿಧಿವಶನಾದನು. ಅನಂತರ ಜಿನಸೇನಾಚಾರ್ಯನ ಪ್ರಿಯಾಗ್ರ ಶಿಷ್ಯ ಗುಣಭದ್ರಾಚಾರ್ಯನು ಪೂರ್ವಪುರಾಣದಲ್ಲಿ ಉಳಿದ ಶೇಷಭಾಗದ ೧೬೨೦ ಶ್ಲೋಕಗಳನ್ನೂ, ಉತ್ತರಪುರಾಣದ ಎಂಟುಸಾವಿರ ಶ್ಲೋಕಗಳನ್ನೂ ಅಂದರೆ ತಾನು ಒಟ್ಟು ೯೬೨೦ ಶ್ಲೋಕಗಳನ್ನು ಬರೆದು ಪೂರೈಸಿದನು. ಪೂರ್ವ ಪುರಾಣವನ್ನು ಆದಿಪುರಾಣವೆಂದೂ ಕರೆಯುತ್ತಾರೆ. ಪೂರ್ವಪುರಾಣ (ಆದಿಪುರಾಣ) ಜಿನಸೇನನ ಅಗಾಧ ಶಾಸ್ತ್ರಜ್ಞಾನ ಲೋಕಜ್ಞಾನದೊಂದಿಗೆ ಕಾವ್ಯ ಶಕ್ತಿಯನ್ನೂ ಪ್ರತಿಬಿಂಬಿಸುತ್ತದೆ. ಮಹಾಪುರಾಣ ಭಾರತೀಯ ಜೀವನದ ಒಂದು ವಿಶ್ವಕೋಶ. ಆ ಕಾಲದ ರಾಜಕೀಯ ಆರ್ಥಿಕ ಸಾಮಾಜಿಕ ಸಾಂಸ್ಕೃತಿಕ ವಿಷಯಗಳಿಗೆ ಮಹಾಪುರಾಣ ದಿಕ್ಸೂಚಿಯಾಗಿದೆ.

ನಿರಂತರವೂ ದೀರ್ಘವೂ ವ್ಯಾಪಕವೂ ಆದ ಚಾರಿತ್ರಿಕ–ಸಾಂಸ್ಕೃತಿಕ ಮಹತ್ವವಿರುವ ಮಹಾಪುರಾಣ ಕೂಡ ಶೂನ್ಯದಿಂದ ಒಮ್ಮೆಲೇ ರೂಪುಗೊಳ್ಳಲಿಲ್ಲ. ಅದು ತನಗಿಂತ ಹಿಂದೆ ರಚಿತವಾಗಿದ್ದ ಸಮಾನ ವಸ್ತುವನ್ನೊಳಗೊಂಡ ಗ್ರಂಥಗಳ ಮುಂದುವರಿಕೆಯಾಗಿದೆ. ಶ್ರಮಣ ಸಂಸ್ಕೃತಿಯ ಕೆನೆಯಂತಿರುವ ಮಹಾಪುರಾಣ ಪರಂಪರೆಯ ಸಿದ್ಧತೆಯನ್ನು ಚಾವುಂಡರಾಯ ದಾಖಲಿಸಿದ್ದಾನೆ:

ವಿರಚಿಸಿದರ್ ಮುನ್ನೆ ಮಹಾ
ಪುರಾಣಮಂ ನೆಗಳ್ದ ಕೂಚಿಭಟ್ಟಾರಕರುಂ
ಪರಮಶ್ರೀ ನಂದಿ ಮುನೀ
ಶ್ವರರುಂ ತದನಂತರಂ ಜಿನಾಗಮತಿಲಕರ್।

ಇಲ್ಲಿ ಚಾವುಂಡರಾಯ ಕೊಟ್ಟಿರುವ ಮಾಹಿತಿ ಉಪಾದೇಯ, ಪರಿಭಾವನಾರ್ಹ. ಮಹಾಪುರಾಣಕ್ಕೊಂದು ಕ್ರಮಪ್ರಾಪ್ತ ಪರಂಪರೆಯಿದೆ. ಕೂಚಿಭಟ್ಟಾರಕರು, ನಂದಿ-ಮುನೀಶ್ವರರು, ಕವಿಪರಮೇಶ್ವರರು, ಜಿನಸೇನ–ಗುಣಭದ್ರರು, ಪ್ರಾಕೃತ ಪುಷ್ಪದಂತ ಕವಿ, ಚಾವುಂಡರಾಯ-ಹೀಗೆ ಕ್ರಮವಾಗಿ ಅದನ್ನು ಬರೆಯುತ್ತಾ ಬಂದಿದ್ದಾರೆ. ಇವರಲ್ಲಿ ಕೂಚಿಭಟ್ಟಾರಕ, ನಂದಿಮುನೀಶ್ವರ ಮತ್ತು ಕವಿಪರಮೇಷ್ಠಿ ಎಂಬ ಮೊದಲ ಮೂವರು ಬರೆದ ಮಹಾಪುರಾಣ ಗ್ರಂಥ ಇಂದಿನವರೆಗೂ ದೊರೆತಿಲ್ಲ. ಉಪಲಬ್ಧವಾಗಿರುವ ಪ್ರಥಮ ಮಹಾ ಪುರಾಣವೆಂದರೆ ಮಹರ್ಷಿಗಳಾದ ಜಿನಸೇನ–ಗುಣಭದ್ರರದೇ. ತ್ರಿಷಷ್ಟಿ ಶಲಾಕಾಪುರುಷ ಸಂಬಂಧವಾದ ಕಥೆ ಕಲ್ಪನೆಗಳನ್ನು ಒಂದು ಬೃಹತ್ ಕಾವ್ಯದ ಬಂಧಕ್ಕೆ ಅಳವಡಿಸಿದ ಹಿರಿಮೆ ಮಹಾಪುರಾಣಕಾರರದು. ಶ್ರಮಣ ಪರಂಪರೆಯ ಹರಿಕಾರನಾಗಿ ಮಹಾಪುರಾಣ ಮಾಡಿರುವ ಧಾರ್ಮಿಕ-ಸಾಹಿತ್ಯಕ ಪರಿಣಾಮ ಅವಿಸ್ಮರಣೀಯವಾದುದು.

ಮಹಾಪುರಾಣ ಸಂಬಂಧವಾದ ಇದೀ ಕಲ್ಪನೆ–ಕೊಡುಗೆ ಕರ್ನಾಟಕದ್ದು. ಅದರ ಬೇರುಗಳೆಲ್ಲೊ ಪ್ರಾಚೀನ ಪ್ರಾಕೃತ ಆಗಮಸಾಹಿತ್ಯ ಕೃತಿಗಳಲ್ಲಿವೆ. ಅದರ ಕಾಂಡ ಕೊಂಬೆಗಳು ಕರ್ನಾಟಕದಲ್ಲಿ ಕೊಸರಿವೆ. ಮಹಾಪುರಾಣದ ರಚನೆ ಅಂಕುರಿಸಿದ್ದು ಮಳಖೇಡ (ಮಾನ್ಯಖೇಟ)ದಲ್ಲಿ, ಅದು ಪಲ್ಲವಿಸಿದ್ದು ಬಂಕಾಪುರದಲ್ಲಿ ಜಿನಸೇನ–ಗುಣಭದ್ರರು ರಾಷ್ಟ್ರಕೂಟ ಚಕ್ರವರ್ತಿಯಾದ ಅಮೋಘವರ್ಷ ನೃಪತುಂಗನ ರಾಜಗುರುಗಳು; ಅಚ್ಚಕನ್ನಡಿಗ ದೊರೆ, ಅವನ ಭಾಷೆ ಸಾಹಿತ್ಯ ಪ್ರೇಮವನ್ನು ಉದ್ದೀಪಿಸಿ ಮಾರ್ಗದರ್ಶನ ಮಾಡಿದವರು. ಜಿನಸೇನ–ಗುಣಭದ್ರರೂ, ಕನ್ನಡದಲ್ಲಿ ಕೃತಿ ರಚಿಸಿಲ್ಲವೇ ಹೊರತು, ಅಚ್ಚಕನ್ನಡಿಗರು. ಗುಣಭದ್ರರಂತೂ ಕನ್ನಡ ಕವಿಗಳಿಗೆ ಬೆನ್ನುತಟ್ಟಿ, ಕನ್ನಡ ಕಾವ್ಯವನ್ನು ತಿದ್ದಿ ಪ್ರಕಟನ ಯೋಗ್ಯವಾಗಿ ಮಾಡಿದವರು. ಇವರ ಸಂಬಂಧವಾಗಿ ಇದುವರೆಗೆ ಯಾರೂ ಹೇಳಿರದ ಒಂದು ಹೊಸ ವಿಷಯವನ್ನು ಇಲ್ಲಿ ಮೊದಲ ಬಾರಿ ಪ್ರಕಟಿಸಬಯಸುತ್ತೇನೆ. ಕೇಶಿರಾಜನ ಶಬ್ದಮಣಿದರ್ಪಣದ ಹೆಚ್ಚಿನ ಪಾಠಾಂತರಗಳಲ್ಲಿ ಸಿಗುವ ಈ ಪದ್ಯವನ್ನು ಈಗಾಗಲೇ ವಿದ್ವಾಂಸರ ಗಮನಕ್ಕೆ ತರಲಾಗಿದೆ:

ಬರ್ದುದು ಬಳ್ಳವಾಡಿ ನೆರೆನಂಬಿರ್ದುದಾರ್ಹತಮಂ ಜಿನೇಂದ್ರನಂ
ತಿರ್ದ ಮಹಾಪುರಾಣ ಕವಿಗಳ್ ಗುರುಗಳ್ ಗುಣಭದ್ರದೇವರುಂ
ತಿರ್ದಿದರೆನ್ನ ಪೇೞ್ದ ಕೃತಿಯಂ ಕೃತಿ ಬಂಧವನಾವ ದೋಷಮುಂ
ಪೊರ್ದದು ಪೊರ್ದದಂತಣಮೆ ಪಾಪದ ಸಂತತಿ ವಾರಣಾಸಿಯಂ।

ಸಾಹಿತ್ಯಕ ಪರಿಸರದಲ್ಲಿ ಬದುಕಿ, ಆರ್ಹತ ಧರ್ಮವನ್ನು ಪೂರ್ತಿ ನಂಬಿದ ಹಾಗೂ ಸಾಕ್ಷಾತ್ ಜಿನನಂತೆಯೇ ಇದ್ದ, ಮಹಾಪುರಾಣದ ಕವಿಗಳೂ ಆದ ಗುಣಭದ್ರದೇವರು ತನ್ನ ಈ ಕನ್ನಡ ಕಾವ್ಯವನ್ನು ತಿದ್ದಿಕೊಟ್ಟಮೇಲೆ ಈ ಕೃತಿ ಬಂದದಲ್ಲಿ ಮತ್ತಾವ ದೋಷವೂ ಸೇರುವುದಿಲ್ಲ; ಪಾಪಸಮೂಹ ಎಂದಾದರೂ ವಾರಣಾಸಿಯನ್ನು ಮುಟ್ಟುವುದು ಸಾಧ್ಯವೆ!–ಎಂಬ ಗುಣಭದ್ರಸ್ತುತಿಯು, ಕೃತಜ್ಞತೆ ಸ್ಮರಣೆಯು ಈ ಅಪೂರ್ವ ವೃತ್ತಪದ್ಯ ಒಂದನೆಯ ಗುಣವರ್ಮನ ಶೂದ್ರಕ ಅಥವಾ ಹರಿವಂಶಕ್ಕೆ ಸೇರಿದ್ದೆಂದು ನನಗೆ ತೋರುತ್ತದೆ. ಆದಿ ಗುಣವರ್ಮನು ಗಂಗರ ದೊರೆಯಾದ ಎರೆಯಪ್ಪನನ್ನು ಕಥಾನಾಯಕನನ್ನಾಗಿಸಿ ಶೂದ್ರಕ ಬರೆದವನು. ಎರೆಯಪ್ಪನಾದರೂ ರಾಷ್ಟ್ರಕೂಟ ನೃಪತುಂಗನ ಮಗಳಾದ ಚಂದ್ರೊಬ್ಬಲಬ್ಬೆಯ(–ಗಂಗರಬೂತುಗನ) ಮಗ. ನೃಪತುಂಗ (ಜಿನಸೇನ) ಗುಣಭದ್ರರ ಶಿಷ್ಯ. ಗುಣವರ್ಮ ಮತ್ತು ಗುಣಭದ್ರರು ಸಮಕಾಲೀನರು. ಇನ್ನೂ ಆಗ ತಾನೆ ಹಸಿಹಸಿಯಾಗಿ ಮಹಾಪುರಾಣ ಬರೆದು ಮುಗಿಸಿದ ಕಾಲ. ಚಕ್ರವರ್ತಿಯ ಮಗಳೂ, ಚಕ್ರವರ್ತಿಯ ಪತ್ನಿಯೂ ಆದ ಚಂದ್ರೊಬ್ಬಲಬ್ಬೆಯೇ ತನ್ನ ತಂದೆಯ ರಾಜ ಗುರುಗಳೂ ಮಹರ್ಷಿಗಳೂ ಮಹಾಪುರಾಣಕಾರರೂ ಆದ ಗುಣಭದ್ರರನ್ನು ಪ್ರಾರ್ಥಿಸಿ ತನ್ನ ಪತಿಯಾದ ಎರೆಯಪ್ಪನ ಆಸ್ಥಾನ ಕವಿ ಗುಣವರ್ಮನ ಕಾವ್ಯವನ್ನು ತಿದ್ದಿಸಿರಬೇಕು. ಗುಲ್ಬರ್ಗ ಜಿಲ್ಲೆಯ ಸೇಡಂ ತಾಲೂಕಿನಲ್ಲಿರುವ ಮಳಖೇಡವೂ, ಧಾರವಾಡ

ಜಿಲ್ಲೆಯ ಶಿಗ್ಗಾಂವಿ ತಾಲೂಕಿನಲ್ಲಿರುವ ಬಂಕಾಪೂರವೂ ಇಂದು ಜೈನ ಕುರುಹುಗಳನ್ನು ಬಹುವಾಗಿ ಕಳೆದುಕೊಂಡಿವೆ. ಆದರೆ ಈ ಎರಡೂ ಕಡೆಯಲ್ಲಿ ಹುಟ್ಟಿದ ಮಹಾಪುರಾಣ ಗ್ರಂಥ ಚೈತ್ಯಾಲಯ ಅಳಿಯದೆ ಉಳಿದು ಬಂದಿದೆ. ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂಬ ಲಕ್ಷಣಕ್ಕೆ ಇದೊಂದು ಲಕ್ಷ್ಯವಾಗಿದೆ. ಮಹಾಪುರಾಣದ ಪ್ರಭಾವ ಕಾವ್ಯಗಳಲ್ಲಿ ಶಾಸನಗಳಲ್ಲಿ ಶಿಲ್ಪಚಿತ್ರಕಲೆಯಲ್ಲಿ ಆಚಾರ್ಯ ಪರಂಪರೆಯಲ್ಲಿ ಕೆನೆಕಟ್ಟಿದೆ. ಚಾವುಂಡರಾಯ ಪುರಾಣ, ವಡ್ಡಾರಾಧನೆ ಮತ್ತು ಕೆಲವು ಟೀಕು ವೃತ್ತಿ ವ್ಯಾಖ್ಯಾನಗಳಲ್ಲಿ ಮಹಾಪುರಾಣದ ಶ್ಲೋಕಗಳು ಉದಾಹೃತವಾಗಿವೆ. ಮಹಾಪುರಾಣ ಪವಿತ್ರಗ್ರಂಥವೆಂದೂ ಮಾನ್ಯವಾಗಿದೆ. ಮನೆಗಳಲ್ಲಿ ಕಷ್ಟಸುಖಾದಿಗಳಿಗೆ ನಿಮಿತ್ತ ನೋಡಲು ಮಹಾಪುರಾಣವನ್ನು ಬಳಸುತ್ತಿದ್ದ ವಿಧಾನವನ್ನು ಕುರಿತು ಜಿನಸೇನಾಚಾರ್ಯನ ವಿವರಣೆಯಲ್ಲಿ ಕಾಣಬಹುದು: "ಈ ಪುರಾಣವನ್ನು ಋಷಿಗಳು ಹೇಳಿರುವುದರಿಂದ ಇದು ಪ್ರಮಾಣವೂ, ಸಂಪೂರ್ಣವಾಗಿ ಸತ್ಯವೂ ಆಗಿರುತ್ತದೆ. ಆದುದರಿಂದ ಆತ್ಮಕಲ್ಯಾಣವನ್ನು ಇಚ್ಛಿಸುವವರು ಇದನ್ನು ನಂಬಬೇಕು, ಅಧ್ಯಯನ ಮಾಡಬೇಕು, ಧ್ಯಾನಿಸಬೇಕು. ಈ ಪುರಾಣವು ಪುಣ್ಯದಾಯಕವೂ ಪವಿತ್ರವೂ ಉತ್ತಮವಾದ ಮಂಗಲಸ್ವರೂಪವೂ ಆಯುಷ್ಯವರ್ಧಕವೂ ಕೀರ್ತಿಯನ್ನುಂಟುಮಾಡುವುದೂ ಸ್ವರ್ಗದಾಯಕವೂ ಆಗಿರುತ್ತದೆ. ಈ ಪುರಾಣವನ್ನು ಪೂಜಿಸುವವರಿಗೆ ದುಃಖಶಾಂತಿಯೂ, ಸಂದೇಹನಿವಾರಣೆಗೋಸುಗ ಪ್ರಶ್ನೆಮಾಡುವವರಿಗೆ ಆನಂದವೂ ಪ್ರಷ್ಟಿಜ್ಞಾನವೃದ್ಧಿಯೂ ಓದುವವರಿಗೆ ಕ್ಷೇಮವೂ ಆರೋಗ್ಯವೂ ಕೇಳುವವರಿಗೆ ಕರ್ಮನಿರ್ಜರೆಯೂ ಆಗುವುವು. ಈ ಪುರಾಣ ಪೂಜನ, ಪೃಚ್ಛನಾ, ಪಠನ, ಶ್ರವಣಾದಿಗಳಿಂದ ದುಃಸ್ವಪ್ನಗಳ ನಾಶವೂ ಸುಸ್ವಪ್ನಗಳ ವೃದ್ಧಿಯೂ ನಿಮಿತ್ತ ಶಕುನವನ್ನು ನೋಡುವವರಿಗೆ ಇಷ್ಟಫಲ (ಶುಭಾಶುಭ ಶಕುನಫಲ) ಪ್ರಾಪ್ತಿಯೂ ಉಂಟಾಗುವುವು. ಇಂತಹ ಪವಿತ್ರ ಗ್ರಂಥವು ಮನೆಯಲ್ಲಿರುವುದು ಮಂಗಲಕರವೆಂದು ಭಾವಿಸಿ ಅನೇಕರು ಇದನ್ನು ತಮ್ಮ ಮನೆಗಳಲ್ಲಿಟ್ಟುಕೊಂಡು ಪೂಜಿಸುತ್ತಿರುವರು" (ಅನು. ಶಾಂತಿರಾಜ ಶಾಸ್ತ್ರಿಗಳು). ಈ ವಿವರಣೆಯಲ್ಲಿ ಮಹಾಪುರಾಣಕ್ಕೆ ಅತೀಂದ್ರಿಯ ಮಹಿಮೆಯಿದೆಯೆಂದು ತೋರಿಸುವುದಕ್ಕಾಗಿ ವಸ್ತುಸ್ಥಿತಿಯನ್ನು ಬಹುವಾಗಿ ಉತ್ಪ್ರೇಕ್ಷಿಸಲಾಗಿದೆ.

ರಾಮಾಯಣ-ಮಹಾಭಾರತಗಳಿಗೆ ಪೊಯ್-ಕಯ್ ಆಗಿ ಹತ್ತಿರ ಬರುವ ಮಹಾಪುರಾಣ ಕುರಿತ ಸಮಗ್ರ ವಿಮರ್ಶೆ ಕನ್ನಡದಲ್ಲಿ ಇನ್ನೂ ತನಕ ಆಗಿಲ್ಲ. ಸಾಹಿತ್ಯಿಕ, ಸಾಂಸ್ಕೃತಿಕ, ಚಾರಿತ್ರಿಕ, ಮಾನವಿಕ, ಸೈದ್ಧಾಂತಿಕ ಅಧ್ಯಯನ ನಿರತ ಸಂಶೋಧಕರಿಗೆ ಇದು ಒಳ್ಳೆಯ ಕನ್ನೆನೆಲ; ವಿಮರ್ಶಕರಿಗೆ ಹಸಿರು ನಿಶಾನೆ ಬೀಸುತ್ತಿದೆ. ಆ ದಿಕ್ಕಿನಲ್ಲಿ ಇಡುವ ವಿದ್ವಾಂಸರ ಒಂದೊಂದು ಹೆಜ್ಜೆಯೂ ಜಲಚಿಹ್ನೆಯಾಗಿ ಉಳಿಯುತ್ತದೆ. ಶಾಲಾ-ಕಾಲೇಜು ವಿಶ್ವವಿದ್ಯಾನಿಲಯಗಳಲ್ಲಿ ಮಹಾಪುರಾಣಕ್ಕೆ ದಿವ್ಯ ನಿರ್ಲಕ್ಷ್ಯವನ್ನು ತೋರಲಾಗುತ್ತಿದೆ. ಇನ್ನಾದರೂ ಸಂಸ್ಕೃತ ಹಿಂದಿ ಮತ್ತು ತತ್ವಶಾಸ್ತ್ರ ವಿಭಾಗ-ಇಲಾಖೆಗಳಲ್ಲಿ ಮಹಾಪುರಾಣವನ್ನು ಕಲಿಸುವ ಅಗತ್ಯವಿದೆ. ಪಠ್ಯವಾಗಿಯೂ, ಪರಾಮರ್ಶನ ಸಾಹಿತ್ಯ ಕೃತಿಯಾಗಿಯೂ

ಅದನ್ನು ಗೊತ್ತುಪಡಿಸುವುದು ಉಪಯುಕ್ತ. ಪ್ರಾಕೃತ ಭಾಷಾ ಸಾಹಿತ್ಯ ಕಲಿಕೆಯನ್ನು ಅದರಲ್ಲಿಯೂ ಅರ್ಧಮಾಗಧಿ ಗ್ರಂಥಬೋಧನೆಯನ್ನು, ಕಳೆದ ೬೫ ವರ್ಷಗಳಲ್ಲಿ ಮೂಲೆಗೆ ತಳ್ಳಿದ್ದು ದುರ್ದೈವ. ಅದರೊಂದಿಗೆ ಸಂಸ್ಕೃತದಲ್ಲಿರುವ ಜೈನ ಸಾಹಿತ್ಯ ಕೃತಿಗಳನ್ನೂ ವ್ಯವಸ್ಥಿತವಾಗಿ ಪಾಠ್ಯದ ಚೌಕಟ್ಟಿನಿಂದಾಚೆಗೇ ತಳ್ಳುತ್ತಾ ಬರಲಾಗಿದೆ. ಈ ಬತ್ತರಿಸುವಿಕೆ ಹಾಗೂ ಉಪೇಕ್ಷೆಯನ್ನು ನಾವು ನಿರ್ಲಕ್ಷಿಸುವಂತಿಲ್ಲ.

ಈ ಎಲ್ಲ ಹಿನ್ನೆಲೆಯಲ್ಲಿ ಎರ್ತೂರು ಶಾಂತಿರಾಜ ಶಾಸ್ತ್ರಿಗಳ ಸೇವೆಯನ್ನು ತೂಕ ಹಾಕಬೇಕು. ಕನ್ನಡ ಜೈನ ಪುರಾಣಗಳಿಗೂ, ಪ್ರಾಕೃತ ಪುಷ್ಪದಂತನ ಮಹಾಕಾವ್ಯಕ್ಕೂ ಈ ಮಹಾಪುರಾಣವೇ ಪ್ರೇರಕ ಪೂರಕ ಮಹಾಪೋಷಕ ಎಂಬುದು ಶಾಸ್ತ್ರಿಗಳಿಗೆ ಚೆನ್ನಾಗಿ ಮನವರಿಕೆಯಾಗಿತ್ತು. ಪಂಪನಿಂದ ಪಂಪನಾವರೆಗೆ ಮಹಾಪುರಾಣದ ಹೆಜ್ಜೆಗುರುತುಗಳನ್ನು ನೋಡಿದರೆ, ಮಹಾಪುರಾಣದ ಜ್ಞಾನ ಪರಿಶ್ರಮಗಳು ಜೈನ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಎಷ್ಟೊಂದು ಮಹತ್ವದ್ದೆಂದು ಅರಿವಾದೀತು. ಸಂಸ್ಕೃತ ಭಾಷಾ ಜ್ಞಾನದ ಕೊರತೆಯಿದ್ದು ಕೇವಲ ಕನ್ನಡ ಬಲ್ಲವರಿಗೆ ಮಹಾಪುರಾಣವನ್ನು ಕನ್ನಡಿಸಿ ಕೊಡಬೇಕೆಂಬ ವಿಚಾರವಾಗಿ ಈ ಮೊದಲು ಯೋಚಿಸಿದ ಆದ್ಯರು ಚಾಮರಾಜನಗರದ ಬ್ರಹ್ಮಸೂರಿ ಪದ್ಮರಾಜ ಪಂಡಿತರು. ಸ್ವಂತ ಮುದ್ರಣಾಲಯ ಮತ್ತು ಪ್ರಕಾಶನ ಸಂಸ್ಥೆಯನ್ನು ಬೆಂಗಳೂರಲ್ಲಿ ಪ್ರಾರಂಭಿಸಿದ ೧೯ನೆಯ ಶತಮಾನದ ಮಹಾಸಾಹಸಿ ಈ ಬಿ. ಪದ್ಮರಾಜ ಪಂಡಿರು; ಸುಮಾರು ೨೩ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿ ಪ್ರಕಟಿಸಿದ್ದಾರೆ. ಗ್ರಂಥ ಸಂಪಾದನೆ ಮತ್ತು ಪ್ರಕಟಣ ಕ್ಷೇತ್ರದಲ್ಲಿ ಅಗಾಧ ಸೇವೆಯನ್ನು ಸಲ್ಲಿಸಿದ ಈ ಬಿ.ಪದ್ಮರಾಜ ಪಂಡಿತರು ಕಳೆದ ಶತಮಾನದ ಅಂತ್ಯದಲ್ಲಿ ಜಿನಸೇನನ ಪೂರ್ವ ಪುರಾಣದ ಅರ್ಧದಷ್ಟನ್ನು ಮಾತ್ರ ಎರಡು ಭಾಗಗಳಲ್ಲಿ; ಭಾಗ-೧ (೧೮೯೬) ಭಾಗ-೨(೧೮೯೭) ಪಾರ್ಶ್ವನಾಥ ಸ್ವಾಮಿ ಚರಿತೆ-ಉತ್ತರ ಪುರಾಣದಿಂದ (೧೮೯೩)-ಇಷ್ಟನ್ನೂ ಕನ್ನಡ ಭಾಷಾಂತರದೊಂದಿಗೆ ಹೊರತಂದರು. ಸಂಸ್ಕೃತದಲ್ಲಿ ಘನವಿದ್ವಾಂಸರೂ, ಜೈನ ಸಿದ್ಧಾಂತದಲ್ಲಿ ನಿಷ್ಣಾತರೂ, ಕನ್ನಡದಲ್ಲಿ ಪ್ರಕಾಂಡ ಪಂಡಿತರೂ ಆಗಿದ್ದ ಪದ್ಮರಾಜ ಪಂಡಿತರಿಂದ ಸಮಗ್ರ ಮಹಾಪುರಾಣದ ಕನ್ನಡ ಅನುವಾದ ಕಾರ್ಯಯೋಜನೆ ಕೈಗೂಡದೆ ಅರ್ಧಕ್ಕೇ ನಿಂತು ಹೋಯಿತು. ಕೆಲಸ ತುದಿ ಮುಟ್ಟದೆ ಹೋದರೂ, ಮಹಾಪುರಾಣವನ್ನು ಕನ್ನಡಕ್ಕೆ ಪರಿವರ್ತಿಸಿ ಮೂಲದೊಂದಿಗೆ ಪ್ರಕಟಿಸುವ ಮಹಾಸಾಹಸ ಕಾರ್ಯಕ್ಕೆ ಮೊದಲ ಗುದ್ದಲಿ ಪೂಜೆ ಆದದ್ದು ಬಿ. ಪದ್ಮರಾಜ ಪಂಡಿತರಿಂದ ಎಂಬ ಐತಿಹಾಸಿಕ ಮಹತ್ವದ ಸಂಗತಿಯನ್ನು ನೆನಪಿಡಬೇಕಾದ್ದು; ಅಲ್ಲದೆ ಆ ಕಾಲಕ್ಕೆ ಚೆನ್ನಾಗಿ ಇಂಗ್ಲೀಷ್ ಕಲಿತು ಇಂಗ್ಲೀಷಿನಲ್ಲೂ ಒಂದು ಪುಸ್ತಕವನ್ನು ಬಿ. ಪದ್ಮರಾಜ ಪಂಡಿತರು ರಚಿಸಿರುತ್ತಾರೆ.

ಹೀಗೆ ಬಿ. ಪದ್ಮರಾಜ ಪಂಡಿತರು ಪ್ರಯತ್ನಿಸಿ, ಮೇಲ್ಪಂಕ್ತಿ ಹಾಕಿ ನಿಲ್ಲಿಸಿದ ಕಾರ್ಯವನ್ನು ಅಪರಾದ ೪೦ ವರ್ಷಗಳ ತರುವಾಯ ಕೈಗೆತ್ತಿಕೊಂಡು ಆರಂಭದಿಂದ ಅಂತ್ಯದವರೆಗೆ ಪರಿಷ್ಕಾರವಾಗಿ ಯಶಸ್ವಿಯಾಗಿ ಕೈಗೂಡಿಸಿದವರು ಎರ್ತೂರು ಶಾಂತಿರಾಜ ಶಾಸ್ತ್ರೀ

ಗಳು. ಪ್ರೊ. ಕೆ. ಜಿ ಕುಂದಣಗಾರರಿಗೂ ಇಂಥದೊಂದು ಪೋಳಹು ಇತ್ತೆಂದು ಡಾ. ಆ. ನೇ. ಉಪಾಧ್ಯೆ ತಿಳಿಸಿದ್ದಾರೆ. ಪಂಪನ ಆದಿಪುರಾಣವನ್ನೂ, ಹಸ್ತಿಮಲ್ಲನ ಪೂರ್ವಪುರಾಣವನ್ನೂ ಸಂಪಾದಿಸಿಕೊಟ್ಟ ಪ್ರೊ. ಕೆ. ಜಿ. ಕುಂದಣಗಾರರ ವಿದ್ವತ್ತಿಗೆ ಇದೇನೂ ಅಸಾಧ್ಯವಾಗಿರಲಿಲ್ಲ. ಅದೇಕೊ ಕುಂದಣಗಾರರು ಈ ಭಾಷಾಂತರಕ್ಕೆ ತೊಡಗ ಲಿಲ್ಲ. ಈ ನಡುವೆ ಡಿ. ಎ. ಬೋಗಾರ ಮತ್ತು ಮಿರ್ಜಿ ಅಣ್ಣಾರಾಯ ಸೇರಿ ಮಹಾ ಪುರಾಣ (ಕಥಾ)ಸಾರವನ್ನು ವಿಸ್ತೃತ ಪೀಠಿಕೆ ಪರಿಶಿಷ್ಟಗಳ ಸಹಿತ ಸಿದ್ಧಪಡಿಸಿ ಪ್ರಕಟಿಸಿ ದರು(೧೯೬೨); ಇದರಲ್ಲಿ ಮೂಲ ಶ್ಲೋಕಗಳನ್ನು ಕೊಟ್ಟಿಲ್ಲ. ಕೇವಲ ತಿಳಿಗನ್ನಡದಲ್ಲಿ ವಿಸ್ತಾರವಾಗಿಯೇ ಮೂಲ ಕಥೆಯನ್ನು ಅನುವಾದಿಸಿ ಕೊಡಲಾಗಿದೆ. ತೀರ ಇತ್ತೀಚೆಗಷ್ಟೇ ಹುಂಚದ ಸ್ವಸ್ತಿಶ್ರೀ ದೇವೇಂದ್ರ ಕೀರ್ತಿ ಭಟ್ಟಾರಕ ಪಟ್ಟಾಚಾರ್ಯ ಸ್ವಾಮಿಗಳವರ ಉದಾರ ಕೃಪಾಶ್ರಯದಿಂದ ಪ್ರೊ. ಜಿ. ಬ್ರಹ್ಮಪ್ಪನವರು ಮಹಾಪುರಾಣದ ಗದ್ಯಾನುವಾದವನ್ನು ಆಮೂಲಾಗ್ರವಾಗಿ, ಸಮಗ್ರವಾಗಿ ಹೊರತಂದಿದ್ದಾರೆ(೧೯೮೬). ಹಾಗೆ ನೋಡುವುದಾದರೆ ಇಡೀ ಭಾರತೀಯ ಭಾಷೆಗಳಲ್ಲಿಯೇ ಮಹಾಪುರಾಣವನ್ನು ಅನುವಾದಿಸುವ ಪ್ರಪ್ರಥಮ ಪ್ರಯತ್ನ ನಡೆದದ್ದು ಕನ್ನಡದಲ್ಲಿ ಚಾವುಂಡರಾಯನೇ ಅದರ ಮೊದಲ ಅನುವಾದಕ. ಅವನದು ಮುಕ್ತಾನುವಾದ. ಚಾವುಂಡರಾಯನ ತರುವಾಯ ಇಡೀ ಕನ್ನಡ ಸಾಹಿತ್ಯದಲ್ಲಿ ಮಹಾಪುರಾಣವನ್ನು ಪೂರ್ತಿಯಾಗಿ ಕನ್ನಡಕ್ಕೆ ಪರಿವರ್ತಿಸಿದ ಭಗೀರಥ ಎತ್ತೂರು ಶಾಂತಿರಾಜ ಶಾಸ್ತ್ರಿಗಳು (೧೯೩೩-೧೯೪೦). ಆದಿ ಪಂಪನೂ, ಪಂಪ ಪೂರ್ವದಲ್ಲಿ ಗುಣವರ್ಮಾದಿಗಳೂ ಮಹಾಪುರಾಣದ ಭಾಗಗಳಿಗೆ ಲಗ್ಗೆ ಹತ್ತಿದರೇ ಹೊರತು ಸಮಗ್ರ ಕೃತಿಗಲ್ಲ. ಆದರೆ ಚಾವುಂಡರಾಯನು, ಪ್ರಾಯಃ ಮಹಾಕವಿ ರನ್ನನ ಮಾರ್ಗ ದರ್ಶನ ದಲ್ಲಿ, ಸಾವಿರ ವರ್ಷಗಳ ಹಿಂದೆ, ಅಂದಿನ ಕನ್ನಡ ಭಾಷೆಗೆ ಬದಲಾಯಿಸುವ ಸಾಹಸ ಮಾಡಿದನು. ಚಾವುಂಡರಾಯನ ಅದೃಷ್ಟವೆಂದರೆ ಅಂದು ಆತನ ಕಣ್ಮುಂದೆ ಕೂಚಿ ಭಟ್ಟಾರಕ, ಶ್ರೀನಂದಿ ಮುನೀಶ್ವರ, ಕವಿಪರಮೇಷ್ಠಿ, ಮತ್ತು ಜಿನಸೇನ-ಗುಣಭದ್ರರ ಕೃತಿಯನ್ನು ಕೇಂದ್ರವಾಗಿರಿಸಿ ಒಂದು ಮುಕ್ತ ಗದ್ಯಾನುವಾದ ಕೃತಿಯನ್ನು ಕನ್ನಡದಲ್ಲಿ ಬರೆದ ಕೀರ್ತಿ, ಅಗ್ರತಾಂಬೂಲ ಚಾವುಂಡರಾಯನದು.

ಶಾಂತಿರಾಜ ಶಾಸ್ತ್ರಿಗಳದು ಇನ್ನೂ ಒಂದು ಹೆಜ್ಜೆ ಮುಂದುವರಿದ ಕೆಲಸ. ಇವರು ಮೂಲ ಶ್ಲೋಕಗಳೊಂದಿಗೆ 'ಕರ್ನಾಟಕ ಭಾವದೀಪಿಕಾ ವ್ಯಾಖ್ಯಾ' ರಚಿಸಿದ್ದಾರೆ. ಶಾಸ್ತ್ರಿ ಗಳ ಅನುವಾದ ಸಂಸ್ಕೃತ ಶಬ್ದಕ್ಕೆ ಕನ್ನಡ ಶಬ್ದ ಇಟ್ಟ ಮಕ್ಕಿಕಾ ಮಕ್ಕಿಯಲ್ಲ. ಅವರು ಮೂಲಗ್ರಂಥದ ಮಹತ್ವ ಪರಂಪರೆಯನ್ನೂ, ಜೈನ ಧರ್ಮ-ಸಾಹಿತ್ಯದಲ್ಲಿ ಅದಕ್ಕಿರುವ ಅದ್ವಿತೀಯವಾದ ಸ್ಥಾನವನ್ನೂ, ಐತಿಹಾಸಿಕ ಹಿನ್ನೆಲೆಯನ್ನೂ ಬಲ್ಲ ಜ್ಞಾನಿ. ಸ್ವಯಂ ಆ ಮುಖ್ಯ ಧಾರ್ಮಿಕ ಪ್ರವಾಹದಲ್ಲಿ ಬೆಳೆದು ಬಂದವರು. ಅವರಿಗಿದ್ದ ವಿದ್ವತ್ತು ಪ್ರೌಢತಮ ವಾದದ್ದು. ಸಂಸ್ಕೃತ, ಪ್ರಾಕೃತ, ಕನ್ನಡ ಈ ತ್ರಿಭಾಷಾ ಪ್ರಾವೀಣ್ಯ ಮತ್ತು ಶಾಸ್ತ್ರ

ಶುದ್ಧಿ ಅವರಿಗಿದ್ದ ಬಲ. ತಾವು ವ್ಯಾಖ್ಯಾನಿಸಲೆಂದು ಕೈಗೆತ್ತಿಕೊಂಡ ಗ್ರಂಥ ಎಷ್ಟು ಗಹನ ಹಾಗೂ ಕಷ್ಟಸಾಧ್ಯ, ಸವಾಲುಗಳನ್ನು ಒಡ್ಡುವಂತಹುದು ಎಂಬ ಅರಿವಿದೆ: "ಕನ್ನಡದಲ್ಲಿ ಭಾವಾರ್ಥವನ್ನು ಬರೆಯಿಸಿ, ಕನ್ನಡ ನಾಡಿನ ಎಲ್ಲಾ ಜೈನ ಬಂಧುಗಳಿಗೂ ಇದು ಸುಲಭ ಲಭ್ಯವಾಗುವಂತೆ ಮಾಡಬೇಕೆಂದು....ಪರ್ಯಾಲೋಚಿಸಿ, ಈ ಮಹತ್ಕಾರ್ಯ ವನ್ನು ನಮಗೆ ವಹಿಸಿದರು. ಇದು ನಮ್ಮ ಅಲ್ಪ ಬುದ್ಧಿಗೆ ಬಹು ಶ್ರಮಸಾಧ್ಯವಾದ ಕಾರ್ಯ. ಇದನ್ನು ನಮಗಿಂತ ಹೆಚ್ಚಿನ ವಿದ್ವಾಂಸರಿಗೆ ವಹಿಸಿದ್ದರೆ ಬಹಳ ಚೆನ್ನಾಗಿ ಆಗುತ್ತಿ ದ್ದಿತು. ನಮ್ಮ ಮುಂದ ಬುದ್ಧ್ಯನುಸಾರವಾಗಿ ಈ ಗ್ರಂಥಕ್ಕೆ ಕರ್ಣಾಟಕ ಭಾವ ದೀಪಿಕೆ ಯೆಂಬ ಚಿಕ್ಕದಾದ ವ್ಯಾಖ್ಯೆಯನ್ನು ಬರೆದು....ಪೂರ್ಣಗ್ರಂಥವನ್ನು ಸಮಾಜದ ಮುಂದಿಟ್ಟಿ ರುವೆವು. ಈ ಗ್ರಂಥವು ಸಮಾಜಕ್ಕೆ ಉಪಕಾರವೂ ಬಹುಕಾಲದವರೆಗೆ ಇರತಕ್ಕದೂ ಆಗಿರುವುದರಿಂದ ನಮ್ಮ ಜೀವನಯಾತ್ರೆಯಲ್ಲಿ ನಮ್ಮ ಶಕ್ತಿಗೆ ಇದೊಂದು ದೊಡ್ಡ ಕೆಲಸ ವೆಂದು ಭಾವಿಸಿ ಶ್ರಮವಹಿಸಿರುತ್ತೇವೆ. ಶಾಸ್ತ್ರಿಗಳು ಕೇವಲ ನೀರಸ ಅನುವಾದಕರಲ್ಲ. ಅವರದು ಪಂಡಿತ ಪ್ರಿಯವಾದ ಪಂಡಿತಪ್ರಚುರ ಶೈಲಿ. ದೀರ್ಘವಾಕ್ಯಗಳನ್ನು ಬಳಸುತ್ತಾರೆ. ಈ ಹೊತ್ತಿನ ೧೯೪೦ರ ಘಟ್ಟದಲ್ಲಿ ಇಂತ ಕನ್ನಡ ಭಾಷೆಯು ನಡಿಗೆಗೆ ಹೊಂದಿಕೆಯಾಗದೆ ಬಿಡುವ ರಚನೆಯೂ ಅಲ್ಲಲ್ಲಿ ಉಂಟು; ಶೈಲಿ ವಿಜ್ಞಾನದ ದೃಷ್ಟಿಯಿಂದಲೂ. ಈ ಶತ ಮಾನದ ಉತ್ತರಾರ್ಧದಲ್ಲಿರುವ ನಾವು ಬಳಸುತ್ತಿರುವ ಭಾಷಾಶೈಲಿಯೂ ಪೂರ್ವಾರ್ಧ ದಲ್ಲಿದ್ದ ಶೈಲಿಗಿಂತ ಹೇಗೆ ಭಿನ್ನತೆ ಪಡೆದುಕೊಂಡಿವೆಯೆಂಬುದರ ಅಧ್ಯಯನದ ದೃಷ್ಟಿ ಯಿಂದಲೂ ಮಹಾಪುರಾಣದ ಅನುವಾದ ಅಭ್ಯಸಕ್ಕೆ ಅರ್ಹವಾಗಿದೆ. ಶಾಸ್ತ್ರಿಗಳ ಹೊಸಗನ್ನಡ ಶೈಲಿ ಅಡೆತಡೆಗಳಿಲ್ಲದೆ ಸಮತಲದಲ್ಲಿ ಹರಿಯುವ ನದಿಯಂತೆ ಸಲಿಲವಾಗಿಯೇ ಮುಂದುವರಿ ಯುತ್ತದೆ. ಎಲ್ಲೂ ಅದು ಲಾಘವ ಗೊಳ್ಳುವುದಿಲ್ಲ, ಹ್ರಸ್ವವಾಗುವದಿಲ್ಲ ಗಾಂಭೀರ್ಯ ಬಿಟ್ಟು ಕೊಡುವುದಿಲ್ಲ. ಮೂಲಭಾವನೆಯ ಪ್ರತಿಪಾದನೆಗೆ ಅನುಕೂಲವಾಗಿ ಒಮ್ಮೊಮ್ಮೆ ಮೂರು ನಾಲ್ಕು ಸಂಸ್ಕೃತ ಶ್ಲೋಕವನ್ನು ಒಟ್ಟಿಗೆ ತೆಗೆದುಕೊಂಡು ಒಟ್ಟು ಸಾರಾಂಶವನ್ನು ಕೊಡುವು ದುಂಟು. ಶಾಸ್ತ್ರಿಗಳು ಅನುವಾದದೊಂದಿಗೆ ಗ್ರಂಥ ಸಂಪಾದನೆ ಕಾರ್ಯವನ್ನೂ ಏಕ ಕಾಲ ದಲ್ಲಿ ಸಮರ್ಥವಾಗಿ ನಿರ್ವಹಿಸಿದ್ದಾರೆ. ಗ್ರಂಥ ಸಂಪಾದಕನ ಗುರುತರ ಹೊಣೆಯರಿತು, ಓಲೆಗರಿ ಗ್ರಂಥಗಳನ್ನೂ, ಮುದ್ರಿತ ಮರಾಠಿ ಭಾಷೆಯ ಪ್ರತಿಯನ್ನೂ ತುಲನಾತ್ಮಕ ದೃಷ್ಟಿಯಿಂದ ಪಠನ ಮಾಡಿ, ಪಾಠಾಂತರಗಳನ್ನೂ ಟಿಪ್ಪಣಿಗಳನ್ನೂ ಕೊಟ್ಟಿರುತ್ತಾರೆ. ಜತೆಗೆ ಪೂರ್ವ ಪುರಾಣಕ್ಕೂ ಉತ್ತರ ಪುರಾಣಕ್ಕೂ ಬೆಲೆಯುಳ್ಳ ಮುನ್ನುಡಿಕೂಡ ಬರೆದಿ ದ್ದಾರೆ. ಈ ಎಲ್ಲ ಕಾರಣಗಳಿಗಾಗಿ ಮಹಾಪುರಾಣಕ್ಕೆ ಶಾಸ್ತ್ರಿಗಳ ಅನುವಾದಕ್ಕೆ–ವ್ಯಾಖ್ಯೆಗೆ ಐತಿಹಾಸಿಕ ಮಹತ್ವವಿದೆ. ಕನ್ನಡದಲ್ಲಿ ಪಾರಂಪರಿಕ ಜ್ಞಾನ ಪಡೆದ ಶಾಸ್ತ್ರಿಗಳ ಸಂಪ್ರದಾ ಯವೂ, ಶಾಸ್ತ್ರಸಾಹಿತ್ಯದ ನೈರಂತರ್ಯವು ಕಡಿದು ಹೋಗದಂತೆ ಕಾಪಾಡಿದವರು ಎರ್ತೂರು ಶಾಂತಿರಾಜ ಶಾಸ್ತ್ರಿಗಳು, ಅವರಿಗಿಂತ ಹಿಂದೆ ಬ್ರಹ್ಮಸೂರಿ ಪದ್ಮರಾಜ ಪಂಡಿತರು.

ಕನ್ನಡದಲ್ಲಿಯೂ ನೇಮಿಜಿನೇಶ ಸಂಗತಿ (ಹರಿವಂಶ), ನಾಗಕುಮಾರ ಚರಿತೆ, ನೋಂಪಿಯ ಕಥೆಗಳು– ಮೊದಲಾದ ಹಳೆಗನ್ನಡ ಕಾವ್ಯಗಳನ್ನು ಶಾಸ್ತ್ರೋಕ್ತವಾಗಿ ಸಂಪಾದಿಸಿಕೊಟ್ಟಿರುವ ಎ. ಶಾಂತಿರಾಜ ಶಾಸ್ತ್ರಿಗಳವರ ಸೇವೆಯನ್ನು ಗುರುತಿಸಿ ದಾಖಲಿಸಬೇಕಾದ ಸಂದರ್ಭ ಬಂದಾಗಲೂ ಹಾಗೆ ಮಾಡದೆ ದುರುದ್ದೇಶದಿಂದ ಕೈಬಿಟ್ಟಿರುವುದನ್ನು ಮಣಿಹವೆಂಬೊಂದು ಗ್ರಂಥದಲ್ಲಿ ಕಾಣಬಹುದು. ಕನ್ನಡಕ್ಕೆ ಸೇವೆ ಸಲ್ಲಿಸಿದ ಗ್ರಂಥ ಸಂಪಾದನಕಾರರನ್ನು ಪರಿಚಯಿಸುವ ವಿಭಾಗದಲ್ಲಿ ಈ ಮಣಿಹವನ್ನು ಅಣಿಗೊಳಿಸಿದ ಜಾಣರು ಬಿ. ಪದ್ಮರಾಜ ಪಂಡಿತರನ್ನೂ, ತೋವಿನಕೆರೆ ರಾಯಣ್ಣ ಪಾಗ್ಮಿಯನ್ನೂ, ಎತ್ತೂರು ಶಾಂತಿರಾಜ ಶಾಸ್ತ್ರಿಗಳನ್ನೂ, ಎಸ್. ಬೊಮ್ಮರಸ ಪಂಡಿತರನ್ನೂ– ಕೇವಲ ಜೈನರೆಂಬ ಜಾತಿ ಕಾರಣಕ್ಕಾಗಿ ಕೈಬಿಟ್ಟು ಅನ್ಯಾಯವೆಸಗಿರುತ್ತಾರೆಂಬ ಗುಮಾನಿಗೆ ಬಲವಾದ ಕಾರಣಗಳಿವೆ. ಇಲ್ಲವಾದರೆ ಇವರಿಗಿಂತ ಕಡಿಮೆ ಕೆಲಸ ಮಾಡಿದ ಒಬ್ಬಿಬ್ಬರನ್ನು ಪರಿಚಯಿಸಿ ಇಷ್ಟು ಅಗಾಧವಾದ ಕೆಲಸ ಮಾಡಿದ ಗ್ರಂಥ ಸಂಪಾದನ ಪ್ರಾಜ್ಞರನ್ನು ಉಪೇಕ್ಷಿಸಿದ್ದಕ್ಕೆ ಕಾರಣವೇ ಇಲ್ಲ. ಈ ಬಗೆಯ ನಿರ್ಲಕ್ಷ್ಯವನ್ನು ಅಹಿಂಸಾವಾದಿಗಳಾದ ಜೈನರು ಹೇಗೂ ಸಹಿಸಿಕೊಳ್ಳುತ್ತಾರೆಂಬ ತಾತ್ಸಾರ ಬುದ್ಧಿ ಒಳ್ಳೆಯದಲ್ಲ. ಜಾಣರಾದ ಸಣ್ಣ ಜನರು ಹೆಸರಿಸದೆ ಹೋದ ಮಾತ್ರಕ್ಕೆ ಶಾಸ್ತ್ರಿಗಳ ಸೇವೆಯ ಮಹತ್ವವೇನೂ ತಗ್ಗುವುದಿಲ್ಲ.

ಮಹಾಪುರಾಣ ಇರುವವರೆಗೂ ಅದರ ಅನುವಾದಕರ ಸೇವೆಯೂ ನಂದಾದೀವಿಗೆಯಾಗಿ ಬೆಳಗುತ್ತಿರುತ್ತದೆ.

□ □

ಸಾಹಿತ್ಯ ವಿಮರ್ಶೆ: ಇತ್ತೀಚಿನ ಒಲವುಗಳು

—ದು. ನಿಂ. ಬೆಳಗಲಿ

ಇಂದು ಕನ್ನಡ ಸಾಹಿತ್ಯ ಎಲ್ಲ ಪ್ರಕಾರಗಳಲ್ಲಿ, ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಿಲ್ಲದಂತೆ ಸರಿಸಮನಾಗಿ ಬೆಳೆಯುತ್ತಲಿದೆ. ಕನ್ನಡದ ವಿಮರ್ಶೆಗೂ ಈ ಮಾತು ಅನ್ವಯವಾಗುತ್ತದೆ. ವಿಮರ್ಶೆ ಬೆಳೆದಂತೆ, ಸಾಹಿತ್ಯದ ಮೌಲ್ಯಮಾಪನ ಹೆಚ್ಚಾದಂತೆ ಸಾಹಿತ್ಯಕ್ಕೆ ಪೋಷಕ. ಅದು ಸಾಹಿತ್ಯದ ಬೆಳವಣಿಗೆಯ ಲಕ್ಷಣ.

ಕನ್ನಡದಲ್ಲಿ ವಿಮರ್ಶೆಯ ವಿಶಿಷ್ಟ ಪ್ರಕಾರ ಮೂಡಿಬಂದದ್ದು ಪಾಶ್ಚಾತ್ಯ ಸಾಹಿತ್ಯದ ಅಧ್ಯಯನದಿಂದ. ಈ ಶತಮಾನದ ಆರಂಭದಲ್ಲಿ 'ವಿಮರ್ಶೆ' ಎಂಬ ಖಚಿತವಾದ ವ್ಯಾಖ್ಯೆಗೆ ಅನುಗುಣವಾಗಿ ಒಂದು ಸಾಹಿತ್ಯದ ಪ್ರಕಾರ ಹುಟ್ಟಿಕೊಂಡಿತು. ಕನ್ನಡದಲ್ಲಿ ಸಾಹಿತ್ಯ ವಿಮರ್ಶೆ ಕೂಡ, ಸಾಹಿತ್ಯದ ಉಳಿದ ಪ್ರಕಾರಗಳಂತೆ ಪಾಶ್ಚಾತ್ಯ ಸಾಹಿತ್ಯದ ಪ್ರೇರಣೆಯಿಂದಲೇ ಬಂದಿದ್ದು, ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಅಂಶಗಳನ್ನು ಒಳಗೊಂಡಿತು. ವಿಶೇಷವಾಗಿ ಇಂಗ್ಲೀಷ್ ವಿಮರ್ಶೆಯ ಮೂಲತತ್ವಗಳಿಗೆ ಕನ್ನಡ ಸಾಹಿತ್ಯವನ್ನು ಅನ್ವಯಿಸಿ ವಿಮರ್ಶೆ ನಡೆಯಿತು. ಮುಂದೆ ಇಲ್ಲಿಯ ಸಾಹಿತ್ಯಕ್ಕೆ ಇರಬೇಕಾದ ವಿಮರ್ಶೆಯ ಮಾನದಂಡದ ಬಗೆಗೂ ಚರ್ಚೆ ಆರಂಭಿಸಿತು.

ನವೋದಯ ಕಾಲದಲ್ಲಿ ಕಾಣಿಸಿಕೊಂಡ ವಿಮರ್ಶೆ, ಪ್ರಗತಿಶೀಲ ಚಳುವಳಿಯ ಸಮಯದಲ್ಲಿ ತನ್ನ ಗತಿಯನ್ನು ಬದಲಿಸಿಕೊಂಡಿತು. ಸಾಹಿತ್ಯ ಕೃತಿಯ ಮೌಲ್ಯವನ್ನು ನಿರ್ಧರಿಸುವಾಗ ಸಮಾಜದ ಹಾಗೂ ಇಡೀ ಜೀವನದ ಸುಂದರ್ಭದಲ್ಲಿ ನೋಡಬೇಕು ಎಂದು ಪ್ರಗತಿಶೀಲ ವಿಮರ್ಶೆ ಒತ್ತಿ ಹೇಳಿತು. ಕನ್ನಡದಲ್ಲಿ 'ನವ್ಯ' ಅವತರಿಸಿದಾಗ, ವಿಮರ್ಶೆಯ ದಾರಿ ಬದಲಾದಂತೆ ಅದರ ಕ್ಷೇತ್ರ ಇನ್ನೂ ವಿಸ್ತಾರಗೊಂಡಿತು. ಇದು ಹಿಂದಿನ ವಿಮರ್ಶೆಗಿಂತ ಬೇರೆಯಾಗಿ ವ್ಯಕ್ತಿನಿಷ್ಠ ವಿಮರ್ಶೆ ಕೃತಿನಿಷ್ಠವಾಗಿ ಪರಿವರ್ತಿಸಿತು.

ಆಧುನಿಕ ಕನ್ನಡ ಸಾಹಿತ್ಯದ ಪಿತಾಮಹ ಎಂದೆನಿಸಿಕೊಂಡ ಬಿ. ಎಂ. ಶ್ರೀ. ಅವರು ಆಧುನಿಕ ವಿಮರ್ಶೆಗೆ ನಾಂದಿ ಹಾಡಿದರು. 'ಶ್ರೀ' ಅವರು ಪ್ರಾಚೀನ ಕಾವ್ಯಗಳಿಗೆ ಬೆಲೆ ಕಟ್ಟುವ, ಆಧುನಿಕರಿಗೆ ಅರ್ಥಪೂರ್ಣವಾಗಿ ವಿವರಿಸುವ ಕೆಲಸ ಮಾಡಿದರು ಅನಂತರ ಕುವೆಂಪು, ಡಿ. ವಿ. ಜಿ. ಮುಂತಾದವರ ಬರವಣಿಗೆಗಳಲ್ಲಿ ಕಾವ್ಯ ವಿಮರ್ಶೆಗಳಲ್ಲಿ ಪಾಶ್ಚಾತ್ಯ ಚಿಂತಕರ ವಿಚಾರಗಳು ಬೆರೆತಂತೆ, ಭಾರತೀಯ ಕಾವ್ಯ ಮೀಮಾಂಸೆಯ ಧ್ವನಿ, ರಸ, ಸಿದ್ಧಾಂತಗಳು ಸೇರಿಕೊಂಡವು. ಟಿ. ಎಸ್. ವೆಂಕಣ್ಣಯ್ಯ ಮತ್ತು ಎ. ಆರ್. ಕೃಷ್ಣಶಾಸ್ತ್ರಿ

ಅವರ ಹಿರಿತನದಲ್ಲಿ ಆರಂಭವಾದ 'ಪ್ರಬುದ್ಧ ಕರ್ಣಾಟಕ' ಒಳ್ಳೆಯ ವಿಮರ್ಶೆಗೆ ಅಡಿಪಾಯ ಹಾಕಿತು.

ಎ. ಆರ್. ಕೃ. ಮಾಸ್ತಿ, ಎಸ್. ವಿ. ರಂಗಣ್ಣ, ತೀ. ನಂ. ಶ್ರೀ. ದ. ರಾ. ಬೇಂದ್ರೆ, ವಿ. ಕೃ. ಗೋಕಾಕ, ರಂ. ಶ್ರೀ. ಮುಗಳಿ, ವೀ. ಸಿ; ಪು. ತಿ. ನ. ಮೊದಲಾದವರು ಸಾಹಿತ್ಯ ವಿಮರ್ಶೆಗೆ ಕೈಹಾಕಿದರು. ಆದರೆ ಈ ಸಮಯ ನಿಜವಾದ ಅರ್ಥದಲ್ಲಿ ಸಮಕಾಲೀನ ಸಾಹಿತ್ಯ ವಿಮರ್ಶೆಗೆ ಒಳಗಾಗಲಿಲ್ಲ. ಆ ಕಾಲದಲ್ಲಿ ಹೊಸ ಸಾಹಿತ್ಯದ ಪ್ರಚಾರ, ಪ್ರಾಚೀನ ಸಾಹಿತ್ಯದ ಸೌಂದರ್ಯ ಅನ್ವೇಷಣೆಯಲ್ಲಿ ತೊಡಗಿದ್ದು, ಆ ಸಮಯ ಅದು ಅವಶ್ಯವೂ ಆಗಿತ್ತು.

ವಿಮರ್ಶೆ ಒಂದು ಶಾಸ್ತ್ರವಾದಂತೆ ಕಲೆಯೂ ಆಗಿದೆ. ಇಂದಿನ ವಿಮರ್ಶೆ, ವಿಮರ್ಶಾ ಕಲೆಯನ್ನು ಕರಗತ ಮಾಡಿಕೊಂಡಿದ್ದು, ತನ್ನದೇ ಆದ ಒಂದು ವಿಶಿಷ್ಟ ಭಾಷೆ, ಶೈಲಿ, ತಂತ್ರ, ನಿರೂಪಣೆಯನ್ನು ಪಡೆದುಕೊಂಡಿದೆ. ಇಂದಿನ ವಿಮರ್ಶಕರು ಭಾರತೀಯ ಕಾವ್ಯ ಮೀಮಾಂಸಾಕಾರರಿಗಿಂತ, ನವೋದಯ ಹಾಗೂ ಪ್ರಗತಿಶೀಲ ವಿಮರ್ಶಕರಿಗಿಂತ ಸಮರ್ಥವಾಗಿ ತಮ್ಮ ಸುತ್ತಲಿನ ಬದುಕು, ಲೇಖಕ, ಅವನ ಕೃತಿ ಇವುಗಳ ಪರಸ್ಪರ ಸಂಬಂಧವನ್ನು ಕಾಳಜಿಯಿಂದ ವಿಶ್ಲೇಷಿಸುತ್ತಿದ್ದಾರೆ. ಇತರ ಸಾಹಿತ್ಯ ಪ್ರಕಾರಗಳನ್ನು ನೋಡಿದರೆ ವಿಮರ್ಶೆ ಇನ್ನೂ ಬೆಳೆದು ಬರಬೇಕಾಗಿದೆ. ವಿಮರ್ಶೆಗೆ ಇನ್ನೂ ಖಚಿತತೆ ಬೇಕಿದೆ. ಸಮಕಾಲೀನ ವಿಮರ್ಶೆ ಕಷ್ಟವಿದ್ದೇ ಸರಿ, ವಿಮರ್ಶೆ ಗುಂಪುಗಾರಿಕೆಯಿಂದ ಹೊರ ಬಂದು ನಿಜವಾದ ಮೌಲ್ಯವನ್ನು ಪಡೆಯಬೇಕಾಗಿದೆ. ಎಷ್ಟೋ ಸಂದರ್ಭಗಳಲ್ಲಿ ನಿಷ್ಪಕ್ಷ ಪಾತವಾದ ವಿಮರ್ಶೆ ಕಂಡು ಬರುವುದಿಲ್ಲ. ಸೃಜನ ಸಾಹಿತ್ಯಕ್ಕೆ ಗುಂಪುಗಾರಿಕೆ ಪೂರಕವಾಗ ಬಹುದಾದರೆ, ವಿಮರ್ಶನ ಸಾಹಿತ್ಯಕ್ಕೆ ಮಾರಕವಾಗುವ ಅಪಾಯವಿದೆ. ಎಷ್ಟೋ ಪ್ರಸಂಗಗಳಲ್ಲಿ ಈ ಗುಂಪುಗಾರಿಕೆಯಿಂದ ಒಂದೇ ಕೃತಿಯ ಮೌಲ್ಯಮಾಪನ ಪೂರ್ವಪಶ್ಚಿಮ ವಾಗುತ್ತದೆ.

ವಿಮರ್ಶೆ ಅಂದರೆ ಪ್ರಶಂಸೆ ಅಲ್ಲ. ಲೇಖಕ ಹೊಗಳಿಕೆಯನ್ನೇ ನಿರೀಕ್ಷಿಸಬಾರದು. ಅದರಂತೆ ವಿಮರ್ಶಕ ವೈಯಕ್ತಿಕ ಭಾವನೆಗಳಿಂದ ಮುಕ್ತನಾಗಬೇಕು. ತನ್ನ ಗುಂಪಿನಾಚೆಯ ಕೃತಿಗಳನ್ನು ರಾಗದ್ವೇಷಗಳಿಗೆ ಈಡಾಗದೆ ಸಹೃದಯದಿಂದ ಕಾಣಬೇಕು. ಇಲ್ಲವಾದರೆ ವಿಮರ್ಶೆ ಕೃತಿನಿಷ್ಠವಾಗದೆ ವ್ಯಕ್ತಿನಿಷ್ಠವಾಗಬಹುದಾದ ಅಪಾಯವಿರುತ್ತದೆ.

ವಿಮರ್ಶೆಯ ಬೆಳವಣಿಗೆಗೆ ಪತ್ರಿಕೆಗಳ ಪಾತ್ರ ಬಹುಮುಖ್ಯವಾದುದು. ಇತರ ಕಡೆ ಯಂತೆ ಕನ್ನಡದಲ್ಲಿಯೂ ನಿಯತಕಾಲಿಕೆಗಳು ವಿಮರ್ಶೆಗೆ ಸ್ಥಳಾವಕಾಶವನ್ನು ಒದಗಿಸಿದವು ನವೋದಯ ಕಾಲದಲ್ಲಿ ಪ್ರಬುದ್ಧ ಕರ್ನಾಟಕ, ಜಯ ಕರ್ನಾಟಕ, ಜಯಂತಿ,ಜೀವನ, ಪುಸ್ತಕ ಪ್ರಪಂಚ, ಕತೆಗಾರ ಮೊದಲಾದ ಪತ್ರಿಕೆಗಳು ಆ ಕಾಲದ ಸಾಹಿತ್ಯ ವಿಮರ್ಶೆಗೆ ಅವಕಾಶ ಮಾಡಿಕೊಟ್ಟಂತೆ ಒಂದು ಕನ್ನಡದ ದಿನಪತ್ರಿಕೆಗಳಾದ 'ಪ್ರಜಾವಾಣಿ' 'ಸಂಯುಕ್ತ ಕರ್ನಾಟಕ' 'ಕನ್ನಡ ಪ್ರಭ', 'ಉದಯವಾಣಿ' ಇವು ರವಿವಾರದ ಸಾಹಿತ್ಯ ವಿಭಾಗದಲ್ಲಿ ವಿಮರ್ಶೆಗೆ

ಸ್ಥಾನ ಕಲ್ಪಿಸಿಕೊಟ್ಟಿವೆ. ಅದರಂತೆ ವಾರ ಪತ್ರಿಕೆಗಳು ವಿಮರ್ಶೆಗೆ ಮೊದಲಸ್ಥಾನ ಕೊಡು ತ್ತಿದ್ದು, ಈಗ ಪ್ರಮುಖ ಪತ್ರಿಕೆಗಳು ಅದನ್ನು ಕತ್ತುಹಾಕಿ, ಒಮ್ಮೊಮ್ಮೆ ಕೃತಿ ಪರಿಚಯ ಸಮೀಕ್ಷೆ ಕೊಡುತ್ತವೆ. ಇದಕ್ಕೆ ಕಾರಣ ಜನಸಾಮಾನ್ಯರ ಅಭಿರುಚಿಗಾಗಿ ಇತರ ಅಂಕಣ ಗಳನ್ನು ತುರುಕಬೇಕಾದದ್ದೇ. ನಿಯಮಿತ ಪುಸ್ತಕ ವಿಮರ್ಶೆ ವಾರ ಪತ್ರಿಕೆಗಳಲ್ಲಿ ನಿಂತು ಹೋದಂತಾಗಿದೆ.

ಇತ್ತೀಚೆ ನವ್ಯ ಸಾಹಿತ್ಯ ಬೆಳೆದಂತೆ, ಬಂಡಾಯ, ದಲಿತ ಹುಟ್ಟಿಕೊಂಡಂತೆ ಕನ್ನಡ ದಲ್ಲಿ ವಿಮರ್ಶೆಗಾಗಿಯೇ ಹಲವು ಪತ್ರಿಕೆಗಳು ಜನ್ಮತಳೆದವು. ಲಹರಿ, ಸಾಕ್ಷಿ, ಸಂಕ್ರಮಣ ಮನ್ವಂತರ, ಪುಸ್ತಕ ಪುರವಣಿ, ಸಮೀಕ್ಷಕ, ಸಮನ್ವಯ, ಬಂಡಾಯ ಸಾಹಿತ್ಯ, ಪಂಚಮ, ಶೂದ್ರ, ಅಂಕಣ, ಋಜುವಾತು, ಗ್ರಂಥಲೋಕ, ಸಂಕೀರ್ಣ, ಸಾಹಿತ್ಯ ಸಂಗಾತಿ ಮೊದ ಲಾದ ಪತ್ರಿಕೆಗಳು ಕನ್ನಡ ಸಾಹಿತ್ಯದ ವಿವಿಧ ಆಯಾಮಗಳನ್ನು ದುರ್ಬೀನು ಹಚ್ಚಿ ನೋಡುತ್ತಲಿರುವುದು ವಿಮರ್ಶೆಗೆ ಆರೋಗ್ಯಕರ ಅಂಶ ಎಂದು ಹೇಳಬೇಕು. ನವ್ಯ ಸಾಹಿತ್ಯದೊಂದಿಗೆ ನವ್ಯ ವಿಮರ್ಶೆಯೂ ವಿಪುಲವಾಗಿ ಬೆಳೆದು ಬಂದಿತು.

ಪತ್ರಿಕೆಗಳು ಇನ್ನೊಂದು ಪದ್ಧತಿಯನ್ನು ಇಟ್ಟುಕೊಂಡಿದ್ದು, ವಿಮರ್ಶೆಯ ಬೆಳವಣಿಗೆಯ ದೃಷ್ಟಿಯಿಂದ ಅನುಕೂಲವಾಗಿದೆ. ಪ್ರಜಾವಾಣಿ, ಸುಧಾ, ಉದಯವಾಣಿ, ತುಷಾರ ಮೊದಲಾದ ಜನಪ್ರಿಯ ಪತ್ರಿಕೆಗಳು ತಮ್ಮ ವಿಶೇಷ ಸಂಚಿಕೆಗಳಲ್ಲಿ ಸಾಹಿತ್ಯದ ಅನೇಕ ಮುಖಗಳ ಬಗೆಗೆ ಪ್ರಶ್ನಾವಳಿ ಕೊಟ್ಟು ಪ್ರಸಿದ್ಧ ಲೇಖಕರ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿವೆ. ವಿಮರ್ಶೆಯ ದೃಷ್ಟಿಯಿಂದ ಸಾಹಿತ್ಯದ ಬೆಳವಣಿಗೆಯ ಎಲ್ಲ ಹಂತ ಗಳನ್ನು, ಆಯಾಮಗಳನ್ನು ಇವರಿಂದ ಅರಿಯಲು ಸಹಾಯಕವಾಗುತ್ತದೆ.

ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳು ಅನೇಕ ಸಂದರ್ಭಗಳಲ್ಲಿ ಲೇಖಕರ ಬಗೆಗೆ, ಕೃತಿಗಳ ಮೇಲೆ ಚರ್ಚೆ, ಗೋಷ್ಠಿ ಏರ್ಪಡಿಸಿ ಅವುಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುತ್ತ ಲಿವೆ. ಪ್ರಚಾರ ಉಪನ್ಯಾಸ ಪುಸ್ತಿಕೆಗಳಲ್ಲದೆ ವಿಶ್ವವಿದ್ಯಾಲಯಗಳು, ಪ್ರಬುದ್ಧ ಕರ್ನಾಟಕ, ಕರ್ನಾಟಕ ಭಾರತಿ, ಸಾಧನೆ ಇಂಥ ವಿಮರ್ಶೆಗೆ ಮೀಸಲಾದ ಪತ್ರಿಕೆಗಳನ್ನು ಪ್ರಕಟಿಸುತ್ತ ಲಿವೆ. ಬೆಂಗಳೂರು ವಿಶ್ವವಿದ್ಯಾಲಯವಂತೂ ಕೆಲವು ವರ್ಷ ಸತತ ಪ್ರಕಟಿಸಿದ 'ಸಾಹಿತ್ಯ ವಾರ್ಷಿಕ' ವಿಮರ್ಶೆಗಾಗಿ ಇತರ ಭಾರತೀಯ ಭಾಷೆಗಳಿಗೆ ಮಾದರಿಯಾಗಿದೆ. ಇಡೀ ವರ್ಷದ ಸಾಹಿತ್ಯ ಮೌಲ್ಯಮಾಪನ ನಡೆದದ್ದು, ಒಂದು ಅಪೂರ್ವ ಯೋಜನೆಯಾಗಿತ್ತು.

ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿಗಳು ಕೂಡ ನಗರ ಗ್ರಾಮ ಪ್ರದೇಶಗಳಲ್ಲಿ ಸಾಹಿತ್ಯ ಗೋಷ್ಠಿ, ವಿಚಾರ ಸಂಕೀರ್ಣ, ಕಮ್ಮಟಗಳನ್ನು ಏರ್ಪಡಿ ಸುತ್ತಲಿದ್ದು, ಇದು ಸಾಹಿತ್ಯ ಬೆಳವಣಿಗೆಯ ದೃಷ್ಟಿಯಿಂದ ಹಿತಕರವಲ್ಲದೆ, ವಿಮರ್ಶೆ ಕೂಡ ಜನಸಾಮಾನ್ಯರವರೆಗೂ ಮುಟ್ಟುತ್ತಲಿದೆ. ಜನಪ್ರಿಯ ಸಾಹಿತ್ಯ ಓದುಗರು ಕೂಡ ವಿಮರ್ಶಾ ದೃಷ್ಟಿಯಿಂದ ಕತೆ, ಕಾದಂಬರಿ, ಕಾವ್ಯಗಳನ್ನು ನೋಡುವಂತಾಗಿದೆ.

ಈಗ ಕನ್ನಡದಲ್ಲಿ ಅಪೂರ್ವವಾಗಿ ಬರುತ್ತಲಿರುವ ಗೌರವ ಗ್ರಂಥಗಳು, ಅಭಿನಂದನಾ ಗ್ರಂಥಗಳು, ಸ್ಮರಣ ಸಂಪುಟಗಳು ಸಹ ವಿಮರ್ಶೆಗೆ, ಸಾಹಿತ್ಯದ ಮರು ಮೌಲ್ಯಮಾಪನಕ್ಕೆ ಕಾರಣವಾಗಿವೆ. ಬಹುತೇಕವಾಗಿ ಕನ್ನಡದ ಎಲ್ಲ ಪ್ರಮುಖ ಸಾಹಿತಿಗಳ ಬಗೆಗೆ ಅಭಿನಂದನಾ ಗ್ರಂಥಗಳು ಪ್ರಕಟವಾಗಿದ್ದು, ಅವರ ಸಾಹಿತ್ಯ ಕೃಷಿಯು ಎಲ್ಲ ಮುಖಗಳ ವಿಮರ್ಶೆ ನಡೆದಿದೆ. ಇದು ಒಳ್ಳೆಯದಾದರೂ ಭಿಡೆಮುರವತ್ತಿಗಾಗಿ ಒಂದಿಷ್ಟು ಹೊಗಳು ವಿಮರ್ಶೆಯಾಗುತ್ತಿರುವ ಅಪಾಯವೂ ಇಲ್ಲದಿಲ್ಲ. ಕನ್ನಡದ ಪ್ರಾಚೀನ ಕವಿಗಳ ಬಗೆಗೆ, ಆಧುನಿಕ ಲೇಖಕರ ಬಗೆಗೆ ಮರುವಿಮರ್ಶೆ ನಡೆದದ್ದು ಸ್ತುತ್ಯ, ಇವುಗಳಲ್ಲಿ ಪಿಎಚ್.ಡಿ. ಪ್ರಬಂಧಗಳು, ವಿಶ್ವವಿದ್ಯಾಲಯದ ಪ್ರಕಟಣೆಗಳು, ಐ.ಬಿ.ಎಚ್. ಪ್ರಕಟಿಸಿದ 'ಕವಿಕಾವ್ಯ ಪರಂಪರೆ' ಮಾಲಿಕೆಯ ಗ್ರಂಥಗಳು ಉಲ್ಲೇಖನೀಯ.

ಸೃಜನ ಸಾಹಿತಿಯಾಗದವ ವಿಮರ್ಶಕನಾಗುತ್ತಾನೆ ಎಂಬ ಮಾತಿದೆ. ವಿಮರ್ಶಕರು ಸೃಜನ ಸಾಹಿತಿಗಳಲ್ಲ ಎಂದು ಹೇಳುತ್ತಾರೆ. 'ಸಾಹಿತ್ಯದಲ್ಲಿಯೂ ಕಲೆಯಲ್ಲಿಯೂ ಸೋತವರೇ ವಿಮರ್ಶಕರು' ಎಂದು ಬೆಂಜಮಿನ್ ಡಿಸ್ರೇಲಿ ಹೇಳುತ್ತಾನೆ. ವ್ಯಂಗ್ಯಾರ್ಥದಲ್ಲಿ ಈ ಮಾತುಗಳಿದ್ದಂತೆ, ಒಂದಿಷ್ಟು ಸತ್ಯಾಂಶವೂ ಇದ್ದಿರಬೇಕು. ಈ ಮಾತಿಗೆ ಅಪವಾದವಾಗಿ ಅನೇಕ ಸಾಹಿತಿಗಳು ವಿಮರ್ಶಕರಾಗಿದ್ದಾರೆ.

ಎಂದಿಗಿಂತ ಇಂದು ಕನ್ನಡ ವಿಮರ್ಶಾರಂಗ ತುಂಬ ಚಟುವಟಿಕೆಯುಳ್ಳದ್ದಾಗಿದೆ. ಹೊಸ ಸಿದ್ಧಾಂತಗಳ ನಿರೂಪಣೆಯ ಜತೆಗೆ ಹಳೆಯ ಕೃತಿಗಳ ಮರುಮೌಲ್ಯಮಾಪನ ನಡೆದಿದೆ. ಕಾವ್ಯದಂತೆ ಕಥಾ ಸಾಹಿತ್ಯಕೂಡ ಹೆಚ್ಚು ಹೆಚ್ಚಾಗಿ ಅನೇಕ ಮುಖದ ಪರಿಶೀಲನೆಗೆ ಒಳಗಾಗುತ್ತಲಿದೆ, ಚರ್ಚೆಗೆ ಈಡಾಗಿದೆ.

ಜಿ. ಎಸ್. ಶಿವರುದ್ರಪ್ಪನವರು 'ವಿಮರ್ಶೆಯ ಪೂರ್ವಪಶ್ಚಿಮ'ದಲ್ಲಿ (೧೯೬೧) ಕನ್ನಡದಲ್ಲಿ ಮೊದಲ ಬಾರಿಗೆ ವಿಮರ್ಶೆಯ ಶಾಸ್ತ್ರೀಯ ವಿವೇಚನೆಯನ್ನು ಮಾಡಿಕೊಟ್ಟರು. ಪಾಶ್ಚಾತ್ಯ ಪೌರ್ವಾತ್ಯ ಕಾವ್ಯ ಮೀಮಾಂಸೆಯ ಶಾಸ್ತ್ರೀಯ ಅಧ್ಯಯನ ಇಲ್ಲಿಂದ ಆರಂಭವಾಯಿತು. ಅನಂತರ ಬಂದ ಎಚ್. ತಿಪ್ಪೇರುದ್ರಸ್ವಾಮಿಯವರ 'ಸಾಹಿತ್ಯ ವಿಮರ್ಶೆಯ ಮೂಲತತ್ವಗಳು' (೧೯೭೦) ಭಾರತೀಯ ಕಾವ್ಯ ಮೀಮಾಂಸೆಯ ವಿಸ್ತಾರವಾದ ಹಿನ್ನೆಲೆಯಲ್ಲಿ ಸಾಹಿತ್ಯ ವಿಮರ್ಶೆಯ ಮೂಲಭೂತ ಸಿದ್ಧಾಂತಗಳನ್ನು ನಿರೂಪಿಸಿತು. ಕೀರ್ತಿನಾಥ ಕುರ್ತಕೋಟಿ ಅವರ 'ಯುಗಧರ್ಮ ಹಾಗೂ ಸಾಹಿತ್ಯ ದರ್ಶನ' ದಿಂದ ಇಂದಿನ ಕನ್ನಡ ವಿಮರ್ಶೆ ವಿಶಾಲವಾದ ವ್ಯಾಪ್ತಿಯನ್ನು ಪಡೆಯಿತು.

ಈಗ ಬರುತ್ತಲಿರುವ ವಿಮರ್ಶೆ ಪುಸ್ತಕ ರೂಪವಲ್ಲಾಗಲಿ, ಪತ್ರಿಕೆಗಳಲ್ಲಾಗಲಿ ಅರ್ಥಪೂರ್ಣವಾಗಿದೆ. ವಿಮರ್ಶೆಯ ವ್ಯಾಪ್ತಿಯಲ್ಲಿ ಗಮನ ಸೆಳೆಯುವ ನೂರಾರು ಗ್ರಂಥಗಳು ಬಂದಿವೆ. ಹಾ. ಮಾ. ನಾಯಕ ಅವರು ವಿವಿಧ ಪತ್ರಿಕೆಗಳಿಗೆ ಬರೆಯುತ್ತಿರುವ ಅಂಕಣಗಳಲ್ಲಿ ಬರುತ್ತಲಿರುವ ಹಾಗೂ 'ಗ್ರಂಥಲೋಕ'ದಲ್ಲಿ ಮಾಡಿಕೊಟ್ಟ ಪುಸ್ತಕಗಳ

ವಿಮರ್ಶಾತ್ಮಕ ದೃಷ್ಟಿ ಕುತೂಹಲಕರವಾದ ಬೆಳವಣಿಗೆ, ಎಲ್ಲ ಸಂಗ್ರಹಗಳು ಪುಸ್ತಕ ರೂಪ ದಲ್ಲಿ ಪ್ರಕಟವಾಗುತ್ತಿರುವುದು ವಿಮರ್ಶಾ ಅಧ್ಯಯನಕ್ಕೆ ಒಂದು ಒಳ್ಳೆಯ ಅವಕಾಶವಾಗಿದೆ. 'ಸಂಪುಟ', 'ಸಂಪದ', 'ಸಮೂಹ', 'ಸಂಪರ್ಕ' ಮತ್ತು 'ವರ್ತಮಾನ' ಇವು ಅವರ ವಿಮರ್ಶಾ ಸಾಹಿತ್ಯದ ಇತ್ತೀಚಿನ ಕಾಣಿಕೆಗಳು.

ನವ್ಯಕಾವ್ಯ, ಸಣ್ಣಕತೆ ಹಾಗೂ ತೇಜಸ್ವಿ ಸಾಹಿತ್ಯ ಕುರಿತು ಸ್ಪಷ್ಟ ಧೋರಣೆ ತಳೆಯುವ ಜಿ. ಎಚ್. ನಾಯಕರ 'ಅನಿವಾರ್ಯ', ಪಾಶ್ಚಾತ್ಯ ವಿಮರ್ಶಕರ ತತ್ವ ಪ್ರಣಾಳಿಗಳನ್ನು ವಿಶ್ಲೇಷಿಸಿ, ಕೃತಿಗಳ ಬಗೆಗೆ ಇನ್ನಿಷ್ಟು ಧೋರಣೆ ಹಾಗೂ ವಿಷಯದ ಬಗೆಗೆ ಒಂದಿಷ್ಟು ಗಟ್ಟಿಯಾದ ತಾತ್ವಿಕ ಹಿನ್ನೆಲೆಯನ್ನು ಕೊಡುವ ಗಂಭೀರ ಚಿಂತನೆಯಟಿ ಟಿ. ಪಿ. ಅಶೋಕ ಅವರ 'ಹೊಸ ಹೆಜ್ಜೆ ಹೊಸ ಹಾದಿ' ಮಹತ್ವದ ಕೃತಿಗಳು. ಅಶೋಕ ಅವರ 'ನವ್ಯ ಕಾದಂಬರಿಯ ಪ್ರೇರಣೆಗಳು' 'ಕಾರಂತರ ಕಾದಂಬರಿಗಳಲ್ಲಿ ಗಂಡು ಹೆಣ್ಣು' ಕೂಡ ವಿಮರ್ಶೆಯ ಬೆಳವಣಿಗೆಯ ದೃಷ್ಟಿಯಿಂದ ಮಹತ್ವದ ಸಾಧನೆಗಳು. 'ನವ್ಯ ಕಾದಂಬರಿಯ ಪ್ರೇರಣೆಗಳು' ಇದರಲ್ಲಿ ಅಶೋಕ ಅವರು ಮೊದಲ ಭಾಗದಲ್ಲಿ ಪ್ರಭಾವಿ ಪಾಶ್ಚಾತ್ಯ ಲೇಖಕರಾದ ಲಾರೆನ್ಸ್, ಕಾಮೂ, ಲೀವಿಸ್ ಅವರ ಪರಿಚಯವನ್ನು ಮಾಡಿ ಕೊಟ್ಟು, ಎರಡನೆಯ ಭಾಗದಲ್ಲಿ ನಮ್ಮ ಲೇಖಕರ ಗುಣದೋಷಗಳನ್ನು ವಸ್ತುನಿಷ್ಠವಾಗಿ ತೋರಿದ್ದಾರೆ.

ಇಂದಿನ ಮುಖ್ಯ ವಿಮರ್ಶಕರಲ್ಲಿ ಒಬ್ಬರಾದ ಗಿರಡ್ಡಿ ಗೋವಿಂದರಾಜರ 'ಸಾಹಿತ್ಯ ಮತ್ತು ಪರಂಪರೆ' ಇದು ಸಮೀಕ್ಷಾತ್ಮಕ ಲೇಖನಗಳಲ್ಲಿಯ ವಿಶ್ಲೇಷಣೆಯನ್ನು ಮುಖ್ಯ ವಸ್ತುವನ್ನಾಗಿಸಿಕೊಂಡಿದೆ. ವಿಮರ್ಶೆಯ ಬಗೆಗೆ ಗಿರಡ್ಡಿಯವರದು ಖಚಿತವಾದ ಧೋರಣೆ. ಕನ್ನಡ ಕಾವ್ಯ ಪಡೆಯುತ್ತಿರುವ ಹೊಸ ತಿರುವುಗಳ ಬಗೆಗೆ ಹೇಳಿ ಕೆ. ಎಸ್. ನಿಸಾರ್ ಅಹ್ಮದ್ ಅವರು 'ಇದು ಬರಿ ಬೆಳಗಲ್ಲೋ ಅಣ್ಣ'ದಲ್ಲಿ ತಮ್ಮ ಕಾವ್ಯವನ್ನು ಕೂಡ ವಿಶ್ಲೇಷಿಸಿದ್ದು ವಿಶೇಷ. ಸೃಜನಶೀಲ ಸಾಹಿತಿಯ ಈ ವಿಮರ್ಶೆಯ ಸಂಕಲನವು ಹಲವು ಸಮಕಾಲೀನ ಸಮಸ್ಯೆಗಳನ್ನು ಗುರುತಿಸಿದೆ.

ವಿ. ಎಂ. ಇನಾಂದಾರ್ ಅವರ 'ಆ ಲೋಕ'ದಲ್ಲಿ ಕಾದಂಬರಿ ಪ್ರಕಾರಗಳನ್ನು ಹಿಂಜಿ ವಸ್ತುವನ್ನು ನೋಡಿದ ದೃಷ್ಟಿಕೋನ, ಮೂಡಿಬಂದ ವೈಚಾರಿಕತೆ ವಿಶಿಷ್ಟವಾಗಿದೆ. ಇವರದೇ ಆದ ಪಾಶ್ಚಾತ್ಯ ಕಾವ್ಯ ಮೀಮಾಂಸೆಯಲ್ಲಿ ವಿಮರ್ಶೆಯ ವಿವಿಧ ಹಂತಗಳನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಟ್ಟ ಮಹತ್ವದ ಕೃತಿಯಾಗಿದೆ. ಎಂ. ಬಿ. ಕೊಟ್ರಶೆಟ್ಟಿ ಅವರ 'ಪಾಶ್ಚಾತ್ಯ ಕಾವ್ಯ ತತ್ವಗಳು' ಕೂಡ ಇದೇ ಕಾರ್ಯ ನಿರ್ವಹಿಸಿದೆ.

ಜಿ. ಎಸ್. ಆಮೂರರ ಅವರ 'ಸಮಕಾಲೀನ ಕಥೆ ಕಾದಂಬರಿ ಹೊಸ ಪ್ರಯೋಗ ಗಳು' ಇದರಲ್ಲಿ ಕನ್ನಡ ಕಥಾ ಪರಂಪರೆಯ ಆಳವಾದ ಅಧ್ಯಯನವನ್ನು ಕಾಣುತ್ತೇವೆ. ಕೃತಿಯ ಬಂಧ, ಕಥಾತಂತ್ರ, ಸಂವಿಧಾನ ಇವುಗಳಿಗೂ ಅದು ಮೂಡಿಸುತ್ತಿರುವ ಆಶಯ,

ಜೀವನ ದೃಷ್ಟಿಗಳಿಗೂ ಇರುವ ಸಂಬಂಧವನ್ನು ಆಮೂರ ಅವರು ನಿರ್ದಿಷ್ಟವಾಗಿ ಗುರುತಿಸಿದ್ದಾರೆ. ಕನ್ನಡ ವಿಮರ್ಶೆ ಸಾಧಿಸುತ್ತಿರುವ ಪ್ರಬುದ್ಧ ಲಕ್ಷಣವನ್ನು ಈ ಕೃತಿಯಲ್ಲಿ ಕಾಣಬಹುದು.

ಅನ್ವಯಿಕ ವಿಮರ್ಶೆಯಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಅನುಸಂಧಾನ' ವಿಶಿಷ್ಟವಾದುದು. ಮಾಸ್ತಿ, ಕುವೆಂಪು, ಕಾರಂತ, ಅನಂತಮೂರ್ತಿ, ಭೈರಪ್ಪ ಹಾಗೂ ದೇವನೂರ ಮಹಾದೇವ ಅವರ ಕಾದಂಬರಿಗಳನ್ನು ವಿಶ್ಲೇಷಿಸಿ, ಎಲ್ಲವುಗಳನ್ನು ಇಡಿಯಾದ ದೃಷ್ಟಿಯಿಂದ ನರಹಳ್ಳಿ ಅವರು ನೋಡಿದ್ದಾರೆ. ಇವರ ಧೋರಣೆಯಲ್ಲಿ ಸ್ಪಷ್ಟವಾದ ನಿಲುವಿದ್ದು, ಇದರ ಜೊತೆಗೆ ಒಂದು ತಾತ್ವಿಕ ಹಿನ್ನೆಲೆಯೂ ಕೆಲಸಮಾಡಿದೆ.

ಸಂದರ್ಶನ, ವ್ಯಕ್ತಿಚಿತ್ರ ಇವುಗಳ ಜತೆ ದಲಿತರ ಬಗೆಗಿನ ಖಚಿತವಾದ ವಿಚಾರಧಾರೆಯಿರುವ ಯು. ಆರ್. ಅನಂತಮೂರ್ತಿಯವರ 'ಸಮಕ್ಷಮ'ದಲ್ಲಿ ಸಾಹಿತ್ಯ ಹಾಗೂ ರಾಜಕೀಯದ ಬಗೆಗೆ ಕಾಳಜಿಯಿದೆ. ಇಲ್ಲಿ ಅನಂತಮೂರ್ತಿಯವರ ವೈಚಾರಿಕ ವಿಮರ್ಶಾ ದೃಷ್ಟಿಯಿದೆ. ಎ. ಎನ್. ಮೂರ್ತಿರಾಯರ 'ಸಾಹಿತ್ಯ ಮತ್ತು ಸತ್ಯ' ಹಾಗೂ 'ವಿಮರ್ಶಾತ್ಮಕ ಪ್ರಬಂಧಗಳು' ವಿಮರ್ಶೆಯ ಸತ್ವಪೂರ್ಣ ಕೃತಿಗಳು. ಸಾಹಿತ್ಯ, ಕಲೆ, ಸಂಸ್ಕೃತಿಗಳ ಬಗೆಗಿರುವ ಪ್ರಬಂಧಗಳು ಮೂರ್ತಿರಾಯರ ಪ್ರೌಢವಿಚಾರ ಹಾಗೂ ಪ್ರಬುದ್ಧ ಜೀವನ ದೃಷ್ಟಿಗೆ ಒಳ್ಳೆಯ ಉದಾಹರಣೆಯಾಗಿವೆ.

ಮಾಧವ ಕುಲಕರ್ಣಿ ಅವರ 'ತುಡಿತ'ದಲ್ಲಿ ಇತ್ತೀಚಿನ ನಾಟಕ ಹಾಗೂ ಕಾವ್ಯವನ್ನು ಕುರಿತಾದ ವಿಮರ್ಶಾತ್ಮಕ ಲೇಖನಗಳಿವೆ. ಕುಲಕರ್ಣಿ ಅವರು ಇಲ್ಲಿ 'ಸಾವಯವ ಶಿಲ್ಪ ಸಮಗ್ರೀಕರಣ ಕಲ್ಪನೆಯೇ ಇದುವರೆಗಿನ ಬಹುತೇಕವಾಗಿ ನಡೆದ ನಾಟಕ, ಗದ್ಯಗಳ ವಿಮರ್ಶೆಯಿಂದ ಆ ಸಾಹಿತ್ಯಗಳಿಗೆ ಧಕ್ಕೆ ಉಂಟಾಗಿದೆ' ಎಂದು ಹೇಳುತ್ತಾರೆ. ಡಿ. ಎಂ. ಶಂಕರ್ ಅವರು 'ನಿರ್ವಹಣೆ'ಯಲ್ಲಿ ವಿಮರ್ಶೆಯ ಸಮಸ್ಯೆ, ಶೈಲಿ ಹಾಗೂ ಸಂವಹನಕ್ಕೆ ಸಂಬಂಧಿಸಿದ ಅನೇಕ ವಿಚಾರಗಳ ಬಗೆಗೆ ಆಲೋಚಿಸಿದ್ದಾರೆ.

ನವ್ಯ ವಿಮರ್ಶೆಯ ನೆಲೆಗಟ್ಟುಗಳನ್ನು ಒಪ್ಪದ ಶಂಕರ ಮೊಕಾಶಿ ಪುಣೇಕರರು 'ಸಾಹಿತ್ಯ' ಮತ್ತು 'ಅಭಿರುಚಿ'ಯಲ್ಲಿ ತಮ್ಮದೇ ಆದ ನಿಲುವನ್ನು ತಳೆಯುತ್ತಾರೆ. ಇತ್ತೀಚಿನ ಕನ್ನಡ ಸಾಹಿತ್ಯ ಹಾಗೂ ವಿಮರ್ಶೆಗಳಲ್ಲಿ ಕಂಡುಬರುತ್ತಿರುವ ಅನಾರೋಗ್ಯಕರ ಪ್ರವೃತ್ತಿಗಳನ್ನು ಪುಣೇಕರ ಎತ್ತಿ ತೋರಿಸುತ್ತಾರೆ. ಪಾಶ್ಚಾತ್ಯ ಕೃತಿಗಳನ್ನು ಅನುಕರಿಸುವ ಪ್ರವೃತ್ತಿಯನ್ನು ನಿರ್ಮಿಸುವಲ್ಲಿ ಇಂದಿನ ವಿಮರ್ಶೆ ದೊಡ್ಡ ಪಾತ್ರ ವಹಿಸಿದೆ ಎಂದು ಆರೋಪಿಸಿದ್ದಾರೆ.

ಎಚ್.ಎಸ್. ರಾಘವೇಂದ್ರರಾವ್ ಅವರು ತಮ್ಮ 'ವಿಶ್ಲೇಷಣೆ' ಕೃತಿಯಲ್ಲಿ ಬೇಂದ್ರೆ ಹಾಗೂ ರಾಜರತ್ನಂ ಅವರ ಕಾವ್ಯವನ್ನು ಹೊಸ ನಿಟ್ಟಿನಿಂದ ಪರಿಶೀಲಿಸಿ ಆಸಕ್ತಿ ಕೆರಳಿಸಿದ್ದಾರೆ. ಕಾವ್ಯದಂತೆ ಕಾದಂಬರಿಗಳನ್ನೂ ಸಹ ಪ್ರಾಯೋಗಿಕ ವಿಮರ್ಶೆಯಲ್ಲಿ ಕಂಡಿದ್ದು

ವಿಶೇಷ. ಒಂದು ಕೃತಿಯು ವಿಮರ್ಶೆಗೆ ಮಾಡಿಕೊಳ್ಳಬೇಕಾದ ಸಿದ್ಧತೆ ಹಾಗೂ ಸಮರ್ಥನೆಗಳ ಅಗತ್ಯತೆಗಳ ಬಗೆಗೆ ರಾಘವೇಂದ್ರರಾವ್ ಅವರ ಬರಹಗಳಿಂದ ತಿಳಿಯಬಹುದಾಗಿದೆ.

ಜಾ. ಗೋ. ಅವರು ತಮ್ಮ 'ಕಾವ್ಯ ಮಂಥನ'ದಲ್ಲಿ ಹತ್ತು ಜನ ಕವಿಗಳ ಹತ್ತು ಕವಿತೆಗಳನ್ನು ವಿಶ್ಲೇಷಿಸಿದ್ದಾರೆ. ಕವಿತೆಗಳ ಜೊತೆಯಲ್ಲಿಯೇ ವಿಮರ್ಶೆಯಿದೆ. ಕವಿತೆಗಳ ರಸಗ್ರಹಣ ಮಾಡಿಸಿ ಅವುಗಳ ಸತ್ವವನ್ನು ಜಾ. ಗೋ. ತೋರಿಸಿದ್ದಾರೆ. ಅಲ್ಲದೆ ಕವಿತೆಗಳ ಎಲ್ಲ ಆಯಾಮಗಳನ್ನು ಗುರುತಿಸಿ ನಿರ್ಣಾಯಕ ವಿಮರ್ಶೆ ಮಾಡಿದ್ದಾರೆ. ವಿಮರ್ಶಾ ಕ್ಷೇತ್ರದಲ್ಲಿ ಇದೊಂದು ವಿಶಿಷ್ಟವಾದ ಕೃತಿ.

ದೇಜಗೌ ಅವರ 'ಗದ್ಯಶೈಲಿ' ಇಂದಿನ ಕನ್ನಡ ಗದ್ಯಶೈಲಿಯನ್ನು ಹಿಂಜಿನೋಡಿದ ಸಮರ್ಥ ಕೃತಿಯಾಗಿದೆ. ಇದರಿಂದ ಒಂದು ಕೊರತೆ ನೀಗಿದಂತಾಗಿದೆ. ಗದ್ಯ ಶೈಲಿಯ ಸಿದ್ಧಾಂತವನ್ನು ದೇಜಗೌ ವಿಚಾರ ವಿಮರ್ಶೆಗಳಿಗೆ ಮಾದರಿಯಾಗುವಂತೆ ನೀಡಿದ್ದಾರೆ. ಕನ್ನಡದ ವಿಚಾರವಾದಿಗಳಲ್ಲಿ ಒಬ್ಬರಾದ ಗೌರೀಶ ಕಾಯ್ಕಿಣಿ ಅವರು ತಮ್ಮ 'ಕಟಾಕ್ಷ'ದಲ್ಲಿ ಕಾವ್ಯ ಹಾಗೂ ವಿಮರ್ಶೆ ಬಗೆಗೆ ಮಹತ್ವದ ಚರ್ಚೆ ಮಾಡಿದ್ದಾರೆ. ಇಲ್ಲಿ ಕಾಯ್ಕಿಣಿ ಅವರು "ಆಧುನಿಕ ಪ್ರಜ್ಞೆಯ ಪಾಶ್ಚಾತ್ಯ ತೆಕ್ಕೆಯಲ್ಲಿ ಸಿಕ್ಕವರಿಗಷ್ಟೇ ಇಂದಿನ ಸಾಹಿತ್ಯಿಕ ವಿಮರ್ಶೆ ಅರ್ಥವಾಗುತ್ತದೆ, ಶಕ್ಯವಾಗುತ್ತದೆ, ಇಷ್ಟವಾಗುತ್ತದೆ. ವಿಮರ್ಶಕರು ಮೆಚ್ಚುವ ಕೃತಿ ಜನಕ್ಕೆ ಸೇರುವುದಿಲ್ಲ. ಜನ ಮೆಚ್ಚಿದ ಕೃತಿ ವಿಮರ್ಶಕರಿಗೆ ಮೆಚ್ಚಿಕೆಯಾಗುವದಿಲ್ಲ" ಎಂದು ಹೇಳುವ ಮಾತನ್ನು ಕೂಡ ನಾವು ಗಂಭೀರವಾಗಿ ವಿಚಾರಿಸಬೇಕಾಗಿದೆ.

ಪಿ. ವಿ. ನಾರಾಯಣ ಅವರು 'ವಚನ ವ್ಯಾಸಂಗ'ದಲ್ಲಿ ಶಿವಶರಣರ ವಚನಗಳನ್ನು ಹೊಸ ದೃಷ್ಟಿಯಿಂದ ಕಂಡಿದ್ದು ವಿಶೇಷವಾಗಿದೆ. ಗಂಗಾಧರ ಮೊದಲಿಯಾರ್ ಸಂಪಾದಿಸಿದ 'ಬಂಡಾಯ ಸಾಹಿತ್ಯ–ನೆಲೆ ಬೆಲೆ'ಯ ಲೇಖನಗಳು ಬಂಡಾಯ ಸಾಹಿತ್ಯ ಸಂಘಟನೆಯ ಹಿನ್ನೆಲೆಯನ್ನು ಪರಿಚಯ ಮಾಡಿಕೊಡುತ್ತವೆ. 'ನಮ್ಮ ಸಾಹಿತ್ಯ ಬೇರುಗಳನ್ನು ನಮ್ಮಲ್ಲೇ ಗುರುತಿಸಿಕೊಳ್ಳುವುದು ಮುಖ್ಯ' ಎಂಬ ಇಲ್ಲಿಯ ಒಂದು ಮಾತು ಬಂಡಾಯ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಆರೋಗ್ಯಕರ.

ಅತ್ಯಂತ ಮಹತ್ವದ ವಿಮರ್ಶಕರಲ್ಲಿ ಒಬ್ಬರಾದ ಕೆ. ವಿ. ನಾರಾಯಣ ಅವರು 'ಸಾಹಿತ್ಯ ತತ್ವ: ಬೇಂದ್ರೆ ದೃಷ್ಟಿ'ಯಲ್ಲಿ ತಾತ್ವಿಕ ವಿಚಾರಗಳನ್ನು ಹೇಳುತ್ತ, ಬೇಂದ್ರೆ ಅವರ ಇತಿಮಿತಿಗಳನ್ನು ಗುರುತಿಸಿದ್ದಾರೆ. ಬೇಂದ್ರೆಯವರ ಆಲೋಚನೆ, ಅವರ ಕಾವ್ಯ ಪರಂಪರೆ ಕುರಿತು ಅತ್ಯಂತ ಮೌಲಿಕವಾಗಿ ಚರ್ಚೆ ನಡೆಸಿದ್ದಾರೆ. ಎಚ್. ಎಸ್. ವೆಂಕಟೇಶಮೂರ್ತಿ ಅವರ 'ನೂರು ಮರ ನೂರು ಸ್ವರ' ಸಮಕಾಲೀನ ಕಾವ್ಯ ಕುರಿತಾದ ಪ್ರಾಮಾಣಿಕ ವಿಮರ್ಶೆಯ ಕೃತಿಯಾಗಿದೆ.

'ಪರ್ವ' ಕಾದಂಬರಿಯನ್ನೂ ಕುರಿತು ಅನೇಕ ಮುಖಗಳ ಚರ್ಚೆಯು ನೆಲೆಬೆಲೆ 'ಪರ್ವ: ಒಂದು ಸಮೀಕ್ಷೆ'ಯಲ್ಲಿದೆ. ಇದು ವಿಜಯಾ ಅವರ ಪ್ರಯತ್ನದ ಫಲ.

ಎಚ್. ಎಸ್. ವೆಂಕಟೇಶ್‌ಮೂರ್ತಿ ಹಾಗೂ ರಾಘವೇಂದ್ರ ಪಾಟೀಲರು ಸಂಪಾದಿಸಿದ 'ಹೊಸ ಕಾವ್ಯದ ಮುನ್ನೆಲೆ'ಯಲ್ಲಿ ನವ್ಯಕಾವ್ಯದ ಸಮೀಕ್ಷೆ ನಡೆದಿದೆ. ನವ್ಯ ಕವಿತೆಯನ್ನು ಅನೇಕ ಮುಖಗಳಿಂದ ಅರ್ಥಮಾಡಿಕೊಳ್ಳಬಹುದೆಂದು ಈ ಕೃತಿಯಿಂದ ಸಾಧಿತವಾಗಿದೆ. ರಾಗೌ ಅವರು 'ಕುವೆಂಪು ಸಾಹಿತ್ಯ ವಿಮರ್ಶನ'ದಲ್ಲಿ ಕುವೆಂಪು ಅವರ ಸಾಹಿತ್ಯದ ವಿವಿಧ ಮುಖಗಳನ್ನು ಆತ್ಮೀಯವಾಗಿ ನಿರೂಪಿಸಿದ್ದಾರೆ. ಅದರಂತೆ ಶ್ರೀಕಂಠ ಕೂಡಿಗೆ ಅವರ 'ಜಾದಗೆ' ಸಂಕಲನದಲ್ಲಿ ಕೂಡ ಕುವೆಂಪು ಅವರ ಸಾಹಿತ್ಯದ ಬಗೆಗಿನ ಬರಹಗಳು ಲವಲವಿಕೆಯಿಂದ ಗಮನ ಸೆಳೆಯುತ್ತವೆ.

ತೂಕಬದ್ಧ ಮಾತಿಗೆ ಹೆಸರಾದ ಗುರುಲಿಂಗ ಕಾಪಸೆ ಅವರ 'ಸಾಹಿತ್ಯ ಸಂಬಂಧ' ಕೂಡ ಪ್ರಾಚೀನ–ಅರ್ವಾಚೀನ ಕೃತಿಗಳ ತೂಕಬದ್ಧವಾದ ವಿಮರ್ಶಾ ಕೃತಿಯಾಗಿದೆ. ಬಿ. ಎ. ಸನದಿ ಅವರು 'ಜನ ಕಾವ್ಯ ದೃಷ್ಟಿ'ಯಲ್ಲಿ ಕಾವ್ಯದಲ್ಲಿಯ ಹೊಸ ಗೆಲವು ಕಂಡಂತೆ ವಚನಗಳಲ್ಲಿಯ ವರ್ತಮಾನ ಪ್ರಜ್ಞೆಯನ್ನು ತೋರುತ್ತಾರೆ. ಸಿದ್ಧಲಿಂಗ ಪಟ್ಟಣಶೆಟ್ಟಿ ಅವರ 'ಅನುಶೀಲನ'ದಲ್ಲಿ ಇಂದಿನ ಕನ್ನಡ ಕಾವ್ಯವನ್ನು ಕಾಳಜಿಯಿಂದ ವಿಶ್ಲೇಷಿಸಿದ್ದಾರೆ. 'ಸಾಹಿತ್ಯ, ಸೃಜನಶೀಲತೆ ಮತ್ತು ನಾನು' ಈ ಕೃತಿಯಲ್ಲಿ ಮಹತ್ತರ ಸೃಜನಶೀಲ ಲೇಖಕರಲ್ಲಿ ಒಬ್ಬರಾದ ಯಶವಂತ ಚಿತ್ತಾಲ ಅವರು ತಮ್ಮ ಸಾಹಿತ್ಯ ರಚನೆಯ ಹಿಂದಿರುವ ಪ್ರೇರಣೆಗಳನ್ನು ಪ್ರಕ್ರಿಯೆಗಳನ್ನು ವಿವರಿಸಿದ್ದಾರೆ.

ಈಗ ಕನ್ನಡ ವಿಮರ್ಶೆ ಎಡಪಂಥೀಯ ಸಿದ್ಧಾಂತವನ್ನು ಪಡೆದುಕೊಳ್ಳುತ್ತಿರುವುದಕ್ಕೆ ಉದಾಹರಣೆಯಾಗಿ ಕೆಲವು ವಿಮರ್ಶೆಗಳು ಹೊರಬಂದಿವೆ. ಸಿ. ವೀರಣ್ಣ ಅವರ ಎರಡು ವಿಮರ್ಶಾ ಗ್ರಂಥಗಳು 'ಮಾರ್ಕ್ಸವಾದ: ತತ್ವಶಾಸ್ತ್ರ ಮತ್ತು ಸಾಹಿತ್ಯ' ಹಾಗೂ 'ಸಾಹಿತ್ಯ ಮತ್ತು ಸಮುದಾಯ ಪ್ರಕಟವಾಗಿವೆ. ಸಾಮಾಜಿಕ ವಿಶ್ಲೇಷಣೆಯೇ ಸಾಹಿತ್ಯ ವಿಮರ್ಶೆಯ ಪ್ರಮುಖ ಮತ್ತು ಅತ್ಯಗತ್ಯ ಕೆಲಸ ಎಂದು ವೀರಣ್ಣ ಹೇಳುತ್ತಾರೆ. ರಮಜಾನ ದರ್ಗಾ ಅವರ 'ಸಾಹಿತ್ಯ ಮತ್ತು ಸಮಾಜ' ಕೂಡ ಬದಲಾಗುತ್ತಿರುವ ಸಾಹಿತ್ಯದ ಒಲವನ್ನು ಸಮರ್ಥಿಸುತ್ತದೆ.

ಈ ಹಿಂದಿನ ವಿಮರ್ಶೆಯ ಗತಿಯನ್ನು ಬದಲಿಸಿ, ಓದುಗರಲ್ಲಿ ಹೊಸ ಆಲೋಚನೆಯನ್ನು ಮೂಡಿಸುವ ಕೃತಿ ಡಿ. ಆರ್. ನಾಗರಾಜ್ ಅವರ 'ಅಮೃತ ಮತ್ತು ಗರುಡ'. ಕನ್ನಡದಲ್ಲಿ ಎಡಪಂಥೀಯ ವಿಮರ್ಶೆಗೆ ಒಂದು ನಿಲುವು ತಂದುಕೊಡುವ ಕನ್ನಡ ವಿಮರ್ಶೆಯ ಒಂದು ಮಹತ್ವದ ಕೃತಿಯಾಗಿದೆ. ಡಿ. ಎಸ್. ವೆಂಕಟರಾಮ್ ಅವರ 'ದುಡಿಯುವವರ ದನಿ ಮತ್ತು ಇತರ ಲೇಖನಗಳು', ಎಚ್. ಎಂ. ಚೆನ್ನಯ್ಯ ಅವರ 'ಪ್ರಾಸಂಗಿಕ' ಇವು ಕೂಡ ಎಡಪಂಥೀಯ ಧೋರಣೆಗೆ ಪಕ್ಕಾಗಿ, ವಿಮರ್ಶೆಯನ್ನು ಬೇರೊಂದು ಆಯಾಮದಿಂದ ಕಂಡ ಕೃತಿಗಳಾಗಿವೆ. ಜಿ. ರಾಮಕೃಷ್ಣ ಅವರ 'ಮುನ್ನೋಟ' ಇಂದಿನ ಕನ್ನಡದ ಅನೇಕ ಬರಹಗಳ ಕಾಮಾಲೆಯನ್ನು ನಿವಾರಿಸಬಲ್ಲ ವೈಚಾರಿಕ ವಿಮರ್ಶೆಯಾಗಿದೆ.

ಕನ್ನಡದಲ್ಲಿ ವಿಮರ್ಶಾ ಸಾಹಿತ್ಯಕ್ಕೆ ತೂಕ ನೀಡಿದ ಜಿ. ಎಸ್. ಶಿವರುದ್ರಪ್ಪ ಅವರ ಇತ್ತೀಚಿನ ವಿಮರ್ಶಾ ಕೃತಿ 'ಕಾವ್ಯಾರ್ಥ ಚಿಂತನ' ಕನ್ನಡ ವಿಮರ್ಶೆಯಲ್ಲಿಯೇ ಒಂದು ಮೈಲಿಗಲ್ಲು. ಭಾರತೀಯ ಕಾವ್ಯ ಮೀಮಾಂಸೆ ಮತ್ತು ಪಾಶ್ಚಾತ್ಯ ಕಾವ್ಯ ಮೀಮಾಂಸೆಗಳ ತೌಲನಿಕ ಅಧ್ಯಯನದಿಂದ ಮೂಡಿಬಂದ ಮಹತ್ವದ ಕೃತಿಯಾಗಿದೆ. ತೀ.ನಂ.ಶ್ರೀ. ಅವರ 'ಭಾರತೀಯ ಕಾವ್ಯ ಮೀಮಾಂಸೆ'ಗೆ ಸರಿದೂಗಬಲ್ಲ ಅತ್ಯುತ್ತಮ ಕೃತಿ. ಇದು ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ ಕೂಡ ಗಳಿಸಿದೆ.

ಜಿ. ಎಲ್. ನಾಗಭೂಷಣ ಸ್ವಾಮಿಯವರ 'ವಿಮರ್ಶೆಯ ಪರಿಭಾಷೆ' ವಿಮರ್ಶಾ ಅಭ್ಯಾಸಿಗಳಿಗೆ ಒಂದು ಉತ್ತಮ ದರ್ಜೆಯ ಗ್ರಂಥವಾಗಿದೆ. ಪಾಶ್ಚಾತ್ಯ ಸಾಹಿತ್ಯದಿಂದ ಕನ್ನಡ ಸಾಹಿತ್ಯವು ನವೋದಯ ಕಾಲದಿಂದಲೂ ಪ್ರಭಾವ ಹಾಗೂ ಪ್ರೇರಣೆಗಳನ್ನು ಪಡೆದಿದೆ. ಇಂದು ನಮ್ಮ ಸಾಹಿತ್ಯ ಕೃತಿಗಳನ್ನು ವಿಮರ್ಶಿಸಲು ಪಾಶ್ಚಾತ್ಯ ವಿಮರ್ಶೆಯ ಪಾರಿಭಾಷಿಕ ಶಬ್ದಗಳು ಅನಿವಾರ್ಯ. ಈ ಕೃತಿಯಲ್ಲಿ ನಾಗಭೂಷಣ ಸ್ವಾಮಿಯವರು ಸಾವಿರಕ್ಕೂ ಹೆಚ್ಚು ಪಾರಿಭಾಷಿಕ ಪದಗಳ ಚರ್ಚೆ, ಪರಿಚಯ ಮಾಡಿಕೊಟ್ಟಿದ್ದಾರೆ. ಅನೇಕ ಉದಾಹರಣೆಗಳಿಂದ ಪಾರಿಭಾಷಿಕ ಶಬ್ದಗಳನ್ನು ಅರ್ಥೈಸಿದ್ದು, ವಿಮರ್ಶೆಯ ಅಭ್ಯಾಸಿಗಳಿಗೆ ಇದೊಂದು ಉತ್ತಮ ಮಾರ್ಗದರ್ಶಿಯಾಗಿದೆ.

ಇಂದು ವಿಮರ್ಶೆ ಎಲ್ಲ ರೀತಿಯಿಂದ ಬೆಳೆಯುತ್ತಲಿದೆ. ಇನ್ನೂ ಬೆಳೆಯಬೇಕಾಗಿದೆ. ಈಗ ಹಿಂದಿನ ಹಳಗನ್ನಡ ಹಾಗೂ ನಡುಗನ್ನಡದ ಸಾಹಿತ್ಯವನ್ನೂ ಕೂಡ ವಿಮರ್ಶಕರು ಕಾಳಜಿಯಿಂದ ಹೆಚ್ಚುಹೆಚ್ಚಾಗಿ ವಿಮರ್ಶಾ ದೃಷ್ಟಿಯಿಂದ ಅಧ್ಯಯನ ಮಾಡುತ್ತಲಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪಡೆದ ಇಂದಿನ ಮಹತ್ವದ ಸಾಹಿತಿಗಳಾದ ಕುವೆಂಪು, ಬೇಂದ್ರೆ, ಕಾರಂತ, ಮಾಸ್ತಿ ಅವರು ಮತ್ತೆ ಮತ್ತೆ ಮರುವಿಮರ್ಶೆಗಳಿಗೆ ಒಳಗಾಗುತ್ತಲಿದ್ದಾರೆ. ಹಿಂದಿನ ಇಂದಿನ ಸಾಹಿತಿಗಳ ಮರುಪರಿಶೀಲನೆಯ ಕಾರ್ಯ ಆಗಬೇಕಾದದ್ದೇ ಇದು ಕೂಡ ಇಂದಿನ ಅಗತ್ಯದ ಕಾರ್ಯ.

ಆದರೆ ವಿಮರ್ಶೆಯಲ್ಲಿ ಕೇವಲ ಪಾಶ್ಚಿಮಾತ್ಯ ವಿಮರ್ಶೆಯ ಹಡಿನೆಳಲು ಬೀಳದೆ ಭಾರತೀಯ ಕಾವ್ಯ ಮೀಮಾಂಸೆಯ ಅಧ್ಯಯನವೂ ಇಂದಿನ ಅವಶ್ಯಕತೆಯಾಗಿದೆ. ನಮ್ಮ, ನಮ್ಮೇತರ ಎಂದು ಗುಂಪುಮಾಡಿಕೊಂಡು, ಪರಸ್ಪರ ವಿಂಗಡಣೆಯಾಗಿ, ಕನ್ನಡ ಅಧ್ಯಾಪಕರು, ಇಂಗ್ಲಿಷ್ ಅಧ್ಯಾಪಕರು ಎಂದು ಬೇಲಿ ಹಾಕಿಕೊಂಡು ಪರಸ್ಪರ ದೂಷಣೆಯ ವಿಮರ್ಶೆಯಿಂದ ಸಾಹಿತ್ಯಕ್ಕೆ ಯಾವ ಪ್ರಯೋಜನವೂ ಇಲ್ಲ. ತಮ್ಮ ತಮ್ಮವರನ್ನೇ ಎತ್ತಿಕಟ್ಟುವ ಹೊಗಳಿಕೆ ಶಾಶ್ವತ ವಿಮರ್ಶೆಯೂ ಅಲ್ಲ.

ದಲಿತ ಹಾಗೂ ಬಂಡಾಯ ಸಾಹಿತಿಗಳ ಬಗೆಗೆ ಬರುವ ವಿಮರ್ಶೆ ಕುರಿತು, "ಒಬ್ಬ ದಲಿತ ಸಾಹಿತಿ ಯಾವ ಸಮಾಜದೊಳಗೆ, ಯಾವ ಸಂಸ್ಕೃತಿಯೊಳಗೆ ನಿಂತು ಬೆಳೆಯುತ್ತಿದ್ದಾನೆ ಎಂಬುದು ವಿಮರ್ಶಕರಿಗೆ ಅರಿವಿರಬೇಕು" ಎಂದು ದೇವನೂರ ಮಹಾದೇವ ಹೇಳಿದ ಮಾತನ್ನೂ ಸಹ ಗಮನಿಸಬೇಕಾಗಿದೆ.

ಇನ್ನೊಂದು ಮಹತ್ವದ ಮಾತು. ಯಾವನೇ ಒಬ್ಬ ವಿಮರ್ಶಕನಿಗೆ ಎಲ್ಲ ವಿಷಯುಗಳಲ್ಲಿ ಪರಿಣತಿ ಇರುವುದು ಸಾಧ್ಯವಿಲ್ಲ. ತಮಗೆ ನೀಗದ ವಿಷಯುಗಳಲ್ಲಿ ಕೈಹಾಕುವ ಪ್ರವೃತ್ತಿ ಸಲ್ಲದು. ಪೂರ್ವಗ್ರಹವಿಲ್ಲದೆ ವಿಮರ್ಶಕ ಮುಕ್ತ ಮನಸ್ಸಿನಿಂದ ವಿಮರ್ಶಕನ ಶಬ್ದಕ್ಕೆ ತಕ್ಕಂತೆ 'ಸಹೃದಯ' ಆಗಬೇಕಾಗಿದೆ. ಅಂದರೆ 'ವಿಮರ್ಶೆ' ನಿಜವಾದ ಅರ್ಥದಲ್ಲಿ ವಿಮರ್ಶೆಯಾಗುತ್ತದೆ. ಕುವೆಂಪು ಅವರು ಹೇಳಿದಂತೆ ಒಂದು ವಿಮರ್ಶೆ 'ಬೈ' ವಿಮರ್ಶೆ ಹಾಗೂ 'ಜೈ' ವಿಮರ್ಶೆ ಆಗಬಾರದು. ಅದು ಸಮತೂಕದ 'ಸೈ' ವಿಮರ್ಶೆಯಾದರೆ ಮಾತ್ರ ಸಾಹಿತ್ಯ ಬೆಳವಣಿಗೆಗೆ ಪೋಷಕ.

□ □

ಶರಣರ ವ್ಯಕ್ತಿಗತ ಸಂಬಂಧಗಳು ಮತ್ತು ಕ್ರಾಂತಿ

—ಡಾ. ಮ. ಗು. ಬಿರಾದಾರ

ವಿಶ್ವದ ಇಂದಿನ ಸಂಘರ್ಷ ಸಮಸ್ಯೆಗಳಿಗೆ ಪ್ರಮುಖ ಕಾರಣ ವ್ಯಕ್ತಿಗಳ ಪರಸ್ಪರ ಸಂಬಂಧ. ದಾಂಪತ್ಯದಿಂದಾದಿಯಾಗಿ ಪ್ರಪಂಚದ ಯಾವುದೇ ಸಂಘಟನೆಯಲ್ಲಿಯ ವಿರಸ, ಸೋಲು, ಗೆಲುವು ಅದರಲ್ಲಿ ಪಾಲ್ಗೊಂಡ ವ್ಯಕ್ತಿಗಳ ಸಂಬಂಧವನ್ನವಲಂಬಿಸಿರುತ್ತದೆ. ಒಂದು ಸಂಘಟನೆಯ ಯಶಸ್ಸು ಅದರಲ್ಲಿ ತಮ್ಮನ್ನು ತೊಡಗಿಸಿಕೊಂಡ ವ್ಯಕ್ತಿಗಳ ಪರಿಶುದ್ಧ ಚಾರಿತ್ರ್ಯ ಮತ್ತು ಒಡಲೆರಡೊಂದೇ ಜೀವವೆಂಬ ಸಂಬಂಧದಿಂದಾಗಿ ಸಾಧ್ಯವಾಗುತ್ತದೆ. ಇತಿಹಾಸದ ಪುಟಪುಟಕ್ಕೆ ಇದಕ್ಕೆ ಸಾಕ್ಷಿಗಳು ಮೂಡಿನಿಂತಿವೆ. ಜಗಳ, ಕೊಲೆ, ಕೋರ್ಟು, ಯುದ್ಧ ಎಲ್ಲವೂ ವ್ಯಕ್ತಿಗಳ ಸಂಬಂಧ ಕೆಟ್ಟಾಗಲೇ ಘಟಿಸಿದಂತಹವುಗಳು.

ವ್ಯಕ್ತಿಗಳ ಸಂಬಂಧಗಳನ್ನು ಕುಟುಂಬ, ಜಾತಿ, ಧರ್ಮ, ದೇಶ ಸಂಸ್ಕೃತಿಗಳನ್ನವಲಂಬಿಸಿಹಲವು ರೀತಿಗಳಲ್ಲಿ ಹೇಳಬಹುದು. ಆದರೆ ಇವೆಲ್ಲ ಸಂಬಂಧಗಳಲ್ಲಿ ಒಂದು ಸಂಬಂಧ ಬೇಕಾದಷ್ಟು ಬಂಧುರ, ಗಾಢವಾಗಿದ್ದರೂ ಇನ್ನೊಂದು ಸಂಬಂಧ ಅದನ್ನುಕೆಡಿಸಲು ಕಾರಣವಾಗಬಹುದು. ಉದಾಹರಣೆಗೆ: ಧರ್ಮದ ಹೆಸರಿನಲ್ಲಿ ನಾವು ಒಂದಾಗಿದ್ದರೂ ಜಾತಿಯ ಹೆಸರಿನಲ್ಲಿ ನಾವೇ ಆ ಸಂಬಂಧಗಳನ್ನು ಹಾಳುಮಾಡಿಕೊಳ್ಳಬಹುದು. ಜಾತಿಯ ಸಂಬಂಧಗಳನ್ನು ಕುಟುಂಬದ ಸಂಕುಚಿತಸಂಬಂಧ ತೊಡೆದುಹಾಕಬಹುದು. ಕುಟುಂಬದ ಸಂಬಂಧಗಳನ್ನು ವೈಯಕ್ತಿಕ ಪ್ರತಿಷ್ಠೆ, ಸ್ವಾರ್ಥ ಹಾಳುಮಾಡಬಹುದು. ಒಟ್ಟಿನಲ್ಲಿ ಮಾನವೀಯ ಸಂಬಂಧಗಳು ಮುಖ್ಯವೇ ಹೊರತು ಇನ್ನಾವ ಸಂಬಂಧಗಳೂ ಅಲ್ಲ. ಇಂದು ನಾವು ಈ ಸಂಬಂಧವನ್ನೇ ಮರೆತು ವಿಚಿತ್ರ ರೀತಿಯ ಉದ್ದೇಶಪೂರ್ಣ ಕೃತ್ರಿಮ ಸಂಬಂಧಗಳನ್ನು ಕಟ್ಟಲು ಕಲ್ಪಿಸಲು ಹೆಣಗುತ್ತೇವೆ. ಅವೆಲ್ಲ ತಳಪಾಯವಿಲ್ಲದ ಗೋಪುರದಂತೆ ಕುಸಿಯುತ್ತವೆ. ಹೀಗಾಗಿ ವ್ಯಕ್ತಿ ತನ್ನನ್ನೇ ಕೇಂದ್ರಬಿಂದುವಾಗಿರಿಸಿಕೊಂಡು ಬದುಕುವಲ್ಲಿ ಸದಾ ನಿರತನಾಗಿರುತ್ತಾನೆ. ಈ ಪ್ರಾಣಿ ಸ್ವಭಾವವನ್ನು ಮಿಕ್ಕಿ ನಿಲ್ಲದಿದ್ದರೆ ಮಾನವ ಮಾನವನಾಗುವದೆಂತು?

'ಕ್ರಾಂತಿ' ಇತ್ತೀಚಿನ ಬರಹ ಭಾಷಣಗಳಲ್ಲಿ ತೀರ ಬಳಕೆಗೆ ಬಂದ ಪದ. ಇಂಗ್ಲೀಷಿನ Revolution ಶಬ್ದದ ಅರ್ಥವನ್ನು ಪ್ರತಿಪಾದಿಸಲು, ಕನ್ನಡದಲ್ಲಿ ಬಳಕೆಯಲ್ಲಿ ಬಂದು ಸಂಸ್ಕೃತ ಶಬ್ದ. ಸಂಸ್ಕೃತದಲ್ಲಿ ಕ್ರಾಂತಿಗೆ Going, Proceeding ಎಂಬ ಅರ್ಥವಿದ್ದ ಈ ಶಬ್ದ, ಇಂಗ್ಲೀಷದ Revolution ಶಬ್ದದ ಅರ್ಥವನ್ನು ಹೊಂದಿಯೇ ಇಲ್ಲವೆನ್ನುವದನ್ನು ಬಹಳ ಜನ ಅರಿತಿಲ್ಲ. ರಷಿಯನ್ ರೆವಲ್ಯುಶನ್, ಫ್ರೆಂಚ್ ರೆವಲ್ಯುಷನ್‌ಗಳ

ವಿಚಾರ ತಲೆಯಲ್ಲಿ ತುಂಬಿಕೊಂಡವರಿಗೆ ಕ್ರಾಂತಿ ವಿಶೇಷ ಅರ್ಥವನ್ನೇ ಕೊಡುತ್ತಿದೆ. ಅದು ರೆವಲ್ಯುಷನ್ ಅರ್ಥದ ಕೇವಲ ರಾಜಕೀಯ ಕ್ಷಿಪ್ರ ಬದಲಾವಣೆಯನ್ನು ಮಾತ್ರ ನೆನಪಿಗೆ ತರುತ್ತದೆ. ಜೊತೆಗೆ ಕೊಲೆ, ಸುಲಿಗೆ, ರಕ್ತ ಮೊದಲಾದವುಗಳನ್ನು ಕಣ್ಮುಂದೆ ಕಟ್ಟಿ ದಮನಕಾರಿ ಕ್ರಿಯೆಯನ್ನು ಮನದಲ್ಲಿ ಮೂಡಿಸುತ್ತದೆ. ಯಾಕೆಂದರೆ ಒಮ್ಮೊಮ್ಮೆ ರಕ್ತರಹಿತ ಕ್ರಾಂತಿಯನ್ನು ಕುರಿತು ಮಾತು ಕೇಳಬರುತ್ತಿಲ್ಲವೆ? ಏನೇ ಆಗಲಿ, ಕನ್ನಡಿಗರಾದ ನಾವು ಇಂಗ್ಲೀಷದ ರೆವಲ್ಯುಶನ್, ಸಂಸ್ಕೃತದ ಕ್ರಾಂತಿ ಎರಡೂ ಸಮಾನಾರ್ಥದ ಪದಗಳೆಂದು ಕನ್ನಡದಲ್ಲಿ ಬಳಸುತ್ತಿರುವುದು ಹಲವಾರು ಅಸ್ಪಷ್ಟತೆಗೆ ಎಡೆಮಾಡಿ ಕೊಡುವಂತಾಗಿದೆ.

ಮೂಲ ರಾಜಕೀಯ (ಕಮ್ಯುನಿಸ್ಟ) ಕ್ಷೇತ್ರದಲ್ಲಿ ಬಳಕೆಯಾಗುವ ಈ ಪದ, ಈಗ ಅದು ಆ ಕ್ಷೇತ್ರಕ್ಕಷ್ಟೇ ಸೀಮಿತವಾಗಿ ಉಳಿಯಲಿಲ್ಲ. ಸಾಮಾಜಿಕ ಕ್ರಾಂತಿ, ಆರ್ಥಿಕ ಕ್ರಾಂತಿ, ಕೃಷಿ ಕ್ರಾಂತಿ, ಹಸಿರು ಕ್ರಾಂತಿ, ಬಿಳಿಯ ಕ್ರಾಂತಿ ಮೊದಲಾದ ಹಲವಾರು ಕಡೆ ಸಲೀಸಾಗಿ ಈ ಪದವನ್ನು ಬಳಸುತ್ತಿದ್ದೇವೆ. ಇಲ್ಲಿ 'ಸಮೃದ್ಧಿ' 'ಅಭಿವೃದ್ಧಿ' ಎಂಬ ಅರ್ಥ ಮೂಡುತ್ತದೆ. ಇತ್ತಿತ್ತಲಾಗಿ ಶೈಕ್ಷಣಿಕ ಕ್ರಾಂತಿ, ಸಾಹಿತ್ತಿಕ ಕ್ರಾಂತಿ ಎಂಬ ಪ್ರಯೋಗಗಳೂ ಇವೆ. ಇಂಥಲ್ಲಿ ಬದಲಾವಣೆ ಎಂಬ ಅರ್ಥ ಮಾತ್ರ ನಮಗೆ ಧ್ವನಿಸುತ್ತದೆ. ಆದರೆ ಇಂದು ಸರ್ವಸಾಮಾನ್ಯವಾಗಿ Revolution ದ ಅರ್ಥ ಗೊತ್ತಿರದವರಿಗೆ 'ಕ್ರಾಂತಿ' ಅಂದರೆ 'ಬದಲಾವಣೆ' ಎಂದು ಮಾತ್ರ ಅರ್ಥ ರೂಢಿಯಲ್ಲಿದೆ. ಏನೇ ಆಗಲಿ ಎಲ್ಲದರಲ್ಲಿ ಕ್ರಾಂತಿಯಾಗಬೇಕೆಂದು ಹೇಳುವ ನಮಗೆ ಕ್ರಾಂತಿಯ ಅರ್ಥ ಸ್ಪಷ್ಟವೂ ಸರ್ವಗ್ರಾಹಿಯೂ ಆಗಿಲ್ಲ. ಪ್ರಪಂಚದ ರಾಜಕೀಯ ಬದಲಾವಣೆಯ ಹೋರಾಟಗಳನ್ನು Revolution (ಕ್ರಾಂತಿ) ಎಂದು ಬಣ್ಣಿಸಿದಂತೆ ಭಾರತೀಯರ ಸ್ವಾತಂತ್ರ್ಯ ಹೋರಾಟವನ್ನು ಕ್ರಾಂತಿ (Revolution) ಎಂದು ಹೇಳಿಲ್ಲ.

ಸಾಮಾನ್ಯವಾಗಿ ಕ್ರಾಂತಿ ಅಂದರೆ ಬದಲಾವಣೆ ಎಂಬ ರೂಢಿಯ ಅರ್ಥವೇನೋ ಕೆಲವರಿಗಿದೆ. ಆದರೆ ಕ್ರಾಂತಿ ಮಾಡಬೇಕೆನ್ನುವ ಕೆಲವರಲ್ಲಿ ಇದ್ದ ವ್ಯವಸ್ಥೆಯ ಬಗ್ಗೆ ಸೇಡು ಎದ್ದು ಕಾಣುವದೇ ವಿನಃ 'ಏನು ಮಾಡಬೇಕು' ಎನ್ನುವ ಕಲ್ಪನೆ ಮಾತ್ರ ಇಲ್ಲವೇ ಇಲ್ಲ. ಹೀಗಾಗಿ ಈ ಪದ ಕ್ರೋಧ ಆಕ್ರೋಶಗಳನ್ನು ಅಭಿವ್ಯಕ್ತಪಡಿಸುವ ಶಬ್ದವಾಗಿ ಪರಿಣಮಿಸಿದೆಯೇ ವಿನಃ ಪ್ರಯೋಜನಕಾರಿಯಾದ ಯಾವ ನಿಶ್ಚಿತಾರ್ಥವನ್ನೂ ಅದು ಬಿಂಬಿಸುತ್ತಿಲ್ಲ.

ಒಬ್ಬ ವ್ಯಕ್ತಿ ಕ್ರಾಂತಿಯನ್ನು ಕುರಿತು ಮಾತನಾಡುತ್ತಿದ್ದರೆ ಅದನ್ನು ಹಾಸ್ಯಾಸ್ಪದವೆನ್ನಬೇಕೇನೋ! ಯಾಕೆಂದರೆ ಕ್ರಾಂತಿ ಹೇಳಿಕೊಂಡು ಒಬ್ಬ ವ್ಯಕ್ತಿ ಮಾಡಬೇಕಾದ ಕೆಲಸವಲ್ಲ. ಅದು ಸಾಮೂಹಿಕ ಶಕ್ತಿಯ ಕಾರ್ಯಾನಂತರದ ಯಶಸ್ವಿ ಬದಲಾವಣೆಗೆ ಬಂದ ಹೆಸರು. ಒಂದು ಬದಲಾವಣೆಯ ಯಶಸ್ಸಿನ ವಿಚಾರ ಒಬ್ಬನದಾಗಿರಬಹುದು. ಆದರೆ ಅದನ್ನು ಸ್ವೀಕರಿಸಿಕೊಂಡ ಸಾಮೂಹಿಕ ಶಕ್ತಿ ಅಭಿವ್ಯಕ್ತಿ ಪಡೆದಾಗ ಮಾತ್ರ

ಕಾರ್ಯರೂಪಕ್ಕಿಳಿದು ಕ್ರಾಂತಿ ಎನ್ನಿಸಿಕೊಳ್ಳುತ್ತದೆ. ಅದು ಫಲಪ್ರದವಾಗದಿದ್ದಾಗ ಅದನ್ನು ವಿಫಲ ಕ್ರಾಂತಿ ಎಂದು ಬಣ್ಣಿಸಿದ್ದೂ ಉಂಟು. ಒಟ್ಟಿನಲ್ಲಿ ಒಳ್ಳೆಯುದ್ದೇಶ ಒಹು ದಾದ ಸಾರ್ವತ್ರಿಕ ಬದಲಾವಣೆಗೆ ಬಹುಸಂಖ್ಯಾತರ ವ್ಯವಸ್ಥಿತ ಹೋರಾಟ ಕ್ರಾಂತಿ ಎನಿಸುತ್ತದೆ. ಜೆ.ಪಿ. ಅವರು ಇದೇ ಅರ್ಥದಲ್ಲಿ ಸಂಪೂರ್ಣ ಕ್ರಾಂತಿಗೆ ಕರೆಕೊಟ್ಟರೇನೋ!

ಕ್ರಾಂತಿ ವ್ಯಕ್ತಿ-ಶಕ್ತಿಗೆ ಸೀಮಿತವಾದುದಲ್ಲ. ಬಹುಸಂಖ್ಯಾತ ಬಲದ ಪರಿಣಾಮ. ರಾಜಕೀಯದಲ್ಲಿಯ ಅದರ ಅರ್ಥ ತೀವ್ರತೆ ಇನ್ನೊಂದು ಕಡೆ ಬರುವುದಿಲ್ಲ. ಸಾಮಾಜಿಕ ಸಾಹಿತ್ಯಿಕ ಕ್ರಾಂತಿಯಲ್ಲಿ ಹಲವಾರು ಜನರು ತಮ್ಮನ್ನೇ ತೊಡಗಿಸಿಕೊಳ್ಳುವಾಗ ಪರಸ್ಪರ ಸಂಬಂಧಗಳು ಸ್ನೇಹಪೂರ್ಣವೂ ಸೌಹಾರ್ದಯುತವೂ ಆಗಿದ್ದರಷ್ಟೇ ಸಾಲದು. ಅಲ್ಲಿ ವ್ಯಕ್ತಿಯು ಆದೇಶಕ್ಕಿಂತ ತತ್ತ್ವದ ಪರಿಪಾಲನೆಯು ಪ್ರಜ್ಞೆಗನುಸರಿಸಿ ಕಾರ್ಯ ಮಾಡ ಬೇಕಾಗುತ್ತದೆ. ವೈಚಾರಿಕ ಭಿನ್ನಾಭಿಪ್ರಾಯಗಳಿರಬಹುದಾದರೂ ಕಾರ್ಯ-ಗುರಿ-ಸಾಧನೆಯ ಕ್ರಿಯಾತ್ಮಕ ಹೋರಾಟ ನಿಲ್ಲುವುದಿಲ್ಲ. ಒಟ್ಟಾರೆ ಸ್ವೀಕೃತ ಮೌಲ್ಯಗಳ ಅನುಷ್ಠಾನಕ್ಕೆ ಹೊಂದಾಣಿಕೆಯ ಮನೋಭಾವ ಪ್ರಬಲವಾಗಿರಬೇಕು. ಅಲ್ಲಿ ವ್ಯಕ್ತಿ ಪ್ರತಿಷ್ಠೆಯ ಪ್ರಶ್ನೆಯೇ ಇಲ್ಲ. ತತ್ತ್ವ ಪ್ರತಿಪಾದನೆಯ ಪ್ರತಿಷ್ಠೆ ಮಾತ್ರ ಸದಾ ಜಾಗೃತ ವಾಗಿರುತ್ತದೆ. ಇದೇ ಕ್ರಾಂತಿಯ ಯಶಸ್ಸಿನ ಗುಟ್ಟು.

ಭಾರತದಂಥ ದೇಶದಲ್ಲಿ ಕ್ರಾಂತಿಯಾಗುವುದಿಲ್ಲವೆಂದು ಹೇಳಲು ಕಾರಣಗಳಿವೆ. ನಾವು ವಿವಿಧ ಧರ್ಮದ ಹಾದಿಯಲ್ಲಿ, ಬದುಕಿನ ವಿಧಾನದಲ್ಲಿ, ವೈಚಾರಿಕ ಪರಂಪರೆ ಯಲ್ಲಿ ಪರಸ್ಪರರು ವಿಮುಖರಾಗಿ ಸಾಗಿದ್ದೇವೆ. ನಮ್ಮ ಗುರಿ ಒಂದೇ ಆಗುವದು ಶಕ್ಯವಿಲ್ಲ. ಎರಡನೆಯದಾಗಿ ಸ್ವಾರ್ಥಪರ ಗುರಿ, ವ್ಯಕ್ತಿ ಪ್ರತಿಷ್ಠೆಯ ವ್ಯಾಧಿ ವ್ಯಕ್ತಿ ಪೂಜೆಯ ಪಿಡುಗುಗಳಿಂದಾಗಿ, ತತ್ತ್ವವನ್ನೂ ತೃಣೀಕರಿಸಿ ತೂರಿ ನಿಲ್ಲಬೇಕೆನ್ನುವವರು ನಾವು. ಕ್ರಾಂತಿಯ ಅರ್ಥವೇ ನಮಗೆ ಬೇರೆಯಾಗಿರುವಾಗ ಕ್ರಾಂತಿಯಾಗುವದಾದರೂ ಹೇಗೆ?

ಹನ್ನೆರಡನೆಯ ಶತಮಾನದಲ್ಲಿ ಶಿವಶರಣರು ವಚನಗಳ ಮುಖಾಂತರ ಸಾಮಾಜಿಕ ಸಾಹಿತ್ತಿಕ ಬದಲಾವಣೆಗಳನ್ನು ತರಲೆತ್ನಿಸಿದ್ದ ಕಳಕಳಿಯ ಹೋರಾಟವನ್ನು ಇಪ್ಪತ್ತನೆಯ ಶತಮಾನದಲ್ಲಿಯ ನಾವು ಈಗ 'ಕ್ರಾಂತಿ' ಎಂದು ಕರೆಯುತ್ತಿದ್ದೇವೆ. ಆದರೆ ಸಾವಿರಾರು ಶರಣರಲ್ಲಿ ಒಬ್ಬರೂ ಕ್ರಾಂತಿ ಎನ್ನುವ ಶಬ್ದವನ್ನೇ ಬಳಸಿಲ್ಲದಿರುವುದು ಗಮನಾರ್ಹ. ಅವರು ಕ್ರಾಂತಿ ಎಂದು ಕರೆದುಕೊಳ್ಳದಿರುವದನ್ನು ನಾವು 'ಕ್ರಾಂತಿ' ಎಂದು ಹೆಸರಿಸುತ್ತಿರು ವುದರಲ್ಲಿಯೇ ನಮ್ಮ ಕ್ರಾಂತಿಯ ಕಲ್ಪನೆ ಅವರಿಂದ ಭಿನ್ನ ಎನ್ನುವುದು ಸ್ಪಷ್ಟವಾಗುತ್ತದೆ. ಒಂದು ವೇಳೆ ಶಿವಶರಣರು ಮಾಡಿದ್ದನ್ನು ಕ್ರಾಂತಿ ಎಂದು ಒಪ್ಪಿಕೊಳ್ಳುವುದಾದರೆ ಇಂದು ಜನಸಾಮಾನ್ಯರಿಗಿರುವ ಕ್ರಾಂತಿಯ ವಿಚಾರಕ್ಕೂ ಶಿವಶರಣರ ವಿಚಾರಕ್ಕೂ ಎಷ್ಟೊಂದು ವ್ಯತ್ಯಾಸವಿದೆ ಎಂಬುದನ್ನು ಮನಗಾಣಬೇಕು. ಶರಣರ ವಿಚಾರದಲ್ಲಿ ನಾನಿಲ್ಲಿ ಬಳಸುವ

ಕ್ರಾಂತಿ ಪದಕ್ಕೆ ಸದುದ್ದೇಶ ಪೂರ್ಣ ಬದಲಾವಣೆಗೆ, ಜನಮನವನ್ನು ಪಕ್ವಗೊಳಿಸುವ ಸಾಧುವೂ' ಶಾಂತಿಪೂರ್ಣವೂ ಆದ ಸಾಮೂಹಿಕ ಹೋರಾಟವೆಂದು ಮಾತ್ರ ಅರ್ಥೈಸುವೆವು.

ಶಿವಶರಣರ ಕ್ರಿಯಾಶೀಲ ಬದುಕು-ಬರಹವನ್ನು ಕ್ರಾಂತಿಕಾರಕ ಎಂದು ಹೇಳುವಲ್ಲಿ ಔಚಿತ್ಯವಿದೆ. ಹಲವು ಹಾದಿಗಳನ್ನೆಲ್ಲ ಮುಚ್ಚಿ ಶಿವಪಥವೊಂದರಲ್ಲಿಯೇ ಬದುಕನ್ನು ಮುನ್ನಡೆಸಲು ಮೊದಲೆಲ್ಲರೂ ದೀಕ್ಷೆ ತೆಗೆದುಕೊಂಡರು, ಧರ್ಮ-ಜಾತಿ, ಮೇಲು-ಕೀಳು, ಹೆಣ್ಣು-ಗಂಡು, ಭಾಷೆ-ದೇಶವೆನ್ನುವ ಭೇದವಳಿದು ಶರಣತತ್ತ್ವದ ಕೆಳಗೆ ಒಗ್ಗೂಡಿದರು. ಈ ಮನೋಭೂಮಿಕೆ ನಿರ್ಮಾಣವಾಗದ ಹೊರತು ಕ್ರಾಂತಿ ಬರೀ ಕಲ್ಪನೆ.

ಭಾರತದ ಬೇರೆ ಬೇರೆ ಭಾಗದಿಂದ ಶಿವಪಥದ ಸಾಧಕರಾಗಲು ವ್ಯಕ್ತಿ ಪ್ರತಿಷ್ಠೆ ತೊರೆದು, ಸ್ವಾರ್ಥದ ಸರಮಾಲೆ ಹರಿದು ಬಂದರು. ಬಸವಣ್ಣ ಈ ಸಂಘಟನೆಯ ಕೇಂದ್ರ ವ್ಯಕ್ತಿ ಎಂದು ಇಂದು ನಮಗೆ ಎದ್ದು ಕಾಣುವಷ್ಟು ಅವನಂತೂ ಎಂದೂ ಭಾವಿಸಿರಲಿಲ್ಲ. ಯಾಕೆಂದರೆ ಎಲ್ಲರೂ ಕಿಂಕರರ ಕಿಂಕರರಾಗಿ ಅನುಭವ ಮಂಟಪದಡಿಯಲ್ಲಿ ಕೂಡಿದವರು. ಕೀಳಿಂಗಲ್ಲದೆ ಹಯನ ಕರೆಯದು ಎಂಬುದನ್ನು ಖಚಿತಪಡಿಸಿಕೊಂಡವರು. ಸಮಷ್ಟಿಗೆ ಸರ್ವಸ್ವವನ್ನೂ ಸಮರ್ಪಿಸಿದವರು. ಅಹಮಿಕೆಯನ್ನು ಕೊಂದುಕೊಂಡು ಪಾರಮಾರ್ಥಿಕ ಸಕಲ ಜೀವಾತ್ಮರ ಲೇಸಿನ ಸತ್ಪಥದಲ್ಲಿ ನೆಲೆನಿಂತವರು. ಕ್ರಾಂತಿಯ ಪ್ರಥಮ ಘಟ್ಟವಿದು.

ಶಿವಶರಣರ ವ್ಯಕ್ತಿಗತ ಸಂಬಂಧಗಳನ್ನು, ಇನ್ನಾವ ಹೋರಾಟದ ಹಿನ್ನೆಲೆಯಲ್ಲಿಯೂ ಕಾಣದಷ್ಟು, ಸೌಜನ್ಯ ಪೂರ್ಣವೂ ಹಾರ್ದಿಕವೂ ಆಗಿದ್ದುವೆಂದು ಹೇಳುವದು ಅರ್ಥಸತ್ತ ಔಪಚಾರಿಕ ಮಾತಾದೀತು! ಈ ಸಂಬಂಧಗಳು ಮಾನವೀಯ ಅಂತಃಕರಣದ ತಳಪಾಯದ ಮೇಲೆ ಬೆಳೆದು ಬಂದವುಗಳು. ಅಜ್ಞಾನದ ಕತ್ತಲೆಯನ್ನು ಕಳೆದುಕೊಂಡು ಶಿವಜ್ಞಾನದ ಬೆಳಕಿನಲ್ಲಿ ಇವರೆಲ್ಲ ಒಂದುಗೂಡಿದರು. ಸ್ವಪ್ರತಿಷ್ಠೆಯನ್ನು ಸುಟ್ಟು ಶಿವಪ್ರತಿಷ್ಠೆಯ ಭಸ್ಮ ಧರಿಸಿದರು. ಮುಕ್ತಿ ಮೌಲ್ಯವನ್ನಳಿದು ಜೀವಮೌಲ್ಯಕ್ಕಿಳಿದು ಸಾಮಾಜಿಕ ಕಳಕಳಿಯನ್ನು ತಮ್ಮದಾಗಿಸಿಕೊಂಡರು.

ಜೀವಕಲ್ಯಾಣದ ಸದುದ್ದೇಶಪೂರ್ಣ ಈ ಸಂಘಟನೆಯಲ್ಲಿ ಅರಸನಿಂದ ಆಯುವೃತ್ತಿಯವರೆಲ್ಲರೂ ಭಕ್ತಿಯ ಸಮಾನ ವೇದಿಕೆಯ ಮೇಲೆ ಕಾಯಕ ನಿರತರಾದರು. ಬೀಜಾಂಕುರ ಮೂಡಿ ಬೆಳೆಸಬೇಕಾದ ತತ್ವಗಳನ್ನು ಮೊದಲು ತಮ್ಮ ನಡೆನುಡಿಯಲ್ಲಿ ರೂಢಿಸಿಕೊಂಡರು. ಇದೆಲ್ಲಕ್ಕೂ ಮಿಗಿಲಾಗಿ ಪರಸ್ಪರರಲ್ಲಿ ಅಪಾರ ಗೌರವ ತಳೆದರು. ಅಂತೆಯೇ ಶರಣರ ಕ್ರಾಂತಿಗೆ ಮೊನಚು ಮೂಡಿದ್ದು.

ಸ್ವಲಾಭಕ್ಕೆಂದು ಸಂಬಂಧ ಕಟ್ಟಿಕೊಳ್ಳುವ, ಎಲ್ಲ ಸಂಬಂಧವಲ್ಲಿಯೂ ಸ್ವಾರ್ಥವನ್ನೇ ಕಾಣುವ ದೃಷ್ಟಿಯನ್ನು ಬೆಳೆಸಿಕೊಂಡು ಬಂದ ಇಂದಿನ ವ್ಯಾವಹಾರಿಕ ಪ್ರಪಂಚಕ್ಕೆ ಶರಣರ ಸಂಬಂಧದ ಅಂತರ್ಯವನ್ನರಿಯುವ ಸೂಕ್ಷ್ಮಾತಿ ಸೂಕ್ಷ್ಮ ಪ್ರಜ್ಞೆ ಮೂಡಿ ಬರುವದೇ ಕಷ್ಟ. ಇದು ವ್ಯಕ್ತಿಗಳಲ್ಲಿ ಒಳ್ಳೆಯತನ ಅಪರೂಪವಾಗಿದೆ ಎನ್ನುವ ಮಾತಿಗಿಂತಲೂ

ಇರುವ ಒಳಿತನ್ನು ಗುರುತಿಸುವ ನಿಷ್ಕಳಂಕ ಮನಸ್ಸು ಮಾಯವಾಗುತ್ತಿದೆ ಎಂಬುದು ಹೆಚ್ಚು ಸತ್ಯ. ಇದಕ್ಕೆಲ್ಲ ಕಾರಣ ಇಂದಿನವರ ವ್ಯಕ್ತಿಗತ ಸಂಬಂಧಗಳು. ಆಸ್ತಿ ಇಲ್ಲವೆ ಅಧಿಕಾರ ಲಾಭದ ಉದ್ದೇಶ ಒಡಲಲ್ಲಿ ಬೆಳೆದು ಬಂದವುಗಳು. ಇಂಥ ಸಂಬಂಧಗಳು ಕ್ರಾಂತಿಗೆ ಎಂದೂ ನೆರವಾಗವು.

ವ್ಯಕ್ತಿ ಸಾಮೂಹಿಕ ಕ್ರಿಯೆಯಲ್ಲಿ ತೊಡಗಿದಾಗ, ತನ್ನ ಸ್ಥಾನಮಾನ ಅಂತಸ್ತುಗಳನ್ನು ಕಳೆದುಕೊಂಡಾಗ ಮಾತ್ರ ವ್ಯಕ್ತಿಗತ ಸಂಬಂಧಗಳನ್ನು ಮಧುರ, ಬಂಧುರವಾಗಿಸಿಕೊಳ್ಳಬಲ್ಲ. ದೃಷ್ಟಿ ಗುರಿಯೆಡೆಗಲ್ಲದೆ ಸುತ್ತಲಿನ ವ್ಯಕ್ತಿಗಳ ಗುಣದೋಷಗಳ ಕಡೆಗಲ್ಲ. ಮಂತ್ರಿ ಬಸವಣ್ಣ, ಆಯಗಾರ ಸಂಕುಲದ ಮಾದಾರ ಚೆನ್ನಯ್ಯ ಹಡಪದ ಅಪ್ಪಣ್ಣ, ಮಡಿವಾಳ ಮಾಚಿದೇವ ಮೊದಲಾದವರಲ್ಲಿ ತಾರತಮ್ಯವೇ ಇರಲಿಲ್ಲವೆನ್ನುವದಕ್ಕೆ ವಚನ ಸಾಕ್ಷಿ ಇವೆ, ಶರಣರು ವ್ಯಕ್ತಿಯ ಅಂತಸ್ತಿಗಿಂತ ಅವನ ಅಂತಃಸತ್ತ್ವಕ್ಕೆ ತಮ್ಮನ್ನು ಸಮರ್ಪಿಸಿಕೊಂಡರು. ಅವರ ಆರಾಧನೆಯನ್ನೇ ಶಿವಾರಾಧನೆಯನ್ನಾಗಿಸಿಕೊಂಡರು. ಅಂತೆಯೇ ಶಿವಶರಣರು ಪರಸ್ಪರರಲ್ಲಿ ತೋರುವ ಗೌರವ ಇನ್ನೆಲ್ಲಿಯೂ ಕಾಣದಂಥದು. 'ನಮೋ' ಎಂದವರಿಗೆ 'ನಮೋ ನಮೋ' ಎನ್ನುವುದನ್ನೆ ಧರ್ಮವಾಗಿರಿಸಿಕೊಂಡವರು. 'ಹೊಲೆಯ ಹೊಲಬಿಗನಾದರೆ ಅವನ ಹೊರೆಯಲಿಪ್ಪುದು ಲೇಸೆ'ಂದರಲ್ಲದೆ 'ಹೊಲಬುಗೆಟ್ಟ ಕುಲಜರನ್ನು ನೋಡಲಾಗದು ನುಡಿಸಲಾಗದು' ಎಂದರು.

ಅವರ ಈ ಸಂಘಟನೆ ನಿಷ್ಕಾಮ ಮನದಲ್ಲಿ ಮೊಳಕೆಯೊಡೆದು ಮರವಾದುದು. ಬೆಂಬತ್ತಿ ಬಂದ ಮಾಯೆಯನ್ನು ಹೀಗಳೆದು, ಬಸವಣ್ಣ ಸಿದ್ಧರಾಮರನ್ನು ಹುಡುಕಿಕೊಂಡು ಬಂದ ಜಂಗಮಮೂರ್ತಿ, ಅಲ್ಲಮಪ್ರಭು, ರಾಜವೈಭವವನ್ನೆಲ್ಲ ತೃಣೀಕರಿಸಿ ಕೌಶಿಕನ ಹಂಗು ಹರಿದುಕೊಂಡು ಲೋಕದ ಗಂಡರನ್ನೇ ಬಲಿಯೊಳಗಿಕ್ಕಿ ಚನ್ನಮಲ್ಲಿಕಾರ್ಜುನನನ್ನರಸುತ್ತ ಕಲ್ಯಾಣದ ಶರಣರ ಸಾನ್ನಿಧ್ಯಕ್ಕೆ ಬಂದ ಮಹದೇವಿಯಕ್ಕ, ರಾಜಪದವಿಯನ್ನು ಕೀಳ್ಗಳೆದು ಶರಣರ ಪದವಿಗೆಳಸಿ ಬಂದ ಮೋಳಿಗೆಯ ಮಾರಯ್ಯ ಮೊದಲಾದವರ ಬದುಕೇ ಮಾತನಾಡುತ್ತದೆ ಶರಣರ ನಿಷ್ಕಾಮ ಸಂಬಂಧಗಳನ್ನು.

ಯಾವುದೇ ಕ್ರಾಂತಿಯ ಗುರಿ ಸಾಮೂಹಿಕ ಒಳಿತಾದರೂ ಅದರಲ್ಲಿ ತೊಡಗಿದ ವ್ಯಕ್ತಿಗಳಿಗೆ ವೈಯಕ್ತಿಕ ಲಾಭದ ಆಂತರಿಕ ತುಮುಲ ಇದ್ದೇ ಇರುತ್ತದೆ. ಶರಣರ ಸಂಘಟನೆಯೂ ಇದರಿಂದ ಹೊರತಾಗಿಲ್ಲ. ಸಕಲ ಜೀವಾತ್ಮರ ಲೇಸು ಸಾಮೂಹಿಕ ಗುರಿಯಾಗಿದ್ದರೂ, 'ಶೂನ್ಯ ಸಂಪಾದನೆ' ಅವರ ವೈಯಕ್ತಿಕ ಉದ್ದೇಶ.

ಇನ್ನು ಹೇಡಿ, ಸ್ವಾರ್ಥಿ ಕ್ರಾಂತಿಗಿಳಿಯಲಾರ. ಅದಕ್ಕೆ ನೈತಿಕ ಧೈರ್ಯ ಬೇಕು. ನ್ಯಾಯ ನಿಷ್ಠುರಿ, ದಾಕ್ಷಿಣ್ಯಪರರಲ್ಲದ ಶರಣರು ಯಾರಿಗೂ ಅಂಜುವವರಲ್ಲ.

'ಆರು ಮುನಿದು ನಮ್ಮನೇನು ಮಾಡುವರು
ಊರು ಮುನಿದು ನಮ್ಮನೆಂತು ಮಾಡುವುದು'

ಎಂದು ಸವಾಲು ಹಾಕಿಯೇ ಈ ಕ್ರಾಂತಿಯ ಕಣಕ್ಕಿಳಿದವರು. ಹೊಗಳಿಕೆ ತೆಗಳಿಕೆಗೆ ಕಿವಿಗೊಡದೆ 'ಆನೆಯ ಮೇಲೆ ಹೋಹನ ಶ್ವಾನ ಕಚ್ಚಬಲ್ಲುದೆ' ಎಂದು ನಂಬಿ, ನಂಬಿ ನಂಬದ ಡಂಬಕರ ಕಡೆ ಲಕ್ಷ್ಯ ಕೊಡದವರು. ಅವರು "ಜಾತಸ್ಯ ಮರಣಂ ಧ್ರುವಂ" ಎಂಬುದನ್ನು ಖಚಿತಪಡಿಸಿಕೊಂಡವರು. ಅಂತೆಯೇ ಅವರು "ಇಂದು ಬಪ್ಪುದು ನಮಗೀಗಲೇ ಬರಲಿ ಆದಕಾರಂಜುವರು ಅದಕಾರಳುಕುವರು" ಎಂದು ಎಲ್ಲದಕ್ಕೂ ಎದೆಗೊಟ್ಟು ನಿಂತರು. ಲೋಕ ವಿರೋಧಿಯಾಗಿ ಕಾಣುವದಿರಲಿ ತಾವೇ ಹಾಗೆ ಕರೆದುಕೊಂಡರು.

ಶರಣರ ಸಂಬಂಧದ ಸೂಕ್ಷ್ಮವನ್ನರಿಯಲು ಅಲ್ಲಮಪ್ರಭುವಿನ ವಚನವನ್ನು ಉಲ್ಲೇಖಿಸುವುದೇ ಔಚಿತ್ಯಪೂರ್ಣ. ಶೂನ್ಯ ಸಂಪಾದನೆಯ ಮೊದಲ ವಚನವೇ ಇದಾಗಿರುವದೊಂದು ವೈಶಿಷ್ಟ್ಯ.

"ಕಲ್ಲೊಳಗಣ ಪಾವಕನಂತೆ, ಉದಕದೊಳಗಣ ಪ್ರತಿಬಿಂಬದಂತೆ
ಬೀಜದೊಳಗಣ ವೃಕ್ಷದಂತೆ, ಶಬ್ದದೊಳಗಣ ನಿಶ್ಶಬ್ದದಂತೆ. ಗುಹೇಶ್ವರಾ
ನಿಮ್ಮ ಶರಣರ ಸಂಬಂಧ"

(ಗೂಳೂರ, ಶೂನ್ಯ ಸಂಪಾದನೆ ಸಂಪುಟ ೧ ಪುಟ ೬ ವಚನ ೧)

ಬೆಂಕಿ ಕಲ್ಲಿನ ಒಡಲಲ್ಲಿ ಇದ್ದರೂ ಅದು ಕಲ್ಲನ್ನೆಂದೂ ಸುಡದು. ಪ್ರತಿಯಾಗಿ ಕಲ್ಲು ಬೆಂಕಿಯನ್ನು ನಂದಿಸದು. ನೀರೊಡಲಲ್ಲಿದ್ದ ವಸ್ತುವಿನ ಪ್ರತಿಬಿಂಬದಿಂದ ನೀರಿಗೆ ನೋವಾಗದು ಅಥವಾ ಪ್ರತಿಬಿಂಬ ನೀರಿನೊಡಲಿಗೆ ನೋವು ಮಾಡದು. ಅದರಂತೆ ಬೀಜದೊಳಗೆ ಬೃಹತ್ ವೃಕ್ಷ ಅಡಗಿರುವ ಪರಿ, ಮತ್ತೆ ಅದೇ ವೃಕ್ಷದೊಳಗೆ ಬೀಜ ಬೆಳೆಯುವ ರೀತಿ, ಇವೆರಡರ ಪರಸ್ಪರ ಅಸ್ತಿತ್ವವನ್ನು ಅಲ್ಲಗಳೆಯಲಿಕ್ಕಾಗದು, ಶಬ್ದದೊಳಗೆ ನಿಶ್ಶಬ್ದ ಅಡಗಿರುವಂತೆ ನಿಶ್ಶಬ್ದದೊಡಲೇ ಶಬ್ದವನ್ನು ಹೊರ ಹಾಕುತ್ತದೆ. ಈ ಎಲ್ಲ ಹೊಂದಾಣಿಕೆಯ ಸೂಕ್ಷ್ಮ ಅರಿತವರಿಗೆ ಮಾತ್ರ ಶರಣರ ಸಂಬಂಧದ ಗೌಪ್ಯಗೊತ್ತಾಗಬಲ್ಲದು. ಶರಣರ ಕ್ರಾಂತಿಯ ಯಶಸ್ಸಿಗೆ ಮೂಲವಾದ ಈ ಸಂಬಂಧ ಸೂಕ್ಷ್ಮವನ್ನು ಇದಕ್ಕೂ ಸುಂದರವಾಗಿ ಸ್ಪಷ್ಟವಾಗಿ ಧ್ವನಿಪೂರ್ಣವಾಗಿ ಹೇಳುವುದು ಕಷ್ಟ.

ಶರಣರ ಈ ಸಂಬಂಧ ಅನ್ನಮಯ ಲೌಕಿಕಕ್ಕೆ ಹೊರಗಾದುದು. ಅದು ಮನೋಮಯ ಪ್ರಾಣಮಯವನ್ನು ಮೀರಿ ದೇವಮಯವಾದುದು, ಅವರು ದೃಷ್ಟಿಯಲ್ಲಿ ಲಿಂಗವನ್ನು ಪ್ರತಿಷ್ಠಾಪಿಸಿಕೊಂಡು, ಸರ್ವರಲ್ಲಿ ಶಿವನನ್ನು ಕಂಡವರು. ಒಬ್ಬ ಶರಣನಿಗೆ ಇನ್ನೊಬ್ಬ ಶರಣ ಮನುಷ್ಯ ಮಾತ್ರನಾಗಿ ಕಾಣಲಿಲ್ಲ. ಸಾಕ್ಷಾತ್ ಶಿವನಾಗಿ ಕಂಡ. ಆದರೆ ತಾನೊಬ್ಬ ಭಕ್ತನಾಗಿಯೇ ಉಳಿಯುವಲ್ಲಿ ಅಭಿಮಾನ ಆನಂದ ಪಟ್ಟುಕೊಂಡ. ಬಸವಣ್ಣನಲ್ಲಿ ಅಲ್ಲಮಪ್ರಭು ಗುಹೇಶ್ವರ ಲಿಂಗವನ್ನು ಕಂಡರೆ, ಅಲ್ಲಮನಲ್ಲಿ ಬಸವ ಕೂಡಲ ಸಂಗನನ್ನು ಸಾಕ್ಷಾತ್ಕರಿಸಿಕೊಂಡ, ಇದು ಅವರ ಸಂಬಂಧದ ಗುಟ್ಟು.

ಇದುವರೆಗಿನ ಚರ್ಚೆಯ ಹಿನ್ನೆಲೆಯಲ್ಲಿ ಶರಣರ ಸಂಬಂಧದ ಕೆಲವು ಮುಖಗಳನ್ನಿಲ್ಲಿ ಪರಿಶೀಲಿಸಬಹುದು.

ಬಸವಣ್ಣ, ಚನ್ನಬಸವಣ್ಣ ಲೌಕಿಕವಾಗಿ ಮಾವ ಅಳಿಯಂದಿರು. ಈ ಕೌಟುಂಬಿಕ ಸಂಬಂಧ ಶರಣರ ಸಂಘಟನೆಯಲ್ಲಿ ಎಲ್ಲಿಯೂ ತೊಡಕಾಗಲಿಲ್ಲ. ಅದನ್ನು, ಯಾರೊಬ್ಬರೂ ಅಭಿವ್ಯಕ್ತಪಡಿಸಲಿಲ್ಲ, ಚನ್ನಬಸವಣ್ಣನಿಗೆ ಬಸವಣ್ಣ ಮಾವ, ಮಂತ್ರಿಯಾಗಿ ಕಾಣಲಿಲ್ಲ, ಬಸವಣ್ಣನಿಗೆ ಚನ್ನಬಸವಣ್ಣ ಚಿಕ್ಕವ, ಅಳಿಯನಾಗಿ ಎಂದೂ ಕಾಣಲಿಲ್ಲ. ಒಂದು ಭಕ್ತಿಯ ಬಿತ್ತರ, ಇನ್ನೊಂದು ಜ್ಞಾನದ ಎತ್ತರ.

ಚನ್ನಬಸವಣ್ಣ ತನಗೆ ಗುರುವಾಗಿ ಅನುಗ್ರಹ ಮಾಡಲು ಕೇಳಿದಾಗ, ತತ್ವವ ಒಡಿದವರಿಗೆ ತೊತ್ತಾಗಿ ನಡೆವ ಬಸವಣ್ಣ ಇದಕ್ಕೊಪ್ಪುತ್ತಾನೆಯೇ? "ಮಾಪಿನ ಕಾಯೊಳ ಗೊಂದು ಎಕ್ಕೆಯ ಕಾಯಿ ನಾನಯ್ಯಾ ಎಂದು ಹೇಳಿ 'ಶಿಷ್ಯಂಗೆ ಗುರು ಉಪದೇಶವ ಮಾಡ ಬೇಕಲ್ಲದೆ ಗುರುವಿಗೆ ಶಿಷ್ಯನನುಗ್ರಹವ ಮಾಡಿದ ಠಾವುಂಟೆ?" ಎಂದು ಚನ್ನಬಸವಣ್ಣನನ್ನೇ ಪ್ರಶ್ನಿಸುತ್ತಾನೆ. ತನ್ನ ಅರಿವಿಗೆ ಚನ್ನಬಸವಣ್ಣನೇ ಕರ್ತನೆನ್ನುವ ಮಾತು ವ್ಯಕ್ತಿ ಸಂಬಂಧ ಗಳ ಅನ್ಯಾದರ್ಶದ ದ್ಯೋತಕವಾಗುತ್ತದೆ.

"ಗುರುವಿಂಗೆ ನೀನೆ ಕರ್ತ, ಲಿಂಗಕ್ಕೆ ನೀನೆ ಕರ್ತ
ಜಂಗಮಕ್ಕೆ ನೀನೆ ಕರ್ತ, ಪ್ರಸಾದಕ್ಕೆ ನೀನೆ ಕರ್ತ
ಉಪದೇಶಕ್ಕೆ ನೀನೆ ಕರ್ತ, ಕೂಡಲಸಂಗಮದೇವರ ಸಾಕ್ಷಿಯಾಗಿ
ಎನಗೆಯೂ ನೀನೆ ಕರ್ತನಾದ ಕಾರಣ ನಾನು ಬೇಕೆನಲಮ್ಮ
ಬೇಡೆನಲಮ್ಮೆನು ಕಾಣಾ ಚನ್ನಬಸವಣ್ಣ"

ಗುರುವೆಂದು ಗೌರವಿಸುವ ಅಳಿಯನಿಗೆ ನಾನೇ ಶಿಷ್ಯನೆಂದು ಸಾರುವ ಬಸವಣ್ಣ, ಚನ್ನಬಸವಣ್ಣನಲ್ಲಿಯ ಯಾವ ಕೌಟುಂಬಿಕ ಸಂಬಂಧಗಳನ್ನು ನೆನೆಯದಿರುವುದಿರಲಿ ಅಲ್ಲಿ ಸಾಕ್ಷಾತ್ ಕೂಡಲಸಂಗನನ್ನೇ ಕಾಣುತ್ತಾನೆ, ನಾನು ಗುರು, ತಾನು ಗುರು ಎಂದು ಗುರು ಗುಡುವ ಲೌಕಿಕ ಪ್ರಜ್ಞೆಗೆ ನಾನು ಶಿಷ್ಯ ತಾನು ಶಿಷ್ಯ ಎಂದು ಕರೆದುಕೊಳ್ಳುವ ಅಲೌಕಿಕ ಪ್ರಜ್ಞೆಯು ಅರ್ಥವಾಗುವದೇ ಕಷ್ಟ. ಪರಸ್ಪರರ ಈ ಗುರು ಶಿಷ್ಯ ಭಾವದ ವಿವರಣೆ ಶೂನ್ಯ ಸಂಪಾದನೆಯಲ್ಲಿ ಸಾಕಷ್ಟು ವಿಸ್ತಾರವಾಗಿ ಪ್ರಸ್ತಾಪವಾದುದನ್ನು ಕಾಣಬಹುದು.

ಇದರಂತೆ ಅಲ್ಲಮ ಬಸವರ ಸಮಾಗಮದ ಸನ್ನಿವೇಶದಲ್ಲಿ ಹೊರಹೊಮ್ಮಿದ ವ್ಯಕ್ತಿ ಸಂಬಂಧಗಳನ್ನು ನೋಡಬಹುದು. ವೈರಾಗ್ಯಕ್ಕೆ ಇನ್ನೊಂದು ಹೆಸರಾದ ಅಲ್ಲಮಪ್ರಭು, ಸಿದ್ಧರಾಮನ ಜೊತೆಗೆ ಕಲ್ಯಾಣಕ್ಕೆ ನಡೆದು ಬರುತ್ತಾನೆ. ಇದೆಂಥ ಅವ್ಯಕ್ತ ಆಕರ್ಷಣೆಯ ಸಂಬಂಧ!

ಕಲ್ಯಾಣವನ್ನು ಕಂಡಾಕ್ಷಣಕ್ಕೆ ಬಸವಣ್ಣನ ಅಲೌಕಿಕ ವ್ಯಕ್ತಿತ್ವವನ್ನು ಮುಕ್ತಕಂಠದಿಂದ ಎತ್ತಿ ಹೇಳುವ ಮಾತುಗಳು ಅಪಾರ ಗೌರವದ ದ್ಯೋತಕವಾಗಿವೆ. ಕಣ್ಣರಿಯದ್ದನ್ನು ಕರುಳರಿಯದೇ? ಎಂದು ಕೇಳುವ ಅಲ್ಲಮ ಪ್ರಭುವಿಗೆ ಕಾಣದ್ದೇನೂ ಇಲ್ಲ.

"ಕಲ್ಯಾಣವೆಂಬ ಪ್ರಣತಿಯಲ್ಲಿ ಭಕ್ತಿರಸವೆಂಬ ತೈಲವನೆಱೆದು
ಆಚಾರವೆಂಬ ಬತ್ತಿಯಲ್ಲಿ ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು

ತೊಳಗಿ ಬೆಳಗುತ್ತಿರ್ದರಯ್ಯಾ ಶಿವನ ಪ್ರತಾಪ!
ಆ ಬೆಳಗಿನೊಳಗೆ ಒಪ್ಪುತಿರ್ದರಯ್ಯಾ ಅಸಂಖ್ಯಾತ ಭಕ್ತಗಣಂಗಳು
ಶಿವಭಕ್ತನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೇ?
ಗೊಹೇಶ್ವರ ಲಿಂಗದಲ್ಲಿ ಎನ್ನ ಪರಮಾಧ್ಯರು ಸಂಗನಬಸವಣ್ಣನ
ಮಹಿಮೆಯ ನೋಡಾ ಸಿದ್ಧರಾಮಯ್ಯಾ!"

(ಗೂಳೂರ, ಶೂ. ಸಂ. ಪು. ೮೨. ವಚನ ೩೩.)

ಇದೆಲ್ಲವನ್ನು ಅರಿತೂ ಬಸವಣ್ಣನನ್ನು ಪರೀಕ್ಷಿಸುತ್ತಾನೆ. ಕೋಪಗೊಂಡು ಝಂಕಿಸಿ ನುಡಿಯುತ್ತಾನೆ. ಆದರೆ ಬಸವ ಅಪ್ಪಟ ಭಕ್ತ, ಪ್ರತಿ ಮುನಿಸಿಲ್ಲ ಅವನಿಗೆ ಆದರೆ ತನ್ನ ಮರವಿಗೆ ಪಶ್ಚಾತ್ತಾಪ ಪಡುತ್ತಾನೆ. ಆ ಜಂಗಮ ಪರ್ವತವೆದುರು ಅಡ್ಡ ಬಿದ್ದು,

"ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು
ನೀನಲ್ಲದೆ ಮತ್ತಾರೂ ಇಲ್ಲವಯ್ಯಾ ಕೂಡಲಸಂಗಮದೇವಾ
ಹಾಲಲದ್ದು ನೀರಲದ್ದು."

ಎಂದು ತನ್ನನ್ನೆ ಸಮರ್ಪಿಸಿಕೊಳ್ಳುತ್ತಾನೆ. ಆಗ ಅಲ್ಲಮಪ್ರಭು ಬಸವಣ್ಣನನ್ನು ಎಚ್ಚರಿಸುತ್ತಾನೆ.

"ಅಹಂಕಾರವೆಂಬ ಅಲಗ ಹಿಡಿದು ಮಾಡುವ ಭಕ್ತಿ ತನ್ನನೆ ಇಱಿವುದು
ಗೊಹೇಶ್ವರನೆಂಬ ಹಗೆಯ ಗೆಲುವರೆ ಅಱಿವೆಂಬ ಅಲಗ
ಅವಧಾನ ತಪ್ಪದೆ ಹಿಡಿಯಬೇಕು ನೋಡಾ ಬಸವಣ್ಣಾ!"

ಆಗ ಬಸವಣ್ಣನು–

'ಧ್ಯಾನ ಮೌನವೆಂಬ ಶಸ್ತ್ರವ ಹಿಡಿಯಲರಿಯದೆ
ಅಹಂಕಾರದ ಧಾರೆಯ ಮೊನೆಯಲಗೆಂಬ ಶಸ್ತ್ರವ ಹಿಡಿದು ಕೆಟ್ಟೆನಯ್ಯ'

ಎಂದು ತಪ್ಪೊಪ್ಪಿಕೊಳ್ಳುತ್ತಾನೆ, ಬಸವಣ್ಣನ ನಿಲುವಿನ ಎತ್ತರವನ್ನರಿತ ಅಲ್ಲಮಪ್ರಭು 'ಪೂರ್ವಾಚಾರಿ ಸಂಗನ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎಂಬೆನು' ಎನ್ನುತ್ತಾನೆ.

ಶೂನ್ಯ ಸಂಪಾದನೆಯ ತಾತ್ವಿಕ ವಿವರಣೆಗಿಂತ ಪರಸ್ಪರರಲ್ಲಿಯ ಈ ವ್ಯಕ್ತಿ ಸಂಬಂಧಗಳು ನಮಗಿಲ್ಲಿ ಗ್ರಾಹ್ಯ. ವ್ಯಕ್ತಿ ಸಂಬಂಧಕ್ಕೆ ಅಹಂಕಾರದಂಥ ಅಡ್ಡಿ ಇನ್ನೊಂದಿಲ್ಲ. ತಾನು ಶಿವತತ್ತ್ವದ ಅಡಿಯಾಳು, ಸ್ವತಂತ್ರನಲ್ಲ. ಮರವಿನಲ್ಲಿ ಮಾಡಿದ್ದನ್ನು ತಪ್ಪೊಪ್ಪಿಕೊಂಡು ಕ್ಷಮೆ ಕೇಳಿಕೊಳ್ಳುವ ಕ್ರಿಯೆಯೇ ಅಹಂಕಾರವನ್ನು ಅಳಿದುದರ ಸಂಕೇತ. ಮರವಿನಲ್ಲಿ ಮಾಡಿದ್ದನ್ನು ಅರಿವಿನಲ್ಲಿ ಅರ್ಥಮಾಡಿಕೊಳ್ಳದೆ, ಅದನ್ನು ಸತ್ಯವೆಂದು ಸಾಧಿಸುವುದಾದರೆ ವ್ಯಕ್ತಿ ಸಂಬಂಧಗಳು ಕೆಡುವುದೊತ್ತಟ್ಟಿಗಿರಲಿ, ಅದರಿಂದ ಸಾಮೂಹಿಕ ಉದ್ದೇಶ ಹಾಳಾಗುವುದು ಖಚಿತ. ಅಹಂಕಾರದ ಅಳಿವಿಗೆ ತಪ್ಪೊಪ್ಪಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳದಿದ್ದರೆ ವ್ಯಕ್ತಿಗತ ಸಂಬಂಧಗಳು ಬಂಧುರವಾಗವು. ಹಾಗಾದಾಗ ಕ್ರಾಂತಿ ಕನಸು!

ಶರಣ ಸಮೂಹದ ಅಗ್ರಮಾನ್ಯ ಅಲ್ಲಮಪ್ರಭು ತಾನು ಇನ್ನುಳಿದ ಶರಣರ ಜೊತೆ ಗಿಟ್ಟುಕೊಂಡ ಸಂಬಂಧ ಆಧುನಿಕ ಬದುಕಿನ ಪ್ರತಿ ಹೆಜ್ಜೆಗೂ ಮಾರ್ಗದರ್ಶನ ನೀಡುವಂಥ ದಾಗಿದೆ.

ಇದುವರೆಗೆ ಪಾದ ಮಾಡಿದ ಬಸವಣ್ಣನನ್ನು ಕುರಿತು ಎಂಥ ಪರಮೋಚ್ಚ ಭಾವನೆ ಅಲ್ಲಮನಲ್ಲಿದೆ ಎಂಬುದನ್ನು ಕೆಳಗಿನ ವಚನದಿಂದ ಕಾಣಬಹುದು.

> 'ಆಯಿತ್ತು ಬಸವಾ ನಿನ್ನಿಂದ ಗುರುಸ್ವಾಯತವೆನಗೆ
> ಆಯಿತ್ತು ಬಸವಾ ನಿನ್ನಿಂದ ಲಿಂಗಸ್ವಾಯತವೆನಗೆ
> ಆಯಿತ್ತು ಬಸವಾ ನಿನ್ನಿಂದ ಜಂಗಮಸ್ವಾಯತವೆನಗೆ
> ಆಯಿತ್ತು ಬಸವಾ ನಿನ್ನಿಂದ ಪ್ರಸಾದ ಸ್ವಾಯತವೆನಗೆ

ಇಂತೀ ಚತುರ್ವಿಧ ಸ್ವಾಯತವದು ನೀನೆ ಮಾಡಿದೆಯಾಗಿ ಸಮ್ಮ ಗೊಹೇಶ್ವರ ಲಿಂಗಕ್ಕೆ ವಿಳಾಪವಾದೆಯಲ್ಲೈ ಸಂಗನಬಸವಣ್ಣಾ (ಗೂಳೂರ ಶೂ. ಸಂ. ವಚನ ೧೮ ಪ್ರ. ೧೩೬.) ಇಷ್ಟೇ ಅಲ್ಲದೆ,

........ಬಸವಣ್ಣಾ ನಿನ್ನ ಮಹಾನುಭಾವವ ಕೇಳಿ ಕೇಳಿ ಎನ್ನ ಭವಂ ನಾಸ್ತಿ ಯಾಯಿತ್ತು....ಎನ್ನುವಷ್ಟರ ಮಟ್ಟಿಗೆ ಹೋಗುತ್ತದೆ ಅವನ ಅಂತರಂಗದ ಮೆಚ್ಚುಗೆ,

ಹೀಗೆ ಪರಸ್ಪರರ ಮೆಚ್ಚುಗೆ, ಅವರ ದೋಷ ನೇರ್ಪಡಿಸಬೇಕೆಂಬ ಕಳಕಳಿ, ತಮ್ಮ ದೋಷವನ್ನರಿತು ಅದನ್ನು ತಿದ್ದಿಕೊಳ್ಳುವ ಸದುವಿನಯ, ಶರಣರ ಸಂಘಟನೆಗೆ ಶಕ್ತಿಯಾಗಿದ್ದವು.

ಶರಣರ ಸಂಬಂಧಗಳು ಹಿರಿ-ಕಿರಿಯರು, ಮೇಲು-ಕೀಳು, ನನ್ನವರು-ಪರರು ಎಂಬ ಯಾವುದೇ ತಿಳಿವಳಿಕೆಯಲ್ಲಿ ಹುಟ್ಟಿ ಬಂದವುಗಳಲ್ಲವೆಂಬುದನ್ನು ಹಿಂದೆ ಹೇಳಿ ಯಾಗಿದೆ. ಪ್ರಾಯಕ್ಕೂ ಅಭಿಪ್ರಾಯಕ್ಕೂ ಸಂಬಂಧವನ್ನು ಕಲ್ಪಿಸಿದವರಲ್ಲ. ಶರಣರ ಸಾಧನೆ, ಜ್ಞಾನದೆತ್ತರಕ್ಕನುಗುಣವಾಗಿ ಅವರನ್ನು ಮೇಲೆತ್ತಿ ಕೊಂಡಾಡಿ ಗೌರವದಿಂದ ಕಂಡರು.

ಅಲ್ಲಮಪ್ರಭು, ಚನ್ನಬಸವಣ್ಣನನ್ನು ಕುರಿತು ಹೇಳುವ ಮಾತುಗಳು ಇದಕ್ಕೆ ಸಾಕ್ಷಿ ಯಾಗಿವೆ.

> 'ಕಿಱಿಯರಾದಡೇನು, ಹಿರಿಯರಾದಡೇನು?
> ಅಱಿವಿಂಗೆ ಹಿರಿಕಿರಿದುಂಟೆ?
> ಆದಿಯನಾದಿ ಇಲ್ಲದಂದು ಅಜಾಂಡ ಬ್ರಹ್ಮಾಂಡ
> ಕೋಟಿಗಳುದಯವಾಗದಂದು
> ಗೊಹೇಶ್ವರ ಲಿಂಗದಲ್ಲಿ ನೀನೊಬ್ಬನೆ ಮಹಾಜ್ಞಾನಿ ಎಂಬುದು
> ಕಾಣಬಂದಿತ್ತು ಕಾಣಾ ಚನ್ನಬಸವಣ್ಣ'.

(ಶೂ. ಸಂ. ವಚನ ೬೨ ಪುಟ ೧೫೫.)

ಹೀಗೆ ಅಲ್ಲಮಪ್ರಭು ಶರಣ ಸಮೂಹದಲ್ಲಿ ಸರ್ವರ ಬಗ್ಗೆ ಸದ್ಭಾವನೆ ಬೆಳೆಸಿಕೊಂಡು ತನ್ನ ವ್ಯಕ್ತಿತ್ವದ ಔನ್ನತ್ಯವನ್ನು ಮರೆತು ಶರಣರಿಗೆ 'ನಮೋ ನಮೋ' ಎನ್ನುತ್ತ ಬದುಕಿದವ. ಚನ್ನಬಸವಣ್ಣನನ್ನು 'ಸರ್ವ ಸಂಸಾರ ವಿರಹಿತ' 'ಕಾಯವಿದಿದು ಕಲ್ಪಿತವ ಹೊದ್ದವನು' ಎಂದು ಮುಂತಾಗಿ ನಿರಾಳ ಮನಸ್ಸಿನಿಂದ ಹೇಳುವದನ್ನು ನೋಡಿದರೆ, ಅಲ್ಲಮನ ಅಪೂರ್ವ ವ್ಯಕ್ತಿತ್ವ ಪ್ರಕಟಗೊಳ್ಳುತ್ತದೆ. ಅದರಂತೆ ಚನ್ನಬಸವಣ್ಣನನ್ನು ಕುರಿತು ಮಡಿವಾಳ ಮಾಚಿದೇವರು 'ಚನ್ನಬಸವಣ್ಣನ ಪ್ರಸಾದವ ಕೊಂಡು ನಾನು ಬದುಕಿದೆನು ಕಾಣಾ ಪ್ರಭುವೆ' ಎಂದು ಹೇಳುತ್ತಾನೆ.

ಕಾಯ ಒಂದು, ಪ್ರಾಣ ಒಂದು, ಭಾವ ಒಂದು, ನಿರ್ಭಾವ ಒಂದು
ಒಂದಲ್ಲದೆ ಎರಡುಂಟೆ?

ಗುರು ಒಂದು ಲಿಂಗ ಒಂದು ಉಪದೇಶ ಒಂದು ಕೂಡಲಚನ್ನಸಂಗಯ್ಯನ ಶರಣ ಬಸವಣ್ಣನ ಗರುಡಿಯಲ್ಲಿ ಇಬ್ಬರಿಗೆಯು ಅಭ್ಯಾಸ ಒಂದೇ ಕಾಣಾ ಪ್ರಭುವೆ!

(ಶೂ. ಸಂ. ವ. ೫೮ ಪು. ೧೫೮)

ಬಸವಣ್ಣನ ಗರಡಿಯ ಶರಣರೆಲ್ಲರಿಗೂ ಎಲ್ಲವೂ ಒಂದೇ ಎರಡಿಲ್ಲ. ಚನ್ನಬಸವಣ್ಣನ ಈ ಮಾತು ಇಡೀ ಶರಣ ಸಂಕುಲದ ಸಂಬಂಧದ ಸೂಚನೆ ನೀಡುತ್ತದೆ. ಹೀಗಿರುವಾಗ ಯಾರು ಯಾರನ್ನೂ ಪ್ರಶಂಸಿಸಬೇಕಾದ ಪ್ರಮೇಯವೇ ಇಲ್ಲ. ಚನ್ನಬಸವಣ್ಣ ಬಸವಣ್ಣನ ಅಳಿಯನೆಂದೂ ಅವನಿಂದ ಏನನ್ನಾದರೂ ಬಯಸಿಯೋ ಅವನನ್ನು ತೃಪ್ತಿ ಪಡಿಸಲು ಆಡಿದ ಆತ್ಮವಂಚನೆಯ ತುಟಿ ತುದಿಯ ಪ್ರಶಂಸೆಯ ಮಾತುಗಳಲ್ಲಿವು, ಅವನ ಜ್ಞಾನ ಗೌರೀಶಂಕರದ ಮುಕ್ತ ಮೆಚ್ಚುಗೆ ಇದೆಲ್ಲ.

ಹೆಣ್ಣು ಹೊನ್ನು ಮಣ್ಣುಗಳ ಮುಪ್ಪುರಿಯ ಬಂಧನ ಕಳಚಿ ಹಾಕಿದ ಶರಣರ ಸಂಬಂಧಗಳು ಹೊಗಳಿಕೆಯ ಹೊನ್ನ ಶೂಲದಿಂದ ಹೊರಗಾದವುಗಳು, ಪರನನ್ನಲ್ಲದೆ ಯಾರು ಯಾರನ್ನೋ ಹೊಗಳಿ ಏನೇನೋ ಪಡೆಯಲೆಳಸಿದವರಲ್ಲ ಶರಣರು. ಎನಗಿಂತ ಕಿರಿಯರಿಲ್ಲ ಎಂದೇ ಬದುಕಿದವರು. ಕೀಳಿಂಗೇ ಹಯನ ಕರೆಯುವುದನ್ನು ಪದವನ್ನು ಉಚಿತ ಪಡಿಸಿಕೊಂಡವರು. ಇಂಥವರು ಪರಸ್ಪರರನ್ನು ಹೊಗಳಿ ತಾವೆಲ್ಲ ದೊಡ್ಡವರೆನ್ನಿಸಿಕೊಳ್ಳಬೇಕೆಂದು ಕನಸು ಕಂಡವರಲ್ಲ. ಒಬ್ಬರಲ್ಲಿಯ ಒಳಿತನ್ನು 'ಶಿವ'ವೆಂದು ಗೌರವಿಸುವ ಮನೋವೈಶಾಲ್ಯ ಬೆಳೆಸಿಕೊಂಡವರು. ಈ ನಿಸ್ವಾರ್ಥ ನಿರಹಂಕಾರ ನಿರ್ವಂಚನೆಯ ಮನೋಭಾವದ ಸಂಬಂಧಗಳು ಸಕಲ ಜೀವಾತ್ಮರ ಲೇಸಿಗೆ ಬೇಕಾದ ಕ್ರಾಂತಿಗೆ ನಾಂದಿಯಾದವು.

ಮಹದೇವಿ ಅಕ್ಕ ಶರಣ ಸಂಕುಲದಲ್ಲೇ ತೀರ ಚಿಕ್ಕ ವಯಸ್ಸಿನವಳು. ಆದರೆ ಅವಳ ಆಧ್ಯಾತ್ಮದ ಎತ್ತರಕ್ಕೆ ತಲೆ ಬಾಗದವರೇ ಇಲ್ಲ. ಎಲ್ಲರೂ ಅವಳನ್ನು 'ತಾಯಿ' ಎಂದು ಕಂಡರೆ ಅವಳು ಶರಣರಂಗಳದ 'ಮಗಳೆ'ಂದು ಕರೆದುಕೊಳ್ಳುತ್ತಾಳೆ. ಇಂದಿನ ಸಾಮಾಜಿಕ ಕ್ಷೇತ್ರದ ಹೆಣ್ಣು ಗಂಡುಗಳ ಸಂಬಂಧಕ್ಕೆ ಇದೊಂದು ದಿವ್ಯ ದರ್ಶನವಿದ್ದಂತಿದೆ.

'....ಎನ್ನ ಹೆತ್ತ ತಾಯಿ
ಮಹದೇವಿಯಕ್ಕನ ನಿಲವ ನೋಡಯ್ಯ ಪ್ರಭುವೆ'

ಎಂದು ಬಸವಣ್ಣ ಮಗಳ ಸಮಾನಳಾದ ಅಕ್ಕನನ್ನು ಗೌರವಿಸಿ ನುಡಿದರೆ,

ಅಜಕಲ್ಪಕೋಟಿ ವರುಷದವರೆಲ್ಲ ಒರಿಯರೆ?
....
ಅನುವನರಿದು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ
ಮರೆದು ಕೂಡಲ ಚನ್ನಯ್ಯನಲ್ಲಿ ಬೆರೆಸಿ, ಬೇರಿಲ್ಲದಪ್ಪ
ಹಿರಿತನ ನಮ್ಮ ಮಹದೇವಿಯಕ್ಕಂಗಾಯಿತ್ತು.

(ಶೂ. ಸಂ. ವ. ೫೫ ಪುಟ ೨೯೦)

ಮಹಾಜ್ಞಾನಿ ಚನ್ನಬಸವಣ್ಣ ಅಕ್ಕನ ಹಿರಿತನವನ್ನು ಎತ್ತಿ ಸಾರುತ್ತಾನೆ. ಅದರಂತೆ ಸಿದ್ಧರಾಮನೂ ಸಹಿತ.

"....ಕಪಿಲ ಸಿದ್ಧಮಲ್ಲಿನಾಥನಲ್ಲಿ ಮಹದೇವಿಯಕ್ಕನ ನಿಲುವಿಂಗೆ ಶರಣೆಂದು ಶುದ್ಧನಾದೆನು".

ಎಂದು ತನ್ನ ಪರಿಶುದ್ಧತೆಯ ಕಾರಣ ಹೇಳುತ್ತಾನೆ. ಅದಕ್ಕೆ ಪ್ರತಿಯಾಗಿ ಅಕ್ಕ 'ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ ಎನ್ನ ತನು ಶುದ್ಧವಾಯಿತ್ತು' ಎಂದು ಧನ್ಯತೆ ವ್ಯಕ್ತಪಡಿಸುತ್ತಾಳೆ.

ಶರಣ ಶ್ರೇಷ್ಠ ಅಲ್ಲಮಪ್ರಭುವಿನ ಪ್ರಶಂಸೆಯಂತೂ ಗೊಹೇಶ್ವರಲಿಂಗದ ಪ್ರಮಾಣ ಪತ್ರವಲ್ಲದೆ ಬೇರೆಯಲ್ಲ.

'ನೀನಾನೆಂಬುಭಯುವಳಿದು ತಾನು ತಾನಾದ' ಅಕ್ಕನನ್ನು ಕುರಿತು (....ಗೊಹೇಶ್ವರ ಲಿಂಗದಲ್ಲಿ ಪರಮ ಪದವಿ ನಿನಗೆ ಸ್ವಯುವಹುದು ನೋಡಾ!' ಎಂದು ಬಯಲು ಬಾಯ್ದೆರೆದು ನುಡಿದಂತೆ ನುಡಿಯುತ್ತಾನೆ. ಸ್ವಯಲಿಂಗವಾದ ಮಹದೇವಿಯಕ್ಕಗಳ ನಿಲುವಿಂಗೆ ಶರಣೆನುತಿರ್ದ ಅಲ್ಲಮಪ್ರಭು ಇನ್ನುಳಿದ ಶರಣರಿಗೆಲ್ಲ ಒರೆಗಲ್ಲಾಗಿ ಅವರ ನಿಲುವನ್ನು ನಿರ್ಧರಿಸಿ ಶರಣ ಕ್ರಾಂತಿಗೆ ಶಕ್ತಿ ಕೇಂದ್ರವಾದ ಮುಕ್ತಾಯಕ್ಕ ಅಜಗಣ್ಣ ಮೊದಲಾದವರ ವಿಷಯದಲ್ಲಿಯೂ ಅಲ್ಲಮಪ್ರಭುವಿಗಿದ್ದ ಅಪಾರ ಗೌರವ ಇಡೀ ಶರಣ ಸಂಕುಲದ ವ್ಯಕ್ತಿಗತ ಸಂಬಂಧಗಳಿಗೆ ಉದಾತ್ತ ಉದಾಹರಣೆಯಾಗಿದೆ.

ಹೀಗೆ ಭಕ್ತಿಯೆಂಬ ಪೃಥ್ವಿಯ ಮೇಲೆ ಶಿಸ್ತು, ಸಂಯಮ, ಸಮಾನತೆ, ನಿಸ್ವಾರ್ಥ, ನಿರ್ವಂಚನೆಯ ಅನ್ಯರಿಗೆ ಅಸುಯ್ಯ ಪಡದ ಮನೋಭಾವದ ಶರಣರ ಸಂಘಟನೆ ಸಾಮಾಜಿಕ ವೈಚಾರಿಕ ಕ್ರಾಂತಿಗೆ ಪರಿಪೂರ್ಣ ಶಕ್ತಿಯಾಯಿತು.

ಶರಣರು ವೈಯಕ್ತಿಕ ಹಿತಾಸಕ್ತಿಯಲ್ಲಿ ನಿರತರಾದುದನ್ನು ಎಲ್ಲಿಯೂ ಕಾಣುವುದಿಲ್ಲ. ಹೂಸರವಳ್ಳಿಯಂತೆ ಗಳಿಗೆಗೊಂದು ಬಣ್ಣ ಬದಲಿಸುವ, ಸೋಗು ಹಾಕುವ ಸ್ವಭಾವ

ಅವರದಲ್ಲ. ನಿಷ್ಠೆ ಬದಲಾಯಿಸುವವರನ್ನು ಬಸವಣ್ಣ 'ಸೂಳೆಗೆ ಹುಟ್ಟಿದವ'ರೆಂದು ನಿರ್ದಾಕ್ಷಿಣ್ಯದಿಂದ ಕರೆದಿದ್ದಾನೆ.

ಭಕ್ತರ ಕಂಡರೆ ಬೋಳರಪ್ಪಿರಯ್ಯಾ
ಸವಣರ ಕಂಡರೆ ಬತ್ತಲೆಯಪ್ಪಿರಯ್ಯ
ಹಾರುವರ ಕಂಡರೆ ಹರಿನಾಮವೆಂಬಿರಯ್ಯ [ಬ.ವ.೧೦೩. ಪು. ೨೭]

ಅವರವರ ಕಂಡರೆ ಅವರವರಂತೆ ನಟಿಸುವವರನ್ನು ಉಗ್ರವಾಗಿ ನಿಷ್ಠುರವಾಗಿ ನಿಂದಿಸುವ ಶರಣ ಬಸವಣ್ಣನ ನುಡಿ ಆಧುನಿಕ (ರಾಜಕೀಯ) ಬದುಕಿನ ಕಟು ವಿಮರ್ಶೆಯಂತಿದೆ. ಹಣ್ಣಿದ್ದ ಗಿಡಕ್ಕೆ ಹಾರುವ ಮಂಗನಂತೆ ತಾತ್ವಿಕ ನಿಷ್ಠೆ ಇಲ್ಲದ ಮಾನವ ಏನಾದರೇನು? ಇಂಥವರ ಸಂಘಟನೆ ಸಂತೆ ನೆರೆದಂತೆ!

ಇಬ್ಬಗೆಯ ನಿಷ್ಠೆಯಿಂದ ಕೂಡಿದವರಿಂದ ಕ್ರಾಂತಿಯ ಮಾತಂತೂ ದೂರ, ಕ್ರಾಂತಿಯ ಮೂಲದ ಸಂಘಟನೆಯನ್ನು ಬಸವಣ್ಣನವರು 'ಕೂಸುಳ್ಳ ಸೂಳೆಗೆ' ಹೋಲಿಸಿದ್ದಾರೆ.

ಕೂಸುಳ್ಳ ಸೂಳೆ ಧನದಾಸೆಗೆ ಒತ್ತೆಯ ಕೊಂಡರೆ
ಕೂಸಿಂಗಲ್ಲ ಬೊಜಗಂಗಲ್ಲ
ಕೂಸನೊಮ್ಮೆ ಸಂತೈಸುವಳು ಬೊಜಗನನ್ನೊಮ್ಮೆ ನೆರೆವಳು!
(ಬಸವನಾಳರ ಬ.ವ. ೧೦೧. ಪು. ೨೭)

ಈ ಮಾನಸಿಕ ಹೊಯ್ದಾಟದಲ್ಲಿ ಅವಳಿಗೆ ಕೂಸಿನ ಮಮತೆಯು ಆಹ್ಲಾದವೂ ಇಲ್ಲ; ಬೊಜಗನ ಪ್ರಣಯದ ಸುಖವೂ ಇಲ್ಲ. ಹಣದಾಸೆಗೆ ಇವೆರಡನ್ನೂ ಮಾರಿಕೊಳ್ಳುತ್ತಾಳೆ.

ದಾಂಪತ್ಯದಲ್ಲಿಯೇ ಗಂಡ ಹೆಂಡಿರ ಸಂಬಂಧ ಎತ್ತು-ಕೋಣಗಳ ಇಜ್ಜೋಡಾದರೆ, ಬದುಕಿನ ಸಾಧನೆ ದೊಡ್ಡ ಸೊನ್ನೆಯೇ ಸರಿ. ಅದು ಸಂಸಾರ, ಸಂತತಿ, ಸಮಾಜಕ್ಕೆ ಮಾರಕ. ಈರ್ವರಲ್ಲಿ ಸಾಮರಸ್ಯ ಸಾಧಿಸಲಾಗದ ವ್ಯಕ್ತಿಗಳ ಸಂಬಂಧ, ಕ್ರಾಂತಿ ಮೂಲದ ವ್ಯಾಪಕ ಸಂಘಟನೆಗೆ ಎಂದೂ ಅರ್ಹವಾಗದು.

ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬದು ಸುರೆ ಮಾಂಸ!
ಭಾಂಡ ಭಾಜನ ಶುದ್ಧವಿಲ್ಲವವರ ಭಕ್ತಿ
ಹೆಂಡದ ಮಡಿಕೆ ಹೊರಗೆ ತೊಳೆದಂತೆ (ಬ.ವ. ೧೦೪. ಪುಟ ೨೮)

ಮಾನಸಿಕ ಸಾಮರಸ್ಯ ಆಂತರಿಕ ಶುದ್ಧೀಕರಣವಿಲ್ಲದ ಬಾಹ್ಯದ ಸ್ವಾರ್ಥಪೂರ್ಣ ಸಾಮಾಜಿಕ, ರಾಜಕೀಯ ಸಂಬಂಧಗಳು ಹೊರಗನ್ನು ಮಾತ್ರ ತೊಳೆದ ಹೆಂಡದ ಮಡಕೆಯಂತೆ ಇನ್ನಷ್ಟು

ದುಷ್ಪರಿಣಾಮಗಳಿಗೆ ಕಾರಣವಲ್ಲದೆ; ಉದ್ದೇಶಿತ ಗುರಿಸಾಧನೆಗೆ ಅವು ನೆರವಾಗವು. ಆದಕ್ಕಾಗಿ ಬಸವಣ್ಣನವರು–

ಗಂಡನ ಮೇಲೆ ಸ್ನೇಹವಿಲ್ಲದ ಹೆಂಡತಿ
ಲಿಂಗದ ಮೇಲೆ ನಿಷ್ಠೆಯಿಲ್ಲದ ಭಕ್ತ
ಇದ್ದರೇನೋ ಶಿವ ಶಿವಾ! ಹೋದರೇನೋ!

(ಬ. ವ. ೧೦೯. ಪು. ೨೯.)

ಎಂದು ಹೊಂದಾಣಿಕೆಯಿಲ್ಲದ ಸಂಬಂಧಕ್ಕೆ ವ್ಯಥೆ ಪಡುತ್ತಾರೆ. ಈ ಊಡದ ಆವು ಉಣ್ಣದ ಕರುವಿನ ಸಂಬಂಧಗಳು ದಾಂಪತ್ಯದಿಂದ ಹಿಡಿದು ಸಾಮಾಜಿಕ ರಾಜಕೀಯ ಸಂಘಟನೆಗಳನ್ನೊಳಗೊಂಡು 'ಶಿವ ಜೀವ' ಸಾಮರಸ್ಯದವರೆಗೆ ಅನರ್ಥಕಾರಿಯಲ್ಲದೆ ಕ್ರಾಂತಿಕಾರಿಯಾಗದು.

ಶರಣರ ಸಮಗ್ರ ಕ್ರಾಂತಿಗೆ ಕಾರಣವಾದ ಸಂಬಂಧದ ಚಿತ್ರಬರೆವ ವಚನವನ್ನಿಲ್ಲಿ ಉಲ್ಲೇಖಿಸಬಹುದು.

'ನಾನು ಬಂದ ಕಾರ್ಯಕ್ಕೆ ನೀವು ಬಂದಿರಿ
ನೀವು ಬಂದ ಕಾರ್ಯಕ್ಕೆ ನಾನು ಬಂದೆ
ನಾನೂ ನೀವೂ ಬಂದ ಕಾರ್ಯಕ್ಕೆ ಬಂದಾತನಲ್ಲಮ ಪ್ರಭುದೇವರು
ಮುಂದೆ ಕೆಲವು ದಿವಸಕ್ಕೆ ಕಲ್ಯಾಣವೆಂಬುದು ಪ್ರಣತಿ
ಯಾಯಿತ್ತು, ನಾನು ತೈಲನಾದೆನು
ನೀವು ಬತ್ತಿಯಾದಿರಿ ಪ್ರಭುದೇವರು ಜ್ಯೋತಿಯಾದರು
ಪ್ರಣತಿ ಒಡೆದಿತ್ತು ತೈಲವರಿತಿತ್ತು ಜ್ಯೋತಿಮಾಯವಾಯಿತ್ತು

[ಉತ್ತಂಗಿ ಚನ್ನಪ್ಪ. ಅನುಭವ ಮಂಟಪದ ಐತಿಹಾಸಿಕತೆ ಪುಟ ೧೧೦]

ಈ ಹಿಂದೆ ಉಲ್ಲೇಖಿಸಿದ ಅಲ್ಲಮ ಪ್ರಭುವಿನ ಪ್ರಣತಿಯ ಪ್ರತಿಮೆಯೇ ಇಲ್ಲಿದ್ದರೂ ಶರಣರ ಗಾಢ ಸಂಬಂಧವನ್ನು ಇನ್ನಷ್ಟು ಸ್ಪಷ್ಟವಾಗಿಸುತ್ತದೆ. ಈ ವಚನದ ಜೊತೆಗೆ ಕ್ರಾಂತಿಯನ್ನುಳಿಸಿ ಸಂಘಟನೆ ಒಡೆದುದರ ಸೂಚನೆಯೂ ಇದೆ.

ಶರಣರು ಎಲ್ಲೆಲ್ಲಿಂದಲೋ ಬಂದರೂ ಒಬ್ಬೊಬ್ಬರಾಗಿ ಬಂದರೂ, ಒಂದೇ ಕಾರ್ಯಕ್ಕೆ ಬಂದವರು. ಪರಸ್ಪರರನ್ನು ಅರಿತು ಅರ್ಥಮಾಡಿಕೊಂಡು ಒಗ್ಗೂಡಿ ಕಾಯಕದ ಹಿನ್ನೆಲೆಯಲ್ಲಿ ಕಾರ್ಯಮಾಡಿದರು. 'ಕಲ್ಯಾಣ' ಪ್ರಣತಿಯಾದರೆ, ಒಬ್ಬರು ಎಣ್ಣೆ, ಇನ್ನೊಬ್ಬರು ಬತ್ತಿ, ಮತ್ತೊಬ್ಬರು ಜ್ಯೋತಿಯಾದರು. ಈ ಎಣ್ಣೆ ಬತ್ತಿ ಜ್ಯೋತಿಗಳ ಸಂಯೋಜನೆಯ ಸಂಬಂಧದಿಂದಲೇ 'ಶಿವನ ಪ್ರತಾಪ' ತೊಳಗಿ ಬೆಳಗಿತು. ಆ ಪ್ರಭೆಯಲ್ಲಿ ಮಾನವತೆ ತನ್ನ ಕಲ್ಯಾಣದ ಹಾದಿಯನ್ನು ಕಂಡುಕೊಂಡಿತು. ಆದರೆ ಅನಂತ ಕಾಲದ ವ್ಯಕ್ತಿ ಮೌಢ್ಯ ಸಂಪ್ರದಾಯಸ್ಥ ಸ್ವಾರ್ಥ ಸಮಾಜಗಳ ಶಕ್ತಿ ಕಾರಣವಾಗಿ ತೈಲ ತೀರಿತು,

ಬತ್ತಿ ಸುಟ್ಟಿತು, ಪ್ರಣತಿ ಒಡೆಯಿತು! ಈ ಭೌತಿಕ ವಸ್ತುಗಳಾದ ಇವೆಲ್ಲ ಹಾಗಾಗ ಬೇಕಾದುದು ಸ್ವಾಭಾವಿಕ. ಆದರೆ ಇವೆಲ್ಲವುಗಳ ಸಂಬಂಧ ಪರಿಣಾಮವಾದ 'ಪ್ರಭೆ' ಒಟ್ಟು ಬಯಲನ್ನೆಲ್ಲ ತುಂಬಿ ಕಣ್ಣಿದ್ದವರ ಕಣ್ಣಿಗೆ ಸದಾಕಾಣುತ್ತಲೇ ಇದೆ. ಬಯಲು ಬಾಯ್ದೆರೆದು ಮಾತನಾಡಿದ ವಚನಗಳಲ್ಲಿ! ಶರಣರ ನಡೆಯೇ ನುಡಿಯಾಯ್ತು; ನುಡಿ ವಚನವಾಯ್ತು. ವಚನ ಯುಗ ಯುಗಾಂತರದ ವೈಚಾರಿಕ ವಲ್ಲರಿಯ ಕುಡಿಯಾಯ್ತು. ಅದು ಎಂದೂ ಆರದ ಕ್ರಾಂತಿಯ ಕಿಡಿಯಾಯ್ತು.

ಶರಣರು, ಸಾಮಾಜಿಕ ವ್ಯಕ್ತಿಗತ ಸಂಬಂಧಗಳು ಶಿವ-ಶಕ್ತಿ ಸಂಬಂಧಗಳಾಗಿರ ಬೇಕೆಂದು ಚಿರಂತನ ಸಂಘಟನೆ ಮಾಡಿದರು. ಇಂಥ ಸಂಬಂಧದಿಂದ ಮಾತ್ರ ಬದುಕಿನ ಯಾವುದೇ ಕ್ಷೇತ್ರದಲ್ಲಿ ಉದ್ದೇಶಿತ ಕ್ರಾಂತಿ ತರಲು ಸಾಧ್ಯವೆಂಬುದನ್ನು ತೋರಿಸಿಕೊಟ್ಟರು. ಕೇವಲ ವೈಯಕ್ತಿಕ ಉದ್ದೇಶ ಸೀಮಿತ ಸ್ವಾರ್ಥಪರ ಸಂಬಂಧಗಳು ಸಾಮಾಜಿಕ ಕ್ರಾಂತಿಗೂ ವ್ಯಕ್ತಿ ಕಲ್ಯಾಣಕ್ಕೂ ಅಡ್ಡಿಯಾಗಿ ನಿಲ್ಲುವುವಲ್ಲದೆ ಮಾನವ ಬದುಕಿನ ಯಾವ ಘನೋದ್ದೇಶ ವನ್ನೂ ಸಾಧಿಸಲಾರವು,

ಜಿಡ್ಡುಗಟ್ಟಿದ ಕಂದಾಚಾರ, ಜಾತಿ ಕುಲಾಚಾರಗಳ ಸಾಮಾಜಿಕ ವೈಪರೀತ್ಯಗಳನ್ನೆಲ್ಲ ಕಿತ್ತೆಸೆಯಲು ಶರಣರು ಮಾಡಿದ್ದು ಜನತೆಯ ಮಾನಸಿಕ ಪರಿವರ್ತನೆ. ಪರಸ್ಪರರಲ್ಲಿ ಅನುಕಂಪ, ಗೌರವ ಬೆಳೆಸಲು ಅವರು ಮಾಡಿದ್ದು ಶೀಲ ಸಂವರ್ಧನೆ. ಚಾರಿತ್ರ್ಯ ನಿರ್ಮಾಣ, ಶೂನ್ಯ ಸಂಪಾದನೆ! ಇವೆಲ್ಲ ಜನಸಾಮಾನ್ಯರ ಸಾಧ್ಯತೆಯಲ್ಲವಾದರೂ ಆ ದಿಶೆಯಲ್ಲಿ ಸಾಧಕರಾಗುವ ಪ್ರೇರಣೆ ನೀಡಿದರು. ವ್ಯಕ್ತಿ ವೈಯುಕ್ತಿಕವಾಗಿ ತನ್ನನ್ನು ತಾನು ನೇರ್ಪಡಿಸಿಕೊಳ್ಳುವ ಶಿವಪಥವನ್ನು ಹಾಕಿಕೊಟ್ಟರು. ಸಾಮಾಜಿಕ ಅಸಮಾನತೆ ನೀಗಿಸಲು ಲಿಂಗ ಜಾತಿ ವೃತ್ತಿಗಳ ಮೇಲು ಕೀಳನ್ನು ಕಿತ್ತೊಗೆದು ಯಾರೊಡನೆಯೂ ವಿರಸಕ್ಕೆಳಿಯದೆ ಅನಂತ ಕಾಲದ ಮಾನವ ವ್ಯಾಧಿಗಳಿಗೆ ಕಾಯಕಲ್ಪ ಮಾಡಿದರು. ಮಾನವನಲ್ಲಿಯ ಪಶುತ್ವ ಸೋಸಿ ತೆಗೆದು ಶಿವತ್ವದ ಸಂಸ್ಕಾರ ಕೊಟ್ಟರು. ಸರ್ವರಿಗೆ ಸಂಪೂರ್ಣ ಜ್ಞಾನದ ದೀಕ್ಷೆ ಕೊಟ್ಟರು. ಈ ವೈಯಕ್ತಿಕ ಸಾಮಾಜಿಕ ಬದಲಾವಣೆಯನ್ನು 'ಕ್ರಾಂತಿ' ಎನ್ನುವುದು ಔಚಿತ್ಯಪೂರ್ಣವಾದೀತು! ಅದನ್ನುಳಿದು ರಾಜಕೀಯ ವಿಪ್ಲವವನ್ನು, ಸ್ವಾರ್ಥಪರ ದಂಗೆ ಗಳನ್ನು, ಖಡ್ಗ ಬಾಣ ಬಾಂಬುಗಳ ಸಂಘರ್ಷದ ಹಿಂಸೆಯ ಬದಲಾವಣೆಯನ್ನು 'ಕ್ರಾಂತಿ' ಎಂದರೆ ಶರಣರ ಈ ಮಹತ್ಸಾಧನೆಯನ್ನು ಇನ್ನೊಂದು ಹೆಸರಿನಿಂದ ಕರೆಯುವುದು ಅನಿ ವಾರ್ಯವಾಗುತ್ತದೆ.

□ □

ಆಚಣ್ಣನ ವರ್ಧಮಾನ ಪುರಾಣ: ಒಂದು ಸಮೀಕ್ಷೆ

—ಡಾ|| ಕಮಲಾ ಹಂಪನಾ

ಹಳಗನ್ನಡ ಸಾಹಿತ್ಯದಲ್ಲಿ ಪಂಪ, ಪೊನ್ನ, ರನ್ನ, ಜನ್ನ, ನಾಗಚಂದ್ರ ಮುಂತಾದ ಕೆಲವೇ ಚಂಪೂ ಕವಿಗಳು ಗಣ್ಯರಾಗಿದ್ದಾರೆ, ಜನಪ್ರಿಯರಾಗಿದ್ದಾರೆ. ಇವರಷ್ಟು ಜನಪ್ರಿಯ ರಾಗಿರದಿದ್ದರೂ ಗಣ್ಯರಾಗಿರುವ ಇನ್ನೂ ಕೆಲವು ಪ್ರಮುಖರಿದ್ದಾರೆ. ಅವರ ಶ್ರೇಣಿಯಲ್ಲಿ ಆಚಣ್ಣನೂ ಮಿಂಚುತ್ತಾನೆ. ಆಚಣ್ಣ ಎಂಬುದು ಅಪರೂಪದ ಶಬ್ದ, ಅಷ್ಟಾಗಿ ಜನ ಬಳಕೆಯಲ್ಲಿ ಇಲ್ಲ. ಸಂಸ್ಕೃತದ ಆದಿತ್ಯ ಎಂಬ ಶಬ್ದದ ಕನ್ನಡ ತದ್ಭವ ರೂಪ ಆಚ; ಇದಕ್ಕೆ ಪ್ರೀತಿ ಹಾಗೂ ಗೌರವಾರ್ಥವಾಗಿ 'ಅಣ್ಣ' ಎಂಬ ಸಂಬಂಧವಾಚಿ ಕನ್ನಡ ಶಬ್ದ ವನ್ನು ಸೇರಿಸಿ ರೂಪಿಸಲಾದ ಅಂಕಿತನಾಮ ಆಚಣ್ಣ:

ಭಾರದ್ವಾಜ ಪವಿತ್ರಗೋತ್ರ ತಿಳಕಂ ಶ್ರೀ ಕೇಶಿರಾಜಾತ್ಮಜಂ
ಸಾರೋದಾರ ಪವಿತ್ರಕಾದಿ ಗುಣಭೃನ್ಮಲ್ಲಾಂಬಿಕಾನಂದನಂ
ತಾರೇಶೋಜ್ಜ್ವಳ ಕೀರ್ತಿ ಜೈನರುಚಿ ವಾಣೀ ವಲ್ಲಭಂ ನಿರ್ಮಳಾ
ಚಾರಂ ನಿರ್ಮಿಸಿ ಪೆರ್ಮೆವೆತ್ತನೊಲವಿಂದಾಚ್ಚಣನಿ ಧಾತ್ರಿಯೊಳ್||

ಆಚಣ್ಣ (ಆಚಿರಾಜ) ಎಂಬ ಹೆಸರಿನ ಈ ಕವಿ ಭಾರದ್ವಾಜ ಗೋತ್ರದವನು, ಕೇಶಿರಾಜ (ಕೇಶವರಾಜ) ಮತ್ತು ಮಲ್ಲಾಂಬಿಕೆಯರ ಮಗ. ಈ ಆಚಣ್ಣನ ಪೋಷಕ ನಾದ ರೇಚವಿಭು ಆ ಕಾಲದಲ್ಲಿ ಪ್ರಭಾವಿಯಾದ ಅಧಿಕಾರಿಯಾಗಿದ್ದನು. ವಸುಧೈಕ ಬಾಂಧವ ಎಂಬ ಬಿರುದಾಂಕಿತನಾದ ಈ ರೇಚರಸನನ್ನು ಶಾಸನಗಳು ಕೊಂಡಾಡಿವೆ. ರೇಚಿಮಯ್ಯ, ರೇಚರಸ ರೇಚವಿಭು, ರೇಚಣ್ಣ, ರೇಚಣ ಚಮೂಪತಿ ಎಂಬ ಹೆಸರು ಗಳಿಂದ ಜನಮಾನ್ಯನಾದ ರೇಚರಸನು ಮೊದಲು ಕಾಲಚೂರ್ಯರ ದೊರೆ ಆಹವಮಲ್ಲನಲ್ಲಿ (೧೧೮೦-೧೧೮೩) ಚಮೂಪತಿಯೂ, ಮಂತ್ರಿಯೂ ಆಗಿದ್ದನು. ಕಲಚೂರ್ಯರ ಅಧಃ ಪತನವಾದ ಮೇಲೆ ಹೊಯ್ಸಳ ವೀರ ಬಲ್ಲಾಳ (೧೧೭೩-೧೨೨೦) ಮಹಾರಾಜನ ಆಶ್ರ ಯಕ್ಕೆ ರೇಚಣನೂ ತೆರಳಿದನೆಂದು ತಿಳಿದು ಬರುತ್ತದೆ. ಮಹಾಜಿನಭಕ್ತನಾದ ರೇಚಣನು ಅರಸಿಕೆರೆಯಲ್ಲಿ ಸು ೧೨೨೦ರಲ್ಲಿ ಸಹಸ್ರಕೂಟ ಜಿನಾಲಯವನ್ನು ಕಟ್ಟಿಸಿ ಅದಕ್ಕೆ ವೀರ ಬಲ್ಲಾಳರಾಜನ ಅನುಮತಿಯಿಂದ ದತ್ತಿಯನ್ನು ಬಿಟ್ಟುಕೊಟ್ಟ ಸಂಗತಿಯನ್ನು ಅರಸಿಕೆರೆ ೭೭ ನೆಯ ಶಿಲಾ ಶಾಸನ ದಾಖಲಿಸಿದೆ. ಶ್ರೀ ರೇಚಣನ ಕೋರಿಕೆಯ ಮೇರೆಗೆ ಕೇಶಿರಾಜ ಚಾಮ ಹಾಗೂ ತಿಕ್ಕಣ ಎಂಬುವರು ಆರಂಭಿಸಿದರೂ ಪೂರೈಸಲು ಸಾಧ್ಯವಾಗದೇ ಹೋದ ಈ ವರ್ಧಮಾನ ಪುರಾಣವನ್ನು ಆಚಣ್ಣನು ಪೂರ್ತಿಗೊಳಿಸಿ ಕೃತಕೃತ್ಯನಾಗಿದ್ದಾನೆಂಬ

ಅಂಶವನ್ನು ವಿಶೇಷವಾಗಿ ಗಮನಿಸಬಹುದು. 'ಶ್ರೀಪದಾಶೀತಿ'ಯೆಂಬ ೯೪ ಕಂದ ಪದ್ಯಗಳ ಪಂಚಪರಮೇಷ್ಠಿ ಸ್ತೋತ್ರ ಕೃತಿಯನ್ನು ಬಿಟ್ಟರೆ ೧೬ ಆಶ್ವಾಸಗಳ 'ವರ್ಧಮಾನ ಪುರಾಣ'ವೆಂಬ ಚಂಪೂ ಕಾವ್ಯವೇ ಆಚಣ್ಣನ ಉಪಲಬ್ಧ ಕಾವ್ಯ.

ಆಚಣ್ಣ ಕವಿಗಿಂತ ಮೊದಲು ಕನ್ನಡದಲ್ಲಿ ನಾಗವರ್ಮಕವಿ ವರ್ಧಮಾನ ಪುರಾಣವನ್ನು ಬರೆದದ್ದು ಆ ಚಂಪೂ ಕಾವ್ಯ ದೊರೆತು ಪ್ರಕಟವಾಗಿದೆ. ಕರ್ಣಪಾರ್ಯನೂ (೧೧೬೭) ಒಂದು ವೀರೇಶ ಚರಿತೆಯನ್ನು ಬರೆದಂತೆ ತಿಳಿದು ಬರುತ್ತದೆಯಾದರೂ ಆ ಕಾವ್ಯ ಉಪಲಬ್ಧವಿಲ್ಲ. ಪದ್ಮ ಕವಿ (೧೬ ಶತಮಾನ) ಹಾಗೂ ಜಿನಸೇನ ದೇಶವ್ರತಿ (೧೮ ಶತಮಾನ) ಎಂಬ ಕವಿಗಳ ವರ್ಧಮಾನ ಚರಿತೆ ಕಾವ್ಯಗಳು ಪ್ರಕಟವಾಗಿವೆ. ಹೀಗೆ ಕನ್ನಡದಲ್ಲಿ ರಚಿತವಾಗಿರುವ ಐದು ವರ್ಧಮಾನ ಪುರಾಣಗಳಲ್ಲಿ ಆಚಣ್ಣನ ಕಾವ್ಯದ ಹಿರಿಮೆಯನ್ನು ತೌಲನಿಕ ಅಧ್ಯಯನದಿಂದ ವಿಮರ್ಶಕರು ಕಂಡುಕೊಳ್ಳಬೇಕಾಗಿದೆ.

ಆಚಣ್ಣನ ಸೃಜನ ಶಕ್ತಿಯ ಆಡುಂಬೊಲವಾಗಿ ವರ್ಧಮಾನ ಪುರಾಣ ಕಾವ್ಯ ಹೇಗೆ ರೂಪಗೊಂಡಿದೆಯೆಂಬುದನ್ನು ಮನಗಂಡಾಗ ಈ ಕಾವ್ಯದ ಒಟ್ಟು ನೆಲೆ–ಬೆಲೆಗಳನ್ನು ಹರಳುಗೊಳಿಸಿ ತೋರಿಸಬಹುದು. ಆಚಣ್ಣ ಉಭಯ ಭಾಷಾವಿಶಾರದ. ಕನ್ನಡ–ಸಂಸ್ಕೃತ ಭಾಷೆಗಳಲ್ಲಿ ಆತನಿಗೆ ಹೋಯಜ್ ಕಯ್ಯಾದ ಪ್ರಭುತ್ವವಿದೆ. ತನಗಿರುವ ಸಂಸ್ಕೃತ ಭಾಷಾ ಪ್ರಾವೀಣ್ಯವನ್ನು ಪ್ರದರ್ಶಿಸಲು ಆಚಣ್ಣ ಕವಿ ಈ ಕಾವ್ಯದುದ್ದಕ್ಕೂ ಪ್ರಯತ್ನಿಸಿದ್ದಾನೆ. ಅದು ಬಹುಮಟ್ಟಿಗೆ ಈಡೇರಿದೆ. ಭಾಷಾ ಪ್ರಾಗಲ್ಭ್ಯವನ್ನು ಪ್ರಕಟಿಸುವ ಓಘದಲ್ಲಿ ಕವಿ ತನ್ನ ಕಾವ್ಯ ಅನಗತ್ಯವಾಗಿ ಪೆಡಸಾಗುತ್ತಿದೆಯೆಂಬ ಅಂಶವನ್ನು ಮರೆತಂತೆ ಕಾಣುತ್ತದೆ. ವಾಗಾಡಂಬರದ ಅಟ್ಟಹಾಸದಲ್ಲಿ ಕಾವ್ಯ ಹಿನ್ನೆಲೆಗೆ ಸರಿದಿರುವುದೂ ಕಂಡು ಬರುತ್ತದೆ. ಹೀಗೆ ಹೇಳಿದಾಗ ಯಶಸ್ವಿಯಾದ ಭಾಗಗಳೂ ಇವೆಯೆಂಬ ವಾಸ್ತವತೆಯನ್ನು ಮರೆತಿಲ್ಲ. ಕನ್ನಡ–ಸಂಸ್ಕೃತಗಳು ಅನ್ಯೋನ್ಯವಾಗಿ ಕೈ ಹಿಡಿದು ಸರಸ ದಾಂಪತ್ಯದ ಹೆಜ್ಜೆಯನ್ನಿಡುವ ಪದ್ಯಗಳೂ ನೂರಾರಿವೆ; ಕವಿಗೆ ಅಪ್ಯಾಯಮಾನವಾಗಿವೆ. ಅರ್ಥ ಸುಭಾಗತೆಯಿಂದಲೂ, ಭಾವ ಪುಷ್ಟಿಯಿಂದಲೂ, ಭಾಷಾ ಶುದ್ಧಿಯಿಂದಲೂ ಉತ್ತಮ ರಚನೆಗಳೆಂದು ಪರಿಗಣಿಸಬೇಕಾದ ಪದ್ಯಗಳು ಸಂಖ್ಯೆ–ಸತ್ವಗಳಿಂದ ಸಾಕಷ್ಟಿದ್ದು ಆಚಣ್ಣ ಕವಿಯ ಬೆನ್ನು ತಟ್ಟುತ್ತವೆ.

ಜಿನಭಕ್ತಿಯ ಪ್ರೇರಣೆಯೊಂದಿಗೆ ಹಿಂದಿನ ಕವಿಗಳ ಕಾವ್ಯಗಳೂ ಆಚಣ್ಣನಿಗೆ ಸ್ಫೂರ್ತಿ ತುಂಬಿ ದಾರಿ ಬೆಳಗಿರುವುದನ್ನು ಕವಿಯೇ ನಿವೇದಿಸಿಕೊಂಡಿದ್ದಾನೆ (೧–೧೮).

ಶ್ರೀ ವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾ ಜಗ
ತ್ಪಾವನ ನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ
ಭಾವಕ ಚಕ್ರಿ ಹೊನ್ನಿಗನಿಳಾಸುತ ರನ್ನಿಗನಗ್ಗದಗ್ಗಳಂ
ಧೀವಿಭು ಬೊಪ್ಪನೆಂಬ ಕವಿದರ್ಶಕರಿಂದೆಸೆದತ್ತು ಭೂತಳಂ||

ತನಗಿಂತ ಹಿಂದಿನ ಹಿರಿಯ ಕನ್ನಡ ಕವಿಗಳ ಕಾವ್ಯಮಾರ್ಗ ಅಚಣ್ಣನಿಗೆ ಪ್ರಿಯವಾಗಿದೆ. ೨೪ ಜಿನ ತೀರ್ಥಂಕರರಲ್ಲಿ ಕಡೆಯವನಾದ ಮಹಾವೀರನೇ ಈ ಕಾವ್ಯದ ಕಥಾನಾಯಕ, ಕೇಂದ್ರವ್ಯಕ್ತಿ. ಕಾವ್ಯದ ಮುಕ್ಕಾಲು ಭಾಗ, ೧೨ನೆಯ ಆಶ್ವಾಸದವರೆಗೆ ಆತನ ಪೂರ್ವ ಭವಗಳ ಭವಾವಳಿ ಕಥೆಯಿದೆ. ಕಡೆಯ ನಾಲ್ಕು ಆಶ್ವಾಸಗಳಲ್ಲಿ ಚರಮದೇಹಧಾರಿಯಾದ ಮಹಾವೀರನ ಚರಿತೆಯಿದೆ. ಅಚಣ್ಣನ ಕಥನ ಶಕ್ತಿಗೆ ಭವಾವಳಿಯೊಂದು ಸವಾಲು. ಒಂದು ಜೀವ ಈ ಹುಟ್ಟು ಸಾವುಗಳ ಚಕ್ರದಲ್ಲಿ ಪರಿಭ್ರಮಿಸಿ ಕಡೆಗೆ ಮೋಕ್ಷ ಸುಖವನ್ನೈದಿದ ಜೀವ ವಿಕಾಸ ಕ್ರಿಯೆಯನ್ನು ಅಚಣ್ಣ ಸಾಕಷ್ಟು ಏಕಾಗ್ರತೆಯಿಂದ ಸ್ವಾರಸ್ಯ ಕೆಡದಂತೆ ನಿರೂಪಿಸಿದ್ದಾನೆ.

ಈ ಲೇಖನದಲ್ಲಿ, ಅಚಣ್ಣನ ಕಾವ್ಯ ಪ್ರಕ್ರಿಯೆಯಲ್ಲಿ ಸ್ವಂತ ಹಾಗೂ ಸ್ವತಂತ್ರವೆಂದು ಬೊಟ್ಟಿಟ್ಟು ತೋರಿಸಬಹುದಾದ ಹಾಗೂ ವಿಶಿಷ್ಟವೆನಿಸುವ ಕೆಲವು ಪದ್ಯಗಳನ್ನು ಆರಿಸಿ ವಿವೇಚಿಸಲಾಗಿದೆ. ಪರಿಮಿತ ಅವಕಾಶಗಳಿರುವ ಇಂಥ ಪ್ರಬಂಧಗಳಲ್ಲಿ ಒಬ್ಬ ಕವಿಯನ್ನು, ಒಂದು ಕಾವ್ಯವನ್ನು ಕುರಿತು ವಿವೇಚಿಸಿ ವಿಮರ್ಶಿಸುವಾಗ ಕವಿ-ಕಾವ್ಯಗಳ ಮೌಲಿಕತೆಯನ್ನು ಗುರುತಿಸುವ ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳುವುದು ಸೂಕ್ತವೆಂದೆಣಿಸಿ ಈ ಆಯ್ಕೆ ಮಾಡಿದ್ದೇನೆ. ಇದರ ವಿಶ್ಲೇಷಣೆಯಲ್ಲೇ ಕವಿಯ ಮತ್ತು ಕಾವ್ಯದ ಮೇಲ್ಮೆಯೂ ಸ್ಥಾಪಿತವಾಗುತ್ತದೆಂದೂ ಗ್ರಹಿಸಿದ್ದೇನೆ. ಒಬ್ಬ ಕವಿಯ ಕಾಲ, ದೇಶ, ಪರಿಸರ, ಜಾತಿ, ಆಶ್ರಯದಾತ ಕಾವ್ಯವಸ್ತು ಮುಂತಾದ ಇತಿ ವೃತ್ತ ನಿರೂಪಿಸುವ ಮಾದರಿಯ ಸಾಹಿತ್ಯದ ಅಧ್ಯಯನ ನಮ್ಮಲ್ಲಿ ವಿಪುಲವಾಗಿ ನಡೆದಿರುವುದುಂಟು. ಆದರೆ ಹಳೆಗನ್ನಡ ಸಾಹಿತ್ಯ ಕೃತಿಗಳ ಅಧ್ಯಯನವನ್ನು ಅದರ ಚೌಕಟ್ಟಿನಾಚೆಗೂ ಬೆಳೆಸಬೇಕಾಗಿದೆ. ಒಂದು ಕಾವ್ಯದ ಬಾಹ್ಯವನ್ನಷ್ಟೇ ಬಿಡಿಸಿ ನೋಡುವ ಇದುವರೆಗಿನ ವಿಮರ್ಶನ ಪದ್ಧತಿಯೊಂದಿಗೆ ಇತ್ತೀಚಿನ ದಶಕಗಳಲ್ಲಿ ಒಳಮುಖ ಅಧ್ಯಯನವೂ ನಡೆಯತೊಡಗಿದೆ. ಹೊಸಗನ್ನಡ ಕವಿತೆಗಳನ್ನು ವಿಶ್ಲೇಷಿಸುವ ಮಾದರಿಯಲ್ಲಿ ನಮ್ಮ ಹಳಗನ್ನಡ ಕಾವ್ಯಗಳ ಸರ್ವ ಸೂಕ್ಷ್ಮಗಳನ್ನೂ, ಅದರ ಪದರಗಳನ್ನೂ ವಿಮರ್ಶೆಯ ಬೆಳಕಿಗೆ ಹಿಡಿದು ನೋಡುವ ಪ್ರಯತ್ನ ಹೆಚ್ಚು ಫಲಕಾರಿಯಾದುದು. ಕವಿಯ ಕಾವ್ಯದ ರಾಚನಿಕ ಹಾಗೂ ಒಳಮುಖ ಅಧ್ಯಯನವನ್ನು ಈಗಾಗಲೇ ಕೆಲವು ವಿಮರ್ಶಕ-ಸಂಶೋಧಕರು ಪ್ರಾರಂಭಿಸಿದ್ದಾರೆ. ಈ ಬಗೆಯ ಅಧ್ಯಯನದಿಂದ ಒಂದೊಂದು ಪದ್ಯದ ಅಂತರಂಗ ತೆರೆದುಕೊಳ್ಳುವುದು ಸಾಧ್ಯವಿದೆ. ಹಾಗೆಂದು ಒಂದು ಕಾವ್ಯದ ಎಲ್ಲ ಪದ್ಯಗಳೂ ಗಮನಾರ್ಹ, ಗ್ರಾಹ್ಯವೆಂದಲ್ಲ. ಗಣನೀಯವೆಂದು ಪರಿಗಣಿಸಲು ಯೋಗ್ಯವಾದ ಪದ್ಯಗಳನ್ನು ಕಾವ್ಯಾಭ್ಯಾಸಿಗಳು ಕಂಡುಕೊಳ್ಳಬೇಕು. ಆ ದಿಕ್ಕಿನಲ್ಲಿ ಆ ಮಾನದಂಡದಿಂದ ಅಚಣ್ಣನ ಕೆಲವು ಪದ್ಯಗಳನ್ನು ಇಲ್ಲಿ ಆಯ್ಕೆ ಮಾಡಿದ್ದೇನೆ.

ಕನ್ನಡದ ಕಾವ್ಯ ಪರಂಪರೆಯನ್ನು ದಾಖಲಿಸುವ ಶಿಷ್ಟ ಪದ್ಧತಿಯೊಂದು ವಿಶಿಷ್ಟ ರೀತಿಯಲ್ಲಿ ಬೆಳೆದು ಬಂದಿದೆ. ಉಪಲಬ್ಧ ಸಾಹಿತ್ಯಾಧಾರವನ್ನಷ್ಟೇ ಅವಲಂಬಿಸುವ

ದಾದರೆ ಕವಿರಾಜ ಮಾರ್ಗದಲ್ಲಿಯೇ ಇದರ ಉದ್ಘಾಟನೆಯಿದೆ. ಹಳಗನ್ನಡ ಕಾವ್ಯಗಳಲ್ಲಿ ಇದರ ಸ್ವರೂಪ ಮತ್ತು ವೈವಿಧ್ಯ ಚೆನ್ನಾಗಿ ಕಂಡುಬರುತ್ತದೆ. ತನಗಿಂತಾ ಹಿಂದಣ ಹಾಗೂ ಅನಂತರದ ಉಳಿದ ಕವಿಗಳಿಗಿಂತ ಆಚಣ್ಣನು ಹೇಗೆ ಭಿನ್ನನಾಗಿ ನಿಲ್ಲುತ್ತಾನೆಂಬು ದನ್ನು ಈ ಪೂರ್ವಕವಿ ಸ್ಮರಣ ಪದ್ಯ ಮಾಲಿಕೆಯ ವಿಶ್ಲೇಷಣೆಯಿಂದ ಗುರುತಿಸಬಹುದು. ಈ ಪದ್ಯವನ್ನು ನೋಡಿ;

ಮಾನಧನಂ ವಿಳಸಿತ ವಿ।
ದ್ಯಾನಿಳಯಂ ವಿಮಳ ಚಿತ್ತನಮಳ ಚರಿತ್ರಂ।
ಭೂನುತಮೆನಿಸುವ ಕವಿ ಸಂ।
ತಾನಂ ತಾ(ಂಸು) ಪ್ರಸನ್ನಮಕ್ಕೆಮಗೆಂದುಂ॥

೧.೧೫ರಲ್ಲಿ ಇರುವುದು ಮಾಮೂಲಿನ ಸರಕು; ಇಂತಹುದೇ ಹಳೆಯ ಹೇಳಿಕೆಗಳಿರ ಬಹುದು. ಆದರೆ ಇಡೀ ಒಂದು ಕವಿ ಸಂತಾನ ನಮಗಿನ್ನು ಪ್ರಸನ್ನವಾಗಲೆಂದು ಪ್ರಾರ್ಥಿಸುವಾಗ ಆ ಕವಿ ಸಂತಾನ ಶ್ರೀಯನ್ನು ವಿಶೇಷಣಗಳಿಂದ ಅಲಂಕರಿಸಿದ್ದಾನೆ. ಈ ಕವಿ ಸಂತತಿಯೆಂಬುದು ಮಾನವನ್ನೇ ಧನವಾಗುಳ್ಳದ್ದು, ವಿಳಸಿತ ವಿದ್ಯೆಗೆ ನಿಲಯವಾಗಿರು ವಂತಹುದು. ಲೋಕಸ್ತುತಿಗೆ ಪಾತ್ರವಾಗಿರುವಂತಹುದು. ಹೀಗೆ ಕವಿಸಂತಾನದ ಮಹಿಮೆ ದೊಡ್ಡದೆಂಬುದನ್ನು ಆಚಣ್ಣನು ಅಭಿಮಾನಧನನಾಗಿ ವೈಭವೀಕರಿಸಿ ಬೀಗಿದ್ದಾನೆ. ಪರೋಕ್ಷವಾಗಿ ತಾನೂ ಕೂಡಾ ಇಂತಹ ಪರಂಪರೆಯ ಭಾಗವಾಗಿದ್ದೇನೆಂಬ ಆತ್ಮಶ್ರೀಯೂ ಇದೆ. ಇದರ ಮುಂದಿನ ಪದ್ಯವಾದ (೧.೧೬) ರೂ. (೧.೧೫ಕ್ಕಿಂತಾ), ಇಂತಹ ಇನ್ನಿತರ ಅನ್ಯಕವಿ ವಿರಚಿತ ಪದ್ಯಗಳಿಗಿಂತ ಸೊಗಸಾಗಿದೆ;

ನಿರತಿಶಯಾರ್ಥ ಸಾರ್ಥವಿದೆನಿಪ್ಪನಮೊಪ್ಪುವನೇಕ ಕಾವ್ಯಮಂ
ಪರಹಿತಮಾಗೆ ರಾಗದೆ ವಿನಿರ್ಮಿಸಿ ನಿರ್ಮಳ ಕೀರ್ತಿಯಂ ದಿಗಂ
ಬರ ಧರಣೀತಳಾವಳಿಯೊಳಾದಮೆ ಪರ್ವಿಸಿದಾ ಕವೀಂದ್ರರಂ
ವಿರಹಿತ ತಂದ್ರರಂ ಪೊಗೞ್ದಂಗೆ ತದಾಶ್ರಿತವಾಣಿ ಕೂರ್ಪಳೇ॥

ಈ ಪದ್ಯದ ಅರ್ಥವಂತಿಕೆ ಚಿಂತಿಸಿದಷ್ಟು ಪ್ರಿಯವಾಗುತ್ತದೆ. ಕವಿಗಳಿಗೆಲ್ಲಾ ಅತ್ಯವಶ್ಯವಾಗಿ ಬೇಕಾದದ್ದು ವಾಣಿಯ ಕೃಪೆ. ಆ ಸರಸ್ವತಿಯಾದರೊ ಕವಿಗಳನ್ನೇ ಆಶ್ರಯಿಸಿದ್ದಾಳೆ. ವಾಣಿಯ (ಶ್ಲೇಷಾರ್ಥಕ ಪ್ರಯೋಗ) ಪ್ರೀತಿಗೆ ಪಾತ್ರರಾಗಬೇಕಾದರೆ ಇರುವ ಸುಲಭದ ದಾರಿ ಕವಿಗಳನ್ನು ಹೊಗಳುವುದು. ಕವಿಗಳನ್ನು ಕೊಂಡಾಡದವರಿಗೆ ಕವಿಗಳಲ್ಲೇ ಆಶ್ರಿತಳಾಗಿರುವ ವಾಣಿ ಪ್ರಸನ್ನಳಾಗುವಳೆ–ಎಂದು ಆಚಣ್ಣ ಕೇಳಿದ್ದಾನೆ. ಹಿಂದಿನ ಕವಿಗಳನ್ನು ಏಕೆ ನೆನೆಯಬೇಕೆಂಬುದಕ್ಕೆ ಆಚಣ್ಣ ಇದೊಂದೇ ಕಾರಣ ಕೊಟ್ಟಿದ್ದರೂ ಧ್ವನಿ ರಮ್ಯವಾಗಿರುತ್ತಿತ್ತು. ಕಬ್ಬಿನ ಮೇಲೆ ಜೇನು ಕಟ್ಟಿದಂತೆ, ಆಚಣ್ಣನು ಇಂಥ ಕಬ್ಬಿಗರ ಮೇಲೆ ಇನ್ನಷ್ಟು ಹಿರಿಮೆ ಏರಿದ್ದಾನೆ. ಅತಿಶಯವಾದಂಥ ಅರ್ಥಸಂಪತ್ತಿನಿಂದ ಶೋಭಿಸುವ ಅನೇಕ ಕಾವ್ಯಗಳನ್ನು ಪರರಿಗೆ ಹಿತವಾಗಲೆಂದು ಪ್ರೀತಿಯಿಂದ ನಿರ್ಮಿಸಿ,

ದಿಕ್ಕನ್ನೇ ಬಟ್ಟೆಯನ್ನಾಗಿಸಿರುವ ಪೃಥ್ವಿಯಲ್ಲಿ ಪವಿತ್ರವಾದ ಕೀರ್ತಿಯನ್ನು ಚೆನ್ನಾಗಿ ಹಬ್ಬಿಸಿದ್ದಾರೆ ಆ ಕವಿಶ್ರೇಷ್ಠರು; ಅವರಿಗೆ ಬಳಲಿಕೆಯೆಂಬುದಿಲ್ಲ. ಇದಿಷ್ಟೂ ೧.೧೬ರ ತಾತ್ಪರ್ಯವಾದರೂ ಇದರಲ್ಲಿ ಇನ್ನಷ್ಟು ಕವಿ ಚಮತ್ಕಾರವೂ ಅಡಗಿದೆ. 'ಸಾರ್ಥ' ಎಂಬುದು ವರ್ತಕ ಪರಿಭಾಷೆಯ ಶಬ್ದ. ಅರ್ಥ ಎಂಬುದಕ್ಕೆ ಹಣ ಎಂಬರ್ಥವಿದೆ. ಎಣೆಯಿಲ್ಲದಷ್ಟು ಹಣವಿರುವುದು ವಣಿಜ ಶ್ರೇಷ್ಠತೆಗೊಂದು ಕಾರಣ. ಕಾವ್ಯ ಶ್ರೇಷ್ಠತೆಗಾದರೂ ಅರ್ಥವು ಸಾರ್ಥಕವಾಗಿರಬೇಕು. 'ಅರ್ಥದ ಸಾರ್ಥಂ'-ಎಂಬೀ ಮಾತನ್ನು ೧.೨೧ ರಲ್ಲೂ ಮತ್ತೆ ಬಳಸಿದ್ದಾನೆ. ರಾಗವೆಂಬುದು ಸಂಗೀತದ ಪಾರಿಭಾಷಿಕ ಶಬ್ದವೂ ಹೌದು. ಯಾವುದೇ ರಾಗವಾದರೂ ಪರರಿಗೆ ಅದು ಹಿತವಾಗಿರಬೇಕು, ಅಂದರೆ ಶ್ರೋತೃ ಸಹ್ಯವಾಗಿರತಕ್ಕದ್ದು. ಕಾವ್ಯಕ್ಕೆ ಅನ್ವಯಿಸುವಾಗ, ಕಾವ್ಯವನ್ನು ಗೇಯಗುಣ (ನಾದತ್ವ) ವಾಗಿಸಿ ಅಕ್ಕರೆಯಿಂದ ಹೇಳಿದಾಗಲೂ ಅದರೊಂದಿಗೆ ಪರರಿಗೆ ಹಿತದಾಯಿಯೂ ಆಗಿರಬೇಕು. ಇನ್ನು ಇಲ್ಲಿ ಮೊಗಂ ಆಗಿರುವ ಮೂರನೆಯ ಅಂಶವೆಂದರೆ ಅದು ಆಚಣ್ಣ ಕವಿಯ ಸ್ವಮತೋನ್ನತಿಗೆ ಸೇರಿದ್ದು. ದಿಗಂಬರ ಧರಣೀ ಕಳಾವಳಿಯೊಳಗೆ ನಿರ್ಮಳ ಕೀರ್ತಿಯನ್ನು ಆದಮೆ ಹಬ್ಬಿಸಿದ ಕವೀಂದ್ರರೆಂಬುದಕ್ಕೆ ಎರಡೂ ನೆಲೆಯಲ್ಲಿ ಅರ್ಥೈಸಬೇಕು. ಆಕಾಶವನ್ನು ಹೊದ್ದ ಭೂಮಿಯಲ್ಲಿ ಅಕಳಂಕ ಕೀರ್ತಿಯನ್ನು ಹಬ್ಬಿಸಿರುವವರು ಕವಿ ಪ್ರಮುಖರೆಂಬುದು ವಾಚಾರ್ಥ. ದಿಗಂಬರ (ಜೈನ) ಧರ್ಮವನ್ನು ತುಂಬಿಕೊಂಡಿರುವ ಈ ಭೂಲೋಕದೊಳಗೆ ದಣಿವಿಲ್ಲದೆ ಶುಚಿ ಕೀರ್ತಿಯನ್ನು ಹರಡಿದ ಕವಿಪ್ರಧಾನರೆಂಬುದು ಸೂಚ್ಯಾರ್ಥ. ಈ ಅನುಕ್ತ ಅರ್ಥ ಪರಿಧಿಯಲ್ಲಿ ಕವಿಗಿರುವ ವಿವಕ್ಷೆಯೆಂದರೆ ಬರಿಯ ಕವೀಂದ್ರರಲ್ಲ. ಆಚಣ್ಣನ ಕಣ್ಣು ಹೊರಳಿರುವುದು ಜೈನಮುಖ್ಯರತ್ತ; ಈ ನಿರೀಕ್ಷೆಗೆ ಸಾಕ್ಷಿ ಮತ್ತು ಪುಷ್ಟಿ ೧.೧೮ರಲ್ಲಿ ಸಿಗುತ್ತದೆ;

ಶ್ರೀವಿಜಯಂ ಗಜಾಂಕುಶನುದಾತ್ತಯಶಂ ಗುಣವರ್ಮನಾ ಜಗ
ತ್ಪಾವನ ನಾಗವರ್ಮನಸಗಂ ರಸಿಕಾಗ್ರಣಿ ಹಂಪದೇವನಾ
ಭಾವಕ ಚಕ್ರಿ ಹೊನ್ನಿಗನಿಳಾಸುತ ರನ್ನಿಗನಗ್ಗದಗ್ಗಳಂ
ಧೀವಿಭು ಬೊಪ್ಪನೆಂಬ ಕವಿದರ್ಶಕರಿಂದೆಸೆದತ್ತು ಭೂತಳಂ॥

೧.೧೭ರಲ್ಲಿ, ಆಚಣ್ಣ ಕವಿ ಕಾವ್ಯಗಳನ್ನು ಕನ್ನಡಿಗೆ ಹೋಲಿಸಿದ್ದಾನೆ.

ಕರಮೆಸೆವ ಕಾವ್ಯಮುಕುರದೊ।
ಳಿರದೆ ಚಿರಂತನರನೇಗಳುಂ ತೋಱುವರೀ
ಧರೆಯೊಳ್ ಸಮರ್ಥರೇನ।
ಲ್ಲರೆ ಪೇಟಿಟ್ ಸತ್ಕವಿಗಳವರ್ಗಳಂ ಮೆಚ್ಚದರಾರ್॥


ಕವೀಂದ್ರರು ಚೆನ್ನಾಗಿ ಕಂಗೊಳಿಸುವ ತಮ್ಮ ಕಾವ್ಯ ಮುಕುರದಲ್ಲಿ ಯಾವಾಗಲೂ ಸಾವಿಲ್ಲದ ಚಿರಂಜೀವರನ್ನು ತೋರಿಸುವರು. ಹೇಳು, ಈ ಭೂಮಿಯಲ್ಲಿ ಸತ್ಕವಿಗಳು ಸಮರ್ಥ-



ಜಪಾನದ ಕ್ಯೂಟೋದ ಬಹಿರಂಗ ಅಧಿವೇಶನದಲ್ಲಿ ಶ್ರೀ ಜಗದ್ಗುರುಗಳು ಭಾಷಣ ಮಾಡುತ್ತಿರುವರು.



ಲುವೆನ್‌ದ ಸಮಾರಂಭದಲ್ಲಿ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರುಸಾವಿರಮಠ, ಹುಬ್ಬಳ್ಳಿ.




ಶ್ರೀ ಜಗದ್ಗುರುಗಳವರ ದ್ವಾದಶ ಪೀಠಾರೋಹಣ ಅಂಗವಾಗಿ ಜರುಗಿದ ಕಾರ್ಯಕ್ರಮದಲ್ಲಿ
ಹುಬ್ಬಳ್ಳಿ, ಗದಗ, ಚಿತ್ರದುರ್ಗದ ಶ್ರೀ ಜಗದ್ಗುರುತ್ರಯರು.




ಪೂಜ್ಯ ಶ್ರೀ ಜಗದ್ಗುರುಗಳವರ ದ್ವಾದಶ ಪೀಠಾರೋಹಣ ಮಹೋತ್ಸವ ಜರುಗಿದಾಗ ತೆಗೆದ ಚಿತ್ರ.



ಶ್ರೀ ಜಗದ್ಗುರುಗಳವರ ಪೀಠಾರೋಹಣದ ರಜತಮಹೋತ್ಸವವನ್ನು ಆಗಿನ ರಾಷ್ಟ್ರಪತಿಗಳಾದ ಶ್ರೀ ಗ್ಯಾನಿ ಜೇಲಸಿಂಗರು ಜ್ಯೋತಿ ಬೆಳಗಿಸಿ ಉದ್ಘಾಟಿಸಿದಾಗ ತೆಗೆದ ಚಿತ್ರ ಚಿತ್ರದಲ್ಲಿ ಮೂರುಸಾವಿರಮಠದ ಜಗದ್ಗುರುಗಳು ಮತ್ತು ಆಗಿನ ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರನ್ನು ಕಾಣಬಹುದು.



ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದಿಂದ ಪ್ರಕಟವಾದ ಗ್ರಂಥಗಳ ತ್ರಿಶತಕ ಮಹೋತ್ಸವವನ್ನು ಕ. ವಿ. ವಿ. ಕುಲಪತಿಗಳವರಿಂದ ಉದ್ಘಾಟನೆ ಜರುಗಿದಾಗ ತೆಗೆದ ಚಿತ್ರ.



ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ
ಶ್ರೀ ಜಗದ್ಗುರು ಮಹಾಸನ್ನಿಧಿಯವರ ಜೊತೆಗೆ ಹಿಂದೂ-ಮುಸ್ಲಿಂ
ಸಮಾಜದ ಗಣ್ಯರು ಭಾವೈಕ್ಯದೊಡನೆ ಕೂಡಿದಾಗ ತೆಗೆದ ಚಿತ್ರ.



ಶ್ರೀ ಜಗದ್ಗುರುಗಳೊಂದಿಗೆ ಮೂರುಸಾವಿರಮಠದ ಕುಮಾರೇಶ್ವರ ಶಿವಯೋಗಿ ಸಂಘದ ಸಾಧಕರು ಹಾಗೂ ವಟುಗಳು.
(1 9 7 2)




ಶ್ರೀ ಜಗದ್ಗುರುಗಳು ಹುಬ್ಬಳ್ಳಿಯಿಂದ ಶಿವಯೋಗಮಂದಿರಕ್ಕೆ 101 ಗುರುವಿರಕ್ತ ಸ್ವಾಮಿಗಳೊಂದಿಗೆ ಪಾದಯಾತ್ರೆ ಹೊರಡುವ ಮುನ್ನ ತೆಗೆದ ಚಿತ್ರ.



ಹುಬ್ಬಳ್ಳಿ ಮೂರುಸಾವಿರಮಠದ ಹಾಗು ಚಿತ್ರದುರ್ಗದ ಬೃಹನ್ಮಠದ
ಶ್ರೀ ಜಗದ್ಗುರುದ್ವಯರು



'ಹರಿಹರ'ದಲ್ಲಿ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರು ಮಹಾಸನ್ನಿಧಿಯವರು ಹಾಗು ಶ್ರೀಶೈಲದ ಲಿ॥ ೧೦೦೮ ಶ್ರೀ ಜಗದ್ಗುರು ವಾಗೀಶ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಧಾರ್ಮಿಕ ಕಾರ್ಯಕ್ರಮದಲ್ಲಿ ಸಮಾಗಮ ದೃಶ್ಯ.




ಗುಲಬರ್ಗಾ ಜಿಲ್ಲೆಯ ಬರಗಾಲ ಪ್ರದೇಶಗಳಲ್ಲಿ ಗಂಜಿಕೇಂದ್ರ ತೆರೆದು ಧನ-ಧಾನ್ಯ ಹಂಚಲು ಶ್ರೀ ಜಗದ್ಗುರುಗಳು ದಯಮಾಡಿಸಿದಾಗ ಆ ಸಮಯದಲ್ಲಿ ಬರಗಾಲ ವೀಕ್ಷಿಸಲು ಬಂದ ಮಾಜಿ ಪ್ರಧಾನಿ ದಿ॥ ಶ್ರೀಮತಿ ಇಂದಿರಾಗಾಂಧಿಯವರಿಗೆ ಗ್ರಂಥಗಳನ್ನು ಆಶೀರ್ವದಿಸುತ್ತಿರುವ ದೃಶ್ಯ.



ಶ್ರೀ ಜಗದ್ಗುರು ಮೂರುಸಾವಿರಮಠದ ಹಾಗು ಮಠದ ಸರ್ವಭಕ್ತರ ಸಹಕಾರದೊಂದಿಗೆ ಸ್ಥಾಪಿಸಿದ
ಶ್ರೀ ಗುರುಸಿದ್ಧೇಶ್ವರ ಸಹಕಾರಿ ಬ್ಯಾಂಕಿನ ಪ್ರಾರಂಭೋತ್ಸವದ ಸಂದರ್ಭದಲ್ಲಿ ತೆಗೆದ ಚಿತ್ರ.



ಶ್ರೀ ಜಗದ್ಗುರುಗಳವರು ಹುಬ್ಬಳ್ಳಿಯಿಂದ ಶಿವಯೋಗಮಂದಿರಕ್ಕೆ 101 ಗುರುವಿರಕ್ತ ಮಹಾಸ್ವಾಮಿಗಳೊಂದಿಗೆ ಪಾದಯಾತ್ರೆ ಹೊರಟಾಗ ಮಹಾನಗರದ ಜನತೆ ಬೀಳ್ಕೊಡುತ್ತಿರುವಾಗ ತೆಗೆದ ಚಿತ್ರ. (20ನೇ ಶತಮಾನದಲ್ಲಿ ಪ್ರಪ್ರಥಮ ಐತಿಹಾಸಿಕ ಪಾದಯಾತ್ರೆ ನೆರವೇರಿಸಿದ್ದು.)



ಶ್ರೀ ಜಗದ್ಗುರುಗಳು 101 ಗುರುವಿರಕ್ತರನ್ನು ಕರೆದುಕೊಂಡು ಹುಬ್ಬಳ್ಳಿಯಿಂದ ಶಿವಯೋಗಮಂದಿರಕ್ಕೆ ಪಾದಯಾತ್ರೆ ಹೊರಟಾಗ ದಾರಿ ಮಧ್ಯದಲ್ಲಿ ಉಡುಪಿ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಪಾದಂಗಳು ಸಂದರ್ಶಿಸಿದಾಗ.



ಮಾಜಿ ಪ್ರಧಾನಿ ದಿ|| ಶ್ರೀಮತಿ ಇಂದಿರಾಗಾಂಧಿಯವರ ನಿವಾಸದಲ್ಲಿ ಶ್ರೀ ಜಗದ್ಗುರುಗಳು.



ಪೂಜ್ಯ ಶ್ರೀ ಜಗದ್ಗುರುಗಳವರು ಹಾಗು ಕಾಶಿ ಜಂಗಮವಾಡಿ
ಮಠದ ಪೂಜ್ಯ ಲಿಂ॥ ಜಗದ್ಗುರುಗಳವರು.



ಪೂಜ್ಯ ಶ್ರೀ ಜಗದ್ಗುರುಗಳವರು ಮತ್ತು
ಧರ್ಮಸ್ಥಳದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು.



ಪೂಜ್ಯ ಶ್ರೀ ಜಗದ್ಗುರುಗಳವರು ರಾಷ್ಟ್ರಕವಿ ಶ್ರೀ ಕುವೆಂಪು ಅವರನ್ನು
ಸನ್ಮಾನಿಸುತ್ತಿರುವಾಗ



ಮೈಸೂರಲ್ಲಿ ರಾಷ್ಟ್ರಕವಿ ಶ್ರೀ ಕುವೆಂಪು ಅವರ ನಿವಾಸದಲ್ಲಿ ಶ್ರೀ ಜಗದ್ಗುರುಗಳವರು
ಶ್ರೀ ಕುವೆಂಪು, ಪದ್ಯದ ಸುತ್ತೂರ ಮಠದ ಶ್ರೀ ಜಗದ್ಗುರುಗಳು (ಸಾಧಕರಿದ್ದಾಗ)
ಎಚ್. ವಿಷ್ಪೇರುದ್ರಸ್ವಾಮಿ, ಡಾ|| ಎಚ್. ಪಿ. ಮಲ್ಲೇದೇವರು ಹಾಗು
ಮೂರುಸಾವಿರಮಠದ ಮರಿದೇವರನ್ನು ಈ ಚಿತ್ರದಲ್ಲಿ ಕಾಣಬಹುದು.



ಶ್ರೀ ಜಗದ್ಗುರುಗಳು ವಿದೇಶಯಾತ್ರೆಗೆ ದಯಮಾಡಿಸುವಾಗ ಬೆಳಗಾವಿಯ ವಿಮಾನ
ನಿಲ್ದಾಣದಲ್ಲಿ ಕರ್ನಾಟಕದ ಸ್ವಾಮಿಗಳು ಬೀಳ್ಕೊಡುತ್ತಿರುವರು.



LA LIBRE BELGIQUE

'Estaing,
péen ?

Conférence mondiale des religions pour la paix


Victimes du mirag
Une centaine de ressortissa
sont refoulés vers leur

Il fallait bien...

ಲುವೇನ್‌ದ ದಿನಪತ್ರಿಕೆಯ ಮುಖಪುಟದಲ್ಲಿ ಶ್ರೀ ಜಗದ್ಗುರುಗಳವರು



ಪೂಜ್ಯ ಶ್ರೀ ಜಗದ್ಗುರುಗಳವರ ಪಿಠಾರೋಹಣದ ರಜತಮಹೋತ್ಸವ ಸಮಾರಂಭ.



ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ ಅಖಿಲ ಕರ್ನಾಟಕ ಮಠಾಧೀಶ್ವರರ ಸಮ್ಮೇಳನ ಜರುಗಿದಾಗ




ಮೈಸೂರು ಸುತ್ತೂರುಮಠದಲ್ಲಿ ಶ್ರೀ ಜಗದ್ಗುರುಗಳವರ ಸಮ್ಮುಖದಲ್ಲಿ ಕಾರ್ಯಕ್ರಮ ಜರುಗಿದಾಗ ತೆಗೆದ ಚಿತ್ರ


ಚಿತ್ರದಲ್ಲಿ–ಸುತ್ತೂರುಮಠದ ಲಿಂ॥ ಜಗದ್ಗುರುಗಳನ್ನು, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ರಾಮಕೃಷ್ಣ ಹೆಗಡೆ, ರಾಷ್ಟ್ರಕವಿ ಕುವೆಂಪು, ರಾಜ್ಯದ ಕಂದಾಯ ಮಂತ್ರಿಗಳಾದ ಶ್ರೀ ಬೊಮ್ಮಾಯಿ ಅವರನ್ನು ಕಾಣಬಹುದು.




ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ ಪೂಜ್ಯ ಶ್ರೀ ಜಗದ್ಗುರುಗಳವರೊಂದಿಗೆ
ಹಿಂದೂ-ಮುಸ್ಲಿಂ ಬಾಂಧವರು ಭಾವೈಕ್ಯದೊಡನೆ ಸಮಾವೇಶಗೊಂಡಾಗ



ಶ್ರೀ ಜಗದ್ಗುರು ಮೂರುಸಾವಿರಮಠದಲ್ಲಿ ಅಖಿಲ ಭಾರತ ಮೇಯರರ ಸಮ್ಮೇಳನ ಜರುಗಿದಾಗ ತೆಗೆದ ಚಿತ್ರ.



ಯೋಜಿತ ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರಮಠ ಬಡರೋಗಿಗಳ ಪ್ರಸಾದ ನಿಲಯ ಕಟ್ಟಡ.
ಘಟಪ್ರಭಾ



ಮೂರುಸಾವಿರಮಠದ ಕುಮಾರೇಶ್ವರ ಶಿವಯೋಗಿ ಸಂಘ ಟ್ರಸ್ಟಿನ
ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಕಲ್ಯಾಣ ಮಂಟಪ,
ಓಲಿಮಠ, ಬಮ್ಮಾಪೂರ ಓಣಿ, ಹುಬ್ಬಳ್ಳಿ.

ರಲ್ಲವೇ? ಸತ್ಕವಿಗಳಾದ ಅವರುಗಳನ್ನು ಮೆಚ್ಚದವರಾರು? ಹೀಗೆ ಪ್ರಶ್ನಿಸುವ ಧಾಟಿಯಲ್ಲಿರುವ ಈ ಕಂದ ಪದ್ಯದಲ್ಲಿ ದರ್ಪಣ ಗುಣ ಸಮನ್ವಿತ ಕಾವ್ಯದಲ್ಲಿ ಪ್ರತಿಫಲಿತವಾಗುವುದಾದರೂ ಏನು ಎಂಬುದನ್ನು ಸ್ಪಷ್ಟಪಡಿಸುವುದರೊಂದಿಗೆ ಆಚಣ್ಣ ಕವಿಗಿರುವ ಕಾವ್ಯ ಪರಿಕಲ್ಪನೆಯೂ ಅನುರಣನವಾಗಿದೆ. ಕವಿ ಪಕ್ಷಪಾತಿಯಂತೆ ಕವಿಗಳನ್ನು ಅವರ ಕಾವ್ಯ ಶಕ್ತಿಯನ್ನೂ ಸಮರ್ಥಿಸಿದ್ದಾನೆ. ಇದೇ ಭಾವದ ಮುಂದುವರಿಕೆ ೧.೧೯ ಮತ್ತು ಅದರ ಅನಂತರದ ಪದ್ಯಗಳಲ್ಲೂ ಕಾಣಬಹುದು.

ವಚನರುಚಿ ನಿಚಯದಿಂದಂ।
ಸುಚಕುರ ಕವಿರವಿಗಳಖಿಳ ಚೇತೋಗಗನ
ಪ್ರಚುರ ತಮಸ್ತಿಮಿರಮನಳ।
ಱಿ ಚಳಿಯಿಸಲ್ ನೆಱಿಗುಮುಱಿದವರ್ ನೆಱಿದಪರೇ॥

ಕವಿಗಳ ಸಾಮರ್ಥ್ಯ ಸೂರ್ಯನಿಗೆ ಸಮನಾದುದೆನ್ನುತ ಅದರ ಪರಿಣಾಮಗಳನ್ನು ಸಮೀಕರಿಸಿದ್ದಾನೆ. ಸೂರ್ಯಕಾಂತಿಯಂತೆ ಕಾವ್ಯದ ಮಾತುಗಳ ಹೊಳಪಿದೆ. ಕವಿಗಳೂ ರವಿಯಂತೆ ಕತ್ತಲೆಯನ್ನು (ಅಜ್ಞಾನ) ಓಡಿಸುತ್ತಾರೆ. ಹೀಗೆ ಸಾಗುತ್ತದೆ ಆಚಣ್ಣನ ಕವಿ-ಕಾವ್ಯ ಕಲ್ಪಲತೆ. ಕುಕವಿ ನಿಂದೆಯನ್ನು ಮಾಡುವ ಕನ್ನಡ ಕವಿಗಳ ಸ್ವಭಾವದಿಂದ ಆಚಣ್ಣನೂ ಬಿಡಿಸಿಕೊಂಡಿಲ್ಲವಾದರೂ ಅದನ್ನು ತೀರ ಗಂಭೀರ ಸ್ತರದಲ್ಲಿ ಕೇವಲ ಒಂದೇ ಪದ್ಯದಲ್ಲಿ (೧.೨೦) ಮುಗಿಸಿ ಮುಂದೆ ಹೊರಟಿದ್ದಾನೆ:

ಖಳತತಿಯೊಳಿತರ ಕೃತಿನುತಿ।
ಗಳನಾರಯ್ವಂದ ಮೆಂತುಟೆಂದಪವಿತ ತೋ
ಪಳದೊಳ್ ವಿಕಸಿತಮೆನಿಸುವ।
ನಳಿನಮನಾರಯ್ವ ಕೆಜನೆ ಪೆಱತಾದಪುದೇ॥

ಸುಕವಿ ಪರಾಕಿಗೆ ಆರು ಪದ್ಯಗಳನ್ನು ವಿನಿಯೋಗಿಸಿರುವುದಕ್ಕೂ, ಕುಕವಿ ದೂಷಣೆಗೆ ಒಂದು ಪದ್ಯ ಮೀಸಲಿಟ್ಟಿರುವುದಕ್ಕೂ ಅಂತರವೇನೆಂಬುದು ಸ್ವಯಂ ವೇದ್ಯವಾಗಿದೆ.

ಸಾಮಾನ್ಯವಾಗಿ ಅಷ್ಟಾದಶ ವರ್ಣನೆಯ ಕ್ರಮದಲ್ಲಿ ಸಮುದ್ರ ವರ್ಣನೆಗೆ ತೊಡಗಿ ಚರ್ವಿತ ಚರ್ವಣ ಪಿಷ್ಟ ಪೇಷಣದಲ್ಲಿ ಪರ್ಯಾವಸಾನಗೊಳ್ಳುವ ಹುಸಿ ಪದ್ಯಗಳನ್ನು ಹೊಸೆದ ಕವಿಗಳೇ ಹೆಚ್ಚು. ಆಚಣ್ಣ ೧೮ ವರ್ಣನೆಗೆ ತಲೆಬಾಗಿ ಕಡಲನ್ನು ಕಂಡರಿಸಿದ್ದರೂ ಅದರಲ್ಲೊಂದು ನಾವೀನ್ಯವಿದೆ. ೧.೩೯ರಲ್ಲಿ ಲವಣ ಸಮುದ್ರ ಕುರಿತ ಚಿತ್ರಣ ಹೀಗಿದೆ:

ಮದನನವೋಲ್ ಮಕರಾಕಂ।
ತ್ರಿದಶಾಧೀಶ್ವರನವೋಲ್ ಸವಜ್ರಂ ಸ್ತ್ರೀವ

ಕ್ಷದವೋಲ್ ಸಪಯೋಧರಮೆನಿ
ಪ್ಪದು ಲವಣಸಮುದ್ರ ಮುಚ್ಚಕಪ್ರವರೌದ್ರಂ||

ಈ ಸಮುದ್ರವೂ ಮನ್ಮಥನಿದ್ದಂತೆ. ಮದನನಾದರೋ ಮಕರ ಧ್ವಜನು, ಈ ಕಡಲೂ ಮಕರಾಂಕಿತ. ಈ ಅರ್ಣವವು ದೇವೇಂದ್ರನಿದ್ದಂತೆ. ದೇವೇಂದ್ರನಾದರೊ ವಜ್ರಾಯುಧನು, ಈ ಕಡಲೂ ವಜ್ರಗಳಿಂದ ಕೂಡಿದೆ. ಈ ಸಮುದ್ರವು ಸ್ತ್ರೀಯ ವಕ್ಷ ವಿದ್ದಂತೆ. ಹೆಂಗಸಿನ ಎದೆಯಾದರೋ ಹಾಲು ತುಂಬಿಕೊಂಡಿವೆ, ಈ ಕಡಲೂ ನೀರು ತುಂಬಿಕೊಂಡಿದೆ. ಹೀಗೆ ಕಾಣುವ ಸಮುದ್ರವು ರವರೌದ್ರತೆಯಿಂದ ಕೂಡಿದೆಯೆಂದು ಕವಿ ವರ್ಣಿಸುವಾಗ ಸಮುದ ನಾಣ್ಯಕ್ಕೆ ಹೊಸ ಠಸ್ಸೆಯೆತ್ತಿ ಮತ್ತೆ ಚಲಾವಣೆಗೆ ಬಿಟ್ಟಂತಾಗಿದೆ.

ಪದ್ಯ ೧.೩೬ರಲ್ಲಿ ಕನ್ನಡದ ಮಾತುಗಳು ಕೋಡಿ ಬಿದ್ದಿವೆ.

ಅದನೇ ವಣ್ಣಿಪೆನೆಲ್ಲಿ ನೋಡಿದೊಡ ಮುದ್ಯಾನಂಗಳೆತ್ತೆತ್ತ ನೋ
ಡಿದೊಡಂ ಕಣ್ಬುಳಿಲೆಲ್ಲಿ ನೋಡಿದೊಡ ಮಾವಾಳಂಗಳೆತ್ತೆತ್ತ ನೋ
ಡಿದೊಡಂ ಪೂಗೊಳನೆಲ್ಲಿ ನೋಡಿದೊಡು ಮಿಕ್ಷುಕ್ಷೇತ್ರಮೆತ್ತೆತ್ತ ನೋ
ಡಿದೊಡಂ ಶಾಲಿವನಂಗಳಿಲ್ಲದ ನೆಲಂ ಬೇಱಿಲ್ಲ ಕಾಲೂಱಿರಲ್||

ಮತ್ತೆ ಮತ್ತೆ ಸುಳಿದು ಸುತ್ತಿಕೊಳ್ಳುವ ಅವೇ ಮಾತುಗಳಿಂದ ಕಿವಿಗೆ ಹಿತಾನುಭವ ತಂದಿರುವ ಕವಿ ಪ್ರಯತ್ನ ಸ್ತುತ್ಯವಾಗಿದೆ. ಎಲ್ಲಿ ನೋಡಿದರೂ ಎತ್ತೆತ್ತ ನೋಡಿದರೂ-ಎಂಬ ನುಡಿಗಟ್ಟು ಬಳಕೆಯಾಗಿರುವ ಧಾಟಿ ೮೦೦ ವರುಷಗಳಷ್ಟು ಹಿಂದಣ ಆಚಣ್ಣನ ಕಾವ್ಯದ ಪ್ರಯೋಗವೆನಿಸದೆ ಇಂದಿಗೂ ನಾವು ಮಾತನಾಡುವ ಧಾಟಿಗೆ ಅನುಗುಣವಾಗೇ ಇದೆ. ಉತ್ಪ್ರೇಕ್ಷೆಯಿದ್ದರೂ ಪ್ರಿಯವಾಗುತ್ತದೆ. "ಅದನ್ನಿನ್ನೇನಪ್ಪಾ ವರ್ಣಿಸಲಿ, ಎಲ್ಲಿ ನೋಡಿದರೂ ಉದ್ಯಾನಗಳೇ, ಎತ್ತೆತ್ತ ನೋಡಿದರೂ ತಂಪು ಮರಳು ದಿನ್ನೆಗಳೇ ಎಲ್ಲಿ ನೋಡಿದರೂ ಆವಾಳಗಳು (ನೀರಿನ ಪಾತಿಗಳು) ಎತ್ತೆತ್ತ ನೋಡಿದರೂ ಹೂವಿನ ಕೊಳಗಳು ಎಲ್ಲಿ ನೋಡಿದರೂ ಕಬ್ಬಿನ ತೋಟಗಳು ಎತ್ತೆತ್ತ ನೋಡಿದರೂ ಭತ್ತದ ಗದ್ದೆಗಳು, ಇವಲ್ಲದೆ ಬೇರೇನೂ ಇಲ್ಲ. ಅತ್ಯುತ್ಸಾಹ ಆಶ್ಚರ್ಯಗಳಿಂದ ಕೂಡಿದ ವ್ಯಕ್ತಿಯೊಬ್ಬ ಎದುರಿನಲ್ಲಿರು ವವರಿಗೆ ಆಂಗಿಕ ವಿನ್ಯಾಸ ಪೂರ್ವಕವಾಗಿ ಅಭಿನಯಿಸಿ ಹೇಳುತ್ತಿರುವ ಅನುಭವವಾಗುತ್ತದೆ. ಇದು ಭಾಷೆ ಕ್ರಿಯಾ ಶಾಲಿಯಾಗಿ ಅಭಿನಯಗೊಳ್ಳುತ್ತಿರುವ ರಚನೆಯಾಗಿದೆ (ಇದನ್ನೇ Fanctional Language ಎನ್ನುವುದು.)

ವೃದ್ಧಾಪ್ಯ ಅನಿವಾರ್ಯ. ವಾರ್ಧಕ್ಯದ ಚಿತ್ರವನ್ನು ರೇಖಿಸುತ್ತಿರುವಾಗಲೇ ಅದರೊಡಲೊಳಗಿಂದ ಸುವರ್ಣ ರೇಖೆಯೊಂದನ್ನು ಮಿಂಚಿಸಿದ್ದಾನೆ. ಇದರಲ್ಲಿದೆ ಕವಿ ನೈಪುಣ್ಯ, ನೂತನತೆ.

ಪಡಿಯಱನೋರ್ವನುರ್ವಿದ ಜರಾರುಜೆಯಿಂ ಶ್ಲಥ ಜೀರ್ಣಮಪ್ಪೊಡಲ್
ಕೆಡೆವವೊಲಾಗೆ ಬಾಗಿ ಮಿಗೆ ಕೆಮ್ಮಿ ಬಟಲ್ದಡಿಗೊರ್ಮೆ ನಿಂದು ಬಿ
ಟ್ಟೆಡೆಯಿದು ತನ್ನ ಮುನ್ನೆಸೆವ ಜವ್ವನಮೆಂದಱಸುತ್ತುಮಿರ್ಪವೊಲ್
ನಡುಗುತುಮಾನತೋನ್ನತಮುಖಂ ಬರುತಿರ್ಪುದುಮಾಗಳಾತನಂ||

ಒಬ್ಬ ಪ್ರತಿಹಾರಿಯು ಅಡಿಯಿಂದ ಮುಡಿಯವರೆಗೂ ಹಬ್ಬಿದ ಮುಪ್ಪಿನ ಮೂರ್ತಿಯಾಗಿ ಕಾಣಿಸಿಕೊಂಡಿದ್ದಾನೆ. ಅವನ ಒಡಲಷ್ಟು ಜೀರ್ಣವಾಗಿ ಹೋಗಿದೆ. ಮೈ ಎಷ್ಟೊಂದು ಬಾಗಿದೆಯೆಂದರೆ ಭೂಮಿಗೆ ಇನ್ನೇನು ಬಿದ್ದು ಹೋಗುತ್ತದೆಯೊ ಎಂಬಷ್ಟು. 'ಜೀರ್ಣಮಪ್ಪೊಡಲ್ ಕೆಡೆವವೊಲ್'-ಎಂಬ ಉಪಮೆಯು ಹೇಳಿಕೆಯೂ ಧ್ವನಿರಮ್ಯವಾಗಿದೆ. ಈ ಮಾತಿನಲ್ಲಿ ದೇಹ ಬಿದ್ದೇ ಬೀಳುತ್ತದೆಂಬ ನಿಶ್ಚಯಾರ್ಥವಿದೆ. ಮುದಿತನದ ಆಯಾಸವೇ ಸಾಕಷ್ಟಿರುವಾಗ ಅದಕ್ಕೆ ಬಡ್ಡಿ ಕಟ್ಟುವಂತೆ ಒಂದೇ ಸಮನೆ ಕೆಮ್ಮು ಬೇರೆ. ಬಳಲಿದ ದೇಹ ಭಾರವನ್ನು ಹೊರಲಾರದ ಆಯಾಸ, ಕೆಮ್ಮಿನ ಬಾಧೆ- ಇವೆರಡರ ಹಿಂಸೆಯಿಂದ ಹೆಜ್ಜೆಗೊಂದು ಸಲ ನಿಲ್ಲುತ್ತಾನೆ. ಹೆಜ್ಜೆ ಹೆಜ್ಜೆಗೂ ಹಾಗೆ ನಿಂತು ದಣಿವಾರಿಸಿಕೊಂಡು ಮುಂದಡಿಯಿಡುವ ಕ್ರಿಯೆಗೆ ಆಚಣ್ಣ ಕವಿ ಹೊಸ ಅರ್ಥದ ಹೊನಲು ಬೆಳಕು ಹಾಯಿಸಿದ್ದಾನೆ. ಅಡಿಗೊಂದು ಸಲ ಮುದುಕನು ನಿಂತು ನೋಡಿ ಹೊರಡುವುದಕ್ಕೆ ಆಚಣ್ಣ ಬಣ್ಣ ಕಟ್ಟಿ ಹೇಳುತ್ತಾನೆ. ಆ ಮುದುಕನು ತನ್ನ ಹಿಂದಿನ ಕಳಕಳಿಸುವ ಯೌವ್ವನವು ಬಿದ್ದ ಜಾಗವಿದು ಎಂದು ಅರಸುತ್ತಿರುವ ಹಾಗೆ ನಿಂತು ನಿಂತು ಹೊರಡುತ್ತಿದ್ದಾನಂತೆ. ಇಡೀ ಹಳಗನ್ನಡ ಸಾಹಿತ್ಯದಲ್ಲಿ ವೃದ್ಧಾಪ್ಯ ಮತ್ತು ತಾರುಣ್ಯವನ್ನು ಹೀಗೆ ಪ್ರತಿಭೆಯ ಸ್ಪರ್ಶದಿಂದ ವೈದೃಶ್ಯವನ್ನು ಒಂದೇ ಪದ್ಯದಲ್ಲಿ ಹಿಡಿದಿಟ್ಟಿರುವುದು ಅಪರೂಪವೆಂದೆಣಿಸುತ್ತೇವೆ.

ಪದ್ಯ ೨.೪೧ರಲ್ಲಿ ಪಷ್ಠ್ಯಂತ ಶಬ್ದಗಳ ಮೆರವಣಿಗೆಯೇ ನಡೆದಿದೆ.

ಅದಱೊಳ್ ಸಂತತಮಾ ಖಳಂ ಪ್ರಮದದಿಂ ಮುಕ್ತಾಮೃಣಾಳೋರುಹಾ
ರದ ಕಲ್ಹಾರದ ಕರ್ಣಪೂರದ ಲಸದ್ವಾರಾಂಗನಾಗೀತಪೂ
ರದ ಕರ್ಪೂರದ ಚಾರು ಚಂದನದ ಕಸ್ತೂರೀ ಕದಂಬಾನುಲೇ
ಪದ ತಾಂಬೂಲದ ಕಾಮಿನೀರತದ ಭೋಗಾ ಭೋಗದಿಂದಿರ್ಪಿನಂ||

ಹಾರದ, ಕಲ್ಹಾರದ, ಕರ್ಣಪೂರದ, ಗೀತಪೂರದ, ಕರ್ಪೂರದ, ಚಂದನದ, ಅನುಲೇಪದ, ತಾಂಬೂಲದ, ಕಾಮಿನೀರತದ-ಎಂಬ ಮಾತುಗಳು ಕಿವಿಗೆ ಒತವಾಗಿ ಬಂದು ಬೀಳುತ್ತವೆ. ಇದರಲ್ಲೂ ಒಂದು ಬಗೆಯ ಅನುಪ್ರಾಸದ ಸೊಗಸೂ ಇದೆ.

ಪದ್ಯ ೧.೮೮ರಲ್ಲಿ ಸಮಾನಾರ್ಥಕ ಪರ್ಯಾಯ ಶಬ್ದಗಳನ್ನು ಬಳಸಿರುವುದು ಔಚಿತ್ಯಪೂರ್ಣವಾಗಿದೆ.

ತಗಗಿಂದ್ರಾಣಿಯೆ ಸರಿ ಗೋ
ಮಿನಿಯೆ ಸಮಾನಂ ಸರಸ್ವತಿ ದೇವಿಯೆ ನೆ

ಟ್ಟನೆ ಪಡಿ ರತಿ ರಮಣಿಯೆ ತೊಣೆ
ಯೆನೆ ರೂಢಿಯನಾಂತ ವಧುವನ್ನಿನ್ನೇ ಪೊಗಟ್ಟಿಂ॥

ಕಥಾನಾಯಕಿ–ನಾಯಕರನ್ನು ಅಥವಾ ಪ್ರಮುಖ ಪಾತ್ರಗಳನ್ನು ಪುರಾಣ–ಇತಿಹಾಸ ಪ್ರಸಿದ್ಧ ಪಾತ್ರಗಳೊಂದಿಗೆ ಸಮೀಕರಿಸಿ ವರ್ಣಿಸುವುದು ಹೊಸದೇನಲ್ಲ. ಪಂಪ, ರನ್ನ ಮೊದಲಾದವರ ಕಾವ್ಯಗಳಲ್ಲಿ ಇಂತಹ ಪದ್ಯಗಳಿವೆ. ಆದರೆ ಆಚಣ್ಣ ಈ ಮಾಮೂಲಿನ ಎರಕಕ್ಕೆ ಹಾಕಿ ತೆಗೆದ ಈ ಪದ್ಯದಲ್ಲಿ ಸ್ವಂತಿಕೆಯ ಕೊಂಡಿ ಹಾಕಿದ್ದಾನೆ. ಅದೆಂದರೆ ಹೋಲಿಕೆಗಳಿಗೆ ಉಪಮಾ ವಾಚಕಗಳನ್ನು ಬಳಸದೆ ಪ್ರತಿ ಶಬ್ದಗಳನ್ನೇ ಉಪಯೋಗಿಸಿರುವುದು. ಇಂಥ ಅನೇಕ ಪದ್ಯಗಳನ್ನು ಗುರುತಿಸುವುದರಿಂದ ಆಚಣ್ಣ ಕವಿಯ ಕಾವ್ಯ ಪ್ರತಿಭೆಯ ಸತ್ವವನ್ನು ಹರಳುಗೊಳಿಸಬಹುದು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಆಚಣ್ಣ ಕವಿ ಪ್ರಖ್ಯಾತ ಕವಿಗಳ ಸಾಲಿನಲ್ಲಿ ನಿಲ್ಲದಿದ್ದರೂ ಪ್ರಮುಖ ಕವಿಗಳಲ್ಲಿ ಒಬ್ಬನಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದ್ದಾನೆ.

□ □

ಕನ್ನಡ ಬಂಡಾಯ ಹಾಗೂ ದಲಿತ ಸಾಹಿತ್ಯ

—ಡಾ. ಶ್ರೀಕಂಠ ಕೂಡಿಗೆ

ಸಮುದಾಯದ ಒತ್ತಾಸೆಗಳಿಗನುಗುಣವಾಗಿ ಸಾಹಿತ್ಯ ತನ್ನ ಹೊರರೂಪ ಮತ್ತು ಒಳನೋಟಗಳನ್ನು ರೂಢಿಸಿಕೊಳ್ಳುತ್ತವೆ. ಆಯಾ ಕಾಲದ ಬರಹಗಾರರು ಕೂಡ ತಾವು ಚಿಂತಿಸುವ, ಪ್ರತಿಪಾದಿಸುವ ವಿಚಾರಗಳು ಅಬಾಧಿತವಾದವು ಎಂಬ ತನ್ಮಯತೆಯಲ್ಲಿಯೇ ಇರುತ್ತಾರೆ. ಸಮರ್ಥ ಕವಿಯೊಬ್ಬ ನಡೆದು ಬಂದ ದಾರಿಯನ್ನು ಧಿಕ್ಕರಿಸಿ ಹೊಸ ಆವಿಷ್ಕಾರಗಳೊಂದಿಗೆ ಅರ್ಥಪೂರ್ಣವಾದದ್ದನ್ನು ಸಾಧಿಸಿದಾಗ ಆ ಮಾರ್ಗವನ್ನು ಅನುಕರಿಸುತ್ತಾ ಸಾಹಿತ್ಯಪಂಥವನ್ನು ಕ್ಲೀಷೆಯಾಗಿಸುವ ಲೇಖಕರ ಸಮೂಹವೊಂದು ಹುಟ್ಟುತ್ತದೆ. ಅನುಭವ ಮತ್ತು ಅಭಿವ್ಯಕ್ತಿಗಳು ಹೀಗೆ ಹಳತವಾದಾಗ ಸಾಹಿತ್ಯದ ಹರವಿಗೆ ತಾತ್ಕಾಲಿಕ ಸ್ಥಗಿತವೊಂದು ಏರ್ಪಡುತ್ತದೆ. ಇಂಥ ಸ್ಥಗಿತ ಹೊಸಹುಟ್ಟಿಗೆ, ಶೋಧಕ್ಕೆ ಎಡೆಮಾಡಿಕೊಡುತ್ತದೆ. ಇದರ ಫಲವಾಗಿಯೇ ಹೊಸ ಹೊಸ ಚಳುವಳಿಗಳು ಹುಟ್ಟುತ್ತವೆ. ನಿರ್ಲಕ್ಷಿತ ವಿಚಾರ, ವಿನೂತನ ಜೀವನ ದೃಷ್ಟಿಗಳನ್ನು ಇವು ಎತ್ತಿಹಿಡಿಯುತ್ತವೆ.

ಆಧುನಿಕ ಕನ್ನಡ ಸಾಹಿತ್ಯ ಈಚಿನ ಆರೇಳು ದಶಕಗಳಲ್ಲಿ ನವೋದಯ, ಪ್ರಗತಿಶೀಲ ನವ್ಯ ಮತ್ತು ನವ್ಯೋತ್ತರ ಅವಸ್ಥೆಯನ್ನು ಕಂಡಿದೆ. ಮೇಲ್ನೋಟಕ್ಕೆ ಈ ಚಳುವಳಿಗಳು ಸಾಹಿತ್ಯದ ಒಟ್ಟು ಸಾತತ್ಯವನ್ನು ತುಂಡುಗಡಿದಂತೆ ಕಂಡರೂ ಪರಂಪರೆಯೆಂಬ ಜೀವತಂತು ಇವನ್ನು ಒಟ್ಟಾರೆಯಾಗಿ ಬಂಧಿಸಿದೆ. ಸಾಹಿತ್ಯದ ಗತಿಯನ್ನು ಗಮನಿಸುತ್ತಾ ಬಂದವರಿಗೆ ಈ ಸಾಹಿತ್ಯಾವಸ್ಥೆಗಳು ದಿಢೀರ್ ಸೃಷ್ಟಿಯಂತೆ ಕಾಣಿಸುವುದಿಲ್ಲ. ಒಂದು ಚಳುವಳಿ ಮತ್ತೊಂದು ಚಳುವಳಿಯ ಬಲ ದೌರ್ಬಲ್ಯಗಳನ್ನು ವಿಶ್ಲೇಷಿಸುತ್ತಾ, ಏಕಮುಖಿ ಚಿಂತನೆಯನ್ನು ಅಲ್ಲಗಳೆಯುತ್ತಾ ಸಾಹಿತ್ಯವನ್ನು ಮಾನವ ಪ್ರೀತಿಯ ವ್ಯಾಪಕಕ್ಷೇತ್ರಕ್ಕೆ ಎಳೆದು ತರುತ್ತಿರುವುದನ್ನು ಕಾಣುತ್ತೇವೆ. ಜೊತೆಗೆ ಹಿಂದಿನ ಸಾಹಿತ್ಯದ ಜೀವಧಾತುಗಳು ಬರಹಗಾರನ ಪ್ರಜ್ಞಾವಲಯವನ್ನು ದಾಟಿ ಅನುವಂಶೀಯ ಗುಣಗಳನ್ನು ಹೊತ್ತೊಯ್ಯುವುದರಿಂದ ಇವು ಪರಂಪರೆಯ ಪ್ರವಾಹದಿಂದ ಬೇರ್ಪಡುವುದಿಲ್ಲ. ಹಾಗಿದ್ದೂ ಪ್ರತಿ ಸಾಹಿತ್ಯಪಂಥಕ್ಕೂ ಅದರದೇ ಆದ 'ಪ್ರವೃತ್ತಿ' ಇರುತ್ತದೆ. ಬಂಡಾಯ–ದಲಿತ ಸಾಹಿತ್ಯ ಇಂಥ ಸಮಕಾಲೀನ ಪ್ರವೃತ್ತಿಯ ಅನಿವಾರ್ಯ ಫಲ.

(೨)

ನಮ್ಮ ಸಾಮಾಜಿಕ ವ್ಯವಸ್ಥೆಯಲ್ಲಿ ವಿದ್ಯೆಯ ಸವಲತ್ತು ಪಡೆದ ಅಲ್ಪಸಂಖ್ಯಾತ

ಪ್ರತಿಷ್ಠಿತ ವರ್ಗ, ಇವುಗಳಿಂದ ವಂಚಿಸಲ್ಪಟ್ಟ ಬಹುಸಂಖ್ಯಾತ ಅನಕ್ಷರಸ್ಥ ಜನವರ್ಗ ವಿರುದ್ಧ ಧ್ರುವಗಳಲ್ಲಿ ನಿಂತಿವೆ. ಇದರ ಫಲವಾಗಿ ಹೇಗೆ ಸಾಮಾನ್ಯ ಮನುಷ್ಯನ ಸಮಷ್ಟಿ ಜೀವನ ಕ್ರಮದ ಹಿಂದಿರುವ ಕ್ರಿಯಾಶೀಲತೆ ಮತ್ತು ವೈವಿಧ್ಯಗಳು ನಿರ್ಲಕ್ಷ್ಯಕ್ಕೊಳ ಗಾದವೊ ಹಾಗೆ ಸಾಹಿತ್ಯದಲ್ಲೂ ಆಯಿತು. ಈ ಕೊರತೆ ತುಂಬಿಬರಲು ಅನಕ್ಷರಸ್ಥ ಮೂಕ ಜನತೆಗೆ ಮಾತು ಬರುವವರೆಗೆ ಕಾಯಬೇಕಾಯಿತು. ಇತ್ತೀಚಿನ ಐದಾರು ದಶಕ ಗಳಲ್ಲಿ ಮಧ್ಯಮ ಹಾಗೂ ಕೆಳವರ್ಗದ ಜನತೆಗೆ ದೊರೆತ ಶಿಕ್ಷಣಾವಕಾಶಗಳು, ಬೂಸಾ ಪ್ರಕರಣ, ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ನವನಿರ್ಮಾಣ ಸಮಿತಿ, ತುರ್ತುಪರಿಸ್ಥಿತಿ, ಜೆ.ಪಿ. ಆಂದೋಲನ, ಪ್ರಗತಿಪಂಥ, ದಲಿತ ಸಂಘರ್ಷ ಸಮಿತಿ ಮುಂತಾದ ಸಾಮಾಜಿಕ ಸಾಹಿತ್ಯಕ ಆಂದೋಲನಗಳು ಹೊಸ ಅರಿವಿನ ಸ್ಫೋಟಕ್ಕೆ, ಶೂದ್ರಸಾಹಿತ್ಯದ ಪರಿಕಲ್ಪನೆಗೆ ಕಾರಣವಾದುವು. ಆಗ ಪ್ರಚಲಿತವಿದ್ದ ನವ್ಯಸಾಹಿತ್ಯ ಮೇಲುವರ್ಗದ ಅನುಭವ, ಸೃಜನಶೀಲತೆಯ ಕೊರತೆಯನ್ನು ಮುಚ್ಚಿಕೊಳ್ಳಲು ಪಾಶ್ಚಾತ್ಯ ಸಾಹಿತ್ಯದ ಅನುಭವ ಮಾದರಿಯ ಮೊರೆಹೋಯಿತೆಂದೂ, ಸಂಕೇತ ಪ್ರತಿಮೆ ಗಳಂಥ ಬೆದುರುಬೊಂಬೆಯನ್ನು ಮುಂದಿಟ್ಟು ಅಮೂರ್ತತೆಯಲ್ಲಿ ತಲೆಮರೆಸಿಕೊಂಡಿ ತೆಂದೂ ಆಕ್ಷೇಪಿಸಲಾಯಿತು. ಹೀಗೆ ನವ್ಯರ ಮೇಲಿನ ಆಕ್ಷೇಪಗಳೊಂದಿಗೆ ಹೊರಟ ಶೂದ್ರಸಾಹಿತ್ಯಕ್ಕೆ ಮಹಾರಾಷ್ಟ್ರದ ದಲಿತ ಪ್ಯಾಂಥರ್ಸ್ ಚಳುವಳಿಯಿಂದ ಕನ್ನಡದಲ್ಲಿ ರೂಪುಗೊಳ್ಳುತ್ತಿದ್ದ ದಲಿತಸಾಹಿತ್ಯವೂ ಜೊತೆಗೂಡಿತು. ಮೊದಲ ಹಂತದಲ್ಲಿ ಇವುಗಳ ಬೆಸುಗೆಗೆ 'ಬ್ರಾಹ್ಮಣೇತರ' ಎಂಬ ಅಂಶ ಮುಖ್ಯವಾದರೂ ಲಾಗಾಯ್ತಿನ ಶೋಷಣೆ ಮತ್ತು ಅದರ ಸೂಕ್ಷ್ಮವಿಧಾನಗಳು ನಿಚ್ಚಳಗೊಳ್ಳುತ್ತ ಹೋದಂತೆ ದಲಿತರಿಗೆ ಮೇಲುವರ್ಗ ದವರು ಮಾತ್ರ ಶೋಷಕರಲ್ಲ. ಭೂಸ್ವಾಮ್ಯವುಳ್ಳ ಇತರ ಶೂದ್ರರು ಶೋಷಣೆಯಲ್ಲಿ ಪಾಲ್ಗೊಂಡ ಸತ್ಯ ಕಾಣಿಸತೊಡಗಿತು. ಮೇಲಿನ ಎರಡು ಗುಂಪುಗಳಿಂದ ಆದ ಸಾಂಸ್ಕೃತಿಕ ಶೋಷಣೆ, ದೈಹಿಕ, ಆರ್ಥಿಕ ದಬ್ಬಾಳಿಕೆಯ ಸ್ವರೂಪಗಳು ಗೋಚರಿಸಿದುವು. ಆ ಹೊತ್ತಿಗೆ ಶೂದ್ರಸಾಹಿತ್ಯದ ಮಾತು ಹಿಂದೆ ಸರಿಯತೊಡಗಿ 'ಬಂಡಾಯ' ಸಾಹಿತ್ಯದ ಸ್ಪಷ್ಟ ಕಲ್ಪನೆ ಮೂಡತೊಡಗಿತು. ಶೂದ್ರ ಪ್ರತ್ಯೇಕೀಕರಣದ ಮೂಲಕ ಏನಿಲ್ಲವೆಂದರೂ ಅಲ್ಪಸಂಖ್ಯಾತ ಸಮೂಹದ ಮೊದಲ ಅಕ್ಷರಸ್ಥ ಪೀಳಿಗೆ ತಮ್ಮ ಸಂಕೋಚ ಮತ್ತು ವೈಚಳಿಬಿಟ್ಟು ತಮ್ಮದೇ ಆದ ಭಾಷೆಯಲ್ಲಿ ಮಾತನಾಡುವ ಆತ್ಮವಿಶ್ವಾಸ ಗಳಿಸಿಕೊಂಡಿತು. ಎಲ್ಲಾ ವಾಮಪಂಥೀಯ, ಪ್ರಜಾಸತ್ತಾತ್ಮಕ ಶಕ್ತಿಗಳನ್ನೊಳಗೊಂಡ ಬಂಡಾಯ ಚಳುವಳಿ ಕೂಡ ಯಶಸ್ವಿಯಾಗ ಬೇಕಾದರೆ ದಲಿತರು ಅದರ ಮುಂಚೂಣಿಯಲ್ಲಿರಬೇಕು. ಆಗ ಮಾತ್ರ ಹುಟ್ಟುವ ಸಾಹಿತ್ಯ ಪೂರ್ಣಸ್ವರೂಪದಲ್ಲಿ 'ಬಂಡಾಯ'ವಾಗಿ ಉಳಿಯಬಲ್ಲದೆಂಬ ಭಾವನೆ ಬಲಿಯಿತು.

೧೯೭೯ರಲ್ಲಿ ಅಧಿಕೃತವಾಗಿ ಘೋಷಿತವಾದ 'ಬಂಡಾಯ ಸಾಹಿತ್ಯ'ದ ಮುಂಚೂಣಿ ಯಲ್ಲಿದ್ದವರು "ಪ್ರತಿಷ್ಠಾಪಿತ ಮೌಲ್ಯಗಳು ಜಡವಾಗಿ ಪ್ರತಿಗಾಮಿಯಾಗಿ ಬದುಕನ್ನು ಆವರಿಸಿಕೊಂಡಾಗ ಅವುಗಳ ವಿರುದ್ಧ ಹೋರಾಡುವುದೇ ಬಂಡಾಯ; ಇದು ಸಾಹಿತ್ಯದಲ್ಲಿ

ಅಭಿವ್ಯಕ್ತವಾದಾಗ ಅದೇ ಬಂಡಾಯ ಸಾಹಿತ್ಯ."....."ಆರ್ಥಿಕ ಮತ್ತು ಸಾಮಾಜಿಕ ತುಳಿತಕ್ಕೆ ಒಳಗಾದ ಎಲ್ಲ ಜಾತಿಯ ಜನ ದಲಿತರು. ದಲಿತ ಸಮಸ್ಯೆಗಳ ಬಗ್ಗೆ ಪ್ರಜ್ಞಾವಂತ ದಲಿತ ಲೇಖಕ ಬರೆದ ಪ್ರತಿಭಟನಾ ಸಾಹಿತ್ಯವೆ ಅಥೆಂಟಿಕ್ ಆದ ದಲಿತ ಸಾಹಿತ್ಯ" ಎಂದು ಘೋಷಿಸಲಾಯಿತು. ದಲಿತ ಸಾಹಿತ್ಯ ಯಾವುದು? ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆದು ಮೇಲಿನ ನಿರ್ವಚನವನ್ನು ತಾತ್ವಿಕವಾಗಿ ಒಪ್ಪಲಾಗಿದೆ.

(೩)

ಬಂಡಾಯ ಎಲ್ಲಾ ಪ್ರಗತಿಪರ ಎಡ ಹಾಗೂ ಪ್ರಜಾಸತ್ತಾತ್ಮಕ ಬರಹಗಾರರ ಆಂದೋಲನ. ಇಲ್ಲಿನ ಹೋರಾಟ ಸಮಾಜದ ಎಲ್ಲ ವರ್ಗದ ಜನರು ತಾವು ಅನುಭವಿಸು ತ್ತಿರುವ ನೋವು ಅಪಮಾನಗಳ ವಿರುದ್ಧ ಸ್ಥಗಿತಗೊಂಡ ಎಲ್ಲ ರಾಜಕೀಯ, ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ವ್ಯವಸ್ಥೆಗಳ ವಿರುದ್ಧ ಇದರ ಪ್ರತಿರೋಧ. ಅದಮ್ಯ ಸಾಮಾಜಿಕ, ಕಳಕಳಿ, ಗಾಢ ರಾಜಕೀಯ ಪ್ರಜ್ಞೆ-ಬಂಡಾಯ ಸಾಹಿತ್ಯದ ಪ್ರಮುಖ ನೆಲೆ. ಪ್ರಚಲಿತ ರಾಜಕೀಯ-ಸಾಮಾಜಿಕ ವ್ಯವಸ್ಥೆಗಳು, ಅವು ಬೆಳೆದು ಬಂದ ರೀತಿಯನ್ನು ಸಮಾಜವಾದಿ ವಾಸ್ತವತೆಯ (Socialist Realism) ಹಿನ್ನೆಲೆಯಲ್ಲಿ ಅಧ್ಯಯನ ಮಾಡಲು ಬರುವುದ ರಿಂದ ಬಂಡಾಯಕ್ಕೆ ಸಮಾಜಶಾಸ್ತ್ರೀಯ ಸಮರ್ಥನೆ ಇದೆ.

"ಖಡ್ಗವಾಗಲಿ ಕಾವ್ಯ ಜನರ ನೋವಿಗೆ ಮಿಡಿಯುವ ಪ್ರಾಣಮಿತ್ರ" ಎಂಬ ಧ್ಯೇಯ ವಾಕ್ಯವನ್ನು ಮುಂದೊಡ್ಡಿದ ಬಂಡಾಯ ಸಂಘಟನೆ ಮತ್ತು ಬಂಡಾಯ ಸಾಹಿತ್ಯ ಈ ಹಿಂದಿನ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವೈಫಲ್ಯಗಳನ್ನು ಮೀರುವ ಕ್ರಿಯೆಗೆ ತೊಡಗಿತು. ಅವುಗಳೆಂದರೆ:

೧. ಶೋಷಣೆ ಮತ್ತು ದಬ್ಬಾಳಿಕೆಯ ಇನ್ನೊಂದು ರೂಪವಾಗಿರುವ 'ಯಜಮಾನ ಸಂಸ್ಕೃತಿ'ಯ ವಿರುದ್ಧ ಬಂಡಾಯ.

೨. ಪ್ರಜಾಪ್ರಭುತ್ವದ ರಕ್ಷಣೆ ಹಾಗೂ ಅದರ ವಿಸ್ತರಣೆಗಾಗಿ ದುಡಿಯುವುದು.

೩. ಕ್ರಾಂತಿಕಾರಿ ರಾಜಕೀಯ ಪ್ರಜ್ಞೆ ಹೊಂದಿ ಜನತೆಯ ಹೋರಾಟದ ಬದುಕಿ ನೊಂದಿಗೆ ಬೆರೆಯುವುದು.

೪. ನೈಜ ಬಂಡಾಯ ಬಡವರ ನೆಲೆಗಟ್ಟಿನಿಂದ ಹುಟ್ಟಬೇಕು. ಹೋರಾಟಕ್ಕೆ ಪೂರಕವಾಗಿ ಉಳಿದ ಜಾತಿಯ ಪ್ರಗತಿಪರ ಶಕ್ತಿಗಳು ಒಗ್ಗೂಡಬೇಕು.

೫. ಆಯಾ ಜಾತಿಯವರು ಆಯಾ ಜಾತಿಗಳ ವ್ಯವಸ್ಥೆಯ ವಿರುದ್ಧ ಪ್ರತಿರೋಧ ತೋರಿಸುವುದಲ್ಲದೆ ಜಾತಿ ಪದ್ಧತಿ, ಜಮೀನ್ದಾರಿ, ಊಳಿಗಮಾನ್ಯ ಬಂಡವಾಳ ಶಾಹಿ ಹಾಗೂ ಅಧಿಕಾರ ಶಾಹಿ ವ್ಯವಸ್ಥೆ, ಲಿಂಗಭೇದ ನೀತಿಯ ವಿರುದ್ಧ ಬಂಡೇಳಬೇಕು.

೬. ಎಲ್ಲ ಜನಪರ ನಿಲುವು ಮತ್ತು ಜನಪರವಾದ ಸಾಂಸ್ಕೃತಿಕ ಹೋರಾಟಕ್ಕೆ

ಬೆಂಬಲ, ಆ ಮೂಲಕ ಪ್ರತಿಷ್ಠಿತ ಪ್ರತಿಗಾಮಿ ಮೌಲ್ಯಗಳ ವಿರುದ್ಧದ ಎಲ್ಲ ವರ್ಗಗಳ ಸಕ್ರಿಯ ಹೋರಾಟಾನುಭವದ ಅಭಿವ್ಯಕ್ತಿಗೆ ಇಂಬುಕೊಡುವುದು.

೭. ಹೋರಾಟ ಸ್ಥಗಿತಗೊಂಡ ಸಂಪ್ರದಾಯದ ವಿರೋಧವೇ ಹೊರತು ಒಟ್ಟಾರೆ ಪರಂಪರೆಯ ವಿರೋಧ ಆಗದಿರುವುದು.

೮. ಜೀವನ ಸೌಂದರ್ಯ, ಚೆಲುವು ಮತ್ತು ಮಾನವ ಪ್ರೀತಿಯನ್ನು ಒಗ್ಗೂಡಿಸಿ ಕೊಂಡು ಕಲಾತ್ಮಕ ಕೃತಿಗಳ ರಚನೆಗೆ ಪ್ರಯತ್ನಿಸುವುದು.

"ಇಂಥ ಒಂದು ಆಂದೋಲನದಿಂದ ಮಾತ್ರವೆ ಅಸ್ಪೃಶ್ಯತೆಯ ಕತ್ತಲು ಕೊನೆಯಾಗಬಹುದು. ಜಾತಿಯ ಗೋಡೆಗಳು ಕುಸಿಯಬಹುದು, ವರ್ಗದ ಪಿರಮಿಡ್ಡು ನೆಲಸಮವಾಗಬಹುದು, ಮನುಷ್ಯ ಮನುಷ್ಯರ ನಡುವೆ ಇರುವ ದ್ವೇಷ ವಿಷಕ್ಕೆ ಬದಲಾಗಿ ಪ್ರೀತಿಯ ಹಾಲು ಉಕ್ಕಬಹುದು" ಎಂಬುದು ಬಂಡಾಯ ಮತ್ತು ದಲಿತ ಸಾಹಿತ್ಯದ ಮಹದಾಶೆಯಾಗಿದೆ.

(೪)

ಬಂಡಾಯ-ದಲಿತ ಸಾಹಿತ್ಯದ ಈ ಸೈದ್ಧಾಂತಿಕ ಮಹತ್ವಾಕಾಂಕ್ಷೆಗಳನ್ನು ಕೃತಿಗಳಲ್ಲಿ ಮೂರ್ತೀಕರಿಸುವುದು ಐತಿಹಾಸಿಕ ಅನಿವಾರ್ಯತೆಯಾಗಿದೆ. ಈಚಿನ ಕನ್ನಡ ಸಾಹಿತ್ಯಕ್ಕೆ ಈ ಆಂದೋಲನ ಸ್ಪಷ್ಟ ತಿರುವನ್ನು ನೀಡಲು ಯತ್ನಿಸುತ್ತದೆ. ಭ್ರಮೆಯನ್ನು ನಿರಾಕರಿಸಿದ ವಾಸ್ತವತೆ ಅಂತರ್‌ಮುಖತೆಯನ್ನು ಕಿತ್ತೊಗೆದ ಬಹಿರ್ಮುಖತೆ ಬಂಡಾಯ-ದಲಿತ ಸಾಹಿತ್ಯದ ಲಕ್ಷಣವಾದರೂ ಇಲ್ಲಿಯ ಸಾಹಿತಿಗಳು, ನಿಸರ್ಗ, ಹೆಣ್ಣು, ಸೌಂದರ್ಯೋಪಾಸನೆಯ ವಿರೋಧಿಗಳಲ್ಲ. ಬದುಕಿನಲ್ಲಿ ಕಾಣುವ ಕ್ರೌರ್ಯದ ವಿರುದ್ಧ ಹೋರಾಡುತ್ತಾ ಅದರ ಸೌಂದರ್ಯವನ್ನು ಕಾಪಾಡುವುದೇ ಬಂಡಾಯ ಸಾಹಿತಿಗಳ ಮುಖ್ಯ ಗುರಿ. ಅಮಾನವೀಯ ಕ್ರೌರ್ಯ ಸಮಾಜದ ಕುರೂಪ. ಅಂಥ ಕುರೂಪವನ್ನು ಇಲ್ಲವಾಗಿಸುವುದೇ ಬಂಡಾಯ ಸಾಹಿತ್ಯದ ದೃಷ್ಟಿಯಲ್ಲಿ ಸೌಂದರ್ಯ. ಬಂಡಾಯ-ದಲಿತ ಕವಿಗಳು ಸೌಂದರ್ಯದ ವಸ್ತುವಿಗೆ ತಮ್ಮದೇ ರೀತಿಯಲ್ಲಿ ಸ್ಪಂದಿಸಿರುವುದು ಕಾಣಸುತ್ತದೆ.

"ನೂರು ಹೂವಿಗೆ ಬೀಜವಾದಳು ಹೆಣ್ಣು
ನಮ್ಮ ಹಾಡಿಗೆ ಮೂಡಿಸುವಳು ಕಣ್ಣು
ಅದಕ್ಕೆ, ಗೆಳೆಯ ನಾವು ಹೆಣ್ಣಿನ ಬಗ್ಗೆ ಹಾಡುವುದು ಬೇಡ
ಅಂತ ಹೇಳುವುದು ಬೇಡ"

-ಎನ್ನುವ ಚಂದ್ರಶೇಖರ ಪಾಟೀಲರ 'ಹೂವು ಹೆಣ್ಣು ತಾರೆ' ಪದ್ಯವಾಗಲಿ "ಉಟ್ಟ ಸೀರೆಯ ಸೆರಗು ಎತ್ತೆತ್ತಲೋ ಏರಿ! ಬಡತನದ ಬಾವುಟವು ಹಾರುತ್ತಿತ್ತು" ಎಂಬ ಸಿದ್ಧಲಿಂಗಯ್ಯನವರ 'ಬೀಳು' ಪದ್ಯದ ಸಾಲುಗಳಾಗಲಿ ಇದನ್ನೆ ಸಮರ್ಥಿಸುವಂತಿವೆ. ಸೌಂದರ್ಯವನ್ನು ಹೀಗೆ ಕಟುವಾಸ್ತವದ ಹಿನ್ನೆಲೆಯಲ್ಲಿ, ಬೇರೊಂದು ರೀತಿಯಲ್ಲಿ ಕಾಣುವ

ಸೃಜನಕ್ರಿಯೆಯಲ್ಲೂ ತೊಡಗಬಹುದು. ಆದರೆ ಅದು ಮಿಡಿಯುವ ಜನತೆಗೆ ದಕ್ಕುವ ಸಮಾನತೆಯ ಬದುಕು, ಸಾಮಾನ್ಯನ ಸ್ವಾತಂತ್ರ್ಯವನ್ನು ಹತ್ತಿಕ್ಕದ, ಸ್ತ್ರೀ ಸ್ವಾತಂತ್ರ್ಯಕ್ಕೆ ಅರ್ಥ ತರುವ ಸುಂದರ ಬದುಕಾಗಬೇಕೆಂದು ಇದು ಹಂಬಲಿಸುತ್ತದೆ. ಇಂಥ ಕ್ರಾಂತಿಕಾರಿ ಕಾವ್ಯ ಜನಪದೀಕರಣದ ಮೂಲಕ ಅನಕ್ಷರಸ್ಥ ಜನಸಮುದಾಯವನ್ನು ತಲುಪಬೇಕೆಂದು ಬಯಸುತ್ತದೆ. ನವ್ಯಕಾವ್ಯದ ಕ್ಲಿಷ್ಟ ಅಭಿವ್ಯಕ್ತಿ ಮಾರ್ಗದಿಂದ ಭಿನ್ನವಾದ ಹೊಸ ದೊಂದು ಬಗೆಯ ಅಭಿವ್ಯಕ್ತಿಗೆ ಈ ಸಾಹಿತ್ಯ ಹವಣಿಸುತ್ತದೆ.

ಬಂಡಾಯ–ದಲಿತ ಸಾಹಿತ್ಯ ಸಮಾನತೆಗೆ, ಹೊಸ ಸಮಾಜದ ನಿರ್ಮಾಣಕ್ಕೆ ಕಂಕಣ ಬದ್ಧವಾಗಿದೆ. ನಮ್ಮ ಸುತ್ತಣ ಮನುಷ್ಯರ ನಡುವೆ ತುಂಬು ಪ್ರೀತಿ, ಆರೋಗ್ಯಕರ ಸ್ಥಿತಿ ಕಾಲೂರಬೇಕಾದರೆ ಶೋಷಣೆ, ಅನ್ಯಾಯದ ವಿರುದ್ಧ ಹೋರಾಟ ಜೀವನ ಮತ್ತು ಸಾಹಿತ್ಯದಲ್ಲಿ ಬರುವುದಗತ್ಯ. ಹಾಗಾಗಿ ಈ ಪಂಗಡದ ಸಾಹಿತಿಗಳು "ಯುಗ ಯುಗಗಳಿಂದ ತುಳಿದ ಜನರ ದನಿಯಾಗಿ" "ಹೊಸ ಸಂಸ್ಕೃತಿಯ ಹರಿಕಾರರಾಗಿ" ಸಾಹಿತ್ಯದಲ್ಲಿ ಮಾತ ನಾಡುತ್ತಾರೆ. ತನ್ಮೂಲಕ ಸಾಹಿತ್ಯ ಹಾಗೂ ಕಲಾಕ್ಷೇತ್ರದ ಜನವಿರೋಧಿ, ಪ್ರಗತಿ ವಿರೋಧಿ ಶಕ್ತಿಗಳನ್ನು ಗುರುತಿಸಿಕೊಳ್ಳುವುದರೊಂದಿಗೆ, ಶೋಷಿತರು ನಮ್ಮ ಶೋಷಣೆಯ ಮೂಲಗಳನ್ನು ಗುರುತಿಸಿಕೊಳ್ಳಬೇಕಾದ ಎಚ್ಚರವನ್ನು ಈ ಸಾಹಿತ್ಯ ಹುಟ್ಟಿಸುತ್ತದೆ. "ಹಸಿವಿನಿಂದ ಸತ್ತೋರು ಸೈಜುಗಲ್ಲು ಹೊತ್ತೋರು ಮದೆಸಿಕೊಂಡು ಮರಗಿದೋರು ನನ್ನ ಜನಗಳು" ಎಂಬ ವ್ಯಂಗ್ಯಮಿಶ್ರಿತ ವಿಷಾದದೊಂದಿಗೆ "ಮತಗಳು ಹತವಾಗುವ ಜನಪಥ ಗಳು ಮೂಡುವ" ಆಶಾವಾದಕ್ಕೂ ಸಾಹಿತ್ಯ ಮುಖಮಾಡಿದೆ. ಎಲ್ಲಾ ಮತೀಯ ಮತ್ತು ಜಾತಿ ಶಕ್ತಿಯ ದಬ್ಬಾಳಿಕೆಯನ್ನು ಕಲಾತ್ಮಕವಾಗಿ ಹೃದಯ ತಲ್ಲಣಿಸುವಂತೆ ರೂಪಕ ಗೊಳಿಸುವ ಧಾಟಿ ಸಿದ್ಧಿಸಿರುವುದು–

ದೊಡ್ಡಗೌಡರ ಬಾಗಿಲಿಗೆ।
ನಮ್ಮ ಮೂಳೆಯ ತ್ವಾರಣ ನಮ್ಮ ಜನಗಳ ಕಾಲು ಕಯ್ಯಿ।
ಕಂಬ ಅವರ ಹಟ್ಟಿಗೆ॥
ಅವರ ಬಂಗಲೆ ಅಂಗಳಕ್ಕೆ ನಮ್ಮ ರಕ್ತದ ರಂಗೋಲಿ।

–ಎಂಬಿತ್ಯಾದಿ ರಚನೆಗಳಲ್ಲಿ ಅನುಭವಕ್ಕೆ ಬರುತ್ತದೆ.

ದೀರ್ಘಕಾಲ ವ್ಯವಸ್ಥೆಯ ಸುಖ ಉಂಡವರು ಗದ್ದುಗೆಯಿಂದ ಇಳಿದು ಬರುವಂತೆ ಕರೆ ಕೊಡುವ ರಾಜಕೀಯ ಎಚ್ಚರ: "ದಲಿತರು ಬರುವರು ದಾರಿ ಬಿಡಿ; ದಲಿತರ ಕೈಗೆ ರಾಜ್ಯ ಕೊಡಿ" ಎಂಬಲ್ಲಿ ವ್ಯಕ್ತವಾಗುತ್ತದೆ. "ಮನೆ ಮನೆಯು ಕತ್ತಲೆ। ಪ್ರತಿ ಕಣ್ಣು ಕಣ್ಣೀರು। ರಾಜ್ಯ ಬಂದಿದ್ಯಾರಿಗೋ ರಾಮಣ್ಣ। ಸುಖವು ದಕ್ಕಿದ್ಯಾರಿಗೊ" ಎಂಬ ಸ್ವವಿಮರ್ಶೆ ರಾಜಕೀಯ ವಿಮರ್ಶೆ ಒಟ್ಟಿಗೆ ಸಾಗುವುದನ್ನು ನೋಡುತ್ತೇವೆ.

ಯಥಾಸ್ಥಿತಿವಾದ ಮತ್ತು ರೂಢಿಗತ ವಿಚಾರ ಕ್ರಮಗಳನ್ನು ಅತಿಕ್ರಮಿಸುತ್ತಾ ಸತ್ಯ

ವನ್ನು ಅದರ ಪರಿಶುದ್ಧ ರೂಪದಲ್ಲಿ ಕಾಣುವ ವೈಚಾರಿಕ ಮತ್ತು ವೈಜ್ಞಾನಿಕ ದೃಷ್ಟಿಗೆ ಬಂಡಾಯ–ದಲಿತ ಸಾಹಿತ್ಯ ಇಂಬುಕೊಟ್ಟಿದೆ. ಇಲ್ಲಿನ ಕಥೆ-ಕಾದಂಬರಿಗಳಲ್ಲಿ ಗ್ರಾಮೀಣ ಜಮೀನ್ದಾರಿ ಶಕ್ತಿ, ಫ್ಯಾಸಿಸ್ಟ್ ಶಕ್ತಿಗಳ ದಮನಕಾರಿ ಸಂಸ್ಕೃತಿಯ (Oppressive culture) ವಿಕೃತ ರೂಪಗಳನ್ನು ಪರಿಣಾಮಕಾರಿಯಾಗಿ ಬಯಲು ಮಾಡಲಾಗುತ್ತಿದೆ. ಪ್ರಾಚೀನ ಸಾಹಿತ್ಯ ಮತ್ತು ಸಂಸ್ಕೃತಿಯ ಪುನರ್‌ಮೌಲ್ಯೀಕರಣದ ಪ್ರಯತ್ನಗಳು ಬಂಡಾಯ ವಿಮರ್ಶೆಯ ಹೆಸರಿನಲ್ಲಿ ನಡೆಯುತ್ತಿರುವುದರ ಜೊತೆಗೆ ಬಂಡಾಯ ರಂಗ ಭೂಮಿಯ, ಹೊಸ ಅಲೆಯ ಚಲನಚಿತ್ರಗಳ ತಾತ್ವಿಕನೆಲೆ ಮತ್ತು ಸಾಧ್ಯತೆಗಳ ಚರ್ಚೆಗಳು ಸಾಗುತ್ತಿವೆ. ಸಮುದಾಯ ಸಂಘಟನೆಯ 'ಬಂಡಾಯ ಸಂಸ್ಕೃತಿ ಜಾಥಾ' ತನ್ನ ನಾಟಕ ಮತ್ತಿತರ ಸಾಂಸ್ಕೃತಿಕ ಮಾಧ್ಯಮಗಳ ಮೂಲಕ ಜನಪರ ವಿಚಾರಗಳನ್ನು ಜನತೆಯ ಕಾಲು ಬುಡಕ್ಕೆ ಒಯ್ದು ಮುಟ್ಟಿಸುವಲ್ಲಿ ಯಶಸ್ವಿ ಹೆಜ್ಜೆಗಳನ್ನಿಟ್ಟಿವೆ.

ಸಿದ್ಧಲಿಂಗಯ್ಯ, ಇಂದೂಧರ ಹೊನ್ನಾಪುರ, ಗೋವಿಂದಯ್ಯ, ರಮಜಾನ್‌ದರ್ಗಾ ಇನ್ನೂ ಮುಂತಾದ ದಲಿತ–ಬಂಡಾಯ ಕವಿಗಳು ಒಳ್ಳೆಯ ಕೃತಿ ರಚನೆ ಮಾಡಿ ಕನ್ನಡ ಕಾವ್ಯಕ್ಕೆ ಹೊಸ ಆಯಾಮ ಕೊಟ್ಟಿದ್ದಾರೆ. ದಲಿತ ಕಥೆಗಾರ ದ್ಯಾವನೂರ ಮಹಾದೇವ ಕನ್ನಡಕ್ಕೆ ಶ್ರೇಷ್ಠ ಕಥೆ–ಕಿರುಕಾದಂಬರಿ ನೀಡಿದ್ದಾರೆ. ಇವು ಸಾಮಾನ್ಯ ಮನುಷ್ಯನ ಅಳಲಿನ ನೈಜಕಥೆಗಳಾಗಿವೆ. ವಿಶಿಷ್ಟ ಸಾಮಾಜಿಕ ಕಾಳಜಿ ಮತ್ತು ಹೊಣೆಗಾರಿಕೆಯಿಂದ ಸಾಹಿತ್ಯ ರಚನೆ ಮಾಡುತ್ತಿರುವ ಚಂಪಾ, ತೇಜಸ್ವಿ, ಲಂಕೇಶ್, ಬೆಸಗರಹಳ್ಳಿ ರಾಮಣ್ಣ, ಬರಗೂರು ರಾಮಚಂದ್ರಪ್ಪ, ಬೋಳುವಾರು ಮಹಮ್ಮದ್ ಕುಂಞ, ಕಾಳೇಗೌಡ ನಾಗವಾರ, ಕುಂ. ವೀರಭದ್ರಪ್ಪ ಮುಂತಾದ ಬಂಡಾಯ ಲೇಖಕರು ಮೌಲಿಕ ಕೃತಿಗಳನ್ನು ನೀಡಿದ್ದಾರೆ. ಈ ಗುಂಪಿನ ಕೆಲವರಾದರೂ ಮಹಿಳಾ ಲೇಖಕಿಯರು ನಿರ್ಭಿಡೆಯಿಂದ ಗಂಭೀರ ಸಾಹಿತ್ಯ ರಚನೆಗೆ ತೊಡಗಿರುವುದು ಆಶಾದಾಯಕ ಸೂಚನೆ.

ಸಮಕಾಲೀನ ಸಾಹಿತ್ಯ ಅಧ್ಯಯನ ಮಾಡುವವರಿಗೆ ಕಪ್ಪು ಜನರ ಕೆಂಪು ಕಾವ್ಯ, ಜೂನ್ ೭೫ ಮಾರ್ಚ್ ೭೭, ಸಾವಿರಾರು ನದಿಗಳು, ಹೋರಾಟದ ಹಾಡುಗಳು, ಕಾವ್ಯ ಬಂತು ಬೀದಿಗೆ, ಮೂಡಲದನಿ, ಹೂವು ಹೆಣ್ಣು ತಾರೆ, ಬಂಡಾಯದ ಬಿಸಿಯುಸಿರು, ಕರಾವಳಿಯಲ್ಲಿ ಗಂಗಾಲಗ್ನ ಮುಂತಾದ ಕಾವ್ಯ ಸಂಕಲನಗಳು; ಒಡಲಾಳ, ಕುಸುಮಬಾಲೆ, ಕಪ್ಪು, ಮಾಗಿ, ಚಿದಂಬರ ರಹಸ್ಯ, ಕಾರ್ಯ ಇತ್ಯಾದಿ ಕೃತಿಗಳು ಉಪಯುಕ್ತವಾಗಿವೆ. ಹೊಸ ಚಿಂತನೆಗೆ ಗ್ರಾಸ ಒದಗಿಸುತ್ತವೆ.

ಆರಂಭದ ರಚನೆಗಳಲ್ಲಿ ರೊಚ್ಚು, ಆಕ್ರೋಶ, ಘೋಷಣೆಗಳೇ ಮೇಲುಗೈ ಸಾಧಿಸಿದ್ದು ನಿಜವಾದರೂ ಇತ್ತೀಚಿನ ಬರಹಗಳಲ್ಲಿ ಬಂಡಾಯ ಮತ್ತು ದಲಿತಪ್ರಜ್ಞೆ ಹೆಚ್ಚು ಅರ್ಥಪೂರ್ಣವಾಗಿ ಹರಳುಗಟ್ಟುತ್ತಿದೆ. ಕಲಾತ್ಮಕತೆಗೆ ಎರವಾಗದ ಸೈದ್ಧಾಂತಿಕ ಬದ್ಧತೆಯನ್ನು ಸರಳವೂ, ಸೂಕ್ಷ್ಮವೂ, ನಾದಯುಕ್ತವೂ, ಧ್ವನಿಪೂರ್ಣವೂ ಆದ ರೀತಿಯಲ್ಲಿ ಹೊರಹೊಮ್ಮಿಸುತ್ತಿದೆ. ಸಮಕಾಲೀನತೆಯ ನೆಪದಲ್ಲಿ ಕಳಪೆ ರಚನೆಗಳು ಹೆಚ್ಚುತ್ತಿವೆ.

ನಿಂದನೆಯನ್ನೇ ಬಂಡಾಯವೆಂದು ತಿಳಿದ ಹಲವರು ಏಕತಾನತೆಯ, ಸಿದ್ಧಪ್ರತಿಕ್ರಿಯೆಯ ಸಾಹಿತ್ಯ ರಚಿಸುತ್ತಿದ್ದಾರೆ. ಇದು ಎಲ್ಲಾ ಸಾಹಿತ್ಯ ಚಳುವಳಿಗಳಲ್ಲಿ ಕಂಡುಬರುವ ಸಾಮಾನ್ಯ ಬೆಳವಣಿಗೆ, ಗಂಭೀರ ಚಳುವಳಿಯೊಂದು ಜನಪ್ರಿಯತೆಯ ಕಡೆಗೆ ಸಾಗುವ ಅಪಾಯದ ಸೂಚನೆಯೂ ಇದಾಗುತ್ತದೆ.

ಒಟ್ಟಾರೆ ಪ್ರಸ್ತುತ ಸಾಹಿತ್ಯ ಚಳುವಳಿ ಹಿಂದೆಂದೂ ಕಾಣದ ಸಾಮಾಜಿಕ ನಿಷ್ಠೆ ಮತ್ತು ಸಾಹಿತ್ಯದ ಹೊಣೆಗಾರಿಕೆಯನ್ನು ಪ್ರಕಟಿಸುತ್ತದೆ. ಅನುಭವದ ಸಮಗ್ರತೆಗೆ ಭಂಗ ಬರದಂತೆ ಕಲಾತ್ಮಕ ಕಟ್ಟೆಸಕದಲ್ಲಿ ಬಂಡಾಯ–ದಲಿತ ಸಾಹಿತಿಗಳು ಇನ್ನಷ್ಟು ಮೇಲೆದ್ದು ನಿಲ್ಲಬೇಕಾಗಿದೆ.

ಕನ್ನಡೇತರ ಭಾಷೆಗಳಲ್ಲಿ
ಲಿಂಗಾಯತ ಧರ್ಮ ಕುರಿತು ಸಂಶೋಧನೆ

—ಡಾ. ಎಸ್. ಆರ್. ಗುಂಜಾಳ

ನಿಜವಾದ ಧರ್ಮವು ದೇಶ, ಭಾಷೆ, ಬಣ್ಣ, ಲಿಂಗ ಇವುಗಳನ್ನು ಮೀರಿ ಇಡೀ ಮಾನವ ಕಲ್ಯಾಣವನ್ನೇ ಬಯಸುತ್ತದೆ. ಧರ್ಮವು ಯಾವುದೊಂದು ಸಣ್ಣ ದೇಶದಲ್ಲಿ ಒಬ್ಬ ಮಹಾನ್ ವ್ಯಕ್ತಿಯಿಂದ ಜನ್ಮ ತಾಳಿರಬಹುದು. ಆದರೆ ಅದರ ಕಾರ್ಯಕ್ಷೇತ್ರ ಇಡೀ ಪ್ರಪಂಚವೇ ಆಗಿರುತ್ತದೆ. ಪ್ರೀತಿಯು ಅದರ ಹೃದಯವಾಗಿರುತ್ತದೆ, ಜನಸೇವೆಯೇ ಅದರ ಶರೀರವಾಗಿರುತ್ತದೆ. ಸ್ವಾರ್ಥ ತ್ಯಾಗವು ಅದರ ಮೂಲ ಸಿದ್ಧಾಂತವಾಗಿರುತ್ತದೆ. ಹೀಗೆ ಪ್ರೀತಿ, ಸೇವೆ, ಸ್ವಾರ್ಥ, ತ್ಯಾಗಗಳ ಮೌಲ್ಯಾಧಾರದ ಮೇಲೆ ಮೂಡಿ ಬಂದ ಧರ್ಮ, "ಲಿಂಗಾಯತ ಧರ್ಮ". ಈ ಧರ್ಮವನ್ನು ಕುರಿತು ವಿಪುಲ ಸಾಹಿತ್ಯ ಕನ್ನಡದಲ್ಲಿದೆ. ಅನಂತರ ತೆಲುಗು, ತಮಿಳು, ಮರಾಠಿ, ಇಂಗ್ಲೀಷ, ಹಿಂದಿ, ಫ್ರೆಂಚ್ ಮತ್ತು ಜರ್ಮನ್ ಭಾಷೆಗಳಲ್ಲಿ ಪ್ರಕಟವಾಗಿದೆ. ಕೇವಲ ಪ್ರಕಟವಾದುದಷ್ಟೇ ಅಲ್ಲ ಆ ಧರ್ಮವನ್ನು ಕುರಿತು ಪಂಡೀತರು ಆಳವಾಗಿ ಅಭ್ಯಸಿಸಿ ಹೊಸ ಸಂಶೋಧನೆಯನ್ನೂ ಮಾಡಿದ್ದಾರೆ. ಮೇಲ್ಕಾಣಿಸಿದ ಭಾಷೆಗಳಲ್ಲಿ ಪುಸ್ತಕಗಳು ಮತ್ತು ಲೇಖನಗಳು ಪ್ರಕಟವಾಗಿವೆ. ಆದರೆ ಸಂಶೋಧನ ಪ್ರಬಂಧಗಳು (Thesis) ಆಯಾ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಯಲ್ಲಿವೆ. ಅವು ಭಾರತದ ಮತ್ತು ಕೆಲ ಪಾಶ್ಚಿಮಾತ್ಯ ದೇಶಗಳ ವಿಶ್ವವಿದ್ಯಾಲಯಗಳಲ್ಲಿ ಅಪ್ರಕಟಿತವಾಗಿ ಉಳಿದಿವೆ. ಇಂದಿನ ಅನೇಕ ವಿದ್ವಾಂಸರಿಗೆ ಈ ಸಂಶೋಧನ ಪ್ರಬಂಧಗಳು ಯಾರಿಂದ ಬರೆಯಲ್ಪಟ್ಟಿವೆ? ಎಂದು ಬರೆಯಲ್ಪಟ್ಟಿವೆ? ಯಾವ ವಿಶ್ವವಿದ್ಯಾಲಯವು ಪಿಎಚ್.ಡಿ. ಪದವಿಯನ್ನು ಇತ್ತಿದೆ? ಆ ಮಹಾ ಪ್ರಬಂಧಗಳಲ್ಲಿಯ ಸಾರ ಸಂಗ್ರಹವೇನು? ಇತ್ಯಾದಿಗಳ ಬಗೆಗೆ ಈ ವರೆಗೆ ಯಾವೊಬ್ಬ ಲೇಖಕನೂ ಕ್ರೋಢೀಕರಿಸಿ ಹೇಳಿರುವದಿಲ್ಲ. ಈ ಕೊರತೆಯನ್ನು ಮನಗಂಡು ಎಲ್ಲ ಮಹಾ ಪ್ರಬಂಧಗಳ ಕ್ರೋಢೀಕರಣ ಕಾರ್ಯವನ್ನು ಕಳೆದ ಕೆಲವು ವರ್ಷಗಳಿಂದ ನಾನು ಕೈಕೊಂಡಿದ್ದೆ. ನನ್ನ ಪರಿಶ್ರಮದ ಫಲವಾಗಿ ಕೆಲವೊಂದು ವಿಶ್ವವಿದ್ಯಾಲಯಗಳಲ್ಲಿ ಇರುವ ಸಂಶೋಧನ ಮಹಾ ಪ್ರಬಂಧಗಳ(Research Thesis) ಮಾಹಿತಿ ಲಭ್ಯವಾಗಿದೆ. ಅವುಗಳ ವಿವರಣೆಯನ್ನು ಸಂಕ್ಷೇಪವಾಗಿ ಈ ಲೇಖನದಲ್ಲಿ ಕೊಡಬಯಸುತ್ತೇನೆ.

ಅ) ಇಂಗ್ಲೀಷ ಭಾಷೆಯಲ್ಲಿ ಪಿಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾ ಪ್ರಬಂಧಗಳು:

ಲಿಂಗಾಯತ ಧರ್ಮದ ವಿವಿಧ ವಿಷಯಗಳನ್ನು ಕುರಿತು ಎಂಟು ವಿಶ್ವವಿದ್ಯಾನಿಲಯಗಳಲ್ಲಿ

ಈ ವರೆಗೆ ಸಂಶೋಧನೆ ನಡೆದಿವೆ. ಅವುಗಳಲ್ಲಿ ಒಟ್ಟು ಹದಿನೆಂಟು (೧೮) ಸಂಶೋಧನ ಮಹಾಪ್ರಬಂಧಗಳು ಪಿಎಚ್.ಡಿ. ಪದವಿಗೆ ಅರ್ಹವಾಗಿವೆ. ಈ ಎಂಟು ವಿಶ್ವವಿದ್ಯಾನಿಲಯಗಳ ಹೆಸರುಗಳನ್ನು, ಅಲ್ಲಿ ಸ್ವೀಕರಿಸಲ್ಪಟ್ಟ ಪ್ರಬಂಧಗಳ ಸಂಖ್ಯೆಯನ್ನು ಕೆಳಗೆ ಸಾದರಪಡಿಸಿದ್ದೇನೆ.

ಕ್ರಮ ಸಂಖ್ಯೆ	ವಿಶ್ವವಿದ್ಯಾನಿಲಯಗಳ ಹೆಸರು	ಪ್ರಬಂಧಗಳ ಸಂಖ್ಯೆ
೧.	ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ	೮
೨.	ಮೈಸೂರು ವಿಶ್ವವಿದ್ಯಾಲಯ ಮೈಸೂರು	೩
೩.	ಮದ್ರಾಸ್ ವಿಶ್ವವಿದ್ಯಾಲಯ ಮದ್ರಾಸ್	೧
೪.	ಪುಣೆ ವಿಶ್ವವಿದ್ಯಾಲಯ ಪುಣೆ	೧
೫.	ದಿಲ್ಲಿ ವಿಶ್ವವಿದ್ಯಾಲಯ ದಿಲ್ಲಿ	೧
೬.	ಲಖ್ನೋ ವಿಶ್ವವಿದ್ಯಾಲಯ ಲಖ್ನೋ	೧
೭.	ಹಾರ್ವರ್ಡ ವಿಶ್ವವಿದ್ಯಾಲಯ ಹಾರ್ವರ್ಡ	೨
೮.	ಗೋಯಥೆ ವಿಶ್ವವಿದ್ಯಾಲಯ ಫ್ರಾಂಕಫೋರ್ಟ	೧
	ಒಟ್ಟು (ಹದಿನೆಂಟು)	೧೮

ಈ ಮೇಲ್ಕಾಣಿಸಿದ ಹದಿನೆಂಟು ಮಹಾ ಪ್ರಬಂಧಗಳ ಯಾದಿಯನ್ನು ಕೆಳಗೆ ನಮೂದಿಸಲಾಗಿದೆ.

Ph.d. THESIS

1. Appa Rao, G.
   Comparative study of Vemana and Sarvajana.
   Karnataka University, Dharwad. 1970.
2. Bali, Arun P.
   A Sociological study of Veerashaiva movement.
   University of Delhi, Delhi 1976.
3. Bidarakoppa, G. S.
   Role of religious institutions in the promotion of social Welfare in Dharwar District Karnataka: Intensive study of Murusaviramath, Hubli.
   Karnataka University, Dharwad, 1978.

4. Blake, Michael R.
Astavarna in the sunyasampadane, pattern of religious association in fifteenth Century Veerashaivism. Harward University. 1979.

5. Chandrashekharaiah, K.
A Sociological analysis of Virashaivism.
Johann Wolfgang Goethe University,
Frankfurt am Main, 1955.

6. Egnor, Margaret T.
The Lingayats of Mysore: a study in the acquisition of power and prestige. Harward University. 1970.

7. Hunsahal, S. M.
The Virashaivism.
Lucknow University, Lucknow, 1956.

8. Kambi, V.S.
Satastala in Virashaivism.
Karnataka University, Dharwad. 1974.

9. Koppal, Nijallingamma V.
A study of shivayoga as preached and practiced by Virashaiva Mystics.
Karnataka University, Dharwad, 1968.

10. Lalitha, K. Sami,
Shaiva nayanmars and Sivasaranas: A comparative study of philosophical and religious perspectives.
University of Mysore, Mysore, 1980.

11. Lalithamba, K.
Virashaivism in Andhra,
Karnataka University Dharwad, 1975.

12. Mahadevappa, N. G.
Virashaiva concept of shakti.
University of Mysore, Mysore, 1978.

13. Malledevaru, H. P.
Saivagamas and Upanishads.
Karnataka University, Dharwad, 1970.

14. Mullatti, Leela L.
Impact of Virashaivism on the status of women.
University of Poona, Poona. 1979.

15. Raja Purohit, B. B.
Grammar of Vachana literature.
Karnataka University, Dharwad, 1965.

16. Ratnasabhapathy.
Virashaivism in Tamil Sources.
Annamalai University, Madras, 1972.

17. Sadyojata, Swamiji.
Saiva and virashaiva maths, in Karnataka:
from 10th century to present period.
Karnataka University, Dharwad, 1974.

18. Shivarudrappa, G.
Contributions of Veerashaiva maths to the
development of Education in Karnataka: A
Historical Survey. University of Mysore,
Mysore. 1974.

ಮೇಲ್ಕಾಣಿಸಿದ ಇಂಗ್ಲೀಷಿನಲ್ಲಿ ಬರೆಯಲ್ಪಟ್ಟ ಸಂಶೋಧನ ಮಹಾ ಪ್ರಬಂಧಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಕೆಲವು ಗಮನಾರ್ಹ ಸಂಗತಿಗಳು ಕಂಡು ಬರುತ್ತವೆ.

ಲಿಂಗಾಯತ ಧರ್ಮವನ್ನು ಕುರಿತು ಹೆಚ್ಚಿನ ಸಂಶೋಧನೆ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನಡೆದಿದೆ. ಇಲ್ಲಿ ಎಂಟು ಮಹಾ ಪ್ರಬಂಧಗಳಿಗೆ ಪಿಎಚ್.ಡಿ. ಪದವಿಯನ್ನು ಕೊಡಲಾಗಿದೆ. ಸಂಶೋಧನೆಯ ಕಾರ್ಯದಲ್ಲಿ ಮೈಸೂರು ವಿಶ್ವವಿದ್ಯಾಲಯಕ್ಕೆ ಎರಡನೆಯ ಸ್ಥಾನ ಲಭಿಸುತ್ತದೆ. ಮೂರನೇ ಸ್ಥಾನವನ್ನು ಪಾಶ್ಚಿಮಾತ್ಯ ದೇಶದ ಹಾರ್ವರ್ಡ ವಿಶ್ವವಿದ್ಯಾಲಯಗಳಿಸುತ್ತದೆ. ಇದು ನಿಜವಾಗಿಯೂ ಪ್ರಶಂಸನೀಯವಾದ ಸಂಗತಿ.

ಲಿಂಗಾಯತ ಧರ್ಮವನ್ನು ಕುರಿತು ಮೊಟ್ಟಮೊದಲು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಂಶೋಧನೆ ನಡೆದದ್ದು ೧೯೫೫ರಲ್ಲಿ. ಜರ್ಮನಿ ದೇಶದ ಜೆ. ಡಬ್ಲ್ಯೂ. ಗೋಯಥೆ ವಿಶ್ವವಿದ್ಯಾಲಯವು ಪ್ರೊಫೆಸರ್ ಕೆ. ಚಂದ್ರಶೇಖರಯ್ಯ ಅವರು ಬರೆದು ಸಾದರ ಪಡಿಸಿದ **'ವೀರಶೈವ ಧರ್ಮದ ಸಾಮಾಜಿಕ ವಿಶ್ಲೇಷಣೆ'** ಎಂಬ ಮಹಾ ಪ್ರಬಂಧಕ್ಕೆ ಪಿಎಚ್.ಡಿ. ಪದವಿಯನ್ನು ಪ್ರಧಾನ ಮಾಡಿದೆ. ಡಾ. ಎಸ್. ಎಮ್. ಹುಣಶ್ಯಾಳ ಬರೆದ **'ವೀರಶೈವ ಧರ್ಮ'** ಎಂಬ ಮಹಾಪ್ರಬಂಧಕ್ಕೆ ಉತ್ತರ ಭಾರತದ ಲಖ್ನೋ ವಿಶ್ವವಿದ್ಯಾಲಯವು ೧೯೫೬ರಲ್ಲಿ ಪಿಎಚ್.ಡಿ. ಪದವಿಯನ್ನು ಕೊಡಮಾಡಿದೆ. ಮೂರನೆಯ

ಮಹಾ ಪ್ರಬಂಧವಾದ "ವಚನ ಸಾಹಿತ್ಯದ ವ್ಯಾಕರಣ"ವನ್ನು ಡಾ. ಬಿ.ಬಿ.ರಾಜಪುರೋಹಿತ ಅವರು ೧೯೬೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಸಾದಪಡಿಸಿ ಪಿಎಚ್.ಡಿ. ಪದವಿಯನ್ನು ಪಡೆದಿದ್ದಾರೆ. ಅನಂತರ ಇನ್ನುಳಿದ ವಿಶ್ವವಿದ್ಯಾಲಯಗಳಲ್ಲಿ ಸಂಶೋಧನಾತ್ಮಕ ಚಟುವಟಿಕೆಗಳು ನಡೆದಿರುವದನ್ನು ಮೇಲೆ ಕಾಣಿಸಿದ ಯಾದಿಯಿಂದ ನಾವು ಅರಿತುಕೊಳ್ಳಬಹುದು. ಇಲ್ಲಿ ವಿಚಿತ್ರವಾದ ಒಂದು ವಿಷಯವನ್ನು ನಾವು ಗಮನಿಸಬಹುದು. ಕರ್ನಾಟಕದಲ್ಲಿ ಮುಖ್ಯವಾಗಿ ಬೇರು ಬಿಟ್ಟಿರುವ ವೀರಶೈವ ಧರ್ಮವನ್ನು ಕುರಿತು ಮೊಟ್ಟ ಮೊದಲು ಸಂಶೋಧನೆ ಪ್ರಾರಂಭವಾದದ್ದು ಪಾಶ್ಚಿಮಾತ್ಯ ರಾಷ್ಟ್ರದಲ್ಲಿ. ಅನಂತರ ಉತ್ತರ ಭಾರತದಲ್ಲಿ; ತದನಂತರ ಕರ್ನಾಟಕದಲ್ಲಿ. ಧರ್ಮವು ದೇಶ ಭಾಷೆಗಳ ಗಡಿಗಳನ್ನು ಮೀರಿ ನಿಂತಿರುವದೆಂದು ಸಾರಿ ಹೇಳಲು ಇದು ಸಾಕ್ಷಿಯಾಗಿದೆ. ಈ ಎಲ್ಲ ಹದಿನೆಂಟು ಪ್ರಬಂಧಗಳು ಸುಮಾರು ೨೫ ವರ್ಷಗಳ ಅವಧಿಯಲ್ಲಿ (೧೯೫೫-೧೯೮೦) ಬರೆಯಲ್ಪಟ್ಟಿವೆ. ಈ ದೀರ್ಘಾವಧಿಯನ್ನು ಗಣನೆಗೆ ತೆಗೆದುಕೊಂಡಾಗ ವರ್ಷಕ್ಕೆ ಒಂದರಂತೆ ಸಹ ಮಹಾ ಪ್ರಬಂಧಗಳು ಮೂಡಿ ಬಂದಿಲ್ಲ. ಆದರೂ ಇದು ವೀರಶೈವ ಧರ್ಮಕ್ಕೆ ಸಂದ ಅತ್ಯಂತ ಮಹತ್ವದ ಕಾಣಿಕೆಯೆಂದೇ ಹೇಳಬೇಕಾಗುತ್ತದೆ.

ಇಲ್ಲಿ ನಾವು ವಿಶಾದದಿಂದ ಹೇಳಬೇಕಾದುವೇನೆಂದರೆ ಈ ಎಲ್ಲ ಮಹಾ ಪ್ರಬಂಧಗಳು ಪ್ರಕಟವಾಗಿದ್ದರೆ ಇನ್ನೂ ಹೆಚ್ಚಿನ ಸಂಶೋಧನೆಗೆ ದಾರಿ ಮಾಡಿದಂತಾಗುತ್ತಿತ್ತು. ಇವುಗಳಲ್ಲಿ ಮೂರ್ನಾಲ್ಕು ಮಹಾಪ್ರಬಂಧಗಳು ಮಾತ್ರ ಪ್ರಕಟವಾಗಿರುವದು ವ್ಯಸನಪಡತಕ್ಕ ಸಂಗತಿಯಾಗಿದೆ. ವೀರಶೈವ ಧರ್ಮದಲ್ಲಿ ಹತ್ತೆಂಟು ಜಗದ್ಗುರುಗಳು, ಸಾವಿರಾರು ಶ್ರೀಮಂತ ಮಠಾಧೀಶರೂ, ಧನಿಕರಾದ ವರ್ತಕರೂ ಇರುವದರಿಂದ ಅವರೆಲ್ಲ ಒಂದು ಮೂಲಧನವನ್ನು ಸಂಗ್ರಹಿಸಿ ಇಂಥ ಇಂಗ್ಲೀಷ್ ಮತ್ತಿತರ ಪರಭಾಷೆಗಳಲ್ಲಿ ಸಿದ್ಧವಾದ ಮಹಾ ಪ್ರಬಂಧಗಳನ್ನು ಪ್ರಕಟಣೆ ಮಾಡಿದರೆ ಹೆಚ್ಚಿನ ಸಂಶೋಧನೆಗೆ ಅನುಕೂಲವಾಗುವದರಲ್ಲಿ ಸಂದೇಹವಿಲ್ಲ.

ಬ) ತೆಲಗು ಭಾಷೆಯಲ್ಲಿ ಸಂಶೋಧನೆ:

ಬಸವಣ್ಣನವರನ್ನು ಕುರಿತು ಮೊಟ್ಟ ಮೊದಲನೆಯ ಚಾರಿತ್ರಿಕ ಗ್ರಂಥ ರಚಿತವಾದದ್ದು ತೆಲುಗಿನಲ್ಲಿ. ಅನಂತರ ಕನ್ನಡದಲ್ಲಿ. ಪಾಲ್ಕುರಿಕೆ ಸೋಮಾರಾಧ್ಯನು ಕ್ರಿ.ಶ. ಸುಮಾರು ೧೧೯೫ರಲ್ಲಿ ಮೊಟ್ಟ ಮೊದಲು ತೆಲುಗು ದ್ವಿಪದಿಯಲ್ಲಿ ಬಸವ ಪುರಾಣವನ್ನು ರಚಿಸಿದನು. ಅನಂತರ ಹರಿಹರ ಮಹಾ ಕವಿಯು ಕನ್ನಡದಲ್ಲಿ ಬಸವರಾಜ ದೇವರ ರಗಳೆಯನ್ನು ಬರೆದನು. ಪಾಲ್ಕುರಿಕೆ ಸೋಮರಾಧ್ಯರಿಂದ ಮೊದಲ್ಗೊಂಡು ಕಳೆದ ಎಂಟುನೂರು ವರ್ಷಗಳಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಅನೇಕ ಕಾವ್ಯ ಗ್ರಂಥಗಳು ತೆಲುಗಿನಲ್ಲಿ ರಚಿಸಲ್ಪಟ್ಟಿವೆ. ನಮಗೆ ಅವುಗಳಲ್ಲಿ ಕೇವಲ ೪೪ ಗ್ರಂಥಗಳು ಲಭ್ಯವಾಗಿವೆ. ಅವುಗಳಲ್ಲಿ ಇಪ್ಪತ್ತೆರಡು ಗ್ರಂಥಗಳು ೧೮೯೩ಕ್ಕಿಂತ ಮೊದಲು ಬರೆಯಲ್ಪಟ್ಟವುಗಳಾಗಿವೆ. ೧೮೯೩

ರಿಂದ ೧೯೮೬ರ ಅವಧಿಯಲ್ಲಿ ಉಳಿದ ೨೨ ಗ್ರಂಥಗಳು ಮುದ್ರಣಗೊಂಡು ಪ್ರಕಟವಾಗಿವೆ. ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಲಿಂಗವಂತ ಸಾಹಿತ್ಯಕ್ಕೆ ವಿಶಿಷ್ಟವಾದ ಸ್ಥಾನವಿದೆ. ಈ ಭಾಷೆಯಲ್ಲಿ ಉಪಲಬ್ಧವಿದ್ದ ಸಾಹಿತ್ಯಿಕ, ಐತಿಹಾಸಿಕ ಆಧಾರಗಳನ್ನು ಅವಲೋಕಿಸಿ ಸಹೋದರಿ ಡಾ. ಕೆ. ಲಲಿತಾಂಬ ಇವರು 'ಆಂಧ್ರಪ್ರದೇಶದಲ್ಲಿ ವೀರಶೈವ ಧರ್ಮ' ಎಂಬ ಸಂಶೋಧನ ಪ್ರಬಂಧವನ್ನು ೧೯೭೫ರಲ್ಲಿ ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಗಳಿಸಿದ್ದಾರೆ. ಈ ಭಾಷೆಯಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಸಂಶೋಧನೆ ಮಾಡುವವರಿಗೆ ಫಲವತ್ತಾದ ಭೂಮಿ ಇದೆ.

ಕ) ತಮಿಳು ಭಾಷೆಯಲ್ಲಿ ಸಂಶೋಧನೆ:

ತಮಿಳು ಭಾಷೆಯಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಅನೇಕ ಗ್ರಂಥಗಳು ರಚಿತವಾಗಿವೆ. ಪದಿನೇಳನೇ ಶತಮಾನದ ಕವಿ ಶಿವಪ್ರಕಾಶ ಸ್ವಾಮಿಗಳೊಬ್ಬರಿಂದಲೇ ವೀರಶೈವ ಧರ್ಮಪರವಾದ ಸುಮಾರು ಹದಿನೈದು ಗ್ರಂಥಗಳು ತಮಿಳಿನಲ್ಲಿ ರಚಿಸಲ್ಪಟ್ಟಿವೆ. ಅವರೇ ಚಾಮರಸ ಕವಿಯ ಪ್ರಭುಲಿಂಗ ಲೀಲೆಯನ್ನು ತಮಿಳಿಗೆ ಅನುವಾದ ಮಾಡಿದ್ದಾರೆ. ಮದ್ರಾಸ್ ವಿಶ್ವವಿದ್ಯಾಲಯದ ಶೈವ ಸಿದ್ಧಾಂತ ವಿಭಾಗದಲ್ಲಿ ಪ್ರೊಫೆಸರರಾಗಿ ಕೆಲಸ ಮಾಡುತ್ತಿರುವ ಡಾ. ವಿ. ರಥಿನ ಸಭಾಪತಿಯವರು ತಮಿಳು ಕೃತಿಗಳಲ್ಲಿ ವೀರಶೈವ ಧರ್ಮ (Veerashaivism in Tamil sources) ಎಂಬ ಮಹಾ ಪ್ರಬಂಧವನ್ನು ೧೯೭೭ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿ ಪಿಎಚ್.ಡಿ. ಪದವಿಯನ್ನು ಗಳಿಸಿದ್ದಾರೆ. ಇದರ ಸಾರಸಂಗ್ರಹವು ಇಂಗ್ಲೀಷಿನಲ್ಲಿ ಇತ್ತೀಚೆಗೆ ಪ್ರಕಟವಾಗಿದೆಯೆಂದು ಕೇಳಿದ್ದೇನೆ. ಲಿಂಗಾಯತ ಧರ್ಮವನ್ನು ಕುರಿತು ತಮಿಳು ಆಧಾರಗಳನ್ನು ಅವಲಂಬಿಸಿ ತಮಿಳು ಭಾಷೆಯಲ್ಲಿಯೇ ಸಂಶೋಧನೆ ಮಾಡುವವರಿಗೆ ಸಾಕಷ್ಟು ಅವಕಾಶ ಉಂಟೆಂದು ಬೇರೆ ಹೇಳಬೇಕಾಗಿಲ್ಲ.

ಡ) ಮರಾಠಿಯಲ್ಲಿ ಸಂಶೋಧನೆ:

ಮರಾಠಿ ಭಾಷೆಯಲ್ಲಿ ಒಟ್ಟು ಮೂರು ಸಂಶೋಧನ ಪ್ರಬಂಧಗಳು ರಚಿತವಾಗಿವೆ. ಅವುಗಳ ಸೂಚಿಯನ್ನು ಕೆಳಗೆ ಕೊಡಲಾಗಿದೆ.

೧. ಧೇರೆ (ಆರ್.ಸಿ.).
ಖೇಚರ ವಿಷಕೃತಿ ಷಟ್‌ಸ್ಥಲ: ಏಕ ಚಿಕಿತ್ಸಕ ಅಭ್ಯಾಸ.
ಪೂಣಾ ವಿಶ್ವವಿದ್ಯಾಲಯ, ೧೯೮೦ (?).

೨. ಮೋಗಳೆವಾರ್ (ಸುಧಾಕರ).
ಮಹಾರಾಷ್ಟ್ರ ಅಂತೀಲ ವೀರಶೈವ ಧರ್ಮ ಪಂಥ ವ ತ್ಯಾಂಚೆ
ವಾಂಙ್ಮಯ, ನಾಗಪೂರ ವಿಶ್ವವಿದ್ಯಾಲಯ, ನಾಗಪೂರ, ೧೯೭೦.

೩. ತೊಂಡಾರೆ (ರಾಮಸಂಬಪ್ಪ).
ಮರಾಠಿ ವೀರಶೈವ ಸಂತಾಚೆ ಅಭಂಗವಾಣಿ,
ಮರಾಠವಾಡ ವಿಶ್ವವಿದ್ಯಾಲಯ, ಔರಂಗಬಾದ, ೧೯೮೦.

ಮರಾಠಿಯಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಕ್ರಿ. ಶ. ೧೯೦೦ಕ್ಕಿಂತ ಮೊದಲು ರಚಿತವಾದ ಗ್ರಂಥಗಳು ಅತ್ಯಂತ ಕ್ವಚಿತವಾಗಿವೆ. ಆದರೆ ೧೯ನೇ ಶತಮಾನದ ಆದಿಯಿಂದ ಆ ಭಾಷೆಯಲ್ಲಿ ವಿಪುಲ ಸಾಹಿತ್ಯ ನಿರ್ಮಾಣಗೊಂಡಿವೆ. ಶೋಲಾಪೂರ, ಕೊಲ್ಹಾಪೂರ, ಲಾತೂರ, ಅಮರಾವತಿ, ನಾಗಪೂರ, ಔರಂಗಬಾದ, ಪುಣೆ ಮುಂತಾದ ಜಿಲ್ಲೆಗಳಲ್ಲಿ ಲಿಂಗಾಯತ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಶೋಲಾಪೂರ, ಕೊಲ್ಹಾಪೂರ ಮತ್ತು ಲಾತೂರ ಜಿಲ್ಲೆಗಳಲ್ಲಂತೂ ಲಿಂಗಾಯತರು ಅಧಿಕ ಸಂಖ್ಯೆಯಲ್ಲಿದ್ದಾರೆ. ಬಸವ ಕಲ್ಯಾಣದಲ್ಲಿ ಬಸವಣ್ಣನ ನೇತೃತ್ವದಲ್ಲಿ ಹನ್ನೆರಡನೇ ಶತಮಾನದಲ್ಲಿ ನಡೆದ ಶರಣರ ಕ್ರಾಂತಿಯ ಪ್ರಭಾವ ಮರಾಠಿ ಭಾಷೆಯ ಮೇಲೆ ಪರಿಣಾಮ ಬೀರದೇ ಇರುವದು ಆಶ್ಚರ್ಯ ಪಡಬೇಕಾದ ಸಂಗತಿಯಾಗಿದೆ. ಬಸವ ಕಲ್ಯಾಣವು ಮಹಾರಾಷ್ಟ್ರ ಪ್ರದೇಶಕ್ಕೆ ಅತ್ಯಂತ ಸಮೀಪವಾಗಿದೆ. ಬಸವಾದಿ ಪ್ರಮಥರ ಅನುಯಾಯಿಗಳು ಸಾಕಷ್ಟು ಸಂಖ್ಯೆಯಲ್ಲಿ ಇದ್ದಾರೆ. ಆದರೆ ಮರಾಠಿ ಭಾಷೆಯಲ್ಲಿ ಲಿಂಗಾಯತ ಧರ್ಮವನ್ನು ಕುರಿತ ಗ್ರಂಥಗಳು ಉಪಲಬ್ಧವಿಲ್ಲದಿರುವುದು ಸೋಜಿಗದ ಸಂಗತಿಯಾಗಿದೆ. ಬಸವ ಪುರಾಣ, ಚನ್ನಬಸವ ಪುರಾಣ, ಪ್ರಭುಲಿಂಗಲೀಲೆ ಈ ಗ್ರಂಥಗಳು ಮರಾಠಿಯಲ್ಲಿ ಅನುವಾದಗೊಂಡಿವೆ ಎಂದು ಹೇಳಲಾಗುತ್ತಿದೆ. ಆದರೆ ಆ ಅನುವಾದ ಗ್ರಂಥಗಳು ಇಂದು ನಮಗೆ ಮುದ್ರಿತ ರೂಪದಲ್ಲಿ ಸಿಗದಂತಾಗಿವೆ. ಆದರೆ ಕಳೆದ ಎಂಭತ್ತು-ಎಂಭತ್ತೈದು ವರ್ಷಗಳಲ್ಲಿ ನೂರಾರು ಗ್ರಂಥಗಳು, ಸಾವಿರಾರು ಲೇಖನಗಳೂ ಮರಾಠಿ ಭಾಷೆಯಲ್ಲಿ ಪ್ರಕಟಗೊಂಡಿವೆ. ವೀರಶೈವ ಧರ್ಮ ಪ್ರಚಾರಕ್ಕಾಗಿಯೇ ಮೀಸಲಾದ ಪಾಕ್ಷಿಕ, ಮಾಸಿಕ ಪತ್ರಿಕೆಗಳು ಪ್ರಕಟವಾಗಿವೆ. ನಮ್ಮ ಲೆಕ್ಕದಂತೆ ಆ ಪತ್ರಿಕೆಗಳ ಸಂಖ್ಯೆ ಮೂವತ್ತೂರಕ್ಕೂ ಮಿಕ್ಕಿದೆ. ಆದರೆ ದುರ್ದೈವದಿಂದ ಬಹಳಷ್ಟು ಪತ್ರಿಕೆಗಳು ನಿಂತುಹೋಗಿ, ಕೇವಲ ಬೆರಳೆಣಿಕೆಯಷ್ಟು ಪತ್ರಿಕೆಗಳು ಮಾತ್ರ ತಮ್ಮ ಪ್ರಕಟಣೆಯ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿರುತ್ತವೆ. ಅವುಗಳಲ್ಲಿ ಜ್ಞಾನಪ್ರಸಾರ (ಕೊಲ್ಹಾಪೂರ), ವಿದರ್ಭಗಂಗಾ (ನಾಗಪೂರ), ವೀರಶೈವ ಸಾಹಿತ್ಯ ಸಂಶೋಧನ, ಮಾಸಿಕ (ಶೋಲಾಪೂರ) ಇವು ಜೀವಂತ ಉಳಿದಿವೆ. ಮರಾಠಿಯಲ್ಲಿರುವ ಈ ಶತಮಾನದ ವಿಪುಲ ಸಾಹಿತ್ಯವನ್ನು ಅವಲೋಕಿಸಿದರೆ ಇಲ್ಲಿ ಸಂಶೋಧನೆಗೆ ಹೆಚ್ಚು ಅವಕಾಶ ಉಂಟೆಂದು ಹೇಳಬಹುದು.

೫) ಹಿಂದಿ ಭಾಷೆಯಲ್ಲಿ ಸಂಶೋಧನೆ:

ಹಿಂದಿ ಭಾಷೆಯಲ್ಲಿ ಲಿಂಗಾಯತ ಧರ್ಮವನ್ನು ಕುರಿತು ಸಂಶೋಧನಾ ಚಟುವಟಿಕೆಗಳು ೧೯೬೦ರಿಂದ ಈಚೆಗೆ ಪ್ರಾರಂಭವಾಗಿವೆ. ಬನಾರಸದ ಹಿಂದೂ ವಿಶ್ವವಿದ್ಯಾಲಯಕ್ಕೆ ೧೯೬೦ರಲ್ಲಿ ಡಾ. ಹಿರಣ್ಮಯ ಅವರು "ಹಿಂದಿ ಔರ ಕನ್ನಡ ಮೆ ಭಕ್ತಿ ಆಂದೋಲನಾ ಕಾ

ತುಲನಾತ್ಮಕ ಅಧ್ಯಯನ" ಎಂಬ ಮಹಾಪ್ರಬಂಧವನ್ನು ಮಂಡಿಸಿ ಪಿಎಚ್.ಡಿ. ಪದವಿಯನ್ನು ಪಡೆದರು. ಅಂದಿನಿಂದ ಇದಿನವರೆಗೆ ವಿವಿಧ ವಿಶ್ವವಿದ್ಯಾಲಯಗಳಿಗೆ ಸಾದರ ಪಡಿಸಿದ ಮಹಾಪ್ರಬಂಧಗಳ ಪಟ್ಟಿಯನ್ನು ಕೆಳಗೆ ಕೊಟ್ಟಿದ್ದೇವೆ.

೧. ಹಿರಣ್ಮಯಿ.
ಹಿಂದಿ ಔರ ಕನ್ನಡ ಮೆ ಭಕ್ತಿ ಆಂದೋಳನ ಕಾ ತುಲನಾತ್ಮಕ ಅಧ್ಯಯನ
ಬನಾರಸ ಹಿಂದೂ ವಿಶ್ವವಿದ್ಯಾಲಯ, ವಾರಣಾಸಿ, ೧೯೬೦.

೨. ಕ್ರಿಷ್ಣಮೂರ್ತಿ (ಎಮ್.ಎಸ್.)
ಹಿಂದಿ ಔರ ಕನ್ನಡ ಸಾಹಿತ್ಯ ಕೀ ಪ್ರಮುಖ ಧಾರಾವೋಂಕಾ ತುಲನಾತ್ಮಕ ಅಧ್ಯಯನ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೫.

೩. ರಾಜೇಶ್ವರಯ್ಯ (ಎಮ್).
ಕನ್ನಡ ಶರಣ ಸಾಹಿತ್ಯ ಏವಮ್ ಹಿಂದಿ ಸಂತ ಸಾಹಿತ್ಯ ಮೇ ಪ್ರಾಪ್ತ ನಿರ್ಗುಣ ಭಕ್ತಿ ಧಾರಕಾ: ಏಕ ತುಲನಾತ್ಮಕ ಅಧ್ಯಯನ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೨.

೪. ಕುದುಗುಳ (ಷಣ್ಮುಖಯ್ಯಾ ವಿ).
ಅಕ್ಕಮಹಾದೇವಿ ಔರ ಮೀರಾಬಾಯಿ: ಏಕ ತುಲನಾತ್ಮಕ ಅಧ್ಯಯನ
ಅಲಹಾಬಾದ ವಿಶ್ವವಿದ್ಯಾನಿಲಯ, ಅಲಹಾಬಾದ, ೧೯೭೫.

೫. ರಾಧಾಕ್ರಿಷ್ಣಮೂರ್ತಿ.
ದಕ್ಷಿಣ ಭಾರತ್ ಕೀ ಸಂತ ಪರಂಪರ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮.

೬. ಕಪ್ಪಿಕೇರಿ (ಶಂಕರರಾವ್ ಮಹಾರುದ್ರಪ್ಪ).
ಶ್ರೀ ಬಸವೇಶ್ವರ ಔರ ಕಬೀರ: ಏಕ ತುಲನಾತ್ಮಕ ಅಧ್ಯಯನ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧.

೭. ಅಂಬಲಗೆ (ಕಾಶೀನಾಥ).
ಸಂತ ಔರ ಶರಣ ಕಾವ್ಯ ಮೆ ಸಾಮಾಜಿಕ ಚೇತನ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ೧೯೮೫.

ಮೇಲಿನ ಎಲ್ಲಾ ಪ್ರಬಂಧಗಳನ್ನು ಅವಲೋಕಿಸಿದಾಗ ಕೇವಲ ಲಿಂಗಾಯತ ಧರ್ಮವನ್ನೇ ಕುರಿತು ಬರೆಯಲ್ಪಟ್ಟ ಒಂದೂ ಪ್ರಬಂಧವು ಕಾಣುವದಿಲ್ಲ. ಇವೆಲ್ಲವು ಲಿಂಗಾಯತ ಧರ್ಮವನ್ನು ಇತರ ಸಂತ ಅಥವಾ ಸಾಹಿತ್ಯದೊಂದಿಗೆ ತುಲನಾತ್ಮಕವಾಗಿ ಅಧ್ಯಯನ ಮಾಡಿದುವಾಗಿವೆ. ಆದರೂ ಸಂಶೋಧನಾ ದೃಷ್ಟಿಯಿಂದ ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ, ಧರ್ಮ ಪ್ರಚಾರದ ದೃಷ್ಟಿಯಿಂದ ಇಂಥ ಸಂಶೋಧನಾ ಮಹಾಪ್ರಬಂಧಗಳಿಗೆ ಮಹತ್ವವುಂಟು.

ಲಿಂಗಾಯತ ಧರ್ಮವನ್ನು ಕೇವಲ ‘ಧರ್ಮ’ ಎಂಬ ಒಂದೇ ಅರ್ಥದಲ್ಲಿ ತಿಳಿದು ಕೊಳ್ಳುವ ಕಾಲವೀಗ ಉಳಿದಿಲ್ಲವೆಂದು ಇಲ್ಲಿಯವರೆಗೆ ಸಿದ್ಧವಾದ ಮಹಾಪ್ರಬಂಧಗಳನ್ನು ಅವಲೋಕಿಸಿದರೆ ಇದು ಸ್ಪಷ್ಟವಾಗುತ್ತದೆ. ಈ ಧರ್ಮವನ್ನು ಪಾಲಿಸುವ ಜನಾಂಗವಿದೆ. ಜನಾಂಗದ ರೀತಿ-ನೀತಿಗಳ ಬಗೆಗೆ ಸಮಾಜ ವಿಜ್ಞಾನಿಗಳು ಚಿಂತನೆ ಮಾಡುತ್ತಾರೆ. ಇದರಲ್ಲಿ ಅಡಕವಾದ ‘ಕಾಯಕ’ ತತ್ವವು ಒಂದು ನಾಡಿನ ಅರ್ಥಶಾಸ್ತ್ರದ ಮೇಲೆ ಪ್ರಭಾವ ಬೀರುವದರಿಂದ ಅರ್ಥಶಾಸ್ತ್ರಜ್ಞರು ತಮ್ಮದೇ ಆದ ದೃಷ್ಟಿಕೋನದಿಂದ ಈ ಧರ್ಮವನ್ನು ವಿಶ್ಲೇಷಿಸುತ್ತಾರೆ. ‘ಲಿಂಗಾಯತರು ಮತ್ತು ರಾಜ್ಯಶಾಸ್ತ್ರ’ ಎಂಬುದ ಪ್ರತ್ಯೇಕ ವಿಷಯವಾಗುತ್ತದೆ. ‘ಲಿಂಗಾಯತರ ಕುಟುಂಬ ವ್ಯವಸ್ಥೆ’ ಮಾನವಿಕ ಶಾಸ್ತ್ರಗಳಲ್ಲಿ ಬರುವ ವಿಷಯ. ‘ಲಿಂಗಾಯತರಲ್ಲಿ ವೈಜ್ಞಾನಿಕ ದೃಷ್ಟಿ’ ಎಂಬುದು ಅಭ್ಯಾಸಕ್ಕೆ ಬೇರೊಂದು ಪ್ರತ್ಯೇಕ ವಿಷಯವಾಗುತ್ತದೆ. ಹೀಗೆ ಲಿಂಗಾಯತ ಧರ್ಮದ ಅರ್ಥವ್ಯಾಪ್ತಿ ಹಿಗ್ಗುತ್ತ ನಡೆದಿದೆ. ಆ ದೃಷ್ಟಿಯಿಂದ ಲಿಂಗಾಯತ ಧರ್ಮದ ಬಗೆಗಿನ ಸಮಗ್ರ ಸಾಹಿತ್ಯವನ್ನು ಅಭ್ಯಸಿಸುವ ಕಾಲವೀಗ ಪ್ರಾಪ್ತವಾಗಿದೆ.

□ □

ಅನುಭವ ಮಂಟಪ ಮತ್ತು ವ್ಯಕ್ತಿತ್ವ ವಿಕಾಸ

—ಡಾ. ಬಸವರಾಜ ಸಬರದ

ಅನುಭವ ಮಂಟಪವೆಂದರೆ ನಾಲ್ಕು ಗೋಡೆಗಳ ಕಟ್ಟಡವಲ್ಲ. ಕೇವಲ ಕಲ್ಲು-ಕಂಬಗಳಿಂದ ಇರುವ ಆಲಯವಲ್ಲ. ವಚನಕಾರರು ಸ್ಥಾವರವನ್ನು ವಿರೋಧಿಸುತ್ತಲೇ ಬಂದಿದ್ದಾರೆ. ಹೀಗಾಗಿ ಅನುಭವ ಮಂಟಪ ಸ್ಥಾವರವಲ್ಲ, ಅದು ಜನ ಸಮುದಾಯದ ಮೊದಲ ಚಾಲಕ ಶಕ್ತಿ. ರಾಜಸತ್ತೆಯನ್ನು ಅಡಗಿಸಿದ ಮೊದಲ ಧ್ವನಿ. ಸಾಮಾನ್ಯ ಜನತೆಯ ಅನುಭವಗಳನ್ನು ವಚನಗಳ ಮೂಲಕ ಪ್ರಸಾರ ಮಾಡಿದ ಜನಸಮುದಾಯದ ಪ್ರಥಮ ಮಾಧ್ಯಮ. ಈ ದೇಶದ ಸಂಸ್ಕೃತಿಯ ಸಂಪ್ರದಾಯಗಳನ್ನು ತಿರಸ್ಕರಿಸುತ್ತಲೇ ಅದಕ್ಕೊಂದು ಅರ್ಥಪೂರ್ಣ ಪರಂಪರೆಯನ್ನು ಕಟ್ಟಿಕೊಟ್ಟ ಹೊಸ ಮೌಲ್ಯಗಳ ಸೃಷ್ಟಿಕೇಂದ್ರ. ಶೋಷಿತ ಜನರೆಲ್ಲ ಒಂದೆಡೆ ಕೂಡಿ, ಶತಮಾನಗಳ ಶೋಷಣೆಯ ವಿರುದ್ಧ ಬಂಡೆದ್ದ ಇತಿಹಾಸದ ಮೊದಲ ಪ್ರಯತ್ನ. ಈ ದೇಶದಲ್ಲಿ ರಾಜಶಾಹಿ ವ್ಯವಸ್ಥೆಯನ್ನು ವಿರೋಧಿಸಿ, ವೈದಿಕ ಸಂಸ್ಕೃತಿಯ ಗೋಸಂಬಿತನವನ್ನು ಮೊದಲ ಬಾರಿಗೆ ಬಯಲು ಮಾಡಿದ ಮಹತ್ವದ ವೇದಿಕೆ.

ಅಲ್ಲಿ ಪ್ರಕಟಗೊಂಡ ಅನುಭವ ರಾಜನದಲ್ಲ-ಪಂಡಿತನದಲ್ಲ, ಸಾಮಾನ್ಯರದು ಸಮುದಾಯದವರದು. ಅದು ಸುಖದ ಸುಪ್ಪತ್ತಿಗೆಯ ಅನುಭವವಲ್ಲ, ಬದುಕಿನ ನೋವಿನ ಪರಿಚಯ ಶುಷ್ಕ ಪಾಂಡಿತ್ಯದ ಜಗಳವಲ್ಲವದು, ಬದುಕಿನ ಒಳನೋಟಗಳ ತಿಳುವಳಿಕೆ. ಅಲ್ಲಿ ಅಬ್ಬರ–ಆರ್ಭಟ ಡಾಂಭಿಕತೆಗಳಿರಲಿಲ್ಲ. ಅನುಭವ–ಆಲೋಚನೆ–ಚರ್ಚೆಗಳಿಗೆ ಮುಕ್ತ ಅವಕಾಶವಿತ್ತು, ಆ ಅನುಭವ ಅಹಿಂಸೆಯ ಅನುಭವ, ಮಾನವೀಯತೆಯ ಅನುಭವ, ಜೀವನ ಪ್ರೀತಿಯ ಅನುಭವ, ಸಮಾನತೆಯ ಅನುಭವ, ಅಲ್ಲಿನ ಮಂಟಪ ಕಲ್ಲುಗಳಿಂದ ಕೂಡಿದ ಕಟ್ಟಡವಲ್ಲ; ಒಂದೊಂದು ಮೌಲ್ಯಗಳಿಂದ ಬೆಸೆಯಲ್ಪಟ್ಟ ಮಾನವೀಯತೆಯ ಹಂದರ, ಧರ್ಮವನ್ನೇ ದಯೆಯನ್ನಾಗಿಸಿ, ಕರ್ಮವನ್ನೇ ಕ್ರಿಯೆಯನ್ನಾಗಿಸಿ, ಮಾನವೀಯತೆಯ ಎತ್ತರಗಳನ್ನು ಮುಟ್ಟಲು ಹುಟ್ಟಿಕೊಂಡ ವಿಶಿಷ್ಟ ಕೊಡುಗೆ ಅನುಭವ ಮಂಟಪ.

ಇದು ಅನುಭವ ಮಂಟಪದ ನಿಜವಾದ (Concept) ಆಗಿತ್ತು. ಹೀಗಾಗಿ ಇಂದು ವಚನಕಾರರು ಇರದಿದ್ದರೂ, ಅವರು ಕೂಡುತ್ತಿದ್ದ ಅನುಭವ ಮಂಟಪದ ಕಟ್ಟಡವಿರದಿದ್ದರೂ ವಚನಕಾರರ ಹೋರಾಟ ಮತ್ತು ಅನುಭವ ಮಂಟಪದ ಉದ್ದೇಶ ನಮ್ಮ ಮುಂದೆ ಇವೆ. ಆದ್ದರಿಂದ ವಚನಕಾರರಾಗಲಿ ಅನುಭವ ಮಂಟಪಗಳಾಗಲಿ ಸ್ಥಾವರಗಳಲ್ಲ. ಇಲ್ಲಿ ವ್ಯಕ್ತಿಪೂಜೆ–ಸ್ಥಾವರ ಪೂಜೆ ಸಲ್ಲದು ವಚನಕಾರರ ದಯೆ ಮಾನವೀಯತೆಯ ಮೂರ್ತ

ರೂಪವಾದರೆ; ಅನುಭವ ಮಂಟಪ ಅರಿವು-ಆಲೋಚನೆಗಳ ಅಮೂರ್ತ ರೂಪ ವಚನಕಾರರು ತಮ್ಮ ಸಾಧನೆ ಹೋರಾಟಗಳಿಂದ ಅಮೂರ್ತವಾದದ್ದನ್ನು ಮೂರ್ತಗೊಳಿಸುತ್ತ 'ಸ್ವರ್ಗಲೋಕ ಮರ್ತ್ಯಲೋಕವೆಂಬುದು ಬೇರಿಲ್ಲ ಕಾಣಿರೋ' ಎಂದು ಸ್ಪಷ್ಟಪಡಿಸಿ ಹೋದರು. ಹೀಗಾಗಿ ಅನುಭವ ಮಂಟಪಕ್ಕು, ವಚನಕಾರರಿಗೂ ಅರ್ಥಪೂರ್ಣ ಸಂಬಂಧವಿದೆ. ಅನುಭವ ಮಂಟಪ ಜ್ಞಾನದ ಸಂಕೇತವಾದರೆ; ವಚನಕಾರರು ಕ್ರಿಯೆಯ ಸಂಕೇತ. ವಚನಕಾರರ ಸಾಮೂಹಿಕ ಅರಿವು-ಆಲೋಚನೆಗಳಿಂದ; ಪ್ರಶ್ನೆ-ಉಪಪ್ರಶ್ನೆಗಳಿಂದ; ಚರ್ಚೆ-ತರ್ಕಗಳಿಂದ ಹೊರಹೊರಟ ಜ್ಞಾನದ ಬೆಳಕೇ ಅನುಭವ ಮಂಟಪ. ಎಲ್ಲ ವಚನಕಾರರಿಂದ ಒಂದೊಂದು ಕಿರಣಗಳನ್ನು ತೆಗೆದುಕೊಂಡು ಪ್ರಜ್ವಲ ಬೆಳಕಾಗಿ ಅನುಭವ ಮಂಟಪ ವಿಜೃಂಭಿಸತೊಡಗಿದಾಗ ಆ ಬೆಳಕಿನ ದಾರಿಯಲ್ಲಿ ಸಾಮೂಹಿಕ ನಿರ್ಣಯಗಳನ್ನು ಕ್ರಿಯೆಯಲ್ಲಿ ತಂದು, ಆಚರಣೆಯಲ್ಲಿ ತೊಡಗಿಸಿದವರೂ ಕೂಡ ವಚನಕಾರರೇ ಆಗಿದ್ದಾರೆ. ಹೀಗಾಗಿ ವಚನಕಾರರ ಸಾರ್ವತ್ರಿಕ ಮುಖವಾಗಿ ಅನುಭವ ಮಂಟಪ, ಮತ್ತು ಅನುಭವ ಮಂಟಪದ ಪ್ರತಿಬಿಂಬಗಳಾಗಿ ವಚನಕಾರರು ಕಾಣುತ್ತಾರೆ. ಆದ್ದರಿಂದ ವಚನಕಾರರನ್ನು ಬಿಟ್ಟು ಅನುಭವ ಮಂಟಪವಾಗಲಿ, ಅನುಭವ ಮಂಟಪವನ್ನು ಬಿಟ್ಟು ವಚನಕಾರರಾಗಲಿ ಇಲ್ಲ. ಅವೆರಡೂ ಒಂದು ನಾಣ್ಯದ ಎರಡು ಮುಖಗಳು.

ಇಂದು ಅನುಭವ ಮಂಟಪವೂ ಇಲ್ಲ; ವಚನಕಾರರೂ ಇಲ್ಲ. ಅಂದರೆ ಅವರ ಮೂರ್ತರೂಪ ಇಲ್ಲ. ಆದರೆ ಅನುಭವ ಮಂಟಪದ ಧೋರಣೆ ಮತ್ತು ವಚನಕಾರರ ಆಲೋಚನೆ ಇವೆರಡೂ ವಚನಗಳ ಮೂಲಕ ಅವರು ಹಾಕಿಕೊಟ್ಟ ಆಚರಣೆಗಳ ಮೂಲಕ ಇಂದಿಗೂ ಕಾಣಿಸುತ್ತವೆ. ಅನುಭವ ಮಂಟಪ ಮತ್ತು ವಚನಕಾರರು ಇಂದು ನಮಗೆ ಅಮೂರ್ತರೂಪದಲ್ಲಿ ಕಾಣಿಸುತ್ತಾರೆ. ಅಮೂರ್ತತೆಯನ್ನೇ ಮೂರ್ತ ರೂಪವನ್ನಾಗಿಸಿದ ಅವರ ಅಂತಃಸತ್ವ-ಅವರ ಹೋರಾಟದ ಒಳನೋಟಗಳು ಸ್ಪಷ್ಟವಾದಾಗ ನಮ್ಮೆದುರಿಗೆ ವಚನಕಾರರು ಕಾಣುತ್ತಾರೆ. ಅನುಭವ ಮಂಟಪ ಕೇವಲ ಸ್ಥಾವರವಲ್ಲ; ಅದು ಜ್ಞಾನದ ಪ್ರತೀಕ. ವಚನಕಾರರು ಕೇವಲ ವ್ಯಕ್ತಿಗಳಲ್ಲ; ಅವರು ಮಾನವೀಯತೆಯ ಪ್ರತೀಕ. ನಮ್ಮಲ್ಲಿ ಜ್ಞಾನ-ಮಾನವೀಯತೆ ಇರುವವರೆಗೆ ಅನುಭವ ಮಂಟಪವೂ ಇರುತ್ತದೆ; ವಚನಕಾರರೂ ಇರುತ್ತಾರೆ.

ಹೂತು ಹೋದ ಅನುಭವ ಮಂಟಪದ ಕಲ್ಲುಗಳಿಗಾಗಿ ಬಡಿದಾಡುವುದನ್ನು ಬಿಟ್ಟು ಅನುಭವ ಮಂಟಪ ಹಾಕಿಕೊಟ್ಟ ಮೌಲ್ಯಗಳನ್ನು ಇಂದು ಅಧ್ಯಯನ ಮಾಡಬೇಕಾಗಿದೆ. ವ್ಯಕ್ತಿಪೂಜೆಯನ್ನೇ ವಿರೋಧಿಸಿದ ವಚನಕಾರರ ಮೂರ್ತಿಸ್ಥಾಪನೆ ಮಾಡಿ ಅಂತಹ ಜಗಳಗಳಲ್ಲೇ ಕಾಲ ಕಳೆಯುವುದಕ್ಕಿಂತ ಅವರ ಹೋರಾಟ ಮನೋಭಾವವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಆಗ ಮಾತ್ರ ಈ ದೇಶದಲ್ಲಿಯ ಅನುಭವ ಮಂಟಪದ ಅಸ್ತಿತ್ವಕ್ಕೆ, ವಚನಕಾರರ ಹೋರಾಟಕ್ಕೆ ನಿಜವಾದ ಅರ್ಥ ಬರುತ್ತದೆ. "ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ವಚನಕಾರರ ನುಡಿಯನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದರ ಮೂಲಕ

ಅನುಭವ ಮಂಟಪವನ್ನು ಸ್ಥಾವರವನ್ನಾಗಿ ಮಾಡದೆ, ವಚನಕಾರರನ್ನು ಮೂರ್ತಿಗಳನ್ನಾಗಿ ಮಾಡದೆ ಅವೆರಡನ್ನೂ ನಮ್ಮ ಬದುಕಿನ ಭಾಗವನ್ನಾಗಿ ಮಾಡಿಕೊಂಡಾಗ ನಿಜವಾದ ಚಲನ ಶೀಲತೆ ಹುಟ್ಟುತ್ತದೆ.

ಸುಖ ಸಂತೋಷಗಳನ್ನು ರಾಜ ಮತ್ತು ಆವನ ಪರಿವಾರದವರು ಮಾತ್ರ ಅನುಭವಿಸಿ ದರೆ, ರಾಜ್ಯಕ್ಕೊದಗಿದ ವಿಪತ್ತು ಕಷ್ಟಗಳನ್ನು ಪ್ರಜೆಗಳು ಅನುಭವಿಸಬೇಕಾಗಿದ್ದ ಅಂದಿನ ರಾಜಸತ್ತೆಯಲ್ಲಿ ಪ್ರಜೆಗಳು ಕೇವಲ ಪ್ರಭುವಿನ ದಾಳಗಳಾಗಿದ್ದರು. ಹೀಗಾಗಿ ರಾಜನ ಅನುಭವವೇ ರಾಜಸತ್ತೆಯ ಅಮೃತವಾಣಿಯಾಗಿ, ಪಂಡಿತ ಪೂಜಾರಿಗಳ ಮೂಲಕ ಪ್ರಸಾರವಾಗುತ್ತಿತ್ತು. ಅಂದಿನ ಸಮಾಜ ವ್ಯವಸ್ಥೆಯಲ್ಲಿ ಸಾಮಾನ್ಯನಿಗೆ ಅನುಭವವೇ ಇರಲಿಲ್ಲವೆಂದಲ್ಲ; ಆದರೆ ಆ ಅನುಭವಕ್ಕೆ ಬೆಲೆ ಇರಲಿಲ್ಲ. ರಾಜ ಮತ್ತು ಪುರೋಹಿತ ಶಾಹಿಗಳ ಅನುಭವ ಕಾಯ್ದೆ ಕಾನೂನುಗಳ ಮುಖ ಹೊತ್ತು ಬಂದಾಗ ಸಾಮಾನ್ಯ ಜನತೆ ತತ್ತರಿಸಿ ಹೋದ ಪ್ರಸಂಗಗಳು ಇತಿಹಾಸದಲ್ಲಿ ಹೇರಳವಾಗಿ ಸಿಗುತ್ತವೆ.

ಜನಸಾಮಾನ್ಯರಿಗೂ ತಮ್ಮದೇ ಆದ ಅನುಭವಗಳಿರುತ್ತವೆ. ಆ ಅನುಭವಗಳನ್ನು ಕ್ರೋಢೀಕರಿಸುವುದರ ಮೂಲಕ, ಅಂತಹ ಅನುಭವಗಳನ್ನು ಚರ್ಚೆಯಲ್ಲಿ ಸೋಸಿ ತೆಗೆಯು ವುದರ ಮೂಲಕ ವಚನಕಾರರು ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಸಾಮಾನ್ಯ ಜನತೆಯ ಅನುಭವಗಳಿಗೆ ಪ್ರಾಶಸ್ತ್ಯ ನೀಡಿದರು. ಹೀಗೆ ವ್ಯವಸ್ಥಿತವಾಗಿ ಕ್ರೋಢೀಕರಿಸ ಲ್ಪಟ್ಟ ಅನುಭವಗಳು ಕೇವಲ ಚರ್ಚೆಯ ವಿಷಯವಾಗಿ ಅಷ್ಟೇ ಉಳಿಯದೇ ಅವು ಸಿದ್ಧಾಂತ ಗಳಾಗಿ ಬೆಳೆದು ನಿಂತವು. ಇದು ವಚನಕಾರರ ಸಾಮೂಹಿಕ ಹೋರಾಟದ ನಿಜವಾದ ಸಾಧನೆ. ಹೀಗೆ ತಯ್ಯಾರಾದ ಸೈದ್ಧಾಂತಿಕ ಮೌಲ್ಯಗಳ ಸಮೂಹವೇ ವಚನ ಸಾಹಿತ್ಯ ಇಂದು ನಾವು ಅನುಭವಿಸುವ ಪ್ರಜಾಸತ್ತಾತ್ಮಕ ಅನುಕೂಲತೆಗಳನ್ನು ವಚನಕಾರರು ಈಗ ಎಂಟನೂರು ವರ್ಷಗಳ ಹಿಂದೆಯೇ ಅನುಭವ ಮಂಟಪದ ಮೂಲಕ ಕಂಡುಕೊಳ್ಳಲು ಪ್ರಯತ್ನಿಸಿದ್ದು. ಅವರ ಸಮಾಜವಾದಿ ನಿಲುವನ್ನು ಸ್ಪಷ್ಟಪಡಿಸುತ್ತದೆ. ಸಮುದಾಯದ ಸಾಮಾನ್ಯನ ಅನುಭವ ಅದು ಅವನದೇ ಅನುಭವವಾಗಿದ್ದು, ಆ ಅನುಭವ, ಅನುಭವ ಮಂಟಪದ ಮೂಲಕ ಸಿದ್ಧಾಂತವಾಗಿ ಬೆಳೆದು ನಿಂತದ್ದು ಚರಿತ್ರೆಯಲ್ಲಿ ಸಾಮಾನ್ಯನಿಗೆ ದೊರೆತ ಮನ್ನಣೆಯಾಗಿದೆ.

ಮನುಷ್ಯತ್ವದ ಬೆಳವಣಿಗೆಯಿಂದ ಮನುಷ್ಯನಿಗೆ ಬೆಲೆ ಬರುವಂತೆ, ವ್ಯಕ್ತಿತ್ವದ ಬೆಳವಣಿಗೆಯಿಂದ ವ್ಯಕ್ತಿ ಪದಕ್ಕೆ ಮಹತ್ವ ಬರುತ್ತದೆ. ಬದುಕು ಎಂಬುದು ಬೇರೆಯಲ್ಲ. ಬದುಕಿಗೂ ವ್ಯಕ್ತಿಗೂ ಬೇರ್ಪಡದ ಸಂಬಂಧವಿದೆ. ಬದುಕಿನ ವ್ಯಾಖ್ಯೆಯನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ, ವ್ಯಕ್ತಿತ್ವ ವಿಕಾಸವೇ ನಿಜವಾದ ಬದುಕು ಎಂಬುದು ಹೆಚ್ಚು ಸಮಂಜಸವಾಗುತ್ತದೆ. ವ್ಯಕ್ತಿತ್ವವಿಲ್ಲದ ವ್ಯಕ್ತಿಗೆ ಬದುಕೆಂಬುದೇ ಇಲ್ಲ. ಹೀಗೆ ಬದುಕಿನ ಅಡಿಪಾಯದ ವ್ಯಕ್ತಿತ್ವಕ್ಕೆ ಎಲ್ಲ ಕಾಲದಲ್ಲಿಯೂ, ಎಲ್ಲ ಸಂದರ್ಭಗಳಲ್ಲಿಯೂ ಬೆಲೆ ಬಂದಿದೆ ಹಾಗೆ ನೋಡಿದರೆ ವ್ಯಕ್ತಿತ್ವ–ಮನುಷ್ಯತ್ವ ಬದುಕಿನ ಪ್ರಮುಖ ಮೌಲ್ಯಗಳಾಗುತ್ತವೆ.

ಜಗತ್ತಿನಲ್ಲಿ ಮನುಷ್ಯ ಹುಟ್ಟಿದಾಗಿನಿಂದಲೇ ಮನುಷ್ಯರಿದ್ದಾರೆ. ಆದರೆ ಅವರೆಲ್ಲರೂ ಮನುಷ್ಯತ್ವ ಉಳ್ಳವರಾಗಿದ್ದಾರೆಂಬುದನ್ನು ಹೇಳಲಿಕ್ಕಾಗುವುದಿಲ್ಲ. ಹಾಗೆಯೇ ಕಾಲ ಚಕ್ರದಲ್ಲಿ ಅನೇಕ ವ್ಯಕ್ತಿಗಳು ಬಂದು ಹೋಗಿದ್ದಾರೆ. ಅವರೆಲ್ಲರೂ ಸ್ವತಂತ್ರ ವ್ಯಕ್ತಿತ್ವ ವನ್ನು ಪಡೆದಿದ್ದಾರೆಂಬುದನ್ನು ಹೇಳಲಾಗದು. ಈ ದೇಶದ ರಾಜಮಹಾನ ಸಂಸ್ಕೃತಿ ಇಲ್ಲಿನ ಅನೇಕ ವ್ಯಕ್ತಿಗಳಿಗೆ ನಿಜವಾದ ವ್ಯಕ್ತಿತ್ವವನ್ನೇ ಪರಿಚಯಿಸದಂತೆ ಮಾಡಿದೆ. ಹೀಗಾಗಿ ಈ ದೇಶದಲ್ಲಿ ವ್ಯಕ್ತಿಗಳ ಸಂಖ್ಯೆ ಸಹಸ್ರಾರು; ಆದರೆ ವ್ಯಕ್ತಿತ್ವ ಪಡೆದವರ ಸಂಖ್ಯೆ ತೀರಾ ವಿರಳ.

ವ್ಯಕ್ತಿಯ ಅಸ್ತಿತ್ವವನ್ನು ಹೇಳುವ ವ್ಯಕ್ತಿತ್ವಕ್ಕೆ ಬೆಲೆ ಬಂದದ್ದು ವಚನಕಾರರ ಸಂದರ್ಭದಲ್ಲಿ ವ್ಯಕ್ತಿತ್ವವನ್ನು ವಚನಕಾರರು ಒಂದು ಮೌಲ್ಯವನ್ನಾಗಿ ಸ್ವೀಕರಿಸಿದರು. ಅಂತೆಯೇ ಆ ಸಂದರ್ಭದಲ್ಲಿ ವ್ಯಕ್ತಿಗಳ ಆತ್ಮಗೌರವ ಮಾನವೀಯತೆ ಬೆಳೆದು ನಿಂತವು. ವ್ಯಕ್ತಿತ್ವ ಪದದ ಹೊರ ಮೈಯಲ್ಲಿಯೇ ಅದರ ಒಳ ಅರ್ಥ ಅಡಗಿದೆ. ವ್ಯಕ್ತಿಯ ಅಸ್ತಿತ್ವವೇ ವ್ಯಕ್ತಿತ್ವ. ಈ ಅಸ್ತಿತ್ವ ಮಾನವೀಯತೆಯ ರೂಪ ಕೊಟ್ಟುಕೊಂಡಾಗ ಅದು ಮನುಷ್ಯತ್ವವಾಗುತ್ತದೆ. ವಚನಕಾರರು ವ್ಯಕ್ತಿತ್ವವನ್ನು ಸ್ಥಾಪಿಸುವುದರ ಮೂಲಕ ಮಾನವೀಯತೆಯನ್ನು ಬೆಳೆಸಿದರು. ಹೀಗಾಗಿ ವ್ಯಕ್ತಿತ್ವ ಪದದ ನಿಜವಾದ ವಿಜೃಂಭಣೆ ಪ್ರಾರಂಭವಾದದ್ದು, ಕರ್ನಾಟಕದಲ್ಲಿ ಹನ್ನೆರಡನೇ ಶತಮಾನದ ವಚನಕಾರರಿಂದ.

ಈ ವ್ಯಕ್ತಿತ್ವ ವಿಕಸನಕ್ಕೆ ಮೂಲಸಾಧನವೆಂದರೆ ಅನುಭವ ಮಂಟಪ. ಇಂತಹ ಮುಕ್ತವೇದಿಕೆಯೊಂದು ಅದುವರೆಗೆ ಜಗತ್ತಿನಲ್ಲಿಯೇ ಅಸ್ತಿತ್ವಕ್ಕೆ ಬಂದಿರಲಿಲ್ಲ. ಅಂತಹ ಅನುಭವ ಮಂಟಪವನ್ನು ಪ್ರಾರಂಭಿಸುವುದರ ಮೂಲಕ ವ್ಯಕ್ತಿಯ ವ್ಯಕ್ತಿತ್ವ ವಿಕಾಸದ ಕಡೆ ಗಮನಹರಿಸಿದ ಪ್ರವರ್ತಕರು ವಚನಕಾರರು ಬಸವಣ್ಣ, ಚನ್ನಬಸವಣ್ಣ, ಅಲ್ಲಮ ಪ್ರಭು, ಅಕ್ಕಮಹಾದೇವಿ ಸಿದ್ಧರಾಮ ಈ ಮುಂತಾದ ವಚನಕಾರರ ವ್ಯಕ್ತಿತ್ವ ಅನುಭವ ಮಂಟಪದ ಮೂಲಕ ಸ್ಫುಟಗೊಂಡು, ಬದುಕಿನ ಹೊಸ ದಿಕ್ಕುಗಳನ್ನು ಹುಡುಕುವಲ್ಲಿ, ಸಮಾನತೆಯ ಸಮಾಜವನ್ನು ಕಟ್ಟುವಲ್ಲಿ ಯಶಸ್ವಿಯಾಯಿತು. ಪ್ರತಿಯೊಬ್ಬ ವ್ಯಕ್ತಿಗೂ ವ್ಯಕ್ತಿತ್ವವಿದೆಯೆಂಬ ಸತ್ಯ ಸಂಗತಿ ಸಾಮೂಹಿಕವಾಗಿ ಮೊದಲ ಬಾರಿಗೆ ಮನವರಿಕೆ ಯಾದದ್ದು ಅನುಭವ ಮಂಟಪದಂತಹ ಅರ್ಥಪೂರ್ಣ ವೇದಿಕೆಯಿಂದ ಎಂಬ ವಿಷಯ ವನ್ನು ಮರೆಯುವಂತಿಲ್ಲ.

ವ್ಯಕ್ತಿತ್ವವೆಂದರೇನೆಂಬುದನ್ನು ಅರಿಯದ ಸಹಸ್ರಾರು ಸಾಮಾನ್ಯರು ವ್ಯಕ್ತಿತ್ವ ಪಡೆದದ್ದು ಆ ವ್ಯಕ್ತಿತ್ವದ ಬೆಳಕಿನಲ್ಲಿ ಬದುಕನ್ನು ಬೆಳಗಿಸಿದ್ದು ಇಂದಿಗೂ ಪ್ರಸ್ತುತವಾಗು ತ್ತದೆ. ರಾಜನ ಹೆಸರಿಗೆ ಜೈಕಾರಹಾಕಿ ಅವನ ವ್ಯಕ್ತಿತ್ವವನ್ನೇ ಸ್ತುತಿಮಾಡುವ ಪರಂಪರೆ ಯುಳ್ಳ ಈ ದೇಶದಲ್ಲಿ ವಚನಕಾರರು ಹೊಸ ಪರಂಪರೆಯನ್ನು ಪ್ರಾರಂಭಿಸಿ ವ್ಯಕ್ತಿಯ ವ್ಯಕ್ತಿತ್ವ ವಿಕಾಸವಾಗುವಂತೆ ನೋಡಿಕೊಂಡರು. ರಾಜ ಮಹಾರಾಜರ ಗುಣಗಾನದಲ್ಲೇ ತಮ್ಮನ್ನು ಕಳೆದುಕೊಂಡ ಜನತೆ ವಚನಕಾರರ ಈ ಚಳುವಳಿಯಿಂದ ತಮ್ಮಲ್ಲೇ ತಮ್ಮನ್ನು

ಹುಡುಕಿ ಕೊಳ್ಳಲು ಪ್ರಯತ್ನಿಸಿದರು. ವೈದಿಕ ಸಂಸ್ಕೃತಿಯ ಕಪಿಮುಷ್ಟಿಯಲ್ಲಿ ಕರಗಿ ಹೋಗಿದ್ದ ಈ ಜನ, ವಚನಕಾರರ ಸಮ-ಸಂಸ್ಕೃತಿಯ ಬೆಳಕಿನಲ್ಲಿ ತಮಗೂ ವ್ಯಕ್ತಿತ್ವವಿದೆ ಯೆಂಬುದನ್ನು ಸಮರ್ಥಿಸಿಕೊಂಡರು.

ಮನುಷ್ಯರಾಗಿಯೂ ಕುರಿಗಳಂತೆ ಬಾಳುತ್ತಿದ್ದ ಈ ದೇಶದ ಜನತೆಯಲ್ಲಿ 'ಮೊದಲ ಬಾರಿಗೆ ಜಾಗೃತಿಯನ್ನುಂಟು ಮಾಡಿದ ವೇದಿಕೆಯೆಂದರೆ ಅನುಭವ ಮಂಟಪ, ಈ ಅನುಭವ ಮಂಟಪದ ಅಸ್ತಿತ್ವದ ಮೂಲಕ ಸಾಮಾನ್ಯ ಜನತೆಯ ವ್ಯಕ್ತಿತ್ವ, ವಿಕಾಸವಾಗತೊಡಗಿತು. ಕುರಿ-ಕೋಳಿಗಳಂತೆ, ಪಶು-ಪ್ರಾಣಿಗಳಂತೆ ಗುಲಾಮಗಿರಿಯಲ್ಲಿ ರಾಜಸತ್ತೆಯ ಪಡಿ ನೆರಳಲ್ಲಿ ಬದುಕಿದ ಜನ, ತಮ್ಮ ವ್ಯಕ್ತಿತ್ವ ದೊರೆತ ನಂತರ ಝಳಪಿಸುವ ಖಡ್ಗಗಳಾದರು. ಇದು ವಚನ ಚಳುವಳಿಯ ದೊಡ್ಡ ಕೊಡುಗೆ.

ಅನುಭವ ಮಂಟಪದಂತಹ ಮುಕ್ತ ಹಾಗೂ ಸಮಾನತೆಯ ವೇದಿಕೆಯ ಮುಖಾಂತರ ವಚನಕಾರರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ತಮ್ಮ ವ್ಯಕ್ತಿತ್ವದ ವಿಕಸನದ ಜತೆಗೆ, ಅನೇಕ ಹೊಸ ಮೌಲ್ಯಗಳನ್ನು ಆ ವೇದಿಕೆಯಲ್ಲಿ ಹುಟ್ಟುಹಾಕುವುದರ ಮೂಲಕ ಸಮಾಜದ ಸಹಸ್ರಾರು ಸಾಮಾನ್ಯ ಜನತೆಯ ವ್ಯಕ್ತಿತ್ವದ ಬೆಳವಣಿಗೆಗೆ ಕಾರಣರಾದರು. ಇವತ್ತಿನ ಬದುಕಿಗೂ ಇಂತಹ ಅನುಭವ ಮಂಟಪದ ಬೆಳಕು, ವಚನಕಾರರ ಹೋರಾಟ ಪ್ರಸ್ತುತವಾಗುತ್ತವೆ. ಅವರು ಹಾಕಿಕೊಟ್ಟ ಅನೇಕ ಹೊಸದಾರಿಗಳ ಮೂಲಕ, ಅವರು ಬಿಟ್ಟು ಹೋದ ಅರ್ಥಪೂರ್ಣ ವ್ಯಕ್ತಿತ್ವವನ್ನು ಬೆಳೆಯಿಸಿಕೊಳ್ಳಬಹುದಾಗಿದೆ.

ಜನಸಮುದಾಯದ ಹಿತವನ್ನು ಬಯಸುವ ನಡೆ-ನುಡಿ ಒಂದಾದಾಗ ಮಾತ್ರ ವ್ಯಕ್ತಿಯ ನಿಜವಾದ ವ್ಯಕ್ತಿತ್ವ ರೂಪ ಪಡೆಯುತ್ತದೆ. ಕೇವಲ ಬಾಹ್ಯ ರೂಪದಲ್ಲಿ ಕಾಣುವ ವೇಷ-ಭೂಷಣ (ದೈಹಿಕ ವ್ಯಕ್ತಿತ್ವ) ದೇಹ ದಾರ್ಢ್ಯತೆ, ಬಾಹ್ಯ ಸೌಂದರ್ಯಗಳ ಮೇಲೆ ವ್ಯಕ್ತಿಯ ವ್ಯಕ್ತಿತ್ವವನ್ನು ಅಳಿಯಲಿಕ್ಕಾಗುವುದಿಲ್ಲ. ನಿಜವಾದ ವ್ಯಕ್ತಿತ್ವ ಎಲೆಯ ಮರೆಯ ಹೂವಿನಂತೆ ಕಂಪನ್ನು ನೀಡುತ್ತದೆ. ತನ್ನೆಲ್ಲ ಸಾಧನೆ-ಸಿದ್ಧಿ-ಸಂಯಮಗಳ ಮೂಲಕ ಮೌನವಾಗಿದ್ದುಕೊಂಡೇ ಮುಕ್ತ ವಾತಾವರಣವನ್ನು ಸೃಷ್ಟಿಸುತ್ತದೆ. ಆತ್ಮ ಗೌರವವನ್ನು ಬೆಳೆಸುತ್ತದೆ. ಅಲ್ಲಿ ಕೂಗು-ಕೇಕೆಗಳಿರುವುದಿಲ್ಲ. ಡಾಂಭಿಕತೆ-ಸಪ್ಪಳಗಳಿರು ವುದಿಲ್ಲ. ಹನಿಸುವ ಮೋಡದಂತೆ, ಹೂ ಮುಡಿದು ನಗುವ ಗಿಡದಂತೆ ಮೌನವಾಗಿದ್ದು ಕೊಂಡೇ ಸಮಾಜದ ಬದುಕು ಹಸಿರಾಗಿರುವಂತೆ ನೋಡಿಕೊಳ್ಳುತ್ತದೆ. ಇಂತಹ ವ್ಯಕ್ತಿತ್ವಕ್ಕೆ ಪವಿತ್ರತೆ ಇರುತ್ತದೆ. ಅಲ್ಲಿ ಸಣ್ಣತನ ಸ್ವಾರ್ಥಗಳಿಗೆ ಸ್ಥಳವೇ ಇರುವುದಿಲ್ಲ. ನಿಜವಾದ ವ್ಯಕ್ತಿತ್ವ ಪ್ರೀತಿ ತ್ಯಾಗಗಳ ನಡುವೆ ಸ್ನೇಹ ಸೇತುವೆಯಾಗಿರುತ್ತದೆ.

ಹನ್ನೆರಡನೆಯ ಶತಮಾನದ ಪ್ರತಿಯೊಬ್ಬ ವಚನಕಾರರು ಒಂದೊಂದು ಬಗೆಯ ವಿಶಿಷ್ಟ ವ್ಯಕ್ತಿತ್ವ ಪಡೆದಿದ್ದಾರೆ. ಇವರ ವ್ಯಕ್ತಿತ್ವದ ಒಳನೋಟಗಳನ್ನು ಅರ್ಥೈಸಿಕೊಳ್ಳ

ವುದರ ಮೂಲಕ ಇಂದಿನ ಜನಸಮುದಾಯ ತಮ್ಮ ವ್ಯಕ್ತಿತ್ವವನ್ನು ವಿಕಾಸಗೊಳಿಸಿಕೊಳ್ಳ ಬಹುದಾಗಿದೆ.

ಬಸವಣ್ಣ-ಭಕ್ತಿಗೆ, ಚೆನ್ನಬಸವಣ್ಣ-ಜ್ಞಾನಕ್ಕೆ, ಸಿದ್ಧರಾಮ-ಯೋಗಕ್ಕೆ ಅಕ್ಕ ಮಹಾದೇವಿ-ವೈರಾಗ್ಯಕ್ಕೆ, ಅಲ್ಲಮಪ್ರಭು-ಜಂಗಮತ್ವಕ್ಕೆ ಹೆಸರಾಗಿರುವಂತೆ ಅನೇಕ ಮಾನವೀಯ ಮೌಲ್ಯಗಳನ್ನು ಹುಟ್ಟುಹಾಕುವಲ್ಲಿಯೂ ಇವರು ಪ್ರಮುಖರಾಗಿದ್ದಾರೆ. ದುಡಿಯುವ ವರ್ಗದಿಂದ ಬಂದ ಅಂಬಿಗರ ಚೌಡಯ್ಯ, ನುಲಿಯ ಚಂದಯ್ಯ, ಮಡಿ ವಾಳಯ್ಯ ಘಟ್ಟಿವಾಳಯ್ಯ, ಉರಿಲಿಂಗಪೆದ್ದಿ, ಕಾಳವ್ವೆ, ಗೊಗ್ಗವ್ವೆ, ಸೂಳೆಸಂಕವ್ವೆ ಈ ಮುಂತಾದ ವಚನಕಾರರು ಅನುಭವ ಮಂಟಪದ ಪ್ರಣಾಳಿಕೆಯನ್ನು ಪ್ರಶ್ನಿಸುವುದರ ಮೂಲಕ, ಚರ್ಚಿಸುವುದರ ಮೂಲಕ ಪ್ರಾರಂಭದಲ್ಲಿ ತಾವು ಹಾಕಿಕೊಂಡ ಗೆರೆಗಳನ್ನು ತಾವೇ ದಾಟುತ್ತಾರೆ. ಹೀಗಾಗಿ ವಚನಕಾರರ ವ್ಯಕ್ತಿತ್ವ ಒಂದರ್ಥದಲ್ಲಿ ಸಾಮಾಜಿಕವಾಗುತ್ತಾ, ಜನಸಮೂಹದ ಮೂಲಕ ಅದು ಗುರುತಿಸಲ್ಪಡುತ್ತದೆ. ವ್ಯಕ್ತಿ, ಜನಸಮುದಾಯದ ಮೂಲಕ ತನ್ನ ವ್ಯಕ್ತಿತ್ವವನ್ನು ಗುರುತಿಸಿಕೊಳ್ಳುವುದು ಆ ಸಮಾಜದ ಸಮಾನತೆಯ ಕುರು ಹಾಗಿದೆ. ಇಂತಹ ಅನೇಕ ಅರ್ಥಪೂರ್ಣ ಸಂಗತಿಗಳನ್ನು, ವಿಶಿಷ್ಟ ಸಾಧನೆಗಳನ್ನು ವಚನ ಕಾರರ ಚಳುವಳಿಯ ಹಿನ್ನೆಲೆಯಲ್ಲಿ ಗುರುತಿಸಬಹುದಾಗಿದೆ.

ಕನ್ನಡದ ನೆಲದಲ್ಲಿ ಜನಸಮುದಾಯಕ್ಕೆ ಮೊದಲ ಬಾರಿಗೆ ಸಹಜವಾದ ವ್ಯಕ್ತಿತ್ವದ ಪರಿಚಯ ಮಾಡಿಕೊಟ್ಟವರೆಂದರೆ ವಚನಕಾರರು. ರಾಜಸತ್ತೆಯ ಕಪಿಮುಷ್ಟಿಯಲ್ಲಿ ಜನ ಸಮುದಾಯದ ವ್ಯಕ್ತಿತ್ವವೆಲ್ಲಾ ಕುಸಿದುಹೋಗಿ ರಾಜಮಹಾರಾಜರ ವ್ಯಕ್ತಿತ್ವವೇ ರಾಜ್ಯದ ತುಂಬಾ ವಿಜೃಂಭಿಸುತ್ತಿರುವಾಗ ವಚನಕಾರರು ಸಾಮಾನ್ಯ ಜನತೆಯಲ್ಲಿ ಅರಿವು, ಆಲೋಚನೆ ಗಳನ್ನು ಹುಟ್ಟು ಹಾಕುವುದರ ಮೂಲಕ ಹೊಸ ವ್ಯಕ್ತಿತ್ವವನ್ನು ಕಟ್ಟಿಕೊಟ್ಟರು.

'ಎನಗಿಂತ ಕಿರಿಯರಿಲ್ಲ' ಎನ್ನುತ್ತಲೇ ಬಸವಣ್ಣ ವಚನ ಚಳುವಳಿಯ ನಾಯಕ ನಾಗುತ್ತ ವಿಶಿಷ್ಟ ವ್ಯಕ್ತಿತ್ವವನ್ನು ಪಡೆದುಕೊಂಡ. ಸಂಘಟನೆ ಶಿಸ್ತು-ಸಂಯಮ ಹೃದಯ ವೈಶಾಲ್ಯತೆ ಈ ಭಕ್ತಿಭಂಡಾರಿಯ ಪ್ರಮುಖ ಲಕ್ಷಣಗಳಾಗಿದ್ದವು. ಒಂದು ಕಡೆ ಪ್ರಭು-ಚೆನ್ನಬಸವಣ್ಣನಂತಹವರು. ಮತ್ತೊಂದು ಕಡೆ ಚೌಡಯ್ಯ-ಕಾಳವ್ವೆಯಂತವರು ಇವೆರಡೂ ಗುಂಪುಗಳನ್ನು ಬೆಸೆಯುವ ಸಂವಹನ ಕ್ರಿಯೆಯೊಂದಿಗ ಬಸವಣ್ಣ ಸ್ನೇಹಸೇತುವೆಯಾದ. 'ಮಸಿಯನೇಸುಕಾಲ ಬೆಳಗಿದರೆ ಬಿಳಿದಾಗಬಲ್ಲುದಯ್ಯ' ಎಂದು ಪ್ರಭುದೇವರೆದುರು ಚಿನ್ನ ವಿಸುತ್ತ, ತನ್ನ ಭಕ್ತಿ ವಿನಯಗಳನ್ನು ಪ್ರಕಟಿಸುತ್ತ ಇತ್ತ ಅಪ್ಪನು ನಮ್ಮ ಮಾದಾರ ಚೆನ್ನಯ್ಯ ಬೊಪ್ಪನು ನಮ್ಮ ಡೋಹರ ಕಕ್ಕಯ್ಯ ಎಂದು ವಿವರಿಸಿ ಶೂದ್ರವರ್ಗದ ವಚನ ಕಾರರಿಗೆ ಪ್ರಿಯನಾಗುತ್ತಾನೆ. ಬೇರೆ ಬೇರೆ ಭಾಗದ, ವಿಭಿನ್ನ ಜಾತಿಯ, ಭಿನ್ನ ವಯಸ್ಸಿನ, ವಿಭಿನ್ನ ವಿಚಾರದ ಎಲ್ಲ ವರ್ಗದ ವಚನಕಾರರನ್ನು ಒಂದೆಡೆ ಕೂಡಿಸಿ ಸಂಘಟಿಸಿ ಅನುಭವ ಮಂಟಪದಂತಹ ಮುಕ್ತವೇದಿಕೆಯ ಮುಖಾಂತರ ಅವರನ್ನು ಬೆಳೆಸಿದ್ದು, ಅವರೊಂದಿಗೆ ತಾನು ಬೆಳೆದು ನಿಂತಿದ್ದು ಬಸವಣ್ಣನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿಂತಿವೆ. ಅನುಭವ ಮಂಟಪದ ಅಧ್ಯಕ್ಷ

ನಾಗಿದ್ದ ಅಲ್ಲಮಪ್ರಭುವಿನಂತಹವರಿಗೆ ಪೂಜ್ಯತೆಯ ಭಾವ ವ್ಯಕ್ತಪಡಿಸುತ್ತಲೇ ಬಸವಣ್ಣ ಸಾಮಾನ್ಯ ಜನತೆಯಲ್ಲಿ ಪ್ರಜ್ಞೆಯನ್ನು ಬೆಳೆಸಿದ. ಬಿಜ್ಜಳನಂತಹ ಅರಸರಿಗೆ ಶರಣಾಗತನಾಗದೆ ಸ್ವಾಭಿಮಾನಿಯಾಗಿ ಕಂಡ. ವೈದಿಕ ಸಂಸ್ಕೃತಿಗೆ, ರಾಜಸತ್ತೆಯ ಆಡಳಿತಕ್ಕೆ ವಿಧೇಯನಾಗದೆ ಸಾಮಾನ್ಯ ಜನತೆಯ ಎದುರು ವಿನಯವಂತನಾಗಿ ಕಂಡ. ಅಂತೆಯೇ ಬಸವಣ್ಣ ರಾಜಸತ್ತೆಯ ಸಂದಿಗ್ಧ ಸ್ಥಿತಿಯಲ್ಲಿಯೂ ಜನಸಮುದಾಯದ ನಾಯಕನಾದ.

ಸರಳ ನಡೆನುಡಿಗಳಿಂದ, ಶಿಸ್ತಿನ ಸಂಘಟನೆಯಿಂದ ಎತ್ತರದ ಆಲೋಚನೆಗಳಿಂದ ಸ್ಪಷ್ಟನಿಲುವುಗಳಿಂದ, ಸಂಯಮದ ನಿರ್ಣಯಗಳಿಂದ, ನಿಸ್ವಾರ್ಥ ತ್ಯಾಗಗಳ ಸಂಬಂಧದಿಂದ ಬಸವಣ್ಣ ವಚನಕಾರರಲ್ಲೇ ವಿಶಿಷ್ಟ ವ್ಯಕ್ತಿತ್ವ ಪಡೆದ ಮಹಾವ್ಯಕ್ತಿಯಾದ. ತನ್ನ ಸಾಧನೆ–ಸಿದ್ಧಾಂತ–ಸಿದ್ಧಿಗಳ ಮುಖಾಂತರ ಮಾನವೀಯತೆಗೆ ಮತ್ತೊಂದು ಹೆಸರಾದ.

ಹೀಗೆ ವಚನಕಾರರಲ್ಲಿ ಅನೇಕರು ವಿಶಾಲವಾದ ವ್ಯಕ್ತಿತ್ವ ಹೊಂದಿದವರಾಗಿದ್ದಾರೆ. ಚನ್ನಬಸವಣ್ಣ ಜ್ಞಾನದ ಮೂಲಕ ತನ್ನ ವ್ಯಕ್ತಿತ್ವ ರೂಪಿಸಿಕೊಳ್ಳುತ್ತಾನೆ. ಅಲ್ಲಮ ಪ್ರಭು ಈ ಜ್ಞಾನ–ಕ್ರಿಯೆಗಳನ್ನು ಒಂದೆಡೆ ಬೆಸೆಯುತ್ತಾ ಆ ಮೂಲಕ ಹೊರಡುವ ಅನುಭಾವ ತತ್ತ್ವವನ್ನು ಪ್ರತಿಪಾದಿಸುತ್ತಾ ಅನುಭವ ಮಂಟಪದಲ್ಲಿ ಹೊಸ ಧೋರಣೆಗಳನ್ನು ರೂಪಿಸುವದರ ಮೂಲಕ ಜನ ಸಮುದಾಯಕ್ಕೆ ಬದುಕಿನ ಹೊಸ ದಿಕ್ಕುಗಳನ್ನು ಪರಿಚಯಿಸುತ್ತಾನೆ. ವಚನಕಾರರು ಕೈಗೊಂಡ ಕಾಯಕಗಳಲ್ಲಿ ಅವರ ವ್ಯಕ್ತಿತ್ವ ಬೆಳೆದು ನಿಂತು, ಅದು ಅವರ ನಡೆ–ನುಡಿಗಳಲ್ಲಿ ಝಳಪಿಸಿದೆ.

ವಚನಕಾರರು ಮೊದಲು ಹಾಕಿಕೊಂಡ ಗೆರೆಗಳನ್ನು ದಾಟುವುದರ ಮೂಲಕ ಅಂಬಿಗರ ಚೌಡಯ್ಯನಂತವರು ಇನ್ನೂ ವಿಶಿಷ್ಟವಾಗಿ ಕಾಣುತ್ತಾರೆ. ಎಲ್ಲ ವಚನಕಾರರು 'ಶರಣಸತಿ ಲಿಂಗಪತಿ' ಎಂದು ಹೇಳಿದರೆ ಈತ "ಶರಣ ಹೆಣ್ಣಾದ ಪರಿ ಎಂತು? ಲಿಂಗ ಗಂಡಾದ ಪರಿ ಹೇಗೆ?" ಎಂದು ಪ್ರಶ್ನಿಸುತ್ತಾನೆ. ಅನುಭವ ಮಂಟಪದಲ್ಲಿ ಪ್ರಶ್ನೆ ಸಂಸ್ಕೃತಿಯನ್ನು ಹುಟ್ಟು ಹಾಕಿದ ಅಂಬಿಗರ ಚೌಡಯ್ಯ ನಿಜಕ್ಕೂ ಮಹತ್ವದ ವಚನಕಾರನಾಗುತ್ತಾನೆ. ಪ್ರತಿಯೊಬ್ಬ ವಚನಕಾರರು ತಮ್ಮ ಇಷ್ಟ ದೈವಗಳನ್ನು ತಮ್ಮ ಕಾವ್ಯನಾಮವನ್ನಾಗಿಸಿಕೊಂಡರೆ ಅಂಬಿಗರ ಚೌಡಯ್ಯ ತನ್ನ ಹೆಸರನ್ನೇ ತನ್ನ ಕಾವ್ಯನಾಮವಾಗಿಸಿಕೊಂಡು, ಮನುಷ್ಯತ್ವದ ಸಾಧ್ಯತೆಗಳ ಸಂಕೇತವಾಗಿ ಕಾಣುತ್ತಾನೆ.

ಈ ದೇಶದ ಸಮಾಜ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಸಮಾನತೆಯನ್ನು ಕೊಟ್ಟು ಅವರ ವ್ಯಕ್ತಿತ್ವವನ್ನು ಗೌರವಿಸಿದ್ದು ಬಹಳ ಕಡಿಮೆ. ವಚನಕಾರರ ಸಂದರ್ಭದಲ್ಲಿ ಮಹಿಳೆಯರಿಗೆ ಸಮಾನತೆಯ ಬದುಕು ಸಿಕ್ಕಿತು, ಹೊಸ ವ್ಯಕ್ತಿತ್ವ ರೂಪ ಪಡೆಯಿತು. ಸನಾತನ ಕಾಲದಿಂದ ಧಾರ್ಮಿಕ–ಸಾಮಾಜಿಕ ಕ್ಷೇತ್ರದಿಂದ ವಂಚಿತರಾಗಿದ್ದ ಮಹಿಳೆಯರು, ವಚನಕಾರರ ಚಳುವಳಿಯಲ್ಲಿ ತೊಡಗಿ ಬದುಕಿನ ಎಲ್ಲ ಕ್ಷೇತ್ರಗಳಿಗೂ ಹೊಸ ದಿಕ್ಕು ಸೂಚಿಸಿದರು.

'ಧರ್ಮ'ದ ಪುರೋಹಿತನಾದ ಪುರುಷ ಮಹಿಳೆಯನ್ನು ಧಾರ್ಮಿಕ ಕ್ಷೇತ್ರದಿಂದ ದೂರವಿಟ್ಟಿದ್ದ. ವಚನಕಾರರು ಅಂತಹ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಪ್ರಧಾನ ಸ್ಥಾನ ಕೊಡುವುದರ ಮೂಲಕ ಸನಾತನರ ಕಪಿಮುಷ್ಟಿಯನ್ನು ಸಡಿಲುಗೊಳಿಸಿದರು. ಅಕ್ಕ ಮಹಾದೇವಿ ಒಬ್ಬ ಶರಣೆಯಾಗಿದ್ದಳು. ಆಕೆ ವಿಭೂತಿ–ರುದ್ರಾಕ್ಷಿ ಧರಿಸುತ್ತಿದ್ದಳು ಎಂಬುದಕ್ಕಿಂತ ಆಕೆ ಅನುಭವ ಮಂಟಪದ ಅನಿವಾರ್ಯ ಅಂಗವಾಗಿದ್ದಳು ಎಂಬುದು ತುಂಬ ಮುಖ್ಯವಾಗುತ್ತದೆ. ಅಕ್ಕ ಇರಲಾರದೆ ಅನುಭವ ಮಂಟಪಕ್ಕೆ ಅಸ್ತಿತ್ವವೆಂಬುದಿಲ್ಲ. ಹೀಗೆ ಧಾರ್ಮಿಕ ಕ್ಷೇತ್ರದಿಂದ ಶತಶತಮಾನಗಳಿಂದ ದೂರವಾಗಿದ್ದ ಮಹಿಳೆ, ಅದೇ ಧಾರ್ಮಿಕ ಕ್ಷೇತ್ರಕ್ಕೆ ಅನಿವಾರ್ಯವಾಗುವುದು ತುಂಬಾ ಮುಖ್ಯವೆನಿಸುತ್ತದೆ.

ಸನಾತನ ಧರ್ಮದ ವಿಧಿ–ವಿಧಾನಗಳು ಮಹಿಳೆಯರ ವ್ಯಕ್ತಿತ್ವಕ್ಕೆ ಮಾರಕವಾಗಿದ್ದರೆ ವಚನಕಾರರ ಶರಣ ಧರ್ಮದ ವಿಧಿ-ವಿಧಾನಗಳು, ಉದ್ದೇಶಗಳು ಮಹಿಳೆಯರಿಗೆ ಹೊಸ ವ್ಯಕ್ತಿತ್ವ ಕೊಟ್ಟಿವೆ. ಯಾವ ಧರ್ಮದಿಂದ ಮಹಿಳೆ ವಂಚಿತಳಾಗಿದ್ದಳೋ, ಅದೇ ಧರ್ಮಕ್ಕೆ ಆಕೆ ಪ್ರಮುಖವಾಗುವುದು. ಆ ಧರ್ಮ ಬೆಳವಣಿಗೆಗೆ ಅನಿವಾರ್ಯವಾಗುವುದು ಅತ್ಯಂತ ಮಹತ್ತರವಾದ ಬದಲಾವಣೆ. ಇಂತಹ ಅನೇಕ ಮಹತ್ತರವಾದ ಬದಲಾವಣೆಗಳನ್ನು ಅನುಭವ ಮಂಟಪ ಮಾಡಿ ತೋರಿಸಿತು.

ಸಾಮಾಜಿಕ ಕ್ಷೇತ್ರದಲ್ಲಿ ಪ್ರಮುಖವಾಗಿದ್ದುಕೊಂಡು ಸಮಾಜ ವ್ಯವಸ್ಥೆಯ ಸೂತ್ರಗಳನ್ನು ರೂಪಿಸುವಲ್ಲಿಯೂ ಮಹಿಳೆ ಶತಮಾನಗಳಿಂದ ವಂಚಿತಳಾಗಿದ್ದಾಳೆ. ಆದರೆ ವಚನಕಾರರು ಅಲ್ಲಿಯೂ ಮಹಿಳೆಗೆ ಮಹತ್ವ ಕೊಡುವುದರ ಮೂಲಕ ಮಹಿಳೆಯರ ಸಾಮಾಜಿಕ ಅನುಭವಗಳನ್ನು ಅವರ ಬದುಕಿನ ಸೂಕ್ಷ್ಮತೆಗಳನ್ನು ಸಿದ್ಧಾಂತದ ಹಾಗೆ ಸ್ವೀಕರಿಸಿದರು. ಹೀಗೆ ಮಹಿಳೆ ಮತ್ತು ಸಾಮಾನ್ಯ ಜನತೆಯ ಅನುಭವಗಳು–ಚಿಂತನಗಳು ಸಿದ್ಧಾಂತವಾಗಿ ಸ್ವೀಕಾರವಾದದ್ದು ಈ ದೇಶದ ಚರಿತ್ರೆಯಲ್ಲಿ ವಚನಕಾರರ ಸಂದರ್ಭದಲ್ಲಿ ಮಾತ್ರವೆಂದು ಖಚಿತವಾಗಿ ಹೇಳಬಹುದಾಗಿದೆ.

ಅಹಿಂಸೆ, ಸಾಮಾಜಿಕ ಅಸಮಾನತೆ, ಗಂಡು–ಹೆಣ್ಣೆಂಬ ಭೇದ ಇತ್ಯಾದಿ ಅನೇಕ ವಿಷಯಗಳ ಬಗೆಗೆ ಅನುಭವ ಮಂಟಪದ ವೇದಿಕೆಯಲ್ಲಿ ಅನೇಕ ವಚನಕಾರ್ತಿಯರು ಚರ್ಚಿಸಿದ್ದಾರೆ. ವಚನಕಾರರ ಹೋರಾಟಕ್ಕೆ ಮಹತ್ತರವಾದುದನ್ನು ಕೊಟ್ಟಿದ್ದಾರೆ. ರಾಜಸತ್ತೆಯ ಸಂದರ್ಭದಲ್ಲಿದ್ದುಕೊಂಡೇ ಪತಿತ್ವ–ಪ್ರಭುತ್ವ ಎರಡನ್ನೂ ಏಕ ಕಾಲಕ್ಕೇ ತಿರಸ್ಕರಿಸಿ ಆತ್ಮಗೌರವಕ್ಕೆ ಮಹತ್ತರವಾದ ಸ್ಥಾನವನ್ನು ಕೊಡುವುದರ ಮೂಲಕ ಅಕ್ಕ ಮಹಾದೇವಿ ಮಹಿಳೆಗೆ ಮತ್ತು ಮಾನವ ಬದುಕಿಗೆ ಹೊಸ ವ್ಯಕ್ತಿತ್ವವನ್ನು ಮೂಡಿಸಿದ್ದಾಳೆ. ಅದೇ ರೀತಿಯಾಗಿ ಗಂಡು ಹೆಣ್ಣೆಂಬ ಭೇದವನ್ನು ತೊರೆದು ಸಮಾನತೆಯನ್ನು ಒತ್ತಿ ಹೇಳಿದ ಕಾಳವ್ವೆ, ಗೊಗ್ಗವ್ವೆ, ಸೂಳೆಸಂಕವ್ವೆ ಮುಂತಾದ ವಚನಕಾರ್ತಿಯರು ಸಾಮಾಜಿಕ ಸಿದ್ಧಾಂತಗಳನ್ನು ಹುಟ್ಟುಹಾಕಿದ ಹರಿಕಾರರಾಗಿರುತ್ತಾರೆ.

ಅನುಭವ ಮಂಟಪ ಹೀಗೆ ಅನೇಕ ಹೊಸ ವ್ಯಕ್ತಿತ್ವಗಳನ್ನು ಶೋಧಿಸಿದೆ. ಇಂದಿಗೂ ವ್ಯಕ್ತಿತ್ವ ವಿಕಾಸ ಮಾಡಿಕೊಳ್ಳುವಲ್ಲಿ ತೋಡಿಟ್ಟ ವರತಿಯಂತಿದೆ. 'ಧರ್ಮ'ವೆಂಬುದು ಈ ದೇಶದಲ್ಲಿ ಏಕ ವ್ಯಕ್ತಿಯಿಂದ ಸ್ಥಾಪನೆಯಾದರೆ, ವಚನಕಾರರ 'ಶರಣಧರ್ಮ' ಸಾಮೂಹಿಕ ಚರ್ಚೆಯ ಮೂಲಕ ಹುಟ್ಟಿದೆ. ಇದು ಜಗತ್ತಿನಲ್ಲಿಯೇ ವಿಶಿಷ್ಟವಾದ ಸಂಗತಿ. ಸಾಮಾನ್ಯರಿಂದ, ಸಮೂಹದಿಂದ ದೂರವಿದ್ದ ಧರ್ಮ ಅದೇ ಸಾಮಾನ್ಯರಿಂದ ಜನಸಮುದಾಯದಿಂದಲೇ ಅಸ್ತಿತ್ವಕ್ಕೆ ಬರಬೇಕಾದರೆ ವಚನಕಾರರ ಚಳುವಳಿಯ ಮಹತ್ವ ಮತ್ತು ಸಾಧನೆ ಸ್ಪಷ್ಟವಾಗುತ್ತವೆ. ಈ ದೇಶದಲ್ಲಿ ಒಂದು ಧರ್ಮ ಚರ್ಚೆಯ ಮೂಲಕ ಅನುಭವ ಮಂಟಪದಂತಹ ಸಾಮಾನ್ಯರ ವೇದಿಕೆಯ ಮುಖಾಂತರ ಅಸ್ತಿತ್ವಕ್ಕೆ ಬರುತ್ತದೆಂಬ ಮಾತೇ ಆಶ್ಚರ್ಯವನ್ನುಂಟುಮಾಡುತ್ತದೆ. ಇಂತಹ ಅನೇಕ ಆಶ್ಚರ್ಯಗಳನ್ನು, ಸತ್ಯ ಸಂಗತಿಯನ್ನಾಗಿಸುತ್ತಾ ವಚನಕಾರರು ಶಿಸ್ತು–ಸಂಘಟನೆ ಸಿದ್ಧಾಂತಗಳ ಮೂಲಕ ಮಾನವ ಬದುಕಿಗೆ ಹೊಸ ಆಯಾಮ ನೀಡಿದ್ದಾರೆ. ಅಂತೆಯೇ ಅವರು ಸ್ಥಾಪಿಸಿದ ಅನುಭವ ಮಂಟಪ ಇಂದಿಗೂ ಹಸಿರಾಗಿದೆ.

□ □

ದೇವರು: ಶರಣಪ್ರಜ್ಞೆ

—ಬ್ರಹ್ಮಕುಮಾರಿ ನಿರ್ಮಲಾ

ಸೃಷ್ಟಿಗೆ ಸೃಷ್ಟಿಕರ್ತನೊಬ್ಬನೇ, ವಿಶ್ವಕ್ಕೆ ವಿಶ್ವೇಶ್ವರನೊಬ್ಬನೇ, ಜಗತ್ತಿಗೆ ಜಗದ್ಗುರು ಒಬ್ಬನೇ, ಭಕ್ತರಿಗೆ ಭಗವಂತನೊಬ್ಬನೇ ದೇವರು. ಪರಮಾತ್ಮ, ಭಗವಂತ, ಈಶ್ವರ, ಪ್ರಭು, ಗಾಡ್‌ಫಾದರ್, ಅಲ್ಲಾಹ ಇತ್ಯಾದಿ ಮಹಿಮೆಗಳೆಲ್ಲಾ ಒಬ್ಬನಿಗೇ. ದೇವನೊಬ್ಬ ನಾಮ ಹಲವು. ವಿಶ್ವದಲ್ಲಿ ಪರಮಾತ್ಮನನ್ನು ಕುರಿತು ವಿಭಿನ್ನ ಅಭಿಪ್ರಾಯ ಹೊಂದಿರುವ ಮೂರು ವರ್ಗದ ಜನರಿದ್ದಾರೆ.

೧. ವಿಜ್ಞಾನಿಗಳು

೨. ನಾಸ್ತಿಕರು ಮತ್ತು

೩. ಆಸ್ತಿಕರು.

ಆಸ್ತಿಕರಿಗೆ ದೇವರು ಅರ್ಥಾತ್ ದೇವರ ಧ್ಯಾನ, ಸ್ಮರಣೆ, ಉಪಾಸನೆ, ಮೃಷ್ಟಾನ್ನ ಭೋಜನವಾದರೆ; ನಾಸ್ತಿಕರಿಗೆ ದೇವರು ನುಂಗಲಾರದ ತುತ್ತು. ಇನ್ನು ವಿಜ್ಞಾನಿಗಳಿಗೆ ಇತ್ತ ನುಂಗಲೂ ಆಗದ ಅತ್ತ ಉಗುಳಲೂ ಬಾರದ ಬಿಸಿ ತುಪ್ಪ. ಏಕೆಂದರೆ ನಿಸರ್ಗದ ನಿಗೂಢತೆಗಳನ್ನು ಭೇದಿಸುತ್ತ ಹೊರಟಿರುವ ವಿಜ್ಞಾನಿಗಳಿಗೆ ಅನೇಕ ವಿಸ್ಮಯಕಾರಿ ಸಂಗತಿಗಳು ಗೋಚರಿಸುತ್ತಿವೆ. ಮೊದಲು ಕಣ್ಣಿಗೆ ಕಂಡದ್ದು ಮಾತ್ರ ಸತ್ಯವೆಂದು, ನಿಜವೆಂದು ಒಪ್ಪುತ್ತಿದ್ದ ವಿಜ್ಞಾನ ಕಾಲಕ್ರಮೇಣವಾಗಿ ಪ್ರಗತಿ ಹೊಂದಿದಂತೆ ಕಣ್ಣಿಗೆ ಕಾಣಲಾರದ ಸತ್ಯಗಳೂ ಇವೆ ಎಂದು ನಂಬುವಂತಾಗಿದೆ, ಒಪ್ಪುವಂತಾಗಿದೆ. ಉದಾಹರಣೆಗಾಗಿ ವಿದ್ಯುತ್‌ಶಕ್ತಿ. ಪ್ರಾಕೃತಿಕವಾಗಿ ವಿದ್ಯುತ್‌ಶಕ್ತಿ ಮೊದಲಿನಿಂದಲೂ ಇತ್ತು. ಆದರೆ ಅದರ ಉಪಯೋಗವನ್ನು ಮಾನವ ಗುರುತಿಸಿರುವುದು ಇತ್ತೀಚಿನ ಶತಮಾನಗಳಲ್ಲಿ. ವಿದ್ಯುತ್‌ಶಕ್ತಿ ಸ್ಥೂಲ ಕಣ್ಣಿಗೆ ಕಾಣಿಸದಿದ್ದರೂ ಅದರ ಇರುವಿಕೆಯನ್ನು ಬಲ್ಬ್‌ಗಳು ಉರಿಯುವಾಗ, ಹೀಟರಿನಿಂದ ಶಾಖ ಪಡೆಯುವಾಗ ಇತ್ಯಾದಿಯಾಗಿ ನಾವು ಕಂಡುಕೊಳ್ಳಬೇಕಾಗುತ್ತದೆ. ಇಲ್ಲವೆ ಕಣ್ಣಿಗೆ ಕಾಣಿಸದಿರುವಾಗ ವಿದ್ಯುತ್‌ಶಕ್ತಿ ಇಲ್ಲವೆಂದು ವಿದ್ಯುತ್ ಹರಿಯುವ ತಂತಿಯನ್ನು ಮುಟ್ಟಿ "ಶಾಕ್" ಹೊಡೆಸಿಕೊಳ್ಳುವುದು ಮೂರ್ಖತನವಾದಂತೆ, ಪರಮಾತ್ಮ ಈ ಸ್ಥೂಲ ಕಣ್ಣಿಗೆ ಗೋಚರಿಸಲಾರನೆಂದಾಕ್ಷಣ, ನಾವು ಅನುಭವ ಮಾಡಿಲ್ಲವೆಂದಾಕ್ಷಣ ಅವನು ಇಲ್ಲವೇ ಇಲ್ಲ, ಕೇವಲ ಕಲ್ಪನೆ ಎನ್ನುವುದು ಶತಮೂರ್ಖತನವಾಗುತ್ತದೆ.

ಕಾಣದವುಗಳಲ್ಲಿ ಕೆಲವು ತರ್ಕಗಮ್ಯವಾದವುಗಳನ್ನು ಕಾರ್ಯದಿಂದ ಗುರ್ತಿಸಿ ತಿಳಿದ

ಬೇಕಾಗುತ್ತದೆ. ಕೆಲವು ಸ್ವಯಂ ವೇದ್ಯವಾಗುವಂತವುಗಳು. ಪರಮಾತ್ಮನ ಅನುಭವ ಸ್ವಯಂ ಅನುಭವ ವೇದ್ಯವಾಗುವಂತಹದು. ಸ್ವಯಂ ವೇದ್ಯವಾದವುಗಳನ್ನು ಇನ್ನೊಬ್ಬರಿಗೆ ನಾವು ವರ್ಣಿಸಬಹುದೇ ವಿನಃ ಅವರಿಗೂ ಅದನ್ನೇ ಅನುಭವ ಮಾಡಿಸಲಾರೆವು. ಉದಾಹರಣೆಗಾಗಿ ನಮಗೆ ಬೀಳುವ ಸ್ವಪ್ನಗಳನ್ನು ಇನ್ನೊಬ್ಬರಿಗೆ ವಿವರಿಸಬಹುದೇ ವಿನಃ ಅವರಿಗೂ ಅಂತಹವೇ ಸ್ವಪ್ನಗಳು ಬೀಳುವಂತೆ ನಾವು ಮಾಡಲಾರೆವು. ನಮಗಾಗುವ ಸುಖ–ದುಃಖದ ಅನುಭವವನ್ನು ವ್ಯಕ್ತಪಡಿಸಿ ತೋರಿಸಲು ಸಾಧ್ಯವೇ ಹೊರತು ಅನ್ಯರಿಗೆ ಅದನ್ನು ವರ್ಗಾಯಿಸಲಾರೆವು. ಹಾಗೆಂದಾಕ್ಷಣ ಅದು ಸುಳ್ಳು ಕಲ್ಪನೆ ಎನ್ನುವುದು ಸಮಂಜಸವೆ?

ಇಷ್ಟೊಂದು ನಿಯಮಬದ್ಧವಾಗಿ, ಕ್ರಮಬದ್ಧವಾಗಿ ನಡೆಯುವ ಈ ವಿಶ್ವವನ್ನು ನಿಯಂತ್ರಿಸುವ, ಅತ್ಯುತ್ಕೃಷ್ಟವಾದ ದಿವ್ಯ ಅವ್ಯಕ್ತ ಚೈತನ್ಯಶಕ್ತಿಯೊಂದಿದೆ ಎನ್ನುವುದೀಗ ಕೆಲವು ವಿಜ್ಞಾನಿಗಳ ಅನುಭವದ ಮಾತು. ಅದನ್ನು ಅವರು "ಸುಪ್ರೀಮ್ ಪಾವರ್" (Supreme Power) ಎನ್ನುತ್ತಾರೆ.

ಇದು ೧೯೩೫ರ ಘಟನೆ ಇಂದು ಮಾನವನ ಮೃತ್ಯುದೇವತೆ ಎನಿಸಿರುವ ಅಣುವಿನ ಮಹತ್ವ ಕುರಿತು ಸಂಶೋಧನೆ ನಡೆಯುತ್ತಿದ್ದ ಕಾಲವದು. ಹಾಲ್ಡೇನ್ ಎಂಬ ಭೌತಶಾಸ್ತ್ರಜ್ಞನು ಅಣುವಿನಲ್ಲಿ ಅಡಗಿರುವ "ಅಸಾಮಾನ್ಯ ಶಕ್ತಿಯನ್ನು ಯಾಂತ್ರಿಕ–ತಾಂತ್ರಿಕೋಪಕರಣಗಳಿಂದ ಹೊರಗೆಡಹುವ ಸಾಧ್ಯತೆ ಇದೆ" ಎಂದು ಸಾರಿದನು. ಜೊತೆಗೆ ಹಾಗಾದ ಪಕ್ಷದಲ್ಲಿ "ಈ ಭೂಲೋಕದ ಅಂತ್ಯವನ್ನು ಸೃಷ್ಟಿಕರ್ತನಾದ ಭಗವಂತನಿಂದಲ್ಲದೇ ಇನ್ನಾರಿಂದಲೂ ತಡೆಯುವುದು ಅಸಾಧ್ಯವೆಂದು ದಿಗ್ಭ್ರಾಂತನಾಗಿ ನುಡಿದನಂತೆ ತಾನೇ ಸೃಷ್ಟಿಸಿರುವ ಪೆಡಂಭೂತಕ್ಕೆ ತಾನೇ ಆಹಾರವಾಗುತ್ತಿರುವ ಅತೀ ಬುದ್ಧಿವಂತ ಪ್ರಾಣಿ ವಿಜ್ಞಾನಿ ಮಾನವ ತನಗಿಂತಲೂ ಮಿಗಿಲಾದ ಅವ್ಯಕ್ತನಾದ ಆ "ಸುಪ್ರೀಮ್ ಪಾವರ್" (ಭಗವಂತನಿಗೆ)ಗೆ ತನಗರಿವಿಲ್ಲದೇ ಮೊರೆಯಿಡುತ್ತಿದ್ದಾನೆ.

ಇನ್ನು ನಾಸ್ತಿಕ ವರ್ಗವನ್ನು ತೆಗೆದುಕೊಂಡರೆ ನಾಸ್ತಿಕರಲ್ಲಿ ಬಹು ಜನರು ಮಾಜಿ ಭಕ್ತರೇ ಆಗಿರುತ್ತಾರೆ. ಅವರ ದೇವತೆ ತಮ್ಮ ಇಚ್ಛೆ ಈಡೇರಿಸಲಿಲ್ಲವೆಂದೂ, ವಿಲಾಸ ಜೀವನಕ್ಕೆ ಆಕರ್ಷಿತರಾಗಿಯೋ ನಾಸ್ತಿಕರಾದವರೇ ಬಹಳ ಜನರು. "ಆತ್ಮ ನಿರ್ಲೇಪ, ಆತ್ಮಕ್ಕೆ ನಾವು ಮಾಡುವ ಪಾಪ–ಪುಣ್ಯಗಳು ಅಂಟುವುದಿಲ್ಲ, ತಿಂದುಂಡು ಮಜಾ ಮಾಡಿರಿ" ಎನ್ನುವ ಹಾಗೂ "೮೪ ಲಕ್ಷ ಯೋನಿಗಳನ್ನು ದಾಟಿ ಬಂದ ಮೇಲೆ ಈ ಮಾನವಜನ್ಮ ಸಿಕ್ಕಿದೆ, ಇದರಲ್ಲಿ ಎಲ್ಲವನ್ನೂ ಅನುಭವಿಸಿ ಬಿಡಬೇಕು" ಎನ್ನುವ ಗೊಡ್ಡು ತತ್ವಗಳನ್ನು ನಂಬಿ, ನಂಬಿಸಿ ಕೆಲವು ಹಿತಾಸಕ್ತಿಗಳು ಇಂತಹವುಗಳನ್ನು ತಮ್ಮ ಸ್ವಲಾಭಕ್ಕೋಸ್ಕರ ಲಂಗು–ಲಗಾಮಿಲ್ಲದ ತಮ್ಮ ಮನೋಕಾಮನೆಗಳನ್ನು ಈಡೇರಿಸಿಕೊಳ್ಳಲು ಮಾಡಿಕೊಂಡಿರುವ ಯೋಜನೆಗಳು ಎಂದರೆ ತಪ್ಪಾಗಲಾರದು. ಇಂಥ ಅಸಂಬದ್ಧ ತತ್ವಗಳನ್ನು ಅನುಸರಿಸುತ್ತಾ ಸಮಾಜದಲ್ಲಿ ಮಹಾನ್ ವ್ಯಕ್ತಿಗಳೆಂದು ಮೆರೆಯುತ್ತಿರುವವರನ್ನು

ನೋಡಿಯೂ ಕೆಲವರು ನಾಸ್ತಿಕರಾದವರಿದ್ದಾರೆ. ಬಹು ಜನರ ನಾಸ್ತಿಕತೆಗೆ ಕಾರಣ ಧಾರ್ಮಿಕತೆಯಲ್ಲಿನ ಡಾಂಭಿಕತೆ. ಆದರೂ "ಸಂಕಟ ಬಂದಾಗ ವೆಂಕಟರಮಣ" ಎನ್ನುವಂತೆ ನಾಸ್ತಿಕರು ಸಹ ತಮಗರಿವಿಲ್ಲದೆ ದೇವರಿಗೆ ಮೊರೆ ಹೋಗುವುದು ಸಹಜ. ಅದನ್ನು ಕುರಿತು ಒಂದು ಚಿಕ್ಕ ನಗೆಹನಿ ನೆನಪಿಗೆ ಬರುತ್ತಿದೆ.

ಒಮ್ಮೆ ಒಬ್ಬ ನಾಸ್ತಿಕ ಮಹಾಶಯ ಒಂದು ಚರ್ಚಾಕೂಟಕ್ಕೆ ಭಾಷಣಕಾರನಾಗಿ ಹೋಗಿದ್ದನು. ಅವನು "ಭಗವಂತ ಇಲ್ಲವೇ ಇಲ್ಲ. ಅದೆಲ್ಲ ಸುಳ್ಳು. ನೋಡಿ ಈಗ ವಿಜ್ಞಾನ ಎಷ್ಟೋಂದು ಮುಂದುವರೆದಿದೆ. ನಾವೆಷ್ಟು ಸುಖಿಗಳಾಗಿದ್ದೇವೆ. ಇದೆಲ್ಲದಕ್ಕೂ ನಮ್ಮ ಬುದ್ಧಿಶಕ್ತಿಯೇ ಕಾರಣ. ನಮ್ಮ ಬುದ್ಧಿಶಕ್ತಿಯಿಂದ ಎಲ್ಲವನ್ನೂ ಸಾಧಿಸಬಹುದು. ಆ ದೇವರ ಮೊರೆಹೋಗುವುದನ್ನು ಬಿಡಿ. ದೇವರು ಇಲ್ಲವೇ ಇಲ್ಲ" ಎಂದು ಗಂಟೆಗಟ್ಟಲೆ ಭಾಷಣ ಬಿಗಿದನು. ಕೊನೆಗೆ ಸಭೆ ಸಮಾಪ್ತಿಯಾಯಿತು. ಎಲ್ಲರಂತೆ ನಾಸ್ತಿಕ ಮಹಾಶಯ ಎದ್ದು ಹೊರ ನಡೆದ. ಅಷ್ಟರಲ್ಲಿ ಒಬ್ಬ ಬಾಲಕ ಓಡುತ್ತಾ ಬಂದು "ಸಾರ್-ಸಾರ್ ನಿಮ್ಮ ಕೊಡೆ(ಛತ್ರಿ)ಯನ್ನು ಮರೆತು ಹೊರಟಿದ್ದೀರಿ. ತೆಗೆದುಕೊಳ್ಳಿ" ಎಂದು ಕೊಡತ್ತಾನೆ. ಕೂಡಲೇ ಆ ನಾಸ್ತಿಕ ಮಹಾಶಯ "ಓ ಮೈ ಗಾಡ್, ಹೌದಲ್ಲ ಮಗು ಮರೆತು ಬಿಟ್ಟಿದ್ದೆ. ಗಾಡ್ ಬ್ಲೆಸ್ ಯು (ದೇವರು ನಿನಗೆ ಒಳ್ಳೆಯದು ಮಾಡಲಿ)" ಎಂದು ಹೇಳಿದನಂತೆ.

ಹಾಗೆಯೇ ಆಸ್ತಿಕರೆಂದು ಕರೆದುಕೊಳ್ಳುವವರಿಗೆ ಹೇಳುವುದಾದರೆ ಚೈತನ್ಯಶಕ್ತಿಯಾದ ಭಗವಂತನನ್ನು ಜಡವಸ್ತುಗಳಾದ ಕಲ್ಲು-ಮಣ್ಣು-ನೀರಿನಲ್ಲಿ, ವಿನಾಶಿ ದೇಹಧಾರಿಗಳಲ್ಲಿ ಹುಡುಕುವುದು ನಿರರ್ಥಕ. ಇದನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

ನೀರು ಕಂಡಲ್ಲಿ ಮುಳುಗುವರಯ್ಯಾ, ಮರವ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವನೊಣಗುವ ಮರನ ಮೆಚ್ಚಿದವರು
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವಾ

ಎಂದು ಮಾರ್ಮಿಕವಾಗಿ ತಿಳಿಸಿದ್ದಾರೆ.

ಸರ್ವಜ್ಞನ ಮಾತಿನಲ್ಲಿ ಹೇಳುವುದಾದರೆ—

ಕಲ್ಲುಗುಂಡಿನ ಮೇಲೆ ಮಲ್ಲಿಗೆಯ ಅರಳಿಕ್ಕಿ
ನಿಲ್ಲದೆ ಹಣೆಯ ಬಡಿವರ್ಗೆ ಬುಗುಟಿಲ್ಲ
ದಿಲ್ಲ ಕಾಣಯ್ಯ ಸರ್ವಜ್ಞ
ನಿತ್ಯ ನೀರ್ಮುಳುಗುವವನು ಹತ್ತಿದಡೆ ಸ್ವರ್ಗವನು
ಎತ್ತಿ ಜನ್ಮವನು ಜಲದೊಳಿಪ್ಪಾ ಕಪ್ಪೆ
ಹತ್ತದೇಕೆಂದ ಸರ್ವಜ್ಞ.

ಎನ್ನುತ್ತಾನೆ. ವಾಸ್ತವವಾಗಿ ಆತ್ಮಜ್ಞಾನ ಮತ್ತು ಪರಮಾತ್ಮನ ಜ್ಞಾನವನ್ನು ಅರಿಯ ಬೇಕಾಗಿದೆ. ದೇವಾಲಯವನ್ನು ಪ್ರವೇಶಿಸಲು ಅನೇಕ ದ್ವಾರಗಳಿದ್ದರೂ ಗರ್ಭಗುಡಿಯನ್ನು ಪ್ರವೇಶಿಸಲು ಒಂದೇ ದ್ವಾರವಿರುವಂತೆ ಅಧ್ಯಾತ್ಮಿಕ ರಂಗವನ್ನು ಪ್ರವೇಶಿಸಲು ಅನೇಕ ಮಾರ್ಗಗಳಿದ್ದರೂ, ಈಶ್ವರನ ಯಥಾರ್ಥ ಸತ್ಯಜ್ಞಾನವೇ ಈಶ್ವರನೊಂದಿಗೆ ಮಿಲನ ಮಾಡಿಸುವ ಏಕೈಕ ಮಾರ್ಗವಾಗಿದೆ.

ಪರಮಾತ್ಮನಿರುವುದು ನಿತ್ಯ ಸತ್ಯ ಪರಮ ಸತ್ಯವಾದರೂ ಅವನನ್ನು ಮಾನವರು ತಮ್ಮ ತಮ್ಮದೇ ಆದ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸಿದ ಕಾರಣ ಒಬ್ಬೊಬ್ಬರು ಒಂದೊಂದು ವಿಧವಾದ ವ್ಯಾಖ್ಯಾನವನ್ನು ನೀಡಿದರು. ಇದು ೫ ಜನ ಹುಟ್ಟುಕುರುಡರು ಆನೆಯನ್ನು ಗುರ್ತಿಸಿದಂತಾಯಿತು. ೫ ಜನ ಹುಟ್ಟುಕುರುಡರ ಎದುರು ಆನೆಯನ್ನು ನಿಲ್ಲಿಸಿ ಆನೆ ಹೇಗೆ ಇದೆ ತಿಳಿಸಿರಿ ಎಂದರೆ ಒಬ್ಬನು ಅದರ ಕಿವಿಯನ್ನು ಹಿಡಿ ಆನೆ "ಮೊರ"ವಿದ್ದ ಹಾಗಿದೆ ಎಂದನಂತೆ. ಇನ್ನೊಬ್ಬನು ಆನೆಯ ಕಾಲನ್ನು ಮುಟ್ಟಿ ಆನೆ "ಕಂಭ"ಇದ್ದ ಹಾಗಿದೆ ಎಂದನು. ಮಗದೊಬ್ಬ ಅದರ ಹೊಟ್ಟೆ ಮುಟ್ಟಿ ಆನೆ "ಗೋಡೆ" ಇದ್ದ ಹಾಗಿದೆ ಎಂದು ಹೇಳಿದನಂತೆ. ಮತ್ತೋರ್ವನು ಆನೆಯ ಸೊಂಡಿಲನ್ನು ಹಿಡಿದು ಆನೆ ಹಾವಿನ ಹಾಗಿದೆ ಎಂದನಂತೆ. ನಂತರದವನು ಆನೆಯ ಬಾಲವನ್ನು ಹಿಡಿದು ಆನೆ "ಹಗ್ಗ"ವಿದ್ದ ಹಾಗಿದೆ ಎಂದನಂತೆ. ಆನೆ ಇತ್ತು. ಆದರೆ ಹುಟ್ಟುಕುರುಡರು ತಿಳಿದ ಹಾಗೆ ಆನೆ ಇರಲಿಲ್ಲ. ಹಾಗೆಯೇ ದೇವರಿದ್ದಾನೆ. ಆದರೆ ಅವನನ್ನು ನೋಡುವ ಜ್ಞಾನನೇತ್ರಗಳಿಲ್ಲದ ಮಾನವಾಂಧರು ಅವರವರದೇ ದೃಷ್ಟಿಕೋನದಿಂದ ಕೆಲವರು ಎಲ್ಲೆಡೆಯೂ ಅಣುರೇಣು-ತೃಣಕಾಷ್ಠಗಳಲ್ಲಿಯೂ ಪರಮಾತ್ಮನನ್ನು ಕಾಣಬೇಕೆಂದರೆ, ಕೆಲವರು ನಾನೇ ಪರಮಾತ್ಮನೆಂದರು. ಕೆಲವರು ನಾನು ಬೇರೆ, ಪರಮಾತ್ಮ ಬೇರೆ. ಪರಮಾತ್ಮನಲ್ಲಿ ಐಕ್ಯಹೊಂದಲು ಪುರುಷಾರ್ಥ ಮಾಡಬೇಕೆಂದರು ಕೆಲವರು ಪರಮಾತ್ಮ ಇಲ್ಲವೆಂದರು. ಹೀಗೆ ವಿಧವಿಧವಾಗಿ ವರ್ಣಿಸಿದರಷ್ಟೇ. ಹಾಗಾದರೆ ಇದರಲ್ಲಿ ಸತ್ಯ ಯಾವುದು? ಪರಮಾತ್ಮನು ಇರುವುದಾದರೂ ಹೇಗೆ? ಎಂಬ ಪ್ರಶ್ನೆ ಉದ್ಭವಿಸುವುದು ಸಹಜ.

"ಪರಮಾತ್ಮ" ಎನ್ನುವ ಶಬ್ದವಿದ್ದಾಗ, ಅವನಿದ್ದಾನೆ–ಇಲ್ಲ ಎನ್ನುವ ಚರ್ಚೆಗೆ ಅವಕಾಶವೇ ಇಲ್ಲ. ಆದರೆ ಹೇಗೆ ಪ್ರತಿಯೊಬ್ಬ ವ್ಯಕ್ತಿಗೂ ತನ್ನದೇ ಆದ ವಿಭಿನ್ನ ವ್ಯಕ್ತಿತ್ವ (Personality) ಇರುತ್ತದೆ. ಉದಾ: ಮಹಾತ್ಮಾ ಗಾಂಧಿ, ಅರಿಸ್ಟಾಟಲ್, ನ್ಯೂಟನ್, ಲೆನಿನ್, ಹಿಟ್ಲರ್, ಸರ್. ಎಂ. ವಿಶ್ವೇಶ್ವರಯ್ಯ ಇತ್ಯಾದಿಯಾಗಿ ಅವರವರು ತಮ್ಮ ವ್ಯಕ್ತಿತ್ವದಿಂದಲೇ ಪ್ರಸಿದ್ಧರಾದರು ಹಾಗೂ ಆ ವ್ಯಕ್ತಿತ್ವದಿಂದಲೇ ಅವರನ್ನು ಗುರ್ತಿಸಲಾಗುತ್ತದೆ. ಅದೇ ರೀತಿ ಪರಮಪಿತ ಶಿವ ಪರಮಾತ್ಮನಿಗೆ ಅವನದೇ ಆದ ವ್ಯಕ್ತಿತ್ವ ಇದೆ ಆದರೆ ಅವನದು (Supreme Personality) ಸರ್ವಶ್ರೇಷ್ಠ ವ್ಯಕ್ತಿತ್ವ. ಅಂತಹ ವ್ಯಕ್ತಿತ್ವ ಬೇರೆ ಯಾರಿಗೂ ಇಲ್ಲ. ಅದಕ್ಕಾಗಿಯೇ ಅವನನ್ನು ಪರಮ+ಆತ್ಮ=

ಪರಮಾತ್ಮ, ಭಗವಂತ, (Supreme Soul) ಎಂದು ಕರೆಯಲಾಗುತ್ತದೆ. ಹಾಗಾದರೆ ಅವನ ವ್ಯಕ್ತಿತ್ವ ಎಂತಹದು ಎನ್ನುವುದನ್ನು ವಿವೇಚಿಸೋಣ.

ಅವನ ಸರ್ವಶ್ರೇಷ್ಠ ವ್ಯಕ್ತಿತ್ವವನ್ನು ಅಕ್ಕಮಹಾದೇವಿಯು ಈ ರೀತಿಯಾಗಿ ಬಹು ಸುಂದರವಾಗಿ ವರ್ಣಿಸಿರುವಳು.

> "ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗಾನೊಲಿದೆ ಅವ್ವಾ
> ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
> ಚೆಲುವಂಗಾನೊಲಿದೆ ಅವ್ವಾ
> ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
> ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗೆ ನಾನೊಲಿದೆ
> ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ
> ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು"
> "ಕದಾಚಿನ್ನ ಜಾಯತೇ ಸೋಽಜಃ"

ಪರಮಾತ್ಮನು ಯಾವಾಗಲೂ ಜನ್ಮರಹಿತನಾಗಿರುವುದರಿಂದ ಅವನಿಗೆ "ಅಜನ್ಮ" ಎಂಬ ಮಹಿಮೆ ಇದೆ. ಅವನಿಗೆ ಜನನವಿಲ್ಲವೆಂದ ಮೇಲೆ ಮರಣವೂ ಇಲ್ಲ ಜನನ-ಮರಣದ ಚಕ್ರದಿಂದ ಅತೀತನಾಗಿರುವ ಕಾರಣ ಅವನನ್ನು ಮೃತ್ಯುಂಜಯ ನೆನ್ನಲಾಗುತ್ತದೆ. ಪರಮಾತ್ಮ ಅಯೋನಿಜ. ಇದನ್ನು ಬಸವಣ್ಣನವರ ನುಡಿಗಳಲ್ಲಿ ಹೇಳುವುದಾದರೆ–

> ಅಮೃತಮತಿ ಸೋಮಶಂಭುವಿಗೆ ಹುಟ್ಟಿದಾತ ಇಂದ್ರ
> ಸತ್ಯಋಷಿ ಜೇಷ್ಠಾದೇವಿಗೆ ಹುಟ್ಟಿದಾತ ಬ್ರಹ್ಮ
> ವಸುದೇವ ದೇವಕಿಗೆ ಹುಟ್ಟಿದಾತ ವಿಷ್ಣು
> ನಾಭಿರಾಜ ಮರುತಾದೇವಿಗೆ ಹುಟ್ಟಿದಾತ
> ಇವರೆಲ್ಲರೂ ಯೋನಿಜರೆಂಬುದು ತ್ರೈಜಗಬಲ್ಲುದು
> ಉತ್ಪತ್ತಿ-ಸ್ಥಿತಿ-ಪ್ರಳಯಕ್ಕೆ ಹೊರಗಾದ
> ಕೂಡಲಸಂಗಮದೇವಂಗೆ ಮಾತಾಪಿತರುಳ್ಳರೆ ಹೇಳಿರೋ

ಎಂದು ಕೇಳುತ್ತಾರೆ. ಅರ್ಥಾತ್ ಪರಮಾತ್ಮನು ಯೋನಿಯಿಂದ ಜನ್ಮ ಪಡೆದು ಭುವಿಗೆ ಅವತರಿಸುವುದಿಲ್ಲ ಪರಮಾತ್ಮ ಅಕಾಯ ಅಥವಾ ಅಶರೀರಿ ಆಗಿದ್ದಾನೆ. ಅವನಿಗೆ ಪಂಚ ಭೂತಗಳಿಂದ ರಚಿತವಾದ ಸಾಕಾರ ಶರೀರವಾಗಲಿ ಬ್ರಹ್ಮ-ವಿಷ್ಣು-ಶಂಕರರಂತಹ ಸೂಕ್ಷ್ಮ ಶರೀರವಾಗಲೀ ಇಲ್ಲದಿರುವ ಕಾರಣ ಅವನಿಗೆ ನಿರಾಕಾರ ಎನ್ನಲಾಗುತ್ತದೆ. ಪರಮಾತ್ಮ ಸಾಕಾರ-ಸೂಕ್ಷ್ಮಾಕಾರಗಳಿಲ್ಲದ ಜ್ಯೋತಿರ್ಬಿಂದು ಸತ್-ಚಿತ್-ಆನಂದ ಸ್ವರೂಪನಾಗಿದ್ದಾನೆ ಪರಮಾತ್ಮ ಅಭೋಕ್ತನಾಗಿದ್ದಾನೆ ಅರ್ಥಾತ್, ಅವನು ದೇವತೆಗಳಂತೆ ಪುಣ್ಯದ ಫಲವಾದ ಸುಖವನ್ನು ಭೋಗಿಸುವುದಿಲ್ಲ. ಮಾನವರಂತೆ ಪಾಪ-ಪುಣ್ಯಗಳನ್ನು,

ಸುಖ-ದುಃಖಗಳನ್ನು ಹಸಿವು-ಬಾಯಾರಿಕೆ, ಕಷ್ಟ-ಕಾರ್ಪಣ್ಯಗಳನ್ನು ಸಾವು-ನೋವುಗಳನ್ನು, ರೋಗ-ರುಜಿನಗಳನ್ನು ಭೋಗಿಸುವುದಿಲ್ಲ. ಆದಕಾರಣ ಅವನು ಅಭೋಕ್ತ. ಸೃಷ್ಟಿಯ ತ್ರಿಕಾಲ ಜ್ಞಾನ, ಕರ್ಮದ ಗುಹ್ಯಗತಿಯನ್ನು ತಿಳಿದಿರುವ ಪರಮಾತ್ಮನಿಗೆ ಸರ್ವಜ್ಞನೆಂತಲೂ, ವಿಶ್ವಾತ್ಮರುಗಳಿಗೆ ಮುಕ್ತಿ-ಜೀವನ್ಮುಕ್ತಿಯನ್ನು ದಯಪಾಲಿಸುವವನೂ, ಸರ್ವರನ್ನು ಪತಿತರಿಂದ ಪಾವನ ಮಾಡುವವನೂ ಸರ್ವರಿಗೂ ಫಲವನ್ನು ನೀಡುವ ವಿಧಾತನಾಗಿರುವ ಕಾರಣ ಅವನಿಗೆ ಸರ್ವಶಕ್ತಿವಂತನೆಂದು ಮಹಿಮೆ ಮಾಡಲಾಗುತ್ತದೆ.

ಯಃ ಪಿತೃಣಾಂ ಪಿತಾ ಸ ಪಿತಾಮಯಃ

ಪರಮಾತ್ಮನು ತಂದೆಗಳ ತಂದೆಯಾಗಿರುವುದರಿಂದ ಅವನಿಗೆ 'ಪಿತಾಮಹ' ಎಂದು ಹೆಸರು.

ನ ವಿದ್ಯತೇ ಆದಿಕಾರಣ ಯಸ್ಯ ಸೋಽ ನಾದಿರೀಶ್ವರಃ

ಪರಮಾತ್ಮನಿಗೆ ಆದಿ ಕಾರಣವು ಯಾವುದೂ ಇಲ್ಲದಿರುವುದರಿಂದ ಅವನಿಗೆ 'ಅನಾದಿ' ಎನ್ನಲಾಗುತ್ತದೆ.

ಯಃ ಸ್ವಯಂ ಭವತಿ ಸಃ ಸ್ವಯಂ ಭೂರೀಶ್ವರಃ

ಈಶ್ವರನು ಸ್ವಯಂ ತಾನೇ ತಾನಾಗಿದ್ದಾನೆ. ಅವನಿಗೆ ಜನ್ಮದಾತರಿಲ್ಲದ ಕಾರಣ 'ಸ್ವಯಂಭು' ಆಗಿದ್ದಾನೆ.

ಪರಮಾತ್ಮನು ಸದಾ ಮಂಗಳಕಾರಿ, ಕಲ್ಯಾಣಕಾರಿ, ಶುಭಕಾರಿ ಆದ ಕಾರಣ 'ಶಿವ'ನೆಂದು ಕರೆಯಲಾಗುತ್ತದೆ. ಹೀಗೆಯೇ ಪರಮಾತ್ಮನ ಮಹಿಮೆಯನ್ನು ಬರೆಯುತ್ತಾ ಹೋದಂತೆ ಅದಕ್ಕೆ ಕೊನೆಯೇ ಇಲ್ಲ. ಶ್ರೀ ಪುಷ್ಪದಂತನ ಸುಪ್ರಸಿದ್ಧ ಶಿವ ಮಹಿಮಾ ಸ್ತೋತ್ರದಲ್ಲಿ ಒಂದು ಪದ್ಯ ಹೀಗಿದೆ:

ಅಸಿತಗಿರಿ ಸಮಂಸ್ಯಾತ್ ಕಜ್ಜಲಂ ಸಿಂಧು ಪಾತ್ರೆ
ಸುರತರುವರ ಶಾಖಾ ಲೇಖನೀ ಪತ್ರಮೂರ್ವೀ
ಲಿಖಿತಯದಿ ಗೃಹಿತ್ವಾ ಶಾರದಾ ಸರ್ವಕಾಲಂ
ತದಪಿ ತವ ಗುಣಾನಾಂ ಈಶ ಪಾರಂ ನ ಯಾತಿ ।

ತಾತ್ಪರ್ಯ:-ಸಮುದ್ರವೆಂಬ ಮಸಿಕುಡಿಕೆಯಲ್ಲಿ ಕಲ್ಪವೃಕ್ಷ ಶಾಖೆಗಳನ್ನು ಲೇಖನಿಯಾಗಿಸಿ, ಭೂತಳವನ್ನೇ ಕಾಗದವನ್ನಾಗಿಸಿ ಸಾಕ್ಷಾತ್ ಸರಸ್ವತಿಯು ಸದಾಕಾಲದಲ್ಲಿಯೂ ಶಿವನ ಗುಣಗಳನ್ನು ಬಣ್ಣಿಸಿದರೂ ಅವನ ಗುಣಗಳು ಸಮಾಪ್ತಿಯಾಗುವುದಿಲ್ಲ. ಇಂತಹ ಸರ್ವಶ್ರೇಷ್ಠ ವ್ಯಕ್ತಿತ್ವ (Supreme Personality)ವನ್ನು ಯಾವನು ಹೊಂದಿರುವನೋ ಅವನೇ ಪರಮಾತ್ಮ. ಅವನೇ ಪರಮಪಿತ, ವಿಶ್ವಪಿತ. ಅಂತಹ ಪರಮಾತ್ಮನನ್ನು ಕಾಣುವುದು ಹೇಗೆ?

ವೈರಸ್, ಬ್ಯಾಕ್ಟೀರಿಯಾ ಮುಂತಾದ ಸೂಕ್ಷ್ಮಾಣುಜೀವಿಗಳನ್ನು, ಅಣು-ಪರಮಾಣು ಗಳನ್ನು ನೋಡಲು ಸೂಕ್ಷ್ಮದರ್ಶಕ ಯಂತ್ರದಿಂದ ಮಾತ್ರ ಸಾಧ್ಯ. ಸ್ಥೂಲನೇತ್ರಗಳಿಂದ ಅವುಗಳನ್ನು ನೋಡಲು ಸಾಧ್ಯವಿಲ್ಲ, ಎಂದಾಕ್ಷಣ ಅವು ಇಲ್ಲವೇ ಇಲ್ಲವೆಂದಲ್ಲ ಹಾಗೆಯೇ ಇಲೆಕ್ಟ್ರಾನ್, ಮೈಕ್ರೋಸ್ಕೋಪ್‌ನಿಂದಲೂ ನೋಡಲು ಸಾಧ್ಯನಾದ ಸೂಕ್ಷ್ಮಾತಿ-ಸೂಕ್ಷ್ಮ ನಾಗಿರುವ ಪಂಚತತ್ವಗಳಿಂದ ರಚಿಸಲ್ಪಡದಿರುವ ಚೈತನ್ಯಶಕ್ತಿಯಾದ ಪರಮಾತ್ಮನನ್ನು ನೋಡಲು ದಿವ್ಯಜ್ಞಾನನೇತ್ರದ ಅವಶ್ಯಕತೆಯಿದೆ. ಇದನ್ನೇ ಭಗವದ್ಗೀತೆಯಲ್ಲಿ-

ನ ತು ಮಾಂ ಶಕ್ಯ ಸೇ
ದೃಷ್ಟುಮನೇನೈವ ಸ್ವಚಕ್ಷುಷಾಃ
ದಿವ್ಯಂ ದದಾಮಿ ತೇ ಚಕ್ಷುಃ
ಪಶ್ಯ ಮೇ ಯೋಗಮೈಶ್ವಕಂ ॥ (ಅ ॥; ಶ್ಲೋ-೮)

ತಾತ್ಪರ್ಯ- ನಿನ್ನ ಸ್ವಚಕ್ಷು ಅರ್ಥಾತ್ ಸ್ಥೂಲನೇತ್ರಗಳಿಂದ ನನ್ನನ್ನು ನೋಡಲು ಸಾಧ್ಯವಿಲ್ಲ. ನಿನಗೆ ನಾನು ದಿವ್ಯಚಕ್ಷುವನ್ನು ಕೊಡುತ್ತೇನೆ. ಅದರಿಂದ ನನ್ನನ್ನು ನೋಡು ಎಂದು ಹೇಳಲಾಗಿದೆ.

ಈ ವಿನಾಶಿ ನೇತ್ರಗಳಿಂದ ಕೇವಲ ವಿನಾಶಿ ವಸ್ತುಗಳನ್ನು ಮಾತ್ರ ನೋಡಲು ಸಾಧ್ಯ. ಭಗವಂತನಾದರೋ ಪಂಚತತ್ವಗಳಿಂದಾದ ಪುತ್ಥಳಿಯಲ್ಲ-ಅಥವಾ ಪಂಚಭೂತ ಗಳಿಂದಾದ ವಸ್ತುವಲ್ಲ.

ನ ತಸ್ಯ ಕಾರ್ಯಂ ಕರಣಂ ಚ ವಿದ್ಯತೇ
ನ ತತ್ಸಮಶ್ಚಾಭ್ಯಧಿಕಶ್ಚ ದೃಶ್ಯತೇ
ಪರಾಸ್ಯ ಶಕ್ತಿರ್ವಿವಿಧೈವ ಶ್ರೂಯತೇ
ಸ್ವಾಭಾವಿಕೀ ಜ್ಞಾನ ಬಲಕ್ರಿಯಾ ಚ
(ಶ್ವೇತಾಶ್ವತರೋಪನಿಷತ್)

ತಾತ್ಪರ್ಯ: ಭಗವಂತನಿಗೆ ಶರೀರವು ಇರುವುದಿಲ್ಲ. ಇಂದ್ರಿಯವೂ ಇರುವುದಿಲ್ಲ. ಅವನಿಗೆ ಸಮನಾಗಲಿ, ಅಧಿಕನಾಗಲಿ ಯಾರೂ ಇಲ್ಲ. ಇವನ ಪರಾಶಕ್ತಿಯು ವಿವಿಧ ಪ್ರಕಾರವಾಗಿ ಶ್ರುತವಾಗಿದೆ. (ಹೇಳಲ್ಪಟ್ಟಿದೆ)

ನ ತಸ್ಯ ಕಶ್ಚಿತ್ ಪತಿರಸ್ತಿ ಲೋಕೆ
ನ ಚೇಶಿತಾ ನೈವ ಚ ತಸ್ಯ ಲಿಂಗಮ್
ಸ ಕಾರಣಂ ಕರಣಾಧಿಪಾಧಿಪೊ
ನ ಚಾಸ್ಯ ಕಶ್ಚಿಜ್ಜನಿತಾ-ನ ಚಾಧಿಪಃ
(ಶ್ವೇತಾಶ್ವತರೋಪನಿಷತ್)

ತಾತ್ಪರ್ಯ: ಲೋಕದಲ್ಲಿ ಭಗವಂತನಿಗೆ ಒಡೆಯನಾಗಲಿ ಈಶ್ವರನಾಗಲಿ ಯಾವನೂ ಇಲ್ಲ. ಅವನು ಪ್ರಮಾಣಗೋಚರನಲ್ಲ. ಅವನು ಸರ್ವ ಕಾರಣನು. ಅವನು ಇಂದ್ರಿಯಾಧೀಶನಿಗೂ (ಆತ್ಮನಿಗೂ) ಒಡೆಯನು. ಅವನಿಗೆ ಜನಕನಾಗಲೀ, ಅಧಿಪತಿಯಾಗಲಿ ಯಾವನೂ ಇಲ್ಲ.

ಇಂತಹ ಸರ್ವಶ್ರೇಷ್ಠ, ಪರಮಪಿತ ಪರಮಾತ್ಮನನ್ನು ಜ್ಞಾನನೇತ್ರಗಳಿಂದ ನೋಡಿ, ದಿವ್ಯಬುದ್ಧಿಯಿಂದ ಅರಿತುಕೊಂಡು ಜೀವನವನ್ನು ಪಾವನವಾಗಿಸಿಕೊಳ್ಳೋಣ. ಇಂತಹ ಜ್ಞಾನನೇತ್ರಗಳನ್ನು ಪಡೆಯಲು ಈ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ, ಪರಮಾತ್ಮನನ್ನು ಕಾಣಬೇಕೆಂಬ ತಮ್ಮ ಬಹುದಿನದ ಆಸೆಯನ್ನು ಈಡೇರಿಸಿಕೊಳ್ಳಲು ಮರೆಯದಿರಿ.

□ □

ಗ್ರಂಥಮಾರ್ಗ ಒಂದು-ನೀಲಲೋಚನೆ ಪರಿಶೀಲನೆ

—ಪ್ರೊ. ಲಲಿತಾಂಬ ವೃಷಭೇಂದ್ರಸ್ವಾಮಿ

ಧರ್ಮ ಮನುಷ್ಯನ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಾ ಬಂದಿದೆ. ಕೆಲವೊಂದು ರೀತಿಯ ನಂಬಿಕೆ, ಶ್ರದ್ಧೆಗಳನ್ನೂ, ಗೌರವದ ಭಾವನೆಗಳನ್ನೂ ಮಾನವರು ಧರ್ಮದ ಬಗ್ಗೆ ಬೆಳೆಸಿಕೊಂಡಿರುತ್ತಾರೆ. ಈ ನಂಬಿಕೆಗಳಿಗೆ. ಪೂಜ್ಯ ಭಾವನೆಗಳಿಗೆ ಶತಮಾನಗಳ ಹಿನ್ನೆಲೆಯೂ ಇರುತ್ತದೆ. ಇಂತಹ ಭಾವನೆಗಳಿಗೆ ಧಕ್ಕೆ ತರುವಂತಹ ಅಭಿಪ್ರಾಯಗಳು, ಧಾರ್ಮಿಕ ಭಾವನೆಯುಳ್ಳ ಜನರಿಗೆ ತುಂಬಾ ನೋವನ್ನುಂಟುಮಾಡುತ್ತವೆ. ಧಾರ್ಮಿಕ ಅಂಶಗಳು ಜನ-ಜೀವನದಲ್ಲಿ ಹಾಸುಹೊಕ್ಕಾಗಿ ಹಬ್ಬಿರುವುದರಿಂದ, ಯಾರಾದರೂ ಆ ಬಗ್ಗೆ ಮಾತಾಡುವಾಗ, ಅಭಿಪ್ರಾಯ ವ್ಯಕ್ತಪಡಿಸುವಾಗ ಬಹು ಎಚ್ಚರಿಕೆ ವಹಿಸಬೇಕಾಗುತ್ತದೆ. ಜವಾಬ್ದಾರಿಯುತವಾಗಿ ನಡೆಯಬೇಕಾಗುತ್ತದೆ. ಶತಮಾನಗಳಿಂದ ಬೆಳೆದು ಬಂದಿರುವ ಧಾರ್ಮಿಕ ಭಾವನೆಗಳ ಬಗ್ಗೆ ಅನವಶ್ಯವಾಗಿ ಕೈಹಾಕದಿರುವುದೇ ಮೇಲು. ಆ ಬಗ್ಗೆ ಹೇಳಬೇಕಾದುದು ಅನಿವಾರ್ಯವಾದಾಗ, ಬಹಳ ಎಚ್ಚರಿಕೆಯಿಂದ, ಸೂಕ್ತ ಹಾಗೂ ಸತ್ವಯುತ ಆಧಾರಗಳನ್ನು ಒದಗಿಸಿ, ಆ ಕ್ಷೇತ್ರದ ವಿದ್ವಾಂಸರಿಗೂ ಕೂಡ 'ಸತ್ಯ' ಎಂದು ಕಾಣಿಸಬೇಕು ಎನ್ನುವ ಮಟ್ಟದಲ್ಲಿದ್ದಾಗ ಮಾತ್ರ ಅಂಥ ಅಭಿಪ್ರಾಯ ವ್ಯಕ್ತಪಡಿಸುವುದು ಯೋಗ್ಯ.

ಆದರ್ಶ ಜೀವಿಗಳ ಆದರ್ಶ ಬದುಕು:

ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶರಣ-ಶರಣೆಯರು ದಿವ್ಯ ಬದುಕನ್ನು ಬದುಕಿ ಹೋದರು. ಆಗ ಧರ್ಮದ ಹೆಸರಿನಲ್ಲಿ ಅಂಧಶ್ರದ್ಧೆ, ಕುರುಡು ನಂಬಿಕೆ, ಸ್ವಾರ್ಥ, ಮೇಲುಕೀಳು ಭಾವನೆಗಳು, ಅಸಹಾಯಕ ಜನರ ಶೋಷಣೆ ಮುಂತಾದ ಸಾಮಾಜಿಕ ದುಷ್ಟ ಪ್ರವೃತ್ತಿಗಳು ಬೆಳೆದು, ಜೀವನ ದಾರುಣವಾಗಿತ್ತು. ಸಮಾಜದಲ್ಲಿ ಅವ್ಯವಸ್ಥೆ, ಅಶಾಂತಿ ಮನೆಮಾಡಿಕೊಂಡಿದ್ದವು. ಅಂತಹ ಸಂದರ್ಭದಲ್ಲಿ ಶೈವಬ್ರಾಹ್ಮಣ ಮನೆತನದಲ್ಲಿ ಜನ್ಮ ತಳೆದಿದ್ದ ಬಸವಣ್ಣನವರು, ಆ ಧರ್ಮದ ಅನೇಕ ಅಂಧ ಆಚಾರಗಳ ವಿರುದ್ಧ ಬಾಲಕನಿದ್ದಾಗಲೇ ಪ್ರತಿಭಟಿಸಿದರು. ದೊಡ್ಡವರಾದ ನಂತರ ಕ್ರಾಂತಿಕಾರಕ ವಿಚಾರಗಳನ್ನು ಜನರಲ್ಲಿ ಬಿತ್ತಿ, ಸಮಾಜದಲ್ಲಿ ಪಸರಿಸಿದ್ದ ದೋಷಗಳನ್ನು ಹೊಡೆದೋಡಿಸಲು ಪ್ರಯತ್ನಿಸಿದರು. ಅವರ ವಿಚಾರದ ಪ್ರಭಾವಕ್ಕೆ ಒಳಗಾಗಿ ಅನೇಕರು ಅವರ ಅನುಯಾಯಿಗಳಾಗಿ ಶರಣ-ಶರಣೆಯರೆನ್ನಿಸಿಕೊಂಡರು. ಅವರೆಲ್ಲರೂ ತಮ್ಮ ಜೀವನದಲ್ಲಿ ಕಂಡುಂಡ ಸತ್ಯವನ್ನು ಅಧ್ಯಾತ್ಮದ ಒರೆಗಲ್ಲಿಗೆ ಹಚ್ಚಿ, ನಂತರ ಅಲ್ಲಿ ಕಂಡುಕೊಂಡ ಆಧ್ಯಾತ್ಮದ ಅಂತ

ಗಳನ್ನು ವಚನ ರೂಪದಲ್ಲಿ ಬರೆದಿದ್ದಾರೆ. ಪ್ರತಿಯೊಬ್ಬರೂ ತಮ್ಮದೇ ಆದಂತಹ ಒಂದು ಅಂಕಿತವನ್ನು ಇಟ್ಟುಕೊಂಡು, ಆ ಅಂಕಿತವನ್ನು ವಚನದ ಕೊನೆಯಲ್ಲಿ ಉಪಯೋಗಿಸಿದ್ದಾರೆ. ಈ ಅಂಕಿತದ ಆಧಾರದಿಂದ ಪ್ರತಿಯೊಂದು ವಚನದ ವಚನಕಾರರು ಯಾರು ಎಂದು ಹೇಳಬಹುದು. ಅಲ್ಲದೆ ಈ ವಚನಗಳ ಮೂಲಕ ಅಂದಿನ ಸಾಮಾಜಿಕ ಸ್ಥಿತಿ-ಗತಿಗಳನ್ನೂ, ಧಾರ್ಮಿಕ ರೀತಿ-ನೀತಿಗಳನ್ನೂ, ಶರಣರ ವಿಚಾರಧಾರೆಯನ್ನೂ, ಜೀವನ ದರ್ಶನವನ್ನೂ ತಿಳಿದುಕೊಳ್ಳಬಹುದಾಗಿದೆ. ಶರಣರು ಸ್ವತಃ ಪವಿತ್ರವಾದ ಬದುಕನ್ನು ಬದುಕಿ ಮನುಜಕುಲಕ್ಕೆ ದಿವ್ಯ ಸಂದೇಶವನ್ನು ನೀಡಿ ಹೋಗಿದ್ದಾರೆ. ಅವರ ತತ್ವಗಳು ಸರ್ವಕಾಲಕ್ಕೂ ಸರ್ವರಿಗೂ ಆದರ್ಶಪ್ರಾಯವಾಗಿವೆ. ಇತ್ತೀಚೆಗೆ ಕೆಲವು ಪಾಷಂಡರು ತಮ್ಮ ಅನಿಸಿಕೆಗಳಿಗೆ ಮಹತ್ವ ಬರುವಂತೆ ಮಾಡಲು, ಅವುಗಳನ್ನು ವಚನರೂಪದಲ್ಲಿ ಬರೆದು ಶರಣರ ಅಂಕಿತಗಳನ್ನು ಉಪಯೋಗಿಸಿಕೊಂಡು, ಮೂಲ ವಚನಗಳ ಜೊತೆ ಸೇರಿಸಿಬಿಟ್ಟಿದ್ದಾರೆಂಬ ಸಂಶಯವೂ ಇದೆ. (ಆದುದರಿಂದ ವಚನಗಳನ್ನು ಸರಿಯಾಗಿ ಪರಿಷ್ಕರಿಸಿ ನೈಜವಾದವುಗಳು ಯಾವುವು, ಮಧ್ಯೆ ಸೇರಿಸಲ್ಪಟ್ಟ ವಚನಗಳಾವುವು ಎಂದು ವಿಂಗಡಿಸುವ ಕಾರ್ಯ ವಿದ್ವಾಂಸರಿಂದ ಆಗಬೇಕಾದುದು ಆವಶ್ಯವಾಗಿದೆ).

ವಚನಗಳ ಅರ್ಥೈಸುವಿಕೆ:

ಒಟ್ಟಿನಲ್ಲಿ ಶರಣರ ಜೀವನವನ್ನು ಅರ್ಥಮಾಡಿಕೊಳ್ಳಲು ವಚನಗಳೇ ಮುಖ್ಯ ಆಧಾರ. ಆದರೆ ಎಲ್ಲ ವಚನಗಳೂ ಎಲ್ಲರೂ ಅರ್ಥಮಾಡಿಕೊಳ್ಳುವಷ್ಟು ಸುಲಭವಾಗಿಲ್ಲ. ಕೆಲವೊಂದು ಸರಳ ವಚನಗಳನ್ನೇನೋ ಎಲ್ಲರೂ ಅರ್ಥಮಾಡಿಕೊಳ್ಳಬಹುದು. ಆದರೆ ಒಗಟಿನಂತಿರುವ, ರೂಪಕಗಳನ್ನು ಉಪಯೋಗಿಸಿ ರಚಿಸಿರುವ, ಸಾಧಾರಣ ಶಬ್ದಗಳಿಗೆ ಆಧ್ಯಾತ್ಮದ ಹಿನ್ನೆಲೆಯನ್ನು ಒಳಗೊಂಡಿರುವ ವಚನಗಳು. (ಉದಾ: ಸೋದರಿಯರೈವರು ಮೊರೆಗೆಟ್ಟು ಹೆಂಡಿರಾದರೆನಗೆ=ಜೊತೆಯಲ್ಲೇ ಹುಟ್ಟುವ ಪಂಚೇಂದ್ರಿಯಗಳನ್ನು ಸಂಪೂರ್ಣವಾಗಿ ನನ್ನ ಹತೋಟಿಗೆ ತಂದುಕೊಂಡೆನು) ಸಾಧಾರಣರಾದವರಿಗೆ ಅರ್ಥಮಾಡಿಕೊಳ್ಳಲಾಗುವುದಿಲ್ಲ. ಇವುಗಳನ್ನು ಅರ್ಥಮಾಡಿಕೊಳ್ಳಲು ಆಧ್ಯಾತ್ಮದ ಹಿನ್ನೆಲೆ ಇರಬೇಕು; ಶರಣರ ಬಗ್ಗೆ ಸದ್ಭಾವನೆ ಬೇಕು, ವಚನ ಸಾಹಿತ್ಯವನ್ನು ತಪಸ್ಸಿನಂತೆ ಅಭ್ಯಾಸಮಾಡಬೇಕು. ಇಲ್ಲದಿದ್ದರೆ, ಅಸಾಧ್ಯ. ಅವುಗಳನ್ನು ಸರಿಯಾಗಿ ವ್ಯಾಖ್ಯೆ ಮಾಡಬೇಕಾದರೆ ಭಾಷೆಯ ಹಿನ್ನೆಲೆ ಶರಣ-ಶರಣೆಯರ ಅಭಿವ್ಯಕ್ತಿಯ ರೀತಿ, ಶರಣರ ಗುರಿ ಇವುಗಳ ಸ್ಪಷ್ಟ ಕಲ್ಪನೆಯೂ ಸಹ ಆವಶ್ಯಕ. ಆಗ ಮಾತ್ರ ಸರಿಯಾದ ರೀತಿಯಲ್ಲಿ ವಚನಗಳನ್ನು ಅರ್ಥೈಸಲು ಸಾಧ್ಯವಾಗಬಹುದು. ಉದಾಹರಣೆಗೆ, ಅಲ್ಲಮ ಪ್ರಭುಗಳು ಮುಕ್ತಾಯಕ್ಕ ತನ್ನ ಅಣ್ಣ ಅಜಗಣ್ಣನು ಐಕ್ಯನಾದಾಗ, ವಿಹ್ವಲಳಾಗಿ ಪ್ರಲಾಪಿಸುತ್ತಿರುವಂತಹ ಸಂದರ್ಭದಲ್ಲಿ ಹೇಳಿರಬಹುದಾದಂತಹ ವಚನವನ್ನು ತೆಗೆದುಕೊಳ್ಳಬಹುದು.

ಶರಣರಿಗೆ ಮರಣವೇ ಮಹಾನವಮಿ. ಸಾವನ್ನು, ಲಿಂಗದಲ್ಲಿ ಒಂದಾದಂತೆ ಎಂದು ಬಗೆಯುವರು. ಹೀಗಿರುವಾಗ ಶರಣೆಯಾದ ಮುಕ್ತಾಯಕ್ಕ ಶರಣರಿಗೆ ಸಹಜ

ವಲ್ಲದ ರೀತಿಯಲ್ಲಿ, ಅಜಗಣ್ಣನು ಐಕ್ಯವಾದ ಬಗೆಗೆ ಅತೀವ ದುಃಖಿತಳಾಗಿರುತ್ತಾಳೆ. ಆ ಸಂದರ್ಭದಲ್ಲಿ ಅವರಿಬ್ಬರ ನಡುವೆ ನಡೆದಿರಬಹುದಾದ ಸಂವಾದದಲ್ಲಿ ಮುಕ್ತಾಯಕ್ಕನು ಅಲ್ಲಮಪ್ರಭುವನ್ನು ನೀನಾರೆಂದು ಕೇಳಿದಾಗ,

> 'ನಾ ನಿನ್ನ ಭಾವನಲ್ಲಯ್ಯನು
> ನೀ ನನಗೆ ನೆಗೆವೆಣ್ಣು ;
> ಸೋದರಿಯರೈವರು ಮೊರೆಗೆಟ್ಟು ಹೆಂಡಿರಾದರೆನಗೆ'

ಎಂಬ ವಚನದ ಅರ್ಥವನ್ನು 'ನಾನು ನಿನಗೆ ಭಾವನಾಗಬೇಕು ನೀನು ನನಗೆ ನೆಗೆಣ್ಣಿ, ನನ್ನ ಒಡಹುಟ್ಟಿದವರು ನನ್ನ ಬಲವಂತಕ್ಕೆ ಮಣಿದು, ಅಸಹಾಯಕರಾಗಿ ಹೆಂಡತಿಯರಾದರು ಎಂದು ಹೇಳಿದನೆಂದು ಭಾವಿಸಿದರೆ ಎಂಥ ಅನರ್ಥವಾದೀತು! ನಾನು ನಿನ್ನ ಒಡಹುಟ್ಟಿದವರು ಆದ ಪಂಚೇಂದ್ರಿಯಗಳನ್ನು ಅಂಕಿತದಲ್ಲಿಟ್ಟುಕೊಂಡಿರುವೆನಾಗಿ (ಪಂಚೇಂದ್ರಿಯಗಳ ಗಂಡನಾಗಿ) ನಿನ್ನ ಭಾವನಾಗಿದ್ದೇನೆ. ನೀನೂ ಶರಣೆಯಾಗಿ ಲಿಂಗವೇ ಪತಿಯಾದವಳೂ, ನಾನೂ ಸಹ ಅದೇ ಮಾರ್ಗದವನಾದುದರಿಂದ, ನೀನು ನನಗೆ ನೆಗೆವೆಣ್ಣು (ನೆಗೆಣ್ಣಿಯಾಗುವಿ). ನನ್ನ ಜೊತೆಯಲ್ಲೇ ಹುಟ್ಟಿದ ಪಂಚೇಂದ್ರಿಯಗಳನ್ನು ನಾನು ಅಂಕಿತದಲ್ಲಿಟ್ಟುಕೊಂಡಿರುವುದರಿಂದ ಪಂಚೇಂದ್ರಿಯಗಳು ತಮ್ಮ ಜಾಲವನ್ನು ನನ್ನ ಮೇಲೆ ಬೀಸದೆ, ಬೇರೆ ಮಾರ್ಗ ಕಾಣದೆ ನನ್ನ ಅಂಕಿತದಲ್ಲಿ ಉಳಿದಿರುವರು (ಹೆಂಡಿರಾದವರು–ಹನ್ನೆರಡನೆಯ ಶತಮಾನದಲ್ಲಿ ಹೆಂಡಿರು ಎಂದರೆ ಅಂಕಿತದಲ್ಲಿರುವವರು ಎಂಬರ್ಥ–ಸಾಮಾಜಿಕವಾಗಿ ಆಗ ಮಹಿಳೆಯ ಸ್ಥಿತಿ ಹಾಗೆಯೇ ಇತ್ತು). ಪಂಚೇಂದ್ರಿಯಗಳ ಅಧೀನಳಾಗಿ ದುಃಖಿಸುತ್ತಿರುವ ಮುಕ್ತಾಯಕ್ಕ, ಅವುಗಳ ಸೋದರಿಯಾಗಿಯೇ ಇದ್ದಾಳೆ. ಅವುಗಳನ್ನು (ಮುಕ್ತಾಯಕ್ಕನ ಸೋದರಿಯರನ್ನು) ಇವನು ಅಂಕಿತದಲ್ಲಿ ತಂದುಕೊಂಡುದರಿಂದ (ಅವುಗಳ ಗಂಡನಾದುದರಿಂದ) ಮುಕ್ತಾಯಕ್ಕನಿಗೆ ಅಲ್ಲಮಪ್ರಭು ಸೋದರಿಯರ ಗಂಡನಾಗಿ "ಭಾವ"ನಾಗುತ್ತಾನೆ ಎಂದು ಅರ್ಥೈಸಬಹುದು. ಒಡಹುಟ್ಟಿದ ತಂಗಿಯರೇ, ತನಗೆ ಹೆಂಡಿರಾದರೆಂಬ ವಾಚ್ಯಾರ್ಥವನ್ನು ಮಾತ್ರ ಗಮನಿಸಿದರೆ, ಅನಾಹುತ, ಶರಣರಿಗೆ ದ್ರೋಹ. ಅದು ಬಿಟ್ಟು ಅಲ್ಲಮಪ್ರಭುವು (ಮೇಲ್ನೋಟಕ್ಕೆ ಆಗುವ ಅರ್ಥವನ್ನೇ ನಿಜವೆಂದು ಪ್ರತಿಪಾದಿಸಿ (ತನ್ನ ಸೋದರಿಯರನ್ನು ಬಲವಂತವಾಗಿ ಹೆಂಡಿರನ್ನಾಗಿ ಮಾಡಿಕೊಂಡನೆಂದು ಹೇಳಿದಾಗ ಎಂತಹ ಅಪರಾಧವಾಗಬಹುದು? ಹೀಗೆ ವಚನಗಳು ಮೇಲ್ನೋಟಕ್ಕೆ ಕಾಣುವ ವಚನಕ್ಕೆ ಭಿನ್ನವಾದ ಅರ್ಥವನ್ನು ಒಳಗೊಂಡಿವೆ. ಅಂತಹುಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಮೊದಲು ಬೆಳೆಯಿಸಿಕೊಳ್ಳಬೇಕು. ಇಲ್ಲದೆ ಅವುಗಳಿಗೆ ಅಪಾರ್ಥಕೊಟ್ಟು, ತನಗೆ ಅಭಿವ್ಯಕ್ತಿ ಸ್ವಾತಂತ್ರ್ಯವಿದೆಯೆಂದು ಬೆಂಬಲಿಗರ ಬೆಂಬಲದ ಮೂಲಕ ಸಾಧಿಸಹೋದರೆ ಅದು ಶರಣರಿಗೆ ಬಗೆದ ಮಹಾ ಅಪಚಾರವಾಗುತ್ತದೆ. ವಚನವು ಅರ್ಥವಾಗದಿದ್ದಲ್ಲಿ, ಆ ಕ್ಷೇತ್ರದಲ್ಲಿ ಪರಿಣಿತರಾದವರೆಲ್ಲ ಕೂಡಿ, ಅದನ್ನು ಚರ್ಚಿಸಿ, ಆಧಾರಗಳ ಒರೆಗೆ ಹಚ್ಚಿ ನಂತರ ಸರ್ವಸಮ್ಮತವಾದ ನಿರ್ಣಯಕ್ಕೆ

ಬರುವುದು ವಚನಗಳ ವಾಚ್ಯ–ವ್ಯಂಗ್ಯ. ವಿದ್ವಾಂಸರ ಲಕ್ಷಣ. ಮತ್ತೊಂದು ವಚನವನ್ನು ಗಮನಿಸೋಣ ಬಸವಣ್ಣನವರ ಒಂದು ವಚನ ಹೀಗಿದೆ.

ಚನ್ನಯ್ಯನ ಮನೆಯ ದಾಸನ ಮಗನು
ಕಕ್ಕಯ್ಯನ ಮನೆಯ ದಾಸಿಯ ಮಗಳು
ಇವರಿಬ್ಬರು ಹೊಲದಲ್ಲಿ ಬೆರಣಿಗೆ ಹೋಗಿ ಸಂಗವ ಮಾಡಿದರು.
ಇವರಿಬ್ಬರಿಗೆ ಹುಟ್ಟಿದ ಮಗ ನಾನು
ಕೂಡಲಸಂಗಮದೇವ ಸಾಕ್ಷಿಯಾಗಿ.

ಇದರ ಶಬ್ದದ ಅರ್ಥಕ್ಕನುಗುಣವಾಗಿ, ಬಸವಣ್ಣನೇ ತನ್ನ ತಂದೆ ಯಾರು, ತಾಯಿ ಯಾರು ಎಂಬುದನ್ನು ಈ ವಚನದಲ್ಲಿ ಹೇಳಿಕೊಂಡಿದ್ದಾನಾಗಿ ಚನ್ನಯ್ಯನ ಮನೆಯ ದಾಸನ ಮಗ ಮತ್ತು ಕಕ್ಕಯ್ಯನ ಮನೆಯ ದಾಸಿಯ ಮಗಳೇ ಆತನ ತಂದೆತಾಯ್ಗಳೆಂದು ತೀರ್ಮಾನಕ್ಕೆ ಬರಬಹುದೆ? ಇಂತಹ ತೀರ್ಮಾನಗಳನ್ನು ವಿದ್ವಾಂಸರಾದವರು ಬರೆದಿಟ್ಟುಬಿಟ್ಟರೆ, ವಚನಗಳ ಆಳವನ್ನು ಅರಿಯಲಾರದ ಸಾಮಾನ್ಯ ಜನರನ್ನು ತಪ್ಪುದಾರಿಗೆ ಎಳೆದಂತಾಗುವುದಿಲ್ಲವೆ? ಶಿವಶರಣರ ವಚನಗಳಲ್ಲಿ ಬಹಳ ಆಳವಾದ ಅರ್ಥವಿರುತ್ತದೆ. ಹಾಗಿರುವಾಗ ನಾವು ದುಡುಕಿನಿಂದ ಅರ್ಥೈಸಿದರೆ ಅಕ್ಷಮ್ಯ ಅಪರಾಧವಾಗುತ್ತದೆ–ಈಗ ನೀಲಲೋಚನೆಯ ವಚನವನ್ನೇ ಪರಿಶೀಲಿಸೋಣ. ಆಕೆಯ ಒಂದು ವಚನ ಹೀಗಿದೆ–

ಕಾವಲ ಕಾದಿದ್ದವರು ಕಾವಲಮೀರಿ
ಎನ್ನ ಸಂಗವನೆ ಮಾಡಿದವರು ಬಸವಯ್ಯ.
ಎನ್ನ ಸಂಗವ ಮಾಡಿದವರ, ಎನ್ನಯ್ಯ ಬಸವಯ್ಯ ಕಂಡು
ಎನ್ನ ತನುವಿನಲ್ಲಿಯೇ ಅಡಗಿದನಯ್ಯಾ,
ಸಂಗಯ್ಯಾ, ಸ್ವಯಲಿಂಗಿಯಾದೆನಯ್ಯಾ!!

ಈಗ ನೀಲಾಂಬಿಕೆ ವಿರಹತಾಪದಿಂದ ದುಃಖಿತಳಾಗಿದ್ದಳೆಂಬ ತೀರ್ಮಾನಕ್ಕೆ ಬಂದಿರುವ ವಿದ್ವಾಂಸರಂತಹವರು, ಈ ವಚನ ಓದಿ 'ಆಕೆಯ ಕಾವಲನ್ನು ಕೆಲವರು ಕಾಯುತ್ತಿದ್ದರು, ಅವರು ಕಾವಲು ಕಾಯುವುದನ್ನು ಬಿಟ್ಟು, ಆಕೆಯ ಸಂಗ ಮಾಡಿದರು. ಅದನ್ನು ಬಸವಣ್ಣನು ನೋಡಿ, ಶಿಕ್ಷಿಸಿದನು. ಆಗ ಆಕೆ ಭಗವಂತನ ಮೊರೆ ಹೊಕ್ಕಳೆಂದು ಅರ್ಥೈಸಿ, ಆ ಅರ್ಥಕ್ಕೆ ಈ ವಚನವೇ ಆಧಾರ ಎಂದರೆ, ಆಕೆಯ ಬಗ್ಗೆ ಅಪಾರ್ಥವಾಗುವದು ಸಹಜವಲ್ಲವೇ? ವಚನಗಳ ಅಭ್ಯಾಸ ಮಾಡಿದ ಅನುಭವವಿದ್ದವರು ಇಲ್ಲಿ ಕಾವಲ ಕಾದಿದ್ದವರು ಎಂದರೆ, ಮನುಷ್ಯನ ಮನಸ್ಸು ತಪ್ಪು ದಾರಿಗೆ ಹೋಗುವಂತೆ ಪ್ರೇರೇಪಿಸುವಂತಹ ಸಂದರ್ಭದಲ್ಲಿ, ನೀತಿ, ಜ್ಞಾನ, ವಿವೇಕ, ಆಚಾರ ವಿಚಾರಗಳು ಮನಸ್ಸನ್ನು ಎಚ್ಚರಗೊಳಿಸಿ, ತಪ್ಪು ಮಾಡದಂತೆ ಕಾಯುತ್ತವೆ ಎಂದರ್ಥ. ಇಲ್ಲಿ ಜ್ಞಾನ, ವಿವೇಕ, ನೀತಿ, ಮೌಲ್ಯ ಇವುಗಳೇ ಕಾವಲು ಕಾಯುವವರು. ಸಾಧಾರಣ

ಮಟ್ಟದಲ್ಲಿ ಮನುಷ್ಯ ಇದ್ದಾಗ, ಅವನಲ್ಲಿ ಕೆಟ್ಟ ಭಾವನೆಗಳು ಉದಯವಾಗುವುದು. ಆಗ ಉತ್ತಮ ಗುಣಗಳು ರಕ್ಷಿಸುತ್ತವೆ. ಆದರೆ ನೀತಿಯು ಸ್ವರೂಪವೇ ಆದ ಬಸವಣ್ಣನವರ ಬೋಧನೆಯ, ಜೀವನದ, ತತ್ವಗಳ ಪ್ರಭಾವಕ್ಕೆ ಒಳಗಾದ ಮೇಲೆ, ನೀಲಾಂಬಿಕೆ ಕೆಟ್ಟ ವಿಚಾರಗಳು ಮನದಲ್ಲೂ ಸುಳಿಯದಂತಹ ವ್ಯಕ್ತಿತ್ವವನ್ನು ಎಂದರೆ ಎಲ್ಲಾ ಸದ್ಗುಣಗಳ ಸ್ವರೂಪವೇ ಆದಾಗ (ಕಾವಲ ಕಾದಿದ್ದವರು ಕಾವಲ ಮೀರಿ ಎನ್ನ ಸಂಗವನೇ ಮಾಡಿದರು) "ಅದನ್ನು ಗಮನಿಸಿದ ಬಸವಣ್ಣನು ಸಂತೋಷದಿಂದ ಮೆಚ್ಚಿ, ನಾನು ಬೇರೆ, ಅವನು ಬೇರೆ ಎಂಬ ಭೇದವನೆ ಮರೆತು ನನ್ನಲ್ಲೆ ಒಂದಾದನು" ಎಂಬ ಅರ್ಥ ಇಲ್ಲಿದೆ. 'ಆಕೆ ಬಸವಣ್ಣನನ್ನೇ ಸಂಗಯ್ಯನೆಂದು ತಿಳಿದುದ್ದರಿಂದ, ಆ ಸಂಗಯ್ಯ ತನ್ನ ತನುವಿನಲ್ಲೇ ಅಡಗಿದುದರಿಂದ, ಸ್ವಯಲಿಂಗಿಯಾದೆನಯ್ಯಾ' ಎಂಬ ಅರ್ಥ ಪಡೆಯಬಹುದಾಗಿದೆ. ಆ ತಾಯಿ, ಪತಿಯಾದ ಬಸವಣ್ಣನನ್ನು 'ನನ್ನಯ್ಯ ಬಸವಯ್ಯ' ಎನ್ನುತ್ತಾಳೆ. ಅನೇಕ ವಚನಗಳಲ್ಲಿ ಸಂಗಯ್ಯ–ಬಸವಯ್ಯ ಇಬ್ಬರೂ ಒಂದೇ ಎಂಬ ಭಾವ ವ್ಯಕ್ತಪಡಿಸಿದ್ದಾಳೆ. ಈ ಮಟ್ಟದ ವಿಚಾರಧಾರೆಯಿಂದ ಆಕೆಯ ಆಧ್ಯಾತ್ಮ ಸಾಧನೆ ಉನ್ನತ ಮಟ್ಟದ್ದಿತ್ತು ಎಂಬ ತಿಳಿವನ್ನು ನಾವು ಪಡೆಯಬಹುದಾಗಿದೆ. ಆ ಶರಣೆ ಸಾಮಾನ್ಯ ಮಡದಿಯ ಮಟ್ಟವನ್ನು ಮೀರಿ, ಎತ್ತರದ, ಅತೀ ಎತ್ತರದ ಆಧ್ಯಾತ್ಮದ ಬದುಕನ್ನು ಬದುಕುತ್ತಿದ್ದಳು. ಅಂತಹ ದಿವ್ಯ ಬದುಕನ್ನು ಬದುಕಿದ ಆ ಮಹಿಮಾನ್ವಿತಳ ಬಗ್ಗೆ ವಿಕೃತವಾಗಿ ವಿಚಾರ ಮಾಡುವದು ಸರಿಯಲ್ಲ.

ಮಾರ್ಗ–೧ರ ಕುವಿಚಾರಕ್ಕೆ ಕ್ಷಕಿರಣ:

ಈಚೆಗೆ ಬಿಡುಗಡೆಯಾಗಿರುವ ಮಾರ್ಗ ೧ ಗ್ರಂಥದಲ್ಲಿ ಶಿವಶರಣೆ ನೀಲಾಂಬಿಕೆಯನ್ನು ಕುರಿತ ಲೇಖನಗಳು ಪ್ರಕಟವಾಗಿವೆ. ಅದರಲ್ಲಿ ಆಕೆಯ ಬಗ್ಗೆ ಕೆಲವು ಉತ್ತಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲಾಗಿದೆ. ಆದರೆ ಜೊತೆಯಲ್ಲಿ ಆ ಮಹಾಶಿವಶರಣೆಯ ವ್ಯಕ್ತಿತ್ವಕ್ಕೆ ಕುಂದು ಬರುವಂತಹ ಮಾತುಗಳೂ ಬರೆಯಲ್ಪಟ್ಟಿವೆ. ಈ ಗ್ರಂಥದಲ್ಲಿ ನೀಲಾಂಬಿಕೆಯ ಬಗ್ಗೆ ಬರೆಯುವಾಗ–

'ಇಲ್ಲಿಯ ಬಹಳಷ್ಟು ವಚನಗಳಲ್ಲಿ ಬಸವಣ್ಣನ ಅಗಲಿಕೆಯ ಆರ್ತನಾದ ಪ್ರಧಾನವಾಗಿ ಕೇಳಿಸುತ್ತದೆ.'

'ಬಹಳಷ್ಟು ವಚನಗಳಲ್ಲಿ ಬಸವನ ಅಗಲಿಕೆಯ ಧ್ವನಿ ಕೇಳಿ ಬರುವುದಕ್ಕೂ ಬೇರೊಂದು ಕಾರಣವಿರಬೇಕು. ಅದು ಬಹುಶಃ ಅವಳಿಗೆ ನಡುವಯಸ್ಸಿನಲ್ಲಿಯೇ ಗಂಡನ ಸಂಬಂಧ ತಪ್ಪಿಹೋದುದಾಗಿರಬೇಕು.'

'ಅವಳು ಬಸವನ ಅಗಲಿಕೆಯನ್ನು ಜೀವನದುದ್ದಕ್ಕೂ ಅನುಭವಿಸಿರಬಹುದು. ದಾಂಪತ್ಯಾತೀತ ದಿವ್ಯ ಬದುಕಿನ ಧ್ವನಿಯಾದ ಇವಳ ವಚನಗಳಲ್ಲಿ ಈ ಮಾನವ ಸಹಜ ವಿರಹ ನುಗ್ಗಿ ಬಂದು ನಿಂತಿರಬಹುದು.'

'ಇತ್ಯಾದಿ ವಚನಗಳಲ್ಲಿ ಅವಳ ಪತಿತ್ಯಕ್ತ ಜೀವನದ ಲೌಕಿಕ ನೋವು-ಅಲೌಕಿಕ ಸಿದ್ಧಿಗಳು ಕೇಳಿಸುತ್ತವೆ. ಆದುದರಿಂದ ಅವಳ ವಚನಗಳಲ್ಲಿ ಬಹಳಷ್ಟು ಸಲ ಸ್ಪಂದಿಸುವ ಬಸವನ ಅಗಲಿಕೆಯ ಧ್ವನಿ ಆತನ ನಿಧನದ ಅಳಲಾಗಿರದೆ, ನಡುವಯಸ್ಸಿನಲ್ಲಿಯೇ ಅವನಿಂದ ಅಗಲಿದ ವ್ಯಥೆಯಾಗಿರಬಹುದೆನ್ನಿಸುತ್ತದೆ.'

'ಇಲ್ಲಿ ನೀಲಲೋಚನೆಯ ವ್ಯಕ್ತಿತ್ವದಲ್ಲಿ ಶರಣ ತತ್ವಕ್ಕೆ ಇನ್ನೂ ಮಾಗದ ಘಟ್ಟವನ್ನು ಗುರುತಿಸಬಹುದು.'

'ಸಾಮಾನ್ಯವಾಗಿ ಇವಳ ಎಲ್ಲ ವಚನಗಳ ಒಡಲಲ್ಲಿ ಬಸವನ ಅಗಲಿಕೆಯ ಆಲಾಪ ಧ್ವನಿ ಕೇಳಿಸುವುದಕ್ಕೆ ಈ ಭೋಗತ್ಯಕ್ತ ಜೀವನವೇ ಕಾರಣವಾಗಿರಬಹುದು.'

ಆ ಲೇಖನದಲ್ಲಿರುವ ಈ ಮೇಲೆ ಹೇಳಿದ ಸಾಲುಗಳು ನೀಲಲೋಚನೆ ಬಸವಣ್ಣನ ವಿರಹದಿಂದ ಪ್ರಲಾಪಿಸುತ್ತಿದ್ದಳು. ಅತೀ ಸಾಮಾನ್ಯ ಮಹಿಳೆಯಂತೆ, ಆಧ್ಯಾತ್ಮ ಜೀವನದ ನೆರಳೂ ಬೀಳದವಳಂತೆ, ಬಸವೇಶ್ವರನ ತತ್ವಗಳ ಪ್ರಭಾವಕ್ಕೆ ಒಳಗಾಗದ ಪಂಚೇಂದ್ರಿಯಗಳ ಹಿಡಿತಕ್ಕೆ ಒಳಗಾಗಿ ಗಂಡನ ಸಂಬಂಧಕ್ಕಾಗಿ ಹಾತೊರೆದಿದ್ದಳು. ಅದು ದೊರೆಯದಾಗ ಆ ಅಳಲನ್ನು ವಚನ ರೂಪದಲ್ಲಿ ಬರೆದು ತೋಡಿಕೊಂಡಿದ್ದಾಳೆ ಎಂಬ ಅರ್ಥ ಕೊಡುತ್ತವೆ, ಎಂದರೆ ಆ ಮಹಾಶಿವಶರಣೆ ಬಸವ ಪಥದ ಪ್ರವಾಹದಿಂದ ಬೇರಾಗಿ, ತನ್ನ ವಿರಹದ ನೋವನ್ನು ತೋಡಿಕೊಳ್ಳಲು ವಚನ ಬರೆದಳು. ಆ ವಚನಗಳನ್ನು ತಾಡೋಲೆಗಳಲ್ಲಿ ಬರೆದು ಶರಣರು ಮಾನವ ಕುಲದ ಉದ್ಧಾರಕ್ಕಾಗಿ ಉಳಿಸಿ ಹೋಗಿದ್ದಾರೆ ಎಂದು ತಿಳಿಯಬೇಕಾಗುತ್ತದೆ. ಇಂತಹ ತರ್ಕವನ್ನು ಯಾವ ವಿದ್ವಾಂಸನಾದರೂ ಒಪ್ಪಲು ಸಾಧ್ಯವೆ ಎಂಬುದು ಮೂಲ ಪ್ರಶ್ನೆ. ಆಕೆಯ ವಚನಗಳಲ್ಲಿರುವ ಆಧ್ಯಾತ್ಮ ವಿಚಾರಗಳನ್ನು ಗುರುತಿಸದೆ, ಈ ರೀತಿಯಲ್ಲಿ ಅರ್ಥೈಸಿರುವುದು ಲೇಖಕರ ವಿಚಾರದ ರೀತಿಯನ್ನು ಎತ್ತಿ ತೋರಿಸುತ್ತದೆ.

ನೀಲಾಂಬಿಕೆಯ ನಿಲುವು:

ನೀಲಾಂಬಿಕೆ ನೂರಿಪ್ಪತ್ತೈದು ವಚನಗಳನ್ನು ಬರೆದಿದ್ದಾಳೆ. ಅವರಲ್ಲಿ ಸುಮಾರು ನಾಲ್ವತ್ತು ವಚನಗಳಲ್ಲಿ ಬಸವಣ್ಣನು ಐಕ್ಯನಾದ ಎಂಬ ಸಂಗತಿಯನ್ನು ನೇರವಾಗಿ ಪ್ರಸ್ತಾಪಿಸಿದ್ದಾಳೆ. ಅದರಲ್ಲಿ 'ಬಸವಣ್ಣ ಬಯಲಾದ ಬಳಿಕ', 'ಬಸವಣ್ಣ ಸಂಗಯ್ಯನಲ್ಲಿ ಒಂದಾದ ಬಳಿಕ', 'ಬಸವಣ್ಣನ ರೂಪು ನಿರೂಪಾದ ಬಳಿಕ', 'ಬಸವನ ಶಬ್ದ ನಿಶ್ಶಬ್ದವಾದ ಬಳಿಕ' ಮುಂತಾದ ಮಾತುಗಳಲ್ಲಿ ಬಸವಣ್ಣ ಐಕ್ಯನಾದ ಅಂಶ ತಿಳಿಸುತ್ತಾಳೆ. ಇಷ್ಟೇ ಅಲ್ಲ, ಆಕೆಯ ಕೆಲ ಮಾತುಗಳಿಂದ ಬಸವಣ್ಣನವರು ಎಲ್ಲಿ, ಹೇಗೆ ಐಕ್ಯರಾದರು ಎಂಬುದು ಯಾರಿಗೂ ಗೊತ್ತಾಗಿರಲಿಲ್ಲ ಎಂದು ಸಹ ಅನ್ನಿಸುತ್ತದೆ. ಈ ಅಂಶ ಆಕೆಯಲ್ಲಿ ದುಃಖ ಉಂಟುಮಾಡಿರಬಹುದು. ತನ್ನ ದುಃಖವನ್ನು ತೋಡಿಕೊಳ್ಳುವಾಗ ಬಸವಣ್ಣನವರು ಮಾಡಿದ ಸಾಧನೆಗಳನ್ನು ಕೊಂಡಾಡುವುದರ ಮೂಲಕ, ತೋಡಿಕೊಂಡಿ

ದ್ದಾಳೆಯೇ ಹೊರತು ವೈಯಕ್ತಿಕ ಆಸೆಗಳನ್ನು ವ್ಯಕ್ತಪಡಿಸಿಲ್ಲ. ಆತನು ಒಲಿದಾದ ಬಗೆ, ಚನ್ನಬಸವಣ್ಣನಿಗಲ್ಲದೆ ಬೇರಾರಿಗೂ ಗೊತ್ತಿಲ್ಲವೆಂದೂ ಹೇಳಿದ್ದಾಳೆ. ಈ ರೀತಿಯ ವಚನಗಳಲ್ಲಿ ಲೇಖಕರು 'ವಿರಹ ವೇದನೆ' ಕಂಡಿರುವುದು ಆಶ್ಚರ್ಯವನ್ನುಂಟುಮಾಡುತ್ತದೆ. ಇದು ಪೂರ್ವಗ್ರಹ ಪೀಡಿತವಾದ ಅಭಿಪ್ರಾಯವಲ್ಲದೆ ಬೇರಲ್ಲ. ಬಸವಣ್ಣನವರ ಅತ್ಯಂತ ಉನ್ನತ ವಿಚಾರದ ಹಿನ್ನೆಲೆಯಲ್ಲಿ ಬದುಕಿದ ಆಕೆ, ಬಸವಣ್ಣನವರ ಆಧ್ಯಾತ್ಮಿಕ ತತ್ವಗಳನ್ನು ಅರಗಿಸಿಕೊಂಡು, 'ವಿಚಾರ ಪತ್ನಿ'ಯಾಗಿ ಪತಿಯ ನೆರಳಿನಂತೆ ಬಾಳಿದ್ದಾಳೆ. ಅವರ ಧಾರ್ಮಿಕ–ಸಾಮಾಜಿಕ ಕೆಲಸಗಳಲ್ಲಿ ಸಹಕಾರಿಯಾಗಿ ಬಾಳಿದ ಸಹಧರ್ಮಿಣಿ ಆಕೆ. ಬಸವಣ್ಣನವರ ಕಾರ್ಯಗಳಲ್ಲಿ ಹೆಗಲಿಗೆ ಹೆಗಲು ಕೊಟ್ಟು, ಹೆಜ್ಜೆಯಲ್ಲಿ ಹೆಜ್ಜೆ ಹಾಕಿ ನಡೆದವಳು. ಬಸವನೇ ಸಂಗಯ್ಯ–ಸಂಗಯ್ಯನೇ ಬಸವನೆಂದು ಬಗೆದವಳು. ತನ್ನ ಅರಿವಿಗೆ, ಬದುಕಿಗೆ ಬಸವಣ್ಣನ ಬೋಧನೆಯೇ ಕಾರಣವೆನ್ನುತ್ತಾಳೆ. ಆತನೇ ತನಗೆ ಗುರು, ಲಿಂಗ, ಜಂಗಮ, ತಾಯಿ, ತಂದೆ, ಮಗ, ಜಗ, ಶಕ್ತಿ–ಮುಕ್ತಿ ಎಲ್ಲ ಎಂದು ನಾನಾ ರೀತಿಯಿಂದ ಬಸವಣ್ಣನ ಬಗೆಗೆ ಪ್ರೀತಿ, ಗೌರವ, ಮೆಚ್ಚುಗೆಗಳನ್ನು ವ್ಯಕ್ತಪಡಿಸಿದ್ದಾಳೆ. ಶರಣರೆಲ್ಲಾ ಶಿವನನ್ನು ಕೊಂಡಾಡಿದರೆ ಈಕೆ ಶಿವನೇ ಇವನಾಗಿರುವ ಬಸವಣ್ಣನನ್ನು ಕೊಂಡಾಡಿದ್ದಾಳೆ. ಹನ್ನೆರಡನೆಯ ಶತಮಾನದ ಬಸವ ಪ್ರವಾಹದಲ್ಲಿದ್ದ ಸಾಮಾನ್ಯ ಶರಣರೂ ಸಹ ಆಧ್ಯಾತ್ಮಕ್ಕೆ ಒಳಗಾಗಿದ್ದರೆಂಬುದು ವಚನಗಳನ್ನೋದಿದವರಿಗೆ ಗೋಚರವಾಗುತ್ತದೆ. ಅಲ್ಲದೆ ಅಕ್ಕಮಹಾದೇವಿ, ಬೊಂತಾದೇವಿ ಮುಂತಾದ ಮಹಿಳೆಯರು ಅತೀ ಚಿಕ್ಕ ವಯಸ್ಸಿನಲ್ಲಿಯೇ ವೀರ–ವಿರಾಗಿಣಿಯರಾಗಿ ಬದುಕಿದರು. ಆಯ್ದಕ್ಕಿ ಲಕ್ಕಮ್ಮ, ಮೋಳಿಗೆ ಮಹಾದೇವಿ, ಹಡಪದ ಲಿಂಗಮ್ಮ, ಗಂಗಾಂಬಿಕೆ, ನೀಲಾಂಬಿಕೆ ಮುಂತಾದ ಶರಣೆಯರು, ದಾಂಪತ್ಯ ಜೀವನದಲ್ಲಿ ಒಮ್ಮೊಮ್ಮೆ ತಮ್ಮ ಪತಿಗಳಿಗಿಂತಲೂ ಉನ್ನತ ಮಟ್ಟದ ಆಧ್ಯಾತ್ಮದ ಅರಿವನ್ನು ತೋರಿಸಿದ್ದಾರೆ. ಇಂತಹವರ ಬಗೆಗೆ, ಅವರುಗಳು ತಮ್ಮ ಗಂಡಂದಿರೊಡನೆ ಲೈಂಗಿಕ ಸಂಬಂಧ ಇಟ್ಟುಕೊಂಡಿದ್ದರೋ ಇಲ್ಲವೋ ಎಂಬ ಕಲ್ಪನೆ ಮಾಡುವುದೂ ಸಹ ಸಣ್ಣತನವೆನ್ನಿಸುತ್ತದೆ. ಅವರ ಉದಾತ್ತ ವಿಚಾರಗಳೇ ಬೇರೆ; ಅವರ ದಿವ್ಯ ಬದುಕೇ ಬೇರೆ. ಆ ಶರಣೆಯರ ಬಗ್ಗೆ ಈ ರೀತಿ ಆಲೋಚಿಸುವುದೂ ಸಹ, ಅವರನ್ನು ಅಗೌರವಿಸಿದಂತೆ ಎಂದು ಭಾವಿಸುವಷ್ಟು ಎತ್ತರದಲ್ಲಿ ಆ ಮಹಿಳೆಯರು ಬದುಕಿದ್ದರು. ಅಂತಹವರಲ್ಲಿ ಒಬ್ಬಳಾದ ನೀಲಾಂಬಿಕೆಯ ಬಗ್ಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಅಸಾಧುವಾಗಿವೆ. ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡಲು ಸಾಧ್ಯವಾಗುವ ಅನೇಕ ಉತ್ತಮ, ಉದಾತ್ತ ವಿಷಯಗಳು ವಚನ ಸಾಹಿತ್ಯದಲ್ಲಿವೆ, ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷ್ಯ' ಈ ರೀತಿ ವಿಕೃತ ಕಲ್ಪನೆಮಾಡಿ ಸಾಧಿಸುವ ಸಾಧನೆಯಾದರೂ ಏನು? ಇದು ಮೊದಲ ಪ್ರಶ್ನೆ. ಈ ಬಗೆಯ "ಊಹೆ"ಗಳನ್ನು ಸಂಶೋಧನೆಯ ಹೆಸರಿನಲ್ಲಿ ಮಾಡಬೇಕಾದರೆ, ಸಿಕ್ಕಿರುವ ಆಧಾರಗಳು ಯಾವುವು? ಈ ಆಧಾರಗಳು ಎಷ್ಟರಮಟ್ಟಿಗೆ ನಿರ್ಣಾಯ

ಕೊಡುವಷ್ಟು ಗಟ್ಟಿಯಾಗಿ ನಿಲ್ಲಬಲ್ಲವು ಎಂಬುದು ಎರಡನೆಯ ಪ್ರಶ್ನೆ, ಈ ರೀತಿಯಾದ ಕಲ್ಪನೆಗಳು ನೀಲಮ್ಮನಂತಹ ಶ್ರೇಷ್ಠ ಶರಣೆಯ ಬಗ್ಗೆ ಸಲ್ಲವಾಗಿವೆ, ಆಕೆಯ ವಚನಗಳಲ್ಲಿ ಕಂಡುಬರುವ ಆಧ್ಯಾತ್ಮಿಕ ವಿಚಾರಗಳನ್ನು ಗಮನಿಸದೆ ಈ ರೀತಿ ಅರ್ಥೈಸಿರುವ ಪ್ರಯತ್ನ, ಆ ಶರಣೆಯ ಬಗ್ಗೆ ಅಭಿಪ್ರಾಯ ಕೊಡುವುದಕ್ಕಿಂತ ಹೆಚ್ಚಾಗಿ, ಲೇಖಕರ ವ್ಯಕ್ತಿತ್ವವನ್ನು ಎತ್ತಿ ತೋರಿಸುತ್ತದೆ. ಇಂತಹ ಬರಹವನ್ನು ಓದಿ, ಶರಣರ ಬಗ್ಗೆ ಅಲ್ಪಸ್ವಲ್ಪ ಪರಿಚಯ ವಿದ್ದ, ಸಾಮಾಜಿಕ ಅಭ್ಯಾಸದ ದೃಷ್ಟಿಯಿಂದ ಶರಣರನ್ನು ಅರ್ಥಮಾಡಿಕೊಂಡಿರುವ ಕೆಲವರು, 'ನೀಲಮ್ಮನಿಗೆ ವಿರಹವೇದನೆ ಇರಬಹುದು. ಮನುಷ್ಯರಿಗೆ ಸಹಜವಾದ ಕಾಮನೆ ಗಳು ಆಕೆಯಲ್ಲೂ ಇದ್ದಿರಬಹುದು. ಅದನ್ನು ಲೇಖಕರು ಹೇಳಿದರೆ ತಪ್ಪೇನು' ಎಂದು ಸಮರ್ಥಿಸಿದ್ದಾರೆ. ಇದ್ದುದನ್ನು ಇದ್ದಂತೆ ಹೇಳಿದರೆ ತಪ್ಪೇನಿಲ್ಲ ಸಾಮಾನ್ಯ ಸ್ತ್ರೀಯರಲ್ಲಿ ಅಂತಹ ಭಾವನೆಗಳು ಇರಲೂಬಹುದು. ಆದರೆ ನೀಲಮ್ಮ ಅಂತಹ ಮಟ್ಟದಲ್ಲಿ ಉಳಿದಿರ ಲಿಲ್ಲ. ಈ ಮಟ್ಟದಿಂದ ಆಕೆ ಬಹು ಎತ್ತರದ ಆಧ್ಯಾತ್ಮ ಮಟ್ಟವನ್ನು ಮುಟ್ಟಿನಿಂದವಳು. ಆಕೆಯಲ್ಲಿ ವಿರಹದ ಭಾವನೆಗಳನ್ನು ಆರೋಪಿಸುವದು ಕರ್ಣಶೂಲಗಳಾಗಿವೆ. ನೀಲಾಂಬಿಕೆ ಯೌವ್ವನದಲ್ಲಿ ಇರಲಿ, ಬಸವಣ್ಣನವರ ನೇರ ಪ್ರಭಾವ ವಲಯದಲ್ಲಿ ಅನೇಕ ಕಾಲ ಜೀವಿಸಿದ ನಂತರವೂ, ತನ್ನ ನಡುವಯಸ್ಸಿನಲ್ಲಿ ಐಹಿಕ ಸುಖಲೋಲುಪತೆಗೆ ಹಾತೊರೆದು ಹಾಡಿ–ಹಾಡಿಕೊಂಡು ದುಃಖಿಸಿದಳು ಎಂದು ಭಾವಿಸುವಂತೆ ಮಾಡುವ ಬರಹಗಳು, ಎಂಟುನೂರು ವರ್ಷಗಳ ಹಿಂದೆ ದಿವ್ಯಜೀವನ ಬದುಕಿದ ಆ ಮಹಾತಾಯಿಗೆ ಮಾಡಿದ ಮಹಾ ಅಪಚಾರವಲ್ಲದೆ ಬೇರಲ್ಲ! ಆ ಮಹಾ ಶಿವಶರಣೆಯನ್ನೇಕೆ ನಮ್ಮ ಮಟ್ಟಕ್ಕೆ ಇಳಿಸಿ ಕೂಡ್ರಿಸಬೇಕು?!

ವಿಕೃತ ಕಲ್ಪನೆಯ ತಾಯಿಬೇರು:

ನೀಲಮ್ಮನ ಬಗೆಗೆ ಬರೆದಿರುವ ಲೇಖನಗಳ ಆಧಾರವಾದರೂ ಏನು? ಪವಾಡಕಥೆ ಯೊಂದನ್ನು ತಲೆಯಲ್ಲಿರಿಸಿಕೊಂಡು ಆಕೆಯ ನೂರಿಪ್ಪತ್ತೈದು ವಚನಗಳಲ್ಲಿ ಹುಡುಕಿ, ಹುಡುಕಿ, ಅಲ್ಲಿಯ ಅಭಿಪ್ರಾಯಗಳನ್ನು, ಪೂರ್ವಗ್ರಹಪೀಡಿತ ಅಭಿಪ್ರಾಯಕ್ಕೆ ಪೋಷಕ ವಾಗುವಂತೆ ಅರ್ಥೈಸಿಕೊಳ್ಳುವುದು ಪ್ರಾಮಾಣಿಕ ಸಂಶೋಧನೆಯೇ? "ಕೂಟವಿಲ್ಲದ ಪುರುಷನ ಕಂಡು ಕಾಮದ ಆತುರ ಹಿಂಗಿತ್ತೆನಗೆ" ಆಕೆ ಹೇಳಿರುವ ವಚನದಿಂದ ಇದೊಂದು ಸಾಲನ್ನು ಲೇಖಕರು ಹೊರಗೆಳೆದುಕೊಂಡು ಬಂದು ತರ್ಕಿಸಿದ್ದಾರೆ. ಇದೇ ಸಾಲು ಬೇರೆ, ಬೇರೆ ಹಿನ್ನೆಲೆಯಲ್ಲಿ ಭಿನ್ನ, ಭಿನ್ನವಾದ ಅರ್ಥಕೊಡಬಹುದು. ಲೇಖಕರ ಜಾಡಿನಲ್ಲೇ ವಿಚಾರ ಮಾಡಿದರೂ, ಆಕೆಯೇ ಹೇಳಿಕೊಂಡಿರುವಂತೆ.

"ಬಸವನ ಅನುಭಾವದಿಂದ ವಿವರವ ಕಂಡು,ವಿಚಾರಪತ್ನಿಯಾದೆನಯ್ಯಾ"ಸಂಗಯ್ಯಾ ಎನ್ನುವ ಮಾತಿನಲ್ಲಿ ಬಸವಣ್ಣನ ಪ್ರಭಾವಕ್ಕೆ ಒಳಗಾಗಿ, ಅವನ ವಿಚಾರಗಳನ್ನೂ ಒಪ್ಪಿ, ಅನುಸರಿಸಿ, ವಿಚಾರಪತ್ನಿಯಾಗಿ ಬಾಳಿದಳೆಂದು ಅರ್ಥವಾಗುವುದು, ವಿರಹದ ಪ್ರಲಾಪ ಇಲ್ಲಿ ಕೇಳಿಬರುವುದಿಲ್ಲ.

ಲೇಖಿಕರು ಆರಿಸಿಕೊಂಡಿರುವ ಮತ್ತೊಂದು ವಚನ (ನೀಲಾಂಬಿಕೆಯದು)

'ಪಾರ್ವತಿಯ ರೂಪಕಂಡು ಪರಶಿವನ ಸಂಗ ನಿಸ್ಸಂಗವಾಗಿ
ತಾಯಿ ಮಗಸಂಗದಿಂದ ತನುವಳಿದು, ನಿರಾಧಾರರೂಪವನೆಯ್ದಿ
ಬಸವನ ಅನುಭಾವದಿಂದ ವಿವರವ ಕಂಡು
ವಿಚಾರ ಪತ್ನಿಯಾದೆನಯ್ಯಾ ಸಂಗಯ್ಯ' ಎಂಬುದು,

ಈ ವಚನದಲ್ಲಿ ಲೇಖಿಕರಿಗೆ "ಮಾನವ ಸಹಜ ವಿರಹ ಸುಗ್ಗಿ ಬಂದುದು" ಎಲ್ಲಿ ಕಾಣಿಸಿತು? ಲೇಖಿಕರು ವಚನದ ಸಾಲುಗಳನ್ನಾಗಲೀ, ಪದಗಳನ್ನಾಗಲೀ ವಿಶ್ಲೇಷಿಸಿ ಅರ್ಥಮಾಡಲು ಹೋಗಿಯೇ ಇಲ್ಲ, ವಚನವನ್ನು ಒಟ್ಟಾಗಿ ತಮ್ಮ ಮನಸ್ಸಿನಲ್ಲಿ ಗಮನಿಸಿ. ಅನ್ನಿಸಿದುದನ್ನು ಬರೆದು ಬಿಟ್ಟಿದ್ದಾರೆ. ಲೇಖಿಕರು ಆರಿಸಿಕೊಂಡಿರುವ ಇನ್ನೊಂದು ವಚನ ಹೀಗಿದೆ,

'ಮಡದಿ ಎನಲಾಗದು ಬಸವಂಗೆ ಎನ್ನನು
ಪುರುಷನೆನಲಾಗದು ಬಸವನ ಎನಗೆ
ಉಭಯಕುಳವ ಹರಿದು
ಬಸವಂಗೆ ಶಿಶುವಾದೆನು, ಬಸವನೆನ್ನ ಶಿಶುವಾದನು
ಪ್ರಮಥರು ಪುರಾತರು ಸಾಕ್ಷಿಯಾಗಿ
ಸಂಗಯ್ಯನಿಕ್ಕಿದ ದಿಬ್ಬವಮೀರದೆ ಬಸವನೊಳಗಾನಡಗಿದೆ.

ಈ ವಚನ ಆಕೆ ದಾಂಪತ್ಯ ಜೀವನದಲ್ಲಿದ್ದು (ರಾಮಕೃಷ್ಣ ಪರಮಹಂಸರು-ಶಾರದಾದೇವಿ ಯವರು ಬದುಕಿದಂತಹ, ತಿರುನೀಲಕಂಠರು ಮತ್ತು ಅವರ ಪತ್ನಿ ಬದುಕಿದಂತಹ ರೀತಿ ಯಲ್ಲಿ ಪತಿ-ಪತ್ನಿಯರ ಲೌಕಿಕ ಸಂಬಂಧವಿಲ್ಲದೆ ಬದುಕಿದ ವಿಚಾರವನ್ನು ತಿಳಿಸುತ್ತದೆ. ಈ ವಚನದಲ್ಲಿ ಲೇಖಿಕರಿಗೆ 'ಬಸವನ ಅಗಲಿಕೆಯ ಧ್ವನಿ' ಕೇಳಿಸಿರುವುದು ಜಗತ್ತಿನ ಪರಮಾಶ್ಚರ್ಯಗಳಲ್ಲಿ ಒಂದಾಗಿದೆ. ಬಹುಶಃ ಈ ವಚನವನ್ನು ನೀಲಾಂಬಿಕೆ ವೀರಶೈವ ದೀಕ್ಷೆಯನ್ನು ಕೈಗೊಳ್ಳುವಾಗ ಪ್ರಮಥರು, ಪುರಾತನರ ಎದುರಿನಲ್ಲಿ ಸಂಗಯ್ಯನಿಕ್ಕಿದ ದಿಬ್ಬವಮೀರದೆ (ಎಂದರೆ ಸಂಗಯ್ಯನ ಆಣೆಯಾಗಿ) ಬಸವನೊಳಗಾನಡಗಿದೆ ಎಂದರೆ ಬಸವನ ಹೆಜ್ಜೆಯಲ್ಲಿ ಹೆಜ್ಜೆ ಇಟ್ಟು, ಅವನ ಆಧ್ಯಾತ್ಮ ಜೀವನದಲ್ಲಿ ಬಾಳುತ್ತೇನೆಂದು ಶಪಥಮಾಡಿದಂತೆ ಎನ್ನಿಸುತ್ತದೆ. ಅಂದಿನಿಂದ ತಾವು ಬದುಕುವ ರೀತಿಯನ್ನು ಆಕೆ ಇಲ್ಲಿ ವಿವರಿಸಿದ್ದಾಳೆ. ತಾನು ಬಸವೇಶ್ವರನ ವಿವಾಹ ಪತ್ನಿಯಾಗಿರುವುದರಿಂದ ನನ್ನನ್ನೂ ಬಸವನ ಹೆಂಡತಿಯೆಂದು, ಬಸವನು ನನಗೆ ಗಂಡನೆಂದೂ ತಿಳಿಯಬೇಡಿ. ಈ ಸಂಬಂಧ ವನ್ನೂ ನಾವು ಇನ್ನೂ ಮುಂದೆ ಹರಿದು ನಾನು ಬಸವನ ಮಗಳಂತೆ ಅವನು ನನ್ನ ಮಗ ನೆಂಬಂತೆ ಪ್ರಮಥರು, ಪುರಾತರ ಸಾಕ್ಷಿಯಾಗಿ, ಸಂಗಯ್ಯನ ದಿಬ್ಬವ ಮೀರದಂತೆ ಬದುಕು ತ್ತೇವೆ ಎಂದು ಹೇಳಿರುವ ಸರಳ ಭಾವನೆ ವ್ಯಕ್ತವಾಗುತ್ತದೆ, ಆದರೆ ಲೇಖಿಕರು ಈ ವಚನ ಬರೆದು, 'ಈ ಘಟನೆಯನ್ನು ಹೇಗೆ ಅರ್ಥೈಸಿಕೊಳ್ಳಬೇಕೋ' ಎಂಬ ಮಾತಿನಿಂದ ಆ ವಚನ

ವನ್ನು ಅರ್ಥಮಾಡಿ ಕೊಳ್ಳಲಾಗದ ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿದ್ದಾರೆ. ಇದೇ, ಅವರಿಗೆ ವಚನಗಳ ನಿಜವಾದ ಅರ್ಥವನ್ನು ಕಾಣಲಾರದ ದೌರ್ಬಲ್ಯದ ದ್ಯೋತಕ.

ಭಾವುಕ ಭಕ್ತನ ಪವಾಡ ಕಥೆ:

ಹೀಗೆ ಅಪಾರ್ಥಮಾಡುವ ಮನೋಭಾವ ಲೇಖಕರಿಗೆ ಬರಲಿಕ್ಕೆ ಸಹಾಯಕವಾಗುವ ಆಧಾರ ಹರಿಹರನು ಬಸವೇಶ್ವರ ರಗಳೆಯಲ್ಲಿ ಬರೆದಿರುವ ಒಂದು ಪವಾಡ ಕಥೆ. ಹರಿಹರ ಬಸವನ ಭಕ್ತ. ಭಾವುಕ ಕವಿ. ಈಗ ಎಂಟುನೂರು ವರ್ಷಗಳ ಹಿಂದೆ, ದೇವರು 'ಭಕ್ತರನ್ನು ನಾನಾರೀತಿಯಿಂದ ಪರೀಕ್ಷಿಸುತ್ತಾನೆ' ಎಂಬ ನಂಬಿಕೆ ಜನರಲ್ಲಿ ಬಹಳವಾಗಿ ಇತ್ತು. ಈ ಹಿನ್ನೆಲೆಯಲ್ಲಿ ಭಾವುಕ ಭಕ್ತನಾದ ಹರಿಹರ 'ಬಸವಣ್ಣ ಜಂಗಮ ಭಕ್ತನಾಗಿದ್ದ. ಅವರು ಬೇಡಿದುದನ್ನೆಲ್ಲಾ ಕೊಡುತ್ತಿದ್ದ ಎಂಬ ತನ್ನ ಭಾವನೆಯನ್ನು ಸತ್ಯವಾಗಿ ತೋರಿಸ ಬೇಕಿತ್ತು. ಅದಕ್ಕಾಗಿ ತನ್ನ ರಗಳೆಯಲ್ಲಿ ಸುಖೀ ಜಂಗಮನ ಸನ್ನಿವೇಶವೊಂದನ್ನು ಸೃಷ್ಟಿಸಿದ್ದಾನೆ. ಅದರಲ್ಲಿ ಶಿವನು ಸುಖೀ ಜಂಗಮನ ವೇಷದಲ್ಲಿ ಬಸವಣ್ಣನ ಮನೆಗೆ ಬರುತ್ತಾನೆ. ಬಸವಣ್ಣ ಅವನನ್ನು ಆದರಿಸಿ ಸತ್ಕರಿಸುತ್ತಾನೆ. ಆ ಜಂಗಮ ಆ ದಿನ ರಾತ್ರಿ ಬಸವೇಶ್ವರನಲ್ಲಿಯೇ ತಂಗುತ್ತಾನೆ. ಆಗ, 'ಎಲೆ ಬಸವರಾಜ ಹೆಂಗೂಸಿಲ್ಲದೆ ಎಂದುಂ ಇದ್ದುದಿಲ್ಲ' ಎಂದು ತನ್ನ ಮನದಾಸೆಯನ್ನು ವ್ಯಕ್ತಪಡಿಸುತ್ತಾನೆ, ಆಗ ಬಸವೇಶ್ವರನು ಅವನ ಇಚ್ಛೆಯನ್ನು ಪೂರೈಸಲು ವೇಶ್ಯೆಯರಿಗೆ ಹೇಳಿಕಳಿಸಿದಾಗ ಯಾರೂ ಬಿಡುವಾಗಿರಲಿಲ್ಲವಂತೆ, ಇದನ್ನು ತಿಳಿದ ನೀಲಾಂಬಿಕೆ 'ಊರೊಳಗೆ ಪೆಣ್ಣಿಲ್ಲದಿರ್ದಡೆ ಜಂಗಮಕ್ಕೆ ಬಸವನೆನ್ನಂ ಕೊಟ್ಟನಲ್ಲದೆ ಮಾಣನು' ಎಂದು ತಾನೇ ಸಿಂಗರಿಸಿಕೊಂಡು ಸಿದ್ಧಳಾಗಿದ್ದಳಂತೆ, ಆಗ ಬಸವಣ್ಣನು ನೀಲಾಂಬಿಕೆಯನ್ನು ಜಂಗಮನ ಕೋಣೆಗೆ ಕಳಿಸುತ್ತಾನೆ. ತಕ್ಷಣವೇ ಜಂಗಮನು ಬಸವನ ಭಕ್ತಿಗೆ ಮೆಚ್ಚಿ "ದಶಭುಜಂ ಪಂಚವಕ್ತ್ರಂ ತ್ರಿಣೇತ್ರಂ"ಗಳು ಸಂಗಮದೇವನಾಗುತ್ತಾನೆ!! ಇದನ್ನು ನೋಡಿ ನೀಲಲೋಚನೆ 'ಬಸವಾ, ಬಸವಾ ಜಂಗಮ ದೇವರು ಸಂಗಮದೇವರಾದರು' ಎಂದು ಕೂಗಲು "ತಾಯೆ ತಾಯೆ, ಮುನ್ನಿದಾರೆಂದು ಕೊಟ್ಟೆಂ" ಎಂದು ಬಸವಣ್ಣ ನುಡಿಯುವಷ್ಟರಲ್ಲಿ ಶಿವನು ಅಂತರ್ಧಾನವಾಗುತ್ತಾನೆ. ಈ ಪ್ರಸಂಗದಲ್ಲಿ ಹರಿಹರ, "ಅಂದು ಮೊದಲಾಗಿ ಗುಣಾನ್ವಿತೆ ಮಾಯಿದೇವಿಯುಂ ಶಿವನ ಲತಾಂಗಿಯೆಂದು ಬಸವಂ ಪವೆದರ್ಚಿಸುತ್ತಿರ್ದನುರ್ವಿಯೊಳ್" ಎಂಬ ವಿಷಯವನ್ನು ಲೇಖಕರು 'ನೀಲಲೋಚನೆಯ ಬದುಕಿನಲ್ಲಿ ಒಂದು ತಿರುವು' ಎಂಬ ಲೇಖನವನ್ನು ಮಾರ್ಗ ಒಂದು ಗ್ರಂಥದಲ್ಲಿ ಸೇರಿಸಿದ್ದಾರೆ. ಈ ಸನ್ನಿವೇಶವನ್ನು ಹದಿಮೂರನೆಯ ಶತಮಾನದ ಪರಿಸರದಲ್ಲಿ ಒಬ್ಬ ಭಕ್ತ ಕವಿ ಬರೆದಿದ್ದಾನೆ. ತನ್ನ ಅನುಭವ, ಆಲೋಚನೆಗಳಿಗನುಗುಣವಾಗಿ 'ರವಿಕಾಣದುದ ಕವಿಕಂಡ' ಎಂಬ ಹಿನ್ನೆಲೆಯಲ್ಲಿ ಒಂದು ಪವಾಡ ಕಥೆಯನ್ನು ಸೃಷ್ಟಿಸಿರುವುದನ್ನು ಒಪ್ಪೋಣ. ಆಗಿನ ಸಮಾಜದಲ್ಲಿ ಜನಸಾಮಾನ್ಯರು ಹೆಚ್ಚು ವಿದ್ಯಾವಂತರೂ ವಿಚಾರಪರರೂ ಆಗಿರಲಿಲ್ಲ, ಮುಗ್ಧಭಾವದಿಂದ ಕೂಡಿದವರಾಗಿರುತ್ತಿದ್ದರು. ಜನರಲ್ಲಿ ಭಕ್ತಿಭಾವವನ್ನು ಉದ್ದೀಪನಗೊಳಿಸಲು ರಂಜನೀಯವಾದ ಪವಾಡ ಕಥೆಗಳನ್ನು ಸೃಷ್ಟಿ

ಸುತ್ತಿದ್ದ ಕಾಲವದು. ಆಗ ಜನರು ಆ ಕಥೆಗಳ ಸಾಧ್ಯಾಸಾಧ್ಯತೆಯನ್ನು, ಸತ್ಯಾಸತ್ಯತೆಯನ್ನು ಪ್ರಶ್ನಿಸದೆ, ವಿಮರ್ಶಿಸದೆ ಒಪ್ಪಿ, ನಂಬಿ ಭಕ್ತಿಭಾವನೆಗಳನ್ನು ರೂಢಿಸಿಕೊಳ್ಳುತ್ತಿದ್ದರು. ಅಂತಹ ಒಂದೇ ಒಂದು ಕಥೆಯನ್ನು ಈ ಪಂಡಿತರು ತಮ್ಮ ಊಹೆಗಳಿಗೆ ತಳಹದಿಯನ್ನಾಗಿಟ್ಟುಕೊಂಡು, ಶೀಲಲೋಚನೆಯನ್ನು ಆ ಭಾವನೆಗಳ ಕನ್ನಡಕದ ಮೂಲಕ ಅವಲೋಕಿಸಿ, ಅರ್ಥೈಸಿದ್ದಾರೆ. ಈ ನಿಲುವನ್ನು ನಾವು ವಿಶ್ಲೇಷಣೆಯ ಒರೆಗಲ್ಲಿಗೆ ಹಚ್ಚುತ್ತಾ ಹೋದರೆ, 'ಊರೊಳಗೆ ಪೆಣ್ಣಲ್ಲದಿರ್ದಡೆ ಜಂಗಮಕ್ಕೆ ಬಸವನೆನ್ನಂ ಕೊಟ್ಟಲ್ಲದೆ ಮಾಣನು' ಎಂದು ಆಕೆ ಸಿಂಗರಿಸಿಕೊಂಡು ಸಿದ್ಧವಾದುದನ್ನು ನೋಡಿದರೆ ಈ ತೆರನ ಅನುಭವ ಆಕೆಗೆ ಇದಕ್ಕೆ ಹಿಂದೂ ಸಾಕಷ್ಟಿದ್ದಿರಬಹುದು ಎಂದು ಊಹಿಸಬಹುದು. ಅಲ್ಲದೆ ಆಕೆ ಒಬ್ಬ ಮೂಢ ಸ್ತ್ರೀಯಂತೆ, ಸ್ವಂತ ವಿಚಾರಗಳೇ ಇಲ್ಲದೆ, ಯುಕ್ತಾಯುಕ್ತ ಯೋಚಿಸದೆ ಮಹಿಳೆಯಾಗಿದ್ದಳೆಂದು ಕಲ್ಪಿಸಬಹುದು. ಇದಕ್ಕಿಂತ ಮಿಗಿಲಾಗಿ ಬಸವಣ್ಣನು ಹೆಂಡತಿಯನ್ನು ತನ್ನ ಸ್ವತ್ತಿನಂತೆ ಉಪಯೋಗಿಸುತ್ತಿದ್ದಿರಬಹುದೆಂದೂ, ಆಕೆಯ ಭಾವನೆಗಳಿಗೆ ಆಸ್ಪದ ಕೊಡದೆ, ತನ್ನ ಇಚ್ಛೆ ಬಂದಂತೆ ಆಕೆಯನ್ನು ಉಪಯೋಗಿಸಿಕೊಳ್ಳುತ್ತಿದ್ದನೆಂದೂ, ಆಕೆಯನ್ನು ಭೋಗವಸ್ತುವಿನಂತೆ, ಒಬ್ಬ ತೊತ್ತಿನಂತೆ ಕಾಣುತ್ತಿದ್ದಿರಬೇಕೆಂದೂ ಅರ್ಥ ಮಾಡಿಕೊಳ್ಳಬಹುದು. ಹೀಗೆ ಅರ್ಥೈಸಿದರೆ ಬಸವಣ್ಣನ ವ್ಯಕ್ತಿತ್ವಕ್ಕೆ ಅವನು ಯಾವ ತತ್ವಗಳಿಗಾಗಿ ಬದುಕಿದನೋ, ಹೋರಾಡಿದನೋ ಅವುಗಳಿಗೆ ಕೊಡಲಿ ಪೆಟ್ಟು ಹಾಕಿದಂತಾಗುತ್ತದೆ. ಅವನ ಕ್ರಾಂತಿಕಾರಕ ವಿಚಾರಗಳಲ್ಲಿ ಮಹಿಳೆಯರಿಗೆ ಸಮಾನತೆ ಕೊಡುವುದು ಒಂದು ಮುಖ್ಯವಾದ ಅಂಶವಾಗಿತ್ತು. ಅದಕ್ಕಾಗಿ ಬೇಕಾದಷ್ಟು ಹೆಣಗಿದ. ಮಹಿಳೆಯರು ಸ್ವತಂತ್ರ ವಿಚಾರಗಳಿಂದ ಬಾಳುವುದಕ್ಕೆ ಕಾರಣನಾದ. ಕ್ರಾಂತಿ ಪುರುಷ ಬಸವಣ್ಣ. ಮಹಿಳೆಯ ಗೌರವವನ್ನು ಎತ್ತಿಹಿಡಿದ ಮಹಾನುಭಾವ ಅವನು, ಅಂತಹವನು, ಜಂಗಮನು ಭೋಗಕ್ಕೆ ಹೆಣ್ಣನ್ನು ಕೇಳಿದಾಗ ಹೆಂಡತಿಯನ್ನು ಕೋಣೆಗೆ ಕಳಿಸಿದನೆಂದರೆ, ಹೆಂಡತಿಯನ್ನು ಗುಲಾಮಳಂತೆ ನಡೆಸಿಕೊಳ್ಳುತ್ತಿದ್ದ ಎಂದು ತಿಳಿಯಬೇಕಾಗುತ್ತದೆ. ಇಂತಹ ಅಭಿಪ್ರಾಯ ಬಸವಣ್ಣನ ಜೀವನಕ್ಕೆ ಮಸಿಬಳಿದಂತೆ. ಅವನ ಕೆಲಸ ಕಾರ್ಯಗಳನ್ನೆಲ್ಲಾ ಅಲ್ಲಗಳೆದಂತೆಯೇ ಸರಿ ಪರಿಪರನ ಆ ಪ್ರಸಂಗವನ್ನು ಭಕ್ತನೊಬ್ಬನು ಬರೆದ ಅತಿರಂಜಿತ ಕಥೆ ಎನ್ನುವ ಮಟ್ಟಕ್ಕೆ ಇಟ್ಟುಕೊಳ್ಳಬೇಕಷ್ಟೆ.

ಬೇಜವಾಬ್ದಾರಿ ಸಂಶೋಧನೆ–ಅಭಿವ್ಯಕ್ತಿ ಸ್ವಾತಂತ್ರ್ಯ

ಮೇಲಿನ ಪರಿಶೀಲನೆ–ವಿಶ್ಲೇಷಣೆಯಿಂದ ಶಿವಶರಣರ ಸಾಹಿತ್ಯ ಹಾಗೂ ಜೀವನದ ಸಂಗತಿಗಳ ಬಗೆಗೆ ಚೆಲ್ಲಾಟ ಸರಿಯಲ್ಲ. ವಚನಗಳನ್ನು ಶರಣರ ಜೀವನವನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ದುಡುಕಿನಿಂದ ಅಪಚಾರ ಮಾಡಬಾರದು. ಶಿವಶರಣ ಶರಣೆಯರ ಬಗೆಗೆ ಜನರಿಗಿರುವ ಭಕ್ತಿ–ಗೌರವದ ಭಾವನೆಗಳನ್ನು ಕಲಕುವಂತಹ ವಿಚಾರಗಳಿಂದ ಬರುವ ಲಾಭವಾದರೂ ಏನು?

□ □

ಡಾರ್ವಿನ್ನನ ವಿಕಾಸವಾದದಲ್ಲಿ ಸತ್ಯವಿದೆಯೆ?

—ರೇವಣಸಿದ್ಧಯ್ಯಾ ಹನ್ನೆರಡುಮಠ

ಡಾರ್ವಿನ್ನನು ತನ್ನ ೩೦ನೇ ವರ್ಷದ ವರಿಗೆ ಮಿಲ್ಟನ್, ಗ್ರೇ, ಬೈರನ್, ವರ್ಡ್ಸ್‌ವರ್ಥ್, ಕಾಲರಿಝ್ ಮತ್ತು ಶೇಕ್ಸ್‌ಪಿಯರ್ ಅವರ ಅನೇಕ ಬಗೆಯ ಕಾವ್ಯ ಮತ್ತು ಕೃತಿಗಳಲ್ಲಿ ಅತ್ಯಂತ ಆನಂದ ಪಡೆಯುತ್ತಿದ್ದನೆಂದು ಹೇಳಿದ್ದಾನೆ. ಚಿತ್ರಗಳು ಮತ್ತು ಸಂಗೀತದಲ್ಲಿ ಬಹಳೇ ಸಂತೋಷಪಡುವವನಾಗಿದ್ದನು, ನಂತರದ ಜೀವನದಲ್ಲಿ, ಈ ಎಲ್ಲ ಸೌಂದರ್ಯದ ಬಗ್ಗೆ ಅಭಿರುಚಿಯು (Aesthetic taste) ಮಾಯವಾದುದು ಒಂದು ವಿಲಕ್ಷಣ ಮತ್ತು ಖೇದದ ಸಂಗತಿಯಾಗಿದೆ ಎಂದು ಹೇಳಿದ್ದಾನೆ, "ಸಂಗತಿಗಳ ಒಂದು ದೊಡ್ಡ ಸಂಗ್ರಹದಿಂದ ಸಾಮಾನ್ಯ ನಿಯಮಗಳನ್ನು ಅರೆದು ತೆಗೆಯುವ ಒಂದು ಯಂತ್ರದಂತೆ ನನ್ನ ಮನಸ್ಸಾಗಿದೆ" ಎಂದಿದ್ದಾನೆ, ಅವನು ಮುಂದುವರೆದು "ಇವೆಲ್ಲವುಗಳನ್ನು ಕಳೆದುಕೊಳ್ಳುವುದೆಂದರೆ ಸೌಖ್ಯವು ಕಳೆದುಹೋದಂತೆ ಮತ್ತು ಬುದ್ಧಿ ಮತ್ತು ಸ್ವಭಾವದ ಭಾವನಾತ್ಮಕ ಅಂಗವನ್ನು ದುರ್ಬಲಗೊಳಿಸಿ, ನೈತಿಕ ಗುಣದ ಮೇಲೆ ಹೆಚ್ಚಾಗಿ ಕೇಡನ್ನುಂಟುಮಾಡಬಹುದು.

ಇಂದು ಜಗತ್ತಿನಾದ್ಯಂತ, ಚಾರ್ಲ್ಸ್ ಡಾರ್ವಿನ್ನನ ಸುಪ್ರಸಿದ್ಧ ಸಿದ್ಧಾಂತ 'ಮಂಗನಿಂದ ಮಾನವ' (Man comes from monkey) ಮಾನವನ ವಿಚಾರ ಧಾರೆಯನ್ನೇ ಪಲ್ಲಟಗೊಳಿಸಿದೆ. ಈ ಸಿದ್ಧಾಂತವೇ ಸ್ವೀಕೃತ ಸತ್ಯ ಅನ್ನುವಷ್ಟರ ಮಟ್ಟಿಗೆ, ಶರೀರಶಾಸ್ತ್ರ (Biology), ಭೂಗರ್ಭಶಾಸ್ತ್ರ (Geology) ಮತ್ತು ಇತಿಹಾಸ ಕ್ಷೇತ್ರಗಳಲ್ಲಿ ಸಾಬಲರ್ಪ ವಿಷಯವಾದಂತಾಗಿದೆ. ದುರ್ಬಲರ ಮೇಲೆ ಬಲಾಢ್ಯರ ಶಾಶ್ವತ ವಿಜಯ ಎಂದು ಈ ವಿಕಾಸವಾದದಿಂದ ಪ್ರಭಾವಿತನಾದ ಅಡೋಲ್ಫ್ ಹಿಟ್ಲರನೂ ನಂಬಿದವನಾಗಿದ್ದು, ಒಂದು ಶಕ್ತಿಶಾಲೀ ಸೈನ್ಯ ನಿರ್ಮಾಣದಲ್ಲಿ ತೊಡಗಿದ. "ಜಸ್ಕಾ ಲಾಠಿ ಉಸ್ಕಾ ಬೈಸ್' ಅಂದಂತೆ,ಜರ್ಮನ್ ತತ್ವಜ್ಞಾನಿ ನೀತ್ಸೆ(Neitzche , ಡಾರ್ವಿನ್ನನ "ಬಲವಿದ್ದವನೇ ಬಾಳಬಲ್ಲ" (Survival of the fittest) ತತ್ವವನ್ನೇ ತನ್ನ ವಾದದವರಿಗೆ ಪ್ರಚುರಪಡಿಸಿದ. "ಯುದ್ಧಕ್ಕಾಗಿ ಮನುಷ್ಯನಿಗೆ ತರಬೇತಿ ಕೊಡುವದು, ಮತ್ತು ಸೈನಿಕನ ಮನೋರಂಜನೆಗಾಗಿ ಮಹಿಳೆ, ಉಳಿದೆಲ್ಲ ಮೌಢ್ಯ" ಎಂದು ಹೇಳಿದ. ಆರ್ಥಿಕ ವಿಚಾರಧಾರೆ ಮತ್ತು ತತ್ವಗಳ ಮೇಲೆಯೂ ಡಾರ್ವಿನ್ನನ ವಿಕಾಸವಾದದ ಪರಿಣಾಮವಾಗಿದೆ. "ಒರಿಜಿನ್ ಆಫ್ ಸ್ಪೀಸೀಸ್" ಗ್ರಂಥವನ್ನು ಓದಿ, ಕಾರ್ಲ್ ಮಾರ್ಕ್ಸ್

ಮತ್ತು ಫ್ರೆಡರಿಕ್ ಎಂಜಿಲ್ಸ್, ಡಾರ್ವಿನ್ನನ ಬಗ್ಗೆ ಅತ್ಯಂತ ಗೌರವವನ್ನು ವ್ಯಕ್ತಪಡಿಸಿದರು. ಸಿಗ್‌ಮಂಡ ಫ್ರಾಯಿಡ್, ಜಾನ್ ಡುಯಿ, ಜಾರ್ಜ ಬರ್ನಾರ್ಡ ಶಾ ಕೂಡ ಈ ವಿಕಾಸ-ವಾದದ ಸೆಳವಿನಿಂದ ಹೊರತಾಗಿಲ್ಲ. ಈ ರೀತಿಯಾಗಿ ಮಾನಸಶಾಸ್ತ್ರ, ಶಿಕ್ಷಣ ಕ್ಷೇತ್ರ, ಸಾಹಿತ್ಯ, ರಾಜ್ಯಶಾಸ್ತ್ರ ಮತ್ತು ತತ್ವಜ್ಞಾನ ಮೊದಲಾದ ವಿದ್ಯೆಯ ಎಲ್ಲ ರಂಗಗಳಲ್ಲಿ ವಿಕಾಸವಾದದ ಪ್ರಭಾವ ಮೂಡಿದೆ. ಇದರ ಭಯಾನಕ ಪರಿಣಾಮವೆಂದರೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ, ನಂತರ ಕ್ರಮೇಣ ಪೌರ್ವಾತ್ಯ ದೇಶಗಳಲ್ಲಿ ನಾಸ್ತಿಕತೆ ಹಬ್ಬಿತು. ಮಾನವನ ಪ್ರಗತಿಗೆ ಧಾರ್ಮಿಕ ನೈತಿಕತೆ ಆತುಕಕಾರಿಯೆಂದೂ ಕೆಲವರು ತಿಳಿದರು. ಕ್ರೌರ್ಯ, ಅಪರಾಧ, ಲೈಂಗಿಕತೆ, ಮದ್ಯಪಾನ ಮತ್ತತೆಯಿಂದ ನಾಚಿಕೆಪಡಬೇಕಾಗಿಲ್ಲ ಮತ್ತು ಪಶ್ಚಾತ್ತಾಪಪಡಬೇಕಾಗಿಲ್ಲ ಎಂದು ನೀತ್ಸೆ ಬರೆದ (Neither crime, cruelty, Sexuality nor intoxication need be matters of Shame or repentence!). ವಿಜ್ಞಾನದ ಎಲ್ಲ ಶಾಖೆಗಳಲ್ಲಿ-ಪ್ರಾಣಿಶಾಸ್ತ್ರ (Zoology), ಸಸ್ಯ ಶಾಸ್ತ್ರ, ವೈದ್ಯಕೀಯ ಶಾಸ್ತ್ರಗಳು, ಭೌತಶಾಸ್ತ್ರ, ಜ್ಯೋತಿರ್ಭೌತ ವಿಜ್ಞಾನ (Astro-physics) ಮೊದಲಾದವುಗಳ ಮೇಲೆಯೂ ವಿಕಾಸವಾದದ ಕೈವಾಡ ಕಂಡುಬಂದಿದೆ.

ನೀತಿ ಶಾಸ್ತ್ರದಲ್ಲಿಯೂ ಡಾರ್ವಿನ್ನನ ವಿಕಾಸವಾದದ ಪ್ರವಾಹ ನುಗ್ಗಿತು. 'ಮಾನವನ ಇಂತಹ ಎಲ್ಲ ಪ್ರಗತಿಗೆ ಈ ಕಾಡಿನ ಕಾನೂನೇ ಚಾಲಕಶಕ್ತಿಯಾಗ ಬೇಕಾಗಿದೆ. (It is this law of the jungle that has to be directive for all so called human progress' ಎಂದು ಹಕ್ಸ್ಲೀ ತನ್ನ ಅಭಿಪ್ರಾಯ ವ್ಯಕ್ತಪಡಿಸಿದ. ಮುಂದೆ ನಡೆದ ಇತಿಹಾಸದ ಘಟನೆಗಳೇ ಇದಕ್ಕೆ ನಿದರ್ಶನ.

ಜೋಸೆಫ್ ಸ್ಟಾಲಿನ್ ಕೂಡ ವಿದ್ಯಾರ್ಥಿಯಾಗಿದ್ದಾಗಲೇ ಡಾರ್ವಿನ್ನನ ಪುಸ್ತಕ ಓದಿ ನಾಸ್ತಿಕನಾದನು. ಈ ರೀತಿಯ ನಾಸ್ತಿಕತೆಯು ಮಾನವನ ನೈತಿಕ ಅಧಃಪತನವನ್ನು ತ್ವರಿತಗೊಳಿಸಿದೆ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಈ ವಿಕಾಸವಾದವನ್ನು ಅಂಗೀಕರಿಸಿದ ವಿಖ್ಯಾತ ವಿಜ್ಞಾನಿಗಳೂ ಸಾಕಷ್ಟಿದ್ದಾರೆ. ಆಶ್ಚರ್ಯವೆಂದರೆ, ಸ್ವತಃ ಡಾರ್ವಿನ್ನನೇ ತನ್ನ ಜೀವನದ ಅಂತ್ಯದ ಕಾಲಕ್ಕೆ ಈ ರೀತಿ ಒಪ್ಪಿಕೊಂಡಿದ್ದಾನೆ. ತನ್ನ (Darwin, Charles, My life and letters) ಎಂಬ ಗ್ರಂಥದಲ್ಲಿ ಹೀಗೆ ಬರೆದಿರುವ "Not one change of species into another is on record....We can not prove that a single species has changed into another" "ಯಾವದೇ ಜಾತಿಯ ರೂಪಾಂತರ ಮತ್ತೊಂದರಲ್ಲಿ ಆದ ಬಗ್ಗೆ ದಾಖಲೆ ಇಲ್ಲ........ಒಂದೇ ಒಂದು ಜಾತಿಯು ರೂಪಾಂತರವಾಗಿದೆಯೆಂದು ನಾವು ಸಿದ್ಧಮಾಡಿ ತೋರಿಸಲಾರೆವು."

ಈ ವಿಕಾಸವಾದವು ಒಂದು ಸಿದ್ಧಾಂತವಲ್ಲ, ಆದರೆ ಒಂದು ಪ್ರಾಯೋಗಿಕ ಊಹೆ ಎಂದು ಥೋಮಸ್ ಹಕ್ಸ್ಲೀ ಅಭಿಪ್ರಾಯ ಪಟ್ಟಿದ್ದಾನೆ. ಇದನ್ನು

ಸಾರ್ವತ್ರಿಕವಾಗಿ ಸ್ವೀಕರಿಸಲಾಗಿಲ್ಲವೆಂದು ಪ್ರಮುಖ ವಿಕಾಸವಾದದ ವಕ್ತಾರರಾದ ಪ್ರೊ. ಥಿಯೋಡೋಸಿಯಸ್ ಡೊಬ್ಝಾನ್ಸ್ಕಿಯವರು ಹೇಳಿದ್ದಾರೆ. ಸ್ಮಿಥ್ಸೋನಿಯನ್ ಸಂಸ್ಥೆಯ ಸುಪ್ರಸಿದ್ಧ ಜೀವವಿಜ್ಞಾನಿಯಾದ ಎಚ್ ಕ್ಲಾರ್ಕ್ ಅವರು ಈ ವಾದದಲ್ಲಿ ಯಾವ ಆಧಾರವೂ ಇಲ್ಲ ಎಂಬ ತಮ್ಮ ದೃಢ ನಿಲುವೆಯನ್ನು ಮಂಡಿಸಿದ್ದಾರೆ. ೮೦ ವರ್ಷಗಳ ಅಧ್ಯಯನದಲ್ಲೆ ವಿಕಾಸವಾದವು ತೃಪ್ತಿಕರವಾಗಿ ವಿವರಿಸಲು ಅಸಮರ್ಥವಾಗಿದೆ ಎಂದು ಡಾ. ಡಿ. ಆರ್ಚಿ ಥೋಮ್ಸನ್ ಅವರ ಅಭಿಪ್ರಾಯ. ಇದೇ ರೀತಿಯಾಗಿ ಪ್ರೊ. ಜಿ. ಎ. ಕೇರಕುಟ್, ಜಾನ್ ಟಿ. ಬೊನ್ನರ, ಪ್ರೊ. ಆಲ್ಬರ್ಟ್, ಕೆನೆಡಾದ ಹೆಸರಾಂತ ಭೂವಿಜ್ಞಾನಿ ವಿಲಿಯಮ್ ಡಾಸನ್, ಪ್ರಖ್ಯಾತ ಭೂವಿಜ್ಞಾನಿ ಮತ್ತು ನೊಬೆಲ್ ಬಹುಮಾನ ವಿಜೇತ ಡಾ. ರಾಬರ್ಟ್ ಎ. ಮಿಲಿಕೆನ್, ಲಾರೆನ್ ಎಸ್ಲಿ, ಡಾ. ಡಿ. ಎಮ್. ಎಸ್. ವ್ಯಾಟಿಸನ್ ಮತ್ತು ಇನ್ನೂ ಅನೇಕ ನಾಮಾಂಕಿತ ವಿಜ್ಞಾನಿಗಳು ಡಾರ್ವಿನ್ನನ ವಿಕಾಸವಾದವನ್ನು ಬಲವಾಗಿ ಖಂಡಿಸಿರುವರು.

ಡಾರ್ವಿನ್ನನ ವಿಕಾಸವಾದವನ್ನು ಭೂವಿಜ್ಞಾನ, ಮತ್ತು ನಷ್ಟಜೀವಿಶಾಸ್ತ್ರಗಳೂ (Palaeontology) ಸಹ ಬೆಂಬಲಿಸಿಲ್ಲ. ಹೆರಾಲ್ಡ ಕುಕ್ ಎಂಬವನಿಗೆ (ಅಮೇರಿಕೆಯ) ನೆಬ್ರಾಸ್ಕಾದಲ್ಲಿ ಒಂದು ಪಳಿಯುಳಿಕೆಯ (Fossil) ಹಲ್ಲು ದೊರೆಯಿತು. ಈ 'ನೆಬ್ರಾಸ್ಕಾ ಮಾನವ' ಸುಮಾರು ಒಂದು ದಶಲಕ್ಷ ಹಿಂದಿನ ಕಾಲದವ ಎಂದು ಎಲ್ಲೆಡೆ ಪ್ರಸಿದ್ಧಪಡಿಸಲಾಯಿತು. ಜಗತ್‌ಪ್ರಸಿದ್ಧ ನಷ್ಟಜೀವಿವಂಶ ಶಾಸ್ತ್ರಜ್ಞ ಡಾ. ಫೇಯುಪೀಲ್ಡ ದಿ.೨೭ ಏಪ್ರಿಲ್ ೧೯೨೭ ರಂದು, ಫಿಲಾಡೆಲ್ಫಿಯಾದಲ್ಲಿ ನಡೆದ ಅಮೇರಿಕೆಯ ತತ್ವಜ್ಞಾನ ಸಂಸ್ಥೆಯ ಭಾಷಣದಲ್ಲಿ ಆ ಹಲ್ಲು 'ಹೆಸ್ಪೆರೊಕಸ್ ಮಾನವನ ಮೂಲಕ್ಕೆ ಸಂಬಂಧಿಸಿದ್ದುದು' ಎಂದು ಹೇಳಿದ. ಡಾ. ವಿಲಿಯಮ್ ಗ್ರೇಗೇರಿ, ಇದು ದಶಲಕ್ಷ ವರುಷದ ಹಿಂದಿನ ಮಾನವನ 'ದಶಲಕ್ಷ ಡಾಲರ ಬೆಲೆಯ ಹಲ್ಲು' ಎಂದು ವರ್ಣಿಸಿದ. ಈ ಒಂದು ಹಲ್ಲಿನ ಆಧಾರದ ಮೇಲೆ 'ಇಲಸ್ಟ್ರೇಟೆಡ್ ಲಂಡನ್ನ'ದಲ್ಲಿ ಒಂದು ಗಂಡಿನ ಮತ್ತು ಒಂದು ಹೆಣ್ಣಿನ ಚಿತ್ರಗಳೊಂದಿಗೆ ಒಂದು ಲೇಖನವನ್ನು ಪ್ರಕಟಿಸಲಾಯಿತು. ಹಲ್ಲಿನ ವಿಷಯ ಪ್ರಖ್ಯಾತವಾಯಿತು. ಮೋಜಿನ ಸಂಗತಿಯೆಂದರೆ, ಇತ್ತೀಚಿನ ಸಂಶೋಧನೆಯಿಂದ ಆ ಹಲ್ಲು ಅಮೇರಿಕೆಯಲ್ಲಿ ನಷ್ಟವಾಗಿ ಹೋದ ಒಂದು ಹಂದಿ ಜಾತಿಗೆ ಸಂಬಂಧಿಸಿದುದೆಂದು ಕಂಡುಹಿಡಿಯಲಾಗಿದೆ.

ಇದೇ ಮೇರೆಗೆ ಒಂದು ಕುದುರೆಯ ಹಲ್ಲಿನ ಆಧಾರದ ಮೇಲೆ 'ನೈರುತ್ಯ ಕೊರೋಡೊ ಮ್ಯಾನ್' ಎಂದು ಅಮೇರಿಕೆಯಲ್ಲಿ ಇದೊಂದು ದೊಡ್ಡ ಸಂಶೋಧನೆಯೆಂದು ಪ್ರಚಾರ ಮಾಡಲಾಗಿತ್ತು.

ಎರಡುನೂರಾ ಐವತ್ತು ಸಾವಿರ ವರುಷಗಳ ಹಿಂದಿನ ಮಾನವನ ಪರಿಪೂರ್ಣ ತಲೆಬುರುಡೆ ದೊರೆತಿರುವದಾಗಿಯೂ ಈ 'ಪೆಥೇಕ್ಯಾಥ್ರೋಪಸ್' ಮಾನವನಿಗೆ ಒಬ್ಬ ಸಹೋದರ ಇದ್ದಂತಾಗಿದೆ. ಒಂದು ಕಳೆದುಹೋದ ಕೊಂಡಿ ಕಂಡಂತಾಗಿದೆ

ಎಂದು ಬರೆಯಲಾಯಿತು. ಕೊನೆಗೆ ಇದು ನಷ್ಟಜಾತಿಯ ಆನೆಯ ದೊಳಕಾಲು ಎಲುಬು ಎಂದು ಶೋಧವಾಗಿದೆ.

೧೯೧೨ರಲ್ಲಿ ಚಾರ್ಲಸ್ ಡಾಸನ್ ಕಂಡುಹಿಡಿದ ಒಂದು ದವಡೆ ಹಲ್ಲು ಅರ್ಧದಶಲಕ್ಷ ಹಿಂದಿನದೆಂದು ಮಾನವಶಾಸ್ತ್ರಜ್ಞರು (Anthropologists) ಸಾರಿದರು, ಇದರ ಬಗ್ಗೆ ೧೯೫೬ರ ಆಕ್ಟೋಬರ ರೀಡರ್ಸ ಸೂಚಿಕೆಯಲ್ಲಿ 'The great Piltdown Hoax' 'ದ ಗ್ರೇಟ ಪಿಲ್ಟಡೌನ್ ಹೋಕ್ಸ' ಎಂಬ ಶಿರೋನಾಮೆಯ ಲೇಖನದಲ್ಲಿ ಆ ದವಡೆಯ ಹಲ್ಲು ಕೇವಲ ೫೦ ವರುಷಗಳ ಹಿಂದಿನ ಒಂದು ಮಂಗನದೆಂದು ಬರೆಯಲಾಯಿತು. ಇಂಥ ತಪ್ಪು ಊಹೆಗಳು ನೇಂಡರ್ಥಲ್ ಮಾನವ, ಹೆಡಲ್‌ಬರ್ಗ ಮಾನವ, ಪೀಕಿಂಗ ಮಾನವ, ಎಸ್ಟೋಲೋಪಿಥೆಕಸ್ ಕುರಿತು ನಡೆದ ಬಗ್ಗೆ ಕಂಡುಹಿಡಿಯಲಾಗಿದೆ.

ಈ ಪ್ರಕಾರದ ಇನ್ನೂ ಎಷ್ಟೋ ಉದಾಹರಣೆಗಳಿದ್ದು, 'ವಿಜ್ಞಾನ' ಎಂಬ ಹೆಸರಿನಲ್ಲಿ ಬರುವ ವಿಷಯಗಳನ್ನು ವಿದ್ಯಾರ್ಥಿಗಳು ನಂಬುವಂತಾಗಿದೆ.

ವಿಚಿತ್ರವೆಂದರೆ, ಸ್ವತಃ ಡಾರ್ವಿನ್ನನೇ ವಿಕಾಸವಾದದ ಬಗ್ಗೆ ಇರುವ ತನ್ನ ಹೊಯ್ದಾಡುವ ಮನೋಭೂಮಿಯನ್ನು ಅವನ ಪತ್ರವ್ಯವಹಾರದಲ್ಲಿ ಕಂಡುಕೊಳ್ಳಬಹುದಾಗಿದೆ. ಜಿ. ಬೆಂಥ್ಯಾಮ್ ಅವರಿಗೆ ದಿ. ೧೯ ಜೂನ ೧೮೬೩ರಂದು ಬರೆದ ಪತ್ರದಲ್ಲಿ 'ಮಾರ್ಪಾಟಾಗದಿರುವಿಕೆ' (Immutability), ನಂಬಿಕೆಗೆ ಯಾರಾದರೂ ಅಂಟಿಕೊಂಡಿದ್ದರೆ ನನಗೇನೂ ಆಶ್ಚರ್ಯವಾಗುವದಿಲ್ಲವೆಂದು ನಾನು ಬುಧ್ಯಾಪೂರ್ವಕವಾಗಿಯೇ ಸಾರುವೆ. ನನ್ನ ಆನಂತ ಅನುಮಾನಗಳ ಮತ್ತು ಜಟಿಲತೆಯ ಹೊಯ್ದಾಟಗಳ ಬಗ್ಗೆ ನನಗೆ ಸಂಪೂರ್ಣ ಅರಿವಿದ್ದು, ಈ ಪಕ್ಷವಿಡಿದು ವಾದಿಸುವವರ ಕುರಿತೂ ಅನೇಕ ಬಾರಿಗೆ ನನಗೆ ಕಡಿಮೆ ಆಶ್ಚರ್ಯವೇನಾಗಿಲ್ಲ.

ಡಾರ್ವಿನ್ನನು ತನ್ನ ಅಂತಿಮ ದಿನಗಳಲ್ಲಿ, ಹಾಸಿಗೆ ಹಿಡಿದು ಮಲಗಿದಾಗ್ಗ ಲೇಡಿ ಹೋಪ್ ಎಂಬ ಮಹಿಳೆ ಅವನನ್ನು ಕಾಣಲು ಹೋಗಿದ್ದಳು. ಅತ್ಯಂತ ವ್ಯಾಕುಲ ಭರಿತನಾದ, ಖಿನ್ನವದನದ ಚಾರ್ಲಸ್ ಡಾರ್ವಿನ್ ಆ ಮಹಿಳೆಗೆ ಈ ರೀತಿ ಹೇಳಿದ "ಯಾವದೇ ಸ್ವರೂಪದ ವಿಚಾರಗಳಿದ್ದ ಒಬ್ಬ ಯುವಕ ನಾನಾಗಿದ್ದೆನು. ಪ್ರತಿಯೊಂದರ ಬಗ್ಗೆ ಯಾವಾಗಲೂ ಚಕಿತನಾಗಿ ನಾನು ಪ್ರಶ್ನೆಗಳನ್ನು ಮತ್ತು ಸೂಚನೆಗಳನ್ನು ಮುಂದಿಟ್ಟೆ. ನನಗೇ ಆಶ್ಚರ್ಯವಾಗುವಂತೆ–ಆ ವಿಚಾರಗಳು ಕಾನನದ ದಳ್ಳುರಿಯಂತೆ–ಹಬ್ಬಿದವು. ಜನರು ಅದರ ಒಂದು ಧರ್ಮವನ್ನೇ ಮಾಡಿದರು. "ಕೊನೆಯದಾಗಿ ತನ್ನ ಅಂತ್ಯಕಾಲದಲ್ಲಿ "ಕ್ರಾಯಿಸ್ಟ ಜೇಸಸ್" ಮತ್ತು ಬೈಬಲ್ ಬಗ್ಗೆ ತನಗುಂಟಾದ ಗೌರವವನ್ನು ವ್ಯಕ್ತಪಡಿಸಿದ. ದೇವತ್ವದ ಪಾವಿತ್ರ್ಯತೆ ಬಗ್ಗೆ ತನ್ನ ಅನಿಸಿಕೆಗಳನ್ನು ಆ ಮಹಿಳೆಯ ಮುಂದೆ ಕಳಕಳಿಯಿಂದ ಹೇಳಿಕೊಂಡ. ಈ ಹಿನ್ನೆಲೆಯಲ್ಲಿ, ಗೋರ್ಬಾಚೇವ ನೇತೃತ್ವದಲ್ಲಿ ನಾಸ್ತಿಕತೆ ಪ್ರಧಾನವಾದ ಕಮ್ಯುನಿಸ್ಟ ಪ್ರಧಾನವಾದ ರಷ್ಯಾದಲ್ಲಿ ಈಗ ಬದಲಾವಣೆಯ

ಅಲೆಗಳು ಏಳುತ್ತಿರುವದನ್ನು ನೋಡಿದರೆ, ಡಾರ್ವಿನ್ನನು ತನ್ನ ಅಂತಿಮ ಕಾಲಕ್ಕೆ ದೈವೀ ಶಾಂತಿ-ಬಯಸಿದ್ದು ಸ್ವಾಭಾವಿಕವೇ ಅನಿಸುವದು. ೧೮೩೧ರಲ್ಲಿ ಡಾರ್ವಿನ್ನನು ತಾನು ಪಾದ್ರಿ ಆಗುವ ಉದ್ದೇಶದಿಂದ ಕೇಂಬ್ರಿಜ್ಜಿಗೆ "ಬೀಗಲ್" ಎಂಬ ಹಡಗಿನಲ್ಲಿ ಪ್ರಯಾಣ ಮಾಡಿದ್ದ. ಸಂಪ್ರದಾಯದಲ್ಲಿ ತುಂಬ ನಂಬಿಕೆಯುಳ್ಳವನಾಗಿದ್ದ. ಮುಂದೆ ತನ್ನ ಸಂಶೋಧನೆಯ ನಂತರ ತಾನು ಬರೆದ ಕ್ರಾಂತಿಕಾರಕ ಗ್ರಂಥ "Origin of species" ಪ್ರಕಟನೆಗೊಂಡು ಅವನ ವಿಕಾಸವಾದದ ಬಿರುಗಾಳಿಗೆ ಎಲ್ಲರಂತೆ ತಾನೂ ಸಿಕ್ಕು ಶಾಂತಿಯನ್ನು ಕಳೆದುಕೊಂಡಿದ್ದ. ಅದೊಂದು ಹೊಸ ಧರ್ಮಪಂಬಂತೆ-ಜನರು ಅವನ ವಿಕಾಸವಾದವನ್ನು ತಬ್ಬಿಕೊಂಡಾಗ, ಆ ಬಗ್ಗೆ ಸ್ವತಃ ಡಾರ್ವಿನ್ನನೇ ವ್ಯಥೆ ವ್ಯಕ್ತ ಪಡಿಸಿದ್ದ. ದೇವರಿಲ್ಲ, ಪರಮಾತ್ಮನಿಲ್ಲ ಎಂದು ಅವನ ಅನುಯಾಯಿಗಳು ಹೇಳುತ್ತಿದ್ದಾಗ್ಗೆ, ಡಾರ್ವಿನ್ನನು ಹೆಚ್ಚು ಹೆಚ್ಚಾಗಿ ಪರಮಾತ್ಮನತ್ತ ಆಕರ್ಷಿತನಾಗಿದ್ದ. ಮಹರ್ಷಿ ಅರವಿಂದರು ತಮ್ಮ "ದ ಸಿಂಥೆಸಿಸ್ ಆಫ್ ಯೋಗ" ಗ್ರಂಥದಲ್ಲಿ ಈ ರೀತಿ ಹೇಳಿರುವರು. "ಮನವು ವಿಕಾಸದ ಕೊನೆಯ ಶಬ್ದವೇನಲ್ಲ, ಒಂದು ಅಂತಿಮ ಗುರಿಯೂ ಅಲ್ಲ, ಆದರೆ, ಶರೀರದಂತೆ ಒಂದು ಉಪಕರಣ ಮಾತ್ರ."...."ಚೈತನ್ಯವು ಸಾರ್ವತ್ರಿಕ ಅಸ್ತಿತ್ವದ ಮುಕುಟವಾಗಿದೆ; ಪ್ರಕೃತಿಯು ಅದರ ತಳಪಾಯವಾಗಿದೆ, ಮನಸ್ಸು ಇವೆರಡರ ಮಧ್ಯದ ಕೊಂಡಿ. ಯಾವದು ಶಾಶ್ವತವಾಗಿರುವದೋ ಅದು ಚೈತನ್ಯವಾಗಿದೆ; ಮನಸ್ಸು ಮತ್ತು ಪ್ರಕೃತಿ ಅದರ ಕಾರ್ಯವಾಹಕಗಳು, ಯಾವದು ಗೌಪ್ಯವಾಗಿರುವದೋ ಅದು ಚೈತನ್ಯವಾಗಿದ್ದು, ಅದನ್ನು ಪ್ರಕಟಗೊಳಿಸಬೇಕಾಗಿದೆ. ಅದು ಶರೀರ ಮತ್ತು ಮನಸ್ಸಿನ ಮಾಧ್ಯಮದಿಂದ ಪ್ರಕಟಗೊಳ್ಳಬೇಕೆನ್ನುತ್ತದೆ. ಯೋಗೇಶ್ವರನ ಪ್ರತಿಬಿಂಬವಾಗಿ ಚೈತನ್ಯವಿರುತ್ತದೆ".

□ □

ಡಪ್ಪಿನಾಟ

—ಡಾ. ಬಸವರಾಜ ಮಲಶೆಟ್ಟಿ

ಡಪ್ಪಿನಾಟ ಅಥವಾ ಸಣ್ಣಾಟ ಕರ್ನಾಟಕದ ಉತ್ತರ ಭಾಗದಲ್ಲಿ ಪ್ರಚಾರದಲ್ಲಿದೆ. ಡಪ್ಪು ಒಂದು ಚರ್ಮವಾದ್ಯ. ಹಲಗೆ ಅಥವಾ ತಮ್ಮಟೆಯ ಸಣ್ಣರೂಪ. ಹಲಗೆಯನ್ನು ಗುಣಿಕಿ (ನಾಜೂಕಾದ ಚಿಕ್ಕ ಕೋಲುಗಳು) ಗಳಿಂದ ಬಾರಿಸುತ್ತಾರೆ. ಡಪ್ಪನ್ನು ಕೈಯಿಂದ ಬಾರಿಸುತ್ತಾರೆ. ಬಲ ಅಂಗೈಯಿಂದ ಬೆರಳುಗಳಿಂದ ಡಪ್ಪಿನ ಮಧ್ಯ ಮತ್ತು ಅಂಚುಗಳನ್ನು ವಿವಿಧ ರೀತಿಯಲ್ಲಿ ಬಡಿದು ಅನೇಕ ತರದ ನಾದಾಕ್ಷರಗಳನ್ನು ಹೊರಡಿಸಲಾಗುವುದು. ಎಡಗೈಯಿಂದ ಒಂದು ಕಡ್ಡಿಯ ಮೂಲಕ ಡಪ್ಪಿನ ಕೆಳ ಅಂಚನ್ನು ನುಡಿಸುವಾಗ ಹೊರಡುವ ನಾದವು ಮೂಲ ನಾದಾಕ್ಷರಗಳೊಂದಿಗೆ ಸೇರಿಕೊಳ್ಳುತ್ತದೆ. ಈ ವಾದ್ಯ ವಾದನ ಕಲೆ ಕರ್ನಾಟಕಕ್ಕೆ ಪಕ್ಕದ ಮಹಾರಾಷ್ಟ್ರದಿಂದ ಬಂದಿದೆ. ಮಹಾರಾಷ್ಟ್ರದ ತಮಾಶಾದಲ್ಲಿ ಇದನ್ನು ಬಳಸುವರು. ಅದರಿಂದ ಪ್ರಭಾವಿತರಾದ ಗಡಿಪ್ರದೇಶದ ಕನ್ನಡಿಗರು ಡಪ್ಪನ್ನು ಸ್ವೀಕರಿಸಿದರು. ದ್ರುತ್ ಲಯದ ಹಾಡುಗಾರಿಕೆಗೆ ಚೆನ್ನಾಗಿ ಹೊಂದಿಕೊಳ್ಳುವ ಡಪ್ಪಿನ ನುಡಿತ ಉದ್ರೇಕಕಾರಿಯಾಗಿರುತ್ತದೆ. ಈ ಡಪ್ಪಿನೊಂದಿಗೆ ಹಾಡುತ್ತ ಪ್ರಯೋಗಿಸುವ ಜಾನಪದ ರಂಗಪ್ರಕಾರಕ್ಕೆ ಡಪ್ಪಿನಾಟ ಎಂಬ ಹೆಸರು ಬಂದಿರುವುದು ಸಹಜ. ಇಲ್ಲಿಯ ಹಾಡುಗಳಿಗೆ ಡಪ್ಪು ಬಿಟ್ಟು ತಬಲಾ ಮೃದಂಗ ಈ ಯಾವ ತಾಲವಾದ್ಯಗಳೂ ಹೊಂದಿಕೆಯಾಗುವುದಿಲ್ಲ. ಡಪ್ಪಿನಾಟಕ್ಕೆ ಸಣ್ಣಾಟವೆಂಬ ಹೆಸರು ಕೆಲವೆಡೆ ರೂಢಿಯಲ್ಲಿದೆ. ಮೂಡಲಪಾಯಕ್ಕೆ ದೊಡ್ಡಾಟ ಎಂಬ ಹೆಸರು ಪ್ರಚಾರದಲ್ಲಿ ಇರುವ ಕಡೆ ಅದಕ್ಕೆ ಸಾಪೇಕ್ಷವಾಗಿ ಈ ಸಣ್ಣಾಟ ಎಂಬ ಹೆಸರು ಚಲಾವಣೆಯಲ್ಲಿದೆ. ವೇಷಭೂಷಣ, ಕುಣಿತ, ರಂಗಸಜ್ಜಿಕೆಗಳ ದೃಷ್ಟಿಯಿಂದ ಭವ್ಯವಾಗಿರುವ ಮೂಡಲಪಾಯ ಕಣ್ಣಿಗೆ ದೊಡ್ಡದಾಗಿ ಕಂಡು ದೊಡ್ಡಾಟವಾಯಿತು. ದೊಡ್ಡಾಟದ ಮುಂದೆ ಸಣ್ಣವಾಗಿ ಕಂಡ ಡಪ್ಪಿನಾಟ ಸಣ್ಣಾಟವೆನಿಸಿತು.

ಡಪ್ಪಿನಾಟದ ಉಗಮದ ಬಗ್ಗೆ ನಿಖರವಾಗಿ ಹೇಳಲು ಸಾಧ್ಯವಿಲ್ಲ. ೧೯ನೇ ಶತಮಾನದ ಉತ್ತರಾರ್ಧದಲ್ಲಿ ಈ ರಂಗ ಪ್ರಕಾರ ರೂಢಿಯಲ್ಲಿದ್ದುದಾಗಿ ತಿಳಿದುಬರುತ್ತದೆ. ಕೆಲವು ಕೃತಿಗಳ ರಚನಾಕಾಲ ಮತ್ತು ಪ್ರಸಾರಗಳನ್ನು ಗಮನಕ್ಕೆ ತೆಗೆದುಕೊಂಡರೆ ೧೮೫೦ರಿಂದೀಚೆಗೆ ಡಪ್ಪಿನಾಟಗಳು ಹುಟ್ಟಿಕೊಂಡಿರಬೇಕು ಎಂದೆನಿಸುತ್ತದೆ. ೧೯೦೦ ಸುಮಾರಿಗೆ ಇವು ಸಾರ್ವತ್ರಿಕ ಮಾನ್ಯತೆಯನ್ನು ಪಡೆದುಕೊಂಡು ತಮ್ಮ ಪರಂಪರೆಯನ್ನು ಸ್ಥಿರಗೊಳಿಸಿಕೊಂಡಿದ್ದವು. ಸರಳ ರೂಪದ ಈ ರಂಗಪ್ರಕಾರ ಭವ್ಯಸ್ವರೂಪದ ಮೂಡಲಪಾಯದ

ಪ್ರದೇಶದಲ್ಲಿ ಅದರ ಜೊತೆಜೊತೆಗೇ ಬೆಳೆದು ಜನಪ್ರಿಯವಾದುದು ಗಮನಾರ್ಹವಾದ ಅಂಶವಾಗಿದೆ. ಕೆಲವು ವಿದ್ವಾಂಸರು ಊಹಿಸಿರುವಂತೆ ಖಂಡಿತವಾಗಿಯೂ ಡಪ್ಪಿನಾಟ ಮೂಡಲಪಾಯದ ಸರಳರೂಪವಲ್ಲ ವಸ್ತು-ಸಂಗೀತ-ಅಭಿವ್ಯಕ್ತಿ ಈ ಎಲ್ಲ ರೀತಿಯಿಂದ ಡಪ್ಪಿನಾಟ ಒಂದು ಸ್ವತಂತ್ರ ರಂಗಪ್ರಕಾರವಾಗಿದೆ. ಮೂಡಲಪಾಯಕ್ಕೆ ಮತ್ತು ಡಪ್ಪಿನಾಟಕ್ಕೆ ಯಾವ ಸಂಬಂಧವೂ ಇಲ್ಲ.

ಡಪ್ಪಿನಾಟದ ಪರಂಪರೆಯನ್ನು ಪ್ರಥಮ ಘಟ್ಟ ಮತ್ತು ದ್ವಿತೀಯ ಘಟ್ಟ ಎಂದು ವರ್ಗೀಕರಿಸಬೇಕಾಗುತ್ತದೆ ಆರಂಭ ಕಾಲದಿಂದ ೧೯೨೦ರವರೆಗೆ ಪ್ರಥಮ ಘಟ್ಟ. ೧೯೨೦ ರಿಂದೀಚೆಗೆ ದ್ವಿತೀಯ ಘಟ್ಟ. ಪ್ರಥಮ ಘಟ್ಟದ ಅವಧಿಯ ಡಪ್ಪಿನಾಟಗಳು ಮೂಲತಃ ಗೀತರೂಪಕಗಳು ಮತ್ತು ಅಚ್ಚ ಜಾನಪದ ರಚನೆಗಳು. ಇವುಗಳ ವಸ್ತು ಸಾಮಾನ್ಯ ವಾಗಿ ಸಾಮಾಜಿಕ ಸಂಭಾಷಣೆಗಳು ಲೇಖಕನಿಂದ ರಚನೆಗೊಂಡಿರುವುದಿಲ್ಲ. ನಟರು ಹಾಡಿಗೆ ತಕ್ಕಂತೆ ಆಶು ಸಂಭಾಷಣೆಗಳನ್ನು ಹೇಳುತ್ತಾರೆ. ಇದು ಅವರವರ ಪ್ರತಿಭೆಗೆ ಸಂಬಂಧಿ ಸಿದ್ದು. ಈ ಚುಟುಕು ಸಂಭಾಷಣೆಗಳು ಹಾಡಿನ ಗದ್ಯರೂಪವಾಗಿರುವುದೇ ಹೆಚ್ಚು. ಹೀಗಾಗಿ ಇಲ್ಲಿ ಸಂಭಾಷಣೆಗಳು ಗೌಣ. ಹಾಡಿನ ಲಯಕ್ಕೆ ತಕ್ಕಂತೆ ೨-೩ ತರದ ಸರಳ ಕುಣಿತಗಳಿರುತ್ತವೆ. ಇದಿಷ್ಟು ಪ್ರಥಮ ಘಟ್ಟದ ಡಪ್ಪಿನಾಟಗಳ ಸ್ವರೂಪ.

ಪ್ರಥಮ ಘಟ್ಟದ ಡಪ್ಪಿನಾಟಗಳಲ್ಲಿ-ಅಷ್ಟೇ ಏಕೆ ಇಡೀ ಜಾನಪದ ರಂಗಭೂಮಿ ಯಲ್ಲಿ ಅತ್ಯಂತ ಪ್ರಸಿದ್ಧವಾದುದೆಂದರೆ ಸಂಗ್ಯಾಬಾಳ್ಯಾ. ೧೮೭೦ರ ಸುಮಾರಿಗೆ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದಲ್ಲಿ ನಡೆದ ನೈಜ ಘಟನೆಯನ್ನಾಧರಿಸಿ ರಚನೆಗೊಂಡ ಈ ಡಪ್ಪಿ ನಾಟ ಅಲ್ಪಾವಧಿಯಲ್ಲಿ ಬಹಳಷ್ಟು ಜನಪ್ರಿಯವಾಯಿತು. ಪ್ರೇಮ ಕಾಮಗಳ ಸಂಕೀರ್ಣ ಕಥಾವಸ್ತುವನ್ನೊಳಗೊಂಡಿರುವ ಸಂಗ್ಯಾ ಬಾಳ್ಯಾರ ಕತೆ ಸಾರ್ವಕಾಲಿಕ ಆಕರ್ಷಣೆ ಪಡೆದು ಕೊಂಡಿದೆ. ಸಂಗ್ಯಾ ಬಾಳ್ಯಾ ಇವರು ಗೆಳೆಯರು. ಸಂಗ್ಯಾ ಶ್ರೀಮಂತ ಮನೆತನದ ರಸಿಕ ತರುಣ. ಬಾಳ್ಯಾ ಬಡವ. ಅವರಿಬ್ಬರ ಸ್ನೇಹಕ್ಕೆ ಶ್ರೀಮಂತಿಕೆ ಬಡತನಗಳು ಅಡ್ಡಿಯಾಗಿರಲಿಲ್ಲ. ಇತ್ತ ಇನ್ನೊಂದು ಕುಟುಂಬ. ಈರ್‍ಯಾ ಆ ಕುಟುಂಬದ ಹಿರಿಯಣ್ಣ. ಅವನ ಹೆಂಡತಿಯಾದ ಗಂಗಿ ಅಪೂರ್ವ ಸುಂದರಿಯಾದ ತರುಣಿ. ಗಂಡ ವ್ಯಾಪಾರಕ್ಕೆ ಪರಊರಿಗೆ ಹೋದಾಗ ಗಂಗಿ ಊರ ಹೊರಗಿನ ಬಸವಣ್ಣದೇವರ ಜಾತ್ರೆಗೆ ಹೋಗಿರು ತ್ತಾಳೆ. ಅಲ್ಲಿ ಅವಳು ಸಂಗ್ಯಾನ ಕಣ್ಣಿಗೆ ಬಿದ್ದಳು. ತಕ್ಷಣವೇ ಅವನು ಗಂಗಿಯ ರೂಪಕ್ಕೆ ಮರುಳಾಗಿ ಮನಸೋತ. ಅವಳನ್ನು ಪಡೆಯಲು ಹಂಬಲಿಸಿದ. ಗೆಳೆಯ ಬಾಳ್ಯಾ ಗಂಗಿಯ ಮನೆಗೆ ಹೋಗಿ ಸಂಗ್ಯಾನ ಅಪೇಕ್ಷೆಯನ್ನು ಅವಳಿಗೆ ತಿಳಿಸಿದಾಗ ಅವಳು ಬಾಳ್ಯಾ ನನ್ನು ಬೈದು ಅಪಮಾನಮಾಡಿ ಕಳಿಸಿದಳು. ಸಂಗ್ಯಾ ಬೇರೆ ಉಪಾಯ ಹುಡುಕಿದ. ಗಂಗಿಯ ಸೇವೆ ಮಾಡಿಕೊಂಡಿದ್ದ ಪರಮ್ಮ ಎಂಬ ಮುದುಕಿಗೆ ಹಣಕೊಟ್ಟು ಆಸೆ ಹುಟ್ಟಿಸಿದ. ಅವಳು ಗಂಗಿಗೆ ಅದು ಇದೂ ಹೇಳಿ ಕೊನೆಗೆ ಹೆದರಿಸಿ (ಬ್ಲ್ಯಾಕ್‌ಮೇಲ್‌ಮಾಡಿ) ಗಂಗಿ ಅನಿವಾರ್ಯವಾಗಿ ಸಂಗ್ಯಾನನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾಳೆ. ಒಲ್ಲದ ಮನಸ್ಸಿನಿಂದ

ಸಂಗ್ಯಾನ ಸಂಗವನ್ನು ಒಪ್ಪಿದ್ದ ಗಂಗಿ ಬರಬರುತ್ತ ಸಂಗ್ಯಾನ ತೀವ್ರ ಪ್ರೇಮದ ಆವೇಗಕ್ಕೆ ಕರಗುತ್ತಾಳೆ. ಅವರಿಬ್ಬರ ಪ್ರೇಮಜೀವನ ಉತ್ಸಾಹದಿಂದ ಸಾಗುತ್ತದೆ. ಅಷ್ಟರಲ್ಲಿ ಈರ‍್ಯಾ ವ್ಯಾಪಾರದಿಂದ ಮರಳಿ ಬರುತ್ತಾನೆ. ಹೆಂಡತಿಯ ಅನೈತಿಕ ಸಂಬಂಧ ಗೊತ್ತಾಗಿ ಅವಮಾನದಿಂದ ಕುದಿಯುತ್ತಾನೆ. ಗಂಗಿಯನ್ನು ಮನೆಯಿಂದ ಹೊರಗೆ ಹಾಕಿದ. ಬಾಳ್ಯಾನಿಗೆ ಹಣಕೊಟ್ಟು ಅವನ ನೆರವಿನಿಂದ ಸಂಗ್ಯಾನನ್ನು ಕೊಲೆ ಮಾಡುತ್ತಾನೆ. ತಾನು ಕೊಲೆ ಮಾಡಿರುವುದನ್ನು ಸರಕಾರದ ಮುಂದೆ ಒಪ್ಪಿಕೊಂಡು ಮರಣ ದಂಡನೆಗೆ ಗುರಿಯಾಗುತ್ತಾನೆ. ಇದಿಷ್ಟು ಸಂಗ್ಯಾಬಾಳ್ಯಾನ ಕತೆ.

ಸಂಗ್ಯಾಬಾಳ್ಯಾ ರಚಿಸಿದವನು ಗಂಗಿಯ ತವರೂರಾದ ಬೈಲವಾಡದ ಪತ್ತಾರ ಮಾಸ್ತರ ಎಂಬವನು. ಸಂಗ್ಯಾನ ಕೊಲೆಯಾದ ಹೊಸದರಲ್ಲಿ ಈ ದಪ್ಪಿನಾಟ ರಚನೆಗೊಂಡಿತು. ಕೆಲ ದಿನಗಳಲ್ಲಿ ಮಿತಿ ಮೀರಿ ಪ್ರಸಾರಗೊಂಡಿತು. ಪತ್ತಾರ ಮಾಸ್ತರನ ಕಾವ್ಯಶಕ್ತಿ, ನೃತ್ಯ ಸಂಯೋಜನಾ ಕೌಶಲ, ಸರಳ ರಂಗ ತಂತ್ರಗಳು ಅಸಾಮಾನ್ಯವಾಗಿವೆ. ಜನಪದ ಭಾಷೆಯ ಸತ್ವ ಇಲ್ಲಿಯ ಹಾಡುಗಳಲ್ಲಿ ಹೆಪ್ಪುಗಟ್ಟಿ ನಿಂತಿದೆ. ಆಡುಮಾತನ್ನು ಕಾವ್ಯದ ನೆಲೆಗೆ ಏರಿಸಿದ ಪತ್ತಾರ ಮಾಸ್ತರನ ಪ್ರತಿಭೆ ಪ್ರಖರವಾದುದು. ಹಾಡುಗಳಿಗೆ ಮತ್ತು ಜಾನಪದ ಲಯದ ಧಾಟಿಗಳಿಗೆ ಇರುವ ಅನ್ಯೋನ್ಯ ಸಂಬಂಧ ಬೆರಗುಗೊಳಿಸುವಂಥದು. ಅಂದಿನಿಂದ ಇಂದಿನವರೆಗೆ ಸಂಗ್ಯಾಬಾಳ್ಯಾ ಅತ್ಯಂತ ಜನಪ್ರಿಯ ರಂಗ ಪ್ರಕಾರವಾಗಿದೆ. ತನ್ನ ಪ್ರಾದೇಶಿಕ ಮಿತಿಯನ್ನು ದಾಟಿ ಕರ್ನಾಟಕದ ತುಂಬ ಪ್ರಸಾರಗೊಂಡಿದೆ. ದೂರದೂರ ಪ್ರಸರಣಗೊಂಡಂತೆ ಅನೇಕ ಸ್ಥಳೀಯ ಆವೃತ್ತಿಗಳು ಹುಟ್ಟಿಕೊಂಡಿವೆ. ಸಂಗ್ಯಾಬಾಳ್ಯಾ ಕರ್ನಾಟಕ ರಂಗಭೂಮಿಯ ಪರಂಪರೆಯಲ್ಲಿ ಒಂದು ಮಹತ್ವದ ಮೈಲಿಗಲ್ಲಾಗಿದೆ.

ಸಂಗ್ಯಾಬಾಳ್ಯಾದ ನಂತರದ ಸ್ಥಾನ ರಾಧಾನಾಟಕಕ್ಕೆ ದೊರೆಯುತ್ತದೆ. ಇದು ಸ್ಥಳೀಯ ದಾಸರಾಟ ಮತ್ತು ಪಕ್ಕದ ಮಹಾರಾಷ್ಟ್ರದ ತಮಾಶಾಗಳ ಸಮ್ಮಿಶ್ರಣದಿಂದ ಹುಟ್ಟಿಕೊಂಡಿದೆ. ರಾಧಾನಾಟಕದ ಮೂಲಕರ್ತೃ ಬಸರಗಿ ಕುಂಬಾರ ಎಂಬಾತ. ಅವನ ನಂತರದ ಎಷ್ಟೋ ಜನ ಕವಿಗಳು ಅನೇಕ ಹಾಡುಗಳನ್ನು ಬರೆದು ಸೇರಿಸಿದ್ದಾರೆ. ರಾಧಾನಾಟಕದ ಸ್ವರೂಪದಲ್ಲಿ ತಮಾಶಾದ ಅಂಶಗಳು ಢಾಳವಾಗಿ ಗೋಚರಿಸುತ್ತವೆ. ಚಿಮಣ ಮತ್ತು ಗಲ್ಪೋಜಿ ಇವರ ಪ್ರೇಮ ಕಥೆ ರಾಧಾನಾಟಕದ ವಸ್ತು. ಈ ಕಥಾವಸ್ತುವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ರಂಗಪ್ರಯೋಗಕ್ಕೆ ಅಳವಡಿಸಲಾಗಿದೆ. ಚಿಮಣ ಎಂಬ ಸುಂದರಿಯಾದ ಗೃಹಿಣಿಯನ್ನು ಊರಿನ ರಸಿಕ ಗಲಪೋಜಿ ನೋಡಿ ಮರುಳಾಗುತ್ತಾನೆ. ತನ್ನ ಸ್ನೇಹಿತ ಸಖಾರಾಮ ತಾತ್ಯಾನ ಮೂಲಕ ಅವಳನ್ನು ಒಲಿಸಿಕೊಳ್ಳಲು ವಿಫಲನಾಗಿ ತಾನೇ ನೇರವಾಗಿ ಅವಳಲ್ಲಿ ಪ್ರೇಮಭಿಕ್ಷೆ ಬೇಡುತ್ತಾನೆ. ಅವಳು ನಿರಾಕರಿಸುವಳು. ಬೇಸರಗೊಂಡು ಸನ್ಯಾಸಿಯಾಗುವನು. ಆಗ ಚಿಮಣಾಳಿಗೆ ಪಶ್ಚಾತ್ತಾಪವಾಗಿ ಅವನನ್ನು ಹುಡುಕಿಕೊಂಡು ಹೋಗುತ್ತಾಳೆ. ಗಲಪೋಜಿಯ ಹತ್ತಿರ ಕ್ಷಮೆ ಕೇಳುತ್ತಾಳೆ.

ಕೊನೆಗೆ ಅವರಿಬ್ಬರೂ ಕೂಡಿ ಸುಖವಾಗಿರುವರು. ಇವಿಷ್ಟು ಸ್ಥೂಲವಾದ ಕಥೆ. ಕಥೆಯ ಕೊನೆಯನ್ನು ಬೇರೆ ಬೇರೆ ರೀತಿಯಲ್ಲಿ ಮುಗಿಸುವ ಎರಡು ಭಿನ್ನ ಸಂಪ್ರದಾಯಗಳು ಹುಟ್ಟಿಕೊಂಡವು. ಚಿಮಣಾಗಲಪ್ರೋಜಿಯನ್ನು ಒಪ್ಪಿಕೊಂಡು ಅವನ ವಶಳಾಗುವುದು ಒಂದು ಸಂಪ್ರದಾಯ. ಅವಳು ಗಲಪ್ರೋಜಿಗೆ ಮನಸೋಲದೆ ಅಜೇಯಳಾಗಿ ಉಳಿಯುವುದು ಇನ್ನೊಂದು ಸಂಪ್ರದಾಯ. ಉತ್ತರ ಕರ್ನಾಟಕದ ಲಾವಣಿ ಪರಂಪರೆಯಲ್ಲಿ ಪ್ರಭಾವ ಶಾಲಿಯಾಗಿ ಬೆಳೆದು ಬಂದಿರುವ ಪರದೇಶಿ ನಾಗೇಶಿ ಹಾಡಗಳು ರಾಧಾನಾಟಕದ ಭಿನ್ನ ಸಂಪ್ರದಾಯಗಳ ಉಗಮಕ್ಕೆ ಕಾರಣವಾಗಿವೆ. ಪರದೇಶಿ ಗಂಡು ಹೆಚ್ಚೆಂದು ನಾಗೇಶಿ ಹೆಣ್ಣು ಹೆಚ್ಚೆಂದು ಸೋದಾಹರಣವಾಗಿ ವಾದಿಸುವ ಎರಡು ಪಂಗಡಗಳು. ಇದರ ಪ್ರಭಾವ ರಾಧಾನಾಟಕದ ಮೇಲಾಯಿತು. ಒಂದು ಕಾಲಕ್ಕೆ ರಾಧಾನಾಟಕಕ್ಕೆ "ಅನುಭವ ಸಾರ ಲೀಲಾ" ಎಂಬ ಹೆಸರಿತ್ತು. ವಿಜಾಪುರ ಜಿಲ್ಲೆಯ ತಳೇವಾಡಿ ಗ್ರಾಮದ ನಬಿ ಎಂಬ ಕಲಾವಿದ ಇದನ್ನು ಪ್ರಚಾರಕ್ಕೆ ತಂದನು. ಚಿಮಣಾ ಗಲಪ್ರೋಜಿಗೆ ನಿರರ್ಗಳವಾಗಿ ಉಪದೇಶ ನೀಡುವುದು ಇಲ್ಲಿಯ ವೈಶಿಷ್ಟ್ಯ, ಒಂದು ರಂಗ ಮಾಧ್ಯಮ ತನ್ನ ನಾಟಕೀಯ ಅಂಶಗಳನ್ನು ಕಡಿಮೆ ಮಾಡಿಕೊಂಡು ವೇದಾಂತದ ಚರ್ಚೆಯ ವೇದಿಕೆಯಾಗಿರುವುದಕ್ಕೆ ರಾಧಾನಾಟಕ ಉದಾಹರಣೆಯಾಯಿತು.

ರಾಧಾನಾಟಕದ ಗೊಲ್ಲತಿ ಪ್ರಸಂಗ ವಿಶಿಷ್ಟವಾಗಿದೆ. ಪೂರ್ವರಂಗದಲ್ಲಿ ಬರುವ ಈ ಸಣ್ಣ ದೃಶ್ಯ ಮರಾಠಿಯ 'ಗೌಳಣ'ದ ಪ್ರಭಾವದಿಂದ ಹುಟ್ಟಿಕೊಂಡಿದೆ. ಆಟದ ಆರಂಭಕ್ಕೆ ಗೊಲ್ಲತಿ (ಗೋಪಿಕಾ ಸ್ತ್ರೀ) ಹಾಲು ಮಾರಲು ಬರುತ್ತಾಳೆ. ಬಾಲಗೋಪಾಲ ಸುಂಕ ಕೇಳಿ ಅವಳನ್ನು ತಡೆದು ನಿಲ್ಲಿಸುವನು ಅವರಿಬ್ಬರಿಗೂ ಮಾತುಕತೆ ನಡೆಯುತ್ತದೆ. ಶೃಂಗಾರ ಮತ್ತು ಹಾಸ್ಯ ಬೆರೆತುಕೊಂಡಿರುವ ಈ ಸನ್ನಿವೇಶದ ಸಂಭಾಷಣೆಗಳು ತುಂಬಾ ಆಕರ್ಷಕವಾಗಿರುತ್ತವೆ. ಪೂರ್ವರಂಗದ ಈ ಗೊಲ್ಲತಿ ಪ್ರಸಂಗಕ್ಕೆ ಮತ್ತು ಮುಂದಿನ ಮುಖ್ಯ ಕಥೆಗೆ ಯಾವ ಸಂಬಂಧವೂ ಇರುವುದಿಲ್ಲ. ಇದೊಂದು ಸ್ವತಂತ್ರವಾದ ಸನ್ನಿವೇಶ. ಇದು ಪ್ರಥಮ ಘಟ್ಟದ ಡಪ್ಪಿನಾಟಗಳಲ್ಲಿ (ಸಂಗ್ಯಾಬಾಳ್ಯಾ ಬಿಟ್ಟು) ಸಾಮಾನ್ಯ ರಾಧಾನಾಟಕದಲ್ಲಿ ಗೊಲ್ಲತಿ ಪ್ರಸಂಗವನ್ನು ಅರ್ಥಪೂರ್ಣವಾಗಿ ಬೆಳೆಸಿಕೊಳ್ಳಲಾಗಿದೆ. ಗೊಲ್ಲತಿ ಕೃಷ್ಣನ ಕಾಟ ತಾಳಲಾರದೆ "ಮುಂದಿನ ಜನ್ಮದಲ್ಲಿ ನಾನು ಚಿಮಣಾ ಆಗಿ ನೀನು ಗಲಪ್ರೋಜಿಯಾಗಿ ಜನ್ಮ ತಾಳೋಣ ಆಗ ನಮ್ಮಿಬ್ಬರ ಮಿಲನವಾಗಲಿ" ಎಂದು ಹಾರೈಸುವುದರ ಮೂಲಕ ರಾಧಾನಾಟಕದ ಗೊಲ್ಲತಿ ಪ್ರಸಂಗ ಮುಗಿಯುತ್ತದೆ. ಇದು ಮುಂದಿನ ಕಥೆಗೆ ಒಂದು ಅರ್ಥ ಪೂರ್ಣವಾದ ಕೊಂಡಿಯಾಗಿರುವುದನ್ನು ಗಮನಿಸಬಹುದು.

ರಾಧಾನಾಟಕದ ಹಾಡುಗಾರಿಕೆಯಲ್ಲಿ ಮರಾಠಿ ತಮಾಶಾದ ಧಾಟಿಗಳು ಎದ್ದು ಕಾಣು ತ್ತವೆ. ದೃತ್ ಲಯದ ಉತ್ಸಾಹದ ನಡಿಗೆಯಲ್ಲಿ ಹರಿದು ಬರುವ ಈ ಹಾಡುಗಳು ಮನಸ್ಸಿಗೆ ಮುದ ನೀಡುವಲ್ಲಿ ಯಶಸ್ವಿಯಾಗಿವೆ. ಸಾಮಾನ್ಯವಾಗಿ ಡಪ್ಪಿನಾಟಗಳು ಕುಣಿತ ಪ್ರಧಾನ ವಲ್ಲ. ಆದರೆ ರಾಧನಾಟಕದಲ್ಲಿ ತಕ್ಕಮಟ್ಟಿಗೆ ಕುಣಿತವಿದೆ. ಹಾಡುಗಳ ಧಾಟಿಗಳು ಕುಣಿತಕ್ಕೆ ಪ್ರಚೋದನೆ ನೀಡುವಂಥ ಲಯಗಾರಿಕೆ ಹೊಂದಿವೆ. ಕುಣಿತದಲ್ಲಿ ಹೆಚ್ಚಿನ ವೈವಿಧ್ಯತೆ

ಇಲ್ಲದಿದ್ದರೂ ಉತ್ಸಾಹ ನಿರಂತರವಾಗಿರುತ್ತದೆ.

ಪ್ರಥಮ ಘಟ್ಟದ ಡಪ್ಪಿನಾಟಗಳಲ್ಲಿ ಸಂಗ್ಯಾಬಾಳ್ಯಾ ಮತ್ತು ರಾಧಾನಾಟಕ ಬಿಟ್ಟರೆ ರೂಪಸೇನ, ಬಸವಂತ ಬಲವಂತ, ಸತ್ಯವಾನ ಸಾವಿತ್ರಿ, ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ ಮುಂತಾದವು ಜನಪ್ರಿಯವಾಗಿವೆ. ರೂಪಸೇನ ಮತ್ತು ಬಸವಂತ ಬಲವಂತಗಳು ಜಾನಪದ ಕತೆಗಳು. ಕಡ್ಲಿಮಟ್ಟಿ ಸ್ಟೇಶನ್ ಮಾಸ್ತರ್ ಎಂಬುದು ಬಿಜಾಪುರ ಜಿಲ್ಲೆಯ ಕಡ್ಲಿಮಟ್ಟಿ ಎಂಬಲ್ಲಿ ನಡೆದ ನೈಜ ಘಟನೆಯನ್ನು ಆಧರಿಸಿದ ಪ್ರಸಂಗವಾಗಿದೆ. ಇವಿಷ್ಟು ಸಾರ್ವತ್ರಿಕ ಪ್ರಚಾರ ಪಡೆದುಕೊಂಡಂಥವು. ಅಲ್ಲಲ್ಲಿ ಸ್ಥಳೀಯ ಇತಿಮಿತಿಯಲ್ಲಿ ಪ್ರಯೋಗ ಗೊಳ್ಳುವಂಥ ಕೃತಿಗಳ ಸಂಖ್ಯೆ ಸುಮಾರು ಅರ್ಧ ಶತಕದಷ್ಟಾಗಬಹುದು.

ಡಪ್ಪಿನಾಟದ ಪರಂಪರೆಯಲ್ಲಿ ದ್ವಿತೀಯ ಘಟ್ಟ ಪ್ರಾರಂಭವಾದುದು ೧೯೩೦ರ ಸುಮಾರಿಗೆ ಡಪ್ಪಿನಾಟಗಳಿಗೆ ನಾಟಕದ ಅಂಶಗಳನ್ನು ಸೇರಿಸುವ ಮತ್ತು ಈ ರಂಗಪ್ರಕಾರ ವನ್ನು ವಿಶಿಷ್ಟ ಉದ್ದೇಶಗಳಿಗೆ ಮಾಧ್ಯಮವಾಗಿ ಬಳಸಿಕೊಳ್ಳುವ ಪ್ರಯತ್ನ ಈಗ ನಡೆಯಿತು. ಇಷ್ಟೊತ್ತಿಗಾಗಲೆ ಕಂಪನಿ ನಾಟಕಗಳು ಗ್ರಾಮೀಣ ಪ್ರೇಕ್ಷಕರನ್ನು ಬಹಳಷ್ಟು ಆಕರ್ಷಿಸಿದ್ದವು. ಈ ನಾಟಕಗಳಿಂದ ಪ್ರೇರಣ ಪಡೆದ ಬೆಳಗಾಂವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಕಾದ್ರೊಳ್ಳಿ ಗ್ರಾಮದ ನೀಲಕಂಠಪ್ಪ ಎಂಬ ಕವಿ ಹೊಸ ಮಾರ್ಗವೊಂದನ್ನು ಕಂಡುಕೊಂಡ. ಸಾಂಪ್ರದಾಯಿಕ ಡಪ್ಪಿನಾಟಗಳಿಗೆ ಹೊಸ ಆಕಾರ ನೀಡಿದ. ಇಲ್ಲಿಯವರೆಗೆ ಡಪ್ಪಿನಾಟಗಳು ಗೀತರೂಪಕಗಳಾಗಿದ್ದವು. ನೀಲಕಂಠಪ್ಪ ವ್ಯವಸ್ಥಿತವಾದ ಸಂಭಾಷಣೆ ಬರೆದು ಸೇರಿಸಿದ. ಸಂಭಾಷಣೆಗಳ ಭಾಷಾಶೈಲಿ ಮೊದಲ ಪಾಯದ ಭಾಷಾಶೈಲಿಗಿಂತ ತೀರಾ ಭಿನ್ನವಾದ ಮತ್ತು ಕಂಪನಿ ನಾಟಕದ ಭಾಷೆಯನ್ನು ನೆನಪಿಗೆ ತರುವಂಥದಾಗಿತ್ತು. ಹಾಡುಗಾರಿಕೆಯಲ್ಲಿ ಇದೇ ತರದ ಹೊಸತನ ತಲೆಹಾಕಿತು. ನಾಟ್ಯಸಂಗೀತದ ವಾಸನೆಯಿರುವ ಹೊಸ ಧಾಟಿಗಳು ಸೃಷ್ಟಿಗೊಂಡವು. ಈ ಧಾಟಿಗಳು ಮೊದಲಿನ ಅಚ್ಚಜಾನಪದ ಧಾಟಿಗಳೊಂದಿಗೆ ಸಮ ಪ್ರಮಾಣದಲ್ಲಿ ಬೆರೆತುಕೊಂಡುದರಿಂದ ವಿಶಿಷ್ಟ ರೀತಿಯ ಸಂಗೀತ ಶೈಲಿಯೊಂದು ರೂಪುಗೊಂಡಿತು. ಡಪ್ಪಿನೊಂದಿಗೆ ತಬಲಾ ಕೂಡ ಬಳಕೆಗೆ ಬಂದಿತು. ಈ ಹಿನ್ನೆಲೆಯಲ್ಲಿ ನೀಲಕಂಠಪ್ಪನ 'ತಿರುನೀಲಕಂಠ' ಎಂಬ ಡಪ್ಪಿನಾಟದ ಮೂಲಕ ಎರಡನೆಯ ಘಟ್ಟ ಆರಂಭವಾಯಿತು. ತಿರುನೀಲಕಂಠ ತನ್ನ ಹೊಸತನದಿಂದಾಗಿ ಕೂಡಲೆ ಜನಪ್ರಿಯವಾಯಿತು. ಇದಕ್ಕೆ ಕಾದ್ರೊಳ್ಳಿ ಆಟ ಎಂಬ ಹೆಸರು ರೂಢಿಗೆ ಬಂದಿತು. (ನೀಲಕಂಠಪ್ಪನ ಊರು ಕಾದ್ರೊಳ್ಳಿ ಗ್ರಾಮ ಆಗಿದ್ದುದರಿಂದ) ಇದೇ ಪ್ರದೇಶದ ಹಣ್ಣಿಕೇರಿ ಗ್ರಾಮದ ಶಿವಾನಂದ ಕವಿ ನೀಲಕಂಠಪ್ಪನ ಮಾರ್ಗದಲ್ಲಿ ನಡೆದು ನಿಜಗುಣ ಶಿವಯೋಗಿ, ಅಲ್ಲಮಪ್ರಭು, ಕುಬೇರ, ಮಹಾದೇವಿ ಮೊದಲಾದ ಕೃತಿಗಳನ್ನು ರಚಿಸಿದ. ಇವೂ ಕೂಡ ಸಾಕಷ್ಟು ಜನಪ್ರಿಯತೆ ಗಳಿಸಿಕೊಂಡಿವೆ.

ದ್ವಿತೀಯ ಘಟ್ಟದ ಡಪ್ಪಿನಾಟಗಳಲ್ಲಿ ಕಲಾತ್ಮಕತೆ ಕಡಿಮೆ, ಈಗಾಗಲೇ ಈ ಪ್ರದೇಶ ದಲ್ಲಿ ಮನೆಮಾತಾಗಿದ್ದ ಪರದೇಶಿ ನಾಗೇಶಿ ಲಾವಣಿ ಸಂಪ್ರದಾಯದ ಗಾಢ ಪ್ರಭಾವ ಈ

ಡಪ್ಪಿನಾಟಗಳ ಸೌಂದರ್ಯ ಕೆಡಿಸಿತು. ಗಂಡು ಹೆಣ್ಣು ತಾನು ಹೆಚ್ಚು ತಾನು ಹೆಚ್ಚು ಎಂದು ಲಾವಣಿಗಳ ಮೂಲಕ ವಾದಿಸುವುದರ ಬದಲು ಡಪ್ಪಿನಾಟದ ಪಾತ್ರಗಳು ನೇರವಾಗಿ ಸಂಭಾಷಣೆಗಳ ಮೂಲಕ ವಾದವಿವಾದಕ್ಕೆ ಇಳಿದವು. 'ನಿಜಗುಣಶಿವಯೋಗಿ'ಯಲ್ಲಿ ಅರ್ಧಭಾಗ ಇಂಥ ಚರ್ಚೆಗೆ ಮೀಸಲಾಗಿದೆ. ಅಲ್ಲಮಪ್ರಭು ಇಲ್ಲಿ ಉನ್ನತ ಮಟ್ಟದ ಅನುಭಾವಿಯಾಗಿ ಚಿತ್ರಿತವಾಗಿಲ್ಲ. ಬದಲಾಗಿ ಗಂಡು ಜಾತಿಯ ಪರವಾಗಿ ವಾದಿಸುವ ವಕೀಲನಂತಾಗಿದ್ದಾನೆ. ತಿರುನೀಲಕಂಠದಲ್ಲಿ ಸ್ವತಃ ಶಿವಪಾರ್ವತಿಯರು ಇಂಥ ವಾದ ವಿವಾದಕ್ಕಿಳಿಯುತ್ತಾರೆ ನಡುನಡುವೆ ಜೀವನ ಧರ್ಮ, ಸಂಸಾರ, ಮೋಕ್ಷಗಳ ಬಗ್ಗೆ ಅದ್ವೈತ ಪರವಾದ ದೀರ್ಘ ಉಪದೇಶಗಳು ನುಸುಳುತ್ತವೆ. ಈ ಅಂಶಗಳ ವೈಚಿತ್ರ್ಯ ಏನೇ ಇರಲಿ, ಈ ರಂಗಪ್ರಯೋಗಗಳು ಗ್ರಾಮೀಣ ಪ್ರೇಕ್ಷಕರ ಮನಸ್ಸು ಗದ್ದಿರುವುದಂತೂ ನಿಜ.

ಡಪ್ಪಿನಾಟಗಳಲ್ಲಿ ಪಾತ್ರವಹಿಸುವ ಹೆಣ್ಣುಮಕ್ಕಳ ಪರಂಪರೆ ಒಂದು ಬೆಳೆದುಕೊಂಡು ಬಂದಿದೆ. ಇವರಿಗೆ ಚಿಮಣಾ ಎನ್ನುತ್ತಾರೆ. ರಾಧಾನಾಟಕದ ಕಥಾನಾಯಕಿ ಚಿಮಣಾಳ ಹೆಸರಿನಿಂದ ಇದು ಬಂದಿದೆ. ಇವರು ದೇವದಾಸಿ ಸಂಪ್ರದಾಯದವರು. ಪ್ರಥಮ ಘಟ್ಟದ ಡಪ್ಪಿನಾಟಗಳ ನಾಯಕಿಯ ಪಾತ್ರಕ್ಕೆ ಇವರು ಬೇಕೆ ಬೇಕು. ತಕ್ಕಮಟ್ಟಿಗೆ ಹಾಡುಗಾರಿಕೆ ಕುಣಿತಗಳನ್ನು ಅಭ್ಯಾಸ ಮಾಡಿದವರಾಗಿರುತ್ತಾರೆ. ಇವರು ಶ್ರೀ ಕೃಷ್ಣಪಾರಿಜಾತದಲ್ಲಿ ಪಾತ್ರವಹಿಸುವದೂ ಉಂಟು. ಆದರೆ ಅಲ್ಲಿ ಇವರನ್ನು ಚಿಮಣಾ ಎಂದು ಕರೆಯುವುದಿಲ್ಲ.

□ □

ಚೆನ್ನಬಸವಣ್ಣ ಮತ್ತು ಪುರೋಹಿತಶಾಹಿ

—ಡಾ. ಸೋಮಶೇಖರ ಇಮ್ರಾಪೂರ

ನವಸಮಾಜ ನಿರ್ಮಾಣದಲ್ಲಿ ಮಹತ್ತರ ಪಾತ್ರವನ್ನಾಡಿದ ಹನ್ನೆರಡನೆಯ ಶತಮಾನದ ವೀರಶೈವ ಧಾರ್ಮಿಕ ಕ್ರಾಂತಿಯ ಕೇಂದ್ರವ್ಯಕ್ತಿ ಬಸವಣ್ಣನವರಾದರೂ, ಆ ವೈಚಾರಿಕ ಕ್ರಾಂತಿಯ ಮುಖ್ಯ ನೇತೃತ್ವ ಚೆನ್ನಬಸವಣ್ಣನವರದಾಗಿತ್ತು. ಶಿವಶರಣರೆಲ್ಲ ಕೂಡಿ ಕಲ್ಯಾಣದಲ್ಲಿ ನಡೆಸಿದ ಲೋಕಕಲ್ಯಾಣದ ವಿಚಾರ ಮಂಥನದಲ್ಲಿ ಸಕಲ ಜೀವಿಗಳಿಗೂ ಲೇಸನ್ನೆ ಬಯಸುವ ಮೂಲೋದ್ದೇಶವಿತ್ತು. ಅದೇ ಬದುಕಿನ ಸಾರ್ವಕಾಲಿಕ ಮೌಲ್ಯಗಳನ್ನು ಬಿತ್ತರಿಸುವ ವಿಶ್ವಧರ್ಮದ ಸೂತ್ರವಾಯಿತು. ಆಗಿನ ಧಾರ್ಮಿಕ, ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸ್ಥಿತಿಗತಿಗಳು ಇಂದಿಗಿಂತ ಹೊರತೇನೂ ಆಗಿರಲಿಲ್ಲ. ರಾಜಕೀಯ ವಿಪ್ಲವಗಳು, ಧರ್ಮಧರ್ಮಗಳಲ್ಲಿಯ ಪೈಪೋಟಿಗಳು ಜನಸಾಮಾನ್ಯರ ಬದುಕಿನಲ್ಲೂ ಮಾನಸಿಕ ಒತ್ತಡಗಳಾಗಿ ಪರಿಣಮಿಸಿದ್ದರಿಂದ ಹೊತ್ತು ಬಂದಂತೆ ಕೊಡೆ ಹಿಡಿವ ಸ್ವಾರ್ಥಪರ ಮನೋಭಾವ ತಾನಾಗಿಯೇ ಅಂಕುರಿಸಿತು. ಆಡಳಿತ ದರ್ಪದಲ್ಲಿ ಚಕ್ರವರ್ತಿಗಳು, ಮಂತ್ರಿಮಾಂಡಲಿಕರು; ಧರ್ಮದ ಹೆಸರಿನಲ್ಲಿ ಧರ್ಮಾಧಿಕಾರಿಗಳು; ಧರ್ಮಪ್ರಸಾರದ ಹೆಸರಿನಲ್ಲಿ ಜಂಗಮರು; ಧರ್ಮಾನುಚರರು ಭಕ್ತರು ಮುಂತಾಗಿ–ಏನೊಂದೂ ಅರಿಯದ ಪ್ರಾಮಾಣಿಕ ಮುಗ್ಧ ಜನತೆಯ ಮೇಲೆ ನಿರಂತರ ನಡೆಸಿದ ಅನ್ಯಾಯ, ಅತ್ಯಾಚಾರ, ಭ್ರಷ್ಟಾಚಾರ, ಲಂಚಕೋರತನಗಳು; ಅಸತ್ಯ ಹಿಂಸೆಗಳ ಮೂಲಕವಾಗಿ ನಡೆಸಿದ ದಬ್ಬಾಳಿಕೆ ದರ್ಪಗಳು ಶೋಷಣೆಯ ವಿವಿಧ ಸ್ತರಗಳಾಗಿ ಇಡೀ ಸಮಾಜವೇ ತತ್ತರಿಸಿತು. ಸಮಾಜವು ಉನ್ನತ ಸಂಸ್ಕೃತಿಯ ನೆಲೆ–ಬೆಲೆಗಳಿಂದ ದೂರವಾಯಿತು. ವ್ಯಕ್ತಿವ್ಯಕ್ತಿಗಳಲ್ಲಿದ್ದ ಪರಸ್ಪರ ಸ್ನೇಹ ನಂಬಿಕೆ ಗೌರವಾದರಗಳು ಮಾಯವಾಗಿ–ಶೋಷಕ ವರ್ಗವೇ ಸಮಾಜದ ಬಲಿಷ್ಠವರ್ಗವಾಗಿ ಪರಿಣಮಿಸಿದ್ದರಿಂದ ದೀನ ದುರ್ಬಲರ ಬದುಕಿಗೆ ದುರ್ಗತಿಯೇ ಒದಗಿತು. ಪುರೋಹಿತವರ್ಗದ ಅಟ್ಟಹಾಸಕ್ಕೆ ಮೂಲಸಾಧನವಾಗಿ ಆಗಲೇ ತೀರ ಶೈಥಿಲ್ಯದ ಹಾದಿ ಹಿಡಿದ ವೈದಿಕ. ಬೌದ್ಧ, ಜೈನ ಹಾಗೂ ಶೈವ ಶಾಕ್ತ ಪಂಥಗಳ ಆಚಾರ ಹಾಗೂ ಪ್ರಚಾರದ ವೈಖರಿಗಳು ಶೋಷಕ ವರ್ಗಕ್ಕೆ ಇನ್ನಷ್ಟು ತಾಳಮೇಳಗಳನ್ನು ಒದಗಿಸಿದವು. ಧರ್ಮವೆನ್ನುವುದು ಸಾಮಾನ್ಯ ಜನತೆಗೆ ನುಂಗಲಾರದ ತುತ್ತಾಯಿತು. ಧರ್ಮವು ಜನತೆಯ ವಿವೇಕದ ಮಟ್ಟಕ್ಕಿಳಿಯಲಿಲ್ಲ. ಜನತೆ ಧರ್ಮದ ಮಟ್ಟಕ್ಕೇರಲಿಲ್ಲ ಹೀಗಾಗಿ ಸಾಂಪ್ರದಾಯಿಕವಾಗಿ ಬಂದ ಅಳಿದುಳಿದ ಕೆಲವು ಉತ್ತಮ ಜೀವನಾದರ್ಶಗಳೂ ವಿಷವುಂಡು ವಿಷಮ ಸಂದರ್ಭದಲ್ಲಿ ಕಂಗೆಟ್ಟ ಜನಸಾಮಾನ್ಯರನ್ನು ಕೈಹಿಡಿಯು ನಡೆಸಿದ

ಶ್ರೇಯಸ್ಸು ಹನ್ನೆರಡನೆಯ ಶತಮಾನದ ಶಿವಶರಣರದಾಯಿತು. ವೀರಶೈವ ಧರ್ಮದಲ್ಲಿ ವಿಶ್ವಧರ್ಮವನ್ನು ಕಂಡ ಅವರು ಒಂದರ್ಥದಲ್ಲಿ ಧರ್ಮಪ್ರಸಾರದ ಮಹಾಕಾಯಕದ ಕೈಂಕರ್ಯ ತೊಟ್ಟರಾದರೂ ಆ ಮೂಲಕ ಅವರು ಸಾಧಿಸಿದ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕ್ರಾಂತಿ ಮತ್ತು ಪರ್ಯಾಯವಾಗಿ ಅದರೊಟ್ಟಿಗೇ ಸಾಧಿಸಿದ ಸಾಹಿತ್ಯಿಕ ಕ್ರಾಂತಿಗಳು ಜಾಗತಿಕ ಧಾರ್ಮಿಕ ಆಂದೋಲನಗಳಲ್ಲಿಯೇ ಅದ್ವಿತೀಯವೆನ್ನಬಹುದು. ಸಮಾಜವಾದಿ ಸಮಾಜ ರಚನೆ ಶಿವಶರಣರ ಮೂಲ ಧ್ಯೇಯವಾಗಿತ್ತು.

ಶೋಷಕ ವರ್ಗದ ತೊತ್ತುಳದುಳಿತಕ್ಕೆ ಒಳಗಾದ ದೀನದಲಿತ ದುರ್ಬಲರ ಕಷ್ಟ-ನಷ್ಟಗಳಿಗೆ ಸಾಂತ್ವನ ಸಂತೃಪ್ತಿಯನ್ನು ಕೊಡುವ ಪ್ರಾಣಿದಯೆ, ಅಹಿಂಸೆ, ಸತ್ಯಶಾಂತಿಗಳನ್ನು ಬದುಕಿನಲ್ಲಿ ಬೇರೂರಿಸುವ ನಡೆ-ನುಡಿಗಳಲ್ಲಿಯೇ ಭುವನದ ಭಾಗ್ಯವನ್ನು ತೋರಿಸುವ, ಕರ್ಮಭೂಮಿಯೇ ಮೋಕ್ಷದ ನಿಜವಾದ ಸ್ಥಾನವೆಂಬುದನ್ನು ಸಿದ್ಧಪಡಿಸಿ 'ಕಾಯಕವೇ ಕೈಲಾಸ'ವೆಂದು ಮನಗಾಣಿಸುವ ಪಾಪ-ಪುಣ್ಯಗಳು ವ್ಯಕ್ತಿಯ ನಿತ್ಯದ ವ್ಯವಹಾರಿಕ ಬದುಕಿಗೆ ಸಂಬಂಧಿಸಿದವುಗಳೇ ಹೊರತು ಹಿಂದಿನ ಜನ್ಮಕ್ಕೆ ಸಂಬಂಧಿಸಿದ್ದಿಲ್ಲವೆಂಬುದನ್ನು ತಿಳಿಹೇಳುವಲ್ಲಿ ಅವರು ಸಫಲರಾದರು. ಸ್ವಾನುಭವವನ್ನೇ ಧಿಕ್ಕರಿಸಿ ಕರ್ಮಕ್ಕೆ ಪ್ರಾಧಾನ್ಯವಿತ್ತ ವೈದಿಕಪಂಥದ ತರ್ಕವಿತರ್ಕವನ್ನು ಖಂಡಿಸಿ-ಯಜ್ಞ ಯಾಗಾದಿ ಪಶುಬಲಿಗಳನ್ನು ಬಲವಾಗಿ ಖಂಡಿಸಿದರು. ಜೈನಧರ್ಮದ ಅತ್ಯಂತ ಕಠೋರವಾಗಿ ವ್ರತನಿಯಮಗಳು ಜನತೆಗೆ ಕಬ್ಬಿಣದ ಕಡಲೆಗಳಾದ್ದರಿಂದ ಹೃದಯ ತಟ್ಟದ ಧರ್ಮಕ್ಕೆ ರೋಸಿಹೋದ ಸಾಮಾನ್ಯರಿಗೆ ವೀರಶೈವ ಧರ್ಮ ತತ್ವದ ಸರಳ ಮತ್ತು ಸಹಜವಾದ ತಿರುಳನ್ನು ಜನತೆಗಿತ್ತು ಅವರ ಆತ್ಮಬಲವನ್ನು ಹೆಚ್ಚಿಸಿದರು. ಕರ್ನಾಟಕದ ಅತ್ಯಂತ ಪ್ರಬಲ ಧರ್ಮವಾದ ಶೈವ ಹಾಗೂ ಅದರ ಪಂಥಗಳಾದ ಲಕುಲೀಶ ಕಾಳಾಮುಖ ಕಾಪಾಲಿಕ ಹಾಗೂ ಶಕ್ತಿಪ್ರಧಾನವಾದ ಶಾಕ್ತಪಂಥಗಳು-ತಮ್ಮ ತಮ್ಮದೇ ಆದ ಕ್ರಿಯಾಚರಣೆಗಳಲ್ಲಿ ಘೋರ ಮತ್ತು ತೀರ ಅಸಹ್ಯಕರ ಸ್ಥಿತಿಗಿಳಿದುದರಿಂದ ಸಾಮಾನ್ಯರಿಗೆ ಶಿವಶರಣ ಧರ್ಮವೇ ಸಂಜೀವಿನಿಯೆನಿಸಿತು. ಹೀಗಾಗಿ ಒಂದರ್ಥದಲ್ಲಿ ಇಡೀ ಸಾಮಾಜಿಕ ಕ್ರಾಂತಿಗೆ ತಕ್ಕ ಕನ್ನೆನೆಲ ಶಿವಶರಣೆಯರಿಗಾಗಿ ಸಿದ್ಧವಾದ ಸುವರ್ಣಸಂಧಿಯಲ್ಲಿ ಶಿವಶರಣರು ಮಾನವರನ್ನು ಹಾಗೂ ಮಾನವ ಧರ್ಮವನ್ನು ಮೇಲೆತ್ತುವ ಮಹಾಸಾಹಸಕ್ಕಿಳಿದರು. 'ನುಡಿದಂತೆ ನಡೆವರೆ ಇದೇ ಜಲ್ಮ ಕಡೆ' ಎಂದು ನುಡಿದರು, ನುಡಿದಂತೆ ನಡೆದರು. ಇಹದಲ್ಲಿ ಮಹದಿದೆ ಎಂಬುದನ್ನು ತೋರಿಸಿಕೊಟ್ಟರು. 'ನಸ್ತ್ರೀಸ್ವಾತಂತ್ರ್ಯಂ ಅರ್ಹತಿ' ಎಂಬ ಸನಾತನ ವಿಚಾರವನ್ನು ಬಲವಾಗಿ ಖಂಡಿಸಿ ಹೆಣ್ಣಿಗೆ ಸಾಮಾಜಿಕವಾದ ಎಲ್ಲ ಸ್ಥಾನಮಾನಗಳನ್ನು ಒದಗಿಸಿಕೊಟ್ಟರು. "ಹೆಣ್ಣು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನಾ" ಎಂದು ಸಾರಿದರು. ಜನಸಾಮಾನ್ಯರ ಆತ್ಮಕಲ್ಯಾಣದ ಮೂಲಕವಾಗಿ ಲೋಕಕಲ್ಯಾಣಕ್ಕೆ ಅಡಿಪಾಯ ಹಾಕಿದ ಶರಣರು ಅಮೂರ್ತವಾದ ಮೋಕ್ಷದ ಕಲ್ಪನೆಯನ್ನು ಭೋಗಭೂಮಿಯ ಭೋಗ ತನುವಿನಲ್ಲಿಯೇ ಮೂರ್ತಗೊಳಿಸಿದರಲ್ಲದೆ, ಧರ್ಮವು ಕೇವಲ

ಕೆಲವರ ಸೊತ್ತೆಂಬ ಸೊಲ್ಲನ್ನು ಮುಸಿಗೊಳಿಸಿ, ಅದು ನಡೆ-ನುಡಿ ಸಾಮರಸ್ಯ ಪಡೆದ ಸಮಸ್ತರ ಸೊತ್ತು ಎಂಬುದನ್ನು ಜನತೆಗೆ ಮನವರಿಕೆ ಮಾಡಿಕೊಟ್ಟರು. ಜಾತಿಮತ ಪಂಥಗಳನ್ನು ಹೊಡೆದೋಡಿಸಿ ಅನುಭಾವ ಮಂಟಪದ ವಿಚಾರ ಮಂಥನದಲ್ಲಿ ಸಕಲ ಕುಲದವರೂ ಸರಿಸಮಾನವಾಗಿ ಭಾಗವಹಿಸುವ ಅವಕಾಶ ಕಲ್ಪಿಸಿಕೊಟ್ಟು ಆ ಮೂಲಕ 'ಮಾನವ ಕುಲ ಒಂದೇ' ಎಂಬುದನ್ನು ಅಂದೇ ತೋರಿಸಿಕೊಟ್ಟರು. ಒಟ್ಟಿನಲ್ಲಿ ವ್ಯಕ್ತಿಯ ಅಂತರಂಗ ಹಾಗೂ ಬಹಿರಂಗ ಶುದ್ಧಿಯಲ್ಲಿಯೇ ಮಾನವೀಯತೆಯ ಮೂಲ ಬೀಜವನ್ನು ಕಂಡುಕೊಂಡು ಶರಣರು 'ಕಳಬೇಡ ಕೊಲಬೇಡ ಹುಸಿಯನುಡಿಯಲುಬೇಡ ಅನ್ಯರಿಗೆ ಅಸಹ್ಯಪಡಬೇಡ ತನ್ನ ಬಣ್ಣಿಸಬೇಡ ಇದಿರು ಹಳಿಯಲು ಬೇಡ... ನುಡಿದರೆ ಮುತ್ತಿನ ಹಾರದಂತಿರಬೇಕು' ಎಂದು ಬದುಕಿನ ಸಾರ್ವಕಾಲಿಕ ಸುಖಕ್ಕೆ ಮಹಾಸಾಧನವಾಗುವ-ಸರಳ ಹಾಗೂ ಸೂತ್ರ ರೂಪದ ಅನುಭಾವದ ಮಾತುಗಳಲ್ಲಿ ಮಾನವೀಯತೆಯ ಜೀವನಾಡಿಗೆ ಹತ್ತಿರವಾದರು. ನೊಂದು ಬೆಂದ ಹೀನ ದುರ್ಬಲ ಅಸಹಾಯ ವರ್ಗಕ್ಕೆ ಜೀವ ಜ್ಯೋತಿ ಯಾದರು. ಮಲಿತುಹೋದ ಶೋಷಕ ವರ್ಗಕ್ಕೆ ಖಡ್ಗವಾದರು.

ಈ ಹಿನ್ನೆಲೆಯಲ್ಲಿ ಶರಣರ ಕ್ರಾಂತಿಗೆ-ವೈಚಾರಿಕತೆಯ ಮಿಂಚಾಗಿ ನಿಂತವನು ಚನ್ನಬಸವಣ್ಣ. ಇಡೀ ಶರಣ ಧರ್ಮದ ಮೂಲ ಗುರಿ ಒಂದೇ ಆಗಿದ್ದರೂ-ಅದನ್ನೇ ಸಮರ್ಥವಾಗಿ ನಿರ್ವಹಿಸಿದ ಮತ್ತು ತನ್ನ ವಚನಗಳ ಮುಖಾಂತರವಾಗಿ ಖಡಾತುಂಡವಾಗಿ ಸಾರಿದ ಮಹಾ ನಿಷ್ಠುರಿ ಚೆನ್ನಬಸವಣ್ಣ. ಷಟ್‌ಸ್ಥಲ ನಿರ್ಣಯ ಚಕ್ರವರ್ತಿಯೆಂದು ಶರಣ ಸಮೂಹದ ಮಹಾ ಮಹಾ ಚೇತನಗಳೂ ಒಕ್ಕೊರಲಿನಿಂದ ಒಪ್ಪುವ ಹಾಗೆ, ಸುಜ್ಞಾನದಲ್ಲಿ ಮಿಗಿಲೆನಿಸಿಕೊಂಡ ಧೀಮಂತ ವ್ಯಕ್ತಿ. ಶಿವಶರಣರ ಇಡೀ ಆಂದೋಲನಕ್ಕೆ ಕ್ರಾಂತಿಯ ಸ್ವರೂಪ ಬಂದುದು ಬಹುಪಾಲು ಚೆನ್ನಬಸವಣ್ಣನಿಂದಲೇ. ವಯಸ್ಸಿಗೆ ಮೀರಿದ ಆತನ ಆಧ್ಯಾತ್ಮ ಜ್ಞಾನ, ಹರೆಯದ ವಯಸ್ಸಿಗೆ ತಕ್ಕ ಕೆಚ್ಚು ರೊಚ್ಚು ಮತ್ತು ಸಾಮಾಜಿಕ ಕಳಕಳಿ ಹೊಂದಿದ ಪ್ರಗತಿಶೀಲ ಮನೋಧರ್ಮ ಇಂದಿಗೂ ಪ್ರಸ್ತುತ, ಅನುಭಾವಮಂಟಪದ ಶರಣರ ಸಮೂಹದ ಯಾವ ಮತ್ತು ಯಾರ ದೋಷವನ್ನು ಆಧಾರ ಭೂತವಾಗಿ ಪ್ರತಿಭಟಿಸದೇ ಜಡದ ವೈಚಾರಿಕ ಕ್ರಾಂತಿಕಾರಿಗೆ-ಕ್ರಮವಿಕಾಸದಲ್ಲಿ ಷಟ್‌ಸ್ಥಲ ನಿರ್ಣಯಿಸಿದ ಬಸವಣ್ಣನಂಥ ಮೇಧಾವಿಗಳೂ ಮುಖಭಂಗಿತರಾಗಬೇಕಾಯಿತು. ಅಲ್ಲದೇ ಸಮವಿಕಾಸ ತತ್ವದ ಮೇಲೆ ಷಟ್‌ಸ್ಥಲವನ್ನು ನಿರ್ಣಯಿಸಿದ ಕೀರ್ತಿ ಚನ್ನಬಸವಣ್ಣನ ದಾಯಿತು. ಹೀಗೆ ನಿರ್ಭಿಡೆ, ನಿಷ್ಠುರತೆ, ಸ್ವಾಭಿಮಾನಗಳೊಂದಿಗೆ ಜಡ್ಡುಗಟ್ಟಿದ ಸಾಂಪ್ರ ದಾಯಿಕ ಅನಿಷ್ಟ ಪರಂಪರೆ, ಆಚಾರ, ವಿಚಾರ, ವ್ರತನಿಯಮ, ಮೂಢನಂಬಿಕೆ, ಮೋಸ, ವಂಚನೆ, ಡಾಂಭಿಕತನ, ಮೇಲುಕೀಳು ಮುಂತಾದವುಗಳನ್ನು ಮುಚ್ಚುಮರೆಯಿಲ್ಲದೆ ಸಾಮಾ ಜಿಕರಿಗೆ ಎತ್ತಿ ತೋರಿ, ಕಿಚ್ಚುನುಂಗುವ ಮಾತುಗಳಲ್ಲಿ ಪುರೋಹಿತ ಶೋಷಕವರ್ಗಕ್ಕೇ ನಡುಕ ವನ್ನು ಹುಟ್ಟಿಸಿದ ಮೊದಲ ಮತ್ತು ಪ್ರಥಮ ದರ್ಜೆಯ ಕ್ರಾಂತಿಕಾರಿ ಎಂದರೆ ಚನ್ನ ಬಸವಣ್ಣ. ಬಂಡಾಯ ಪ್ರವೃತ್ತಿ ಆತನ ರಕ್ತಗುಣವಾದ್ದರಿಂದ ಧರ್ಮತತ್ವಗಳಿಗಿಂತಲೂ

ಮುಖ್ಯವಾಗಿ ವ್ಯಕ್ತಿಧರ್ಮ ಹಾಗೂ ಮಾನವ ಧರ್ಮವೇ ಮಿಗಿಲಾಗಿ ಆತನಿಗೆ ಗೋಚರಿಸ ಬೇಕು. ಅಂತೆಯೇ ಮಾನವ ಸಮಾಜದ ಲೋಪದೋಷ ಗೊಡ್ಡಾಚರಣೆಗಳನ್ನು ಖಂಡಿಸುವ, ತಿರಸ್ಕರಿಸುವ ಹಾಗೂ ತುಚ್ಛೀಕರಿಸುವಲ್ಲಿ ಹೆಚ್ಚು ಆಸ್ಥೆವಹಿಸಿದಂತೆ ತೋರು ತ್ತದೆ ಶಿವಶರಣ ಸಮೂಹದಲ್ಲಿಯೇ ಸೂಕ್ಷ್ಮವಾದ ಲೋಕ ನಿರೀಕ್ಷಣಾಶಕ್ತಿ ಚನ್ನಬಸವಣ್ಣ ನಿಗಿದ್ದಷ್ಟು ಅನ್ಯರಿಗಿಲ್ಲ. ವೈಚಾರಿಕ ವಿಚಾರಗಳ ಅಭಿವ್ಯಕ್ತಿಗೆ ತಕ್ಕ ಹರಿತವಾದ ಭಾಷೆ ಅದರಿಂದಾಗುವ ತೀವ್ರ ಪರಿಣಾಮ ಇನ್ನಿತರರಿಗಿಂತ ಭಿನ್ನವಾದುದು ಲೋಕವಿಡಂಬನೆ, ಸಮಾಜ ವಿಡಂಬನೆಗಳ ಪ್ರಖರತೆ ಹಾಗೂ ತೀವ್ರತೆಗಳು. ಇತರರಿಗಿಂತ ವಿಶಿಷ್ಟ ರೀತಿಯವು. ಆದ್ದರಿಂದಲೇ ಶರಣ ಕ್ರಾಂತಿಯ ಮೂಲೋದ್ದೇಶವಾದ ಸಮಾಜವಾದಿ ಸಮಾಜ ರಚನೆಯ ಮಹಾಕಾರ್ಯದಲ್ಲಿ ಚನ್ನಬಸವಣ್ಣನವರ ವಿವೇಚನಾಶೀಲ ವೈಚಾರಿಕ ಮುಂದಾ ಳತ್ವ ಅವಶ್ಯಕತೆಯಾಗಿ ಪರಿಣಮಿಸಿತು. ಕಣ್ಣಿದ್ದೂ ಕಾಣದ ಅವಿವೇಕಿಗಳನ್ನು–ಲೋಕದ ನೀತಿಯನ್ನು ಉಗ್ರವಾಗಿ ಖಂಡಿಸಿದರು.

> "ಗುಬ್ಬಿ ಹೆರರ ಮನೆಯ ತನ್ನ ಮನೆ ಎಂಬಂತೆ
> ಧರೆ, ಧನ ವನಿತೆಯರು ಎನ್ನವರು ತನ್ನವರೆಂದು
> ಹೋರಿ ಹೋರಿ ಸಾಯುತ್ತಿದೆ ಜೀವ........"[೧]

ಎಂದು ತಮ್ಮ ತಮ್ಮ ಸ್ವಾರ್ಥಕ್ಕಾಗಿಯೇ ಹೋರಾಟನಿರತರಾದವರ ಬದುಕಿನ ನಿರರ್ಥಕತೆ ಯನ್ನು ಒತ್ತಿ ಹೇಳಿದರು. "ಹೊನ್ನು ಮಣ್ಣು ಹೆಣ್ಣು ಅನ್ನ ನೀರು ವಸ್ತ್ರ ಆಭರಣ ವಾಹನವೆಂಬ ಅಷ್ಟ ಮಲಂಗಳಲ್ಲಿ ಅಷ್ಟಕಾಮ ವಿಕಾರದಿಂದ ಮಾಯಾಪಾಶಬದ್ಧನಾಲಯ ದಲ್ಲಿ ಬಿದ್ದು ತೊಳಲುವ ಜಡಜೀವಿಗಳಿಗೆ ನಿಜಸುಖ"[೨] ಇಲ್ಲವೆಂಬುದನ್ನು ಸಾರಿದರು. ಜನತೆ ಯಲ್ಲಿ ಬೇರೂರಬೇಕಾಗಿದ್ದ ವೀರಶೈವ ಧರ್ಮ ತತ್ವಗಳ ರೂಪರೇಷೆಯ ಹಿನ್ನೆಲೆಯಲ್ಲಿ ಇಂದಿನ ಸಮಕಾಲೀನ ಸಮಾಜಕ್ಕೂ ಹುಚ್ಚುಮದ್ದೆನಿಸುವ ಅನೇಕ ವಚನಗಳ ಮೂಲಕ ಮರ್ಮಭೇದಕರವೆನ್ನಬಹುದಾದ ಕಟುರೋಕ್ತಿಗಳನ್ನು ಬಳಸಿದ್ದರಲ್ಲಿ ಚನ್ನಬಸವಣ್ಣನವರ ಸಾಮಾಜಿಕ ಚಿಂತನೆ ಎದ್ದುಕಾಣುತ್ತದೆ. ವಚನಗಳೆಲ್ಲದರ ಕೊನೆಯ ಪರಿಣಾಮ ಆಧ್ಯಾತ್ಮ ಪರಿವಲಯಕ್ಕೆ ಸೀಮಿತವಾದರೂ ಪುರೋಹಿತಶಾಹಿ ಮನೋವೃತ್ತಿ ಮೂಲವೆನಿಸುವ ವಿವಿಧ ಆಚರಣೆಗಳಲ್ಲಿ ಲುಪ್ತವಾದ ಸಾಮಾಜಿಕ ಅವ್ಯವಹಾರಗಳನ್ನು ಅಲ್ಲಗಳೆದುದ್ದು ಮಹತ್ವದ್ದಾಗಿದೆ.

ಅಂದು ರೂಢವಾಗಿದ್ದ ವೈದಿಕ, ಜೈನ, ಬೌದ್ಧ ಹಾಗೂ ಶೈವ ಪಂಥಗಳ ಅನೈತಿ ಕತೆಯ ಮೇಲೆ ಚನ್ನಬಸವಣ್ಣನವರು ಅಂದೇ ಗದಾಪ್ರಹಾರ ಮಾಡಿದ್ದಾರೆ–ಮುಖ್ಯವಾಗಿ ಶಾಕ್ತಪಂಥಗಳು ಭಕ್ತಿಪಂಥಕ್ಕೆ ಸಲ್ಲವು ಎಂದು ಖಡಾಖಡಿಯಾಗಿ ಸಾರುತ್ತ–

---

೧ ಚನ್ನಬಸವಣ್ಣನವರ ವಚನಗಳು: ಸಂ. ಡಾ. ಆರ್. ಸಿ. ಹಿರೇಮಠ ವ. ೩೧
೨ " " " " ವ. ೩೨

ಶೈವ ಸ್ವೈಪರಗಾದ ಪಾಶುಪತಿ ಪಥನರಿಯ
ಕಾಳಾಮುಖಿ ಕಂಗೆಟ್ಟ ಮಹಾವ್ರತಿ ಮದವೇರಿದ
ಸನ್ಯಾಸಿ ಪಾಷಂಡಿಯಾದ, ಕಾಪಾಲಿ ಮರುಳಾಗಿ ತಿರುಗಿದ
ಈ ಆರು ಭಕ್ತಿಪಂಥಕ್ಕೆ ಸಲ್ಲವು ಕೇಳಿರಣ್ಣಾ[೧]

ಎಂದು ಡಂಗುರ ಹೊಡೆದಂತೆ ಆಯಾ ಪಂಥಗಳನ್ನು, ಪಂಥಗಳ ಕ್ರಿಯಾಚಾರಗಳನ್ನು ಪ್ರತಿಭಟಿಸಿದ್ದು, ಸಾಮಾಜಿಕ ಶೋಷಣೆಯನ್ನು ತಡೆಗಟ್ಟುವ ಪ್ರಯತ್ನವೇ ಆಗಿದೆ. ಕರ್ಮಕಾಂಡ, ಯಜ್ಞಯಾಗಾದಿಗಳಲ್ಲಿ ನಿರತವಾದ ವೈದಿಕ ಧರ್ಮದ ಅಧೋಗತಿಯನ್ನು ಕಂಡ ವಿಚಾರವಾದಿಗೆ, ಅದು ಹಿಡಿಸಲಿಲ್ಲ. ಧರ್ಮದ ಹೆಸರಿನಲ್ಲಿ ಸದಾಚಾರವನ್ನು ಸುಲಿವ ಅವ್ಯವಹಾರವನ್ನು ಖಂಡಿಸುವುದು ಅನಿವಾರ್ಯವಾಯಿತು. ಸತ್ಯಪೂರ್ಣವಾದ ನಡೆನುಡಿ ಸದಾಚಾರವೇ ಜೀವಿಯ ಸುಖಕ್ಕೆ ಕಾರಣವೆಂದು ನಂಬಿದ ವೀರಶೈವ ಧರ್ಮವೇ ಅನ್ಯ ಧರ್ಮಕ್ಕಿಂತ ಅಧಿಕವೆನ್ನುವ ವಿಚಾರದ ಹಿನ್ನೆಲೆಯಲ್ಲಿ, ವೈದಿಕ ಧರ್ಮವನ್ನು ಕಠೋರವಾಗಿ ನಿಂದಿಸುವ ಚನ್ನಬಸವಣ್ಣನವರು ಯಾವುದೋ ನೆವದಲ್ಲಿ ಜನರನ್ನು ವಂಚಿಸಿ ಹೊಲಬುಗೆಡಿಸುವ ವಿಪ್ರರನ್ನು, ಜೋಯಿಸರನ್ನು ಆ ಧರ್ಮಕ್ಕೇ ಮೂಲ ಪೂರಣವಾದ ಮಹಾಮಹಾ ಪುರಾಣ ವ್ಯಕ್ತಿಗಳ ಅಸಹಾಯಕತೆಯನ್ನು ಮತ್ತು ಸಾಮಾಜಿಕ ಮೂಢನಂಬಿಕೆಗಳನ್ನು ಸವಿವರವಾಗಿ ಖಂಡಿಸಿದ್ದು ಅವರ ಓದಿನ ವಿಸ್ತಾರವನ್ನೂ, ನಿಷ್ಠುರವಾದ ಸತ್ಯ ಪ್ರತಿಪಾದನೆಯನ್ನು ಏಕ ಕಾಲಕ್ಕೆ ಪ್ರಕಟಿಸುತ್ತವೆ–

ಶಿವತಂತ್ರದಿಂದ ಸುಖದುಃಖಿಗಳು ಬರುತಿಪವೆಂಬ ಹೊಂದರಿಯದೆ
ನರಗುರಿಗಳಿಗೆ, ರೋಗ ದಾರಿದ್ರ್ಯ ಅಪಜಯಂಗಳು ಬರುತ್ತಿರಲು
ವಿಪ್ರಗೆ ಕೈಮುಗಿದು ಕಾಣಿಕೆಯನ್ನಿಕ್ಕಿ ತನ್ನ ಹೆಸರ ಹೇಳಿ,
ಸೂರ್ಯಬಲ ಚಂದ್ರಬಲ, ಬೃಹಸ್ಪತಿಬಲ, ನವಗ್ರಹಬಲವ
ಕೇಳುವವರಿಗೆ ಎಲ್ಲಿಯ ಶಿವಭಕ್ತಿ.
ಸೂರ್ಯಜ್ಞಾನವುಳ್ಳವನಾದಡೆ–
ಗೌತಮಮುನೀಶ್ವರನ ಹೆಂಡತಿ ಅಹಲ್ಯಾದೇವಿಗೆ ಸೋಹಿನಿ
ಮುನಿಯ ಶಾಪದಿಂದ ಕುಷ್ಠದೊಳಗಿಹನೆ?
ಅಲ್ಲದೆ ದಕ್ಷನ ಯಾಗದಲ್ಲಿ ಹಲ್ಲ ಹೋಗಲಾಡಿಸಿಕೊಂಬನೆ?
ಚಂದ್ರಜ್ಞಾನವುಳ್ಳವನಾದಡೆ–
ಗುರುವಿನ ಹೆಂಡತಿಗಳುಪಿ ಕೊಂದೆಯ್ದು ಜಾತ ಜ್ವರದಲ್ಲಿ ಕುಳಿತಿರ್ದನೇ?
ಬೃಹಸ್ಪತಿ ಜ್ಞಾನವುಳ್ಳವನಾದಡೆ, ಸಕಲ ಜ್ಯೋತಿಷ್ಯಗಳ ನೋಡಿ
ವಿವಾಹದ ಹೆಂಡತಿ ರೋಹಿಣೀದೇವಿಯು ಚಂದ್ರನೆತ್ತಿಕೊಂಡು ಹೋಹಾಗ

೧ ಚನ್ನಬಸವಣ್ಣನವರ ವಚನಗಳು: ಸಂ. ಡಾ. ಆರ್. ಸಿ. ಹಿರೇಮಠ ವ. [illegible]

ಸುಮ್ಮನಿದ್ದುದು ಏನು ಜ್ಞಾನ?
ಶನಿಜ್ಞಾನವುಳ್ಳವನಾದಡೆ, ಕುಂಟನಾಗಿ ಸಂಕೋಲೆ ಬೀಳ್ವನೆ?
ಅದು ಕಾರಣ, ತಮಗೆ ಮುಂಬಹ ಸುಖದುಃಖಗಳನರಿಯದವರು
ಮತ್ತೊಬ್ಬರ ಸುಖದುಃಖಗಳ ಪೊವಲಿ ಅರಿಯರು.
ಬೃಹಸ್ಪತಿಯ ಮತದಿಂದೆ ದಕ್ಷಯಾಗವನಿಕ್ಕಿ ಕುರಿದಲೆಯಾಯಿತ್ತು
ಬೃಹಸ್ಪತಿಯ ಮತದಿಂದೆ ದ್ವಾರಾವತಿ ನೀರಲ್ಲಿ ನೆರೆದು
ಕೃಷ್ಣನ ಹದಿನಾರು ಸಾವಿರ ಸ್ತ್ರೀಯರ ಪೋಟೆಬೇಡರು ಸೆರೆಯನೊಯ್ದುರು.
ಶ್ರೀರಾಮನ ಹೆಂಡತಿ ಸೀತಾಂಗನೆ ಸೆರೆಯಾದಳು.
ಇಂತೀ ತಮತಮಗೆ ಮುಂದೆ ಬಹ ಅಪಜಯಂಗಳನರಿಯದ ಕಾರಣ
ಆ ಬೃಹಸ್ಪತಿ ಜ್ಞಾನಿಯು ಮತದಿಂದ, ಅಭಾಷ ಜೋಯಿಸರ ಮಾತು ಕೇಳಿ
ಹುಣ್ಣಿವೆ ಅಮವಾಸಿಯಲ್ಲಿ ಉಪವಾಸವಿದ್ದು
ಗ್ರಹಬಲವುಳ್ಳ ಶುಭಮುಹೂರ್ತಂಗಗಳಲ್ಲಿ
ಅರಳಿಯ ಮರಕ್ಕೆ ನೀರಹೊಯ್ದು ನೂಲ ಸುತ್ತಿ
ವಿಪ್ರಜೋಯಿಸರ್ಗೆ ಹೊನ್ನು ಹಣ ಕೊಟ್ಟಡೆ ಹೋದೀತೆಂಬ
ಅನಾಚಾರಿಯ ಮಾತಕೇಳಲಾಗದು
ಕುರುಡನ ಕೈಯ ಕುರುಡ ಹಿಡಿದು ಹಾದಿಯ ತೋರುವಂತೆ
ಲಜ್ಜೆ ನಾಚಿಕೆ ಇಲ್ಲದೆ ವಿಪ್ರರ ಕೈಯ ಲಗ್ನವ ಕೇಳಲಾಗದು
ಸದ್ಭಕ್ತರಾದವರಿಗೆ ನಿಮ್ಮ ಬಲವೇ ಬಲವಯ್ಯಾ
ಕೂಡಲಚನ್ನಸಂಗಮದೇವಾ"೪

ಹೀಗೆ ಸಾಮಾಜಿಕರನ್ನು ನಾನಾಮುಖವಾಗಿ ವಂಚಿಸಿ ಬದುಕನ್ನು ಸಾಗಿಸಿದ ವಂಚಕರನ್ನು ಭ್ರಷ್ಟರನ್ನು ಮುಖ್ಯವಾಗಿ ಪುರೋಹಿತಶಾಹಿ ಪ್ರವೃತ್ತಿಯನ್ನು ಅಲ್ಲಗಳೆದರು. ಅಲ್ಲದೇ ಜನಸಾಮಾನ್ಯರೂ ಮೂಢನಂಬಿಕೆಗಳಿಗೆ ಬಲಿಯಾಗಿ ಅಂಥ ಶೋಷಣೆಗೊಳಗಾಗುತ್ತಿರುವುದನ್ನು ಎಚ್ಚರಿಸಿದರು.

"ಶೂನ್ಯವ ಹಿಡಿದು ದುರ್ಗತಿಗಿಳಿದವರ
ಅದ್ವೈತವ ನುಡಿದು ಅಹಂಕಾರಿಗಳಾದವರ
ಬ್ರಹ್ಮವ ನುಡಿದು ಭ್ರಮಿತರಾದವರ
ತ್ರಿಕಾಲ ಲಿಂಗಪೂಜೆಯ ಮಾಡಿದವರ....
ಈ ದುರಾಚಾರಿಗಳ ಮೆಚ್ಚ ಕೂಡಲಸಂಗಾ ನಿಮ್ಮ ಶರಣ"೫

ಎಂದು ಅಂದು ತಮ್ಮಷ್ಟಕ್ಕೆ ತಾವು ಉಬ್ಬಿ ಕೊಬ್ಬಿ ಬೆಳೆದ ಧರ್ಮಾಧಿಕಾರಿಗಳನ್ನೂ ಹಂಗಿಸಿದ್ದಾರೆ. ಅಂತೆಯೇ—

೪ ಚ.ಬ.ವ–೪೯೩ ೫ ಚ.ಬ.ವ–೪೯೫

"ಕುಲವಳಿದು ಮಲವಳಿದು, ಮದವಳಿದು ಮತ್ಸರವಳಿದು....
ಸರ್ವಾಹಂಕಾರವಳಿದು, ನಿಜವಳಿದು...."[೬]

ಸಹಜ ಪದವಿಯಲ್ಲಿ ನಿಲ್ಲಬಲ್ಲ ಮಾನವತೆಗಾಗಿ ಹಂಬಲಿಸಿದ್ದಾರೆ.

ತಾವು ಶೀಲವಂತರೆಂಬ ಭ್ರಮೆಯಲ್ಲಿ ಅನಾಚಾರಕ್ಕಿಳಿದವರು, ಆ ಮೂಲಕ ಡೋಂಗಿ ಭಕ್ತಿಯ ನೆಪದಲ್ಲಿ ಸಾಮಾಜಿಕರ ಕಣ್ಣೆದುರಲ್ಲಿ ಮಹಾಶಿವಭಕ್ತರೆಂದು ತೋರಿಸಿಕೊಂಡವರನ್ನು, ಕೇವಲ ಅನ್ನ, ವಸ್ತ್ರ, ಹಿರಣ್ಯದಾನಕ್ಕಾಗಿ ಮನೆಯ ಬಾಗಿಲ ಕಾಯುವ ಕಳ್ಳ ವೇಷಗಾರರನ್ನು–ಚನ್ನಬಸವಣ್ಣನವರು ಗುರುತಿಸಿರುವುದು ಗಮನಾರ್ಹವಾಗಿದೆ.

"ಶೀಲವಂತರು ಶೀಲವಂತರು ಎಂದೆಂಬರು ನಾವಿದನರಿಯೆವಯ್ಯಾ
ಅಂಗನೆಯರ ಅಧರಪಾನ ತಮ್ಮುದರವ ಹೋಗುವನ್ನಕ್ಕ ಶೀಲವೆಲ್ಲಿಯದೋ"[೭]
ಕನಸಿನಲ್ಲಿ ಜಂಗಮವ ಕಂಡು, ಮನಸಿನಲ್ಲಿ ಗುಡಿಯ ಕಟ್ಟುವರಯ್ಯಾ
ನೆಟ್ಟನೆ ಮನೆಗೆ ಜಂಗಮ ಬಂದಡೆ, ಕೆಟ್ಟೆವಿನ್ನೇನ ಬೇಡಿಯಾರೆಂಬ
ಕಷ್ಟಜೀವಿಯ ಭಕ್ತಿಯಂತಾಯಿತ್ತು ವ್ರತಸ್ಥನ ಭಕ್ತಿ.
ಹಾವು ತಮ್ಮ ದೇವರೆಂದು ಹಾಲನೆರೆದು ಕೈಮುಗಿದು ಕೊಂಬರಯ್ಯಾ
ಆ ಹಾವ ಕಂಡಡೆ ಹೆದರಿ ಓಡುವ
ಭಾವಭ್ರಮಿತರ ಭಕ್ತಿಯಂತಾಯಿತ್ತಯ್ಯಾ ಶೀಲವಂತನ ಭಕ್ತಿ
ಹೊಸ್ತಿಲ ದೇವರೆಂದು ಪೂಜಿಸಿ, ಮರಳಿ ಇಕ್ಕಲಿಕ್ಕಿದಾಂಟಿ ಹೋದ
ಒಕ್ಕಲಗಿತ್ತಿಯ ಭಕ್ತಿಯಂತಾಯಿತ್ತಯ್ಯಾ ಭಾಷೆವಂತನ ಭಕ್ತಿ
ಕೆರಹ ಕಳೆದು ಕೈಯ ತೊಳೆದು, ಸಗ್ಗಳೆಯ ನೀರು ಕುಡಿದ
ಬ್ರಾಹ್ಮಣನ ಭಕ್ತಿಯಂತಾಯಿತ್ತಯ್ಯಾ ಸಮಯಾಚಾರಿಯ ಭಕ್ತಿ.[೮]

ಹೀಗೆ ಡೋಂಗಿ ಭಕ್ತರ ಅಂತರಂಗವನ್ನು ಹೊಕ್ಕ ಚನ್ನಬಸವಣ್ಣನವರ ಸೂಕ್ಷ್ಮಾವಲೋಕ ತನ್ನ ಸಮಕಾಲೀನ ಸಮಾಜದಲ್ಲಿ ಅರಸನಿಂದ ಹಿಡಿದು ಸಾಮಾನ್ಯನ ವರೆಗೂ ಸ್ಥಿರಗೊಂಡ ಭಕ್ತಿಯ ಅಸ್ಥಿರತೆಯನ್ನು ಪರಸ್ಪರವಾಗಿ ವಂಚಿಸುವ ಕುಮತಿಯನ್ನು ತೀವ್ರವಾಗಿ ಖಂಡಿಸಿರುವುದೂ ಅಷ್ಟೇ ಮಹತ್ವದ್ದಾಗಿದೆ–"ಅರಸನ ಭಕ್ತಿ ಅಹಂಕಾರದಲ್ಲಿ ಓಲೇಕಾರನ ಭಕ್ತಿ ಅಲುಗಿನ ಮೊನೆಯಲ್ಲಿ, ಬಣಜಿಗನ ಭಕ್ತಿ ಬಳ್ಳದ ಮೊನೆಯಲ್ಲಿ, ಅಕ್ಕಸಾಲಿಗನ ಭಕ್ತಿ ಅಗ್ಗಿಷ್ಟಗೆಯಲ್ಲಿ, ಶೀಲವಂತನ ಭಕ್ತಿ ಶಂಕೆಯಲ್ಲಿ, ಮಾಟಕೂಟದವನ ಭಕ್ತಿ ಅಂಜಿಕೆಯಲ್ಲಿ, ವ್ರತಸ್ಥನ ಭಕ್ತಿ ಪ್ರಪಂಚಿನಲ್ಲಿ, ಹೋಯಿತ್ತು"[೯] ಎಂಬ ಸಾರ್ವಕಾಲಿಕ ಸತ್ಯವನ್ನೇ ಬಯಲಿಗಿಟ್ಟ ಚೆನ್ನಬಸವಣ್ಣನವರು "ಕಿರಾತರು ಹುಟ್ಟಿ ಪುರಾತನರು ಅಡಗಿದ"ರೆಂದು ಆ ಕಾಲದ ವಾಸ್ತವದ ಪರಿಣಾಮವನ್ನು ಧ್ವನಿಸಿದ್ದಾರೆ, "ಡೊಂಬತನದಲಿ ಮಾಡುವವರು ಡೊಂಬ

೬ ಚ.ಬ.ವ–೧೪೬೮ ೭ ಚ.ಬ.ವ–೧೧೧೫ ೮ ಚ.ಬ.ವ–೫೦೦

೯ ಚ.ಬ.ವ–೭೩

ಗಿತ್ತಿಯ ಮಕ್ಕಳೆಂದು" ಟೀಕಿಸಿದ್ದಾರೆ. ಇನ್ನು ತಿಥಿ, ನಕ್ಷತ್ರ, ವಾರಗಳೆಂದು ನಂಬಿದ ಸಾಮಾಜಿಕರ ಮೂಢನಂಬಿಕೆ ಆಚಾರಗಳೂ ಕೂಡ ಶೋಷಕವರ್ಗಕ್ಕೆ ಪರ್ಯಾಯವಾಗಿ ಸಹಕಾರಿಯಾಗಿರುವುದನ್ನು ಖಂಡಿಸಿದ್ದಾರೆ.

"ಕೂಟಕ್ಕೆಕ್ಕಿ ಮಾಡುವವರೆಲ್ಲ ಕೂಟಂಗಿತ್ತಿಯ ಮಕ್ಕಳು
ಹರಸಿಕೊಂಡು ಮಾಡುವವರೆಲ್ಲಾ ಹಾದರಗಿತ್ತಿಯ ಮಕ್ಕಳು
ವರ್ಷಕ್ಕೊಂದು ತಿಥಿಯೆಂದು ಮಾಡುವವರೆಲ್ಲಾ ವೇಶಿಯ ಮಕ್ಕಳು
....
ಸಹಜದಲ್ಲಿ ಮಾಡುವುದೆಲ್ಲಾ ಸಜ್ಜನ ಪತಿವ್ರತೆಯ ಮಕ್ಕಳು
ಕಾಣಾ ಕೂಡಲ ಚೆನ್ನಬಸವ ಸಂಗಮದೇವಾ೧೦
ಸೋಮವಾರ ಮಂಗಳವಾರ ಶಿವರಾತ್ರಿಯೆಂದು
ನೋಡಿ ಮಾಡುವ ಭಕ್ತರ
ಲಿಂಗಭಕ್ತಂಗೆ ಎಂತು ಸರಿಯೆಂಬೆನಯ್ಯಾ?
ದಿನ ಶ್ರೇಷ್ಠವೋ ಲಿಂಗ ಶ್ರೇಷ್ಠವೋ?
ಲಿಂಗಶ್ರೇಷ್ಠವೆಂಬುದ ಮರೆತು ದಿನ ಶ್ರೇಷ್ಠವೆಂದು ಮಾಡುವ
ಪಂಚಮಹಾಪಾತಕರ ಮುಖವ ನೋಡಲಾಗದು"

(ವಚನ-೪೩೫).

"ವಾರವೇಳು ಕುಲ ಹದಿನೆಂಟು ಎಂಬರಯ್ಯಾ
ಅದನಾವು ಅಲ್ಲವೆಂಬೆವು
ಇರುಳೊಂದು ವಾರ, ಹಗಲೊಂದು ವಾರ
ಭವಿಯೊಂದು ಕುಲ, ಭಕ್ತನೊಂದು ಕುಲ
ನಾವು ಬಲ್ಲುದು ಕಾಣಾ ಕೂಡಲಚೆನ್ನಸಂಗಮದೇವಾ"೧೧

"ತನುಮನ ಬಳಲದೆ ಉದ್ದಂಡ ವೃತ್ತಿಯಲ್ಲಿ ಧನವಗಳಿಸಿ ಗುರುಲಿಂಗಜಂಗಮಕ್ಕೆ ವೆಚ್ಚಿಸಿ ದಾಸೋಹವ ಮಾಡಿ ಭಕ್ತನಾದೆ"ನೆಂಬುವವನನ್ನು 'ಪರಧನಚೋರ, ಪಾಪಿ, ಕೋಪಿ, ಪರಿಭ್ರಷ್ಟನಾದೆನೆಂದು ಎಚ್ಚರಿಸಿ, ಸ್ತ್ರೀಯನ್ನು ಭೋಗದ ವಸ್ತುವೆಂದು ಅತ್ಯಾಚಾರಕ್ಕಿಳಿದ ಸಮಾಜಕ್ಕೆ 'ಪರಸ್ತ್ರೀ ಪಂಚಮಹಾಪಾತಕ' ಎಂದು ಉಗ್ಘಡಿಸಿದ್ದಾರೆ. ಶೋಷಣೆ ಎನ್ನುವುದು ಪ್ರಾಣಿಗಳ ಮೇಲೂ ಅಸಾಧು 'ಸಕಲ' ಪ್ರಾಣಿಗಳ ತನ್ನಂತೆ ಕಾಣಬೇಕೆಂಬುದು ಚೆನ್ನಬಸವಣ್ಣನವರ ಮನೀಷೆ.

ಶೋಷಣೆ ರಹಿತವಾದ ಸಮಾಜದ ರಚನೆಯತ್ತ ಚನ್ನಬಸವಣ್ಣನವರು ತಾಳಿದ ನಿಲುಮೆ ಘನವಾದುದು. ಸಮಾಜದಲ್ಲಿ ಮೇಲುಕೀಳು ಭಾವನೆಗೆ ಎಡೆಯಿಲ್ಲ. ವರ್ಣನೀತಿಗೆ

---

೧೦ ಚ.ಬ.ವ-೭೮ ೧೧ ಚ.ಬ.ವ-೭೨೬

ಅಲ್ಲಿ ಸ್ಥಾನವಿಲ್ಲ. ಅಂತೆಯೇ ಕಲ್ಯಾಣ, ಸರ್ವಜಾತಿಯವರಿಗೆ ಮುಕ್ತವಾಗಿತ್ತು. ಹೊಲೆಯ, ಮಾದಿಗ ಎಂಬುದು ಹುಟ್ಟಿನಿಂದ ನಿರ್ಧರಿತವಾದುದಲ್ಲ. ಅದು ಕ್ರಿಯಾಚರಣೆಯಿಂದ ಸಿದ್ಧವಾಗುವಂಥದು ಎಂಬುದನ್ನು ಎಲ್ಲ ಶರಣರೂ ಒಪ್ಪಿದ ಮಾತಾಗಿತ್ತು. "ಅವ ಕುಲವಾದಡೇನು ದೇವನೊಲಿದಾತನೇ ಕುಲಜ"[೧೨] ಎಂಬುದು ಚೆನ್ನಬಸವಣ್ಣನ ನಿಲುವಾಗಿತ್ತು.

> 'ಕಾಮವೇ ಕಬ್ಬಲಿಗ ಕ್ರೋಧವೇ ಹೊಲೆಯ
> ಲೋಭವೇ ಕಳ್ಳ ಮೋಹವೇ ಬಲೆಗಾರ
> ಮದವೇ ಮಾದಿಗ ಮತ್ಸರವೇ ಸುರಾಪಾನಿ'[೧೩]

ಹೀಗೆ ಮಾನವನ ಆಚರಣೆಯೇ ಅವನ ಕುಲವನ್ನು ನಿರ್ಧರಿಸುವ ಮಾನದಂಡವೇ ಹೊರತು ಹುಟ್ಟಿನಿಂದ ಯಾರೂ ಕೀಳಲ್ಲ ಎಂಬುದನ್ನು ಸಾರಿದರು. ಮುಖ್ಯವಾದುದೆಂದರೆ ಇಡೀ ಶರಣ ಸಮೂಹವೇ ವರ್ಣವ್ಯವಸ್ಥೆಯನ್ನು ಖಂಡಿಸಿದ್ದು, ಹಾಗೆಯೇ ಚೆನ್ನಬಸವಣ್ಣನವರು ಬ್ರಾಹ್ಮಣ ಕ್ಷತ್ರಿಯ ವೈಶ್ಯ ಶೂದ್ರ ವರ್ಣದವರು ಭಕ್ತರೆಂದು ಹೇಳಿಕೊಂಡು ಜಾತಿಡಂಭಕರಾದ ಪರಿಯನ್ನು ಖಂಡಿಸಿರುವುದು ಗಮನಾರ್ಹ.

> "ಬ್ರಾಹ್ಮಣ ಭಕ್ತನಾದಡೇನಯ್ಯ, ಸೂತಕ ಪಾತಕಂಗಳ ಬಿಡದನ್ನಕ್ಕ?
> ಕ್ಷತ್ರಿಯ ಭಕ್ತನಾದಡೇನಯ್ಯ, ಕ್ರೋಧಹಿಂಸೆಯ ಬಿಡದನ್ನಕ್ಕ?
> ವೈಶ್ಯ ಭಕ್ತನಾದಡೇನಯ್ಯ ಕಪಟ ಕುತ್ಸಿತ ಬಿಡದನ್ನಕ್ಕ?
> ಶೂದ್ರ ಭಕ್ತನಾದಡೇನಯ್ಯಾ ಸ್ವಜಾತಿಯೆಂಬುದು ಬಿಡದನ್ನಕ್ಕ?
> ಇಂತಿ ಜಾತಿ ಡಂಭಕರ ಮೆಚ್ಚುವನೆ ಕೂಡಲಸಂಗಮದೇವ"
>
> (ವಚನ, ೨೩೦)

ಇಲ್ಲಿ ಎಂದಿಗೂ ಪ್ರಸ್ತುತವಾದ ಮುಖ್ಯ ಸಂಗತಿಯೆಂದರೆ ವರ್ಣವ್ಯವಸ್ಥೆಯಲ್ಲಿ ಕೀಳೆಂದು ಪರಿಗಣಿಸಲ್ಪಟ್ಟ ಶೂದ್ರನಾದವರು ತಾನು ಕೀಳು ಜಾತಿಯಲ್ಲಿ ಹುಟ್ಟಿದವನೆಂಬ ಅಂತರಂಗದ ಮಾನಸಿಕ ಅಳುಕನ್ನು ಬಿಡಬೇಕೆಂಬುದು. ಶರಣರ ದೃಷ್ಟಿಯಲ್ಲಿ ಅಂಗದ ಮೇಲೆ ಲಿಂಗವಿದ್ದವನೇ ಕುಲಜ, ಆದರೆ ಆತನು ಡಂಬನಾಗಿರಬಾರದೆಂಬುದು ಅವರ ಕಟ್ಟಾಜ್ಞೆ.

> "ಹಲವು ಜಾತಿಯ ಕಟ್ಟಿಗೆಯ ಸುಟ್ಟಲ್ಲಿ ಅಗ್ನಿಯೊಂದಲ್ಲದೆ
> ಅಲ್ಲಿ ಕಟ್ಟಿಗೆಯ ಕುರುಹು ಕಾಂಬುದೆ"[೧೪]
>
> "ಮನುಷ್ಯನಾದವನಿಗೆ ಪ್ರಾರಬ್ಧಕ್ಕಿಂತ ಪ್ರಯತ್ನವೇ ಮಿಗಿಲಾಗಿರ್ಪುದು"[೧೫]

ಎಂಬುದನ್ನು ಚೆನ್ನಬಸವಣ್ಣನವರು ವಿಶ್ವಾಮಿತ್ರ ಮಾರ್ಕಂಡೇಯ ಮುಂತಾದ ಉದಾಹರಣೆಗಳಿಂದ ಸ್ಪಷ್ಟಪಡಿಸಿದ್ದಾರೆ. ಪ್ರಯತ್ನವಿಲ್ಲದೇ ಕೇವಲ ದೈವ-ದುರ್ದೈವಗಳ ಮೇಲೆಯೇ ಹಣೆಯೂರಿ ಕೂಡುವ ಮುಗ್ಧ ಸಮಾಜವನ್ನು ಎಚ್ಚರಿಸಿ-ಪ್ರಯತ್ನದಲ್ಲಿ ಹೋರಾಟದ

---

೧೨ ಚ.ಬ.ವ-೬೦೦ ೧೩ ಚ.ಬ.ವ-೪೯೮ ೧೪ ಚ.ಬ.ವ-೨೪೫

೧೫ ಚ.ಬ.ವ-೧೦೬

ಪ್ರವೃತ್ತಿಯನ್ನು ಬಡಿದೆಬ್ಬಿಸಲು ಪ್ರಯತ್ನಿಸಿದ್ದಾರೆ. ವಿವೇಚನಾಶೀಲ ಹೋರಾಟವೇ ಜರುಗವ ದುಃಖಿಗಳಿಗೆಲ್ಲ ಮಾರಕವೆಂಬುದನ್ನು ಪರ್ಯಾಯವಾಗಿ ಸೂಚಿಸಿರುವುದು ಗಮನಾರ್ಹ ಜನ ಜಾಣರಾದರೆ ಶೋಷಣೆಯ ಬವಣೆ ತಾನಾಗಿಯೇ ತಪ್ಪುವುದು ನಿಶ್ಚಿತ.

ಸಾಮಾಜಿಕರಿಗೆ ಸುವ್ಯವಸ್ಥಿತ ಸುಖೀ ಜೀವನಕ್ಕೆ ಸಹಾಯಕವಾಗುವಂತೆ ೫೦ ಸರಳವಾದ ಆಚಾರಗಳನ್ನು ನಿಗದಿಪಡಿಸಿದ್ದಾರೆ. ಅವುಗಳಲ್ಲಿ

"ಪರರ ಹೆಣ್ಣಿಗೆ ಕಣ್ಣಿಡದಿಹುದೇ ಒಂದನೆಯ ಆಚಾರ
ಪರದ್ರವ್ಯವ ಅಪ್ಯವಹಾರ ಮಾಡದಿಹುದೇ ಎರಡನೆಯ ಆಚಾರ
ಸುಳ್ಳಾಡದಿಹುದೇ ಮೂರನೆಯ ಆಚಾರ
ಸಕಲ ಜೀವಿಗಳಿಗೆ ಹಿತವ ಬಯಸುವುದೆ ೧೪ನೆಯ ಆಚಾರ
ಸರ್ವರಿಗೆ ಹಿತವ ಮಾಡುವುದೇ ೧೫ನೆಯ ಆಚಾರ
ಮನ ನೋಯಿಸಿ ಮಾತನಾಡದಿಹುದೇ ೨೯ನೆಯ ಆಚಾರ[೧೬]

ಇವೇ ಕೆಲವು ಮಹತ್ವದವುಗಳಾಗಿದ್ದು ಆ ಕಾಲದ ಸಾಮಾಜಿಕ ಸ್ವಾಸ್ಥ್ಯಕ್ಕೆ ಕಟ್ಟಳೆಗಳೆನ್ನುವಂತಿವೆ. ತನುವ್ಯಸನ, ಮನವ್ಯಸನ, ಧನವ್ಯಸನ, ರಾಜ್ಯವ್ಯಸನ, ವಿಶ್ವವ್ಯಸನ, ಉತ್ಸಾಹ ವ್ಯಸನ, ಸೇವಕವ್ಯಸನ"[೧೭]ಗಳಲ್ಲಿ ಬಳಲುವವರನ್ನು ಖಂಡಿಸಿದರು. ಇಂಥ ವ್ಯಸನಗಳ ಅಭಿಲಾಷೆಗಳಿಗಾಗಿಯೇ ಅನ್ಯರನ್ನು ಪೀಡಿಸುವ, ಕಪಟತನದಲ್ಲಿ ಹೇಗಾದರೂ, ಅವುಗಳನ್ನು ಗಿಟ್ಟಿಸುವಲ್ಲಿ ಅನಾಚಾರಕ್ಕೆ ಅವಕಾಶವುಂಟು, ಆ ಮೂಲಕ ಯಾವ ಶೋಷಣೆಗೂ ಹಿಂದು ಮುಂದು ನೋಡದ ಪಾಮ ಪ್ರವೃತ್ತಿ ತಾನಾಗಿಯೇ ಅಂಕುರಿಸುವುದೆಂಬುದರ ಸಾರ್ವಕಾಲಿಕ ಸತ್ಯ ಕಂಡಿದ್ದಾರೆ ಅದಲ್ಲದೆ—

"ಮಸನ ವೈರಾಗ್ಯರು ಲಕ್ಷ ಲಕ್ಷ, ಪುರಾಣ ವೈರಾಗ್ಯರು ಲಕ್ಷ ಲಕ್ಷ
ಪ್ರಸೂತಿ ವೈರಾಗ್ಯರು ಲಕ್ಷ ಲಕ್ಷ, ಪಿತ್ತ ವೈರಾಗ್ಯರು ಲಕ್ಷ ಲಕ್ಷ
ಸ್ವಾನುಭವ ಸಮ್ಯಕ ಜ್ಞಾನ ವೈರಾಗ್ಯರನೊಬ್ಬರನೂ ಕಾಣೆ—
ಕೂಡಲ ಚೆನ್ನಸಂಗಮದೇವಾ"[೧೮]

ಎಂದು ನೊಂದಿದ್ದಾರೆ. ಇಡೀ ಸಮಾಜವೇ ಧರ್ಮದ ನೆಲೆಯನ್ನು ತಪ್ಪಿಸಿಕೊಂಡು ಅಸ್ಥಿರತೆಯ ಅಂಚಿನಲ್ಲಿದ್ದಾಗ ಶಿವಶರಣರಿಗೆ ಗುರುತರ ಜವಾಬ್ದಾರಿ ಕಾದಿತ್ತು. ಅಂತೆಯೇ ಸಾಮಾಜಿಕ ಸುವ್ಯವಸ್ಥೆಯನ್ನು ಸ್ಥಿರಗೊಳಿಸುವುದರೊಂದಿಗೆ ಮಾನಸಿಕ ನೆಮ್ಮದಿಯನ್ನೂ ಧರ್ಮದಲ್ಲಿ ಶ್ರದ್ಧೆ ನಂಬಿಕೆಗಳನ್ನು ಹುಟ್ಟಿಸುವುದೂ ಅಷ್ಟೇ ಮಹತ್ವದ್ದಾಗಿತ್ತು ಉಳಿದೆಲ್ಲ ಶರಣರು ಸಾಮೋಪಾಯದ ರೀತಿಯಲ್ಲಿ ಸಮಾಜವನ್ನು ತಿದ್ದುವತ್ತ ಕ್ರಿಯಾಶೀಲವಾದರೆ, ಚನ್ನಬಸವಣ್ಣನಂಥ ಕ್ರಾಂತಿಕಾರಿಗಳು–ಅದನ್ನೇ ಹೆಚ್ಚು ತೀಕ್ಷ್ಣವಾದ ರೀತಿಯಲ್ಲಿ ಹೇಳುತ್ತ ಆಂದೋಲನವನ್ನು ಹೆಚ್ಚು ಕ್ರಿಯಾಶೀಲಗೊಳಿಸಿದರು.

---

೧೬ ಚ.ಬ.ವ–೧೧೧೨ ೧೭ ಚ.ಬ.ವ. ೮೭೨ ೧೮ ಚ.ಬ.ವ–೧೧೬೧

"ಧರೆಯ ಮೇಲೆ ಸುಳಿದಾಡುವ ಲಾಂಛನಧಾರಿಗಳೆಲ್ಲಾ
ಹದಿನೆಂಟು ಜಾತಿಯ ಮನೆಯಲುಂಡು ಕೆಟ್ಟರಯ್ಯಾ
ಗಿರಿಯಲ್ಲಿಪ್ಪ ಜಟಾಧಾರಿಗಳೆಲ್ಲಾ ಪಲಭಕ್ಷ್ಯಂಗಳನ್ನುಂಡು ಕೆಟ್ಟರಯ್ಯಾ
ತರಗೆಲೆಯ ಮೇಲಿದ್ದು ತಪವಿಪ್ಪವರೆಲ್ಲಾ ವಾಯುಭಕ್ಷವನುಂಡು ಕೆಟ್ಟರಯ್ಯಾ
ಅರಿಯದೆ ಇಂದ್ರಿಯಂಗಳ ಕಟ್ಟಿ ಕುರುಹಿನ ರಾಜ್ಯಕ್ಕೆ ಬಂದು
ನರಕಕ್ಕಿಳಿದವರ ಹಿರಿಯರೆಂದೆನಗೆ ತೋರದಿರಾ
ಸರ್ವಭ್ರಾಂತಳಿದುಳಿದ ಮಹಾಂತರನೆನಗೆ ತೋರಾ
ಕೂಡಲ ಚೆನ್ನ ಸಂಗಮದೇವಾ"[೧೯]

ಹೀಗೆ ಪಲಾಯನವಾದಿಗಳಾಗಿ ಬದುಕಿನ ಸಂಗ್ರಾಮದಿಂದ ವಿಮುಖರಾದವರನ್ನು ಬಲವಾಗಿ ಹೀಗಳೆದರು. ಒಬ್ಬರನ್ನೊಬ್ಬರು ಪರಸ್ಪರ ಹೊಗಳಿ ದೊಡ್ಡವರಾದವರು ಇಂದಿನ ಸಮಕಾಲೀನ ಸಮಾಜದಲ್ಲಿ ಸಾಕಷ್ಟು ಜನ ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಈ ಭ್ರಷ್ಟಾಚಾರ ಒಂದು ರೀತಿಯಲ್ಲಿ ಇಂದಂತೂ ದೊಡ್ಡಗದ್ದಿಗೆಯನ್ನೇ ಏರಿ ಕುಳಿತಾಗ ಚನ್ನಬಸವಣ್ಣನವರು ಅಂದಿನ ಸಮಾಜದಲ್ಲೇ ಇದನ್ನು ಗುರುತಿಸಿದ್ದು ಮಹತ್ವದ್ದಾಗಿದೆ.

"ಎನ್ನ ಹೊಗಳಲಿಕ್ಕೆ ನಿನಗೆ ತೆರಹಿಲ್ಲ
ನಿಮ್ಮ ಹೊಗಳಲಿಕ್ಕೆ ಎನಗೆ ತೆರಹಿಲ್ಲ
ಒಬ್ಬರನ್ನೊಬ್ಬರು ಹೊಗಳಲಿಕ್ಕೆ ಹೊತ್ತು ಹೋಯಿತ್ತಲ್ಲಾ?"[೨೦]

ಎಂದು ವ್ಯರ್ಥ ಹೊಗಳಿಕೆಯ ನಿರರ್ಥಕತೆಯನ್ನು ಒತ್ತಿ ಹೇಳಿದ್ದಾರೆ. "ಮಧುರದ ಗುಣವ ಇರುವೆ ಬಲ್ಲದು,ವೇಳೆಯ ಗುಣವ ಕೋಳಿ ಬಲ್ಲುದು ಗೋತ್ರದ ಗುಣವ ಕಾಗೆ ಬಲ್ಲುದು"[೨೧] ಆದರೆ ತನ್ನ ಬದುಕಿನ ಭವಿಷ್ಯವನ್ನೇ ಅರಿಯದ ಮಾನವ ಇರುವೆ, ಕೋಳಿ, ಕಾಗೆಗಳಿಗಿಂತಲೂ ಕೀಳು ಎಂದಿದ್ದಾರೆ. ಇಡೀ ಸಮಾಜದ ಅಂತರ್ಯವನ್ನೇ ಕಲಕುಗೊಳಿಸುತ್ತಿದ್ದ 'ಹುಸಿ'ಯ ಬಗ್ಗೆ ಚನ್ನಬಸವಣ್ಣನವರು ಕೊಟ್ಟ ಮಹೋಮೆ ಅತ್ಯಂತ ಗಮನಾರ್ಹವಾದುದು. ಸಾಕ್ಷಾತ್ ದೇವರೆಂದು ಬೀಗಿದ ಪುರೋಹಿತಶಾಹಿ ಪ್ರವೃತ್ತಿಯಲ್ಲಿ ಮಳೆತು ನಿಂತ ಅರಸನನ್ನೂ ಬಿಡದ ಅವರ ಧೀಮಂತ ವೈಚಾರಿಕತೆಯನ್ನು ಯಾರೂ ಪ್ರಶ್ನಿಸುವಂತಿಲ್ಲ.

"ಹುಸಿ ಅಂಕುರಿಸಿತ್ತು ಹೊಲೆಯನಲ್ಲಿ, ಹುಸಿ ಎರಡೆಲೆಯಾಯಿತ್ತು ಮಾದಿಗನಲ್ಲಿ
ಹುಸಿ ನಾಲ್ಕೆಲೆಯಾಯಿತ್ತು ಸಮಗಾರನಲ್ಲಿ, ಹುಸಿ ಆರೆಲೆಯಾಯಿತ್ತು ಅಗಸನಲ್ಲಿ
ಹುಸಿ ಎಂಟೆಲೆಯಾಗಿತ್ತು ವ್ಯವಹಾರಿಯಲ್ಲಿ, ಹುಸಿ ಸಸಿಯಾಗಿತ್ತು ಹಾದರಿಗನಲ್ಲಿ
ಹುಸಿ ಗಿಡವಾಗಿತ್ತು ಮದ್ಯಪಾನಿಯಲ್ಲಿ, ಹುಸಿ ಮರವಾಗಿತ್ತು ಜೂಜುಗಾರನಲ್ಲಿ

೧೯ ಚ.ಬ.ವ-೧೧೭೩ ೨೦ ಚ.ಬ.ವ-೩೦೮ ೨೧ ಚ.ಬ.ವ-೨೨೭

ಹುಸಿ ಹೂವಾಗಿತ್ತು ಡೊಂಬನಲ್ಲಿ, ಹುಸಿ ಕಾಯಾಗಿತ್ತು ಅಕ್ಕಸಾಲಿಗನಲ್ಲಿ
ಹುಸಿ ಹಣ್ಣಾಗಿತ್ತು ಸೂಳೆಯಲ್ಲಿ, ಹುಸಿ ಹಣ್ಣಾಗಿ ತೊಟ್ಟು ಬಿಟ್ಟಿತ್ತು ಅರಸನಲ್ಲಿ"೨೨

ಅಲ್ಲದೆ—

"ಪ್ರಜರು ಪ್ರಧಾನಿಯ ಮುಂದೆ ಗಜವನೇರಲಾಗದು
ಪ್ರಧಾನಿ ಪಟ್ಟದವರ ಮುಂದೆ ತುರಂಗವನೇರಲಾಗದು
ಪಟ್ಟದಾತ ಕೂಡಲಚೆನ್ನಸಂಗನ ಶರಣರ ಮುಂದೆ
ಆಂದೋಳನವ ಏರಲಾಗದು ಸಿದ್ಧರಾಮಯ್ಯಾ"೨೩

ಎಂದು ಹೇಳುತ್ತ–ಅಂದು ಅರಸ, ಪ್ರಧಾನಿ, ಪ್ರಜೆಗಳಲ್ಲಿದ್ದ ಅಧಿಕಾರಶಾಹಿ ಪ್ರವೃತ್ತಿಯನ್ನು ಖಂಡಿಸಿ ಅರಸನಾದರೂ ಸರಿ, ಶಿವಭಕ್ತನಿಗಿಂತಲೂ ಕಡೆ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಹೀಗೆ ಅಂದಿನ ಸಮಾಜ ನಿರೀಕ್ಷೆಯಲ್ಲಿ ತಾವು ಕಂಡುಕೊಂಡ ಲೋಪದೋಷಗಳನ್ನು ಬಿಚ್ಚು ಮನಸ್ಸಿನಿಂದ ವಿಡಂಬಿಸಿದ ಚೆನ್ನಬಸವಣ್ಣನವರು ಸಮಾಜದ ಸಾಂಸ್ಕೃತಿಕ ಅಧಃಪತನವನ್ನು ಕಂಡು ಕೆಂಡವಾದರು. ರಾಜಕೀಯ ಮತ್ತು ಧಾರ್ಮಿಕ ಒತ್ತಡಗಳಿಂದ ಜರ್ಜರಿತವಾದ ಸಾಮಾನ್ಯ ಜನರ ಬದುಕನ್ನು ಶೋಷಣೆಯಿಂದ ಪಾರುಮಾಡಬೇಕೆಂಬ ಮೂಲ ಉದ್ದೇಶವನ್ನಿಟ್ಟುಕೊಂಡು ಆ ಕಾಲದ ಸಮಾಜಕ್ಕೆ ಬೇಕಾದ ಯೋಗ್ಯ ಚಿಕಿತ್ಸೆಯನ್ನು ಕೊಟ್ಟರು. ಅಲ್ಲದೇ ಆ ಚಿಕಿತ್ಸೆಯೇ ಇಂದಿನ ಸಮಾಜಕ್ಕೂ ಕೂಡ ಅನಿವಾರ್ಯವೆಂಬುದನ್ನು ಬೇರೆ ಹೇಳಬೇಕಿಲ್ಲ. ಇಂದು ಹೆಜ್ಜೆ ಹೆಜ್ಜೆಗೂ ಎಲ್ಲಾ ಕ್ಷೇತ್ರಗಳಲ್ಲಿ ತುಂಬಿ ತುಳುಕುತ್ತಿರುವ ಭ್ರಷ್ಟಾಚಾರ, ಅನಾಚಾರ ಜಾತಿ ವೈಷಮ್ಯ, ಲಂಚ ಕಲಬೆರಕೆ, ಮೋಸ ವಂಚನೆ, ಸ್ವಾರ್ಥ, ದುರಾಸೆ ಇತ್ಯಾದಿಗಳನ್ನು ಮನಗಂಡಾಗ ಚೆನ್ನಬಸವಣ್ಣನವರಂತೆ ಪ್ರಾಮಾಣಿಕ ಕಳಕಳಿಯುಳ್ಳ ನಿಸ್ವಾರ್ಥಿಯಾದ ವೈಚಾರಿಕ ಮನೋಭಾವವುಳ್ಳವರು ಅವರೊಬ್ಬರೇ ಎಂದು ಹೇಳಬೇಕಾಗುವುದು. ಇದ್ದಾರೆ ಅಂದರೆ, ಅವರೇ ಹೇಳುವಂತೆ–

"ಹೆಂಡತಿ ಮಕ್ಕಳಿಗೆ ಕುಲದೈವ ಮನಸ್ಸೈವವಲ್ಲದೆ
ಎನಗೆ ಮನೆದೈವವಿಲ್ಲೆಂಬ ಭಂಡನ ಭಕ್ತಿಯ ಪರಿಯನೋಡಾ
ಆಯುಕ್ತಿ ಶೂನ್ಯರಿಗೆ ಮುಂದೆ ದೃಷ್ಟವ ಹೇಳಿಹೆನು ಕೇಳಿರೇ
ತನ್ನ ಹೆಂಡತಿ ಮತ್ತೊಬ್ಬನ ಮೆಚ್ಚಿಕೊಂಡು ಹೋಗುತ್ತಿರೆ
ಹೋದಡೆ ಹೋಗಲಿ ಎಂದು ಸೈರಿಸಬಲ್ಲಡೆ ತಾನವರೊಳಗಲ್ಲ
ಅಕಟಕಟಾ ಲೌಕಿಕಕ್ಕೆ ಅಜ್ಞೆಯುಂಟು ಪಾರಮಾರ್ಥಕ್ಕೆ ಅಜ್ಞೆಯಿಲ್ಲವೆ?
ಇದು ಕಾರಣ ಕೂಡಲ ಚೆನ್ನಸಂಗಯ್ಯಾ ಭಕ್ತನಾಗಿ ಬವಿಯ
ಬೆರೆಸುವ ಅನಾಚಾರಿಯ ತೋರದಿರಯ್ಯಾ"೨೪

ಈ ಮಾತು ಇಂದಿನ ಕ್ರಾಂತಿಕಾರಿ ಸಂಘಟನೆಗಳ ವೈಚಾರಿಕರಿಗೂ ಅನ್ವಯಿಸುವಂಥದು.

---

೨೨ ಚ.ಬ.ವ–೨೨೯ ೨೩ ಚ.ಬ.ವ–೪೧೭ ೨೪ ಚ.ಬ.ವ–೯೧

ಸಮೂಹ ಮಾಧ್ಯಮವಾಗಿ ದೂರದರ್ಶನ

—ಕಮಲಾ ಹೆಮ್ಮಿಗೆ

ಇತ್ತೀಚಿನ ದಿನಗಳಲ್ಲಿ ದೂರದರ್ಶನ, ಅತ್ಯಂತ ಸಶಕ್ತವಾದ ಸಮೂಹ ಮಾಧ್ಯಮ ವೆಂದರೆ ಅತಿಶಯೋಕ್ತಿಯಲ್ಲ. ಇದು ದೃಕ್ ಶ್ರವಣ ಮಾಧ್ಯಮವೆಂಬುದು ಗೊತ್ತಿರುವ ವಿಚಾರ.

ಅದ್ಭುತ ತಾಂತ್ರಿಕ ಬೆಳವಣಿಗೆಗಳಿಂದಾಗಿ, ಜಗತ್ತು ಕಿರಿದಾಗುತ್ತಿರುವ ಇಂದಿನ ಕಾಲದಲ್ಲಿ ಸಹೃದಯರ, ವಿಶೇಷ ಪ್ರಯತ್ನಗಳಿಲ್ಲದೇ ಆಸ್ವಾದ್ಯವಾಗುವ ಕಾರ್ಯಕ್ರಮ ಗಳಿಂದಾಗಿ, ಮನಸ್ಸು ಮನಸ್ಸುಗಳ ನಡುವಣ ಸೇತುವೆಯಾಗಿ ಈ ಮಾಧ್ಯಮ ಮಹತ್ವದ್ದಾ ಗಿದೆ. (Common Culture) ಸಾಮಾನ್ಯ ಸಂಸ್ಕೃತಿಯನ್ನು ಹುಟ್ಟು ಹಾಕುವ ಉದ್ದೇಶ ಇದರದು. ಈ ಕಾರಣಕ್ಕಾಗಿಯೇ ಎಲ್ಲ ಪ್ರಾಂತ್ಯಗಳ, ಎಲ್ಲ ವರ್ಗಗಳ, ವಿವಿಧ ಭಾಷೆಗಳ ಹಿನ್ನೆಲೆಯನ್ನು ಒಳಗೊಂಡಿರುವಂಥದು.

ಬಹಳ ತಾತ್ತ್ವಿಕವಾಗಿ ಹೇಳುವುದಾದರೆ, ದೂರದರ್ಶನ, ಆತ್ಮದ ರಚನೆಯನ್ನು ವಿನ್ಯಾಸಗೊಳಿಸುತ್ತದೆ. ಗ್ರಹಣ ಸಾಮರ್ಥ್ಯವನ್ನು ಕುದುರಿಸುತ್ತದೆ. ಸೋದಾಹರಣವಾಗಿ ನಿರೂಪಣೆಗೊಳ್ಳುವುದರಿಂದ ವೀಕ್ಷಕರು ಸಹಜವಾಗಿಯೇ, ಅನ್ವಯಿಸಿಕೊಳ್ಳುತ್ತಾರೆ.

'ಚಿಲ್ಡ್ರನ್ ಆ್ಯಂಡ್ ಟೆಲಿವಿಜನ್' ಎಂಬ ಪುಸ್ತಕದಲ್ಲಿ ಬರುವ ಈ ಮಾತುಗಳು ಇದನ್ನಿನ್ನೂ ಸ್ಪಷ್ಟಗೊಳಿಸಬಲ್ಲವು:

'I like star sky, Because He is like my brother who is older than me'

ಇವು ಒಬ್ಬ ಹುಡುಗ ಹೇಳುವ ಮಾತುಗಳು.

(ನಮ್ಮಲ್ಲೂ ಸರ್ವೇಕ್ಷಣೆ ನಡೆಸಿದಾಗ, ಬಹುಪಾಲು ಬಾಲಕ ಬಾಲಕಿಯರು ಫ್ಯಾಂಟಮ್, ಸೂಪರಮ್ಯಾನ್ ಮುಂತಾದವರೊಂದಿಗೆ ತಮ್ಮನ್ನು ಅನ್ವಯಿಸಿಕೊಳ್ಳಲಿಚ್ಛಿಸಿ ರುವುದು ಕಂಡುಬಂದಿದೆ.)

ಇದೇ ಗ್ರಂಥದ ಒಂದು ಲೇಖನದಲ್ಲಿ ಬಾಲಕನೊಬ್ಬನ ವಿಚಿತ್ರ ಅಭಿರುಚಿ ವ್ಯಕ್ತ ವಾಗಿದೆ ನೋಡಿ:

'I like Dracula Because of the way he sucks the Blood of women'

ಒಟ್ಟಾರೆ, ನಮ್ಮ ಪ್ರಾಚೀನರು 'ನಾಟಕ'ದ ಬಗ್ಗೆ ಹೇಳಿದ 'ನಾಟ್ಯಂ ಭಿನ್ನರುಚೇರ್ಜನಸ್ಯ, ಬಹುಧಾಪ್ಯೇಕಂ ಸಮಾರಾಧನಂ' ಎಂಬ ಉಕ್ತಿಯನ್ನೇ ದೂರದರ್ಶನ ಮಾಧ್ಯಮಕ್ಕೂ ಅನ್ವಯಿಸಬಹುದು.

ದೂರದರ್ಶನವನ್ನು 'ಮೂರ್ಖರ ಪೆಟ್ಟಿಗೆ' ಎಂದೂ ಲೇವಡಿ ಮಾಡಿರುವುದುಂಟು. ಪ್ರತಿ ಮಾಧ್ಯಮಕ್ಕೂ ಅದರದೇ ಆದ ಅನುಕೂಲತೆ ಅನಾನುಕೂಲತೆಗಳಿರುವುದರಿಂದ, ಈ ಮಾತನ್ನು ಪೂರ್ಣವಾಗಿ ಒಪ್ಪಲಾಗುವುದಿಲ್ಲ. ಅಲ್ಲದೇ ರೇಡಿಯೋ ಮತ್ತು ದೂರದರ್ಶನಗಳು ಸರ್ಕಾರೀ ಸ್ವಾಮ್ಯದಲ್ಲಿರುವುದರಿಂದ, ಹಲವಾರು ಕಟುಟೀಕೆಗಳಿಗೆ ಒಳಗಾದ ಪ್ರಸಂಗಗಳೂ ಇವೆ. ಇವೆರಡಕ್ಕೂ 'ಸ್ವಾಯತ್ತತೆ' ಕೊಡಬೇಕೆಂಬ ಪ್ರಸ್ತಾಪವೂ ಬಂದಿತ್ತಾದರೂ, ಸದ್ಯದಲ್ಲಿ ಅದು ಕಾರ್ಯಗತವಾಗುವಂತೆ ಕಾಣುವುದಿಲ್ಲ.

ಈಚಿನ ದಿನಗಳಲ್ಲಿ ದೂರದರ್ಶನ ಎಷ್ಟು ಅನಿವಾರ್ಯವಾಗಿದೆ ಎಂಬುದಕ್ಕೆ ಈ ಮುಂದಿನ ಮಾತು ಸಾಕ್ಷಿ: 'Television is a Ritual Almost like a Religion' ಇದು ಗರ್ಬನರ್ ಹೇಳಿದ ಮಾತು.

ಸಮೂಹ ಸಂಸ್ಕೃತಿಗೆ ತನ್ನ ಅನುಪಮ ಕೊಡುಗೆ ಸಲ್ಲಿಸುವ ಒಂದು ವಾಹಕ ಇದು ಎನ್ನುತ್ತಾನೆ. ಆತ.

ಆದರೆ, ಕೆಲವು ಭಾವುಕರ ತಕರಾರೂ ಇದೆ. ಕಾರ್ಯಕ್ರಮ ಹಾಗೂ ಅದಕ್ಕೆ ಪೂರಕವಾದ ದೃಶ್ಯಗಳು ಎಲ್ಲವೂ ಒಟ್ಟಿಗೇ ಸಂಯೋಜಿಸಲ್ಪಟ್ಟಿರುವುದರಿಂದ, ಕಲ್ಪನಾಶೀಲತೆಗೆ ಅವಕಾಶವೇ ಇರುವುದಿಲ್ಲ ಎಂಬುದು. ಉದಾಹರಣೆಗೆ, ಒಂದು 'ಗೀತಚಿತ್ರ'ವನ್ನು ಪ್ರಸಾರ ಮಾಡಿದಾಗ ಮೂಲ ಕವನ ಕಟ್ಟಿಕೊಡುವ ಭಾವಲೋಕವನ್ನು, ಕಾರ್ಯಕ್ರಮದಲ್ಲಿ ಯೋಜಿತವಾದ ಚಿತ್ರಗಳ ಮಾಲೆ ಹೆಚ್ಚು ಪರಿಣಾಮಕಾರಿಯಾಗಿ, ಕಟ್ಟಲಾರದು ಎಂಬ ಅಭಿಪ್ರಾಯವನ್ನು ಓರ್ವ ವೀಕ್ಷಕರು ವ್ಯಕ್ತಪಡಿಸಿದ್ದಿದೆ. ಬಹುಪಾಲು Spoon Feeding ಆಗಿಯೇ ಇರುತ್ತದೆ ಎಂಬ ಅಭಿಪ್ರಾಯವೂ ಬಂದಿದ್ದಿದೆ.

ಆದರೆ, ಈ ಮೊದಲು ಹೇಳಿದಂತೆ, ಪ್ರತಿ ಮಾಧ್ಯಮಕ್ಕೂ ಅದರದೇ ಆದ ಅನುಕೂಲತೆ-ಅನಾನುಕೂಲತೆಗಳಿರುತ್ತವೆ.

ನಮ್ಮ ದೇಶದಲ್ಲಂತೂ ಕೇವಲ ೧೯೫೯ ರಿಂದ ದೂರದರ್ಶನ ಆರಂಭವಾದದ್ದು.

ಆಕಾಶವಾಣಿಯಂಥ ದೀರ್ಘಕಾಲದ ಪರಂಪರೆ ಅದಕ್ಕಿಲ್ಲ. ಇನ್ನೂ ಹೊಸ ಆವಿಷ್ಕಾರಗಳಿಗಾಗಿ, ಪ್ರಯತ್ನ ನಡೆದಿದೆ.

೧೯೫೯ರಲ್ಲಿ ದಿಲ್ಲಿಯಲ್ಲಿ ಪ್ರಾರಂಭವಾದ ಟಿ.ವಿ. ಕೇಂದ್ರವು, ಕೆಲವೇ ವರ್ಷಗಳಲ್ಲೀ ಭಾರತೀಯವಾದ 'ದೂರದರ್ಶನ' ಎಂಬ ಹೆಸರನ್ನು ಪಡೆಯಿತು. ೧೯೮೬-೮೭ರ ಅವಧಿಯಲ್ಲಿ ಹದಿಮೂರು ಟ್ರಾನ್ಸ್‌ಮೀಟರ್‌ಗಳನ್ನು ಅಳವಡಿಸಲಾಯಿತು. ಇನ್ಸಾಟ್

ಉಪಗ್ರಹ ಕಾರ್ಯಾಚರಣೆಗಳು ಕಾರ್ಯಕ್ರಮಗಳ ನೇರಪ್ರಸಾರ ಹಾಗೂ ರಾಷ್ಟ್ರೀಯ ಜಾಲ ವಿಸ್ತರಣೆಗೆ ನೆರವಾದವು.

೧೯೮೭ರಲ್ಲಿ ದೂರದರ್ಶನದ ವಾಣಿಜ್ಯ ವಿಭಾಗ ಆರಂಭವಾಯಿತು. ರಾಷ್ಟ್ರಮಟ್ಟ ದಲ್ಲಿ ಪ್ರಸಾರ ಜಾಲವನ್ನು ವಿಸ್ತರಿಸಿದ ಶ್ರೇಯಸ್ಸು ದಿವಂಗತ ಪ್ರಧಾನಿ ಇಂದಿರಾಗಾಂಧಿ ಯವರಿಗೆ ಸಲ್ಲುತ್ತದೆ. ಸರ್ಕಾರದ ಸಾಧನೆಗಳು, ವಿವಿಧ ಭಾಷೆಗಳ ಸಂಸ್ಕೃತಿಗಳ ಪರಿಚಯ ಇವೆಲ್ಲವೂ ಸಾಧ್ಯವಾದವು.

ಮಾಹಿತಿ, ಶಿಕ್ಷಣ ಹಾಗೂ ಮನರಂಜನೆ ಇವು ದೂರದರ್ಶನದ ಗಾಯತ್ರೀ ಮಂತ್ರ ಗಳಾಗಿವೆ. ಆದರೆ, ಬ್ರಿಟನ್ನಿನಲ್ಲಿ ನಡೆಸಿದ ಸರ್ವೇಕ್ಷಣೆಯ ಪ್ರಕಾರ, ಹೆಚ್ಚು ಜನಪ್ರಿಯ ಕಾರ್ಯಕ್ರಮಗಳೆಂದರೆ ಮನರಂಜನೆ ಹಾಗೂ ಥ್ರಿಲ್–ನ ಕಾರ್ಯಕ್ರಮಗಳೇ

'Television and Social Controle' ಎಂಬ ಗ್ರಂಥದಲ್ಲಿ ಸ್ವಾರಸ್ಯಕರವಾದ ಒಂದು ಉದ್ಧೃತ ಭಾಗವಿದೆ.

ಕೆಲವು ಹೈಸ್ಕೂಲು ವಿದ್ಯಾರ್ಥಿಗಳನ್ನು ಟಿ.ವಿ. ಮಾಧ್ಯಮದ ಕುರಿತು ಪ್ರಶ್ನಿಸ ಲಾಯಿತು. ಆಗ ಅವರು ಹೇಳಿದ್ದು:

"ಟಿ.ವಿ.ಯು, ಗೆಳೆಯ–ಟೀಚರ್ ಹಾಗೂ ತಂದೆ ತಾಯಿಗಳಿಗಿಂತ ಹೆಚ್ಚಾಗಿ ರಾಜಕೀಯ ಮಾಹಿತಿ ಒದಗಿಸುತ್ತೆ"

ಇನ್ನು ಸೋದಾಹರಣವಾದ ಕೃಷಿ ಹಾಗೂ ಆರೋಗ್ಯ ಕಾರ್ಯಕ್ರಮಗಳು–ಸಾರ್ವ ಜನಿಕರಿಗೆ ಉಪಯುಕ್ತವಾದ ಕಾರ್ಯಕ್ರಮಗಳು ಎಂಬುದು ಸರ್ವೇಕ್ಷಣೆಗಳಿಂದ ವಿದಿತ ವಾಗಿದೆ.

ದೂರದರ್ಶನವು, ವಯಸ್ಸಾದವರ ಅಂದರೆ, ವೃದ್ಧರ ಸಂಗಾತಿ. ಬಿ.ಬಿ.ಸಿ. ಸಂಖ್ಯೆ ಗಳು ತೋರಿಸಿದಂತೆ ಒಂದು ವಾರದಲ್ಲಿ, ಅರವತ್ತೊಂದನ್ನು ದಾಟಿದ ವೃದ್ಧರು ಸರಾಸರಿ ೨೭ ಗಂಟೆಗಳ ಕಾಲ ಟಿ.ವಿ. ವೀಕ್ಷಿಸುತ್ತಾರೆ. (ಮಹಾಭಾರತ ಕಾರ್ಯಕ್ರಮ ನೋಡುತ್ತ ಭಾವುಕಳಾಗಿ ಹೃದಯಾಘಾತಕ್ಕೊಳಗಾದ ವೃದ್ಧೆಯ ನಿದರ್ಶನ, ಇತ್ತೀಚಿನದ್ದು).

ಎಲ್ಲ ಕಾರ್ಯಕ್ರಮಗಳೂ ನಿರೀಕ್ಷಿಸಿದ ಫಲವನ್ನೇ ಕೊಡುತ್ತವೆ ಎಂದು ಹೇಳು ವಂತಿಲ್ಲ. ಹಾಗೆಯೇ ಉತ್ತಮ ಕಾರ್ಯಕ್ರಮ ಹಾಗೂ ಕಾರ್ಯಕ್ರಮಗಳ ಆಯ್ಕೆ, ವೀಕ್ಷಕರಿಗೇನೇ ಬಿಟ್ಟಿದ್ದು.

ದೂರದರ್ಶನದ ಇನ್ನೊಂದು ಸಾಧ್ಯತೆ ಎಂದರೆ, ಭಾವೈಕ್ಯ ಭಾವನೆಯ ಉದ್ದೀಪನ.

'ಮೇರಾ ಭಾರತ್ ಮಹಾನ್' ಎಂಬ ಚಿಕ್ಕ ಚಿತ್ರಿಕೆ, ಅತ್ಯಲ್ಪ ಕಾಲದಲ್ಲಿ ಸಾಧಿಸಿ ರುವ ಪರಿಣಾಮ ಅಪಾರ. ಅಂತೆಯೇ 'ನಮಸ್ಕಾರ್' ಮುಂತಾದ ಕಿರುಚಿತ್ರಿಕೆಗಳೂ ಜನಮನ್ನಣೆಗಳಿಸಿವೆ. ಕರ್ನಾಟಕದಲ್ಲಿ ಕುಳಿತು ಉತ್ತರದ ವೈಷ್ಣೋದೇವಿ ದೇವಾಲಯ

ವನ್ನೋ ಫತೇಪ್ರರ ಸಿಕ್ರಿಯನ್ನೋ ನೋಡುವುದು ಈಗ ಸಾಧ್ಯವಾಗಿದೆ. ಹಾಗೆ ಉತ್ತರದವರು ಕರಗ ಉತ್ಸವವನ್ನೂ, ದಸರಾ ಮೆರವಣಿಗೆಯನ್ನೂ ಕಂಡು ಆನಂದಿಸ ಬಹುದು. ಹೀಗೆ, ಇದು ಭೌಗೋಳಿಕ ಎಲ್ಲೆಗಳನ್ನು ಮರೆಸುವಂತೆ ಕೆಲಸ ಮಾಡುತ್ತಿರುವ ರೀತಿ, ಗಮನಾರ್ಹವಾದುದು.

ಪ್ರಸಾರ ಮಾಧ್ಯಮದ ಇನ್ನೊಂದು ಶಾಖೆಯಾದ ಆಕಾಶವಾಣಿಯ ಧ್ಯೇಯವಾಕ್ಯ

'ಬಹುಜನ ಹಿತಾಯ
ಬಹುಜನ ಸುಖಾಯ'

ಅಂತೆಯೇ ದೂರದರ್ಶನದ ಧ್ಯೇಯ ವಾಕ್ಯ:

ಸತ್ಯಂ, ಶಿವಂ, ಸುಂದರಂ.

ಸತ್ಯವೆಂದರೆ ಗೊತ್ತು. ಶಿವವೆಂದರೂ ಗೊತ್ತು. ಸುಂದರವಾದ್ದೆಂದರೆ ಎಲ್ಲವೂ ಸುರಮ್ಯವಾಗಿರಬೇಕೆಂದಿಲ್ಲ. ನೋಡುಗನಿಗೆ ಹಿತವಾದ್ದು ಎಂದು. ನೋಡುಗರಲ್ಲಿ ಅಪಾರ ವೈವಿಧ್ಯವಿರುವುದರಿಂದ ಕಾರ್ಯಕ್ರಮಗಳಲ್ಲೂ ವೈವಿಧ್ಯತೆ ಇರುವುದು ಅನಿವಾರ್ಯ. ಅಪೇಕ್ಷಣೀಯ ಕೂಡ. ಆ ದಿಕ್ಕಿನಲ್ಲಿ ನಮ್ಮ ಪ್ರಯತ್ನ.

□ □

ವಚನಗಳಲ್ಲಿ ನವ್ಯತೆ

(ಒಂದು ತೌಲನಿಕ ಅಧ್ಯಯನ)

—ಡಾ. ಬುದ್ದಣ್ಣ ಹಿಂಗಮಿರೆ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ, ವಚನಗಳಿಗೆ ಅತ್ಯಂತ ಮಹತ್ವದ ಸ್ಥಾನವಿದ್ದು, ವಚನಗಳನ್ನು ಹಲವು ಮಗ್ಗುಲುಗಳಿಂದ ಅಧ್ಯಯನ ಮಾಡುವುದು ಹಾಗೂ ಇತ್ತೀಚಿನ ವಿಮರ್ಶೆಯ ಮಾನದಂಡದಿಂದ ಪುನರ್ವಿಮರ್ಶೆಗೆ ತೊಡಗುವುದು ಅಗತ್ಯವಿದೆ. ಪೂರ್ವದ ಕಾವ್ಯಗಳಲ್ಲಿ ಪ್ರಯೋಗಗೊಂಡ 'ವಚನ'ಕ್ಕೂ ಶರಣರಿಂದ ರಚಿತವಾದ ವಚನ ರೂಪಕ್ಕೂ ಸಾಕಷ್ಟು ಅಂತರವಿದ್ದುದು ಸ್ಪಷ್ಟವಾಗಿದೆ. ವಚನಕಾರರು ಕವಿ, ಕಲಾವಿದರೆ ಆಗಿದ್ದು, ಅವರ ವಚನಗಳು ಅಂದಿನ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸ್ತರಗಳನ್ನು ವಿಶ್ಲೇಷಿಸಿ ತೋರುತ್ತವೆ. ಅಂದಿನ ಸಾಮಾಜಿಕ, ಧಾರ್ಮಿಕ, ರಾಜಕೀಯ ಸಂಘರ್ಷಗಳನ್ನು ತಿಳಿದುಕೊಳ್ಳಲು ಐತಿಹಾಸಿಕವೆನ್ನಬಹುದಾದ ಸಾಮಗ್ರಿಯನ್ನು ಒದಗಿಸುತ್ತವೆ, ವೈದಿಕ ಧರ್ಮದ ಕರ್ಮಠತನ, ಕಂದಾಚಾರ, ಜಾತೀಯ ವೈಷಮ್ಯದ ವಿರುದ್ಧ ದನಿ ಎತ್ತಿರುವುದು ಅತ್ಯಂತ ಗಮನಾರ್ಹವಾದದ್ದು.

ಕಾರ್ಲ್‌ಮಾರ್ಕ್ಸ್‌ನ 'ದಿ ಬ್ರಿಟಿಷ್ ರೂಲ್ ಇನ್ ಇಂಡಿಯಾ' ಲೇಖನದಲ್ಲಿ ಶರಣರ ಧರ್ಮವನ್ನು 'ಲಿಂಗವತ್ ರಿಲಿಜನ್'-ಎಂದು ಹೆಸರಿಸಿ, ಅದಕ್ಕೆ ಕೊಟ್ಟಿರುವ ಟಿಪ್ಪಣಿ ಅತ್ಯಂತ ಮಹತ್ವದ್ದಾಗಿದೆ. '....It recognises no caste differences and rejects fasts, sacrifices and pilgrimages'-೧ ಮಾರ್ಕ್ಸ್‌ನ ಒಂದೇ ವಾಕ್ಯದಲ್ಲಿ ಹೇಳಬೇಕಾದದ್ದನ್ನೆಲ್ಲ ಹೇಳಿರುವುದು ಅರ್ಥಪೂರ್ಣವಾಗಿದ್ದು, ಶರಣ ಧರ್ಮದ ಪುರೋಗಾಮಿ ಅಧ್ಯಯನಕ್ಕೆ ಪೀಠಿಕೆಯನ್ನೊದಗಿಸುತ್ತದೆ.

ವಚನಗಳಲ್ಲಿ ಸಾಮಾಜಿಕ, ರಾಜಕೀಯ ಹಾಗೂ ಧಾರ್ಮಿಕ ಸಂಘರ್ಷ ಹಾಗೂ ಗೊಂದಲಗಳ ಅಭಿವ್ಯಕ್ತಿಯನ್ನು ಗುರ್ತಿಸಬಹುದಾಗಿದೆ. ಸಾಮಾಜಿಕ ಧಾರ್ಮಿಕ, ಮೂಢ ನಂಬಿಕೆ, ಅನಿಷ್ಟಗಳ ಕುರಿತು ಮಾತನಾಡುವಾಗ, ಅಂಥ ಅಭಿವ್ಯಕ್ತಿ ಸಾಧ್ಯವಾಗಿರುವುದನ್ನು ಗಮನಿಸಬಹುದು.

ವಚನಗಳು ಭಾವನಾತ್ಮಕ ಕೊಂಡಿಯನ್ನು ಕಳಚಿಕೊಂಡು ಗದ್ಯಕ್ಕೆ ಹತ್ತಿರವಾಗಿ ತೀರ ಆಪ್ತವೆನ್ನಿಸುತ್ತವೆ. ಜನ ಭಾಷೆಯನ್ನು ದುಡಿಸಿ, ಒಂದು ಹದಕ್ಕೆ ತಂದು 'ವಚನ'

---

೧ Karl Marx and Frederick Engels Selected Works-Vo. I. Progress Publishers Fifth Print 1983

ರೂಪವನ್ನು ಕೊಟ್ಟಿರುವುದು ಗಮನಾರ್ಹ. ಆತ್ಮೀಯತೆಯಿಂದ, ಆಪ್ತತೆಯಿಂದ ನುಡಿಯುವ ಧಾಟಿ, ಲಯಗಳನ್ನು ಹಿಡಿದು ಅವುಗಳಲ್ಲಿ ತಮ್ಮ ಅನುಭವ, ಅನುಭಾವವನ್ನು ತುಂಬಿ ಅದೆಲ್ಲಾ ಒಟ್ಟುಗೂಡಿ 'ವಚನ'ವೆನ್ನುವ ಒಂದು ಹೊಸ (pattern) ಮಾದರಿ ಇಲ್ಲವೆ ಒಂದು ಹೊಸ (texture)ನೆಯ್ಗೆ ಸಿದ್ಧವಾಗಿರುವದನ್ನು ಕಾಣುತ್ತೇವೆ.

ವಚನಗಳ ರಚನಾಕ್ರಮ, ತಂತ್ರ, ನೆಯ್ಗೆ, ಭಾಷೆ ಆಡುಮಾತಿನ ಲಯ ಅಲ್ಲದೆ ವಚನಕಾರರು ಸೃಷ್ಟಿಸುವ ವಿವಿಧ ಸಂಕೇತ, ರೂಪಕ ಹಾಗೂ ಪ್ರತಿಮೆಗಳು–ಹೀಗೆ ಇವುಗಳನ್ನು ಒಂದೊಂದನ್ನಾಗಿ ವಿಶ್ಲೇಷಣೆಗೆ ಒಳಪಡಿಸಿ ಬೆಲೆಕಟ್ಟುವುದು ಅತ್ಯಂತ ಜರೂರಿಯಾಗಿದೆ. ವಚನಗಳಲ್ಲಿ ಸ್ವಾನುಭವ, ಆತ್ಮವಿಮರ್ಶೆ, ಅನುಭಾವ ಇವೆಲ್ಲಾ ಸೇರಿಕೊಂಡಿದ್ದು ಅಧ್ಯಯನದ ದೃಷ್ಟಿಯಿಂದ ವಿಮರ್ಶಕನನ್ನು ಬೆಳೆಸುತ್ತ ಹೋಗುವ ಅನುಭವದ ಅಕ್ಷಯ ನಿಧಿಯಾಗಿವೆ.

ಎಲಿಯಟ್, ಏಟ್ಸ್, ಪೌಂಡ್ ಆಡೆನ್, ಸಿಟ್‌ವೆಲ್ ಮುಂತಾದವರು ಇಂಗ್ಲೀಷ್ ರೋಮ್ಯಾಂಟಿಕ್ ಕಾವ್ಯದ ಪ್ರವಾಹವನ್ನು ಬದಲಿಸಿ, ಅವಕ್ಕೊಂದು ಹೊಸ ತಿರುವನ್ನು ಕೊಟ್ಟು ನವ್ಯ ಕಾವ್ಯ ರಚನೆಯಲ್ಲಿ ಸಿದ್ಧಹಸ್ತರಾದವರು. ಗೋಕಾಕ್, ಅಡಿಗ ನರಸಿಂಹಸ್ವಾಮಿ ಮುಂತಾದವರು ಕನ್ನಡದ ರೋಮ್ಯಾಂಟಿಕ್ ಕಾವ್ಯದಿಂದ ಭಿನ್ನವಾದ ಧೋರಣೆಯುಳ್ಳ ನವ್ಯ ಕಾವ್ಯದ ಮಾದರಿಗಳನ್ನು ನೀಡಿದರು. ಕನ್ನಡದಲ್ಲಿ ನವ್ಯ ಕಾವ್ಯ ಪ್ರಾದುರ್ಭವಿಸುವ ಮೊದಲೆ ವಚನಕಾರರು ವಸ್ತುನಿಷ್ಟ(Objective) ಸಾವಯವ (Organic)ಅಲ್ಲದೆ ಬೌದ್ಧಿಕ ಸ್ತರವನ್ನು ಚಿತ್ರಿಸುವ ಕಾವ್ಯ ರಚನೆಯಲ್ಲಿ ಕೃಷಿ ಮಾಡಿದರು. ತಮ್ಮ ಸ್ವಾನುಭವ, ಅನುಭಾವಗಳಿಗೆ ವಿಶಿಷ್ಟರೂಪ, ಆಕಾರ ಕೊಟ್ಟು ಕಾವ್ಯದ ದಿಕ್ಕನ್ನು ಬದಲಿಸಿರುವುದು ಗಮನಾರ್ಹ.

ಪ್ಲೇಟೋನ ಆದರ್ಶ ರಾಜ್ಯದ ಕಲ್ಪನೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಸುವ್ಯವಸ್ಥಿತ, ಸಮಾನತೆಯ ತಳಹದಿಯುಳ್ಳ ಸಮಾಜ ನಿರ್ಮಾಣಕ್ಕೆ ಪೂರಕವಾಗುವಲ್ಲ ಹಲವು ಮಹತ್ವದ ಅಂಶಗಳು ವಚನಗಳಲ್ಲಿರುವುದನ್ನು ಗುರುತಿಸಬಹುದು. ವಚನಕಾರರು ಭಾಷೆಗೆ ಹೊಸ ಶಕ್ತಿಯನ್ನು ತುಂಬಿದ್ದಲ್ಲದೆ ಜಡಗೊಂಡಂತಿದ್ದ ಭಾಷೆಯ ಕ್ಷಿತಿಜವನ್ನು ವಿಸ್ತರಿಸಿದರು. ಜನ ಆಡುತ್ತಿದ್ದ ಜೀವಂತ ಭಾಷೆಯನ್ನು ಹಿಡಿದು, ಜನರ ಬಾಯ ನುಡಿಗಟ್ಟು, ನಾಣ್ನುಡಿ, ಚಿಂತನೆ, ಒಗಟು, ಒಡಪು ಇತ್ಯಾದಿಗಳನ್ನು ಸಾರ್ಥಕವಾಗಿ ಬಳಸಿ ಭಾಷೆಯ ಶಕ್ತಿಯನ್ನು ಹೆಚ್ಚಿಸಿದರು. ವಚನಗಳು ಹೊಸ ರೂಪ, ಆಕಾರವನ್ನು ಪಡೆದುಕೊಂಡು ವಿಶಿಷ್ಟವಾಗಿವೆ.

"ವಚನಗಳ ಮುಕ್ತರೂಪ ಹೊಸಗನ್ನಡಕ್ಕೆ ಎರಡನೆಯ ತಿರುವನ್ನು ತಂದ ನವ್ಯ ಕಾವ್ಯದ ರೂಪಾಂಶಕ್ಕೆ ಪ್ರೇರಣೆಯಾಗಿದೆ.೨ ಎನ್ನುವ ಅಭಿಪ್ರಾಯ ಸತ್ಯವೇ ಆಗಿದೆ.

---

೨. ಡಾ. ಜಿ. ಎಸ್. ಶಿವರುದ್ರಪ್ಪ
ಕನ್ನಡ ಸಾಹಿತ್ಯ ಸಮೀಕ್ಷೆ ಪು. ೨೨ ೧೯೭೪

ಸಹಜತೆ ಹಾಗೂ ಸರಳತೆ ಅವುಗಳ ಜೀವಾಳವಾಗಿ ಜನಸಮುದಾಯುವನ್ನು ಸ್ಪಂದಿಸುವ ಗುಣ ಪಡೆದುಕೊಂಡಿವೆ.

'ಎನ್ನ ಕಾಯುವ ದಂಡಿಗೆಯು ಮಾಡಯ್ಯಾ
ಎನ್ನ ಶಿರವ ಸೋರೆಯು ಮಾಡಯ್ಯಾ
ಎನ್ನ ನರವ ತಂತಿಯು ಮಾಡಯ್ಯಾ
ಎನ್ನ ಬೆರಳ ಕಡ್ಡಿಯು ಮಾಡಯ್ಯಾ'–

ನಿರರ್ಗಳವಾಗಿ ಉಕ್ಕುವ ಭಾವ ಸಾವಯುವವನ್ನು ಪಡೆದುಕೊಂಡು ದಂಡಿಗೆಯು ಪ್ರತಿಮೆ ಬೆಳೆಯುತ್ತ ಹೋಗುತ್ತದೆ. ಕಾಯು–ದಂಡಿಗೆ, ಶಿರ–ಸೋರೆ, ನರ–ತಂತಿ, ಬೆರಳ–ಕಡ್ಡಿ ಇತ್ಯಾದಿ ಒಂದರೊಳಗೊಂದು ಬೆರೆತು, ಅವಿನಾಭಾವ ಸಂಬಂಧವನ್ನು ಸೂಚಿಸುತ್ತವೆ. 'ಬತ್ತೀಸ ರಾಗವ ಹಾಡಯ್ಯ; ಎನ್ನನುರದಲೊತ್ತಿ ಬಾರಿಸು'-ಇತ್ಯಾದಿ ಪ್ರತಿಮೆಯಲ್ಲಿ ನಿಬದ್ಧವಾದ ಅರ್ಥವನ್ನು ಸ್ಫೋಟಗೊಳಿಸಲು ಕಾರಣವಾಗುತ್ತವೆ. ನವೋನವ ಸಂಕೇತ, ರೂಪಕ, ದೃಷ್ಟಾಂತ, ಪ್ರತಿಮೆಗಳ ನಿರ್ಮಾಣ ಕೌಶಲ್ಯಕ್ಕೆ ವಚನಗಳು ಹೊಚ್ಚಹೊಸ ಮಾದರಿಗಳಾಗಿವೆ. ಕನ್ನಡ ನವ್ಯ ಕಾವ್ಯದ ರೂಪ, ತಂತ್ರವಿಧಾನ ಇಂಗ್ಲೀಷ್‌ನಿಂದ ಆಮದು ಆಗಿದ್ದರೂ ವಚನಗಳು ಮಾತ್ರ ದೇಶೀಯ ಸರಕಾಗಿದ್ದು ವಿಮರ್ಶಕರಿಗೆ ಸವಾಲು ಒಡ್ಡಿ ನಿಂತಿವೆ. ವಚನಗಳ ವಿಶ್ಲೇಷಣೆಗೆ ತೊಡಗುವಾಗ ಇನ್ನೂ ಕೆಲವು ವಿಷಯಗಳನ್ನು ಗಮನಿಸುವುದು ಅಗತ್ಯ. ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳನ್ನು ಗುರುತಿಸಲು ವಚನಗಳಲ್ಲಿ ಸಾಕಷ್ಟು ಸಾಮಗ್ರಿ ಹರಡಿಕೊಂಡಿವೆ. ಜಡಗೊಂಡ ವ್ಯವಸ್ಥೆಯನ್ನು ಪಲ್ಲಟಿಸಿ ಹೊಸ ಸಮಾಜವನ್ನು ನಿರ್ಮಿಸಬೇಕೆನ್ನುವ ವಾಂಛೆ ವಚನಗಳಲ್ಲಿ ಅಡಗಿರುವ ಮುಖ್ಯ ಧ್ವನಿಯಾಗಿದೆ.

'ಹೋರಾಟಕ್ಕಿಳಿಯಲು ಸನ್ನದ್ಧಗೊಂಡ ಸೈನ್ಯಕ್ಕಿಂತ ಸಾಂಸ್ಕೃತಿಕ ಸೈನ್ಯ ಕಾರ್ಯ ಪ್ರವೃತ್ತವಾಗುವುದು ಅಗತ್ಯವಾಗಿದೆ.'

To defeat the enemy we must rely primarily on the army with guns. But this army alone is not enough;we must also have a cultural army which is absolutely indispensable for uniting our own ranks and defeating the enemy.[೨] ಹನ್ನೆರಡನೆಯ ಶತಮಾನ ದಲ್ಲಿ ಶರಣರು ವಚನಗಳ ಮುಖಾಂತರ ಜನಸಮುದಾಯದಲ್ಲಿ ಅಂಥ ಅರಿವನ್ನು ಮೂಡಿಸಿ ಸಾಂಸ್ಕೃತಿಕ ಕ್ರಾಂತಿಗೆ ಭೂಮಿಕೆಯನ್ನು ಸಿದ್ಧಪಡಿಸಿದ್ದುದು ಇತಿಹಾಸದ ಚಕ್ರಕ್ಕೆ ಒಂದು ಹೊಸ ಗತಿಯನ್ನು ತಂದು ಕೊಟ್ಟಿದ್ದುಂಟು.

---

೨. Mao-Tse Tung
On Literature and Art. p-1,
Second Print-1977
Foreign Languages Press Peking

ಕೆಲವು ನವ್ಯ ಕವಿಗಳು ವಚನಗಳಿಂದ ಪ್ರೇರಣೆಯನ್ನು ಪಡೆದವುಂಟು. ಸೂಕ್ಷ್ಮ ವಾಗಿ ಅವಲೋಕನ ಮಾಡಿದರೆ ವಚನಗಳಲ್ಲಿ ರೂಢವಾದ ಗದ್ಯಲಯವನ್ನು ನವ್ಯ ಕಾವ್ಯ ಗಳಲ್ಲಿ ಗುರುತಿಸಬಹುದಾಗಿದೆ.

ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು
—ಗೋಕಾಕ್

ನೀರು ನೀರಾಗಿ ಬೆಳಗು
ನಾದಮಯವಾಗು ಹೊರಗು ಒಳಗು
—ಗೋಕಾಕ್

ಹೊಸದೆಲ್ಲ ಹುಟ್ಟಿಬರಲಿ
ಬೇಡಯ್ಯ ಬಂಧಗಳ ಬಂದಿವಾಸ;
ಸಾಕಯ್ಯ ವೃತ್ತಗಳಾವರ್ತ
ನಿನ್ನ ಮಣಿತ ಏರಲಿ ಸಮುದ್ರನ ಕುಣಿತದಂತೆ.
—ಗೋಕಾಕ್

ಪಡಿಯಂತೆ ಏಡನ್ನಸು ಒಡಿವ ಗುಡ್ಡದ ಕೆಳಗೆ
ಗಿಡ್ಡದಾಗಿ ನಿಂತಿದೆ ನೋಡು–ಬ್ರಿಟನ್ನಿನ ಬಂದರ
—ಗೋಕಾಕ್

ನಿಬಣ್ಣದ ಮಬ್ಬಿನಲ್ಲಿ ನೆಗೆದ ಹಂಸ
ಇಬ್ಬಣದಿರುಕಿನಲ್ಲಿ ಗಾಸಿಗೊಂಡಿತ್ತು
ಜ್ಯೋತಿರ್ಮಯನ ಕಾಣಲೊಪ್ಪಿ
ಕದಲದ ಕತ್ತಲೆಯನಪ್ಪಿತು
ಚಿಕ್ಕೆಯು ಸಹ ಕಾಣದೆ
ಕಕ್ಕಾವಿಕ್ಕಿಯಾಗಿ ಮಿಕ್ಕಲು ಶೂನ್ಯತೆಯು
ತಿಕ್ಕಲು ಯಾತನೆಯು
ದಿಕ್ಕು ದಿಕ್ಕಿನಲ್ಲಿ ರೆಕ್ಕೆ ಬಡಿಯಿತಯ್ಯ.
—ಗೋಕಾಕ್

ಆಕಾಶದಲ್ಲಿ ಮೋಡದ ವಿಶ್ವರೂಪಕ್ಕೆ ಕೆಳಗೆ
ಜೀವಜ್ಯೋತಿ ಕೂಡಿಸಿದಳು.
—ಅಡಿಗ

ಬಿಟ್ಟರೋ ಕಾಡಲ್ಲಿ ಕಣ್ಣು ಕಟ್ಟಿ
ಸುತ್ತಲೂ ಬಿಗಿದಿಟ್ಟು ಮುಳ್ಳು ತಂತಿ
—ಅಡಿಗ

ಕುಡಿಯಲುಪ್ಪಿನ ನೀರು ತಿನಲು ಬೆಂಕಿಯಚೂರು
—ಅಡಿಗ

ಕಾಡ ಮೂಲಕವೆ ಪಥ ಆಗಸಕ್ಕೆ
—ಅಡಿಗ

ಸಿಡಿಲು ಸಾವಿರ ಒಡೆದ ಗಗನದ ಹೆಡೆ
—ನರಸಿಂಹಸ್ವಾಮಿ

ಬೆಳ್ಳಿಯ ಬೆಟ್ಟದ ಮೇಲೆ ಬಂಗಾರದ ಉಯ್ಯಾಲೆ
ತೂಗಿಕೊಳ್ಳುವಳಾವಳೋ ಬಾಲೆ
—ನರಸಿಂಹಸ್ವಾಮಿ

ಬಂದ ಬಾಗಿಲು ಮಣ್ಣು; ಬಿಡುವ ಬಾಗಿಲು ಮಣ್ಣು
—ನರಸಿಂಹಸ್ವಾಮಿ

ಅನಂತವೆಂದರೂ ಆಕಾಶಕ್ಕೊಂದು ಆಕೃತಿಯುಂಟು
—ಕಣವಿ

ನನ್ನ ನಂಬಿಕೆಯೊಂದು ಆಕಾಶ
—ಕಣವಿ

ಅಗಮ್ಯದಲ್ಲಿ ಬೇರೂರಿ ಅಲರಿವೆ ಸೃಷ್ಟಿ
—ಚಿತ್ತಾಲ

ಎದೆ ಎದೆಗಳ ನಡುವೆ ಇದ್ದ
ಸೇತುವೆಗಳು ಮುರಿದಿವೆ
—ಶಿವರುದ್ರಪ್ಪ

ನಿನ್ನ ಎಚ್ಚರದೊಳಗೆ
ಎದ್ದು ಬಂದವರೊಳಗೆ ನಾನೂ ಒಬ್ಬ
—ಶಿವರುದ್ರಪ್ಪ

ಆಕಾಶಕಾಯಗಳ ಕರಡಿಕೆಗೆ ಸುತ್ತಿದ್ದ ನೂಲು
ಗುಂಜಾಗಿ ತೂಗುತಿದೆ ಕಾಯದಲ್ಲಿ
—ದೇವೇಂದ್ರಕುಮಾರ ಹಕಾರಿ

ಅಮೂರ್ತ ವಿಷಯ ಭಾವಗಳಿಗೆ ಮೂರ್ತರೂಪ ಕೊಟ್ಟು ಹೇಳುವುದು,ನಾಟ್ಯೀಕರಿಸಿ ಹೇಳುವುದು, ಸಂಕೇತ,ರೂಪಕ, ಪ್ರತಿಮೆಗಳನ್ನು ಹೆಣೆದು ಮಾತನಾಡುವುದು, ಸ್ವಾನುಭವವನ್ನು ಅಭಿವ್ಯಕ್ತಗೊಳಿಸುವುದು ನವ್ಯದ ವಿಧಾನವಾಗಿದೆ. ಸದರೀ ನಮೂದಿಸಿದ ಕೆಲವು ಕನ್ನಡದ

ಪ್ರಮುಖ ನವ್ಯ ಕವಿಗಳ ಕಾವ್ಯ ಮಾದರಿಗಳನ್ನು ಗಮನಿಸಬಹುದು. ಅಮೂರ್ತ ವಿಷಯ, ಅನುಭವವನ್ನು ಮೂರ್ತಗೊಳಿಸಿ ಹೇಳಬಲ್ಲ ಹೊಸ ತಂತ್ರವನ್ನು ನವ್ಯ ಕವಿಗಳಾದ ಎಲಿಯಟ್, ಯೇಟ್ಸ್ ಮುಂತಾದವರ ರಚನೆಗಳಲ್ಲಿ ಸಹಜವಾಗಿ ಗುರ್ತಿಸಬಹುದು.

*Shape without from
Shade without colour.

....

*Between the idea
And the reality
Between th motion
And the act
Falls the shadow
For thine is the kingdom.
Between the conception
And the creation
Between the emotion
And the response
Falls the shadow
Life is very long

....

*I will show you fear
in a handful of dust

—T. S. Eliot

ಯೇಟ್ಸ್ ಕವಿಯ ಕಾವ್ಯದಲ್ಲಿ ನವ್ಯತೆ ಹಾಗೂ ವೈಚಾರಿಕತೆ ಎರಡೂ ಏಕರೂಪವಾಗಿರುವುದನ್ನು ಗುರ್ತಿಸಬಹುದು.

**He with body waged a fight,
But body won; it walks upright.

---

* Collected Poems (1909–1935)
by T. S. Eliot, London
Faber & Faber Limited

** Yeats–The Man & the Masks
–Richard Ellmann
Faber & Faber–1960

Then he struggled with heart;
Innocence and peace depart.
Then he struggled with mind
His proud heart he left behind.
Now his wars on God begin,
At Stroke of midnight God shall win.

'The four Ages of Man' ಈ ಪದ್ಯದ ಭಾಷೆ, ಸ್ವಾನುಭವ, ಅಧ್ಯಾತ್ಮಿಕ ವಿಚಾರ, ಚಿಂತನೆ ಇವು ಅತ್ಯಂತ ಗಮನಾರ್ಹವಾಗಿದ್ದುದಲ್ಲದೆ ಅನುಭವವನ್ನು ನಾಟ್ಕೀಕರಿಸಿ ಹೇಳುವ ತಂತ್ರವೂ ಮುಖ್ಯವಾಗಿದೆ.

(ತನ್ನ ದೇಹದೊಂದಿಗೆ ಜಗಳ ಹೂಡಿದನು ಅವನು ದ್ವಂದ್ವದಲ್ಲಿ ಗೆದ್ದಿತು ದೇಹ ಎದ್ದು ನಡೆಯಿತು ಸೆಟೆದು. ಜಗಳ ಹೂಡಿದನು ಹೃದಯದೊಂದಿಗೆ ಅವನು ಅನಂತರ ಮುಗ್ಧತೆ, ನೆಮ್ಮದಿ ಬಿಟ್ಟು ತೊಲಗಿದವು ದೂರ ಜಗಳ ಕಾದನು ಮನಸಿನೊಂದಿಗೆ ಮತ್ತೆ ಮತ್ತೆ ಅಭಿಮಾನದ ಹೃದಯ ಹಿಂದೆ ಬಿಟ್ಟು ಹೊರಟು ಹೋದನು. ಶುರುವಾದವು ಅವನ ಯುದ್ಧಗಳು ಈಗ ದೇವನೊಂದಿಗೆ ಮಧ್ಯರಾತ್ರಿ ಸಮಯಕ್ಕೆ ಗೆಲ್ಲುವವನು ದೇವರು.)

ಕವಿಗೆ ಮೂರು ಬಗೆಯ ದನಿಗಳಿರುತ್ತವೆಂದು ಎಲಿಯಟ್ ಹೇಳಿದ್ದನ್ನು ಇಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಬಹುದು.

ಕವಿ ತನ್ನಷ್ಟಕ್ಕೆ ತಾನೆ ಹಾಡಿಕೊಳ್ಳುವುದೊಂದು ದನಿ, ಅನ್ಯರನ್ನು ಉದ್ದೇಶಿಸಿ ನುಡಿಯುವುದು ಇನ್ನೊಂದು ತನ್ನ ಅನುಭವವನ್ನು ಸಮಷ್ಟಿ ಅನುಭವವನ್ನಾಗಿಸಿ ನಾಟ್ಯೀಕರಿಸಿ ನುಡಿಯುವುದು ಮೂರನೆಯದು. ಇವುಗಳಲ್ಲಿ ಮೂರನೆಯ ದನಿ ಅತ್ಯಂತ ಮುಖ್ಯವಾದದ್ದೆಂದು ಎಲಿಯಟ್‌ನ ಗ್ರಹಿಕೆ.

ಒಂದು ಪದ್ಯದಲ್ಲಿ ಇವಿಷ್ಟೇ ಮುಖ್ಯವಾಗಿರದೆ ಇಡೀ ಪದ್ಯದಲ್ಲಿ ವ್ಯಾಪ್ತವಾಗಿರುವ ಕವಿಯ ಮನಸ್ಸೂ ಅಷ್ಟೇ ಮುಖ್ಯವಾಗಿರಬಹುದು. ಅದು ಭಾವನಾತ್ಮಕವೋ ಅಥವಾ ವೈಚಾರಿಕವೋ ಎಂಬುದರ ಮೇಲಿಂದ, ಆ ಪದ್ಯ ಯಾವ ಮಾದರಿಯದು ಎನ್ನುವುದನ್ನು ಗುರ್ತಿಸಲು ಸಾಧ್ಯವಾಗುತ್ತದೆ. ವಚನಗಳಲ್ಲಿ ಇಂಥ ಗುಣ ಇರುವುದನ್ನು ಗಮನಿಸಬಹುದಾಗಿದೆ. ವಚನಗಳಲ್ಲಿ ವ್ಯಾಪ್ತವಾಗಿರುವ ಕವಿಯ ಮನಸ್ಸು ಯಾವ ಮಟ್ಟದ್ದು ಹಾಗೂ ವೈಚಾರಿಕ ನೆಲೆಯನ್ನು ನಿರ್ಣಯಿಸಲು ಸಾಧ್ಯವಾಗುತ್ತದೆ.

i) ಹುಲ್ಲೆಯ ಕಣ್ಣಿನಲ್ಲಿ ಹುಲಿಸಿಂದಿರ್ದುದ ಕಂಡೆ೫

ii) ಬೆಕ್ಕಿನ ತಲೆಯ ಗಿಣಿ ತಿಂದು ಕತ್ತೆ ಕುದುರೆಯ ರೂಪಾಯಿತ್ತು೬

೫-೬ ಮನುಮುನಿ ಗುಮ್ಮಟಯ್ಯಗಳ ವಚನ
ಸಕಲ ಪುರಾತನರ ಬೆಡಗಿನ ವಚನಗಳು–ಸಂ. ಡಾ. ಆರ್. ಸಿ. ಹಿರೇಮಠ

ಮೊದಲನೆಯದರಲ್ಲಿ ಬರೀ ಬೆಡಗು ಮಾತ್ರ ಇರದೆ ಅದೊಂದು ಹೊಚ್ಚ ಹೊಸ ರೂಪಕವಾಗಿ ಗಮನ ಸೆಳೆಯುತ್ತದೆ. ತಾತ್ವಿಕ ನೆಲೆಯಿಂದ ಹುಟ್ಟುವ ಇಂಥ ಮಾತುಗಳು ಕಾವ್ಯಮಯವಾಗಿ ಹೊಸ ಅರ್ಥಗಳನ್ನು ಸ್ಫುರಿಸುತ್ತವೆ. ಹುಲ್ಲೆ-ಎಂದರೆ ಜೀವ, ಹುಲಿ-ಎಂದರೆ ಕಾಲವ್ಯಾಘ್ರ-ಎಂಬ ಮೂಲಾರ್ಥಗಳನ್ನು ಮೀರಿ ಈ ರೂಪಕ ಬೆಳೆಯುತ್ತದೆ. ಹುಲ್ಲೆ-ಹೆದರಿಕೆ, ಮುಗ್ಧತೆಗೆ ಸಂಕೇತವಾಗಿದೆ. ಹುಲ್ಲೆಯ ಕಣ್ಣು ಹೆದರಿಕೆಗೆ, ಸಂಕೇತ. ಭೀತಿಯೇ ಹುಲಿಯಾಗಿ, ಮೃತ್ಯುವಾಗಿ ನಿಂತಿರುವುದನ್ನು ಸೂಚಿಸುತ್ತದೆ. ಈ ರೂಪಕದಲ್ಲಿ ಮುಗ್ಧತೆ, ಸೌಂದರ್ಯ, ಮೃತ್ಯು-ಇವೆಲ್ಲಾ ಒಟ್ಟುಗೂಡಿ ಭೀತಿಯನ್ನು ಸೃಷ್ಟಿಸಲು ಕಾರಣವಾಗಿವೆ.

ವಿಲ್ಲಿಯಂ ಬ್ಲೇಕ್‌ನ Tiger ಪದ್ಯವನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು. 'ಹುಲಿ' ಸೌಂದರ್ಯ ಹಾಗೂ ಮೃತ್ಯುವಿಗೆ ಸಂಕೇತವಾಗಿರುವುದು ಗಮನಾರ್ಹ.

Tiger, tiger burning bright
in the forest of night

ಕತ್ತಲೆಯ ಕಾಡಿನಲ್ಲಿ ಕಣ್ಣುಗಳು ಲಕಲಕ ಹೊಳೆಯುವ ಹುಲಿಯ ಆಕರ್ಷಣೆಯ ಬಣ್ಣನೆ ಇಲ್ಲಿದ್ದು, ಸೌಂದರ್ಯ-ಹುಲಿ-ಮೃತ್ಯು-ಒಂದೇ ಆಗಿಬಿಟ್ಟಿವೆ. ಇಂಥ ಹುಲಿಯನ್ನು ಸೃಷ್ಟಿಸಿದ ಅನಂತತೆಯ ಆ 'ಕೈ' ಎಂಥಾದ್ದಿರಬೇಕೆಂಬ ಅಗಾಧತೆ, ಕುತೂಹಲ ಈ ಪದ್ಯದಲ್ಲಿ ವ್ಯಕ್ತವಾಗಿದೆ. ಹುಲ್ಲೆ, ಹುಲಿ, ಮೃತ್ಯು-ಈ ಮೂರೂ ಪ್ರಸ್ತುತ ರೂಪಕದ ಮುಖ್ಯ ಘಟಕಗಳಾಗಿದ್ದು, ಅವುಗಳ ಸುತ್ತು ಭಾವ, ವಿಚಾರಗಳು ಸ್ಫುರಣಗೊಳ್ಳುವುದು ಸ್ವಾಭಾವಿಕವಾಗಿದೆ.

ತಾತ್ವಿಕ ನೆಲೆಯ ಅರ್ಥಕ್ಕಿಂತ ವರ್ತಮಾನ ಸಂದರ್ಭದಲ್ಲಿ ಈ ರೂಪಕ ನವ್ಯದ ಆವರಣವನ್ನು ತೊಟ್ಟುಕೊಂಡು ಒಂದು ಒಗಟಾಗಿ ನಿಲ್ಲುತ್ತದೆ. ಒಗಟು, ಒಡಪುಗಳೇ ಇಂಥ ಬೆಡಗಿನ ವಚನಗಳ ರಚನೆಗೆ ಪ್ರೇರಕವಾಗಿರುವುದು ಗಮನಾರ್ಹ.

ii) ಎರಡನೆಯದರಲ್ಲಿ ಅಜ್ಞಾನವೆನ್ನುವುದು ಜ್ಞಾನದ ಸಂಪರ್ಕದಿಂದ ಒಂದು ಬೆಲೆಯುಳ್ಳ ವಸ್ತುವಾಗಿ ಪರಿವರ್ತಿತವಾಗುವುದು ಸೂಚಿತವಾಗಿದೆ. ಅಮೂರ್ತ ವಿಷಯಗಳನ್ನು ಮೂರ್ತಗೊಳಿಸಿ, ವಿಚಾರಕ್ಕೆ ತೊಡಗಿಸಬಲ್ಲ ಮಾಂತ್ರಿಕತೆ ಇಂಥ ವಚನಗಳ ರಹಸ್ಯವಾಗಿದೆ.

iii) ಹಾವಿನ ಹಲ್ಲಿನ ವಿಷದ ಕೊಳವೆಯ ಮೂಲೆಯಲ್ಲಿ ಮೂರು ಕಪ್ಪೆ ಹುಟ್ಟಿದವು; ಒಂದಕ್ಕೆ ಕಾಲಿಲ್ಲ, ಒಂದಕ್ಕೆ ಬಾಯಿಲ್ಲ, ಒಂದಕ್ಕೆ ಕಣ್ಣಿಲ್ಲ

ಕಾಲಿಲ್ಲದ ಕಪ್ಪೆ ಮೂರುಲೋಕ ಸುತ್ತಿತ್ತು
ಬಾಯಿಲ್ಲದ ಕಪ್ಪೆ ಬ್ರಹ್ಮಾಂಡ ನುಂಗಿತ್ತು
ಕಣ್ಣಿಲ್ಲದ ಕಪ್ಪೆ ಕಂಗಾಣದವರ ಕಂಡಿತ್ತು.

ಈ ಬೆಡಗಿನ ವಚನದಲ್ಲಿಯ ಮೊದಲನೆಯ ಸಾಲು ಕ್ರಮಕ್ರಮೇಣ ಹಿಗ್ಗಿಕೊಳ್ಳುತ್ತ ಹಾವಿನ ಆಕಾರವನ್ನು ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಎಲ್ಲಿ ಹಿಗ್ಗಿಸಬೇಕು, ಎಲ್ಲಿ ಕುಗ್ಗಿಸಬೇಕು– ಎನ್ನುವ ಮಿತವ್ಯಯ ಪ್ರಜ್ಞೆಯನ್ನು ಗಮನಕ್ಕೆ ತರುತ್ತದೆ. ಈ ವಚನ ರೂಪಕ, ಸಂಕೇತಗಳನ್ನು ಸುತ್ತಿಕೊಂಡು ಒಂದು ಅಖಂಡ ಪ್ರತಿಮೆಯಾಗಿ ಕಣ್ಮುಂದೆ ಕಟ್ಟುತ್ತದೆ. ಸಂಕೇತಗಳು ನಿಗೂಢ ಅರ್ಥದ ಬಾಗಿಲನ್ನು ತೆಗೆಯುವ ಕೀಲಿಯ ಕೈಗಳಂತೆ ಕೆಲಸ ಮಾಡುತ್ತವೆ. ತಾತ್ವಿಕ ನೆಲೆಯಲ್ಲಿ ಹಾವು ಮನಸ್ಸಿನ ಸಂಕೇತವಾಗಿ, ವಿಷದ ಕೊಳವೆ–ಪಂಚವಿಷಯಗಳಿಗೆ ಸಂಕೇತವಾಗಿ, ಮೂಲೆ–ದೇಹಕ್ಕೆ ಸಂಕೇತವಾಗಿ, ಜೀವತ್ರಯಗಳು (ಜೀವಾತ್ಮ, ಅಂತರಾತ್ಮ, ಪರಮಾತ್ಮ) ಮೂರು ಕಪ್ಪೆಗೆ ಸಂಕೇತವಾಗಿ ಆಧ್ಯಾತ್ಮಿಕ ನೆಲೆಯ ಅರ್ಥವನ್ನು ಮಂಥನ ಮಾಡುವುದಕ್ಕೆ ಸಹಾಯಕವಾಗುತ್ತವೆ. ಒಂದಕ್ಕೆ ಕಾಲಿಲ್ಲ, ಬಾಯಿಲ್ಲ, ಕಣ್ಣಿಲ್ಲ–ಎಂದು ಹೇಳಿ, ಕುತೂಹಲವನ್ನು ಕೆರಳಿಸಿ ಮತ್ತೆ ಅವು ಚಲನಶೀಲ ಗುಣವನ್ನು ಪಡೆದುಕೊಂಡು, ರೂಪಕ ಬೆಳೆಯುತ್ತ, ಸವ್ಯದ ಆವರಣವನ್ನು ಸೃಷ್ಟಿಸಿಕೊಂಡು, ಕೈ ಮೈ ಪಡೆದುಕೊಂಡು. ಅರ್ಥ–ಭಾವ–ಅನುಭಾವಗಳ ನೆಯ್ಗೆಯಾಗಿ ಬೆರಗುಗೊಳಿಸುತ್ತ ಕ್ರಿಯಾಶೀಲವಾಗುತ್ತದೆ. ಇದೇ ವಚನದಲ್ಲಿ ಈ 'ಪಿಂಡಮಂಡಲದ ಅಂಗವ ಬಿಡಿಸು' ಎನ್ನುವ ಆಹ್ವಾನವೂ ಇದೆ. ಒಂದು ಹೊಸ ರೀತಿಯ (ವಚನದ) ಅಂಗರಚನಾ ಕ್ರಿಯೆಗೆ ಸೂಚನೆಯಾಗಿರುವ ಸಾಧ್ಯತೆ ಇದೆ.

iv) ಕಟ್ಟಿದೆ ಘಟದಟ್ಟೆಯ ಹೊಲಿದು
ಇದಕ್ಕೆ ಚತುರ್ವಿಧದ ನಾಲ್ಕು ಗುಂಟವ ಬಲಿದು
ಗುಂಟದ ದ್ವಾರದಲ್ಲಿ ಉಭಯ ಸಂಚದ ಬಾರ ತೆಗೆದು
ತೊಡಕು ಬಂಧವನಿಕ್ಕಿ ಅಡಿಯ ಬಿಡದಂತೆ ಹಿಂದಣ ಮಡ
ಮುಂದಣ ಉಂಗುಷ್ಠಕ್ಕೆ ಒಂದನೊಂದು ಜಾರದಂತೆ ಬಂಧಿಸಿ
ಸಕಲೇಂದ್ರಿಯವೆಂಬುಭಯ ಸಂಬಂಧಿಸಿ ಕುಣಿಕೆಯನಿಕ್ಕಿ
ಕಾಮದೊಡಲ ಮಾದಿಗ ಬಂದೆ
ಘಟ ತೊಕುಳು, ತೊಗಲು ಹದ ಬಂದಿತ್ತು.[೭]

ಈ ವಚನ ಸಾವಯವ ಶಿಲ್ಪಕ್ಕೆ ಅತ್ಯುತ್ತಮ ಉದಾಹರಣೆ. ದೈನಂದಿನ ವೃತ್ತಿಯ ಅನುಭವದ ದ್ರವ್ಯ ಈ ವಚನದಲ್ಲಿದೆ. ಆ ಅನುಭವವೇ ಹದಗೊಂಡು ಅನಿವಾರ್ಯವಾಗಿ ವಚನ ರೂಪದಲ್ಲಿ ಅಭಿವ್ಯಕ್ತವಾಗಿದೆ. ಇಲ್ಲಿ ಬಳಸಲಾಗಿರುವ ಘಟದಟ್ಟೆ, ಗುಂಟ, ಗುಂಟದ ದ್ವಾರ ಉಭಯ ಸಂಚದ ಭಾರ, ಹಿಂದಣ ಮಡ, ಮುಂದಣ ಉಂಗುಷ್ಠ, ಘಟ, ತೊಕುಳು ತೊಗಲು ಇತ್ಯಾದಿ ಘಟದಟ್ಟೆಯ ಹೊಲಿದು ಕಟ್ಟುವ ಕ್ರಿಯೆಯನ್ನು ಸೂಚಿಸುವಲ್ಲಿ ಸಾರ್ಥಕವಾಗಿವೆ. ಅಟ್ಟೆಯ ಹೊಲಿದು, ಗುಂಟವ ಬಲಿದು, ಬಾರ ತೆಗೆದು,

---

೭ ಮಾದಾರ ಧೂಳಯ್ಯ.

ಬಂಧವನಿಕ್ಕಿ, ಜಾರದಂತೆ ಬಂಧಿಸಿ, ಕುಣಿಕೆಯನಿಕ್ಕಿ–ಇತ್ಯಾದಿ ಕ್ರಿಯಾರೂಪಗಳು ಸಮರ್ಥವಾಗಿ ಪ್ರಯೋಗಗೊಂಡು 'ಕಾವ್ಯವೊಡಲಮಾವಿಗಳ' ಕಾಯಕವನ್ನು ಯಥಾವತ್ತಾಗಿ ಚಿತ್ರಿಸುತ್ತವೆ.

v) ಇಕ್ಷುದಂಡದ ತುದಿಯ ಸುಳಿಯಲ್ಲಿ
ಹುಟ್ಟಿತ್ತೊಂದು ಗಿಣಿ.
ರಟ್ಟೆ ಮೂರು ಕಾಲೊಂದು ಬಾಯಿ ಎರಡಾಗಿ
ಮುಚ್ಚಿದ ಕಣ್ಣು, ಮೂಗಿನ ಕೆಂಪು
ಮೈ ರಕ್ತವರ್ಣ ತುಪ್ಪುಳ ಕಪ್ಪು
ಕಾಲು ಹಳದಿ ಬಾಯಿ ಬೆಳ್ಳಗೆ
ಹಾರಾಡುವ ಬಯಲ ರೂಪು
ತೋರದ ಆಗಸದಲ್ಲಿ ಹಾರಿ ಹೋಯಿತ್ತು,
ಆತ್ಮನೆಂಬ ರಾಮ ಪಂಜರವಿಲ್ಲದೆ ಹೋಯಿತ್ತು.೮

ಇಕ್ಷುದಂಡ ಸಾವಿಗೆ ಸಂಕೇತವಾಗಿದ್ದು, ಅದರ ತುದಿಯ ಸುಳಿಯಲ್ಲಿ ಹುಟ್ಟಿದ ಗಿಣಿ ಜ್ಞಾನವನ್ನು ಸಂಕೇತಿಸುತ್ತದೆ.

ಇಡೀ ಸಾಲು ಒಂದು ರೂಪಕವಾಗಿ ಮಾರ್ಪಟ್ಟು ಮುಚ್ಚಿದ ಕಣ್ಣು, ಮೂಗಿನ ಕೆಂಪು–ಹೀಗೆಂದು ಗಿಣಿಯ ವರ್ಣನೆ ಮುಂದುವರಿದು ಗಿಣಿಯ ವರ್ಣಾಕೃತಿ ಕಣ್ಮುಂದೆ ಮೂಡಿ ನಿಂತು ಒಂದು ನವ್ಯ ಪೇಂಟಿಂಗಿನಂತೆ ಗಮನ ಸೆಳೆಯುತ್ತದೆ.

Painting is a forzen Poem೯

ಶಬ್ದಗಳಲ್ಲಿ ವಿವಿಧ ವರ್ಣಗಳ ವಿನ್ಯಾಸ ತುಂಬಿಕೊಂಡಿರುವ ಈ ವಚನ ಗಮ್ಮಟಯ್ಯಗಳ ಭಾಷೆ ಹದಗೊಂಡು, ಹರಳುಗಟ್ಟಿರುವುದನ್ನು ಪ್ರತಿಮಿಸುತ್ತದೆ.

ಆತ್ಮನೆಂಬ ರಾಮ ಪಂಜರವಿಲ್ಲದೆ ಹೋಯಿತ್ತು.

ಪರಿಣತಿಯನ್ನು ಪಡೆದ ಪೇಂಟರನೊಬ್ಬ ಕೈಯಲ್ಲಿ ಕುಂಚ ಹಿಡಿದು ವಿವಿಧ ಬಣ್ಣಗಳನ್ನು ಬಳಸುವಂತೆ ಈ ವಚನ ಶಬ್ದಾರ್ಥಗಳ ಆಯಾಮಗಳನ್ನು ಹಿಗ್ಗಿಸುತ್ತ ಹೋಗುತ್ತದೆ. ಪಂಜರವನ್ನು ಮೀರಿ, ಮರೆಯಾದ ಆತ್ಮದ ಅನಂತತೆಯನ್ನು ಸೂಚಿಸುತ್ತದೆ. ತಾತ್ವಿಕ ನೆಲೆಯಲ್ಲಿ ನಿಂತು ನೋಡುವ ಅರ್ಥದ ರೀತಿಯೇ ಭಿನ್ನವಾಗಿರುತ್ತದೆ. ಸಂಕೇತ, ರೂಪಕಗಳಿಂದ ಸಿದ್ಧಗೊಳ್ಳುವ ಒಂದು ಪ್ರತಿಮೆ ಪೇಂಟಿಂಗಿನಂತೆ ಇಲ್ಲವೆ ಶಿಲ್ಪದಂತೆ ಗಮನ ಸೆಳೆದು, ಭಿನ್ನಾರ್ಥಗಳನ್ನು ಸ್ಫುರಿಸುತ್ತದೆ.

---

೮ ಮನುಮುನಿ ಗುಮ್ಮಟಯ್ಯಗಳ ವಚನ

೯ Fr. R. Leavis

—ಇಂಥ ವಚನಗಳು ಸಾವಯವ ಶಿಲ್ಪವನ್ನು ಸಾಧಿಸಿಕೊಂಡು, ಅನುಭವ-ಅನುಭಾವದಿಂದ ಹದಗೊಂಡು ಗಟ್ಟಿಯಾಗಿ ನಿಲ್ಲುವ ಸಾಮರ್ಥ್ಯ ಹೊಂದಿರುತ್ತವೆ.

ಸರಳವಾದ ಭಾಷೆ ಹರಳುಗಟ್ಟಿ, ಅನುಭವದ ಸಂಕೀರ್ಣತೆಯನ್ನು ಪ್ರಕಟಿಸುತ್ತದೆ.

ವಚನಗಳು ಹೊಸ ಬಗೆಯ ರಚನಾ ತಂತ್ರ ಆಡುಮಾತಿನ ಲಯ, ಹೊಸ ಆವರಣವನ್ನು ಕಟ್ಟಿಕೊಂಡು ವೈಚಾರಿಕತೆಯ ಪದರುಗಳನ್ನು ಎತ್ತಿತೋರುವಲ್ಲಿ ಸಮರ್ಥವಾಗುತ್ತವೆ.

□ □

ಬಸವಣ್ಣನವರ ವಚನಗಳಲ್ಲಿ ಉದಾಹೃತ ಸಂಸ್ಕೃತ ಶ್ಲೋಕಗಳ ಸಾಂದರ್ಭಿಕತೆ

—ಡಾ. ಪರಡ್ಡಿ ಮಲ್ಲಿಕಾರ್ಜುನ

ಬಸವಣ್ಣನವರ ವಚನಗಳಲ್ಲಿ ಕಂಡುಬರುವ ಅನೇಕ ಸಂಸ್ಕೃತ ಶ್ಲೋಕಗಳನ್ನವಲೋಕಿಸಿದಾಗ ಸಾಮಾನ್ಯವಾಗಿ ಸಹೃದಯ ಪಾಠಕನಿಗೆ ಅನಿಸುವದಿಷ್ಟು–"ಬಸವಣ್ಣನವರಿಗೆ ಸಂಸ್ಕೃತ ಭಾಷೆಯ ಮೇಲೆ ಪ್ರಭುತ್ವವಿರುವುದು ಸ್ಪಷ್ಟ." ಅಂದಮಾತ್ರಕ್ಕೆ ಸಂಸ್ಕೃತ ಭಾಷಾ ಪ್ರೌಢಿಮೆಯನ್ನು ಮೆರೆಸುವದು ಅವರ ಉದ್ದೇಶವಾಗಿತ್ತೆಂಬುದು ಸತ್ಯಕ್ಕೆ ದೂರವಾದ ಸಂಗತಿ. ಏಕೆಂದರೆ ಶ್ರೀಸಾಮಾನ್ಯನಿಗೆ ಅವನಿಗೆ ತಿಳಿಯುವ ಭಾಷೆಯಲ್ಲಿಯೇ ಆಧ್ಯಾತ್ಮ (ಅನುಭಾವ)ದಂಥ ಗಡುಚಾದ ವಿಷಯವನ್ನು ತಿಳಿಸುವುದೇ ಬಸವಾದಿ ಪ್ರಮಥರ ಸದಭಿಪ್ರಾಯವಾಗಿತ್ತೆಂದು ಕಲ್ಯಾಣಕ್ರಾಂತಿಯನ್ನವಲೋಕಿಸಿದರೆ ಅರಿವಾಗದೇ ಇರದು. ಹಿರೇಮಠ ಚಂದ್ರಶೇಖರ ಶಾಸ್ತ್ರಿಗಳು ರಚಿಸಿ ಕ್ರಿ.ಶ. ೧೯೬೧ರಲ್ಲಿ ಪ್ರಕಟಿಸಿದ 'ಬಸವತತ್ತ್ವರತ್ನಾಕರ'ವೆಂಬ ವಿದ್ವತ್ಪೂರ್ಣವಾದ ಗ್ರಂಥಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಅಂದಿನ ಕುಲಪತಿಗಳಾದ ಪ್ರೊಫೆಸರ್ ಎನ್. ಎ. ನಿಕಮ್ ಅವರು ಬರೆದ ಮುನ್ನುಡಿಯಲ್ಲಿ ಹೇಳಿದ ಈ ಮಾತನ್ನು ಇಲ್ಲಿ ಸ್ಮರಿಸಬಹುದು—

"The Vacanas of Basava have a protundity Simplicity and a universal appeal, compared to the upanisads. The Vachanas of Basava have enriched the Kannada language and Literature, bringing to the Common Men illumination and Solace of heart through a language which he can easily understand"[1]

ಹಾಗಾದರೆ "ಸಂಸ್ಕೃತ ಶ್ಲೋಕಗಳನ್ನುದ್ಧರಿಸುವದರ ಔಚಿತ್ಯವಾದರೂ ಏನು?" ಎಂಬ ಪ್ರಶ್ನೆ ಸಹಜವಾಗಿ ಏಳುತ್ತದೆ. ಎಲ್ಲಾ ಶ್ಲೋಕಗಳನ್ನೂ ಬಸವಣ್ಣನವರೇ ಉಲ್ಲೇಖಿಸಿದ್ದಾರೆಯೇ? ಅಥವಾ ನಂತರದ ಟೀಕಾಕಾರರಾಗಲೀ, ಲಿಪಿಕಾರರಾಗಲೀ ತಮ್ಮ ಪಾಂಡಿತ್ಯ ಪ್ರದರ್ಶನಕ್ಕಾಗಿ ಸೇರಿಸಿದ್ದಾರೆಯೇ? ಎಂಬುದೂ ಅಷ್ಟೇ ಮಹತ್ವಪೂರ್ಣವಾದ ವಿಷಯ. ಏಕೆಂದರೆ ನಂತರದ ಲಿಪಿಕಾರರು ಮತ್ತು ಟೀಕಾಕಾರರು ತಮ್ಮದೇ ಆದ ರೀತಿಯಲ್ಲಿ ಶ್ಲೋಕಗಳನ್ನು ಸೇರಿಸುವದು ಪ್ರಾಚೀನ ಭಾರತೀಯ ಸಾಹಿತ್ಯದಲ್ಲಿ ಅಪರೂಪವಲ್ಲ.

1 ಬಸವತತ್ತ್ವರತ್ನಾಕರ ಮುನ್ನುಡಿ ಪುಟ vii

ಸಂದರ್ಭಕ್ಕೆ ಅನುಚಿತವಾಗಿ ಬಂದ ಸಂಸ್ಕೃತ ಶ್ಲೋಕಗಳನ್ನು ಖಂಡಿತವಾಗಿಯೂ ನಂತರದ ಟೀಕಾಕಾರರೊ, ಲಿಪಿಕಾರರೋ ಬಸವಣ್ಣನವರ ವಚನಗಳಲ್ಲಿ ಸೇರಿಸಿರಬೇಕೆಂದು ಊಹಿಸಲು ಸಾಧ್ಯವಿದೆ. ಆದರೆ ಸಂದರ್ಭಕ್ಕೆ ಅನುಗುಣವಾಗಿ ಬಂದಿದ್ದರೆ, ಅವುಗಳನ್ನು ಉಲ್ಲೇಖಿಸುವಲ್ಲಿ ಬಸವಣ್ಣನವರ ಉದ್ದೇಶವೇನೆಂದು ವಿಚಾರಮಾಡಬೇಕಾಗುತ್ತದೆ. ಇದಾವುದರ ಪರಿಜ್ಞಾನವಿಲ್ಲದೆ ಉತ್ಸಾಹಾತಿರೇಕದಿಂದ ಕೆಲವರು ಬಸವಣ್ಣನವರ ವಚನಗಳಲ್ಲಿಯ ಸಂಸ್ಕೃತ ವಾಕ್ಯಗಳನ್ನೆಲ್ಲಾ ತೆಗೆದುಹಾಕಿ ಪುನರ್ಮುದ್ರಣ ಮಾಡಬೇಕೆಂದು ಆಗ್ರಹಿಸುವ ಮಾತು ಕೇಳಿಬರುತ್ತದೆ. ಹೀಗಿರುವಾಗ ಆ ಶ್ಲೋಕಗಳ ಸಾಂದರ್ಭಿಕತೆ ಮತ್ತು ಅವುಗಳ ಉದ್ದೇಶವನ್ನು ಪರೀಕ್ಷಿಸುವುದು ಎಂದಿಗಿಂತಲೂ ಇಂದು ಅನಿವಾರ್ಯವೆನಿಸುತ್ತದೆ. ಬಸವಣ್ಣನವರ ವಚನಗಳಲ್ಲಿ ಉದಾಹೃತ ಸಂಸ್ಕೃತ ಶ್ಲೋಕಗಳನ್ನು ತೆಗೆದುಹಾಕುವದಕ್ಕೆ ಆಗ್ರಹಪಡಿಸುವವರ ಮನಸ್ಸಿನಲ್ಲಿ 'ಬಸವಣ್ಣನವರೇ ವೀರಶೈವ ಮತಸ್ಥಾಪಕರು' ಎಂಬ ಭಾವನೆ ಬೇರೂರಿರಬಹುದು. ಆದುದರಿಂದ ಬಸವಣ್ಣನವರು ಆಗಮಾದಿಗಳಿಂದ ಸಂಸ್ಕೃತೋಕ್ತಿಗಳನ್ನು ಉದ್ಧರಿಸಿದ್ದಾರೆಂದು ಒಪ್ಪಿದರೆ ಅವರ ಅಭಿಮಾನಕ್ಕೇನೂ ತೊಂದರೆಯಿಲ್ಲ.

ಸನಾತನಧರ್ಮವೆಂದು ಕರೆಯಲಾಗುವ ಹಿಂದೂಧರ್ಮದಲ್ಲಿ ಪ್ರಾರಂಭದಲ್ಲಿಯೇ ಶೈವಕ್ರಾಂತಿಯ ಕಿಡಿ ಹೊತ್ತಿದ್ದು, ಕ್ರಮೇಣ ಅದು ಬಲಿಷ್ಠವಾದುದನ್ನು ಕಾಣುತ್ತೇವೆ. ಆ ಶೈವಕ್ರಾಂತಿಯ ಮೇರು ವೀರಶೈವವೆನ್ನಲಡ್ಡಿಯಿಲ್ಲ. ಪ್ರಾಚೀನ (ವೀರ)ಶೈವಕ್ಕೆ ಬಸವಾದಿ ಪ್ರಮಥರು ಅಂತಿಮ ಹಾಗೂ ವಿಶಿಷ್ಟ ಕೊಟ್ಟರೆಂದು ಒಪ್ಪಿದರೆ ಅವರಿಗೆ ಅಗೌರವ ತೋರಿಸದಂತೆಂಬುದು ಈ ಬಡಮತಿಗೆ ಹೊಳೆಯುವ ವಿಷಯವಲ್ಲ. ಏಕೆಂದರೆ ಯಾವುದೇ ವಿಚಾರಕ್ರಾಂತಿ ಅನೇಕ ಶತಮಾನಗಳಿಂದ ನಡೆದು ಬಂದು ಒಂದು ಕಾಲಕ್ಕೆ ಅಂತಿಮ ರೂಪ ಪಡೆಯುವ ವಿಷಯ ಯಾವುದೇ ದೇಶದ ದಾರ್ಶನಿಕ, ಧಾರ್ಮಿಕಸಾಹಿತ್ಯದಲ್ಲಿ ಕಂಡುಬರುವ ಸಾಮಾನ್ಯ ಸಂಗತಿ. ಈ ವಿಷಯದಲ್ಲಿ ಡಾ. ನಂದೀಮಠರು ಈ ರೀತಿ ಅಭಿಪ್ರಾಯಪಟ್ಟಿದ್ದಾರೆ—"A not less important Saiva School, where vogue is undiminished to this day has beenfor long current in Kannada Country but it was probably revived and reformed by a bad of inspired Seelurs of Truth in the 12th Cuentury"[2] ಅಲ್ಲದೆ ಬಸವಣ್ಣನವರು ತಮ್ಮ ವಚನಗಳಲ್ಲಿ ಎಲ್ಲಿಯೂ ತಾವೇ ವೀರಶೈವ ಮತಸ್ಥಾಪಕರೆಂದು ಹೇಳಿಕೊಂಡಿಲ್ಲ. ಆದರೆ ತಮ್ಮ ವಚನಗಳಲ್ಲಿ ಅನೇಕ ಕಡೆ ಉಲ್ಲೇಖಿಸಿದ ಆದ್ಯರ ಅಂದರೆ ಆಗಮಾದಿ ಪವಿತ್ರ ಗ್ರಂಥಗಳ ಕೆಲವು ಸಂಸ್ಕೃತೋಕ್ತಿಗಳನ್ನು ಗಮನಿಸಿದಾಗ, ಅನೇಕ ಪಂತವಾಗಿ ಶೈವ ವಿಚಾರಧಾರೆಯಿಂದ ಪ್ರಭಾವಿತರಾಗಿ,

2 Dr. S. C. Nandimath A Hand book of Vira Saivism, Dharwad 1942 pp 1, 2.

ಆ ವಿಚಾರಗಳನ್ನು ಆಚರಣೆ (ವ್ಯವಹಾರ)ಯಲ್ಲಿ ತಂದು ಅವರು ಜಗದ್ವಂದ್ಯರಾದ ವಿಷಯವನ್ನು ಒಪ್ಪುವುದು ಯುಕ್ತಿಸಂಗತವಲ್ಲವೆ?

೨. ಆದ್ಯರ ವಚನ ಪುರುಷ ಕಂಡಯ್ಯ.[೩]
ಹಾಲ ತೊರೆಗೆ ಬೆಲ್ಲದ ಕೆಸರು.[೪]

ಇತ್ಯಾದಿ ವಚನಗಳಲ್ಲಿ ತಮಗಿಂತಲೂ ಪೂರ್ವದಲ್ಲಿಯೇ ಪ್ರಚಾರದಲ್ಲಿದ್ದ ಕ್ರಾಂತಿಕಾರಿ ವಿಚಾರಧಾರೆಯನ್ನೊಳಗೊಂಡ ಆಗಮಾದಿ ಪ್ರಮಾಣವನ್ನು ಬಸವಣ್ಣನವರೇ ನಿಸ್ಸಂಕೋಚವಾಗಿ ಒಪ್ಪಿಕೊಳ್ಳುವಾಗ, ಅವರ ಅಭಿಮಾನಿಗಳೆಂದು ತಾವೇ ಹೇಳಿಕೊಳ್ಳುವ ಕೆಲವರಿಗೆ ಏಕೆ ಸಂಕೋಚವುಂಟಾಗುವದೋ ಕಾಣೆ. ಇದು ಅಲ್ಲದೆ ಷಟ್ಸ್ಥಲ ಚಕ್ರವರ್ತಿಯೆಂದು ಖ್ಯಾತರಾದ ಚೆನ್ನಬಸವಣ್ಣನವರು ವೇದ, ಆಗಮ ಮುಂತಾದ ಪ್ರಾಚೀನ ದಾರ್ಶನಿಕ ಸಾಹಿತ್ಯದ ಅಧ್ಯಯನವಿಲ್ಲದೆ ಆಚಾರವಳವಡದು, ಯಾವನೂ ಗುರುತ್ವ ಪಡೆಯಲಾರನೆಂದು ಸ್ಪಷ್ಟವಾಗಿ ಹೇಳಿದ್ದಾರೆ.

೧) ಭೃತ್ಯಾಚಾರಿಗಲ್ಲದೆ ಭಕ್ತ್ಯಾಚಾರವಳವಡದು
ವೇದಶಾಸ್ತ್ರ ಪುರಾಣಂಗಳನರಿದ ಸಂಬಂಧಿಗಲ್ಲದೆ
ಆಚಾರವಳವಡದು.[೫]

೨) ಶ್ರೀಗುರುಪಾದಾತನು ಸಕಲಾಗಮಗಳ ಹೃದಯವನರಿದು....[೬]

ಈ ದಿಶೆಯಲ್ಲಿ ವಿಚಾರಮಾಡಿದರೆ ಕೆಳಗಿನ ಮಾತು ಸತ್ಯಕ್ಕೆ ಸಮೀಪವೆಂಬ ಬುದ್ಧಿ ಯಾರಿಗಾದರೂ ಉಂಟಾಗದೇ ಇರದು—

' ವೀರಶೈವ ತಾತ್ತ್ವಿಕ ವಿಚಾರ, ಧಾರ್ಮಿಕ ವಿಚಾರಗಳು ಆಗಮಗಳಲ್ಲಿ ಇರುವದನ್ನು ಆಗಮಗಳಿಂದ ಮತ್ತು ಆಗಮಗಳನ್ನು ಕುರಿತ ಕೃತಿಗಳಿಂದ ತಿಳಿಯಬಹುದು.[೭]

ಆದರೆ ಬಸವಾದಿ ಪ್ರಮಥರು ಕಾಮಿಕಾದಿ ವಾತುಲಾಂತವಾದ ೨೮ ಶಿವಾಗಮಗಳಲ್ಲುಕ್ತ ವಿಷಯವನ್ನೇ ಯಥಾವತ್ ಜನಸಾಮಾನ್ಯರ ಭಾಷೆಯಲ್ಲಿ ಹೇಳಹೊರಟರೆಂದು ಊಹಿಸುವದೂ ಸತ್ಯಕ್ಕೆ ದೂರವಾದ ಸಂಗತಿ. "ಬಸವಾದಿ ಪ್ರಮಥರು ಶಿವಾಗಮಗಳ

---

೩ ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು. ಕ.ವಿ.ವಿ. ಧಾರವಾಡ ೧೯೬೮ ವಚನ ಸಂಖ್ಯೆ ೧೭೧

೪ ಅದೇ ವಚನ ಸಂಖ್ಯೆ ೬೩೩

೫ ಚೆನ್ನಬಸವಣ್ಣನವರ ವಚನಗಳು ಕ.ವಿ.ವಿ. ೧೯೭೧ ವಚನ ೫೩

೬ ಅದೇ ವಚನ ೨೯೭

೭ ಡಾ. ವಿ. ಎಸ್. ಕಂಬಿ, ಶೈವಾಗಮಗಳು ಮತ್ತು ವಚನಸಾಹಿತ್ಯದಲ್ಲಿ ಷಟ್‌ಸ್ಥಲ ಒಂದು ವಿವೇಚನೆ–ಕರ್ನಾಟಕ ಭಾರತಿ, XII–೪ ಪುಟ ೧೦೫

ಹೆಜ್ಜೆಯಲ್ಲಿ ಹೆಜ್ಜೆಯನ್ನಿಟ್ಟು ತಮ್ಮ ವಚನಗಳನ್ನು ರಚಿಸಿಕೊಂಡಿದ್ದಾರೆ"[೮] ಎಂಬ ಮಾತೂ ಅತಿರೇಕದ್ದೆಂದು ಹೇಳಬಹುದು. ಏಕೆಂದರೆ ಬಸವಾದಿ ಪ್ರಮಥರು ತಾವು ಆಚರಿಸಿದ, ತಮ್ಮ ಅನುಭವಕ್ಕೆ ವೇದ್ಯವಾದ (mystic) ವಿಚಾರಗಳನ್ನು ಹೃದಯ ತುಂಬ ಉದ್ಗರಿಸುವಾಗ ಶಿವಾಗಮಾದಿ ಗ್ರಂಥಗಳಲ್ಲಿ ಉಕ್ತವಾದ ಸಂಸ್ಕೃತ ವಾಕ್ಯಗಳನ್ನು ಆಧಾರವಾಗಿ ಉಲ್ಲೇಖಿಸಿರಬಹುದಲ್ಲವೇ?

೩. ಇಂತು ಶಿವಾಗಮಾದಿ ಪ್ರಾಮಾಣ್ಯವನ್ನು ಒಪ್ಪಿದ ಬಸವಣ್ಣನವರಿಗೆ ಶಿವಾಗಮ ಶಾಸನ ಅನುಲ್ಲಂಘ್ಯವೆಂಬ ಭಾವನೆಯಿಂದ ಶರಣರಲ್ಲಿ ಕೆಲವರಾದರೂ ಭವಿ ಬಿಜ್ಜಳನ ಸೇವೆ ಅನುಚಿತವಾದುದೆಂದು ತಿಳಿಸಲು ಆಗಮ ವಚನವನ್ನೇ ಎತ್ತಿ ತೋರಿಸಿರಬಹುದು. ಆದುದರಿಂದಲೇ ಆ ಶ್ಲೋಕವನ್ನು ತಮ್ಮ ಒಂದು ವಚನದಲ್ಲಿ ಬಸವಣ್ಣನವರು ಉಲ್ಲೇಖಿಸುತ್ತಾರೆ—

> ಆಸನೇ ಶಯನೇ ಯಾನೇ ಸಂಪರ್ಕೇ ಸಹಭೋಜನೇ।
> ಸಂಚರಂತಿ ಮಹಾಘೋರೇ ನರಕೇ ಕಾಲಮಕ್ಷಯಂ॥

ಈ ಆಕ್ಷೇಪಕ್ಕೆ ಬಸವಣ್ಣನವರ ನಿಷ್ಠುರವಾದ ಉತ್ತರವಿದು.

> "ಹೊಲೆ ಹೊಲೆಯರ ಮನೆಯ ಹೊಕ್ಕಾದಡೆಯೂ
> ಸಲೆ ಕೈಕೂಲಿಯ ಮಾಡಿಯಾದಡೆಯೂ
> ನಿಮ್ಮ ನಿಲವಿಂಗೆ ಕುದಿವೆನಲ್ಲದೆ ಎನ್ನೊಡಲವಸರಕ್ಕೆ
> ಕುದಿದೆನಾದೊಡೆ ತಲೆದಂಡ! ಕೂಡಲಸಂಗಮದೇವಾ!"[೯]

ಪ್ರೊ. ಬಿ.ಸಿ. ಜವಳಿಯವರು ತಮ್ಮ **"ಲಿಂಗಾಯತ ಧರ್ಮ ಸ್ಥಾಪಕನಾರು?"** ಎಂಬ ಗ್ರಂಥದ ಅಧ್ಯಾಯವೊಂದರಲ್ಲಿ ಬಸವಾದಿ ಪ್ರಮಥರ ವಚನಗಳಲ್ಲಿ ಸಂಸ್ಕೃತ ಶ್ಲೋಕಗಳ ಉಲ್ಲೇಖಕ್ಕೆ ಅನೇಕ ಕಾರಣಗಳನ್ನು ಸೂಚಿಸಿದ್ದು,[೧೦] ಮೊದಲೇ ಹೇಳಿದಂತೆ ತಮ್ಮ ತತ್ತ್ವಗಳಿಗೆ ಅವರು ಆಗಮ ಪ್ರಮಾಣವನ್ನು ತೋರಿಸಲು ಸಂಸ್ಕೃತ ಶ್ಲೋಕಗಳನ್ನು ಉದಾಹರಿಸಿದ್ದಾರೆಂದು ಒಪ್ಪಿಕೊಂಡು, ಕೆಲ ಶ್ಲೋಕಗಳ ಸಾಂದರ್ಭಿಕ ಔಚಿತ್ಯವನ್ನು ಈಗ ಪರಿಶೀಲಿಸೋಣ.

೧. "ಓಂ ನಮಃ ಶಿವಾಯ"-ಎಂಬ ಷಡಕ್ಷರ ಮಂತ್ರವನ್ನು ಬಸವಣ್ಣನವರು ತಮ್ಮ ವಚನಗಳಲ್ಲಿ ಅನೇಕ ಸಲ ಉಪಯೋಗಿಸಿದ್ದು, ಅದು ಆಯಾ ಸಂದರ್ಭಕ್ಕೆ

---

೮ ಚಂದ್ರಶೇಖರ ಶಾಸ್ತ್ರಿಗಳು ಮಂಗಾಪೂರಮಠ, ಶಿವಾಗಮಗಳೇ ವೀರಶೈವ ಮತದ ಮೂಲಾಧಾರ ಗ್ರಂಥಗಳು ೧೯೭೩, ಪು. iii

೯ ಬಸವಣ್ಣನವರ ವಚನಗಳು, ವಚನ ಸಂಖ್ಯೆ ೭೦೯

೧೦ ವಚನಸಾಹಿತ್ಯ ಹಾಗೂ ಸಂಸ್ಕೃತ ಭಾಷೆ, ಪುಟ ೧೧೩

ಅನುಗುಣವಾಗಿಯೂ, ಅವಿಭಾಜ್ಯವಾಗಿಯೂ ಬಂದಿರುವದನ್ನು ಕಾಣುತ್ತೇವೆ. ಉದಾಹರಣೆಗೆ.

ಎನ್ನ ಮನದಲ್ಲಿ ಮತ್ತೊಂದರಿಯನಯ್ಯಾ
ಓಂ ನಮಃ ಶಿವಾಯ, ಓಂ ನಮಃ ಶಿವಾಯ ಎನುತಿರ್ದೆನಯ್ಯ
ಎನಗಿದೆ ಮಂತ್ರ, ಎನಗಿದೆ ಜಪ
ಕೂಡಲಸಂಗಮದೇವ, ನೀನೇಬಲ್ಲೆ, ಎಲೆ ಲಿಂಗವೇ.೧೧

ಸಂಸ್ಕೃತದಲ್ಲಿಯ ಈ ಮಂತ್ರರಾಜ ಬಸವಣ್ಣನವರ ಈ ವಚನದಲ್ಲಿ ಅವಿನಾಭಾವ ಸಂಬಂಧ ದಿಂದ ಬಂದಿರುವುದನ್ನು ಕಾಣುತ್ತೇವೆ. ಈ ಮಂತ್ರವನ್ನು ತೆಗೆದು ಹಾಕಿದರೆ, ವಚನ ಅಪೂರ್ಣವಾಗುವದಿಲ್ಲವೇ? ಪ್ರತಿ ಮಂತ್ರಕ್ಕೂ ತನ್ನದೇ ಆದ ಪ್ರಭಾವವಿದ್ದು, ಅದರ ಅನುವಾದವನ್ನು ಮಾಡಿ ಉಚ್ಚರಿಸಿದರೆ ಫಲ ದೊರೆಯಲಾರದೆಂದು ಮಂತ್ರಶಾಸ್ತ್ರಜ್ಞರ ಖಚಿತವಾದ ಅಭಿಪ್ರಾಯ. 'ನಮಃ ಶಿವಾಯ' ಎಂಬುದನ್ನೇನೋ ಕನ್ನಡದಲ್ಲಿ ಶಿವನಿಗೆ ನಮಸ್ಕಾರವು ಎಂದು ಅನುವಾದಿಸಬಹುದಾದರೂ ಓಂ (ಪ್ರಣವ) ಅನ್ನು ಅನುವಾದಿ ಸುವದಾದರೂ ಹೇಗೆ?

೨. ಅದ್ವೈತ ವೇದಾಂತದ ಅತಿಜನಪ್ರಿಯವೂ, ಮಹತ್ವಪೂರ್ಣವೂ ಆದ ತತ್ತ್ವ "ತತ್ತ್ವಮಸಿ" ಎಂಬುದು. ಸಾಕ್ಷರರಾದ ಯಾರಾದರೂ ಅದರ ವಾಚ್ಯಾರ್ಥವನ್ನು ಅರಿಯಬಲ್ಲರು. ಬಸವಣ್ಣನವರು ಈ ತತ್ತ್ವವನ್ನು ತಮ್ಮ ಒಂದು ವಚನದಲ್ಲಿ ಅತಿ ಸುಂದರವಾಗಿ ಬಳಸಿಕೊಂಡಿರುವುದನ್ನು ಕಾಣುತ್ತೇವೆ. ವೇದಾಂತವನ್ನರಿತೂ ಆಚರಣೆ ಯಿಲ್ಲದವರನ್ನು ಕಂಡು ಕನಿಕರಿಸಿ ಹೀಗೆ ನುಡಿಯುತ್ತಾರೆ—

ಸುಪಾಠ ಮಂತ್ರದುಪದೇಶವ ಕಲಿತು ಯುಕ್ತಿಗೆಟ್ಟು ನಡೆದಿರಯ್ಯ
'ತತ್ತ್ವಮಸಿ' ಎಂಬುದನರಿದು ಕತ್ತಲೆದೂಡುವಿರಯ್ಯ
ವೇದ ವಿಪ್ರರ ವಿಚಾರಿಸಿ ನೋಡಲು
ಉಪದೇಶ ಪರೀಕ್ಷೆ ನಾಯಕ ನರಕ ಎಂದುದು
ಕೂಡಲ ಸಂಗನ ವಚನ ಸೂಚನೆ!೧೨

ತತ್ತ್ವಮಸಿ ಎಂಬುದರ ಅರ್ಥವನ್ನರಿತೂ ಅದರಂತೆ ನಡೆಯದ ಅವಿವೇಕಿಗಳನ್ನು ಕಂಡು ಶಿವಶರಣರು ಕನಿಕರಿಸಿ ಈ ರೀತಿ ಉದ್ಗರಿಸಿದರೆ, ಅದರ ವಾಚ್ಯಾರ್ಥವನ್ನು ಅರಿಯಲು ಅಸಮರ್ಥನಾಗಿ ಭೋಜನ ಪ್ರಿಯನಾದ ಶಿವಯೋಗಿಯ ವಿಡಂಬನೆಯನ್ನು ಸರ್ವಜ್ಞನ ಒಂದು ವಚನದಲ್ಲಿ ಕಾಣಬಹುದು.

---

೧೧ ಬಸವಣ್ಣನವರ ವಚನಗಳು ಸಂಖ್ಯೆ ೮೦

೧೨ ಬಸವಣ್ಣನವರ ವಚನಗಳು ಸಂಖ್ಯೆ ೯೧

“ ‘ತತ್ತ್ವಮಸಿ’ ಎಂಬುದರ ಅರ್ಥವನು ತಿಳಿಯದಲೆ
‘ತುತ್ತುಸವಿ’ ಎಂದು ಉಣಗಲಿತ ಯೋಗಿಗೆ
ಮುಕ್ತಿ ಎತ್ತಣದು ಸರ್ವಜ್ಞ!”

ಮೊದಲು ಮುಕ್ತಿದಾಯಕ ವಿದ್ಯೆಯಲ್ಲಿ ಅದ್ವಿತೀಯರಾಗಿ ಬಹುಜನಪ್ರಿಯರಾಗಿದ್ದ ವಿಪ್ರರು ಕಾಲಕ್ರಮೇಣ ಅವನತಿ ಹೊಂದಿ ಭೋಜನಪ್ರಿಯರಾದ ಸಂಗತಿಯನ್ನಿಲ್ಲಿ ಉಲ್ಲೇಖಿಸಿದರೆ ಅಪ್ರಸ್ತುತವಾಗಲಾರದು.

೩. ಜನರಲ್ಲಿ ಮಾನ್ಯರಾಗದೆ, ಜಗದುಪಕಾರಿಯಾಗದೆ, ನೂರುವರ್ಷಗಳ ಪೂರ್ಣ ಜೀವನ ಬದುಕುವದರಿಂದ ಪ್ರಯೋಜನವೇನು? ಸಕಲರಿಗೆ ಲೇಸನೇ ಬಯಸುತ್ತ ಒಂದು ದಿನ ಬದುಕಿದರೂ ಶರಣರಿಗೆ ಅತಿಪ್ರಿಯವಾದ ಸಂಗತಿಯೆಂಬುದು ಅವರ ವಾಣಿಗಳಲ್ಲಿ ಸೂಚ್ಯವಾಗಿ ಬಂದಿವೆ. ಈ ಮಾತನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ ವಾಚ್ಯವಾಗಿಯೂ ಆಡಿದ್ದಾರೆ.

ಲೇಲೆನಿಸಿಕೊಂಡು ಅಯ್ದುದಿನ ಬದುಕಿದರೇನು?
ಕೂಡಲ ಸಂಗನ ಶರಣರ ವಚನದಲ್ಲಿ
ಲೇಸೆನಿಸಿಕೊಂಡು ಒಂದು ದಿನ ಬದುಕಿದಡೇನು?[೧೩]

ತಮ್ಮೀ ನಿಲವನ್ನು ಪ್ರಮಾಣೀಕರಿಸಲು ಅವರೊಂದು ಸಂಸ್ಕೃತ ಸುಭಾಷಿತವನ್ನು ಉಲ್ಲೇಖಿಸುತ್ತಾರೆ—

“ಜೀವಿತಂ ಶಿವಭಕ್ತಾನಾಂ ವರಂ ಪಂಚ ದಿವಾನಿ|
ನಾಜಕಲ್ಪ ಸಹಸ್ರೇಭ್ಯೋ ಭಕ್ತಿಹೀನಸ್ಯ ಶಂಕರಿ||”[೧೪]

ಈ ಶ್ಲೋಕವನ್ನು ಉದಾಹರಿಸಿ, “ಎಂಬುದಾಗಿ” ಎಂದು ಸಮೂದಿಸಿ, ತಾವದನ್ನು ‘quote’ ಮಾಡಿರುವದಾಗಿ ಪ್ರಾಂಜಲವಾಗಿ ಒಪ್ಪುತ್ತಾರೆಯಾದ್ದರಿಂದ ಈ ಶ್ಲೋಕವು ವಚನದ ಅವಿಭಾಜ್ಯ ಅಂಗವಾಗಿ ಬಂದಿವೆಯೆಂದು ತಿಳಿಯಬೇಕಲ್ಲದೆ ಅದನ್ನು ವರ್ಜಿಸಿ, ಈ ವಚನವನ್ನು ಪ್ರಕಟಿಸಬೇಕೆಂದು ಆಗ್ರಹಿಸುವ ಬುದ್ಧಿಗೆ ಏನೆನ್ನಬೇಕು?

ಇದೇ ಶ್ಲೋಕವನ್ನು ತಮ್ಮ ಇನ್ನೊಂದು ವಚನದಲ್ಲಿಯೂ[೧೫] ಸಾರ್ಥಕವಾಗಿ

---

೧೩ ಅದೇ ವಚನ ೧೫೪

೧೪ ಇನ್ನೂ ಕೆಲ ಶ್ಲೋಕಗಳಂತೆ–ಈ ಶ್ಲೋಕದ ಪರಿಷ್ಕರಣ ನನ್ನದೇ. ನೋಡಿ– “ಬಸವಣ್ಣನವರ ವಚನಗಳಲ್ಲಿ ಉದಾಹೃತ ಸಂಸ್ಕೃತ ಶ್ಲೋಕಗಳು. ಒಂದು ವಿವೇಚನೆ”, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ ೭೨ ಸಂಚಿಕೆ ೭, ಪುಟಗಳು ೧–೧೦

೧೫ ಬಸವಣ್ಣನವರ ವಚನಗಳು ವಚನ–೯೭೮

ಬಳಸಿಕೊಂಡಿರುವುದನ್ನು ಕಾಣುತ್ತೇವೆ. ಅಲ್ಲಿ ಹಾವು, ಕಾಗೆ, ಗೂಬೆಗಳು ಅನಂತ ಕಾಲ ಬದುಕುತ್ತಿದ್ದು, ಅವುಗಳಂತೆ ಬದುಕುವ ಮನುಷ್ಯರನ್ನು ಕಂಡು ಬಸವಣ್ಣನವರು ಕನಿಕರಿಸುತ್ತಾರೆ. ಲೇಸೆನಿಸಿಕೊಂಡು ಕೆಲವೇ ದಿನ ಬದುಕಿದರೂ ಮಾನವ ಜೀವನ ಸಾರ್ಥಕವೆಂಬುದು ಇತರ ವಿಚಾರವಾದಿಗಳಂತೆ ಬಸವಣ್ಣನವರು ಒಪ್ಪುತ್ತಾರೆ. ಈ ಶ್ಲೋಕದ ಮರ್ಮವನ್ನೇ ಅವರು ವಚನದ ಕೊನೆಯ ಎರಡು ಸಾಲುಗಳಲ್ಲಿ ಕಾಣಬಹುದು—

"ನಮ್ಮ ಕೂಡಲ ಸಂಗಮದೇವರ ಭಕ್ತಿವಿಡಿದು
ಐದು ದಿವಸವಾದರೂ ಬದುಕಿದಡೆ ಸಾಲದೇ?"

ಇಲ್ಲಿಯೂ ಸಹ 'ಎಂಬುದಾಗಿ' ಎಂಬ ಉಲ್ಲೇಖವಿದೆ.

೪. 'ಶಿವಯೋಗಿನಿ ಸಂತೃಪ್ತೇ ತೃಪ್ತೋ ಭವತಿ ಶಂಕರಃ' ಎಂಬ ಸಿದ್ಧಾಂತ ಶಿಖಾಮಣಿಯ ಉಕ್ತಿಯಂತೆ ಜಂಗಮ ತುಷ್ಟಿಯೇ ಲಿಂಗತುಷ್ಟಿಯೆಂಬುದು ಅನುಭಾವಿಗಳ ಒಮ್ಮತದ ಅಭಿಪ್ರಾಯ. ಈ ಮಾತನ್ನೇ ಬಸವಣ್ಣನವರು ಬಹು ಮಾರ್ಮಿಕವಾಗಿ ಹೇಳಿದ್ದಾರೆ—

ಇದು ಕಾರಣ ಸಂಗಮದೇವರಲ್ಲಿ
ಜಂಗಮ ವಾಪ್ಯಾಯನವಾದಡೆ ಲಿಂಗಸಂತುಷ್ಟಿ![೧೬]

ಈ ಮಾತಿಗೆ ನಿದರ್ಶನವಾಗಿ, "ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ" ಎಂದು ಮುಂತಾಗಿ ನುಡಿಯುತ್ತಾ, ಪ್ರಮಾಣಕ್ಕಾಗಿ ಸಂಸ್ಕೃತ ಸುಭಾಷಿತವೊಂದನ್ನು ವಚನ ಮಧ್ಯದಲ್ಲಿ ಸಮುಚಿತವಾಗಿ ಉಲ್ಲೇಖಿಸುತ್ತಾರೆ—

ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯ ಚ ಜಂಗಮಃ |
ಅಹಂತುಷ್ಟೋಽಸ್ಮ್ಯಮಾದೇವಿ! ಉಭಯೋರ್ಲಿಂಗಜಂಗಮಾತ್||

೫. ಕೀರ್ತಿಗಾಗಿ ಹಂಬಲಿಸಿ, ಅಂದರೆ ನಿಜವಾದ ಶಿವಭಕ್ತಿಯಿಲ್ಲದೆ ಶಿವಶರಣರಿಗಲ್ಲದೆ ಬೇರೆಯವರಿಗೆ ಕೊಟ್ಟದಾನ ವ್ಯರ್ಥವೆಂಬುದು ಶಿವಶರಣರ ಖಚಿತವಾದ ಅಭಿಪ್ರಾಯ ಇದನ್ನೇ ಬಸವಣ್ಣನವರು ತಮ್ಮ ಒಂದು ವಚನದಲ್ಲಿ[೧೭] ಸ್ಫುಟವಾಗಿ ನುಡಿದಿದ್ದಾರೆ. "ಬಲಿ ಚಕ್ರವರ್ತಿಯ ಭೂಮಿ, ಕರ್ಣನ ಕವಚ, ದಧೀಚಿಯ ಅಸ್ಥಿ ಮತ್ತು ಶಿಬಿಯ ಮಾಂಸ ಇವೆಲ್ಲ ವ್ಯರ್ಥವಾದುದನ್ನು ಉಲ್ಲೇಖಿಸಿ, ಆ ಉದಾಹರಣೆಗಳಿಂದ ಸಿದ್ಧವಾಗುವ ನೀತಿಯನ್ನು ಸಂಸ್ಕೃತ ಶ್ಲೋಕವೊಂದರ ಮೂಲಕ ವ್ಯಕ್ತಮಾಡುತ್ತಾರೆ–

ಶಿವ ಭಕ್ತಿಮತಿಕ್ರಮ್ಯ ಯದ್ದಾನಂ ಚ ವಿಧೀಯತೇ|
ನಿಷ್ಫಲಂ ತು ಭವೇದ್ ದಾನಂ ರೌರವಂ ನರಕಂ ವ್ರಜೇತ್||

ಈ ಶ್ಲೋಕದ ಹೃದಯವನ್ನೇ ಬಸವಣ್ಣನವರ ವಚನದ ಅಂತಿಮ ಚರಣಗಳಲ್ಲಿ ಕಾಣಬಹುದು.

---

೧೬ ಅದೇ ವಚನ ೧೯೮

೧೭ ಅದೇ ವಚನ ೨೨೪

ಇಂತೆಂದುದಾಗಿ ಕೂಡಲ ಸಂಗನ ಶರಣರರಿಯುದೆ
ಕೀರ್ತಿವಾರ್ತೆಗೆ ಮಾಡಿದಾತನ ಧನವು ವೃಥಾ ಹೋಯಿತಲ್ಲಾ!

೬. ಸಂಸಾರದಲ್ಲಿ ಹುಟ್ಟಿದ ಮೇಲೆ ಪ್ರತಿಯೊಬ್ಬನೂ ನಗುನಗುತ್ತಾ ಬದುಕ ಬೇಕಾದುದು ನ್ಯಾಯ ಸಮ್ಮತ. ಅದೇ ರೀತಿ ಮನಸ್ಸಿನಲ್ಲಿ ಯಾವುದೇ ಕುಹಕವಿಲ್ಲದಿದ್ದರೆ ಶಿವಶರಣರ ಜೊತೆ ಹಾಸ್ಯಮಾಡಬಹುದು, ಮನದೆರೆದು ಮಾತಾಡಬಹುದು.

"ನಗುವುದು, ನುಡಿವುದು ಭಕ್ತರೊಡನೆ
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?"

ಈ ಮಾತಿಗೆ ಪ್ರಮಾಣವಾಗಿ ಒಂದು ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸುತ್ತಾರೆ–

ಅಭ್ಯಾಸೇನ ವಿಹೀನಸ್ಯ ತಸ್ಯ ಜನ್ಮ ನಿರರ್ಥಕಂ
ಗುರುಣಾಪಿ ಸಮಂ ಹಾಸ್ಯಂ ಕರ್ತವ್ಯಂ ಕುಟಿಲಂ ವಿನಾ||

ಈ ಶ್ಲೋಕವನ್ನು ಉಲ್ಲೇಖಿಸಿದ ಮೇಲೆ ಬಸವಣ್ಣನವರು ಈ ರೀತಿ ನಿರ್ಣಯ ಕೊಡುತ್ತಾರೆ—

ಇಂತೆಂದುದಾಗಿ ನಮ್ಮ ಕೂಡಲ ಸಂಗನ ಶರಣರೊಡನೆ
ಮನದೆರೆದು ಮಾತನಾಡುವದಯ್ಯಾ![೧೮]

೭. ಜಂಗಮ ಮುಖೇನ ಶಿವನು ನೈವೇದ್ಯವನ್ನು ಸ್ವೀಕರಿಸುತ್ತಾನೆಂದು ಈ ಹಿಂದೆಯೇ ನೋಡಿದ್ದೇವೆ ಇದೇ ಅಭಿಪ್ರಾಯದ ಮಾತನ್ನು ಅವರ ಇನ್ನೊಂದು ವಚನ ದಲ್ಲಿಯೂ ಕಾಣುತ್ತೇವೆ.

ಲಿಂಗದಲ್ಲಿ ದಿಟವನರಸುವಡೆ
ಜಂಗಮವ ನೆರೆ ನಂಬುವುದು.[೧೯]

ಇದಕ್ಕೆ ಪೂರಕವಾಗಿಯೂ, ಆಧಾರವಾಗಿಯೂ, ತಮ್ಮ ವಚನದಲ್ಲಿ ಒಂದು ಶ್ಲೋಕಾಂಶ ವನ್ನು ಹಾಸುಹೊಕ್ಕಾಗಿ ಉದಾಹರಿಸಿದ್ದಾರೆ. ಆ ಸಂಸ್ಕೃತ ಭಾಗವನ್ನು ವಚನದಿಂದ ಬೇರ್ಪಡಿಸುವುದು 'ಅಸಂಭವ ಅಸಂಗತ'ವೆಂಬುದು ಸ್ವಯಂವೇದ್ಯ.

'ಯತ್ರ ಮಾಹೇಶ್ವರ ಸ್ತತ್ರ' ಸನ್ನಿಹಿತನಾಗಿ, ಈ ಶ್ಲೋಕದ ಪೂರ್ಣ ಪಾಠ ವನ್ನು ಮತ್ತೊಮ್ಮೆ ಪರಿಶೀಲಿಸೋಣ ಬಸವಣ್ಣನವರ ಮುಕ್ತಿಸಂಗತವೂ, ಅನುಭವ ವೇದ್ಯವೂ ಆದ ನಿರ್ಣಯ ಈ ರೀತಿ ಇದೆ,

ಉಂಬ ಉಡುವ ಕೂಡಲ ಸಂಗಮದೇವ ಜಂಗಮಮುಖದಲಿ!

೮. ಶಿವಶರಣರ ಪಾದೋದಕ ಪ್ರಸಾದ ಸೇವಿಸಿದರೆ ಮಹಾಪಾತಕ ಪರಿಹಾರ ವಾಗುವವೆಂಬ ಸಂಗತಿ ಪ್ರಸಾದ ಮಹಿಮಾ ವರ್ಣನ ಪ್ರಸಂಗದಲ್ಲಿ ಬರುತ್ತದೆ. ಇದನ್ನು ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ವಿವರಿಸುತ್ತಾರೆ—

---

೧೮ ಅದೇ ವಚನ ೨೮೨
೧೯ ಅದೇ ವಚನ ೪೨೭

'ಪಾತಕ, ಮಹಾಪಾತಕ ಮಾಡಿದವರು
ಸದ್ಭಕ್ತರ ಮನೆಗೆ ಹೋಗಿ
ಅವರೊಕ್ಕ ಪ್ರಸಾದವನಾಯ್ದು ಕೊಂಡುಂಡಡೆ
ಸಕಲ ಬ್ರಹ್ಮಹತ್ಯಾದಿ ಪಾತಕ ಪರಿಹಾರ'

ಈ ಮಾತನ್ನು ದೃಢೀಕರಿಸಲು ಒಂದು ಪ್ರಮಾಣ ಶ್ಲೋಕವನ್ನು ಉದಾಹರಿಸುತ್ತಾರೆ—

ಪಾತಕೇ ಸಮನುಪ್ರಾಪ್ತೇ ಶಿವಭಕ್ತ ಗೃಹಂ ವ್ರಜೇತ್।
ಯಾಚಯೇಂದನ್ನಮಮೃತಂ ತಂದ ಲಾಭೇಜಲಂ ಪಿಬೇತ್॥

ಇಂಥ ಮಹಿಮಾತಿಶಯವುಳ್ಳ ಶರಣರಿಗೆ ನಮೋ ನಮಃ ಎನ್ನದಿರಲು ಸಾಧ್ಯವೇ?

೯. ಲಿಂಗಪೂಜೆಯಿಲ್ಲದೆ ಪ್ರಸಾದ ಸ್ವೀಕಾರ ತ್ಯಾಜ್ಯ ಪ್ರಾಣಪರಿತ್ಯಾಗ ಶಿರಶ್ಛೇದನ ದಂಥ ಕಠಿಣವಾದ ಪ್ರಾಯಶ್ಚಿತ್ತಗಳನ್ನು ಮಾಡಿಕೊಂಡ ಶಿವಭಕ್ತರೂ ಉಂಟು. ಎರಡೇ ಸಾಲುಳ್ಳ ತಮ್ಮ ಚಿಕ್ಕವಚನಕ್ಕೆ ಆಧಾರವಾಗಿ ಎರಡೇ ಚರಣಗಳುಳ್ಳ ಸಂಸ್ಕೃತ ಶ್ಲೋಕ ವೊಂದನ್ನು ಉದಾಹರಿಸುತ್ತಾರೆ ವಚನದ ಪೂರ್ಣಪಾಠ ಇಂತಿದೆ.

ವರಂ ಪ್ರಾಣ ಪರಿತ್ಯಾಗ ಶ್ಛೇದನಂ ಶಿರಸೋಪಿ ವಾ।
ನತ್ವನಭ್ಯರ್ಚ್ಯ ಭುಂಜೀಯಾತ್ ಭಗವಂತಂ ತ್ರಿಲೋಚನಂ॥
ಎಂಬುದಾಗಿ ದೇಹಧರ್ಮ ತನ್ನ ಆದಂತೆ ಆಗಲಿ
ಕೂಡಲಸಂಗನ ಪೂಜಿಸಿದಲ್ಲದೆ ನಿಲಲಾರೆನು.[೨೦]

೧೦. ಭಗವಂತನ ವಿರಾಡ್ರೂಪ ಕಲ್ಪನೆ ಮೊದಲು ಪುರುಷ ಸೂಕ್ತದಲ್ಲಿ ಕಂಡು ಬರುತ್ತದೆ. ನಂತರ ಭಗವದ್ಗೀತೆಯ ವಿಶ್ವರೂಪ ದರ್ಶನ ಪ್ರಸಂಗದಲ್ಲಿ ಬರುತ್ತವೆ ಅಂತಹ ಭಗವಂತ ತಾಂಡವ ನರ್ತನಗೈಯ್ಯುವಾಗ ಇಡೀ ವಿಶ್ವವೇ ಅಲ್ಲೋಲ ಕಲ್ಲೋಲಗೊಂಡ ಹೃದಯ ವಿದ್ರಾವಕ ಘಟನೆಯನ್ನು ಶಿವಮಹಿಮ್ನಃ ಸ್ತೋತ್ರದ ಒಂದು ಪದ್ಯವು ಬಹು ಚೆನ್ನಾಗಿ ವಿವರಿಸುತ್ತದೆ. ಆ ಪದ್ಯವನ್ನು ಉದಾಹರಿಸಿ ಬಸವಣ್ಣನವರು ತಮ್ಮ ವಚನದಲ್ಲಿ ಅದಕ್ಕೆ ಕನ್ನಡ ಟೀಕೆಯನ್ನು ಬರೆದಂತಿದೆ—

ಮಹೀ ಪಾದಾಘಾತಾದ್ ವ್ರಜತಿ ಸಹಸಾ ಸಂಶಯಪದಂ
ಪದಂ ವಿಷ್ಣೋರ್ಭ್ರಾಮ್ಯದ್ ಭುಜಪರಿ ಘರುಗ್ಣ ಗ್ರಹಗಣಂ
ಮುಹುರ್ದ್ಯೌರ್ದ್ಯೌಸ್ಥ್ಯಂ ಯಾತ್ಯನಿಭೃತ ಜಟಾತಾಡಿತ ತಟಾ
ಜಗದ್ರಕ್ಷಾಯೈ ತ್ವಂ ನಟಸಿ ನನುವಾಮ್ಯೈವ ವಿಭುತಾ॥[೨೧]

ಈ ಸಂಸ್ಕೃತ ಪದ್ಯದ ಅನುವಾದ ಬಸವಣ್ಣನವರಿಂದ ಎಷ್ಟು ಸೊಗಸಾಗಿ ಬಂದಿವೆ!

---

೨೦ ಅದೇ ವಚನ ೪೯೪

೨೧ ಪುಷ್ಪದಂತ ಶಿವಮಹಿಮ್ನಃ ಸ್ತೋತ್ರ, ಪದ್ಯ ೧೬

ಅದರಿತು ಪಾದಾಘಾತದಿಂದ ಧರೆ
ಬಿದಿರಿದವು ಮುಕುಟ ತಾಗಿತಾರಕೆಗಳು
ಉದುರಿದವು ತೈತಾಗಿ ಲೋಕಗಳೆಲ್ಲವು
ನಮ್ಮ ಕೂಡಲಸಂಗಮದೇವ ನಿಂತು ನಾಟ್ಯವಾಡೆ![೨೧]

ಈ ವಚನದ ಕೊನೆಯ ಸಾಲು ಮಹಿಮ್ನಃ ಸ್ತೋತ್ರದ ಈ ಪದ್ಯದ ಸಂದರ್ಭವನ್ನು ಸೂಚಿಸುವುದಿಲ್ಲವೇ? ಈ ವಿಷಯವಾಗಿ ಡಾ.ಕೆ. ಕೃಷ್ಣಮೂರ್ತಿಯವರ ಅಭಿಪ್ರಾಯವಿದು.

"ಇಂತಹ ಸ್ತೋತ್ರ ಸಾಹಿತ್ಯ ಬಸವಣ್ಣನವರಿಗೆ ಸುಪರಿಚಿತವಿದ್ದಿರಬಹುದೆನ್ನಲು ಇದಕ್ಕೂ ಹೆಚ್ಚಿನ ಸಾಕ್ಷಿಯೆಂದರೆ ಅವರು ಉದಾಹರಿಸಿರುವ ಶಿವ ತಾಂಡವಲೀಲಾ ವೈಭವದ ವರ್ಣನಾ ಸ್ತೋತ್ರ."[೨೨]

೧೧. ವರ್ಣಾಶ್ರಮ ಪದ್ಧತಿಯನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿರುವ ಸನಾತನಿಗಳ ಜಾತಿ ಪರ್ಯಾಯ ಚಾತುರ್ವರ್ಣ್ಯದಲ್ಲಿ ಬ್ರಾಹ್ಮಣನಿಗೆ ಗುರುಪಟ್ಟ ಕಟ್ಟುತ್ತಿದ್ದು, ಆ ಜಾತಿ ವ್ಯವಸ್ಥೆಯನ್ನೇ ಪ್ರಶ್ನಿಸಿ, ಅದರ ವಿರುದ್ಧ ಸಮರಸಾರಿದ ಶಿವಶರಣರು, ಶಿವಭಕ್ತನೇ ಕುಲಜನೆಂದೂ ಅವನಲ್ಲಿ ಜಾತಿಭೇದಸಲ್ಲದೆಂದೂ ವಿಚಾರದಲ್ಲಿ ಮಾತ್ರವಲ್ಲ ಆಚಾರ ದಲ್ಲಿಯೂ ತೋರಿಸಿದ ಘಟನೆ ಅದ್ಭುತರಮ್ಯವೆಂದು ಪ್ರತಿಯೊಬ್ಬ ವಿಚಾರವಾದಿಯೂ ಮುಕ್ತಕಂಠದಿಂದ ಪ್ರಶಂಸಿದ್ದಾನೆ. ಬಸವಣ್ಣನವರು ತಮ್ಮ ವಚನದಲ್ಲಿ ಜಾತಿಭೇದ ಬುದ್ಧಿಯನ್ನು ಖಂಡಿಸಿ, ಶಿವಭಕ್ತನೇ ಕುಲಜನೆಂದು ಸಾರಿದ್ದಾರೆ.

ನೀವು ಹಿರಿಯರೆಂದು ಕರ್ಮಿಗಳು ನೀವು ಕೇಳಿರೆ,
ವರ್ಣಾನಾಂ, ಬ್ರಾಹ್ಮಣೋ ಗುರುಃ ಎಂಬುದು ಹುಸಿ,
ಆದರೆ ವರ್ಣಾನಾಂ ಗುರುಃ ನಮ್ಮ ಕೂಡಲಸಂಗನ ಶರಣರು![೨೪]

ಇಲ್ಲಿ ಉಲ್ಲೇಖಿಸಲ್ಪಟ್ಟ 'ವರ್ಣಾನಾಂ ಬ್ರಾಹ್ಮಣೋ ಗುರುಃ' ಎಂಬ ಸಂಸ್ಕೃತ ಶ್ಲೋಕಾಂಶ ವನ್ನು ಕೈಬಿಟ್ಟು ವಚನವನ್ನು ಅರ್ಥೈಸುವುದು ಸಾಧ್ಯವೇ?

೧೨. ಮೇಲಿನ ವಿಚಾರಧಾರೆಯನ್ನೇ ಮುಂದುವರಿಸುತ್ತ, ಬಸವಣ್ಣನವರು ಭಿನ್ನ ಭಿನ್ನ ಜಾತಿಯಲ್ಲಿ ಹುಟ್ಟಿದ ಜನರು ಶಿವಭಕ್ತರಾಗಿ ಕುಲಜರಾದುದನ್ನೂ ಲಿಂಗಪೂಜಾ ಹೀನರಾದ ಬ್ರಾಹ್ಮಣರು ಶ್ವಪಚರಾದುದನ್ನೂ ಸುಂದರವಾಗಿ ವರ್ಣಿಸಿದ್ದಾರೆ–

ದೇವಾ ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು.[೨೫]
ಇದಕ್ಕೊಂದು ಪ್ರಮಾಣ ಶ್ಲೋಕವನ್ನು ಉದಾಹರಿಸುತ್ತಾರೆ.

---

೨೨ ಡಾ. ಕೆ. ಕೃಷ್ಣಮೂರ್ತಿ, ಬಸವಣ್ಣನವರ ವಚನಗಳ ಮೀಮಾಂಸೆ, ಕ.ವಿ ವಿ. ೧೯೮೪ ಪು. ೧೧

೨೩ ಬಸವಣ್ಣನವರ ವಚನಗಳು; ವಚನ ೫೯೯

೨೪ ಅದೇ ವಚನ ೬೦೪

೨೫ ಅದೇ ವಚನ ೬೦೪

ಶ್ವಪಚೋsಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇರತಃ।
ಲಿಂಗಾರ್ಚನ ವಿಹೀನೋಪಿ ಬ್ರಾಹ್ಮಣ ಶ್ವಪಚಾಧಮಃ॥

ಹುಟ್ಟಿನಿಂದ ಯಾವುದೇ ಜಾತಿಯಿದ್ದರೂ, ಅಜಾತ (ಗುರುಕರಜಾತ)ನಾದ ಮೇಲೆ ಅವನಿಗೆ ಶರಣೆನ್ನದವನೇ ಶ್ವಪಚನು ಎಂದು ಯುಕ್ತಿಸಂಗತವಾಗಿ ವಿವರಿಸುತ್ತಾರೆ-

ಜಾತಿ ವಿಜಾತಿಯಾದರೇನು? ಅಜಾತಂಗೆ ಶರಣೆನ್ನದವನು?
ಆತನೇ ಹೊಲೆಯ, ಕೂಡಲಸಂಗಮದೇವಾ!

೧೩. ನಮ್ಮ ಹುಟ್ಟು ಬವಣೆ ಮುಂತಾದವುಗಳಿಗೆ ನಮ್ಮ ಹಿಂದಿನ ಜನ್ಮದ ಕರ್ಮಗಳೇ ಕಾರಣವೆಂದು(ಕರ್ಮವಾದ) ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗುತ್ತಿದ್ದು, ಆ ತತ್ತ್ವದ ವೈಜ್ಞಾನಿಕತೆಯಿಂದು ಸ್ಥಿರ ಪಡುವಂತೆ ತೋರುತ್ತದೆ. ನಮ್ಮ ದಾರ್ಶನಿಕರಂತೂ ಕರ್ಮವಾದದ ಸತ್ಯವನ್ನು ನಂಬಿದವರೇ ಆ ಪ್ರಕಾರ, 'ಅವಶ್ಯಮನು ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ' ಎಂಬಂತೆ ನಾವು ಮಾಡಿದ ಕರ್ಮಕ್ಕೆ ನಾವೇ ಹೊಣೆ. ಅದರ ಫಲ ಭೋಗಿಸಬೇಕು. ಇದೇ ಅಭಿಪ್ರಾಯವನ್ನು ತಮ್ಮ ಒಂದು ವಚನದಲ್ಲಿ ಹೀಗೆ ವಿವರಿಸುತ್ತಾರೆ.–

ಹುಟ್ಟಿದ ಬಳಿಕ ಭೋಗಂಗಳ ತಪ್ಪಿಸಿಹೆನೆಂದಡೆ
ತಪ್ಪದು ನೋಡಯ್ಯ! ೨೬

ಇದಕ್ಕೆ ಶ್ರುತಿ ಪ್ರಮಾಣವನ್ನು ಹೀಗೆ ಉಲ್ಲೇಖಿಸುತ್ತಾರೆ–

ನಾ ಭುಕ್ತಂ ಕ್ಷೀಯತೇ ಕರ್ಮ.

೧೪. ಲಿಂಗಧಾರಿಯಲ್ಲದವನು ಚತುರ್ವೇದಿಯಾದರೂ ಶ್ವಪಚನೆಂದು ಶರಣರು ದೃಢವಾಗಿ ನಂಬಿದ್ದು, ಬಸವಣ್ಣನವರು ಅದಕ್ಕೊಂದು ಪ್ರಮಾಣವನ್ನು ತಮ್ಮ ವಚನದಲ್ಲಿ೨೭ ಕೊಡುತ್ತಾರೆ–

ನಮೇ ಪ್ರಿಯಶ್ಚತುರ್ವೇದೀಮದ್ಭಕ್ತಃ ಶ್ವಪಚೋಪಿವಾ।
ತಸ್ಮೈದೇಯಂ ತತೋಗ್ರಾಹ್ಯಂ ಸಚಪೂಜ್ಯೋಯಥಾಹ್ಯಹಂ॥

೧೫. ಲಿಂಗಧಾರಿಗಳು ವಾಸಿಸುವ ಮನೆಯೇ ಕೈಲಾಸ. ಅಂದರೆ ಶಿವಶರಣನು ಹೊಲಗೇರಿಯಲ್ಲಿದ್ದರೂ ಅದುವೇ ಕೈಲಾಸವೆಂದು ಬಸವಾದಿ ಪ್ರಮಥರು ನಂಬಿದ್ದರು; ಆ ರೀತಿ ಆಚರಿಸುತ್ತಲೂ ಇದ್ದರು. ಬಸವಣ್ಣನವರ ವಚನವೊಂದರಲ್ಲಿ೨೮ ಪ್ರಮಾಣವಾಗಿ ಒಂದು ಸಂಸ್ಕೃತ ಶ್ಲೋಕವನ್ನು ಉಲ್ಲೇಖಿಸುತ್ತಾರೆ-

---

೨೬ ಅದೇ ವಚನ ೬೮೮
೨೭ ಅದೇ ವಚನ ೬೦೫
೨೮ ಅದೇ ವಚನ ೬೦೭

ಚಾಂಡಾಲ ವಾಟಿಕಾಯಾಂ ವಾ ಶಿವಭಕ್ತಃ ಸ್ಥಿತೋಯದಿ।
ತಚ್ಛ್ರೇಣಿಃ ಶಿವಲೋಕಸ್ಯ ತದ್ಗೃಹಂ ಶಿವಮಂದಿರಮ್॥

ಈ ರೀತಿಯಾಗಿ ಮೇಲೆ ವಿವರಿಸಲಾದ ಕೆಲ ವಚನಗಳಲ್ಲಿಯ ಸಂಸ್ಕೃತ ಶ್ಲೋಕಗಳ ಸಾಂದರ್ಭಿಕ ಔಚಿತ್ಯವನ್ನು ಪರೀಕ್ಷಿಸಿದಾಗ, ಬಸವಣ್ಣನವರಿಗೆ ಆಗಮಾದಿ ಪ್ರಮಾಣಗಳಲ್ಲಿ ಹೆಚ್ಚಿನ ಗೌರವವಿದ್ದು, ಅದನ್ನು ಪ್ರಸಂಗಾನುಸಾರವಾಗಿ ಉದಾಹರಿಸಿ, ತಮ್ಮ ಹೃದಯ ವೈಶಾಲ್ಯವನ್ನು ಮೆರೆದಿದ್ದಾರೆ. ಆದುದರಿಂದ ಅವರ ವಚನಗಳಲ್ಲಿ ಉದಾಹೃತವಾದ ಸಂಸ್ಕೃತ ವಾಕ್ಯಗಳನ್ನು (ಹೆಚ್ಚಾಗಿ ಶ್ಲೋಕಗಳನ್ನು) ತೆಗೆದು ಹಾಕುವದಕ್ಕಾಗಲೀ, ಬೇರೆ ಏನನ್ನಾದರೂ ಸೇರಿಸಲಿಕ್ಕಾಗಲೀ ನಮಗಾವ ಅಧಿಕಾರವಿದೆ? ಅನುಭಾವದಂಥ ಅತಿ ಕ್ಲಿಷ್ಟವಾದ ವಿಷಯವನ್ನು ಜನಸಾಮಾನ್ಯರ ಭಾಷೆಯಾದ ಕನ್ನಡದಲ್ಲಿ ಅಭಿವ್ಯಕ್ತಗೊಳಿಸಿ, ಆ ಭಾಷೆಯನ್ನು ಶ್ರೀಮಂತಗೊಳಿಸಿದರೂ, ಬಸವಾದಿ ಪ್ರಮಥರಿಗೆ ಭಾಷಾದುರಭಿಮಾನವಿಲ್ಲದಿದ್ದುದು ನಮ್ಮೆಲ್ಲರ ಸೌಭಾಗ್ಯ!

□ □

ವೀರಶೈವ ಮಠಗಳು ಇಡಬೇಕಾದ ಸಹಜ ಮತ್ತು ಅಗತ್ಯ ಹೆಜ್ಜೆ

— ಡಾ. ಎಚ್. ಎಂ ಮರುಳಸಿದ್ಧಯ್ಯ

ಧರ್ಮಕ್ಕೂ ರಾಜಕೀಯಕ್ಕೂ ಇತಿಹಾಸದ ಉದ್ದಕ್ಕೂ ಇರುವುದು ಶತ್ರುತ್ವದ ಸಂಬಂಧ. ಒಂದನ್ನು ಇನ್ನೊಂದು ಪ್ರತಿಕ್ರಮಿಸುವ, ಒಂದು ಇನ್ನೊಂದರಿಂದ ಬೆಂಬಲ ಅಪೇಕ್ಷಿಸುವ, ಒಂದು ಇನ್ನೊಂದನ್ನು ದೂರವಿರಿಸುವ ಕ್ರಮಗಳ ಸರಪಳಿಯನ್ನೇ ಕಾಣಬಹುದು. ಧರ್ಮದ ನೆಲೆಯ ಮೇಲೆಯೇ ರಾಜ್ಯ ಭಾರ ನಡೆಯಬೇಕೆಂಬುದು ಒಂದು ಪಂಥವಾದರೆ, ರಾಜಕೀಯಕ್ಕೂ ಧರ್ಮಕ್ಕೂ ನಂಟು ಇರಬೇಕೂಡದು ಎಂಬುದು ಇನ್ನೊಂದು ಪಂಥ. ಮಧ್ಯಕಾಲೀನ ಪರಿಸ್ಥಿತಿಯಲ್ಲಿ ಒಂದು ಇನ್ನೊಂದರೊಡನೆ ಸೆಣೆಸಾಡುತ್ತಿದ್ದುದು, ಧರ್ಮದ ಕೈಮೇಲಾಗುತ್ತಿದ್ದಂತೆಯೇ ರಾಜಕೀಯ ಶಕ್ತಿ ಮೇಲೇರುವ ಒಲವು ಕಾಣುತ್ತಿತ್ತು. ಈಗಲೂ, ಲೌಕಿಕ ರಾಜ್ಯದಲ್ಲೂ ಧಾರ್ಮಿಕ ಶಕ್ತಿಯು ಕಳಪೆಯಾಗಿಲ್ಲ. ಧರ್ಮದ ನರನಾಡಿಗಳು ಜನರ ನರನಾಡಿಗಳಲ್ಲಿ ಬೆರೆತಿರುವುದು ಪರಂಪರೆಯಿಂದ ಸಾಗಿಬಂದ ಇತಿಹಾಸವಾಗಿದೆ. ರಾಜಕೀಯವು ಒಹಿರಂಗದ ಮತ್ತು ಕೇವಲ ಕೆಲವರದೇನೂ, ಎಂಬ ನಂಬುಗೆಯನ್ನು ಬೆಳೆಸುತ್ತಿದ್ದರೆ, ಧರ್ಮವು ಆಂತರಿಕವಾದ ಮತ್ತು ಸರ್ವರ ಭಾಗವಾದ ಶಕ್ತಿಯೆಂಬ ವಿಶ್ವಾಸವನ್ನು ಉಂಟುಮಾಡಿದೆ. ಜನರ ಕ್ಷೇಮವನ್ನು ವಿವಿಧ ರೀತಿಯಲ್ಲಿ ಧರ್ಮವು ನೋಡಿಕೊಂಡರೆ, ರಾಜ್ಯವು ಕಾನೂನು ಮತ್ತು ಸುವ್ಯವಸ್ಥೆಯನ್ನು ನೋಡಿಕೊಳ್ಳುವ ನಿಯೋಗವಾಗಿದೆ. ಆದರೆ, ಆಧುನಿಕ ಕಾಲದಲ್ಲಿ ಕ್ಷೇಮರಾಜ್ಯದ ಪರಿಕಲ್ಪನೆಯು ಪ್ರತಿಷ್ಠಾಪಿತವಾದ ಮೇಲೆ ಜನರ ಸರ್ವಾಂಗೀಣ ಸುಖದ ಹೊಣೆಗಾರಿಕೆಯು ಸರಕಾರದ ಮೇಲೆ ಬಿದ್ದಿದೆ. ಆದರೂ ಧರ್ಮಕ್ಕೆ ಇರುವ ಸ್ಥಾನವನ್ನು ಗೌಣವಾಗಿ ಕಾಣುವಂತಿಲ್ಲ.

ಖಾಸಗಿ ಮತ್ತು ಸರಕಾರಿ ಕಾರ್ಯರಂಗ:

ಪರಂಪರೆಯ ಪ್ರಕಾರ ಸರಕಾರವು ಜನರ ಜೀವ ಮತ್ತು ಆಸ್ತಿಗಳನ್ನು ರಕ್ಷಿಸಲು ಹೊಣೆ ಹೊತ್ತಿದ್ದರೆ; ಧರ್ಮವು ಜನರ ಆತ್ಮ ಕಲ್ಯಾಣದ ಜವಾಬ್ದಾರಿಯನ್ನು ಹೊತ್ತಿತ್ತು. ಧರ್ಮವು ಇತರ ಖಾಸಗಿ ಆಸಕ್ತಿಗಳಂತೆ ಒಂದು ಖಾಸಗಿ ಆಸಕ್ತಿಯಾದುದರಿಂದ ಧರ್ಮವು ಕೈಕೊಳ್ಳುವ ಸಮಾಜ ಕಲ್ಯಾಣ ಕಾರ್ಯವು ಖಾಸಗಿ ರಂಗದ್ದಾಗಿತ್ತು. ಲೌಕಿಕ ತತ್ತ್ವವು ತೀವ್ರತರವಾಗಿ ಪ್ರಚಾರಕ್ಕೆ ಬರುವ ಮೊದಲು ನೀತಿ-ಧರ್ಮಗಳೇ ಸಮಾಜ ಕಲ್ಯಾಣದ

ಮೂಲಾಧಾರವಾಗಿದ್ದವು. ಜನರ ಕಲ್ಯಾಣಕ್ಕೆ ಮನಸ್ಸು ಮಾಡುವುದೆಂದರೆ, ಆ ಬಗ್ಗೆ ಕಾರ್ಯತತ್ಪರವಾಗುವುದೆಂದರೆ ತನ್ನ ಪರಲೋಕದ ಕಲ್ಯಾಣವನ್ನು ಸಾಧಿಸಬೇಕೆಂಬುದೇ ಅರ್ಥ. ಇದರಲ್ಲಿ ರಾಜಕೀಯಕ್ಕೆ ಪ್ರವೇಶವಿಲ್ಲ. ಸರಕಾರವು ಸಾಧ್ಯವಾದರೆ ಪೂರಕವಾದ ನೆರವನ್ನು ನೀಡಬಹುದೇ ಹೊರತು ತಾನೇ ಪೂರ್ಣ ಹೊಣೆಯನ್ನು ಹೊರುತ್ತಿರಲಿಲ್ಲ. ಹೀಗಾಗಿ ಸಮಾಜ ಕಲ್ಯಾಣ ಕಾರ್ಯವು ಹೆಚ್ಚಾಗಿ ಖಾಸಗಿ ರಂಗದ ವ್ಯವಹಾರವಾಗಿತ್ತು. ಆದುದರಿಂದ ಧರ್ಮದ ನಿಯೋಗಗಳಾದ ಮಠಗಳು ಕೈಗೊಳ್ಳುವ ಕಲ್ಯಾಣ ಕಾರ್ಯಗಳು ಖಾಸಗಿ ರಂಗಕ್ಕೆ ಸೇರಿದವುಗಳಾಗಿದ್ದವು.

ಆದರೆ, ಪ್ರಜಾಪ್ರಭುತ್ವ, ಸಮಾಜವಾದ ಮತ್ತು ಕ್ಷೇಮರಾಜ್ಯ–ಇವುಗಳ ಪರಿಕಲ್ಪನೆಗಳು ಮುಪ್ಪುರಿಗೊಂಡು ಲೌಕಿಕ ತತ್ತ್ವದರ್ಶದ ಮೇಲೆ ರೂಪುಗೊಂಡ ಸರಕಾರವು ಸಮಾಜ ಕಲ್ಯಾಣ ಕಾರ್ಯವನ್ನು ಆದ್ಯತೆಯ ಮೇಲೆ, ವ್ಯಾಪಕವಾಗಿ ಮತ್ತು ಬಹು ತೀವ್ರವಾಗಿ ಕೈಗೊಳ್ಳತೊಡಗಿತು.

ಪರಂಪರೆಯ ಪ್ರಕಾರ ಸಮುದಾಯವು ಸ್ವಯಂ ಇಚ್ಛೆಯಿಂದ ನೀಡಿದ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಖಾಸಗಿ ರಂಗವು ಸಮಾಜ ಕಲ್ಯಾಣ ಕಾರ್ಯವನ್ನು ಕೈಗೊಂಡು ನಡೆಸುತ್ತಿತ್ತು. ಜೊತೆಗೆ ತನ್ನ ಅಳವಿಗೆ ತಕ್ಕಂತೆ ತನ್ನ ಅರಿವಿಗೆ ಸೂಕ್ತ ಕಂಡಂತೆ ಸಮಾಜ ಕಲ್ಯಾಣವನ್ನು ಮಾಡುತ್ತಿತ್ತು. ಈ ಮಾತು ಧರ್ಮಕ್ಕೂ ಅನ್ವಯಿಸುತ್ತದೆ. ಆದರೆ, ಆಧುನಿಕ ಕ್ಷೇಮರಾಜ್ಯವು ಕಲ್ಯಾಣ ಕಾರ್ಯವನ್ನು ಕೈಗೊಳ್ಳುವುದು ಸಮುದಾಯದ ಸ್ವಯಮಿಚ್ಛಿತ ಕಾಣಿಕೆಯ ಆಧಾರದ ಮೇಲಲ್ಲ; ತನ್ನ ಅಧಿಕಾರವನ್ನು ಚಲಾಯಿಸಿ ವಸೂಲಿ ಮಾಡಿದ ತೆರಿಗೆಯ ಆಧಾರದ ಮೇಲಿಂದ. ಸಮಾಜದ ಸರ್ವಾಂಗೀಣ ಅಭ್ಯುದಯವನ್ನು ಇರಿಸಿಕೊಂಡು ತೀವ್ರಗಾಮಿ ಕ್ರಮಗಳನ್ನು ಅದು ಕೈಗೊಳ್ಳುತ್ತದೆ. ಈ ವ್ಯತ್ಯಾಸವನ್ನು ನಾವು ಅವಶ್ಯವಾಗಿ ಗಮನಿಸಬೇಕು.

ಆದರೂ ಖಾಸಗಿ ರಂಗವು ಜನರೊಡನೆ ನಿಕಟವಾಗಿ ಸಂಬಂಧಗಳನ್ನು ಬೆಳೆಸಿಕೊಂಡು ಕಲ್ಯಾಣ ಕಾರ್ಯವನ್ನು ಕೈಗೊಳ್ಳುವಂತೆ ಸರಕಾರವು ಮಾಡುವುದು ಅಷ್ಟು ಸುಲಭವಲ್ಲ. ಲೌಕಿಕ ದೃಷ್ಟಿಯು ಎಷ್ಟೇ ಗಟ್ಟಿಗೊಂಡರೂ ಧಾರ್ಮಿಕ ಹಿನ್ನೆಲೆಯಿಂದ ಕೈಗೊಂಡ ಕಲ್ಯಾಣ ಕಾರ್ಯಗಳೇ ಹೆಚ್ಚು ಪರಿಣಾಮ ಬೀರುತ್ತವೆಂದು ಕಾಣುತ್ತದೆ. ಹೆಚ್ಚುಹೆಚ್ಚಾಗಿ ಪಾಶ್ಚಾತ್ಯ ಜನಜೀವನವನ್ನು ರೂಪಿಸಿ, ಅಲ್ಲಿನ ಸಮಾಜ ಕಲ್ಯಾಣ ಕಾರ್ಯವನ್ನು ವ್ಯತ್ಯಾತ್ಮಕಗೊಳಿಸಿದ್ದರೂ, ಕ್ರೈಸ್ತ ಧರ್ಮೀಯ ದೃಷ್ಟಿಯು ಆ ಕಾರ್ಯದ ತಳಹದಿಯಾಗಿರುವುದನ್ನು ನಾವು ಗಮನಿಸಬಹುದು. ಅಂದರೆ, ಈ ವಲಯದಲ್ಲಿ ಧರ್ಮದ ಪ್ರಾಮುಖ್ಯತೆಯನ್ನು ನಾವು ಅರಿಯಬಹುದು.

ವೀರಶೈವ ಧರ್ಮದ ವೈಶಿಷ್ಟ್ಯ:

ಸಮಾಜದ ಒಳಿತನ್ನು ಕುರಿತು ಚಿಂತಿಸುವಾಗ ಸಹಜವಾಗಿಯೇ ವೀರಶೈವ ಧರ್ಮದ,

ವೀರಶೈವ ಮಠಗಳ ನೆಲೆಯಾಗಿಯೇ ಆಗುತ್ತದೆ. ಕ್ರಿ.ಶ.ಹನ್ನೆರಡನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಆದ ಶರಣ ಕ್ರಾಂತಿಯು ವ್ಯಷ್ಟಿ ಸಮಷ್ಟಿಗಳೆರಡನ್ನೂ ನವೀನ ರೀತಿಯಲ್ಲಿ ಪರಿವರ್ತನೆಗೆ ಈಡು ಮಾಡಿತು. ಮುಂದೆ ಏಳೆಂಟು ನೂರು ವರ್ಷಗಳಾನಂತರ ಪ್ರಚಲಿತಗೊಳ್ಳಲಿದ್ದ ಸಮಾಜವಾದೀ ತತ್ತ್ವಾದರ್ಶವನ್ನು ತನ್ನ ಬಲಿಷ್ಠ ನೆಲೆಯನ್ನಾಗಿಸಿಕೊಂಡ ವೀರಶೈವವು ಅಧ್ಯಾತ್ಮವನ್ನು ತ್ಯಜಿಸಲಿಲ್ಲ. ಅಂದರೆ, ಇಹ–ಪರಗಳೆರಡನ್ನೂ ಸಮಾನವಾಗಿ ಕಂಡು ಮಾನವರೆಲ್ಲರನ್ನೂ ಒಂದೇ ತೆರನಾಗಿ ಪರಿಗಣಿಸಿ, ಸಕಲ ಜೀವಾತ್ಮರ ಲೇಸನ್ನು ಬಯಸತಕ್ಕಂಥ ಅಪರೂಪವಾದ ಸಿದ್ಧಾಂತವನ್ನು ವೀರಶೈವವು ಕಂಡರಿಸಿತು.

ಶರಣರ ಜೀವನ ದೃಷ್ಟಿಯಲ್ಲಿ ವಯಸ್ಸಾಗಲಿ, ಲಿಂಗವಾಗಲಿ, ಕಾಯಕವಾಗಲಿ, ವಾಸಸ್ಥಾನವಾಗಲಿ, ವೈವಾಹಿಕ ಸ್ಥಿತಿಯಾಗಲಿ, ಮತ್ತೆ ಯಾವುದೇ ವಿಶೇಷವಾಗಲಿ ವಿಶಿಷ್ಟವಾದ ಸಂಗತಿಯಲ್ಲ; ಯಾವುದೇ ಸಂಗತಿಯೂ ವ್ಯಕ್ತಿಯನ್ನು ಪ್ರತ್ಯೇಕಿಸಿ, ಮೇಲೆಂದಾಗಲಿ ಕೀಳೆಂದಾಗಲಿ ರೂಪಿಸುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯೂ ಗೌರವಕ್ಕೆ ಅರ್ಹ. ಪ್ರತಿಯೊಬ್ಬನೂ ಪರಶಿವನ ಪಡಿಯಚ್ಚು, ರತ್ನ ಮೌಕ್ತಿಕದಚ್ಚು; ಪ್ರತಿಯೊಬ್ಬನೂ ಸತ್ಯಶುದ್ಧ ಕಾಯಕ ನಿರತನಾಗಿರಬೇಕು; ಯಾರ ನುಡಿಯೂ ನಡೆಯಿಂದ ಭಿನ್ನವಾಗಿರಕೂಡದು. ಇಂತಹ ಅಪೂರ್ವವಾದ ತಾತ್ತ್ವಿಕ ದೃಷ್ಟಿಯು ಹತ್ತೊಂಬತ್ತನೆಯ ಶತಮಾನದಲ್ಲಿ ಉಗಮವಾಗಿ ಇಪ್ಪತ್ತನೆಯ ಶತಮಾನದಲ್ಲಿ ವ್ಯಾಪಕವಾಗಿ ಹರಡುತ್ತಿರುವ ಸಮಾಜಕಾರ್ಯ ವೃತ್ತಿಯ ತಾತ್ವಿಕ ದೃಷ್ಟಿಯಿಂದ ಏನೆಷ್ಟೂ ಭಿನ್ನವಾಗಿಲ್ಲ. ಭಿನ್ನತೆಯೇನಾದರೂ ಕಂಡರೆ ಅದು ಆಧುನಿಕ ಸಮಾಜಕಾರ್ಯ ವೃತ್ತಿಯ ಓರೆಕೋರೆಗಳನ್ನು ತಿದ್ದುವಂಥ ಸಾಮರ್ಥ್ಯವನ್ನು ಹೊಂದಿರುವುದೇ ಆಗಿದೆ.

ಆದುದರಿಂದ ವೀರಶೈವ ಧರ್ಮವನ್ನು ಪ್ರತಿಪಾದಿಸುತ್ತಿರುವುದಾಗಿ ಘೋಷಿಸಿಕೊಳ್ಳುವ ಮಠಗಳು, ಮನಸ್ಸು ಮಾಡಿದರೆ, ಆಧುನಿಕ ಸಮಾಜದಲ್ಲಿ ಎಂತಹ ಮಹತ್ವದ ಕಾರ್ಯವನ್ನೂ ಮಾಡಲು ಸಾಧ್ಯ. ಪ್ರಜಾಪ್ರಭುತ್ವಾತ್ಮಕ ಸಮಾಜವಾದೀಯ ತತ್ತ್ವದರ್ಶನವನ್ನು ಹೊಂದಿರುವ ಲೌಕಿಕ ವಾದವನ್ನೇ ಎತ್ತಿ ಹಿಡಿಯುತ್ತಿರುವ, ಕ್ಷೇಮರಾಜ್ಯವನ್ನು ಸ್ಥಾಪಿಸಲು ಪಣತೊಟ್ಟಿರುವ ಭಾರತದಲ್ಲಿ ವೀರಶೈವವು ಅದ್ಭುತವೂ, ಪರಿಣಾಮಕರವೂ ಆದ ಕಾರ್ಯವನ್ನು ಮಾಡಲು ಸಾಧ್ಯವಿದೆ. ಯಾಕೆಂದರೆ, ಇಂದಿನ ರಾಜಕೀಯ ಸಿದ್ಧಾಂತಕ್ಕೆ ವೀರಶೈವವು ವಿರೋಧವಾಗಿರದೆ ಪೂರಕವಾದ ಶಕ್ತಿಯಾಗಿದೆ.

ಪರಂಪರೆಯನ್ನು ಗಮನಿಸಿದರೆ, ಹಳ್ಳಿಹಳ್ಳಿಗಳಲ್ಲಿ ವೀರಶೈವ ಮಠಗಳು, ಹಲವಾರು ಪ್ರಸಂಗಗಳಲ್ಲಿ ಸಂಸಾರಸ್ಥ ಕುಟುಂಬಗಳೂ, ಸಾಮಾಜಿಕ ಹಿತದ ಕಾರ್ಯದಲ್ಲಿ ನಿರತವಾಗಿದ್ದುದು ಕಾಣುತ್ತದೆ. ಜಾತಿ–ಉಪಜಾತಿಗಳ ಭೇದವಿಲ್ಲದೆ, ಹೆಣ್ಣು–ಗಂಡುಗಳ ತಾರತಮ್ಯವಿಲ್ಲದೆ ಪ್ರತಿಯೊಬ್ಬರ ಕ್ಷೇಮವನ್ನು ಗಮನದಲ್ಲಿರಿಸಿಕೊಂಡು ಮಠಗಳು ಸಮಾಜಕಾರ್ಯದ ಕೇಂದ್ರಗಳಾಗಿಯೇ ಕಾರ್ಯ ನಿರ್ವಹಿಸುತ್ತಿದ್ದವು. ಆಧುನಿಕ ಕಾಲದ ಸಲಹಾ

ಕಾರ್ಯವನ್ನು ಒಳಗೊಂಡಂತೆ ಪ್ರತಿರೋಧಕ, ಚಿಕಿತ್ಸಾತ್ಮಕ, ಪುನರ್ವಸತಿಯ, ಪರಿವರ್ತನೆಯ, ಅಭ್ಯುದಯಾತ್ಮಕ ಕಾರ್ಯಗಳು ನಡೆಯುತ್ತಿದ್ದುದನ್ನು ಗಮನಿಸಿದರೆ, ಅಲ್ಪಸ್ವಲ್ಪ ವ್ಯತ್ಯಾಸಗಳಿಂದ ವೀರಶೈವ ಮಠಗಳು ನಿಜವಾಗಿಯೂ ಸಕಲ ಜೀವಾತ್ಮರ ಸಮಗ್ರ ಕಲ್ಯಾಣವನ್ನು ಸಾಧಿಸುವ ಚೇತನ ಕೇಂದ್ರಗಳು ಆಗಲಿಕ್ಕೆ ಸಾಧ್ಯವಿದೆ.

ಹದಗೊಂಡಿರುವ ಹಿನ್ನೆಲೆ:

ವೀರಶೈವ ಮಠಗಳು ಧರ್ಮ ಪ್ರಸಾರದ ಜೊತೆಗೆ ದಾಸೋಹವನ್ನು ತಮ್ಮ ವಿಶಿಷ್ಟ ಕಾರ್ಯಚಟುವಟಿಕೆಯನ್ನಾಗಿಸಿಕೊಂಡು ಬಂದಿವೆ. ಯಾರೇ ಬರಲಿ ಹಸಿದವರಿಗೆ ಅನ್ನವನ್ನು ನೀಡುವುದು ವೀರಶೈವ ಮಠಗಳ ವಿಶಿಷ್ಟ ಕಾರ್ಯ. ದಿನದುದ್ದಕ್ಕೂ ಅನ್ನ ದಾಸೋಹ ನಡೆಸುತ್ತಿರುವ ಮಠಗಳೂ ಉಂಟು. ಹಳ್ಳಿಗಳಲ್ಲಿನ ಜಂಗಮರ ಮನೆಗಳನ್ನು ಮಠಗಳೆಂದೇ ಪರಿಭಾವಿಸಿ, ಜನರು ಅಲ್ಲಿ ದಾಸೋಹವನ್ನು ನಿರೀಕ್ಷಿಸುತ್ತಿದ್ದುದುಂಟು. ಯಾರೇ ಹೊರಗಿನಿಂದ ಬಂದಿರಲಿ ಜಂಗಮರ ಮನೆಯಲ್ಲಿ ಊಟದ ವ್ಯವಸ್ಥೆಯಿರುತ್ತಿತ್ತು. ಹಳ್ಳಿಸಮುದಾಯದಲ್ಲಿ ಜಂಗಮರ ಮನೆಗಳು ಚೇತನ ಕೇಂದ್ರಗಳಾಗಿ ಇರುತ್ತಿದ್ದುದನ್ನು ಗಮನಿಸಿದರೆ ಸಮುದಾಯದ ಆರೋಗ್ಯವನ್ನು ಅಳೆಯುವುದು ಸುಲಭವಾಗಿತ್ತು.

ಪಟ್ಟಣ–ನಗರಗಳಲ್ಲಿನ ವೀರಶೈವ ಮಠಗಳು ವಿದ್ಯಾ ಕೇಂದ್ರಗಳೂ ಆಗಿದ್ದವು. ವಿದ್ಯಾರ್ಥಿಗಳಿಗೆ ಊಟ-ವಸತಿಗಳ ಸೌಕರ್ಯವನ್ನು ಒದಗಿಸುವ ಮಠಗಳು ಕರ್ನಾಟಕದ ಉದ್ದಗಲಕ್ಕೂ ಇರುವುದನ್ನು ನೋಡಬಹುದು. ದಾಸೋಹಮಠಗಳೆಂದೂ, ಪ್ರಸಾದ ನಿಲಯಗಳೆಂದೂ, ಅವುಗಳನ್ನು ಕರೆಯುವುದುಂಟು. ಬಡ ವಿದ್ಯಾರ್ಥಿಗಳಿಗೆ ಅವರ ವಿದ್ಯಾಭ್ಯಾಸವನ್ನು ಪೂರೈಸಲು ಅಂತಹ ಪ್ರಸಾದ ನಿಲಯಗಳು ನೆರವಾಗುತ್ತಿವೆ. ಸಾವಿರಗಟ್ಟಲೆಯಲ್ಲ, ಲಕ್ಷಗಟ್ಟಲೆ ವಿದ್ಯಾರ್ಥಿಗಳು ಅಂತಹ ದಾಸೋಹ ಮಠಗಳಿಂದ ನೆರವನ್ನು ಪಡೆದಿವೆ.

ಖಾಸಗಿಯವರೇ ವಿದ್ಯಾಮಂದಿರಗಳನ್ನು ನಡೆಸುವ ಪರಂಪರೆಯು ಕರ್ನಾಟಕದ, ಅದರಲ್ಲೂ ಉತ್ತರ ಕರ್ನಾಟಕದ, ವಿಶಿಷ್ಟವಾದದ್ದು. ವೀರಶೈವ ಮಠಗಳು ಶಾಲೆಗಳನ್ನು ನಡೆಸತೊಡಗಿ, ಕಾಲೇಜುಗಳನ್ನು ಆರಂಭಿಸಿ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವ ಮಟ್ಟಕ್ಕೂ ಈಗ ಬೆಳೆದು ನಿಂತಿವೆ. ಕರ್ನಾಟಕದಲ್ಲಿ ವೀರಶೈವ ಮಠಗಳು ನಡೆಸುತ್ತಿರುವ ಶಾಲಾ–ಕಾಲೇಜುಗಳನ್ನು ಒಟ್ಟು ಗೂಡಿಸಿ ಲೆಕ್ಕ ಹಾಕಿದರೆ ಖಾಸಗಿಯವರು ನಡೆಸುವ ಎಲ್ಲ ವಿದ್ಯಾಕೇಂದ್ರಗಳ ಮೊತ್ತದಲ್ಲಿ ವೀರಶೈವ ಮಠಗಳ ಪಾಲೇ ದೊಡ್ಡದೆಂಬುದು ಗೊತ್ತಾಗುತ್ತದೆ. ಅದಕ್ಕಿಂತಲೂ ಮಹತ್ವದ ಕೊಡುಗೆಯೆಂದರೆ, ಈಗಾಗಲೇ ನಮೂದಿಸಿದಂತೆ, ವಿದ್ಯಾರ್ಥಿಗಳಿಗಾಗಿ ನಡೆಸುತ್ತಿರುವ ಉಚಿತ ಊಟ–ವಸತಿ ನಿಲಯಗಳು. ಕರ್ನಾಟಕದಲ್ಲಿನ ಯಾವ ಧರ್ಮದವರೂ ಇಂಥ ಪ್ರಮಾಣದಲ್ಲಿ ಇಂಥ ಸೌಲಭ್ಯವನ್ನು ಬಡವಿದ್ಯಾರ್ಥಿಗಳಿಗೆ ಒದಗಿಸುತ್ತಿಲ್ಲ. ಇಂಥ ನೆರವಿನಿಂದ ಲಕ್ಷಗಟ್ಟಲೆ ಜನರು ವಿದ್ಯಾಭ್ಯಾಸ ಮಾಡಲು ಸಾಧ್ಯ

ವಾಗಿದೆ. ಇಂಥವರಲ್ಲಿ ವೀರಶೈವರೇ ಅಧಿಕ ಸಂಖ್ಯೆಯಲ್ಲಿದ್ದರೂ ವೀರಶೈವ ಮಠಗಳ ನೆರವಿನಿಂದ ತಮ್ಮ ವಿದ್ಯಾಭ್ಯಾಸ ನಡೆಸಿದ ಅನ್ಯ ಧರ್ಮೀಯರ ಸಂಖ್ಯೆಯೇನೂ ಗೌಣವಾದುದಲ್ಲ.

ಮಠಗಳು ಧರ್ಮ ಪ್ರಸಾರಕ್ಕೇ ತಮ್ಮ ಕಾರ್ಯವನ್ನು ಸೀಮಿತಗೊಳಿಸವೆ ಉಚಿತವಾಗಿ ಅನ್ನವನ್ನು ನೀಡುವುದು, ಶಾಲೆ-ಕಾಲೇಜುಗಳನ್ನು ನಡೆಸುವುದು ಸರಿಯಲ್ಲವೆಂಬ ವಾದವೂ ಇದೆ. ವಿದ್ಯಾಕೇಂದ್ರಗಳನ್ನು ನಡೆಸಿದರೂ ತಮ್ಮ ಧರ್ಮದ ಪ್ರಸಾರಕ್ಕೆ ನೆರವಾಗುವಂಥವುಗಳನ್ನು ಮಾತ್ರವೇ ನಡೆಸಬಹುದು, ಎಂಬ ಸಲಹೆಯೂ ಉಂಟು. ಈ ಕುರಿತು ಚರ್ಚೆಯನ್ನು ಮಾಡುವ ಅಗತ್ಯವಿದ್ದರೂ ಪ್ರಸ್ತುತ ಬರೆಹದ ವ್ಯಾಪ್ತಿಗೆ ಈ ವಿವಾದವು ಬರುವುದಿಲ್ಲ.

ವೀರಶೈವ ಮಠಗಳು ತಮ್ಮ ದಾಸೋಹ ಸಂಸ್ಥೆಯ ಮೂಲಕ ಶಿಕ್ಷಣದ ಉನ್ನತಿಗೆ ಮಹತ್ವದ ಕಾಣಿಕೆ ನೀಡುವುದರ ಮೂಲಕ ಧರ್ಮವನ್ನು ಸಾಮಾಜಿಕ ಸಂಗತಿಯನ್ನಾಗಿ ಪರಿವರ್ತಿಸುವಲ್ಲಿ ಮಹತ್ವದ ಕಾರ್ಯವನ್ನು ಮಾಡಿವೆ. ಹಣಗಳಿಸುವ ದೃಷ್ಟಿಯಿಂದಲೇ ಶಿಕ್ಷಣಕೇಂದ್ರಗಳನ್ನು ವೀರಶೈವ ಮಠಗಳೂ ನ‍ಡೆಸುತ್ತಿರುವುದು ವಿಷಾದನೀಯ ಸಂಗತಿಯಾದರೂ ಶಿಕ್ಷಣಕ್ಷೇತ್ರಕ್ಕೆ, ತನ್ಮೂಲಕ ಸಾಮಾಜಿಕ ಪರಿವರ್ತನೆ ಮತ್ತು ಅಭ್ಯುದಯಕ್ಕೆ ಅವು ನೀಡುತ್ತಿರುವ ಕಾಣಿಕೆಯು ಗಮನಾರ್ಹವೂ ಹೌದು, ಮಹತ್ವ ಪೂರ್ಣವೂ ಹೌದು. ಅಂತೂ ಆಧುನಿಕ ಸಮಾಜಕಾರ್ಯವನ್ನು ಕೈಗೊಳ್ಳಲು ವೀರಶೈವ ಮಠಗಳು ಹದವಾದ ಹಿನ್ನೆಲೆಯನ್ನು ನಿರ್ಮಿಸಿವೆ.

ಕೈಗೊಳ್ಳಬಹುದಾದ ಒಂದು ಕಾರ್ಯಕ್ರಮ:

ಧಾರ್ಮಿಕ ತತ್ತ್ವಪ್ರಚಾರವನ್ನು ಹೊರತು ಪಡಿಸಿದರೆ ವೀರಶೈವ ಮಠಗಳು ಅನ್ನ ದಾಸೋಹ ಮತ್ತು ವಿದ್ಯಾ ಪ್ರಸಾರಕ್ಕೆ ತುಂಬಾ ಹೆಸರಾಗಿವೆ. ಹುಲ್ಲು ಬೇರುಗಳ ನಡುವಿನಿಂದಲೇ ಹುಟ್ಟಿ ಬೆಳೆದ ಧರ್ಮವಾಗಿರುವುದರಿಂದ, ಮೇಲಿಂದ ಯಾರಿಂದಲೋ ಹೇರಿದ ಧರ್ಮವಾಗಿರದ ಜನಪದೀಯ ಸತ್ವಗಳನ್ನು ಹೀರಿಕೊಂಡು ಮೈದುಂಬಿದ ಧರ್ಮವಾಗಿದೆ. ಈ ಕಾರಣದಿಂದಲೂ ಸಾಮಾನ್ಯ ಜನರ ಜೀವನದಲ್ಲಿ ಬಹುಸುಲಭವಾಗಿ ಮತ್ತು ಸರಳವಾಗಿ ಬೆರೆಯಲು ಇದಕ್ಕೆ ಸಾಧ್ಯವಾಗಿದೆ. ಜಾತಿ-ಉಪಜಾತಿಗಳ ಗಡಿಗಳನ್ನು ಮಾನ್ಯ ಮಾಡದೆ, ಪುರುಷ-ಸ್ತ್ರೀಯರೊಳಗೆ ಭೇದವನ್ನು ಎಣಿಸದೆ, ವಯಸ್ಸನ್ನೂ ಅಳತೆಗೋಲನ್ನಾಗಿ ಸ್ವೀಕರಿಸದ ಅಂತರಂಗ-ಬಹಿರಂಗಗಳೆರಡನ್ನೂ ವಿಶುದ್ಧವಾಗಿರಿಸಿಕೊಳ್ಳಬೇಕೆಂಬ ಆದರ್ಶದಿಂದ ತುಂದಿಲವಾದ ಧರ್ಮವು ಜನರಿಗೆ ಹತ್ತಿರವಾಗಲೂ, ಅವರೊಡನೆ ಸಹಜವಾಗಿ ಬೆರೆಯಲೂ, ಅವರ ಸುಖ-ದುಃಖಗಳಿಗೆ ತಿಳಿಗಂಪನದಿಂದ ಸ್ಪಂದಿಸಲೂ ಸಾಧ್ಯವಾಗಿದೆ.

ಊಳಿಗಮಾನ್ಯ ಪದ್ಧತಿಗೆ ಪ್ರತಿಭಟನೆಯಾದ, ಜ್ಞಾನಾನ್ನಗಳನ್ನು ಭೇದವಿಲ್ಲದೆ ನೀಡುವ, ಜನರ ನರನಾಡಿಗಳ ಮಿಡಿತವನ್ನು ಆದಷ್ಟೂ ನಿಕಟವಾಗಿ ಅರ್ಥಮಾಡಿ

ಕೊಳ್ಳುವ ಪದವಾದ ಧಾರ್ಮಿಕ ಹಿನ್ನೆಲೆಯನ್ನುಳ್ಳ ವೀರಶೈವ ಮಠಗಳು ಶಿಕ್ಷಣ ಕ್ಷೇತ್ರದಲ್ಲಿ ಮಹತ್ತರವಾದ ಕಾರ್ಯವನ್ನು ಕೈಗೊಳ್ಳಲು ಸಮರ್ಥವಾಗಿವೆ, ಮತ್ತು ಅಂಥ ಕಾರ್ಯವನ್ನು ಅತ್ಯವಸರದಲ್ಲಿ ಕೈಗೊಳ್ಳುವ ಅಗತ್ಯವೂ ಇದೆ.

ಕ್ಷೇಮ ರಾಜ್ಯದ ಪರಿಕಲ್ಪನೆಯು ಅನುಷ್ಠಾನಗೊಳ್ಳತೊಡಗಿದಾಗಿನಿಂದ ಪ್ರತಿಯೊಬ್ಬ ರಾಷ್ಟ್ರಕನು ಅಕ್ಷರಸ್ಥನಾಗುವಂತೆ ನೋಡಿಕೊಳ್ಳುವುದು ಸರಕಾರದ ಆದ್ಯ ಕರ್ತವ್ಯವಾಗಿದೆ. ಕಡ್ಡಾಯವಾಗಿ ಸಾರ್ವತ್ರಿಕವಾಗಿ ಶಿಕ್ಷಣ ಪ್ರಸಾರಗೊಳ್ಳಬೇಕೆಂದು ಸರಕಾರವು ಪ್ರತಿಯೊಂದು ಹಳ್ಳಿಯಲ್ಲೂ ಪ್ರಾಥಮಿಕ ಶಾಲೆಯನ್ನಾದರೂ ಆರಂಭಿಸಿ ನಡೆಸಲು ಉಪಕ್ರಮಿಸಿದೆ. ಹಲವು ಹಳ್ಳಿಗಳಲ್ಲಿ ಪೂರ್ವಪ್ರಾಥಮಿಕ ಶಾಲೆಗಳನ್ನೂ, ವಯಸ್ಕರ ಶಿಕ್ಷಣ ಕೇಂದ್ರಗಳನ್ನೂ ಆರಂಭಿಸಿದೆ. ಆದುದರಿಂದ ತನ್ನ ಆದಾಯದ ದೊಡ್ಡ ಭಾಗವನ್ನು ಶಿಕ್ಷಣಕ್ಕೆ ಮೀಸಲಿಡುವ ಕ್ರಮವನ್ನು ಕೈಗೊಂಡಿದೆ. ಖಾಸಗೀ ಕ್ಷೇತ್ರವೂ ಶಿಕ್ಷಣದ ಪ್ರಸಾರದಲ್ಲಿ ಮಹತ್ವದ ಸ್ಥಾನವನ್ನು ಬಹು ಕಾಲದಿಂದಲೂ ಪಡೆದಿದ್ದುದನ್ನು ಈ ಮೊದಲೇ ಪ್ರಸ್ತಾಪಿಸಲಾಗಿದೆ. ಕರ್ನಾಟಕದಲ್ಲಿ ವೀರಶೈವ ಮಠಗಳೂ, ವೀರಶೈವ ಸಂಘಟನೆಗಳೂ ಈ ಕ್ಷೇತ್ರದಲ್ಲಿ ಗಣನಾರ್ಹ ಕಾರ್ಯ ಮಾಡುತ್ತಿರುವುದನ್ನು ಈಗಾಗಲೇ ನಮೂದಿಸಲಾಗಿದೆ.

ಆದರೆ, ಖಾಸಗಿಯವರಾಗಲಿ, ಸರಕಾರದವರಾಗಲಿ, ವಿದ್ಯಾರ್ಥಿಯನ್ನು ರಾಷ್ಟ್ರದ ಬಲಸಂವರ್ಧನೆಗೆ ನೆರವಾಗುವ ರೀತಿಯಲ್ಲಿ ಸಿದ್ಧಗೊಳಿಸುತ್ತಿಲ್ಲವೆಂಬುದು, ವಿಷಾದನೀಯ ಕೇವಲ ಅಕ್ಷರಸ್ಥರನ್ನಾಗಿಸುವ ಪ್ರಯತ್ನ ನಡೆದಿದೆಯೇ ಹೊರತು ವಿದ್ಯಾವಂತರನ್ನಾಗಿಸುವ ಯತ್ನ ನಡೆದಿಲ್ಲ; ಸಚ್ಚಾರಿತ್ರ್ಯವನ್ನುಳ್ಳ ಉಜ್ವಲ ವ್ಯಕ್ತಿಗಳನ್ನು ರೂಪಿಸುವ ಕಾರ್ಯವಾಗುತ್ತಿಲ್ಲ. ಆದುದರಿಂದ ವೀರಶೈವ ಮಠಗಳು ಅತ್ಯವಸರದಲ್ಲಿ ಈ ನ್ಯೂನತೆಯನ್ನು ತೊಡೆದು ಹಾಕುವುದರಲ್ಲಿ ನಿರತವಾಗಿರಬೇಕಾಗಿದೆ.

ಹಳ್ಳಿಹಳ್ಳಿಗಳಲ್ಲಿರುವ ಪ್ರಾಥಮಿಕ ಶಾಲೆಗಳನ್ನು ವೀರಶೈವ ಮಠಗಳು ತಮ್ಮ ಕಾರ್ಯಕ್ಷೇತ್ರದೊಳಗೆ ತೆಗೆದುಕೊಳ್ಳಬೇಕು. ಹೀಗೆಂದರೆ, ಸರಕಾರವು ನಡೆಸುವ ಶಾಲೆಗಳನ್ನು ತಾವೇ ನಡೆಸಲು ತೊಡಗಬೇಕೆಂದು ಅರ್ಥವಲ್ಲ. ಆ ಶಾಲೆಗಳಿಗೆ ತರಬೇತಿ ಪಡೆದ ಶೈಕ್ಷಣಿಕ ಸಮಾಜಕಾರ್ಯಕರ್ತರನ್ನು ಕಳಿಸಿ, ಆ ಶಾಲೆಗಳ ಪರಿಸ್ಥಿತಿಯನ್ನು ಕೂಲಂಕುಷವಾಗಿ ತಿಳಿದುಕೊಳ್ಳಬೇಕು. ವಿದ್ಯಾರ್ಥಿಗಳಿಗೆ ಕುಂದು-ಕೊರತೆಗಳನ್ನು ತಿಳಿದುಕೊಂಡು ಅವುಗಳ ನಿವಾರಣೆ, ಮತ್ತು ಶಾಲೆಗಳಿಗೆ ಬೇಕಾಗುವ ಅಗತ್ಯ ಸೌಕರ್ಯಗಳನ್ನು ಒದಗಿಸುವ ಕ್ರಮಗಳನ್ನು ಕೈಗೊಳ್ಳಬೇಕು.

ಪ್ರತಿಯೊಂದು ಹಳ್ಳಿಯಲ್ಲೂ ಶಾಲಾ ಸುಧಾರಣಾ ಸಮಿತಿ ಇರುತ್ತದೆ. ಈ ಸಮಿತಿಯ ಸದಸ್ಯರನ್ನು ಸಂಪರ್ಕಿಸಿ, ಅವರಿಗೆ ನವೀನ ರೀತಿಯ ತರಬೇತಿಯ ವ್ಯವಸ್ಥೆ ಮಾಡಿ, ಅವರ ಮೂಲಕ ವಿದ್ಯಾರ್ಥಿಗಳ, ಶಿಕ್ಷಕರ ಮತ್ತು ಇಡಿಯ ಶಾಲೆಯ ಕ್ಷೇಮವನ್ನು ನೋಡಿಕೊಳ್ಳುವಂತೆ ಶೈಕ್ಷಣಿಕ ಸಮಾಜಕಾರ್ಯಕರ್ತರಿಗೆ ಸೂಚನೆಯನ್ನು ನೀಡಬೇಕು.

ಹಳ್ಳಿಗಳಲ್ಲಿ ಶಿಕ್ಷಕರು ಉಳಿದುಕೊಳ್ಳಲು ಸೂಕ್ತ ಮನೆಗಳಿರುವುದಿಲ್ಲ; ವಿದ್ಯಾರ್ಥಿಗಳಿಗೆ ಬೇಕಾದ ಶೈಕ್ಷಣಿಕ ಸಲಕರಣೆಗಳಿರುವುದಿಲ್ಲ; ಹಳ್ಳಿಗರಿಗೆ ಶಾಲೆಯ ಬಗ್ಗೆ ಕಾಳಜಿಯಿರುವುದಿಲ್ಲ ಇಂಥ ಅನೇಕ ಸಮಸ್ಯೆಗಳ ಪರಿಹಾರದಲ್ಲಿ ಸಾಮೂಹಿಕ ಮತ್ತು ಸಾಮುದಾಯಿಕ ಪ್ರಯತ್ನವನ್ನು ಸಮಾಜ ಕಾರ್ಯಕರ್ತರು ಕೈಗೊಳ್ಳಬೇಕಾಗಿದೆ. ವೀರಶೈವ ಮಠಗಳು ತಮಗಿರುವ ಸಂಪನ್ಮೂಲಗಳನ್ನು ಈ ಕೆಲಸಕ್ಕಾಗಿ ಸಜ್ಜುಗೊಳಿಸಬೇಕಾಗಿದೆ. ಆ ಮಠಗಳು ಜನರ ನಡುವೆಯೇ ಇರುವುದರಿಂದ ಶಿಕ್ಷಣ ಸುಧಾರಣೆಗೆ ಅಗತ್ಯವಾದ ಸ್ಥಳೀಯ ಸಂಪನ್ಮೂಲಗಳನ್ನು ದೊರಕಿಸುವುದು ಅಷ್ಟೇನು ಕಷ್ಟವಲ್ಲ. ಪಾಶ್ಚಾತ್ಯರ ರೀತಿಯ ಅಗಾಧ ವೆಚ್ಚದ ಗೋಜಿಗೆ ಹೋಗದೆ, ನಮ್ಮ ಸಾಂಸ್ಕೃತಿಕ ಮತ್ತು ಸಾಮಾಜಿಕ ಪರಂಪರೆಗೆ ಹೊಂದಿಕೊಳ್ಳುವ ವೆಚ್ಚವನ್ನು ಭರಿಸುವುದು ಸುಲಭ ಸಾಧ್ಯ.

ವೀರಶೈವ ಗುರುಗಳ ಬಗೆಗೆ ವೀರಶೈವರಿಗೂ, ವೀರಶೈವರಲ್ಲದವರಿಗೂ ಇನ್ನೂ ಪೂಜ್ಯ ಭಾವನೆಯಿದೆ. ಈ ಭಾವನೆಯೇ ಒಂದು ದೊಡ್ಡ ಸಂಪನ್ಮೂಲ ಇದನ್ನು ಗುರುತಿಸಿ, ಇದನ್ನು ಶಿಕ್ಷಣ ಸುಧಾರಣೆಗೆ ಬಳಸಿಕೊಳ್ಳಬಹುದು. ಪ್ರತಿಯೊಬ್ಬ ವಿದ್ಯಾವಂತ ನೌಕರರನ್ನು ಪ್ರಾಥಮಿಕ ಶಾಲೆಯ ಒಬ್ಬೊಬ್ಬ ವಿದ್ಯಾರ್ಥಿಯ ಕ್ಷೇಮವನ್ನು ನೋಡಿಕೊಳ್ಳುವ ಪ್ರೋತ್ಸಾಹಕನಾಗುವಂತೆ ಪ್ರೇರೇಪಿಸಬೇಕು. ವೀರಶೈವ ಗುರುಗಳು ಹಬ್ಬ ಹುಣ್ಣಿಮೆಗಳಲ್ಲಿ ಸೇರಿದ ಜನರಿಗೆ, ಪಾದಯಾತ್ರೆಗಳ ಮೂಲಕ ಹಳ್ಳಿಗರಿಗೆ ಶಿಕ್ಷಣದ ಮಹತ್ವವನ್ನು ಅರುಹಿ, ಅವರೆಲ್ಲರೂ ಶಿಕ್ಷಣ ಸುಧಾರಣೆ ಮತ್ತು ಪ್ರಸಾರದಲ್ಲಿ ಹೊಣೆಗಾರರಾಗುವ ಅಗತ್ಯವನ್ನು ಬಿಂಬಿಸಬೇಕು.

ಇಂಥ ಕಾರ್ಯದಲ್ಲಿ ಎರಡು ನಮೂನೆಯ ಕಾರ್ಯಗಳನ್ನು ಕೈಗೊಳ್ಳಬಹುದು. ಯಾರು ಪ್ರೋತ್ಸಾಹಕರಾಗಲು ಸಿದ್ಧರಾಗುತ್ತಾರೊ ಅಂಥವರನ್ನು ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಪರಿಚಯಿಸಿ, ಅವರಿಬ್ಬರನ್ನೂ ಸಂವಹನ ಜಾಲದಲ್ಲಿ ಸೇರಿಸಬೇಕು. ಪ್ರೋತ್ಸಾಹಕರು ನೀಡುವ ಹಣ-ವಸ್ತುಗಳನ್ನು ಸೂಕ್ತವಾಗಿ ವಿದ್ಯಾರ್ಥಿಗಳಿಗೆ ಹಂಚುವುದೂ, ಒಬ್ಬೊಬ್ಬ ಪ್ರೋತ್ಸಾಹಕನು ಒಬ್ಬೊಬ್ಬ ವಿದ್ಯಾರ್ಥಿಯೊಡನೆ ಪತ್ರ ವ್ಯವಹಾರ ಮಾಡುತ್ತಾ, ಆ ವಿದ್ಯಾರ್ಥಿಯನ್ನು ಉತ್ತಮ ನಾಗರಿಕನನ್ನಾಗುವಂತೆ ಪ್ರೇರೇಪಿಸಬೇಕು. ಈ ಕಾರ್ಯದಲ್ಲಿ ಮಧ್ಯಸ್ಥನಾಗಿ ಶೈಕ್ಷಣಿಕ ಸಮಾಜ ಕಾರ್ಯಕರ್ತನಿರುತ್ತಾನೆ: ಕಾಲಕಾಲಕ್ಕೆ ವಿದ್ಯಾರ್ಥಿಗಳನ್ನೂ, ಅವರ ಶಿಕ್ಷಕರನ್ನೂ, ಅವರ ತಂದೆ-ತಾಯಿಯರನ್ನೂ ಸಂಪರ್ಕಿಸಿ, ವಿದ್ಯಾಭ್ಯಾಸದ ಪ್ರಗತಿಯನ್ನು ಮಾಪನಮಾಡುತ್ತಾನೆ.

ಎರಡನೆಯ ನಮೂನೆಯ ಕಾರ್ಯವೆಂದರೆ, ಯಾರಿಗೆ ಪ್ರೋತ್ಸಾಹಕರಾಗಲು ಸಾಧ್ಯವಿಲ್ಲವೊ ಅವರಿಂದ ಹಣ-ವಸ್ತುಗಳನ್ನು ಸಂಗ್ರಹಿಸಿ, ಅವನ್ನು ಶಾಲೆಯ ಸುಧಾರಣೆಗೆ ಬಳಸಬೇಕು. ಈ ಕಾರ್ಯದಲ್ಲಿ ಶಾಲಾ ಸುಧಾರಣಾ ಸಮಿತಿಯ ಸದಸ್ಯರ ಸಕ್ರಿಯ ಸಹಕಾರವನ್ನು ಪಡೆಯಬೇಕು.

ವೀರಶೈವ ಮಠಗಳು, ತಮ್ಮ ಅಳವಿಗೆ ತಕ್ಕ ಹಾಗೆ, ತಮ್ಮ ಸ್ಥಳೀಯ ಸಮುದಾಯ ದಲ್ಲಿ ಇಂಥ ಕಾರ್ಯವನ್ನು ಕೈಗೊಂಡರೆ, ಸಮಾಜ ಕಾರ್ಯವನ್ನು ಶೈಕ್ಷಣಿಕ ಪ್ರಗತಿಗೆ ತೊಡಗಿಸಿದಂತಾಗುತ್ತದೆ. ವೀರಶೈವ ತತ್ತ್ವಾದರ್ಶವು ಮುಖ್ಯವಾಗಿ ಸಮಾಜವಾದೀಯ ವಾದದ್ದೂ, ವ್ಯಕ್ತಿಯ ಸರ್ವಾಂಗೀಣ ಅಭ್ಯುದಯವನ್ನು ಉಳ್ಳದ್ದೂ ಆಗಿರುವುದರಿಂದ ಇಂಥ ಕಾರ್ಯಕ್ಕೆ ಯಾವ ತಾತ್ತ್ವಿಕ ಅಡಚಣೆಯೂ ಬರುವುದಿಲ್ಲ.

ಮಠಗಳು ತಮ್ಮ ಕಾರ್ಯಕ್ಕಾಗಿ ಒಂದು ವಿಭಾಗವನ್ನು ಪ್ರಾರಂಭಿಸಿ, ಅದರಲ್ಲಿ ನಿಷ್ಠೆಯಿಂದ ದುಡಿಯುವ ಶೈಕ್ಷಣಿಕ ಸಮಾಜಕಾರ್ಯಕರ್ತರನ್ನು ನೇಮಿಸಿಕೊಂಡು, ಅವರಿಗೆ ಸೂಕ್ತ ತರಬೇತಿಯನ್ನು ನೀಡಿ, ಹಳ್ಳಿಹಳ್ಳಿಗಳ ಶಾಲೆಗಳಿಗೆ ಕಳಿಸುವ ವ್ಯವಸ್ಥೆ ಮಾಡ ಬೇಕು. ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಬೇಕು. ಈ ಕಾರ್ಯಕರ್ತರು ವೀರಶೈವ ಮತ ಪ್ರಚಾರಕರಾಗಿರಕೂಡದು. ಆದರೂ ಅವರು ತಮ್ಮ ಕಾರ್ಯಕ್ಕೆ ಶರಣರ ತತ್ತ್ವಾದರ್ಶಗಳನ್ನು ಮಾರ್ಗದರ್ಶಿ ಸೂತ್ರಗಳನ್ನಾಗಿ ಸ್ವೀಕರಿಸಬಹುದು. ಇದು ಲೌಕಿಕ ತತ್ತ್ವಾದರ್ಶಕ್ಕೆ ವಿರುದ್ಧವಾದುದೇನೂ ಅಲ್ಲ.

ಆದರೂ ಒಂದು ಎಚ್ಚರಿಕೆಯ ಅಂಶವನ್ನು ಪ್ರಸ್ತಾಪಿಸಬೇಕಾಗುತ್ತದೆ. ಈ ಬರಹದ ಆರಂಭದಲ್ಲೇ ಪ್ರಸ್ತಾಪಿಸಿದಂತೆ ಧರ್ಮವು ರಾಜಕೀಯದೊಡನೆ ಸಂಘರ್ಷಣೆ ಯಲ್ಲಿ ತೊಡಗುವ ಸಾಧ್ಯತೆಯಿದೆ. ಶಿಕ್ಷಣದಂತಹ ಬಹು ಸೂಕ್ಷ್ಮ ಅಂಶವನ್ನು ರಾಜ ಕೀಯ ದುರ್ಲಾಭಕ್ಕೆ ಬಳಸದೆ ಶುದ್ಧ ಸಾಮಾಜಿಕ ಅಭ್ಯುದಯಕ್ಕೆ ಬಳಸುವ ಎಚ್ಚರವನ್ನು ವೀರಶೈವ ಮಠಗಳು ಹೊಂದಿರಬೇಕು. ಯಾಕೆಂದರೆ, ಇಲ್ಲಿ ಸಲಹೆ ಮಾಡಿದ ಕಾರ್ಯ ಕ್ರಮವನ್ನು ನಿಷ್ಠೆಯಿಂದ ಕೈಗೊಂಡ ಮಠಗಳು ಬೆಳೆಯುತ್ತಿರುವ ವಿದ್ಯಾರ್ಥಿಗಳ, ಅವರ ಉನ್ನತಿಯಲ್ಲಿ ಆಸ್ಥೆಯುಳ್ಳ ಅವರ ಪಾಲಕರ, ಅವರ ಶಿಕ್ಷಣದಲ್ಲಿ ತೊಡಗಿದ ಶಿಕ್ಷಕರ, ಸಮುದಾಯದ ಧುರೀಣರ ಮತ್ತು ಶಿಕ್ಷಣಾಧಿಕಾರಿಗಳ ನಿಕಟ ಸಂಪರ್ಕವನ್ನು ಪಡೆಯು ಲಿರುವುದರಿಂದ ರಾಜಕೀಯ ಪಕ್ಷಗಳು ಮಠಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುವ ಸಾಧ್ಯತೆಯಿದೆ. ಸದಾ ಎಚ್ಚರಿಕೆಯಲ್ಲಿರುವ ಮಠಗಳು ಇಂಥ ಸಾಧ್ಯತೆಗೆ ಅವಕಾಶವನ್ನು ನೀಡುವುದಿಲ್ಲ.

□ □

ವಚನ ಸಾಹಿತ್ಯದ ಸಂಪಾದನೆ–ಒಂದು ಹೊಸ ರೀತಿ

—ಡಾ. ಗುಂಡ್ಮಿ ಚಂದ್ರಶೇಖರ ಐತಾಳ

೧

ವಚನ ಸಾಹಿತ್ಯವನ್ನು ಅನೇಕ ವಿದ್ವಾಂಸರು ಸಂಪಾದಿಸಿ ಪ್ರಕಟಿಸಿದ್ದಾರೆ. ವಚನಗಳು ರೂಪಾಂಶದಲ್ಲಿ ಈಗ ಪ್ರಕಟವಾದ ರೀತಿಯಲ್ಲಿ ಹಸ್ತಪ್ರತಿಗಳಲ್ಲಿ ಇರಲಿಲ್ಲ ಎಂಬ ವಿಚಾರವನ್ನು ಪ್ರೊ. ಬಸವನಾಳರು ಹೇಳಿದ್ದಾರೆ. ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳು ತಮ್ಮ 'ವಚನ ಧರ್ಮಸಾರ'ದಲ್ಲಿ ವಚನಗಳನ್ನು ಉದ್ದಕ್ಕೆ ಗದ್ಯದಂತೆ ಅಚ್ಚಿಸಿದ್ದಾರೆ. ಇದನ್ನು ಪ್ರೊ. ಬಸವನಾಳರು **"ಸಾಂಪ್ರದಾಯಿಕ ರೀತಿ'** ಎಂದು ಕರೆದಿದ್ದಾರೆ. ಅವರು ಕೊಟ್ಟ ಉದಾಹರಣೆ ಹೀಗಿದೆ:

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ ಗ್ರಹಣ. ಸಂಕ್ರಾಂತಿಯಿಂದ ವೆಗ್ಗಳ ಏಕಾದಶಿ, ವ್ಯತೀಪಾತದಿಂದ ವೆಗ್ಗಳ. ಸೂಕ್ಷ್ಮ ಶಿವಪಥವನರಿದವಂಗೆ ಹೋಮನೇಮ ಜಪತಪದಿಂದ ವೆಗ್ಗಳ. ಕೂಡಲಸಂಗಮದೇವ ನಿಮ್ಮ ಮಾಣದೆ ನೆನೆವವಂಗೆ.

ವಚನದಲ್ಲಿರುವ ಲಯವನ್ನು ಅನುಸರಿಸಿ ಅದನ್ನು ಪಾದಪಾದಗಳಾಗಿ ಅಚ್ಚಿಸುವುದು ಸೂಕ್ತವೆಂದು ಮನಗಂಡು ಪ್ರೊ. ಬಸವನಾಳರು ಅದನ್ನು ಪದ್ಯದಂತೆ ವಿಂಗಡಿಸಿ ಅಚ್ಚಿಸಿದರು. ಇದಕ್ಕೆ ಕೆಲವು ಸೂತ್ರವನ್ನು ಅನುಸರಿಸಿದರು. ಈ ವಚನದಲ್ಲಿ 'ವೆಗ್ಗಳ' ಎಂಬ ಪುನರುಕ್ತಿಯನ್ನೂ, 'ಶಿವಪಥವನರಿದವಂಗೆ' 'ನಿಮ್ಮ ಮಾಣದೆ ನೆನೆವವಂಗೆ' ಎಂಬ **ರಚನಾ ಸಾಮ್ಯ**ವನ್ನೂ ದೃಷ್ಟಿಯಲ್ಲಿಟ್ಟುಕೊಂಡು ಮೇಲಿನ ವಚನವನ್ನು ಹೀಗೆ ಅಚ್ಚಿಸಿದರು:

ಇಪ್ಪತ್ತುನಾಲ್ಕು ತಿಥಿಯಿಂದ **ವೆಗ್ಗಳ,**
ಗ್ರಹಣ–ಸಂಕ್ರಾಂತಿಯಿಂದ **ವೆಗ್ಗಳ,**
ಏಕಾದಶಿ–ವ್ಯತೀಪಾತದಿಂದ **ವೆಗ್ಗಳ,**
ಸೂಕ್ಷ್ಮ ಶಿವಪಥವನಱಿದಂಗೆ–
ಹೋಮನೇಮ ಜಪತಪಗಳಿಂದ **ವೆಗ್ಗಳ,**
ಕೂಡಲ ಸಂಗಮದೇವಾ, ನಿಮ್ಮ ಮಾಣದೆ ನೆನೆವಂಗೆ!

ಇಲ್ಲಿ ನಾನು ಪಾಠಾಂತರವನ್ನಾಗಲೀ, ಶುದ್ಧಪಾಠವನ್ನಾಗಲೀ ವಿವೇಚಿಸಿಲ್ಲ; ಅದು ಇಲ್ಲಿ ನನ್ನ ಉದ್ದೇಶವಲ್ಲ. ನನ್ನ ಉದ್ದೇಶ ವಚನಗಳ ರೂಪಾಂಶ (Form)ದ ಕಡೆಗೆ ಹರಿದಿದೆ. ವಚನ ಸಾಹಿತ್ಯವನ್ನು ಸಂಪಾದನೆ ಮಾಡಿದ ವಿದ್ವಾಂಸರು ಒಬ್ಬೊಬ್ಬರು

ಒಂದೊಂದು ರೀತಿಯಲ್ಲಿ ಪಾದಗಳನ್ನು ವಿಭಾಗಿಸಿ ಅಚ್ಚಿಸಿದ್ದಾರೆ. ಅದು ಹಾಗಾಗಬಾರದು. ಅಲ್ಲಿ ಒಂದೊಂದು ಪಾದ ಒಂದೊಂದು ಘಟಕ (Unit) ವಾಗಿ ನಿಲ್ಲುವುದು ಪುನರುಕ್ತಿಯಿಂದಲೋ, ರಚನಾ ಸಾಮ್ಯದಿಂದಲೋ, ಪ್ರಾಸದಿಂದಲೋ ತಿಳಿಯಬರುವುದು. ಅಂತು, ಒಂದು ನಿರ್ದಿಷ್ಟ ರೀತಿ ಸಾಧ್ಯ ಎಂದು ತೋರಿಸಿಕೊಡುವುದು ನನ್ನ ಈ ಲೇಖನದ ಉದ್ದೇಶ. ಈ ವಚನವನ್ನು ಡಾ. ಆರ್. ಸಿ. ಹಿರೇಮಠರು ಮೇಲಿನ ರೀತಿಯಲ್ಲೇ ಅಚ್ಚಿಸಿದ್ದಾರೆ. ಆದರೆ, ಪ್ರೊ. ಸ. ಸ. ಮಾಳವಾಡರು ಮೇಲಿನ ಎರಡು ಪಾದಗಳನ್ನು ಒಂದೇ ಪಾದವಾಗಿ ಅಚ್ಚಿಸಿದ್ದಾರೆ. ಇದು ಸರಿಯಲ್ಲ ಎಂದು ನಮಗೆ ತೋರುತ್ತದೆ. ಅಲ್ಲದೆ, ಬಸವಣ್ಣನವರ ವಚನಗಳಲ್ಲಿ 'ಕೂಡಲ ಸಂಗಮದೇವಾ' ಎಂಬ ಅಂಕಿತ ಪ್ರತ್ಯೇಕ ಘಟಕವಾಗಿ ನಿಲ್ಲುವುದರಿಂದ ಅದಷ್ಟನ್ನೇ ಒಂದು ಪಾದವಾಗಿ ಅಚ್ಚಿಸುವುದು ಸೂಕ್ತವಾದುದು. ಆಗ ಮೇಲಿನ ವಚನದ ರೂಪಾಂಶ ಈ ಕೆಳಗೆ ತೋರಿಸಿದಂತೆ ಆಗುವುದು:

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ
ಏಕಾದಶಿ–ವ್ಯತೀಪಾತದಿಂದ ವೆಗ್ಗಳ
ಸೂಕ್ಷ್ಮ ಶಿವಪಥವನಱಿದಂಗೆ
ಹೋಮನೇಮ ಜಪತಪದಿಂದ ವೆಗ್ಗಳ
ಕೂಡಲ ಸಂಗಮದೇವಾ?
ನಿಮ್ಮ ಮಾಣದೆ ನೆನೆವಂಗೆ!

ಇದರ ಸಮರ್ಥನೆಗಾಗಿ ಈ ಕೆಳಗಿನ ವಚನಗಳನ್ನು ನೋಡಿಂ:

೧. ನೀರ ಕಂಡಲ್ಲಿ ಮುಳುಗುವರಯ್ಯಾ
ಮರನ ಕಂಡಲ್ಲಿ ಸುತ್ತುವರಯ್ಯಾ
ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರು
ಕೂಡಲ ಸಂಗಮದೇವಾ?

೨. ಕಣ್ಣ ಮುಚ್ಚಿ ಕನ್ನಡಿಯ ತೋಱುವಂತೆ
ಇರುಳು ಹಗಲಿನ ನಿದ್ರೆ ಸಾಲದೆ?
ಬೆರಳನೆಣಿಸಿ ಪರಮಾರ್ಥವ ಹಡೆವಡೆ
ಚೋದ್ಯವಲ್ಲವೆ? ಹೇಳಾ?
ಮೂಗ ಮುಚ್ಚಿ ಮುಕ್ತಿಯ ಬಯಸುವ
ನಾಚಿಕೆಯಿಲ್ಲದವರ ನಾನೇನೆಂಬೆ
ಕೂಡಲ ಸಂಗಮದೇವಾ?

೩. ಇಟ್ಟಿಯ ಹಣ್ಣು ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೆ?
ಹಗಲುಗಾಣದ ಗೂಗೆ ಇರುಳಾಯಿತೆಂದಡೆ
ಜಗಕ್ಕೆ ಇರುಳಪ್ಪುದೆ ಮರುಳೇ?
ಹೋಮದ ನೇಮದಲ್ಲಿ ಹೋತನ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು
ಕೂಡಲ ಸಂಗಮದೇವಾ?

೪. ಆದಿ ಪುರಾಣ ಅಸುರರಿಗೆ ಮಾರಿ
ವೇದ ಪುರಾಣ ಹೋತಿಂಗೆ ಮಾರಿ
ರಾಮ ಪುರಾಣ ರಕ್ಕಸರಿಗೆ ಮಾರಿ
ಭಾರತ ಪುರಾಣ ಗೋತ್ರಕ್ಕೆ ಮಾರಿ
ಎಲ್ಲಾ ಪುರಾಣ ಕರ್ಮಕ್ಕೆ ಮೊದಲು
ನಿಮ್ಮ ಪುರಾಣಕ್ಕೆ ಪ್ರತಿಯಿಲ್ಲ
ಕೂಡಲ ಸಂಗಮದೇವಾ.

೫. ನಿಮ್ಮ ವಚನವೆನ್ನ ಪಥ್ಯವೆಂಬುದು ಹುಸಿಯಾಯಿತ್ತು ನೋಡಾ
ಶಾಸ್ತ್ರದ ವಚನ ಹೋತಿಂಗೆ ಮಾರಿ
ಎಂತು ನಂಬುವೆನಯ್ಯಾ?
ನಾನು ಕೊಲ್ಲೆ, ನೀನು ಕೊಂದಿತ್ತೆಂಬ ಸೂನೆಗಾರರನೇನೆಂಬೆ
ಕೂಡಲ ಸಂಗಮದೇವಾ?

೬. ಗುಡಿಯೊಳಗಿರ್ದು ಗುಡಿಯನೇಣ ಕೊಯಿದಡೆ
ಗುಡಿಯ ದಡಿ ಬಿದ್ದು ಹಲ್ಲುಹೋಹುದು ನೋಡಾ
ಪೊಡವಿಗೀಶ್ವರನ ಗರ್ಭಾಸನ ದೊಳಗಿರ್ದು ಸುಖಿವರು
ಮತ್ತೊಂದು ದೈವವುಂಟೆಂದು
ತುಡುಗಿ ನಾಯನು ಪಿಡಿತಂದು ಸಾಕಿದಡೆ
ತನ್ನೊಡೆಯಂಗೆ ಬಗುಳುವಂತೆ ಕಾಣಾ
ಕೂಡಲ ಸಂಗಮದೇವಾ.

೭. ಮಾಡುವ ಭಕ್ತನ ಕಾಯು ಬಾಳೆಯ ಕಂಬದಂತಿರಬೇಕು
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದಡೆ
ಒಳಗೆ ಕೆಚ್ಚಿಲ್ಲದಿರಬೇಕು
ಮೇಲಾದ ಫಲವ ಸಮ್ಮವರು ಬೀಜ ಸಹಿತ ನುಂಗಿದರು

ಎನಗಿನ್ನಾವ ಭಯವಿಲ್ಲ ಕಾಣಾ
ಕೂಡಲ ಸಂಗಮದೇವಾ.

೮. ಇಂದು ಹುಟ್ಟಿದ ಕೂಸಿಂಗೆ ಇಂದೆ ಜವ್ವನವಾಯಿತ್ತಯ್ಯಾ
ಆ ಕೂಸು ಬೀದಿಯಲ್ಲಿ ಒತ್ತೆಗೊಳಲು ನಿಂದಿತ್ತಯ್ಯಾ
ಇದಱ ಸಂಗಸುಖದನುಭಾವವನು
ಕೂಡಲಸಂಗಮದೇವ ತಾನೆಬಲ್ಲ.

೯. ಸಂಚಲವಿಲ್ಲದ ಭಕ್ತಿವಂಚನೆಯಿಲ್ಲದ ಮಹಾಂತರ ತೋಱಾ
ತನುಶುಚಿ ಮನಶುಚಿಗಳ ತೋಱಾ
ಇಂತಪ್ಪ ಶಿವಲಿಂಗೈಕ್ಯರ ತೋಱಿ ಬದುಕಿಸು
ಕೂಡಲ ಸಂಗಮದೇವಾ.

೧೦. ಕಾಮಸಂಗವಳಿದು ಅನುಭಾವ ಸಂಗದಲುಳಿದವರ ಅಗಲಲಾಱೆನು
ಶಿವಂಗೆ ಮಿಗೆ ಒಲಿದವರನು ನಾನಗಲಲಾಱೆನು ಕಾಣಾ
ಕೂಡಲ ಸಂಗಮದೇವಾ.

ಹೀಗೆ ಎಲ್ಲ ವಚನಗಳನ್ನು ತೋರಿಸಬಹುದು. ಇನ್ನು ಮುಂದೆ ವಚನ ಸಾಹಿತ್ಯವನ್ನು ಸಂಪಾದಿಸುವವರು ಈ ದೃಷ್ಟಿಯಿಂದ ಅಚ್ಚಿಸಿದರೆ, ಖುಷಿ ಬಂದ ಹಾಗೆ ಪಾದಗಳನ್ನು ವಿಭಾಗಿಸುವುದು ತಪ್ಪಿ ಒಂದು ಕ್ರಮ, ರೀತಿ ಬಂದು ವಚನಗಳು ವ್ಯವಸ್ಥಿತ ರೂಪವನ್ನು ಪಡೆಯುತ್ತವೆ. ಈ ಕ್ರಮತಪ್ಪಿ ಪಾದಗಳನ್ನು ಒಡೆದಿರುವುದಕ್ಕೆ ಈಗ ಅಧಿಕೃತವೆಂದು ತಿಳಿದ ಡಾ. ಆರ್. ಸಿ. ಹಿರೇಮಠರು ಸಂಪಾದಿಸಿದ 'ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು' ಎಂಬ ಗ್ರಂಥದಲ್ಲಿ ನೂರಾರು ನಿದರ್ಶನಗಳು ಸಿಕ್ಕುತ್ತವೆ. ನಿದರ್ಶನಕ್ಕೆ ಕೆಲವು ವಚನಗಳನ್ನು ನೋಡಬಹುದು:

೧. ಸಕಳ ನಿಷ್ಕಳವ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೆ ನಿಷ್ಕಳ ನೀನೆ ಕಂಡಯ್ಯಾ
'ವಿಶ್ವತಃ ಚಕ್ಷು' ನೀನೆ ದೇವಾ, 'ವಿಶ್ವತೋಮುಖ' ನೀನೆ ದೇವಾ
'ವಿಶ್ವತೋ ಬಾಹು' ನೀನೆ ದೇವಾ ಕೂಡಲ ಸಂಗಮದೇವಾ.

ಇಲ್ಲಿ 'ದೇವಾ' ಎಂಬುದು ಪುನರುಕ್ತಿಯಾಗಿ ಪಾದವನ್ನು ಬೇರೆ ಬೇರೆ ಘಟಕವಾಗಿ ಒಡೆಯಲು ಸೂಚಿಸುವುದು: ನಾನು ಈ ವಚನವನ್ನು ಹೀಗೆ ಬರೆಯುತ್ತೇನೆ:

ಸಕಳ ನಿಷ್ಕಳವ ಕೂಡಿಕೊಂಡಿಪ್ಪೆಯಾಗಿ
ಸಕಳ ನೀನೆ ನಿಷ್ಕಳ ನೀನೆ ಕಂಡಯ್ಯಾ
ವಿಶ್ವತಃ ಚಕ್ಷು ನೀನೆ **ದೇವಾ**

ವಿಶ್ವತೋಮುಖ ನೀನೆ **ದೇವಾ**
ವಿಶ್ವತೋ ಬಾಹು ನೀನೆ **ದೇವಾ**
ಕೂಡಲ ಸಂಗಮದೇವಾ.

೨. ಎತ್ತೆತ್ತ ನೋಡಿದಡತ್ತತ್ತ ನೀನೆ **ದೇವಾ**
ಸಕಲ ವಿಸ್ತಾರದ ರೂಹು ನೀನೆ **ದೇವಾ**
ವಿಶ್ವತಸ್ ಚಕ್ಷು ನೀನೆ **ದೇವಾ**
ವಿಶ್ವತೋಮುಖ ನೀನೆ **ದೇವಾ**
ವಿಶ್ವತೋ ಬಾಹು ನೀನೆ **ದೇವಾ**
ವಿಶ್ವತಃ ಪಾದ ನೀನೆ **ದೇವಾ ಕೂಡಲ ಸಂಗಮದೇವಾ.**

ನಾನು ಮೇಲೆ ಒಂದನೆಯ ನಿದರ್ಶನದಲ್ಲಿ ಹೇಳಿದ ಅಂಶವನ್ನು ಉಳಿದ ಪಂಕ್ತಿಗಳಲ್ಲಿ ಅನುಸರಿಸಿ ಡಾ. ಆರ್. ಸಿ. ಹಿರೇಮಠರು ಅನುಸರಿಸಿದ್ದಾರೆ. ಆದರೆ ಕೊನೆಯ ಪಾದದಲ್ಲಿ ಎಡವಿದ್ದಾರೆ, ನನ್ನ ದೃಷ್ಟಿಯಲ್ಲಿ ಆ ಕೊನೆಯ ಪಾದ ಎರಡು ಪಾದಗಳಾಗಿ ಒಡೆಯುತ್ತದೆ, 'ದೇವಾ' ಎಂಬ ಪ್ರಸರುಕ್ತಿ ಅದನ್ನು ನಿರ್ಣಯಿಸುತ್ತದೆ. ಕೊನೆಯ ಪಾದ ಹೀಗಾಗುತ್ತದೆ:

ವಿಶ್ವತಃ ಪಾದ ನೀನೆ **ದೇವಾ**
ಕೂಡಲ ಸಂಗಮ**ದೇವಾ**

೩. ನಿಮ್ಮ ಪಾಮಕ್ಷೇಮ ನಿಮ್ಮದಯ್ಯಾ
ನಿಮ್ಮ ಹಾನಿವೃದ್ಧಿ ನಿಮ್ಮದಯ್ಯಾ
ಎನ್ನ ಮಾನಾಪಮಾನ ನಿಮ್ಮದಯ್ಯಾ
ಬಳ್ಳಿಗೆ ಕಾಯಿ ದಿಮ್ಮಿತ್ತೆ, ಕೂಡಲ ಸಂಗಮದೇವಾ?

'ಬಳ್ಳಿಗೆ ಕಾಯಿ ದಿಮ್ಮಿತ್ತೆ' ಎಂಬುದು ಪ್ರತ್ಯೇಕ ಘಟಕವಾಗುವುದರಿಂದ ಕೊನೆಯ ಪಾದವನ್ನು ಹೀಗೆ ವಿಭಾಗಿಸಬೇಕು:

ಬಳ್ಳಿಗೆ ಕಾಯಿ ದಿಮ್ಮಿತ್ತೆ
ಕೂಡಲ ಸಂಗಮದೇವಾ?

೪. ಅಯ್ಯಾ ಅಯ್ಯಾ ಎಂದು ಕರೆವುತ್ತಲಿದ್ದೇನೆ
ಅಯ್ಯಾ ಅಯ್ಯಾ ಎಂದು ಒಱಲುತ್ತಲಿದ್ದೇನೆ
ಓ ಎನ್ನಲಾಗದೇ ಅಯ್ಯಾ?
ಆಗಳೂ ನಿಮ್ಮ ಕರೆವುತ್ತಲಿದ್ದೇನೆ
ಮೌನವೇ, ಕೂಡಲ ಸಂಗಮದೇವಾ?

ಇಲ್ಲಿಯೂ ಕೊನೆಯ ಸಾಲು ಎರಡಾಗಿ ಒಡೆಯುವುದು, ಮೌನವೇ, ಎಂಬುದು ಒಂದು

ಘಟಕ; ಕೂಡಲ ಸಂಗಮದೇವಾ ಎಂಬುದು ಇನ್ನೊಂದು ಘಟಕ ಆಗ ಆ ಸಾಲು ಹೀಗಾಗುವುದು:

ಮೌನವೇ,
ಕೂಡಲ ಸಂಗಮದೇವಾ.

೫. ವಿಷಯವೆಂಬ ಹಸುರನೆನ್ನ ಮುಂದೆ ತಂದು ಪಸರಿಸಿದೆಯಯ್ಯಾ
ಪಶುವೇನ ಬಲ್ಲುದು, ಹಸುರೆಂದೆಳಸುವುದು
ವಿಷಯ ರಹಿತನ ಮಾಡಿ, ಭಕ್ತಿರಸವ ದಣಿಯೆ ಮೇಯಿಸಿ
ಸುಬುದ್ಧಿಯೆಂಬ ಉದಕವ ನೆಱೆದು
ನೋಡಿ ಸಲಹಯ್ಯಾ, ಕೂಡಲ ಸಂಗಮದೇವಾ,

ಇಲ್ಲಿ ಕೊನೆಯ ಸಾಲು ಹೀಗೆ ಆಗಿ ಒಡೆಯುತ್ತದೆ:

ನೋಡಿ ಸಲಹಯ್ಯಾ
ಕೂಡಲ ಸಂಗಮದೇವಾ.

೬. ಕೆಸರಲ್ಲಿ ಬಿದ್ದ ಬಡಪಶುವಿನಂತೆ
ಆನು ಪಸೆಪಸೆಗೆ ಬಾಯಿ ಬಿಡುತ್ತಿದ್ದೆನಯ್ಯಾ
ಆರಯ್ವರಿಲ್ಲ ಅಕಟಕಟ ಪಶುವೆಂದೆನ್ನ
ಕೂಡಲ ಸಂಗಮದೇವ ಕೊಂಬ ಹಿಡಿದೆತ್ತುವನ್ನಕ್ಕ.

ಇಲ್ಲಿ ಕೊನೆಯ ಸಾಲು ಹೀಗಾಗಬೇಕು:

ಕೂಡಲ ಸಂಗಮದೇವ
ಕೊಂಬ ಹಿಡಿದೆತ್ತುವನ್ನಕ್ಕ.

೭. ಬೆಳೆವ ಭೂಮಿಯಲೊಂದು ಪ್ರಳಯದ ಕಸಹುಟ್ಟಿ
ತಿಳಿಯಲೀಯದು ಎಚ್ಚರಲೀಯದು,
ಎನ್ನವ ಗುಣವೆಂಬ ಕಸವ ಕಿತ್ತು ಸಲಹಯ್ಯಾ ಲಿಂಗತಂದೆ
ಸುಳಿದೆಗೆದು ಬೆಳೆವೆನು ಕೂಡಲ ಸಂಗಮದೇವಾ.

ಇಲ್ಲಿ ಕೊನೆಯ ಸಾಲು ಎರಡಾಗಿ ಒಡೆದು ಹೀಗಾಗಬೇಕು:

ಸುಳಿದೆಗೆದು ಬೆಳೆವೆನು
ಕೂಡಲ ಸಂಗಮದೇವಾ.

೮. ಆನು ಒಬ್ಬನು ಸುಡುವರೈವರು
ಮೇಲೆ ಕಿಚ್ಚು ಘನ; ನಿಲಲು ಬಾರದು!
ಕಾಡ ಬಸವನ ಹುಲಿ ಕೊಂಡಗೆಯ್ವಡೆ
ಅರಯ್ಯಲಾಗದೆ, ಕೂಡಲ ಸಂಗಮದೇವಾ?

ಇಲ್ಲಿ ಕೊನೆಯ ಸಾಲು ಹೀಗಾಗಬೇಕು:

ಆರಯ್ಯಲಾಗದೆ,
ಕೂಡಲ ಸಂಗಮದೇವಾ?

೯. ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದುಕಳೆಯಯ್ಯಾ
ಅದೇಕೆಂದಡೆ:
ನಿಮ್ಮತ್ತಲೆನ್ನ ಬರಲೀಯವು.
ಇದು ಕಾರಣ, ಇವೆಲ್ಲವ ಕಳೆದು
ಎನ್ನ ಪಂಚೈವರ ಭಕ್ತರ ಮಾಡು ಕೂಡಲ ಸಂಗಮದೇವಾ,
ಇಲ್ಲಿ ಕೊನೆಯ ಸಾಲು ಎರಡಾಗಿ ಒಡೆದು ಹೀಗಾಗಬೇಕು:

ಎನ್ನ ಪಂಚೈವರ ಭಕ್ತರಮಾಡು
ಕೂಡಲ ಸಂಗಮದೇವಾ.

೧೦. ಒಂದು ಮೊಲಕ್ಕೆ ನಾಯನೊಂಬತ್ತು ಬಿಟ್ಟಂತೆ
ಎನ್ನಬಿಡು, ತನ್ನಬಿಡು ಎಂಬುದು ಕಾಯವಿಕಾರ
ಎನ್ನಬಿಡು, ತನ್ನಬಿಡು ಎಂಬುದು ಮನೋವಿಕಾರ
ಕರಣೇಂದ್ರಿಯಂಗಳೆಂಬ ಸೋಣಗ ಮುಟ್ಟದ ಮುನ್ನ
ಮನ ನಿಮ್ಮನೈದುಗೆ, ಕೂಡಲ ಸಂಗಮದೇವಾ.

ಇಲ್ಲಿಯೂ ಕೊನೆಯ ಸಾಲು ಎರಡಾಗಿ ಒಡೆದು ಹೀಗಾಗಬೇಕು:

ಮನ ನಿಮ್ಮನೈದುಗೆ
ಕೂಡಲ ಸಂಗಮದೇವಾ.

ಇಂಥ ನೂರಾರು ಉದಾಹರಣೆಗಳನ್ನು ಡಾ. ಆರ್. ಸಿ. ಹಿರೇಮಠರ ಗ್ರಂಥದಿಂದ ತೋರಿಸಬಹುದು. ಪಾದಪಾದವಾಗಿ ಮಾಡುವಾಗ ಯಾವುದಾದರೂ ಒಂದು ಕ್ರಮ ಆವಶ್ಯಕ; ಖುಷಿ ಬಂದ ಹಾಗೆ ಪಾದಗಳನ್ನೊಡೆದರೆ ಒಬ್ಬೊಬ್ಬ ಸಂಪಾದಕನಿಗೆ ಒಂದೊಂದು ರೀತಿಯಲ್ಲಿ ವಚನದ ರೂಪಾಂಶ ಬೇರೆ ಬೇರೆಯಾಗಬಹುದು; ಈಗಾಗಲೇ ಹಾಗೆ ಆಗಿದೆ ಎಂಬುದು ನಮ್ಮ ಆಕ್ಷೇಪ. ಒಂದೇ ಶಬ್ದ ಒಂದೊಂದು ವಚನದಲ್ಲಿ ಒಂದೊಂದು ರೀತಿಯಲ್ಲಿ ಬಂದಿರುವುದಕ್ಕೆ ನಿದರ್ಶನಗಳನ್ನು ನೋಡಿರಿ; ಇದಕ್ಕೆ 'ಕೂಡಲ ಸಂಗಮದೇವಾ' ಎಂಬ ಘಟಕ ಕೆಲವು ಕಡೆ ಸರಿಯಾಗಿ ಒಂದು ಪಾದವಾಗಿಯೂ, ಹಲವು ಕಡೆ ಇನ್ನೊಂದು ಪಾದದೊಡನೆ ಬೆರೆತೂ ಬಂದಿರುವುದು ಒಳ್ಳೆಯ ನಿದರ್ಶನ. ಪಾದಗಳನ್ನು

ಒಡೆದರೆ ಒಂದು ಕ್ರಮಕ್ಕೆ, ರೀತಿಗೆ, ಶಿಸ್ತಿಗೆ ಬದ್ಧರಾಗಿ ಒಡೆಯಬೇಕು. ಇಲ್ಲದಿದ್ದರೆ, ಹಸ್ತಪ್ರತಿಯಲ್ಲಿದ್ದ ಹಾಗೆ ಉದ್ದಕ್ಕೆ ಬರೆದರೆ ಸಂಪಾದಕರ ತಪ್ಪಾಗುವುದಿಲ್ಲ.

೨

ಇಲ್ಲಿಯ ಎಲ್ಲ ನಿದರ್ಶನಗಳನ್ನು ಡಾ. ಆರ್. ಸಿ. ಹಿರೇಮಠರ 'ಭಕ್ತಿ ಭಂಡಾರಿ ಬಸವಣ್ಣನವರ ವಚನಗಳು' ಎಂಬ ಗ್ರಂಥದಿಂದ ಆರಿಸಿಕೊಂಡಿದ್ದೇನೆ. ಈ ಗ್ರಂಥವನ್ನು ಸಂಪಾದಿಸುವಲ್ಲಿ ಅವರು ತಮಗಿಂತ ಹಿಂದೆ ಸಂಪಾದಿಸಿದ ಅನೇಕ ಎಲ್ಲ ಸಂಪಾದನೆಯನ್ನು ಪರಿಶೀಲಿಸಿದ್ದಾರೆ. ಆದುದರಿಂದ ಅವರ ಸಂಪಾದನ ಕ್ರಮವನ್ನು ಟೀಕಿಸುವುದು ನಮ್ಮ ಉದ್ದೇಶವಲ್ಲ. ವಚನದ ರೂಪಾಂಶಕ್ಕನುಗುಣವಾಗಿ ನಾವು ವಚನಗಳನ್ನು ಅಚ್ಚಿಸುವುದಾದಲ್ಲಿ ಅದಕ್ಕೊಂದು ವ್ಯವಸ್ಥಿತವಾದ ರೀತಿಯುಂಟು ಎಂದು ಹೇಳುವುದೂ, ಹಾಗೆ ಹೇಳಿದುದನ್ನು ತೋರಿಸಿಕೊಡುವುದೂ ನಮ್ಮ ಉದ್ದೇಶ. ಎಲ್ಲ ವಚನಗಳನ್ನೂ ಸಮಾನ ರೀತಿಯಲ್ಲಿ ಅಚ್ಚಿಸಬೇಕೆಂಬುದು ನಮ್ಮ ಉದ್ದೇಶ. ಡಾ. ಆರ್.ಸಿ. ಹಿರೇಮಠರೂ, ಇತರರೂ ಅಚ್ಚಿಸಿದಂತೆ ಒಂದೊಂದು ವಚನಕ್ಕೆ ಒಂದೊಂದು ಕ್ರಮವಲ್ಲ! ಇಲ್ಲಿ ಇತರ ವಚನಕಾರರ ವಚನಗಳನ್ನು ಬೇರೆ ಬೇರೆ ಸಂಪಾದಕರು ಹೇಗೆ ಸಂಪಾದಿಸಿದ್ದಾರೆ ಎಂಬುದನ್ನು ಹೇಳಿಲ್ಲ. ಅದನ್ನೂ ಮಾಡಿದಲ್ಲಿ ಅದೇ ಒಂದು ಗ್ರಂಥವಾಗಬಹುದೋ ಏನೋ! ಈ ಕೆಳಗಿನ ವಚನಗಳನ್ನು ನೋಡಿರಿ:

೧. ಶಿವನೆ ಜಗತ್ರಯಕ್ಕೊಡೆಯನೆಂದುದು ವೇದ
ಉತ್ಪತ್ತಿ ಸ್ಥಿತಿ ಲಯಕಾರಣನೆಂದುದು ವೇದ
"ಈಶಃ ಸರ್ವಸ್ಯ ಜಗತಃ ಪ್ರಭುಃ ಪ್ರೇರಕೋ ವಿಶ್ವಭುಕ್" ಎಂಬ ಶ್ರುತಿ.
ಇದು ಕಾರಣ,
ಕೂಡಲ ಸಂಗಮದೇವನೊಬ್ಬನೇ ದೇವನು.

೨. ಮರಗಿಡಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿದು ತರಿದು
ಪ್ರಾಣವ ಕೊಂಡುಂಡು, ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,
ಕೂಡಲಸಂಗಶರಣರು ಲಿಂಗಕ್ಕರ್ಪಿಸಿ, ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು.

೩. ಜಂಗಮವೆ ತನ್ನ ಪ್ರಾಣಲಿಂಗವೆಂದರಿದ ಸದ್ಭಕ್ತಂಗೆ
ಜಂಗಮದ ಪ್ರಸಾದವಿಲ್ಲದೆ ಲಿಂಗಪ್ರಸಾದವ ಕೊಳಲಾಗದು.

ಜಂಗಮದ ಪ್ರಸಾದವನು ಲಿಂಗಕ್ಕೆ ಸಲ್ಲದೆಂದು ಶಂಕಿಸಲಾಗದು.
ಅದೆಂತೆಂದಡೆ, ವೀರಾಗಮದಲ್ಲಿ:
ಜಂಗಮಾದಿ ಗುರೂಣಾಂ ಚ ಅನಾದಿ ಸ್ವಯಲಿಂಗವತ್
ಆದಿ ಪ್ರಸಾದ ವಿರೋಧೇ ಇಷ್ಟೋಚ್ಛಿಷ್ಟಂ ತು ಕಿಲ್ಬಿಷಂ ‖ ಎಂದುದಾಗಿ
ಪ್ರಾಣಭಾವದಲ್ಲಿ ಸಂಬಂಧವಾಗಿ ಇಷ್ಟಕ್ಕೂ ಸಂದಿತ್ತು.
ಈ ಭೇದವನಱಿದು ಜಂಗಮದ ಪ್ರಸಾದವಿಲ್ಲದೆ
ಲಿಂಗದ ಪ್ರಸಾಸದವ ಕೊಳಲಾಗದು ವೀರಮಾಹೇಶ್ವರರು
ಕೂಡಲ ಸಂಗಮದೇವಾ.

೪. ರಂಗವಾಲೆಯೆಂದಡೆ ಅಂಗವಿಸವಯ್ಯಾ ಎನ್ನ ಮನವು
ಷಡುಸಮ್ಮಾರ್ಜನೆಯೆಂದಡೆ ಸೊಗಸವಯ್ಯಾ ಎನ್ನ ಮನಕ್ಕೆ.
ಅದೇನು ಕಾರಣವೆಂದಡೆ: ಭಕ್ತರಂಗಳ ಪಾದಗಾಹಿಯೆಂದುದಾಗಿ.
ತಾ ಹುಟ್ಟಿ ತಮ್ಮವ್ವೆಯ ಬಂಜೆಯೆನ್ನಬಹುದ
ಕೂಡಲ ಸಂಗಮದೇವಾ.

೫. ಭಕ್ತಿಯೆಂಬ ಪಿತ್ತ ತಲೆಗೇಱಿ ಕೈಲಾಸದ ಬಟ್ಟೆಯ ಹತ್ತುವ ವ್ಯರ್ಥರ ಕಂಡು
ಎನ್ನ ಮನ ನಾಚಿತ್ತು, ನಾಚಿತ್ತು.
ಕೈಲಾಸವೆಂಬುದೇನೋ, ಪೃಥ್ವಿಯ ಮೇಲೊಂದು ಮೊರಡಿ.
ಆ ಪೃಥ್ವಿಗೆ ಲಯವುಂಟು, ಆ ಮೊರಡಿಗೆಯು ಲಯವುಂಟು
ಅಲ್ಲಿರ್ಪ ಗಂಗೆವಾಳುಕ ಸಮರುದ್ರರಿಗೂ ಲಯವುಂಟು.
ಇದು ಕಾರಣ,
"ಯದ್ದೃಷ್ಟಂ ತನ್ನಷ್ಟಂ" ಎಂಬ ಶ್ರುತಿಯ ನೋಡಿ ತಿಳಿದು
ಬಟ್ಟಬಯಲ ತುಟ್ಟತುದಿಯ ಮೆಟ್ಟಿನಿಂದ
ಕೂಡಲಸಂಗಾ ನಿಮ್ಮ ಶರಣ.

೬. ಜಗತ್ರಯದ ಹೊಲೆಯನೆಲ್ಲವನು ಉದಕವೊಳಕೊಂಬುದು
ಉದಕದ ಪೂರ್ವಾಶ್ರಯವ ಕಳೆವಡಾರಳವಲ್ಲ.

ಅದೆಂತೆಂದಡೆ,
ಯಥಾ ಪೃಥ್ವೀ ಸ್ಮಶಾನಂ ಚ ತಥಾ ಜಲ ಮಲಿರ್ನ ಕಂ
ಮಹಾಲಿಂಗಂ ತು ಪೂಜಾನಾಂ ವಿಶೇಷಂ ಪಾಕಸುಭವೇತ್ ‖ ಎಂದುದಾಗಿ,
ಅದಕ್ಕೆ ಮತ್ತೆಯೂ,
ಪ್ರಥಮಂ ಮಾಂಸ ತೋಯಾನಾಂ ದ್ವಿತೀಯಂ ಮಾಂಸ ಗೋರಸಃ
ತೃತೀಯಂ ಮಾಂಸ ನಾರೀಣಾಂ ಕಸ್ಯ ಶೀಲಂ ವಿಧೀಯತೇ ‖ ಎಂದುದಾಗಿ,
ಇಂತಹ ಉದಕದಿಂದಲಿ ಅಗ್ನಿಯಿಂದಲಿ ಪಾಕವಾದ ದ್ರವ್ಯ ಪದಾರ್ಥಂಗಳೆಲ್ಲವು

ಜೀವಮಯವೆಂದು ಹೇಳುತ್ತಿದ್ದವಾಗಿ,
ಆ ದೋಷದಿಂದಲಾದ ಬೋನವನು ಲಿಂಗಕ್ಕೆ ಸಮರ್ಪಿಸಲಾಗದು.
ಅದೆಂತೆಂದಡೆ,
ಭೂಮಿ ದ್ರವ್ಯ ಯಥಾ ಮಾಂಸ ಪ್ರಾಣಿದ್ರವ್ಯ ಯಥಾ ಮಧುಃ
ಸರ್ವಭೂತಮಯಂ ಜೀವಂ ಜೀವಂ ಜೀವೇನ ಭಕ್ಷಿತಂ ॥ ಎಂದುದಾಗಿ,
ಇಂತಹ ಉದಕದ ಪೂರ್ವಾಶ್ರಯವು ಬೋನದ ಪೂರ್ವಾಶ್ರಯವು
ಹೇಗೆ ಹೋಹುದಯ್ಯಾ ಎಂದಡೆ:
ಉದಕದ ಪೂರ್ವಾಶ್ರಯವು ಜಂಗಮದ ಪಾದತೀರ್ಥ ಮುಖದಿಂದ ಹೋಯಿತ್ತು
ಬೋನದ ಪೂರ್ವಾಶ್ರಯವು ಜಂಗಮದ ಪ್ರಸಾದ ಮುಖದಿಂದ ಹೋಯಿತ್ತು.
ಇದುಕಾರಣ, ಈ ವರ್ಮ ಸಕೀಲವು ಪ್ರಭುದೇವರವಳಿ
ಬಸವಣ್ಣನ ವಂಶಕ್ಕಲ್ಲದೆ ಮತ್ತಾರಿಗೂ ಅಳವಡದು ಕಾಣಾ
ಕೂಡಲ ಸಂಗಮದೇವಾ.

ಮೇಲಿನ ವಚನಗಳಲ್ಲಿ ಅದೆಂತೆಂದಡೆ, ಇದು ಕಾರಣ, ಅದು ಕಾರಣ, ಅದೇನು ಕಾರಣ ವೆಂದಡೆ, ಇಂತೆಂದುದಾಗಿ, ಏನು ಕಾರಣ, ಹಂಗುಪರಿಯಿಲ್ಲದ ಕಾರಣ, ಎಂದುದಾಗಿ, ಎಂಬ ಮಾತುಗಳು ಒಂದು ಪಂಕ್ತಿಯಾಗಿ ಬರಬೇಕು. ಆದರೆ ಎಲ್ಲ ವಚನಗಳಲ್ಲಿ ಸಮಾನ ವಾಗಿ ಅವುಗಳನ್ನು ಒಂದು ಪಂಕ್ತಿಯಲ್ಲಿ ಕೊಟ್ಟಿಲ್ಲದಿರುವುದೂ ವಚನದ ರೂಪಾಂಶದ ಪ್ರಜ್ಞೆಯಿಲ್ಲದೆ ಸಂಪಾದಿಸಿದ ರೀತಿಗೆ ನಿದರ್ಶನ. ಈ ಮಾತುಗಳು ವಚನ ಸಂಖ್ಯೆ ೪, ೪೬, ೨೦೩, ೨೧೯. ೨೨೪, ೨೪೨, ೩೯೬, ೩೯೯, ೪೧೧, ೪೫೫, ೪೬೯, ೫೫೦, ೫೮೬, ೫೮೯, ೫೯೨, ೬೭೪, ೭೨೯, ೭೬೬, ೮೧೫, ೮೧೯, ೮೮೨, ೯೭೨, ೯೯೫, ೧೦೨೦, ೧೦೩೪, ೧೦೩೬, ೧೦೪೦, ೧೦೪೧, ೧೦೮೫, ೧೨೧೪, ೧೨೧೫, ೧೨೧೯, ೧೨೨೦, ೧೨೭೫ಗಳಲ್ಲಿ ಖುಷಿ ಬಂದ ಹಾಗೆ ಕೆಲವಲ್ಲಿ ಬಿಡಿಸಿಯೂ, ಕೆಲವಲ್ಲಿ ಬೇರೆ ಪಾದದೊಟ್ಟಿಗೂ ಪ್ರಯುಕ್ತವಾದುದು ಕಂಡುಬರುತ್ತದೆ. ಇವನ್ನು ಪ್ರತ್ಯೇಕ ಪಾದವಾಗಿ ಮಾಡುವುದು ಸೂಕ್ತ. ಇಲ್ಲದಿದ್ದರೆ ಒಂದೊಂದು ವಚನವನ್ನು ಪಾದಗಳಾಗಿ ವಿಭಾಗಿಸದೆ ಉದ್ದಕ್ಕೆ ಬರೆಯುತ್ತ ಹೋಗಲಿ; ಆಗ ಈ ಸಮಸ್ಯೆಯೇ ಇಲ್ಲ!

೩

ವಚನ ಸಾಹಿತ್ಯದ ಲಯ, ಪಾದ ವಿಭಾಗ ಸ್ಪಷ್ಟವಾಗಿ ಗೋಚರಿಸುತ್ತದೆ ಎಂಬುದಕ್ಕೆ ಮೊದಲನೆಯ ವಚನ ಸಾಕ್ಷಿ; ಇದರ ಪಾದವಿಭಾಗ ಸರಿಯಾಗಿದೆ. ಇಲ್ಲಿ 'ಇದ್ದಿತ್ತು' ಎಂಬ ಪುನರುಕ್ತಿಯ ಘಟಕ ಪಾದವನ್ನು ನಿರ್ಣಯಿಸುತ್ತದೆ:

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿ**ನಂತಿದ್ದಿತ್ತು**
ಸಸಿಯೊಳಗಣ ರಸದ ರುಚಿ**ಯಂತಿದ್ದಿತ್ತು**

ನನೆಯೊಳಗಣ ಪರಿಮಳ**ದಂತಿದ್ದಿತ್ತು**
ಕೂಡಲ ಸಂಗಮದೇವರ ನಿಲವು
ಕನ್ನೆಯ ಸ್ನೇಹ**ದಂತಿದ್ದಿತ್ತು**

ಆದರೆ ಮಾನ್ಯ ಸಂಪಾದಕರು ಎಲ್ಲ ವಚನಗಳನ್ನು ಅವುಗಳ ರೂಪಾಂಶದ ಪ್ರಜ್ಞೆಯಿಂದ ಪಾದ ವಿಭಾಗವನ್ನು ಸಮರ್ಪಕವಾಗಿ ಮಾಡಿಲ್ಲ. ಅಂಥ ನೂರಾರು ಉದಾಹರಣೆಗಳನ್ನು ಇಲ್ಲಿ ಕೊಡಬಹುದಾದರೂ ಮುಖ್ಯವಾದ ಕೆಲವು ನಿದರ್ಶನಗಳನ್ನು ನೋಡೋಣ:

೧. ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲಹತ್ತಿ ಉರಿದಡೆ ನಿಲಲುಬಹುದೆ?
ಏರಿ **ನೀರುಂಬಡೆ** ಬೇಲಿಕೆಯ್ಯ **ಮೇವಡೆ**
ನಾರಿ ತನ್ನ ಮನೆಯಲ್ಲಿ **ಕಳುವಡೆ**
ತಾಯ ಮೊಲೆವಾಲು ನಂಜಾಗಿ **ಕೊಲುವಡೆ**
ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ.

ಇಲ್ಲಿ ದಪ್ಪಕ್ಷರದ ಶಬ್ದಗಳು ಪಾದ ವಿಭಾಗವನ್ನು ನಿರ್ಧರಿಸುವುವು. ಈ ವಚನವು ರೂಪಾಂಶದ ದೃಷ್ಟಿಯಿಂದ ಹೀಗಾಗಬೇಕು:

ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲಹತ್ತಿ ಉರಿದಡೆ ನಿಲಲುಬಹುದೆ?
ಏರಿ **ನೀರುಂಬಡೆ**
ಬೇಲಿ ಕೆಯ್ಯ **ಮೇವಡೆ**
ನಾರಿ ತನ್ನ ಮನೆಯಲ್ಲಿ **ಕಳುವಡೆ**
ತಾಯ ಮೊಲೆವಾಲು ನಂಜಾಗಿ **ಕೊಲುವಡೆ**
ಇನ್ನಾರಿಗೆ ದೂರುವೆನಯ್ಯಾ
ಕೂಡಲಸಂಗಮದೇವಾ.

೨. ಒಲವಿಲ್ಲದ ಪೂಜೆ ನೇಹವಿಲ್ಲದ ಮಾಟ
ಆ ಪೂಜೆಯು ಆ ಮಾಟವು **ಚಿತ್ರದ ರೂಹು ಕಾಣಿರಣ್ಣಾ**
ಚಿತ್ರದ ಕಬ್ಬು ಕಾಣಿರಣ್ಣಾ
ಅಪ್ಪಿದಡೆ ಸುಖವಿಲ್ಲ ಮೆಲಿದಡೆ ರುಚಿಯಿಲ್ಲ.
ಕೂಡಲ ಸಂಗಮದೇವಾ ನಿಜವಿಲ್ಲದವನ ಭಕ್ತಿ!

ಇಲ್ಲಿ 'ಚಿತ್ರದ ಕಬ್ಬು ಕಾಣಿರಣ್ಣಾ, ಚಿತ್ರದ ರೂಹು ಕಾಣಿರಣ್ಣಾ' ಎಂಬಿವು ಬೇರೆ ಬೇರೆ ಪಾದಗಳು ಎಂಬುದು ತಿಳಿಯುತ್ತದೆ. 'ಇಲ್ಲ' ಎಂಬ ಪುನರುಕ್ತಿ ಆ ಸಾಲನ್ನು ಒಡೆಯಲು ಹೇಳುತ್ತವೆ. 'ಕೂಡಲಸಂಗಮದೇವಾ' ಎಂಬುದು ಒಂದು ಘಟಕ ಎಂಬುದನ್ನು ಹಿಂದೆಯೇ ನೋಡಿದ್ದೇವೆ. ಈಗ ವಚನದ ರೂಪಾಂಶ ಹೀಗಾಗುವುದು:

ಒಲವಿಲ್ಲದ ಪೂಜೆ ನೇಹವಿಲ್ಲದ ಮಾಟ
ಆ ಪೂಜೆಯು ಆ ಮಾಟವು
ಚಿತ್ರದ ರೂಹು **ಕಾಣಿರಣ್ಣಾ**
ಚಿತ್ರದ ಕಬ್ಬು **ಕಾಣಿರಣ್ಣಾ**
ಅಪ್ಪಿದಡೆ ಸುಖವಿಲ್ಲ,
ಮೆಲಿದಡೆ ರುಚಿಯಿಲ್ಲ;
ಕೂಡಲ ಸಂಗಮದೇವಾ,
ನಿಜವಿಲ್ಲದವನ ಭಕ್ತಿ!

೩. ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ **ನೋಯಿತ್ತು,**
ಕೊಂದಪರೆಂಬುದನರಿಯದೆ
ಬೆಂದ ಒಡಲ ಹೊರೆಯ **ಹೋಯಿತ್ತು.**
ಅಂದಂದೆ **ಹುಟ್ಟಿತ್ತು** ಅಂದಂದೆ **ಹೊಂದಿತ್ತು**
ಕೊಂದವರುಳಿದರೆ, ಕೂಡಲಸಂಗಮದೇವಾ?

ಹುಟ್ಟಿತ್ತು, ಹೊಂದಿತ್ತು-ಎಂಬಿವು ಅವೆರಡು ಬೇರೆ ಬೇರೆ ಸಾಲಾಗಬೇಕೆಂದು ಹೇಳುತ್ತವೆ. 'ಕೂಡಲಸಂಗಮದೇವಾ' ಎಂಬುದು ಪ್ರತ್ಯೇಕ ಘಟಕ ಎಂಬುದನ್ನು ಹಿಂದೆಯೇ ನೋಡಿದ್ದೇವೆ. ಈಗ ಈ ವಚನದ ರೂಪ ಹೀಗಾಗುತ್ತದೆ:

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ **ನೋಯಿತ್ತು,**
ಕೊಂದಪರೆಂಬುದನರಿಯದೆ
ಬೆಂದ ಒಡಲ ಹೊರೆಯ **ಹೋಯಿತ್ತು.**
ಅಂದಂದೆ **ಹುಟ್ಟಿತ್ತು,**
ಅಂದಂದೆ **ಹೊಂದಿತ್ತು**
ಕೊಂದವರುಳಿದರೆ,
ಕೂಡಲ ಸಂಗಮದೇವಾ?

೪. ಹಾವು ತಿಂದವರ ನುಡಿಸಬಹುದು
ಗರಹೊಡೆದವರ ನುಡಿಸಬಹುದು
ಸಿರಿಗರಹೊಡೆದವರ ನುಡಿಸಲು ಬಾರದು ನೋಡಯ್ಯಾ!
ಬಡತನವೆಂಬ ಮಂತ್ರವಾದಿ **ಹೊಗಲೊಡನೆ**
ನುಡಿವರಯ್ಯಾ, ಕೂಡಲಸಂಗಮದೇವಾ!

ಇಲ್ಲಿಯ ಕೊನೆಯ ಎರಡು ಸಾಲು ಅಸ್ತವ್ಯಸ್ತವಾಗಿವೆ. 'ಬಡತನವೆಂಬ ಮಂತ್ರವಾದಿ ಹೊಗಲು ಒಡನೆ ನುಡಿವರಯ್ಯಾ' ಎಂಬ ಅರ್ಥ 'ಹೊಗಲೊಡನೆ' ಎಂಬುವನ್ನೂ 'ನುಡಿವರಯ್ಯಾ' ಎಂಬುದನ್ನೂ ಬೇರೆ ಬೇರೆ ಪಾದಗಳಾಗಿ ಒಡೆದಾಗ ಉಂಟಾಗುವುದಿಲ್ಲ! 'ಕೂಡಲಸಂಗಮದೇವಾ' ಎಂಬುದು ಒಂದು ಪಾದದ ಘಟಕವಾದುದರಿಂದಲೂ 'ನುಡಿವರಯ್ಯಾ' ಎಂಬುದು ಹಿಂದಿನ ಪಾದಕ್ಕೆ ಹೋಗಬೇಕು. ಕೊನೆಯ ಎರಡು ಪಾದಗಳು ಹೀಗಾಗುತ್ತವೆ:

ಬಡತನವೆಂಬ ಮಂತ್ರವಾದಿ ಹೊಗಲೊಡನೆ ನುಡಿವರಯ್ಯಾ
ಕೂಡಲಸಂಗಮದೇವಾ!

ಈಗ ಅರ್ಥಕ್ಕೂ ಚ್ಯುತಿ ಬರಲಿಲ್ಲ. ವಚನದ ರೂಪಾಂಶವೂ ಸರಿಯಾಯಿತು!

೫. ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ **ಮುನ್ನ,**
ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ **ಮುನ್ನ,**
ಕಾಲ ಮೇಲೆ ಕೈಯನೂರಿ ಕೋಲ ಹಿಡಿಯದ **ಮುನ್ನ,**
ಮುಪ್ಪಿಂದೊಪ್ಪವಳಿಯದ **ಮುನ್ನ,** ಮೃತ್ಯು ಮುಟ್ಟದ **ಮುನ್ನ**
ಪೂಜಿಸು ಕೂಡಲಸಂಗಮದೇವನ.

ಇಲ್ಲಿ 'ಮುನ್ನ' ಎಂಬ ಪುನರುಕ್ತಿ ಪಾದ ವಿಭಾಗವನ್ನು ಸೂಚಿಸುವುದು. ಅದರಿಂದ ನಾಲ್ಕನೆಯ ಪಂಕ್ತಿಯನ್ನು ಎರಡು ಸಾಲಾಗಿ ಒಡೆಯಬೇಕು. ಆಗ ಅದು ಹೀಗಾಗುತ್ತದೆ:

ನರೆ ಕೆನ್ನೆಗೆ, ತೆರೆ ಗಲ್ಲಕೆ, ಶರೀರ ಗೂಡುವೋಗದ **ಮುನ್ನ**
ಹಲ್ಲು ಹೋಗಿ ಬೆನ್ನು ಬಾಗಿ ಅನ್ಯರಿಗೆ ಹಂಗಾಗದ **ಮುನ್ನ**
ಕಾಲಮೇಲೆ ಕೈಯನೂರಿ ಕೋಲ ಹಿಡಿಯದ **ಮುನ್ನ**
ಮುಪ್ಪಿದೊಪ್ಪವಳಿಯದ **ಮುನ್ನ**
ಮೃತ್ಯು ಮುಟ್ಟದ **ಮುನ್ನ**
ಪೂಜಿಸು ಕೂಡಲ ಸಂಗಮ**ದೇವನ.**

೬. ಶಾಸ್ತ್ರ ಘನ**ವೆಂಬೆನೆ?** ಕರ್ಮವ ಭಜಿಸುತ್ತಿದೆ!
ವೇದ ಘನ**ವೆಂಬೆನೆ?** ಪ್ರಾಣಿವಧೆಯ ಹೇಳುತ್ತಿದೆ!
ಶ್ರುತಿ ಘನ**ವೆಂಬೆನೆ?** ಮುಂದಿಟ್ಟರಸುತ್ತಿದೆ!
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು **ಕೂಡಲ ಸಂಗಮದೇವನ.**

ಈ ವಚನವನ್ನು ರೂಪಾಂಶದ ದೃಷ್ಟಿಯಿಂದ ಹೀಗೆ ಬರೆಯಬೇಕು:

ಶಾಸ್ತ್ರ **ಘನವೆಂಬೆನೆ?**
ಕರ್ಮವ **ಭಜಿಸುತ್ತಿದೆ!**

ವೇದ **ಘನವೆಂಬೆನೆ?**
ಪ್ರಾಣವಧೆಯ **ಹೇಳುತ್ತಿದೆ!**
ಶ್ರುತಿ **ಘನವೆಂಬೆನೆ?**
ಮುಂದಿಟ್ಟರ**ಸುತ್ತಿದೆ!**
ಅಲ್ಲೆಲ್ಲಿಯೂ ನೀವಿಲ್ಲದ ಕಾರಣ,
ತ್ರಿವಿಧ ದಾಸೋಹದಲ್ಲಲ್ಲದೆ ಕಾಣಬಾರದು
ಕೂಡಲ ಸಂಗಮದೇವನ!

೭. ಕಳ**ಬೇಡ,** ಕೊಲ**ಬೇಡ,** ಹುಸಿಯ ನುಡಿಯಲು**ಬೇಡ**
ಮುನಿಯ**ಬೇಡ,** ಅನ್ಯರಿಗೆ ಅಸಹ್ಯ ಪಡ**ಬೇಡ**
ತನ್ನ ಬಣ್ಣಿಸ**ಬೇಡ,** ಇದಿರ ಹಳಿಯಲು**ಬೇಡ**
ಇದೇ ಅಂತರಂಗ **ಶುದ್ಧಿ, ಇದೇ** ಬಹಿರಂಗ **ಶುದ್ಧಿ**
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

ಬೇಡ, ಇದೇ, ಶುದ್ಧಿ ಎಂಬ ಪುನರುಕ್ತಿಗಳು ಇಲ್ಲಿ ಪಾದ ವಿಭಾಗವನ್ನು ನಿರ್ಣಯಿಸುತ್ತವೆ. ಈಗ ನೋಡಿ ಮೇಲಿನ ವಚನವನ್ನು:

ಕಳ**ಬೇಡ**
ಕೊಲ**ಬೇಡ**
ಹುಸಿಯ ನುಡಿಯಲು**ಬೇಡ**
ಮುನಿಯ**ಬೇಡ**
ಅನ್ಯರಿಗೆ ಅಸಹ್ಯ ಪಡ**ಬೇಡ**
ತನ್ನ ಬಣ್ಣಿಸ**ಬೇಡ**
ಇದಿರ ಹಳಿಯಲು**ಬೇಡ**
ಇದೇ ಅಂತರಂಗ**ಶುದ್ಧಿ**
ಇದೇ ಬಹಿರಂಗ**ಶುದ್ಧಿ**
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ!

೮. ಭಕ್ತ ಸುಭಾಷೆಯ ನುಡಿಯ **ನುಡಿವೆ,** ನುಡಿದಂತೆ **ನಡೆವೆ**
ನಡೆಯೊಳಗೆ ನುಡಿಯ **ಪೂರೈಸುವೆ**
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ
ಒಂದು ಜವೆ ಕೊರತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು, **ಕೂಡಲ ಸಂಗಮದೇವಾ.**

ಈ ವಚನವು ರೂಪಾಂಶದ ದೃಷ್ಟಿಯಿಂದ ಹೀಗಾಗುವುದು:

ಭಕ್ತಿ ಸುಭಾಷೆಯ ನುಡಿಯ **ನುಡಿವೆ**
ನುಡಿದಂತೆ **ನಡೆವೆ**
ನಡೆಯೊಳಗೆ ನುಡಿಯ **ಪೂರೈಸುವೆ**
ಮೇಲೆ ತೂಗುವ ತ್ರಾಸು ಕಟ್ಟಳೆ ನಿಮ್ಮ ಕೈಯಲ್ಲಿ
ಒಂದು ಜವೆ ಕೊಱತೆಯಾದಡೆ
ಎನ್ನನದ್ದಿ ನೀನೆದ್ದು ಹೋಗು
ಕೂಡಲಸಂಗಮದೇವಾ.

೯. ಓಡುವಾತ ಲೆಂಕ**ನಲ್ಲ,** ಬೇಡುವಾತ ಭಕ್ತ**ನಲ್ಲ**
ಓಡಲಾಗದು **ಲೆಂಕನು,** ಬೇಡಲಾಗದು **ಭಕ್ತನು**
ಓಡೆನ**ಯ್ಯಾ,** ಬೇಡೆನ**ಯ್ಯಾ**
ಕೂಡಲಸಂಗಮದೇವಾ.

ಈ ವಚನವು ರೂಪಾಂಶದ ದೃಷ್ಟಿಯಿಂದ ಹೀಗಾಗುವುದು; ಇದರಲ್ಲಿ ಆದಿಪ್ರಾಸವನ್ನೂ ಗಮನಿಸಬಹುದು.

ಓ**ಡು**ವಾತ ಲೆಂಕ**ನಲ್ಲ**
ಬೇ**ಡು**ವಾತ ಭಕ್ತ**ನಲ್ಲ**
ಓಡಲಾಗದು ಲೆಂಕ**ನು**
ಬೇ**ಡ**ಲಾಗದು ಭಕ್ತ**ನು**
ಓ**ಡೆ**ನ**ಯ್ಯಾ**
ಬೇ**ಡೆ**ನ**ಯ್ಯಾ**
ಕೂಡಲಸಂಗಮದೇವಾ.

೧೦. ಹರಿವ ಹಾವಿಂ**ಗಂಜೆ** ಉರಿಯ ನಾಲಗೆ**ಗಂಜೆ**
ಸುರಿಗೆಯ ಮೊನೆ**ಗಂಜೆ**
ಒಂದಕ್ಕಂ**ಜುವೆ,** ಒಂದಕ್ಕ**ಳುಕುವೆ**
ಪರಸ್ತ್ರೀ ಪರಧನವೆಂಬೀ ಜೂಬಿಂ**ಗಂಜುವೆ**
ಮುನ್ನಂಜದ ರಾವಳನೇ ವಿಧಿಯಾದ!
ಅಂಜುವೆನಯ್ಯಾ ಕೂಡಲಸಂಗಮದೇವಾ.

ಈ ವಚನದ ರೂಪ ಹೀಗಾಗುವುದು ಸೂಕ್ತ:

ಹರಿವ ಹಾವಿಂ**ಗಂಜೆ**
ಉರಿಯ ನಾಲಗೆ**ಗಂಜೆ**

ಸುರಗಿಯ ಮೊನೆ**ಗಂಜೆ**
ಒಂದಕ್ಕಂ**ಜುವೆ**
ಒಂದಕ್ಕಳು**ಕುವೆ**
ಪರಸ್ತ್ರೀ ಪರಧನವೆಂಬೀ ಜೂಬಿಂಗಂ**ಜುವೆ**
ಮುನ್ನಂಜದ ರಾವಳನೇ ವಿಧಿಯಾದ!
ಅಂಜುವೆನಯ್ಯಾ,
ಕೂಡಲಸಂಗಮದೇವಾ.

೧೦. **ಆವನಾದಡೇನು ಶ್ರೀಮಹಾದೇವನ ನೆನೆವನ**
ಬಾಯ ತಂಬುಲವ **ಮೆಲುವೆ,** ಬೀಳುಡಿಗೆಯ **ಹೊದೆವೆ**
ಪಾದರಕ್ಷೆಯ ಕಾಯ್ದು **ಬದುಕುವೆ**
ಕೂಡಲಸಂಗಮದೇವಾ.

ಈ ವಚನ ಹೀಗಾಗುವುದು ಸೂಕ್ತ:

ಆವನಾದಡೇನು
ಶ್ರೀಮಹಾದೇವನ ನೆನೆವನ
ಬಾಯ ತಂಬುಲವ **ಮೆಲುವೆ**
ಬೀಳುಡಿಗೆಯ **ಹೊದೆವೆ**
ಪಾದರಕ್ಷೆಯ ಕಾಯ್ದು **ಬದುಕುವೆ**
ಕೂಡಲಸಂಗಮದೇವಾ

೧೧. **ತಂದೆ ನೀನು ತಾಯಿ ನೀನು ಬಂಧು ನೀನು ಬಳಗ ನೀನು**
ನೀನಿಲ್ಲದೆ ಮತ್ತಾರೂ ಇಲ್ಲವಯ್ಯಾ
ಕೂಡಲಸಂಗಮದೇವಾ
ಹಾಲಲದ್ದು, ನೀರಲದ್ದು.

ಈ ವಚನದಲ್ಲಿ ಮೊದಲನೆಯ ಸಾಲು ಎರಡಾಗಿ ಒಡೆಯುತ್ತದೆ. ತಂದೆತಾಯಿ, ಬಂಧು ಬಳಗ ಎಂಬಿವು ಒಂದೊಂದು ಘಟಕ.

ತಂದೆ ನೀನು ತಾಯಿ ನೀನು
ಬಂಧು ನೀನು ಬಳಗ ನೀನು

೧೨. **ಆಡಿ**ಕಾಲು ದಣಿ**ಯವು ನೋಡಿ** ಕಣ್ಣು ದಣಿ**ಯವು**
ಹಾಡಿನಾಲಗೆ ದಣಿ**ಯದು ಇನ್ನೇವೆ ಇನ್ನೇವೆ?**
ನಾ ನಿಮ್ಮ ಪೂಜಿಸಿ ಮನದಣಿಯಲೊಲ್ಲ**ದಿನ್ನೇವೆ ನಿನ್ನೇವೆ?**
ಕೂಡಲಸಂಗಮದೇವ ಕೇಳಯ್ಯಾ
ನಿಮ್ಮುದರವ ಬಗೆದು ಹೊಗುವ ಭರವಸಗೆ.

ಈ ವಚನವು ರೂಪಾಂಶದ ದೃಷ್ಟಿಯಿಂದ ಹೀಗಾಗುವುದು ಒಳ್ಳೆಯದು: ಇನ್ನೇವೆ ಇನ್ನೇವೆ ಎಂಬುದು ಇಲ್ಲಿ ಒಂದು ಘಟಕ. ಕೂಡಲಸಂಗಮದೇವ ಎಂಬುದು ಇನ್ನೊಂದು ಘಟಕ ಎಂಬುದನ್ನು ಹಿಂದೆಯೇ ಉದ್ದಕ್ಕೂ ನೋಡಿದ್ದೇವೆ.

ಆಡಿ ಕಾಲು ದಣಿ**ಯುವು**
ನೋಡಿ ಕಣ್ಣು ದಣಿ**ಯುವು**
ಹಾಡಿ ನಾಲಗೆ ದಣಿ**ಯುದು**
ಇನ್ನೇವೆ ಇನ್ನೇವೆ?
ನಾ ನಿಮ್ಮ ಕೈಯಾರೆ ಪೂಜಿಸಿ ಮನದಣಿಯುವೆ
ಇನ್ನೇವೆ ಇನ್ನೇವೆ?
ಕೂಡಲಸಂಗಮದೇವ
ಕೇಳಯ್ಯಾ
ನಿಮ್ಮುದರವ ಬಗಿದಾನು ಹೊಗುವ ಭರವೆನಗೆ.

೧೪. ತಾಳಮಾನ ಸರಿಸವ**ನಱಿಯೆ**
ಓಜೆಬಜಾವಣೆಯ ಲೆಕ್ಕವ**ನಱಿಯೆ** ಅಮೃತಗಣ ದೇವಗಣವ**ನಱಿಯೆ**
ಕೂಡಲಸಂಗಮದೇವಾ ನಿನಗೆ ಕೇಡಿಲ್ಲವಾಗಿ
ಆನು ಒಲಿದಂತೆ ಹಾಡುವೆ.

ಮೊದಲನೆಯ ಪಂಕ್ತಿಯನ್ನು ಸರಿಯಾಗಿ ಒಡೆದವರಿಗೆ ಎರಡನೆಯ ಪಂಕ್ತಿಯನ್ನು ಎರಡಾಗಿ ಒಡೆಯಬೇಕೆಂಬುದು ಏಕೆ ಹೊಳೆಯಲಿಲ್ಲವೋ ಕಾಣೆ! 'ಕೂಡಲಸಂಗಮದೇವಾ' ಎಂಬುದು ಪ್ರತ್ಯೇಕ ಘಟಕ ಎಂದು ಉದ್ದಕ್ಕೂ ನೋಡಿದ್ದೇವೆ. ಆದುದರಿಂದ ಮೇಲಿನ ವಚನ ಹೀಗಾಗುವುದರಲ್ಲಿ ಔಚಿತ್ಯವಿದೆ:

ತಾಳಮಾನ ಸರಿಸವ**ನಱಿಯೆ**
ಓಜೆಬಜಾವಣೆಯ ಲೆಕ್ಕವ**ನಱಿಯೆ**
ಅಮೃತಗಣ ದೇವಗಣವ**ನಱಿಯೆ**
ಕೂಡಲಸಂಗಮದೇವಾ,
ನಿನಗೆ ಕೇಡಿಲ್ಲವಾಗಿ,
ಆನು ಒಲಿದಂತೆ ಹಾಡುವೆ.

೧೫. **ಭಕ್ತಿಯೆಂಬ ಪೃಥ್ವಿಯ ಮೇಲೆ** ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ **ಎಲೆಯಾಯಿತ್ತು.**
ಲಿಂಗವೆಂಬ ಎಲೆಯಮೇಲೆ
ವಿಚಾರವೆಂಬ **ಹೂವಾಯಿತ್ತು**

ಆಚಾರವೆಂಬ **ಕಾಯಾಯಿತ್ತು**
ನಿಷ್ಪತ್ತಿಯೆಂಬ **ಹಣ್ಣಾಯಿತ್ತು**
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ.

ಇಲ್ಲಿ 'ಲಿಂಗವೆಂಬ ಎಲೆಯ ಮೇಲೆ' ಎಂಬುದು ಒಂದು ಪಂಕ್ತಿಯಾಗಬಹುದಾದರೆ 'ಭಕ್ತಿಯೆಂಬ ಪೃಥ್ವಿಯಮೇಲೆ' ಎಂಬುದು ಒಂದು ಪಂಕ್ತಿ ಯಾಕೆ ಆಗಬಾರದು? 'ಆಯಿತ್ತು, ಮೇಲೆ'–ಎಂಬಿವು ಇಲ್ಲಿ ಪಾದ ವಿಭಾಗವನ್ನು ನಿರ್ಣಯಿಸುತ್ತವೆ. 'ಕೂಡಲಸಂಗಮದೇವ' ಎಂಬುದು ಪ್ರತ್ಯೇಕ ಘಟಕ ಎಂಬುದನ್ನು ಉದ್ದಕ್ಕೂ ನೋಡುತ್ತ ಬಂದಿದ್ದೇವೆ. ಈಗ ನೋಡಿ ಈ ವಚನದ ರೂಪವನ್ನು:

ಭಕ್ತಿಯೆಂಬ ಪೃಥ್ವಿಯ **ಮೇಲೆ**
ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು.
ಲಿಂಗವೆಂಬ ಎಲೆಯ **ಮೇಲೆ**
ವಿಚಾರವೆಂಬ **ಹೂವಾಯಿತ್ತು,**
ಆಚಾರವೆಂಬ **ಕಾಯಾಯಿತ್ತು,**
ನಿಷ್ಪತ್ತಿಯೆಂಬ **ಹಣ್ಣಾಯಿತ್ತು.**
ನಿಷ್ಪತ್ತಿಯೆಂಬ ಹಣ್ಣು ತೊಟ್ಟುಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ
ತನಗೆ ಬೇಕೆಂದು ಎತ್ತಿಕೊಂಡ.

೧೬. ಎನಿಸೆನಿಸಂ**ದಡೆ ನಾ ಧೃತಿಗೆಡೆನಯ್ಯಾ**
ಎಲುದೋಱಿ**ದಡೆ** ನರಹಱಿ**ದಡೆ** ಕರುಳುಕುಪ್ಪಳಿಸಿ**ದಡೆ**
ನಾ ಧೃತಿಗೆಡೆನಯ್ಯಾ
ಶಿರಹಱಿದು ಅಟ್ಟೆ ನೆಲಕ್ಕೆ **ಬಿದ್ದಡೆ**
ನಾಲಗೆ ಕೂಡಲ ಸಂಗಾ ಶರಣೆನುತ್ತಿದ್ದೀತಯ್ಯಾ!

ಇಲ್ಲಿ 'ನಾ ಧೃತಿಗೆಡೆನಯ್ಯಾ' ಎಂಬ ಮೂರನೆಯ ಸಾಲು ಪುನರುಕ್ತಿಯಾದುದರಿಂದ ಮೊದಲನೆಯ ಪಂಕ್ತಿಯಲ್ಲೂ ಅದು ಪ್ರತ್ಯೇಕ ಪಾದವಾಗಬೇಕು. ಅಲ್ಲಿಗೆ 'ಎನಿಸೆನಿ ಸಂದಡೆ' ಎಂಬುದು ಸಹಜವಾಗಿ ಒಂದು ಪಂಕ್ತಿಯಾಯಿತು. ಹಾಗೆಯೇ ಎರಡ ನೆಯ ಪಂಕ್ತಿಯಲ್ಲಿ ಮೂರು ಪಂಕ್ತಿಗಳು ಸೇರಿವೆ. ಈಗ ನೋಡಿ ಮೇಲಿನ ವಚನದ ರೂಪವನ್ನು:

ಎನಿಸನಿಸಂ**ದಡೆ**
ನಾ ಧೃತಿಗೆಡೆನಯ್ಯಾ!

ಎಲುದೋಱಿದಡೆ
ನರಹಱಿದಡೆ
ಕರುಳು ಕುಪ್ಪಳಿಸಿದಡೆ
ನಾ ಧೃತಿಗೆಡೆನಯ್ಯಾ!
ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದಡೆ
ನಾಲಗೆ ಕೂಡಲ ಸಂಗಾ ಶರಣೆನುತ್ತಿದ್ದೀತಯ್ಯಾ!

೧೭. ಆದಿಯಲಾಗಲಿ ವೇದದಲಾಗಲಿ ಶಾಸ್ತ್ರದಲಾಗಲಿ ಸಮಯದಲಾಗಲಿ
ಎನ್ನವರೆನ್ನೆನು ಎನ್ನವರೆನ್ನೆನು!
ಎನ್ನವರೆಂದಡೆ ಸಂಗಾ ನಿಮ್ಮಲ್ಲಿಗೆ ದೂರ!
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ, ಕೂಡಲ ಸಂಗಮದೇವಾ, ನಿಮ್ಮಾಣೆ!

ಈ ವಚನದಲ್ಲಿ ಮೊದಲ ಹಾಗೂ ಕೊನೆಯ ಪಂಕ್ತಿಗಳು ಒಡೆಯುತ್ತವೆ. 'ಆಗಲಿ' ಎಂಬುದು ಪುನರುಕ್ತಿ. ಈಗ ನೋಡಿ ಈ ವಚನವನ್ನು:

ಆದಿಯಲಾಗಲಿ
ವೇದದಲಾಗಲಿ
ಶಾಸ್ತ್ರದಲಾಗಲಿ
ಸಮಯದಲಾಗಲಿ
ಎನ್ನವರೆನ್ನೆನು, ಎನ್ನವರೆನ್ನೆನು!
ಎನ್ನವರೆಂದಡೆ ಸಂಗಾ ನಿಮ್ಮಲ್ಲಿಗೆ ದೂರ!
ಎನ್ನವರಾದಡೆ ಜನ್ನಕ್ಕೆ ನಡೆವರೆ?
ಎನ್ನವರಲ್ಲ!
ಕೂಡಲ ಸಂಗಮದೇವಾ,
ನಿಮ್ಮಾಣೆ!

೧೮. ವೇದಕ್ಕೆ ಒಱೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯಿವೆ, ನೋಡಯ್ಯಾ
ಮಹಾದಾನಿ ಕೂಡಲ ಸಂಗಮದೇವಾ
ಮಾದರ ಚೆನ್ನಯ್ಯನ ಮನೆಯ ಮಗನಾನಯ್ಯಾ

ಕಟ್ಟುವೆ, ಇಕ್ಕುವೆ, ಎತ್ತುವೆ, ಕೊಯಿವೆ–ಎಂಬಿವು ಪಾದ ವಿಭಾಗವನ್ನು ಎತ್ತಿ ಹೇಳುವುವು. ನೋಡಯ್ಯಾ, ನಾನಯ್ಯಾ–ಎಂಬಿವು ಮತ್ತೊಂದು ಬಿತೆ ಘಟಕ, ಈಗ ನೋಡಿ ಮೇಲಿನ ವಚನ ಹೀಗಾಗುತ್ತದೆ:

ವೇದಕ್ಕೆ ಒಱೆಯ **ಕಟ್ಟುವೆ**
ಶಾಸ್ತ್ರಕ್ಕೆ ನಿಗಳವ**ನಿಕ್ಕುವೆ**
ತರ್ಕದ ಬೆನ್ನ ಬಾರ**ನೆತ್ತುವೆ**
ಆಗಮದ ಮೂಗ **ಕೊಯಿವೆ**
ನೋಡಯ್ಯಾ
ಮಹದಾನಿ ಕೂಡಲ ಸಂಗಮದೇವಾ
ಮಾದರ ಚೆನ್ನಯ್ಯನ ಮನೆಯ ಮಗ **ನಾನಯ್ಯಾ!**

೧೯. ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯುಗಡಿಗೆ ಕೊರಳಲ್ಲಿ ದೇವರಿರಲಿ
ಅವರ ಲಿಂಗ**ವೆಂಬೆ** ಸಂಗ**ನೆಂಬೆ**
ಕೂಡಲ ಸಂಗಮದೇವಾ, ಅವರ ಮುಖಲಿಂಗಿಗ**ಳೆಂಬೆ!**

ಈ ವಚನದಲ್ಲಿ ಮೊದಲ ಎರಡು ಪಾದಗಳು ನಾಲ್ಕು ಸಾಲುಗಳಾಗಿ ಒಡೆಯುತ್ತವೆ. 'ಎಂಬೆ' ಎಂಬ ಪುನರುಕ್ತಿಯಿಂದಲೂ, ಕೂಡಲ ಸಂಗಮದೇವಾ ಎಂಬ ಪಾದದಿಂದಲೂ ಕೊನೆಯ ಎರಡು ಪಾದಗಳು ನಾಲ್ಕು ಪಾದಗಳಾಗಿ ಒಡೆಯುತ್ತವೆ. ಈಗ ಮೇಲಿನ ವಚನದ ರೂಪವನ್ನು ನೋಡಿ:

ಎಡದ ಕೈಯಲಿ ಕತ್ತಿ
ಬಲದ ಕೈಯಲಿ ಮಾಂಸ
ಬಾಯಲ್ಲಿ ಸುರೆಯ ಗಡಿಗೆ
ಕೊರಳಲ್ಲಿ ದೇವರಿರಲಿ
ಅವರ ಲಿಂಗ**ವೆಂಬೆ**
ಸಂಗ**ನೆಂಬೆ**
ಕೂಡಲ ಸಂಗಮದೇವಾ
ಅವರ ಮುಖಲಿಂಗಿಗ**ಳೆಂಬೆ!**

೨೦. **ಕೊಲ್ಲೆ**ನಯ್ಯಾ ಪ್ರಾಣಿಗಳ, **ಮೆಲ್ಲೆ**ನಯ್ಯಾ ಬಾಯಿಚ್ಛೆಗೆ
ಒಲ್ಲೆನಯ್ಯಾ ಪರಸತಿಯರ ಸಂಗವ:
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ!
ಬಳ್ಳದ ಬಾಯಂತೆ ಒಂದೆ ಮನವ ಮಾಡಿ
ನಿಲ್ಲೆಂದು ನಿಲಿಸಯ್ಯಾ, ಕೂಡಲ **ಸಂಗಮದೇವಾ,**

ಇಲ್ಲಿ ಆದಿಪ್ರಾಸ ಪಾದ ವಿಭಾಗವನ್ನು ಸೂಚಿಸುವುದು. 'ಕೂಡಲ ಸಂಗಮದೇವಾ'

ಎಂಬುದು ಪ್ರತ್ಯೇಕ ಘಟಕ. ಮೊದಲನೆಯ ಪಾದದಲ್ಲಿ ಎರಡು ಪಾದಗಳು ಸೇರಿಕೊಂಡಿವೆ. ಈಗ ಈ ವಚನವನ್ನು ನೋಡಿರಿ:

ಕೊಲ್ಲೆನಯ್ಯಾ ಪ್ರಾಣಿಗಳ
ಮಲ್ಲೆನಯ್ಯಾ ಬಾಯಿಚ್ಛೆಗೆ
ಒಲ್ಲೆನಯ್ಯಾ ಪರಸತಿಯರ ಸಂಗವ
ಬಲ್ಲೆನಯ್ಯಾ ಮುಂದೆ ತೊಡಕುಂಟೆಂಬುದ!
ಬಳ್ಳದ ಬಾಯಂತೆ ಒಂದೆ ಮನವ ಮಾಡಿ
ನಿಲ್ಲೆಂದು ನಿಲಿಸಯ್ಯಾ,
ಕೂಡಲ ಸಂಗಮದೇವಾ.

೨೧. ನಡೆ**ಚೆನ್ನ** ನುಡಿ**ಚೆನ್ನ** ಎಲ್ಲಿ ನೋಡಿದಡಲ್ಲಿ **ಚೆನ್ನ**
ಪ್ರಮಥರೊಳಗೆ **ಚೆನ್ನ** ಪುರಾತರೊಳಗೆ **ಚೆನ್ನ**
ಸವಿನೋಡಿ ಅಂಬಲಿ ರುಚಿಯಾಯಿತ್ತೆಂದು
ಕೂಡಲ ಸಂಗಮದೇವಂಗೆ ಬೇಕೆಂದು ಕೈದೆಗೆದ ನಮ್ಮ **ಚೆನ್ನ**

ಇಲ್ಲಿ ಚೆನ್ನ ಎಂಬ ಪುನರುಕ್ತಿ ಪಾದ ವಿಭಾಗವನ್ನು ನಿರ್ಣಯಿಸುತ್ತದೆ. ಕೊನೆಯ ಸಾಲು ಎರಡಾಗಿ ಒಡೆಯುತ್ತದೆ. ಈಗ ನೋಡಿ ಈ ವಚನವನ್ನು:

ನಡೆ **ಚೆನ್ನ**
ನುಡಿ **ಚೆನ್ನ**
ಎಲ್ಲಿ ನೋಡಿದಡಲ್ಲಿ **ಚೆನ್ನ**
ಪ್ರಮಥರೊಳಗೆ **ಚೆನ್ನ**
ಪುರಾತರೊಳಗೆ **ಚೆನ್ನ**
ಸವಿನೋಡಿ ಅಂಬಲಿ ರುಚಿಯಾಯಿತ್ತೆಂದು
ಕೂಡಲ ಸಂಗಮದೇವಂಗೆ ಬೇಕೆಂದು
ಕೈದೆಗೆದ ನಮ್ಮ **ಚೆನ್ನ**

೨೨. ಎನಗೆ ಗುರುವಿನ **ಪ್ರಸಾದ** ನಿನಗೆ ಚೆನ್ನನ **ಪ್ರಸಾದ**
ಎನಗೆಯೂ ನಿನಗೆಯೂ ಸಮಯಾಚಾರ ಸರಿ
ಕೂಡಲ ಸಂಗಮದೇವಾ, ನೀನೆನಗೆ ಚಿಕ್ಕ ತಮ್ಮ!

ಈ ವಚನದಲ್ಲಿ ಪ್ರಸಾದ ಎಂಬ ಮಾತು ಪುನರುಕ್ತಿಯಾಗಿ ಘಟಕವನ್ನು ನಿರ್ಣಯಿಸುತ್ತದೆ. 'ಕೂಡಲ ಸಂಗಮದೇವಾ' ಎಂಬುದು ಹೇಗೂ ಪ್ರತ್ಯೇಕ ಪಾದ ಎಂಬುದನ್ನು ಉದ್ದಕ್ಕೂ ನೋಡಿದ್ದೇವೆ; ಈಗ ಈ ವಚನವನ್ನು ನೋಡಿರಿ:

ಎನಗೆ ಗುರುವಿನ ಪ್ರಸಾದ
ನಿನಗೆ ಚೆನ್ನನ ಪ್ರಸಾದ
ಎನಗೆಯೂ ನಿನಗೆಯೂ ಸಮಯಾಚಾರ ಸರಿ.
ಕೂಡಲ ಸಂಗಮದೇವಾ
ನೀನೆನಗೆ ಚಿಕ್ಕ ತಮ್ಮ!

೨೩. **ಹುತ್ತಕ್ಕೆ ಏಸು ಬಾಯಾದಡೇನು? ಸರ್ಪನಿಪ್ಪುದು ಒಂದೇ ಸ್ಥಾನ!**
ಭಾವ ಭಾವಿಸಿ ಭ್ರಮೆಯಳಿದು ನೋಡಾ
ಆ ಭಾವ ಭಾವಿಸಲು ನಿರ್ಭಾವ **ಕೂಡಲ ಸಂಗಮದೇವಾ.**

ಈ ವಚನದಲ್ಲಿ ಮೊದಲನೆಯ ಸಾಲಿನಲ್ಲಿ ಎರಡು ಪಾದಗಳು ಸೇರಿವೆ ಎಂಬುದು ಸ್ಪಷ್ಟ. 'ಕೂಡಲ ಸಂಗಮದೇವಾ' ಎಂಬುದು ಪ್ರತ್ಯೇಕ ಘಟಕ ಈಗ ನೋಡಿ ಈ ವಚನವನ್ನು:

ಹುತ್ತಕ್ಕೆ ಏಸು ಬಾಯಾದಡೇನು?
ಸರ್ಪ ನಿಪ್ಪುದು ಒಂದೇ ಸ್ಥಾನ!
ಭಾವ ಭಾವಿಸಿ ಭ್ರಮೆಯಳಿದು ನೋಡಾ
ಆ ಭಾವ ಭಾವಿಸಲು ನಿರ್ಭಾವ
ಕೂಡಲ ಸಂಗಮದೇವಾ.

೨೪. ಆದಿ ಅನಾದಿಗಳಿಲ್ಲ**ದಂದು** ಸದಾಶಿವನಿಲ್ಲ**ದಂದು**
ಶಿವನಿಲ್ಲ**ದಂದು** ಏನೆಂಬುದೇನು ತಾನಿಲ್ಲ**ದಂದು**
ಕೂಡಲ ಸಂಗಯ್ಯ ತನ್ನ ತಾನೇನೆಂದು ಅರಿಯ**ನಂದು**

ಇಲ್ಲಿ ಅಂದು ಎಂಬ ಮಾತು ಪಾದ ವಿಭಾಗ ಮಾಡಲು ಪ್ರಸರುಕ್ತಿಯಾಗಿ ಬಂದಿದೆ. ಕೂಡಲ ಸಂಗಯ್ಯ ಪ್ರತ್ಯೇಕವಾಗಿ ನಿಲ್ಲುತ್ತದೆ. ಈಗ ಈ ವಚನವನ್ನು ನೋಡಿರಿ:

ಆದಿ ಅನಾದಿಗಳಿಲ್ಲ**ದಂದು**
ಸದಾಶಿವ ನಿಲ್ಲ**ದಂದು**
ಶಿವನಿಲ್ಲ**ದಂದು**
ಏನೆಂಬುದೇನು ತಾನಿಲ್ಲ**ದಂದು**
ಕೂಡಲ ಸಂಗಯ್ಯಾ
ತನ್ನ ತಾನೇನೆಂದು ಅರಿಯ**ನಂದು.**

೨೫. ಕಲ್ಲೊಳಗೆ **ಹೊನ್ನುಂಟು** ಮರದೊಳಗೆ ಅಗ್ನಿ**ಯುಂಟು**
ಹಾಲೊಳಗೆ ತುಪ್ಪ**ವುಂಟು**
ಅಂತರಾಮಿಯಲ್ಲಿ ಶಿವ**ನಿಹನು.**
ಇದೇನು ಕಾರಣ ಕತ್ತಲೆ ಕಾಣಬಾರದು?
ತೋರಬಲ್ಲ ಗುರು ಸುಳಿಯನು, **ಕೂಡಲ ಸಂಗಮದೇವಾ.**

'ಉಂಟು' ಎಂಬ ಪುನರುಕ್ತಿ ಇಲ್ಲಿ ಪಾದವಿಭಾಗ ಮಾಡುವುದು. 'ಉಂಟು' ಎಂಬುದೇ ಒಂದು ಕಡೆ 'ಇಹನು' ಆಗಿದೆ. 'ಹಾಲೊಳಗೆ ತುಪ್ಪವುಂಟು' ಎಂಬುದು ಪ್ರತ್ಯೇಕ ಪಾದವಾದಾಗ ಮೊದಲ ಸಾಲೂ ಎರಡು ಪಾದಗಳಾಗಬೇಕೆಂದು ಯಾಕೆ ತಿಳಿಯಲಿಲ್ಲವೋ ಕಾಣೆ! 'ಕೂಡಲ ಸಂಗಮದೇವಾ' ಎಂಬುದು ಪ್ರತ್ಯೇಕ ಪಾದ ಎಂಬುದನ್ನು ಉದ್ದಕ್ಕೂ ನೋಡಿದ್ದೇವೆ. ಈಗ ಈ ವಚನ ಹೀಗಾಗುತ್ತದೆ:

ಕಲ್ಲೊಳಗೆ ಹೊ**ನ್ನುಂಟು**
ಮರದೊಳಗೆ ಅಗ್ನಿ**ಯುಂಟು**
ಹಾಲೊಳಗೆ ತುಪ್ಪ**ವುಂಟು**
ಅಂತರ್ಯಾಮಿಯಲ್ಲಿ **ಶಿವನಿಹನು**.
ಇದೇನು ಕಾರಣ ಕತ್ತಲೆ ಕಾಣಬಾರದು?
ತೋರಬಲ್ಲ ಗುರು ಸುಳಿಯನು
ಕೂಡಲ ಸಂಗಮದೇವಾ.

೨೬. **ಎನ್ನನುಡಿ ಎನಗೆ ನಂಜಾಯಿತ್ತು ಎನ್ನಲಗೆ ಎನ್ನ ಕೊಂದಿತ್ತು**
ಆನು ಪಾಪಿಯಯ್ಯಾ, ಆನು ಕೋಪಿಯಯ್ಯಾ
ತರಳತನದಲ್ಲಿ ಕೆಟ್ಟೆನಯ್ಯಾ
ಭಕ್ತಿಯ ಹೊಲಬ ನರಿಯದೆ ಮರುಳಾದೆನಯ್ಯಾ
ಆಳುಮುನಿದಡೆ ಆಳೇ ಕೆಡುವನು
ಆಳ್ದ ಮುನಿದಡೆ ಆಳೇ ಕೆಡುವನು
ನೀವು ಮುನಿದಡೆ ನಾನೇ ಕೆಡುವೆನಯ್ಯಾ
ಕೂಡಲ ಸಂಗಮದೇವಾ.

ಇಲ್ಲಿ ವಚನದ ಉತ್ತರ ಭಾಗದಲ್ಲಿ ಒಂದೊಂದು ಪಾದವೂ ಒಂದೊಂದು ವಾಕ್ಯವಾಗಿದೆ. ಆದುದರಿಂದ ಅದರ ಪೂರ್ವಾರ್ಧವಲ್ಲಿಯೂ ಹಾಗೆಯೇ ಆಗಬೇಕಲ್ಲವೇ?

ಎನ್ನ ನುಡಿ ಎನಗೆ ನಂಜಾಯಿತ್ತು
ಎನ್ನಲಗೆ ಎನ್ನ ಕೊಂದಿತ್ತು
ಆನು ಪಾಪಿಯಯ್ಯಾ
ಆನು ಕೋಪಿಯಯ್ಯಾ
ತರಳತನದಲ್ಲಿ ಕೆಟ್ಟೆನಯ್ಯಾ
ಭಕ್ತಿಯೆಂಬ ಹೊಲಬನರಿಯದೆ ಮರುಳಾದೆನಯ್ಯಾ
ಆಳು ಮುನಿದಡೆ ಆಳೇ ಕೆಡುವನು

ಆಳ್ದ ಮುನಿದಡೆ ಆಳೇ ಕೆಡುವನು
ನೀವು ಮುನಿದಡೆ ನಾನೇ ಕೆಡುವೆನಯ್ಯಾ
ಕೂಡಲ ಸಂಗಮದೇವಾ.

೨೭. **ಮುಗಿಲ ದುಱೆಯು ಮಿಂಚಿನಂತೆ, ಒಡಲ ಮಱೆಯು ಆತ್ಮನಂತೆ**
ನೆಲದ ಮಱೆಯು ನಿಧಾನದಂತೆ ಇಪ್ಪ
ನಿಮ್ಮ ನಿಲವನಾರು ಬಲ್ಲರು ದೇವಾ?
ನಿಮ್ಮ ನಿಲವ ಹಲಕಾಲದಿಂದ **ಕಂಡು ಕಂಡು**
ಕಡೆಗಣಿಸಿ, ಮಱೆದು ಮತಿಗೆಟ್ಟು ಮರುಳಾದೆನು
ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ!
ತ್ರಾಹಿ ತ್ರಾಹಿ ಕಾಯಯ್ಯಾ, ಕೂಡಲ ಸಂಗಮದೇವಾ.

ಎರಡನೆಯ ಪಂಕ್ತಿಯ ಹಾಗೆ ಮೊದಲ ಪಂಕ್ತಿಯಲ್ಲಿ ಎರಡು ಪಾದಗಳಿವೆ ಎಂಬುದು ಸ್ಪಷ್ಟ. 'ಕಂಡು ಕಂಡು' 'ಕಡೆಗಣಿಸಿ' ಬೇರೆ ಬೇರೆಯಲ್ಲ, ಒಂದೇ ಪಾದದಲ್ಲಿ ಬರಬೇಕು. 'ಕೂಡಲ ಸಂಗಮದೇವಾ' ಎಂಬುದು ಪ್ರತ್ಯೇಕ ಪಾದ. ಈಗ ನೋಡಿರಿ ಈ ವಚನ ಹೇಗಾಗುತ್ತದೆ ಎಂಬುದನ್ನು.

ಮುಗಿಲ ಮಱೆಯು ಮಿಂಚಿನಂತೆ
ಒಡಲ ಮಱೆಯು ಆತ್ಮನಂತೆ
ನೆಲದ ಮಱೆಯು ನಿಧಾನದಂತೆ ಇಪ್ಪ
ನಿಮ್ಮ ನಿಲವನಾರು ಬಲ್ಲರು ದೇವಾ?
ನಿಮ್ಮ ನಿಲವ ಹಲಕಾಲದಿಂದ **ಕಂಡು ಕಂಡು ಕಡೆಗಣಿಸಿ**
ಮಱೆದು ಮತಿಗೆಟ್ಟು ಮರುಳಾದೆನು
ಎನ್ನ ತಪ್ಪಿಂಗೆ ಕಡೆಯಿಲ್ಲ ಕಾಣಾ
ಕೂಡಲ ಸಂಗಮದೇವಾ.

೨೮. ಕಾಲಲಿ ಕಟ್ಟಿದ **ಗುಂಡು** ಕೊರಳಲಿ ಕಟ್ಟಿದ **ಬೆಂಡು**
ತೇಲಲೀಯದು **ಗುಂಡು** ಮುಳುಗಲೀಯದು **ಬೆಂಡು!**
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ, ಕೂಡಲ ಸಂಗಯ್ಯಾ.

ಗುಂಡು, ಬೆಂಡು ಎಂಬ ಮಾತುಗಳು ಮೇಲಿನ ಎರಡು ಪಾದಗಳನ್ನು ಸ್ಪಷ್ಟವಾಗಿ ನಾಲ್ಕು ಪಾದಗಳನ್ನಾಗಿ ಮಾಡುತ್ತವೆ. 'ಕೂಡಲ ಸಂಗಯ್ಯಾ' ಎಂಬುದು ಪ್ರತ್ಯೇಕ ಪಾದ. ಈಗ ಈ ವಚನ ಹೀಗಾಗುವುದು:

ಕಾಲಲಿ ಕಟ್ಟಿದ ಗುಂಡು
ಕೊರಳಲಿ ಕಟ್ಟಿದ ಬೆಂಡು
ತೇಲಲೀಯದು ಗುಂಡು
ಮುಳುಗಲೀಯದು ಬೆಂಡು!
ಇಂತಪ್ಪ ಸಂಸಾರ ಶರಧಿಯ ದಾಂಟಿಸಿ
ಕಾಲಾಂತಕನೆ ಕಾಯೋ
ಕೂಡಲ ಸಂಗಯ್ಯಾ.

೨೯. ಲಿಂಗವಿರದೆ ಸೀಮೆಯ ಕಲ್ಲಿನಲ್ಲಿ?
ಲಿಂಗವಿರದೆ ಪಶುವಿನ ತೊಡೆಯಲ್ಲಿ?
ಕಲ್ಲ ತೆಕ್ಕೊಂಡು ಮೆಳೆಯಮೇಲೆ **ಇಟ್ಟಡೆ**
ಆ ಕಲ್ಲು ಮೆಳೆಯಲ್ಲಿ ಸಿಕ್ಕಿದಡೆ ಆ ಮೆಳೆ ಭಕ್ತನಾಗಬಲ್ಲುದೆ?
ಇದು ಕಾರಣ, ಸತ್ಯ ಸಹಜ ಸದ್ಭಾವ ಸದ್ವರ್ತನೆ ಉಳ್ಳಡೆ ಸದ್ಭಕ್ತ.
ಇಲ್ಲದಿದ್ದಡೆ, ಆ ಮೆಳೆಯೊಳಗೆ ಸಿಕ್ಕಿದ ಕಲ್ಲಿನಂತೆ
ಕಾಣಾ ಕೂಡಲಸಂಗಮದೇವಾ.

ಇಟ್ಟಡೆ, ಸಿಕ್ಕಿದಡೆ ಎಂಬಿವು ಪಾದ ವಿಭಾಗಕ್ಕೆ ಸಹಕಾರಿಯಾಗುವುವು. 'ಇದು ಕಾರಣ' ಎಂಬುದು ಪ್ರತ್ಯೇಕ ಘಟಕ ಎಂಬುದನ್ನು ಹಿಂದೆಯೇ ನೋಡಿದೆವು. 'ಇಲ್ಲದಿದ್ದಡೆ' ಎಂಬುದೂ 'ಇದು ಕಾರಣ' ಎಂಬಂತೆ. 'ಕಾಣಾ' ಎಂಬುದು 'ಕೂಡಲ ಸಂಗಮದೇವಾ' ದೊಡನೆ ಸೇರುವುದಿಲ್ಲ. 'ಕೂಡಲ ಸಂಗಮದೇವಾ' ಎಂಬುದು ಪ್ರತ್ಯೇಕ ಪಾದ. ಈಗ ನೋಡಿ ಹೀಗಿದೆ ಈ ವಚನ:

ಲಿಂಗವಿರದೆ ಸೀಮೆಯ ಕಲ್ಲಿನಲ್ಲಿ?
ಲಿಂಗವಿರದೆ ಪಶುವಿನ ತೊಡೆಯಲ್ಲಿ?
ಕಲ್ಲ ತೆಕ್ಕೊಂಡು ಮೆಳೆಯಮೇಲೆ **ಇಟ್ಟಡೆ**
ಆ ಕಲ್ಲು ಮೆಳೆಯಲ್ಲಿ **ಸಿಕ್ಕಿದಡೆ**
ಆ ಮೆಳೆ ಭಕ್ತನಾಗಬಲ್ಲುದೆ?
ಇದು ಕಾರಣ,
ಸತ್ಯ, ಸಹಜ, ಸದ್ಭಾವ, ಸದ್ವರ್ತನೆ ಉಳ್ಳಡೆ ಸದ್ಭಕ್ತ.
ಇಲ್ಲದಿದ್ದಡೆ,
ಆ ಮೆಳೆಯೊಳಗೆ ಸಿಕ್ಕಿದ ಕಲ್ಲಿನಂತೆ **ಕಾಣಾ**
ಕೂಡಲ ಸಂಗಮದೇವಾ.

೩೦. ಆರಾರ ಮನೆಗೆ ಹೋದಡೆ ಸಾರೆನ್ನರು ಸರಕು ಮಾಡರು
ಆರ ಸೇರುವೆನಯ್ಯಾ ಆರ ಹೊದ್ದುವೆನಯ್ಯಾ

ಭಕ್ತಿಯಿಲ್ಲ-ಬಡವನೆಂದು ಒಡನೆ ನುಡಿಯರು ಆರ ಸೇರುವೆನಯ್ಯಾ?
ಕಾರುಣ್ಯಮೂರ್ತಿ ನೀನಲ್ಲದೆ ಇನ್ನಾರ ಸಾರುವೆನಯ್ಯಾ
ಕೂಡಲ ಸಂಗಯ್ಯಾ?

ನಾಲ್ಕು ಸಾಲುಗಳಲ್ಲೂ ಎರಡೆರಡು ಪಾದಗಳು ಅಡಗಿಕೊಂಡಿವೆ; ನೋಡಿ;

ಆರಾರ ಮನೆಗೆ ಹೋದಡೆ
ಸಾರೆನ್ನರು, ಸರಕುಮಾಡರು.
ಆರ ಸೇರುವೆನಯ್ಯಾ?
ಆರ ಹೊದ್ದುವೆನಯ್ಯಾ?
ಭಕ್ತಿಯಿಲ್ಲ-ಬಡವನೆಂದು ಒಡನೆ ನುಡಿಯರು
ಆರ ಸೇರುವೆನಯ್ಯಾ?
ಕಾರುಣ್ಯಮೂರ್ತಿ ನೀನಲ್ಲದೆ
ಇನ್ನಾರ ಸಾರುವೆನಯ್ಯಾ?
ಕೂಡಲ ಸಂಗಯ್ಯಾ.

೩೧. ಮನದೊಡೆಯ ಮನೆಗೆ **ಬಂದಡೆ** ಕನಕದ ತೋರಣವ **ಕಟ್ಟಿ**
ಪಡುಸಮ್ಮಾರ್ಜನೆಯ **ಮಾಡಿ** ರಂಗವಾಲಿಯ**ನಿಕ್ಕಿ**
ಉಘೇ, ಚಾಂಗು, ಭಲಾ ಎಂಬೆನು.
ಕೂಡಲ ಸಂಗಮದೇವಾ
ನಿಮ್ಮ ಶರಣ ಪ್ರಭುದೇವರು **ಬಂದಡೆ** ಉಬ್ಬಿಕೊಬ್ಬಿ ನಲಿನಲಿದಾಡುವೆ.

ಈ ವಚನದಲ್ಲಿ ಬಂದಡೆ ಎಂಬ ಪುನರುಕ್ತಿ ಮೊದಲ ಮತ್ತು ಕೊನೆಯ ಸಾಲುಗಳನ್ನು ಒಡೆಯಲು ಹೇಳುತ್ತವೆ. ಕಟ್ಟಿ, ಮಾಡಿ, ಇಕ್ಕಿ ಎಂಬಿವುಗಳು ಬೇರೆ ಘಟಕಗಳನ್ನು ಮಾಡುತ್ತವೆ. ಈಗ ನೋಡಿ ಮೇಲಿನ ವಚನ;

ಮನದೊಡೆಯ ಮನೆಗೆ **ಬಂದಡೆ**
ಕನಕದ ತೋರಣವ **ಕಟ್ಟಿ**
ಪಡುಸಮ್ಮಾರ್ಜನೆಯ **ಮಾಡಿ**
ರಂಗವಾಲಿಯ**ನಿಕ್ಕಿ**
ಉಘೇ, ಚಾಂಗು, ಭಲಾ ಎಂಬೆನು.
ಕೂಡಲ ಸಂಗಮದೇವಾ,
ನಿಮ್ಮ ಶರಣ ಪ್ರಭುದೇವರು **ಬಂದಡೆ**
ಉಬ್ಬಿಕೊಬ್ಬಿ ನಲಿನಲಿದಾಡುವೆ.

೩೨. ನಡೆಯ ಚೆನ್ನ ನುಡಿದು ತೋಱಿ
ನುಡಿಯ ಚೆನ್ನ ನಡೆದು ತೋಱಿ

ಆ ನಡೆನುಡಿ ಎರಡಱ ಚೆನ್ನ ಮೃಡ ನಿಮ್ಮೊಳಗಡಗಿಸಿ
ತಾವೆಡೆಯಿಲ್ಲದೆ ಪರಿಪೂರ್ಣರಾದವರ ಪಡುಗದ **ಹೊಱುವೆ**
ಪಾದರಕ್ಷೆಯ **ಹಿಡಿವೆ,** ಎನಗಿದೆ **ಮಾಟ,** ಬಯಸುವ **ಬೇಟ**
ಕೂಡಲ ಸಂಗಮದೇವಾ, ಇದು ನಿಮ್ಮ ಕೂಡುವ **ಕೂಟ**

ನಾಲ್ಕು ಪಾದಗಳವರೆಗೆ ಮೇಲಿನ ವಚನದ ಪಾದ ವಿಭಾಗ ಸರಿ. ಕೊನೆಯ ಎರಡು ಪಾದಗಳು ಸರಿಯಲ್ಲ. ಅವು ಹೀಗಾಗುತ್ತವೆ:

ಪಾದರಕ್ಷೆಯ ಹಿಡಿವೆ
ಎನಗಿದೆ **ಮಾಟ**
ಬಯಸುವ **ಬೇಟ**
ಕೂಡಲ ಸಂಗಮ ದೇವಾ
ಇದು ನಿಮ್ಮ ಕೂಡುವ **ಕೂಟ.**

೩೩. **ತನುವೆಂತಿರ್ದಡೇನಯ್ಯಾ, ಮನ ನಿರ್ಮಳವಾಗಿರ್ದಡೆ ಸಾಲದೆ?**
ಎಂತಿರ್ದಡೇನು ಲಿಂಗಭಕ್ತ, ಎಂತಿರ್ದಡೇನು ಲಿಂಗ ಶರಣ?
ಎಂತಿರ್ದಡೇನು ನೋಡಯ್ಯಾ:
ಶಿಶುನೊಂದಡೆ ತಾಯಿ ನೊಂದಂತೆ, **ಕೂಡಲ ಸಂಗಮದೇವಾ.**

ಇಲ್ಲಿ **'ಕೂಡಲಸಂಗಮದೇವಾ'** ಎಂಬುದು ಬೇರೆ ಪಾದವಾಗಿ ಒಡೆದಾಗ ಅದರ ಪೂರ್ವಭಾಗ ಬೇರೆ ಪಾದವಾಯಿತು. 'ಎಂತಿರ್ದಡೇನು ನೋಡಯ್ಯಾ' ಎಂಬುದು ಒಂದು ಪಾದವಾಗಿರಲು, 'ಎಂತಿರ್ದಡೇನು ಲಿಂಗಶರಣ?' ಎಂಬುದೂ ಬೇರೆ ಪಾದವಾಗಬೇಕು. ಮೊದಲ ಸಾಲು ಹೇಗೂ ಎರಡು ಪಾದಗಳಾಗುತ್ತವೆ. ಈಗ ಮೇಲಿನ ವಚನದ ರೂಪ ನೋಡಿ:

ತನುವೆಂತಿರ್ದಡೇನಯ್ಯಾ?
ಮನ ನಿರ್ಮಳವಾಗಿರ್ದಡೆ ಸಾಲದೆ?
ಎಂತಿರ್ದಡೇನು ಲಿಂಗಭಕ್ತ?
ಎಂತಿರ್ದಡೇನು ಲಿಂಗ ಶರಣ?
ಎಂತಿರ್ದಡೇನು ನೋಡಯ್ಯಾ:
ಶಿಶುನೊಂದಡೆ ತಾಯಿ ನೊಂದಂತೆ
ಕೂಡಲ ಸಂಗಮದೇವಾ.

೩೪. ಗುರುವಿಂಗೆ ತನುವ **ಕೊಟ್ಟು,** ಲಿಂಗಕ್ಕೆ ಮನವ **ಕೊಟ್ಟು**
ಜಂಗಮಕ್ಕೆ ಧನವ **ಕೊಟ್ಟು,**
ಇಂತೀ ತ್ರಿವಿಧಕ್ಕೆ ತ್ರಿವಿಧವ **ಕೊಟ್ಟು** ನಾನು ಶುದ್ಧನಾದೆನು
ಕಾಣಾ **ಕೂಡಲ ಸಂಗಮದೇವಾ.**

ಇಲ್ಲಿ ಕೊಟ್ಟು ಎಂಬ ಪುನರುಕ್ತಿ ಪಾದಗಳನ್ನು ನಿರ್ಣಯಿಸುತ್ತದೆ. 'ಜಂಗಮಕ್ಕೆ ಧನವ ಕೊಟ್ಟು' ಎಂಬ ಪಾದವನ್ನು ಬೇರೆ ಮಾಡಿದವರಿಗೆ ಒಂದು, ಮೂರನೆಯ ಸಾಲುಗಳನ್ನೂ ಹಾಗೆಯೇ ಮಾಡಬೇಕೆಂಬುದು ಏಕೆ ಹೊಳೆಯಲಿಲ್ಲವೋ? 'ಕೂಡಲ ಸಂಗಮದೇವಾ' ಎಂಬುದು ಒಂದು ಪಾದವಾದುದರಿಂದ 'ಕಾಣಾ' ಎಂಬುದು ಹಿಂದಿನ ಪಾದ ಸೇರುತ್ತದೆ. ಈಗ ಈ ವಚನ ಹೀಗಾಯಿತು.

ಗುರುವಿಂಗೆ ತನುವ ಕೊಟ್ಟು
ಲಿಂಗಕ್ಕೆ ಮನವ ಕೊಟ್ಟು
ಜಂಗಮಕ್ಕೆ ಧನವ ಕೊಟ್ಟು
ಇಂತೀ ತ್ರಿವಿಧಕ್ಕೆ ತ್ರಿವಿಧವ ಕೊಟ್ಟು
ನಾನು ಶುದ್ಧನಾದೆನು ಕಾಣಾ
ಕೂಡಲ ಸಂಗಮದೇವಾ.

೩೫. ಬೆದಱಿಸುವ **ಸಂಗ** ಬೆಚ್ಚಿಸುವ **ಸಂಗ**
ಬೆಚ್ಚಿ ಬಿಸುಡುವ **ಸಂಗ**
ತನ್ನ ನಚ್ಚಿ ಮಚ್ಚಿ ಮುಯ್ಯಾಂತೆನೆಂದಡೆ ಮೇಳವಾಡುವ **ಸಂಗ**
ಬೋಳೈಸುವ **ಸಂಗ** ಆಳಿಗೊಳಿಸುವ **ಸಂಗ**
ಇದಿರ ಕೈಯಲ್ಲಿ ಅಳಲಿಸುವ **ಸಂಗ**
ಬಳಲಿಸುವ **ಸಂಗ** ಒತ್ತಿನೋಡುವ **ಸಂಗ** ಒಳಹೊಱಗೆನ್ನದೆ
ಕೂಡಲಸಂಗಮ ದೇವಯ್ಯಾ
ಮಡಿವಾಳ ಮಾಚಿ ತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು.

ಖುಷಿ ಬಂದ ಹಾಗೆ ಪಾದ ವಿಭಾಗ ಮಾಡಿರುವುದಕ್ಕೆ ಇದು ಒಳ್ಳೆಯ ನಿದರ್ಶನ. ಇಲ್ಲಿ 'ಸಂಗ' ಎಂಬುದು ಪುನರುಕ್ತಿಯಾದುದರಿಂದ ಅದು ಪಾದವಿಭಾಗ ಮಾಡುತ್ತದೆ. 'ಬೆಚ್ಚಿ ಬಿಸುಡುವ ಸಂಗ' ಎಂಬಲ್ಲಿ ಒಂದು ಪಾದವಾದ ಹಾಗೆ ಉಳಿದ ಕಡೆಗಳಲ್ಲೂ ಹಾಗೆಯೇ ಆಗಬೇಕು. ಈಗ ನೋಡಿ ಈ ಸುಂದರ ವಚನದ ರೂಪ:

ಬೆದಱಿಸುವ **ಸಂಗ**
ಬೆಚ್ಚಿಸುವ **ಸಂಗ**
ಬೆಚ್ಚಿಬಿಸುಡುವ **ಸಂಗ**
ತನ್ನ ನಚ್ಚಿ ಮುಚ್ಚಿ ಮುಯ್ಯಾಂತೆನೆಂದಡೆ ಮೇಳವಾಡುವ **ಸಂಗ**.
ಬೋಳೈಸುವ **ಸಂಗ**
ಆಳಿಗೊಳಿಸುವ **ಸಂಗ**
ಇದಿರ ಕೈಯಲ್ಲಿ ಅಳಲಿಸುವ **ಸಂಗ**

ಬಳಲಿಸುವ **ಸಂಗ**
ಒತ್ತಿ ನೋಡುವ **ಸಂಗ**
ಒಳಹೊಱಗೆನ್ನದೆ
ಕೂಡಲಸಂಗಮದೇವಯ್ಯಾ
ಮಡಿವಾಳ ಮಾಚಿ ತಂದೆಯ ಕೃಪೆಯುಳ್ಳನ್ನಕ್ಕರ ನಾನಂಜೆನು.

೩೬. ಧನ ಹೋಯಿತ್ತೆಂ**ದಡೆ** ಮನಸು ಬೆದಱಿ**ದಡೆ** ಚಿತ್ತಹೆದಱಿ**ದಡೆ**
ತನು ತೆರಳಿ**ದಡೆ** ಭಾವ ಓಸರಿಸಿ**ದಡೆ**
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ತನುಮನಧನವನಲ್ಲಾಡಿಸಿ ನೋಡುವ ಒಡೆಯನು ನೀನೆ
ಹರಣವ ಮೇಲತ್ತಡೆ ಕಳವಳವೆ, **ಕೂಡಲ ಸಂಗಮದೇವಾ?**

ಮೇಲಿನ ಅಂತ್ಯ ಪ್ರಾಸಗಳು ಪಾದ ವಿಭಾಗವನ್ನು ಎಲ್ಲಿ ಮಾಡಬೇಕೆಂಬುದನ್ನು ಹೇಳುತ್ತವೆ. 'ಕೂಡಲ ಸಂಗಮದೇವಾ' ಎಂಬುದು ಹೇಗೂ ಪ್ರತ್ಯೇಕವಾದ ಪಾದ. ಈಗ ನೋಡಿ ಈ ವಚನದ ರೂಪವನ್ನು:

ಧನ ಹೋಯಿತ್ತೆಂ**ದಡೆ**
ಮನಸು ಬೆದಱಿ**ದಡೆ**
ಚಿತ್ತಹೆದಱಿ**ದಡೆ**
ತನು ತೆರಳಿ**ದಡೆ**
ಭಾವ ಓಸರಿಸಿ**ದಡೆ**
ಆಣೆ, ನಿಮ್ಮಾಣೆ, ನಿಮ್ಮ ಪ್ರಮಥರಾಣೆ
ತನುಮನಧನವನಲ್ಲಾಡಿಸಿ ನೋಡುವ ಒಡೆಯನು ನೀನೆ
ಹರಣವ ಮೇಲತ್ತಡೆ ಕಳವಳವೆ
ಕೂಡಲ ಸಂಗಮದೇವಾ?

೩೭. ಹೊಯಿದವರೆನ್ನ ಹೊರೆದವ**ರೆಂಬೆ** ಬಯಿದವರೆನ್ನ ಬಂಧುಗ**ಳೆಂಬೆ**
ನಿಂದಿಸಿದವರೆನ್ನ ತಂದೆ ತಾಯಿಗ**ಳೆಂಬೆ** ಆಳಿಗೊಂಡವರೆನ್ನ ಆಳ್ದ**ರೆಂಬೆ**
ಜಱಿದವರೆನ್ನ ಜನ್ಮ ಬಂಧುಗ**ಳೆಂಬೆ**
ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದ**ರೆಂಬೆ**
ಕೂಡಲ ಸಂಗಮದೇವಾ.

ಇಲ್ಲಿ 'ಎಂಬೆ' ಎಂಬ ಪುನರುಕ್ತಿ ಪಾದ ವಿಭಾಗವನ್ನು ಸೂಚಿಸುವುದು. ಮೂರು, ನಾಲ್ಕನೆಯ ಪಾದಗಳನ್ನು ಸರಿಯಾಗಿ ವಿಭಾಗಿಸಿದವರು ಒಂದು ಎರಡನೆಯ ಸಾಲುಗಳನ್ನು ಸರಿಯಾಗಿ ವಿಭಾಗಿಸಲಿಲ್ಲ! ಕ್ರಮಕ್ಕೆ ಬದ್ಧರಾಗಲಿಲ್ಲ!

ಹೊಯಿದವರೆನ್ನ ಹೊರೆದವ**ರೆಂಬೆ**
ಬಯಿದವರೆನ್ನ ಬಂಧುಗ**ಳೆಂಬೆ**
ನಿಂದಿಸಿದವರೆನ್ನ ತಂದೆತಾಯಿಗ**ಳೆಂಬೆ**
ಆಳಿಗೊಂಡವರೆನ್ನ ಆಳ್ದ**ರೆಂಬೆ**
ಜಱೆದವರೆನ್ನ ಜನ್ಮ ಬಂಧುಗ**ಳೆಂಬೆ**
ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದ**ರೆಂಬೆ**
ಕೂಡಲ ಸಂಗಮದೇವಾ.

೩೮. ತನುವಿಡಿದಿಹುದು ಪ್ರಕೃತಿ, ಪ್ರಕೃತಿವಿಡಿದಿಹುದು ಪ್ರಾಣ
ಪ್ರಾಣವಿಡಿದಿಹುದು ಜ್ಞಾನ, ಜ್ಞಾನವಿಡಿದಿಹುದು ಗುರು
ಇಂತೀ ಗುರುಲಿಂಗ ಜಂಗಮಪ್ರಸಾದವ
ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ
ಸಂದೇಹಿ ವ್ರತಗೇಡಿಗಳನೇನೆಂಬೆ
ಅಂತವರ ಮುಖವ ತೋಱದಿರು ಕೂಡಲ ಸಂಗಮದೇವಾ.

ಇಲ್ಲಿ ಮೊದಲ ಎರಡು ಪಂಕ್ತಿಗಳಲ್ಲಿ ಎರಡೆರೆಡು ಪಾದಗಳಿವೆ ಎಂಬುದು ಸ್ಪಷ್ಟ. 'ಕೂಡಲ ಸಂಗಮದೇವಾ' ಎಂಬುದು ಪ್ರತ್ಯೇಕ ಪಾದ, ಈಗ ಈ ವಚನ ಹೀಗಾಗುತ್ತದೆ.

ತನುವಿಡಿದಿಹುದು ಪ್ರಕೃತಿ
ಪ್ರಕೃತಿ ವಿಡಿದಿಹುದು ಪ್ರಾಣ
ಪ್ರಾಣವಿಡಿದಿಹುದು ಜ್ಞಾನ
ಜ್ಞಾನ ವಿಡಿದಿಹುದು ಗುರು
ಇಂತೀ ಗುರುಲಿಂಗ ಜಂಗಮ ಪ್ರಸಾದವ
ಸಗುಣವೆಂದು ಹಿಡಿದು ನಿರ್ಗುಣವೆಂದು ಕಂಡ
ಸಂದೇಹ ವ್ರತಗೇಡಿಗಳನೇನೆಂಬೆ?
ಅಂತವರ ಮುಖವ ತೋಱದಿರು
ಕೂಡಲ ಸಂಗಮದೇವಾ.

೩೯. ಅಯ್ಯಾ, ನಿಮ್ಮ ಶರಣರ ಕಂಡ ಕಡುಸುಖವನೇನೆಂಬೆನಯ್ಯಾ?
ಅದು ಸಾಲೋಕ್ಯದಂತು**ಟಲ್ಲ** ಸಾಮೀಪ್ಯದಂತು**ಟಲ್ಲ**
ಸಾರೂಪ್ಯ ದಂತು**ಟಲ್ಲ** ಸಾಯುಜ್ಯ ದಂತು**ಟಲ್ಲ**
ಕೂಡಲ ಸಂಗಯ್ಯಾ, ನಿಮ್ಮ ಶರಣರ ಚರಣದ
ದರುಶನ ಸ್ಪರುಷನದಿಂದಾನು ಧನ್ಯನಾದೆನು.

'ಅಲ್ಲ' ಎಂಬ ಪ್ರನರುಕ್ತಿ ಇದರ ಪಾದಗಳನ್ನು ವಿಭಾಗಿಸುತ್ತದೆ. 'ಕೂಡಲ ಸಂಗಯ್ಯಾ' ಎಂಬುದು ಈ ವಚನದ ರೂಪ ನಿಜವಾಗಿ ಹೀಗಿರಬೇಕಿತ್ತು: ಪ್ರತ್ಯೇಕ ಪಾದ.

ಅಯ್ಯಾ, ನಿಮ್ಮ ಶರಣರ ಕಂಡ ಕಡುಸುಖವನೇನೆಂಬೆನಯ್ಯಾ?
ಅದು ಸಾಲೋಕ್ಯದಂತು**ಟೆಲ್ಲ**
ಸಾಮೀಪ್ಯದಂತು**ಟೆಲ್ಲ**
ಸಾರೂಪ್ಯದಂತು**ಟೆಲ್ಲ**
ಸಾಯುಜ್ಯದಂತು**ಟೆಲ್ಲ**
ಕೂಡಲ ಸಂಗಯ್ಯಾ
ನಿಮ್ಮ ಶರಣರ ಚರಣದ ದರುಶನ ಸ್ಪರುಶನದಿಂದಾನು ಧನ್ಯನಾದನು.

೪೦. **ಅಂಜದಿರಂಜದಿರು ಹಂದೆ ಓಡದಿರು ಓಡದಿರು ಹೇಡಿ**
ಆಳಿನಾಳು ಕೀಳಾಳು ಬಹಗೆ
ಹೋಗದಿರು ಹೋಗದಿರು **ಕೂಡಲಸಂಗಮದೇವಾ.**

ಇಲ್ಲಿ 'ಕೂಡಲಸಂಗಮದೇವಾ' ಎಂಬುದು ಪ್ರತ್ಯೇಕ ಪಾದವಾಗುವುದು. ಮೊದಲನೆಯ ಸಾಲಿನಲ್ಲಿ ಎರಡು ಪಾದಗಳಿವೆ. ಈಗ ನೋಡಿ ಈ ವಚನ:

ಅಂಜದಿರಂಜದಿರು ಹಂದೆ
ಓಡದಿರು ಓಡದಿರು ಹೇಡಿ
ಆಳಿನಾಳು ಕೀಳಾಳು ಬಹಗೆ
ಹೋಗದಿರು ಹೋಗದಿರು
ಕೂಡಲ ಸಂಗಮದೇವಾ.

೪೧. ಭಕ್ತಿಯುಕ್ತಿಯ**ನಱಿಯೆ** ಷೋಡಶೋಪಚಾರವ**ನಱಿಯೆ**
ಭಾವ ನಿರ್ಭಾವವ**ನಱಿಯೆ** ಜ್ಞಾನ ಮಹಾಜ್ಞಾನವ**ನಱಿಯೆ**
ಕೂಡಲಸಂಗಮದೇವಯ್ಯಾ
ಮಡಿವಾಳ ತಂದೆಗಳ ಪಾದಕ್ಕೆ ನಮೋ ನಮೋ ಎನುತಿರ್ದೆನು.

ಇಲ್ಲಿ 'ಅಱಿಯೆ' ಎಂಬ ಪ್ರನರುಕ್ತಿ ಪಾದ ವಿಭಾಗವನ್ನು ಮಾಡುವುದು:

ಭಕ್ತಿಯುಕ್ತಿಯ**ನಱಿಯೆ**
ಷೋಡಶೋಪಚಾರವ**ನಱಿಯೆ**
ಭಾವ ನಿರ್ಭಾವವ**ನಱಿಯೆ**
ಜ್ಞಾನ ಮಹಾಜ್ಞಾನವ**ನಱಿಯೆ**
ಕೂಡಲಸಂಗಮದೇವಯ್ಯಾ
ಮಡಿವಾಳ ತಂದೆಗಳ ಪಾದಕ್ಕೆ ನಮೋ ನಮೋ ಎನುತಿರ್ದೆನು.

೪೨. ಕಾಲ ಮುಟ್ಟಲಮ್ಮದ **ಸಯಿದಾನ** ಕಲ್ಪಿತವಿಲ್ಲದ **ಸಯಿದಾನ**
ಅನಂತರತಿ ಎಂಬ ಹೆಂಗೂಸು ಮುಟ್ಟದ **ಸಯಿದಾನ**
ಫಾಳಲೋಚನನೆಂಬ ಜಂಗಮ ಮುಟ್ಟದ **ಸಯಿದಾನ**
ಎಲ್ಲಿಯೂ ಮುಟ್ಟದ ಸಯಿದಾನವ ನಿಮಗರ್ಪಿಸಿದೆನು–
ಆರೋಗಿಸಯ್ಯಾ ಪ್ರಭುವೆ, **ಕೂಡಲ ಸಂಗಮದೇವಾ.**

ಇಲ್ಲಿ 'ಸಯಿದಾನ' ಎಂಬ ಪುನರುಕ್ತಿ ಪಾದ ವಿಭಾಗವನ್ನು ನಿರ್ಣಯಿಸುವುದು. ಎರಡು, ಮೂರನೆಯ ಸಾಲುಗಳನ್ನು ಸರಿಯಾಗಿ ವಿಭಾಗಿಸಿ ಮೊದಲನೆಯ ಸಾಲನ್ನು ಎರಡು ಪಾದವಾಗಿ ಒಡೆಯಲಿಲ್ಲವೇಕೋ ತಿಳಿಯದು! 'ಕೂಡಲಸಂಗಮದೇವಾ' ಎಂಬುದು ಪ್ರತ್ಯೇಕ ಪಾದ ಎಂಬುದನ್ನು ಉದ್ದಕ್ಕೂ ನೋಡಿರುವೆವು. ಈಗ ಈ ವಚನದ ರೂಪ ಹೀಗಾಗುತ್ತದೆ:

ಕಾಲ ಮುಟ್ಟಲಮ್ಮದ **ಸಯಿದಾನ**
ಕಲ್ಪಿತವಿಲ್ಲದ **ಸಯಿದಾನ**
ಅನಂತರತಿ ಎಂಬ ಹೆಂಗೂಸು ಮುಟ್ಟದ **ಸಯಿದಾನ**
ಫಾಳಲೋಚನನೆಂಬ ಜಂಗಮ ಮುಟ್ಟದ **ಸಯಿದಾನ**
ಎಲ್ಲಿಯೂ ಮುಟ್ಟದ ಸಯಿದಾನವ ನಿಮಗರ್ಪಿಸಿದೆನು–
ಆರೋಗಿಸಯ್ಯಾ ಪ್ರಭುವೆ
ಕೂಡಲ ಸಂಗಮದೇವಾ.

ಹೀಗೆಯೇ ಪ್ರತಿಯೊಂದು ವಚನವನ್ನು ಒಂದು ಕ್ರಮಕ್ಕೆ, ರೀತಿಗೆ, ಸೂತ್ರಕ್ಕೆ ಅಳವಡಿಸುವುದು ಸಾಧ್ಯ ಎಂಬುದನ್ನು ಈ ಮೇಲಿನಂತೆ ತೋರಿಸಬಹುದು. ಇಷ್ಟರವರೆಗೆ ಎಲ್ಲ ಸಂಪಾದಕರೂ ತಮತಮಗೆ ತೋರಿದಂತೆ ಯದ್ವಾತದ್ವಾ ಪಾದ ವಿಭಾಗಮಾಡಿ ವಚನಗಳ ಸ್ವರೂಪವನ್ನು ಕೆಡಿಸಿರುವರು, ಎಂಬುದು ಮೇಲಿನ ವಚನಗಳ ರೂಪಾಂಶವನ್ನು ನಿರ್ಣಯಿಸುವಲ್ಲಿ ತಿಳಿಯುವುದು. ಮೇಲಿನ ವಚನಗಳನ್ನು ರೂಪಿಸುವಲ್ಲಿ ನಾನು ಎಲ್ಲ ವಚನಗಳಿಗೂ ಅನ್ವಯಿಸುವಂಥ ಒಂದು ಕ್ರಮ, ರೀತಿ, ಸೂತ್ರವನ್ನು ಅನುಸರಿಸಿದ್ದೇನೆ–ವಚನಗಳ ಸಂಪಾದನೆಯ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ! ಇದನ್ನು ಇನ್ನು ಮುಂದಿನ ಸಂಪಾದಕರು ಅಗತ್ಯವಾಗಿ ಗಮನಿಸಬೇಕು. ಇಲ್ಲವಾದಲ್ಲಿ, **'ಸಾಂಪ್ರದಾಯಿಕ ರೀತಿ'**ಯಲ್ಲಿ ಉದ್ದಕ್ಕೂ ಬರೆದರೆ ಯಾವ ರಗಳೆಯೂ ಇಲ್ಲ!

೪

ಹೀಗೆಯೇ ಎಲ್ಲ ಶರಣರ ಎಲ್ಲ ವಚನಗಳನ್ನೂ ಈ ರೀತಿಯಿಂದ ಸಂಪಾದಿಸುವ ಅಗತ್ಯವಿದೆ. ಸರ್ಕಾರದ ವತಿಯಿಂದ ಹತ್ತು ಸಂಪುಟಗಳಲ್ಲಿ ಪ್ರಕಟವಾಗುವುದು ಎಂದು ಹೇಳಲಾದ ವಚನ ಸಂಪುಟಗಳಲ್ಲಿ **'ಸಾಂಪ್ರದಾಯಿಕ ರೀತಿ'**ಯನ್ನು ಅನುಸರಿಸುವರೋ,

ನಾನು ಹೇಳಿದ ರೀತಿಯಲ್ಲಿ ಅದರ **ರೂಪಾಂಶಕ್ಕೆ ಬೆಲೆ ಕೊಟ್ಟು ಪಾದ ಪಾದಗಳಾಗಿ ವಿಂಗಡಿಸಿ ಸಂಪಾದಿಸುವರೋ** ಎಂಬುದನ್ನು ಕಾದುನೋಡಬೇಕು. 'ಸಾಂಪ್ರದಾಯಿಕ ರೀತಿ'ಯಲ್ಲಿ ಪ್ರಕಟಿಸಿದರೆ ಯಾವ ಅಭಿಪ್ರಾಯ ಭೇದಕ್ಕೂ ಎಡೆಯಿಲ್ಲವೆ ಕೆಲಸ ಸುಸೂತ್ರ ವಾಗುವುದು; ಅಲ್ಲದೆ ಕಾಗದವೂ ಕಡಿಮೆ ಸಾಕಾಗುತ್ತದೆ! ಪಾದ ವಿಭಾಗ ಮಾಡಬೇಕಾದರೆ ನಾನು ತೋರಿಸಿದ ಮಾರ್ಗದಲ್ಲಿ ಮುಂದುವರಿಯಬೇಕು. ಈ ವಿಚಾರವನ್ನು ನಾನು ೧೯೬೬(?)ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ನಡೆಸಿದ ಬಸವಣ್ಣನವರ ೮೦೦ನೆಯ ವರ್ಷದ ಸಮಾರಂಭದಲ್ಲಿ ಒಂದು ಪುಟ್ಟ ಲೇಖನದ ಮೂಲಕ ಪ್ರಕಟಪಡಿಸಿದೆ. ಆದರೆ ದುರ್ದೈವವಶಾತ್, ಅದನ್ನು ಯಾರೂ ಗಮನಿಸಿದಂತೆ ಕಾಣುವುದಿಲ್ಲ! **ಸರ್ಕಾರದ ಸಂಪುಟಗಳನ್ನು ಎಂದಿನಂತೆ ಯದ್ವಾತದ್ವಾ ಸಂಪಾದಿಸಿದರೆ ನಾನು ಸುಮ್ಮನಿರು ವುದಿಲ್ಲ.** ಅದರ ಲೋಪದೋಷಗಳನ್ನು ಬಯಲಿಗೆ ಎಳೆಯುತ್ತೇನೆ! ಅದು ನನ್ನ ಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ಮೇಲೆ ಕೊಟ್ಟ ವಚನಗಳ ರೂಪಾಂಶ, ಕೇವಲ ನಿದರ್ಶನಗಳಷ್ಟೇ; ಇದರ ದರ್ಶನ ಇನ್ನೂ ಉಂಟು! ಅದನ್ನು ಬೇರೆಡೆಯಲ್ಲಿ ಸಂದರ್ಭ ಬಂದಾಗ ಬರೆಯುತ್ತೇನೆ. ವಚನ ಸಾಹಿತ್ಯ ಯಾವುದೇ ಒಂದು ಜಾತಿಯ ಸೀಮಿತವಾದ ಸಾಹಿತ್ಯವಲ್ಲ. ಅದು ಸಾರ್ವಜನಿಕ ಸೊತ್ತು. ಅದರ ಬಗೆಗೆ ಯೋಚಿಸುವುದಕ್ಕೆ, ವಿಮರ್ಶಿಸುವುದಕ್ಕೆ, ಅದನ್ನು ಪುನಾರೂಪಿ ಸುವುದಕ್ಕೆ ಸಾಹಿತ್ಯದ ಪ್ರತಿಯೊಬ್ಬ ಮೇಧಾವಿಗೂ ಹಕ್ಕಿದೆ. ಇಲ್ಲಿ ನಾನು ಸೂಚಿಸಿದ ಮಾರ್ಗ ಕ್ರಾಂತಿಯ ದಾರಿ. ಈ ದಾರಿಯಲ್ಲಿ ಹೋಗುವುದಕ್ಕೆ ಎಂಟೆದೆ ಬೇಕು; ಧೈರ್ಯ ಬೇಕು, ಕ್ರಾಂತಿಯ ಮನೋಭಾವ ಬೇಕು, ಸತ್ಯದ ದಾರಿಯಲ್ಲಿ ಹೋಗಲು ಯಾರ ಭಯವೂ ಇಲ್ಲ! ಆ ಸತ್ಯದ ಮಾರ್ಗದಲ್ಲಿ ಹೋಗಿ ತಮ್ಮ ಸತ್ಯ ಪ್ರಿಯತೆಯನ್ನು ಲೋಕಕ್ಕೆ ಪ್ರಕಟಪಡಿಸಲಿ ಎಂದು ನಾನು ಹಾರೈಸುವೆ.

□ □

ಕನ್ನಡದ ಆದಿಕಾವ್ಯ ಮತ್ತು ಅದರ ಮುಖ್ಯ ಆಕರ

—ಡಾ. ಎಸ್. ಪಿ. ಪದ್ಮಪ್ರಸಾದ್

ಭಾರತದಲ್ಲಿ ಸಾಹಿತ್ಯ ರಚನಾಕಾರರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟು ಅವರು ನಿಶ್ಚಿಂತೆಯಾಗಿ ಆ ಕೆಲಸದಲ್ಲಿ ತೊಡಗುವಂತೆ ಮಾಡಿದ ಶ್ರೇಯಸ್ಸು-ತೀರಾ ಈಚಿನವರೆಗೂ, ಇಲ್ಲಿನ ಅರಮನೆ-ಗುರುಮನೆಗಳದ್ದು. ಇದರ ಜೊತೆಗೆ ಇಲ್ಲಿನ ದೊರೆಗಳೂ ಯತಿಗಳೂ ಶಾಸ್ತ್ರ ಹಾಗೂ ಸಾಹಿತ್ಯ ಕೃತಿಗಳನ್ನು ರಚಿಸಿರುವ ಉದಾಹರಣೆಗಳಿಗೇನೂ ಕಡಿಮೆ ಇಲ್ಲ. ಕನ್ನಡದ ಮಟ್ಟಿಗೂ ಈ ಮಾತು ನಿಜ. ಇಲ್ಲಿನ ಒಂದು ವಿಶೇಷವೆಂದರೆ, ಇಲ್ಲಿನ ಆದಿಕಾವ್ಯ ಒಬ್ಬ ರಾಜಾಶ್ರಿತ ಕವಿಯಿಂದ ರಚಿತವಾದರೆ, ಅದಕ್ಕೆ ಮೂಲ ಆಕರವಾದ ಸಂಸ್ಕೃತ ಗ್ರಂಥ ಒಬ್ಬ ಯತಿಯಿಂದ ರಚಿತವಾದದ್ದು.

ಎಲ್ಲರೂ ಬಲ್ಲಂತೆ ಪಂಪನ 'ಆದಿಪುರಾಣ' ಕನ್ನಡದ ಮೊದಲ ಕಾವ್ಯ. (ಕೆಲವು ವಿದ್ವಾಂಸರು ಅವನ 'ವಿಕ್ರಮಾರ್ಜುನ ವಿಜಯ'ವೇ ಮೊದಲ ಕಾವ್ಯವೆಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದ್ದಾರೆ.) ಈ ಕಾವ್ಯಕ್ಕೆ ಮೂಲದ್ರವ್ಯ ಬಂದಿದ್ದು ಆಚಾರ್ಯ ಜಿನಸೇನರು ರಚಿಸಿದ 'ಪೂರ್ವ ಪುರಾಣ' ಕಾವ್ಯದಿಂದ.

ಪಂಪ ಹಾಗೂ ಆಚಾರ್ಯ ಜಿನಸೇನರಿಬ್ಬರೂ ಅಸದೃಶ ಪ್ರತಿಭಾಶಾಲಿಗಳು. ಜಿನಸೇನರ ಕಾವ್ಯರಚನೆ ಪಂಪನಿಗಿಂತ ಒಂದು ಶತಮಾನ ಹಿಂದೆ ನಡೆದಿದ್ದು, ಮೊದಲಿನದು ಕನ್ನಡ ರಚನೆಯಾದರೆ, ಎರಡನೆಯದು ಸಂಸ್ಕೃತ ರಚನೆ.

ಕನ್ನಡ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಎಲ್ಲರೂ ಪಂಪವ್ಯಾಸಂಗಿಗಳಾಗಲೇಬೇಕಾದು ಅನಿವಾರ್ಯ. ಪಂಪನ ಸ್ವಂತ ಸಾಮರ್ಥ್ಯದ ಅರಿವಾಗಬೇಕಾದರೆ ಅವನ ಕಾವ್ಯವನ್ನು ಅದರ ಆಕರದೊಂದಿಗೆ ಹೋಲಿಸಿ ನೋಡಬೇಕಾದ್ದೂ ಅನಿವಾರ್ಯ. ಅಂಥ ಒಂದು ಸ್ಥೂಲಾವಲೋಕನದ ಪ್ರಯತ್ನ ಈ ಲೇಖನ.

ಪಂಪನ ಆದಿಪುರಾಣ ಹದಿನಾರು ಆಶ್ವಾಸಗಳ ಮಹಾಕಾವ್ಯ. ಅದರ ರಚನಾಕಾಲ ಕ್ರಿ. ಶ. ೯೪೧. ಆಚಾರ್ಯ ಜಿನಸೇನರ 'ಪೂರ್ವಪುರಾಣ' ೪೭ ಆಶ್ವಾಸಗಳ ಬೃಹತ್ ಕಾವ್ಯ. ರಚನಾಕಾಲ ಸುಮಾರು ಕ್ರಿ. ಶ. ೮೪೦. ಎರಡರ ವಸ್ತುವೂ ಒಂದೇ-ಜೈನರ ಪ್ರಥಮ ತೀರ್ಥಂಕರನಾದ ಆದಿದೇವನ ಒಟ್ಟು ಚರಿತ್ರೆ.

ಈ ಎರಡೂ ಕಾವ್ಯಗಳ ವಿಸ್ತಾರ ಪೆಟ್ಟಾಗಿರುವುದರಿಂದ ('ಪೂರ್ವಪುರಾಣ'ಕ್ಕೆ

ಆಚಾರ್ಯ ಗುಣಭದ್ರರು 'ಉತ್ತರ ಪುರಾಣ' ವೊಂದನ್ನು ಬರೆದು ಸೇರಿಸಿ ಒಟ್ಟು ೨೪ ಜಿನ ತೀರ್ಥಂಕರರ ಚರಿತ್ರೆಯನ್ನು ಪೂರ್ತಿಗೊಳಿಸಿದ್ದಾರೆ. ಈ ಎರಡೂ ಭಾಗಗಳನ್ನೂ ಕೂಡಿ 'ಮಹಾ ಪುರಾಣ' ಎಂದು ಕರೆಯಲಾಗುತ್ತದೆ.) ಒಂದು ಲೇಖನದ ವ್ಯಾಪ್ತಿಯಲ್ಲಿ ಸಂಪೂರ್ಣ ತುಲನೆ ಸಾಧ್ಯವಿಲ್ಲ. ಆದ್ದರಿಂದ ಕೆಲವು ಆಯ್ದ ಸನ್ನಿವೇಶಗಳನ್ನು ಹೆಕ್ಕಿ ತೆಗೆದು ಇಬ್ಬರು ಕವಿಗಳ ಪ್ರತಿಭಾ ಕುಂಚದಿಂದ ಅವು ಒಡಮೂಡಿದ ರೀತಿಯನ್ನು ಹೋಲಿಸಲಾಗಿದೆ. ಸಾಕಷ್ಟು ದೂರದೂರದ ಘಟನೆಗಳನ್ನಿಲ್ಲಿ ಆಯ್ದು ತೆಗೆದು ಪರಿಶೀಲಿಸ ಲಾಗಿರುವುದರಿಂದ ಇಲ್ಲಿನ ಪರಿಶೀಲನೆ ಸಾಕಷ್ಟು ಪ್ರಾತಿನಿಧಿಕವೇ ಆಗಿದೆ.

ಜಿನಸೇನಾಚಾರ್ಯರ ಕೃತಿ-ತಮ್ಮ ಪೂರ್ವ ಪರಂಪರೆಯಿಂದ ಬಂದ ಕತೆಯನ್ನು ಇಡಿಯಾಗಿ ಸಂಗ್ರಹಿಸುವ ಉದ್ದೇಶದ್ದು. ನಂತರದ ಎಲ್ಲ ಜೈನ ಕವಿಗಳೂ ಕತೆಗಾಗಿ ಈ ಗುರು-ಶಿಷ್ಯರ (ಜಿನಸೇನರು-ಗುಣಭದ್ರರು) ಕೃತಿಯನ್ನು ನೋಡಲೇಬೇಕಾದ್ದು ಅನಿವಾರ್ಯವಾಗಿತ್ತು. ಯಾಕೆಂದರೆ, ತಮ್ಮವರೆಗಿನ ಕಥಾ ಪರಂಪರೆಯನ್ನು ಅಧಿಕೃತವಾಗಿ ಈ ಗುರು-ಶಿಷ್ಯರು ಮಹಾಪುರಾಣದಲ್ಲಿ ಸಂಗ್ರಹಿಸಿಟ್ಟಿದ್ದರು ಹಾಗೂ ಪುರಾಣಗಳ ರಚನೆ ಮಾಡುವ ಕವಿಗಳು ಈ 'ಅಧಿಕೃತ' ಕತೆಗಳಿಂದ ಆಚೆ ಹೋಗುವಂತಿರಲಿಲ್ಲ. ಆದ್ದರಿಂದಲೇ 'ಮಹಾ ಪುರಾಣ' ಪಂಪನನ್ನೂ ಕೂಡಿಸಿ ಅನಂತರದ ಜೈನ ಪುರಾಣ ಕಾವ್ಯಗಳಿಗೆ ಮುಖ್ಯವಾದ ಆಕರವಾಯ್ತು.

ಈ ತೌಲನಿಕ ಸಮೀಕ್ಷೆಗೆ ಪ್ರಚೋದಕವಾಗಿರುವ ಇನ್ನೊಂದು ಅಂಶ ಎಂದರೆ ಕೆಲವು ವಿದ್ವಾಂಸರುಗಳು ಈ ಬಗ್ಗೆ ನೀಡಿರುವ ಆತುರದ ತೀರ್ಮಾನಗಳು. "ಆದಿ ಪುರಾಣಕ್ಕೆ ಪೂರ್ವ ಪುರಾಣ ಆಧಾರ. ಪಂಪನು ಜಿನಸೇನಾಚಾರ್ಯರಿಗೆ ಚಿರಋಣಿ. ಆದರೂ ಪಂಪನು ಇದನ್ನು ಹೇಳಿಕೊಂಡಿಲ್ಲ. ಈ ಮಹಾಕವಿ ಜಿನಸೇನಾಚಾರ್ಯರನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳಲು ಒಂದು ಪದ್ಯವನ್ನು ಮೀಸಲಾಗಿಡಲಿಲ್ಲವಲ್ಲ!"-ಎಂದು ಕೆಲವು ವಿದ್ವಾಂಸರು ನಿಡುಸುಯ್ದಿದ್ದಾರೆ.[೧] ಅಷ್ಟೇ ಅಲ್ಲ-"ಪಂಪನು ಪೂರ್ವಪುರಾಣವನ್ನು ವರ್ಣನಾ ಪ್ರಕಾರದಲ್ಲಿ ಪೂರ್ತಿಯಾಗಿ ಅನುಕರಿಸಿದ್ದಾನೆ. ಅದೇ ಉಪಮೆ, ಅದೇ ಉತ್ಪ್ರೇಕ್ಷೆ, ಅದೇ ರೂಪಕವನ್ನಿದರಲ್ಲಿ ಕಾಣಬಹುದು. ಕೆಲವೆಡೆ-ಆಯಾ ವರ್ಣನೆಯಲ್ಲಿ ಪೂರ್ವಪುರಾಣದಲ್ಲಿರುವ ಶಬ್ದ ಸಹ ಬಳಸಿದ್ದಾನೆ."[೨]-ಎಂದು ಆದಿ ಪುರಾಣ ತನ್ನ ಯಶಸ್ಸಿನ ಶೇ. ೯೦ ರಷ್ಟನ್ನು ಪೂರ್ವ ಪುರಾಣಕ್ಕೆ ನೀಡಬೇಕೆಂಬ ಅರ್ಥದ ಮಾತುಗಳನ್ನು ಹೇಳಿ ಕೊನೆಗೆ, ಪಂಪ ಆದಿ ಪುರಾಣದಲ್ಲಿ 'ಸ್ವತಂತ್ರವಾಗಿ ಕೆಲವು ಸುಂದರ ವರ್ಣನೆಗಳನ್ನೂ ಮಾಡಿದ್ದಾನೆ. ಕೆಲವೆಡೆ ವ್ಯಾಸ ಸಮಾಸಗಳಿಂದ ಪರಿಷ್ಕರಿಸಿದ್ದಾನೆ'[೩]-ಎಂದು 'ಗ್ರೇಸ್

---

೧ ವಿದ್ವಾನ್ ಎನ್. ರಂಗನಾಥ ಶರ್ಮಾ— 'ಆದಿ ಪುರಾಣ'ಕ್ಕೆ ಬರೆದ 'ಬಿನ್ನಹ'ದಲ್ಲಿ ಪ್ರ: ಕನ್ನಡ ಸಾಹಿತ್ಯ ಪರಿಷತ್ತು (೧೯೮೦) ಪು. ೫೦

೨ }
೩ } ಅದೇ. ಪುಟ. ೪೯.

ಮಾರ್ಕ್ಸ್' ಸಹಾ ಕೊಟ್ಟಿದ್ದಾರೆ.

ಆದರೆ ಈ ವಿದ್ವಾಂಸರು ಅಭಿಪ್ರಾಯಪಡುವಷ್ಟು ಮಟ್ಟಿಗೆ ಪಂಪ ಪೂರ್ವ ಪುರಾಣಕ್ಕೆ ಋಣಿಯಾಗಿಲ್ಲ ಎಂಬುದು ಸರಿಯಾದ ತೌಲನಿಕ ಅಧ್ಯಯನದಿಂದ ಕಂಡು ಬರುತ್ತದೆ. ಕೇವಲ 'ಮಹಾಪುರಾಣವನ್ನು ಸಂಕ್ಷೇಪಿಸಿ, ಪರಿಷ್ಕರಿಸಿ, ಕೆಲವೆಡೆ ಉತ್ತಮ ಗೊಳಿಸಿ'೪ ಕನ್ನಡಿಗರಿಗಾಗಿ ಚಂಪೂ ಕಾವ್ಯವಾಗಿಸಿದ್ದಷ್ಟೆ ಪಂಪನ ಕೆಲಸವಾಗಿದ್ದಿದ್ದರೆ ಆತ ಖಂಡಿತವಾಗಿ 'ಮಹಾಕವಿ' ಹೆಸರಿಗೆ ತಕ್ಕವನಾಗಿರುತ್ತಿಲ್ಲ. 'ಇದುವೆ ಸುಕವಿ ಪ್ರಮೋದಂ ಇದುವೆ ಸಮಸ್ತ ಭವ್ಯಲೋಕ ಪ್ರಮದಂ'-ಎಂಬ ನೆಗಳ್ತೆಯನ್ನು ಇದು ಪಡೆಯುತ್ತಲೂ ಇರಲಿಲ್ಲ.

ಜಿನಸೇನಾಚಾರ್ಯರು ಆದಿ ಜಿನನ, ಅವನ ಮಕ್ಕಳ, ಕತೆಯನ್ನು ವಿಸ್ತಾರವಾಗಿ ಮನಂಬುಗುವಂತೆ ಹೇಳಿದ್ದಾರೆ-ತಮ್ಮ ಬೃಹತ್ಕೃತಿಯಲ್ಲಿ, ಪಂಪ ತನ್ನ ಕಾವ್ಯಕ್ಕೆ ಬೇಕಾದ ಕಥನಾಂಶಗಳನ್ನು ಅಲ್ಲಿಂದ ಎತ್ತಿಕೊಂಡಿದ್ದಾನೆ ಎಂಬುದೂ ನಿಜ. ಆದರೆ ಉಪಮೆ, ರೂಪಕ, ಶಬ್ದಶೈಲಿಯನ್ನು ಕೂಡ ಬಹುಮಟ್ಟಿಗೆ ಅಲ್ಲಿಂದಲೇ ಪಡೆದಿದ್ದಾನೆ ಎಂಬುದು ಪಂಪನನ್ನು ತೀರ ಸಾಧಾರಣೀಕರಿಸುವ, ಅವನ ಕಾವ್ಯಶ್ರಮವನ್ನು ತೃಣೀಕರಿಸುವ ಮಾತಾಗುತ್ತದೆ. ಪಂಪ ಕತೆಯ ಘಟನೆಗಳನ್ನೂ, ಹೆಸರುಗಳನ್ನೂ ಘಟನೆಯ ವಿವರಗಳನ್ನು ಪೂರ್ವಪುರಾಣದಿಂದಲೇ ತೆಗೆದುಕೊಳ್ಳಬೇಕಿದ್ದುದು (ಈಗಾಗಲೇ ಹೇಳಿರುವಂತೆ) ಅನಿವಾರ್ಯವಾಗಿತ್ತು. ಕಾರಣ-ಮಹಾಪುರಾಣದ ಕತೆ ವೃಷಭ ಗಣಧರರಿಂದ ಪರಂಪರೆ ಯಾಗಿ ಹರಿದು ಶ್ರೇಣಿಕನವರೆಗೆ ಬಂದಿದ್ದು,೫ ಅನಂತರ ಆಚಾರ್ಯ ಪರಂಪರೆಯಲ್ಲಿ ಭೂತ ಬಲಿ ಆಚಾರ್ಯರಿಂದ ಹರಿದು ಜಿನಸೇನಾಚಾರ್ಯರವರೆಗೆ ಬಂದದ್ದು. ಇದನ್ನು ಬಿಡುವ ಸ್ವಾತಂತ್ರ್ಯ ಪಂಪನಿಗಿರಲಿಲ್ಲ. ಮೇಲಾಗಿ, ಪಂಪ ಹೇಳ ಹೊರಟಿದ್ದು ಪರಂಪರೆಯಿಂದ ಬಂದ ಕತೆಯನ್ನೇ ಈ ಅಂಶವನ್ನವನು ಸ್ಪಷ್ಟಪಡಿಸಿದ್ದಾನೆ ಕೂಡ-

ಪುರುದೇವಾದಿ ಜಿನೇಂದ್ರಮಾಳೆ ಗಣಭೃತ್ಸಂತಾನ ಮೊಂದೀಪರಂ
ಪರೆಯಿಂ ವಿಶ್ರುತ ವೀರಸೇನ ಜಿನಸೇನಾಚಾರ್ಯ ಪರ್ಯಂತ ಮಾಗಿರೆ
ಬಂದೀ ಕತೆ ಗುಣ್ಪು ವೆತ್ತುದವರುಂ ಜ್ಞಾನರ್ಥಿ ಸಂಪನ್ನರೆಂ
ದಿರದಾಂ ಧೃಷ್ಟನೆನೀಕಥಾಬ್ಧಿಯುಮನೇ ನೀಸಲ್ಕನಂದಂಡನೋ||

(ಆ.ಪು. ಆಶ್ವಾಸ ೧. ಪದ್ಯ ೩೫)

ಈ ರೀತಿ ಪಂಪ ಜಿನಸೇನರಿಂದ ಬರಪರೂಪಕ್ಕಿಳಿಸಲ್ಪಟ್ಟ ಕತೆಯನ್ನು೬ ಕಥನಾಂಶ

---

೪ ಅದೇ. ಪುಟ. ೫೦.

೫ ನೋಡಿ 'ಆದಿ ಪುರಾಣ' ಆಶ್ವಾಸ ೧, ಪದ್ಯ ೪೧.

೬ ಈ ಪದ್ಯದಲ್ಲಿ ಆಚಾರ್ಯ ಜಿನಸೇನರನ್ನೂ ಆ ಪರಂಪರೆಯನ್ನು ಎಷ್ಟು ಉನ್ನತ ಸ್ಥಾನದಲ್ಲಿ ಇರಿಸಿದ್ದಾನೆ ಪಂಪ ಎಂಬುದನ್ನು ಗಮನಿಸಿ. ಇದರ ನಂತರವೂ ಜಿನ ಸೇನರಿಗೆ ಗೌರವ ಸೂಚಿಸಲು ಇನ್ನೊಂದು ಪದ್ಯ ಬರೆಯುವ ಅಗತ್ಯ ಇತ್ತೆ?

ಗಳಿಗಾಗಿ ಅನುಸರಿಸಿದ್ದರೂ, ಅದನ್ನು ಕನ್ನಡ ಕಾವ್ಯವಾಗಿಸುವಲ್ಲಿ ತನ್ನ ತನವನ್ನು ಬಹಳಷ್ಟು ಮಟ್ಟಿಗೆ ಮೆರೆದಿದ್ದಾನೆ. ಹಾಗೆ ನೋಡಿದರೆ ಜಿನಸೇನಾಚಾರ್ಯರ ಶೈಲಿ, ಸುಂದರ ಉಪಮೆಗಳು, ದೃಷ್ಟಾಂತಗಳು, ರೂಪಕಗಳು–ಇವುಗಳ ಆಕರ್ಷಣೆಯಿಂದ ತಪ್ಪಿಸಿಕೊಳ್ಳುವುದೇ ಕಷ್ಟ! ಅಷ್ಟು ಸೊಗಸಾಗಿವೆ ಅವು! ಆದರೆ ಪಂಪ ಪ್ರಯತ್ನ ಪೂರ್ವಕವಾಗಿ ತನ್ನದೇ ಆದ ಉಪಮೆಗಳನ್ನೂ ಪ್ರತಿಮೆಗಳನ್ನೂ ಸೃಷ್ಟಿಸಲು, ತನ್ನ ಕಲ್ಪನೆಗನುಗುಣವಾಗಿ ಕಾವ್ಯ ರಚಿಸಲು ಉದ್ದಕ್ಕೂ ಪ್ರಯತ್ನಿಸಿದ್ದಾನೆ ಎಂಬುದು ಈ ಎರಡೂ ಕೃತಿಗಳನ್ನು ಪಕ್ಕಪಕ್ಕದಲ್ಲಿಟ್ಟು ನೋಡಿದಾಗ ಗೋಚರವಾಗುತ್ತದೆ.

ಈ ಉದ್ದೇಶ ಸಾಧನೆಗಾಗಿಯೇ ಆತ ಪೂರ್ವಪುರಾಣದಲ್ಲಿ ಸಂಕ್ಷೇಪವಾಗಿದ್ದುದನ್ನು ಇಲ್ಲಿ ಕೆಲವೆಡೆ ವಿಸ್ತರಿಸಿದ್ದಾನೆ. ಅಲ್ಲಿ ವಿಸ್ತಾರವಾಗಿದ್ದುದನ್ನು ಇಲ್ಲಿ ಸಂಕ್ಷೇಪಿಸಿದ್ದಾನೆ. ಇಲ್ಲದ ಕೆಲವನ್ನೂ ಅಲ್ಲಲ್ಲಿ ಸೇರಿಸಿದ್ದಾನೆ. ಒಟ್ಟಾರೆ 'ವ್ಯಾಸ–ಸಮಾಸ' (ಬೇಕಾದಲ್ಲಿ ಹಿಗ್ಗಿಸಿ, ಬೇಡವಾದಲ್ಲಿ ಕುಗ್ಗಿಸುವುದು) ವಿಧಾನದಿಂದಲೂ ಸ್ವನಿರ್ಮಿತ ಕಾವ್ಯಾಲಂಕಾರಗಳಿಂದಲೂ ಒಂದು ಉತ್ಕೃಷ್ಟ ಕಾವ್ಯವನ್ನಿಲ್ಲಿ ಸೃಷ್ಟಿಸಿದ್ದಾನೆ.

೨

ಪೂರ್ವಪುರಾಣದಲ್ಲಿ ಜಿನಸೇನರು ಸಂಕ್ಷಿಪ್ತವಾಗಿ ಹೇಳಿರುವ ಕೆಲವು ಮುಖ್ಯಭಾಗಗಳನ್ನು ಪಂಪ ಅಗತ್ಯವಾದಷ್ಟು ಹಿಗ್ಗಿಸಿರುವುದಕ್ಕೆ ಕೆಲವು ಉದಾಹರಣೆಗಳನ್ನು ನೋಡೋಣ.

೧) ಸ್ವಯಂ ಬುದ್ಧ ಮಂತ್ರಿಯು ಮಹಾಬಲರಾಜನಿಗೆ ಉಪದೇಶ ನೀಡುವುದು ಒಂದು ಮುಖ್ಯ ಕಥನಾಂಶ. ಇದು ಪೂರ್ವಪುರಾಣದಲ್ಲಿ ಕೇವಲ ಮೂರೇ ಮಾತುಗಳಲ್ಲಿ ಮುಗಿದು ಹೋಗಿದೆ–

ಹಂತ ದುಃಖಾನುಬಂಧಾನಾಂ ಹಂತಾ ಧರ್ಮೋ ಜಿನೋದಿತಃ|
ತಸ್ಮಾತ್ತಸ್ಮಿನ್ಮತಿಂ ಧತ್ಸ್ವ ಮತಿಮನ್ನಿತಿ ಚಾನ್ವಶಾತ್|| (೫–೨೨೫)

ಈ ಮಾತು ಹೇಳುವ ಸನ್ನಿವೇಶ ಹೀಗಿದೆ - ಮಹಾಬಲರಾಜ ಭೋಗದಲ್ಲಿ ಮುಳುಗಿದ್ದಾನೆ. ಸ್ವಯಂಬುದ್ಧ ಮಂತ್ರಿ ಚಾರಣ ಋಷಿಗಳಿಂದ ಮಹಾಬಲನ ಪೂರ್ವಭವದ ವಿವರಗಳನ್ನೂ, ಇನ್ನೂ ಕೆಲವೇ ದಿನಗಳಲ್ಲಿ ಅವನ ಆಯುಸ್ಸು ತೀರಲಿರುವುದನ್ನು ತಿಳಿದು ಬಂದಿದ್ದಾನೆ. ಈಗ ದೊರೆಗೆ ಆತ ಅದನ್ನು ಹೇಳಿ, ಅವನು ಭೋಗತ್ಯಜಿಸಿ ವಿರಾಗಿಯಾಗುವಂತೆ ಮಾಡಬೇಕಿದೆ. ಇಷ್ಟೊಂದು ಗುರುತರವಾದ, ಸೂಕ್ಷ್ಮವಾದ ಸಂದರ್ಭದಲ್ಲಿ ಜಿನಸೇನರ ಸ್ವಯಂಬುದ್ಧ ಹೇಳುವಂತೆ– "ಎಲೈ ಬುದ್ಧಿಶಾಲಿಯಾದ ಮಹಾಬಲನೇ, ಜಿನೇಶ್ವರರಿಂದ ಹೇಳಲ್ಪಟ್ಟ ಈ ಧರ್ಮವು ದುಃಖ ಸಂಬಂಧಗಳನ್ನು ನಾಶಮಾಡುವುದೆಂಬುದು ಹರ್ಷದ ವಿಷಯವಾಗಿದೆ. ಆದ್ದರಿಂದ ಅಂಥ ಧರ್ಮಮಾರ್ಗದಲ್ಲಿ ಬುದ್ಧಿಯನ್ನಿಡು"– ಎಂದರೆ ಸಾಕೇ? ಆದ್ದರಿಂದಲೇ ಪಂಪ ಇದನ್ನು ಮೂರು ವೃತ್ತಗಳಿಗೆ (೧೨ ಪಂಕ್ತಿಗಳು) ವಿಸ್ತರಿಸಿ,

ಅವನು ಪಟ್ಟ ಭೋಗಗಳಾವುವು, ಅವು ಹೇಗೆ ನಿಸ್ಸಾರ ಎಂಬುದನ್ನು ಹೇಳಿದ್ದಾನೆ. ಪಂಪನ ಸ್ವಯಂಬುದ್ಧ ಹೇಳುತ್ತಾನೆ-

ಮನದಳಿಪಿಂ ತಮಾಳಲತಿಕಾಂಗಿಯರಾಟಿಸೆ ಬರ್ದುಗೆಟ್ಟು ಕಾಂ
ಚನಲತಿಕಾಂಗಿಯರ್ ಬಯಸೆ ಸೋಲ್ತು ಸರೋಜದಳಾಯತಾಕ್ಷಿಯರ್
ನೆನೆಯೆ ವಿಳಾಸಮುತ್ಪಳ ದಳಾಕ್ಷಿಯರೀಕ್ಷಿಸೆ ಸಂದ ನಿನ್ನ ಮು
ನ್ನಿನ್ನ ಚರಿತಂಗಳಂ ನೆನೆಯದಿರ್, ನೆನೆ ಜೈನ ಪದಾಂಬುಜಂಗಳಂ।
ಮಸೆದಂಗೋದ್ಭವಸಸ್ತ್ರದಂತೆಸೆವ ನಿನ್ನೀರೂಪು ವೃದ್ಧತ್ವದೊಳ್
ಪೊಸದೊಂದಾಯ್ತು ಮಮತ್ವಮಂ ಬಿಸುಟು ನೀನೀ ತತ್ವಮಂ ಭವ್ಯ ಭಾ
ವಿಸು ನಿನ್ನೀ ತನುವಂ ತಪೋವನ ಕ್ರೀಡಾಸುಖಕ್ಕೊಡ್ಡು ಚಿಂ
ತಿಸದಿರ್ ಮುನ್ನಿನ ನಿನ್ನ ಯೌವನ ಕ್ರೀಡಾ ವಿಳಾಸಂಗಳಂ॥

(ಆಶ್ವಾಸ ೨. ಪದ್ಯ-೪೬, ೪೭)

ನಿನಗೀ ಸಂಸ್ಕೃತಿವಾರಿರಾಶಿ ತಟಮತ್ಯಾಸನ್ನ ಮಾಸನ್ನ ಭ
ವ್ಯನೆಯುಂದೆಯ್ದೆ ಮುನೀಂದ್ರ ದಿವ್ಯ ಮತದಿಂ ನಿಶ್ಚೈಸದೆಂ ಮಾಣಲಿ
ನ್ನೆನಸುಂ ಬಾರದು ನಿಮ್ಮೊಳಾತ್ಮ ಹಿತಮಂ ನಿಶ್ಚೈಸು ಸನ್ಮಾರ್ಗ ಸೂ
ಚನೆಗೆಯ್ದೆಂ ಶರಣಂ ಜಿನೇಂದ್ರ ಚರಣಂ ವಿದ್ಯಾಧರಾಧೀಶ್ವರಾ॥

(ಆ. ೨. ಪ. ೪೮)

ಈ ಸ್ವಯಂ ಬುದ್ಧನೇ ಮುಂದಿನ ಹತ್ತೂ ಭವಗಳಲ್ಲಿಯೂ ಆದಿನಾಥನಿಗೆ ಜೊತೆಯಾಗಿರುತ್ತಾನೆಂಬುದನ್ನು ನೆನೆಸಿಕೊಂಡಾಗ, ಈ ಸಂದರ್ಭದಲ್ಲಿ ಈತ ಇಷ್ಟೊಂದು ಕಕ್ಕುಲತೆಯಿಂದ ಮಾತನಾಡುವುದು ಎಷ್ಟೊಂದು ಸಹಜ ಹಾಗೂ ಅಪೇಕ್ಷಣೀಯ ಎಂಬುದು ಅರ್ಥವಾಗುತ್ತದೆ.

೨) ಮಹಾಬಲರಾಜ ದೀಕ್ಷೆಗೊಳ್ಳುವ ಸಂದರ್ಭ ಇಂಥ ಇನ್ನೊಂದು ಉದಾಹರಣೆ ಈ ಸಂದರ್ಭದಲ್ಲಿ ಆತ ಮಂತ್ರಿ, ಆಪ್ತರನ್ನು ಕರೆಸಿ, ಅವರ ಒಪ್ಪಿಗೆ ಪಡೆದು, ಮಗನಿಗೆ ಪಟ್ಟಕಟ್ಟಿ ಸ್ವತಂತ್ರನಾಗುತ್ತಾನೆ. ಇದು ಜಿನಸೇನಾಚಾರ್ಯರಲ್ಲಿ ಕೇವಲ ಒಂದೇ ಮಾತಿನಲ್ಲಿ ಮುಗಿದೇ ಹೋಗುತ್ತದೆ- "ಸರ್ವಾನಾ ಪೃಚ್ಛ್ಯ ಮಂತ್ರ್ಯಾದೀನ್ಪರಂ ಸ್ವಾತಂತ್ರ್ಯಮಾಶ್ರಿತಃ"

ಪಂಪ-ಒಂದು ವೃತ್ತ ಹಾಗೂ ಒಂದು ವಚನದಲ್ಲಿ ಈ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ನೀಡುತ್ತಾನೆ-

ಒಡವಳೆದಂಬರೇಚರರನನ್ವಿತ ಮಂತ್ರಿ ಸಮೂಹಮಂ ಮನಂ
ಬಿಡೆ ಪೊರೆದಿಪ್ಪ ಬಂಧು ಜನಮಂ ಕರೆದೆಲ್ಲರು ಮಿೂ **ಕುಮಾರನಂ**
ಪಿಡಿದಿರಿಮೆನ್ನ ಪಂಬಲನಿದಂ ಬಿಸುಡಿ ಬಿಡಿಮೆಂಬು ಖೇಚರಂ
ಬಿಡಿಸಿದನಾಪ್ತರುಂ **ಬಿಡಿಸುವಂತಿರೆ ಮೋಹದ ಬಳ್ಳಿ ವಳ್ಳಿಯಂ।**

(ಆಶ್ವಾಸ ೨, ಪದ್ಯ ೫೦)

ಇಲ್ಲಿ ಬರುವ 'ಕುಮಾರನಂ ಪಿಡಿದಿದಿ' ಎಂಬ ಮಾತು ಎಷ್ಟು ಹೃದಯಸ್ಪರ್ಶಿ! 'ಎನ್ನ ಪಂಜರದ ನಿದಂ ಬಿಸುಡಿ ಬಿಡಿ' ಎಂದೆನ್ನುವಲ್ಲಿ ವ್ಯಕ್ತವಾಗುವ ನಿರ್ಧಾರ ಎಷ್ಟು ದೃಢವಾದದ್ದು! 'ಬಿಡಿಸುವಂತಿರೆ ಪೋಪದ ಬಳ್ಳಿವಳ್ಳಿಯುಂ' ಎಂಬ ಉಪಮೆ ಎಷ್ಟೊಂದು ಉಚಿತವಾದದ್ದು!

೩) ಮಹಾಬಲನ ದೀಕ್ಷಾಸಂದರ್ಭದಲ್ಲಿ ಸ್ವಯಂಬುದ್ಧನ ಪಾತ್ರವನ್ನು 'ನಿರ್ಯಾಪಕಂ ಸ್ವಯಂಬುದ್ಧಂ' ಎಂಬ ಎರಡೇ ಮಾತುಗಳಲ್ಲಿ ನಿರ್ದೇಶಿಸುತ್ತಾರೆ ಜಿನಸೇನಾಚಾರ್ಯರು. ಆದರೆ ಆದಿಪುರಾಣದಲ್ಲಿ ಅವನು ಮಹಾಬಲನಿಗೆ ದೀಕ್ಷೆ ನೀಡುತ್ತಾ ಪಂಚಮಂತ್ರಗಳನ್ನು, ವ್ರತಗಳನ್ನು ಉಪದೇಶಿಸುವುದು, ಮತ್ತಿತರ ವಿವರಗಳು ಸುಮಾರು ಆರು ಕಂದಪದ್ಯಗಳಷ್ಟು ಉಚಿತ ವಿಸ್ತಾರ ಪಡೆದುಕೊಂಡಿವೆ.
(ಆಶ್ವಾಸ ೨: ಪದ್ಯ ೫೨-೫೮)

೪) ಆದಿ ತೀರ್ಥಂಕರ ತನ್ನ ಹಿಂದಿನೊಂದು ಭವದಲ್ಲಿ ಲಲಿತಾಂಗದೇವನೆಂಬ ವೈಮಾನಿಕ ದೇವನಾಗಿ ಸ್ವರ್ಗೀಯ ಸುಖವನ್ನು ಅನೇಕ ಸಹಸ್ರ ವರ್ಷಗಳ ಕಾಲ ಅನುಭವಿಸಿರುತ್ತಾನೆ. ಆದರೂ ಭೋಗಾಭಿಲಾಷೆ ಕರಗದು. ಸಾವು ಸಮೀಪಿಸಿದಾಗ ಅವನು ವಿಷಣ್ಣನಾಗಿ ವ್ಯಥಿಸುವನೆಂದು ಜಿನಸೇನಾಚಾರ್ಯರು ಹೇಳುತ್ತಾರೆ. ಆದರೆ ಪಂಪನಲ್ಲಿ ಲಲಿತಾಂಗದೇವನ ಈ ವ್ಯಥೆಯ ತೀವ್ರತೆಯನ್ನು ಹೇಳುವ ಪದ್ಯ ಅಲ್ಲಿನ ಪ್ರಸಿದ್ಧ ಪದ್ಯಗಳಲ್ಲೊಂದು—

ಸುರತರು ನಂದನಂಗಳಿರ, ರತ್ನಶಿಲಾದ್ಧ ವಿಮಾನ ಕುಟ್ಟಿಮಾಂ
ತರ ಸುರಕಾಲಯಂಗಳಿರ ಚಾರುವಿಲೋಲ ಕಟಾಕ್ಷಪಾತ ಸೌಂ
ದರ ಪರಿವಾರ ದೇವಿಯರಿರಾ ಕಡುಕೆಯ್ದು ಕೃತಾಂತನಿಂತು ಬಿ
ನ್ನೆರ ಮಳೆದುಯ್ಯೆ ಬಾರಿಸದೆ ಕೆಮ್ಮನುಪೇಕ್ಷಿಸಿ ನೋಡುತಿರ್ಪಿರೇ|
(ಆ. ೩, ಪ. ೪)

ಇಲ್ಲಿ ಕೊನೆಗೆ ಆವನು ತನ್ನ ಪ್ರಿಯ ಪತ್ನಿ ಸ್ವಯಂ ಪ್ರಭೆಯನ್ನು ಬೇಡುತ್ತಾನೆ-'ಮಾಣಿಸಲಾಗದೆ ಪೇಳ್ ಸ್ವಯಂ ಪ್ರಭೇ' ಎಂದು. ಇಂಥ ದೀನಾವಸ್ಥೆ ಜಿನಸೇನರ ಲಲಿತಾಂಗನಿಗಿಲ್ಲ. ಆತ ಬಹುಬೇಗನೆ ಮನಸ್ಸನ್ನು ಸಮಾಧಾನ ಮಾಡಿಕೊಳ್ಳುತ್ತಾನೆ. ಪಂಪ, ತನ್ನ ಲಲಿತಾಂಗನಲ್ಲಿ ಸಾಮಾನ್ಯ ಮಾನವ ಸಾವಿನೆದುರು ಪಡೆಯುವ ಎಲ್ಲ ವಿಹ್ವಲತೆಯನ್ನೂ ತುಂಬಿದ್ದಾನೆ.

೫) ಲಲಿತಾಂಗನ ಮರಣದ ಬಳಿಕ ಸ್ವಯಂಪ್ರಭೆ ಅನುಭವಿಸುವ ನೋವನ್ನು ಜಿನಸೇನರು ಕೆಲವೇ ಮಾತುಗಳಲ್ಲಿ ವರ್ಣಿಸುತ್ತಾರೆ—

ದಿವ್ಯಸ್ಯೇ ಔಷಧಸ್ಯಾಸ್ಯ ವಿರಹಾತ್ತಾಂ ತಥಾಸತೀಂ।
ಅಥಯೋ ಪೀಡಯನ್ಗಾಢಂ ವ್ಯಾಧಿ ಕಲ್ಪಾಃ ಸದುಸ್ಸಹಾಃ॥

(ಆ. ೬, ಪ. ೫೨)

'ದಿವ್ಯವಾದ ಔಷಧಿಯನ್ನು ಸೇವಿಸುವುದನ್ನು ಬಿಟ್ಟಾಗ ವ್ಯಾಧಿಗಳು ಗಾಢವಾಗಿ ಪೀಡಿಸುವಂತೆ, ಆ ಸತಿಯು ವಿರಹ ವೇದನೆಯು ದುಸ್ಸಹವಾಗಿತ್ತು'. ಇಲ್ಲಿನ [illegible] ಚೆನ್ನಾಗಿದೆ ನಿಜ. ಆದರೆ ಪಂಪನಲ್ಲಿ ಈ ವೇದನೆ ಘನೀಭವಿಸಿರುವುದನ್ನು ನೋಡಿ—

ಮದನನ ಕೈದುವೆಲ್ಲಿದನಸಂಗನ ಕೈಪೊಡೆಯೆಲ್ಲಿದಂ ವಿಳಾ-
ಸದ ಬಿಣಿ ಎಲ್ಲಿದಂ ಚದುರ ಪುಟ್ಟ ನೆಲ್ಲಿದನೆಲ್ಲಿದಂ ವಿನೋ-
ದದ ಮೊದಲೆಲ್ಲಿದಂ ಸೊರ್ಬಿನಾಗರ ಮಲ್ಲಿದ ಸಿಟ್ಟೆಯಾಣ್ಮನೆ
ಲ್ಲಿದ ನೆರ್ದೆಯುಣ್ಮನೆನ್ನರಸನೆಲ್ಲಿದನೋ ಲಲಿತಾಂಗವಲ್ಲಭಂ।

(ಆ. ೩, ಪ. ೧೫)

ಕಲ್ಲನ್ನು ಕರಗಿಸುವ ಈ ಆರ್ತತೆ ಜಿನಸೇನಾಚಾರ್ಯರ ಸ್ವಯಂಪ್ರಭೆಯಲ್ಲಿಲ್ಲ.

೬) ವಜ್ರಬಾಹು ಮಹಾರಾಜನ ವೈರಾಗ್ಯ ಸನ್ನಿವೇಶ–ಪಂಪನ ಉಚಿತ ವ್ಯಾಸಪ್ರಜ್ಞೆಗಿನ್ನೊಂದು ಉದಾಹರಣೆ. ದೊಡ್ಡ ಮೋಡವೊಂದು ಬಾನಿನಲ್ಲಿದ್ದುದನ್ನು ಗಮನಿಸಿ ಅದರ ಆಕಾರದಿಂದ ಸಂತೋಷಗೊಂಡ ವಜ್ರಬಾಹು ಮಹಾರಾಜನು ಅದನ್ನೇ ನೋಡುತ್ತಾ ನಿಂತಿದ್ದಂತೆ ಆ ಮೋಡ ಕರಗಿ ಹೋಗುತ್ತದೆ. 'ನಮ್ಮ ಬಾಳೂ ಇಷ್ಟೇನೇ'–ಎಂದು ಅರ್ಥಮಾಡಿಕೊಂಡ ಮಹಾರಾಜ ಕೂಡಲೇ ವೈರಾಗ್ಯಪರವಶನಾಗುತ್ತಾನೆ. ಇದು ಮೂಲ ಸಂದರ್ಭ. ಜಿನಸೇನರ ಪೂರ್ವಪುರಾಣದಲ್ಲಿ ಹೇಳಿರುವುದೂ ಇಷ್ಟನ್ನೇ—

ಶರದಂಬುದರೋತ್ಥಾನಂ ಸೌದಾಗ್ರಸ್ಥೇ ನಿರೂಪಯನ್।
ದೃಷ್ಟ್ವಾ ತದ್ವಿಲಯಂ ಸದ್ಯೋ ನಿರ್ವೇದಂ ಪರಮಾಗತಃ॥

ಆದರೆ ಅರಸ ಅಷ್ಟು ಹೊತ್ತಿನವರೆಗೂ ಅದನ್ನು ನೋಡುತ್ತಾ ನಿಂತುದೇಕೆ? ಆ ಸಮಯದಲ್ಲಿ ಅವನಿಗೆ ಯಾವುವೇ ಕಲ್ಪನೆಗಳು ಹೊಳೆಯಲಿಲ್ಲವೆ? ಹಾಗಿಲ್ಲದಿದ್ದಲ್ಲಿ ಅವನು ಅಷ್ಟು ಹೊತ್ತು ಸುಮ್ಮನೆ ನಿಂತಿದ್ದನೆ? 'ಪೂರ್ವ ಪುರಾಣ'ದಲ್ಲಿ ಇವಕ್ಕೆ ಉತ್ತರವಿಲ್ಲ. ಆದರೆ ಪಂಪನಲ್ಲಿ ಈ ಸನ್ನಿವೇಶ ಒಂದು ಕಲಾತ್ಮಕ ವಿಸ್ತಾರ ಪಡೆದುಕೊಂಡಿದೆ—

ಶರದುದಿತೇಂದು ಕುಂದ ಧವಳೋನ್ನತ ಸೌದತಳಸ್ಥಿತಂ ಮನೋ
ಹರ ಗಗನಾಂಬುರಾಶಿ ನವಫೇನ ಸಮಾನಮಮುಘ್ವಕೂಟ ಸುಂ-
ದರ ಮನಮೊಂದು ನೀರದ ಮನತ್ತಿಯೆ ನೋಡಿ ಜಿನೇಂದ್ರರುಂದ್ರ ಮಂ-
ದಿರಮನೊಂದ ನೀ ದೊರತೆ ಮಾಡಿಪೆನೆಂಧರಂದಮಂ ನೃಪಂ-

(ಆ. ೪, ಪ. ೬೩)

ಬರೆಯ ಹೊರಟಾಗ, ಆ ಮೇಘ ಕರಗಿತು. ಅಂದರೆ–'ಶರತ್ಕಾಲದ ಚಂದ್ರನಂತೆ, ಕುಂದ

ಪುಷ್ಪದಂತೆ, ಬೆಳ್ಳಗಿರುವ ಉನ್ನತ ಸೌಧ ತಲದ ಮೇಲೆ ನಿಂತು ಮನೋಹರವಾದ ಗಗನ ಸಮುದ್ರದ ಹೊಸ ನೊರೆಯಂತೆ ಎತ್ತರವಾಗಿದ್ದ ಸುಂದರ ಮೇಘವನ್ನು ನೋಡಿ, ಆ ರೀತಿಯ ಜಿನಮಂದಿರ ಕಟ್ಟಿಸಬೇಕೆಂದು ಅದರ ಚಿತ್ರ ಬರೆದುಕೊಳ್ಳಬೇಕೆಂದು ಬಯಸಿ, ಸಲಕರಣೆಗಳನ್ನು ತರಿಸಿ ಬರೆಯಲಾರಂಭಿಸುವಷ್ಟರಲ್ಲೇ ಆ ಮೋಡ ಕರಗಿತಂತೆ! ಜಿನಸೇನ ರಲ್ಲಿನಂತೆ 'ಸುಮ್ಮನೆ ನೋಡುತ್ತಾ ನಿಂತಿದ್ದ' ಎನ್ನುವುದಕ್ಕೂ, 'ನೋಡುತ್ತಿದ್ದಾಗ ಈ ರೀತಿಯ ಕಲ್ಪನೆ ಅವನಲ್ಲಿ ಮೂಡಿತು'-ಎನ್ನುವ ಪಂಪನ ರೀತಿ ಉಂಟುಮಾಡುವ ಪರಿಣಾಮಕ್ಕೂ ಎಷ್ಟೊಂದು ವ್ಯತ್ಯಾಸ! ಇಲ್ಲಿನ ವಿಸ್ತಾರ ಔಚಿತ್ಯಪೂರ್ಣ.

೭) **ಶ್ರೀಮತಿ ವಜ್ರಜಂಘರ ಮರಣ:** ಆದಿದೇವ ತನ್ನ ಹಿಂದಿನೊಂದು ಭವದಲ್ಲಿ ವಜ್ರಜಂಘನೆಂಬ ರಾಜನಾಗಿದ್ದ. ಅವನ ಪತ್ನಿಯೇ ಶ್ರೀಮತಿ (ಹಿಂದಿನ ಸ್ವಯಂಬುದ್ಧ ಈಗ ಶ್ರೀಮತಿಯಾಗಿದ್ದಾನೆ.) ಗಾಢ ಪ್ರೇಮಿಗಳಾಗಿದ್ದ ಇವರಿಬ್ಬರೂ ರಾತ್ರಿ ಮಲಗಿದ್ದಾಗ ಗವಾಕ್ಷಗಳನ್ನು ತೆರೆದಿಡದ್ದರಿಂದ, ಸುಗಂಧಕ್ಕೆಂದು ಹೊಮ್ಮಿಸಿದ್ದ ಧೂಪದ ಹೊಗೆಯೇ ಇವರುಗಳನ್ನು ವ್ಯಾಪಿಸಿ ಉಸಿರುಕಟ್ಟಿಸಿ ಸಾಯಿಸಿಬಿಡುತ್ತದೆ. ಈ ದಂಪತಿಗಳ ಅಂತ್ಯವನ್ನು ಜಿನಸೇನರು ಸಂಕ್ಷಿಪ್ತವಾಗಿ ಹೇಳುತ್ತಾರೆ—"ಕ್ಷಣ ಮೂರ್ಚ್ಛಿತಾ, ದಂಪತೀ ತಾ ನಿಶಾಮಧ್ಯೇ ದೀರ್ಘನಿದ್ರಾಮುಪೇಯತುಃ".

ಆದರೆ ಪಂಪ ಆದಿಪುರಾಣದಲ್ಲಿ ಆ ಧೂಪದ ಹೊಗೆಯನ್ನೇ ಕಾಳೋರಗನೆಂದು ಕರೆದು ಉಚಿತ ರೂಪಕಾಲಂಕಾರ ಸೃಷ್ಟಿಸಿ ಸನ್ನಿವೇಶದ ಭಯಾನಕತೆಯನ್ನು ಕಣ್ಣೆದುರು ನಿಲ್ಲಿಸುತ್ತಾನೆ—

"ಕೊಂದುದು ಕೃಷ್ಣಾಗರು ಧೂಪ ಧೂಮ ನಿವಹಂ ಕೃಷ್ಣೋರಗಂ
ಕೊಲ್ವವೋಲ್-
ಬಿಡದೆ ಪೊಗೆ ಸುತ್ತಿ ತೋಳಂ
ಸಡಲಿಸದಾ ಪ್ರಾಣವಲ್ಲಭರ್ ಪ್ರಾಣಮನಂ
ದೊಡಗಳೆದರೋಪರೋಪರೊ
ಳೊಡಸಾಯಲ್ ಪಡೆದರಿನ್ನವೇಂ ಸುಪ್ಪೊಳಲೇ!

೮) ಪ್ರಸಿದ್ಧವಾದ **'ನೀಲಾಂಜನೆಯ ನೃತ್ಯ'** ಪ್ರಸಂಗವನ್ನು ಐದಾರು ಪದ್ಯ ಗಳಲ್ಲೇ ಮುಗಿಸಿ ಬಿಡುತ್ತಾರೆ. ಜಿನಸೇನರು.

ರಾಜ್ಯ ಭೋಗಾತ್ಕಥಂ ನಾಮ ವಿರಜ್ಯೇದ್ಭಗವಾನಿತಿ।
ಪ್ರಕ್ಷೀಣಾಯುರ್ದಶಂ ಪಾತ್ರಂ ತದಾ ಪ್ರಾಯುಕ್ತ ದೇವರಾಟ್॥
ತತೋ ನೀಲಾಂಜನಾ ನಾಮ ಲಲಿತಾ ಸುರನರ್ತಕೀ।
ರಸಭಾವಲಯೋ ಪೇತಂ ನಟಂತಿ ಸಪರಿಕ್ರಮಂ॥
ಸೌದಾಮಿನೀ ಲತೇನಾಸಾ ದೃಷ್ಟನಷ್ಟಾ ಭವತ್‌ಕ್ಷಣಾತ್।
ರಸಭಂಗ ಭಯಾದಿಂದ್ರಃ ಸಂದಧೇತ್ರಾ ಪರಂ ವಪುಃ॥

(ಅ. ೧೭, ಪದ್ಯ ೧೭-೧೯)

'ರಾಜ್ಯ ಭೋಗದಲ್ಲಿ ಮುಳುಗಿದ್ದ (ಆದಿನಾಥನ) ಮನಸ್ಸನ್ನು ವಿರಾಗದ ಕಡೆ ತಿರುಗಿಸಲು ದೇವೇಂದ್ರನು ಕ್ಷೀಣವಾದ ಆಯುಸ್ಸುಳ್ಳ ನೀಲಾಂಜನೆ ಎಂಬ ಲಲಿತವಾದ ಸುರನರ್ತಕಿ ಯನ್ನು ಕಳಿಸಿದನು. ಅವಳು ರಸಭಾವ ಲಯಗಳಿಂದ ಕೂಡಿ ಸರಿಯಾಗಿ ನರ್ತಿಸುತ್ತಿರು ವಾಗಲೇ ಆಯುಸ್ಸೆಂಬ ದೀಪವು ನಷ್ಟವಾಗುತ್ತಿರಲು ಮಿಂಚಿನಂತೆ ಅದೃಶ್ಯಳಾದಳು. ರಸಭಂಗವಾಗದಿರಲು ದೇವೇಂದ್ರನು ಅದೇ ರೀತಿಯ ಇನ್ನೊಂದು ಪಾತ್ರವನ್ನು ಸೃಷ್ಟಿಸಿ ದನು'–ಇದು ಇಲ್ಲಿಯ ಒಟ್ಟು ಅರ್ಥ.

ಆದರೆ ಪಂಪ ನೀಲಾಂಜನೆಯ ಪ್ರವೇಶಕ್ಕೆ ಒಂದು ವಿಸ್ತಾರವಾದ ಹಿನ್ನೆಲೆ ನಿರ್ಮಿಸು ತ್ತಾನೆ. ಮೊದಲು, ಬರೀ ಸಂಗೀತ ಕೇಳುತ್ತಿದ್ದ ಅರಸನ ಬಳಿ ದೇವೇಂದ್ರ ಬಂದು ಸುರ ನೃತ್ಯ ನೋಡುವಂತೆ ಬಿನ್ನವಿಸುತ್ತಾನೆ. ಸಮ್ಮತಿಸುತ್ತಾನೆ ಅರಸ. ಅನಂತರ ಸೂಕ್ತ ವಾದ್ಯ ವಾದನ ಆರಂಭವಾದ ಮೇಲೆ 'ಗಣಿಕಾ ತಿಲಕ'ಳಾದ, 'ಮಸೆದ ಮದನನಲರ್ಗಣೆ'ಯಾದ ನೀಲಾಂಜನೆ–"ಪ್ರೋಕ್ಷಳ ಭೋಂಕನೆ ನಿಖಿಳ ಜನಾಂತರಂಗಮುಮಂ ರಂಗಮುಮಂ". ತೆರೆಯ ಹಿಂದೆ ನಿಂತಿದ್ದ ಅವಳು 'ಮುಗಿಲ ಮರೆಯ ವಿದ್ಯುಲ್ಲತೆ'ಯಂತಿದ್ದಳು. ಪುಷ್ಪಾಂಜಲಿ ಎರಚಿದ್ದು ನನೆಯಂಬುಗಳನ್ನು ಎರಚಿದಂತಾಯ್ತು. ಅವಳ ಕುಡಿನೋಟ–'ಪೊಸ ವೆಳ್ದಿಂಗಳ್ ದೆಸೆದೆಸೆಗೆಸೆದಂತೆ', 'ಕುಮುದವನಮಲರ್ದುದೆಂಬಂತೆ' ಕಂಡಿತು.–ಹೀಗೆಲ್ಲಾ ಹೇಳಿ ನಂತರ ಅವಳ ನರ್ತನ ಪ್ರೌಢಿಮೆಯನ್ನು ವಿವರವಾಗಿ ವರ್ಣಿಸುತ್ತಾನೆ. ಇಂಥ ವ್ಯಕ್ತಿ ಯಾರೂ ಊಹಿಸಲಾಗದ ಆ ಘಳಿಗೆಯಲ್ಲಿ ಸತ್ತಳೆನ್ನುವುದು ದೊರೆಯ ವೈರಾಗ್ಯಕ್ಕೆ ಸಮರ್ಥನೀಯ ಕಾರಣವೇ ಸರಿ. ಕಾವ್ಯದ ಈ ಮುಖ್ಯ ಬಿಂದುವಿನಲ್ಲಿ ಪಂಪನಲ್ಲಿ ಕಾಣುವ ಪರಿಪೂರ್ಣತೆ ಜಿನಸೇನರಲ್ಲಿಲ್ಲ.

೨

ಪೂರ್ವ ಪುರಾಣದಲ್ಲಿನ ಸಂಕ್ಷಿಪ್ತ ಭಾಗಗಳನ್ನು ಪಂಪ ವಿಸ್ತರಿಸಿರುವ ಕೆಲವು ಉದಾ ಹರಣೆಗಳನ್ನು ನೋಡಿದೆವು. ಈಗ ಇದರ ವಿರುದ್ಧ ಅಂಶವನ್ನು ಪಂಪ ಹೇಗೆ ಸಾಧಿ ಸಿದ್ದಾನೆಂಬುದನ್ನು ನೋಡೋಣ.

ಪೂರ್ವ ಪುರಾಣದಲ್ಲಿ ವಿಸ್ತಾರವಾಗಿರುವ ಹಲವು ವರ್ಣನೆಗಳು, ವಿವರಗಳು, ಸನ್ನಿವೇಶಗಳು, ಆದಿಪುರಾಣದಲ್ಲಿ ಸಂಕ್ಷಿಪ್ತವಾಗಿವೆ.
ಕೆಲವು ಉದಾಹರಣೆಗಳು–

೧) **ವಜ್ರಜಂಘನ ರೂಪ ವರ್ಣನೆ:** ಜಿನಸೇನಾಚಾರ್ಯರು ಇಪ್ಪತ್ತು ಶ್ಲೋಕಗಳ ನಲವತ್ತು ಪಂಕ್ತಿಗಳಲ್ಲಿ ವಜ್ರಜಂಘನ ರೂಪವರ್ಣನೆ ಮಾಡಿದ್ದಾರೆ, ಪಂಪನು ಮೂರು ವೃತ್ತ ಹಾಗೂ ಒಂದು ವಚನದಲ್ಲಿ, ಅಂದರೆ ಸುಮಾರು ಹದಿನೈದು ಸಾಲುಗಳಲ್ಲಿ ಅದನ್ನು ಅಡಕಗೊಳಿಸಿದ್ದಾನೆ. ವಜ್ರಜಂಘನ ವ್ಯಕ್ತಿತ್ವದ ವಿವರಗಳು ಮಹಾಪುರಾಣದಲ್ಲಿ ಕಾಣುವಷ್ಟು ಪ್ರಭಾವಿಯಾಗಿ ಆದಿಪುರಾಣದಲ್ಲಿ ಕಾಣುವುದಿಲ್ಲ.

೨) **ಶ್ರೀಮತಿ ಪಂಡಿತ ಸಂವಾದ:** ಇದು ಪೂರ್ವಪುರಾಣದಲ್ಲಿ ಬಹಳ ದೀರ್ಘವಾಗಿದೆ. ಅಸಗತ್ಯವಾದ ಈ ಭಾಗವನ್ನು ಪಂಪ ಸ್ವಾಗತಾರ್ಹ ರೀತಿಯಲ್ಲಿ ಪ್ರಸ್ವಗೊಳಿಸಿದ್ದಾನೆ.

೩) **ಮಹಾಪೂತ ಜಿನಾಲಯದ ವರ್ಣನೆ:** ಜಿನಸೇನರು ಪತ್ತು ಶ್ಲೋಕಗಳಲ್ಲಿ ತುಂಬ ಸುಂದರ ಉಪಮೆಗಳಿಂದ ಕೂಡಿ, ಮೂಡಿದೆ ಜಿನಸೇನರಲ್ಲಿ. ಪಂಪನಲ್ಲಿ ಅದು (ಮುಖ್ಯ ಕತೆಗೆ ಅಸಗತ್ಯವಾದ್ದರಿಂದ) ನಿರ್ದಾಕ್ಷಿಣ್ಯವಾಗಿ ಕತ್ತರಿಸಲ್ಪಟ್ಟವೆ.

೪) **ಶ್ರೀಮತಿ ವಜ್ರಜಂಘರ ರತಿಕ್ರೀಡೆಯನ್ನು** ಜಿನಸೇನಾಚಾರ್ಯರು ಸುಮಾರು ೩೦ ಶ್ಲೋಕಗಳಲ್ಲಿ ಸುಂದರವಾಗಿ ವರ್ಣಿಸಿದ್ದರೆ, ಆದಿಪುರಾಣದಲ್ಲಿ ಅದು ಒಂದೇ ವಚನದಲ್ಲಿ ಅಡಕವಾಗಿದೆ.

೫) **ನಾಭಿರಾಜನ ಪತ್ನಿ ಮರುದೇವಿಯ ವರ್ಣನೆ ಮಹಾಪುರಾಣದಲ್ಲಿ** ೬೩ ಶ್ಲೋಕಗಳಲ್ಲಿ (೧೨೪ ಸಾಲು) ಬಹುಸುಂದರವಾಗಿ ಮೂಡಿಬಂದಿದೆ. ಅನಿವಾರ್ಯವೇನಲ್ಲದ ಈ ಭಾಗವನ್ನು ಪಂಪ– ಹತ್ತು ಶ್ಲೋಕಗಳ ೪೦ ಸಾಲುಗಳಿಗೆ ಸೀಮಿತಗೊಳಿಸಿದ್ದಾನೆ. ಅಷ್ಟೇ ಅಲ್ಲ, ಈ ವರ್ಣನೆಯು 'ಮೊಗಮುಂ ತಾವರೆ, ಕಣ್ಣನುತ್ಪಳ ದಳಂ, ಪುರ್ಬನಂಗಜನ ಬಿಲ್' ಎಂಬಂಥ ಸಾಮಾನ್ಯ ಉಪಮೆಗಳಿಂದ ಕೂಡಿದೆ.

೬) ಆದಿದೇವನ ಗರ್ಭಾವತರಣ ಸಂದರ್ಭದಲ್ಲಿ ದೇವತೆಗಳು ಮರುದೇವಿಯನ್ನು ಉಪಚರಿಸುವುದು, ಓಲೈಸುವುದು, ಇವೆಲ್ಲ ಇನ್ನೂರು ಶ್ಲೋಕಗಳ ದೀರ್ಘವ್ಯಾಪ್ತಿ ಪಡೆದಿದೆ ಪೂರ್ವಪುರಾಣದಲ್ಲಿ. ಆದರೆ ಇಷ್ಟೇ ಪ್ರಭಾವಶಾಲಿಯಾದ ರೀತಿಯಲ್ಲಿ ಪಂಪ ಇದನ್ನು ಕೇವಲ ೨೦ ಪದ್ಯಗಳಲ್ಲಿ ನಿರ್ವಹಿಸಿದ್ದಾನೆ.

೭) ಆದಿದೇವ ತಪಸ್ಸು ಮಾಡುತ್ತಿದ್ದಾಗ ನಮಿ-ವಿನಮಿಗಳ ಪೀಡೆಯಿಂದ ತಪ್ಪಿಸಲು ಧರಣೇಂದ್ರ ಬಂದ. ಆಗ ಆದಿದೇವನ ತಪೋಭಂಗಿಯ ರೀತಿಯನ್ನು ಜಿನಸೇನರು ಹೃದಯಂಗಮವಾಗಿ ಆರು ಶ್ಲೋಕಗಳಲ್ಲಿ ವರ್ಣಿಸಿದ್ದಾರೆ. ಆದರೆ ಪಂಪ ಈ ಸಂದರ್ಭವನ್ನು–"ಕಂಡಂ ಕಾರ್ತಸ್ವರಗಿರಿಯುಂ ಪೋಲ್ತು ನಿಂದ ನಿಶ್ಚಳ ತನುವಂ" (ಆ. ೯, ಪದ್ಯ ೧೦೦) ಎಂಬ ಒಂದೇ ಮಾತಿನಲ್ಲಿ ಮುಗಿಸಿಬಿಡುತ್ತಾನೆ.

ಒಟ್ಟಿನಲ್ಲಿ–ಜಿನಸೇನರ ಕೃತಿಯಲ್ಲಿನ ವರ್ಣನಾತ್ಮಕವಾದ, ಮುಖ್ಯಕತೆಗೆ ಹೆಚ್ಚಾಗಿ ಸಂಬಂಧಿಸಿಲ್ಲದ, ರಸಪೋಷಕವಲ್ಲದ ಭಾಗಗಳ ವಿವರಗಳನ್ನು ಪಂಪ ಕೈಬಿಟ್ಟಿದ್ದಾನೆನ್ನಿಸುತ್ತದೆ. ಅದೇ ರೀತಿ, ತತ್ವೋಪದೇಶ ಕೂಡ ಜಿನಸೇನರಿಗಿಂತ ಪಂಪನಲ್ಲಿ ಕಡಿಮೆ.

ಆದರೆ, ವಿಸ್ತಾರತೆ ಜಿನಸೇನರಲ್ಲಿ ದೋಷವೇನೂ ಆಗುವುದಿಲ್ಲ. ಯಾಕೆಂದರೆ ಅವರ ವರ್ಣನೆಗಳು ಎಲ್ಲಿಯೂ ಬೇಸರ ತರಿಸುವುದಿಲ್ಲ. ಬದಲಾಗಿ ಕಾವ್ಯದ ರಮಣೀಯತೆಯನ್ನು ಹೆಚ್ಚಿಸುತ್ತವೆ.

೩

'ಆದಿಪುರಾಣ'ಕ್ಕೆ ಮುಖ್ಯ ಆಕರ ಜಿನಸೇನಾಚಾರ್ಯರ ಕೃತಿ ಎಂಬುದೇನೋ ನಿರ್ವಿವಾದ. ಆದರೆ, ಪೂರ್ವ ಪುರಾಣದಲ್ಲಿಲ್ಲದ, ಆದಿ ಪುರಾಣದಲ್ಲಿ ಕಂಡುಬರುವ ಕೆಲವು ಅಂಶಗಳೂ ಇವೆ. ಕಥೆಯ ದೃಷ್ಟಿಯಿಂದ ಅಷ್ಟೇನೂ ಮುಖ್ಯವಲ್ಲದ ಇಂಥ ಅಂಶಗಳಿಗೆ ಕೆಲ ಉದಾಹರಣೆಗಳು–

೧. ಮಹಾಬಲ ದೀಕ್ಷೆ ತೆಗೆದುಕೊಂಡಾಗ, ಅವನೊಡನೆ ಇನ್ನೂ ಅನೇಕರು ದೀಕ್ಷೆ ತೆಗೆದುಕೊಂಡರೆಂಬ ಉಲ್ಲೇಖ ಪೂರ್ವ ಪುರಾಣದಲ್ಲಿಲ್ಲ. ಆದಿಪುರಾಣದಲ್ಲಿ ಈ ಅಂಶ ನಿರೂಪಣೆಗಾಗಿಯೇ ಒಂದು ವೃತ್ತವಿದೆ–"ಪೂಣ್ದಾರ್ ಅಂದಿರ ಚರರೆಂಬರೀಚರರೂ ಅನ್ನೆ ಅಳವಟ್ಟರೆ ಜೈನದೀಕ್ಷೆಯಾ!" (೨–೫೧)

೨. ಶ್ರೀಮತಿ, ಹಿಂದೆ ನಿರ್ನಾಮೆ ಎಂಬ ಹೆಸರಿನಿಂದ ನಾಗದತ್ತನೆಂಬ ವ್ಯಾಪಾರಿಯ ಮಗಳಾಗಿದ್ದಾಗ ಅವಳ ತವರಿಗೆ ವಿಪತ್ ಪರಂಪರೆಯೇ ಹರಿದುಬರುತ್ತದೆ. ಅವಳ ಅಣ್ಣಂದಿರು, ತಂದೆ ಸಾಯುತ್ತಾರೆ, ಸಂಪತ್ತು ನಾಶವಾಗುತ್ತದೆ; ಮತ್ತಿತರ ಕೇಡುಗಳೂ ಸಂಭವಿಸುತ್ತವೆ. ಈ ವಿವರಗಳು ಪೂರ್ವಪುರಾಣದಲ್ಲಿಲ್ಲ. ಅಲ್ಲಿ ಕೇವಲ "ನಾನು ದರಿದ್ರ ಕುಲದಲ್ಲೇಕೆ ಹುಟ್ಟಿದೆ?" ಎಂಬ ಮಾತಷ್ಟೇ ಬರುತ್ತೆ. ಆದರೆ ಪಂಪ ಈ ವಿಪತ್ತುಗಳ ವಿವರ ನೀಡಿದ್ದಾನೆ.

೩. ಜನ್ಮಾಭಿಷೇಕದ ಸಂದರ್ಭದಲ್ಲಿನ ಐರಾವತದ ವರ್ಣನೆಯ ವಿವರಗಳು ಪೂರ್ವಪುರಾಣದಲ್ಲಿಲ್ಲ. ಅಲ್ಲಿ–

> ಸುರೇಭರದನೋದ್ಭೂತ ಸುರಾಂಬುಜ ದಲಾಶ್ರಿತಂ ।
> ನೃತ್ತಮಪ್ಸರಸಾಂ ದೇವಾನರೋದ್ರ ಸಿಕಾಸ್ಪೃಶಂ । (೧೩–೫೨)

ಅಂದರೆ–'ಐರಾವತದ ದಂತಗಳಲ್ಲಿ ಉತ್ಪತ್ತಿಯಾದ ದೇವಕಮಲಗಳ ದಳಗಳಲ್ಲಿ ನರ್ತಿಸುವ ಅಪ್ಸರೆಯರು'–ಎಂಬ ಮಾತಷ್ಟೇ ಇದೆ. ಅದಕ್ಕೆ ಎಂಟು ಮೊಗ, ಒಂದೊಂದಕ್ಕೂ ಎಂಟು ದಂತಗಳು, ಅವುಗಳಲ್ಲಿ ಒಂದೊಂದು ಕೊಳ, ಅದರಲ್ಲಿ ೩೨ ಕಮಲಗಳು–ಹೀಗೆ (ಪಂಪನಲ್ಲಿ ಬರುವ) ವಿವರಗಳಿಲ್ಲ.

–ಇಂಥ ಕೆಲವು ಕೇವಲ ಕಲ್ಪನೆ ಆಗಿರಲು ಸಾಧ್ಯವಿಲ್ಲದ (ಒಂದು ಪುರಾಣದಲ್ಲಿ) ವಿವರಗಳು ಆದಿಪುರಾಣದಲ್ಲಿ ಕಾಣಸಿಗುತ್ತವೆ. ಇವು, 'ಪಂಪ ಬೇರೆ ಆಕರಗಳನ್ನೂ ಉಪಯೋಗಿಸಿಕೊಂಡಿದ್ದಾನೆ' ಎಂದು ವಿದ್ವಾಂಸರು ಈಗಾಗಲೇ ವ್ಯಕ್ತಪಡಿಸಿರುವ ಅಭಿಪ್ರಾಯಕ್ಕೆ ಪುಷ್ಟಿಯನ್ನೀಯುತ್ತವೆ.

೪

ಇನ್ನು 'ಪಂಪ ಜಿನಸೇನರ ಉಪಮೆಗಳನ್ನೂ, ನುಡಿಗಟ್ಟುಗಳನ್ನೂ ಹಾಗೆಯೇ ಎರವಲು ಪಡೆದಿದ್ದಾನೆ–ಅನೇಕ ಕಡೆಗಳಲ್ಲಿ'–ಎಂಬ ಮಾತಿಗೆ ಬರೋಣ.

ಕೆಲವು ಕಡೆ ಜಿನಸೇನರ ಮಾತುಗಳ ನೇರ ಅನುವಾದದಂತೆ ಕಾಣುವ, ನಿಸ್ಸಂದೇಹವಾಗಿ ಅನುವಾದಿಸಿರಬಹುದಾದ ಉಲ್ಲೇಖಗಳು ಪಂಪನಲ್ಲಿ ಉಚಿತವಾಗಿ ದೊರೆಯುತ್ತವೆ. ಕೆಲ ಉದಾಹರಣೆಗಳು–

ಪೂರ್ವಪುರಾಣ	ಆದಿಪುರಾಣ
೧. ಸರ್ವೇಷಾಂ ಪ್ರಚ್ಯುತಿ ದಿವಃ। (೬–೧೧)	'ಅಮರ ಜನಕ್ಕೆಲ್ಲಮಿೞಿ ಪಾಂಗೆ' (೩–೬)
೨. ಧರ್ಮೋಹಿ ಶರಣಂ ಪರಂ। (೬–೨೦)	'ಶರಣ್ ಧರ್ಮದಿಂದೊಂದುಮುಂಟೇ' (೩–೬)
೩. ನಾರೀ ರೂಪಮಯಂ ಯಂತ್ರಮಿದತ್ಯಂತ ಪೇಲವಂ। ಪಶ್ಯತಾಯೇವನಃ ಸಾಕ್ಷಾತ್ಕಥಮೇ ತದಗಾಲ್ಲಯಂ (೧೭–೩೬)	'ನಾರೀರೂಪದ ಯಂತ್ರಂ ಚಾರುತರಂ ನೋಡೆ ನೋಡೆ ಕರಗಿದುದು। (೯–೪೪)
೪. ಸ್ಥಾನಭ್ರಂಶೇ ಹಿ ಕಾ ದ್ಯುತಿಃ? (೧೭–೧೯೭)	'ಸ್ಥಾನಭ್ರಷ್ಟಂಗೆ ತೇಜಮೆಂಬುದು ಮುಂಟೇ? (೯–೩೮)
೫. ಕ್ವೇದಂ ತಪೋವನಂ ಶಾಂತಂ ಕ್ವಂ ಯುವಾಂಭೀಷಣಾಕೃತೀ। ಪ್ರಕಾಶ ತಮಸೋರೇಷ ಸಂಗಮೋ-ನವ್ವಸಂಗತಃ॥ (೧೮–೧೮) (ನಮಿ–ವಿನಮಿಗಳಿಗೆ ಧರಣೇಂದ್ರ ಹೇಳುವುದು	ಒಳಕೊಂಡ ಶಾಂತರಸದಿಂ ಬೆಳಪ ತಪೋಧನಭೀಷಣಾಕಾರದಿನಿಂ ತಳವಟ್ಟ ನಿಮ್ಮ ಕೂಟಂ ಬೆಳಗಿನ ಕತ್ತಲೆಯ ಕೂಟದಂತಾಗಿರ್ಪುಂ।' (೯–೧೦೧)

–ಹೀಗೆ, ಅಲ್ಲಲ್ಲಿ ಪಂಪ ಜಿನಸೇನರ ಮಾತುಗಳನ್ನು ನೇರವಾಗಿ ಬಳಸಿಕೊಂಡಿದ್ದಾನೆ. ಆದರೆ ಇಂಥವುಗಳ ಸಂಖ್ಯೆ ಕಡಿಮೆ. ಆತ ಪ್ರಯತ್ನಪೂರ್ವಕವಾಗಿ ಜಿನಸೇನರ ಮಾತುಗಳನ್ನು ಬಿಟ್ಟು ತಮ್ಮದೇ ಆದ ಉಪಮೆ ರೂಪಕಗಳನ್ನು ಕೊಡಲು ಯತ್ನಿಸಿದ್ದಾನೆ. ಕೆಲವು ಉದಾ:

೧. **ವಜ್ರಜಂಘನ ತೋಳುಗಳ ವರ್ಣನೆ:**

ಮಹಾಪುರಾಣ–"ಬಾಹೂ ತಸ್ಯಾಯತಾ ನೀಲ ನಿಷಧಾವಿವ ರೇಜತುಃ।" (೬–೩೭)

ಆದಿಪುರಾಣ–"ಪಗೆವರ ಪೆಂಡಿರ ಸುಯ್ಯೊಡನೆ ನಿಡಿಯುಮಾದ ತೋಳ್ಗಳುಂ" (೩–೯ ಮತ್ತು ೧೦ನೇ ಪದ್ಯದ ನಡುವಿನ ವಚನ)

೨. ಸ್ವಯಂ ಪ್ರಭೆಯ ವಿರಹದ ವರ್ಣನೆ:

ಮಹಾಪುರಾಣ–"ಪತಿಯಿಲ್ಲದ ಚಕ್ರವಾಕದಂತೆ ಬಹುಕಾಲದವರೆಗೆ
ದುಃಖಿತಳಾಗಿದ್ದಳು. ಗ್ರೀಷ್ಮ ಋತುವಿನಲ್ಲಿ ಭೂಮಿ ಕಾದು
ತೇಜಹೀನವಾಗುವಂತೆ, ಈಕೆ ಶೋಕದಿಂದ ಕಾಂತಿಹೀನಳಾದಳು.
....ಇತ್ಯಾದಿ" (೬–೫೦, ೫೧ನೇ ಪದ್ಯದ ಸಾರಾಂಶ)

ಆದಿಪುರಾಣ–"ಮೂರನೇ ಆಶ್ವಾಸದಲ್ಲಿ ೧೩–೧೪–೧೫ನೇ ಪದ್ಯಗಳು–
"ಅಲಕಂ ಮಂದಾರ ಶೂನ್ಯಂ, ಕದಪು ಮಕರಿಕಾ ಪತ್ರ ಶೂನ್ಯಂ, ಲಲಾಟಂ
ತಿಲಕಾಲಂಕಾರ ಶೂನ್ಯಂ, ಘನ ಕುಚಯುಗಳಂ ಹಾರ ಶೂನ್ಯಂ...."
"ಮುರಿದೇಗಿದುಪ್ಪೈ ನಿನ್ನ ನಿರದಂತಕನಾಂ ನಡೆ ನೋಡೆನೋಡೆ ನೀಂ
ಕರಗಿದೆಯೆಂತು ಮೆನ್ನ ಸುಶರೀರದೊಳಿರ್ದು ಜೀವಮಿಂದೊಡಲ್
ಕರಗಿದುದಿಲ್ಲದೆನ್ನ ಬಸಮಲ್ತೊಡಲಿದೆಂದಮ ಶೋಕದೊಳ್ ಮನಂ
ಕರಗಿದುದೆಯ್ದೆ ವಾರದಿರೆ ಬಿರ್ದಡೆಯಿಂ ಲಲಿತಾಂಗವಲ್ಲಭಾ।"
"ಮದನನ ಕೈದುವೆಲ್ಲಿದನನಂಗನ ಕೈಪೊಡೆಯೆಲ್ಲಿದಂ ವಿಳಾ–
ಸದ ಖಣಿ ಎಲ್ಲಿದಂ ಚದುರಪುಟ್ಟನೆಲ್ಲಿದಂ........"

೩. ಜನ್ಮಾಭಿಷೇಕದ ಬಳಿಕ, ನಾಭಿರಾಜನ ಆಸ್ಥಾನದಲ್ಲಿ ದೇವೇಂದ್ರ ನರ್ತಿಸುವಾಗ ನಾಟ್ಯರಸ ಹೇಗೆ ತುಂಬಿ ತುಳುಕಿತು ಎಂಬುದನ್ನು ವರ್ಣಿಸುವಾಗ–

ಮಹಾಪುರಾಣ–ಸ್ಫುಟನ್ನಿವ ಕಟಾಕ್ಷೇಷು ಕಪೋಲೇಷು ಸ್ಫುರನ್ನಿವ।
ಪ್ರಸರನ್ನಿವ ಪಕ್ತ್ರೇಷು ಕರೇಷು ವಿಲಸನ್ನಿವ॥
ವಿಹಸನ್ನಿವ ವಕ್ತ್ರೇಷು ನೇತ್ರೇಷು ವಿಕಸನ್ನಿವ।
ರಜ್ಯನ್ನಿವಾಂಗರಾಗೇಷು ನಿಮಜ್ಜನ್ನಿವ ನಾಭಿಷು॥
ಚಲನ್ನಿವ ಕಟೀಷ್ವಾಸಾಂ ಮೇಖಲಾಸು ಸ್ಖಲನ್ನಿವ।
ತದಾ ನಾಟ್ಯರಸೋಽಂಗೇಸು ವವೃಧೇ ವರ್ಧಿತೋತ್ಸವಃ॥

–ನಾಟ್ಯರಸ ದೇವಸ್ತ್ರೀಯರ ಕಡೆಗಣ್ಣುಗಳಲ್ಲಿ ಉಕ್ಕಿ, ಕೆನ್ನೆಗಳಲ್ಲಿ ಪ್ರಕಾಶಿಸಿ, ಪಾದಗಳಲ್ಲಿ ಹರಡಿ, ಕೈಗಳಲ್ಲಿ ವಿಲಾಸ ಮಾಡಿ, ಮುಖದಲ್ಲಿ ನಕ್ಕಂತೆ, ಕಣ್ಣುಗಳಲ್ಲಿ ವಿಕಾಸವಾಗಿ, ಅಂಗರಾಗಗಳಲ್ಲಿ ಅನುರಕ್ತವಾಗಿ, ನಾಭಿಯಲ್ಲಿ ಸ್ನಾನಮಾಡಿ, ಸೊಂಟದಲ್ಲಿ ಚಲಿಸಿ, ಒಡ್ಯಾಣದಲ್ಲಿ ಜಾರಿಬೀಳುವಂತೆ, ಸರ್ವಾಂಗಗಳಲ್ಲೂ ವೃದ್ಧಿಹೊಂದಿತು.)

ಆದಿಪುರಾಣ–ಕಡೆಗಣ್ಣೊಳ್ ತುಳುಂಕೆಯುಂ, ಕದಪಿನೊಳ್
ಪೊಂಪುಳಿಯಾಗಿಯುಂ, ಭ್ರೂ ವಿಭ್ರಮದೊಳ್ ಪೊಸಲ್ವರಿದುಂ,
ಅರುಣಾ-ಧರದೊಳ್ ಕೊಳಂಗೊಂಡುಂ, ಧರಹಸಿತದೊಳ್ ಬೆಳ್ಳಂಗಡೆದುಂ,
ಅಂಗರಾಗದೊಳ್ ರಂಗುಬಡೆದುಂ, ಸಿರಿಸದಾಮ ಕೋಮಲೆಯರ

ಭುಜಲತೆಗಳೊಳ್ ಪಸರಿಸಿಯುಂ, ಘನಸ್ತನಂಗಳೊಳೆಡಪಿಯುಂ,
ಗಂಭೀರ ನಾಭಿಯೊಳ್ ಸುಳಿಗೊಂಡುಂ, ನಿತಂಬದೊಳ್
ತುರುಂಬಿಯುಂ, ಮೃದು ಪದದೊಳಂದಂ ಬಡೆದುಂ, ಆಕೆಗಳಂ-
ಗೋಪಾಂಗದೊಳಿಂತು ನಾಟ್ಯರಸಮೆ ತೀವಿ...." (೭-೧೨೭ ವಚನ)

-ಇಲ್ಲಿ ಪಂಪ ಜಿನಸೇನರ ಕಲ್ಪನೆಗಳನ್ನು ವಿಸ್ತರಿಸಿರುವುದನ್ನೂ, ಜೊತೆಗೆ ಬೇರೆ ಕಲ್ಪನೆಗಳನ್ನೂ ಬಳಸಿರುವುದನ್ನೂ ಕಾಣಬಹುದು.

೪) ಜಿನಸೇನರ ಕೈ ಹಿಡಿದು ಹೊರಟೂ, ಮಧ್ಯದಲ್ಲೇ ಅವನ್ನು ಬಿಟ್ಟು ತನ್ನದೇ ಹೆಜ್ಜೆಗಳಲ್ಲಿ ನಡೆಯುವುದಕ್ಕೆ ಪಂಪ ಮಾಡಿದ ಪ್ರಯತ್ನವನ್ನು ಆದಿಪುರಾಣದಲ್ಲಿ ಹಲವೆಡೆ ಕಾಣಬಹುದು. ಇದಕ್ಕೊಂದು ಒಳ್ಳೆಯ ಉದಾಹರಣೆ, ನಾಭಿರಾಜ ಮೊರೆಯು ತನ್ನ ಮಗ ಆದಿನಾಥನನ್ನು ಮದುವೆಗೆ ಒಡಂಬಡಿಸುವ ಸಂದರ್ಭ-

ಮಹಾಪುರಾಣದಲ್ಲಿ ನಾಭಿರಾಜ ಮಗನಿಗೆ ಹೇಳುವುದು ಹೀಗೆ-

ಯಥಾರ್ಕಸ್ಯ ಸಮುದ್ಭೂತೌ ನಿಮಿತ್ತ ಮುದಯಾಚಲಃ।
ಸ್ವತಸ್ತು ಭಾಸ್ವಾನುದ್ಯಾತಿ ತಥೈವಾಸ್ಮಾದ್ಭವಾನಪಿ॥ (೧೫-೫೮)

(ಉದಯಾಚಲ ಪರ್ವತವಿಲ್ಲದಿದ್ದರೂ ಸೂರ್ಯ ಹುಟ್ಟುತ್ತಾನೆ. ಆದರೆ ಅದರ ಹಿಂದಿನಿಂದ ಹುಟ್ಟುವುದರಿಂದ ಆ ಪರ್ವತದಿಂದಲೇ ಹುಟ್ಟಿದಂತೆ ಕಾಣುತ್ತದೆ. ಹಾಗೇ, ನಿನ್ನ ಜನ್ಮಕ್ಕೂ ನಾವು ನೆಪ ಮಾತ್ರಕ್ಕೆ ಕಾರಣರು.)

ಆದಿಪುರಾಣದಲ್ಲಿ ಪಂಪನ ನಾಭಿರಾಜ ಇದೇ ಉಪಮೆಯನ್ನೆತ್ತಿಕೊಂಡು ಅದನ್ನು ಹೇಗೆ ವಿಸ್ತರಿಸಿದ್ದಾನೆ ನೋಡಿ-

ಉದಯಾಚಳಕ್ಕೆ ಪೆಸರಿನ
ನುದಯುದಿನಾಂತಿರೆಮಗೆ ಗುರುಗಂ ಗುರುವೆಂ
ದೊದವಿದ ಪೆಂಪಿದು ನಿನ್ನೊಂ
ದುದಯ ದಿನಾಯ್ತುಮರಮೌಳಿ ಲಾಲಿತ ಚರಣಾ। (೮-೯)

(ಇಲ್ಲಿ ಪಂಪ ಜಿನಸೇನರ ಕವಣೆಗಲ್ಲನ್ನೇ ಉಪಯೋಗಿಸಿ ಎರಡು ಹಣ್ಣುಗಳನ್ನು ಉದುರಿಸಿದ್ದಾನೆ. 'ಎಮಗೆ ಗುರುಗಂ ಗುರುವೆಂದೊದವಿದ ಪೆಂಪು' ಎನ್ನುವುದು ತೀರ್ಥಂಕರನ ತಂದೆಯಾಗುವುದರಲ್ಲಿರುವ ಭಾಗ್ಯವನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ಅದೇ ರೀತಿ, ಆದಿದೇವ ಎಷ್ಟು ದೊಡ್ಡವನೆಂಬುದು 'ಅಮರ ಮೌಳಿ ಲಾಲಿತ ಚರಣಾ' -ಎಂಬ ಉದ್ಗಾರದಲ್ಲಿ ಸ್ಪಷ್ಟಗೊಂಡಿದೆ. ಮಹಾಪುರಾಣದಲ್ಲಿ ಕೇವಲ ಉಪಮೆಯಿಂದ ಕೂಡಿದ ಒಂದು ಹೇಳಿಕೆಯಾಗಿದ್ದುದು ಇಲ್ಲಿ, ವಾತ್ಸಲ್ಯದ ಸೆಲೆಯೊಡೆಸುವ, ಕೃತಜ್ಞತೆಯನ್ನು ಪರಿಣಾಮಕಾರಿಯಾಗಿ ಸೂಚಿಸುವ ಒಂದು ಪುಟ್ಟ ಕವಿತೆಯಾಗಿದೆ.)

೫

ಮಹಾಪುರಾಣದಲ್ಲಿನ ಆದಿನಾಥ ತೀರ್ಥಂಕರನ ಕಥಾಭಾಗದ (ಅಂದರೆ, ಪೂರ್ವ ಪುರಾಣದ) ಅನೇಕ ಸುಂದರ, ಪ್ರಸ್ತುತ ಭಾಗಗಳೂ ಸಹ ಆದಿಪುರಾಣದಲ್ಲಿ ಲೋಪವಾಗಿವೆ, ಇಲ್ಲವೆ ಹ್ರಸ್ವಗೊಂಡು ತೌಲನಿಕವಾಗಿ ಕಡಿಮೆ ಪ್ರಭಾವಶಾಲಿಯಾಗಿವೆ. ಅಂತಹ ಕೆಲವು ಉದಾಹರಣೆಗಳನ್ನು ನೋಡೋಣ–

೧) **ಮಹಾಬಲನ ತಪಸ್ಸಿನ ವಿವರಗಳು:** ಪೂರ್ವ ಪುರಾಣದ ಪಂಚಮಾಶ್ವಾಸದ ಹದಿನಾರು ಶ್ಲೋಕಗಳಲ್ಲಿ (೨೩೧ರಿಂದ ೨೪೬) ಮನಂಬುಗುವಂತೆ ಬಂದಿದೆ. 'ಆಹಾರವನ್ನು ತ್ಯಜಿಸಿದ್ದರಿಂದ ಅವನ ದೇಹವು ಶಿಥಿಲವಾಯಿತು. ಪ್ರತಿಜ್ಞೆ ಮಾತ್ರ ಶಿಥಿಲವಾಗಲಿಲ್ಲ. ಮಹಾತ್ಮರ ವ್ರತವೇ ಹೀಗೆ'. 'ಮಹಾಬಲನು ಸಲ್ಲೇಖನ ಸ್ವೀಕರಿಸಿದ್ದರಿಂದ ದುಃಖದಿಂದಲೋ ಎಂಬಂತೆ ಅವನ ಕಣ್ಣುಗಳು ಎಲ್ಲಿಯೋ ಮರೆಯಾದವು.... ಅವನ ಹೊಟ್ಟೆ ಒಣಗುತ್ತಿರುವ ಸರೋವರದಂತೆ ಕ್ಷೀಣವಾಯಿತು'–ಎಂಬಂತಹ ಉಚಿತ ಉಪಮೆಗಳು ಅಲ್ಲಿವೆ.

ಆದಿಪುರಾಣದಲ್ಲಿ ಈ ವರ್ಣನೆ ನಾಲ್ಕಾರು ಸಾಲುಗಳಲ್ಲಿ ಮುಗಿದುಹೋಗಿದೆ. ಆದರೂ–'ಪಂ ಸಮಾಧಿಪಿಟ್ಟಯುಂ ನೆರೆ ತಾಳಿದ್ದನೋ ಮಹಾಬಲಂ' ಎಂಬಂತಹ ಮಾತುಗಳಿಂದ ಇಲ್ಲಿಯ ವರ್ಣನೆಯೂ ತನ್ನಷ್ಟಕ್ಕೇ ಸಾಕಷ್ಟು ಪ್ರಭಾವಶಾಲಿಯಾಗಿದೆ!

೨) 'ಲಲಿತಾಂಗನ ಕೊರಳಮಾಲೆ ಒಣಗಿತು' ಎಂಬುದನ್ನು ಪಂಪ–"ಸೂಡಿದ ಪಾರಿಜಾತದ ಸಮೇರುವ ವಾಸಿಗಮೊಯ್ಯನೊಯ್ಯನಿಪ್ಪೂಡಿದುದು. .." –ಎಂದು ಸರಳವಾಗಿ ಹೇಳಿದ್ದರೆ (ಆ. ೩, ಪದ್ಯ ೩), ಜಿನಸೇನಾಚಾರ್ಯರು ಹೇಳಿರುವ ರೀತಿ ತುಂಬ ಪರಿಣಾಮಕಾರಿಯಾಗಿದೆ–

ಮಾಲಾಚ ಸಹಜಾ ತಸ್ಯ ಮಹೋರಸ್ಥಲ ಸಂಗಿನೀ।
ಮ್ಲಾನಿಮಾಗಾದ ಮುಷ್ಯೇವ ಲಕ್ಷ್ಮೀರ್ವಿಶ್ಲೇಷ ಭೀಲುಕಾ। (೬–೨)

(ಆತನ ವಿಶಾಲ ವಕ್ಷಸ್ಥಲದ ಮೇಲೆ ಜನ್ಮ ಸಹಜವಾಗಿದ್ದ ಮಾಲೆಯು ಅವನ ವಿಯೋಗದಿಂದ–ಲಕ್ಷ್ಮಿಯು ಭಯಪಟ್ಟು ಖಿನ್ನಳಾದಳೋ ಎಂಬಂತೆ, ಬಾಡಿತು.)

ಈ ಸಂದರ್ಭದಲ್ಲಿಯೇ ಇನ್ನೊಂದು ಮುತ್ತಿನಂತಹ ಮಾತನ್ನೂ ಆಡುತ್ತಾರೆ ಆಚಾರ್ಯರು–

"ಪುಣ್ಯಾತಪತ್ರ ವಿಶ್ಲೇಷೇ ತಚ್ಛಾಯಾ ಕ್ವಾವತಿಷ್ಠತಾಂ?" (೬–೩)

(ಪುಣ್ಯವೆಂಬ ಛತ್ರಿ ನಷ್ಟವಾದ ಮೇಲೆ ಅದರ ನೆರಳಾದರೂ ಎಲ್ಲಿ ಉಳಿಯುತ್ತದೆ?)

೩) ಆದಿನಾಥ ತಪಸ್ಸಿಗೆ ನಿಂತಾಗ ದೇವೇಂದ್ರ ಅವನನ್ನು ಇಪ್ಪತ್ತನಾಲ್ಕು ಶ್ಲೋಕಗಳಿಂದ ಸ್ತುತಿಸುವುದು ಮಹಾಪುರಾಣದಲ್ಲಿದೆ. ಆದಿಪುರಾಣದಲ್ಲಿ ಇದಿಲ್ಲ. ಇದನ್ನು ಕೈಬಿಟ್ಟಿದ್ದರಿಂದೇನೂ ನಷ್ಟವಿಲ್ಲ.

ಇವಲ್ಲದೆ, ಪಂಪ ಕತೆಗೆ ಬಾಧಕವಲ್ಲದ ಕೆಲವು ಸಣ್ಣ ಪುಟ್ಟ ಮಾರ್ಪಾಟುಗಳನ್ನು ಪಾತ್ರ ಪೋಷಣೆಯ ದೃಷ್ಟಿಯಿಂದ ಮಾಡಿಕೊಂಡಿದ್ದಾನೆ. ಮೂಲದಲ್ಲಿ ಪಂಡಿತೆಯನ್ನು ಶ್ರೀಮತಿಯು ತಾಯಿ ಸಮಾನಳೆಂದು ಪರಿಗಣಿಸಿದ್ದರೆ (ಜನನೀ ನಿರ್ವಿಶೇಷಾತ್ವಂ ಚಿರಂ ಪರಿಚಿತಾಚಮೇ-೬-೧೨೩), ಆದಿಪುರಾಣದಲ್ಲಿ ಆಕೆ ಶ್ರೀಮತಿಗೆ ಜೀವದ ಗೆಳತಿಯಾಗಿದ್ದಾಳೆ ('ಬಗೆಯ ಬಯ್ಕೆಯನೊಪ್ಪಿಸುವಾಗಳ್ ನೀನೆ ವಲಂ') ಮೂಲದಲ್ಲಿ-ಶ್ರೀಮತಿಗೆ ಪೂರ್ವಭವ ಸ್ಮರಣೆಯಾದದ್ದನ್ನು ಅವಳ ತಂದೆಯೇ ಊಹಿಸಿ ತಿಳಿದು ಪತ್ನಿಗೆ ಹೇಳುತ್ತಾನೆ. ಇಲ್ಲಿ ಅದನ್ನು ತಿಳಿದು ಹೇಳುವ ಕೆಲಸವನ್ನು ಪಂಡಿತೆಗೆ ವಹಿಸುತ್ತಾರೆ. ಇದೇ ಹೆಚ್ಚು ಸಹಜವೆನ್ನಿಸುತ್ತದೆ.

೬

ಆಚಾರ್ಯ ಜಿನಸೇನರು ಅಸದೃಶ ಪ್ರತಿಭಾ ಸಂಪನ್ನರು. ಅವರು ಲೌಕಿಕರಾಗಿದ್ದಿದ್ದರೆ ಸಂಸ್ಕೃತ ಸಾಹಿತ್ಯ ಇನ್ನೊಬ್ಬ ಕಾಳಿದಾಸನನ್ನು ಪಡೆಯುತ್ತಿತ್ತೇನೋ ಎನ್ನುವಷ್ಟು ಓಜಸ್ವಿಯಾದುದು ಅವರ ಪ್ರತಿಭೆ. ಕಾಳಿದಾಸ ಉಳಿದ ಕವಿಗಳ ಮೇಲೆ ಪ್ರಭಾವ ಬೀರಿದಂತೆ ಇವರೂ ಬೀರುತ್ತಿದ್ದರು. ಆದರೆ ಇವರು ಉಗ್ರ ಯತಿಯಾಗಿ, ಜೈನ ಧರ್ಮದ ಪುರಾಣ ಕತೆಯನ್ನೇ ಕಾವ್ಯವಾಗಿಸಬೇಕೆಂದು ಸಂಕಲ್ಪಿಸಿದ್ದರಿಂದ ವಿಶಾಲ ವಾಚಕ ಸಮುದಾಯ ಇವರಿಗೆ ದೊರೆಯದೆ. ಇಂತಹ ಪ್ರತಿಭಾವಂತನಿಗೆ ಸಿಗಬೇಕಾಗಿದ್ದಷ್ಟು ಪ್ರಚಾರ ಸಿಕ್ಕದ ಹೋಗಿರಬೇಕು.

ತಮ್ಮ ಕಾವ್ಯ ಹೇಗಿರಬೇಕೆಂಬುದರ ಬಗ್ಗೆ ಜಿನಸೇನರಲ್ಲಿ ಸ್ಪಷ್ಟ ಕಲ್ಪನೆಗಳಿದ್ದವು. ಮಹಾಪುರಾಣದ ಪ್ರಥಮಾಂಶದಲ್ಲಿ ಸಾಕಷ್ಟು ವಿಸ್ತಾರವಾಗಿಯೇ ಅವರು ಸತ್ಕಾವ್ಯದ ಲಕ್ಷಣಗಳನ್ನು ವಿವರಿಸಿದ್ದಾರೆ. 'ಸುಶ್ಲಿಷ್ಟ ಪದವಿನ್ಯಾಸ, ಶ್ರಾವ್ಯಬಂಧ, ಪ್ರಸನ್ನಾರ್ಥ-ಇವು ಇರುವುದರ ಜೊತೆಗೇ ಆ ರಚನೆ ಮಹಾಪುರಾಣ ಸಂಬಂಧಿಯಾಗಿರಬೇಕು, ಮಹಾನಾಯಕರುಗಳಿರಬೇಕು, ಎಲ್ಲಕ್ಕಿಂತ ಹೆಚ್ಚಾಗಿ ಧರ್ಮಾರ್ಥ ಕಾಮಗಳೆಂಬ ತ್ರಿವರ್ಗ ಫಲಗಳ ವರ್ಣನೆಯನ್ನು ಒಳಗೊಂಡಿರಬೇಕು' -ಇದು ಅವರ ನಿಲುವು. (೧-೯೮, ೯೯.)ಕಾವ್ಯಾದಿಯಲ್ಲಿ ಅವರು ಭರತನ ಮುಖದಿಂದ ಹೇಳಿಸುವ ಮಾತು ಸ್ವತಃ ಅವರ ಅಂತರಂಗದ ವಾಣಿಯಂತಿದೆ–

> ಭಗವನ್ ಶ್ರೋತುಕಾಮೋಸ್ಮಿ ವಿಶ್ವಬುಗ್ಧಮನಸಂಗ್ರಹಂ।
> ಪುರಾಣಂ ಮಹತಾಂ ಪುಂಸಾಂ ಪ್ರಸೀದ ಕುರುಮೇ ದಯಾ॥ (೧-೧೬೮)

–ಈ ಮಾತನ್ನು ಸ್ವಲ್ಪ ಬದಲಿಸಿದರೆ ಅದು ಜಿನಸೇನರಿಗೇ ಹೊಂದುತ್ತದೆ.

ಜಿನಸೇನರು ಮಹಾವ್ರತಗಳನ್ನಾಚರಿಸಿದ, ಆ ಬದುಕಿನಲ್ಲೇ ಸಂತೃಪ್ತಿಯನ್ನೂ ಸಾರ್ಥಕತೆಯನ್ನೂ ಕಂಡುಕೊಂಡ ತ್ಯಾಗಿ, ಪೂರ್ವ ಪುರಾಣ ಭಾಗವನ್ನು ಅವರು ರಚಿಸಿದ್ದೂ ಬದುಕಿನ ಕೊನೆಗಾಲದಲ್ಲಿ. (ಸುಮಾರು ೯೦ ವರ್ಷವಾಗಿದ್ದಾಗ.) ತಮ್ಮ

ಮನಸ್ಸನ್ನೂ ಭಾವೋನ್ಮೀಲತೆಯನ್ನೂ ಬೇಕಾದಾಗ ತಡೆಹಿಡಿಯುವಂಥ ಮನೋಬಲವನ್ನು ಸಂಪಾದಿಸಿಕೊಂಡಿದ್ದವರವರು. ಎಲ್ಲ ನದಿಗಳೂ ಸಮುದ್ರದ ಕಡೆಗೇ ಹರಿಯುವಂತೆ, ಎಲ್ಲ ವಿವರ, ವರ್ಣನೆಗಳೂ ಜಿನಮತಾಂಬೋಧಿಯ ಕಡೆಗೇ, ಜಿನಪಾದ ಮೂಲಕ್ಕೇ ಹರಿಯಬೇಕೆಂಬ ನಿಲುವಿಗೆ ಸಹಜವಾಗಿ ಮನಸೋತವರು.

ಪಂಪನ ನಿಲುವು ಬೇರೆ ಮಟ್ಟದ್ದು. ನಲವತ್ತನೇ ವಯಸ್ಸಿನಲ್ಲಿ ಆದಿಪುರಾಣವನ್ನು ಬರೆದ ಈತ ಸಂಸಾರಿಯಷ್ಟೇ ಅಲ್ಲ, ಲೌಕಿಕ ವ್ಯಾಪಾರಗಳಲ್ಲಿ ವ್ಯಾಪಕವಾಗಿ ತೊಡಗಿಕೊಂಡಿದ್ದವನೂ ಹೌದು. ಹೀಗಾಗಿ, ನಿತ್ಯ ಬದುಕಿನ ನೋವು ನಲಿವು ಕಾತರ ಭಯಗಳು ಜಿನಸೇನರಿಗಿಂತ ಈತನಿಗೇ ಹೆಚ್ಚು ಸಮೀಪ. ಸಾಂಸಾರಿಕ ಕಷ್ಟಗಳು ಮಾನವನ ವ್ಯಕ್ತಿತ್ವವನ್ನೇ ನುಂಗಿಹಾಕುವುದನ್ನು ಜಿನಸೇನರು ದೂರದಿಂದ ನೋಡಿ ಬಲ್ಲರು. ಪಂಪ ಸ್ವತಃ ಅಂಥವರ ನಡುವೆಯೇ ನಿಂತವನು!

ಇದರ ಪರಿಣಾಮ ಏನಾಗಿದೆ? ಎರಡು ಕುದುರೆಗಳ ಓಟದ ಶಕ್ತಿ ಒಂದೇ ಆಗಿದ್ದರೂ, ಒಂದು ಕಣ್ಣಿಗೆ ಪಟ್ಟಿ ಕಟ್ಟಿಸಿಕೊಂಡಿರುವಂತೆ, ಇನ್ನೊಂದು ಅದರಿಂದ ಮುಕ್ತವಾಗಿರುವಂತೆ ಕಂಡುಬರುತ್ತದೆ.

ಜಿನತತ್ವ ವಿವೇಚನೆಯ ಕಡೆಗೇ ಲಕ್ಷ್ಯವಿಟ್ಟು ಜಿನಸೇನರು ಕಥೆಯ ನಡುವೆ ಯಥೇಷ್ಟ ವರ್ಣನೆಗಳನ್ನು ತಂದರೂ ಅಲ್ಲಿ ರಮ್ಯತೆ, ವ್ಯಾಪಕತೆ ಹೆಚ್ಚುತ್ತವೆಯೇ ಹೊರತು ಆಳ ಹೆಚ್ಚುವುದಿಲ್ಲ. ಇದರ ಪರಿಣಾಮವಾಗಿ–'ರಸ'ವಾಗಿ ಪಕ್ವವಾಗಬಹುದಾದ ಅನೇಕ ಸಂದರ್ಭಗಳಲ್ಲಿ ಸ್ಥಾಯೀಭಾವ ಸ್ವಲ್ಪಮಾತ್ರವೇ ಚಿಗಿದು, ಸೂಕ್ತವಾದ ಸನ್ನಿವೇಶ ಸೃಷ್ಟಿಸಲ್ಪಡದೇ ಅಷ್ಟಕ್ಕೇ ನಿಂತುಹೋಗುತ್ತದೆ. ಅಂದರೆ–ಕಥಾ ಮಧ್ಯದಲ್ಲಿ ಬರುವ ಸೂಕ್ತ ಸನ್ನಿವೇಶಗಳಲ್ಲೆಲ್ಲ ರಸಪುಷ್ಟಿಯನ್ನುಂಟುಮಾಡುವುದರ ಕಡೆ ಅವರ ದೃಷ್ಟಿ ಹರಿಯುವುದೇ ಇಲ್ಲ. ಆದರೆ ಇದಕ್ಕೆ ಕಾರಣ ಕವಿಯ ಪ್ರತಿಭೆಯಲ್ಲಿ ದೋಷವಿದೆ ಎಂಬುದಲ್ಲ. ಲೌಕಿಕ ಕವಿಗಿಂತಲೂ ಮೇಲ್ಮಟ್ಟದ ಬಿಗಿಯಾದ ಸ್ಥಿತಪ್ರಜ್ಞತೆಯೇ ಇದಕ್ಕೆ ಕಾರಣ. ಇದರಿಂದಾಗಿ, ಶೋಕದ ಸನ್ನಿವೇಶದಲ್ಲೂ ಜಿನಸೇನರು ಲಲಿತಾಂಗನ ಸಂದರ್ಭದಲ್ಲಿ ಹೇಳಿದಂತೆ–'ಧ್ವಸ್ತಸಾಂತಿಂ, ವಿಚ್ಛಾಯಿತಾಂಗತಂ, ಪೀಡಿತಂ ಸರ್ವಂ, ದುಃಖಿಭೂಯಮಿವಾಗತಂ!'–ಎನ್ನುತ್ತಾ ಹೋಗುತ್ತಾರೆಯೇ ಹೊರತು, ಪಂಪನ ಲಲಿತಾಂಗನಂತೆ–"ಸುರತರು ನಂದನಂಗಳಿರ, ರತ್ನಖಿನದ್ಧ ಕುಟ್ಟಿಮಾಂತರ ಸುರಕಾಲಯಂಗಳಿರ, ಚಾರು ವಿಲೋಲ ಕಟಾಕ್ಷಪಾತ ಸೌಂದರ ಪರಿವಾರ ದೇವತೆಯರಿರಾ...." –ಎಂದು ಕರುಳು ಹಿಂಡುವಂತೆ ಪ್ರಲಾಪಿಸುವುದಿಲ್ಲ. ಜಿನಸೇನರ ಲಲಿತಾಂಗನ ವಿಷಣ್ಣತೆಯಲ್ಲೂ ಒಂದು Standard ಇರುವಂತಿದೆ. ಅಸಹಾಯಕನಾಗಿ ಹೆಂಡತಿಯ ಬಳಿಯೂ ಕೈ ಎತ್ತಿ–"ಮಾಣಿಸಲಾಗದೆ ಪೇಳ್ ಸ್ವಯಂಪ್ರಭೇ" ಎಂದು ಆರ್ತನಾದ ಮಾಡುವ, "ಕಾರುಣ್ಯನಾದಂ ನಿನ್ನ ನಾದಂ ನಗಿಸುಗುಂ" ಎಂದೆನ್ನಿಸಿಕೊಳ್ಳುವ ಲಲಿತಾಂಗನನ್ನು ನಾವು ಜಿನಸೇನರಲ್ಲಿ ಕಾಣೆವು.

ಅದೇ ರೀತಿ, ಶೃಂಗಾರವನ್ನು ಜಿನಸೇನರು ಮನಂಬುಗುವಂತೆ ವರ್ಣಿಸಿದರೂ ಕೂಡಾ, ಅಲ್ಲಿ ರಸಪುಷ್ಟಿಯನ್ನು ಅವರು ಉಂಟು ಮಾಡಿದರೂ ಕೂಡಾ "ಅಹೋ ಮದನ ಜಂಗಮ ಲತಾ ಲಲಿತಾಂಗಿಯರಿಂದಲ್ತೆ ಸಂಸಾರ ಸಾರೋದಯಂ"–ಎಂಬಂತಹ ಹೃದಯ ಪೂರ್ವಕವಾದ ಲೌಕಿಕೋದ್ಗಾರ ಅಲ್ಲಿ ಕಾಣದು. ಅದ್ಭುತ ರಸವನ್ನು ಜಿನಾಭಿಷೇಕದ ಸಂದರ್ಭದಲ್ಲಿ ಪಂಪ ಜಿನಸೇನರಿಬ್ಬರೂ ಸೃಷ್ಟಿಸುತ್ತಾರೆ. ಆದರೆ, ಆಗಲೂ ಕೂಡ ಜಿನಸೇನರು ಆ ಅದ್ಭುತಕ್ಕೂ ಮಾರು ಹೋಗುವುದಿಲ್ಲ ಪಂಪನಾದರೋ ವರ್ಣಿಸಿ ವರ್ಣಿಸಿ ಸೋತು ಕೊನೆಗೆ–

"ಧರೆ ರಂಗಂ, ಗಗನಂ ಮನೋಹರತರಂ ನಾಟ್ಯಾಲಯಂ, ನರ್ತಕಂ
ಸುರರಾಜಂ, ಸಭೆ ದೇವ ಮರ್ತ್ಯ ಸಭೆ, ಸಂದಾರಾಧ್ಯನೀಶಂ ಜಗದ್ಗುರು
ತನ್ನೃತ್ಯ ಫಲಂ ತ್ರಿವರ್ಗ ವಿಭವಂ ತಾನೆಂದೊಡ ಮೇಮಾ ತೋಸಾ
ಸಿರಮುಂ ನಾಲಿಗೆಯುಳ್ಳ ವಾಸುಕಿಯುಮಿನ್ನೇನೆಂದದಂ ಬಣ್ಣಿಪಂ॥

ಎಂದು ಉದ್ಗಾರವೆತ್ತುತ್ತಾನೆ. ಇಲ್ಲಿ ರಸಸಿದ್ಧಿ ಪರಾಕಾಷ್ಠೆಯನ್ನು ಮುಟ್ಟುತ್ತದೆ.

ಆದರೆ ಜಿನಸೇನರು ಉದ್ಗಾರವೆತ್ತುವುದೇ ಇಲ್ಲವೆಂದಲ್ಲ. ಲೌಕಿಕತೆ ಎಲ್ಲೆಲ್ಲಿ ತಾತ್ವಿಕತೆ ಯತ್ತ ಎಳೆಯುತ್ತದೋ ಅದನ್ನು ನಿರೂಪಿಸುವಾಗೆಲ್ಲ ಅವರು ಪರವಶರಾಗುತ್ತಾರೆ. ಅಲ್ಲಿ ಅವರು ನಮಗೆ ತುಂಬ ಪ್ರಿಯರಾಗುತ್ತಾರೆ. ಉದಾಹರಣೆಗೆ, ನೀಲಾಂಜನೆಯ ಮರಣ ವನ್ನರಿತ ಪುರುದೇವನ ಉದ್ಗಾರ ನೋಡಿ–

"ಅಹೋ ಜಗದಿದಂ ಭಂಗಿ ಶ್ರೀ ಸ್ತಟಿದ್ವಲ್ಲರೀ ಚಲಾ|" (ಓಹೋ, ಈ ಜಗತ್ತಿನ ಎಲ್ಲದರ ರೀತಿಯೂ ಮಿಂಚಿನ ಬಳ್ಳಿಯಂತೆ!)

ಇದೇ ರೀತಿ, ಶೋಕ ರಸವಾಗುವ ಒಂದು ಉತ್ಕೃಷ್ಟ ಸನ್ನಿವೇಶ ಆದಿನಾಥನ ದೀಕ್ಷಾ ಸಂದರ್ಭದಲ್ಲಿ ಅರಮನೆಯ ಸ್ತ್ರೀಯರು ಪ್ರಲಾಪಿಸುವುದರಲ್ಲಿದೆ. ಆ ಸ್ತ್ರೀಯರು ಆದಿ ದೇವನನ್ನು ಕೇಳುತ್ತಾರೆ–

"ಕ್ವ ಪ್ರಸ್ಥಿತೋಸಿ ಹಾ ನಾಥ ಕ್ವ ಗತ್ವಾಸ್ಮಾನ್ಪ್ರತೀಕ್ಷಸೇ|
ಕಿಯದ್ದೂರಂ ಚ ಗಂತವ್ಯಮಿತ್ಯನ್ಯಾ ಮುಮುರ್ಹುಮುಹುಃ|"

(೧೭–೧೬೨)

(ಹಾ ನಾಥ, ಎಲ್ಲಿರುತ್ತೀ, ಎಲ್ಲಿಯವರೆಗೆ ಹೋಗಿ ಹಿಂದಿರುಗಿ ನಮ್ಮನ್ನು ನೋಡುತ್ತೀ, ಎಷ್ಟು ದೂರ ಹೋಗುತ್ತೀ–ಎಂದು ಅವರು ನೆಲದ ಮೇಲೆ ಹೊರಳಾಡುತ್ತಾ ಗೋಳಿಡುತ್ತಿದ್ದರು.)

ಆ ಸಂದರ್ಭದಲ್ಲಿ ಅಳುವುದು ಅಮಂಗಳ ಕರವೆಂದು ಭಾವಿಸಿದ ಸ್ತ್ರೀಯರು ನೆಲದ ಮೇಲೆ ಚೆಲ್ಲಿದ ಮುತ್ತುಗಳ ಜೊತೆ ತಮ್ಮ ಕಂಬನಿಗಳನ್ನು ಸೇರಿಸುತ್ತಾ ಅವನ್ನು ಬಚ್ಚಿಡುವ ಪ್ರಯತ್ನ ಮಾಡುತ್ತಿದ್ದರಂತೆ–

"ಗತಿಸಂಭ್ರಮ ವಿಚ್ಛಿನ್ನಹಾರ ವ್ಯಾಕೀರ್ಣ ಮೌಕ್ತಿಕಾಃ|
ಸ್ಥೂಲಾನಶ್ರು ಜಲಾಸ್ಕಲ್ಪಿಚ್ಛಿನ್ನಂ ತಚ್ಛಿದ್ಬ್ಯನಾ ಮುಹುಃ|| (೧೭–೧೬೬)

ಇಂಥ ವ್ಯಾಪಕ ಶೋಕ ತಪ್ತತೆಯನ್ನು ಪಂಪನೀರಾ ಕಡೆಗಣಿಸಿ ಕೇವಲ ಒಂದೇ ವೃತ್ತದಲ್ಲಿ ಯಶಸ್ವತಿ ಸುನಂದೆಯರ ದುಃಖವನ್ನು, ಇನ್ನೆರಡು ಪದ್ಯಗಳಲ್ಲಿ ಊರವರ ಶೋಕವನ್ನೂ ಅಷ್ಟೇನೂ ಪ್ರಭಾವಶಾಲಿಯಾದ ರೀತಿಯಲ್ಲಿ ನಿರೂಪಿಸಿ ಕೈಬಿಟ್ಟಿದ್ದಾನೆ.

ಜಿನಸೇನರು ಎಷ್ಟು ಪ್ರತಿಭಾಶಾಲಿಗಳೆಂಬುದಕ್ಕೆ ಪಂಪನಂಥವನು ಅವರ ಲೋಹ ಚುಂಬಕಶಕ್ತಿಯಿಂದ ತಪ್ಪಿಸಿಕೊಳ್ಳಲು ಹೆಜ್ಜೆ ಹೆಜ್ಜೆಗೂ ಹೆಣಗಾಡಿರುವುದೇ ಸಾಕ್ಷಿ! ಅಂತೆಯೇ ಅವನು ಆ ಸವಾಲನ್ನು ಎದುರಿಸುವಲ್ಲಿ ಯಶಸ್ವಿಯೂ ಆಗಿದ್ದಾನೆ. ಇವನ ಪಾತ್ರಗಳ ಆಳದಲ್ಲಿ ನಮ್ಮಂಥ ಸಾಮಾನ್ಯರ ಹೃದಯದ ಮಿಡಿತವಿದೆ. ಅಂತೆಯೇ ಆ ಪಾತ್ರಗಳನ್ನು ಎತ್ತರಕ್ಕೂ ಒಯ್ದಿದ್ದಾನೆ.

ಜಿನಸೇನರು ಸಂಕಲ್ಪಿಸಿದ್ದ ಕಾವ್ಯ ಬಹುದೊಡ್ಡದಿತ್ತು. ಪಂಪ ಇಟ್ಟುಕೊಂಡಿದ್ದ ಗುರಿ ಅದಕ್ಕಿಂತ ಬಹಳ ಮಿತವಾದದ್ದಾಗಿತ್ತು. ಇವರ ಕಾವ್ಯಗಳ ಸಿದ್ಧಿಯನ್ನು ಲೆಕ್ಕಹಾಕುವಾಗ ಈ ಅಂಶವನ್ನೂ ಗಮನದಲ್ಲಿಟ್ಟಿರಬೇಕು. ಜಿನಸೇನರು ತಮ್ಮ ಕಾವ್ಯ ಪಡಯಬಹುದಾದ ಒಟ್ಟು ವಿಸ್ತಾರವನ್ನು ಮರೆತು ಬೇಕೆನಿಸಿದಲ್ಲಿ ಬೇಕೆನಿಸಿದಷ್ಟು ವರ್ಣಿಸಿರುವಂತೆ ಕಾಣುತ್ತದೆ. (ಅವರು ಇಪ್ಪತ್ನಾಲ್ಕು ತೀರ್ಥಂಕರರ ಚರಿತ್ರೆಯನ್ನೂ ಬರೆಯಬೇಕೆಂದಿದ್ದವರು. ಪೂರ್ವ ಪುರಾಣದ ರೀತಿಯಲ್ಲಿ ಅವರು ಉಳಿದವರ ಚರಿತ್ರೆಯನ್ನು ಹೇಳ ಹೊರಟಿದ್ದರೆ ಮಹಾ ಪುರಾಣ ಈಗಿರುವುದಕ್ಕಿಂತ ಕನಿಷ್ಠ ಹತ್ತು ಪಟ್ಟು ದೊಡ್ಡದಾಗುತ್ತಿತ್ತು. ಕಲಾತ್ಮಕವಾಗಿ ಅದು ದೊಡ್ಡ ಸೋಲಾಗುತ್ತಿತ್ತು. ಈ ಅಂಶವನ್ನು ಅವರು ಎಲ್ಲಿಯೂ ಗಮನಿಸಿದಂತೆಯೇ ಕಾಣುವುದಿಲ್ಲ.) ಆದರೆ ಪಂಪ ಎಲ್ಲೂ ಆ ಮುಖ್ಯಾಂಶವನ್ನು ಮರೆಯಲೇ ಇಲ್ಲ. ಹೀಗಾಗಿ ಔಚಿತ್ಯ ಪ್ರಜ್ಞೆ ಜಿನಸೇನರಿಗಿಂತ ಪಂಪನಲ್ಲೇ ಹೆಚ್ಚು ಮೆರೆದಿರುವುದು ಕಾಣುತ್ತದೆ.

□ □

ಕಾಳವ್ವೆ-ಗಂಗಮ್ಮ-ಸಂಕವ್ವೆಯರು ಮತ್ತು ಬಂಡಾಯ

—ವಿಜಯಶ್ರೀ ಸಬರದ

ಕನ್ನಡ ಸಾಹಿತ್ಯದಲ್ಲಿ ಬಂಡಾಯದ ಪ್ರಮುಖ ಹರಿಕಾರರೆಂದರೆ ಹನ್ನೆರಡನೇ ಶತಮಾನದ ವಚನಕಾರರು. ಭಾರತೀಯ ಸಂಸ್ಕೃತಿಯ ಸುವರ್ಣಯುಗವೆಂದು ಹೇಳುವ ವೇದ ಕಾಲದಲ್ಲಿ ಕೇವಲ ಮೂರು-ನಾಲ್ಕು ಮಹಿಳೆಯರು ಮಾತ್ರ ತತ್ತ್ವಜ್ಞಾನಿಗಳಾಗಿದ್ದರೆ, ಕರ್ನಾಟಕದ ಬಸವಯುಗದಲ್ಲಿ ಅನೇಕ ಮಹಿಳೆಯರು ತತ್ತ್ವಜ್ಞಾನಿಗಳಾಗಿ, ಹೋರಾಟಗಾರರಾಗಿ ಶ್ರೇಷ್ಠ ವಚನಕಾರ್ತಿಯರಾಗಿ, ಅನುಭವಿಗಳಾಗಿ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಕ ರಂಗದಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ಅವರಲ್ಲಿ ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ, ಮಾರಯ್ಯಗಳ ಹೆಂಡತಿ ಗಂಗಮ್ಮ ಮತ್ತು ಸೂಳೆಸಂಕವ್ವೆಯರ ವಚನಗಳಲ್ಲಿ ಸಾರ್ವಕಾಲಿಕತೆಯನ್ನು, ನಿಜವಾದ ಬಂಡಾಯವನ್ನು ಕಾಣಬಹುದಾಗಿದೆ.

ಬಂಡಾಯ, ಕನ್ನಡ ಸಾಹಿತ್ಯಕ್ಕೇನು ಹೊಸದಲ್ಲ. ಆದರೆ ಅದು ಇಂದಿನ ಸಮಕಾಲೀನ ಅನಿವಾರ್ಯತೆಯಿಂದ ಒಂದು ಚಳುವಳಿಯಾಗಿ ಸಂಘಟನೆಯಾದದ್ದು ಈಗ ನಾಲ್ಕು ವರ್ಷಗಳಿಂದ ಇಂದಿನ ಬಂಡಾಯ ಸಾಹಿತಿಗಳಿಗೆ ಒಂದು ದೊಡ್ಡ ಪರಂಪರೆಯಿದೆ. ಸಂಪ್ರದಾಯವನ್ನು ಅಲ್ಲಗಳೆಯುತ್ತಲೇ ಪರಂಪರೆಯನ್ನು ಬಂಡಾಯ ಸಾಹಿತಿ ಒಪ್ಪುತ್ತಾನೆ. ಸಂಪ್ರದಾಯ ನಿಂತ ನೀರಾದರೆ, ಪರಂಪರೆ ಹರಿವ ಹೊಳೆ ಸಮಾಜದ ಮೌಲ್ಯಗಳು ಸಮಕಾಲೀನ ಸಂದರ್ಭದಲ್ಲಿ ಅರ್ಥ ಕಳೆದುಕೊಂಡು ಸ್ಥಗಿತಗೊಂಡಾಗ ಸಂಪ್ರದಾಯವಾಗುತ್ತದೆ. ಹಾಗೆ ಸ್ಥಗಿತಗೊಳ್ಳದೆ ಆ ಮೌಲ್ಯಗಳು ಚಲನಶೀಲವಾದರೆ ಅದು ಪರಂಪರೆ. ಪರಂಪರೆ ಸಂಪ್ರದಾಯದ ಪರೆ ಕಳಚಿ ಮುಂದೆ ಸಾಗುತ್ತದೆ. ಇಂದಿನ ಬಂಡಾಯದವರಿಗೆ ವಚನಕಾರರ ದೊಡ್ಡ ಪರಂಪರೆಯಿದೆ. ವಿಶೇಷವಾಗಿ ಅದರಲ್ಲಿ ಕಾಳವ್ವೆ-ಗಂಗಮ್ಮ ಮತ್ತು ಸೂಳೆಸಂಕವ್ವೆಯರ ವಚನಗಳಲ್ಲಿ ಕಾಣುವ ನೋವು, ಪ್ರತಿಭಟನೆ, ವೈಚಾರಿಕತೆ, ನಿರ್ಭಿಡೆ, ಚಿಂತನಾಶೀಲ ಗುಣಗಳು ಸಮಕಾಲೀನ ಜ್ವಲಂತ ಸಮಸ್ಯೆಗಳಿಗೂ ಉತ್ತರ ಕೊಡಬಲ್ಲವುಗಳಾಗಿವೆ.

ಇಂಡಿಯಾ ದೇಶದ ಚರಿತ್ರೆಯಲ್ಲಿ ಸ್ತ್ರೀ ಶತ ಶತಮಾನಗಳಿಂದ ಶೋಷಣೆಗೊಳಗಾಗಿದ್ದಾಳೆ. ಈ ನಾಡಿನ ಚರಿತ್ರೆಯಲ್ಲಿ ಸ್ತ್ರೀಯರು ಮೊಟ್ಟಮೊದಲು ಸಂಘಟಿತರಾಗಿ ಪ್ರತಿಭಟಿಸಿದ್ದು, ವಚನಕಾರ್ತಿಯರಾಗಿ ಉತ್ತಮ ಮಟ್ಟದ ಸಾಹಿತ್ಯ ಕೊಟ್ಟದ್ದು, ಆಧ್ಯಾತ್ಮದ ತುತ್ತತುದಿಗೇರಿದ್ದು ಹನ್ನೆರಡನೇ ಶತಮಾನದ ಶಿವಶರಣರ ಕಾಲಕ್ಕೆ ಮಾತ್ರ ಸ್ತ್ರೀಕುಲದ ಧ್ವನಿಯಾಗಿ, ಶೋಷಿತರ ಬಾಯಿಯಾಗಿ ಈ ವಚನಕಾರ್ತಿಯರು ಬದುಕಿನ

ಸಕಲ ಮಜಲುಗಳಿಗೂ ಸ್ಪಂದಿಸಿದರು.

ಯಜಮಾನ ಸಂಸ್ಕೃತಿಯ ಕಪಿ ಮುಷ್ಟಿಯಲ್ಲಿ ವೈದಿಕಶಾಹಿಯ ಸೆರೆಯಲ್ಲಿ ಸಿಕ್ಕಿ ಇಂಡಿಯಾದ ಸ್ತ್ರೀ ಇಂದಿಗೂ ಶೋಷಣೆಯಿಂದ ಮುಕ್ತಳಾಗುವುದು ಸಮಸ್ಯೆಯಾಗಿಯೇ ಉಳಿದಿದೆ. "ಮಾತೃದೇವೋಭವಃ" ಎಂದು ಹೇಳಿದ ನಾಡಿನಲ್ಲಿಯೇ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ" ಎಂಬ ಘೋಷಣೆ ಮುಗಿಲೆತ್ತರಕ್ಕೆ ಮುಟ್ಟಿದ್ದೂ ಈ ದೇಶದ ಭವ್ಯ ಸಂಸ್ಕೃತಿಗೆ ಸಾಕ್ಷಿಯಾಗಿದೆ. ಹೊರಗೊಂದು ಒಳಗೊಂದು ಹೇಳಿ ಸ್ತ್ರೀ ಕೊನೆಯವರೆಗೂ ಗುಲಾಮ್ಳಾಗೇ ಇರಬೇಕೆಂದು ಬಯಸಿದ ಮನುವಿನ ವಿದೀಮತನವನ್ನು ಸ್ತ್ರೀ ಇಂದಾದರೂ ಅರ್ಥ ಮಾಡಿ ಕೊಳ್ಳಬೇಕಾಗಿದೆ.

ಹೆಣ್ಣನ್ನು ಮಾಯೆಯೆಂದು, ರಾಕ್ಷಸಿಯೆಂದು, ಪಾಪಿಯೆಂದು, ನೀಚಳೆಂದು ಕ್ಷುಲ್ಲಕಳೆಂದು–ಹಲವಾರು ಧರ್ಮದ ಮುಖಂಡರು, ಮಹಾ–ಮಹಾ ಪಂಡಿತರು, ಸಂಸ್ಕೃತಿಯನ್ನು ಗುತ್ತಿಗೆಗೆ ತೆಗೆದುಕೊಂಡ ವೈದಿಕರು ಒಂದೇ ಸಮನೆ ಕೊರೆಯುತ್ತಲಿರುವಾಗ ವಚನಕಾರರು ಹೆಣ್ಣನ್ನು–ಹೆಣ್ಣೆಂದು ಮಾತೆಯೆಂದು–ಸಾಕ್ಷಾತ್ ಕಪಿಲ ಸಿದ್ಧ ಮಲ್ಲಿಕಾರ್ಜುನನೆಂದು ಗೌರವಿಸಿದ್ದು, ಸಮಾನಾವಕಾಶ ಕಲ್ಪಿಸಿಕೊಟ್ಟಿದ್ದು ಇಂಥಹ ಅರ್ಥಪೂರ್ಣ ವಚನಕಾರ್ತಿಯರು ಬರಲಿಕ್ಕೆ ಕಾರಣವಾಯಿತೆನ್ನಬಹುದು. ಅಕ್ಕಮಹಾದೇವಿ ಶರಣೆಯಾಗಿದ್ದಳು, ಆಧ್ಯಾತ್ಮದಲ್ಲಿ ಉನ್ನತಸ್ಥಾನ ತಲುಪಿದ್ದಳು. ಎಂಬುದಕ್ಕಿಂತ ಆಕೆ ಅನುಭವ ಮಂಟಪದ ಪ್ರಮುಖ ಅಂಗವಾಗಿದ್ದಳೆಂಬುದು ನನಗೆ ಬಹಳ ಮಹತ್ವದ ವಿಷಯ. ಹಾಗೆ ನೋಡಿದರೆ ಅಕ್ಕ ಮಹಾದೇವಿಗಿಂತ ಕಾಳವ್ವೆ–ಗಂಗಮ್ಮ–ಸೂಳೆಸಂಕವ್ವೆಯರಲ್ಲಿ ಸಾಮಾಜಿಕ ಪ್ರಜ್ಞೆ ದಟ್ಟವಾಗಿದೆ. ಇವರ ವಚನಗಳಲ್ಲಿ ಬಂಡಾಯದ ಕಿಡಿಗಳು ಧಿಮಿಗುಡುತ್ತವೆ. ಹೀಗಿದ್ದರೂ ಅಕ್ಕಮಹಾದೇವಿಗೆ ಸಿಕ್ಕ ಪ್ರಚಾರ, ಕಾಳವ್ವೆ–ಸೂಳೆಸಂಕವ್ವೆಯಂಥವರಿಗೆ ಏಕೆ ಸಿಗಲಿಲ್ಲವೆಂಬ ಮಾತು ಪ್ರಶ್ನಿಸುವಂತಹದ್ದಾಗಿದೆ. ವಚನಕಾರರ ನಂತರದ ವೀರಶೈವರು, ವಚನಗಳಲ್ಲಿ ಬರೀ ಆಧ್ಯಾತ್ಮಕ್ಕೆ ಮಹತ್ವ ಕೊಟ್ಟು ವಚನಕಾರರನ್ನೆಲ್ಲಾ ದೇವರುಗಳನ್ನಾಗಿ ಮಾಡಿ ತಲೆ ಮೇಲೆ ಹೊತ್ತು, ಮೂರ್ತಿಮಾಡಿ ನಿಲ್ಲಿಸಿ ಗುಡಿಕಟ್ಟಿ ಪೂಜೆಮಾಡಿ ವಚನಕಾರರ ನಿಜವಾದ ತತ್ತ್ವಗಳಿಗೇ ಕಳಂಕ ತಂದರು. ಅಷ್ಟಾವರಣಗಳ ಗುಂಪಿನಲ್ಲಿ, ಷಟ್‌ಸ್ಥಳಗಳ ಲೆಕ್ಕಾಚಾರದಲ್ಲಿ, ಪಂಚಾಚಾರಗಳ ಗೊಂದಲದಲ್ಲೇ ತಲೆಕೆಡಿಸಿಕೊಂಡ ಈ ಜನ, ಬದುಕನ್ನೇ ಮರೆತರು. ವಚನಕಾರರು ಮನುಷ್ಯರೆಂಬುದನ್ನು, ಅವರ ನಿಜವಾದ ಹೋರಾಟವನ್ನು, ತೀವ್ರವಾದ ಕಾಳಜಿಯನ್ನು, ಅನ್ಯಾಯದ ವಿರುದ್ಧದ ಪ್ರತಿಭಟನೆಯನ್ನು ಇವರು ಅರಿಯಲೇ ಇಲ್ಲ. ಹೀಗಾಗಿ ಬದುಕಿಗೆ ದಟ್ಟವಾಗಿ ಸ್ಪಂದಿಸುವ ಕಾಳವ್ವೆ–ಗಂಗವ್ವ–ಸಂಕವ್ವೆಯಂತಹ ವಚನ ಕಾರ್ತಿಯರು ಇಂಥವರ ಲೆಕ್ಕಾಚಾರದಲ್ಲಿ ಜಮವಾಗದೇ ಹೋಗಿದ್ದಾರೆ.

ಧರ್ಮ–ಅರ್ಥ–ಕಾಮ–ಮೋಕ್ಷ ಈ ಚತುರ್ವಿಧ ಪುರುಷಾರ್ಥಗಳಲ್ಲಿ ಕಣ್ಣಿಗೆ ಕಾಣದ, ಕೈಗೆ ಸಿಗದ ಧರ್ಮ–ಮೋಕ್ಷಗಳ ಬಗೆಗೇನೇ ತಲೆ ಕೆಡಿಸಿಕೊಂಡ ಈ ಪಂಚಪೀಠಾ(ಧಾ)ಧೀಶ್ವರರು ತಮ್ಮ ತಮ್ಮ ಪೀಠಗಳನ್ನು ಎತ್ತರೆತ್ತರಕೆ ಏರಿಸಹತ್ತಿದರು. ವಚನ

ಕಾರರನ್ನೇ ಅಲ್ಲಗಳೆದು ಮಾತನಾಡುವ ಇವರಿಗೆ ಕಾಳವ್ವೆಯಂತಹ ಶೂದ್ರ ವಚನಕಾರ್ತಿಯರು ಹೇಗೆ ನೆನಪಾಗಬೇಕು?

ಇಹದ ಬದುಕಿಗೆ ಅತ್ಯಂತ ಪ್ರಮುಖ ಸ್ಥಾನಕೊಟ್ಟು ಕಾಯಕದಲ್ಲಿಯೇ ಕೈಲಾಸ ತೋರಿಸಿ ಹೋರಾಡಿದ ವಚನಕಾರರ ನೋವು-ನಲಿವು-ತಹತಹಿಕೆ-ದ್ವಂದ್ವ-ಹೊಯ್ದಾಟ-ಪ್ರತಿಭಟನೆ-ಇವುಗಳ ಬಗೆಗೆ ಚಿಂತನೆಮಾಡುವ ಚರ್ಚಿಸುವ-ಪ್ರಶ್ನಿಸುವ ಒಪ್ಪಿಕೊಳ್ಳುವ ಕೆಲಸ ಈಗ ಆಗಬೇಕಾಗಿದೆ.

ಇಲ್ಲಿ ಉದಾಹರಿಸಿರುವ ಈ ಮೂವರು ವಚನಕಾರ್ತಿಯರ ವಚನಗಳಲ್ಲಿರುವ ಸಾಮಾಜಿಕ ಪ್ರಜ್ಞೆ, ನಿರಂತರ ಹೋರಾಟ, ವೀರ್ಯವತ್ತಾದ ಭಾಷೆ, ಆಳವಾದ ಚಿಂತನೆ, ದಟ್ಟವಾದ ಅನುಭವ, ನಿರ್ಭೀತೆಗಳು ಗಮನಿಸುವಂತವುಗಳಾಗಿವೆ.

ಕಾಳವ್ವೆ

ಪ್ರಮುಖ ಶೂದ್ರ ವಚನಕಾರ ಉರಿಲಿಂಗಪೆದ್ದಿಯ ಸತಿಯೇ ಕಾಳವ್ವೆ. ಈ ಶೂದ್ರ ದಂಪತಿಯರು ಬಸವೇಶ್ವರರ ಧಾರ್ಮಿಕ-ಸಾಮಾಜಿಕ ಕ್ರಾಂತಿಯಲ್ಲಿ ಅರ್ಪಣಾಭಾವದಿಂದ ದುಡಿದಿದ್ದರಿಂದಲೇ ವಚನ ಚಳುವಳಿಗೆ ಕಳೆ ಬಂದದ್ದು. ಎಲೆ ಮರೆಯ ಕಾಯಿಯಂತೆ ಈ ದಂಪತಿಗಳ ಬದುಕು. ಇವರ ಸೇವಾನಿಷ್ಠೆ, ಪ್ರಾಮಾಣಿಕತನ, ಎದೆಗಾರಿಕೆ, ಹೃದಯ ವೈಶಾಲ್ಯತೆ ಬಸವೇಶ್ವರರಿಗೆ ಮೆಚ್ಚುಗೆಯಾಗಿದ್ದವು. ಬದುಕಿನ ಬಗೆಗೆ ತೀವ್ರವಾಗಿ ಚಿಂತಿಸಿದ, ಪ್ರಮುಖ ಕಾಳಜಿಯುಳ್ಳ ಕಾಳವ್ವೆಯಂತಹ ವಚನಕಾರ್ತಿಗೆ ಚರಿತ್ರೆಯಲ್ಲಿ ಪ್ರಮುಖ ಸ್ಥಾನ ಸಿಗದೇ ಹೋದದ್ದು ಈ ನಾಡಿನ ದುರಂತ.

"ಉರಿಲಿಂಗಪೆದ್ದಿಗಳರಸ"-ಎಂಬುದು ಈಕೆಯ ವಚನಾಂಕಿತ ಬದುಕಿನ ವಿದ್ಯಾಲಯ ದಿಂದಲೇ ಪಾಠ ಕಲಿತ ಕಾಳವ್ವೆ ಕನ್ನಡ, ಸಂಸ್ಕೃತ ಎರಡೂ ಭಾಷೆಗಳಲ್ಲಿ ಪರಿಣಿತಳು; ದಟ್ಟ ಅನುಭವ ಪಡೆದವಳು.

ಈಕೆಯವು ಹದಿಮೂರು ವಚನಗಳು ಲಭ್ಯವಾಗಿವೆ. ಇನ್ನೂ ಹೆಚ್ಚಿನ ವಚನಗಳನ್ನು ಈಕೆ ಬರೆದಿರಬಹುದು. ಈಗ ಉಪಲಬ್ಧವಿರುವಷ್ಟೇ ವಚನಗಳು ಈಕೆಯ ಹೋರಾಟದ ಬದುಕನ್ನು ಪ್ರತಿಪಾದಿಸುತ್ತವೆ.

ವ್ರತಕ್ಕೆ ಕಾಳವ್ವೆ ಬಹಳ ಮಹತ್ವ ಕೊಡುತ್ತಾಳೆ. ಮೂರು-ನಾಲ್ಕು ವಚನಗಳಲ್ಲಿ ವ್ರತದ ಬಗೆಗೆ ಪ್ರಸ್ತಾಪವಿದೆ. ಆಕೆಯ ಒಟ್ಟು ನಿಲುವನ್ನು ಅರ್ಥೈಸಿದಾಗ 'ವ್ರತ' ಎಂಬುದನ್ನು ನಿಷ್ಠೆ-ಪ್ರಮಾಣಿಕತೆ ಎಂಬರ್ಥದಲ್ಲಿ ಉಪಯೋಗಿಸಿರಬಹುದೆಂದು ತಿಳಿಯ ಬಹುದಾಗಿದೆ:

"ವ್ರತವೆಂಬುದು ನಾಯಕರತ್ನ; ವ್ರತವೆಂಬುದು ಸುಪ್ಪಾಣಿಯ ಮುತ್ತು;
ವ್ರತವೆಂಬುದು ಜೀವನ ಕಳೆ; ವ್ರತವೆಂಬುದು ಸುವಿಧಾನ

ವ್ರತ ತಪ್ಪಲು, ಉರಿಲಿಂಗಪೆದ್ದಿ ಗಳರಸನೊಲ್ಲನವ್ವಾ."

(—ಶಿ.ಶ.ವ. ೨೦೫, ಪುಟ ೩೮೭)

ವ್ರತಹೋದಾಗಳೆ ಇಷ್ಟಲಿಂಗದ ಕಳೆ ನಷ್ಟವವ್ವಾ ಅವರು ಅಂಗವಿದ್ದರೂ ಭವಿಗಳು —(ಶಿ.ಶ.ವ. ೨೧೨. ಪುಟ ೩೮೯)

"ಅರ್ಥಪ್ರಾಣಾಭಿಮಾನದ ಮೇಲೆ ಬಂದಡೂ ಬರಲಿ
ವ್ರತಹೀನನ ನೆರೆಯಲಾಗದು." —(ಶಿ.ಶ.ವ. ೨೧೩, ಪುಟ ೩೮೯)

ವ್ರತವೇ ಮುತ್ತು-ರತ್ನ: ವ್ರತವೇ ಜೀವಕಳೆಯೆಂದು ನಂಬಿದ ಕಾಳವ್ವೆ, ನಿಷ್ಠೆ-ಪ್ರಾಮಾಣಿಕತೆಯಿಲ್ಲದವರು ಲಿಂಗಧರಿಸಿದರೂ ವ್ಯರ್ಥವೆಂದು ಹೇಳುತ್ತಾಳೆ. ಪ್ರಾಣ ಹೋದರೂ ಸರಿ ಅಂತಹವರ ಸಂಗ ಸಲ್ಲ–ಎಂಬ ಮಾತಿನಲ್ಲಿ ವಚನ ಚಳುವಳಿಗೆ ಬದ್ಧಳಾದ ಆಕೆಯ ನಿಷ್ಠೆ-ಪರಾಕಾಷ್ಠೆ ಮುಟ್ಟಿದೆ.

"ಕೃತಯುಗ ಮೂವತ್ತೆರಡು ಲಕ್ಷ ವರುಷದಲ್ಲಿ ಹೋಮವನ್ನಿಕ್ಕುವಾಗ
ಕುಂಜರನೆಂಬ ಆನೆಯ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.
ತ್ರೇತಾಯುಗ ಹದಿನಾರು ಲಕ್ಷ ವರುಷದಲ್ಲಿ ಬ್ರಾಹ್ಮಣರು ಹೋಮವನಿಕ್ಕುವಾಗ
ಮಹಿಷನೆಂಬ ಕರಿಎಮ್ಮೆಯ ಮಗನಕೊಂದು ಹೋಮವನ್ನಿಕ್ಕಿದರು.
ದ್ವಾಪರಯುಗ ಎಂಟು ಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ
ಅಶ್ವನೆಂಬ ಕುದುರೆಯ ಕೊಂದು ಹೋಮವನಿಕ್ಕಿದರು, ಬ್ರಾಹ್ಮಣರು.
ಕಲಿಯುಗ ನಾಲ್ಕುಲಕ್ಷ ವರುಷದಲ್ಲಿ ಹೋಮವನಿಕ್ಕುವಾಗ ಜಾತಿಯಾಡಿನ
ಮಗ ಹೋತನ ಕೊಂದು ಹೋಮವನಿಕ್ಕಿದರು ಬ್ರಾಹ್ಮಣರು.
ಶಿವಭಕ್ತ ಹೊತ್ತಾರೆದ್ದು ಗುರುಲಿಂಗಜಂಗಮಕ್ಕೆ ಶರಣೆನ್ನದೆ ಮುನ್ನ
ಒಂಟಿ ಬ್ರಾಹ್ಮಣನ ಕಂಡು ಶರಣಾರ್ಥಿ ಎಂದಡೆ ಎಂಬತ್ತುನಾಲ್ಕು
ಲಕ್ಷ ಯೋನಿಯಲ್ಲಿ ಹಂದಿಯ ಬಸುರಲ್ಲಿ ಬಪ್ಪುದು ತಪ್ಪುದು ಕಾಣಾ
ಉರಿಲಿಂಗಪೆದ್ದಿಗಳರಸ ಬಲ್ಲನವ್ವಾ."

—(ಶಿ.ಶ.ವ. ೨೧೬ ಪುಟ ೩೯೧)

ಕೃತಯುಗದಿಂದ ಹಿಡಿದು ಕಲಿಯುಗದವರೆಗೂ ಆನೆ–ಎಮ್ಮೆ–ಕುದುರೆ–ಹೋತಗಳನ್ನು ಕೊಂದು ಹೋಮವನಿಕ್ಕಿದ ಬ್ರಾಹ್ಮಣರು, ಹೋಮವನಿಕ್ಕದೆಯೇ ಸಹಸ್ರಾರು ಶೂದ್ರರನ್ನು ಬಲಿತೆಗೆದುಕೊಂಡಿದ್ದಾರೆ: ಶತಶತಮಾನಗಳಿಂದಲೂ ಸರಿಬುದ್ಧಿಯನ್ನು ಪ್ರದರ್ಶಿಸುತ್ತಲೇ ಬಂದಿದ್ದಾರೆ. ಹೊತ್ತಾರೆದ್ದು ಇಂತಹ ನೈತ್ಯಬ್ರಾಹ್ಮಣನಿಗೆ ಶರಣೆಂದರೆ ಅಂತಹವರ ಸ್ಥಿತಿ ಏನಾದೀತೆಂಬುದನ್ನು ತಿಳಿಸಿದ ಕಾಳವ್ವೆಯ ಈ ವಚನದಲ್ಲಿ ಶತಮಾನಗಳಿಂದ ನೊಂದ ಧ್ವನಿಯಿದೆ: ಪ್ರತಿಭಟಿಸುವ ಎದೆಗಾರಿಕೆಯಿದೆ, ಕಟುಸತ್ಯ ದಟ್ಟವಾಗಿ ವ್ಯಾಪಿಸಿದೆ.

ಕೃತಯುಗದಿಂದ ಕಲಿಯುಗದವರೆಗೆ ಬ್ರಾಹ್ಮಣರು ನಡೆಸಿದ ಪ್ರಾಣಹತ್ಯೆ–ರಕ್ತಪಾತ–ಶೋಷಣೆ ನೆನಪಾದಾಗ ನಿಜವಾದ ಮನುಷ್ಯನ ಎದೆಯಲ್ಲಿ ಹೋರಾಟದ ಬೆಂಕಿ ಧಗಧಗಿಸುವುದು ಸಹಜ. ಇಡೀ ವಚನಕಾರ್ತಿಯರಲ್ಲೇ ಇಂತಹ ಕ್ರೌರ್ಯವನ್ನು ನಿರ್ಭಿಡೆಯಿಂದ ಎತ್ತಿಹೇಳಿ ಬಂಡಾಯದ ಕಿಡಿಕಾರಿದವರು ಕಾಳವ್ವೆಯಂತವರು ಮಾತ್ರ. ಆದ್ದರಿಂದ ಈಕೆಯ ನುಡಿ ಸಾರ್ವಕಾಲಿಕ ಸತ್ಯವಾಗಿದೆ.

ಕುರಿ–ಕೋಳಿ ತಿನ್ನುವವರಿಗೆಲ್ಲ ಕುಲಜರು–ಕುಲಜರು ಎಂದು ಕರೆದ ಸಮಾಜ ಅಂತಹವರನ್ನು ಊರೊಳಗಿಟ್ಟುಕೊಂಡು ಗೋಮಾಂಸ ತಿನ್ನುವವರನ್ನು ಹೊಲೆಮಾದಿಗರು–ಕೀಳುಜಾತಿಯವರೆಂದು ಕರೆದು ಊರ ಹೊರಗಿಟ್ಟಿತು. ಇಂತಹ ಸಮಾಜಕ್ಕೆ ಕಾಳವ್ವೆ ಕೇಳುವ ಪ್ರಶ್ನೆ ಗಮನಿಸುವಂತಹದ್ದಾಗಿದೆ. ಕುರಿ–ಕೋಳಿಗಳನ್ನು ಎಂದೂ ಯಾರೂ ಪೂಜಿಸಿಲ್ಲ; ಆದರೆ ಶಿವನಿಗೆ ಪಂಚಾಮೃತ ಕರೆವ ಆಕಳನ್ನು ಎಲ್ಲರೂ ಪೂಜಿಸುತ್ತಾ ಬಂದಿದ್ದಾರೆ. ವಸ್ತುಸ್ಥಿತಿ ಹೀಗಿರುವಾಗ ಶಿವಪೂಜೆಗೆ ಯೋಗ್ಯವಾದ ಪ್ರಾಣಿಯ ಮಾಂಸ ತಿಂದರೆ ಹೊಲೆಯರೆಂದು, ಶಿವಪೂಜೆಗೆ ಯೋಗ್ಯವಲ್ಲದ ಮಾಂಸವ ತಿಂದರೆ ಕುಲಜರೆಂದು ನಿರ್ಧರಿಸಿದ ವಿಪ್ರರು ಬುದ್ಧಿಗೇಡಿಗಳೆಂದು, ಅಂತಹವರಿಗೆ ನಾಯಕನರಕ ತಪ್ಪಿದ್ದಲ್ಲವೆಂದು ಕಾಳವ್ವೆ ಸ್ಪಷ್ಟಪಡಿಸಿದ್ದಾಳೆ.

ಕಾಳವ್ವೆಯ ನುಡಿಗಳಲ್ಲಿ ಬರೀ ರೊಚ್ಚಿಲ್ಲ; ಬೇರೆಯವರನ್ನು ಟೀಕಿಸುವುದೇ ಆಕೆಗೆ ಪ್ರಮುಖವಲ್ಲ. ಶತ–ಶತಮಾನಗಳಿಂದಲೂ ತಮ್ಮ ಪಾಂಡಿತ್ಯ ಪ್ರದರ್ಶಿಸಿದ ವೈದಿಕರಿಗೆ ಹೊಳೆಯದ ಹೊಸ ವಿಚಾರಗಳು ಕಾಳವ್ವೆಯಲ್ಲಿವೆ. ಆಕೆ ಯಾವುದರ ಬಗೆಗೆ ಪ್ರಸ್ತಾಪಿಸಿದರೂ ಆಧಾರಸಹಿತವಾಗಿಯೇ ಹೇಳುತ್ತಾಳೆ. ನಿಜವಾದ ಸಂಶೋಧನಾತ್ಮಕ ಗುಣ ಆಕೆಯ ವಚನಗಳಲ್ಲಿ ಎದ್ದುಕಾಣುತ್ತದೆ. ನೊಂದು ಬೆಂದು ಬಂದ ನುಡಿಯಲ್ಲಿ ಯಾರೂ ಅಳಿಸಲಾರದ ದಟ್ಟ ಸತ್ಯವಡಗಿದೆ. ಇದು ಕಾಳವ್ವೆಯ ವಚನಗಳ ವೈಶಿಷ್ಟ್ಯ.

ಗಂಗವ್ವ

ಹಾವರದ ಕಾಯಕದ ಮಾರಯ್ಯಗಳ ಹೆಂಡತಿ ಗಂಗವ್ವನ ಒಂದೇ ವಚನ ಪ್ರಕಟವಾಗಿದೆ. ಅದೊಂದೇ ವಚನ ಆಕೆಯ ನಿಷ್ಠಾಪೂರ್ಣ ಬದುಕಿಗೆ ಸಾಕ್ಷಿಯಾಗಿದೆ ಈಕೆಯ ವಚನಾಂಕಿತ ಗಂಗೇಶ್ವರಲಿಂಗ. ನೇರವಾದ ಮಾತು, ಪ್ರಾಮಾಣಿಕ ಅಭಿವ್ಯಕ್ತಿ ಈಕೆಯ ವಚನದ ವೈಶಿಷ್ಟ್ಯ.

"ಆವ ಕಾಯಕವ ಮಾಡಿದರೂ ಒಂದೇ ಕಾಯಕವಯ್ಯ
ಆವ ವ್ರತವಾದಡೂ ಒಂದೇ ವ್ರತವಯ್ಯ.
ಆಯ ತಪ್ಪಿದಡೆ ಸಾವಿಲ್ಲ; ವ್ರತ ತಪ್ಪಿದಡೆ ಕೂಡಲಿಲ್ಲ.
ಕಾಕಪಿಕದಂತೆ ಕೂಡಲು ನಾಯಕ ನರಕ
ಗಂಗೇಶ್ವರ ಲಿಂಗದಲ್ಲಿ"

—(ಶಿ.ಶ.ವ. ೨೧೯, ಪುಟ ೩೯೩)

ಈ ವಚನದಲ್ಲಿ ಸಮಾನತೆಯ ತತ್ತ್ವವಿದೆ. ಎಲ್ಲ ಕಾಯಕಗಳ ಬಗೆಗೂ ಸಮಾನ ಗೌರವ ತಾಳಿದ ಗಂಗವ್ವನ ದೃಷ್ಟಿಯಲ್ಲಿ ಎಲ್ಲ ವ್ರತಗಳು ಒಂದೇ ಎನಿಸುತ್ತವೆ. ವ್ರತವನ್ನು ಪ್ರಾಮಾಣಿಕತೆಯಂತಹ ಮೌಲ್ಯವನ್ನಾಗಿ ಪ್ರತಿಪಾದಿಸಿದ ಈಕೆ ಪಶು ಪ್ರಾಣಿಗಳ ಬದುಕಿಗೂ ಮಾನವನ ಬದುಕಿಗೂ ಇರುವ ಅಂತರವನ್ನು ಸೂಕ್ಷ್ಮವಾಗಿ ಗುರುತಿಸಿ ಹೇಳಿದ್ದಾಳೆ.

ಸೂಳೆ ಸಂಕವ್ವೆ

ಸ್ವಾಭಿಮಾನವನ್ನು ಬೆಳೆಸಿಕೊಂಡು ಪ್ರಾಮಾಣಿಕವಾಗಿ ಬದುಕಿದ ಮತ್ತೊಬ್ಬ ವಚನಕಾರ್ತಿ ಸೂಳೆ ಸಂಕವ್ವೆ. ಈಕೆಯದೂ ಒಂದೇ ವಚನ ಉಪಲಬ್ಧವಿದೆ. "ನಿರ್ಲಜ್ಜೇಶ್ವರಾ"-ಎಂಬ ವಚನಾಂಕಿತವೇ ಈಕೆಯಲ್ಲಿರುವ ಎದೆಗಾರಿಕೆ-ನಿರ್ಭಿಡೆಗಳನ್ನು ಸ್ಪಷ್ಟಪಡಿಸುತ್ತದೆ. ಸೂಳೆಯಾಗಿದ್ದ ಈಕೆ ತನ್ನ ಅನುಭವವನ್ನು ಅತ್ಯಂತ ಪ್ರಾಮಾಣಿಕವಾಗಿ ವಚನಿಸಿದ್ದಾಳೆ.

"ಒತ್ತೆಯ ಹಿಡಿದು ಮತ್ತೊತ್ತೆಯ ಹಿಡಿಯೆ,
ಹಿಡಿದಡೆ ಬತ್ತಲೆ ನಿಲಿಸಿ ಕೊಲುವರಯ್ಯಾ.
ವ್ರತಹೀನನನರಿದು ಬೆರೆದಡೆ,
ಕಾದ ಕತ್ತಿಯಲ್ಲಿ ಕಿವಿಮೂಗ ಕೊಯ್ವರಯ್ಯಾ.
ಒಲ್ಲೆನೊಲ್ಲೆ ಬಲ್ಲೆನಾಗಿ, ನಿಮ್ಮಾಣೆ ನಿರ್ಲಜ್ಜೇಶ್ವರಾ."

—(ಶಿ.ಶ.ವ. ೨೩೭ ಪುಟ ೪೦೭)

ಬಸವಯುಗದ ವಾಸ್ತವ ಚಿತ್ರಣವನ್ನು ಈ ವಚನ ಮಾಡಿಕೊಡುತ್ತದೆ. ವ್ರತಕ್ಕೆ ಆಗಿದ್ದ ಪ್ರಾಮುಖ್ಯತೆ-ಮಹತ್ವವನ್ನು ಎತ್ತಿಹೇಳುತ್ತದೆ. ಅಂತಹ ಚಳುವಳಿಯೊಂದಕ್ಕೆ ಬದ್ಧಳಾದ ಸೂಳೆ ಸುಕವ್ವೆಯಲ್ಲಿರುವ ಅಸಾಧಾರಣ ಕಾಳಜಿ ಇಲ್ಲಿ ಸ್ಪಷ್ಟವಾಗಿ ಗೋಚರಿಸಿದೆ.

ಈ ಮೂವರು ವಚನಕಾರ್ತಿಯರ ಉಪಲಬ್ಧ ವಚನಗಳು ಬೆರಳೆಣಿಕೆಯಷ್ಟಿದ್ದರೂ ಕೂಡ ಸತ್ವಪೂರ್ಣವಾಗಿದೆ. ಇಲ್ಲಿನ ಭಾಷೆ ವೀರ್ಯವತ್ತಾಗಿದೆ. ಸೂಳೆ, ಕುನ್ನಿ, ಜೊಬ್ಬ, ನರಕ, ಒತ್ತೆ, ಬತ್ತಲೆ, ಕಾದಕತ್ತಿ ಈ ಮೊದಲಾದ ಪದಗಳಲ್ಲಿನ ಸೊಗಡು-ದೇಸೀತನ-ಗಡಸುಗಾರಿಕೆ ಸಮೃದ್ಧವಾಗಿ ಬಳಕೆಯಾಗಿವೆ. ಎಮ್ಮೆ, ಹೋತ, ಹಂದಿ, ನಾಯಿ, ಕುರಿಕೋಳಿ, ಕಾಕಪಿಕ ಮೊದಲಾದ ಪ್ರಾಣಿ-ಪಕ್ಷಿಗಳು ಗುಣಸೂಚಕಗಳಾಗಿ ಬಂದು ಅರ್ಥದ ಸೊಗಡನ್ನು ಹೆಚ್ಚಿಸಿವೆ.

ಶತ-ಶತಮಾನಗಳಿಂದಲೂ ಬಾಯಿ ಮುಚ್ಚಿಕೊಂಡು ಗುಲಾಮಳಾಗಿ ಗಂಡಿನ ಸಂಭೋಗದ ಸರಕಾಗಿ ಬಾಳಿದ ಸ್ತ್ರೀ, ಒಮ್ಮಿಂದೊಮ್ಮೆಲೇ ಎಚ್ಚೆತ್ತು ಗಂಡಿನೊಂದಿಗೆ ಸರಿ-ಸಮಾನಾಗಿ ಬದುಕಿ ಸಕಲ ಹಂತಗಳಲ್ಲೂ ಬೆಳೆದು ನಿಂತಿದ್ದನ್ನು ಕಂಡಾಗ ಬಸವಾದಿ

ವಚನಕಾರರ ನಿಜವಾದ ಸಮಾನತೆಯ ತತ್ತ್ವ, ಸ್ತ್ರೀಯರಿಗೆ ಅವರು ಕೊಟ್ಟ ಸಮಾನ ಅವಕಾಶ ಎಲ್ಲಾ ಸ್ಪಷ್ಟವಾಗುತ್ತದೆ.

ಅದರಲ್ಲೂ ವಿಶೇಷವಾಗಿ ಯುಗ-ಯುಗಗಳಿಂದ ಎಲ್ಲಾ ಸವಲತ್ತುಗಳಿಂದ ವಂಚಿತಳಾಗಿ, ಶೋಷಣೆಗೊಳಗಾದ ಶೂದ್ರ ಸ್ತ್ರೀಯರು ವಚನಕಾರ್ತಿಯರಾಗಿ ಆಧ್ಯಾತ್ಮದ ತುತ್ತತುದಿಗೇರುವುದರ ಜೊತೆಗೆ ಇಹದ ಬದುಕಿನ ತುಂಬ ವಿಜೃಂಭಿಸಿ ಹೊಸ ಮೌಲ್ಯಗಳನ್ನು ಕಂಡುಕೊಂಡದ್ದು ಬಹಳ ಪ್ರಮುಖವಾದ ಅಂಶ. ನಿಗಿನಿಗಿಸುವ ಈ ವಚನಗಳಲ್ಲಿ ನಿಜವಾದ ಬಂಡಾಯ ಎದ್ದು ಕಾಣುತ್ತದೆ.

□ □

ಇಲ್ಲಿ ಬಳಸಲಾಗಿರುವ ವಚನಗಳನ್ನು ಡಾ. ಆರ್. ಸಿ. ಹಿರೇಮಠರು ಸಂಪಾದಿಸಿದ "ಶಿವಶರಣೆಯರ ವಚನಗಳು" ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಕರ್ನಾಟಕ ಜನಪದ ಮನರಂಜಕರು

—ಡಾ. ಬಸವರಾಜ ನೆಲ್ಲಿಸರ

"ಮನುಷ್ಯ ಅನಾದಿಕಾಲದಿಂದಲೂ ವಿನೋದ ಪ್ರಿಯ. ಹೊಟ್ಟೆ ತುಂಬಿತೆಂದರೆ ಹಾಡುತ್ತಾನೆ, ಕುಣಿಯುತ್ತಾನೆ, ಕೇಕೆ ಹಾಕುತ್ತಾನೆ. ಅವನ ಶಕ್ತಿ ಸಾಮರ್ಥ್ಯಗಳು, ಭಾವರಾಗಗಳು ಆನಂದೋತ್ಸಾಹಗಳು ಒಂದಲ್ಲಾ ಒಂದು ಕ್ರಿಯೆ ಮೂಲಕ ಪ್ರಕಟವಾಗದಿದ್ದರೆ ನರವ್ಯೂಹಕ್ಕೆ ಆಘಾತವೊದಗುತ್ತದೆ. ಆದ್ದರಿಂದ ಕುಣಿತ ನೆಗೆತಗಳು, ನಗು ಅಳುಗಳು, ಆಟ ಪಾಠಗಳು ಉಸಿರಾಟದಂತೆ ಸಹಜ ಕ್ರಿಯೆಗಳು...."[೧] ಮಾನವ ಮಾತಿಗಿಂತಲೂ ಮೊದಲು ಕಂಡುಕೊಂಡದ್ದು ಕುಣಿತವನ್ನು. ಸುಖಸಂತೋಷಗಳನ್ನು, ದುಃಖ ದುಮ್ಮಾನಗಳನ್ನು ಬೇರೆಯವರಿಗೆ ಮೊದಲು ತಿಳಿಸಿದ್ದು ಈ ನೃತ್ಯದ ಮೂಲಕವೇ. ನೃತ್ಯಗಳೆಲ್ಲವೂ ಒಂದೇ ತೆರನಾಗಿರುವುದಿಲ್ಲ. ಹಾಸ್ಯ, ವಿನೋದ, ಶೃಂಗಾರಗಳು ಬೆರೆತ ನೃತ್ಯಗಳ ವೈಖರಿಯೇ ಒಂದು ತರಹ. ಇದು ಮನುಷ್ಯನಲ್ಲಿ ಉಂಟಾಗಬೇಕಾದರೆ ಹೊಟ್ಟೆ ತುಂಬಿದ್ದು, ಮನಶ್ಶಾಂತಿ ಇದ್ದು ಉಲ್ಲಾಸದಿಂದಿರಬೇಕು ತಾರುಣ್ಯದಲ್ಲಿ, ಲೈಂಗಿಕ ಆಕರ್ಷಣೆ, ಹುಡುಗಾಟಿಕೆ, ಅನುಕರಣೆ ಮತ್ತೊಬ್ಬರನ್ನು ಮೆಚ್ಚಿಸಬೇಕೆಂಬ ಬಯಕೆ ಮುಂತಾದ ಗುಣಗಳೆಲ್ಲವೂ ಕಾರಣವಾಗುತ್ತವೆ.

ಇಂಥ ನೃತ್ಯಗಳು ಜನರ ಆಕರ್ಷಣೆಗೆ ಹೆಚ್ಚು ಹೆಚ್ಚು ಒಳಗಾದಂತೆ, ಇವನ್ನೇ ಕರಗತ ಮಾಡಿಕೊಂಡು ಹೊಟ್ಟೆಹೊರೆವ ವೃತ್ತಿಯನ್ನಾಗಿ ಮಾಡಿಕೊಂಡ ಕಲಾವಿದರಿಗೆ "ಮನರಂಜಕ" ವೃತ್ತಿಕಾರರೆಂದು ಕರೆಯಲಾಯಿತು. ಈ ಕ್ಷೇತ್ರಕ್ಕೆ ಪ್ರೋತ್ಸಾಹ ಸಿಕ್ಕಂತೆಲ್ಲಾ ಕಲಾವಿದರೂ ಹೆಚ್ಚಾದರು. ಕಲೆಯೂ ಶ್ರೀಮಂತವಾಯಿತು. ನಾನಾ ರೀತಿಯ ವೇಷಭೂಷಣಗಳನ್ನು, ವೈವಿಧ್ಯಮಯವಾದ ಕುಣಿತಗಳನ್ನು ಆಕರ್ಷಕವಾದ ದೇಹದಾರ್ಢ್ಯವನ್ನು, ಸೊಗಸಾದ ಸಂಭಾಷಣೆಯನ್ನು ಅಳವಡಿಸಿಕೊಂಡು ಜನಸಾಮಾನ್ಯರನ್ನು ತಮ್ಮತ್ತ ಸೆಳೆಯಬಲ್ಲ ಎಲ್ಲ ಮೋಡಿ ವಿದ್ಯೆಗಳನ್ನು ಇವರು ಕಲಿತುಕೊಂಡರು. ತಮ್ಮ ಕಲಾ ಕೌಶಲ್ಯದಿಂದ ಹಾಸ್ಯ, ವಿನೋದ, ಶೃಂಗಾರ ರಸಗಳನ್ನು ಕಥಾಭಿನಯದಲ್ಲಿ ಯಶಸ್ವಿಯಾಗಿ ತರುವ ಶಕ್ತಿ ಪಡೆದುಕೊಂಡರು. ನಟನಾ ಚಾತುರ್ಯ ಈ ಕಲೆಯಲ್ಲಿ ಹೆಚ್ಚಾದಂತೆ, ಕಂಡು ಆನಂದಿಸುವ, ಕೊಟ್ಟು ಪ್ರೋತ್ಸಾಹಿಸುವ ಜನರೂ ಮುಂದೆ ಬಂದರು. ಈತ ತನ್ನ ಕೆಲಸವನ್ನು ಇಷ್ಟಕ್ಕೆ ನಿಲ್ಲಿಸದೆ ಪ್ರಕೃತಿಯಲ್ಲಿ ಸ್ವಚ್ಛಂದವಾಗಿ ತಿರುಗುತ್ತಿದ್ದ ಪಶು, ಪಕ್ಷಿ, ಪ್ರಾಣಿಗಳನ್ನು ಹಿಡಿದು ಅವುಗಳಿಗೂ ಕುಣಿತ, ಮೆರೆತ, ನಯವಿನಯ, ಹಾವಭಾವಗಳ ಭಂಗಿಗಳ

೧ ಚಂದ್ರಶೇಖರ ಕಂಬಾರ, ಉತ್ತರ ಕರ್ನಾಟಕದ ಜನಪದ ರಂಗಭೂಮಿ, ಪು.೨೧

ನಟನೆಗಳನ್ನು ಕಲಿಸಿದ. ಮನುಷ್ಯರಿಗಿಂತಲೂ ಮಿಗಿಲಾಗಿ ಇವುಗಳ ಆಟಪಾಠಗಳು ವಿದ್ಯೆ ಚಮತ್ಕಾರಗಳು ಜನರ ಮನಸ್ಸನ್ನು ಸೂರೆಗೊಂಡವು. ಇವರಲ್ಲಿ ಹಾವಾಡಿಗರು, ಮಂಗ ನಾಡಿಸುವವರು, ಕರಡಿ ಕುಣಿಸುವವರು, ಕೋಲೆ ಬಸವನಾಡಿಸುವವರು, ಕೀಲು ಕುದುರೆಯವರು ಮೊದಲಾದ ಹಲವಾರು ವಿಧದವರನ್ನು ಕಾಣಬಹುದಾಗಿದೆ.

ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಈ ಮನರಂಜಕರು ಇಂದು ಬರುತ್ತಾರೆ. ವಂಶ ಪಾರಂಪರ್ಯವಾಗಿ, ತಲೆತಲಾಂತರದಿಂದ ಈ ವೃತ್ತಿಯನ್ನು ಮಾಡಿಕೊಂಡು ಬಂದಿರುವವರೇ ಹೆಚ್ಚು ಮಂದಿ. ಜನರ ನಿರಂತರವಾದ ಪ್ರೋತ್ಸಾಹ ಮತ್ತು ದವಸಧಾನ್ಯಗಳ ಉಡುಗೊರೆಯ ಬೆಂಬಲದಿಂದಾಗಿ ಬೆಳೆಯುತ್ತಾ ಬಂದರು. ಇವರು ಯಾವುದೇ ಗುಂಪಿಗೆ ಯಾವುದೇ ಕಟ್ಟುಪಾಡುಗಳಿಗೆ, ನೀತಿ ನಿಯಮಗಳಿಗೆ ಬದ್ಧರಾದವರಲ್ಲ. ಕಲಾನೈಪುಣ್ಯತೆ, ವಾಕ್‌ಚಾತುರ್ಯತೆ ಇದ್ದ ಯಾರೂ ಬೇಕಾದರೂ ಈ ಕ್ಷೇತ್ರದಲ್ಲಿ ಕೆಲಸ ಮಾಡಬಹುದು. ಇದು ತುಂಬಾ ವಿಸ್ತಾರವಾದಂತಹದ್ದು. ಜನರಿಗೆ ಮನರಂಜನೆಯನ್ನು ಕೊಡಬಲ್ಲ ಯಾರೇ ಆದರೂ ಇಲ್ಲಿ ಬದುಕಬಹುದು. ಇವರು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿರದಿದ್ದರೂ ತಾಳಮೇಳಗಳಲ್ಲಿ ಸ್ವಲ್ಪವೂ ಒಡಕು ಬರದಂತೆ ನಡೆಸುವ ಚತುರತೆಯನ್ನು ಸಾಧಿಸಿರುತ್ತಾರೆ. ಇವರಿಗಾಗಿ ಪ್ರತ್ಯೇಕ ರಂಗ ಮಂದಿರಗಳು ಬೇಕಾಗಿರುವುದಿಲ್ಲ. ಹಳ್ಳಿಗಳಲ್ಲಿನ ವಿಶಾಲವಾದ ಬೀದಿ ಅಂಗಳಗಳೇ ಸಾಕು. ಉಳಿದುಕೊಳ್ಳಲು ಹಾಳು ಮಠಮಂದಿರಗಳು ಪಂಚಾಯ್ತಿ ಕಟ್ಟೆಗಳೇ ಇವರ ಮನೆಗಳು. ಅಲೆಮಾರಿಗಳಾದ ಇವರು ಕುಟುಂಬ ಪರಿವಾರ ಸಮೇತ ಊರಿಂದೂರಿಗೆ ಎತ್ತು ಕತ್ತೆಗಳ ಮೇಲೆ ಸಾಮಾನುಗಳನ್ನು ಸಾಗಿಸುತ್ತಾ ಊರಿಂದೂರಿಗೆ ಬಿಡಾರ ಬಿಡುತ್ತಾ ಪ್ರದರ್ಶನ ನೀಡುತ್ತಾ ಸಾಗುತ್ತಿರುತ್ತಾರೆ.

ನಾಗರಿಕತೆ ಹಳ್ಳಿಹಳ್ಳಿಗಳನ್ನು ಪ್ರವೇಶ ಮಾಡಿರುವುದರಿಂದ ಸಿನಿಮಾ, ನಾಟಕ, ಸರ್ಕಸ್‌ಗಳ ಹಾವಳಿಗಳಿಂದ ಇಂದು ಈ ಕಲೆಗಳು ಜನಸಾಮಾನ್ಯರಿಂದ ದೂರಸರಿದಿವೆ. ಆದರೆ, ಹಿಂದಿನ ಕಾಲದಲ್ಲಿ ನಮ್ಮ ಜನಪದರಿಗೆ ಇವರ ಕಲಾ ನೈಪುಣ್ಯತೆ ಅನಿವಾರ್ಯವಾಗಿತ್ತು. ಬದುಕಿನ ಕಷ್ಟ ಸುಖಗಳನ್ನು ಮರೆಯಲು ನೆಮ್ಮದಿಯನ್ನು ಪಡೆಯಲು ಮನರಂಜಕರು ಬೇಕಾಗಿದ್ದರು. ತಮ್ಮ ಹಳ್ಳಿಗಾಡಿನ ಏಕತಾನತೆಯ ಬದುಕನಲ್ಲಿ ಬೇಸರವನ್ನು ಕಳೆಯುತ್ತಿದ್ದುದೇ ಇಂತಹವರಿಂದ. 'ಮನರಂಜಕರಾದವರೋ' ರೈತರಿಗೆ ತೊಂದರೆ ಕೊಡುವಂತಹ ಸಮಯದಲ್ಲಿ ಬರದೆ, ಸುಗ್ಗಿ ಸಂಭ್ರಮಗಳಂದು ಜಾತ್ರೆ, ಪರಿಷೆಗಳಂದು ತಂಡವನ್ನು ಕಟ್ಟಿಕೊಂಡು ಬರುತ್ತಿದ್ದರು. ಊರ ಮಧ್ಯೆ ತಮ್ಮ ವಾದ್ಯ ಬಾರಿಸಿ, ದೊಡ್ಡವರು ಸಣ್ಣವರನ್ನೆಲ್ಲಾ ತಮ್ಮ ತೆಕ್ಕೆಗೆ ತೆಗೆದುಕೊಂಡು ಸಂತೋಷಪಡಿಸುತ್ತಿದ್ದರು. ಬೆಳಗಿನ ಹೊತ್ತಿನಲ್ಲಿ ಬೆಳದಿಂಗಳ ರಾತ್ರಿಯಲ್ಲಿ, ಬಿಡುವಿನ ವೇಳೆಗಳಲ್ಲಿ, ಜನಗಳ ಸಮಯಕ್ಕೆ ಹೊಂದಿಕೊಂಡು ತಮ್ಮ ಪ್ರದರ್ಶನ ನೀಡುತ್ತಿದ್ದರು. ದವಸ ಧಾನ್ಯಗಳನ್ನು, ಹಳೆಯ ಬಟ್ಟೆಬರೆಗಳನ್ನು ರೈತರಿಂದ ಪಡೆಯುತ್ತಿದ್ದರು. ತಮ್ಮ ಕಲಾ ಪ್ರದರ್ಶನಕ್ಕೆ ಕಡ್ಡಾಯವಾಗಿ ಇಷ್ಟೇ ಕೊಡಬೇಕೆಂಬ ನಿರ್ಬಂಧವನ್ನು ಹಾಕದೆ, ಕೊಟ್ಟವರು ಕೊಡದವರು

ಎಲ್ಲರಿಗೂ ಸಂತೋಷ ಕೊಡುತ್ತಿದ್ದರು. ಇಂತಹ "ಸ್ವಚ್ಛಂದವಾಗಿದ್ದ ಕಲೆ ವ್ಯವಸ್ಥೆಗೆ ಮೈ ಒಡ್ಡಿದಾಗ, ನಿಯಮಗಳಿಗೆ ಸಿಕ್ಕಾಗ ಅಭಿಜಾತವಾಗಿರಬೇಕು. ಅಲ್ಲದೆ ಇದು ಕೆಲವೇ ಜನಾಂಗಗಳಿಗೆ ಬರೆದುಕೊಟ್ಟ ದೇಣಿಗೆಯೇನೂ ಅಲ್ಲ. ಕೈಕಾಲು ಬಾಯಿ, ದೇಹ ನೀಟಾಗುಳ್ಳ ಯಾವ ಜನಾಂಗಕ್ಕೂ ಇದು ಸ್ವಾಭಾವಿಕವಾದ ಪ್ರವೃತ್ತಿಯಾಗಿದೆ...."[೨] ಇದೊಂದು ಮುಕ್ತ ವಿಶ್ವವಿದ್ಯಾನಿಲಯವಿದ್ದಂತೆ. ಶಾಸ್ತ್ರೀಯವಾಗಿ ಕಲಿತಿರದಿದ್ದರೂ, ಸಮಯೋಚಿತತೆ ಸನ್ನಿವೇಶಗಳು ಇವರ ಅನುಭವ ಶ್ರೀಮಂತಿಕೆಯನ್ನು ಗಟ್ಟಿಗೊಳಿಸಿರುತ್ತವೆ. ಯಾವುದೇ ರಂಗ ಪರಿಕರಗಳಿಲ್ಲದಿದ್ದರೂ ಜನ ಸೇರಿದೆಡೆಗಳಲ್ಲಿ, ಜಾತ್ರೆ ಪರಿಷೆಗಳಲ್ಲಿ ಸಂತೆಗಳಲ್ಲಿ ಇವರು ತಪ್ಪದೆ ಇರಲೇಬೇಕಿತ್ತು. ಇಲ್ಲವಾದರೆ ಅವರಿಗೆ ಮನರಂಜನೆ ಕೊಡುವರ್ಯಾರು? ಆ ಕಾಲದಲ್ಲಿ ಇವರ ಕಲೆಗೆ ಅತ್ಯಂತ ಎತ್ತರದ ಸ್ಥಾನವನ್ನು ನಮ್ಮ ಜನ ಕೊಟ್ಟಿದ್ದರು. ಹಾಗಾಗಿ ಕಲೆಯೂ ಉಳಿದಿತ್ತು ಕಲಾವಿದನೂ ಬೆಳೆದಿದ್ದ. ಅಂತಹ ಕೆಲವು ಕಲೆಗಳನ್ನು ಇಲ್ಲಿ ಗಮನಿಸಬಹುದು.

ಹಾವಾಡಿಗರು

ಇವರು ಕಾಡುಮೇಡುಗಳೆನ್ನದೆ, ಹುತ್ತಬೆತ್ತಗಳೆನ್ನದೆ, ಊರುಕೇರಿ ಮನೆ ಮಠಗಳೆನ್ನದೆ, ಅಲೆದಲೆದು ಹಾವುಗಳನ್ನು ಹಿಡಿದು, ವಿಷದ ಹಲ್ಲು ಕಿತ್ತು, ಪುಂಗಿಯ ನಾದಕ್ಕೆ ತಕ್ಕಂತೆ ಹಾವಾಡಿಸುವ ಕಲೆ, ತಲೆತಲಾಂತರದಿಂದ ಬಂದದ್ದು ಹಾವು ತುಂಬಿದ ಬುಟ್ಟಿಗಳನ್ನೊಬ್ಬ ಹೊತ್ತು, ಮತ್ತೊಬ್ಬ ಡೋಲು, ಪುಂಗಿ ಇಲ್ಲವೆ ಮುರಲಿಯನ್ನು ಹಿಡಿದು ಬಾರಿಸುತ್ತಾ, ಹಾಸ್ಯ ಚಟಾಕಿ ಹಾರಿಸುತ್ತಾ ಕೈಚಳಕ, ಮೋಡಿ, ಕಣ್ಣುಕಟ್ಟುಗಳಿಂದ ಜನರನ್ನು ಆಶ್ಚರ್ಯ ಚಕಿತರನ್ನಾಗಿ ಮಾಡುವುದಲ್ಲದೆ, ಬೇರೆ ಬೇರೆ ಭಾಷೆಯ ಮಿಶ್ರಣದಿಂದ ಮಾತನಾಡುತ್ತಾ ಜನರನ್ನು ನಗಿಸುತ್ತಾರೆ. ಪ್ರೇಕ್ಷಕರಲ್ಲಿ ಒಬ್ಬನನ್ನು ಕರೆದು ಅಂಜನ ಲೇಪಿಸಿ ಎಲ್ಲೆಲ್ಲಿ ಏನೇನಿದೆ ಹೇಳು ಎನ್ನುತ್ತಾರೆ. ನಾಲಿಗೆ ಕೊಯ್ಯುತ್ತೇನೆಂದು ಕುರಿಯ ಕರುಳು ಕೊಯ್ದಿಟ್ಟಿದ್ದನ್ನು ಚಮತ್ಕಾರದಿಂದ ತೋರಿಸುತ್ತಾರೆ. ಮತ್ತೆ ನಾಲಿಗೆ ಕೂಡಿಸುತ್ತೇನೆಂದು ಮಂತ್ರ ಮಾಡುವವನಂತೆ ಮಾಡಿ ಮಾತಾಡಿಸುತ್ತಾರೆ. ತಾಯಿತ ಕಟ್ಟುತ್ತೇನೆ, ಗಿಡಮೂಲಿಕೆ ಬೇರು ಕೊಡುತ್ತೇನೆ, ಹಾವು ನಿಮ್ಮ ಹತ್ತಿರ ಬರುವುದಿಲ್ಲ, ಹಾವು ಕಚ್ಚುವುದಿಲ್ಲ ಎಂದು ಕೆಲವರಿಗೆ ತಾಯಿತ ಕಟ್ಟಿ ದುಡ್ಡು ಕೊಡುವಂತೆ ಮಾಡುತ್ತಾರೆ. ಕೊನೆಯಲ್ಲಿ ಹಾವು ಮುಂಗಲಿಗಳ ಆಟ ಇಟ್ಟುಕೊಂಡು ರಂಜಿಸುತ್ತಾರೆ. ಡೋಲು ಬಾರಿಸುತ್ತಾ ಪುಂಗಿ ಊದುತ್ತಾ ಹಾವುಗಳ ಆಟ ಆಡಿಸುವ ಪ್ರದರ್ಶನವನ್ನು ಕಣ್ಣಾರೆ ಕಂಡೇ ಆನಂದಿಸಬೇಕು. ಬುಟ್ಟಿಗಳಲ್ಲಿ ಇಟ್ಟಿದ್ದಂತಹ ದಾಸರಹಾವು, ನಾಗರಹಾವು, ಕ್ಯಾರೆಹಾವು, ಹೆಬ್ಬಾವು ಮೊದಲಾದ ವಿವಿಧ ಬಗೆಯ ಹಾವುಗಳನ್ನು ಹೊರಕ್ಕೆ ತೆಗೆದು ನೆಲದ ಮೇಲೆ ಹರಿಬಿಟ್ಟು, ಒಂದೊಂದರದೇ ವಿಶಿಷ್ಟ ಗುಣಗಾನ ಮಾಡಿ ಜನರನ್ನು ಭಯಭೀತರನ್ನಾಗಿ ಮಾಡುತ್ತಾನೆ. ಅವನ ಮಾತಿನ ಧಾಟಿಯ ಒಂದು ಉದಾಹರಣೆ ಹೇಗಿದೆ ನೋಡಿ. "ಅಣ್ಣಾ ಈ

೨ ಅದೇ

ಹಾವು ಏನು ಉಪಯೋಗವಿಲ್ಲಣ್ಣಾ, ಈಗ ನಾಗರಹಾವ್ರ, ಜರಾ ತೆಗಿತೀನಿ ನೋಡಿ, ಮಕ್ಕೆಲ್ಲಾ ಒಂದು ಸಾರಿ ಕೈಚಪ್ಪಾಳೆ ಹೊಡಿಬೇಕು, ಹಟ್", "ನಾಗಪ್ಪಾ, ಹೊರಕ್ಕೆ ಬಂದು ನಿನ್ನ ಹೆಡೆ ಬಿಚ್ಚಿ ತೋರಿಸಪ್ಪಾ, ಹಟ್; ನೆಲಕ್ಕೆ ಬಿಟ್ರೆ ಯಾವ ಪರ್ಕಾರ ನಡೀತದೆ ನೀವೇ ಪರೀಕ್ಷೆ ಮಾಡ್ರಣ್ಣಾ, ರೈಲ್‌ಗಾಡಿ ಹೋದಂಗೆ, ಇದರ ಹೊಟ್ಟೆ ತುಂಬಾ ಕಾಲು, ರೈಲು ಕಂಬಿ ಮಧ್ಯೆ ಹಲಗೆ ಜೋಡಿಸಿದಂತೆ, ಕಾಲು ಹೊರಕ್ಕೆ ಕಾಣ್ಸಾಕಿಲ್ಲಾ, ರೇಜರ್ ಒಳ್ಗೆ ಬ್ಲೇಡು ಇದ್ದಂಗೆ, ಅರೆಪಟ್, ಇದರ್ದು ಸ್ವಲ್ಪ ಹಲ್ಲು ತೋರಿಸ್ತೀನಿ, ನೋಡಿರಣ್ಣಾ, ಒಳ್ಳೆ ಸೀಗೆ ಮುಳ್ಳು ಇದ್ದಂಗೆ, ಯಾರ್ಯಾರು ಈ ನಾಗಪ್ಪನ ಹಾಲಿನ ಖರ್ಚಿಗೆ ೧೦ ಪೈಸೆ ೧೫ ಪೈಸೆ ಎಷ್ಟೈತೊ ಅಷ್ಟು ಕೊಡಿರಣ್ಣ ಇನ್ನೆರಡು ಆಟ ತೋರಿಸ್ತೀನಿ"[೩] ಎನ್ನುತ್ತಾನೆ. ಈ ಹಾವಾಡಿಗನು ಒಂದೇ ಸಮನೆ ಹರಳು ಹುರಿದಂತೆ ಮಾತಾಡುವ ಪೋಡಿಗೆ ಜನ ಮರು ಳಾಗುತ್ತಾರೆ. ಊರಿಂದೂರಿಗೆ ಹೀಗೆ ಚಮತ್ಕಾರಯುಕ್ತ ಆಟವಾಡುತ್ತಾ ಕುತೂಹಲ ಕೆರಳಿಸುತ್ತಾ ಜೀವನ ಸಾಗಿಸುತ್ತಾರೆ.

ಡೊಂಬರಾಟ:

"ಡೊಂಬರಾಟವಲ್ಲ, ದೋಸೆ ಊಟವಲ್ಲ" ಎಂಬ ಗಾದೆಯೊಂದಿದೆ. ಅದೇನೆ ಇರಲಿ, ಡೊಂಬರಾಟ ಊರಿಗೆ ಬಂತೆಂದರೆ, ಹಳ್ಳಿಯ ಜನರೆಲ್ಲರೂ ತಮ್ಮ ಕೆಲಸ ಬೊಗಸೆ ಬಿಟ್ಟು ಅವರ ಆಟಕ್ಕೆ ಆಕರ್ಷಕರಾಗುವುದು ಹೊಸದೇನಲ್ಲ. ಇವರ ಆಟದಲ್ಲಿ "ಕುಟುಂಬ ದಲ್ಲಿನ ಗಂಡ, ಹೆಂಡತಿ, ಮಕ್ಕಳುಗಳೆಲ್ಲರೂ ಭಾಗವಹಿಸುತ್ತಾರೆ. ಇದೊಂದು ರೀತಿಯ 'ಮಿನಿ ಸರ್ಕಸ್' ಇದ್ದ ಹಾಗೆ. ಊರ ಮಧ್ಯೆ ವಿಶಾಲವಾದ ಜಾಗಕ್ಕೆ ಬಂದು, ಡೋಲು ಬಾರಿಸಿ, ಜನ ಸೇರುವಂತೆ ಮಾಡಿ, ಎರಡು ಕಂಬಗಳನ್ನು ನೆಟ್ಟು ತಂತಿ ಬಿಗಿದು, ಒಂದೊಂದೇ ಕಸರತ್ತನ್ನು ಮಾಡಲು ಆರಂಭಿಸುವರು. ವ್ಯಾಯಾಮ ಪ್ರದರ್ಶನಗಳನ್ನು ಮಾಡುವುದೂ ಇವರ ಒಂದು ವೈಶಿಷ್ಟ್ಯ".[೪] ಲಾಗ ಹಾಕುವುದು, ನಿಂತ ನಿಲುವಿನಲ್ಲಿಯೇ ಪಟ್ಟುಗಳನ್ನು ಹಾಕುವುದು, ಭಾರವಾದ ಕಬ್ಬಿಣದ ಗುಂಡುಗಳನ್ನು ಎಸೆಯುವುದು, ತಂತಿಯ ಮೇಲೆ ನಡೆಯುವುದು, ಕಬ್ಬಿಣದ ಬಳೆಯೊಳಗೆ ನುಗ್ಗುವುದು, ಕಬ್ಬಿಣದ ಸಲಾಕೆಯ ತುದಿಗೆ ಚೂರಿ ಸಿಕ್ಕಿಸಿಕೊಂಡು ಅದನ್ನು ಗಂಟಲಲ್ಲಿಟ್ಟು ಬಗ್ಗಿಸುವುದು, ಮಗುವನ್ನು ಮೇಲಕ್ಕೆ ಬೀಸಿ ಹಿಡಿಯುವುದು. ಹೀಗೆ ನಾನಾ ವಿಧವಾದ ಶಕ್ತಿಯುತ ಹಾಗೂ ಕಣ್ಕಟ್ಟಿನ ಜಾದೂ ಆಟಗಳನ್ನು ಮಾಡಿ ಜನರಲ್ಲಿ ಆಶ್ಚರ್ಯ ಮತ್ತು ಕುತೂಹಲ ಕೆರಳಿಸಿ ಹಣ ಸಂಗ್ರಹಿಸುತ್ತಾರೆ.

ಊರೊಳಗೆ ಇಂತಹ ಅದ್ಭುತ ಜಾದೂ ಆಟ ನಡೆಯುತ್ತಿದೆ ಎಂದರೆ, ಮಕ್ಕಳು ಮರಿಗಳೆಲ್ಲಾ ದಾಡಾಯಿಸುತ್ತಾರೆ. ಕಟ್ಟುಮಸ್ತಾದ ಶರೀರವನ್ನು ಹೊಂದಿದ ಈ ಕಟ್ವಾಳು

---

೩ ಮೇಣಸಗಿ ಎನ್. ಬಿ. 'ರಂಜನೆಯ ಕಲೆ ಡೊಂಬರಾಟ' ಗ್ರಾಮಜ್ಯೋತಿ. ಕೆ. ಆರ್. ಲಿಂಗಪ್ಪ, ಅಭಿನಂದನಾ ಗ್ರಂಥ, ಸಂ. ಗೊ.ರು.ಚ. ಪು. ೪೫೨

೪ ಅದೇ

ಗಳು, ಒಂದು ಕಾಲದಲ್ಲಿ ವೀರಮಲ್ಲರಾಗಿದ್ದು ಹೋರಾಡಿದಂತಹವರಿರಬೇಕು. ಏಕೆಂದರೆ, ಇಂತಹ ಕಸರತ್ತುಗಳನ್ನು ಮಲ್ಲ ವಿದ್ಯೆಗಳನ್ನು ಮಾಡಲು ಸಾಮಾನ್ಯರಿಗೆ ಸಾಧ್ಯವಾಗದು. ಇಂತಹ ಶ್ರಮಸಾಧ್ಯವಾದ ಕಲೆಯನ್ನು ವಂಶಪಾರಂಪರ್ಯವಾಗಿ ಇವರು ಕಲಿತು ಹೊಟ್ಟೆ ಪಾಡಿನ ಉದ್ಯೋಗವಾಗಿ ಇದನ್ನು ಮಾಡಿಕೊಂಡಿದ್ದಾರೆ. ಬಡವರಾದರೂ ಸುಳ್ಳು ಮೋಸ ವಂಚನೆ ಮಾಡದೆ, ಜನರ ಮನಸ್ಸಿಗೆ ಸಂತೋಷಪಡಿಸಿ ಅವರಿಂದ ದವಸಧಾನ್ಯ ಸಂಗ್ರಹಿಸುತ್ತಾರೆ. ವೈಜ್ಞಾನಿಕ ಯುಗದಲ್ಲಿ ಈ ಕಲೆ ಉಸಿರಾಡುತ್ತಿದೆ ಎಂದರೆ, ಅವರ ಕಲೆಯಲ್ಲಿನ ಮಹೋನ್ನತ ಶಕ್ತಿ ನಮಗೆ ಅರ್ಥವಾದೀತು.

ವೇಷಗಾರರು:

ಮನೆಯ ಬಾಗಿಲಿಗೇ ಕಲೆಯನ್ನು ಕೊಂಡೊಯ್ದು ಮನರಂಜನೆಯನ್ನು ಕೊಡುವ ಕಲಾವಿದರಿವರು. ನಾಲ್ಕೈದು ಮಂದಿ ಒಟ್ಟಿಗೆ ಸೇರಿಕೊಂಡು ಮಾತು, ಅಭಿನಯ, ನೃತ್ಯ, ಸಂಗೀತ ಸಾಹಿತ್ಯದಲ್ಲಿ ಪಳಗಿದವರಾಗಿ ಪೌರಾಣಿಕ ಅಥವಾ ಐತಿಹಾಸಿಕ ಸನ್ನಿವೇಶಗಳನ್ನು ಆಯ್ದುಕೊಂಡು, ಆ ಪಾತ್ರಗಳಂತೆ ವೇಷ ಧರಿಸಿ, ಅಣುಕು, ಸೋಗಿನ ಅಭಿನಯ ನೀಡುವ ಕಲಾವಿದರನ್ನು ಹಳ್ಳಿಗರು ಹಗಲು ವೇಷಧಾರಿಗಳೆಂದೇ ಕರೆಯುತ್ತಾರೆ. ನಾಟಕ ಮಾಡುವವರು ರಾತ್ರಿ ಬಣ್ಣ ಹಾಕಿದರೆ, ಇವರದ್ದು ಹಗಲಲ್ಲೇ ನಡೆಯುವಂತದ್ದು. ತಾಳ, ಹಾರ್ಮೋನಿಯಂ, ತಬಲಗಳ ಹಿನ್ನೆಲೆಯ ಸಂಗೀತಕ್ಕೆ ತಕ್ಕಂತೆ ನೃತ್ಯ ಮಾಡುತ್ತಾರೆ. ಒಂದು ಕುಟುಂಬದ ಸದಸ್ಯರೆಲ್ಲಾ ಭಾಗವಹಿಸುತ್ತಾರೆ. "ಎರಡು ಮೂರು ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ಈ ಕಲಾವಿದರು ಆಯಾ ಪ್ರದೇಶದ ಜನಗಳ ಭಾಷೆಗೆ ತಕ್ಕಂತೆ ಅವರವರ ಮಾತೃಭಾಷೆಯಲ್ಲೇ ನಾಟಕದ ಸನ್ನಿವೇಶಗಳನ್ನು ಆ ಪಾತ್ರಗಳು ಮಾತನಾಡುವುದರಿಂದ, ಜನರು ಅವರ ಕಲೆಯನ್ನು ತುಂಬಾ ಮೆಚ್ಚಿಕೊಳ್ಳುತ್ತಾರೆ. ಇವರಲ್ಲೇ ಇನ್ನೊಂದು ಬಗೆಯವರಿಗೆ 'ಜಾತಿಗಾರರೆಂದು' ಕರೆಯುತ್ತಾರೆ.."[೫] ಈ ಎಲ್ಲಾ ಕಲಾವಿದರಿಗೆ ಕಲೆ ಜನ್ಮತಃ ಬಂದಿರುತ್ತದೆ. ಯಾವ ಪಾತ್ರವನ್ನಾದರೂ ಬಹು ಲೀಲಾಜಾಲವಾಗಿ ಅಭಿನಯಿಸಬಲ್ಲರು. ಅರ್ಧನಾರೀಶ್ವರ ವೇಷ ಇವರಿಗೆ ಬಲು ಮೆಚ್ಚು. ಇಂತಹದೇ ವೇಷ ಹಾಕಬೇಕೆಂಬ ನಿರ್ಬಂಧವೇನೂ ಇಲ್ಲ. ಹೆಚ್ಚಾಗಿ ಪೌರಾಣಿಕ ಪಾತ್ರಗಳ ವೇಷವನ್ನೇ ಹಾಕಿದರೂ, ಇತರ ಜನಾಂಗದ ಅಂದರೆ, ಮುಸ್ಲಿಂ ಕ್ರೈಸ್ತ, ಸಾಧುಸಂತರ ವೇಷ ಧರಿಸಿ ಅಣುಕು ಮಾತನಾಡುತ್ತಾರೆ. ಶಾಸ್ತ್ರೀಯವಾದ ನೃತ್ಯಾಭ್ಯಾಸವಾಗಲಿ, ವೈಭವದ ಅಲಂಕಾರವಾಗಲಿ, ಅದ್ದೂರಿಯ ಸಾಧನೋಪಕರಣವಾಗಲೀ ಇವರಲ್ಲಿಲ್ಲದಿದ್ದರೂ ಸರಳ, ಮುಗ್ಧ, ಗಂಭೀರತೆಯ, ವೈಚಾರಿಕತೆಯ ಅಭಿವ್ಯಕ್ತಿಯನ್ನು ಮಾತ್ರ ಇವರಲ್ಲಿ

---

೫ ಸಿಂಗಣ್ಣ ಸಣ್ಣಕ್ಕಿ, ಜಾನಪದ (ಅರ್ಧವಾರ್ಷಿಕ) ಕರ್ನಾಟಕ ಜಾನಪದ ಪರಿಷತ್ ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಅಧ್ಯಯನ ಸಂಸ್ಥೆ, ಸಂ. ೩, ಪು. ೩೫. ೧೯೭೫

ಕಾಣಬಹುದು. ತಮ್ಮ ಸುತ್ತಮುತ್ತಲ ಪರಿಸರದ ಎಲ್ಲ ಸಂಗತಿಗಳನ್ನು ಈ ಪೌರಾಣಿಕ ಪಾತ್ರಗಳು ಒಳಗೊಂಡಿರುವುದರಿಂದ ಇವು ಹಳ್ಳಿಗರಿಗೆ ತುಂಬಾ ಹತ್ತಿರವಾಗಿ ಮನಸ್ಸೆಳೆಯುತ್ತವೆ. ಹಲವಾರು ರೀತಿಯ ಹಾವಭಾವಗಳಿಂದ, ಹಾಡು ಕುಣಿತಗಳಿಂದ ಹಗಲಿನಲ್ಲೇ ಮನೆ ಮನೆ ಬಾಗಿಲಿಗೆ ಬರುವ ಈ ಕಲಾವಿದರ ಮೇಳದ ವೈಶಿಷ್ಟ್ಯತೆಯನ್ನು ಕಂಡು ಸಂತೋಷಪಡುತ್ತಾರೆ. ಇವರು ಬಹು ಬಗೆಯ ವೇಷ ಹಾಕುತ್ತಿದ್ದರಿಂದ ಇವರನ್ನು 'ಬಹುರೂಪಿ'ಗಳೆಂದು ಕರೆಯುತ್ತಾರೆ. "ಹನ್ನೆರಡನೇ ಶತಮಾನದಲ್ಲಿ ವಚನಕಾರರು ವೇಷ ಹಾಕುವುದೇ ವೃತ್ತಿಯಾಗುಳ್ಳ ಜಾತಿಗಾರರನ್ನು ಧರ್ಮ ಪ್ರಚಾರಕ್ಕಾಗಿ ಬಳಸಿಕೊಳ್ಳಲು ಹಳ್ಳಿಹಳ್ಳಿಗೆ ಇವರನ್ನು ಕರೆದೊಯ್ಯುತ್ತಿದ್ದರಂತೆ. ಜನಮನವನ್ನು ರಂಜಿಸುವುದರಲ್ಲಿ ಸಿಸ್ಸೀಮರಾದ ವೇಷಗಾರರು ತಮ್ಮಲ್ಲಿದ್ದ ಅಲ್ಪಸ್ವಲ್ಪ ಸಾಮಾನುಗಳಿಂದಲೇ ಜನರು ಇವರನ್ನು ಕಂಡ ಕೂಡಲೇ ಈ ಪಾತ್ರ ಇಂತಹದೇ ಎಂದು ಗುರುತಿಸುವಂತೆ, ಬಣ್ಣ ಹಾಕುವುದರಲ್ಲಿ ವೇಷ ತೊಡುವುದರಲ್ಲಿ, ನೈಪುಣ್ಯತೆ ಸಾಧಿಸಿದ್ದರು...."[೬] ಇದು ದಕ್ಷಿಣ ಕರ್ನಾಟಕಕ್ಕಿಂತಲೂ ಉತ್ತರ ಕರ್ನಾಟಕದ ಭಾಗದಲ್ಲಿ ಹೆಚ್ಚು ಜೀವಂತಿಕೆಯಿಂದ ಕೂಡಿದೆ.

ಇನ್ನೂ ಹಲವರು, ವೇಷಗಾರರಂತೆ ಮೇಳ ನಡೆಸಿಕೊಂಡು ಬರದಿದ್ದರೂ ಹಬ್ಬ ಹರಿದಿನಗಳಲ್ಲಿ ಕೆಲವು ಪ್ರಾಣಿಗಳ (ಹುಲಿ, ಕರಡಿ, ಕೋತಿ) ವೇಷ ತೊಟ್ಟು ಪಟ್ಟಿ ಪಟ್ಟಿಯಾಗಿ ಬಣ್ಣ ಬಳಿದುಕೊಂಡು ತಮಟೆಯ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಆಯಾ ಪ್ರಾಣಿಗಳ ಸ್ವಭಾವವನ್ನು ಅನುಕರಿಸುತ್ತಾ ಮನೆ ಮನೆ ಬಾಗಿಲಿಗೆ ಬರುವ ಈ ಕಲಾವಿದರ ಕುಣಿತವೂ ಆಕರ್ಷಕವಾಗಿರುತ್ತದೆ. ಇವರು ರಂಜನೆಗಾಗಿ ಮಾತ್ರ ವೇಷ ತೊಟ್ಟು ಸಂದರ್ಭ ಬಂದಾಗ ಮಾತ್ರ ಕುಣಿಯುತ್ತಾರೆ, ಖುಷಿ ಕೊಡುತ್ತಾರೆ. ಆದರೆ ಇದೇ ವೃತ್ತಿಯೇನೂ ಇಲ್ಲ.

ಇವರ ಸಾಲಿನಲ್ಲೇ ಹೆಸರಿಸಬಹುದಾದವರೆಂದರೆ, ಕೀಲು ಕುದುರೆ ಕುಣಿತದವರನ್ನು. ಇವರು ಕುದುರೆಯ ಆಕಾರವನ್ನು ಮಾಡಿಕೊಂಡು ಚೆನ್ನಾಗಿ ಶೃಂಗರಿಸಿ, ಅದರ ಮೇಲೆ ತಾವು ಹರಿದಂತೆ ಸೊಂಟಕ್ಕೆ ಕಟ್ಟಿಕೊಂಡು ಮರಗಾಲು ಕಟ್ಟಿ, ಮುಖಕ್ಕೆ ಬಣ್ಣ ಬಳಿದು ಹೆಣ್ಣು ವೇಷವನ್ನೊಬ್ಬ ಧರಿಸಿ, ಮತ್ತೊಬ್ಬ ಗಂಡು ವೇಷ ಧರಿಸಿ ನೃತ್ಯ ಮಾಡುತ್ತಾರೆ. ಹಿಮ್ಮೇಳದಲ್ಲಿ ವಾದ್ಯವೃಂದವೇ ಇರುತ್ತದೆ. ಇವರು ಪೌರಾಣಿಕ ಪ್ರಸಂಗಗಳನ್ನು ಮಾಡುತ್ತಾರೆ. ದೇವರ ಜಾತ್ರೆ ಉತ್ಸವಗಳಲ್ಲಿ ಮತ್ತು ಇತರ ಸಂತೋಷದ ಸಮಾರಂಭಗಳಲ್ಲಿ ಇವರನ್ನು ವೀಳ್ಯ ಕೊಟ್ಟು ಆಹ್ವಾನಿಸುತ್ತಾರೆ. ಮೂರು ನಾಲ್ಕು ತಾಸು ಸತತವಾಗಿ ಕುಣಿಯಬಲ್ಲ ಶಕ್ತಿಯನ್ನು ಇವರು ಪಡೆದಿರುತ್ತಾರೆ. "ಸಾಮಾನ್ಯವಾಗಿ ಇಂತಹ ಜನಪದ ಮನರಂಜಕ ಕುಣಿತಗಳಲ್ಲಿ ಕಥೆ ಹೇಳುವುದಿಲ್ಲ, ಕಥಾ ಪ್ರಸಂಗದಿಂದಲೂ ಸಂದರ್ಭವನ್ನು ತಿಳಿಸುವುದಿಲ್ಲ. ಅಲ್ಲಿನ ಕಥೆ ಪ್ರಸಂಗಗಳೆಂಬವು ಸಾಮೂಹಿಕ ಉತ್ಸಾಹ ಮತ್ತು ಸಂತೋಷ

---

೬ ದೇವೇಂದ್ರಕುಮಾರ ಹಕಾರಿ, ವೇಷಗಾರಿಕೆ, ಜಾನಪದ ಸಾಹಿತ್ಯ ದರ್ಶನ ಸಂ: ಸುಂಕಾಪುರ ಪು. ೧೬೨

ಗಳು. ಕುಣಿತವು ಮತಾಚಾರಕ್ಕೋ ಧಾರ್ಮಿಕ ವಿಧಿಗೋ ಸಂಬಂಧಿಸಿದ್ದರೆ ಆಗ ದೈವ, ದೆವ್ವ ಇವುಗಳ ವಿಕ್ರಮ, ಕ್ರೌರ್ಯ ಮೊದಲಾದವು ವಸ್ತುಗಳಾಗುವುದುಂಟು. ಅವರಂತೆ ಕೇರಿಯುದ್ದಕ್ಕೂ ಕುಣಿಯುವರು".[೭] ಇಲ್ಲಿ ಮನರಂಜನೆಯೇ ಮೂಲ ಉದ್ದೇಶವಾದ್ದ ರಿಂದ ತಮಗಿಷ್ಟವಾದಂತಹ ಕುಣಿತಗಳನ್ನು ಮಾಡುತ್ತಾರೆ. ಇವರ ಮೇಳಕ್ಕೆ ಸಾಕಷ್ಟು ಖರ್ಚು ಬರುವುದರಿಂದ ಜನರ ಪ್ರೋತ್ಸಾಹವಿಲ್ಲದಿರುವುದರಿಂದ, ಅಲ್ಲೊಂದು ಇಲ್ಲೊಂದು ತಂಡಗಳು ಮಾತ್ರ ಉಳಿದು ಬಂದಿವೆ. ಪಂಜಿನ ಬೆಳಕಲ್ಲೋ ದೀಪಗಳ ಬೆಳಕಲ್ಲೋ ವಿಶಾಲವಾದ ಬಯಲಿನಲ್ಲೋ ಇವರು ಮೇಳ ನಡೆಸುತ್ತಿದ್ದರೆ ಜನತೆ, ಅವರ ರೋಮಾಂಚ ಕಾರಿ ಕುಣಿತಕ್ಕೆ, ಮಧ್ಯೆ ಮಧ್ಯೆ ಅವರು ತರುವ ಹಾಸ್ಯ ವಿನೋದಕ್ಕೆ ತುಂಬಾ ಹರ್ಷ ವ್ಯಕ್ತಪಡಿಸುತ್ತಾರೆ. ಈ ಕಲಾವಿದರು ಅತ್ಯಂತ ಪರಿಶ್ರಮ ಉಳ್ಳವರೂ ಸದೃಢಕಾಯರೂ ಕಲಾ ಕೌಶಲ್ಯವುಳ್ಳವರೂ ರಸಿಕರೂ ಆಗಿರುತ್ತಾರೆ.

ಕಟ್ಟುಮಸ್ತಾದ ದೇಹವುಳ್ಳ ಕಲಾವಿದರೇನೋ ಇಂತಹ ಶಕ್ತಿಯುಕ್ತಿಗಳಿಂದ ಕೂಡಿದ ಕಲೆಯನ್ನು ಪ್ರದರ್ಶಿಸಬಲ್ಲರು. ಆದರೆ ರಂಜಿಸಬಲ್ಲ ಮನಸ್ಸಿದ್ದು, ಕೈಕಾಲುಗಳಲ್ಲಿ ಅಂತಹ ಶಕ್ತಿ ಇಲ್ಲದ ಕಲಾವಿದರು ತಮ್ಮ ಬುದ್ಧಿಮತಿಕೆಯಿಂದ, ಕ್ರೂರ ಕಾಡು ಪ್ರಾಣಿಯಾದ ಕರಡಿ ಯನ್ನೋ ಅಥವಾ ಮರದ ಮೇಲೆ ಹಾರುತ್ತಾ ಕುಣಿಯುತ್ತಾ ಚೇಷ್ಟೆ ಮಾಡಿಕೊಂಡಿದ್ದ ಮಂಗನನ್ನೋ ಉಪಾಯದಿಂದ ಹಿಡಿದುಕೊಂಡು ಬಂದು ಅದಕ್ಕೆ ತಿಂಗಳಾನುಗಟ್ಟಲೆ ಆಹಾರ ಕೊಟ್ಟು ತರಬೇತಿ ನೀಡುತ್ತಾರೆ. ಮನುಷ್ಯನ ನಡತೆಗಳನ್ನು ಪ್ರದರ್ಶಿಸುವಂತೆ ಮಾಡಬಲ್ಲ ಜಾಣ್ಮೆ ಕಲಿಸುತ್ತಾರೆ. ಇವರು ಒಬ್ಬರು ಅಥವಾ ಇಬ್ಬರು ಇದ್ದು ಕರಡಿ ಯನ್ನೋ ಕೋತಿಯನ್ನೋ ಮನೆಮನೆಯ ಬಾಗಿಲಿಗೆ ಹಿಡಿದುಕೊಂಡು ಬಂದು, ಯಜಮಾನರಿಗೆ, ನಮಸ್ಕಾರ ಮಾಡಿಸುವುದು, ದೊಣ್ಣೆ ಕೊಟ್ಟು, ಹೊಲಕಾಯುವಂತೆ ಹೇಳುವುದು, ಬೀಡಿ ಸಿಗರೇಟು ಸೇದಿಸುವುದು, ಸರ್ಕಸ್‌ನಲ್ಲಿನ ಪ್ರಾಣಿಗಳಂತೆ ಇವಕ್ಕೂ ಲಾಗ ಹಾಕಿಸುವ ಚೆಂಡಾಟವಾಡುವ, ನೀರು ತರುವ, ಅಡಿಗೆ ಮಾಡುವ, ತಲೆಯಲ್ಲಿ ಹೇನು ನೋಡಿಸುವ ನೂರೆಂಟು ಬಗೆಯ ವಿದ್ಯೆಗಳನ್ನು ಕಲಿಸಿರುತ್ತಾರೆ. ಯಜಮಾನ ಹೇಳಿದಂತೆ ಲಗುಬಗೆಯಿಂದ ಮಾಡುತ್ತವೆ. ಈ ಪ್ರಾಣಿಗಳು ಮನುಷ್ಯರಂತೆ ವರ್ತಿಸುವ ರೀತಿಯನ್ನು ಕಂಡು ಜನ ಬೆಕ್ಕಸ ಬೆರಗಾಗುತ್ತಾರೆ. ಇವುಗಳ ಆಟ ನೋಡಲು ಮಕ್ಕಳು ಮಂಗಳ ದಂಡೇ ಅವುಗಳ ಸುತ್ತಮುತ್ತ ನೆರೆದಿರುತ್ತದೆ. ಮಂಗನಾಡಿಸುವವನು ಅದಕ್ಕೆ ಅಂಗಿ, ಚೊಣ್ಣ ಹೊಲಿಸಿ ಶೃಂಗರಿಸಿಕೊಂಡು ತನ್ನ ಹೆಗಲ ಮೇಲೆ ಮಂಗನನ್ನು ಕುಳ್ಳಿರಿಸಿಕೊಂಡು ಬಂದನೆಂದರೆ ಊರಿನ ಮಕ್ಕಳೆಲ್ಲಾ ಅದನ್ನು ಹಲವಾರು ರೀತಿಯಲ್ಲಿ ಗೇಲಿ ಮಾಡುತ್ತಾ, ಹಣ್ಣು ಹಂಪಲಗಳನ್ನು ಅದಕ್ಕೆ ತಿನ್ನಿಸುತ್ತಾ ಅದರ ಆಟ ನೋಡಲು ಕಾತರಿಸಿರುತ್ತಾರೆ.

ಕರಡಿ ಕುಣಿಸುವವರೂ ಕೂಡ ನಮ್ಮ ಹಳ್ಳಿಯ ಜನರಿಗೆ ತುಂಬಾ ಅಚ್ಚುಮೆಚ್ಚಿನ

---

೭ ಶಿವರಾಮ ಕಾರಂತ. ಕೆ. ಯಕ್ಷಗಾನ ಬಯಲಾಟ, ಪು. ೧೯೫

ಕಲಾವಿದರು. ಕೋತಿ ಚೇಷ್ಟೆಗೆ, ಹೆಸರಾದ ಪ್ರಾಣಿಯಾದರೆ, ಕರಡಿ ತುಂಬಾ ಕ್ರೂರ ಪ್ರಾಣಿಯೆಂದು ಭಯಭೀತರಾಗುತ್ತಾರೆ. ಇಂತಹ ದೊಡ್ಡ ಪ್ರಾಣಿಯನ್ನು ತರಬೇತಿ ನೀಡಿ, ತಾನು ಹೇಳಿದಂತೆ ಮಾಡುವ ಬುದ್ಧಿ ಕಲಿಸಿರುವುದರಿಂದ ಜನರಿಗೆ ತುಂಬಾ ಆಶ್ಚರ್ಯವಾಗುತ್ತದೆ. ದೊಣ್ಣೆಯನ್ನು ಹೆಗಲ ಮೇಲೆ ಹೊತ್ತು ಹೊಲ ಕಾಯುವವನಂತೆ ನಡೆಸುತ್ತದೆ, ದಿಂಡಿರುಗಳು ಸೇವೆ ಮಾಡುತ್ತದೆ, ಲಾಗ ಹಾಕುತ್ತದೆ, ಮುಂದಿನ ಎರಡು ಕಾಲುಗಳನ್ನೆತ್ತಿ ನಮಸ್ಕಾರ ಮಾಡುತ್ತದೆ, ಮಕ್ಕಳು ಮರಿಗಳನ್ನು ಮೈಮೇಲೆ ಕುಳ್ಳಿರಿಸಿಕೊಂಡು ಸುತ್ತುತ್ತದೆ. ಅಳುವಂತೆ ನಗುವಂತೆ ಮುಖಭಾವವನ್ನು ಪ್ರದರ್ಶಿಸುತ್ತದೆ. ಇಂತಹ ಹಲವಾರು ನಡತೆಗಳನ್ನು ಕಂಡು ಜನರು ಸಂತೋಷದಿಂದ ಈತನಿಗೆ ಬಟ್ಟೆಬರೆ, ದವಸಧಾನ್ಯ ಕೊಟ್ಟು ಕಳುಹಿಸುತ್ತಾರೆ. ಮನೆಯಲ್ಲಿ ಆಗಾಗ್ಗೆ ಬೆಚ್ಚಿಬೀಳುವ ಹಾಸಿಗೆಯಲ್ಲೇ ಉಚ್ಚೆ ಮಾಡಿಕೊಳ್ಳುವ ಮಕ್ಕಳನ್ನು ಅದರ ಮೇಲೆ ಕುಳ್ಳಿರಿಸಿದರೆ ಅಂತಹ ಯಾವ ತೊಂದರೆಯೂ ಬರುವುದಿಲ್ಲವೆಂದು ನಂಬಿರುವುದರಿಂದ ಈ ಕಲಾವಿದರು ಊರಿಗೆ ಬರುವುದನ್ನೇ ಜನ ಕಾಯುತ್ತಿರುತ್ತಾರೆ.

ಕೋಲೆ ಬಸವನಾಟ:

ಇವರನ್ನು ಬಸವನಾಡಿಸುವವರು, ಕವಲೆತ್ತಿನವರು ಮುಂತಾಗಿ ಕರೆಯುತ್ತಾರೆ. ಹೊಟ್ಟೆ ಹೊರೆವ ವೃತ್ತಿಗಾಗಿ ಪ್ರಾಣಿಗಳನ್ನು ಬಳಸಿಕೊಂಡು, ಅವುಗಳಿಗೆ ಅಂದಚೆಂದದ ಬಟ್ಟೆ ತೊಡಿಸಿ, ಅಲಂಕಾರ ಮಾಡಿಕೊಂಡು ಮೂರು ನಾಲ್ಕು ಜನ ವಾದ್ಯ, ತಬಲ, ತಾಳ ಮೇಳಗಳೊಂದಿಗೆ ಊರೂರಿಗೆ ಬಂದು 'ರಾಮಾಯಣ'ದ ಸನ್ನಿವೇಶಗಳನ್ನು ಇವುಗಳ ಮುಖಾಂತರ ಮಾಡಿ ತೋರಿಸಿ ದವಸ ಧಾನ್ಯಗಳನ್ನು ಸಂಗ್ರಹಿಸುತ್ತಾರೆ. ಹಸು ಮತ್ತು ಎತ್ತುಗಳನ್ನು ಚೆನ್ನಾಗಿ ಸಾಕಿ, ಅವುಗಳಿಗೆ ಬುದ್ಧಿ ಕಲಿಸಿ ತಾವು ಹೇಳಿದಂತೆ ಅಭಿನಯಿಸುವ ಕಲೆಯನ್ನು ಅವುಗಳಿಗೆ ಕಲಿಸಿರುತ್ತಾರೆ. ಕರ್ನಾಟಕದ ಎಲ್ಲಾ ಭಾಗಗಳಲ್ಲಿಯೂ ಇವರು ಕಂಡುಬರುತ್ತಾರೆ. ಗೊಲ್ಲ ಜನಾಂಗಕ್ಕೆ ಸೇರಿದ ಈ ಕಲಾವಿದರು, ತಮ್ಮ ಮೂಲದ ಬಗೆಗೆ ಒಂದು ಕಥೆ ಹೇಳುತ್ತಾರೆ ವ್ಯಾಘ್ರಾಸುರನೆಂಬ ದೈತ್ಯನು ಭಾರೀ ಉಪಟಳವನ್ನು ಕೊಡುತ್ತಿದ್ದನಂತೆ. ಅವನ ಸಂಹಾರಕ್ಕಾಗಿ ನಂದಿಯು ಎತ್ತಿನ ರೂಪ ತಾಳಿದ. ಶಿವನು ಓಲಗ ಊದುವವನಾದ, ವಿಷ್ಣುವು ಬಸವನಾಡಿಸುವವನಾಗಿ ದೈತ್ಯನ ಮನೆಯ ಮುಂದೆ ಭರ್ಜರಿ ಆಟ ಆಡಿ ಅವನನ್ನು ಮೆಚ್ಚಿಸಿದರು. ಆತ ನಿಮಗೇನು ಬೇಕು ಬೇಡಿರಿ ಎಂದಾಗ, ಅವನನ್ನೇ ಇವರು ಗೇಲಿ ಮಾಡಿದರಂತೆ. ಅವನಿಗೆ ಸಿಟ್ಟು ಬಂದು ಈ ಮೂವರನ್ನು ನುಂಗಿಬಿಟ್ಟನಂತೆ. ಹೊಟ್ಟೆಯಲ್ಲಿ ಸೇರಿಕೊಂಡವರು ಕುಣಿತ ಮಾಡಿ ಮಾಡಿ, ಆತನ ಹೊಟ್ಟೆ ಉಬ್ಬುತ್ತಾ ಬಂದು ಸೀಳಿಕೊಂಡು ಹೊರ ಎಂದರಂತೆ. ಅದರ ಕುರುಹಾಗಿ ಆ ವಂಶಸ್ಥರು ಶಿವನ ಆರಾಧಕರಾಗಿ ದುಷ್ಟ ಸಂಹಾರಕ್ಕಾಗಿ ಪೀಡೆಯ ನಿವಾರಣೆಗಾಗಿ ಈ ಆಟವನ್ನೇ ತಮ್ಮ ವೃತ್ತಿಯಾಗಿ ನಡೆಸಿಕೊಂಡು ಬಂದರಂತೆ.

ಬಿಳಿಪಂಚೆ, ಕರಿಯ ಕೋಟು, ತಲೆಗೆ ಪೇಟ, ಉದ್ದನೆಯ ನಿಲುವಂಗಿ ಧರಿಸಿ,

ಕೈಯಲ್ಲಿ ಬಾರಿಕೋಲು ಹಿಡಿದು, ಊರೂರಲ್ಲಿ ಬೇಡಿ ತಂದ ಬಟ್ಟೆಗಳನ್ನೆಲ್ಲಾ ಬಸವಗಳಿಗೆ ಶೃಂಗರಿಸಿ, ಕೊರಳಿಗೆ ಗಂಟೆಸರ, ಕೊಂಬಿಗೆ ಬಣ್ಣಬಣ್ಣದ ಬಟ್ಟೆ ಸುತ್ತಿದ ಅಲಂಕಾರ, ಕಾಲಿಗೆ ಕಪ್ಪು ದಂಡೆ ಮತ್ತು ಗೆಜ್ಜೆಸರ ಕಟ್ಟಿ ಹಣೆಗೆ ನಾನಾ ಬಗೆಯ ಮಣಿಸರ, ಭುಜಕ್ಕೆ ಕರಡಿ-ಕೂದಲಿನ ಟೊಪ್ಪಿಗೆ ಧರಿಸಿ, ರಾಮ, ಲಕ್ಷ್ಮಣ, ಸೀತೆ ಎಂಬ ಮೂರು ಬಸವಗಳನ್ನು ರಂಗಕ್ಕೆ ತರುತ್ತಾರೆ. ರಾಮಾಯಣದಲ್ಲಿನ ಸೀತಾ ಪ್ರಸಂಗವನ್ನು ಆಯ್ದು ಕೊಂಡರೂ ಅವರ ನಾಟಕೀಯ ಗುಣವೇ ಭಿನ್ನವಾದದ್ದು. ಒಬ್ಬ ಶಹನಾಯ್, ಮಗದೊಬ್ಬ ಹಾರ್ಮೋನಿಯಂ ಬಾರಿಸುತ್ತಾ, ಗಂಡಿನ ಕಡೆಯವರು, ಹೆಣ್ಣಿನ ಕಡೆಯವ ರೆಂದು ವಿಂಗಡಿಸಿಕೊಂಡು ಆಟ ಪ್ರಾರಂಭಿಸುತ್ತಾರೆ.

ಇವರ ಸಂಭಾಷಣೆ ಸಹಜವಾದ ಆಡುನುಡಿಯಲ್ಲಿದ್ದು, ಮನೆಮಾತು ತೆಲುಗಾಗಿ ದ್ದರೂ ಕನ್ನಡವನ್ನು ಚೆನ್ನಾಗಿ ಮಾತನಾಡುತ್ತಾರೆ. 'ಸೀತಾರಾಮ ಕಲ್ಯಾಣ'ದಲ್ಲಿ ಬರುವ ಕೆಲವು ಮಾತುಗಳನ್ನು ಗಮನಿಸಿ.

(ರಾಮದೇವರ ಕಡೆಯಲ್ಲೊಬ್ಬ, ಸೀತಮ್ಮೋರ ಕಡೆಯಲ್ಲೊಬ್ಬ ಮಧ್ಯಸ್ಥಿಕೆ ವಹಿ ಸಿದವನೊಬ್ಬ ಇದ್ದು ಒಬ್ಬೊಬ್ಬರು ಒಂದೊಂದು ವಾದ್ಯ, ಅಂದರೆ ಡೋಲು, ಸೋನಾಯಿ ಹಿಡಿದಿರುತ್ತಾರೆ.)

(ರಾಮದೇವರ ಕಡೆಯವನು ಸೀತಮ್ಮೋರ ಕಡೆಯವನ ಹತ್ತಿರ ಬಂದು)

ರಾ.ಕ. ನಮ್ಮ ರಾಮದೇವ್ರಿಗೆ ನಿಮ್ಮ ಸೀತಮ್ಮೋರ ಮೇಲೆ ಇಷ್ಟವಾಗೈತಂತೆ ಮದುವೆ ಮಾಡಿಕೊಡ್ತೀಯಾ ಮಾವ

ಸೀ. ಕ. ರಾಮದೇವ್ರ ಮದುವೆಯಾಗ್ತಿಯಾ ಮಗಳೇ (ಎಂದು ಸೀತಮ್ಮೋರನ್ನು ಕೇಳುತ್ತಾನೆ) (ಆಗ ಅದು ಆಗುವುದಿಲ್ಲ ಎನ್ನುವಂತೆ ತಲೆ ಅಲ್ಲಾಡಿಸುತ್ತದೆ.)

ರಾ. ಕ. (ಆಗ ರಾ. ಕ. ಬಂದು,) ರಾಮದೇವ್ರಿಗೆ, ಏ ರಾಮದೇವ್ರ ಸೀತಮ್ಮೋರು ನಿನ್ನನ್ನ ಮದುವೆಯಾಗುವುದಿಲ್ಲವಂತೆ, ಅಂದಾಗ(ಅದು ಸಿಟ್ಟಿನಿಂದ ದಢವಢನೆ ಹೆಜ್ಜೆ ಹಾಕುತ್ತಾ ಸ್ವಲ್ಪ ದೂರ ಹೋಗಿ ನಿಲ್ಲುತ್ತದೆ)

ಸೀ. ಕ. (ರಾಮದೇವ್ರ ಕಡೆಯವನಿಗೆ) ನನ್ನ ಮಗಳನ್ನು ಕೇಳುವವನು ಹೀಗೆ ದಾಂಡಿಗ ನಂಗೆ ನೆಟ್ಟಗೆ ನಿಂತು ಕೇಳಿದರೆ ಆಗುತ್ತದೇನಪ್ಪಾ?

ರಾ. ಕ. ಮತ್ತೆ ಹೆಂಗೆ ಕೇಳ್ಬೇಕು?

ಸೀ. ಕ. ಹೆಣ್ಣು ಕೊಡೋ ಮಾಮ, ಗಡ್ಡ ಹಿಡಿಯೋ ಮಾಮ ಎಂದು ನನ್ನ ಕಾಲಿಡಿದು ಕೇಳಿಕೊಳ್ಳಬೇಕು.

ರಾ. ಕ. ಥೂ ನಿನ್ನ ಕಾಲಿಡಿದು ನಾನು ಕೇಳ್ಬೇಕಾ?

ಹೀಗೆ ಸಂಭಾಷಣೆ ಬಹು ಸರಸಮಯವಾಗಿ ಸಭಿಕರನ್ನು ನಗಿಸುತ್ತಾ ಸಾಗುತ್ತದೆ. ಜನ ಬಸವಣ್ಣಗಳು ಮಾಡುವ ನೃತ್ಯಕ್ಕೆ, ಅವರ ಬುದ್ಧಿಗೆ ಮೆಚ್ಚಿ ಸಂತೋಷಪಡುತ್ತಾರೆ.

ಬೇಕು, ಬೇಡ ಎನ್ನುವುದಕ್ಕೆ ತಲೆ ಅಲ್ಲಾಡಿಸುವುದು, ದಾಸದ ಕೈ ಯಾವುದೆಂದರೆ, ಬಲ ಗಾಲು ತೋರಿಸುವುದು, ಕಲಾವಿದನ ಎದೆಯ ಮೇಲೆ ಆಳೆತ್ತರದ ಬಸವ ನಾಲ್ಕೂ ಕಾಲುಗಳನ್ನಿಟ್ಟುಕೊಂಡು ಕುಣಿಯುವುದು ಇತ್ಯಾದಿ ಕಲೆ, ಎಲ್ಲ ಜನರನ್ನು ರಂಜಿಸುತ್ತವೆ. ಜನತೆ ತಮ್ಮ ಕೈಲಾದಷ್ಟು ದವಸ ಧಾನ್ಯಗಳನ್ನು ಕೊಟ್ಟು ಕಳುಹಿಸುತ್ತಾರೆ. ಅಲೆಮಾರಿ ಗಳಾದ ಈ ಕಲಾವಿದರು ಊರಿಂದೂರಿಗೆ ತಿರುಗುತ್ತಾ ಇದರಲ್ಲೇ ಜೀವನ ಸಾಗಿಸು ತ್ತಾರೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಹಳ್ಳಿಗಳ ಮೇಲೆ ಹೊರಡುವುದಿಲ್ಲ.

ಹೀಗೆ ಪ್ರಾಣಿಗಳಿಂದ ಮನರಂಜನೆಯನ್ನು ನೀಡುವವರದೊಂದು ಬಗೆಯಾದರೆ ತಾವೇ ಸ್ವತಃ ನಗೆ ತರಿಸುವಂತಹ ವೇಷ ಹಾಕಿ, ಬಣ್ಣ ಬಳಿದುಕೊಂಡು ಚಮತ್ಕಾರ ವಾಗಿ ವರ್ತಿಸುವವರು ಇನ್ನೊಂದು ಬಗೆ.

ಜನಪದ ವಿನೋದಗಳು ಕೇವಲ ಸಾಹಿತ್ಯಕ ರೂಪದ್ದಾಗಿರಬೇಕೆಂಬ ನಿಯಮ ವೇನಿಲ್ಲ. ನಟನೆಯಿಂದ ನಗಿಸಬಹುದು. ವಿಚಿತ್ರ ವೇಷಭೂಷಣ ಮಾಡಿಕೊಂಡೂ ನಗಿಸ ಬಹುದು. ಯಕ್ಷಗಾನದಲ್ಲಿ ಬರುವ ಹನುಮನಾಯಕನನ್ನು ಇಲ್ಲಿ ಉದಾಹರಿಸಬಹುದು. ಈತನಿಗೆ, ನಿರ್ದಿಷ್ಟ ಮಾತುಗಾರಿಕೆ ಏನೂ ಇರುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಹೇಗನ್ನಿ ಸುತ್ತದೋ ಹಾಗೆ ನೃತ್ಯ ಮತ್ತು ಮಾತುಗಳನ್ನಾಡಿ ರಂಜಿಸುತ್ತಾನೆ. ಕೊರಳಿಗೆ ಚಕ್ಕುಲಿಯ ಸರವನ್ನೋ ಅಥವಾ ಹಣೆಯ ಮೇಲೆ ದೊಡ್ಡ ನಾಮವನ್ನೋ ಮೂಗಿನ ಮೇಲೆ ಬಿಳಿಯ ಬೊಟ್ಟನ್ನೋ ಹಾಕಿಕೊಂಡು ಬಂದರೆ ಯಾರಿಗೆ ತಾನೆ ನಗು ಬರುವುದಿಲ್ಲ. ಇದಲ್ಲದೆ ಆಯಾ ಪಾತ್ರಗಳಿಗೇ ತಕ್ಕಂತೆ ಪ್ರಾಸಬದ್ಧವಾಗಿ ಮಾತನಾಡಿ ಪ್ರೇಕ್ಷಕರಿಗೆ ಖುಷಿ ಕೊಡುತ್ತಾನೆ. ಹೆಣ್ಣು ಪಾತ್ರ ಬಂತೆಂದರೆ, 'ತೆಳ್ಳಗೆ ಬೆಳ್ಳಗೆ ಅಟ್ಟದ ಮೇಲೆ ಇಷ್ಟು ರಾತ್ರಿಯಲ್ಲಿ ಬಂದ ಕಾರಣವೇನಮ್ಮ ಎಲೆ ರಮಣಿ ನಿನ್ನ ಮುಖವೆಲ್ಲ ಸಗಣಿ ಎನ್ನುತ್ತಾನೆ.' ರೌದ್ರ ಪಾತ್ರಗಳು ಬಂದರೆ ಗಡಗಡನೆ ನಡುಗುತ್ತಾ ಆ ಪಾತ್ರದ ಕಾಲು ಸಂದಿಯಲ್ಲೇ ನುಸುಳಿ ಓಡುತ್ತಾ ಬಂದು ಭಾಗವತನನ್ನೇ ತಬ್ಬಿಕೊಳ್ಳುತ್ತಾನೆ. ಕೆಲವು ಚಿಕ್ಕ ಪಾತ್ರಗಳು ಬಂದಾಗ ತೂಕಡಿಸುತ್ತಾ ಕುಳಿತುಕೊಳ್ಳುತ್ತಾನೆ. ಇಂತಹ ನಡೆವಳಿಕೆ ನಟನೆಗಳಲ್ಲದೆ, ಆತನ ವಿಚಿತ್ರ ಉಡುಗೆಗಳೇ ನಗೆ ಬರಿಸುವಂತಿರುತ್ತವೆ. ಕೆಲವು ಕಡೆ ಈ ಕೋಡಂಗಿ ಉದ್ದ ನಾದ ಚುಂಗ, ಒಮ್ಮೊಮ್ಮೆ ಹೆಣ್ಣುಮಕ್ಕಳ ಸೀರೆಯನ್ನೇ ಪಗಟದ ಹಾಗೆ ಸುತ್ತಿಕೊಳ್ಳು ತ್ತಾನೆ. ವೇಷದಂತೆಯೇ ಈತನ ಮಾತುಗಳೂ ವಿಚಿತ್ರವಾಗಿರುತ್ತವೆ. ತನ್ನನ್ನು ಅಟ್ಟದ ಮೇಲೆ ಪಾತ್ರಗಳಿಗೆ ಪರಿಚಯಿಸಿಕೊಳ್ಳುವಾಗ "ಮಂದೀ ರುಮಾಲ ಕಟಗೊಂಡು, ಉದ್ರಿ ಲುಂಗಿ ಹಾಕಿಕೊಂಡು ಸಾಟಿ ಮೊಳ ಮುಂಡಾಸ ಸುತ್ತಿಕೊಂಡು ಬಂದಿರುವ ನನ್ನನ್ನು ಸಾರಥಿ ಸಾರಥಿ" ಎನ್ನುವರು ದೊರೆಯ ಕಪ್ಪುರದ ಉರಿಯೆ, ಸಾರಥಿ ಹಳ್ಳಿಗರಲ್ಲಿ ಹಳ್ಳಿಗ, ಎಬಡರಲ್ಲಿ ಎಬಡ, ಅವನ ಭಾಷೆ ಗ್ರಾಮ್ಯ. ಇಡೀ ನಾಟಕದಲ್ಲಿಯೇ ಸಂಪೂರ್ಣ ಇವನ ಕೈವಾಡವಿರುತ್ತದೆ. ನಾಟಕ ಪಾತ್ರಧಾರಿಗಳ ಅಸಡ್ಡೆಯಿಂದ ಒಂದು ಪಕ್ಷ ಕೆಟ್ಟು ಹೋದರೂ ಈತ ಅದನ್ನು ತನ್ನ ಹಾಸ್ಯ ವಿನೋದಗಳಿಂದ ಸರಿದೂಗಿಸಬಲ್ಲ. "ಬಮ

ಲಾಟಗಳಲ್ಲಿ ಮತ್ತು ಹಳೆಯ ಇತರೆ ನಾಟಕಗಳಲ್ಲಿ ಕಾಣಿಸಿಕೊಳ್ಳುವ ನಗೆಗಾರ, ಗೊಡ್ಡಿ, ವಿದೂಷಕ, ದೂತಿ ಮುಂತಾದ ಹಾಸ್ಯ ಪಾತ್ರಗಳು. ಮಧ್ಯೆ ಮಧ್ಯೆ ಬರುವ ಅಡ್ಡ ಸೋಗುಗಳು ಸಮಕಾಲೀನ ಜೀವನದ ಕುಂದುಕೊರತೆಗಳನ್ನು ಅಜ್ಞಾನ, ಅವಿವೇಕ, ಅಶಕ್ತತೆಗಳನ್ನು ವಿಡಂಬನೆ ಮಾಡಿ ತೋರಿಸಿ ಜನಸಾಮಾನ್ಯರಲ್ಲಿ ಸಾಮಾಜಿಕ ಜೀವನದ ಸೌಂದರ್ಯ ಪ್ರಜ್ಞೆಯನ್ನು ಹುಟ್ಟಿಸುತ್ತಿರುವ ಈ ವಿಡಂಬನೆಗಳು ಸಾಮರಸ್ಯವಿಲ್ಲದ ದಾಂಪತ್ಯ ಜೀವನ, ಅತ್ತೆಸೊಸೆಯರ ವಿರಸಜೀವನ, ಬಡವರ ಗೋಳಿನ ಬಾಳು, ಸಿರಿವಂತರ ಉನ್ಮಾದ ಪ್ರಮಾದಗಳನ್ನು ಎತ್ತಿ ತೋರಿಸುತ್ತವೆ. ಅಲ್ಲಿ ಮೂಡಿ ಬರುವ ಹಾಸ್ಯ ವಿಡಂಬನೆಗಳು ಔಚಿತ್ಯ ಅನೌಚಿತ್ಯಗಳನ್ನು ಮೀರಿ ಸಮಕಾಲೀನ ಸಂಗತಿಗಳ ಚಿತ್ರಣಗಳಾಗುತ್ತವೆ."[೮] ಸಾಮಾನ್ಯವಾಗಿ ಯಾವುದೇ ನಾಟಕಗಳನ್ನಾಡಲಿ ಈ ಅಡ್ಡ ಸೋಗಿನ, ಅಯ್ಕುಳಿ ಮಾತಿನ ಕಲಾವಿದರು ನಾಟಕದ ಮಧ್ಯೆ ಬಂದು ಜನರ ಮನಸ್ಸಿಗೆ ಕಚಗುಳಿ ಇಡುತ್ತಾರೆ. ಕಥೆಯ ಪಾತ್ರವರ್ಗಕ್ಕೂ ಇವರಿಗೂ ಯಾವುದೇ ಸಂಬಂಧವಿರುವುದಿಲ್ಲ. ಡೊಳ್ಳು ಹೊಟ್ಟೆಯ ಬ್ರಾಹ್ಮಣನೊಬ್ಬ ಹೊಟ್ಟೆ ತೋರಿಕೊಂಡು, ಹಣೆಯ ಮೇಲೆ ನಾಮ ಹಾಕಿಕೊಂಡು, ನಾಲ್ಕೈದು ಮಕ್ಕಳನ್ನು ಹೊತ್ತು, ಸ್ಟೇಜಿನ ಮೇಲೆ ಅವುಗಳನ್ನು ಒಂದೊಂದಾಗಿ ಕೆಳಗಿಳಿಸಿ ರಾಜನ ಮನೆಯ ಭೋಜನವನ್ನು ವರ್ಣಿಸುವ ರೀತಿ, ಅವನ ವೇಷ ಎಂತಹವರಿಗೂ ನಗೆ ತರಿಸುತ್ತವೆ. ಈ ಅಡ್ಡಸೋಗಿನವರು ತುಂಬಾ ಬುದ್ಧಿವಂತರೂ, ಕಲಾ ನಿಪುಣರೂ, ಸಮಯ ಪ್ರಜ್ಞೆಯುಳ್ಳವರೂ, ಜನರ ಮನಸ್ಸನ್ನು ಅರಿತವರೂ ಆಗಿದ್ದು, ಮಾತು, ಹಾಡು, ಕುಣಿತ ಮುಂತಾದ ಎಲ್ಲ ರಂಗದಲ್ಲೂ ನಿಸ್ಸೀಮರಾಗಿರುತ್ತಾರೆ.

ಇದೇ ರೀತಿ ತೊಗಲುಗೊಂಬೆಯಾಟದಲ್ಲಿ ಕಿಳ್ಳೇಕ್ಯಾತ ಮತ್ತು ಬಂಗಾರಕ್ಕನೆಂಬ ಎರಡು ಪಾತ್ರಗಳು ಬರುತ್ತವೆ. ಡೊಳ್ಳು ಹೊಟ್ಟೆಯ, ಬೋಳುತಲೆಯ, ಪಿಳ್ಳೆ ಜುಟ್ಟಿನ, ದಪ್ಪ ತುಟಿಯ, ಗಿಡ್ಡ ಮೂಗಿನ ವಕ್ರ ವ್ಯಕ್ತಿಯೇ ಕಿಳ್ಳೇಕ್ಯಾತ. ಈತನಾಡುವ ಮಾತುಗಳೆಲ್ಲಾ ಅಶ್ಲೀಲದ ಅಂಚಿನಲ್ಲಿಯೇ ಸಾಗುತ್ತವೆ. ಈತ ತನ್ನ ಪತ್ನಿಯಾದ ಬಂಗಾರಕ್ಕನ ಜೊತೆಯಲ್ಲಿ ಆಡುವ ಸರಸಸಲ್ಲಾಪವಂತೂ ಜನರನ್ನು ನಕ್ಕು ನಕ್ಕು ಸಾಕುಮಾಡುತ್ತದೆ. ಪರದೆಯ ಮೇಲೆ ಬರುವ ಎಲ್ಲಾ ಪಾತ್ರಗಳನ್ನು ಅಣಕಿಸುತ್ತಾ ದೊಪ್ಪೆಂದು ಬೀಳುತ್ತಾ, ರಪ್ಪೆಂದು ಹೊಡೆಯುತ್ತಾ ನಾನಾ ವಿಧವಾದ ಚೇಷ್ಟೆ ಮಾಡುತ್ತಾನೆ. ಹೀಗಾಗಿ ಇಡೀ ಆಟವೇ ಕಿಳ್ಳೇಕ್ಯಾತನದೆನಿಸಿಕೊಂಡು ಬಿಟ್ಟಿದೆ. ಇಂತಹ ನಾಟಕಗಳನ್ನು ನೋಡಲು ಬರುವ ಪ್ರೇಕ್ಷಕರಿಗೆ ಬೇಕಾದದ್ದು ಕೂಡ ಇಂತಹ ಸಾಹಿತ್ಯವೇ. ಏಕೆಂದರೆ ಪ್ರೌಢಸಾಹಿತ್ಯದ ಗಂಧವೇ ತಿಳಿಯದ ಜನಸಾಮಾನ್ಯರಿಗೆ ತಮ್ಮ ದಿನನಿತ್ಯದ ಜಂಜಾಟದ ಸಮಸ್ಯೆಗಳನ್ನೂ

---

೮ ಪರಮಶಿವಯ್ಯ ಜಿ. ಶಂ. ಜನಪದ ಕಲೆಗಳು: ಒಂದು ಅನ್ವಯಿಕ ದೃಷ್ಟಿ ಪು. ೧೩ ಜಾನಪದ ಜಗತ್ತು ಸಂಪುಟ ೧, ಸಂಚಿಕೆ ೨.

ಪರಿಹರಿಸುವ, ಕಾರಣವನ್ನು ಎತ್ತಿತೋರಿಸುವ ಇಂತಹ ಪಾತ್ರಗಳ ಕಡೆಗೇ ಅವರ ಆಸಕ್ತಿ ಹೆಚ್ಚು.

'ಜನಪದ ಕಲೆಗಳು ಗ್ರಾಮೀಣ ಜೀವನದ ಚೈತನ್ಯದ ಚಿಲುಮೆಗಳು. ನಾನಾ ಉದ್ದೇಶಗಳಿಗಾಗಿ ಇವುಗಳನ್ನು ಬೆಳಸಿಕೊಂಡು ಅನೇಕ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಬಹುದು. ನಿರುತ್ಸಾಹ, ಆಲಸಿಕೆಗಳನ್ನು ದೂರಮಾಡಿ ಕಲೆಯ ಕಡೆ ಜನರ ಮನಸ್ಸನ್ನು ಸೆಳೆಯಬಹುದು. ಸಣ್ಣತನಗಳನ್ನೂ, ಕ್ಷುಪ್ರ ಭಾವನೆಗಳನ್ನೂ ಅಹಂಕಾರ ಮಮಕಾರಗಳನ್ನೂ ದೂರಮಾಡಿ ಕಲೆಯಲ್ಲಿ ತಾನೂ ಒಂದಾಗಿ ಬೆರೆಯುತ್ತಾನೆ. ಬದುಕಿನಲ್ಲಿ ಒಳ್ಳೆಯ ಸತ್‌ಸಂಪ್ರದಾಯಗಳನ್ನು ಬೆಳಸಿಕೊಳ್ಳುತ್ತಾನೆ. ಜನಪದ ಜೀವನ ದಲ್ಲಿ ಕಣ್ಮರೆಯಾಗುತ್ತಿರುವ ರಸಿಕತೆ ಮತ್ತೇ ಚೇತರಿಸಿಕೊಳ್ಳುತ್ತದೆ. ಬರುಡಾದ ಬದುಕಿನಲ್ಲಿ ಜೀವನ ಸೌಂದರ್ಯ ಮತ್ತೇ ಅರಳುತ್ತದೆ. ಇದಕ್ಕಾಗಿ ನಮ್ಮ ಕಲೆಗಳಿಗೆ ನೀರೆರದು ಬೆಳಸ ಬೇಕಾದುದು ಅಗತ್ಯವಾಗಿದೆ' ಎನ್ನುವ ಜೀರಂಪ ಅವರ ಮಾತು ನಮ್ಮ ಎಲ್ಲಾ ಕಲಾ ರಂಗಕ್ಕೂ ಅನ್ವಯಿಸುವುದಾದರೂ 'ಜನಪದ ಮನರಂಜಕರ' ಕಲೆಗಳಿಗೆ ಇನ್ನೂ ಹೆಚ್ಚು ಅರ್ಥಪೂರ್ಣವಾದದ್ದಾಗಿದೆ. ಬದುಕಿನಲ್ಲಿ ಜಿಗುಪ್ಸೆ, ಆಲಸ್ಯ, ಪ್ರಾಣಹಾನಿ, ಮಾನಹಾನಿ ಮುಂತಾದವುಗಳಿಗೆ ಅವಕಾಶ ಕೊಡದಂತೆ, ಜೀವನವನ್ನು ಸುಗಮವಾಗಿ ನಡೆಸಿಕೊಂಡು ಹೋಗುವಂತೆ ಮಾರ್ಗದರ್ಶನ ನೀಡಬಲ್ಲ ಹಾಗೂ ವ್ಯಕ್ತಿಗೆ ನವಚೇತನ ತುಂಬಬಲ್ಲ ಶಕ್ತಿ ಈ 'ಜನಪದ ಮನರಂಜಕರ' ಕಲೆಯಲ್ಲಿದೆ. ಇಂತಹ ಕಲಾವಿದರನ್ನು ಗುರುತಿಸುವುದು, ಅವರ ಕಲೆಯನ್ನು ಗೌರವಿಸಬೇಕಾದದ್ದು ಎಲ್ಲರ ಆದ್ಯ ಕರ್ತವ್ಯವಾಗಬೇಕು.

□ □

ಮಹಾದೇವಿಯಕ್ಕನ ಆದರ್ಶ ಬಾಳು

—ಶ್ರೀಮತಿ ಸಂಗಮ್ಮ ಕರವೀರಶೆಟ್ಟರ

ಹನ್ನೆರಡನೆಯ ಶತಮಾನ ಕ್ರಾಂತಿಯ ಕಹಳೆ ಮೊಳಗಿದ ಕಾಲವದು. ಕಾಯಕ ಯೋಗಿ, ಕ್ರಾಂತಿಕಾರಿ, ಸಮತಾವಾದಿ ಸ್ತ್ರೀ ಕುಲೋದ್ಧಾರಿ,ಜಗಜ್ಯೋತಿ ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣ ಬಸವಣ್ಣ ಉದಿಸಿದ ಕಾಲ ಸುವರ್ಣಾಕ್ಷರಗಳಿಂದ ಬರೆದಿಡತಕ್ಕ ಸುಸಂದರ್ಭವದು. ಮಾನವರಾಗಿ ಜನಿಸಿದ ಅಸಂಖ್ಯ ಸ್ತ್ರೀ-ಪುರುಷರು ಕಾರುಣ್ಯನಿಧಿ ಬಸವಣ್ಣನವರ ಸಾನ್ನಿಧ್ಯ ಪಡೆದು ಶಿವಶರಣ ಶರಣೆಯರಾದರು.

"ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ
ಎತ್ತ ನೋಡಿದಡೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದೊಡೆ ಭಕ್ತಿಯೆಂಬ ರಸವಯ್ಯ
ಆಯತವು ಸ್ವಾಯತವು ಸನ್ನಿಹಿತವು ಬಸವಣ್ಣನಿಂದ
ಗುರು ಲಿಂಗ ಜಂಗಮ ಪಾದೋದಕ ಪ್ರಸಾದ
ಇವೆಲ್ಲವು ಬಸವಣ್ಣನಿಂದ....ಕಲಿದೇವರದೇವಾ"

ಹೀಗೆ ಅಪ್ಪಣೆ ಕೊಡಿಸಿರುವರು ಬಸವಣ್ಣನವರ ಸಮಕಾಲೀನ ಶರಣ ಮಡಿವಾಳ ಮಾಚಿದೇವರು.

ಇದೇ ಕಾಲಕ್ಕೆ ಎಂಟುನೂರು ವರುಷಗಳ ಹಿಂದೆ ಶಿವಶರಣೆಯರಲ್ಲಿ ಅಗ್ರಗಣ್ಯಳಾದ, ಜಗತ್ತಿಗೆ ವಂದ್ಯಳಾದ ಮಹಾದೇವಿ ಅಕ್ಕನು ಕನ್ನಡ ನಾಡಿನ ಶಿವಮೊಗ್ಗ ಜಿಲ್ಹೆಯ ಉಡುತಡಿಯೆಂಬ ಪಟ್ಟಣದೊಳಗೆ ನಿರ್ಮಲ-ಸುಮತಿಯರಿಗೆ ಮಗಳಾಗಿ ಜನಿಸಿದಳು.

"ಇಳಿಯೊಳುಡುತಡಿಯೆಂಬ ಪಟ್ಟಣ
ದೊಳಗೆ ವೀರ ಶಿವಾಗಮಿಕ ನಿ
ರ್ಮಳನ ವಲ್ಲಭೆಯೆನಿಪ ಸುಮತಿಯು ಗರ್ಭಶುಕ್ತಿಯಲಿ
ಚೆಲುವೆಯಾದ ಕುಮಾರಿಯೆಂಬ
ಗ್ಗಳದ ಮುತ್ತುದಯಿಸಿತು ಧರಣೀ
ತಳದೊಳಗೆ...." (ಚಾಮರಸ ಕವಿ)

ಮಹಾದೇವಿಯು ಬಿದಿಗೆಯ ಚಂದ್ರನಂತೆ ಹೊಳೆಯುತ್ತ ತಂದೆ-ತಾಯಿಗಳ ಮನೆ ಮನವನ್ನು ಬೆಳಗುತ್ತ ಬೆಳೆಯತೊಡಗಿದಳು. ಬಾಲ್ಯದಿಂದಲೂ ಮಹಾದೇವಿಗೆ ಆಧ್ಯಾತ್ಮದ

ಹಂಬಲ ಬಹಳವಿತ್ತು. "ಶ್ರೀಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗಳೇ ಎನ್ನ ಭವಂ ನಾಸ್ತಿಯಾಗಿತ್ತು. ಎನ್ನ ತನ್ನಂತೆ ಮಾಡಿದ" ಇದರಲ್ಲಿ ಅಕ್ಕನ ದೀಕ್ಷಾಗುರುಗಳಾದ ಗುರುಲಿಂಗದೇವರು ವಹಿಸಿದ ಪಾತ್ರವು ಅತ್ಯಂತ ಮಹತ್ವದ ಸಂಗತಿಯಾಗಿತ್ತೆಂದು ತಿಳಿದು ಬರುತ್ತದೆ. ಗುರುಗಳು ಅವಳಿಗೆ 'ಶರಣಸತಿ ಲಿಂಗಪತಿ' ಯೆಂಬ ತತ್ವವನ್ನು ಅರುಹಿ ಚೆನ್ನಮಲ್ಲಿಕಾರ್ಜುನನೆಂಬ ಪರಶಿವಸ್ವರೂಪ ಇಷ್ಟಲಿಂಗದ ಸತಿಯಾಗೆಂದು ಆಶೀರ್ವದಿಸಿದ್ದರು. ಆದ್ದರಿಂದ ಅಕ್ಕನ ವಚನಗಳ ಅಂಕಿತ ನಾಮ 'ಚೆನ್ನಮಲ್ಲಿಕಾರ್ಜುನ' ಎಂದು ಮೂಡಿಬಂದಿದೆ.

ಮಹಾದೇವಿ ಪ್ರಾಪ್ತವಯಸ್ಕಳಾದ ಮೇಲೆ ಅವಳ ಸೌಂದರ್ಯವು ಬಂಗಾರದಲ್ಲಿ ಕುಂದಣವಿಟ್ಟಂತೆ ಕಳೆಯೇರಿ ಬೆಳಗತೊಡಗಿತು. ಸುಮತಿ ನಿರ್ಮಲ ಶೆಟ್ಟರಿಗೆ ಅವಳು ಒಬ್ಬಳೇ ಮಗಳಾದರೂ ಲೋಕರೂಢಿಯಂತೆ ಅವಳ ಮದುವೆ ಮಾಡಲು ಅವರು ಪ್ರಯತ್ನ ನಡೆಸಿದರು. ಆದರೆ ಮಹಾದೇವಿಗೆ ಅದರಲ್ಲಿ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ತಾನು ಚೆನ್ನಮಲ್ಲಿಕಾರ್ಜುನನೆಂಬ ಲಿಂಗಪತಿಗೆ ಶರಣಸತಿಯೆಂಬ ಭಾವವು ಬೇರೂರಿ ಬೆಳೆದು ಹೆಮ್ಮರವಾಗಿತ್ತು.

ಹನ್ನೆರಡನೇ ಶತಮಾನದಲ್ಲಿ ಕನ್ನಡನಾಡಿನ ಕಲ್ಯಾಣ ಪಟ್ಟಣದಲ್ಲಿ ಬಸವಣ್ಣನು ಮಾನವ ಕಲ್ಯಾಣಕ್ಕಾಗಿ ನಿರ್ಮಿಸಿದ ಶ್ರೇಷ್ಠ ಅನುಭವ ಮಂಟಪದಲ್ಲಿ ಶಿವಾನುಭವ ಜ್ಞಾನ ವನ್ನು ಪಡೆದ ಜಂಗಮ ಪುಂಗವರು ಭಾರತದ ಎಲ್ಲೆಡೆಗಳಲ್ಲಿ ಲಿಂಗವಂತ ಧರ್ಮಪ್ರಚಾರ ಕ್ಕಾಗಿ ಸಂಚರಿಸುತ್ತಿದ್ದರು. ಈ ಜಂಗಮರ ಮೂಲಕ ಕರ್ನಾಟಕದ ಕಣ್ಮಣಿಯಾಗಿದ್ದ ರಮಣೀಯ ಕಾಯಕರಂಗವಾಗಿದ್ದ ಕಲ್ಯಾಣದ ವೈಭವವನ್ನೂ ಅಣ್ಣನವರ ಭಕ್ತಿರತಿಯನ್ನೂ ಶ್ರೋತ್ರ ಮುಖದಿಂದ ತಿಳಿದು ಆನಂದಿಸಿದವರಲ್ಲಿ ಗುರುಲಿಂಗದೇವರೂ ಒಬ್ಬರು. ಅವರು ಆಗಾಗ್ಗೆ ಬಸವಕಲ್ಯಾಣಕ್ಕೆ ಹೋಗಿಬರುತ್ತಿದ್ದರು. ಅಲ್ಲಿನ ಬಸವ ಗುರುವಿನ ವಿಶಾಲ ಹೃದಯವನ್ನೂ, ಸಮತಾವಾದವನ್ನೂ ತಮ್ಮ ಮಠಕ್ಕೆ ಆಗಮಿಸುತ್ತಿದ್ದ ಭಕ್ತಾದಿ ಗಳಿಗೆಲ್ಲ ವಿವರಿಸಿ ಹೇಳುತ್ತಿದ್ದರು ಗುರುಲಿಂಗದೇವರು. ಅದನ್ನು ಮನಗೊಟ್ಟು ಆಲಿಸು ತ್ತಿದ್ದ ಮಹಾದೇವಿಯ ಕೋಮಲ ಹೃದಯದ ಮೇಲೆ ಮೂಡಿ ಒಳ್ಳೇ ಪರಿಣಾಮವಾಗಿ ಯಾವಾಗ ಕಲ್ಯಾಣಕ್ಕೆ ಹೋದೇನೋ ಅಲ್ಲಿರುವ ಶಿವಾನುಭವಮಂಟಪ ಕಂಡೇನೋ, ಯಾವಾಗ ಶರಣಶರಣೆಯರನ್ನು ಕೂಡಿಕೊಂಡೇನೋ ಎಂದು ಹಲವು ಬಗೆಯಾಗಿ ಹಗಲಿರುಳು ಹಂಬಲಿಸುತ್ತಿದ್ದಳು ಮಹಾದೇವಿ.

ಮಮತೆಯ ಮೂರ್ತಿಯಾದ ತಾಯಿಯು ವಾತ್ಸಲ್ಯದಿಂದ ಮಗಳಿಗೆ ಮದುವೆ ಯಾಗೆಂದು ಹೇಳಿದಾಗ 'ನನ್ನ ಜೀವನದಲ್ಲಿ ಒಂದೇ ಸಲ ಮದುವೆ ಅಮ್ಮ, ಈಗಾಗಲೇ ಚೆನ್ನಮಲ್ಲಿಕಾರ್ಜುನನೊಡನೆ ಆಗಿದೆಯಾದ್ದರಿಂದ ಮತ್ತೇಕೆ ಮದುವೆಯಾಗಬೇಕೆಂದು ಸುಮತಿಯನ್ನು ಪ್ರಶ್ನಿಸುವಳು ಮಹಾದೇವಿ.

"ನೀನು ಕೇಳಾತಾಯೆ: ಸಾವಿಲ್ಲದ ಕೇಡಿಲ್ಲದ, ರೂಹಿಲ್ಲದ ಚೆಲುವಂಗೆ ನಾನೊಲಿದೆ ಅವ್ವಾ....ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆನಾನು. ಚೆನ್ನಮಲ್ಲಿಕಾರ್ಜುನನೆ ಗಂಡನೆನಗೆ ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು" ಅನ್ನುವಳು ಮಹಾದೇವಿ.

ಮಹಾದೇವಿ ತಂದೆತಾಯಿಗಳನ್ನು ಧೈರ್ಯದಿಂದ ಎದುರಿಸಿದಷ್ಟು ಸಮಾಜವನ್ನು ಎದುರಿಸುವದು ಸುಲಭ ಸಾಧ್ಯವಾಗಿರಲಿಲ್ಲ. ಅಕ್ಕನ ಈ ವರ್ತನೆಯು ಲೋಕರೂಢಿಗೆ ಹೊರ್ತಾಗಿತ್ತು. ನೆರೆಹೊರೆಯವರು ಮಹಾದೇವಿಯನ್ನು ಕಂಡು ಅನೇಕ ನಿಂದೆ ದೂಷಣೆಯ ಮಾತುಗಳನ್ನು ಆಡುತ್ತಿದ್ದರು. ಲೋಕದವರ ಸ್ತುತಿ–ನಿಂದೆಗಳಿಗಾಗಿ ಹಿಗ್ಗು ಕುಗ್ಗು ಅಕ್ಕನಿಗೆ ಇರಲಿಲ್ಲ. 'ಬೆಟ್ಟದ ಮೇಲಿನ ಮನೆಯಲ್ಲಿದ್ದು ದುಷ್ಟಮೃಗಗಳಿಗಂಜಿದಡೆಂತು? ಸಮುದ್ರದ ದಂಡೆಯಲ್ಲಿ ವಾಸಿಸುತ್ತಿರುವಾಗ ತೆರೆ–ಬುದ್ಬುದುಗಳಿಗೆ ಅಂಜಿದಡೆಂತು?" ಎಂದು ಧೈರ್ಯವಾಗಿ ಮುಂದುವರೆಯುತ್ತ ತನ್ನ ನಿತ್ಯದ ಕೆಲಸ ಕಾರ್ಯಗಳಲ್ಲಿ, ಲಿಂಗಪೂಜೆ ಧ್ಯಾನಗಳಲ್ಲಿ ತನ್ಮಯಳಾಗಿ ಮುಂದುವರೆಯುತ್ತಾಳೆ ಅಕ್ಕ.

ಮಹಾದೇವಿಯಕ್ಕನ ಜೀವನದಲ್ಲಿಯ ದುಃಖದುಮ್ಮಾನ ಕಷ್ಟ–ಕಾರ್ಪಣ್ಯಗಳು ಇಷ್ಟಕ್ಕೆ ಮುಗಿಯಲಿಲ್ಲ. ಸಖಿಯರೊಡನೆ ವನಭೋಜನಕ್ಕೆ ಹೋದ ಮಹಾದೇವಿ ತಿರುಗಿ ಬರುವಾಗ ವಾಯು ಸೇವನೆಗೆಂದು ಹೊರಟ ಆ ಊರ ಕೌಶಿಕ ದೊರೆಯ ಕಾಮುಕ ದೃಷ್ಟಿ ಮಹಾದೇವಿಯ ಮೇಲೆ ಬಿತ್ತು. ಆಗ ಅವನ ಕಳವಳವು ಮೇರೆಮೀರಿತು. ಮಹಾರಾಜನು ಆ ಶಶಿಮುಖಿಯ ಸೌಂದರ್ಯದ ರಾಶಿಯನ್ನು ಕಂಡು ಮೋಹಗೊಂಡು ಆತನ ಚಿತ್ತ ಚಂಚಲವಾಗಿ ಬಂಗಾರದಂಥ ಮೈಬಣ್ಣ. ತೇಜಃಪುಂಜವಾದ ಮುಖಕಮಲ, ನಿರಾಡಂಬರ ಸುಂದರಿಯಾದ ಹೊರೆಗೂಡಲ ತರುಣಿ ಈಕೆ ಯಾರಿರಬಹುದು? ಎಂದು ದುರಾಸೆಯಿಂದ ಅವಳನ್ನು ಕೂಡಬೇಕೆಂದು ತವಕಪಡುವನು. ತನ್ನ ಸೇವಕರೊಡನೆ ಮಹಾದೇವಿಯ ಮತಾಪಿತರಿಗೆ ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡಬೇಕೆಂದು ಹೇಳಿಕಳಿಸುವನು. ಈ ಸುದ್ದಿ ತಿಳಿದ ಸುಮತಿ ನಿರ್ಮಲರಿಗೆ ಆಕಾಶವೇ ಮೈಮೇಲೆ ಕಳಚಿಬಿದ್ದಂತಾಯಿತು. ಆದರೂ ಧೈರ್ಯ ತಂದುಕೊಂಡು 'ಲಿಂಗಧಾರಿಯಲ್ಲದ ಭವಿಗೆ ಮಗಳನ್ನು ಕೊಡಬಾರದು' ಎಂದು ನಿಶ್ಚಯಿಸಿದರು. ಆದರೆ ದೊರೆಯ ಅರಸೊತ್ತಿಗೆಯ ಅಧಿಕಾರದ ಮುಂದೆ ಸಾಮಾನ್ಯ ಪ್ರಜೆಗಳಾದ ಇವರ ಆಟವು ನಡೆಯುವುದೆಂತು? ಮಹಾದೇವಿಯೇ ಈ ಪರಿಸ್ಥಿತಿಯನ್ನು ದೈವಲೀಲೆಯೆಂದು ಎದುರಿಸಲು ಮುಂದಾಗುವಳು. ಕೌಶಿಕನು ಹರಹಿದ ಈ ಕನಕದ ಕೋಳಗಳಿಂದ ಪಾರಾಗುವ ಪ್ರಯತ್ನವಿರಿಸಿಕೊಂಡು ಗುರುಗಳ ಸಲಹೆಯಂತೆ ತನ್ನ ಇಷ್ಟದೈವವನ್ನು ನಂಬಿ ಕೌಶಿಕನ ಅರಮನೆಗೆ ಹೋಗಲು ಸಿದ್ಧಳಾಗುವಳು. ಕಾಮಾಂಧನಾದ ಅರಸನಿಗೆ ಅಕ್ಕನು ತನ್ನ ಲಿಂಗ ಜಂಗಮ ಪೂಜೆಗೆ ಯಾವ ಅಡ್ಡಿ ಆತಂಕಗಳನ್ನು ಒಡ್ಡಬಾರದೆಂದೂ ಅಲ್ಲದೇ ನೀನು ಶಿವಭಕ್ತನಾಗಬೇಕೆಂದೂ ಹೇಳುವಳು. ಆಗ ಮದನನ ಬಲೆಯಲ್ಲಿ ಸಿಲುಕಿ ಮಬ್ಬುಗವಿದ ಅರಸ ಒಮ್ಮೆ ಮಹಾದೇವಿ

ನನಗೆ ವಶವಾದರೆ ನನ್ನ ಇಷ್ಟದಂತೆ ನಡೆಯಬಹುದೆಂದು ತಿಳಿದು ಆಕೆಯ ಎಲ್ಲ ಕೋರಿಕೆಗಳಿಗೆ ಒಪ್ಪುವನು.

ಯಾವಾಗಲೂ ಲಿಂಗ ಧ್ಯಾನ ಜಂಗಮಾರಾಧನೆಯಲ್ಲಿ ನಿರತಳಾಗಿರುತ್ತಿದ್ದ ಅಕ್ಕ ರಾಜನಿಗೆ ಒಲಿಯುವುದೆಂತು? ಇದರಿಂದ ಬೇಸರಗೊಂಡ ಕೌಶಿಕನು ಆಕೆಯ ಮನ ಒಲಿಸಲು ಶತ ಪ್ರಯತ್ನ ನಡೆಸಿ ತನ್ನ ದಾಸಿಯರನ್ನೂ ಹಾಗೂ ಮಹಾದೇವಿಯ ಗೆಳತಿಯರನ್ನೂ ಅಕ್ಕಮಹಾದೇವಿಯ ಹತ್ತಿರ ಕಳಿಸಿದಾಗ

"ಗಿರಿಯಲ್ಲದೆ ಹುಲ್ಲು ಮೊರಡಿಯಲ್ಲಾಡುವವೆ ನವಿಲು?
ಕೊಳಕ್ಕಲ್ಲದೆ ಕಿರಿವಳ್ಳಕ್ಕೆಳಸುವವೆ ಹಂಸೆ?
ಮಾಮರ ತಳಿತಲ್ಲದೆ ಸರಗೈಯುವೆ ಕೋಗಿಲೆ?
ಪರಿಮಳವಿಲ್ಲದ ಪುಷ್ಪಕ್ಕೆಳಸುವವೆ ಭ್ರಮರ?
ಎನ್ನ ದೇವ ಚನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವವೆ ಎನ್ನ ಮನ?
ಹೇಳಿರೆ ಕೆಳದಿಯರಿರಾ"

ಹೀಗೆ ಖಡಾಖಂಡಿತವಾಗಿ ತನ್ನ ಮನದ ಇಂಗಿತವನ್ನು ವ್ಯಕ್ತಪಡಿಸುತ್ತಾಳೆ ಅಕ್ಕ ಸಖಿಯರ ಮುಂದೆ

ಮನ್ಮಥನಿಗೆ ಮಾರು ಹೋದ ಕೌಶಿಕ ದೊರೆಯು ಮಹಾದೇವಿಯು ಏಕಾಂತದಲ್ಲಿರುವಾಗ ಆಕೆಯ ಜಪತಪ ನಿತ್ಯ ನಿಯಮಗಳನ್ನು ಲೆಕ್ಕಿಸದೆ ತನ್ನ ವಶವಾಗಬೇಕೆಂದು ಆಕೆಯ ಸೆರಗು ಹಿಡಿದು ಎಳೆಯುತ್ತಾ ಬಲಾತ್ಕಾರ ಮಾಡುವನು

ಎಮ್ಮೆಗೊಂದು ಚಿಂತೆ: ಸಮ್ಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ: ಕರ್ಮಿಗೊಂದು ಚಿಂತೆ
ಎನಗೆ ನನ್ನ ಚಿಂತೆ: ತನಗೆ ತನ್ನ ಕಾಮದ ಚಿಂತೆ,
ಒಲ್ಲೆ ಹೋಗು ಶರಗ ಬಿಡು ಮರುಳೆ
ಎನಗೆ ಚೆನ್ನಮಲ್ಲಿಕಾರ್ಜುನ ದೇವರು
ಒಲಿವರೊ ಒಲಿಯರೊ ಎಂಬ ಚಿಂತೆ.

ಬರಿಯ ಅಂಗ ಸೌಂದರ್ಯಕ್ಕೆ ಮನಸೋತ ಮರಳು ಮಾನವ ದುರುಳ ಅರಸನ ಹೇಯ ಕೃತಿಯನ್ನು ಅರಿತಳು. ವೀರ ವಿರಕ್ತೆಯಾದ ಅಕ್ಕ ಆತನು ಹಿಡಿದ ಶರಗನ್ನು ಬಿಡದಿದ್ದಾಗ ತನ್ನ ದೇಹದ ಪರಿವೆಯಿಲ್ಲದೆ ಅಂಗವಸ್ತ್ರವನ್ನೆಲ್ಲ ಕಳಚಿ ಬಿಟ್ಟು ದಿಗಂಬರೆಯಾದಳು. ಮಹಾದೇವಿಯ ಮೇರೆ ಮೀರಿದ ವೈರಾಗ್ಯವನ್ನು ಕಂಡು ಗದ ಗದ ನಡುಗಿದನು ಕೌಶಿಕ. "ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ ಸುಡಲೀ ದೇಹವ ಒಡಲುವಿಡಿದು ಕೆಡದಿರು ಚನ್ನಮಲ್ಲಿಕಾರ್ಜುನನರಿಯದ ಮರುಳೆ."

ರಾಜನಿಗೆ ಈ ರೀತಿ ತಿಳಿ ಹೇಳುತ್ತ ಅರಮನೆಯಿಂದ ಹೊರಬಿದ್ದು ಗುರುಲಿಂಗ ದೇವರ ಮಠಕ್ಕೆ ಬಂದು ಅವರ ದರ್ಶನ ಆಶೀರ್ವಾದವನ್ನು ಪಡೆದಳು. ಮಾಯದ ಮದವನ್ನು ಮುರಿದು, ಕಾಯದ ಕತ್ತಲೆಯ ಕಳೆದು, ಜೀವದ ಜಂಜಡವ ತೊರೆದು, ತಾಯಿ-ತಂದೆಗಳ ಮೋಹವನಳಿದು ಬಸವ ಕಲ್ಯಾಣದತ್ತ ನಡೆದಳು. ಅಕ್ಕನು ಉಡುತಡೆಯಿಂದ ಕಲ್ಯಾಣಕ್ಕೆ ಹೋಗುವ ಮಾರ್ಗದಲ್ಲಿ ಅನೇಕ ದಟ್ಟಡವಿ ಅರಣ್ಯ, ಬೆಟ್ಟ ಗುಹೆಗಳನ್ನು ತುಳಿಯುತ್ತ ಕೆರೆ ತೊರೆ ನದಿ ಸರೋವರಗಳನ್ನು ದಾಟುತ್ತ ಮಾರ್ಗದಲ್ಲಿ ಅನಂತ ಕಳ್ಳಕಾಕರು ಕಾಮುಕರು, ಬೇಟೆಯಾಡುವ ಬೇಡರು, ಮೀನ ಹಿಡಿಯುವ ಜಾಲಗಾರರಿಗೆಲ್ಲ ಸತ್ಯ ಅಹಿಂಸೆಯ ತತ್ವವ ಬೋಧಿಸಿ, ನೀತಿ ನಿರ್ಮಲತೆಯಲ್ಲಿರಿಸಿ ಅವರನ್ನು ಪರಿವರ್ತನೆಗೊಳಿಸಿದಳು ಮಹಾದೇವಿ.

ಪರಮಾತ್ಮನನ್ನು ಸ್ಮರಿಸುತ್ತ ಸಾಗಿರುವ ಅಕ್ಕನು ಅಲ್ಲಲ್ಲಿ ತರು ಮರ, ಗಿರಿ ಸರೋವರಗಳಲ್ಲಿ ಸರ್ವಾತ್ಮಭಾವದಿಂದ ಕಾಣುತ್ತಿದ್ದ ಗಿಳಿ ಕೋಗಿಲೆ,ಹಂಸ ಜೇನ್ನೊಣಗಳನೆಲ್ಲ ಪಲವು ಬಗೆಯಿಂದ ಬಣ್ಣಿಸುತ್ತ 'ಚನ್ನಮಲ್ಲಿಕಾರ್ಜುನನನ್ನು ನೀವು ಕಂಡಿರಾ? ನೀವು ಕಂಡಿರಾ?' ಎಂದು ಅಂಗಲಾಚಿ ಕೇಳುತ್ತಿದ್ದಳು. ಆ ಪಶು ಪಕ್ಷಿ, ಕ್ರಿಮಿ-ಕೀಟಕಗಳೆಲ್ಲ ತಮ್ಮ ಭಾಷೆಯಲ್ಲಿ ಉಲಿಯುತ್ತಿರುವ ಸೊಂಪಾದ ಇಂಪಾದ ಸ್ವರವನ್ನು ಆಲಿಸಿ ಆನಂದ ಭರಿತಳಾಗುತ್ತಿದ್ದಳು.

ದಾರಿಯಲ್ಲಿ ಕಂಡ ಹೊಳೆ ಹಳ್ಳ, ಝರಿ ದಭೆದಭೆಗಳಲ್ಲಿ ಸ್ನಾನ ಮಾಡಿ ಸರ್ವಾಂಗದಲ್ಲಿ ಭಸ್ಮವಧರಿಸಿಕೊಂಡು ಕಾನನದಲ್ಲಿಯ ಹೂ, ಪತ್ರೆ ಧರಿಸಿ ಲಿಂಗ ಪೂಜೆಯ ಮಾಡುತ್ತಿದ್ದಳು. ಅಲ್ಲಿರುವ ಗಿಡ ಮರಗಳಲ್ಲಿಯ ಹಣ್ಣು ಹಂಪಲಗಳನ್ನು ನೈವೇದ್ಯ ಮಾಡಿ ಆ ಪ್ರಸಾದವನ್ನು ತಾನೂ ಸ್ವೀಕರಿಸುತ್ತಿದ್ದಳು ಆ ಮಹಾತಾಯಿ.

ಬಸವ ಕಲ್ಯಾಣಕ್ಕೆ ಹೋಗಬೇಕೆಂಬ ಆತುರತೆಯಲ್ಲಿ ಛಳಿ ಮಳೆ, ಗಾಳಿ ಬಿಸಿಲು ಸಹಿಸುತ್ತ ಮಾರ್ಗಾಯಾಸದ ಪರಿವೆಯಿಲ್ಲದೆ ಬಹು ದೂರ ದಾರಿಯನ್ನು ನಡೆದು ಬಂದಳು. ಕಲ್ಯಾಣದ ಸಮೀಪಕ್ಕೆ ಬಂದಾಗ ಆ ಮಹಾಮಾತೆಗೆ ಹಿಗ್ಗಿನ ಬುಗ್ಗೆಯಿಂದ ಆನಂದ ಭಾಷ್ಪಗಳು ಆಲಿ ತುಂಬಿ ಬಂದವು.

ಬಸವಣ್ಣನವರ ಅನುಭವಮಂಟಪವೆಂದರೆ ಅದೊಂದು ಆಧ್ಯಾತ್ಮ ವಿದ್ಯಾಭ್ಯಾಸದಲ್ಲಿ ಮುಂದುವರೆಯುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯವಾಗಿತ್ತು. ವೀರಶೈವ ಧರ್ಮವೆಂಬ ವಿಶ್ವಧರ್ಮದ ಬಗೆಗೆ ಉಚ್ಚಶಿಕ್ಷಣ ಹೊಂದುವ ಸದಿಚ್ಛೆ ಉಳ್ಳವರೆಲ್ಲ ಇಲ್ಲಿಗೆ ಧಾವಿಸಿ ಬರುತ್ತಿದ್ದರು. ಜಾತಿ-ವಿಜಾತಿ, ಬಡವ-ಬಲ್ಲಿದ, ಬಾಲವೃದ್ಧ, ಕುರೂಪಿ-ಸುರೂಪಿ, ಸ್ತ್ರೀ-ಪುರುಷರೆಂಬ ವರ್ಗ ವರ್ಣ ವಯೋಮಿತಿಗಳ ಭಿನ್ನಭೇದವಿಲ್ಲದೆ ಬಸವ ಗುರುವಿನ ಮಹಾ ಮನೆ ಎಲ್ಲರಿಗೂ ಮುಕ್ತ ದ್ವಾರವಾಗಿತ್ತು. ಸದಾಚಾರ ಸದ್ಭಕ್ತಿ ಸುನೀತಿವಂತರು ಯಾರೇ ಇರಲಿ ಅವರು ಇಷ್ಟಲಿಂಗ ಪಡೆಯಲು ಅರ್ಹರು. ನೀತಿ-ಜ್ಞಾನಗಳ ದ್ಯೋತಕವೇ ಇಷ್ಟಲಿಂಗ

“ಎನ್ನ ಅಂಗದಲ್ಲಿ ಆಚಾರವ ತೋರಿದನಯ್ಯಾ ಬಸವಣ್ಣನು
ಆ ಆಚಾರವನೆ ಲಿಂಗವೆಂದು ಅರುಹಿದನಯ್ಯಾ ಬಸವಣ್ಣನು
ಎನ್ನ ಪ್ರಾಣದಲ್ಲಿ ಅರಿವ ತೋರಿದನಯ್ಯಾ ಬಸವಣ್ಣನು
ಆ ಅರುವೆ ಜಂಗಮವೆಂದರುಹಿದನಯ್ಯಾ ಬಸವಣ್ಣನು
ಚನ್ನಮಲ್ಲಿಕಾರ್ಜುನಯ್ಯಾ
ಎನ್ನ ಹೆತ್ತ ತಂದೆ ಸಂಗನ ಬಸವಣ್ಣನು
ಎನಗೀ ಕ್ರಮವನರುಹಿದನಯ್ಯಾ ಪ್ರಭುವೆ”

ಬಸವಣ್ಣನ ಭಕ್ತಿ, ಚನ್ನಬಸವಣ್ಣನ ಜ್ಞಾನ, ಮಡಿವಾಳಯ್ಯನ ನಿಷ್ಠೆ. ಪ್ರಭುದೇವರ ಜಂಗಮಸ್ಥಲ, ಅಜಗಣ್ಣನ ಐಕ್ಯಸ್ಥಲ, ನಿಜಗುಣನ ಆರೂಢಸ್ಥಲ, ಸಿದ್ಧರಾಮಯ್ಯನ ಸಮಾಧಿ ಸ್ಥಲ ಇವರೆಲ್ಲರ ಕರುಣ ಪ್ರಸಾದ ಪಡೆಯಲು ಮಹಾದೇವಿಯಕ್ಕ ಸಕಲ ಪ್ರಮಥ ಗಣವಿದ್ದ ಕಲ್ಯಾಣಪಟ್ಟಣಕ್ಕೆ ಬಂದಳು.

ಅಕ್ಕಮಹಾದೇವಿಯು ಆಗಮನವನ್ನು ಅರಿತ ಅನುಭವಮಂಟಪ ರೂವಾರಿ ಬಸವಣ್ಣನವರು ಅಲ್ಲಿ ಶೂನ್ಯ ಸಿಂಹಾಸನವನ್ನು ಅಲಂಕರಿಸಿದ ಅಲ್ಲಮಪ್ರಭುಗಳವರಿಗೆ ದೇವದೇವಾ; ಭಕ್ತಿಯ ಭಾಗ್ಯವೆನಿಪ, ಮುಕ್ತಿಯ ತವರ್ಮನೆಯೆನಿಪ, ಶಿವಭಾವ ಸಂಪನ್ನೆ, ಪ್ರಸಾದದ ಮೇರುವೆ, ತತ್ವಶಿಖಾಮಣಿ, ಪುಣ್ಯದ ಪುಂಜೆ, ನೈಷ್ಠೆಯ ಖಣಿ, ಸತ್ಯದ ಸದನ, ಶಾಂತಿಯ ನಿಧಿ, ಚಿದಂಬರ ಸಂಯುತೆ, ಸ್ವಾನುಭಾವದ ಸಾಗರೆ ನಿತ್ಯದ ನಿವಾಸೆಯೆನಿಪ ಮಹಾದೇವಿ ಅಕ್ಕನವರು ಇತ್ತ ಕಡೆಗೆ ಬರುತ್ತಿರುವರೆಂದು ಅಕ್ಕನ ವ್ಯಕ್ತಿತ್ವದ ಮಹತಿಯನ್ನು ಹಲವು ಬಗೆಯಿಂದ ಬಣ್ಣಿಸಿ ಹೇಳುತ್ತ ಶರಣ ಕಿನ್ನರಿ ಬೊಮ್ಮಣ್ಣನಿಂದ ಆಕೆಯನ್ನು ಕರೆಯ ಕಳಹುವರು.

ಅಕ್ಕನವರು ಮಹಾಮನೆಗೆ ಆಗಮಿಸಿದಾಗ ಲಿಂಗವಂತ ತತ್ವಗಳ ಪ್ರಯುಕ್ತ ಚರ್ಚಾಗೋಷ್ಠಿಯಲ್ಲಿ ತೊಡಗಿದ್ದ ಶಿವಶರಣ ಶರಣೆಯರೆಲ್ಲರೂ ಅಕ್ಕನನ್ನು ಅತ್ಯಂತ ಆದರದ ಭಾವನೆಯಿಂದ ಕಂಡು ಸಂಭ್ರಮದ ಸ್ವಾಗತ ನೀಡಿದರು. ಮಹಾದೇವಿ ಅಕ್ಕನೂ ಸಹ ಅಸಖ್ಯಾಂತರ ಸಮೂಹವನ್ನು ಪೂಜ್ಯಭಾವನೆಯಿಂದ ಕಣ್ತುಂಬಾ ಕಂಡು, ಮನ ತುಂಬಾ ನೆನೆದು, ಬಾಯಿತುಂಬಾ ಕೊಂಡಾಡಿದಳು.

“ಆಡುವುದು ಹಾಡುವುದು ಹೇಳುವುದು ಕೇಳುವುದು
ನಡೆವುದು ನುಡಿವುದು
ಸರಸ ಸಮ್ಮೇಳವಾಗಿಪ್ಪುದಯ್ಯಾ ಶರಣರೊಡನೆ.
ಚನ್ನಮಲ್ಲಿಕಾರ್ಜುನಯ್ಯಾ ನೀಕೊಟ್ಟ ಆಯುಷ್ಯವುಳ್ಳನ್ನಕ್ಕರ
ಲಿಂಗ ಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು”

ಅಕ್ಕಮಹಾದೇವಿಗೆ ಅನುಭವಮಂಟಪದಲ್ಲಿ ಅಗ್ನಿಪರೀಕ್ಷೆಯು ಕಾದು ಕೊಂಡು ಕುಳಿತಿತ್ತು; ಅಲ್ಲಮ ಪ್ರಭುಗಳು ಮಾತ್ರ ಅಕ್ಕನನ್ನು ಒರೆಗಲ್ಲಿಗೆ ಹಚ್ಚಿ ಪರೀಕ್ಷಿಸಲು ಶರಣ ಸಮೂಹದೆದುರು ಆಕೆಯನ್ನು ಈ ರೀತಿಯಾಗಿ ಪ್ರಶ್ನಿಸುವರು.

"ಉದ ಮದದ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ? ಸತಿಯೆಂದರೆ ಮುನಿವರು ನಮ್ಮ ಶರಣರು ನಿನ್ನ ಪತಿಯ ಗುರುತು ಹೇಳಿದರೆ ಕುಳ್ಳಿರು ಅಲ್ಲದಿರೆ ತೊಲಗು ತಾಯೆ. ನಮ್ಮ ಗುಹೇಶ್ವರನ ಶರಣರಲ್ಲಿ ಸಂಗ ಸುಖ ಸನ್ನಿಹಿತವ ಬಯಸುವರೆ ನಿನ್ನ ಪತಿ ಯಾರೆಂಬುದು ಹೇಳಾ ಎಲೆ ಅವ್ವಾ."

ಇದರಿಂದ ಅಕ್ಕ ಎಳ್ಳಷ್ಟು ಸಹ ವಿಚಲಿತಳಾಗದೆ ಅಲ್ಲಿಯು ಭಕ್ತಿ ಭಾವದ ಸತ್ವ ಶಕ್ತಿಯೇ ಜಾಗೃತಗೊಂಡು ಈ ತೆರನಾಗಿ ವಾಕ್‌ಪುಷ್ಪಗಳನ್ನು ಸುರಿಸುವಳು:

"ಗುರವೆ ತೆತ್ತಿಗನಾದ ಲಿಂಗವೆ ಮದುವಳಿಗನಾದ
ನಾನು ಮದುವಳಿಗೆಯಾದೆನು ಈ ಭುವನವೆಲ್ಲ ಅರಿಯಲು
ಅಸಂಖ್ಯಾತರೆನಗೆ ತಾಯಿ ತಂದೆಗಳು ಕೊಟ್ಟರು ಪ್ರಭುವಿನ ಮನೆಗೆ
ಸಾದೃಶ್ಯವಪ್ಪ ವರನ ನೋಡಿ, ಇದು ಕಾರಣ ಚನ್ನಮಲ್ಲಿಕಾರ್ಜುನ ಗಂಡ ನೆನಗೆ
ಮಿಕ್ಕಿನ ಲೋಕದ ಗಂಡನೆನಗೆ ಸಂಬಂಧವಿಲ್ಲವಯ್ಯ ಪ್ರಭುವೆ"

ಪ್ರಭುಗಳು ಲಿಂಗಧಾರಣವಾಗದೆ ಇದ್ದ ಕೌಶಿಕ ರಾಜನ ಮೇಲೆ ನೀನು ತಪ್ಪು ಹೊರಿಸಿ ಆತನನ್ನು ಮದುವೆ ಆಗದೆ ನೀನು ವಿರಕ್ತಳೆಂದು ದಿಗಂಬರೆಯಾಗಿ ಬಂದಿರುವೆ. ತನು ಸೀರೆಯ ಬಿಟ್ಟರೇನು? ನಿನ್ನ ಮನದ ಭ್ರಾಂತಿ ಅಳಿದಿರುವದಿಲ್ಲ ಕೇಶವೆಂಬ ಸೀರೆಯಿಂದ ದೇಹವನ್ನು ಮುಚ್ಚಿಕೊಂಡಿರುವೆ ಆದರೆ ನೀನು ಅಭಿಮಾನವೆಂತು ಬಿಟ್ಟಿರುವೆ? ಹೀಗೆ ಅಕ್ಕನನ್ನು ಅತ್ಯಂತ ಜರಿದು ಝಂಕಿಸಿ ಮಾತನಾಡುವರು. ಆಗ ಮಹಾದೇವಿ "ಕಾಯ ಕರ್ರನೆ ಕಂದಿದರೇನು ಮಿರ್ರನೆ ಮಿಂಚಿದರೇನು? ಅಂತರಂಗ ಶುದ್ಧವಾದ ಬಳಿಕ ದೇವ ನೊಲಿದ ಕಾಯ ಹೇಗಿದ್ದಡೇನು" ಎಂಬು ಸ್ವಚ್ಛ ಹೃದಯದಿಂದ ಧೈರ್ಯವಾಗಿ ನುಡಿಯುವಳು.

ಗಂಧದ ಕೊರಡನ್ನು ನೀರಿನೊಡನೆ ಸಾಣೆಯಕಲ್ಲ ಮೇಲೆ ಸಣ್ಣಾಗಿ ಅರೆಮದಲ್ಲದೆ ಆ ಕೊರಡನ್ನು ನುಚ್ಚುನೂರು ಮಾಡಿ ಕಿಚ್ಚಿನಲ್ಲಿ ಹಾಕಿದರೂ ಸಹ ಅದು ತನ್ನ ಸುವಾಸನೆ ಯನ್ನು ಬಿಡದಂತೆ, ಬಂಗಾರವನ್ನು ಬೆಂಕಿಯಲ್ಲಿ ಕಾಸಿ ಕರಗಿಸಿ ಕಬ್ಬಿಣದ ಸುತ್ತಿಗೆಯಿಂದ ಧಣ್ ಧಣ್ ಎಂದು ಬಲವಾದ ಪೆಟ್ಟು ಹಾಕಿದರೂ ನೊಂದು ಬೆಂದ ಚಿನ್ನವು ತನ್ನ ಬಣ್ಣ ವನ್ನು ಪ್ರಕಾಶಿಸುವಂತೆ, ಕಬ್ಬಿನ ಕೋಲನ್ನು ತುಂಡು ತುಂಡಾಗಿ ಕಡಿ ಕಡಿದು ಕತ್ತರಿಸಿ ಗಾಣದಲ್ಲಿ ಅರೆದು ಅದರ ಇನಿದಾದ ರಸವನ್ನು ಕೊಪ್ಪರಿಗೆಯಲ್ಲಿ ಕಳ ಕಳ ಕುದಿಸಿದರೂ

ಅದು ಸೀಯಾದ ಬೆಲ್ಲ ಸಕ್ಕರೆಯಾಗಿ ಸದ್ವಿನಿಯೋಗವಾಗುವಂತೆ ಪ್ರಭುಗಳ ಅಣಕದ ಮಾತೆಂಬ ಮಥನದ ಒರೆಗಲ್ಲಿನಲ್ಲಿ ವಿಜಯ ಹೊಂದಿ ದಿವ್ಯ ಜ್ಯೋತಿಯಾಗಿ ಬೆಳಗಿದಳು ಮಹಾತಾಯಿ ಮಹಾದೇವಿ. "....ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ಗುಹೇಶ್ವರ ಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀ ಪಾದಕ್ಕೆ ನಮೋ ನಮೋ" ಎಂದು ಮಣಿದರು ಪ್ರಭುದೇವರು.

ಅಕ್ಕನ ಅಲೌಕಿಕ ಮದುವೆ, ಗಂಡನ ಪರಿಚಯವನ್ನು ಕೇಳಿ ತಿಳಿದು ಆಕೆಯ ವೀರ ವೈರಾಗ್ಯದ ಆದರ್ಶ ಬಾಳನ್ನು ಕಂಡು ಪ್ರಭು, ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳಯ್ಯ ಮೊದಲಾದ ಅಮರ ಶರಣರು ತಲೆದೂಗಿದರು, ಅಕ್ಕನಿಗೆ ಶರಣೆಂದು ಶಿರಬಾಗಿಸಿದರು. "ಹೆಂಗೂಸಿನಂಗವ ನೋಡಿರೆ ಪುರಾತನರು ಬಾಲತನದಂಗವ ನೋಡಿರೆ ಶರಣರು, ಬ್ರಹ್ಮವನಾಚರಿಸಿ ತನ್ನ ಮರೆದಿಪ್ಪುದು ನೋಡಿರೆ ಲಿಂಗವಂತರು" ಎಂದು ಕೊಂಡಾಡಿದರು ಬಸವಣ್ಣನವರು. 'ಕೂಡಲ ಚನ್ನಸಂಗಯ್ಯನಲ್ಲಿ ಬೆರಸಿ ಬೇರಿಲ್ಲದಿಪ್ಪ ಹಿರಿಯತನ ಮಹಾದೇವಿಯಕ್ಕನಿಗಾಯಿತ್ತು' ಅಂದವರು ಚನ್ನಬಸವಣ್ಣನವರು, "....ಹೆಣ್ಣು ಹೆಣ್ಣಲ್ಲ' ಹೆಣ್ಣು ರಕ್ಕಸಿಯಲ್ಲ ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನಾ" ಈ ರೀತಿ ಹೆಣ್ಣನ್ನು ಶಿವಸ್ವರೂಪದಲ್ಲಿ ಕಂಡವರು ಸಿದ್ಧರಾಮ ಶಿವಯೋಗಿಗಳು.

ಅಷ್ಟಮದ ಅರಿಷಡ್ವರ್ಗವೆಂಬ ದುಷ್ಟ ಕಾಡು ಮೃಗಗಳನ್ನು ತನ್ನ ಹತ್ತಿರ ಸುಳಿಯ ದಂತೆ ಹೊಡೆದೋಡಿಸಿದ ಅಕ್ಕನಿಗೆ ಅರಿವು-ಆಚಾರ, ಸದ್ಭಾವ-ಸದ್ಭಕ್ತಿ ಸುನೀತಿ ನಿಯಮ ಗಳು ಆಕೆಗೆ ಕೈವಶವಾಗಿ ಮೈಗೂಡಿದವು.

ಮಹಾದೇವಿ ಅಕ್ಕನಿಗೆ ಬಸವಣ್ಣನ ಮೇಲೆ ಅಗಾಧವಾದ ಭಕ್ತಿ, ನಿಸ್ಪೃಹ ಪ್ರೇಮ ಇದ್ದು ಬಸವಣ್ಣನಿಂದಲೇ ತನ್ನ ಜನ್ಮವು ಪಾವನವಾಯಿತೆಂದು ಹಾಡಿಕೊಂಡಿದ್ದಾಳೆ. "ಬಸವಣ್ಣಾ ನಿಮ್ಮಂಗದಾಚಾರವ ಕಂಡು ಎನಗೆ ಲಿಂಗ ಸಂಗವಾಯಿತ್ತು, ನಿಮ್ಮ ಮನದ ಸುಜ್ಞಾನವ ಕಂಡು ಎನಗೆ ಜಂಗಮ ಸಂಬಂಧವಾಯಿತ್ತು....ಚನ್ನಮಲ್ಲಿಕಾರ್ಜುನಯ್ಯನ ಹೆಸರಿಟ್ಟ ಗುರು ನೀವಾದ ಕಾರಣ ನಿಮ್ಮ ಶ್ರೀ ಪಾದಕ್ಕೆ ನಮೋ ನಮೋ ಎನುತಿರ್ದೆನು ಕಾಣಾ ಸಂಗನ ಬಸವಣ್ಣಾ"

ಅಕ್ಕ ಕಲ್ಯಾಣದ ಶರಣ ಶರಣೆಯರ ಸಮೂಹದಲ್ಲಿ ಹಲವು ಕಾಲ ಉಳಿದಳು ಲಿಂಗವಂತ ಧರ್ಮದಲ್ಲಿ ಅತಿ ಶ್ರೇಷ್ಠವೆನಿಸಿದ ಅಷ್ಟಾವರಣಗಳಾದ ಗುರು–ಲಿಂಗ–ಜಂಗಮ– ಪಾದೋದಕ, ಪ್ರಸಾದ, ಮಂತ್ರ, ವಿಭೂತಿ, ರುದ್ರಾಕ್ಷಿ ಈ ಎಂಟು ಹೊದಿಕೆಯಲ್ಲಿ ನಿಷ್ಠೆ ಬಲಿಸಿಕೊಂಡಳು. ಷಟ್‌ಸ್ಥಲಗಳಾದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಆರು ಸ್ಥಲಗಳನ್ನು ಅಳವಡಿಸಿಕೊಂಡಳು. ಪಂಚ ಆಚಾರಗಳಾದ ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಭೃತ್ಯಾಚಾರಗಳನ್ನು ಪಾಲಿಸಿದಳು ಪಂಚಸೂತಕ ಗಳಾದ ಜಾತಿ–ಜನನ, ಮರಣ, ಉಚ್ಛಿಷ್ಟ, ರಜವೆಂಬ ಐದು ಮೈಲಿಗೆಗಳನ್ನು ಅಳಿದಳು.

ಪರಮ ಗುರು ಅಲ್ಲಮಪ್ರಭುದೇವರಿಂದ ಲಿಂಗೈಕ್ಯದ ಸ್ಥಿತಿಗತಿಯನ್ನು ಅರಿತು ಕೊಂಡ ಅಕ್ಕ ಲಿಂಗಾಂಗ ಸಮರಸ ಹೊಂದಲು ಶ್ರೀಶೈಲದಲ್ಲಿರುವ ಕದಳಿವನಕ್ಕೆ ಹೊರಡು ವಳು. ತನ್ನನ್ನು ಹೊತ್ತು ಹೆತ್ತು ಸಾಕಿ ಸಲುಹಿದ ತಂದೆ–ತಾಯಿಗಳನ್ನು ಉಡುತಡಿಯಿಂದ ಸುಲಭವಾಗಿ ಬಿಟ್ಟು ಬಂದ ಮಹಾದೇವಿ ಪಾರಮಾರ್ಥದ ಬಂಧು–ಬಳಗವಾದ ಶರಣ ತಿಂಥಿಣಿಯನ್ನು ಅಗಲಲಾರದೆ "....ಅಯ್ಯಾ ನಿಮ್ಮ ಮಹಂತರ ಕೂಡಿ ಅಗಲುವ ದಾವತಿ ಗಿಂತ ಸಾವುದೆ ಕರಲೇಸಯ್ಯಾ ಚನ್ನಮಲ್ಲಿಕಾರ್ಜುನಾ...." ಹೀಗೆ ಹಲುಬಿ ಹಂಬಲಿಸಿ ಕಳವಳ ಪಡುತ್ತಾಳೆ ಆ ತಾಯಿ; ಪಡದಿರಲು ಹೇಗೆ ಸಾಧ್ಯವಾದೀತು? ಸದ್ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ ಪರಮಾರ್ಥವೆಂಬ ಸಕ್ಕರೆಯನಿಕ್ಕಿ ಸಲುಹಿ ತನ್ನನ್ನು ಅಮರಳನ್ನಾಗಿ ಮಾಡಿದ ಆಧ್ಯಾತ್ಮ ತಂದೆ–ತಾಯಿಗಳ ಆತಿಥ್ಯ, ಪಾಲನೆ, ಪೋಷಣೆಯನ್ನು ಹೇಗೆ ಮರೆತಾಳು ಆ ಮತಿವಂತೆ? ತನ್ನ ಕಳುಹಲು ಬಂದ ಶರಣ ಸಮೂಹದೆದುರು "....ಬಸವಣ್ಣ ಮೆಚ್ಚುವಂತೆ ಒಗತನವ ಮಾಡುವೆ ಚನ್ನಮಲ್ಲಿಕಾರ್ಜುನನೆಂಬ ಪತಿಯ ಕರಪಿಡಿದು ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲತಾರೆನು" ಎಂದು ವಚನವೀಯು ತ್ತಾಳೆ. ಅದರಂತೆಯೆ ಲಿಂಗಪತಿಗೆ ಶರಣಸತಿಯಾಗಿ ಆದರ್ಶ ಬಾಳು ನಡೆಸುತ್ತಾಳೆ. ಮಹಾದೇವಿ ಅಕ್ಕನನ್ನು ಕಳುಹಿಸಿಕೊಡುವದು ಕಲ್ಯಾಣದ ಶರಣರಿಗೂ ಕೂಡಾ ಅಷ್ಟೇ ವ್ಯಥೆಯಾಗಿತ್ತು. ಆದರೆ ಅವಳ ಜೀವನದ ಸಫಲತೆಗಾಗಿ ಅವರೆಲ್ಲರೂ ಅಗಲುವಿಕೆಯ ನೋವನ್ನು ಸಹಿಸಿಕೊಳ್ಳುತ್ತಾರೆ.

ಎಂದಿನಿಂದಲೂ ಪುರುಷನು ಸ್ತ್ರೀಯಳಿಗೊಡ್ಡಿದ ಪರದಾಸ್ಯ ಶೃಂಖಲೆಯನ್ನು ಅಕ್ಕ ಕತ್ತರಿಸಿ ಕಿತ್ತೆಸೆದಳು, ಜಗತ್ತಿನ ಮಹಿಳಾ ಮಣಿಗಳನ್ನು ಜಾಗೃತಗೊಳಿಸಿದಳು, ಕಾಮಾರಿ ಯನ್ನು ಗೆಲಿದು ಸೋಮಧರನ ಹಿಡಿದು ತಂದಳು ಬಸವಣ್ಣನ ಕೃಪೆಯಿಂದ. ತಾನು ನಾಮದಲ್ಲಿ ಹೆಂಗೂಸಾದರೂ ಭಾವಿಸಲು ಗಂಡು ರೂಪು ಎಂದು ಘಂಟಾಘೋಷವಾಗಿ ಸಾರಿದಳು ಗಂಡೆದೆಯ ಮಾತೆ.

ಅಕ್ಕನು ವಚನಕಾರ್ತಿಯಲ್ಲದೆ ಅನೇಕ ಪದ ಪದ್ಯಗಳನ್ನು ರಚಿಸಿರುವಳು. ತನ್ನಲ್ಲಿಯೇ ಪರವಸ್ತುವನ್ನು ಕಂಡು ಕೊಂಡ ಶಿವಯೋಗಿಣಿಯಾದ ಮಹಾದೇವಿ ತನ್ನ ಯೋಗಾಂಗ ತ್ರಿವಿಧಿಯಲ್ಲಿ ಹೀಗೆ ಹಾಡಿದ್ದಾಳೆ

"ಅಷ್ಟದಳ ಕಮಲದ ಬಟ್ಟ ಬಯಲೊಳಗೊಂದು
ಮಟ್ಟ ಬಾರದ ಘನವಿಹುದು ಅದರೊಳಗೆ
ದೃಷ್ಟಿ ಇಟ್ಟವನೆ ನಿಜಮುಕ್ತ"

ಅಕ್ಕನು ಕದಳಿವನಕ್ಕೆ ಹೋಗಿ ಮುಟ್ಟುವದು ತುಂಬಾ ಕಷ್ಟಕರವಾಗಿದ್ದಿತು. ಅಕ್ಕನ ವ್ಯಕ್ತಿತ್ವದ ಮುಂದೆ ಆಕೆಗೆ ಒದಗಿ ಬಂದ ಕಷ್ಟ ನಷ್ಟಗಳೆಲ್ಲವೂ ತೃಣ ಸಮಾನವಾಗಿದ್ದವು. ಪರ್ವತ ಶಿಖರವನ್ನು ಏರಿ ಇಳಿದು ಕೊಳ್ಳಗಳನ್ನು ದಾಟಿ ಕದಳಿಯ ಬನವನ್ನು ಮುಟ್ಟಿದಾಗ ಆಕೆಗುಂಟಾದ ಆನಂದವು ಅಷ್ಟಿಷ್ಟಲ್ಲ.

"ವನವೆಲ್ಲಾ ಕಲ್ಪತರು, ಗಿಡವೆಲ್ಲಾ ಮರುಜೀವಣಿ,
ಶಿಲೆಗಳೆಲ್ಲಾ ಪರುಷ, ನೆಲವೆಲ್ಲಾ ಅವಿಮುಕ್ತ ಕ್ಷೇತ್ರ,
ಜಲವೆಲ್ಲಾ ನಿರ್ಜರಾಮೃತ, ಮೃಗವೆಲ್ಲಾ ಪುರುಷಾಮೃಗ,
ಎಡಹುವ ಹರಳೆಲ್ಲಾ ಚಿಂತಾಮಣಿ
ಚನ್ನಮಲ್ಲಿಕಾರ್ಜುನಯ್ಯನ ನಚ್ಚಿನಗಿರಿಯ ಸುತ್ತಿ, ನೋಡುತ್ತ ಬಂದು
ಕದಳಿಯ ಬನವ ಕಂಡೆನು"

ಪದ್ಮಾಸನಹಾಕಿ ಕುಳಿತು ಅಂಗೈಯ್ಯಲ್ಲಿರುವ ಲಿಂಗದೇವನಿಗೆ ಅನಿಮಿಷ ದೃಷ್ಟಿಯಿಟ್ಟು ಲಿಂಗ ಧ್ಯಾನದಲ್ಲಿ ತನ್ಮಯಳಾದ ಅಕ್ಕ

ಲಿಂಗವೆನ್ನೆ ಲಿಂಗೈಕ್ಯವೆನ್ನೆ ಸಂಗವೆನ್ನೆ ಸಮರಸವೆನ್ನೆ
ಆಯಿತ್ತೆನ್ನೆ ಆಗದೆನ್ನೆ, ನೀನೆನ್ನೆ ನಾನೆನ್ನೆ
ಚನ್ನಮಲ್ಲಿಕಾರ್ಜುನಯ್ಯಾ,
ಲಿಂಗೈಕ್ಯವಾದ ಬಳಿಕ ಏನೂ ಎನ್ನೆ

ಅಕ್ಕಮಹಾದೇವಿಯು ಸರ್ವಾಂಗವೆಲ್ಲ ಲಿಂಗಮಯವಾಗಿ ಲಿಂಗದೊಳಗೆ ಕೂಡಿದಾಗ ಉರಿ ಕರ್ಪೂರ ಸಂಯೋಗದಂತೆ, ಚಿನ್ನ ಬಣ್ಣದಂತೆ, ದೀಪ ದೀಪ್ತಿಯಂತೆ ಪುಷ್ಪ ಪರಿಮಳ ದಂತೆ, ಹಾಲಿನಲ್ಲಿ ಹಾಲು ಸೇರಿ ಒಂದಾದಂತೆ ಲಿಂಗದೊಳಗೆ ಸಮರಸ ಹೊಂದಿದಳು ಜ್ಯೋತಿಯಲ್ಲಿ ಜ್ಯೋತಿ ಲೀನವಾಗಿ ಪರಂಜ್ಯೋತಿಯಾದಳು ಮಹಾತಾಯಿ.

□ □

ಶಿವಶರಣರ ನವಸಮಾಜ ನಿರ್ಮಾಣದಲ್ಲಿ ಮಹಿಳೆಯರು

—ಡಾ. ಶಶಿಕಲಾ ಮೋಲ್ದಿ

ಮಾನವ ಇತಿಹಾಸ ಸಂಪುಟಗಳನ್ನು ಹಿಂತಿರುವಿ ನೋಡಿದಾಗ, ಅಲ್ಲಿ ಜ್ಞಾನಿಗಳು ದಾನಿಗಳು ವೀರರು ಧೀರರು ಮನು, ಮುನಿಗಳು ಕವಿಕಲಾಕಾರ, ರಾಜ ಮಹಾರಾಜರು ಕುಲೋದ್ಧಾರಕರು ಸಮಾಜ ಸುಧಾರಕರು ದೇಶಭಕ್ತರು ಮುಂತಾಗಿ ಬಗೆ ಬಗೆಯ ಅನೇಕ ಮಹಾಪುರುಷರ ಹೆಸರುಗಳು ಸಿಕ್ಕುತ್ತವೆ. ಆದರೆ ಹುಡುಕಿ ನೋಡಿದರೂ ಅಲ್ಲಿಯ ಯಾವ ವರ್ಗದಲ್ಲೂ ಮಹಿಳೆಯರ ಹೆಸರು ಸಿಕ್ಕುವುದು ಕಷ್ಟ. ಹೆಸರುಗಳಿದ್ದರೂ ಅದು ಸೀತಾ ಸಾವಿತ್ರಿ ಅನಸೂಯಾದಿ ಪತಿಪರಾಯಣೆಯರಾದ ಪೌರಾಣಿಕ ಸ್ತ್ರೀಯರ ಹೆಸರುಗಳು ಮಾತ್ರ. ದೀರ್ಘಕಾಲ ತಪಸ್ಸು ಮಾಡಿದ ಧೀರ ಮಹಿಳೆಯರಿಲ್ಲ. ಗಾರ್ಗಿ ಮೈತ್ರೇಯಿಯರನ್ನುಳಿದು ಧರ್ಮತತ್ತ್ವ ವಿಚಾರ ಗೋಷ್ಠಿ ಚರ್ಚೆಗೈದ ಮಹಿಳೆಯರಿಲ್ಲ. ನೃತ್ಯ ಸಂಗೀತ ಕ್ಷೇತ್ರದಲ್ಲಿ ಅವಳಿಗೆ ಪ್ರೀತಿಯಿದ್ದಿತ್ತಾದರೂ ಕಲಾಪರಿಣಿತರು, ಕಲಾಜ್ಞಾನಿಗಳ ಸಾಲಿನಲ್ಲಿ ಅವಳಿಲ್ಲ, ಚಿತ್ರ ಶಿಲ್ಪ ಆದಿ ಇತರ ಕಲೆಗಳಲ್ಲಿ ಸಾಹಿತ್ಯ ರಂಗದಲ್ಲೂ ಅವಳು ಪ್ರವೇಶಿಸಲಿಲ್ಲ. ಪ್ರವೇಶ ಪಡೆಯುವುದು ಅವಳಿಗೆ ಸಾಧ್ಯವಾಗಲಿಲ್ಲ. ಮನೆ ಮಕ್ಕಳ ಸುತ್ತಮುತ್ತ ಅವಳ ಇರವು ಅವಳ ಕರ್ತವ್ಯ. ಅದರ ಹೊರಗೆ ಅವಳು ಬರುವಂತಿಲ್ಲ. ಏಕೆ ಹೀಗಾಯಿತು? ಇದಕ್ಕೆ ಪ್ರಾಕೃತಿಕ ಸಾಮಾಜಿಕ ನೈತಿಕ ಯಾವುದೇ ಕಾರಣವಿರಲಿ ಇವರ ಬಗ್ಗೆ ಸುಶಿಕ್ಷಿತ ವ್ಯಕ್ತಿಗಳು ಸುಸಂಸ್ಕೃತ ಸಮಾಜ ಲಕ್ಷ್ಯವೀಯದೆ ಇರುವುದು ಆಶ್ಚರ್ಯದ ಸಂಗತಿ. ಆದರೆ ಮನುಷ್ಯ ಹೆತ್ತ ತಾಯಿಯನ್ನು ಕಡೆಗಣಿಸುವಷ್ಟು ಕೃತಘ್ನನೆ ಅಕ್ಕರೆಯ ಅಕ್ಕ ತಂಗಿಯರನ್ನು ಅವಜ್ಞೆಗೆಯ್ವ ತಿಳಿಗೇಡಿಯ ಬಾಳ ಸಂಗಾತಿಯ ಮನ್ನಿಸದ ಮೂರ್ಖನೆ ಎಂಬ ಪ್ರಶ್ನೆ ಇಲ್ಲಿ ಎದುರಾಗುತ್ತದೆ. ವೈಯಕ್ತಿಕವಾಗಿ ತಾಯಿಯಲ್ಲಿ ಗೌರವ ಸೋದರಿಯಲ್ಲಿ ಸ್ನೇಹ ಪತ್ನಿಯಲ್ಲಿ ಪ್ರೇಮ ತೋರಿದನಾದರೂ ಸಾಮಾಜಿಕವಾಗಿ ಅವಳಿಗೆ ಸಮ್ಮಾನಿಸದಿರುವುದು ವಿಷಾದದ ವಿಷಯ. ಯಾವುದೇ ಹಿಂದಿನ ಬಾದರಾಯಣ ಕಾಲದಲ್ಲಿ ಅವಳಿಗೆ ಪುರುಷ ಸಮಾನವಾದ ಸ್ಥಾನಮಾನಗಳಿದ್ದವು ಎಂಬ ಮಾತನ್ನು ನಿಜವೆಂದೂ ನಂಬಿದರೂ ಸಾಮಾಜಿಕ ಪದ್ಧತಿ ಬದಲಾದಂತೆ ಆರ್ಥಿಕ ವ್ಯವಸ್ಥೆ ವ್ಯತ್ಯಾಸಗೊಂಡಂತೆ ಮಹಿಳೆಯರ ಸ್ಥಾನಮಾನದಲ್ಲೂ ವ್ಯತ್ಯಾಸವಾಗುತ್ತಾ ಬಂದು ಕೊನೆಗೆ ಅವರ ಹಿತದೃಷ್ಟಿಯಿಂದಲೆ ಎಂದು ಹೇಳಿ 'ನ ಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಸಾರಲಾಯಿತು. ಅದೇ ಸಾಮಾನ್ಯ ನಿಯಮವಾಯಿತು. ಸಾಮಾಜಿಕ ನೀತಿಯಾಯಿತು ಮಹಿಳೆ ಹಿತಾಹಿತ ಪರಿಜ್ಞಾನವುಳ್ಳ, ಬುದ್ಧಿ ವಿವೇಚನೆಯುಳ್ಳ ಜೀವಿಯೆಂಬುದೇ ಮರೆತು ಹೋದಂತಾಯಿತು.

ಅವಳು ದುಡಿಯುವ ದಾಸಿಯಾದಳು. ಭೋಗಾಲಂಕಾರದ ವಸ್ತುವಾದಳು. ಸಾಮಾಜಿಕ ದಲ್ಲಿ, ಧಾರ್ಮಿಕ ರಂಗದಲ್ಲಿ ಅವಳ ನೆರಳೂ ಸಹ ಪ್ರವೇಶಿಸುವಂತಿರಲಿಲ್ಲ. ಕೆಲವೊಮ್ಮೆ ಅಗತ್ಯವಾಗಿದ್ದಾಗ ಧರ್ಮಪತ್ನಿಯೂ ಮಾತ್ರ ಬರಬಹುದಾಗಿತ್ತು. ಹೀಗೆ ಅವಳಿಗೆ ಯಾವ ರೀತಿಯಲ್ಲೂ ಸ್ವಂತಿಕೆ ಮತ್ತು ಸ್ವಾತಂತ್ರ್ಯ ಉಳಿಯದೇ ಅವಳು ಯಾವತ್ತೂ ಅಧೀನಳಾಗಿಯೇ ಇರಬೇಕಾದ ಅಸಹಾಯಕ ಸ್ಥಿತಿಯುಂಟಾಯಿತು.

ನವ ಸಮಾಜ ನಿರ್ಮಾಣವನ್ನು ಕೈಗೊಂಡ ಹನ್ನೆರಡನೆಯ ಶತಮಾನದ ಶಿವ ಶರಣರು ಇಂತಹ ಇನ್ನಿತರ ಸಾಮಾಜಿಕ ಲೋಪಗಳನ್ನು ಗಮನಿಸಿ ಮಹಿಳೆಯರ ಅವಸ್ಥೆ ಯನ್ನು ಅನುಲಕ್ಷಿಸಿ ಅವನ್ನು ಸರಿಪಡಿಸಿದರು. ಕಾಲಾನುಕಾಲದಿಂದ ಇರುವ ಸಾಮಾಜಿಕ ನ್ಯೂನತೆಗಳಿಂದ ಊರ್ಜಿತವಾದ ತಲೆತಲಾಂತರಗಳಿಂದ ನಡೆದು ಬರುತ್ತಿರುವ ಸಂಪ್ರದಾಯ ಆಚರಣೆಗಳ ದೋಷದಿಂದ ದೂರವಾದ ಒಂದು ಸುವ್ಯವಸ್ಥಿತವಾದ ಆದರ್ಶವಾದ ಸಹ ಸುಂದರ ಸಮಾಜ ರಚನೆ ಶರಣರ ಉದ್ದೇಶವಾಗಿತ್ತು. ಶರಣ ಧರ್ಮದ ಉದ್ದೇಶವೂ ಇದೇ ಆಗಿರುವುದು. ಶರಣರು ವ್ಯಕ್ತಿ ಮತ್ತು ಸಮಾಜದ ಒಳ ಹೊರಗನ್ನು ಅಭ್ಯಸಿಸಿ ಅರಿತ ಮಾನಸಶಾಸ್ತ್ರಜ್ಞರೂ ಅಹುದು ಸಮಾಜ ವಿಜ್ಞಾನಿಗಳು ಹೌದು. ವ್ಯಕ್ತಿ ಮತ್ತು ಸಮಾಜದ ಅನಿವಾರ್ಯ ಹಾಗೂ ಅಗತ್ಯದ ಸಂಬಂಧದ ಸ್ವರೂಪ ಹಾಗೂ ಮಹತ್ವವನ್ನು ಅವರು ಬಲ್ಲವರಾಗಿದ್ದರು. ವ್ಯಕ್ತಿಯ ಉತ್ಕರ್ಷ ಮತ್ತು ಸಾಮಾಜಿಕ ಅಭಿವೃದ್ಧಿಗಳು ಪರಸ್ಪರ ಪೋಷಕ ಮತ್ತು ಪ್ರೇರಕವಾಗಿರುತ್ತವೆ. ಸುವ್ಯವಸ್ಥಿತ ಹಾಗೂ ಸುಶಿಕ್ಷಿತ ಸಾಮಾಜಿಕ ವಾತಾವರಣದಲ್ಲಿಯೇ ವ್ಯಕ್ತಿಯ ಸರ್ವಾಂಗೀಣ ವಿಕಾಸ ಸಾಧ್ಯವಾಗುತ್ತದೆ ಯಲ್ಲದೆ, ಏಕಾಂಗಿಯಾಗಿರುವಾಗ ಅಲ್ಲ. ಗುರು–ಹಿರಿಯರ ಸಂರಕ್ಷಣೆ ಶಿಕ್ಷಣದಿಂದ ಸದ್ಭಕ್ತರ ಸಮೂಹದಲ್ಲಿರುವಾಗಲೇ ವ್ಯಕ್ತಿ ತನ್ನತನವನ್ನು ಕಂಡುಕೊಳ್ಳುತ್ತಾನೆ. ಆಗಲೇ ಅವನು ಸ್ವಾವಲಂಬಿಯಾಗಿ ಸ್ವತಂತ್ರ ಜೀವನ ಪಥದಲ್ಲಿ ಮುಂದುವರಿಯುವುದು. ಸಮಷ್ಟಿ ಪ್ರಜ್ಞೆಯಂತೂ ಸರಿಯೆ. ವ್ಯಷ್ಟಿ ಪ್ರಜ್ಞೆ ಮೂಡುವದೂ ಸಾಮೂಹಿಕ ಜೀವನದಲ್ಲಿಯೇ ಎಂಬುದನ್ನು ಮನಗಂಡು ಶರಣರು ಸಕಲರಿಗೂ ಸೌಖ್ಯಕರವಾದ ಸುಸಜ್ಜಿತ ಸಮಾಜ ವನ್ನು ಸೃಷ್ಟಿಸ ಬಯಸಿದರು. ಲಿಂಗ ಜಾತಿ ವರ್ಗ ವೃತ್ತಿಯಾಧಾರದಿಂದ ಬೆಳೆದು ಬಂದ ಭೇದ ಭಾವವನ್ನು ತೊಡೆದರು. ಮಾನವ ಕಲ್ಪಿತ ಕೃತಕ ಬಂಧನಗಳನ್ನು ಪರಿಹರಿಸಿದರು.

ನೆಲನೊಂದೆ ಹೊಲಗೇರಿ ಶಿವಾಲಯಕ್ಕೆ ಜಲನೊಂದೆ

ಎಂದ ಮೇಲೆ ಜಾತಿ ಭೇದಗೈಯಲಾವ ಕಾರಣವಿದೆ? ಹೊಲೆಯನೊಳಗೆ ಹುಟ್ಟಿ ಕುಲವ ನರಸುವದು ಸರಿಯಲ್ಲ. ಸಕಲ ಜೀವಾತ್ಮರಿಗೆ ಲೇಸನೆ ಬಯಸುವವ ಕುಲಜನೆಂದು ವಿವರಿಸಿ ಜಾತಿ ಭೇದವನ್ನಳಿಸಲು ಸನ್ನದ್ಧರಾದರು. ವೃತ್ತಿಯಲ್ಲಿ ಮೇಲು ಕೀಳಿಲ್ಲ. ಎಲ್ಲ ವಿಧ ಉದ್ಯೋಗ ಕಸುಬುಗಳು ಸಮಾಜಕ್ಕೆ ಅಗತ್ಯವಾದವುಗಳು ವೃತ್ತಿ ಮೂಲವಾಗಿ ಜಾತಿ ನಿರ್ಧಾರ ಗೈಯ್ಯುವುದು ಸಮಂಜಸವಲ್ಲ 'ಕಾಶಿ ಕಮ್ಮಾರನಾದ ಬೀಸಿ ಮಡಿವಾಳ ನಾದ' ಅವರಲ್ಲಿ ಉಚ್ಚ ನೀಚವೆಂಬುದಿಲ್ಲ ಬಡವಬಲ್ಲಿದ ಸಣ್ಣವ ದೊಡ್ಡವರೆಂಬುದು

ತಿಳಿದು ಯಾವ ರೀತಿಯ ವರ್ಗ ಭೇದವೂ ಉಚಿತವಲ್ಲವೆಂಬುದೇ ತಿಳಿಸುತ್ತಾ ಜನರ ಬುದ್ಧಿ ಮತಿಗೆ ಕವಿದ ಅಜ್ಞಾನವನ್ನು ಜ್ಞಾನ ಜ್ಯೋತಿಯನ್ನು ಬೆಳಗಿಸಿ ಕಳೆದರು. ಅದರಂತೆಯೇ ಹೆಣ್ಣು ಗಂಡಿನ ಬಗೆಗಿರುವ ಕೀಳು ಮೇಲಿನ ಭಾವವನ್ನು ನಿರ್ಮೂಲಗೊಳಿಸಿದರು.

ಸಾಮಾಜಿಕ ಅಸ್ತಿಭಾರದ ಮೂಲೆಗಲ್ಲುಗಳಾದ ಸ್ತ್ರೀ-ಪುರುಷರಲ್ಲಿ ಭೇದಗೈದು ಮೇಲು ಕೀಳೆಂದು ಕಾಣುವಂತಾದರೆ ಸಮಾನತೆಯಿರುವ ಮುಕ್ತ ಸಮಾಜ ನಿರ್ಮಾಣ ಅದೆಂತು ಸಾಧ್ಯವಾಗುವುದು? ಎಂದೇ ಶರಣರು ಹೆಣ್ಣು ಗಂಡೆಂಬುದು ದೈಹಿಕ ವ್ಯತ್ಯಾಸ ಮಾತ್ರ ಅದೊಂದು ಕಾರಣಕ್ಕಾಗಿ ಅವರ ಬುದ್ಧಿ ಭಾವನೆಯಲ್ಲಿ ಕಾರ್ಯ ಸಾಮರ್ಥ್ಯದಲ್ಲಿ ಏರುಪೇರಾಗಬೇಕಾಗಿಲ್ಲವೆಂಬುದಾಗಿ ವಚನಗಳ ಮೂಲಕ ನಿದರ್ಶನ ಪೂರ್ವಕವಾಗಿ ಶರಣರು ಸಿದ್ಧಪಡಿಸಿದರು. ಹೆಣ್ಣುಗಂಡು ಇಬ್ಬರ ದೇಹದ ನಡುವೆ ಸುಳಿವಾತ್ಮ ಗಂಡೂ ಅಲ್ಲ ಹೆಣ್ಣೂ ಅಲ್ಲ ಆತ್ಮಕ್ಕೆ ಅಂಗವಿಲ್ಲ. ಆಧ್ಯಾತ್ಮದಲ್ಲಿ ಅಂಗ ಭೇದಕ್ಕೆಡೆಯಿಲ್ಲವೆಂದು ಶರಣರೆಲ್ಲರೂ ನಂಬಿದ ಸ್ತ್ರೀಯರನ್ನು ಅವಜ್ಞೆಯಿಂದ ಕಾಣಲಿಲ್ಲ. ಪುರುಷ ಸಮಾನವಾಗಿಯೇ ಕಂಡರು. ಸಾಮಾಜಿಕವಾಗಿ ಧಾರ್ಮಿಕವಾಗಿ ಅವಳಿಗೆ ಪುರುಷ ಸಮಾನ ಹಕ್ಕುಗಳನ್ನಿತ್ತು ಗೌರವಿಸಿದರು.

ಹೀಗೆ ಸದಾಚಾರ ಸಂಪನ್ನ ಸದ್ಭಕ್ತರಿರುವ ಪರಿಶುದ್ಧ ಸಾಮಾಜಿಕ ಪರಿಸರದಲ್ಲಿ ಸರ್ವವಿಧ ಅಭಿವೃದ್ಧಿಗೆ ಸಮಾನ ಅವಕಾಶವಿರುವ ಮುಕ್ತ ವಾತಾವರಣದಲ್ಲಿ ಶರಣೆಯರಾಗಿ ಧರ್ಮಜ್ಞರಾಗಿ ಆಧ್ಯಾತ್ಮಿಕ ಸಾಧಕರಾಗಿ, ಸಾಹಿತಿಗಳಾಗಿ ಮಹಿಳೆಯರು ನವ ಸಮಾಜ ರಚನೆಯಲ್ಲಿ ಶಿವಶರಣರಿಗೆ ಸಮಸಮವಾಗಿ ಕಾರ್ಯಭಾರವನ್ನು ಹೊತ್ತು ನಿರ್ವಹಿಸಿದರು. ಅಜ್ಞಾನಿ, ಅಬಲೆ, ಶೂದ್ರ, ತೊತ್ತು ಮೊದಲಾಗಿ ಕಾಣುತ್ತಿದ್ದ ಸ್ತ್ರೀಯರಲ್ಲಿ ಮೌಢ್ಯ ಕಳೆದು ಹೋಗಿ ತನ್ನತನದ ಅರಿವು ಮೂಡಿತು. ತಾನು ಜಾಗೃತಳಾದಳಲ್ಲದೆ ತನ್ನ ಸಮಾಜದ ಸದಸ್ಯರಿಗೂ ತಿದ್ದಿ ದಾರಿ ತೋರಿಸಬಲ್ಲ ಸಾಮರ್ಥ್ಯವುಂಟಾಯಿತು. ಶರಣರ ಸಮಾನತೆ ಬರಿ ಮಾತಿನಲ್ಲಿರಲಿಲ್ಲ. ನುಡಿಯಲ್ಲಿ ಎಚ್ಚತ್ತು, ನಡೆಯಲ್ಲಿ ತಪ್ಪಿದರೆ ಹಿಡಿದಿರ್ದ ಲಿಂಗವು ಘಟಸರ್ಪದಂತೆ ಎಂದು ನಡೆದು ನುಡಿವ ಶರಣರ ಮಾತು ವಚನ ಘೋಷಣೆಗಳಲ್ಲ. ಆಡಿದಂತೆ ಆಚರಿಸಿದ ಶರಣರು ಸ್ತ್ರೀಯರನ್ನು ಸಮಾನರಾಗಿ ಕಂಡರು. ಬಹುಸಂಖ್ಯಾತ ಶರಣರೂ ಸಾಧಕರಾದರು. ಭಾವಪೂರ್ಣ ಗೀತೆಗಳನ್ನು ರಚಿಸಿ ಹಾಡಿದ ಸರಸ ಸಾಹಿತ್ಯ ನಿರ್ಮಾಣ ಗೈದ ಕನ್ನಡದ ಪ್ರಥಮ ಮಹಿಳಾ ಸಾಹಿತಿಗಳಾದರು. ಪತಿಗಳು ತಪ್ಪಿ ನಡೆದಾಗ ಕೈಹಿಡಿದು ಸರಿಯಾದ ದಾರಿಯಲ್ಲಿ ಕರೆದೊಯ್ದ ಮಹಾಸತಿಯರಾಗಿದ್ದರು. ಅನುಭವಮಂಟಪದ ಆಧ್ಯಾತ್ಮಿಕ ಚರ್ಚೆಯಲ್ಲಿ ಭಾಗವಹಿಸಿದ ಸುಜ್ಞಾನಿಗಳಾದರು. ಅಧಿಕ ಆಡಂಬರವಿಲ್ಲದೆ ತಮ್ಮ ಸಂಪರ್ಕದಲ್ಲಿ ಬಂದ ಸುಜನರಿಗೆ ತಿಳುವಳಿಕೆ ನೀಡಿ ತಿದ್ದಿ ಸರಿಪಡಿಸುವ ಸುಧಾರಕರಾದರು. ತಾನು ಒಬ್ಬ ಜೀವಂತ ವ್ಯಕ್ತಿ ಕುಟುಂಬದಲ್ಲಿ ತನಗೊಂದು ಸ್ಥಾನವಿದೆ. ಸಾಮಾಜಿಕ ಹೊಣೆಗಾರಿಕೆಯಿದೆ. ತನ್ನ ಜೀವನಕ್ಕೂ ಒಂದು ಉದ್ದೇಶವಿದೆ. ಅದನ್ನು ಪೂರೈಸಿಕೊಳ್ಳುವ ವಿವೇಕ

ಶಕ್ತಿ ಸಾಮರ್ಥ್ಯವಿವೆಯೆಂಬುದರ ಅರಿವು ಸ್ತ್ರೀಯರಲ್ಲುಂಟಾಗುವಂತೆ ಮಾಡಿದ ಶಿವ ಶರಣರು ಅಜ್ಞಾನಿಯಾಗಿ ಅಧಃಪತನದಲ್ಲಿರುವ ಸಮಾಜದ ಅರ್ಧಭಾಗವನ್ನು ಉದ್ಧರಿಸಿದರು. ನವಸಮಾಜ ನಿರ್ಮಿತಿಗೆ ಸುಭದ್ರವಾದ ಅಡಿಪಾಯ ಹಾಕಿದರು. ಇದು ವಚನ ಸಾಹಿತ್ಯದಿಂದ ಚೆನ್ನಾಗಿ ಗೊತ್ತಾಗುತ್ತದೆ.

ಶರಣರ ಬೆಂಬಲ ಪ್ರೋತ್ಸಾಹ ಮಾರ್ಗದರ್ಶನವಿಲ್ಲದಿದ್ದರೆ ಶಿವಶರಣೆಯರು ಇಷ್ಟೊಂದು ಶೀಘ್ರವಾಗಿ ಪ್ರಗತಿ ಪಡೆಯುತ್ತಿರಲಿಲ್ಲವೆಂಬುದು ಸುಸ್ಪಷ್ಟ. ವಚನಕಾರ್ತಿಯರು ಈ ಅಂಶವನ್ನು ಅನೇಕ ಕಡೆ ವ್ಯಕ್ತಪಡಿಸಿದ್ದಾರೆ. ಶಿವಶರಣರನ್ನು ಹೆಸರಿಸಿ ಅವರ ಬಗ್ಗೆ ಹೇಳಿ ಸ್ತುತಿಸಿ ಅಪಾರ ಗೌರವ ತೋರಿಸಿದ್ದಾರೆ.

'ಎನ್ನ ಭಕ್ತಿ ನಿಮ್ಮ ಧರ್ಮ, ಎನ್ನ ಜ್ಞಾನ, ಪ್ರಭುವಿನ ಧರ್ಮ,
ಎನ್ನ ಪರಿಣಾಮ ಚನ್ನಬಸವಣ್ಣನ ಧರ್ಮ'
'ಕಾಮಾರಿಯ ಗೆಲಿದೆನಯ್ಯ ಬಸವಣ್ಣ ನಿಮ್ಮ ದಯದಿಂದ
ಸೋಮಧರನ ಹಿಡಿದೆನಯ್ಯ ಬಸವಣ್ಣ ನಿಮ್ಮ ದಯದಿಂದ'

ಬಸವಣ್ಣನ ಬೆಂಬಲ ಅಕ್ಕಮಹಾದೇವಿಯಲ್ಲಿ ಆತ್ಮವಿಶ್ವಾಸ ಮೂಡಿಸಿದೆ, ಧೈರ್ಯವನ್ನುಂಟುಮಾಡಿದೆ. ಸಂಗನ ಬಸವಣ್ಣ ಪಾದವ ಕಂಡು ಬದುಕುವೆ. ಚನ್ನಮಲ್ಲಿಕಾರ್ಜುನ ನೊಲಿದವನಾಗಿ ಇದು ಸಾಧಿಸಿತಲ್ಲದೆ ಬೇರೆಯಲ್ಲ. ಅಕ್ಕಮಹಾದೇವಿ ತನ್ನ ಹೆತ್ತ ತಾಯಿ ಆವ ಹೊರೆಯು ಇಲ್ಲದೆ ನಿಜ ಮುಕ್ತಳೆಂದು ಬಸವಣ್ಣ ಅವಳನ್ನು ಸಭೆಗೆ ಪರಿಚಯ ಮಾಡಿಸುತ್ತಾನೆ. ಅಲ್ಲಮಪ್ರಭು, ಸಿದ್ಧರಾಮ, ಚನ್ನಬಸವಾದಿಗಳನ್ನು ಅವಳು ಪದೇ ಪದೇ ಸ್ಮರಿಸಿದ್ದಾಳೆ. ಅಡವಿಯಲ್ಲಿ ಕಣ್ಣುಗೆಟ್ಟ ಪಶುವಿನಂತೆ ಪ್ರಲಾಪಿಸುತ್ತ ತನ್ನ ಸ್ಥಿತಿಯನ್ನರಿದು ಚನ್ನಬಸವಣ್ಣ ಶಿವಶಿವಾ ಎಂಬ ಮಂತ್ರವನ್ನು ಬಳಲಿಕೆಯನ್ನು ಕಳೆದನೆಂದು ನೀಲಾಂಬಿಕೆ ನೆನೆದಿದ್ದಾಳೆ. ಪರಿಣಾಮ ಬಸವರೂಪ ತನ್ನ ಕರಸ್ಥಲದಲ್ಲಿ ಬೆಳಗಿದ ಬಳಿಕ ತನಗೆ ಇನ್ನಾರ ಹಂಗಿಲ್ಲವೆಂದು ನಿರ್ದಾಕ್ಷಿಣ್ಯವಾಗಿ ನೀಲಾಂಬಿಕೆ ಸಾರಿದ್ದಾಳೆ. ಅಯ್ಯಾ ನರರೊಳು ಹುಟ್ಟಿ ಮಱುಹಿನೊಳಗೆ ಬಿದ್ದವಳ ತಂದು ಮಹಾಶರಣರು ಎನಗೆ ಕುರುಹ ತೋರಿದರು ಗುರುವೆಂಬುದನಱುಹಿದರು. ಬಸವೇಶ್ವರ ಚನ್ನಬಸವೇಶ್ವರ ಮಡಿವಾಳಯ್ಯ ಅಲ್ಲಮಪ್ರಭು, ಚನ್ನಮಲ್ಲೇಶ್ವರ, ಹಡಪದಪ್ಪಣ್ಣ ತಮ್ಮೆಲ್ಲರ ತೊತ್ತಿನ ತೊತ್ತಿನ ಪಡಿತೊತ್ತಿನ ಮಗಳೆಂದು ಹೊತ್ತು ಹೊತ್ತಿಂಗೆ ಎಚ್ಚರದಿಂದ ಪಾಲಿಸಿ ರಕ್ಷಣೆ ಮಾಡಿದ ಕಾರಣದಿಂದ ತಮ್ಮೆಲ್ಲರ ಶ್ರೀಪಾದದಲ್ಲಿಯೇ ನಿಜಮುಕ್ತಳಾದೆನೆಂದಿದ್ದಾಳೆ ಲಿಂಗಮ್ಮ.

'ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ' ಎಂಬುದು ವಚನಕಾರರು ವೇದ ವಾಕ್ಯವನ್ನಾಗಿ ಅಂಗೀಕರಿಸಿದರು. ಜನರಲ್ಲಿ ಪರವಧುವನ್ನು ಮಹಾದೇವಿಯಾಗಿ ಕಾಣುವ ಸದಾಚಾರವನ್ನು ರೂಢಿಗೊಳಿಸಿದರು. ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ,

ಹೆಣ್ಣು ಪ್ರತ್ಯಕ್ಷ ಕಬಳಿಸಿದ್ಧ ಮಲ್ಲಿಕಾರ್ಜುನನೆಂಬ ಸದ್ಭಾವನೆ ಮೂಡಿಸಿದರು. ಅನಾಚಾರ ಮಿಥ್ಯಾದಿಗಳನ್ನು ಕಳೆದು ಶರಣರು ಮರ್ತ್ಯಲೋಕವನ್ನು ದೇವಲೋಕವನ್ನಾಗಿ ಪರಿವರ್ತಿಸಿದರು. ದೇವತೆಗಳೆಂದರೆ ಸಾತ್ವಿಕ ಪ್ರವೃತ್ತಿಯವರು. ನಾರಿಯರನ್ನು ಪೂಜ್ಯವಾಗಿ ಕಾಣುವ ಸ್ಥಳದಲ್ಲಿ ದೇವತೆಗಳೇ ನೆಲೆಸಿರುತ್ತಾರಲ್ಲದೆ ಅನೇಕ ವಿಧ ಅನಾಚಾರಗಳಲ್ಲಿ ಹೆಣ್ಣಿಗೆ ಸಂಬಂಧಿಸಿದ ಅನಾಚಾರ ಅತಿ ಕೆಟ್ಟದು ಅದಕ್ಕೆಂದೆ ಶರಣರು ಪರಸ್ತ್ರೀ ಪರಧನವೆಂಬುದರಿಂದ ದೂರವಿರಬೇಕೆಂದರು. ಎಂತೆಂತಹ ಬಲಶಾಲಿಗಳು ಮಹಾಮಹಿಮರು ಹೆಣ್ಣಿನ ಕಾರಣದಿಂದ ಸರ್ವನಾಶ ಹೊಂದಿದರು. ಹೆಣ್ಣಿಗೆ ಹೆದರುವೆನಯ್ಯ ಎಂದು ಹೇಳಿದರು ಶರಣರು ಹೆಣ್ಣಿಗೆ ಹೆದರ್‍ತಾರೇಯೆ? ಎಂದು ಲಘುವಾಗಿ ಹೇಳಲಿಲ್ಲ. ಹೆಣ್ಣನ್ನು ಗೌರವದಿಂದ ಕಾಣಬೇಕೆಂದರು. ಸ್ತ್ರೀಯರನ್ನು ಸಮಾನವಾಗಿ ಕಾಣುವದರಿಂದ ವ್ಯವಹರಿಸುವದರಿಂದ ಉಂಟಾಗುವ ಎಷ್ಟೋ ಸಮಸ್ಯೆಗಳು ಅನಾಹುತಗಳು ಅವರನ್ನು ಗೌರವದಿಂದ ಕಾಣುವದರಿಂದ ನಿವಾರಣೆಯಾಗುತ್ತವೆ. ಇದನ್ನರಿತ ಶರಣರು ಸ್ತ್ರೀಯರೊಂದಿಗೆ ಸಜ್ಜನಿಕೆ ಗೌರವದಿಂದ ನಡೆದುಕೊಳ್ಳಬೇಕೆಂದರು. ಮುಂದುವರಿದ ಪಾಶ್ಚಾತ್ಯ ಸಂಸ್ಕೃತಿಯಲ್ಲೂ ಅದೇ ರೀತಿಯ ನಡವಳಿಕೆಯಿರುವದನ್ನು ಗಮನಿಸಬಹುದು.

ಸೂತಕವೆಂಬುದು ಶರಣ ಸಮಾಜದಲ್ಲಿಲ್ಲ. ಶರಣರು ಪಂಚಸೂತಕಗಳನ್ನೊಪ್ಪಲಿಲ್ಲ. ಅವನ್ನು ನಂಬಲಿಲ್ಲ. ವೈದಿಕ ಸಮಾಜದಲ್ಲಿ ಸ್ತ್ರೀಯರನ್ನು ಶೂದ್ರಳೆಂದು ಕಂಡುದು ಬಹುಶಃ ಸೂತಕದ ಕಲ್ಪನೆಯಿಂದಲೇ ಹೊಲೆಯೆಂದು ಹುಟ್ಟನ್ನು ತಪ್ಪಿಸಬಹುದೆ. ಪ್ರಕೃತಿ ಸಹಜವಾದ ಹುಟ್ಟು ಸಾವುಗಳನ್ನು ನಿಲ್ಲಿಸಬಹುದೇ. ಅದಕ್ಕೆ ಸಂಬಂಧಿಸಿದಂತೆ ಭಾವನೆಗಳನ್ನು ಬದಲಿಸಬಹುದು. ಇಂದಿನ ವೈದ್ಯಕೀಯ ವಿಜ್ಞಾನ ಮುಂದುವರಿದ ಕಾಲದಲ್ಲಿರುವಂತೆ ಅಂದಿನ ಶರಣ ಸಮಾಜದಲ್ಲಿಯು ಹೆರಿಗೆ ಮೈಲಿಗೆ ಸೂತಕವೆಂದು ಭಾವಿಸಲಿಲ್ಲ. 'ಸತಿಭಕ್ತೆಯಾದರೇ ಹೊಲೆಗಂಜಲಾಗದು ಪತಿಭಕ್ತನಾದಡೆ ಕುಲಕ್ಕಂಜಲಾಗದು' ಅಂದು ಹೊಲೆತನ ಹೆದರಿಕೆಯ ವಿಷಯವಾಗಿತ್ತು ಗಂಡು ಹೆಣ್ಣು ಮೇಲು ಕೀಳು ಎಂಬ ಜಾತಿ ನಿರ್ಮಾಣಕ್ಕೆ ಹೊಲೆತನವೆ ಕಾರಣವಾಗಿದ್ದುದನ್ನು ತಪ್ಪಿಸಲು ಶರಣರು ಪ್ರಯತ್ನಿಸಿದರು. 'ಹೊಲಸುತಿಂಬುವನೆ ಹೊಲೆಯ' ಎಂದು ಜಾತಿ ತಪ್ಪಿಸುವ ಪ್ರಯತ್ನ ಸರಿಯಾಯಿತು. ಹೆಣ್ಣು ಜಾತಿಗೆ ಅಂಟಿದ ಹೊಲೆತನದ ನಿವಾರಣೆ ಭಕ್ತಿಯ ಶುದ್ಧ ಭಾವನೆಯಿಂದ ಎಂದು ಹೇಳಿ ಅದನ್ನು ತಪ್ಪಿಸಿದರು. ಅಂತೆಯೇ ಸಾವು ಸಾವಿನ ಸಂದರ್ಭದಲ್ಲಿ ಇಂದು ಸೂತಕದ ಭಾವನೆಯಿಲ್ಲ. ಅದನ್ನು ಶರಣರು ಎಂಟುನೂರು ವರ್ಷಗಳ ಹಿಂದೆನೆ ಸಂಪೂರ್ಣವಾಗಿ ತೊಲಗಿಸಿ ಸಾವು ಸೂತಕದ ಪ್ರಸಂಗವಲ್ಲ. ಪರಸ್ಪರ ಸಹಾನುಭೂತಿ ಪ್ರಕಟಿಸುವ ಸನ್ನಿವೇಶ, ಸಹಾಯಗೈವ ಪ್ರಸಂಗವೆಂಬುದಾಗಿ ಭಾವಿಸಿದರು. ಸೂತಕವಿಲ್ಲದ ಈ ಶರಣ ಸಮಾಜದಲ್ಲಿ ಮಹಿಳೆ ಮಹಾದೇವಿಯಾದಳಲ್ಲದೆ ಶೂದ್ರಳೆನಿಸಲಿಲ್ಲ. ಸ್ತ್ರೀಯ ಶೂದ್ರತ್ವ ನಿವಾರಣೆಯಾದುದು ಸೂತಕಗಳನ್ನೊಪ್ಪದಿದ್ದುದರಿಂದಲೇ ಶರಣರು ಜಾತಿ ನಿರ್ಮೂಲನದ ಆಂದೋಲನದಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾದರೋ ಹೇಳುವುದು ಕಷ್ಟ. ವ್ಯಕ್ತಿ

ಭೇದವನ್ನಳಿಸಿ ವೃತ್ತಿ ಸಮಾನತೆ ವೃತ್ತಿಗೌರವನ್ನುಂಟು ಮಾಡುವಲ್ಲಿ ಕೆಲಮಟ್ಟಿನ ಯಶಸ್ಸು ಸಂಪಾದಿಸಿದ್ದಾರೆ. ಗಂಡುಹೆಣ್ಣಿನ ಭೇದಭಾವ ಅಳಿಸಿಹಾಕಿ ಸಮಾಜದಲ್ಲಿ ಸ್ತ್ರೀಯರಿಗೆ ಪುರುಷ ಸಮಾನವಾದ ಸ್ಥಾನಮಾನ ಅವಕಾಶಗಳುಂಟಾಗುವಂತೆ ಮಾಡುವುದರಲ್ಲಿ ಶರಣರು ಸಂಪೂರ್ಣ ಯಶಸ್ವಿಯಾಗಿದ್ದಾರೆ ಇಂದಿಗೂ ವೀರಶೈವ ಸಮಾಜದಲ್ಲಿ ಮಹಿಳೆಯರಿಗೆ ಇತರ ಧರ್ಮದವರಲ್ಲಿಲ್ಲದ ಸ್ವಾತಂತ್ರ್ಯ ಸ್ಥಾನಮಾನಗಳಿರುವುದು ಗಮನಾರ್ಹ.

ಯಾವ ಕಾಲಕ್ಕೂ ಮಹಿಳೆಯರಿಗಿರುವ ಏಕೈಕ ಜೀವನ ಮೌಲ್ಯವೆಂದರೆ ಪಾತಿವ್ರತ್ಯ ಇದರಡಿಯಲ್ಲಿ ಮಕ್ಕಳು ಮನೆಯ ಬಗೆಗಿನ ಕರ್ತವ್ಯಗಳು ಸೇರಿಕೊಳ್ಳುತ್ತವೆ. "Proceedings down the ages we find that the ideal helf of before a woman is to be Submissive dutiful and loyal wife totally defendent upon her has husband An ideal woman is she who is an ideal wife In other words it was ratter an ideal wife hood and not an ideal women had that all there authorities were deseritingal a great length" ಶರಣ ಸಮಾಜದಲ್ಲಿ ಸತಿತ್ವವೂ ಆದರ್ಶವಾಗಿರುವಂತೆ. ಆದರ್ಶ ಸ್ತ್ರೀತ್ವವೂ ಬೇರೆಯಾಗಿದ್ದಿತು. ಶರಣಸತಿ ಲಿಂಗಪತಿಯು ವಿಶಾಲ ಆದರ್ಶವಿದ್ದಿತು. 'ಸತಿಗೆ ಪಾತಿವ್ರತ್ಯವೇ ಭೂಷಣವೆನಿಸಿತ್ತು. ಗಂಡನಲ್ಲಿ ನಿಷ್ಠೆಯಿಲ್ಲದ ಹೆಂಡತಿ ಇದ್ದರೇನು? ಹೋದರೇನು? ಎರಡು ಅಷ್ಟೇ ಎಂದರೂ ಗಂಡ ಮುನಿದರೆ ಹೆಂಡತಿಯಾಗಿರಬಾರದು ಎಂದು ಹೇಳಿದರು. ಅಕ್ಕಮಹಾದೇವಿಗೆ ಗಂಡನ ಹೆಸರು ಹೇಳದೆ ಅನುಭವಮಂಟಪದಲ್ಲಿ ಪ್ರವೇಶವಿಲ್ಲವೆಂದು ತಡೆದರು. ನಂತರ ಪರೀಕ್ಷೆ ಮಾಡಿ ರೂಪದಲ್ಲಿ ಹೆಂಗೂಸಾದರೇನು ಭಾವಿಸಲು ಗಂಡು ನೋಡಾ ಎಂದು ಅವಳ ಗಂಡುತನವನ್ನು ಧೀರತೆಯನ್ನು ಮೆಚ್ಚಿಕೊಂಡದ್ದಿದೆ. ಪುರುಷನಂತೆ ಸ್ತ್ರೀಯು ಮದುವೆಯಾಗದೆ ನಿಲ್ಲಬಹುದೆಂದು ಶರಣರು ಒಪ್ಪಿಕೊಂಡಿದ್ದರು. ಸತಿಪತಿಯೆಂಬ ಅಂಗಸಂಬಂಧ ಹಿಂಗಿ ಲಿಂಗವೇ ಪತಿಯಾದ ಬಳಿಕ ಸತಿಗೆ ಪತಿಯುಂಟೆ, ಪತಿಗೆ ಸತಿಯುಂಟೆ ಎಂದು ಲೌಕಿಕವಾದ ಸತಿಪತಿ ಸಂಬಂಧ ಮಿತವಾದುದು. ಶರಣಸತಿ ಲಿಂಗಪತಿಯ ಸಂಬಂಧವೇ ಶಾಶ್ವತವೆಂದು ಭಾವನೆಯಲ್ಲಿಯೇ ಗಂಡುಹೆಣ್ಣಿನ ಬಗೆಗಿನ ಸಮಾನತಾಭಾವನೆ ತುಂಬಿಕೊಂಡಿದೆ. ಪತಿಸೇವಾಚ್ಯುತಿ ಪಾಪವೆಂದುಕೊಂಡ ರುಗ್ಣಾವಸ್ಥೆ, ವೃದ್ಧಾವಸ್ಥೆಯಂತಹ ದುರವಸ್ಥೆಯಿರುವಾಗಲೂ ಪತಿಸೇವೆ ಮಾಡದಿದ್ದರೆ ಪಾಪವಾಗುವದೆಂಬ ಭೀತಿಯನ್ನು ಅವಳ ಮನಸ್ಸಿನಿಂದ ದೂರ ಮಾಡಿ ಸಾಮಾಜಿಕ ನ್ಯಾಯುವನ್ನೊದಗಿಸುವಂತೆ ಮಾಡಿದರು.

ತಾನು ದುರ್ಬಲೆ ಅಬಲೆ ಅನ್ಯರ ಸಹಾಯ ಸಂರಕ್ಷಣೆಯಿಲ್ಲದೆ ಬಾಳು ಸಾಗಿಸಲಿಕ್ಕಿಲ್ಲವೆಂಬ ಅಧೀರತೆಯನ್ನು ಹೋಗಲಾಡಿಸಿ ವಿಶ್ವಾಸ ಮೂಡಿಸಿದರು. ವಿಶ್ವಾಸವೇ ಭಕ್ತಿಯ ಮೂಲ, ಮುಕ್ತಿಯ ಆಧಾರ. ವಿಶ್ವಾಸದಿಂದ ಭಕ್ತನಾಗಿ ನಿಷ್ಠೆ-ಸಾವಧಾನ-

ಸ್ವಾನುಭವ ಅರಿವು ಸಮರಸಭಾವ-ನಿರ್ಭಾವ ಅರ್ಥಾತ್ ಐಕ್ಯ ಹೀಗೆ ಸಾಗುತ್ತಾನೆ. ಸಾಧಕ ಭಕ್ತಿಭಾವ ತುಂಬಿದ ಸಾಧಕರೆಲ್ಲರೂ ಸಮಾನರು. ಅವರಲ್ಲಿ ವರ್ಣ ವರ್ಗ ಜಾತಿ ಲಿಂಗವೆಂಬ ತಾರತಮ್ಯವಿಲ್ಲವೆಂಬುದನ್ನು ಶರಣರು ರೂಪಿಸಿದ್ದರಿಂದ ಅಕ್ಕಮಹಾದೇವಿ ಮುಕ್ತಾಯಕ್ಕ, ಅಮುಗೆ ರಾಯಮ್ಮ, ಕಾಳವ್ವೆ, ಸೂಳೆಯ ಸಂಕವ್ವೆಯಂತಹ ಶರಣೆಯರಾಗಿದ್ದರೆ, ವಚನಕಾರ್ತಿಯರಾಗಿದ್ದಾರೆ. ಆಯ್ದಕ್ಕಿ ಲಕ್ಕಮ್ಮ ತನ್ನ ಪತಿ ಮಾರಯ್ಯನಿಗೆ ಕಾಯಕದ ಸ್ವರೂಪವನ್ನರುಹಿದಳು. ದಿನಗೂಲಿ ಎಷ್ಟಿರಬೇಕು, ಕೆಲಸ ಮಾಡುವ ಮನಸ್ಸು ರೀತಿ ಹೇಗಿರಬೇಕೆಂದು ತಿಳಿಯಲಾರದ ಬಗ್ಗೆ ತಿಳುವಳಿಕೆ ಕೊಟ್ಟಿದ್ದಾಳೆ. ಮೋಳಿಗೆಯ ಮಾರಯ್ಯನ ಕೈಲಾಸಕ್ಕೆ ಹೋಗುವ ಅತ್ಯಾಸೆ ಸರಿಯಲ್ಲ. ಭಕ್ತಿ ಕೈಕೂಲಿಯಲ್ಲವೆಂಬುದಾಗಿ ಸಮಯೋಚಿತ ಎಚ್ಚರಿಕೆಯಿತ್ತಿದ್ದಾಳೆ. ಇಂತಹ ಜ್ಞಾನ ಸಾಮರ್ಥ್ಯ ಉಂಟಾಗುವಂತಾದುದು ಸಮಾನತೆಯಿಂದ ಇಲ್ಲ. ಒಂದು ಮಾತನ್ನು ಲಕ್ಷಿಸಬೇಕಾದುದು. ಶರಣರು ಸ್ವಾತಂತ್ರ್ಯದ ಬಗ್ಗೆ ಹೆಚ್ಚು ಮಾತನಾಡದೆ ಸಮಾನತೆಯನ್ನು ತಂದುದು ಸಮಾಜಕ್ಕೆ ಸರಿಯಾದ ತಳಪಾಯ ಹಾಕಿದಂತಾಯಿತು. ಸ್ವಾತಂತ್ರ್ಯದಿಂದ ಸ್ವಚ್ಛಂದ ವರ್ತನೆ ವ್ಯವಹಾರಕ್ಕೆ ಕೈಗೊಡದೆ ಸಮಾನತೆಯ ನಿಯಂತ್ರಣದಿಂದ ಸಮಾಜ ಸುಗಮವಾಗಿ ಸಾಗುವಂತಾಯಿತು.

ಪತಿತರು ನೈತಿಕವಾಗಿ ಅಧಃಪತನ ಹೊಂದಿದ ಸ್ತ್ರೀಯರನ್ನು ಶರಣರು ಸಮಾನವಾಗಿ ಮರ್ಯಾದೆಯಿಂದ ನೋಡಬೇಕೆಂದರು. ಸ್ತ್ರೀಯರೊಡನೆ ವ್ಯವಹಾರ ಮಾಡುವ ರೀತಿ ಸ್ತ್ರೀಪುರುಷರು ಪರಸ್ಪರ ಹೇಗೆ ಮಾತಾಡಬೇಕೆಂದು ವಿವರಿಸಿದರೇ ಹೊರತು ಗಂಡು ಹೆಣ್ಣಿನ ಸಂಬಂಧವನ್ನು ಕೆದಕಿ ನೋಡಲು ಹೋಗಲಿಲ್ಲ. ಸಾಮಾಜಿಕ ನೀತಿ ನಿಯಮಗಳು ಗಂಡಸರಿಗೆ ಬೇರೆ ಹೆಂಗಸರಿಗೆ ಬೇರೆಯಾಗಿ ರೂಪಿಸಲಿಲ್ಲ. ನಡೆನುಡಿ ಶೀಲಚಾರಿತ್ರ್ಯಶುದ್ಧವಿಲ್ಲದವರು ಸ್ತ್ರೀಯಾದರೇನು? ಪುರುಷರಾದರೇನು? ನಿಂದನೀಯರೇ ಸರಿ. ಗಂಡ ಇದ್ದವಳು ಗರತಿ. ಇಲ್ಲದವಳು ಪತಿತೆಯೆಂದು ಭಾವಿಸಲಿಲ್ಲ ಎಂದೇ ಸೂಳೆಯ ಸಂಕವ್ವ ಪದ್ಮಲದೇವಿ ಮುಂತಾದ ವಚನಕಾರ್ತಿಯರು ಕಾಣಸಿಗುತ್ತಾರೆ. ವೇಶ್ಯಾವೃತ್ತಿ ಹೊಟ್ಟೆ ಹೊರೆಯುಕೊಳ್ಳುವ ಕಸುಬಾಗಿ ಒಂದು ದೊಡ್ಡ ಸಾಮಾಜಿಕ ಸಮಸ್ಯೆಯಾಗಿರಲಿಲ್ಲ. ಅದು ವೈಯಕ್ತಿಕ ಸ್ವಭಾವವನುಗುಣ ಪ್ರವೃತ್ತಿಯಿಂದಾಗಿರಬಹುದು. ವೇಶ್ಯೆಯರ ಬಗ್ಗೆ ಹೇಳದೆ ಇದ್ದರೂ ಅವರ ಮಕ್ಕಳೊಡನೆ ಒಳ್ಳೆಯ ರೀತಿಯಾಗಿ ಇತರರಂತೆ ವ್ಯವಹರಿಸಬೇಕೆಂದರು. 'ದಾಸಿಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಕೊಂಬುದೇ ಯೋಗ್ಯ. ಅವರ ಮಕ್ಕಳು ತಂದೆಯಿಲ್ಲದವರಾಗಿ ಕೀಳಾಗಿರಬೇಕಾಗಿಲ್ಲ. ತಪ್ಪಿತಸ್ಥರು ಮಕ್ಕಳಲ್ಲವೆಂಬ ಆಧುನಿಕ ವಿಚಾರ ಇವರಲ್ಲಿದೆ. ನವ ಸಮಾಜದಲ್ಲಿ ವ್ಯಕ್ತಿಯ ಹುಟ್ಟು ಸ್ಥಾನಮಾನ ಮುಖ್ಯವಾಗಿರಲಿಲ್ಲ. ಅವನ ಗುಣ ನಡತೆ ರೀತಿ ವ್ಯವಹಾರ ಮುಖ್ಯವಾಗಿತ್ತು.

ಬಸವಾದಿ ಪ್ರಮಥರು ಪ್ರಜಾಪ್ರಭುತ್ವವಾದಿಗಳಾಗಿದ್ದರು. ಆ ಸಮಾಜದಲ್ಲಿ

ಸ್ತ್ರೀಪುರುಷರಿಗೆ ಸಮಾನವಾಗಿ ವ್ಯಕ್ತಿಸ್ವಾತಂತ್ರ್ಯ, ವಾಕ್‌ಸ್ವಾತಂತ್ರ್ಯವಿದ್ದಿತು. ಸಾಮಾಜಿಕ, ಆಧ್ಯಾತ್ಮಿಕ, ವೈಯಕ್ತಿಕ ಯಾವುದೇ ಕ್ಷೇತ್ರಕ್ಕೆ ಸಂಬಂಧಪಟ್ಟದ್ದಾಗಿರಲಿ ಸ್ತ್ರೀಯರು ಅದರ ಬಗ್ಗೆ ತಮ್ಮ ಅಭಿಮತವನ್ನು ವ್ಯಕ್ತಪಡಿಸಬಲ್ಲವರಾಗಿದ್ದರು ಆ ಸ್ವಾತಂತ್ರ್ಯವೂ ಅವರಿಗಿದ್ದಿತೆಂಬುದಕ್ಕೆ ಅವರ ವಚನಗಳು ಸಾಕ್ಷಿಯಾಗಿವೆ. ಧರ್ಮಾಚರಣೆಯ ವಿಷಯದಲ್ಲಿ ಇಬ್ಬರು ವಚನಕಾರರಲ್ಲಿ ಭಿನ್ನಾಭಿಪ್ರಾಯವಿದ್ದುದು ಕಂಡುಬರುತ್ತದೆ. ಸುಳಿಯ ಚಂದಯ್ಯನು ಕಾಯಕದ ಸಮಯದಲ್ಲಿ ಇಷ್ಟಲಿಂಗ ನೀರಿಗೆ ಬಿದ್ದರೆ ಶೋಧಿಸಿ ಸಿಗದೆ ಇದ್ದಾಗ ಕಾಯಕಕ್ಕೆ ತಡವಾಗುವದೆಂದು ಹೊರಟುಹೋಗುತ್ತಾನೆ. ಆಮುಗೆ ರಾಯಮ್ಮ ಅಲ್ಲಮಾದಿ ಶರಣರಿಂದ ಭಿನ್ನವಾದ ಬೇರೊಂದು ರೀತಿಯಲ್ಲಿ ತನ್ನ ವಿಚಾರವನ್ನು ಪ್ರಕಟಿಸುತ್ತಾಳೆ. ವೇದಶಾಸ್ತ್ರ ಆಗಮ ಪುರಾಣಗಳು ಸುಳ್ಳೆಂದು ಸಾಧಿಸುತ್ತಾಳೆ. ಧರ್ಮಶಾಸ್ತ್ರ ವಿಚಾರಕ್ಕೆ ಸ್ವಾನುಭವ ಆಧಾರ ತಾನೆ, ವೇದಶಾಸ್ತ್ರ ಆಗಮ ಪುರಾಣಗಳಲ್ಲಿ ಶ್ರುತಿಸ್ಮೃತಿಗಳಲ್ಲಿ ನುಡಿಯುವುದು ಋಷಿ ಪುರಾತನರ ವಚನಂಗಳಲ್ಲಿ ಇಷ್ಟಲಿಂಗ ಭಿನ್ನವಾಗಲು ಮತ್ತೊಂದು ಅಂಗವ ಧರಿಸಿಕೊಳ್ಳಬೇಕೆಂದಿಲ್ಲ. ಹೀಗೆ ಹೇಳಿದ ನರರಿಗೆ ನರಕ ತಪ್ಪದು. ಕಟ್ಟಿದವರೂ ಸಹ 'ಚಂದ್ರಸೂರ್ಯರಿರುವಪರ್ಯಂತ ನಾಯಕನರಕದಲ್ಲಿರುವರು. ನಿಮ್ಮ ಶರಣರು ಲಿಂಗ ಭಿನ್ನವಾಗಲು ಲಿಂಗದೊಡನೆ ಅಂಗವ ಬಯಲು ಮಾಡುವರಯ್ಯಾ' ಎಂದು ಪ್ರಾಣದ ಚೇತನವಾದ ಇಷ್ಟಲಿಂಗ ಕಳೆದ ಮೇಲೆ ಪ್ರಾಣವೆಂತುಳಿಯುವದೆಂಬುದಾಗಿ ಅವಳ ವಾದವಿದೆ. ಅಂತೆಯೇ ಮುಕ್ತಾಯಕ್ಕ ಅಲ್ಲಮರ ನಡುವೆ ಗುರುವಿನ ಮಹತ್ವದ ಬಗ್ಗೆ ಸ್ವರೂಪದ ಬಗ್ಗೆ ವಾದ ನಡೆಯಿತು. ಬಸವಣ್ಣ ನೀಲಲೋಚನೆಗೆ ಕೂಡಲಸಂಗಮಕ್ಕೆ ಬಾ ಎಂದು ಹೇಳಿಕಳುಹಿಸಿದರೂ ಅವಳು ಹೋಗಲೊಪ್ಪದೇ ಅಲ್ಲಿರುವ ಸಂಗಯ್ಯ ಇಲ್ಲಿಲ್ಲವೇ? ಎಂದು ಬರಲೊಪ್ಪಲಿಲ್ಲ. ಅಲ್ಲಿಯ ಸಂಗಯ್ಯ ಇಲ್ಲಿಲ್ಲವೇ?

'ಎಲೆ ಅಯ್ಯಾ ಬಸವಾ ಕರಸ್ಥಲ ಬಯಲಾಯಿತೆನಗೆ ಕರಸ್ಥಲ ಮನಸ್ಥಲವಾಯಿತ್ತು. ಬಸವಾ ಹೋದನತ್ತ ನಾನಡಗಿದೆನಯ್ಯಾ ನಿಮ್ಮತ್ತಲು' ಎಂದಿದ್ದಾಳೆ. ನೀಲಾಂಬಿಕೆ 'ಹೊಜಗೆ ಕೂಡಿದೆನೆಂಬುದು ನಿಮ್ಮ ಅಜಪಿಂಗೆ ಹಾನಿಯೆಂದು ಮಾರಯ್ಯನ ಪತ್ನಿ ಪತಿಗೆ ತಿಳಿಹೇಳುತ್ತಾಳೆ.' ಹೀಗೆ ಆತ್ಮಸಾಧನೆಯ ವಿಷಯದಲ್ಲಿಯು ಶಿವಶರಣೆಯರು ಸ್ವತಂತ್ರವಾಗಿ ತಮ್ಮ ನಿಲುವನ್ನು ಕಂಡುಕೊಂಡಿದ್ದಾರೆ. ತಮ್ಮ ಅಭಿಪ್ರಾಯವನ್ನು ಭೀತಿ ಸಂಕೋಚವಿಲ್ಲದೆ ವ್ಯಕ್ತಪಡಿಸಿದ್ದಾರೆ.

ಮಹಾಕವಿ ತುಲಸೀದಾಸರಲ್ಲಿ, "ಡೋಲಕ, ಗಂವಾರ ಶೌರ ನಾರೀಯಹ ಸಂತಾಡನಕೆ ಅಧಿಕಾರಿ" ಎಂಬ ಒಂದು ಮಾತು ಬರುತ್ತದೆ. ಇದು ನಾರಿಯರ ಬಗೆಗಿರುವ ಭಾವನೆ ಸುಸ್ಪಷ್ಟಗೊಳಿಸುತ್ತದೆ. ಗಂವಾರ ಮತ್ತು ಹೆಣ್ಣಿಗೆ ಪೆಟ್ಟು ಬೀಳುವುದು. ಕಾರಣ ಅವರ ಅಜ್ಞಾನವಿರಬೇಕು. ಶರಣರು ಸ್ತ್ರೀಯರ ಅಜ್ಞಾನವನ್ನು ಕಳೆದರು. ಅವರ ಬಗೆಗಿರುವ ತಪ್ಪುಭಾವನೆ ದುಷ್ಟಭಾವನೆಯನ್ನು ಹೋಗಲಾಡಿಸಿ ಅವರನ್ನು ಪುರುಷಸಮಾನವಾಗಿ, ಅದಕ್ಕೂ ಉಚ್ಚಸ್ಥಾನದಲ್ಲಿ ತಂದು ನಿಲ್ಲಿಸಿದರು. ಲಿಂಗವೇ ಪತಿಯಾದ ಬಳಿಕ ಸತಿಗೆ

ಬೇರೆ ಪತಿಯುಂಟೆ. ಪತಿಗೆ ಬೇರೆ ಸತಿಯುಂಟೆ? ಈ ಸತಿಪತಿ ಸಂಬಂಧ, ಸೀಮಿತವಾಗಿದೆ, ಶಾಶ್ವತ ಸಂಬಂಧವೆಂದರೆ ಶರಣಸತಿ ಲಿಂಗಪತಿಯೆಂಬುದಾಗಿ ಭಾವಿಸಿದರು. ಇದರಿಂದ ಸಾಮಾಜಿಕ ನಡೆವಳಿಕೆಯಲ್ಲೂ ಬದಲಾವಣೆ ಉಂಟಾಯಿತು. ವಚನಕಾರರು, ಶರಣರು ಮಹಿಳೆಯರ ಅಭಿವೃದ್ಧಿಗೆ ಉದ್ಧಾರಕ್ಕೆಂದು ಹಾಕಿದ ಯೋಜನೆಗಳು ಕೈಕೊಂಡ ಕ್ರಮಗಳು ರೂಪಿಸಿದ ನೀತಿನಿಯಮಗಳು ಯಾವ ಕಾಲಕ್ಕೂ ಅನುಕರಣೀಯ. ಇತ್ತೀಚೆಗೆ ಮುಕ್ಕಾಲು ಶತಮಾನದಿಂದ ಮಹಿಳೆಯರ ಉತ್ಕರ್ಷಕ್ಕಾಗಿ ಸರಕಾರ, ವಿಶ್ವಸಂಸ್ಥೆ ಸಂಘಗಳು, ಅನೇಕ ವಿಧದ ಯೋಜನೆಗಳನ್ನು ಹಮ್ಮಿಕೊಂಡಿವೆ. ದೇಶವಿದೇಶಗಳಲ್ಲಿ Womens liberation movement ಆರಂಭವಾಗಿದೆ. ಮಹಿಳಾ ವರ್ಷ. ಮಹಿಳಾದಶಕಗಳನ್ನು ಆಚರಿಸಲಾಗುತ್ತಿದೆ. ಮಹಿಳಾ ಅಕಾಡಮಿಗಳು ಅಸ್ತಿತ್ವದಲ್ಲಿ ಬಂದಿವೆ. ಮಹಿಳೆಯರಿಗೆ ಉಚಿತ ಶಿಕ್ಷಣ ಸೌಲಭ್ಯ ಕಲ್ಪಿಸಲಾಗಿದೆ. ಉದ್ಯೋಗ ವೃತ್ತಿಗಳಲ್ಲಿ ಅವರಿಗೆ ಪ್ರಾಶಸ್ತ್ಯ ನೀಡಬೇಕು. ಕೆಲವು ಸ್ಥಾನಗಳನ್ನು ಮೀಸಲಾಗಿರಿಸಬೇಕೆಂಬ ಕೂಗೆದ್ದಿದೆ. ಸ್ತ್ರೀ ಪುರುಷನಿಗಿಂತ ಬುದ್ಧಿಬಲದಲ್ಲಿ ಯಾವ ರೀತಿಯಲ್ಲೂ ಕಡಿಮೆಯಿಲ್ಲವೆಂಬುದಾಗಿ ಸಾಧಿಸಲಾಗುತ್ತಿದೆ. ೨೦ನೆಯ ಶತಮಾನದ ಅಂತ್ಯದಲ್ಲಿ ಜಗತ್ತು ಮಹಿಳಾ ಸ್ವಾತಂತ್ರ್ಯ ಸಮಾನತೆಯನ್ನು ಸಾಧಿಸಲು ಗೈದ ಪ್ರಯತ್ನಗಳೆಲ್ಲವೂ ಎಂಟುನೂರು ವರ್ಷಗಳ ಹಿಂದೆ ಶಿವಶರಣರು ತಾವು ನಿರ್ಮಿಸಿದ ಸಮಾಜದಲ್ಲಿ ಗೈದು ಯಶಸ್ವಿಯಾಗಿದ್ದರು. ಫಲವನ್ನು ಪಡೆದರು. ಅಲ್ಪಕಾಲಿಕವಾದರೂ ಶರಣ ಸಮಾಜ ಎಲ್ಲ ರೀತಿಯಲ್ಲೂ ಆದರ್ಶ ಸಮಾಜವಾಗಿತ್ತು. ನವಸಮಾಜ ನಿರ್ಮಾಣದ ನಿತ್ಯನೂತನ ವಿಚಾರಗಳು ಸಮಾನತೆ, ಸ್ವಾತಂತ್ರ್ಯದ ಅವರ ಕಲ್ಪನೆ ಮತ್ತು ಆಚರಣೆಗಳು ಯಾವತ್ತೂ ಆದರ್ಶಪ್ರಾಯವಾಗಿವೆ.

ಜನಪದ ಸಾಹಿತ್ಯದಲ್ಲಿ: ಗರತಿಯರ ಜೀವನ ಧರ್ಮ

—ಈಶ್ವರಚಂದ್ರ ಚಿಂತಾಮಣಿ

ಜನಪದ ಸಾಹಿತ್ಯ ಶ್ರೀಸಾಮಾನ್ಯರ ಅಂತಃಸ್ಫೂರ್ತಿಯಿಂದ ಹೊರಹೊಮ್ಮಿದ ಸಾಹಿತ್ಯ, ಸತ್ಯ ಸೌಂದರ್ಯ ಜೀವನಾನುಭವಗಳ ರಸಪಾಕ. ಈ ಸಾಹಿತ್ಯ ಆಕಾಶದಷ್ಟು ವಿಶಾಲ; ಸಾಗರೋಪಾದಿಯಲ್ಲಿ ಆಳ; ಅದರ ನೆಲೆ ಬೆಲೆ ಯೋಚಿಸಿದಷ್ಟು ವಿಸ್ತಾರ ಮತ್ತು ವಿಸ್ತೃತ. ಸಾಹಿತ್ಯವಿಲ್ಲದ ಬದುಕಿಲ್ಲ; ಬದುಕಿನ ತಿರುಳಿನಲ್ಲಿ ಕೀಳು ಮೇಲೆಂಬುದಿಲ್ಲ. ಜೀವನವೆಂಬುದು ಅದ್ಭುತ ರಸಾಯನ, ಬದುಕಿನ ರುಚಿರುಚಿಯನ್ನು, ಆಸರಿಕೆ ಬೇಸರಿಕೆಯನ್ನು. ಒಳಗೊಂಡುದರಿಂದ ಈ ರಸಾಯನ ಯಾವ ಕಾಲಕ್ಕೂ ಬತ್ತಲಾರದ ಒರತೆ.

ಜನಪದ ಸಾಹಿತ್ಯದಲ್ಲಿ ಗರತಿಯರ ಹಾಡುಗಳಿಗೆ ಅಗ್ರಸ್ಥಾನ ಸಹಜವಾಗಿಯೆ ಸಲ್ಲುತ್ತದೆ. ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳಾದ ನಮ್ಮ ಗ್ರಾಮೀಣ ದೇವತೆಗಳೆಂದರೆ ಗರತಿಯರು. ಸಂಚಿಯ ಹೊನ್ನಮ್ಮ 'ಹದಿಬದೆಯ ಧರ್ಮ'ವನ್ನು ಬೋಧಿಸಿದರೆ ಗರತಿಯರು 'ಜೀವನ ಧರ್ಮ'ವನ್ನು ಬಹು ಮನೋಜ್ಞವಾಗಿ ತಮ್ಮ ಹಾಡುಗಳಲ್ಲಿ ಅಭಿವ್ಯಕ್ತಗೊಳಿಸಿರುವುದನ್ನು ಧಾರಾಳವಾಗಿ ಕಾಣಬಹುದು.

ಹೆಣ್ಣು ಕುಟುಂಬದ ಕಣ್ಣು, ಹೆಣ್ಣಿನ ಜೀವನವೆಲ್ಲ ತ್ಯಾಗದ ಪ್ರತೀಕ. 'ತನುಮನ ಧನದಲ್ಲಿ ಪಾಲುಗಾರತಿಯಲ್ಲಿ ನೀನೆಲ್ಲ ಒಗ್ಗಡಿಸುವುದಿರುವೆ' ಎಂದು ಕವಿ ಅಂಬಿಕಾತನಯ ದತ್ತರು 'ಜೀವದ ಭೂಮಿ ನೀ' ಎಂದು ಸತಿಯಳಿಗೆ ಹೆಣ್ಣಿನ ಹಿರಿಮೆಯನ್ನು ನೆನಪಿಸಿರುವುದನ್ನು ಗಮನಿಸಬೇಕು. ಹೆಣ್ಣಿನ ಬದುಕಿನ ಆದರ್ಶವನ್ನು ಅದರ ಮರ್ಮವನ್ನು ಗರತಿಯ ಹಾಡುಗಳಲ್ಲಿ ನೋಡಬೇಕು.

ಆದರ್ಶಗಳು ಮಾನವನಿಗೆ ಎರಡು ರೀತಿಯವು. ಮನಸ್ಸು ಹೃದಯ-ಬುದ್ಧಿಗಳನ್ನು ಸಮಚಿತ್ತದಿಂದ ಪರಿಪೂರ್ಣಗೊಳಿಸಿಕೊಂಡು, ತನ್ನ ಮತ್ತು ತನ್ನವರ ಬದುಕಿನಲ್ಲಿ ಸುಖ ಸಂತೃಪ್ತಿಗಳು ನೆಲೆಯೂರುವಂತೆ ಕಾರ್ಯೋನ್ಮುಖವಾಗಬೇಕೆಂಬ ಅರಿವು ಮೊದಲನೆಯ ಆದರ್ಶ. ಭವದುಃಖ ದುಮ್ಮಾನಗಳ ಬಿರುಗಾಳಿಯನ್ನೆದುರಿಸಿ, ಅವುಗಳಿಂದ ಪಾರಾಗಲು ಸದ್ಭಾವನೆಯ ಕಲ್ಪಿತ ಸಾಧನಗಳ ಮೂಲಕ ಎಂಥ ತ್ಯಾಗಕ್ಕೂ, ತಾಳ್ಮೆಗೂ, ಸತ್ಯ ಅಹಿಂಸೆ ಪರಿಪಾಲನೆಗೂ ಮುಂದಾಗುವದು ಎರಡನೆಯ ಆದರ್ಶ. ಜನಪದರ ಜೀವನ ಹೋರಾಟದಲ್ಲಿ ಇಂಥ ಆದರ್ಶಗಳು, ಅವರ ಅನುಭಾವದ ಅಮೃತೋಕ್ತಿಗಳಾಗಿ ಹಾಡುಗಳಲ್ಲಿ ಹೃದ್ಯವಾಗಿ ಮಿಂಚುತ್ತವೆ: ಹೃದಯದಿಂದ ಹೃದಯಕ್ಕೆ, ಮನಸಿನಿಂದ ಮನಸ್ಸಿಗೆ ನೇರವಾಗಿ ತಟ್ಟುತ್ತವೆ ಮುಟ್ಟುತ್ತವೆ; ಸಂತಸ ಸೂಸುತ್ತವೆ.

ಗರತಿಯರಿಗೆ ಜೀವನ ಪಾವನಗೊಳಿಸಲು ನೆರವಿಗೆ ಇರುವ ಸಕಲ ಜಡಾಜಡ ವಸ್ತುಗಳೆಲ್ಲ ದೇವರ ಸಮಾನ. ಬೀಸುವಕಲ್ಲು, ಕುಟ್ಟು ಒರಳು ಒನಕೆ, ಕೇರುವ ಮರ, ರುಬ್ಬುವ ಕಲ್ಲು, ರೊಟ್ಟಿ ತಟ್ಟುವ ಕೊಣಮಣೆಗೆ, ಒಲೆ ತವಿ ಪೂಜೆಗೆ ಅರ್ಹ. ರೈತರಿಗೆ ನೇಗಿಲು ಗಾಡಿ, ಕುಂಟೆ-ರಂಟೆ, ಸಾಕುಪ್ರಾಣಿಗಳು ಗೃಹೀಭಾವಕ್ಕೆ ಪಾತ್ರ. ಗ್ರಾಮದೇವತೆ-ದೇವರು, ಕುಲದೈವತ, ಸುತ್ತಲಿನ ದೇವರ್ಕಳು ಅವರ ಸದ್ಭಾವನೆಯ ಅರ್ಚನೆಗೆ ಯೋಗ್ಯ ಸ್ಥಾನಮಾನ ಪಡೆದವು. ಈ ಎಲ್ಲ ದೇವರ್ಕಳ ಆರಾಧನೆಗೆ ಮುಖ್ಯವಾದ ಉದ್ದೇಶವೆಂದರೆ ಜೀವನದ ಯೋಗಕ್ಷೇಮ, ತುಷ್ಟಿಪುಷ್ಟಿಗಳ ಬಲವಾದ ಬಯಕೆಯೇ ಅಲ್ಲದೆ ಮೂಢನಂಬಿಕೆ ಎಂಬುದನ್ನು ಅವರು ಗ್ರಹಿಸುವದಿಲ್ಲ. ಅವರಿಗೆ ಪುಣ್ಯ ಸಂಪಾದನೆ ಮೋಕ್ಷ ಪ್ರಾಪ್ತಿಯ ಆಸೆ ಇಲ್ಲ.

ಕಾವ್ಯ ಜೀವನದಲ್ಲಿ-ಸಹಜ ಕವಿತ್ವದಲ್ಲಿ ಅಭಿನೇತ್ರಿಯರೆನಿಸುವ ಗರತಿಯರು ದೈವೀ ಶಕ್ತಿಯಲ್ಲಿ ಅಚಲವಾದ ಶ್ರದ್ಧೆಯುಳ್ಳವರು:

ಚಿಂತಿ ಮಾಡುತಲಿದ್ದೆ ಅಂತರಲಿ ಶಿವಬಂದ
ಚಿಂತ್ಯಾಕ ನನ್ನ ಹಸುಮಗಳ್ಯ ನಾ ನಿನ್ನ
ಸಂತೋಷದಿಂದ ಸಲುವೇನs

ಜೀವನದ ಜಂಜಡದಲ್ಲಿ ತನ್ನ ಕೌಟುಂಬಿಕ ಸಮಸ್ಯೆ ಪರಿಹಾರಕ್ಕಾಗಿ 'ಶಿವನೇ ನೀನೇ ಗತಿ' ಎಂಬ ಚಿಂತೆಯಲ್ಲಿ ಮುಳುಗಿದಾಗ ಅವಳ ಭಾವೋನ್ಮಾದದಲ್ಲಿ ಶಿವ ಕಾಣಿಸಿಕೊಂಡು: 'ನನ್ನ ಹಸುಮಗಳೇ ಏಕೆ ಚಿಂತಿಸುವೆ? ನಾನು ಸಂತೋಷದಿಂದ ನಿನ್ನನ್ನು ಸಲಹುತ್ತೇನೆ'ಂದು ಅಭಯವಿತ್ತ ರೂಪಕವನ್ನು ಕಣ್ಣಿಗೆ ಕಟ್ಟುವಂತೆ ಮನಸ್ಸಿಗೆ ಮುಟ್ಟುವಂತೆ ಹೇಳುವ ಕಾವ್ಯೋಕ್ತಿಗೆ ಮೆಚ್ಚಲೇಬೇಕು.

ಎಂಥ ವಿಪತ್ತೇ ಬರಲಿ 'ಶಿವನೆಂಬ ಶಬುದ ಬಿಡಬೇಡ' ಎಂಬ ಸಂದೇಶ ಗರತಿಯದು:

ಏಳುತಲೆ ಶಿವ ಎನ್ನಿ ಬೀಳುತಲೆ ಶಿವ ಎನ್ನಿ
ಯಾಳಿ ಬಂದಾಗ ಶಿವ ಎನ್ನಿ-ಯೇಳೆಡ್ಡೆಯ
ಸರಪ ಬಂದಾಗ ಶಿವ ಎನ್ನಿ

'ಹೊತ್ತು ವ್ಯಾಳೇ ಹೇಳಿ ಕೇಳಿ ಬರೂದಿಲ್ಲ' ಎಂಬ ಅವರ ಅನುಭವೋಕ್ತಿಗೆ ಪೌರಾಣಿಕ ಘಟನೆಗಳು ಉದಾಹರಣೆಗಳಾಗಿ ಹೊಳೆದು ಜೀವಭಾವ ಗಟ್ಟಿಗೊಳ್ಳುತ್ತದೆ.

ಕಲ್ಲು ಕಡಿಯವ ಮಾಡಿ ಮುಳ್ಳು ಶಾವಿಗಿ ಮಾಡಿ
ಬಿಸ್ನಿಯ ಬುತ್ತಿಯು ಪತರೋಳಿ-ಪಾಂಡವರು
ಉಂಡು ಕಳೆದಾರ ವನವಾಸ

ಹೀಗೆಂದು ಪಾಂಡವರು ಸಾಮ್ರಾಜ್ಯ ಕಳೆದುಕೊಂಡು ವನವಾಸ ಅನುಭವಿಸಿ ಕೊನೆಯು ಜಯಶಾಲಿಯಾದದ್ದು ನೆನಪಿಸಿ ಸಂಯಮದ ಬದುಕಿಗೆ ಸಿದ್ಧರಾಗುತ್ತಾರೆ.

ಶರಣರು, ಸಂತರು, ಪ್ರಾದೇಶಿಕ ಮಹಿಮರು ಪರಿಸರದಲ್ಲಿಯ ಪುಣ್ಯಾತ್ಮರೆಂದರೆ ಗ್ರಾಮೀಣ ಹೆಣ್ಣುಮಕ್ಕಳಿಗೆ ಪೂಜ್ಯರು. ಅವರ ಧ್ಯಾನ, ಸ್ಮರಣೆ ಸ್ತುತಿಯಿಂದ ಮನಸು ಹಸನು ಮಾಡಿಕೊಳ್ಳುವರು.

ಶರಣರ ನೆನೆದರ ಸರಗೀಯ ಇಟ್ಹಾಂಗ
ಹವಳ ಮಲ್ಲೀಗಿ ಮುಡಿದ್ಹಾಂಗ-ಕಲ್ಯಾಣ
ಶರಣರ ನೆನೆಯೊ ನನಮನವೆ.

ತನಗೆ ತಾನೆ ಗುರುವಾಗಿ, ಚಂಚಲ ಮನಸ್ಸನ್ನು ಸ್ಥಿರಗೊಳಿಸಲು 'ಶರಣರ ನೆನೆಯೊ ನನ ಮನವೆ' ಎಂದು ಹೇಳಿಕೊಳ್ಳುವ ರೀತಿ ಧ್ಯಾನ ಚಿಂತನೆ ಮನಸಕ್ಕೆ ಅವರಿತ್ತ ಪ್ರಾಶಸ್ತ್ಯದ ದ್ಯೋತಕ:

ದೇವನ ಅಸ್ತಿತ್ವವನ್ನು ಬಹು ಮನೋಜ್ಞವಾಗಿ ಹೇಳುತ್ತಾರೆ:

ಹೂವಿನಾಗ ಹುದುಗ್ಯಾನ ಮಾಲ್ಯಾಗ ಮುಳಗ್ಯಾನ
ಮೊಗ್ಗ್ಯಾಗ ಕಣ್ಣು ತೆರೆದಾನ-ಲಿಂಗಯ್ಯನ
ನೋಡೊಟಿಗೆ ನಿದ್ದೆ ಬಯಲಾಗಿ.

ಕನಸಿನಲ್ಲಿ ಕಂಡುದನ್ನು ಮನಸಿನಲ್ಲಿ ಮೂಡಿದುದನ್ನು ಉಸುರುತ್ತ ಅರಳಿದ ಮೊಗ್ಗೆಯಲ್ಲಿ ದೇವನನ್ನು ಗುರುತಿಸಿದ ಭಾವ ಎಂಥದು? ಹಸನಾದ ಮನಸು ಧ್ಯಾನಾಸಕ್ತವಾದಾಗ ಇಂಥ ಅನುಭವ ಸಾಧ್ಯ.

ಮಾದೇವ ನಿನ ಹೊರತು ನಾನ್ಯಾರ ನಂಬಿಲ್ಲ
ನಾ ಮಾಡೇನೆಂಬ ಅಳವಿಲ್ಲ-ಮಲ್ಲಯ್ಯ
ನೀ ನಡಿಸು ನನ್ನ ಸರುವೆಲ್ಲ

ಇಲ್ಲಿ ಗರತಿಯ ಸಮರ್ಪಣ ಭಾವ ಶರಣಾಗತಿ ಸ್ಫುರಿಸುತ್ತದೆ.

ಕುಟುಂಬ ಪ್ರೇಮಿಗಳಾದ ಗರತಿಯರು ಬಂಧು ಬಳಗ, ತಾಯಿ ತಂದೆ, ಮಕ್ಕಳು ಮೊಮ್ಮಕ್ಕಳನ್ನು ಪೋಷಿಸುವಲ್ಲಿ, ಅವರ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡವರು. ಸೇವಾ ತತ್ಪರತೆಯಲ್ಲಿ ಇಷ್ಟದೇವತೆಗಳ ಆರಾಧನೆಗೆ ಅವಕಾಶವಿಲ್ಲದೆ ಚಡಪಡಿಸುವರು ಅವರ ಕೊರಗು ಹಾಡಾಗಿ ಹೊರಹೊಮ್ಮುತ್ತದ:

ಊರ ಮಾದೇವಿಯ ತೇರೆಳೆಯುತಿರುವಾಗ
ತೀರಲಿಲ್ಲವ್ವ ಮನೆಗೆಲಸ-ನನತಾಯಿ
ದೂರದಿಂದ ಕೈಯ್ಯ ಮುಗಿದೇನ

ತೀರ್ಥಕ್ಷೇತ್ರಯಾತ್ರೆ ಪುಣ್ಯಕ್ಷೇತ್ರ ದರ್ಶನ ಬಯಸಿದಾಗ ಬಯಕೆ ಈಡೇರದಿದ್ದರೆ, ಚಿಂತಿಸದೆ ಸಂತೃಪ್ತಿಹೊಂದುವ ಗರತಿಯರ ಆತ್ಮವಿಶ್ವಾಸ–ಶ್ರದ್ಧೆ ಅನುಕರಣೀಯವೆನಿಸುತ್ತದೆ:

ಕಾಶೀಗಿ ಹೋಗುವಕ ವರುಷದು ದಿನಬೇಕ
ತಾಸೊತ್ತಿನ ದಾರಿ ತವರೂರ–ಮನಿಯಾಗ
ಕಾಶಿ ಕುಂತಾಳ ಹಡದವ್ವ

ಹೆತ್ತ ತಾಯಿ ಕಾಶಿ–ರಾಮೇಶ್ವರಕ್ಕೆ ಸಮಾನಳಾಗಿ ನಿಲ್ಲುತ್ತಾಳೆ. ತಾಯಿಯು ನೆಲಹೊಂದು ಪಾವನ ಕ್ಷೇತ್ರದರ್ಶನ ಅವರಿಗೆ. 'ತಾಯಿ ದೇವರೆಂದು ವೇದ ಬಾಯಿಬಿಟ್ಟು ಹೇಳುತಿಹುದು' ಎಂದು ಕವಿ ಹಾಡಿದುದನ್ನು ಗರತಿಯ ಭಾವ ಎಂದೋ ಉಗ್ಗಡಿಸಿದೆ. ತಾಯಿ ದೇವರಾದರೆ ತವರುಮನೆ ಪುಣ್ಯಧಾಮ ಅವರ ಪಾಲಿಗೆ.

ರಾಗಿಯ ಒಣರೊಟ್ಟಿ ರಾಜಗೋಳಿಯ ಪಲ್ಲೆ
ರಾಜಕು ತವರವರು ಬಡವರ–ಮನಿಯಾಗ
ನಾಕು ದಿನವಿದ್ದು ಬರುವೇನ

ತವರುಮನೆಯ ವಾತ್ಸಲ್ಯ, ಹುಟ್ಟಿದ ಮನೆಯ ಅಕ್ಕರೆ ಕಕ್ಕುಲಾತಿ. ಏನು ಕೊಟ್ಟರೆ ಬಂದೀತು. ತಾನು ಶ್ರೀಮಂತರ ಮನೆಯ ಸೊಸೆಯಾದರೇನಾಯಿತು ಗರತಿಗೆ ತವರುಮನೆಯೇ ಪುಣ್ಯಕಾಶಿ.

ತವರ ಮನಿಯ ದೀಪ ತೆವರೇರಿ ನೋಡಿನ
ಹತ್ತು ಬೆರಳ್ಹಚ್ಚಿ ಶರಣೆಂದೆ–ತಮದೇರು
ಜಯುವಂತರಾಗಿ ಇರಲೆಂದೆ

ತವರುಮನೆಯನ್ನು ನೆನದಾಗಲೆಲ್ಲ ಅವಳ ಕಕ್ಕುಲಾತಿ ಉಕ್ಕಿ ಬರುತ್ತದೆ. ತಮ್ಮಂದಿರ ಶ್ರೇಯ–ಯೋಗಕ್ಷೇಮಕ್ಕಾಗಿ ಹಾರೈಸುತ್ತಾಳೆ; ದೂರದಿಂದಲೇ ಕೈಮುಗಿದು ನಮಿಸುತ್ತಾಳೆ.

ಅಕ್ಕ ತಂಗಿಯರಲ್ಲಿಯ ಅನ್ಯೋನ್ಯ ಸಂಬಂಧ ಪರಸ್ಪರರ ಹಿತಚಿಂತನೆ ಅಂತರಾಳದಲ್ಲಿ ಸದಾ ಧ್ವನಿಸುತ್ತಿರುತ್ತದೆ. ತಂಗಿ ಅನುಕೂಲವಂತರ ಮನೆ ಸೊಸೆ. ಅಕ್ಕ ಬಡವರ ಮನೆಯ ಸೊಸೆಯಾಗಿ ಬಹಳ ಮಕ್ಕಳುಳ್ಳವಳು. ಬಡತನದಲ್ಲಿ ಅಕ್ಕನಿಗೆ ಅವಳ ಮಕ್ಕಳಿಗೆ ಬರಗಾಲದ ಒವಣೆ ಬೇರೆ. ಅಸಹಾಯಕ ಸ್ಥಿತಿಯಲ್ಲಿರುವ ತಂಗಿ ನಿಸರ್ಗದಲ್ಲಿ ಮೊರೆ ಇಡುವ ಒಂದು ತ್ರಿಪದಿ ಗಮನಾರ್ಹ:

ಅಕ್ಕನ ಹೊಲದಾಗ ಮೆಕ್ಕಿಯ ಫಡದಾಗ
ಗಕ್ಕನೆ ಬಾರೊ ಮಳೆರಾಯ–ನನ್ನಕ್ಕ
ಮಕ್ಕಳ ತಾಯಿ ಮರುಗುವಳ

ಕರುಳು ಚುರುಕೆನಿಸುವ ರೀತಿಯಲ್ಲಿ ಮಳೆರಾಯನಲ್ಲಿ ಮೊರೆ ಇಡುವ ಈ ಕಾವ್ಯೋಕ್ತಿ ಮನವಿಗೆ ಮಳೆರಾಯನ ಎದೆ ಕರಗಿ ನೀರಾಗಬೇಕು.

ನೆರೆಹೊರೆಯವರ ಕಷ್ಟ ಕಾರ್ಪಣ್ಯಗಳಲ್ಲಿ ಅನುವು ಆಪತ್ತುಗಳಲ್ಲಿ ಸಹಭಾಗಿಯಾಗುವ ಗರತಿಯರ ಕರುಣೆಯ ಸಹಜ ಗುಣ ಅವರ ಹಾಡುಗಳಲ್ಲಿ ವ್ಯಕ್ತವಾಗುತ್ತದೆ.

ನೆರೆಮನೆ ನಿಂಗವ್ವಗೊಬ್ಬಾನೆ ಮಗನವ್ವ
ಸಣ್ಣ ಮಗನಿರತ ದನಕಾಯ್ದ
ಸಣ್ಣ ಮಗನಿರತ ದನಕಾಯ್ದ ನಿಂಗಣ್ಣ
ಧನಿಯರ ಮನೆಯಾಗ ಜೀತಕ್ಕ
ಮನಿ ಮನಿ ತಿರುಗ್ಯಾಳ ಹಳ್ಳ ಉಪ್ಪಿಗಿತಾಯಿ
ದನಕಾಯು ಮಗಗ ಅಡಲೆಂದು
ದನಕಾಯು ಮಗಗ ಅಡಲೆಂದು ನಿಂಗವ್ವ
ಹಣಿ ಹಣಿ ಬಡಕೊಂಡು ಅಳತಾಳ
ಕಣಜಾ ಬೆಳೆದ ಮಗಗ
ಉಣಲಾಕ ಕೂಳಿಲ್ಲ....

ಧನಿಕರ ಮನೆಯಲ್ಲಿ ಚಿಕ್ಕಂದಿನಲ್ಲಿಯೇ ದನಕಾಯುತ್ತ ಬೆಳೆದು, ದೊಡ್ಡವನಾದ ಮೇಲೆ ಜೀತದಾಳಾಗಿ ದುಡಿಯುವ ನಿಂಗಣ್ಣನ ತಾಯಿ ತನ್ನ ದಾರುಣ ಕತೆಯನ್ನು ಹೇಳಿಕೊಂಡು ಅಳುತ್ತಾಳೆ:

'ಕಣಜಾ ಬೆಳೆದ ಮಗಗ ಉಣಲಾಕ ಕೂಳಿಲ್ಲ' ಈ ಸಾಲಿನಲ್ಲಿ ಶೋಷಿತ ವ್ಯಕ್ತಿಯ ವೇದನೆಯ ಶೋಕಪೂರ್ಣ ಚಿತ್ರ ಗರ್ಭೀಕರಿಸಿಕೊಂಡುದನ್ನು ಕಾಣಬಹುದು. ಇಂಥ ಕಥನಗೀತಗಳನ್ನು ಗ್ರಾಮೀಣ ಭಾಗಗಳಲ್ಲಿ ಹಾಡುವ ಗರತಿಯರು ಸಾಮಾಜಿಕ ವ್ಯವಸ್ಥೆಯ ದುರವಸ್ಥೆಯನ್ನು ತೆರೆದಿಡುತ್ತಾರೆ.

* * * *

ಗರತಿಯರ ಹಾಡುಗಳಲ್ಲಿ ಜೀವನ ಧರ್ಮ ತುಂಬಿಕೊಂಡಿದೆ. ನೈತಿಕ ಬೋಧನೆ ಅವರ ಮುಖದಿಂದ ತೆರೆತೆರೆಯಾಗಿ ಸುತ್ತಲಿದ್ದವರೆಲ್ಲರಿಗೆ ಮಾರ್ಗದರ್ಶಿಯಾಗಿ ಕೇಳಿಬರುವುದನ್ನು ಗಮನಿಸಬಹುದು.

ಪರಸ್ಪರರಲ್ಲಿ ವೈಮನಸ್ಸು ಪ್ಯಾಪ್ಯ ತರವಲ್ಲವೆಂದು ಅಕ್ಕ ತಂಗಿಗೆ ಹೇಳುವ ಹಿತವಚನ:

ಆಡಿನ ಮರಿಹಂಗ ಜೋಡು ನಾವಿಬ್ಬರು
ಆಡಬ್ಯಾಡ ತಂಗಿ ಕದನವ–ಜಗಳಾಡಿ
ಜೋಡಿನ ಹಕ್ಕಿ ಅಗಲ್ಯಾವ.

ನೈತಿಕವಾಗಿ ಗಂಡನು ಜಾರಿದಾಗ:

ಅಂಗಿಯು ಮ್ಯಾಲಂಗಿ ಛಂದನೊ ನನರಾಯ
ರಂಭೀಯ ಮ್ಯಾಗ ಪ್ರತಿರಂಭಿ–ಬಂದರ
ಛಂದೇನೊ ರಾಯ ಮನಿಯಾಗ.

ಈ ಮಾತಿಗೆ ಗಂಡನು ಕೋಪಗೊಂಡರೆ:

ಕಟ್ಟಾಣಿ ಗುಂಡೀಗಿ ಸಿಟ್ಟು ಮಾಡಲಿ ಬೇಡ
ಬಿಟ್ಟೊ ಬಂದಽದ ಬಳಗೆಲ್ಲ–ಪತಿರಾಯ
ಕಟ್ಟ್ಯಾರ ತಮ್ಮ ಪದರಾಗ

ಗಂಡನಾದವನು ಅನುಮಾನದಿಂದ ಚಾಡಿಕೋರಳೆಂದು ಬಯ್ದಾಗ:

ಬಟ್ಟಲಗಣ್ಣೀಲಿ ದಿಟ್ಟೀಸಿ ನೋಡ್ಯಾರ
ಸಿಟ್ಟ್ಯಾಕೊ ರಾಯ ನನಮ್ಯಾಗ–ನಾ ಅಂಥ
ಹುಟ್ಟೀಸ್ಯಾಡವರ ಮಗಳಲ್ಲ.

ಹೀಗೆಂದು ತನ್ನ ತವರಿನ ಪ್ರಾಮಾಣಿಕ ಘನತೆ ಗೌರವಗಳನ್ನು ಹೇಳಿಕೊಳ್ಳುತ್ತ, ಚಾಡಿಕೋರರ ಮಗಳು ತಾನಲ್ಲವೆಂದು ಧೈರ್ಯವಾಗಿ ನಿಲ್ಲುತ್ತಾಳೆ.

ದಾಂಪತ್ಯ ಜೀವನದ ಸರಸ ಸಲ್ಲಾಪ, ಉಲ್ಲಾಸಗಳನ್ನು ಗರತಿಯರು ಹಾಯಾಗಿ ಹಾಡಿ-ಹೇಳಿಕೊಳ್ಳುವರು.

ಪಚ್ಚಡದ ಪದರಾಗ ಅಚ್ಚ ಮಲ್ಲಿಗಿ ಹೂವ
ಬಿಚ್ಚಿ ನನಮ್ಯಾಗ ಒಗೆವಂಥ–ರಾಯರನ
ಬಿಟ್ಟ್ಯಾಂಗ ಬರಲೆ ಹಡೆದವ್ವ.

ದಾಂಪತ್ಯ ಜೀವನದ ಅನ್ಯೋನ್ಯತೆಗೆ ಹಚ್ಚೇನು ಬೇಕಿಲ್ಲ. ಕೈಹಿಡಿದ ಗಂಡನು ಕಡುಬಡವನಾದರೇನಾಯಿತು:

ಕೂಲಿ ಮಾಡಿದರೇನ ಕೋರಿ ಹೊತ್ತರೇನ
ನಮಗ ನಮರಾಯ ಬಡವೇನ–ಬಂಗಾರ
ಮಾಲ ಇದ್ದಾಂಗ ಮನಿಯಾಗ

ಪ್ರೀತಿ-ಪ್ರೇಮ ತುಂಬಿದ ವೈವಾಹಿಕ ಜೀವನದಲ್ಲಿ ಬಡತನ ಬಾಧಿಸಲಾರದೆಂದು, ತಮ್ಮ ಜೋಡಿಯೇ ಬಂಗಾರವೆಂಬ ಭಾವನೆ.

ಅತ್ತೆ ಅತ್ತೀಕಾಯಿ ಮಾವ ಮಲ್ಲೀಗ್ಹೂವ
ಬಂಗಾರಕೋಲ ಹಿರಿಭಾವ–ನನಮನಿಯ
ಹಾಲ ಮ್ಯಾಗಿನ ಕೆನಿಯ ಅರಸರು.

* * * *

ಓರಗೆಯ ಗೆಳತಿಯರ ಚಿತ್ರಣಕೊಡುವಲ್ಲಿ, ಅವರ ಗುಣಗಾನ ಮಾಡುವಲ್ಲಿ ಗರತಿಯರ ಹಾಡುಗಳು ಸತ್ವಶಾಲಿ:

ಮನಿಯ ಮುಂದಿನ ಗೆಳದಿ ದನಿಯಕೂಡಿಸಬಾರ
ದನಿಸುದ್ದ ನಿನ್ನ ಗುಣಸುದ್ದ–ಗೆಳದವ್ವ
ಗುಣಕ ಕಟ್ಟೇನಿ ಗೆಳೆತನ.

ಗೆಳತಿಯು ಗುಣವನ್ನು ಹೇಳಿಕೊಳ್ಳುತ್ತ:

ನಾನು ನನ್ನ ಗೆಳದಿ ಕೂಡಿ ನೀರಿಗ್ಹೋಗಿ
ಕುಲವ ಕೇಳ್ಯಾರ ಬಲುಮಂದಿ–ಕೇಳಿದರ
ಕುಲವೆರಡು ನಮ್ಮ ಮನವೊಂದು.

ಜಾತಿ ಮುಖ್ಯವಲ್ಲ ನಮ್ಮ ಸ್ನೇಹಕ್ಕೆ ಮನಸುಗಳ ಬೆಸುಗೆಯೇ ಮೂಲವೆಂದು ಉಸುರಿ ಕುಲದ ಮಾತಿಗೆ ಬೆಲೆ ಕೊಡುವದಿಲ್ಲ. ಇನ್ನು ಗೆಳತಿಯ ರೂಪ ಚಿತ್ರಣ:

ಎಳ್ಳು ಹೂವಿನ ಸೀರಿ ಬೆಳ್ಳಿ ಕಾಲುಂಗುರ
ಹಳ್ಳದ ನೀರು ತರತಾಳ–ನನಗೆಳದಿ
ಹಳ್ಳೀ ಗೌಡರ ಹಿರಿಮಗಳು.

ಇನ್ನೊಬ್ಬ ಗೆಳತಿಯು ಒರತೆಯ ನೀರು ತರುವಾಗ ಹಳ್ಳದಲ್ಲಿ ತಾನೋಡಿದ ದೃಶ್ಯವನ್ನು ಹೇಳುವ ರೀತಿ:

ಮಟ ಮಟ ಮಧ್ಯಾನ ತಿಟಿ ತಿಟಿ ಕುಪ್ಪಸ
ಒರತ್ಯಾನ ನೀರು ಒಸವನದು–ತುಂಬುವ
ದ್ರೌಪತಿ ಚೆಲುವಿ ನನಗೆಳದಿ.

ಇಲ್ಲಿ ತುಂಬಿದ ತೋಳುಗಳ, ಬಿಗಿಯಾಗಿ ಕುಪ್ಪಸತೊಟ್ಟು ಒರತೆಯ ನೀರನ್ನು ಒಸೆಯುವ ಯುವತಿಯ ಚಿತ್ರ ಕಣ್ಣಿಗೆ ಕಟ್ಟುವ ಚಿತ್ರಣ ಸ್ಫುಟವಾಗಿ ಕಾಣುತ್ತದೆ.

ಮೈ ತುಂಬಿಕೊಂಡು ವಧುವಿನ ಸ್ಥಿತಿಯಲ್ಲಿರುವ ಮಗಳನ್ನು ವರ್ಣಿಸುವಲ್ಲಿ ಗರತಿ:

ನಡೆದರೆ ನಡುಸಣ್ಣ ಪದುಮಜಾತಿಯ ಹೆಣ್ಣ
ಮಾವಿನ ಹೋಳು ನಿನಕಣ್ಣ–ನನಮಗಳ
ಮಾವ ಬಂದಾನ ಒಳಗ್ಹೋಗ.

ಕೂಡಿದ ಕುಡಿಹುಬ್ಬು ತೀಡಿದ ಬೈತಲು
ಕಾಡಿಗಿಗಣ್ಣ ರಸಗೆಂಪ–ನನಮಗಳ
ಯಾವ ದೊರೆ ನಿನಗ ದೊರೆತಾನ

ಮಾವಿನ ಹೋಳಿನಂತಹ ನೇತ್ರಗಳುಳ್ಳ, ಕೂಡಿದ ಕುಡಿಹುಬ್ಬುಗಳ, ಕಾಡಿಗೆ ಗಣ್ಣಿನ ಈ ಪದುಮ ಜಾತಿಯ ಮಗಳಿಗೆ ಒಲಿದು ದೊರೆಯೊಬ್ಬ ಬರುವನೆಂಬ ಹಾರೈಕೆ ತಾಯಿಗೆ. ದೃಶ್ಯಗಳನ್ನು ಚಿತ್ರಿಸುವ ಕಲೆ ಗರತಿಯರಿಗೆ ಸಹಜವಾಗಿ ಜನ್ಮದೊಂದಿಗೆ ಬಂದಿರಬೇಕು. ಈ ಜಾನಪದ ಸೊಗಸುಗಾರಿಕೆಗೆ ಇಂದಿನ ಶಹರ ಜೀವನದ ಗರತಿಯರು ಎರವಾಗಿದ್ದಾರೆ ಎನಿಸುತ್ತದೆ.

*   *   *   *

ಮಕ್ಕಳೆಂದರೆ ಗರತಿಯರಿಗೆ ಧನ್ಯತೆಯ ಪ್ರತೀಕ:
ಬಾಲಕರಿಲ್ಲದ ಬಾಲಿದ್ಯಾತರ ಜನುಮ
ಬಾಡಿಗೆಯ ಎತ್ತು ದುಡಿಧಾಂಗ–ಬಾಳೆಲೆಯ
ಹಾಸುಂಡು ಬೀಸಿ ಒಗೆಧಾಂಗ.

ಜೋಗಳ ಹಾಡು, ಮಕ್ಕಳ ಲಾಲಿ ಅವರ ಪಾಲಿಗೆ ಶಿವಸ್ತುತಿ:
ಅಳುವ ಕಂದನ ತುಟಿಯು ಹವಳದ ಕುಡಿಹಂಗ
ಕುಡಿ ಹುಬ್ಬು ಬೇವಿನೆಸಳಂಗ–ಕಣ್ಣೋಟ
ಶಿವನ ಕೈಯ್ಯಲಗು ಹೊಳೆಧಂಗ

ಅಳುವ ಕಂದಮ್ಮಗಳನ್ನು ರಮಿಸುವ ರೀತಿ ಚೆನ್ನಾಗಿಗೊತ್ತು:
ಅತ್ತಾನ ಕಾಡ್ಯಾನ ಮತ್ತೇನ ಬೇಡ್ಯಾನ
ಮೆತ್ತ ಮೆತ್ತನ್ನ ದಿಮುಕವ–ಕೊಟ್ಟರ
ಗಪ್ಪು ಚಿಪ್ಪಾಗಿ ಮಲಗ್ಯಾನ.

ಜೋಗುಳ ದನಿ ಕೇಳಿದರೆ ಸಾಕು ಕಂದನಿಗೆ ತೃಪ್ತಿ:
ಜೋಗುಳ ಹಾಡಿದರ ಆಗಲೇ ಕೇಳ್ಯಾನ
ಹಾಲ ಹಂಬಲ ಮರೆತಾನ–ಕಂದೈಗ
ಜೋಗುಳದಾಗ ಅತಿ ಮುದ್ದ.

ಮಕ್ಕಳ ಆಟ ಪಾಟಗಳೆಂದರೆ ತಾಯಿಗೆ ಅಕ್ಕರೆ–ಪ್ರೋತ್ಸಾಹ:
ಚಿಕ್ಕ ನನ ಕಂದಯ್ಯ ಚೆಂಡಾಂಡು ಆಡ್ಯಾನ
ಚಿಕ್ಕ ಹೊಳಿದಾಟಿ ತೊರೆಗಲ್ಲ–ಬಾಲ್ಯಾರ
ಚಿತ್ರದ ಕೊಡಕ ಚೆಂಡ ಬಡೆದ.

ತುಂಟನಾದ ಮಗನ ಉಪಟಳವನ್ನು ಆನಂದಿಸು ತಾಳ್ಮೆ:
ಸಕ್ಕರಿ ಸವಿಗಾರ ವೀಳ್ಯದ ರುಚಿಗಾರ
ವೀರಭದ್ರನ ಅವತಾರ–ನನಮಗನ
ಹ್ಯಾಂಗ ಸಂಬಸಲೆ ಹಡೆದವ್ವ.

ತಾಯಿಯ ಹರಕೆ ಅಮೂಲ್ಯವಾದದ್ದು:
ಆಚಾರಕ್ಕರಸಾಗು ನೀತಿಗೆ ಪ್ರಭುವಾಗು
ಮಾತಿನಲಿ ಚೂಡಾಮಣಿಯಾಗು–ನನಕಂದ
ಜ್ಯೋತಿಯೆ ಆಗು ಜಗಕೆಲ್ಲ.

ಗರತಿಯು ವಿಶ್ವದ ಮಕ್ಕಳ ಲೋಕಕ್ಕೆ ಹಾರೈಸಿ ಹರಿಸಿದ ದಿವ್ಯ ಸಂದೇಶವಿದು.

□ □

ದೇವರ ನ್ಯಾಯ

—ಪ್ರಾ. ಎಚ್. ವ್ಹಿ. ನಾಗೇಶ

೧

ಮುಖ್ಯವಾಗಿ ಗ್ರಾಮೀಣ ಸಮಾಜವನ್ನು ಅನುಲಕ್ಷಿಸಿ ಕರ್ನಾಟಕವನ್ನು ಒಳಗೊಂಡಂತೆ ಭಾರತದಲ್ಲಿ ಹಿಂದೆ ಪ್ರಚಲಿತವಾಗಿದ್ದ ಹಾಗೂ ಈಗಲೂ ಅಸ್ತಿತ್ವದಲ್ಲಿರುವ ನ್ಯಾಯದಾನ ಪದ್ಧತಿಗಳನ್ನು ಸ್ಥೂಲವಾಗಿ ಮೂರು ಪ್ರಕಾರಗಳಾಗಿ ವಿಂಗಡಿಸಬಹುದು. ಮೊದಲನೆಯದು 'ದೇವರ ನ್ಯಾಯ' ಇಲ್ಲಿ ಬಾಧಿತನು (ಫಿರ್ಯಾದಿಯು) ತಾನು ನಂಬಿದ ದೈವಕ್ಕೆ ಅಂದರೆ ಅತಿಮಾನುಷ ಶಕ್ತಿಗೆ–ದೂರುಕೊಡುತ್ತಾನೆ. ಆ ಶಕ್ತಿಯು ತನಗೆ ನ್ಯಾಯ ಕೊಡಬಲ್ಲದು ಎಂದು ಭಾವಿಸಿರುತ್ತಾನೆ. ಆ ದೈವವು ಕೊಡುವ ತೀರ್ಮಾನವನ್ನು ಅಂತಿಮ ತೀರ್ಮಾನ ಎಂಬಂತೆ ಸ್ವೀಕರಿಸುತ್ತಾನೆ. ಪ್ರಾಚೀನ ಕಾಲದಲ್ಲಿ ಪ್ರಚಲಿತವಾಗಿದ್ದ ದಿವ್ಯಗಳು ಅಥವಾ ದೈವೀ ಪರೀಕ್ಷೆಗಳು ಈ ಜಾತಿಯವು, ಅದೇ ರೀತಿಯಾಗಿ ವಿವಿಧ ದೈವೀ ಶಕ್ತಿಗಳನ್ನು ಆಹ್ವಾನಿಸಿ, ಅವುಗಳ 'ದರ್ಶನ' ಪಡೆದು, ಅಹವಾಲು ಒಪ್ಪಿಸಿ, 'ತೀರ್ಮಾನ' ಪಡೆಯುವುದು ಕೂಡ ಇದೇ ಜಾತಿಯ ನ್ಯಾಯದಾನ ಪದ್ಧತಿಯೆನ್ನಬಹುದು. ನಮಗೆ ಪರಿಚಿತವಾಗಿರುವ ಕೋಲ, ಭೂತಾರಾಧನೆ, ತೆಯ್ಯಂ, ಮೊರೆಯಿಟ್ಟು ನ್ಯಾಯ ಬೇಡುವುದು ಇವೆಲ್ಲ ಇದೇ ವರ್ಗಕ್ಕೆ ಸೇರಿದೆ, ಪ್ರಾಚೀನ ಗ್ರಂಥಗಳಲ್ಲಿ ಪ್ರಸ್ತಾಪಗೊಂಡ ಶಪಥಗಳು, ಹಳ್ಳಿಗರು ಹಾಗೂ ಬುಡಕಟ್ಟಿನ ಜನರು ಆಚರಿಸುವ 'ಸತ್ಯ ಮಾಡುವುದು' ಅಥವಾ 'ಆಣೆ ಪ್ರಮಾಣ'ಗಳು ದೇವರ ನ್ಯಾಯದ ಸರಳ ಪ್ರಕಾರಗಳು. ಧರ್ಮಸ್ಥಳಕ್ಕೆ 'ಪಿರ್ಯಾದು' ಕೊಟ್ಟು ಆ ಕ್ಷೇತ್ರದ ಹೆಗ್ಗಡೆಯವರ ಸಮ್ಮುಖದಿ ನ್ಯಾಯ ತೀರ್ಮಾನ ಮಾಡಿಕೊಳ್ಳುವುದು ದೇವರ ನ್ಯಾಯದ ಪ್ರಸಿದ್ಧವಾದ ಒಂದು ಉದಾಹರಣೆ. ಅದೇ ರೀತಿ ಗ್ರಾಮೀಣರು ನ್ಯಾಯ ನಿರ್ಣಯಕ್ಕೆ ಹೆಸರಾದ ಚೌಡಿ ಅಥವಾ ಬೇರೆ ಯಾವುದಾದರೊಂದು ಗ್ರಾಮದೇವತೆಗೆ ಅಹವಾಲು ಸಲ್ಲಿಸಿ ನ್ಯಾಯ ಪಡೆಯುವುದೂ ಇದೆ. ದೈವದ ಹೆಸರಿನಲ್ಲಿ 'ಮಾತು' ಅಥವಾ 'ವಾಕ್' ನಿರ್ಣಯ ಆಣೆ–ಪ್ರಮಾಣದ ಜಾತಿಗೆ ಸೇರಿದರೂ ಅದಕ್ಕಿಂತ ಸ್ವಲ್ಪ ಭಿನ್ನವಾಗಿದೆ. ಕೆಲವೊಮ್ಮೆ ಆರೋಪಿ ಮತ್ತು ಫಿರ್ಯಾದಿ ಇವರಿಬ್ಬರೂ ದೈವದ ಸಮಕ್ಷಮ 'ರಾಜಿ' ಮಾಡಿಕೊಂಡು ಈ ರಾಜಿ ನಿರ್ಣಯ ದೈವದ ನಿರ್ಣಯವೆಂಬಂತೆ ತಿಳಿಯುತ್ತಾರೆ. ಇದೂ ಕೂಡ ದೇವರ ನ್ಯಾಯದ ಒಂದು ನಮೂನೆ.

ಇನ್ನು ಎರಡನೆಯದಾಗಿ ನ್ಯಾಯದಾನದಲ್ಲಿ ಊರಿನ ಹಿರಿಯರು, ಜಾತಿಯ ಹಿರಿಯರು, ಮಧ್ಯಸ್ಥಿಕೆಗಾರರು ಇತ್ಯಾದಿಯಾಗಿ ಗ್ರಾಮಸ್ಥರನೇಕರು ನೇರವಾಗಿ ಪಾಲುಗೊಳ್ಳುವುದು ಕೂಡ ಇದೆ. ಇದು ಸಹಭಾಗಿತ್ವದ ನ್ಯಾಯ. ಇದನ್ನು ಪಂಚಾಯತಿ ನ್ಯಾಯ

ಎನ್ನಬಹುದು. ಇಲ್ಲಿ ಫಿರ್ಯಾದಿಯು ಸಲ್ಲಿಸಿದ ದೂರನ್ನು ಗ್ರಾಮಸ್ಥರೇ ವಿಚಾರಿಸಿ ನ್ಯಾಯನಿರ್ಣಯ ಮಾಡುತ್ತಾರೆ. ಸ್ಥಳೀಯ ಸಮುದಾಯದ ಮಧ್ಯಸ್ಥರು ಕುಲಾಚಾರಗಳನ್ನು ಅಥವಾ ಸಂಪ್ರದಾಯಗಳನ್ನು ಅನುಸರಿಸಿ ಹಾಗೂ ನ್ಯಾಯಾನ್ಯಾಯ ಜ್ಞಾನವನ್ನು ಬಳಸಿ ನ್ಯಾಯನಿರ್ಣಯ ಮಾಡುತ್ತಾರೆ. ಗ್ರಾಮಸ್ಥರಿಗೆ ವಾದಿ ಪ್ರತಿವಾದಿಗಳಿಬ್ಬರ ಪರಿಚಯವಿರುವುದು ಸಾಮಾನ್ಯ ತಕ್ಕಮಟ್ಟಿಗೆ ಅವರ ಗುಣ ಸ್ವಭಾವಗಳ ಪರಿಚಯವೂ ಇರಬಹುದು. ಅದೂ ಅಲ್ಲದೆ ಫಿರ್ಯಾದಿಯು ಕೊಟ್ಟ ದೂರಿನ ಬಗ್ಗೆ ಸತ್ಯಾಸತ್ಯತೆ ನ್ಯಾಯಾನ್ಯಾಯಗಳನ್ನು ತಿಳಿಯಲು ಸಾಕ್ಷಿಗಳನ್ನು ಕರೆಯಬಹುದು. ಹೀಗೆ ಸಾಕ್ಷಿ ಹೇಳುವವರು ಸ್ಥಳೀಯ ಸಮುದಾಯದವರೇ ಇರುವುದರಿಂದ ಸುಳ್ಳುಸಾಕ್ಷಿ ಹೇಳುವುದು ಕಷ್ಟ. ಒಂದು ವೇಳೆ ಯಾರಾದರೂ ಹಾಗೆ ಸುಳ್ಳು ಹೇಳಿದರೆ ಊರಿನ ಹಿರಿಯರು ಅದನ್ನು ಸುಲಭವಾಗಿ ಗುರುತಿಸಬಲ್ಲರು. ಪಾಟೀಸವಾಲು ಹಾಕಿ ಛೀಮಾರಿ ಹೇಳಿ ಕಳುಹಿಸಬಲ್ಲರು. ಸುಳ್ಳು ಸಾಕ್ಷಿಯನ್ನು ಬಳಸಿದ ಪಕ್ಷ ತಪ್ಪುಗಾರರ ಪಕ್ಷವೆಂದು ಭಾವಿಸುವರು. ಹೀಗೆ ಪಂಚಾಯತಿ ಮನಸ್ಸು ಮಾಡಿದರೆ ಯೋಗ್ಯ ನ್ಯಾಯದಾನ ಮಾಡಬಹುದಿತ್ತು. ಗ್ರಾಮಗಳಲ್ಲಿ ಬಳಕೆಯಲ್ಲಿದ್ದ ಪಂಚಾಯತಿ ವ್ಯವಸ್ಥೆಗಳಲ್ಲಿ ಮನೆ ಪಂಚಾಯತಿ, ಸಜ್ಜನ ಪಂಚಾಯತಿ ಊರ ಪಂಚಾಯತಿ, ದೊಡ್ಡ ಪಂಚಾಯತಿ (ಅಥವಾ ಏಳ್ಹಳ್ಳಿ ಪಂಚಾಯ್ತಿ), ಕಟ್ಟೆಮನೆ ಪಂಚಾಯತಿ, ಸೀಮೆ ಪಂಚಾಯತಿ,ಜಾತಿ ಪಂಚಾಯತಿ ಮುಂತಾದ ಹಲವು ವಿಭೇದಗಳನ್ನು ಕಾಣಬಹುದು.

ಮೂರನೆಯದಾಗಿ, ಸರ್ಕಾರಿ ನ್ಯಾಯ ಅಥವಾ ಕೋರ್ಟಿನ ನ್ಯಾಯ. ಪ್ರಾಚೀನ ಕಾಲದಲ್ಲಿ ಗ್ರಾಮಸ್ಥರೂ ಪಟ್ಟಣಿಗರೂ ರಾಜನನ್ನು ಅಥವಾ ರಾಜನಿಂದ ನೇಮಕಗೊಂಡ ನ್ಯಾಯಾಧೀಶನನ್ನು ಅಥವಾ ರಾಜಪ್ರತಿನಿಧಿಯನ್ನು ನೇರವಾಗಿ ಕಂಡು ನ್ಯಾಯದಾನ ಮಾಡಲು ಕೇಳಬಹುದಿತ್ತು. ರಾಜನು ಅಥವಾ ಅವನ ಮಂತ್ರಿ ಪರಿಷತ್ತು ಅನುಸರಿಸುವ ನಿಯಮಗಳು ಸ್ಥಳೀಯ ಆಚರಣೆಗಳಿಗೆ ವ್ಯತಿರಿಕ್ತವಾದರೂ ಸ್ಥಳೀಯರು ಕೊಡುವ ನಿರ್ಣಯವನ್ನು ಒಪ್ಪದವರು ಕೂಡ ರಾಜನು ಕೊಡುವ ನಿರ್ಣಯವನ್ನು ಶಿರಸಾವಹಿಸಲು ಸಿದ್ಧರಿರುತ್ತಿದ್ದರು. ಹೀಗೆ ಊರಿನ ಪಂಚಾಯತಿಗಳನ್ನು ಧಿಕ್ಕರಿಸಿ ಮೇಲ್ಮನವಿ ಮಾಡುವುದರಲ್ಲಿ ತಪ್ಪಿಲ್ಲ ಎಂಬ ಭಾವನೆಯಿದ್ದರೂ ಹಾಗೆ ಮಾಡುವುದು ವಿರಳ. ಭಾರತದಲ್ಲಿ ಸ್ಥಳೀಯ ಪಂಚಾಯತಿ ವ್ಯವಸ್ಥೆಗಳು ಕ್ರಮೇಣ ಬಲಗುಂದುತ್ತ ಹೋಗಿ ಮಹಮದೀಯ ಆಡಳಿತೆಯ ಕಾಲದಲ್ಲಿ ಗ್ರಾಮೀಣರು 'ಅದಾಲತ್'ಗಳ ಮೊರೆಹೋಗುವುದನ್ನು ಕಾಣುತ್ತೇವೆ. ಬ್ರಿಟಿಷ್ ಕಾಲದಲ್ಲಿ ಈ ಒಲವು ಪ್ರಬಲಗೊಂಡು ಸರ್ಕಾರಿ ನ್ಯಾಯಾಲಯಗಳಿಗೆ ಅಲೆಯುವುದು ಸಾಮಾನ್ಯ ಸಂಗತಿಯಾಯಿತು. ಇತ್ತೀಚೆಗೆ ಪ್ರಚಾರಕ್ಕೆ ಬರುತ್ತಿರುವ 'ಲೋಕ ಅದಾಲತ್'ಗಳು ಪಂಚಾಯತಿ ನ್ಯಾಯ ಮತ್ತು ಸರ್ಕಾರಿ ನ್ಯಾಯ ಇವೆರಡರ ಮಿಶ್ರ ತಳಿಯ ಜಾತಿಗೆ ಸೇರುತ್ತವೆ.

೧

ಹಿಂದೊಂದು ಕಾಲಕ್ಕೆ ಬಹಳ ವ್ಯಾಪಕವಾಗಿ ಪ್ರಚಲಿತವಾಗಿದ್ದ ಮತ್ತು ಈಗ ಕಣ್ಮರೆಯಾಗುತ್ತಿರುವ 'ದೇವರ ನ್ಯಾಯ' ಪದ್ಧತಿಯ ಕೆಲವು ನಮೂನೆಗಳ ಬಗ್ಗೆ ಈ ಪ್ರಬಂಧದಲ್ಲಿ ಒಂದಿಷ್ಟು ಸವಿಸ್ತಾರವಾಗಿ ಚರ್ಚಿಸಲಾಗಿದೆ. ನಾವು ಏನನ್ನು ಕಳೆದುಕೊಂಡಿದ್ದೇವೆ ಅಥವಾ ಕಳೆದುಕೊಳ್ಳುತ್ತಿದ್ದೇವೆ; ಹಾಗೆ ಕಳೆದುಕೊಂಡದ್ದರಲ್ಲಿ ಜೊಳ್ಳೆಷ್ಟು, ಕಾಳೆಷ್ಟು; ನಾವು ಯಾವ ಹೊಸ ವ್ಯವಸ್ಥೆಗಳನ್ನು ಆಮಂತ್ರಿಸಬಹುದು, ಯಾವ ಹಳೆಯದನ್ನು ಉಳಿಸಿಕೊಳ್ಳಬಹುದು ಎಂಬ ಜಿಜ್ಞಾಸೆ ಇಂಥ ಚರ್ಚೆಯಿಂದ ಪ್ರಾರಂಭವಾದರೆ ಸಂತೋಷ.

ದೇವರ ನ್ಯಾಯ ಎಂಬುದು ಕಾಡು ಜನರ ನ್ಯಾಯದಾನ ಪದ್ಧತಿ ಎಂಬ ತಪ್ಪುಗ್ರಹಿಕೆಯನ್ನು ನಾವು ಮೊದಲು ತೆಗೆದು ಹಾಕೋಣ. ಆ ನ್ಯಾಯದಾನ ಪದ್ಧತಿ ಅತಿ ಪ್ರಾಚೀನರಿಂದ ಹಿಡಿದು ಅತ್ಯಾಧುನಿಕ ಸಮಾಜಗಳವರೆಗೂ ಕಂಡು ಬರುತ್ತದೆ. ಅಂತಿಮವಾಗಿ ನ್ಯಾಯಾನ್ಯಾಯ ನಿರ್ಣಯ ಮಾಡುವವನು ಆ ಪರಮಾತ್ಮನೇ ಎಂಬ ಭಾವನೆ ಆಧುನಿಕ ಕಾಲದ ನಾಗರಿಕರಲ್ಲಿಯೂ ನ್ಯಾಯಾಧೀಶರಲ್ಲಿಯೂ ಇರುವುದನ್ನು ಕಾಣಬಹುದು. ಬುಡಕಟ್ಟುಗಳ ಮತ್ತು ಗ್ರಾಮೀಣ ಜನರ ನ್ಯಾಯ ಪದ್ಧತಿಯಲ್ಲಿ ದೈವಕ್ಕೆ ಪ್ರವೇಶವುಂಟು. ಪ್ರವೇಶ ಮಾತ್ರವಲ್ಲ, ಮೊನ್ನೆ ಮೊನ್ನೆಯವರೆಗೆ ದೈವವು ನ್ಯಾಯ ನಿರ್ಣಯದ ಗದ್ದುಗೆಯ ಮೇಲೆ ಕುಳಿತು ನ್ಯಾಯನಿರ್ಣಯ ಮಾಡುತ್ತಿತ್ತು. ಈಗಿನ ಕೋರ್ಟುಗಳಲ್ಲೂ ಕೆಲವೊಮ್ಮೆ 'ನ್ಯಾಯ ದೇವತೆ'ಗೆ ಪ್ರವೇಶವಿದೆ. ಪವಿತ್ರ ಗಂಗಾಜಲ, ಗೀತೆ, ಬೈಬಲ್, ಕುರಾನ್‌ಗಳು ಕೋರ್ಟಿನಲ್ಲಿ ನಾಮ ಮಾತ್ರವಾದರೂ ನ್ಯಾಯ ನಿರ್ಣಯದಲ್ಲಿ ಪಾಲುಗೊಳ್ಳುತ್ತವೆ.

ದೇವರ ನ್ಯಾಯವೆಂದರೆ ದೇವಸ್ಥಾನದಲ್ಲಿ ನಡೆಯುವ ನ್ಯಾಯದಾನ ಅಥವಾ ದೇವರ ಹೆಸರಿನಲ್ಲಿ ನಡೆಯುವ ನ್ಯಾಯ. ಪ್ರಾಚೀನ ಕಾಲದಲ್ಲಿ ದೇವಸ್ಥಾನವು ಒಂದು ರೀತಿಯಲ್ಲಿ ನ್ಯಾಯಾಲಯವೂ ಆಗಿತ್ತು. ದೇವರಿಗೆ ದೂರು ಅಥವಾ ಹ್ಯೊಲು ಕೊಡುವುದು, ದೇವರ ಸಮಕ್ಷಮ ವಚನ ಕೊಡುವುದು ಅಥವಾ ಪ್ರಮಾಣ ಮಾಡುವುದು, ದೈವದ ಹೆಸರು ಹೇಳಿ ಇನ್ನೊಬ್ಬನಿಗೆ ಆಣೆಹಾಕುವುದು, ದಿವ್ಯಗಳನ್ನು ಏರ್ಪಡಿಸಿ ಇಂಥ ದೈವೀ ಪರೀಕ್ಷೆಗಳಲ್ಲಿ ಸೋತವರು ಅಪರಾಧಿಯೆಂದು ನಿರ್ಣಯಿಸುವುದು, ದೇವರ ಎದುರಿನಲ್ಲಿ ರಾಜಿ ಪಂಚಾಯತಿ ಮಾಡಿ ಅಂಥ ನಿರ್ಣಯವೇ ದೇವರ ನಿರ್ಣಯ ಎಂದು ಸಾರುವುದು– ಇತ್ಯಾದಿ ವಿಷಯಗಳೆಲ್ಲ ದೇವರ ನ್ಯಾಯಕ್ಕೆ ಉದಾಹರಣೆಗಳು. ಈ ಪ್ರಬಂಧದಲ್ಲಿ ಇವನ್ನೆಲ್ಲ ಪ್ರಸ್ತಾಪ ಮಾಡಿದ್ದರೂ ಮುಖ್ಯವಾಗಿ ದೇವರನ್ಯಾಯದ ಮೂರು ಪ್ರಕಾರಗಳನ್ನು ಚರ್ಚಿಸಿದ್ದೇವೆ. ಈ ವಿಷಯಗಳೆಂದರೆ i) ದಿವ್ಯಗಳು ಅಥವಾ ದೈವೀಪರೀಕ್ಷೆಗಳು ii) ದೇವರಿಗೆ ದೂರು ಕೊಡುವುದು ಅಥವಾ ಹ್ಯೊಲು ಮತ್ತು iii) ಆಣೆ–ಪ್ರಮಾಣ, ವಾಕ್, ದರ್ಶನ ಇತ್ಯಾದಿ.

೨

ಪ್ರಾಚೀನ ಗ್ರಂಥಗಳಲ್ಲಿ 'ದಿವ್ಯ' ಅಥವಾ 'ದೈವೀಪರೀಕ್ಷೆ'ಗಳ ಅನೇಕ ಬಗೆಗಳನ್ನು

ವರ್ಣಿಸಲಾಗಿದೆ. ದಿವ್ಯಗಳೆಂದರೆ ಅಪರಾಧವನ್ನು ನಿರ್ಣಯಿಸಲು ನಿಶ್ಚಿತವಾದ ಮಾನುಷ ಸಾಕ್ಷಿ, ಆಧಾರಗಳು ಇಲ್ಲದಿರುವಾಗ ನಡೆಸುವ ಉಗ್ರ ಪರೀಕ್ಷೆಗಳು ದೈವವನ್ನು ಆಶ್ರಯಿಸಿ ನಿರ್ಣಯವಾಗುವುದರಿಂದ ಅವುಗಳನ್ನು 'ದಿವ್ಯ'ಗಳೆಂದು ಕರೆಯುತ್ತಿದ್ದರು. ಹಿಂದಿನ ಕಾಲದಲ್ಲಿ ಜಗತ್ತಿನ ವಿವಿಧ ಭಾಗಗಳಲ್ಲಿ ದಿವ್ಯಗಳ ಸಹಾಯದಿಂದ ನ್ಯಾಯನಿರ್ಣಯವಾಗುತ್ತಿದ್ದುದು ಕಂಡು ಬರುತ್ತದೆ. ಅನೇಕ ಬುಡಕಟ್ಟುಗಳು ದಿವ್ಯಗಳನ್ನು ಈಗಲೂ ಬಳಸುತ್ತಾರೆಂಬ ವರದಿಯಿದೆ. ಗ್ರಾಮೀಣರೂ ನಗರವಾಸಿಗಳು ದಿವ್ಯಗಳನ್ನು ಬಳಸಿದ ಬಗ್ಗೆ ಶಾಸನಗಳೂ ಇತರ ದಾಖಲೆಗಳೂ ಸಿಗುತ್ತವೆ. ಧರ್ಮ ಮತ್ತು ನೀತಿಯ ಬಗೆಗಿನ ವಿಶ್ವಕೋಶದಲ್ಲಿ ಬೇರೆ ಬೇರೆ ನಾಗರಿಕತೆಗಳೂ ಜನಾಂಗಗಳೂ ಈ ಪದ್ಧತಿಯನ್ನು ಅನುಸರಿಸುತ್ತಿದ್ದುದನ್ನು ಹೇಳಿದೆ. ಆಫ್ರಿಕದ ಅನೇಕ ಜನಾಂಗಗಳಲ್ಲಿ ಅದು ವ್ಯಾಪಕವಾಗಿ ಬಳಕೆಯಲ್ಲಿತ್ತು; ಈಗಲೂ ಇದೆಯೆನ್ನುತ್ತಾರೆ, ಉದಾಹರಣೆಗೆ, ನೈಜೀರಿಯಾ ಗಣತಂತ್ರ ರಾಜ್ಯದ ಮನ್ರೋವಿಯಾ ಪ್ರಾಂತ ಆಫ್ರಿಕಾ ಖಂಡದ ಒಂದು ಪ್ರಗತಿಪರವಾದ ಪ್ರದೇಶ, ಆಧುನಿಕತೆಯ ಗಾಳಿ ಅಲ್ಲಿ ಬೀಸಿದ್ದರೂ ದೈವದ ಮತಿಯಿಂದ ನಡೆಸುವ ಸತ್ವಪರೀಕ್ಷೆ ನಡೆಯಲು ಅನುಮತಿಯಿದೆ. ಟ್ಯುಟೋನಿಕ್ ಜನಾಂಗಗಳಲ್ಲಿಯೂ ದಿವ್ಯಗಳನ್ನು ಧಾರಾಳವಾಗಿ ಬಳಸುತ್ತಿದ್ದರು. ಭಾರತದಲ್ಲಂತೂ ಆ ಕಾಲದಲ್ಲಿ ಅದು ವ್ಯಾಪಕವಾಗಿತ್ತು, ಅದರಲ್ಲೂ ದಕ್ಷಿಣ ಭಾರತದ ಅಲೆಮಾರಿ ಜನಾಂಗಗಳಲ್ಲಿಯೂ, ಅನೇಕ ಬುಡಕಟ್ಟುಗಳಲ್ಲಿಯೂ ಗ್ರಾಮೀಣ ಪ್ರದೇಶಗಳಲ್ಲಿಯೂ ವಿಶೇಷವಾಗಿ ಬಳಸಲಾಗುತ್ತಿತ್ತು. ಕುದಿಯುವ ಎಣ್ಣೆಯಲ್ಲಿ ಕೈಯಿಡುವುದು, ಬೆರಣಿಯ ಮೇಲೆ ಆರೋಪಿಯ ಕೈಯಿಡಿಸಿ ಬೆರಣಿಯನ್ನು ಕೆಂಪಾಗುವಂತೆ ಕಾಯಿಸುವುದು; ಕಾಯಿಸಿದ ಕಬ್ಬಿಣದ ಸಲಾಕೆಯನ್ನು ಹಿಡಿಸುವುದು; ಹಸಿ ಮಡಕೆಯಲ್ಲಿ ನೀರು ತುಂಬಿಕೊಂಡು (ನ್ಯಾಯ ನಿರ್ಣಯಮಾಡುವ) ಹಿರಿಯರ ಸಭೆಯನ್ನು ಸುತ್ತುವಂತೆ ಮಾಡುವುದು; ಕೆಂಡ ತುಳಿಯುವುದು; ದೇವರ ಗಂಟೆ ಬಾರಿಸುವುದು; ದೇವರ ದೀಪವನ್ನು ಆರಿಸುವುದು; ಸೆರಗಿನಲ್ಲಿ ಕೆಂಡವನ್ನು ಹಾಕಿಸುವುದು ಮುಂತಾದ ವಿಧವಿಧ ಸತ್ವಪರೀಕ್ಷೆಗಳು ಬಳಕೆಯಲ್ಲಿದ್ದವು. ಹಸಿಮಡಕೆ ನೀರಿನ ಭಾರದಿಂದ ಒಡೆಯದೇ ಉಳಿದರೆ, ಕೆಂಪಾದ ಕಬ್ಬಿಣದ ಸಲಾಕೆಯನ್ನು ಹಿಡಿದಾಗಲೂ ಕೈಯಲ್ಲಿ ಗುಳ್ಳೆಗಳೇಳದಿದ್ದರೆ, ಸೆರಗಿನ ಕೆಂಡ ಬಟ್ಟೆಯನ್ನು ಸುಡದೇ ಹೋದರೆ ಅಥವಾ ಇಂಥವೇ ಬೇರೆ ಪರೀಕ್ಷೆಗಳಲ್ಲಿ ಯಾವ ಕೆಡುಕೂ ಆಗದೆ ಪಾರಾಗಿ ಬಂದರೆ, ಅಂಥ ಪರೀಕ್ಷೆಗೆ ಒಳಗಾದವನು ತಪ್ಪಿತಸ್ಥನಲ್ಲವೆಂದು ತೀರ್ಮಾನವಾಗುತ್ತಿತ್ತು. ತಾವು ತಪ್ಪು ಅಥವಾ ಅನ್ಯಾಯ ಮಾಡಿಲ್ಲವೆಂಬ ದೃಢ ನಂಬಿಕೆಯಿದ್ದವರು ಮಾತ್ರ ದೈವೀಪರೀಕ್ಷೆಗಳಿಗೆ ಒಪ್ಪಿಕೊಳ್ಳುತ್ತಿದ್ದರು. ನಿರಪರಾಧಿಯೂ ಸತ್ಯವಂತನೂ ದೈವೀಕೃಪೆಯಿಂದ ಪಾರಾಗುತ್ತಾನೆ ಎಂಬ ನಂಬಿಕೆಯೂ ದೈವವನ್ನು ವಂಚಿಸುವವನಿಗೆ ಉಳಿಗಾಲವಿಲ್ಲ ಎಂಬ ಹೆದರಿಕೆಯೂ ದಿವ್ಯಗಳ ಹಿಂದೆ ಇರುವ ಶಕ್ತಿಯಾಗಿತ್ತು.

ಮೊದಮೊದಲು ಅನಾಗರಿಕವೆನ್ನಿಸಿಕೊಳ್ಳುತ್ತಿದ್ದ ಇಂಥ ಪದ್ಧತಿಗಳು ಬರಬರುತ್ತ

ಶಿಷ್ಟಮನ್ನಣೆಯನ್ನು ಪಡೆದವು. ಸ್ಮೃತಿಗಳೂ, ನ್ಯಾಯಗ್ರಂಥಗಳೂ ಇದನ್ನು ಮಾನ್ಯ ಮಾಡಿದವು. ದೇವಾಲಯಗಳಲ್ಲಿ ಬ್ರಾಹ್ಮಣರ ಸಮಕ್ಷಮ ದಿವ್ಯಗಳನ್ನು ಏರ್ಪಡಿಸುವ ಸಂಪ್ರದಾಯ ಪ್ರಾರಂಭವಾಯಿತು. ಯಾವ ಕಾರಣಗಳಿಗಾಗಿ, ಯಾವ ಕಾಲದಲ್ಲಿ ಮತ್ತು ಯಾವ ವಿಧವಾಗಿ ದಿವ್ಯಗಳನ್ನು ಏರ್ಪಡಿಸಬೇಕೆಂಬ ಬಗ್ಗೆ ನಿಯಮಗಳು ಸೃಷ್ಟಿಯಾದವು. ದಿವ್ಯಗಳನ್ನು ನಡೆಯಿಸುವಾಗ ಯಾವ ಯಾವ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕೆಂಬ ವಿಧಿಗಳೂ ಹುಟ್ಟಿಕೊಂಡವು. ಉದಾಹರಣೆಗೆ, ದಿವ್ಯಗಳನ್ನು ನಡೆಸುವಾಗ ಬ್ರಾಹ್ಮಣರಿರಬೇಕು; ನ್ಯಾಯದ ಮೇಲ್ವಿಚಾರಣೆ ಮಾಡುವ ನ್ಯಾಯಾಧಿಪತಿ ಹಿಂದಿನ ದಿನ ಉಪವಾಸವಿದ್ದು ಮಾರನೆಯ ದಿನ ಪ್ರಾತಃಕಾಲ ಸ್ನಾನಮಾಡಬೇಕು; ದಿವ್ಯಕ್ಕೆ ಗುರಿಯಾಗುವ 'ಶೋಧ್ಯ'ನು–ಅಂದರೆ ಆರೋಪಕ್ಕೆ ಗುರಿಯಾದವನು–ನ್ಯಾಯಾಧಿಪತಿಯಂತೆಯೇ ಉಪವಾಸ ಮತ್ತು ಸ್ನಾನದ ನಿಯಮಗಳನ್ನು ಪಾಲಿಸಬೇಕು ಎಂಬಿತ್ಯಾದಿ ನಿಯಮಗಳನ್ನು ಶಾಸ್ತ್ರಗ್ರಂಥಗಳು ಹೇಳಿವೆ.

ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ದಿವ್ಯಕ್ಕೆ ಸಾಕಷ್ಟು ಪ್ರಾಚೀನತೆಯಿದೆ. ಆದರೆ ಶಾಸ್ತ್ರಗಂಥಗಳಲ್ಲಿ ಹೇಳಿದ ಎಲ್ಲ ನಿಯಮಾವಳಿಗಳನ್ನು ಪಾಲಿಸುತ್ತಿದ್ದ ಬಗ್ಗೆ ಆಧಾರವಿಲ್ಲ. ಸರಳ ಪ್ರಕಾರದ ದಿವ್ಯಗಳನ್ನೇ ಹೆಚ್ಚಾಗಿ ಏರ್ಪಡಿಸುತ್ತಿದ್ದರೆಂದು ಕಾಣುತ್ತದೆ. ಅನೇಕ ಕನ್ನಡ ಕಾವ್ಯಗ್ರಂಥಗಳಲ್ಲಿ ದಿವ್ಯಗಳ ಪ್ರಸ್ತಾಪ ಬಂದಿದೆ. ರಾಘವಾಂಕನ ಸಿದ್ಧರಾಮ ಚಾರಿತ್ರದಲ್ಲಿ ಸೊನ್ನಲಿಗೆಯ ಸಿದ್ಧರಾಮನು ತನ್ನ ಶಿಷ್ಯರಿಗೆ ವಿಷವನ್ನು ಪ್ರಸಾದವಾಗಿ ಹಂಚಿದ ಪ್ರಕರಣವಿದೆ, ಮತ್ತೊಮ್ಮೆ, ಅವನು ಕಾಯಿಸಿದ ಕಬ್ಬಿಣದ ಗುಂಡನ್ನು ಕೈಯಲ್ಲಿ ಹಿಡಿದುಕೊಂಡ ಪ್ರಸ್ತಾಪವಿದೆ, ಹರದನಹಳ್ಳಿಯ ದಿವ್ಯಲಿಂಗೇಶ್ವರನ ಸಮಕ್ಷಮ ಆಪಾದನೆಗೊಳಗಾದ ಕುಂಬಾರರು ಕುದಿಯುವ ತುಪ್ಪದಲ್ಲಿ ಕೈಯಿಟ್ಟು ನ್ಯಾಯ ತಮ್ಮ ಕಡೆಯಿದೆಯೆಂದು ತೋರಿಸಿದರು ಎಂದು ಒಂದು ಶಾಸನ ಹೇಳುತ್ತದೆ. ತಾಳಗುಂದದ ಪ್ರಣವೇಶ್ವರ ದೇವಾಲಯದಲ್ಲಿ ಸಪ್ತದಿವ್ಯಗಳು ನಡೆಯುತ್ತಿದ್ದವೆಂದೂ, ಆ ದಿವ್ಯಗಳನ್ನು ಏರ್ಪಡಿಸಿದ್ದರಿಂದ ಬಂದ ಹಣವನ್ನು ಪೂಜಾದಿ ಕಾರ್ಯಗಳಿಗೆ ಬಳಸಲಾಗುತ್ತಿತ್ತೆಂದೂ ತಿಳಿಯುತ್ತದೆ. ಕರ್ನಾಟಕದಲ್ಲಿ ದಿವ್ಯಗಳಿಗೆ ಪ್ರಸಿದ್ಧವಾದ ಅನೇಕ ದೇವಾಲಯಗಳಿದ್ದವು. ಉದಾಹರಣೆಗೆ, ಮೇಲೆ ಹೇಳಿದ ಹರದನಹಳ್ಳಿಯ ದಿವ್ಯಲಿಂಗೇಶ್ವರ ದೇವಾಲಯ, ತಾಳಗುಂದದ ಪ್ರಣವೇಶ್ವರ ದೇವಾಲಯ, ದ್ವಾರಸಮುದ್ರದ ಹೊಯ್ಸಳೇಶ್ವರನ ದೇವಾಲಯ ಇತ್ಯಾದಿ. ಹೊಯ್ಸಳೇಶ್ವರ ದೇವಾಲಯ ಹೊಯ್ಸಳರ ರಾಜಧಾನಿಯಲ್ಲಿರುವ ಪ್ರಸಿದ್ಧ ದೇವಾಲಯವಾಗಿದ್ದು, ಅಲ್ಲಿ ಗಡಿವಿವಾದವೊಂದರ ಸಂಬಂಧವಾಗಿ ಕಣ್ಣಯ್ಯ ಎಂಬವನು ದೇವರ ಎದುರಿನಲ್ಲಿ ಪ್ರಸಾದವನ್ನು ಉಂಡು, ದಿವ್ಯವನ್ನು ಗೆದ್ದನೆಂದು ಮಂಡ್ಯತಾಲೂಕಿನ ಶಾಸನವೊಂದರಲ್ಲಿ ಹೇಳಲಾಗಿದೆ. ದಿವ್ಯಗಳಿಗೆ ಹೆಸರಾದ ಇಂಥ ದೇವಾಲಯಗಳಲ್ಲಿ ಜನರ ಜಗಳಗಳನ್ನು ದೇವರ ಸಮಕ್ಷಮ ನಡೆಯುವ ದಿವ್ಯಗಳ

ಮೂಲಕ ಬಗೆಹರಿಸಲಾಗುತ್ತಿತ್ತು. ಎರಡೂ ಪಕ್ಷಗಳು ದಿವ್ಯ ನಡೆಸುವ ಬಾಬ್ತು ದೇವಾಲಯಕ್ಕೆ ಕಾಣಿಕೆ ಕೊಡುತ್ತಿದ್ದರು. ಇದರಿಂದ ದೇವಾಲಯಕ್ಕೆ ತಕ್ಕಮಟ್ಟಿನ ಆದಾಯ ಬರುತ್ತಿತ್ತು.

ದಿವ್ಯಗಳಲ್ಲಿ ಹಲವು ನಮೂನೆಗಳಿದ್ದು ಅವುಗಳ ಸಂಖ್ಯೆ ಇಷ್ಟೇ ಎಂದು ನಿರ್ದಿಷ್ಟಗೊಳಿಸುವುದು ಕಷ್ಟದ ಮಾತು. ಆದರೆ ಅವುಗಳಲ್ಲಿ ಅಗ್ನಿದಿವ್ಯ, ಜಲದಿವ್ಯ, ವಿಷದಿವ್ಯ, ತಪ್ತಮಾಷೆಗಳೆಂಬ ದಿವ್ಯಗಳು ಶಾಸ್ತ್ರಗ್ರಂಥಗಳಲ್ಲಿ ತಪ್ಪದೇ ಉಲ್ಲೇಖ ಪಡೆದಿವೆ; ಅವು ಜಾನಪದ ಆಚರಣೆಗಳಲ್ಲೂ ಕಂಡುಬರುತ್ತವೆ. 'ಅಗ್ನಿದಿವ್ಯ' ಎಂಬುದು ಬೆಂಕಿಯಿಂದ ನಡೆಯುವ ಪರೀಕ್ಷೆ. ಇದರಲ್ಲಿ ಆರೋಪಿಯ ಕೈಯಲ್ಲಿ ಕಾದ ಕಬ್ಬಿಣದ ಗುಂಡನ್ನು ಕೊಟ್ಟು ಸೆಗಣಿಯಿಂದ ಮಾಡಿದ ಎಂಟು ವರ್ತುಲಗಳನ್ನು ನಡೆದು ದಾಟುತ್ತ ಒಂಬತ್ತನೆಯ ವರ್ತುಲಕ್ಕೆ ಗುಂಡನ್ನು ಎಸೆಯಲು ಹೇಳುತ್ತಿದ್ದರು. ಹೀಗೆ ಒಂಬತ್ತು ವರ್ತುಲಗಳನ್ನು ಯಶಸ್ವಿಯಾಗಿ ಮುಗಿಸಿದರೆ ಅವನು ನಿರ್ದೋಷಿಯೆಂದು ತಿಳಿಯಬೇಕು. ಅವನ ಕೈಯಲ್ಲಿ ಸುಟ್ಟಗಾಯಗಳಾದರೆ ದೋಷಿಯೆಂದೂ, ಆಗದಿದ್ದರೆ ನಿರ್ದೋಷಿಯೆಂದೂ ಸಾರಲಾಗುತ್ತಿತ್ತು.

'ಜಲದಿವ್ಯ' ಎಂಬ ಪರೀಕ್ಷೆಯಲ್ಲಿ ಆಪಾದನೆಗೆ ಒಳಗಾದವನು ನದಿಯ ಆಳ ಭಾಗದಲ್ಲಿ ಮುಳುಗುತ್ತಾನೆ. ತೋರಣ ಕಟ್ಟಿದ ಇನ್ನೊಂದು ಭಾಗದಿಂದ ಎದ್ದು ಬರುತ್ತಾನೆ. ಮುಳುಗಿದ ಮೇಲೆ ತೋರಣ ಕಟ್ಟಿದ ಭಾಗದಲ್ಲಿ ಏಳುವವರೆಗೆ ನಡುವೆ ಎಲ್ಲಿಯೂ ಹೊರಗೆ ಕಾಣಿಸಿಕೊಳ್ಳಬಾರದು. ಅನ್ಯಾಯ ಮಾಡಿದವನು, ಅಸತ್ಯ ನುಡಿದವನು ನೀರಿನಲ್ಲಿ ಮುಳುಗಿ ಸಾಯುತ್ತಾನೆಂದೂ ನಿರ್ದೋಷಿಯು ಸಾವಿನಿಂದ ಪಾರಾಗುತ್ತಾನೆಂದೂ ನಂಬುತ್ತಿದ್ದರು. 'ವಿಷದಿವ್ಯ' ಎಂಬುದು ಆ ಹೆಸರೇ ಸೂಚಿಸುವಂತೆ ವಿಷದ ಮೂಲಕ ನಡೆಯುವ ಪರೀಕ್ಷೆ. ಕೆಲವು ಗಿಡಮೂಲಿಕೆಗಳಿಂದ ತೆಗೆದ ವಿಷವನ್ನು ತುಪ್ಪದಲ್ಲಿ ಬೆರೆಸಿ ನಿರ್ದಿಷ್ಟ ದಿನಗಳವರೆಗೆ ಆರೋಪಿಗೆ ಕೊಡುತ್ತಾರೆ. ಅವನು ಆ ದಿನಗಳ ನಂತರವೂ ಬದುಕಿ ಉಳಿದರೆ ನಿರ್ದೋಷಿ ಎನ್ನುತ್ತಿದ್ದರು. ಕೆಲವೊಮ್ಮೆ ತೀವ್ರ ವಿಷಕಾರಿಯಾದ ತುಪ್ಪವನ್ನು ಮುಂಜಾವಿನಲ್ಲಿ ಅಥವಾ ರಾತ್ರಿಯಲ್ಲಿ ಕೊಟ್ಟು ಮಾರನೆಯ ದಿನದ ವರೆಗೆ ಶೋಧ್ಯನು ಬದುಕಿ ಉಳಿದರೆ ನಿರ್ದೋಷಿಯೆಂದು ಸಾರಲಾಗುತ್ತಿತ್ತು. ಅಗ್ನಿ, ಜಲ ಮತ್ತು ವಿಷದಿವ್ಯಗಳು ಇದೇ ರೀತಿ ನಡೆಯಬೇಕೆಂದಿರಲಿಲ್ಲ. ಸ್ಥಳೀಯವಾಗಿ ವಿವರಗಳಲ್ಲಿ ಹೆಚ್ಚು ಕಡಿಮೆಯಾಗುತ್ತಿತ್ತು.

ಮೇಲೆ ಹೇಳಿದ ಮೂರು ದಿವ್ಯಗಳಲ್ಲಿ ಮಾನಾಪಮಾನದ ಭಯವಲ್ಲದೆ ಜೀವಭಯವೂ ಇರುವುದನ್ನು ಕಾಣುತ್ತೇವೆ. ಅಪರಾಧ ಮಾಡಿ ಆಪಾದನೆಗೆ ಒಳಗಾದವರು ಈ ದಿವ್ಯಗಳನ್ನು ಎದುರಿಸುವ ಧೈರ್ಯಮಾಡಲಾರರು. ಅಂಥವರು ತಮ್ಮ ತಪ್ಪನ್ನು ಮೊದಲೆ ಒಪ್ಪಿಕೊಂಡು ತಮ್ಮ ಸಮುದಾಯ ಅಥವಾ ಊರಿನ ಹಿರಿಯರು ಕೊಡುವ ಶಿಕ್ಷೆಯನ್ನು ಒಪ್ಪಿಕೊಳ್ಳುತ್ತಿದ್ದರು. ನಿರಪರಾಧಿಗಳು ಮಾತ್ರ ದೈವೀಶಕ್ತಿಯನ್ನು ನಂಬಿ

ದೇವರನ್ಯಾಯಕ್ಕೆ ಒಪ್ಪುವ ಸಾಹಸಮಾಡುತ್ತಾರೆ.

ತಕ್ಷಣ ಪ್ರಾಣಾಪಾಯವಿಲ್ಲದ ಹಲವು ದಿವ್ಯಗಳು ಆಚರಣೆಯಲ್ಲಿದ್ದವು. ಉದಾಹರಣೆಗೆ, 'ತುಲಾದಿವ್ಯ' ಅಥವಾ 'ಧಟದಿವ್ಯ' ಎಂಬುದು ಅನೇಕ ಶಾಸ್ತ್ರ ಗ್ರಂಥಗಳಲ್ಲಿ ಸಮೂದಿತವಾಗಿದೆ. ಇದರಲ್ಲಿ ಆಪಾದಿತನು ಖದಿರ, ಔದುಂಬರ ಮೊದಲಾದ 'ಪವಿತ್ರ' ಕಟ್ಟಿಗೆಯಿಂದ ಮಾಡಿದ ತಕ್ಕಡಿಯಲ್ಲಿ ತೂಗಿಸಿಕೊಳ್ಳುವ ಪರೀಕ್ಷೆ ನಡೆಯುತ್ತದೆ. ವ್ಯಕ್ತಿಯು ಸಮಭಾರದ ಇಟ್ಟಿಗೆ ಅಥವಾ ಬೇರೆ ವಸ್ತುಗಳನ್ನು ತಕ್ಕಡಿಯಲ್ಲಿಟ್ಟು ನಂತರ ಯುಕ್ತ ವಿಧಿಮಂತ್ರಗಳನ್ನು ನಡೆಸಿ ಎರಡನೆಯ ಬಾರಿ ಅವನನ್ನು ತೂಗಲಾಗುತ್ತದೆ. ಆಗ ಅವನು ಕುಳಿತ ತಕ್ಕಡಿಯ ಪರಡಿ(ಪಾತ್ರೆ) ಮೇಲೇರಿದರೆ ಅವನು ದೋಷಮುಕ್ತನೆಂದೂ, ಕೆಳಗಿಳಿದರೆ ಅಥವಾ ಸಮಭಾರವಾದರೆ (ಸರಿದೂಗಿದರೆ) ದೋಷಿಯೆಂದೂ ತಿಳಿಯಲಾಗುತ್ತಿತ್ತು. ಅವನು ಮಾಡಿದ ಪಾಪದ ಭಾರದಿಂದ ತಕ್ಕಡಿ ಕೆಳಗಿಳಿಯುವುದೆಂದು ಜನರ ನಂಬಿಕೆ. 'ತಂಡುಲದಿವ್ಯ' ಎಂಬುದು ಇನ್ನೊಂದು ಇಂಥ ದಿವ್ಯ. ಇದರಲ್ಲಿ ದೇವರ ವಿಗ್ರಹವನ್ನು ತೊಳೆದ ನೀರು ಮತ್ತು ಮಂತ್ರಗಳಿಂದ ಪವಿತ್ರಗೊಳಿಸಿದ ಅಕ್ಕಿಯನ್ನು ಆರೋಪಿಗೆ ತಿನ್ನಿಸುತ್ತಿದ್ದರು. ಈ ಪವಿತ್ರ ಅಕ್ಕಿಯನ್ನು ತಿಂದವನು ರಕ್ತಕಾರಿಕೊಂಡರೆ ದೋಷಿಯೆಂದೂ, ಇಲ್ಲದಿದ್ದರೆ ನಿರ್ದೋಷಿಯೆಂದೂ ತೀರ್ಮಾನವಾಗುತ್ತಿತ್ತು.

'ಧರ್ಮದಿವ್ಯ' ಎಂಬ ಇನ್ನೊಂದು ಸ್ವಾರಸ್ಯಕರವಾದ ವಿಧಾನವುಂಟು. ಇದರಲ್ಲಿ ಧರ್ಮವನ್ನು ಪ್ರತಿನಿಧಿಸುವ ಒಂದು ಬಿಳಿಯ ಮೂರ್ತಿಯನ್ನೂ ಅಧರ್ಮ ಪ್ರತೀಕವಾದ ಒಂದು ಕರಿಯ ಮೂರ್ತಿಯನ್ನೂ ಸಗಣಿ ಅಥವಾ ಜೇಡಿ ಮಣ್ಣಿನ ಮೇಲೆ ಇರಿಸಿದ ಒಂದು ಮಡಕೆಯೊಳಗೆ ಇಟ್ಟಿರುತ್ತಾರೆ. ಶೋಧ್ಯನು–ಅಂದರೆ ಪರೀಕ್ಷೆಗೆ ಒಳಗಾದವನು– ಆ ಮಡಕೆಯೊಳಗೆ ಕೈಹಾಕಿ ಎರಡರಲ್ಲೊಂದು ಮೂರ್ತಿಯನ್ನು ತೆಗೆಯುತ್ತಾನೆ. ಬಿಳಿಯ ಮೂರ್ತಿ ಬಂದರೆ ನಿರಪರಾಧಿಯೆಂದೂ ಕರಿಯ ಮೂರ್ತಿ ಬಂದರೆ ಅಪರಾಧಿಯೆಂದೂ ನಿರ್ಣಯಿಸಲಾಗುತ್ತದೆ. ಇಲ್ಲಿ ತಕ್ಷಣ ಪ್ರಾಣಾಪಾಯ, ನೋವು ಇತ್ಯಾದಿ ಇಲ್ಲ. ದೈವದ ಬಲ ಹಾಗೂ ನೈತಿಕ ಧೈರ್ಯ ಬೇಕು, ಅಷ್ಟೆ.

ಕುದಿಯುವ ತುಪ್ಪದಲ್ಲಿ ಹಾಕಿದ ಚಿನ್ನದುಂಗುರವನ್ನು ತೆಗೆಯುವ 'ತಪ್ತಮಾಷ', ಮಂತ್ರದ ನೀರನ್ನು ಬೊಗಸೆಯಲ್ಲಿ ಕುಡಿದು ಹದಿನಾಲ್ಕು ದಿನಗಳ ಕಾಲ ಬದುಕಿ ಉಳಿಯುವ 'ಕೋಶದಿವ್ಯ', ಕುದಿಯುವ ಎಣ್ಣೆಯಿಂದ ಕಬ್ಬಿಣದ ಪಟ್ಟಿಯನ್ನು ತೆಗೆಯುವ ಅಥವಾ ಅದನ್ನು ನಾಲಿಗೆಯಿಂದ ನೆಕ್ಕುವ 'ಫಾಲದಿವ್ಯ' ಪಾಪದಿಂದ ಭಾರವಾಗುವ ನೇಗಿಲನ್ನು ಎತ್ತುವ 'ಹಲದಿವ್ಯ', ಕೆಂಡ ಅಥವಾ ಉರಿಯುವ ಬೆಂಕಿಯನ್ನು ಹೊಗುವ 'ಅಪ್ಸದಿವ್ಯ' ಮುಂತಾದ ಇನ್ನು ಕೆಲವು ದಿವ್ಯಗಳನ್ನು ಶಾಸ್ತ್ರಗ್ರಂಥಗಳು ಪ್ರಸ್ತಾಪಮಾಡಿವೆ.

ಈ ಶಾಸ್ತ್ರೋಕ್ತ ದಿವ್ಯಗಳಲ್ಲದೆ ವಿವಿಧ ಜನಾಂಗಗಳಲ್ಲಿ ಸ್ಥಳೀಯ ಮಟ್ಟದಲ್ಲಿ ಕಂಡು ಬರುವ ದೈವೀ ಪರೀಕ್ಷೆಗಳಿಗೆ ಲೆಕ್ಕವಿಲ್ಲ.ಇವುಗಳಲ್ಲಿ ಹೆಚ್ಚು ವ್ಯಾಪಕವಾದುದು ಜೇನುಗಳಿಂದ

ತುಂಬಿದ ಅಥವಾ ವಿಷಸರ್ಪಗಳಿರುವ ಮಡಕೆಯೊಳಗೆ ಆಪಾದಿತನು ಕೈಹಾಕಬೇಕೆಂಬ ಪರೀಕ್ಷೆ. ಆ ಮಡಕೆಯೊಳಗೆ ಹಾಕಿರುವ ಉಂಗುರ ಅಥವಾ ಬೇರೆ ಯಾವುದೇ ವಸ್ತುವನ್ನು ಚೇಳು ಅಥವಾ ಹಾವುಗಳಿಂದ ಕಡಿಸಿಕೊಳ್ಳದೇ ಹೊರ ತೆಗೆದರೆ ಅವನು ಗೆದ್ದಂತೆ. ಕರ್ನಾಟಕದ ಕಾಡುಗೊಲ್ಲದಲ್ಲಿ ಅಗ್ನಿದಿವ್ಯದ ಒಂದು ಸ್ಥಳೀಯ ನಮೂನೆಯನ್ನು ಕಾಣಬಹುದು. ಪರಸ್ತ್ರೀ ಸಂಗದ ಆರೋಪವನ್ನು ಹೊತ್ತವನು ಕೈಯಲ್ಲಿ ಕಾದ ಕಬ್ಬಿಣದ ಸರಳನ್ನು ಹಿಡಿದುಕೊಳ್ಳಬೇಕು ಅಥವಾ ಬೆಂಕಿಯುಂಡೆಯನ್ನು ಕೈಯಲ್ಲಿ ಹಿಡಿಯಬೇಕು. ಕುರವನ್ನರೆಂಬ ಬುಡಕಟ್ಟಿನಲ್ಲಿ ಕಂಡುಬರುವ ಒಂದು ಸತ್ವಪರೀಕ್ಷೆ ಬಹಳ ಸ್ವಾರಸ್ಯಕರವಾಗಿದೆ. ಸಮಾನ ಅಳತೆಯ ಅಕ್ಕಿ ಮತ್ತು ನೀರನ್ನು ಮಡಕೆಗಳಲ್ಲಿ ಇಟ್ಟು ಸಮಾನ ತೂಕದ ಸೌದೆಯನ್ನು ಅಪರಾಧಿ ಮತ್ತು ಫಿರ್ಯಾದಿ ಇಬ್ಬರಿಗೂ ಕೊಡುತ್ತಾರೆ. ನ್ಯಾಯ ನಿರ್ಣಯ ಮಾಡುವ ಹಿರಿಯರು ತೂಕಗಳು ಸರಿಯಾಗಿವೆಯೇ ಎಂದು ಮೇಲಿಂದ ಮೇಲೆ ಪರೀಕ್ಷೆ ಮಾಡಿದ ನಂತರ ಎರಡೂ ಮಡಿಕೆಗಳಲ್ಲಿರುವ ಅಕ್ಕಿಯನ್ನು ಬೇಯಿಸುತ್ತಾರೆ. ಯಾರ ಅಕ್ಕಿ ಮೊದಲು ಅನ್ನವಾಗುತ್ತದೆಯೋ ಅವರು ವಿವಾದದಲ್ಲಿ ಗೆದ್ದವರೆಂದು ನಿರ್ಣಯಿಸುತ್ತಾರೆ. ಸೋತವನಿಂದ ದಂಡ ವಸೂಲಿಮಾಡುತ್ತಾರೆ. ಶಾಸ್ತ್ರಗ್ರಂಥಗಳಲ್ಲಿ ಹೇಳಿದ ಕುದಿಯುವ ತುಪ್ಪದ ಬದಲು ಜಾನಪದರು ಅಥವಾ ಬುಡಕಟ್ಟಿನವರು ಕುದಿಯುವ ಎಣ್ಣೆಯಲ್ಲಿ ಕೈ ಹಾಕಲು ಹೇಳುತ್ತಾರೆ. ಕೈಯಲ್ಲಿ ಗುಳ್ಳೆಗಳಾಗದಿದ್ದರೆ ನಿರಪರಾಧಿಯೆಂದು ಸಾಬೀತಾಗುತ್ತದೆ.

ಇವೆಲ್ಲ ಪರೀಕ್ಷೆಗಳು ಅಪರಾಧವನ್ನು ಅಥವಾ ನ್ಯಾಯಾನ್ಯಾಯಗಳನ್ನು ನಿರ್ಣಯಿಸಲು ಶಕ್ತವಾಗುತ್ತವೆಯೇ ಎಂಬ ಆಧುನಿಕರ ಪ್ರಶ್ನೆಯನ್ನು ಮನುಸ್ಮೃತಿಗೆ ಭಾಷ್ಯ ಬರೆದ ಮೇದಾತಿಥಿ ಉತ್ತರ ಹೇಳಿದ್ದಾನೆ. ಅವನು ಹೇಳುವಂತೆ ಇವು ಮಂತ್ರ ಮಾಟಗಳಂತೆ ತಪ್ಪಿತಸ್ಥರನ್ನು ಹೆದರಿಸಿ ಸತ್ಯ ಹೊರಬರುವಂತೆ ಮಾಡುವ ಉಪಾಯಗಳೇ ಹೊರತು ಮತ್ತೇನೂ ಅಲ್ಲ. ನಂಬಲರ್ಹವಾದ ಸಾಕ್ಷಿ ಪುರಾವೆಗಳು ಇಲ್ಲದ ಎಡೆಯಲ್ಲಿ ಮಾತ್ರ ದಿವ್ಯಗಳನ್ನು ಬಳಸಿಕೊಳ್ಳಬೇಕೆಂದು ಅವನ ಅವನ ಅಭಿಪ್ರಾಯ. ಕಾತ್ಯಾಯನ ಎಂಬ ಇನ್ನೊಬ್ಬ ಸ್ಮೃತಿಕಾರನು ಹೇಳುವಂತೆ ಅಂಥ ಸಾಕ್ಷ್ಯಾಧಾರಗಳಿದ್ದೂ ದಿವ್ಯಗಳ ಸಹಾಯದಿಂದ ನ್ಯಾಯನಿರ್ಣಯವಾಗಲಿ ಎಂದು ಕೇಳುವವನನ್ನು ಅಪರಾಧಿಯೆಂದೇ ಪರಿಗಣಿಸಬೇಕು; ಏಕೆಂದರೆ ಮಾನವ ಸಾಕ್ಷ್ಯಾಧಾರಗಳು ಮುಖ್ಯವೇ ಹೊರತು ಇಂಥ ಪರೀಕ್ಷೆಗಳಲ್ಲ. ಇದು ಇನ್ನೂ ಹಲವರ ಅಭಿಮತ.

ಸುಳ್ಳು ಹೇಳುವವನು ದಿವ್ಯಗಳಲ್ಲಿ ಪಾರಾಗಲಾರನು ಹಾಗೂ ಸತ್ಯವಂತನಿಗೆ ಎಂದೂ ಕೆಡುಕಾಗುವುದಿಲ್ಲ ಎಂದು ಎರಡೂ ಪಕ್ಷಗಳವರು ಹಾಗೂ ಸಮುದಾಯದ ಬಹುತೇಕ ಜನರು ನಂಬಿರುವ ತನಕ ಇವು ಪರಿಣಾಮಕಾರಿಯಾಗಿರುತ್ತವೆ. ನಿರಪರಾಧಿಯೂ ವಿಷ ಕುಡಿಯುವ ದಿವ್ಯದಲ್ಲಿ ಸಾಯಬಹುದು, ಕಾದ ಕಬ್ಬಿಣದ ಗುಂಡು ಯಾರ ಕೈಯನ್ನೂ ಸುಡಬಹುದು ಅಥವಾ ಕುತಂತ್ರಗಾರನು ದಿವ್ಯದಿಂದ ನಿರಪರಾಧಿಯೊಬ್ಬನನ್ನು ಅಪರಾಧಿ

ಯೆಂದೂ, ಅಪರಾಧಿಯನ್ನು ನಿರಪರಾಧಿಯೆಂದೂ ಸಾಧಿಸಬಲ್ಲನು ಎಂಬಿತ್ಯಾದಿ ಅರಿವು ಮೂಡಿದಾಗ ಯಾರೂ ದಿವ್ಯಗಳನ್ನು ಒಪ್ಪುವುದು ಸಾಧ್ಯವಿಲ್ಲ. ಪ್ರಾಚೀನ ಕಾಲದಲ್ಲಿ ದೈವದ ಹೆದರಿಕೆ ಬಲವಾಗಿ ಇದ್ದ ಕಾಲದಲ್ಲಿ, ದಿವ್ಯಗಳ ಅತಿಮಾನುಷ ನೆಲೆಯನ್ನು ಎರಡೂ ಪಕ್ಷಗಳು ಒಪ್ಪುತ್ತಿದ್ದಾಗ ಅಥವಾ ನ್ಯಾಯನಿರ್ಣಯ ಮಾಡುವವರಿಗೆ ಬೇರೆ ಯಾವ ಉಪಾಯಗಳೂ ಹೊಳೆಯದ ಕಾಲದಲ್ಲಿ, ಉಗ್ರ ಅಪರಾಧಗಳನ್ನು ನಿರ್ಣಯಿಸುವಾಗ ಮಾತ್ರ ದಿವ್ಯಗಳನ್ನು ಏರ್ಪಡಿಸುತ್ತಿದ್ದರು. ಚಿಕ್ಕಪುಟ್ಟ ಆಪಾದನೆಗಳನ್ನು ತೀರ್ಮಾನಿಸುವಾಗ ಶಪಥ ಅಥವಾ ಆಣೆ-ಪ್ರಮಾಣದಂಥ ಹಗುರ ವಿಧಾನಗಳನ್ನು ಬಳಸುತ್ತಿದ್ದುದನ್ನು ನೋಡುತ್ತೇವೆ.

ಮೊಗಲರ ಮತ್ತು ಬ್ರಿಟಿಷರ ಆಡಳಿತ ಕಾಲದಲ್ಲಿ ಕ್ರಮೇಣ ದೈವಪರೀಕ್ಷೆಗಳ ಬಳಕೆ ಕಡಿಮೆಯಾಗುತ್ತ ಹೋಯಿತು. ರಾಜಶಾಸನವೇ ಎಲ್ಲ ಕಡೆಗಳಲ್ಲಿ ಪರಿಪಾಲಿಸಲ್ಪಡಬೇಕೆಂಬ ಮಾತು ಗಟ್ಟಿಯಾಯಿತು. ಬುಡಕಟ್ಟಿನ ನ್ಯಾಯದ ವಿರುದ್ಧ ಅಥವಾ ಗ್ರಾಮ ಪಂಚಾಯತುಗಳು ನೀಡಿದ ನಿರ್ಣಯಗಳ ವಿರುದ್ಧ ಸರಕಾರಿ ನ್ಯಾಯಾಲಯಗಳಿಗೆ ಮನವಿ ಮಾಡಿಕೊಳ್ಳುವುದು ಹೆಚ್ಚಿತು. ಆದರೂ ಎರಡೂ ಪಕ್ಷಗಳಿಗೆ ಸಹಮತವಿದ್ದರೆ ದಿವ್ಯಗಳ ಮುಖಾಂತರ ನ್ಯಾಯ ಪಡೆಯಬಹುದೆಂಬ ಮಾತನ್ನು ಭಾರತದ ಬ್ರಿಟಿಷ್ ಕಾಯ್ದೆಗಳು ಒಪ್ಪಿದ್ದವು. ೧೮೭೩ರ ಭಾರತೀಯ ಶಪಥ ಕಾಯ್ದೆಯ ೮ ಮತ್ತು ೧೧ನೆಯ ಅನುಚ್ಛೇದದಲ್ಲಿ ಇದಕ್ಕೆ ಆಸ್ಪದವಿತ್ತು. ಇವುಗಳನ್ನು ೧೯೬೯ರ ಹೊಸ ಭಾರತೀಯ ಶಪಥ ಕಾಯ್ದೆ ಪೂರ್ಣವಾಗಿ ಕೈಬಿಟ್ಟಿದೆ. ಕಾಯ್ದೆ ಮಾತ್ರವಲ್ಲ, ನಗರವಾಸಿಗಳೂ ಗ್ರಾಮೀಣರೂ ಈಗ ಅವುಗಳನ್ನು ಒಪ್ಪುವುದಿಲ್ಲ. ಅಪರಾಧವು ಸಾಬೀತಾಗುವವರೆಗೆ ಆರೋಪಿತನು ನಿರ್ದೋಷಿಯೆಂದೇ ತಿಳಿಯಬೇಕು ಎಂಬ ಭಾವನೆ ಬೆಳೆದಿರುವುದರಿಂದಲೂ, ಅಪರಾಧವನ್ನು ಶೋಧಿಸುವ ಮತ್ತು ನಿರ್ಧರಿಸುವ ವಿಧಿವಿಧಾನಗಳೂ ಸವಲತ್ತುಗಳೂ ಹೆಚ್ಚಿರುವುದರಿಂದಲೂ, ಕಾಯ್ದೆಗಳು, ಕೋರ್ಟುಗಳು, ನ್ಯಾಯಾಧೀಶರುಗಳು, ನ್ಯಾಯವಾದಿಗಳು ಮುಂತಾದ ನ್ಯಾಯ ನಿರ್ಣಯ ಪರಿಕರಗಳು ಲಭ್ಯವಾಗಿರುವುದರಿಂದಲೂ, ಮನವಿ-ಮೇಲ್ಮನವಿ ಮುಂತಾದ ಪ್ರಕ್ರಿಯೆಗಳು ಬೆಳೆದಿರುವುದರಿಂದಲೂ,ನ್ಯಾಯನಿರ್ಣಯ ಪ್ರಕ್ರಿಯೆಯಲ್ಲಿ ಮೂಢನಂಬಿಕೆ, ದೈವೀಶಕ್ತಿ, ಪವಾಡಗಳನ್ನು ಮಾನ್ಯಮಾಡದೇ ಇರುವುದರಿಂದಲೂ, ಲೌಕಿಕೀಕರಣ ಪ್ರಕ್ರಿಯೆ ಬಲಗೊಂಡಿರುವುದರಿಂದಲೂ ದಿವ್ಯಗಳಿಗೆ ಸ್ಥಾನವಿಲ್ಲ. ಕೆಲವು ಹಿಂದುಳಿದ ಬುಡಕಟ್ಟುಗಳಲ್ಲಿ ಹಾಗೂ ಆಧುನಿಕೀಕರಣದಿಂದ ದೂರ ಉಳಿದ ಕೆಲವು ಗ್ರಾಮೀಣ ನೆಲೆಗಳಲ್ಲೂ ದಿವ್ಯಗಳ ಕುರುಹುಗಳು ಖಂಡಿತವಾಗಿಯೂ ಉಳಿದಿರಬಹುದು. ಆದರೆ ಆಧುನಿಕೀಕರಣದ ಪ್ರಭಾವದಿಂದ ಅಲ್ಲಿಯೂ ಕೂಡ ದಿವ್ಯಗಳ ದಿವ್ಯಶಕ್ತಿ ಮತ್ತು ಬರ್ಬರತೆ ಕಡಿಮೆಯಾಗುವ ಸಂಭವವಿದೆ.

೪

'ಹ್ಯೊಲು' ಎಂಬುದು ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಪ್ರಚಲಿತವಾಗಿರುವ

ದೇವರ ನ್ಯಾಯದ ಒಂದು ವಿಶಿಷ್ಟ ರೂಪ. ಇಂದಿನ ಕೋರ್ಟು-ಕಚೇರಿಗಳೂ ಅಂದಿನ ರಾಜಪ್ರತಿನಿಧಿಗಳೂ ವ್ಯವಹರಿಸಲು ಸಾಧ್ಯವಾಗದ ಹಳ್ಳಿಗಾಡಿನಲ್ಲಿ ಜನರ ವಾದವಿವಾದಗಳನ್ನೂ ದೂರುಗಳನ್ನೂ ಕೇಳಿ ತೀರ್ಮಾನ ಕೊಡುವುದು ಸುಲಭವಾದ ಕೆಲಸವಲ್ಲ. ಅನ್ಯಾಯವಾದವನು ತನ್ನ ನ್ಯಾಯವನ್ನು ಸಮರ್ಥಿಸಲು ಸಾಕ್ಷಿ, ಆಧಾರಗಳನ್ನು ಕೊಡಲಾಗದ ಸ್ಥಿತಿ ಇರುತ್ತದೆ. ಗ್ರಾಮಪಂಚಾಯತಿಗಳೂ ನ್ಯಾಯಪಂಚಾಯತಿಗಳೂ ಇಲ್ಲದಿರುವಾಗ ಅಥವಾ ಅವು ನ್ಯಾಯ ಕೊಡಲು ಅಸಮರ್ಥವಾದಾಗ ಜನರು ದೇವರನ್ನು ಮೊರೆಹೋಗುವುದು ಸಹಜ. ಹೀಗೆ ದೇವರಿಗೆ ದೂರುಕೊಡುವುದನ್ನು ಕರಾವಳಿ ಜಿಲ್ಲೆಗಳ ಜನರು ಹ್ಯೊಲು (ಹುಯಿಲು) ಎಂದು ಕರೆಯುತ್ತಾರೆ. ಹ್ಯೊಲು ಕೊಡುವುದಕ್ಕೆ ಹಾಗೂ ಹ್ಯೊಲು ಪರಿಹಾರಕ್ಕೆ ಕೆಲವು ವಿಧಾನಗಳನ್ನು ಹಳ್ಳಿಗರೇ ರೂಪಿಸಿದ್ದಾರೆ.

ಅನ್ಯಾಯವಾದವನು ತಾನು ಇಂತಿಂತಹ ದೇವರಿಗೆ ಹ್ಯೊಲು ಕೊಡುತ್ತೇನೆ ಎಂಬುದನ್ನು ಮೊದಲು ಜಾಹೀರುಪಡಿಸಬೇಕು. ನಂತರ ತನ್ನ ದೂರನ್ನು ಹ್ಯೊಲು ಸ್ವೀಕರಿಸುವ ದೇವರಿಗೆ ಮುಟ್ಟಿಸಿ ಪರಿಹಾರ ಕೇಳಬೇಕು. ಆದರೆ ಅವನು ಪ್ರತ್ಯಾರೋಪಿಯ ವಿನಾಶವಾಗಲಿ ಎಂದು ಕೇಳಬಾರದು. ತನಗೆ ಸರಿಯಾದ ಪರಿಹಾರ ಸಿಕ್ಕರೆ ತಾನು ದೇವರಿಗೆ ಇಂತಿಂತಹ ಕಾಣಿಕೆ ಮುಟ್ಟಿಸುತ್ತೇನೆ ಎಂಬ ವಚನ ಕೊಡಬೇಕು. ಅಂತಹ ಪರಿಹಾರ ಸಿಕ್ಕಕೂಡಲೇ ವಚನದಂತೆ ಕಾಣಿಕೆ ಒಪ್ಪಿಸಬೇಕು. ಹ್ಯೊಲು ದೇವರುಗಳು ತಮ್ಮ ಭಕ್ತರ ಹ್ಯೊಲನ್ನು ಪಾತ್ರಿ, ಗಾಡಿಗ, ಪೂಜಾರಿ, ಮಂತ್ರವಾದಿ, ಮೊಕ್ತೇಸರ ಅಥವಾ ಧರ್ಮಾಧಿಕಾರಿಗಳ ಮುಖಾಂತರವಾಗಿ ಪಡೆಯುತ್ತವೆ. ನ್ಯಾಯಾನ್ಯಾಯವನ್ನು ವಿಮರ್ಶಿಸಿ ದೈವವು ಯಾರಿಗೆ ಅನ್ಯಾಯವಾಗಿದೆಯೋ ಅವನಿಗೆ ಪರಿಹಾರ ಕೊಡುವುದಾಗಿಯೂ ಅನ್ಯಾಯ ಮಾಡಿದವನಿಗೆ ತಕ್ಕ ಶಿಕ್ಷೆ ಕೊಡುವುದಾಗಿಯೋ ಭರವಸೆ ಕೊಡುತ್ತದೆ. ಕೆಲವೊಮ್ಮೆ ದೈವವು ತನ್ನ ಶಕ್ತಿಯ ಕುರುಹನ್ನು ಶೀಘ್ರದಲ್ಲಿಯೇ ತೋರಿಸುವುದಾಗಿಯೂ ಹೇಳುತ್ತದೆ. ಆಗ ತಪ್ಪು ಮಾಡಿದವನು ಎಚ್ಚೆತ್ತು ದೈವಕ್ಕೆ ತಪ್ಪುದಂಡ ಕೊಟ್ಟು ತಾನು ಮಾಡಿದ ಅನ್ಯಾಯವನ್ನು ಸರಿಪಡಿಸುವುದರ ಬಗೆಗೆ ವಿಚಾರ ಮಾಡುತ್ತಾನೆ. ಮಾಲು ಕದ್ದಿದ್ದರೆ ಆ ಮಾಲನ್ನು ಹಿಂದಿರುಗಿಸುತ್ತಾನೆ. ಅನ್ಯಾಯವಾಗಿ ಭೂಮಿಯನ್ನು ಆಕ್ರಮಣ ಮಾಡಿಕೊಂಡಿದ್ದರೆ ಅದನ್ನು ಬಿಟ್ಟುಕೊಡಬೇಕಾಗುತ್ತದೆ. ಇದಕ್ಕೆ ತಪ್ಪಿದರೆ ದೈವದ ಶಿಕ್ಷೆ ಪ್ರಾರಂಭವಾಗುತ್ತದೆ. ಅವನ ಕುಟುಂಬದ ಜನರಿಗೆ, ಜಾನುವಾರುಗಳಿಗೆ, ಬೆಳೆಗಳಿಗೆ ಕೇಡು ಬಂದೊದಗುತ್ತದೆ. ಇದರ ಸುಳಿವು ಸಿಕ್ಕಿದೊಡನೆ ಅವನ ಕುಟುಂಬದವರು ತಮಗೆ ಇಂತಹ ವಿಪತ್ತುಗಳು ಏಕೆ ಬಂದಿರಬಹುದು ಎಂಬ ಜಿಜ್ಞಾಸೆಗೆ ತೊಡಗುತ್ತಾರೆ. ಆಗ ತಪ್ಪು ಮಾಡಿದವನು ತನಗೆ ಮತ್ತಷ್ಟು ವಿಪತ್ತುಗಳು ಬಾರದೇ ಇರಲಿ ಎಂದು ತನ್ನ ತಪ್ಪೊಪ್ಪಿಕೊಂಡು ಅನ್ಯಾಯ ಸರಿಪಡಿಸುತ್ತಾನೆ. ಇಲ್ಲಿಗೆ ಹ್ಯೊಲು ಪರಿಹಾರವಾಯಿತು ಎನ್ನುತ್ತಾರೆ.

ಮೇಲೆ ವರ್ಣಿಸಿದ ಹ್ಯೊಲು ಪದ್ಧತಿ ಎಷ್ಟು ಪ್ರಾಚೀನ ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಅದು ಕೆಲವು ನೂರು ವರ್ಷಗಳಿಂದಲೂ ಇದ್ದಿರಬಹುದೆಂದು

ಊಹಿಸಬಹುದು. ಧರ್ಮಸ್ಥಳ ಕ್ಷೇತ್ರದ ಬಗ್ಗೆ ಇರುವ ಇಂತಹ ಅತಿ ಹಳೆಯ ಪ್ರಸ್ತಾಪವನ್ನು ಸ್ಟೋಕ್ಸ್ ಎಂಬುವನು ೧೮೩೭ರಲ್ಲಿ ಕೊಟ್ಟಿದ್ದಾನಂತೆ. ಇನ್ನುಳಿದ ಪ್ರೊಲು ಕೇಂದ್ರಗಳ ಬಗ್ಗೆ ಸಿಗುವ ಲೇಖಿ ದಾಖಲೆಗಳು ಈಚೆಗಿನವು. ಧರ್ಮಸ್ಥಳ ಕ್ಷೇತ್ರದಲ್ಲಿ ಪ್ರೊಲಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ೧೯೨೨ರಿಂದ ಪ್ರತ್ಯೇಕ ಇಟ್ಟಿದ್ದಾರೆ. ದಕ್ಷಿಣಕನ್ನಡದ ಕೆಲವು ದೊಡ್ಡ ದೇವಾಲಯಗಳಲ್ಲಿ ಪ್ರೊಲು ಸ್ವೀಕರಿಸುವ ಪದ್ಧತಿ ಇದ್ದರೂ ದಾಖಲೆಗಳನ್ನು ಇಟ್ಟಿಲ್ಲ. ಇನ್ನು ಉತ್ತರಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಜನರು ತಮ್ಮ ನೆನಪಿನಿಂದ ಹೇಳುವ ಕತೆಗಳನ್ನು ಬಿಟ್ಟರೆ ಬೇರೆ ಮಾಹಿತಿ ದುರ್ಲಭವಾಗಿದೆ. ಒಂದೇ ಒಂದು ಅಪವಾದವೆಂದರೆ, ಈ ಜಿಲ್ಲೆಯ 'ತ್ತೋಟಗಪ್ಪೆ' ಎಂಬ ಗ್ರಾಮದಲ್ಲಿ ಹಾರ್ಪರನು ನಡೆಸಿದ ಅಧ್ಯಯನದಲ್ಲಿ ಪ್ರೊಲಿನ ಪ್ರಸ್ತಾಪ ಬಂದಿದೆ.

ಈ ಪದ್ಧತಿ ಎಷ್ಟು ವ್ಯಾಪಕವಾಗಿದೆಯೆಂಬ ಪ್ರಶ್ನೆಯನ್ನು ಈಗ ಎತ್ತಿಕೊಳ್ಳಬಹುದು. ನಮಗೆ ಸಿಗುವ ಮಾಹಿತಿಯ ಪ್ರಕಾರ, ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಅದು ಸಾಕಷ್ಟು ವ್ಯಾಪಕವಾಗಿತ್ತು. ಇವೆರಡು ಜಿಲ್ಲೆಗಳಿಗೆ ತಾಗಿಕೊಂಡಿರುವ ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲೂ ಕೇರಳದ ಕಾಸರಗೋಡು ತಾಲ್ಲೂಕಿನಲ್ಲೂ ಪ್ರೊಲಿನ ಪರಿಚಯವಿದೆ. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಮಲೆನಾಡಿನ ಭಾಗಗಳಲ್ಲಂತೂ (ಅದರಲ್ಲೂ ಹಳೆಯ ತಲೆಮಾರಿನವರಿಗೆ) ಪ್ರೊಲಿನ ಪರಿಚಯ ಸಾಕಷ್ಟು ಇದೆ. ಪಟ್ಟಣ ಪ್ರದೇಶಗಳಿಗೆ ಬಂದಂತೆ ಪ್ರೊಲಿನ ಬಗೆಗೆ ಭಯ, ಶ್ರದ್ಧೆಗಳು ಕಡಿಮೆ ಎಂದರೆ ತಪ್ಪಿಲ್ಲ. ಜಿಲ್ಲಾ ಸ್ಥಳದಲ್ಲಿರುವ ಕಾಲೇಜು ಕಲಿಯುವ ಹುಡುಗರು "ಪ್ರೊಲೆ? ಹೌದು, ಅದರ ಹೆಸರು ಕೇಳಿದಂತಿದೆ. ನಮ್ಮ....ಇವರಿಗೆ ಕೇಳಿ. ಅವರಿಗೆ ಸರಿಯಾಗಿ ಗೊತ್ತಿರಬಹುದು" ಎಂದು ಯಾರೋ ಹಿರಿಯರ ಹೆಸರನ್ನು ಹೇಳುತ್ತಾರೆ.

ಪ್ರೊಲಿನ ಬಗೆಗೆ ಹೇಳುವಾಗ ಇನ್ನೊಂದು ವಿಶೇಷವನ್ನು ಹೇಳಲೇಬೇಕು. ಎಲ್ಲ ದೇವಾಲಯಗಳೂ ದೇವರುಗಳೂ ಪ್ರೊಲು ಸ್ವೀಕರಿಸಬೇಕೆಂದೇನೂ ಇಲ್ಲ. ಅವರು ಪ್ರಾರ್ಥನೆ, ಹರಕೆಗಳನ್ನು ಸ್ವೀಕರಿಸುತ್ತಾರೆ. ಆದರೆ ಪ್ರೊಲು ತೆಗೆದುಕೊಳ್ಳುವ ವಾಡಿಕೆಯಿಲ್ಲ. ಈ ವಾಡಿಕೆಯಿರುವ ದೇವಾಲಯಗಳಲ್ಲಿ ಅತಿ ಪ್ರಸಿದ್ಧವಾದುದು ಧರ್ಮಸ್ಥಳದ ಶ್ರೀ ಮಂಜುನಾಥಸ್ವಾಮಿ ದೇವಾಲಯ. ಇಲ್ಲಿಯ ಅಣ್ಣಪ್ಪದೈವ ಪ್ರೊಲಿನ ದೇವರೆಂದು ಪ್ರಸಿದ್ಧನಾಗಿದ್ದಾನೆ. ಉತ್ತರ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ನೂರಾರು ಹಳ್ಳಿಗಳಲ್ಲಿ ಸರ್ವೇಸಾಮಾನ್ಯವಾಗಿ ಕಂಡುಬರುವ ಗ್ರಾಮದೇವತೆ ಚೌಡಿಯು ಹಳ್ಳಿಗರ ಪ್ರೊಲು ಕೇಳುತ್ತಾಳೆ.

ನಾವು ಈಗಾಗಲೇ ಹೇಳಿದಂತೆ, ಪ್ರೊಲು ಎಂಬುದು ದೈವದ ಸಹಾಯದಿಂದ ನ್ಯಾಯವನ್ನು ಪಡೆಯುವ ಒಂದು ವಿಶಿಷ್ಟ ರೀತಿ. ಹಿಂದೆ ದೇವಾಲಯಗಳು ನ್ಯಾಯಾಲಯಗಳೂ ಆಗಿದ್ದವು ಎಂಬುದಕ್ಕೆ ಪ್ರೊಲು ಪದ್ಧತಿ ಒಂದು ಉತ್ತಮ ಸಾಕ್ಷಿ. ಅನ್ಯಾಯ

ವಾಗಿ ಯಾರಾದರೂ ಭೂಮಿ ಕಸಿದುಕೊಂಡರೆ, ಚಿನ್ನ ಬೆಳ್ಳಿ ವಸ್ತು ಒಡವೆ ಕದ್ದರೆ, ಬೆಳೆ ಕದ್ದರೆ, ಕೊಟ್ಟ ಸಾಲ ತಿರುಗಿ ಬಾರದಿದ್ದರೆ ಅಥವಾ ಅಡವಿಟ್ಟ ದಾಗೀನು ಹಣ ಸಂದಾಯವಾಗಲೂ ವಾಪಾಸು ಬಾರದಿದ್ದರೆ, ನೊಂದವರು ದೇವರಿಗೆ ಹ್ಯೊಲಿನ ರೂಪದಲ್ಲಿ ದೂರು ಕೊಡುತ್ತಾರೆ. ತನಗೇನೋ ಅನ್ಯಾಯವಾಗಿದೆ, ಅದನ್ನು ದೈವವು ಸರಿಪಡಿಸಲಿ, ನ್ಯಾಯ ಕೊಡಿಸಲಿ ಎಂಬ ಭಾವನೆ ಇಲ್ಲಿ ಮುಖ್ಯವಾಗಿರುತ್ತದೆ. ಇಲ್ಲಿ ಆಭರಣ ಕದ್ದ ಕಳ್ಳನು, ಗಂಟನ್ನು ಮುಳುಗಿಸಿದ ಸಾಲಗಾರನು, ಹೆಂಡತಿಯನ್ನು ಬಿಟ್ಟ ಗಂಡನು ಅಥವಾ ಇಂತಹ ಬೇರೆ ಅಪರಾಧಿಯು ವಿನಾಶ ಹೊಂದಲಿ ಎಂಬ ಭಾವನೆಯಿರುವುದಿಲ್ಲ. ನನ್ನದು ನ್ಯಾಯವಿದ್ದರೆ ನನಗೆ ನ್ಯಾಯ ಸಿಗಲಿ ಎಂಬ ಧೋರಣೆಯಿರುತ್ತದೆ.

'ಮಾಟ' ಎಂಬುದು ಕೆಲವು ಲಕ್ಷಣಗಳಲ್ಲಿ ಹ್ಯೊಲಿನಂತೆ ಕಂಡರೂ ಇದರ ತದ್ವಿರುದ್ಧ ವಾಗಿರುತ್ತದೆ. ಇಲ್ಲಿ ನ್ಯಾಯಾನ್ಯಾಯಗಳ ವಿವೇಚನೆ ಮುಖ್ಯವಲ್ಲ. ಕೆಲವು ದುಷ್ಟ ಶಕ್ತಿಗಳನ್ನು ಮಂತ್ರವಾದಿಗಳ ಸಹಾಯದಿಂದ ಒಲಿಸಿಕೊಂಡು ವೈರಿಯ ವಿನಾಶವನ್ನು ಮಾಡಲು ಪ್ರಯತ್ನಿಸಲಾಗುತ್ತದೆ. ತನಗೆ ಆಗದ ಕೇಡು ಉಂಟಾಗಲಿ, ಅವನ ಸಂತಾನ ಹಾಳಾಗಿ ಹೋಗಲಿ, ರೋಗ-ರುಜಿನ ಬಡಿಯಲಿ ಎಂದು ದೈವದ ಮೇಲೆ ಒತ್ತಾಯ ತರಲಾಗುತ್ತದೆ.

ಇನ್ನು 'ಹರಕೆ'ಯ ವಿಷಯ: ಇದು ದೇವರು ನಮಗೆ ಒಳ್ಳೆಯದನ್ನು ಮಾಡಲಿ ಎಂಬ ಪ್ರಾರ್ಥನೆ. ನಮ್ಮ ಮಕ್ಕಳ ಕಾಹಿಲೆ ಬೇಗ ಗುಣವಾಗಲಿ, ನಮ್ಮ ಓಟದ ಕೋಣ ಕಂಬಳದಲ್ಲಿ ಗೆಲ್ಲಲಿ, ನಮ್ಮ ಆಕಳು ತಂಬಿಗೆ ತುಂಬ ಹಾಲು ಕೊಡಲಿ, ಬಸುರಿ ಹೆಣ್ಣು ಗಂಡುಮಗುವನ್ನೇ ಹಡೆಯಲಿ ಇತ್ಯಾದಿ ಬೇಡಿಕೊಂಡರೆ ಅದು ಹರಕೆ. ಹೀಗೆ ನಮಗೆ ಒಳ್ಳೆಯದಾಗಲಿ ಎಂದು ದೇವರನ್ನು ಬೇಡಿಕೊಂಡರೆ ಹರಕೆ; ಬೇರೆಯವರಿಗೆ ಕೆಡುಕಾಗಲಿ ಎಂದು ಒತ್ತಾಯಿಸಿದರೆ ಮಾಟ; ದೇವರಿಗೆ ದೂರು ಸಲ್ಲಿಸಿ ನಮಗೆ ನ್ಯಾಯ ಸಿಗಲಿ ಎಂದರೆ ಹ್ಯೊಲು.

ಈ ಆಚರಣೆಗಳಲ್ಲಿ ಇನ್ನೊಂದು ಮುಖ್ಯ ಭೇದವಿದೆ. ಹ್ಯೊಲನ್ನು ಕೊಡುವವನು ಸಾರ್ವಜನಿಕವಾಗಿ ದೂರನ್ನು ಕೊಡುತ್ತಾನೆ. ಹಳ್ಳಿಯ 'ಹತ್ತು ಜನರು' ಅಥವಾ 'ಹತ್ತು ಸಮಸ್ತರ' ಸಮಕ್ಷಮ ದೂರು ಕೊಡಬೇಕಾಗುತ್ತದೆ. ಹೀಗೆ ಸಾರ್ವಜನಿಕವಾಗಿ ದೂರು ಕೊಡುವುದರಿಂದ ಅವನು ಯಾರ ಕೆಡುಕನ್ನೂ ಬಯಸುವುದಿಲ್ಲ; ತನಗಾದ ಅನ್ಯಾಯವು ಪರಿಹಾರವಾಗಲಿ ಎಂದು ಕೇಳುತ್ತಿದ್ದಾನೆ ಎಂದು ಊರವರಿಗೆ ತಿಳಿಯುತ್ತದೆ. ಜನರು ಇದನ್ನು ಸಮರ್ಥಿಸುತ್ತಾರೆ. ಇನ್ನೊಂದು ಉದ್ದೇಶವೂ ಇರಬಹುದು. ತಪ್ಪು ಮಾಡಿದವನು ದೈವಕ್ಕೆ ಹೆದರಿ ತಪ್ಪು ಸರಿಪಡಿಸಿಕೊಳ್ಳಬಹುದೆಂಬ ಆಸೆಯೂ ಜನರಿಗಿರುತ್ತದೆ.

ಇನ್ನು ಹರಕೆ ಮತ್ತು ಹ್ಯೊಲುಗಳ ನಡುವಿನ ವ್ಯತ್ಯಾಸಗಳನ್ನು ನೋಡೋಣ.

ಹರಕೆಯು ಒಬ್ಬ ವ್ಯಕ್ತಿ ಅಥವಾ ಕುಟುಂಬದ ಖಾಸಗಿ ವಿಷಯ. ಅದನ್ನು ಕದ್ದು ಮುಚ್ಚಿ ಮಾಡಬೇಕಾದ ಪ್ರಮೇಯವೂ ಇಲ್ಲ; ಹತ್ತು ಸಮಸ್ತರ ಸಮಕ್ಷಮ ಹೊರಬೇಕೆಂಬ ನಿರ್ಬಂಧವೂ ಅಲ್ಲ. ಇನ್ನು ಮಾಟವಾದರೋ ತೆರೆಯ ಮರೆಯಲ್ಲಿ ನಡೆಸುವ ಕೃತ್ಯ. ಅದನ್ನು ಊರವರು ಒಪ್ಪುವುದಿಲ್ಲ. 'ಛೀ, ಥೂ' ಮಾಡಬಹುದು ಎಂಬ ಹೆದರಿಕೆಯಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಇನ್ನೊಂದು ವಿವರಣೆ ಕೊಡಬಹುದು. ಹರಕೆಯು ಸಮಾಜಕ್ಕೆ ಒಪ್ಪಿತವಾದ ಸರ್ವಸಾಮಾನ್ಯ ಆಚರಣೆ. ದೇವರನ್ನು ಒಲಿಸುವುದಕ್ಕೆ, ಇಷ್ಟಾರ್ಥಗಳನ್ನು ಪಡೆಯುವುದಕ್ಕೆ ಎಲ್ಲರಿಗೂ ಮುಕ್ತದ್ವಾರವಿದೆ. ಹರಕೆಗೆ ಹೋಲಿಸಿ ನೋಡಿದರೆ ಹ್ಯೊಲು ಹರಕೆಯಷ್ಟು ಸರ್ವಮಾನ್ಯವಲ್ಲ. ಸಮಾಜವು ಅದನ್ನು ಒಪ್ಪಬಹುದಾದರೂ ಅದು ಅಷ್ಟೇನೂ ಶ್ರೇಯಸ್ಕರವಲ್ಲ ಎಂಬ ಭಾವನೆಯಿದೆ. "ಹೊಯಿಲು ಕೊಡಲಿಕ್ಕೇನು ಬಂತು ಇವನಿಗೆ?" ಎಂದು ಕೆಲವು ಹಿರಿಯರು ಆಕ್ಷೇಪಿಸುವುದುಂಟು. ಮಾಟವಂತೂ ಸಮಾಜಕ್ಕೆ ಒಪ್ಪಿತವಾದ ಆಚರಣೆಯಲ್ಲ.

ಮೇಲಿನ ಮಾತುಗಳಿಂದ ಇನ್ನೊಂದು ವಿಷಯ ಸ್ಪಷ್ಟವಾಗುತ್ತದೆ. ಎಲ್ಲ ಜಾತಿಯವರು, ಎಲ್ಲ ವರ್ಗದವರು ಪ್ರತಿದಿನ ದೇವರೆದುರಿಗೆ ಹಲವಾರು ಬೇಡಿಕೆಗಳನ್ನಿಟ್ಟು ಹರಕೆ ಹೊರುತ್ತಾರೆ. ಹ್ಯೊಲುಗಳು ಹರಕೆಯಷ್ಟು ಸಂಖ್ಯೆಯಲ್ಲಿ ಕಂಡುಬರುವುದಿಲ್ಲ. ಅನಿವಾರ್ಯವೆನ್ನಿಸಿದಾಗ ಹ್ಯೊಲು ಕೊಡುವುದನ್ನು ಸಮುದಾಯ ಒಪ್ಪುವುದರಿಂದ ಆಗೊಮ್ಮೆ ಈಗೊಮ್ಮೆ ಹ್ಯೊಲಿಗೆ ಮೊರೆಹೋಗುತ್ತಾರೆ. ಮಾಟದ ಬಗೆಗೆ ನಿಶ್ಚಿತವಾಗಿ ಹೇಳುವುದು ಕಷ್ಟ. ಈಗಂತೂ ಅದು ತೀರ ಅಪರೂಪ.

ಇಂಥ ಆಚರಣೆಗಳು ಜಾತಿ ಸಂಪ್ರದಾಯಗಳ ಆಧಾರ ಹೊಂದಿವೆಯೇ ಎಂಬ ಪ್ರಶ್ನೆ ಕೇಳಬಹುದು. ಇದಕ್ಕೆ ನಿಶ್ಚಿತವಾಗಿ ಉತ್ತರ ಹೇಳುವುದು ಕಷ್ಟ. ಆದರೆ ಒಂದು ಸಂಗತಿ ತಕ್ಕಮಟ್ಟಿಗೆ ಗೋಚರವಾಗುತ್ತದೆ. ಅದೇನೆಂದರೆ, ಹರಕೆಗಳನ್ನು ಯಾರು ಬೇಕಾದರೂ ಹೊರಬಹುದು. ಹ್ಯೊಲುಗಳಿಗೂ ಕಟ್ಟುನಿಟ್ಟಾದ ಜಾತಿಭೇದವಿಲ್ಲ. ಆದರೆ ಭೂಮಿ ಸಂಬಂಧವಾದ ಹ್ಯೊಲು ಹೆಚ್ಚಾಗಿ ಮೇಲ್ಜಾತಿಗಳಿಂದ ಬರುತ್ತದೆ; ಅದರಲ್ಲೂ ಹವೀಕ ಬ್ರಾಹ್ಮಣರಿಂದ ಎಂದು ಹಾರ್ಪರ್ ಒಂದೆಡೆ ಹೇಳಿದ್ದಾನೆ. ಮೇಲ್ಜಾತಿಗಳು ಭೂಮಿ ಒಡೆಯರಾಗಿರುವುದರಿಂದ ಅದು ಸಹಜವೇ ಸರಿ. ಅದೇ ರೀತಿಯಲ್ಲಿ, ಭೂಮಿಯಿರದ ಸಾಮಾನ್ಯ ವರ್ಗಗಳವರು ಆಭರಣ ಕಳವು, ಸಾಲ-ತಗಾದೆಗಳ ಬಗೆಗೆ ಹ್ಯೊಲು ಕೊಡುತ್ತಾರೆ ಎನ್ನುತ್ತಾರೆ.

ಹ್ಯೊಲು, ಹರಕೆ, ಮಾಟಗಳ ಅಹವಾಲುಗಳನ್ನು ಕೇಳುವ ದೇವರುಗಳ ಸ್ಥಾನಮಾನದಲ್ಲಿಯೂ ಒಂದಿಷ್ಟು ತಾರತಮ್ಯ ಕಾಣಬಹುದು. ಹರಕೆಯನ್ನು ಗ್ರಾಮದೇವತೆಯಾಗಲೀ ಶಿಷ್ಟ ದೇವರುಗಳಾಗಲೀ ಸ್ವೀಕರಿಸುತ್ತಾರೆ. ಮಾಟವು ಕ್ಷುದ್ರದೇವತೆಗಳಿಗೇ ಮೀಸಲು.

ಈಗ 'ರಾಜಿ' ಎಂಬ ನ್ಯಾಯದಾನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳ

ಬಹುದು. ದೇವರ ಎದುರಿನಲ್ಲಿ ಭೂಮಿ, ಆಸ್ತಿಗಳ ಪಾಲು ಹಂಚಿಕೊಳ್ಳುವುದು ಬಹುದಿನಗಳ ರೂಢಿ. ಅದೇ ರೀತಿಯಲ್ಲಿ ಹಲವು ಬಗೆಯ ವಿವಾದಗಳನ್ನು ದೇವರೆದುರಿನಲ್ಲಿ ಚರ್ಚಿಸಿ ಇಬ್ಬರಿಗೂ ಒಪ್ಪುವ ರೀತಿಯಲ್ಲಿ ತೀರ್ಮಾನಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ದೈವದ ಪ್ರತಿನಿಧಿಯೊಬ್ಬನು ಹಾಜರಿರುತ್ತಾನೆ. ರಾಜಿ ಆದದ್ದಕ್ಕೆ ದೇವರಿಗೆ ಕಾಣಿಕೆ ಕೊಡುತ್ತಾರೆ. ದೈವದ ಸಮಕ್ಷಮ ತೀರ್ಮಾನ ಮಾಡಿಕೊಂಡರೆ ಮುಂದೆ ಅದನ್ನು ಭಂಗಪಡಿಸುವ ಹೆದರಿಕೆ ಯಿಲ್ಲ. ಧರ್ಮಸ್ಥಳ ಮತ್ತು ಇತರ ದೇವಸ್ಥಾನಗಳಲ್ಲಿ ಇಂತಹ ರಾಜಿಮಾಡುವ ಕೆಲಸ ನಡೆಯುತ್ತದೆ. ಮೇಲುನೋಟಕ್ಕೆ ರಾಜಿಯು ಹ್ಯೊಲಿನಂತರೆ ಕಂಡರೂ ಇವೆರಡರಲ್ಲಿ ವ್ಯತ್ಯಾಸಗಳಿವೆ. ರಾಜಿಯಲ್ಲಿ ವಿವಾದವನ್ನು ಎರಡೂ ಪಕ್ಷದವರು ದೇವರೆದುರಿಗೆ ತರು ತ್ತಾರೆ. ಇಬ್ಬರಿಗೂ ಮತ್ತೊಬ್ಬರ ಪಾಲನ್ನು ಕಬಳಿಸುವ ಇಚ್ಛೆಯಿಲ್ಲ. ತಮಗೆ ಸಮನಾದ ನ್ಯಾಯ ಸಿಗಲಿ ಎಂದು ಅವರು ಬೇಡುತ್ತಾರೆ. ಹ್ಯೊಲಿನಲ್ಲಿ ಒಂದು ಪಕ್ಷ ದೂರು ಕೊಡು ತ್ತದೆ. ತನಗೆ ಪರಿಹಾರ ಬೇಕು ಹಾಗೂ ತಪ್ಪು ಮಾಡಿದವನು ಶಿಕ್ಷೆ ಅನುಭವಿಸಬೇಕು ಎಂಬ ಆಶಯ ಅಲ್ಲಿ ಕಾಣುತ್ತದೆ.

ದೈವಗಳಲ್ಲಿ ಎಲ್ಲರೂ ಹ್ಯೊಲುಗಳನ್ನು ಸ್ವೀಕರಿಸುವುದಿಲ್ಲ. ಕೆಲವು ದೈವಗಳು ಈ ಕೆಲಸದಲ್ಲಿ ಹೆಸರುವಾಸಿಯಾಗಿವೆ. ಉದಾಹರಣೆಗೆ, ಧರ್ಮಸ್ಥಳದ ಹ್ಯೊಲು ಬಹುಕಾಲ ದಿಂದ ಪ್ರಸಿದ್ಧವಾಗಿದೆ. ಇಲ್ಲಿ ಮುಖ್ಯ ದೈವವಾದ ಮಂಜುನಾಥ ಸ್ವಾಮಿಗೆ ಕಾರಣಿಕನಾದ ಅಣ್ಣಪ್ಪದೈವ ಬಂಟನಂತೆ ಕೆಲಸಮಾಡಿ ಹ್ಯೊಲು ನಡೆಸಿಕೊಡುತ್ತಾನೆಂದು ನಂಬುತ್ತಾರೆ. ಸ್ಟೋಕ್ಸ್ ಎಂಬವನು ಈ ದೇವಾಲಯದಲ್ಲಿ ಭೂ-ವಿವಾದಗಳನ್ನು ನ್ಯಾಯಾಲಯ ದಂತೆಯೇ ತೀರ್ಮಾನಿಸುತ್ತಾರೆಂಬುದನ್ನು ೧೮೩೮ರಷ್ಟು ಹಿಂದೆಯೇ ಹೇಳಿದ್ದಾನೆ. (ಹೀಗೆ ಸಿವಿಲ್ ವ್ಯಾಜ್ಯಗಳನ್ನು ಬಗೆಹರಿಸುವ ದೇವಾಲಯುಗಳು ನಮ್ಮ ದೇಶದಲ್ಲಿ ಕೇವಲ ಎರಡೇ ಇವೆಯೆಂದೂ, ಇವುಗಳಲ್ಲಿ ಧರ್ಮಸ್ಥಳ ಒಂದಾದರೆ, ಇನ್ನೊಂದು ಒರಿಸ್ಸಾದ ಸಾಕ್ಷಿ ಗೋಪಾಲ ದೇವಾಲಯವೆಂದೂ ದಕ್ಷಿಣಕನ್ನಡ ಜಿಲ್ಲಾ ಗೆಝೆಟಿಯರ್ ಹೇಳುತ್ತದೆ.) ಇಲ್ಲಿಗೆ ಬರುವ ಹೆಚ್ಚಿನ ಹ್ಯೊಲುಗಳು ಪ್ರತ್ಯಕ್ಷ ವ್ಯವಹಾರಕ್ಕೆ ಸಂಬಂಧಿಸಿದವು. ಅಂದರೆ ಪ್ರತಿವಾದಿ ಯಾರು ಎಂಬುದು ಗೊತ್ತಿರಬೇಕು. ಮುಖ್ಯವಾಗಿ ನಂಬಿಕೆ, ದ್ರೋಹ, ಮಾತಿಗೆ ತಪ್ಪಿದ ಪ್ರಕರಣಗಳನ್ನು ಇಲ್ಲಿ ತೀರ್ಮಾನಿಸಲಾಗುತ್ತದೆ. ಹನ್ನೆರಡು ವರ್ಷಗಳಷ್ಟು ಹಳೆಯ ಪ್ರಕರಣಗಳನ್ನು ಇಲ್ಲಿ ತೆಗೆದುಕೊಳ್ಳುವುದಿಲ್ಲ.

ಹ್ಯೊಲು ದೇವತೆಗಳಲ್ಲಿ ಬಹುಪಾಲು ಗ್ರಾಮದೇವತೆಗಳಿದ್ದಾರೆ. ಇದಕ್ಕೆ ಕಾರಣ ವೆಂದರೆ ಅವರು ಹಳ್ಳಿಗರ ದೂರುಗಳನ್ನು ಸ್ಥಳದಲ್ಲೇ ಕೇಳಿ ಪರಿಹಾರ ಕೊಡಬಲ್ಲರು. ಆದರೆ ಎಲ್ಲ ಗ್ರಾಮದೇವತೆಗಳೂ ಹ್ಯೊಲು ಸ್ವೀಕರಿಸಬೇಕೆಂದೇನೂ ಇಲ್ಲ. ಸಾಮಾನ್ಯ ವಾಗಿ ಪ್ರಬಲರು ಅಥವಾ ಘಟಾನುಘಟಿಗಳು ಅಥವಾ ಕಾರಣಿಕರು ಎಂದು ಪ್ರಸಿದ್ಧ ರಾಗಿರುವ ದೇವತೆಗಳ ಬಳಿ ಜನರು ತಮ್ಮ ದೂರನ್ನು ಒಯ್ಯುತ್ತಾರೆ. ಕಾಲಕ್ರಮದಲ್ಲಿ ಇಂತಹ ದೇವರುಗಳು 'ಹ್ಯೊಲು ದೇವ'ರೆಂದು ಹೆಸರಾಗುತ್ತಾರೆ. ಆದರೆ ಈ ಪ್ರಸಿದ್ಧಿ

ಶಾಶ್ವತವಲ್ಲ: ಅವರಿಗೆ ಏಳು-ಬೀಳುಗಳಿವೆ. ಇಂದು ಹ್ಯೊಲು ಕೇಳುತ್ತಿದ್ದ ದೇವತೆಯ ಬಳಿಗೆ ನಾಳೆ ಯಾರೂ ಹೋಗಲಿಕ್ಕಿಲ್ಲ ಅಥವಾ ಒಂದೆ ಹೆಸರು ಕೇಳದ ದೇವತೆ ಒಮ್ಮಿಂದೊಮ್ಮೆಗೆ ಖ್ಯಾತಿ ಪಡೆದು ನಾಳೆ ಹ್ಯೊಲು ದೇವತೆಯೆಂದು ಪ್ರಸಿದ್ಧವಾಗಬಹುದು. ಹಳ್ಳಿಗರು ಹ್ಯೊಲು ಕೇಂದ್ರಗಳನ್ನು 'ಜಾಗೃತಸ್ಥಾನ'ಗಳೆಂದು ಅಥವಾ 'ದೃಷ್ಟಿ' ಇರುವ ಸ್ಥಾನಗಳೆಂದು ವರ್ಣಿಸುತ್ತಾರೆ. ಇಂತಹ ಸ್ಥಳಗಳಲ್ಲಿ ಹೆಸರುವಾಸಿಯಾದ ಒಬ್ಬ 'ಪಾತ್ರಿ' ಅಥವಾ ಪೂಜಾರಿ ಅಥವಾ ಮಂತ್ರವಾದಿ ಇರುವುದನ್ನು ಕಾಣುತ್ತೇವೆ. ಇವರಿಂದ ಆ ಸ್ಥಾನಕ್ಕೆ ಹೆಸರು ಬಂದಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭೂತಾರಾಧನೆ ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಇಂತಹ ಭೂತಗಳಲ್ಲಿ ಕೆಲವು ಹ್ಯೊಲು ಸ್ವೀಕರಿಸುತ್ತವೆ. ಅವುಗಳ ಅಂಕಿ-ಸಂಖ್ಯೆಗಳನ್ನು ಕೊಡುವುದು ಇಲ್ಲಿ ಸಾಧ್ಯವಿಲ್ಲವಾದರೂ ಅನುಭವದ ಆಧಾರದಿಂದ ಹೇಳುವುದಾದರೆ, 'ಅಮ್ಮ'ನವರ ದೇವಸ್ಥಾನಗಳಲ್ಲಿ ಹ್ಯೊಲು ಕೊಡುವುದು ಹೆಚ್ಚು. 'ಅಮ್ಮ'ನವರ ಇನ್ನೊಂದು ರೂಪ 'ಚೌಡಿ'. ಇವಳು ಶೂದ್ರರ ಅಧಿದೇವತೆ: ಗ್ರಾಮಗಳಲ್ಲಿ ಇರುವವಳು. ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಚೌಡಿಯನ್ನು 'ಹ್ಯೊಲುಚೌಡಿ' ಎಂದೇ ಕರೆಯುವುದಿದೆ. ಕೆಲವು ಚೌಡಿಯರು ಘಟಾನುಘಟಿಗಳೆಂದು ಪ್ರಸಿದ್ಧರಾಗಿ ರಕ್ತಬಲಿಯನ್ನು ಬೇಡುತ್ತಾರೆ.

ಹ್ಯೊಲಿನ ಮಾಧ್ಯಮ ಯಾರು? ದೇವರ ಪ್ರತಿನಿಧಿಗಳಾಗಿ ಭಕ್ತರ ಹ್ಯೊಲನ್ನು ಸ್ವೀಕರಿಸುವವರು ಯಾರು? ದೇವರ ನಿರ್ಣಯವನ್ನು ಅಥವಾ ಆಶಯವನ್ನು ಭಕ್ತರಿಗೆ ತಿಳಿಸುವವರು ಯಾರು? ಈ ಕೆಲಸವನ್ನು ಬಹುತೇಕ ದೇವಸ್ಥಾನಗಳಲ್ಲಿ 'ಪಾತ್ರಿ' ಎಂಬುವನು ನಿರ್ವಹಿಸುತ್ತಾನೆ. ಭಕ್ತರು ತಮ್ಮ ದೂರುಗಳನ್ನು ಮೌಖಿಕವಾಗಿ ಅಥವಾ ಪತ್ರದ ಮೂಲಕ ದೇವಸ್ಥಾನಗಳಿಗೆ ತಿಳಿಸುತ್ತಾರೆ. ಅಲ್ಲಿ ಪಾತ್ರಿಗಳಿದ್ದರೆ ಒಂದು ನಿಗದಿತ ದಿನದಂದು ಪಾತ್ರಿಗಳ 'ದರ್ಶನ' ಏರ್ಪಡಿಸಲಾಗುತ್ತದೆ. ಆಗ ಭಕ್ತರು ಬಂದು ತಮ್ಮ ದೂರನ್ನು ನಿವೇದಿಸಿಕೊಳ್ಳುತ್ತಾರೆ. ಕೆಲವು ದೇವಸ್ಥಾನಗಳಲ್ಲಿ 'ಗಾಡಿಗ' ಎಂಬವರು ಈ ಕೆಲಸ ನಿರ್ವಹಿಸುತ್ತಾರೆ. ಪಾತ್ರಿಗಳು 'ದರ್ಶನ'ದ ದಿನ ಸ್ನಾನಮಾಡಿ, ಕೆಂಪುಬಟ್ಟೆ ಅಥವಾ ಚಲ್ಲಣವನ್ನು ತೊಟ್ಟು, ಕೈಯಲ್ಲಿ ಅಡಿಕೆಯ 'ಸಿಂಗಾರ' ಹೂವನ್ನು ಹಿಡಿದು, ಸಣ್ಣದಾಗಿ ತೊನೆದಾಡುತ್ತ ದೈವವನ್ನು ಆಹ್ವಾನಿಸಿಕೊಳ್ಳುತ್ತಾರೆ. ಇದನ್ನು 'ಮೈಮೇಲೆ ಬರುವುದು' ಎನ್ನುತ್ತಾರೆ. ಈಗ ಅವರು ಭಕ್ತರ ದೂರುಗಳನ್ನು ಕೇಳುತ್ತಾರೆ. ಈ ದರ್ಶನ ಕೆಲವು ನಿಮಿಷಗಳ ಕಾಲ ನಡೆದ ಮೇಲೆ ಪಾತ್ರಿಗಳು ದೈವದ ಆಜ್ಞೆಯನ್ನು ಭಕ್ತರಿಗೆ ತಿಳಿಸಿ ಪ್ರಸಾದ ಕೊಡುತ್ತಾರೆ. ಚಿಕ್ಕಪುಟ್ಟ ದೈವದ ಮನೆಗಳಲ್ಲಿ ದರ್ಶನದ ಪಾತ್ರಿಗಳಿಲ್ಲ. ಅಲ್ಲಿರುವ ಪೂಜಾರಿ ಅಥವಾ ಕೆಲವೊಮ್ಮೆ ಒಬ್ಬ ಮಂತ್ರವಾದಿ ದೈವದ ಪ್ರತಿನಿಧಿಯಾಗಿ ಹ್ಯೊಲು ಸ್ವೀಕರಿಸುತ್ತಾನೆ. ಪಾತ್ರಿಗಳು ಅಥವಾ ಗಾಡಿಗರು ಹೆಚ್ಚಾಗಿ ಗಂಡಸರೇ ಇದ್ದರೂ ಸ್ತ್ರೀಯರೂ ಪಾತ್ರಿಗಳಾಗಿ ಕೆಲಸ ನಿರ್ವಹಿಸಬಹುದು. ಚಿಕ್ಕಸಿರಿ ಎಂಬ ದೈವದ ಪಾತ್ರಿ ಒಬ್ಬ ಹೆಣ್ಣುಮಗಳು. ಅಂತೆಯೇ, ಕುಂದಾಪುರ ತಾಲ್ಲೂಕಿನ ಕಟ್ರಿ

ದಂಬಗೋಳಿಯಲ್ಲಿ ಹೆಣ್ಣು ಪಾತ್ರಿ ಇದ್ದಾರೆ. ಕೆಲವು ದೇವಸ್ಥಾನಗಳಲ್ಲಿ ಅಲ್ಲಿಯ ಪುರೋಹಿತರು ಅಥವಾ ಅರ್ಚಕರೇ ಹ್ಯೊಲಿನ ಮಾಧ್ಯಮವಾಗುತ್ತಾರೆ. ಇನ್ನು ಕೆಲವು ಕಡೆ ಸ್ಥಳೀಯ ಸಂಪ್ರದಾಯದಂತೆ ಒಬ್ಬ ಮಂತ್ರವಾದಿ ಈ ಕೆಲಸ ನಿರ್ವಹಿಸುತ್ತಾನೆ. ಧರ್ಮಸ್ಥಳ ಕ್ಷೇತ್ರದಲ್ಲಿ ಹ್ಯೊಲನ್ನು ಸ್ವೀಕರಿಸುವವರು ಅಲ್ಲಿಯ ಧರ್ಮಾಧಿಕಾರಿಗಳಾದ 'ಹೆಗ್ಗಡೆ'ಯವರು. ಈ ಅಧಿಕಾರ ವಂಶಪಾರಂಪರ್ಯದಿಂದ ಬಂದಿರುತ್ತದೆ.

ದೇವರಿಗೆ ದೂರುಕೊಡುವ ವಿಧಾನ ಯಾವುದು? ಎಲ್ಲ ದೇವರಿಗೂ ಅನ್ವಯಿಸುವ ಒಂದು ಸಾಮಾನ್ಯ ವಿಧಾನವಿದೆಯೆ? ಈ ಪ್ರಶ್ನೆಗಳಿಗೆ ಉತ್ತರವೆಂದರೆ ಅಂತಹ ಸಾಮಾನ್ಯ ವಾದ ಯಾವುದೇ ಒಂದು ವಿಧಾನವಿಲ್ಲ. ಪ್ರತಿಯೊಂದು ಹ್ಯೊಲು ದೇವರಿಗೂ ವಿಶಿಷ್ಟ ವಾದ ವಿಧಿ-ವಿಧಾನಗಳು ಇವೆ. ಹೀಗಿದ್ದರೂ ಈ ಎಲ್ಲ ವಿಧಾನಗಳಿಗೆ ಒಂದು ಸಾಮಾನ್ಯ ವಾದ ಸೂತ್ರವಿದೆ. ಅದೇನೆಂದರೆ, ಹ್ಯೊಲುಕೊಟ್ಟ ವಿಷಯ ಆದಷ್ಟು ಹೆಚ್ಚು ಜನರಿಗೆ ತಿಳಿಯಬೇಕು. ಯಾಕೆಂದರೆ ಅದು ಗುಟ್ಟಿನಲ್ಲಿ ಕೊಡುವ ದೂರಲ್ಲ. ಹೀಗೆ ಅನೇಕರ ಸಮಕ್ಷಮ ದೂರುಕೊಡುವುದರಿಂದ ದೈವಭೀರುಗಳಾದ ಜನರು ತಮ್ಮ ನಡವಳಿಕೆ ತಿದ್ದಿ ಕೊಳ್ಳಲು ಅವಕಾಶವಾಗುತ್ತದೆ. ದುರಾಸೆಯಿಂದ ಒಡವೆ ವಸ್ತುಗಳನ್ನು ಕದ್ದ ಕಳ್ಳನು ತಾನು ಕದ್ದ ಮಾಲನ್ನು ಮರಳಿ ಒಪ್ಪಿಸಿ ದೈವದ ಶಿಕ್ಷೆಯಿಂದ ಪಾರಾಗಲು ಸಾಧ್ಯವಾಗು ತ್ತದೆ. ಇನ್ನೊಂದು ವಿಷಯವನ್ನು ಗಮನಿಸಬಹುದು. ಕಳವಿನ ದೂರನ್ನು ಕೊಡುವ ವಿಧಾನವೇ ಬೇರೆ. ಅಡವಿಟ್ಟುಕೊಂಡ ಮಾಲನ್ನು ತಿರುಗಿ ಕೊಡದೇ ಇದ್ದಾಗ ದೂರಿಡುವ ವಿಧಾನವೇ ಬೇರೆ. ನಾವು ಒಂದೆರಡು ಉದಾಹರಣೆಗಳನ್ನು ಕೊಟ್ಟು ಕೆಲವು ಮಾದರಿ ಗಳನ್ನು ಗುರುತಿಸಬಹುದು. ಇದು 'ತೋಟಗದ್ದೆ' ಎಂಬ ಹಳ್ಳಿಯ ನಿವೇದಕನೊಬ್ಬನು ಕೊಟ್ಟ 'ಕಳುವಿನ ಹ್ಯೊಲು' ಪ್ರಸಂಗದ ವಿವರಣೆ:

"ಯಾರಾದರೂ ಏನಾದರೂ ಕದ್ದರೆ ಹ್ಯೊಲು ಕೊಡುತ್ತಾರೆ. ನಮ್ಮ ಬೆಟ್ಟಿನಲ್ಲಿ ಒಂದು ಹಿತ್ತಾಳೆಯ ಪಾತ್ರೆಯು ಕಳವಾಗಿದೆ ಎನ್ನೋಣ. ಆಗ ಆ ಪಾತ್ರೆ ಕಳೆದುಕೊಂಡ ವನು ಸುತ್ತಮುತ್ತಲಿನ ಎಲ್ಲ ಜನರಿಗೂ ಕಳವಾದ ವಿಷಯ ಹೇಳುತ್ತಾನೆ ಹಾಗೂ ತನ್ನ ಮಾಲು ತನಗೆ ಸಿಗದಿದ್ದರೆ ತಾನು ಹತ್ತಿರದಲ್ಲಿಯೇ ಇರುವ ದಿಗಡಕೊಪ್ಪದ ಚೌಡಿ (ದೇವತೆ)ಗೆ ಹ್ಯೊಲು ಕೊಡುತ್ತೇನೆಂದು ಜಾಹೀರುಪಡಿಸುತ್ತಾನೆ. ಒಂದು ವಾರ ಅಥವಾ ಹತ್ತು ದಿನಗಳ ಮೇಲೆ ಒಂದು ತೆಂಗಿನಕಾಯಿಯನ್ನು ಕೈಯಲ್ಲಿ ಹಿಡಿದುಕೊಂಡು ಆ ಬೆಟ್ಟಿ ನಲ್ಲಿರುವ ಎಲ್ಲ ಮನೆಗಳಿಗೆ ಹೋಗಿ ಆ ಮನೆಯವರೆಲ್ಲರೂ ತೆಂಗಿನಕಾಯಿಯನ್ನು ಮುಟ್ಟಿ ತಾವು ಕಳ್ಳತನಮಾಡಿಲ್ಲವೆಂದು ಹೇಳುವಂತೆ ಕೇಳುತ್ತಾನೆ. ಹೀಗೆ ಎಲ್ಲರೂ ಮುಟ್ಟಿದ ನಂತರ ಅದನ್ನು ದಿಗಡಕೊಪ್ಪಕ್ಕೆ ಒಯ್ದು ಅಲ್ಲಿ ಚೌಡಿಯ ಕಲ್ಲಿನಡಿಯಲ್ಲಿ ಹುಗಿಯುತ್ತಾನೆ. ಹಾಗೆ ಮಾಡುವಾಗ ಆ ಹಳ್ಳಿಯ ಹತ್ತು ಜನರು ಅಲ್ಲಿ ಇರಬೇಕು. ಏಕೆಂದರೆ ಅವರ ಗ್ರಾಮದೇವತೆಯು ತನ್ನ ಗ್ರಾಮ ಬಿಟ್ಟು ನೆರೆಯ ಊರಿಗೆ ಹೋಗಿ ಕೆಲಸಮಾಡಲು ಊರವರ ಒಪ್ಪಿಗೆ ಬೇಕಂತೆ. ತನ್ನ ಕಳವಾದ ಮಾಲು ಸಿಕ್ಕಿದರೆ ಚೌಡಿಗೆ ಒಂದು

ಆಡನ್ನೋ ಅಥವಾ ಕೋಳಿಯನ್ನೋ ಕೊಡುತ್ತೇನೆ ಎಂದು ಹ್ಯೊಲು ಕೊಟ್ಟವನು ವಚನ ಕೊಡುತ್ತಾನೆ. ಇದರ ನಂತರ ಚೌಡಿಯು ಕಳ್ಳನಿಗೆ ತನ್ನ 'ಪೆಟ್ಟು' ಕೊಡಲು ಪ್ರಾರಂಭ ಮಾಡುತ್ತಾಳೆ.

"ಕಳ್ಳನಿಗೆ ದೈವದ ಉಪದ್ರವ ಸುರುವಾಗುತ್ತಲೇ ತನಗೆ ಹೀಗೇಕೆ ಪೆಟ್ಟು ಬೀಳುತ್ತದೆ ಎಂದು ತಿಳಿದುಕೊಳ್ಳಲು ಅವನು 'ಗಾಡಿಗ'ನ ಮನೆಗೆ ಹೋದಾಗ ಇದೆಲ್ಲ ಹ್ಯೊಲಿನ ಪ್ರಭಾವ ಎಂಬ ಅರಿವಾಗುತ್ತದೆ. ತಾನು ಕದ್ದ ಮಾಲನ್ನು ದಿಗಡಕೊಪ್ಪದ ಚೌಡಿಯ ಪೂಜಾರಿಗೆ ಒಪ್ಪಿಸುತ್ತಾನೆ. ಆಗ ಪೂಜಾರಿಯು ಹ್ಯೊಲು ಕೊಟ್ಟ ವ್ಯಕ್ತಿಗೆ ಅವನ ಹಳೆದು ಹೋದ ಮಾಲು ಮರಳಿ ಬಂದಿರುವುದಾಗಿ ಸುದ್ದಿ ಮುಟ್ಟಿಸಿ ಕೇಳುತ್ತಾನೆ. ಕಳವು ಮಾಡಿದ ವ್ಯಕ್ತಿ ಕೂಡ ತಾನು ಮಾಡಿದ ತಪ್ಪಿಗಾಗಿ ಒಂದು ಆಡು ಅಥವಾ ಕೋಳಿಯನ್ನು ತಪ್ಪುದಂಡವಾಗಿ ಕೊಡಬೇಕಾಗುತ್ತದೆ."

ಇನ್ನೊಂದು ಕಳವಿನ ಹ್ಯೊಲು ಪ್ರಕರಣವನ್ನು ಇಲ್ಲಿ ಕೊಡಲಾಗಿದೆ. ದಕ್ಷಿಣಕನ್ನಡದ ಕುಂದಾಪುರದ ಬಳಿಯಿರುವ ಕೋಡಿ ಅಮ್ಮನವರ ಸ್ಥಾನದಲ್ಲಿ ಪ್ರಚಲಿತವಿರುವ ವಿಧಾನ ವೆಂದರೆ, ಹ್ಯೊಲು ಕೊಟ್ಟವನು ಅಮ್ಮನವರ ಪಾತ್ರಿಯು ಕೊಟ್ಟ ತೆಂಗಿನಕಾಯಿಯನ್ನು ತನ್ನ ಮನೆಯ ಬಾಗಿಲಿನಲ್ಲಿ ಎಲ್ಲರಿಗೂ ಕಾಣುವಂತೆ ತೂಗು ಹಾಕಬೇಕು: ಅಲ್ಲದೇ ತಾನು ಹ್ಯೊಲು ಕೊಟ್ಟ ಬಗೆಗೆ ಎಲ್ಲರಿಗೆ ತಿಳಿಸಬೇಕು. ಕಳವಾದ ಮಾಲು ತಿರುಗಿ ಬಂದರೆ ಅಂತಹ ಮಾಲಿನ ಬೆಲೆಯ ಕಾಲುಭಾಗವನ್ನು ಅಮ್ಮನವರಿಗೆ ಕಾಣಿಕೆಯಾಗಿ ಕೊಡಬೇಕು. ಮೇಲೆ ಹೇಳಿದ ಎರಡೂ ಹ್ಯೊಲು ಪ್ರಕರಣಗಳಲ್ಲಿ ಪ್ರತಿವಾದಿ-ಅಂದರೆ ಮಾಲು ಕದ್ದ ಅಪರಾಧಿ-ಯಾರೆಂದು ಗೊತ್ತಿಲ್ಲ. ಅವನನ್ನು ಹುಡುಕಿ, ಮಾಲನ್ನು ವಾದಿಗೇ ಮರಳಿಸುವ ಹೊಣೆ ದೈವಕ್ಕೇ ಬಿಟ್ಟದ್ದು.

ಇನ್ನು ಸಾಲದ ಲೇವಾದೇವಿ ಬಗೆಗೆ ಎರವು ಇಟ್ಟುಕೊಂಡ ಒಡವೆಗಳ ಬಗೆಗೆ, ಭೂಮಿ ಹಂಚಿಕೊಳ್ಳುವ ತಕರಾರಿನ ಬಗೆಗೆ ದೇವರಿಗೆ ದೂರು ಕೊಡುವಾಗ ವಾದಿ-ಪ್ರತಿವಾದಿಗಳಿಬ್ಬರೂ ಇದ್ದಾರೆ. ಇದು ಪ್ರತ್ಯಕ್ಷ ವ್ಯವಹಾರ. ವಾದಿಯು ಸ್ವತಃ ದೇವಾಲ ಯಕ್ಕೆ ಹೋಗಿ ಮೌಖಿಕವಾಗಿ ಅಥವಾ ಬರಹದ ಮೂಲಕ ತನ್ನ ದೂರನ್ನು ಕೊಡುತ್ತಾನೆ. ವಾದಿ-ಪ್ರತಿವಾದಿಗಳನ್ನು ದೈವಸನ್ನಿಧಿಗೆ ಕರೆಯಿಸಿಕೊಂಡು ಹ್ಯೊಲಿನ ಇತ್ಯರ್ಥ ಮಾಡು ತ್ತಾರೆ. ಇಂತಹ ಇತ್ಯರ್ಥದಿಂದ ಬರುವ ಹಣದಲ್ಲಿ ಕಾಲುಭಾಗವನ್ನು ದೇವರಿಗೆ ಕಾಣಿಕೆ ಯಾಗಿ ಕೊಡುವುದು ವಾಡಿಕೆ. ಧರ್ಮಸ್ಥಳ ಕ್ಷೇತ್ರದಲ್ಲಿ ಪ್ರಚಲಿತವಿರುವ ಪದ್ಧತಿಯ ಬಗೆಗೆ ಅಲ್ಲಿನ ಧರ್ಮಾಧಿಕಾರಿಗಳು ಹೀಗೆ ಹೇಳಿದ್ದಾರೆ:

"ಜನರು ಬಂದು ಬರಹದ ಮೂಲಕ ಶ್ರೀ ಸ್ವಾಮಿಗೆ 'ಶ್ರೀ ಮಂಜುನಾಥ ಸ್ವಾಮಿ ಸನ್ನಿಧಾನಕ್ಕೆ' ಎಂದು ವಿನಂತಿಸಿಕೊಳ್ಳುತ್ತಾರೆ. 'ನಾನು ಒಬ್ಬನಿಗೆ ಒಂದುಸಾವಿರ ರೂಪಾಯಿ ಕೊಟ್ಟಿದ್ದೇನೆ. ಅವನು ಹಿಂದೆ ಕೊಡಲಿಲ್ಲ. ನನಗೆ ನ್ಯಾಯ ಸಿಗಬೇಕು' ಎಂದು ಬರೆದು ಕೊಳ್ಳುತ್ತಾರೆ. ಸಂಬಂಧಪಟ್ಟ ದಾಖಲೆಗಳಲ್ಲಿ ತಮ್ಮ ದೂರನ್ನು ನಮೂದಿಸಿ (ತಮ್ಮ

ದೂರನ್ನು ಬರೆದ) ಒಂದು ಕಾಗದವನ್ನು ಬೆಳ್ಳಿಯ ತಟ್ಟೆಯಲ್ಲಿರಿಸಿ ಶ್ರೀ ಸ್ವಾಮಿ ಸನ್ನಿಧಿಗೆ ಅರ್ಪಿಸುತ್ತಾರೆ. ಪ್ರಸಾದ ತೆಗೆದುಕೊಂಡು ಹೋಗುತ್ತಾರೆ. ಮುಂದೆ ನಮ್ಮ ಕಾರ್ಯಾಲಯ ದಿಂದ ಸಂಬಂಧಪಟ್ಟ ವ್ಯಕ್ತಿಗೆ ಪತ್ರವನ್ನು ಕಳುಹಿಸಲಾಗುತ್ತದೆ: 'ಒಬ್ಬಾತನು ಇಲ್ಲಿಗೆ ಬಂದು ನೀನು ಹಣ ಕೊಡದೇ ಮೋಸ ಮಾಡಿದ್ದೀಯೆಂದು ದೂರುಕೊಟ್ಟಿರುತ್ತಾನೆ. ಇದು ಸತ್ಯವೆಂದಾದರೆ ಇಲ್ಲಿಗೆ ಬಂದು, ಈ ವಿವಾದವನ್ನು ಬಗೆಹರಿಸಿ, ಶ್ರೀಸ್ವಾಮಿ ಅನುಗ್ರಹಕ್ಕೆ ಪಾತ್ರನಾಗು' ಎಂದು ಬರೆದು ತಿಳಿಸಿದ ಬಳಿಕ ನಾವು ಈ ಸಂಗತಿಯನ್ನೇ ಮರೆತುಬಿಡುತ್ತೇವೆ. ಮತ್ತೆ ಜ್ಞಾಪಿಸುವುದೂ ಇಲ್ಲ. ಆದರೆ ಆ ಪತ್ರವನ್ನು ಪಡೆದ ವ್ಯಕ್ತಿ ತಮ್ಮ ಆತ್ಮಸಾಕ್ಷಿಯನ್ನು ಪ್ರಶ್ನಿಸಿಕೊಳ್ಳುತ್ತಾನೆ. ಮತ್ತು ದೇವಾಲಯಕ್ಕೆ ಬರುತ್ತಾನೆ. ಹಣವನ್ನು ಹಿಂದಿರುಗಿಸದಿದ್ದರೆ ಇಲ್ಲಿನ ಅಧಿದೈವ ಅಣ್ಣಪ್ಪಸ್ವಾಮಿ ತನ್ನದೇ ಆದ ವಿಧಾನ ಗಳಿಂದ ಬರಮಾಡಿಸಿ, ಹಣ ವಸೂಲು ಮಾಡಿಸಿ ನ್ಯಾಯದಾನ ವ್ಯವಸ್ಥೆಯನ್ನು ಮುಂದುವರೆಸುವ ಸಂಪ್ರದಾಯವು ಇಲ್ಲಿನದಾಗಿದೆ."

ಈ ಕ್ಷೇತ್ರದಲ್ಲಿರುವ ವಾಡಿಕೆಯ ಪ್ರಕಾರ ವ್ಯವಹಾರದಿಂದ ಬರುವ ಹಣದಲ್ಲಿ ಮುಕ್ಕಾಲು ಭಾಗವನ್ನು ವಾದಿಗೆ ಕೊಟ್ಟು, ಉಳಿದ ಕಾಲುಭಾಗವನ್ನು ಕ್ಷೇತ್ರದ ಭಂಡಾರಕ್ಕೆ ದೇವರ ಕಾಣಿಕೆಯಾಗಿ ಜಮಾ ಮಾಡುತ್ತಾರೆ.

ದಕ್ಷಿಣ ಕನ್ನಡದ ಬಹುತೇಕ ಹ್ಯೊಲು ದೇವತೆಗಳಿಗೆ ದರ್ಶನ ಪಾತ್ರಿಗಳಿದ್ದಾರೆ. (ಉತ್ತರ ಕನ್ನಡದ ಹಳ್ಳಿಗಳಲ್ಲಿ ಇವರನ್ನು ಗಾಡಿಗರೆಂದು ಕರೆಯುತ್ತಾರೆ). ಹ್ಯೊಲು ಕೊಡು ವವರು ತಮ್ಮ ದೂರನ್ನು ನಿವೇದಿಸಿಕೊಂಡ ನಂತರ ಪಾತ್ರಿ 'ನನ್ನ ಸ್ಥಳಕ್ಕೆ ಏನು ನಡದು ಕೊಳ್ಳುತ್ತಿ?' ಎಂದು ಪ್ರಶ್ನಿವುದು ವಾಡಿಕೆ. ಅಂದರೆ, ದೈವವು ಭಕ್ತನು ತನಗೆ ಎಷ್ಟು ಕಾಣಿಕೆ ಕೊಡುತ್ತಾನೆ ಎಂಬುದನ್ನು ತಿಳಿದುಕೊಳ್ಳುತ್ತದೆ. ವಾರಕ್ಕೊಂದು ದಿನ ಕೆಲವೊಮ್ಮೆ ವಿಶೇಷ ಸಂದರ್ಭಗಳಲ್ಲಿ ಇಂತಹ ದರ್ಶನಗಳನ್ನು ಏರ್ಪಡಿಸಿ ಹ್ಯೊಲು ಕೊಡುತ್ತಾರೆ. ಈ ದಿನಗಳಲ್ಲಿ ಒಂದಲ್ಲ ಅನೇಕ ಹ್ಯೊಲು ಪ್ರಕರಣಗಳಿದ್ದು, ದರ್ಶನಪಾತ್ರಿಗೆ ಬಿಡುವಿಲ್ಲದ ಕಾರ್ಯಕ್ರಮವಿರುತ್ತದೆ. ದೂರದ ಊರುಗಳಿಂದ ಬರುವ ಭಕ್ತರಿಗಾಗಿ ವಿಶೇಷ ದರ್ಶನ ಏರ್ಪಡಿಸಿ ಹ್ಯೊಲು ಸ್ವೀಕರಿಸಬಹುದು. ಕಾಣಿಕೆಯ ವಿಷಯದಲ್ಲಿ ಕಟ್ಟುನಿಟ್ಟಾದ ನಿಯಮ ವಿಲ್ಲದಿದ್ದರೂ ಪ್ರಾಪ್ತಿಯ ಕಾಲುಭಾಗವನ್ನು ದೇವರ ಭಂಡಾರಕ್ಕೆ ಕೊಡುವುದು ವ್ಯಾಪಕ ವಾದ ಸಂಪ್ರದಾಯ. ಕೆಲವೊಮ್ಮೆ ವಾದಿಗಳು ಈ ವ್ಯವಹಾರದಲ್ಲಿ ಬಂದ ಎಲ್ಲ ಹಣವನ್ನು ದೇವರ ಭಂಡಾರಕ್ಕೆ ಜಮೆ ಮಾಡುವುದು ಇದೆ. ಚೌಡಿ ಮತ್ತು ಇತರ ಗ್ರಾಮದೇವತೆಗಳು ಹಣ್ಣು, ಕಾಯಿ, ಕೋಳಿ, ಆಡು, ಕುರಿ, ದೇವರ ಒಡವೆ, ಪೂಜೆಯ ಸಾಮಾನು, ಗಂಟೆ, ಬೆಳ್ಳಿಯ ಮುಖವಾಡ ಇತ್ಯಾದಿ ವಸ್ತುಗಳನ್ನು ಬೇಡಬಹುದು. ಭಕ್ತರು ಕೊಡಬಹು ದಾದುದನ್ನೇ ಬೇಡುವ ವ್ಯವಹಾರಜ್ಞಾನ ಈ ದೇವತೆಗಳಿಗೆ ಇರುವುದು ಸೋಜಿಗದ ವಿಷಯ. ಕೆಲವೊಮ್ಮೆ ದೇವರು ಹತ್ತು ಕೇಳಿದಲ್ಲಿ ಭಕ್ತರು ಒಂದು ಕೊಡುತ್ತೇವೆ ಎನ್ನುವು ದಿದೆ. ಸಾಕಷ್ಟು ಚೌಕಾಶಿಯಾಗಿ ಕೊನೆಗೆ ಭಕ್ತರು ಕೊಡುವುದನ್ನು ದೇವತೆ ಒಪ್ಪಿಬಿಡುತ್ತದೆ.

ಕಾಣಿಕೆ ಸಾಕಾಗಲಿಲ್ಲವೆಂದು ಯಾವ ದೈವವೂ ಹ್ಯೊಲನ್ನು ತಿರಸ್ಕರಿಸುವುದಿಲ್ಲ.

ಜನರು ದೈವಕ್ಕೆ ಹ್ಯೊಲು ಕೊಡುವುದು ಏಕೆ? ಹ್ಯೊಲಿನ ಉದ್ದೇಶಗಳು ಯಾವುವು? ಎಂತಹ ಸಂದರ್ಭಗಳಲ್ಲಿ ಅವರು 'ದೇವರನ್ಯಾಯ'ವನ್ನು ಕೇಳುತ್ತಾರೆ? ಈ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಮುಖ್ಯವಾಗಿ ಐದು ಬಗೆಯ ಸಂದರ್ಭಗಳನ್ನು ಗುರುತಿಸಬಹುದು. ಮೊದಲನೆಯದಾಗಿ, ಹಳ್ಳಿಗಾಡಿನಲ್ಲಿ ಪೋಲೀಸರಾಗಲೀ ರಾತ್ರಿ ಕಾವಲುಗಾರರಾಗಲೀ ಇರುವುದಿಲ್ಲ. ಅಡಿಕೆ, ತೆಂಗು, ಮೆಣಸಿನ ತೋಟಗಳನ್ನು ಕಾಯುವುದು ಕಷ್ಟದ ಕೆಲಸ. ಹಳ್ಳಿಯ ಬಡವರ ಗುಡಿಸಲುಗಳಿಗೆ ಬೀಗಹಾಕುವ ಸೌಲಭ್ಯವಿಲ್ಲ. ಅವರ ಚಿಕ್ಕ ಪುಟ್ಟ ಒಡವೆ ವಸ್ತು ಆಭರಣಗಳನ್ನು ಭದ್ರವಾಗಿಡಲು ಅವಕಾಶ ಕಡಿಮೆ. ಆದ್ದರಿಂದ ಅವುಗಳ ಕಳವು ಆದಾಗ ಅವರು ಯಾರನ್ನು ಮೊರೆಹೋಗಬೇಕು? ತಪ್ಪಿತಸ್ಥನು ಪತ್ತೆಯಾಗುವುದು ಹೇಗೆ? ಮಾಲು ಮರಳಿ ಬರುವುದು ಹೇಗೆ? ಗುಮಾನಿಯಿಂದ ಮನೆ ಝಡತಿ ಮಾಡಿದರೆ ನೆರೆಹೊರೆ ಸಂಬಂಧ ಕೆಡುತ್ತದೆ. ಆದುದರಿಂದ ದೇವರನ್ನು ಮೊರೆ ಹೋಗುವುದು ಏಕೈಕ ಉಪಾಯ. ಹ್ಯೊಲು ಹುಟ್ಟಿದ್ದು ಇಂತಹ ಕಾರಣಗಳಿಗಾಗಿ ಎಂದರೆ ತಪ್ಪಿಲ್ಲ. ಹೀಗೆ ಹ್ಯೊಲು ಕೊಡುವಾಗ ಅದು ನೆರೆಹೊರೆಯವರಿಗೆ ತಿಳಿಯುವಂತೆ ಕೊಡಬೇಕೆಂಬ ನಿರ್ಬಂಧ ಇದೆ. ಇದರಿಂದ ಅವುಗಳನ್ನು ಕದ್ದವರು ದೇವರಿಗೆ ಹೆದರಿಯಾದರೂ ಕಳುವಾದ ವಸ್ತು ಒಡವೆಗಳನ್ನು ಮರಳಿ ಕೊಡಬಹುದು ಎಂಬ ಆಸೆಯಿರುತ್ತದೆ. ಇಂತಹ ಹ್ಯೊಲುಗಳಿಗೆ ಹೆಸರಿಡುವುದಾದರೆ 'ಕಳುವಿನ ಹ್ಯೊಲು' ಎಂದು ಕರೆಯಬಹುದು.

ಇನ್ನೊಂದು ಪ್ರಕಾರದ ಹ್ಯೊಲಿದೆ. ಇದನ್ನು 'ಸಾಲದ ಹ್ಯೊಲು' ಎನ್ನಬಹುದು. ಬ್ಯಾಂಕುಗಳಾಗಲೀ ಸಹಕಾರಿ ಸಂಘಗಳಾಗಲೀ ಅಥವಾ ಬೇರೆ ಯಾವ ಸಂಸ್ಥೆಗಳಾಗಲೀ ಹಿಂದಿನ ಕಾಲದಲ್ಲಿ ಇದ್ದಿಲ್ಲ: ಆಗ ನೆರೆಹೊರೆಯ ಯಾರಾದರೂ ಕೈಗಡ ಅಥವಾ ಬಡ್ಡಿ ಸಾಲ ಕೊಟ್ಟರುಂಟು; ಇಲ್ಲದಿದ್ದರೆ ಇಲ್ಲ. ಹಾಗೆ ಅವರು ಸಾಲ ಕೊಟ್ಟಾಗ ಸಾಲ ಕೊಟ್ಟಿದ್ದಕ್ಕೆ ಲೇಖೀರೂಪದ ಪುರಾವೆಗಳು ಇರುತ್ತಿರಲಿಲ್ಲ. ಅಂತಹ ಪುರಾವೆಗಳನ್ನು ಕೇಳುವುದಾಗಲೀ, ಕೊಡುವುದಾಗಲೀ, ನೆರೆಹೊರೆಯ ನಂಟಿಗೆ ಬಾಧಕವೆಂದು ಜನರು ತಿಳಿಯುತ್ತಿದ್ದ ಕಾಲವದು. ಮೊರಕ್ಕೆ ತೊಂಭತ್ತರಷ್ಟು ಸಾಲಗಳು ಸರಿಯಾಗಿ ಮರುಪಾವತಿಯಾಗುತ್ತಿರಬೇಕು. ಇನ್ನುಳಿದ ಸಾಲ ಪ್ರಕರಣಗಳಲ್ಲಿ ಕೆಲವನ್ನು ಪಂಚಾಯತಿಗಳಿಗೆ ಒಯ್ಯುತ್ತಿದ್ದರು. ಅಲ್ಲಿಯೂ ಸಾಲ ಕೊಟ್ಟವನಿಗೆ ನ್ಯಾಯ ಸಿಗದಿದ್ದರೆ ಅನಿವಾರ್ಯವಾಗಿ ಅವರು 'ದೇವರ ನ್ಯಾಯಾಲಯ'ಕ್ಕೆ ದೂರು ಕೊಡುತ್ತಿದ್ದುದು ಸಹಜ. ಇಂತಹ ಸಾಲದ ಹ್ಯೊಲಿನಲ್ಲಿ ಸಾಲದ ಹಣವನ್ನು ಬಡ್ಡಿ ಸಮೇತ ಪಾವಿಗೆ ಮುಟ್ಟಿಸುವ ಜವಾಬ್ದಾರಿ ದೈವಕ್ಕೆ ಇರುತ್ತಿತ್ತು.

ಮೂರನೇ ಪ್ರಕಾರದ ಹ್ಯೊಲಿಗೆ 'ಭೂಮಿ ಹ್ಯೊಲು' ಎಂದು ಹೆಸರು ಕೊಡಬಹುದು. ಒಬ್ಬನ ಭೂಮಿಯನ್ನು ಇನ್ನೊಬ್ಬನು ಅನ್ಯಾಯದಿಂದ ವಶಪಡಿಸಿಕೊಂಡಿದ್ದರೆ, ವಾಯಿದೆಯೊಳಗೆ ಸಾಲ ಮರಳಿಸಲಿಲ್ಲವೆಂದು ಭೂಮಿ ಪರಭಾರೆ ಮಾಡಿಕೊಂಡರೆ,

ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಹೊಲದ ಗಡಿಗಳನ್ನು ಬದಲಾಯಿಸಿದರೆ ಜಾಣಾಕ್ಷ ವಕೀಲರ ಸಹಾಯದಿಂದ ಕೋರ್ಟ್ ಕಾಯ್ದೆಯ ಲಾಭ ಪಡೆದರೆ ಹಳ್ಳಿಯ ಪಂಚಾಯತಿ ಯವರು ಭೂ ವಿವಾದದಲ್ಲಿ ನ್ಯಾಯ ಕೊಡದೇ ಹೋದರೆ, ಬೇರೆ ಉಪಾಯ ಕಾಣದೆ ನೊಂದ ಹಳ್ಳಿಗರು ಗ್ರಾಮದೇವತೆಗೋ ಅಥವಾ ಹ್ಯೊಲು ಕೇಳುವ ಪ್ರಸಿದ್ಧ ದೇವಾಲಯ ಗಳಿಗೋ ಹ್ಯೊಲು ಒಯ್ಯುತ್ತಾರೆ. ಭೂಮಿಯೇ ಹಳ್ಳಿಗಾಡಿನ ಬಹುಮುಖ್ಯ ಆಸ್ತಿ ಯೆಂಬುದನ್ನು ನೆನಪು ಮಾಡಿಕೊಂಡರೆ ಇಂತಹ ಹ್ಯೊಲಿನ ಉದ್ದೇಶ ಸ್ಪಷ್ಟವಾಗುತ್ತದೆ.

ನಾಲ್ಕನೆಯದು 'ನಂಬಿಕೆ ದ್ರೋಹದ ಹ್ಯೊಲು'. ಅಡವಿಟ್ಟು ಮಾಲನ್ನು ಹಣ ಸಂದಾಯ ಮಾಡಿದರೂ ಮಾಲಿಕನಿಗೆ ಒಪ್ಪಿಸದೇ ಇರುವುದು. ಎರವು ಕೊಟ್ಟ ಚಿನ್ನ ಬೆಳ್ಳಿಯ ದಾಗೀನುಗಳು ಕಳೆದುಹೋಯಿತೆಂದು ಮೋಸಮಾಡುವುದು. ಬೇರೆಯವರ ಮನೆ ತನ್ನದೆಂದೇ ಸಾಧಿಸುವುದು ಮುಂತಾದ ಅನೇಕ ನಂಬಿಕೆ ದ್ರೋಹದ ಪ್ರಕರಣಗಳು ಇರುತ್ತವೆ. ಇವುಗಳನ್ನು ಪಂಚಾಯತಿ ಮತ್ತಿತರ ನ್ಯಾಯ ವ್ಯವಸ್ಥೆಗಳ ಮುಖಾಂತರ ಬಗೆಹರಿಸಿಕೊಳ್ಳಬಹುದು. ಆದರೆ ಕೆಲವೊಮ್ಮೆ ಪಂಚಾಯತಿಗಳೇ ಇರುವುದಿಲ್ಲ ಅಥವಾ ಅವು ನಿಷ್ಕ್ರಿಯವಾಗಿರುತ್ತವೆ. ಅಂತಹ ಸಂದರ್ಭಗಳಲ್ಲಿ ಹ್ಯೊಲಿನ ಉಪಯೋಗ ಪಡೆಯುತ್ತಾರೆ. ಬಹುಶಃ ಎಲ್ಲ ಹ್ಯೊಲಿನ ಸ್ಥಾನಗಳಲ್ಲಿಯೂ ಇಂತಹ ಹ್ಯೊಲನ್ನು ಸ್ವೀಕರಿಸಲಾಗುತ್ತಿತ್ತು.

ಐದನೆಯದು, ಅಷ್ಟಾಗಿ ಪ್ರಚಲಿತವಲ್ಲದ 'ಗಂಡ-ಹೆಂಡಿರ ಹ್ಯೊಲು' ಗಂಡಿಗೆ ಪ್ರಕೃತಿಸಿದ್ಧವಾದ ಮೇಲುಗೈ ಇದೆ ಎಂದು ನಂಬಿದ್ದ ನಮ್ಮ ಸಮಾಜದಲ್ಲಿ ಗಂಡು ಹೆಂಡತಿಯ ವಿರುದ್ಧ ಹ್ಯೊಲು ಸಲ್ಲಿಸಿ ದೇವರನ್ಯಾಯ ಕೇಳಬೇಕಾದ ಅವಶ್ಯಕತೆ ಪ್ರಾಯಶಃ ಇರಲಿಕ್ಕಿಲ್ಲ. ಆದರೆ ಹೆಣ್ಣಿಗೆ ಇಂತಹ ಹ್ಯೊಲಿನ ಅವಶ್ಯಕತೆ ಇತ್ತು. ಗಂಡನು ಅವಳನ್ನು ಮನೆಯಿಂದ ಓಡಿಸಿದಾಗ ಅಥವಾ ಇನ್ನೊಬ್ಬಳನ್ನು ಉಪಪತ್ನಿಯನ್ನಾಗಿ ಇಟ್ಟುಕೊಂಡು ತನ್ನನ್ನು ಕಸಕ್ಕೆ ಸಮಾನವಾಗಿ ನೋಡಿದಾಗ, ಅವಳು ದೇವರನ್ನು ಮೊರೆಹೋಗುವುದು ಸಹಜ. ಉಳಿದ ಸಂಬಂಧಿಕರು ಅವಳಿಗೆ ಇನ್ನಿಷ್ಟು ತಾಳಿಕೊಳ್ಳುವಂತೆ ಉಪದೇಶ ಕೊಡಬಹುದು ಅಥವಾ ಅವಳ ಗಂಡನಿಗೆ ಬುದ್ಧಿಮಾತು ಹೇಳಬಹುದು. ಇವೆಲ್ಲ ಉಪಯೋಗಕ್ಕೆ ಬಾರದೇ ಇದ್ದರೆ ಅವಳು ತನ್ನ ಗ್ರಾಮದ ಅಥವಾ ಹತ್ತಿರದ ಯಾವು ದಾದರೂ ಗ್ರಾಮದ ದೇವರಿಗೆ ಹ್ಯೊಲು ಕೊಡುತ್ತಿದ್ದಳು. ಏನಿದ್ದರೂ ಶಿಷ್ಟ ಸಂಪ್ರದಾಯದಂತೆ ಇಂತಹ ಹ್ಯೊಲು ಸಾಧುವಾದುದಲ್ಲ. ಕೆಳ ಜಾತಿಗಳು ಎನ್ನಿಸಿಕೊಳ್ಳು ತ್ತಿದ್ದ ಕೆಲವು ಜಾತಿಗಳಲ್ಲಿ ಮಾತ್ರ ಅಪವಾದವೆಂಬಂತೆ ಈ ಹ್ಯೊಲು ಕಂಡುಬರುತ್ತಿತ್ತು.

ಹ್ಯೊಲು ಕೊಡುವವನು ಯಾವಾಗಲೂ ಸತ್ಯವಂತನೇ? ನ್ಯಾಯ ಯಾವಾಗಲೂ ಅವನ ಕಡೆಯೇ ಇರುತ್ತದೆಯೇ? ಬಹುತೇಕ ಸಂದರ್ಭಗಳಲ್ಲಿ ಹೌದು. ಹ್ಯೊಲಿನ ದೈವ ವನ್ನು ನಂಬಿ, ದೈವವನ್ನು ಬೇಡುವವನು ನ್ಯಾಯದ ಕಡೆಯೇ ಇರುವುದು ಸಹಜ.

ತಾನು ಸರಿಯಾದ ಮಾರ್ಗದಲ್ಲಿ ಇದ್ದೇನೆ ಎಂಬ ಧೈರ್ಯವಿಲ್ಲವೆ ಯಾರೂ ಹ್ಯೊಲು ಕೊಡಲು ಹೋಗುವುದಿಲ್ಲ. ಇದಕ್ಕೆ ಕಾರಣವೆಂದರೆ, ನ್ಯಾಯ ಯಾರ ಕಡೆ ಇದೆ ಎಂದು ದೈವಕ್ಕೆ ತಿಳಿದಿದೆ ಎಂದು ಭಕ್ತರು ನಂಬುತ್ತಾರೆ. ಅಂತಹ ದೈವಕ್ಕೆ ಮೋಸ ಮಾಡುವುದು ಸಾಧ್ಯವಿಲ್ಲ. ಕೋರ್ಟು, ಕಛೇರಿಗಳಲ್ಲಿ ಚಾಣಾಕ್ಷ ವಕೀಲರ ಸಹಾಯ ಪಡೆದು ಸತ್ಯವನ್ನು ಸುಳ್ಳಾಗಿ, ಸುಳ್ಳನ್ನು ಸತ್ಯವಾಗಿ ಮಾಡಬಹುದು. ಆದರೆ ದೈವದ ಇದಿರು ಈ ಆಟ ನಡೆಯುವದಿಲ್ಲವೆಂದು ಭಕ್ತರ ನಂಬಿಕೆ. ಹೀಗಿರುವುದರಿಂದ ಎದುರಾಳಿಯನ್ನು ವಿನಾಕಾರಣ ಸೋಲಿಸುವ, ಅವನಿಗೆ ಕೇಡು ಉಂಟು ಮಾಡುವ ಅಂದರೆ ಹ್ಯೊಲನಜುನ ದುರುಪಯೋಗ ಮಾಡುವ ಸಂಭವ ಕಡಿಮೆ. ಅದರಲ್ಲೂ 'ಜಾಗೃತಸ್ಥಾನ'ಗಳು ಎನ್ನಿಸಿಕೊಳ್ಳುವ ಧರ್ಮಸ್ಥಳದಂತಹ ಸ್ಥಾನಗಳಿಗೆ ಮೋಸ ಮಾಡಿದರೆ ಬೆಂಕಿಯೊಡನೆ ಸರಸ ಮಾಡಿದಂತೆ ಎಂದು ಜನ ನಂಬಿರುತ್ತಾರೆ. ಇದೇ ಮಾತು ಹೆಚ್ಚಿನ ಗ್ರಾಮದೇವತೆಗಳಿಗೂ ಅನ್ವಯಿಸುತ್ತದೆ. ಆದರೆ ಕೆಲವು ಮಾತು ಹೆಚ್ಚಿನ ಗ್ರಾಮದೇವತೆಗಳಿಗೂ ಅನ್ವಯಿಸುತ್ತದೆ. ಆದರೆ ಕೆಲವು ಹ್ಯೊಲು-ಚೌಡಿಗಳು ತಮಗೆ ಸರಿ ಕಂಡದ್ದನ್ನು ಮಾಡುತ್ತಾವೆಂದೂ ತಮ್ಮ ಚಾಣಾಕ್ಷ ವಕೀಲರಂತೆಯೇ ಇರುವ ಚಾಣಾಕ್ಷ ಮಂತ್ರವಾದಿಗಳನ್ನು ಅಥವಾ ಪೂಜಾರಿಗಳನ್ನು ಒಲಿಸಿಕೊಂಡು ಆ ಚೌಡಿಗಳನ್ನು ಬೇಕಾದಂತೆ ಕುಣಿಸಬಹುದೆಂದು ಯಥೇಚ್ಛ ಕೋಳಿ, ಕುರಿ, ಮದ್ಯಗಳ ಲಂಚ ತಿಂದು ಅವು ಹ್ಯೊಲು ಕೊಡುವವನ ಮೇಲೆಯೇ ತಿರುಗಿ ಬೀಳಬಹುದೆಂದೂ ಪ್ರಚಲಿತ ಕತೆಗಳು ಹೇಳುತ್ತವೆ. ತಮಗೆ ಸರಿಯಾಗಿ ನಡೆದುಕೊಳ್ಳದೇ ಹೋದರೆ ಹ್ಯೊಲು ಕೊಟ್ಟವನ ಮೇಲೆ ಹಾಗೂ ಕೆಲವೊಮ್ಮೆ ತಮ್ಮ ಪೂಜಾರಿಗಳ ಮೇಲೆಯೇ ತಿರುಗಿಬೀಳುತ್ತವಂತೆ. ಅಂತಹ ಒಂದು ಕಥೆಯನ್ನು ಉತ್ತರ ಕನ್ನಡ ಜಿಲ್ಲೆಯ ಹಳೇಪೈಕ ಜಾತಿಯವನೊಬ್ಬನ ಬಾಯಿಂದ ಕೇಳಿರುವುದು ಹೀಗಿದೆ:

"ಊರು ಎಂಬ ಗ್ರಾಮದಲ್ಲಿ ದೀವರ ಜಾತಿಯವನೊಬ್ಬನಿದ್ದ. ಅವನು ಲಿಂಗಾಯತನೊಬ್ಬನ ಭತ್ತದ ಗದ್ದೆ ಬೇಸಾಯ ಮಾಡುವ ಗೇಣಿ ಒಕ್ಕಲಾಗಿದ್ದ. ಒಂದು ದಿನ ಆ ಲಿಂಗಾಯತ ವಿನಾಕಾರಣ ದೀವರನನ್ನು ತನ್ನ ಭೂಮಿ ಬಿಟ್ಟು ಹೋಗಲು ಹೇಳಿದ. ದೀವರನು ಕೂಡಲೇ ಹೋಗಲು ಒಪ್ಪಲಿಲ್ಲ. ಲಿಂಗಾಯತ ಹೆದರಿಕೆ ಹಾಕಿದ. ಇದರಿಂದ ಅವರಲ್ಲಿ ದ್ವೇಷ ಬೆಳೆಯಿತು. ಆಗ ಆ ದೀವರನು ದಿಗಡಕೊಪ್ಪದ ಚೌಡಿಗೆ ಹ್ಯೊಲು ಕೊಟ್ಟು ಲಿಂಗಾಯತ ಒಡೆಯನನ್ನು ಕೊಲ್ಲುವಂತೆ ಬೇಡಿಕೊಂಡ. ದಿಗಡಕೊಪ್ಪ ಚೌಡಿಯ ಗಾಡಿಗನು ದೈವವು ಬಳಸುವ ತ್ರಿಶೂಲವನ್ನು ದೀವರನಿಗೆ ಕೊಟ್ಟು ಅದನ್ನು ವಾದಗ್ರಸ್ತ ಭೂಮಿಯಲ್ಲಿ ಹೂಳುವಂತೆ ಹೇಳಿದ.

"ಎರಡು ಮೂರು ದಿನಗಳ ನಂತರ ಚೌಡಿಯು ಗಾಡಿಗನ ಕನಸಿನಲ್ಲಿ ಕಾಣಿಸಿಕೊಂಡು ತನ್ನ ತ್ರಿಶೂಲವು ಎಲ್ಲಿದೆ ಎಂದು ಕೇಳಿದಳು. ಅದಕ್ಕೆ ಆ ಗಾಡಿಗ 'ನೀನು ವೈರಿಯನ್ನು ಕೊಂದರೆ ಮಾತ್ರ ಆ ತ್ರಿಶೂಲವನ್ನು ತಿರುಗಿ ಕೊಡುತ್ತೇನೆ' ಎಂದು ಉತ್ತರ ಕೊಟ್ಟ.

ಆಗ ಚೌಡಿಯು ಸಿಟ್ಟಿನ ಭರದಲ್ಲಿ ಹೋಗಿ ಆ ಲಿಂಗಾಯತನನ್ನು ಕೊಂದಳು. ಅನಂತರ ಚೌಡಿ ಮತ್ತೆ ಗಾಡಿಗನ ಹತ್ತಿರ ಹೋಗಿ 'ವೈರಿಯನ್ನು ಕೊಂದದ್ದಾಗಿದೆ. ನನ್ನ ತ್ರಿಶೂಲ ನನಗೆ ಕೊಡು' ಎಂದು ಕೇಳಿದಳು. ಗಾಡಿಗ ದೀವರನ ಹತ್ತಿರ ಹೋಗಿ ಚೌಡಿ ಹೇಳಿದ ಮಾತನ್ನು ಅವನಿಗೆ ತಿಳಿಸಿದ. ಆಗ ಆ ದೀವರನು 'ನಾನು ಏಕೆ ಪೂಜೆ ಕೊಡಬೇಕು?' ನನ್ನ ಭೂಮಿ ನನಗೆ ಬರಲಿಲ್ಲವಲ್ಲಾ" ಎಂದು ಉತ್ತರ ಕೊಟ್ಟ.

"ಈ ವಿಷಯ ತಿಳಿಯುತ್ತಲೇ ಚೌಡಿಯು ಹೊಯ್ಲುಕೊಟ್ಟ ದೀವರನ ವಿರುದ್ಧ ತಿರುಗಿ ಬಿದ್ದು ಅವನನ್ನು ಕೊಂದಳು. ಅಷ್ಟೇ ಅಲ್ಲ, ಚೌಡಿಯು ಉಪಟಳ ಅಷ್ಟಕ್ಕೆ ನಿಲ್ಲಲಿಲ್ಲ. ದೀವರನ ಹೆಣವನ್ನು ನೋಡಲು ಬಂದ ಊರ ಜನರನ್ನೂ ಹೆದರಿಸಿ ತೊಂದರೆ ಕೊಟ್ಟಳು."

ಇಷ್ಟಾದರೂ ಚೌಡಿಯ ಸಿಟ್ಟು ತಣಿಯಲಿಲ್ಲ. ಲಿಂಗಾಯತನ ಭೂಮಿಯನ್ನು ಕೃಷಿಮಾಡಲು ಬಂದ ಹೊಸ ಒಕ್ಕಲನ್ನೂ ಹೆದರಿಸಿ ಕೊಂದಳು. ಆ ನಂತರ ಗಾಡಿಗನ ಹತ್ತಿರ ಬಂದು "ನಾನು ಮೂರು ದಿಕ್ಕಿನಲ್ಲಿ ಕಷ್ಟಕೊಟ್ಟದ್ದಾಯ್ತು. (ಅಂದರೆ ಲಿಂಗಾಯತನಿಗೆ, ಹೊಯ್ಲುಕೊಟ್ಟ ದೀವರನಿಗೆ ಮತ್ತು ಅವರ ಭೂಮಿಯನ್ನು ಹೊಸದಾಗಿ ಕೃಷಿ ಮಾಡಲು ಬಂದ ಒಕ್ಕಲಿಗೆ). ಆದರೆ ನನಗೆ ನನ್ನ ತ್ರಿಶೂಲ ಸಿಕ್ಕಿಲ್ಲ; ಪೂಜೆಯನ್ನೂ ಕೊಟ್ಟಿಲ್ಲ. ಅದನ್ನು ನೀನೇ ಕೊಡಿಸು" ಎಂದು ಕೇಳಿತು. ಆಗಲೂ ಗಾಡಿಗನು ತ್ರಿಶೂಲವನ್ನು ಮರಳಿತರುವ ಗೋಜಿಗೆ ಹೋಗಲಿಲ್ಲ; ಪೂಜೆ ಕೊಡಿಸಲೂ ಇಲ್ಲ. ಮುಂದಿನ ಹದಿನೈದು ದಿನದೊಳಗೆ ಗಾಡಿಗನೂ ಅವನ ಮಗನೂ ಸತ್ತರು.

"ಇಷ್ಟಾದರೂ ತಣಿಯದ ಚೌಡಿ ಈ ನಾಲ್ಕು ಕುಟುಂಬಗಳ ಇತರ ಸದಸ್ಯರಿಗೂ ಉಪಟಳ ಕೊಡಲು ಪ್ರಾರಂಭ ಮಾಡಿದಳು. ಕೊನೆಗೆ ಗಾಡಿಗನ ಮನೆಯವರು ಇನ್ನೊಬ್ಬ ಗಾಡಿಗನ ಮನೆಗೆ ಹೋಗಿ ಇದೆಲ್ಲ ಏಕೆ ನಡೆದಿದೆ ಎಂದು ಕೇಳಿದಾಗ ಈ ಕಷ್ಟ ಪರಂಪರೆ ಯಾಕೆ ಬಂದದ್ದೆಂದು ತಿಳಿಯಿತು. ಆಗ ಅವರು ಚೌಡಿಗೆ ಊರಿನ ಐದು ಜನರ ಸಾಕ್ಷಿಯಿಟ್ಟು ಪೂಜೆ ಮಾಡಿ, ಒಂದು ಆಡನ್ನು ಬಲಿಕೊಟ್ಟು ತ್ರಿಶೂಲವನ್ನು ತಿರುಗಿ ತಂದು ಕೊಟ್ಟರು. ಇಷ್ಟು ಹೊತ್ತಿಗೆ ಆ ಗಾಡಿಗನ ಮನೆಯಲ್ಲಿ ಕೇವಲ ಇಬ್ಬರೇ ಹೆಣ್ಣುಮಕ್ಕಳು ಉಳಿದಿದ್ದರು. ಆ ಇಬ್ಬರು ಈಗ ಕೂಲಿ ಕೆಲಸ ಮಾಡಿಕೊಂಡಿದ್ದಾರೆ."

ಹೊಯ್ಲು ಕೊಡುವುದು ಎಂತಹ ನಾಜೂಕು ಕೆಲಸ ಹಾಗೂ ಅದಕ್ಕೆ ಎಂತಹ ಜಾಗರೂಕತೆ ಬೇಕು ಎಂಬುದನ್ನು ಈ ಕತೆ ಸೂಚಿಸುತ್ತದೆ. ಇಂತಹ ಚೌಡಿಗಳನ್ನು ಸಂಭಾಳಿಸುವುದು ಕಷ್ಟ. ದಿಗಡಕೊಪ್ಪದ ಚೌಡಿ ಇದೆಲ್ಲ ಅನಾಹುತ ಮಾಡಿದ್ದಕ್ಕೋ ಏನೋ ಜನರು ಅವಳಿಗೆ ಹೊಯ್ಲು ಕೊಡುವುದನ್ನು ಕಡಿಮೆ ಮಾಡಿದರಂತೆ; ಬರಬರುತ್ತ ಹೊಯ್ಲು ನಿಂತೇ ಹೋಯಿತಂತೆ; ಈ ಕತೆ ಜನರಿಗೆ ಎಚ್ಚರಿಕೆ ಕೊಡುವ ಉದ್ದೇಶದಿಂದ ಹುಟ್ಟಿಕೊಂಡಿರಲೂಬಹುದು. ಏನಿದ್ದರೂ ಇತರ ಚೌಡಿಗಳೂ ಗ್ರಾಮದೇವತೆಗಳೂ ಕೆಲವೊಮ್ಮೆ ನಮ್ಮ ನಿರೀಕ್ಷೆಗೆ ವ್ಯತಿರಿಕ್ತವಾಗಿ ಕೆಲಸ ಮಾಡುತ್ತಾರೆಂದು ಜನ ಹೇಳುತ್ತಾರೆ. ಆದ್ದರಿಂದ ಕೆಲವು ಗ್ರಾಮದೇವತೆಗಳು

ಜನರ ಪ್ರೀತಿ ವಿಶ್ವಾಸಗಳಿಗೆ ಪಾತ್ರರಾಗದೇ 'ಚಾಲ್ತಿ'ಯಿಂದಲೇ ಹೋಗಿಬಿಡುತ್ತಾರೆ. ಅದೇ ಕಾಲಕ್ಕೆ ಅಲ್ಲೇ ಹತ್ತಿರದ ಇನ್ನೊಂದು ಊರಿನಲ್ಲಿರುವ ಇನ್ನೊಬ್ಬಳು ಜೌಡಿ ಅಥವಾ ಗ್ರಾಮದೇವತೆಯು ಹ್ಯೊಲು ಸ್ವೀಕರಿಸಿ ನ್ಯಾಯ ಕೊಡುವುದರಲ್ಲಿ ಪ್ರಸಿದ್ಧಳಾಗ ಬಹುದು. ಹೀಗೆ ಏಳು-ಬೀಳುಗಳು ಸಂಭವಿಸುತ್ತಲೇ ಇರುತ್ತವೆ.

ಆದರೆ ಧರ್ಮಸ್ಥಳದ ದೈವ ಅಥವಾ ಶಿಷ್ಟ ಸಂಪ್ರದಾಯಕ್ಕೆ ಸೇರಿದ ಕೆಲವು ಹ್ಯೊಲು ದೇವರುಗಳು ಬಹುಕಾಲದಿಂದಲೂ ಚಾಲ್ತಿಯಲ್ಲಿರುವುದನ್ನು ಕಾಣುತ್ತೇವೆ. ಇದಕ್ಕೆ ಒಂದು ಕಾರಣವೆಂದರೆ, ಇವರು ನ್ಯಾಯ ನೀತಿ ಬಿಡುವುದಿಲ್ಲವೆಂದು ಖ್ಯಾತಿ. ಹ್ಯೊಲು ಕೊಟ್ಟವರು ನ್ಯಾಯದ ಹಾದಿಯಲ್ಲಿ ಇದ್ದಾರೆಯೇ ಎಂದು ಈ ಕ್ಷೇತ್ರದವರು ಮೊದಲು ಚಿಕಿತ್ಸೆ ಮಾಡುತ್ತಾರೆ. ವ್ಯವಹಾರ ಜ್ಞಾನದ ಸಹಾಯದಿಂದ ತಪ್ಪು ಒಪ್ಪುಗಳ ವಿಮರ್ಶೆಯನ್ನು ಮಾಡುತ್ತಾರೆ. ಹತ್ತಿರ ಬಂಧುಗಳ ವಿರುದ್ಧ ಹ್ಯೊಲು ಸ್ವೀಕರಿಸುವುದಿಲ್ಲ. ವಾದ, ತರ್ಕಗಳಲ್ಲಿ ತೊಡಗುವ ಭಕ್ತರಿಗೆ ನಿಮ್ಮ ಮಾತನ್ನು ದೇವರಿಗೇ ಹೇಳಿಬಿಡಿ. ನ್ಯಾಯವಿದ್ದಂತೆ ಆಗುತ್ತದೆ ಎಂದು ಎಚ್ಚರಿಕೆ ಕೊಡುತ್ತಾರೆ.

ಕಳವಿನ ಹ್ಯೊಲು ಕೊಡುವಾಗ ಸಾಮಾನ್ಯವಾದ ಎರಡು ಉದ್ದೇಶಗಳಿರುವುದು ಸಾಧ್ಯ. ಒಂದು, ಕಳವಾದ ಮಾಲು ಸಿಗಬೇಕು. ಇದು ನ್ಯಾಯವಾದ ಆಶಯ. ಎಲ್ಲ ಶಿಷ್ಟ ದೇವತೆಗಳೂ ಗ್ರಾಮದೇವತೆಗಳೂ ಈ ಬೇಡಿಕೆ ಮನ್ನಿಸುತ್ತವೆ. ಹಳ್ಳಿಗಾಡಿನಲ್ಲಿ ಚಿನ್ನ, ಬೆಳ್ಳಿಯ ಆಭರಣಗಳೆಂದರೆ ದೊಡ್ಡ ಸಂಪತ್ತು. ಬ್ಯಾಂಕುಗಳಲ್ಲಿ ಮತ್ತು ಇತರ ಲಾಭದಾಯಕ ವ್ಯವಹಾರಗಳಲ್ಲಿ ಹಣ ತೊಡಗಿಸಲು ಸಾಧ್ಯವಾಗದ ಇವರಿಗೆ ಬೆಳ್ಳಿ, ಬಂಗಾರದ ಒಡವೆಗಳೆಂದರೆ ಅಮೂಲ್ಯ ಆಸ್ತಿ. ಅದರಲ್ಲೂ ಭೂಮಿಯಿಲ್ಲದ ಜನರಿಗೆ ಅವೇ ಸರ್ವಸ್ವ. ಆದುದರಿಂದ ಅವುಗಳನ್ನು ರಕ್ಷಿಸುವ ಹೊಣೆ ದೇವರಿಗೆ ಸೇರಿದ್ದು. ಕಳುವಿನ ಹ್ಯೊಲು ಕೊಟ್ಟಾಗ ಮಾಲನ್ನು ಹಿಂದಿರುಗಿಸುವುದು ದೇವರ ಹೊಣೆ. ಆದರೆ ಕೆಲವು ವಾದಿಗಳಿಗೆ ಇಷ್ಟರಿಂದಲೇ ಸಂಪೂರ್ಣ ತೃಪ್ತಿ ಸಿಗುವುದಿಲ್ಲ. ಕಳ್ಳತನ ಮಾಡಿ ದವರು ಯಾರು ಎಂದು ತಿಳಿಯಬೇಕೆಂಬ ಕುತೂಹಲವಿರುತ್ತದೆ. ಅನೇಕ ಹ್ಯೊಲು ದೇವತೆಗಳು ಇದನ್ನು ಸಮ್ಮತಿಸುವುದಿಲ್ಲ ದಕ್ಷಿಣ ಕನ್ನಡದ ಕೋಡಿಯಲ್ಲಿರುವ 'ಅಮ್ಮ' ನವರ ಸ್ಥಾನದಲ್ಲಿ ನಡೆದ ಹುಯಿಲು ಪ್ರಸಂಗವನ್ನು ಉದಾಹರಣೆಯಾಗಿ ಕೊಟ್ಟು ಇದನ್ನು ವಿಶದೀಕರಿಸಬಹುದು:

"ನಮಗೆ ವರದಿಯಾದ ಇನ್ನೊಂದು ಸ್ವಾರಸ್ಯಕರ ಪ್ರಸಂಗವಿದೆ. ಇದು ಚಿನ್ನದ ಆಭರಣ ಹೇಗೆ ಮರಳಿ ಸಿಕ್ಕಿತು ಎಂಬುದಕ್ಕೆ ಸಂಬಂಧಿಸಿದ್ದು. ಬಂಟ ಎಂಬ ಜಾತಿಗೆ ಸೇರಿದ ವಯಸ್ಸಾದ ಮಹಿಳೆಯೊಬ್ಬಳು ಇದನ್ನು ನಮಗೆ ಹೇಳಿದ್ದಾಳೆ. ಅವಳ ಮಗ ಕುಂದಾಪುರದಲ್ಲಿ ಡಾಕ್ಟರನಾಗಿದ್ದಾನೆ. ಆ ಮಹಿಳೆಯು ಮೊಮ್ಮಗನ ಕುತ್ತಿಗೆಯಲ್ಲಿದ್ದ ಚಿನ್ನದ ಸರವು ದರ್ಶನಪಾತ್ರಿಯು ಭರವಸೆ ಕೊಟ್ಟಂತೆ ಹೊಯ್ಲು ಕೊಟ್ಟು ೧೫ ದಿನ

ಗಳಲ್ಲಿಯೇ ಮರಳಿ ಸಿಕ್ಕಿತಂತೆ. ನಾವು ಈ ಬಗೆಗೆ ಮತ್ತಿಷ್ಟು ವಿಚಾರಿಸಿದೆವು. ತಾನು ಕೊಟ್ಟ ತೆಂಗಿನಕಾಯಿಯನ್ನು ಮನೆಗೆ ಹೋದ ಕೂಡಲೇ ಮನೆಯ ತಲೆಬಾಗಿಲಿನಲ್ಲಿ ಎಲ್ಲರಿಗೆ ಕಾಣುವಂತೆ ತೂಗುಹಾಕಬೇಕೆಂದೂ ಕೋಡಿ ಅಮ್ಮನವರ ಸ್ಥಾನದಲ್ಲಿ ಹ್ಯೊಲು ಕೊಟ್ಟಿದ್ದೇನೆ ಎಂದು ಎಲ್ಲರಿಗೆ ಕೇಳುವಂತೆ ಕೂಗಿ ಹೇಳಬೇಕೆಂದೂ ಅಮ್ಮನವರ ಪಾತ್ರಿ ಆದೇಶಕೊಟ್ಟಿದ್ದನಂತೆ. ಆ ಆದೇಶವನ್ನು ಆಕೆ ಚಾಚೂ ತಪ್ಪದೆ ಪಾಲಿಸಿದ್ದಳು. ಇದಾದ ಮೂರನೆಯ ದಿನ ಅವಳ ಮನೆಯಲ್ಲಿರುವ ಎಲ್ಲರಿಗೂ ಒಂದು ಆಶ್ಚರ್ಯ ಕಾದಿತ್ತು. ಮನೆಯ ಒಂದು ಕೋಣೆಯಲ್ಲಿ ಅವಳ ಆಭರಣ ಅದೇ ಆಗ ಹೊರಗಿನಿಂದ ಒಳಗೆ ಬಿಸಾಡಿ ದಂತೆ ನೆಲದ ಮೇಲೆ ಬಿದ್ದಿತ್ತು. ತನಗೆ ಮರಳಿ ದೊರೆತ ಆ ಸರವನ್ನು ಆಕೆ ಅಮ್ಮನವರ ಸ್ಥಾನಕ್ಕೆ ತಂದಿದ್ದಳು, ಅಮ್ಮನವರು ಹ್ಯೊಲು ನಡೆಸಿಕೊಟ್ಟ ಉಪಕಾರ ನೆನೆದು ಸರದ ಬೆಲೆಯ ಕಾಲು ಭಾಗವನ್ನು ಅಮ್ಮನಿಗೆ ಕೊಟ್ಟಳು. ಕಳ್ಳತನ ಮಾಡಿದವರು ಯಾರು ಎಂದು ಅವಳಿಗೆ ತಿಳಿಯಬೇಕಾಗಿತ್ತು. ಹಾಗೆ ಹೇಳಲು ಪಾತ್ರಿ ಸಿದ್ಧನಿರಲಿಲ್ಲ. ಅವಳ ಬಾವಿಯಿಂದ ನೀರು ಕುಡಿದವರಲ್ಲಿ ಒಬ್ಬನು ಈ ಕೆಲಸ ಮಾಡಿದ್ದಾಗಿಯೂ ಇದಕ್ಕಿಂತ ಹೆಚ್ಚಿನ ಮಾಹಿತಿ ಕೇಳಬಾರದೆಂದು ಪಾತ್ರಿ ತಾಕೀತು ಮಾಡಿದ. ಕಳ್ಳತನ ಮಾಡಿದವರು ಯಾರೆಂದು ಪತ್ತೆಹಚ್ಚಿ, ಅವನ ಮೇಲೆ ಸೇಡು ತೀರಿಸಿದರೆ, ಹ್ಯೊಲು ಕೊಟ್ಟವರಿಗೇ ಕೇಡು ಬರುತ್ತದೆಂದೂ ಈ ಪ್ರಕರಣವನ್ನು ಇಲ್ಲಿಗೇ ಮುಗಿಸಬೇಕೆಂದೂ ಪಾತ್ರಿ ಉಪದೇಶ ಮಾಡಿದ."

ಎಲ್ಲ ನಂಬುಗೆಗಳಂತೆ ಹ್ಯೊಲು ಕೂಡ ಮನೋವೈಜ್ಞಾನಿಕ ಸಂಗತಿ. ಶಿಷ್ಟರೂ ಸಾಮಾನ್ಯರೂ ಹ್ಯೊಲು ಸಂಪ್ರದಾಯವನ್ನು ಗೌರವಿಸಲು ಕಾರಣವೇನೆಂದರೆ ಅವರಿಬ್ಬರೂ ಅತಿಲೌಕಿಕ ಶಕ್ತಿಯನ್ನು ಒಪ್ಪುತ್ತಾರೆ. ಆ ಶಕ್ತಿಯು ಸಂರಕ್ಷಿಸಲೂಬಲ್ಲುದು; ಸಂಹರಿ ಸಲೂಬಲ್ಲುದು ಎಂದು ಅವರಿಬ್ಬರೂ ನಂಬುತ್ತಾರೆ. ಈ ನಂಬುಗೆ ವಾದಿ ಪ್ರತಿವಾದಿ ಗಳಲ್ಲಿ ಯಾರಾದರೂ ಒಬ್ಬರಿಗೆ ಇಲ್ಲದೇ ಹೋಗಿದ್ದರೆ ಹ್ಯೊಲು ಪರಿಣಾಮಕಾರಿಯಾಗುವ ಸಾಧ್ಯತೆಯಿಲ್ಲ. ನಾವು ವರ್ಣಿಸಿದ ಹ್ಯೊಲು ಹಿಂದೂ ಜಾತಿಗಳಲ್ಲಿರುವ ಒಂದು ಸಂಪ್ರ ದಾಯ. ಹ್ಯೊಲನ್ನು ಇತರ ಧರ್ಮೀಯರು ಅಷ್ಟು ಗಂಭೀರವಾಗಿ ತೆಗೆದುಕೊಳ್ಳುವು ದಿಲ್ಲ. ಅಷ್ಟೇ ಅಲ್ಲ, ಅನೇಕ ವೇಳೆ ಮೇಲ್ಜಾತಿಯ ಜನರು ಗ್ರಾಮದೇವತೆ ಅಥವಾ ಕ್ಷುದ್ರದೇವತೆಗಳಿಗೆ ಕೊಟ್ಟ ಹ್ಯೊಲನ್ನು ಗೇಲಿ ಮಾಡುವ ಪ್ರಸಂಗ ಬರಬಹುದು. ಅವರು ಕೆಳಜಾತಿಗಳ ದೇವರ ಆಜ್ಞೆ ಪಾಲಿಸಲು ಒಪ್ಪದೇ ಶಿಷ್ಟ ದೇವತೆಗಳಿಗೆ ಮಾತ್ರ ಹೆದರಿ ನಡೆಯುವರು.

ಇಲ್ಲಿ ನಾವು ಇನ್ನೊಂದು ಅಂಶವನ್ನು ಗಣನೆಗೆ ತೆಗೆದುಕೊಳ್ಳಬೇಕು. ತಪ್ಪು ಮಾಡಿದ ವ್ಯಕ್ತಿಯು ಹ್ಯೊಲು ದೇವತೆಯನ್ನು ತುಚ್ಛವಾಗಿ ಕಾಣಬಹುದು ಅಥವಾ ತನ್ನ ಲೆಕ್ಕದಂತೆ ತಾನು ಸರಿಯಾಗಿಯೇ ನಡೆದುಕೊಳ್ಳುತ್ತಿರುವುದರಿಂದ ದೈವ ಏನು ಮಾಡೀತು ಎಂದು ಅವಜ್ಞೆ ತೋರಿಸಬಹುದು. ಆದರೆ ಇದು ಅವನೊಬ್ಬನ ನಂಬಿಕೆ ಮತ್ತು

ಭಾವನೆಯ ಪ್ರಶ್ನೆಯಲ್ಲ. ಹ್ಯೊಲಿನ ಪರಿಣಾಮ ಇಡೀ ಕುಟುಂಬದ ಮೇಲೆ ಆಗುತ್ತದೆ ಎಂಬ ಭಾವನೆಯಿರುವುದರಿಂದ ಅವನು ದೈವದ ಆಜ್ಞೆಯನ್ನು ಸುಲಭವಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ತನಗೆ ಹ್ಯೊಲಿನಲ್ಲಿ ನಂಬಿಗೆ ಇರಲಿ ಬಿಡಲಿ, ಕುಟುಂಬಕ್ಕೆ ಯಾವುವೇ ಕೇಡು ಆಗಬಾರದು ಎಂಬ ಭಾವನೆಯಿಂದ ದೈವವು ಹೇಳಿದಂತೆ ನಡೆಯುಬಹುದು. ಹೀಗೆ ವೈಯಕ್ತಿಕ ಆಪತ್ತಿನ ಭಯ ಅಥವಾ ಇಡೀ ಕುಟುಂಬಕ್ಕೆ ಒದಗಬಹುದಾದ ಗಂಡಾಂತರದ ಭಯದಿಂದ ಅವನು ಹ್ಯೊಲನ್ನು ಮನ್ನಿಸಬಹುದು. ಗ್ರಾಮೀಣ ಪ್ರದೇಶದಲ್ಲಿ ಕುಟುಂಬದ ನಂಟು ಪ್ರಬಲವಾಗಿರುವುದರಿಂದ ಕುಟುಂಬದ ಜನರು ಒತ್ತಾಯ ತಂದಾಗ, ತಪ್ಪು ಮಾಡಿದವನು ತನ್ನ ತಪ್ಪನ್ನು ಒಪ್ಪಿಕೊಂಡು ಅನ್ಯಾಯದ ಪರಿಮಾರ್ಜನೆ ಮಾಡುತ್ತಾನೆ.

ಬಹುತೇಕ ಸಂದರ್ಭಗಳಲ್ಲಿ ದೈವದ ಹೆದರಿಕೆಯಿಂದಲೇ ಅನ್ಯಾಯ ಮಾಡಿದವನು ತನ್ನನ್ನು ತಿದ್ದಿಕೊಳ್ಳುತ್ತಾನೆ. ಆದರೆ ಕೆಲವು ಸಂದರ್ಭಗಳಲ್ಲಿ ಇನ್ನೊಂದು ಅಂಶವು ಹ್ಯೊಲಿಗೆ ಬಲ ತಂದುಕೊಡುತ್ತದೆ. ಸಮುದಾಯದ ಒತ್ತಡವೇ ಆ ಅಂಶ. ಮುಖ್ಯ ವಾಗಿ ನಂಬಿಕೆ ದ್ರೋಹದ ಸಂದರ್ಭಗಳಲ್ಲಿ, ಮಾತಿಗೆ ತಪ್ಪಿದ ಪ್ರಕರಣಗಳಲ್ಲಿ ತನ್ನ ಸುತ್ತ ಮುತ್ತಲಿನವರು ತನ್ನನ್ನು 'ಇವನೊಬ್ಬ ದೈವದ ಮಾತನ್ನು ಕೇಳದ ಪಾಪಿ' ಎಂದು ದೂಷಣೆ ಮಾಡಬಹುದೆಂಬ ಹೆದರಿಕೆಯಿರುತ್ತದೆ.

ಹ್ಯೊಲಿಗೆ ಇನ್ನೊಂದು ರೀತಿಯ ಮಹತ್ವವುಂಟು. ದೇವರ ಸಮಕ್ಷಮ ನಡೆಯುವ ಈ ವ್ಯವಹಾರದಲ್ಲಿ ಹ್ಯೊಲಿನಿಂದ ತಪ್ಪು ಮಾಡಿದವರ ಆತ್ಮಸಾಕ್ಷಿ ಜಾಗೃತವಾಗುವ ಸಂಭವವಿರುತ್ತದೆ. ಸಾಕ್ಷಿ ಪುರಾವೆಗಳಿಲ್ಲದ ಹಳ್ಳಿಗರ ವ್ಯವಹಾರಗಳಲ್ಲಿ ಈ ಆತ್ಮ ಸಾಕ್ಷಿಗೆ ಮಹತ್ವವಿದೆ. ದೇವಾಲಯಗಳ ಕಾರ್ಯವೆಂದರೆ ಈ ಆತ್ಮಸಾಕ್ಷಿಯನ್ನು ಜಾಗೃತಗೊಳಿಸು ವುದು. ಧರ್ಮಸ್ಥಳದ ಧರ್ಮಾಧಿಕಾರಿಗಳ ಮಾತಿನಲ್ಲಿ ಹೇಳುವುದಾದರೆ "ವಾದಿ ಪ್ರತಿ ವಾದಿಗಳು ಸುಮ್ಮನೆ ವಾದ ಮಾಡುತ್ತ ಕುಳಿತರೆ ಆಗ ಅವರಿಗೆ 'ತರ್ಕವಿದ್ದರೆ ಸ್ವಾಮಿಯ ಮುಂದೆ ಹೇಳಿ: ಸತ್ಯವಿದ್ದಂತೆ ತೀರ್ಮಾನವಾಗುತ್ತದೆ' ಎಂದು ಹೇಳಿ ಬಿಡುತ್ತೇವೆ". ಇಂತಹ ಸಂದರ್ಭಗಳಲ್ಲಿ ಜನರು ಸುಳ್ಳು ಹೇಳಲು ಧೈರ್ಯ ಮಾಡುವುದಿಲ್ಲ ಎಂದು ಅವರ ಭಾವನೆ.

ಕೆಲವು ಸ್ಥಳಗಳಲ್ಲಿ ಹತ್ತಿಪ್ಪತ್ತು ವರ್ಷಗಳ ಕಾಲ ಹ್ಯೊಲು ಕೊಡುವುದು ಭರ ಭರಾಟೆಯಲ್ಲಿದ್ದು ಮತ್ತೆ ತಗ್ಗುವುದನ್ನು ಕಾಣುತ್ತೇವೆ. ಇಂತಹ ಹಲವು ಉದಾಹರಣೆ ಗಳನ್ನು ವಿಶ್ಲೇಷಿಸಿದಾಗ ಒಂದು ವಿಷಯವು ನಮ್ಮ ಗಮನ ಸೆಳೆಯುತ್ತದೆ. ಅದೇನೆಂದರೆ, ಒಂದು ದೈವಸ್ಥಾನ ಪ್ರಸಿದ್ಧವಾಗುವುದು ಅಲ್ಲಿರುವ ದೈವ ಪ್ರತಿನಿಧಿಯಾದ ಪಾತ್ರಿ, ಗಾಡಿಗ, ಮೊಕ್ತೇಸರ ಅಥವಾ ಧರ್ಮಾಧಿಕಾರಿಗಳನ್ನೂ ಅವಲಂಬಿಸಿದೆ. ಅವನು ಧರ್ಮಾತ್ಮ ನಿದ್ದರೆ ಅಥವಾ ವ್ಯವಹಾರ ಜ್ಞಾನದಿಂದಾಗಿ ಪ್ರಸಿದ್ಧನಿದ್ದರೆ ಅಥವಾ ಸಂಧಾನಚತುರ

ನಿದ್ದರೆ ಆ ದೈವಸ್ಥಾನ ಪ್ರಸಿದ್ಧವಾಗುತ್ತದೆ. ಅಂದರೆ ಒಳ್ಳೆಯ ಪ್ರತಿನಿಧಿಯಿದ್ದಾಗ ಹ್ಯೊಲಿಗೆ ಬಲ ಬರುತ್ತದೆ.

ಈ ಎಲ್ಲ ಮಾತುಗಳಿಂದ ಹ್ಯೊಲು ಎಂಬುದು ಮೂಢರಾದ ಹಳ್ಳಿಗರು ನಡೆಸುವ ಕಂದಾಚಾರವಲ್ಲ ಎಂಬ ಮಾತು ಸ್ಪಷ್ಟವಾಗುತ್ತದೆ. ಕೆಲವು ವಿಶೇಷ ಸನ್ನಿವೇಶಗಳಲ್ಲಿ ಈ ಸಂಪ್ರದಾಯ ರೂಪುಗೊಂಡಿತು. ಗ್ರಾಮೀಣರಿಗೆ ಅಗತ್ಯವಾಗಿದ್ದ ನ್ಯಾಯ ತೀರ್ಮಾನದ ಬದಲಿ ವ್ಯವಸ್ಥೆಯೊಂದು ಸೃಷ್ಟಿಗೊಂಡಿತು.

ಸದ್ಯ ಈ ನ್ಯಾಯದಾನ ಪದ್ಧತಿ ಅವಜ್ಞೆಗೆ ಗುರಿಯಾಗುವ ಸನ್ನಿವೇಶಗಳು ಹುಟ್ಟಿಕೊಂಡಿವೆ. ಮಲೆನಾಡಿನ ದೂರದೂರದ ಹಳ್ಳಿಗಳಲ್ಲಿಯೂ ಸರಕಾರದ ಇಲಾಖೆಗಳು, ಗ್ರಾಮಪಂಚಾಯತಿಗಳು ಮುಂತಾದ ರಾಜಕೀಯ ಅಧಿಕಾರ ವ್ಯವಸ್ಥೆಗಳು ಪ್ರವೇಶ ಪಡೆದಿವೆ. ಭೂ ಒಡೆತನ, ಒಡೆಯ–ಒಕ್ಕಲು ಸಂಬಂಧ ಇತ್ಯಾದಿಗಳಲ್ಲಿ ಹೊಸ ನಿಯಮಗಳು ಬಂದಿವೆ. ಇಲ್ಲಿ ಬಾಯಿಮಾತಿನ ವ್ಯವಹಾರಕ್ಕೆ ಆಸ್ಪದ ಕಡಿಮೆ. ವಿವಿಧ ಜಾತಿಗಳ ಜನರು ಭೂಮಾಲಿಕರಾಗುತ್ತಿದ್ದು, ಅವರು ಹ್ಯೊಲು ದೈವದ ಅಧಿಕಾರ ಮನ್ನಿಸಲಿಕ್ಕಿಲ್ಲ. ಹೀಗಾಗಿ ಭೂಮಿ ಸಂಬಂಧವಾದ ಹ್ಯೊಲುಗಳು ಕಡಿಮೆಯಾಗುತ್ತಿವೆ. ಸರಕಾರ, ಬ್ಯಾಂಕು ಮತ್ತು ಸಹಕಾರಿ ಸಂಘಗಳಿಂದ ಸಿಗುವ ಸಾಲದ ಪ್ರಮಾಣ ಹೆಚ್ಚಿ, ಸಾಲದ ಹ್ಯೊಲು ಅನವಶ್ಯಕವಾಗುತ್ತಿದೆ. ಕಳವಿನ ಹ್ಯೊಲುಗಳು ಕುಗ್ರಾಮಗಳಲ್ಲಿ ಅಷ್ಟಿಷ್ಟು ಉಳಿದು ಕೊಂಡಿದ್ದರೂ ಪೋಲೀಸ್ ಠಾಣೆಗಳಿರುವ ಹಳ್ಳಿಗಳಲ್ಲಿ ಜನರು ಠಾಣೆಗಳಿಗೆ ಹೋಗಿ ದೂರು ಕೊಡುವುದು ಹೆಚ್ಚಿದೆ. ಅಲ್ಲದೆ, ಕಳ್ಳನು ಗ್ರಾಮದ ಹೊರಗಿನವನಾದರೆ ಗ್ರಾಮದೇವತೆ ಅವನ ಬೆನ್ನುಹತ್ತಿ ಹೋಗಿ ಶಿಕ್ಷಿಸುವ ಗೋಜಿಗೆ ಹೋಗುವದಿಲ್ಲ. ಅಂತೂ ಇಂತಹ ಹ್ಯೊಲುಗಳ ಸಂಖ್ಯೆ ಇಳಿದಿದೆ.

ಇಷ್ಟೆಲ್ಲ ಪ್ರಭಾವಗಳು ಹ್ಯೊಲು ಪದ್ಧತಿಯನ್ನು ಶಿಥಿಲಗೊಳಿಸಿದರೂ ನಮ್ಮ ಗ್ರಾಮೀಣ ಸಂದರ್ಭದಲ್ಲಿ ಅದು ಈವರೆಗೆ ಅಸಂಗತವಾಗಿಲ್ಲವೆನ್ನಿಸುತ್ತದೆ. ಕೆಲವು ರೀತಿಯ ಹ್ಯೊಲುಗಳು ಇಳಿಮುಖವಾದರೂ ಧರ್ಮಸ್ಥಳ ಕ್ಷೇತ್ರದಲ್ಲಿ ೧೯೮೧–೮೨ ರ ಅವಧಿಯಲ್ಲಿ ೮೯ ಹ್ಯೊಲುಗಳು ದಾಖಲಾಗಿವೆ. ಈಗಲೂ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಹ್ಯೊಲುಗಳು ಬರುತ್ತಿದ್ದರೆ ಅವು ಶಕ್ತಿಗುಂದಿವೆ ಎನ್ನುವುದು ಹೇಗೆ? ಬದಲಗುತ್ತಿರುವ ಗ್ರಾಮೀಣ ಪರಿಸರದಲ್ಲಿ ಈ ವಿಶಿಷ್ಟ ರೀತಿಯ 'ದೇವರ ನ್ಯಾಯ' ಎಲ್ಲಿಯ ತನಕ ಉಳಿದೀತು ಎಂಬುದು ಸದ್ಯ ಬಿಡಿಸಲಾರದ ಪ್ರಶ್ನೆ.

೫

'ದರ್ಶನ' ಮಾಡಿಸುವುದು ಅಥವಾ 'ದೇವರನ್ನು ಕೇಳುವುದು' ಒಂದೆ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಿದ್ದ ಆಚರಣೆ. ಹೊಲದ ಬೆಳೆಯನ್ನು ಯಾರಾದರೂ ರಾತ್ರಿ ವೇಳೆ ಕೊಯ್ದರೆ, ಮನೆಯ ಚಿನ್ನದ ಒಡವೆಗಳು ಕಳುವಾಗಿ ಹೋದರೆ, ತೋಟ

ವಲ್ಲಿ ಬೆಳೆದ ಅಡಿಕೆ, ತೆಂಗು ಇತ್ಯಾದಿ ಯಾರಾದರೂ ಕದ್ದೊಯ್ದರೆ ಅಂಥ ಸಂದರ್ಭಗಳಲ್ಲಿ ಕಳ್ಳರನ್ನು ಹುಡುಕುವುದು ಕಷ್ಟದ ಕೆಲಸ. ಆ ಕೆಲಸವನ್ನು ಗ್ರಾಮೀಣರು ದೇವರಿಗೆ ಒಪ್ಪಿಸುತ್ತಿದ್ದರು. ಅಪರಾಧಿಗಳು ಯಾರೆಂದು ದೇವರನ್ನು ಕೇಳುವುದೂ, ಅವರಿಗೆ ತಕ್ಕ ಶಿಕ್ಷೆಯನ್ನು ಕೊಡೆಂದು ಪ್ರಾರ್ಥಿಸುವುದೂ ಇತ್ತು. ನಿಶ್ಚಿತ ದಿನಗಳಂದು ನಡೆಯುವ ಅಥವಾ ವಿಶೇಷವಾಗಿ ಏರ್ಪಡಿಸುವ 'ದರ್ಶನ'ಗಳಲ್ಲಿ ಹೀಗೆ ದೇವರನ್ನು ಪ್ರಾರ್ಥಿಸುತ್ತಿದ್ದರು. ದೇವರ ಕಡೆಯಿಂದ ಉತ್ತರ ಹೇಳುವವನು ದೇವಸ್ಥಾನದ ಪಾತ್ರಿ. ದೇವರ ಪ್ರತಿನಿಧಿಯಾದ ಪಾತ್ರಿಯನ್ನು ಸ್ಥಳೀಯವಾಗಿ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಇವನಿಗೆ ದೇವರು 'ಮೈಮೇಲೆ' ಬರುತ್ತಾನೆ(ಳೆ) ಎಂದು ಜನ ನಂಬುತ್ತಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ನಡೆಯುತ್ತಿದ್ದ ಭೂತಾರಾಧನೆ, ಕೋಲಗಳಲ್ಲೂ ಕೇರಳದ ತೆಯ್ಯಂ ದರ್ಶನದಲ್ಲೂ ಹೀಗೆ ದೇವರನ್ನು ಕೇಳಿ ಸಮಾಧಾನ ಪಡೆಯುತ್ತಾರೆ. 'ಇಂಥಿಂಥ ಕೆಡುಕು ಏಕೆ ಸಂಭವಿಸಿತು, ಇಂಥಿಂಥ ರೋಗ ರುಜಿನಗಳು ಏಕೆ ಬಂದವು, ಸೇತುವೆ ಏಕೆ ಮುರಿಯಿತು, ಬೆಳೆ ಏಕೆ ಬರಲಿಲ್ಲ, ಇಂಥಿಂಥ ಕಳವು ಮಾಡಿದವರು ಯಾರು, ಬೆಂಕಿ ಹಚ್ಚಿದವರು ಯಾರು, ಇವುಗಳಿಗೆ ಪರಿಹಾರವೇನು ಎಂಬಿತ್ಯಾದಿ ಪ್ರಶ್ನೆಗಳನ್ನು ದರ್ಶನದಲ್ಲಿ ಜನರು ಕೇಳುತ್ತಿದ್ದರು. ದೈವ-ದೇವತೆಗಳ ಪ್ರತಿನಿಧಿಯಾದ ಪಾತ್ರಿಯು ದೈವದ ಪರವಾಗಿ 'ಮೈಮೇಲೆ' ಬಂದ ಸ್ಥಿತಿಯಲ್ಲಿ ಉತ್ತರ ಕೊಡುತ್ತಿದ್ದನು. ಕೆಲವೊಮ್ಮೆ ಪ್ರಶ್ನೆಗಳಿಗೆ ನೇರವಾದ ಉತ್ತರ ಬಂದರೆ, ಕೆಲವೊಮ್ಮೆ ದೈವಗಳ ಉತ್ತರ ಹಾರಿಕೆಯದೂ, ಎರಡು ಅರ್ಥ ಬರುವಂಥದ್ದೂ ಆಗಿರುತ್ತಿತ್ತು. ಹೀಗೆ 'ದೇವರನ್ನು ಕೇಳುವುದು' ನಡೆದು ಉತ್ತರ ಸಿಕ್ಕ ಕೆಲವು ದಿನಗಳ ನಂತರ ಅಥವಾ ಕೆಲವು ತಿಂಗಳುಗಳ ನಂತರ ಹೊಲದ ಬೆಳೆ ಕೊಯ್ದವನು, ಕಳವು ಮಾಡಿದವನು, ಬೆಂಕಿ ಹಚ್ಚಿದವನು ಅಥವಾ ಬೇರೆ ಅಪರಾಧ ಮಾಡಿದವನು ತನ್ನ ತಪ್ಪು ಒಪ್ಪಿಕೊಂಡರೆ ಅವನನ್ನು ದೈವದ ಮುಂದೆ ಹಾಜರುಪಡಿಸಿ, ತಪ್ಪು ದಂಡ ಕೊಡುವಂತೆ ಹೇಳಿ ದೂರು ಹಿಂತೆಗೆದುಕೊಳ್ಳುತ್ತಿದ್ದರು. ತಪ್ಪು ದಂಡ ಅಥವಾ ದೇವರ ಕಾಣಿಕೆ ಕೊಟ್ಟ ಮೇಲೆ ಪ್ರಕರಣ ಮುಗಿಯಿತು.

'ದರ್ಶನ'ದಲ್ಲಿ ಮೇಲೆ ಹೇಳಿದ ವಿಷಯಗಳಲ್ಲದ ಇತರ ವಿಷಯಗಳೂ ಬರಬಹುದು. ಉದಾಹರಣೆಗೆ ಒಬ್ಬ ಭಕ್ತನು ತನಗೆ ಇಂಥಿಂಥವರಿಂದ ಅನ್ಯಾಯವಾಗಿದೆಯೆಂದೂ ಕೋರ್ಟಿನಲ್ಲಿ ತನಗೆ ನ್ಯಾಯ ಸಿಗಲಿಲ್ಲವೆಂದೂ ಈಗ ದೇವರೇ ನ್ಯಾಯಕೊಡಿಸಬೇಕೆಂದೂ ಪ್ರಾರ್ಥಿಸಿಕೊಳ್ಳುತ್ತಾನೆ. ಇದು ಹೆಚ್ಚು ಕಡಿಮೆ ನಾವು ಈ ಮೊದಲು ವರ್ಣಿಸಿದ ಪ್ರೊಲನ್ನು ಹೋಲುತ್ತದೆ. ಆದರೆ ಇಲ್ಲಿ ದೂರುಗಾತ ಪ್ರಾರ್ಥನೆ ಸಲ್ಲುತ್ತದೆ. ಅಲ್ಲದೆ ಈ ಪ್ರಾರ್ಥನೆ ಎಲ್ಲರ ಸಮಕ್ಷಮ 'ದರ್ಶನ'ದ ಸಂದರ್ಭದಲ್ಲಿ ನಡೆಯುತ್ತದೆ. ಕೇರಳದಲ್ಲಿ ಪ್ರಚಲಿತವಿರುವ ತೆಯ್ಯಂಭೂತಾರಾಧನೆಯ ಸಂದರ್ಭದಲ್ಲಿ ಹೀಗೆ ಪ್ರಾರ್ಥನೆ ಅಥವಾ ಮನವಿ ಸಲ್ಲಿಸುವುದು ಹಿಂದೆ ಸರ್ವೇಸಾಮಾನ್ಯವಾಗಿತ್ತು. ಒಂದು ಉದಾಹರಣೆ ಕೊಡಬಹುದು. ಇಬ್ಬರ ನಡುವೆ ಆಸ್ತಿ, ಅಧಿಕಾರ ಮತ್ತು ಬೇರೆ ಯಾವುದೋ

ಒಂದು ವಿಷಯದ ಬಗ್ಗೆ ಜಗಳ ನಡೆದು ವಿವಾದ ಕೋರ್ಟಿಗೆ ಹೋಗುತ್ತದೆ. ದುರದೃಷ್ಟದಿಂದ ಅಲ್ಲಿ ತಪ್ಪು ಮಾಡಿದವನಿಗೇ ಜಯವಾಗುತ್ತದೆ. ಆಗ ನಿರಪರಾಧಿಯಾದ ಎದುರಾಳಿಯು ತನಗೆ ನ್ಯಾಯ ಸಿಗಲಿಲ್ಲವೆಂದೂ ದೈವವು ತನಗೆ ನ್ಯಾಯ ಕೊಡಿಸಬೇಕೆಂದೂ ತೆಯ್ಯಂ ದೈವವನ್ನು ಕೇಳಿ, ಒಂದು 'ಹಣ' ಕಾಣಿಕೆ ನೀಡುತ್ತಾನೆ. ಇದಾದ ಕೆಲವು ದಿನಗಳ ನಂತರ ಅನ್ಯಾಯದಿಂದ ಕೋರ್ಟಿನಲ್ಲಿ ಗೆದ್ದವನ ಕುಟುಂಬದಲ್ಲಿ ಮೇಲಿಂದ ಮೇಲೆ ಸಂಕಟಗಳು ಕಾಣಿಸಿಕೊಂಡರೆ ಅಥವಾ ಅನ್ಯಾಯ ಮಾಡಿದ ವ್ಯಕ್ತಿಯೇ ಸತ್ತು ಹೋದರೆ ಅದು ದೇವರ ನ್ಯಾಯ ಎಂದು ತಿಳಿಯಲಾಗುತ್ತದೆ. ಇಷ್ಟರಲ್ಲಿ ದೈವದ ತೀರ್ಮಾನ ಅರ್ಥ ಮಾಡಿಕೊಂಡ ಅವನ ಕುಟುಂಬದವರು ಮೃತನ ಚಿಕ್ಕ ಪ್ರತಿಮೆ ತಯಾರಿಸಿ ಪುಣ್ಯ ಕ್ಷೇತ್ರಕ್ಕೆ ಹೋಗಿ ಅದನ್ನು ಅಲ್ಲಿ ವಿಸರ್ಜಿಸಿ ಬರುತ್ತಾರೆ. ನಂತರ ದೇವರ ನ್ಯಾಯದ ಪೂರ್ಣ ಪ್ರಭಾವ ಮುಗಿಯಿತೆಂದು ತಿಳಿಯಲಾಗುತ್ತದೆ. ಇಂಥ ಘಟನೆಗಳು ಆಗೊಮ್ಮೆ ಈಗೊಮ್ಮೆ ನಡೆದರೂ ಅವು ಜನರ ನೆನಪಿನಲ್ಲಿ ಉಳಿದು ನ್ಯಾಯ ನೀತಿಗಳ ಎಚ್ಚರ ಮೂಡಿಸುವುದುಂಟು.

ಆದರೆ 'ದರ್ಶನ' ಮಾಡಿಸುವುದರಿಂದ ಅಥವಾ ದೇವರಿಗೆ ದೂರು ಕೊಡುವುದರಿಂದ ಸತ್ಯವಂತನೇ ಗೆಲ್ಲುತ್ತಾನೆ, ನ್ಯಾಯವಂತನೇ ಗೆಲ್ಲುತ್ತಾನೆ ಎಂಬ ನಿರ್ಣಯಕ್ಕೆ ಬರಬಾರದು. ಅನೇಕ ಸಲ ಇಂಥ ದರ್ಶನಗಳು ಆಸಕ್ತ ಜನರ ತಂತ್ರಗಳಾಗಿ ಮಾರ್ಪಟ್ಟಿರುವುದಿದೆ. ತೆಯ್ಯಂ ಪಾತ್ರಿಯನ್ನು ಪ್ರಬಲನಾದ ಕಕ್ಷಿದಾರನೊಬ್ಬನು ಮೊದಲೇ ಬುಟ್ಟಿಗೆ ಹಾಕಿಕೊಂಡು ನ್ಯಾಯದಾನದಲ್ಲಿ ತನಗೆ ಜಯವಾಗುವಂತೆ ನೋಡಿಕೊಳ್ಳುವುದಿದೆ. ಅಂಥ ಸಂದರ್ಭಗಳಲ್ಲಿ ತೆಯ್ಯಂ ಆರಾಧನೆ ಪ್ರಬಲ ವ್ಯಕ್ತಿಗೆ ಲಾಭಕರವಾಗಿ ಪರಿಣಮಿಸಿದರೆ ಆಶ್ಚರ್ಯವಿಲ್ಲ. ದೈವದರ್ಶನದಲ್ಲಿ ತೆಯ್ಯಂ ಆಟಗಾರನು ಜಮೀನುದಾರರ ಅಥವಾ ಇತರ ಶ್ರೀಮಂತ ಧಣಿಗಳ ಪಕ್ಷಪಾತಿಯಾಗಿದ್ದರೆ ದೈವದರ್ಶನ ಮಾಡಿಸಿದ ಫಿರ್ಯಾದಿಗೆ 'ಈ ಬಗ್ಗೆ ನೀನು ಹೆಚ್ಚು ತಲೆಕೆಡಿಸಿಕೊಳ್ಳಬೇಡ; ದೇವರ ಇಚ್ಛೆಗನುಗುಣವಾಗಿಯೇ ನಿನಗೆ ಈ ದುರ್ಭಾಗ್ಯ ಬಂದಿದೆ; ತೆಪ್ಪಗಿದ್ದು ಬಿಡು' ಎಂಬ ಎಚ್ಚರಿಕೆ ಕೊಡುವುದಿದೆ. ಇತ್ತೀಚೆಗೆ ತುಳುನಾಡಿನಲ್ಲಿ ಭೂ ಸುಧಾರಣೆಗೆ ಸಂಬಂಧಿಸಿದ ಅನೇಕ ವ್ಯಾಜ್ಯಗಳನ್ನು ಭೂ ನ್ಯಾಯ ಮಂಡಳಿಗಳಿಗೆ ಒಯ್ಯದೆ ತೆಯ್ಯಂ ಎದುರಿಗೆ ಒಯ್ದ ಉದಾಹರಣೆಗಳುಂಟು. ಸರಕಾರಿ ಕಾನೂನು ತಮಗೆ ಅನುಕೂಲವಾಗಿಲ್ಲ ಅಥವಾ ಭೂ ನ್ಯಾಯ ಮಂಡಳಿಯ ಸದಸ್ಯರಿಂದ ತಮಗೆ ಜಯ ಸಿಗಲಾರದೆಂದು ಗ್ರಹಿಸಿದ ಭೂಮಾಲಕರು ತಾವೇ ಈ ದೇವರ ನ್ಯಾಯ ಪದ್ಧತಿಯ ಮೂಲಕ ಲಾಭ ಪಡೆದ ವರದಿಗಳಿವೆ. ಹಣದ ಬಲದಿಂದಲೂ ಕುತಂತ್ರದಿಂದಲೂ ದೇವರ ನ್ಯಾಯದಲ್ಲಿ ನ್ಯಾಯದ ತಕ್ಕಡಿ ಅನ್ಯಾಯ ಮಾಡಿದವನ ಕಡೆಗೇ ಒಲಿಯಬಹುದು. ಹೀಗಿದ್ದರೂ ಅಮಾಯಕರಾದ ಹಳ್ಳಿಗರು ದೇವರ ನ್ಯಾಯ ಕೇಳುವುದನ್ನು ಈಗಲೂ ಸ್ವಲ್ಪ ಮಟ್ಟಿಗಾದರೂ ನೆಚ್ಚಿಕೊಂಡಿರುವುದನ್ನು ಕಾಣುತ್ತೇವೆ.

೬

ಅನ್ಯಾಯವನ್ನು ತಡೆಯಲು ಅಥವಾ ನ್ಯಾಯವನ್ನು ಪಡೆಯಲು ಕೆಲಮಟ್ಟಿಗಾದರೂ ಯಶಸ್ವಿಯಾಗುತ್ತಿದ್ದ ಒಂದು ಪದ್ಧತಿ ಹಿಂದೆ ಕರ್ನಾಟಕದ ಕರಾವಳಿ ಜಿಲ್ಲೆಗಳಲ್ಲೂ ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲೂ ಪ್ರಚಲಿತವಾಗಿತ್ತು. ಇದನ್ನು 'ವಾಕ್' ತೀರ್ಮಾನ ಅಥವಾ 'ಮಾತು' ಹಾಕುವುದು ಎನ್ನುತ್ತಿದ್ದರು. ಅನ್ಯಾಯ ಮಾಡುತ್ತಿರುವ ಎದುರಾಳಿಗೆ ದೇವರ ಹೆಸರನ್ನು ಹಿಡಿದು ಆಣೆ ಹಾಕಿದರೆ ಅವನು ಇನ್ನು ಮುಂದೆ ಅಂಥ ಅನ್ಯಾಯ ಮಾಡುವುದಿಲ್ಲ ಎಂಬ ನಂಬಿಕೆ ಈ ಪದ್ಧತಿಯಲ್ಲಿದೆ. ದಕ್ಷಿಣ ಕನ್ನಡ ಜಿಲ್ಲೆಯ ಧರ್ಮಸ್ಥಳ ಕ್ಷೇತ್ರದ ಮಂಜುನಾಥ ಸ್ವಾಮಿಯ ಹೆಸರಿನಲ್ಲಿ 'ಮಾತು' ಹಾಕುವುದು ಒಂದು ಕಾಲಕ್ಕೆ ಅತಿ ಪ್ರಬಲವಾದ ಪದ್ಧತಿಯಾಗಿತ್ತು. ಈಗಲೂ ಕರಾವಳಿ ಮತ್ತು ಮಲೆನಾಡಿನ ಭಾಗಗಳಲ್ಲಿ ಆಗೊಮ್ಮೆ ಈಗೊಮ್ಮೆಯಾದರೂ ಅಂಥ ಪ್ರಕರಣಗಳು ಕಾಣ ಸಿಗುತ್ತವೆ. ಇಲ್ಲಿ ನೆನಪಿಡಬೇಕಾದ ಮಾತೆಂದರೆ ಇದರಲ್ಲಿ ಅನ್ಯಾಯ ಮಾಡುವವನು ಮತ್ತು ಬಾಧೆಗೆ ಒಳಗಾಗುವವನು ಇಬ್ಬರೂ ದೈವ ಭಕ್ತರಿದ್ದಲ್ಲಿ ಬಾಧಿತನ 'ವಾಕ್' ಪರಿಣಾಮಕಾರಿಯಾಗ ಬಲ್ಲದು. ದೈವದ ಭಯ ಅಥವಾ ಆತ್ಮಸಾಕ್ಷಿ ಇರುವಲ್ಲಿ ಮಾತ್ರ ಈ ಪದ್ಧತಿ ಯಶಸ್ವಿ ಯಾಗುವುದು. ಧರ್ಮಸ್ಥಳ ಕ್ಷೇತ್ರದಲ್ಲಿ ಪ್ರಚಲಿತವಿರುವ 'ವಾಕ್' ಅಥವಾ 'ಮಾತು ತೀರ್ಮಾನ' ಪದ್ಧತಿಯನ್ನು ಅಲ್ಲಿನ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರು ವರ್ಣಿಸಿರುವುದು ಹೀಗೆ:

"ನಮ್ಮ ಕ್ಷೇತ್ರದಲ್ಲಿ ಒಂದು ವಿಶಿಷ್ಟವಾದ ಪರಂಪರೆಯಿದೆ; ಕ್ಷೇತ್ರದ ವಿಶಿಷ್ಟ ಪದ್ಧತಿಯಿದೆ. ಈ ಪದ್ಧತಿಯನ್ನು 'ವಾಕ್' ಅಥವಾ 'ಮಾತು' ಎಂದು ಕರೆಯುತ್ತೇವೆ. ಇದು ವಿಶೇಷವಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಹೆಚ್ಚು ಪ್ರಚಲಿತವಾಗಿದೆ. ಸಾಮಾನ್ಯವಾಗಿ ಜಮೀನಿಗೆ ಸಂಬಂಧಿಸಿದ ಜಗಳವಾಗುತ್ತದೆ. ಒಬ್ಬನ ಜಮೀನಿನಲ್ಲಿ ಇನ್ನೊಬ್ಬ ಬಲಾತ್ಕಾರವಾಗಿ ಪ್ರವೇಶಿಸಿದಂತಹ ಸಂದರ್ಭದಲ್ಲಿ ವ್ಯಾವಹಾರಿಕವಾಗಿ ಮಾಡಬಹುದಾದ ಕಾರ್ಯವೆಂದರೆ ಸಮೀಪದ ಪೋಲೀಸು ಠಾಣೆಗೆ ದೂರು ಕೊಡುವುದು; ಪೋಲೀಸು ಅಧಿಕಾರಿ 'ಆತ ನಿನ್ನ ಜಮೀನಿಗೆ ಪ್ರವೇಶಿಸಿದ ಮೇಲೆ ದೂರುಕೊಡಬಹುದು ಅಥವಾ ಕೋರ್ಟಿನಲ್ಲಿ ಸಿವಿಲ್ ಕೇಸಿನ ಮೂಲಕ ರಕ್ಷಣೆ ಕೋರಬಹುದು'–ಎಂದು ಹೇಳಬಹುದು. ಇವೆಲ್ಲ ಲೌಕಿಕವಾದಂತಹ ಪರಿಹಾರಗಳು. ಆದರೆ ಈ ಕೆಲವು ಜಿಲ್ಲೆಗಳಲ್ಲಿ ಇಂದಿಗೂ ಒಂದು ವಿಶಿಷ್ಟ ಪದ್ಧತಿ ಆಚರಣೆ ಯಲ್ಲಿದೆ. ಭೂಮಿಯನ್ನು ಆಕ್ರಮಿಸುವವನೊಡನೆ 'ನೀನು ಜಮೀನಿಗೆ ಕಾಲಿಟ್ಟಲ್ಲಿ ಸ್ವಾಮಿ ನೋಡಿಕೊಳ್ಳಲಿ' ಎನ್ನುತ್ತಾನೆ. ಈ 'ಸ್ವಾಮಿ ನೋಡಿಕೊಳ್ಳಲಿ' ಎಂಬ ಮಾತಿನ ಮಹತ್ವ ವಷ್ಟೆಂದರೆ–ಆ ಮಾತು ನುಡಿದವ ಮತ್ತು ಕೇಳಿಸಿಕೊಂಡವರಿಬ್ಬರೂ ಈ ವಿಷಯದ ಬಗ್ಗೆ ಒಂದು ಇತ್ಯರ್ಥಕ್ಕೆ ಬರುತ್ತಾರೆ. ಹಾಗಾಗುವವರೆಗೆ ಆತ ಆ ಜಮೀನಿಗೆ ಕಾಲಿಡುವುದಿಲ್ಲ."

"ಗಂಡ–ಹೆಂಡತಿಯರಲ್ಲಿ ವಿವಾದ ಬರುತ್ತದೆ. ಗಂಡ ಹೆಂಡತಿಯನ್ನು ಹೊಡೆಯಲು

ಹೋಗುತ್ತಾನೆ. ಆಗ ಅಸಹಾಯಕಳಾದ ಆಕೆ ದ್ರೌಪದಿಯು ಸಹಾಯಕ್ಕೆ ಕೃಷ್ಣನನ್ನು ಕರೆದಂತೆಯೇ, ಆ ಗಂಡನಿಗೆ ಹೇಳುತ್ತಾಳೆ–'ನೀನು ನನ್ನ ಮೈಮುಟ್ಟಬೇಡ. ಮೈಮುಟ್ಟಿದರೆ ನಿನ್ನನ್ನು ಸ್ವಾಮಿ ನೋಡಿಕೊಳ್ಳಲಿ'–ಎಂದು. ಈ ಮಾತಿಗೆಷ್ಟು ಬೆಲೆಯೆಂದರೆ ಅವನು ಮತ್ತೆ ಮುಟ್ಟುವುದಿಲ್ಲ. ಮತ್ತೆ ಮೈಮುಟ್ಟಬೇಕಾದರೆ ಅವರಿಬ್ಬರೂ ಕ್ಷೇತ್ರಕ್ಕೆ ಬಂದು, ಸನ್ನಿಧಿಯಲ್ಲಿ ತಪ್ಪುಕಾಣಿಕೆ ಹಾಕಿ, 'ನಾವು ಶ್ರೀಸ್ವಾಮಿಯ ಹೆಸರು ಹೇಳಿದ್ದೇವೆ, ಅದಕ್ಕೆ ಕ್ಷಮೆಯಿರಲಿ'–ಎಂದು ಮಾತು–ತೀರ್ಮಾನ ಮಾಡಿಕೊಂಡು ಹೋಗುತ್ತಾರೆ...."

ತಂದೆ–ಮಕ್ಕಳಲ್ಲಿ ಹಣಕಾಸಿನ ವ್ಯವಹಾರದಲ್ಲಿ ಮನಸ್ತಾಪವಾಗಿ ವಾದವಿವಾದ ಎದ್ದರೆ ಅಥವಾ ಬೇರೆ ತಗಾದೆಗಳ ಬಗೆಗೂ 'ಮಾತು' ಆಗಬಹುದು. ಆ ಮಾತು ತೀರ್ಮಾನವಾಗುವವರೆಗಾದರೂ ಅನ್ಯಾಯಕ್ಕೆ ತಡೆಯುಂಟಾಗುವುದು. ಇದೊಂದು ರೀತಿಯ ಯುದ್ಧವಿರಾಮ. ತಾತ್ಕಾಲಿಕ ತಡೆ.

೭

'ಆಣೆ–ಪ್ರಮಾಣ' ಅಥವಾ 'ಪ್ರಮಾಣ ವಚನ' ಎಂಬ ಪದ್ಧತಿ ಬಹುದೀರ್ಘ ಕಾಲದಿಂದಲೂ ಬಳಕೆಯಲ್ಲಿರುವ ಪದ್ಧತಿ. ವಾದಿಯು ಅಥವಾ ಪ್ರತಿವಾದಿಯು ತಾನು ಸತ್ಯವಂತನೆಂದೂ ತಪ್ಪುಮಾಡಿಲ್ಲವೆಂದೂ ತನ್ನ ನಿರಪರಾಧಿತ್ವವನ್ನು ಹಾಗೂ ಪ್ರಾಮಾಣಿಕತೆಯನ್ನು ಸ್ಪಷ್ಟಪಡಿಸಲು ತನಗೆ ಪ್ರಿಯವಾದ ಅಥವಾ ಗೌರವಕ್ಕೆ ಪಾತ್ರವಾದ ವ್ಯಕ್ತಿ ಅಥವಾ ವಸ್ತುವಿನ ಹೆಸರು ಹೇಳಿ ಪ್ರಮಾಣ ಮಾಡುತ್ತಾನೆ. ಪ್ರಾಚೀನ ಕಾಲದಲ್ಲಿ ಇಂಥ ಆಣೆ–ಪ್ರಮಾಣ ಸಾಮಾನ್ಯವಾಗಿ ದೇವರ ಮುಂದೆ ಅಥವಾ ಧರ್ಮ ಗುರುವಿನ ಮುಂದೆ ನಡೆಯುತ್ತಿತ್ತು. ದೇವರ ಮುಂದೆ ಅಥವಾ ಮಠಾಧೀಶರ ಮುಂದೆ ಮಾಡಿದ ಪ್ರಮಾಣವನ್ನು ಸತ್ಯವೆಂದೂ, ನಿರಪರಾಧಿತ್ವದ ಸಾಕ್ಷಿಯೆಂದೂ ಸ್ವೀಕರಿಸಲಾಗುತ್ತಿತ್ತು. ಭಾರತದಲ್ಲಿ ಈ ಪದ್ಧತಿ ಬಹು ವ್ಯಾಪಕವಾಗಿ ಕಂಡುಬರುತ್ತಿತ್ತೆಂದರೆ ತಪ್ಪಿಲ್ಲ. ದೇವಾಲಯದಲ್ಲಿ ಯಾರೂ ಸುಳ್ಳು ಪ್ರಮಾಣ ಮಾಡುವ ಧೈರ್ಯ ಮಾಡುತ್ತಿರಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿಯೂ ಕ್ರೈಸ್ತ ಮಠಾಧಿಪತಿಯ ಮುಂದೆ ಮಾಡಿದ ಪ್ರಮಾಣವನ್ನು ನಿರಪರಾಧಿತ್ವದ ಸಂಕೇತವೆಂದು ತಿಳಿಯುವ ಪರಿಪಾಠವಿತ್ತು. ಮುಂದೆ ಲೌಕಿಕ ನ್ಯಾಯಾಲಯದಲ್ಲಿಯೂ ಆಣೆ–ಪ್ರಮಾಣದ ಬಳಕೆ ಪ್ರಾರಂಭವಾದಂತೆ ಕಾಣುತ್ತದೆ.

ಆಣೆ–ಪ್ರಮಾಣಗಳು ಬಹುತೇಕವಾಗಿ ದೇವಾಲಯದಲ್ಲಿ ನಡೆಯುತ್ತಿದ್ದರೂ ದೇವಾಲಯದ ಹೊರಗೂ ನಡೆದರೆ ಅಭ್ಯಂತರವಿರಲಿಲ್ಲ. ಕೆಲವೊಮ್ಮೆ ಸಮುದಾಯದ ಹಿರಿಯರ ಮುಂದೆ ಬಯಲಿನಲ್ಲಿ ಇಂಥ ಕೆಲಸ ನಡೆಯುತ್ತಿತ್ತು. ಆ ಸಂದರ್ಭಗಳಲ್ಲಿ ಸೂರ್ಯಚಂದ್ರರೇ ಇದಕ್ಕೆ ಸಾಕ್ಷಿ ಎಂದು ನಂಬುತ್ತಿದ್ದರು. ಜನಪದರು ಸೂರ್ಯ ಚಂದ್ರರ ಹೆಸರಿನಲ್ಲಿ ಮಾತ್ರವಲ್ಲ, ಕುಲದ ದೇವರ ಆಣೆ, ಹಸುಗೂಸಿನ ಆಣೆ, ಗೋವಿನ ಆಣೆ, ಅರಳೀಮರದ ಆಣೆ, ತಂದೆ ತಾಯಿಗಳ ಆಣೆಯಿಡುತ್ತಿದ್ದರು. ಈ ವಸ್ತುಗಳೂ

ವ್ಯಕ್ತಿಗಳೂ ದೇವರಿಗೆ ಸಮ ಎಂಬುದು ಜನರ ಭಾವನೆಯಾಗಿತ್ತು. ಒಂದು ವೇಳೆ ಸುಳ್ಳು ಆಣೆ ಮಾಡಿದರೆ ಆಣೆಯಿಟ್ಟವನಿಗೆ ದೇವರು ಮುನಿಯುತ್ತಾನೆ, ಕೂಸಿಗೆ ಕೇಡಾಗುತ್ತದೆ, ಗೋವಿನ ಶಾಪ ತಟ್ಟುತ್ತದೆ, ತಂದೆ ತಾಯಿಗಳ ಆಯುಷ್ಯ ಕಡಿಮೆಯಾಗುತ್ತದೆ ಇತ್ಯಾದಿ ನಂಬಿಕೆಗಳಿದ್ದವು.

ಅದೆಷ್ಟೋ ಸಂದರ್ಭಗಳಲ್ಲಿ ವ್ಯಾಜ್ಯಗಳಾದಾಗ ಎರಡೂ ಕಡೆಯವರು ತಮ್ಮತಮ್ಮವಾದ ಮಂಡಿಸುವರು; ತಾವು ಹೇಳಿದ್ದೇ ಸತ್ಯ ಎನ್ನುವರು. ಆಗ ಮಠಾಧೀಶನು ಅಥವಾ ಕುಲದ ಹಿರಿಯನು ವಾದಿ ಅಥವಾ ಪ್ರತಿವಾದಿಯ ಕೈಯಲ್ಲಿ ಒಂದು ಪವಿತ್ರ ಧರ್ಮಗ್ರಂಥವನ್ನು ಹಿಡಿಸಿ ತಾನು ಹೇಳಿದ್ದು ಸತ್ಯ ಎಂದು ಪ್ರಮಾಣ ಮಾಡಿಸುತ್ತಿದ್ದನು. ಧರ್ಮಗ್ರಂಥವಿಲ್ಲದ ಸಂದರ್ಭದಲ್ಲಿ ದೇವರ ಹೆಸರು ಹಿಡಿದು ಪ್ರಮಾಣ ಮಾಡೆಂದು ಹೇಳುತ್ತಿದ್ದನು. ಆಗ ಸತ್ಯವಂತನಿಗೆ ಮಾತ್ರ ಆ ಧೈರ್ಯವಿರುತ್ತಿತ್ತು.ಬರಬರುತ್ತ ದೇವರು, ಧರ್ಮ ಇತ್ಯಾದಿಗಳಲ್ಲಿ ಜನರಿಗಿದ್ದ ಭಯ ಭೀತಿ ಕಡಿಮೆಯಾದಂತೆ ಆಣೆ-ಪ್ರಮಾಣದ ಪಾವಿತ್ರ್ಯ ಕಡಿಮೆಯಾಯಿತು. ಅದು ನ್ಯಾಯಾನ್ಯಾಯವನ್ನು ನಿರ್ಣಯಿಸಲು ಅಶಕ್ತವಾಯಿತು. ಬ್ರಿಟಿಷ್ ಕಾಲದಲ್ಲಿ ಕೋರ್ಟುಗಳಲ್ಲಿ ವಾದಿ ಪ್ರತಿವಾದಿಗಳಿಬ್ಬರೂ ಗೀತೆ, ಬೈಬಲ್ ಅಥವಾ ಕುರಾನಗಳನ್ನು ಹಿಡಿದು ಪ್ರಮಾಣ ಮಾಡಬೇಕಾಗಿ ಬಂದಾಗ, ಅದೊಂದು ಅನಿವಾರ್ಯ ವಿಧಿಯಾಗಿತ್ತೇ ಹೊರತು ಅವರಲ್ಲಿದ್ದ ಪಾವಿತ್ರ್ಯ ಹೊರಟು ಹೋಯಿತು. ದೇವರ ನ್ಯಾಯದ ಸಾಧನವಾಗುವ ಬದಲು ಅದು ಲೌಕಿಕ ನ್ಯಾಯದ ಒಂದು ಸತ್ವಹೀನ ಆಚರಣೆಯಾಗಿ ಮಾರ್ಪಟ್ಟಿತು.

□ □

ಕನ್ನಡ ಪುರಾಣಗಳು, ಪುರಾಣ ಕಥೆಗಳು: ಸಂಸ್ಕೃತ-ಕನ್ನಡ ಬಾಂಧವ್ಯ

—ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿ

೧/ಜೈನ:

ಪಂಪಕವಿಗೆ ಹಿಂದಿನ ಕವಿಗಳಲ್ಲಿ ಈಗ ತಿಳಿದಿರುವಂತೆ ಅಸಗ ಮತ್ತು ಗುಣವರ್ಮರೆಂಬ ಇಬ್ಬರು ಜೈನ ಕವಿಗಳು ಪ್ರಸಿದ್ಧರಾದವರು. ಇವರಲ್ಲಿ ಅಸಗನು (೮೫೩) ಚೋಳ ರಾಜ್ಯದ ವರಲಾ ಎಂಬ ಪಟ್ಟಣಕ್ಕೆ ಹೋಗಿ ಅಲ್ಲಿ ಎಂಟು ಗ್ರಂಥಗಳನ್ನು ರಚಿಸಿದನೆಂಬುದಾಗಿ ತಿಳಿಯುವುದು. ಇವುಗಳಲ್ಲಿ 'ವರ್ಧಮಾನ ಪುರಾಣ' ಮತ್ತು 'ಶಾಂತಿಪುರಾಣ' ಎಂಬ ಎರಡು ಸಂಸ್ಕೃತ ಭಾಷೆಯ ಕೃತಿಗಳು ದೊರೆತಿವೆ. ಜಯಕೀರ್ತಿಯ (ಸು. ೧೦೫೦) 'ಛಂದೋನುಶಾಸನ' ಎಂಬ ಸಂಸ್ಕೃತ ಛಂದೋಗ್ರಂಥದಲ್ಲಿ ಈತನ 'ಕರ್ಣಾಟಕುಮಾರ ಸಂಭವ ಕಾವ್ಯ'ದ ಉಲ್ಲೇಖವಿದೆ. ಈತನ ಇತರ ಗ್ರಂಥಗಳು ಯಾವುವು, ಅವು ಯಾವ ಭಾಷೆಯಲ್ಲಿದ್ದುವು- ಇವು ತಿಳಿದಿಲ್ಲ. ಅಂತೂ ಅಸಗ ಕವಿ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಸಮಾನ ರಚನಾ ಸಾಮರ್ಥ್ಯವಿದ್ದ ಕವಿಯಾಗಿದ್ದನೆಂಬುದು ನಿಶ್ಚಯ. ಅಪಭ್ರಂಶ ಕವಿ ಧವಲನು (ಸು. ೧೦ನೆಯ ಶ.) ತನ್ನ 'ಹರಿವಂಶ ಪುರಾಣ'ದಲ್ಲಿ ಅಸಗನನ್ನು ಸ್ಮರಿಸಿರುವುದರಿಂದ ಆತ ಪ್ರಾಕೃತ ಕವಿಗಳಿಂದಲೂ ಗಣ್ಯನಾಗಿದ್ದನೆಂದೂ ಆತನ ಕೆಲವು ಕೃತಿಗಳು ಅವನಿಗೆ ಆಕರಗಳಾಗಿಯೋ ಮಾದರಿಗಳಾಗಿಯೋ ಇದ್ದಿರಬಹುದೆಂದೂ ಊಹಿಸಬಹುದಾಗಿದೆ. ಅಸಗನಂತೆ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಸಮದಂಡಿಯಾಗಿ ಕೃತಿರಚನೆ ಮಾಡಿದ ಕನ್ನಡ ಕವಿಗಳು ೧೦ನೆಯ ಶತಮಾನದಿಂದಿತ್ತ ವಿಶೇಷವಾಗಿ ಕಾಣಿಸುವುದಿಲ್ಲ. ಈತ ಕೂಡ ಈಚಿನ ಇತರ ಕವಿಗಳಂತೆ ಕನ್ನಡದಲ್ಲಿ ಯಾವುದಾದರೂ ಜೈನ ಪುರಾಣವನ್ನು ರಚಿಸಿರಬಹುದೇ ಎಂಬುದನ್ನು ತಿಳಿಯಲು ನಮಗೆ ತಕ್ಕ ಆಧಾರಗಳಿಲ್ಲ.

೧ನೆಯ ಗುಣವರ್ಮನು (ಸು. ೯೦೦) ಬರೆದಂತೆ ತಿಳಿದಿರುವ ಎರಡು ಕೃತಿಗಳಲ್ಲಿ 'ಹರಿವಂಶ' ೨೨ನೆಯ ತೀರ್ಥಂಕರನಾದ ನೇಮಿನಾಥನ ಚರಿತ್ರೆಯಾಗಿದ್ದು, ಇದರ ರಚನೆಗೆ ಕವಿ ಸಂಸ್ಕೃತ ಪ್ರಾಕೃತ ನೇಮಿನಾಥ ಪುರಾಣಗಳಲ್ಲಿ ಒಂದೋ ಹಲವೋ ಆಕರಗಳನ್ನು ನೋಡಿಕೊಂಡಿರಬಹುದು. ಪುನ್ನಾಟ ಸಂಘದ ಜಿನಸೇನರ 'ಹರಿವಂಶ ಪುರಾಣ'ದ ಮಾರ್ಗವನ್ನು ಅನುಸರಿಸಿ ಈ ಕೃತಿಯನ್ನು ರಚಿಸಿರುವುದು ಅಸಂಭವವಲ್ಲ. ಇದು ಈಗ ತಿಳಿದಮಟ್ಟಿಗೆ ಕನ್ನಡ ನೇಮಿಪುರಾಣಗಳಲ್ಲಿ ಮೊತ್ತಮೊದಲನೆಯದು.

ಪಂಪನು (೯೪೧) ಬರೆದ ಎರಡು ಗ್ರಂಥಗಳಲ್ಲಿ 'ಆದಿಪುರಾಣ' ಪ್ರಥಮ ತೀರ್ಥಂಕರ ಆದಿನಾಥನ ಚರಿತ್ರೆಯನ್ನು ಕುರಿತುದಾಗಿದೆ. ಇದು ಸೇನಸಂಘದ ಜಿನ ಸೇನರ 'ಪೂರ್ವಪುರಾಣ'ವನ್ನು ಅವಲಂಬಿಸಿ ರಚಿತವಾಗಿದೆ. 'ಪೂರ್ವಪುರಾಣ'ದ ಕಥೆಯನ್ನು ಯಥೋಚಿತವಾಗಿ ಸಂಗ್ರಹಿಸಿಯೂ ವಿಸ್ತರಿಸಿಯೂ ಹೊಸ ರೀತಿಯ ಸ್ವತಂತ್ರ ಕೃತಿಯನ್ನು ಪಂಪನು ನಿರ್ಮಿಸಿದ್ದಾನೆ. ಅಲ್ಲಿಯ ಪದ್ಯಗಳೂ ಪದ್ಯ ಖಂಡ ಗಳೂ ಇಲ್ಲಿ ತಕ್ಕ ಸ್ವಾತಂತ್ರ್ಯದೊಂದಿಗೆ ಭಾಷಾಂತರಗೊಂಡಿವೆ. ಮೂಲಾನುಸರಣೆ ಯಲ್ಲಿ ಕವಿ ತೋರಿರುವ ವಿದ್ವತ್ತು ರಚನಾ ನೈಪುಣ್ಯ ಸಂಯೋಜಕ ಪ್ರತಿಭೆ ಮನೋಜ್ಞವೂ ಅನುಕರಣೀಯವೂ ಆಗಿದೆ. "ಪೂರ್ವ ಪುರಾಣ ಸ್ವಲ್ಪಕಡಮೆ ಪತ್ತು ಸಾವಿರ ಶ್ಲೋಕಗಳನ್ನೊಳಕೊಂಡಿರುವ ಮಹಾಗ್ರಂಥ." ಅದನ್ನು ಪಂಪ ಸುಮಾರು ೧೬೦೦ ಪದ್ಯಗಳಷ್ಟಕ್ಕೆ ಇಳಿಸಿದ್ದಾನೆ. ಮುಖ್ಯ ಕತೆಯನ್ನು ದೃಷ್ಟಿಯಲ್ಲಿರಿಸಿಕೊಂಡು ಅದಕ್ಕೆ ಪುಷ್ಟಿಕೊಡುವ ಉಪಾಖ್ಯಾನಗಳನ್ನು ಉಚಿತವರಿತು ಸೇರಿಸಿದ್ದಾನೆ. ಕಾವ್ಯದೃಷ್ಟಿ ಯಿಂದ ನೀರಸವಾದರೂ ಧರ್ಮದೃಷ್ಟಿಯಿಂದ ಅತ್ಯಾವಶ್ಯಕವಾಗಿರುವ ಮತಪ್ರಕ್ರಿಯೆ ಗಳನ್ನೂ ಧರ್ಮೋಪದೇಶಗಳನ್ನೂ ಮುಖ್ಯವಾಗಿ ಗದ್ಯಗಳಲ್ಲಿ ಆದಷ್ಟು ಮಟ್ಟಿಗೆ ಅಡಕ ವಾಗಿ ಹೇಳಿದ್ದಾನೆ (ಎಲ್. ಗುಂಡಪ್ಪ: 'ಆದಿಪುರಾಣ ಸಂಗ್ರಹ', ಪು. lxxvi).

ರಾಷ್ಟ್ರಕೂಟ ಚಕ್ರವರ್ತಿ ಮುಮ್ಮಡಿ ಕೃಷ್ಣನ ಪೋಷಣೆಯಲ್ಲಿದ್ದ ಪೊನ್ನಕವಿಯ (ಸು. ೯೫೦) 'ಭುವನೈಕರಾಮಾಭ್ಯುದಯ' ಮತ್ತು 'ಶಾಂತಿಪುರಾಣ'ಗಳೆಂಬ ಎರಡು ಕೃತಿಗಳಲ್ಲಿ ಎರಡನೆಯದು ಮಾತ್ರವೇ ದೊರೆತಿದೆ. ಪೊನ್ನನಿಗೆ ಮೊದಲು ಸ್ವತಂತ್ರ ವಾಗಿಯೂ ಮಹಾಪುರಾಣಾಂತರ್ಗತವಾಗಿಯೂ ಕೆಲವು ಶಾಂತಿಪುರಾಣಗಳು ರಚಿತ ವಾಗಿವೆ. ಇವುಗಳಲ್ಲಿ ಯಾವುವನ್ನಾದರೂ ಪೊನ್ನ ನೋಡಿರಬಹುದು. ಅಸಗನ ಹಾಗೂ ಪೊನ್ನನ ಸಂಸ್ಕೃತ ಕನ್ನಡ 'ಶಾಂತಿಪುರಾಣ'ಗಳ ಕಥಾಸರಣಿಯಲ್ಲಿ ಸಾದೃಶ್ಯಗಳಿವೆಯೆಂದು ಇವೆರಡನ್ನೂ ಹೋಲಿಸಿ ತಿಳಿಯಲಾಗಿದೆ (A. N. Upadhye: Asaga-His Works and date, KHQ., 2-1, 1932) 'ಉಭಯಕವಿ ಚಕ್ರವರ್ತಿ' ಬಿರು ದಾಂಕಿತನಾದ ಪೊನ್ನನು ಸಂಸ್ಕೃತ ಪ್ರಾಕೃತ ಜೈನಪುರಾಣಗಳಲ್ಲಿಯೂ ಶಾಸ್ತ್ರಗಳಲ್ಲಿಯೂ ಅದ್ವಿತೀಯ ಪಾಂಡಿತ್ಯವನ್ನು ಗಳಿಸಿಕೊಂಡಿದ್ದವನು. ಈತನ 'ಗತ ಪ್ರತ್ಯಾಗತ' ಎಂಬ ಅನುಪಲಬ್ಧ ಕೃತಿ ಸಂಸ್ಕೃತ ಭಾಷೆಯಲ್ಲಿದ್ದಿರಬಹುದೆಂದು ಕವಿಚರಿತೆಕಾರರು ಊಹಿಸಿ ದ್ದಾರೆ. "ಶಾಂತಿಪುರಾಣವನ್ನು ಓದಿ ಪುಸ್ತಕವನ್ನು ಮುಚ್ಚಿ ಕೆಳಗಿಟ್ಟ ಮೇಲೆ ಜನ್ಮಾಂತರದ ಕಥೆಗಳಲ್ಲಿ ಪಲವು ಮರೆತು ಹೋಗಿ ಜ್ಯೋತಿಃಪ್ರಭೆಯ ಸ್ವಯಂವರ ವರ್ಣನೆಯೂ ಶಾಂತೀಶ್ವರ ದಿಗ್ವಿಜಯ ವರ್ಣನೆಯೂ ಮನಸ್ಸಿನ ಮುಂದೆ ಬಂದು ನಲಿದಾಡುತ್ತವೆ. ಇವಕ್ಕೆ ಸಮಾನವಾದ ಸನ್ನಿವೇಶಗಳು ಕಾಳಿದಾಸನ ರಘುವಂಶದಲ್ಲಿ ದೊರೆಯುತ್ತವೆ. ಜ್ಯೋತಿಃಪ್ರಭೆಯ ಸ್ವಯಂವರವು ಇಂದುಮತಿಯ ಸ್ವಯಂವರಕ್ಕೂ ಶಾಂತೀಶನ ದಿಗ್ವಿಜಯವು ರಘುಮಹಾರಾಜನ ದಿಗ್ವಿಜಯಕ್ಕೂ ಸರಿಹೋಲುತ್ತವೆ. ಪೊನ್ನನ

ವರ್ಣನೆಯು ಕಾಳಿದಾಸನ ವರ್ಣನೆಯ ಪಡಿ ಅಚ್ಚು. ಕಾಳಿದಾಸನ ಕೈವಾಡವನ್ನು ಪೊನ್ನನ ವರ್ಣನೆಯಲ್ಲಿ ಬಹಳ ವಿಶದವಾಗಿ ನೋಡಬಹುದು. ಪೊನ್ನನು ಕಾಳಿದಾಸನ ವರ್ಣನಾರೀತಿಯನ್ನೇ ಅನುಸರಿಸಿ ಅವನಿಂದ ಪದ್ಯಗಳನ್ನು ಭಾಷಾಂತರಿಸಿರುತ್ತಾನೆ; ರಘುವಂಶದ ಸರ್ಗಸರ್ಗಗಳನ್ನೇ ಭಾಷಾಂತರಿಸಿ ತನ್ನವೆಂದು ಹೇಳಿಕೊಂಡಿದ್ದಾನೆ (ಡಿ. ಎಲ್. ನರಸಿಂಹಾಚಾರ್ ಪೊನ್ನನೂ ಕಾಳಿದಾಸನೂ, 'ಪೀಠಿಕೆಗಳು ಲೇಖನಗಳು,' ೧೯೭೧, ಪು. ೨೯೭)."

ಚಾವುಂಡರಾಯನು 'ತ್ರಿಷಷ್ಟಿ ಲಕ್ಷಣ ಮಹಾಪುರಾಣ' (='ಚಾವುಂಡರಾಯ ಪುರಾಣ')ವೆಂಬ ಕೃತಿಯನ್ನು ರಚಿಸಿ (೯೭೮), ಕನ್ನಡ ಸಾಹಿತ್ಯದ ಮೊದಲನೆಯ ಮಹಾಪುರಾಣದ ಕರ್ತೃವೆನಿಸಿದ್ದಾನೆ. ಸಂಸ್ಕೃತದಲ್ಲಿ ಜಿನಸೇನ-ಗುಣಭದ್ರಾಚಾರ್ಯರು ಪದ್ಯರೂಪವಾಗಿ ರಚಿಸಿರುವ 'ಮಹಾಪುರಾಣ'ದ ಸಾಮಾನ್ಯವಾದ ಗದ್ಯಾನುವಾದವಿದು. ಚಾವುಂಡರಾಯನು ಈ ಅನುವಾದದಲ್ಲಿ ಮೊದಲೇ ಸಂಗ್ರಹರೂಪವಾಗಿದ್ದ ತೀರ್ಥಂಕರ ಚರಿತೆಯನ್ನೂ, ಚಕ್ರವರ್ತಿ ಚರಿತೆಯನ್ನೂ ಇನ್ನೂ ಸಂಕ್ಷೇಪಿಸಿರುವನೆಂದು ಹೇಳಬಹುದು. ಕವಿ ಬೇರೆ ಸಂಸ್ಕೃತ ಪ್ರಾಕೃತ ಕಥಾಮೂಲಗಳನ್ನು ಕೂಡ ಕ್ವಚಿತ್ತಾಗಿ ನೋಡಿರಬೇಕೆಂದು ತಿಳಿಯುವುದಕ್ಕೆ ಆಧಾರಗಳಿವೆ. ಜೈನಧರ್ಮದ ಇತಿಹಾಸ ಸಾಹಿತ್ಯಗಳಿಗೆ 'ಚಾವುಂಡರಾಯ ಪುರಾಣ'ದಿಂದ ಆಗಿರುವ ಉಪಕಾರ ಮಿಗಿಲಾದುದು. ಇಲ್ಲಿ ಉದ್ಧೃತವಾಗಿರುವ ಕವಿಪರ ಮೇಷ್ಠಿಯ 'ವಾಗರ್ಥ ಸಂಗ್ರಹ' ಎಂಬ ಸಂಸ್ಕೃತ ಮಹಾಪುರಾಣದ ಕೆಲವು ಪದ್ಯಗಳು ಅನನ್ಯ ಪ್ರಾಮುಖ್ಯವುಳ್ಳವು; ಹಾಗೆಯೇ ಸಂಸ್ಕೃತ 'ವರಾಂಗ ಚರಿತ'ದ ಕರ್ತೃತ್ವ ವಿಚಾರ ದಲ್ಲಿಯೂ ಈ ಕೃತಿ ಹೊಸ ಬೆಳಕು ಬೀರಿದೆ. ಗ್ರಂಥದ ನಡುನಡುವೆ ಉದ್ಧೃತ ವಾಗಿರುವ ಕೆಲವು ಸಂಸ್ಕೃತ ಪ್ರಾಕೃತ ಶ್ಲೋಕಗಳು 'ವಾಗರ್ಥ ಸಂಗ್ರಹ', ಕುಂದಕುಂದರ 'ದ್ವಾದಶಾನುಪ್ರೇಕ್ಷೆ', ಭೂಪಾಲನ 'ಚತುರ್ವಿಂಶತಿಕಾ', ವಸುನಂದಿಯ ಶ್ರಾವಕಾಚಾರ, ಜಟಾಸಿಂಹನಂದಿಯ 'ವರಾಂಗಚರಿತ', ಗುಣಭದ್ರರ 'ಉತ್ತರ ಪುರಾಣ' ಮೊದಲಾದ ವುಗಳಿಗೆ ಸೇರಿದಂತೆ ತಿಳಿದುಬಂದಿವೆ (A. N. Upadhye: Chamundaraya and his Literary Predecessors, JKU, 4–`, 19 0) 'ಚಾರಿತ್ರಸಾರ' ಎಂಬ ಸಂಸ್ಕೃತ ಕೃತಿಯೂ ಚಾವುಂಡರಾಯ ಕೃತವೆಂದು ತಿಳಿಯಲಾಗಿದೆ.

ರನ್ನಕವಿ (೯೯೩) ರಚಿಸಿದ ಕೃತಿಗಳಲ್ಲಿ 'ಅಜಿತ ತೀರ್ಥಂಕರ ಪುರಾಣ ತಿಲಕ' ಎರಡನೆಯ ತೀರ್ಥಂಕರ ಅಜಿತನ ಕಥೆಯನ್ನು ವಸ್ತುವಾಗಿ ಪಡೆದಿದೆ. ಇದು ಗುಣ ಭದ್ರರ 'ಉತ್ತರ ಪುರಾಣ'ವನ್ನು (೮೯೮-೯೯) ಸಾಮಾನ್ಯವಾಗಿ ಆಶ್ರಯಿಸಿದೆ. ಕಥನ ರೀತಿ ಹಲವೆಡೆ ಮೂಲದ ನಿರೂಪಣೆಗಿಂತ ಉತ್ತಮವೆಂದು ಹೇಳುವಂತಿದೆ.

ಅಜ್ಞಾತ ಕರ್ತೃಕವೆಂದು ತೋರುವ, 'ವಡ್ಡಾರಾಧನೆ' ಎಂಬ ಹೆಸರಿನಲ್ಲಿ ಈಗ ಪ್ರಸಿದ್ಧವಾಗಿರುವ ೧೯ ಮಂದಿ ಉಪಸರ್ಗ ಕೇವಲಿಗಳ ಕನ್ನಡ ಕಥಾಕೋಶ (ಸು. ೧೧

ನೇಯ ಶ.) ಜೈನ ಶೌರಸೇನೀ ಪ್ರಾಕೃತ ಗ್ರಂಥ 'ಭಗವತೀ ಆರಾಧನಾ'ದ ಪ್ರಾಕೃತ ವ್ಯಾಖ್ಯಾನವೊಂದನ್ನು ಆಧರಿಸಿ ರಚಿತವಾಗಿರಬೇಕೆಂದು ಭಾವಿಸಲಾಗಿದೆ. 'ವಡ್ಡಾರಾಧನೆ' ಎಂಬ ಹೆಸರೂ ಕಥೆಗಳ ಮೊದಲಲ್ಲಿ 'ಭಗವತೀ ಆರಾಧನಾ'ದ ಗಾಹೆಗಳನ್ನು ಉದ್ಧರಿಸಿ ವಿವರಣೆ ಬರೆದಿರುವುದೂ ಗ್ರಂಥದಲ್ಲಿ ಅಲ್ಲಲ್ಲಿ ಪ್ರಾಕೃತ ಪದ್ಯಗಳೂ ಪದಗಳೂ ಕಂಡು ಬರುತ್ತಿರುವುದೂ ಈ ಗ್ರಂಥದ ಪ್ರಾಕೃತ ಮೂಲವನ್ನು ಎತ್ತಿ ಹೇಳುವಂತಿವೆ. ಇಲ್ಲಿ 'ಪ್ರವಚನ ಸಾರ,' 'ರತ್ನಕರಂಡಕ', 'ಭರ್ತೃಹರಿ ಶತಕ,' 'ವರಾಂಗಚರಿತ', 'ಉತ್ತರ ಪುರಾಣ', 'ಪಂಚಾಸ್ತಿಕಾತು,' 'ಮೂಲಾಚಾರ', 'ಪ್ರತಿಕ್ರಮಣ', 'ಪರಮಾತ್ಮ ಪ್ರಕಾಶ' ಮುಂತಾದ ಸಂಸ್ಕೃತ ಪ್ರಾಕೃತ ಗ್ರಂಥಗಳ ಪದ್ಯವೇಷ್ಟನಗಳಿವೆ.

ಶಾಂತಿನಾಥಕವಿ (೧೦೬೮) ರಚಿಸಿದ 'ಸುಕುಮಾರ ಚರಿತ' ಉಪಸರ್ಗಕೇವಲಿಯಾದ ಸುಕುಮಾರ ಸ್ವಾಮಿಯ ಕಥೆಯನ್ನು ವಸ್ತುವನ್ನಾಗಿ ಉಳ್ಳ ರಚನೆ 'ವಡ್ಡಾರಾಧನೆ'ಯಲ್ಲಿಯ ಕಥೆಯನ್ನು ಆಧರಿಸಿ ವಿಸ್ತಾರವಾಗಿ ಈ ಕೃತಿ ರಚಿತವಾಗಿದೆಯೆಂದು ತೋರಿಸಲಾಗಿದೆ. ಸು. ೧೦೬೮–೧೩೩೧ರ ಅವಧಿಯಲ್ಲಿ ಇದ್ದಂತೆ ತೋರುವ ರಾಮಚಂದ್ರ ಮುಮುಕ್ಷು ಶಾಂತಿನಾಥನ ಕೃತಿಯನ್ನು ಮೂಲವಾಗಿಟ್ಟುಕೊಂಡು ತನ್ನ 'ಪುಣ್ಯಾಸ್ರವ ಚಂಪು'ವೆಂಬ ಸಂಸ್ಕೃತ ಗ್ರಂಥದ ಭಾಗವಾದ 'ಸುಕುಮಾರ ಚರಿತ'ವನ್ನು ಬರೆದಿರುವಂತೆ ತೋರುತ್ತದೆ. ಅಲ್ಲದೆ ಈ ಸಂಸ್ಕೃತ ಗ್ರಂಥವನ್ನಾಧರಿಸಿ ನಾಗರಾಜನೆಂಬ (೧೩೩೧) ಕನ್ನಡ ಕವಿ ತನ್ನ 'ಪುಣ್ಯಾಸ್ರವ'ವನ್ನು ಬರೆದಿರುವಂತೆಯೂ ತೋರುತ್ತದೆ (ಡಿ. ಎಲ್. ನರಸಿಂಹಾಚಾರ್: ಸುಕುಮಾರ ಚರಿತೆ, 'ಪೀಠಿಕೆಗಳು ಲೇಖನಗಳು', ೧೯೭೧, ಪು. ೧೯೫–೯೯).

ನಯಸೇನನ (೧೧೧೨) 'ಧರ್ಮಾಮೃತ' ಜೈನಧರ್ಮದ ರತ್ನತ್ರಯಗಳಲ್ಲಿ ಒಂದಾದ ಸಮ್ಯಕ್, ದರ್ಶನ ಮತ್ತು ಅದರ ಎಂಟು ಅಂಗಗಳಾದ ನಿಶ್ಶಂಕೆ ನಿಷ್ಕಾಂಕ್ಷೆ ಮೊದಲಾದವುಗಳಿಗೆ ಸಂಬಂಧಪಟ್ಟಂತೆ ಒಂಬತ್ತು ಕಥೆಗಳೂ ಪಂಚಾಣುವ್ರತಗಳಿಗೆ ಸಂಬಂಧಿಸಿದ ಐದು ಕಥೆಗಳೂ ವಸ್ತುವಾಗಿರುವ ಒಂದು ಚಂಪೂ ಕಾವ್ಯ. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪ್ರಸಿದ್ಧವಾಗಿರುವ ಹಲವು ಜೈನ ಕಥಾ ಕೋಶಗಳಿಂದ ಅನುವಾದಿ ಸಿದವಾಗಿರಬಹುದು. ಈ ಕಥೆಗಳು ಇವುಗಳಲ್ಲಿ ಕೆಲವು ಪೌರಾಣಿಕ ಮೂಲದವೆಂದು ತಿಳಿಯಲವಕಾಶವಿದೆ. ನಯಸೇನನ ಕೃತಿ ಸಂಸ್ಕೃತದ ಒಕ್ಕಟ್ಟಾದ ಶೈಲಿಯನ್ನು ಬಿಟ್ಟು ಕೊಟ್ಟು ಕನ್ನಡದ ದೇಸಿಗೆ ಪುರಸ್ಕಾರವಿತ್ತುದು ಮೆಚ್ಚತಕ್ಕ ವಿಷಯ.

ಕರ್ಣಪಾರ್ಯನ (ಸು. ೧೧೭೦–೭೦) 'ನೇಮಿನಾಥ ಪುರಾಣ' ಉಪಲಬ್ಧವಾದ ಕನ್ನಡ ನೇಮಿ ಚರಿತ್ರೆಗಳಲ್ಲಿ, ಸ್ವತಂತ್ರವಾದವುಗಳಲ್ಲಿ, ಮೊದಲನೆಯದು. ಜೈನ ಸಂಪ್ರದಾಯದ ಭಾರತ ಭಾಗವತಗಳ ಕಥಾನಕಗಳನ್ನು ವಿವರ ವಿಶದವಾಗಿ ತಿಳಿಯುವ ಮೊದಲ ಗ್ರಂಥವೂ ಇದೇ. ಈ ಕೃತಿ ಬಲುಮಟ್ಟಿಗೆ ಪುನ್ನಾಟಸಂಘೀಯರಾದ ಜಿನಸೇನರ 'ಹರಿ ವಂಶ ಪುರಾಣ' ಮಾರ್ಗದಲ್ಲಿ ನಡೆದಿದೆ. ದಿಗಂಬರ ಶಾಖೆಯ ಹಲವು ಸಂಸ್ಕೃತ ಪ್ರಾಕೃತ

ನೇಮಿ ಚರಿತ್ರೆಗಳ ಉತ್ತಮಾಂಶಗಳನ್ನು ಈ ಕವಿ ಸ್ವೀಕರಿಸಿ, ಅವನ್ನು ಉತ್ತಮ ರೀತಿಯಲ್ಲಿ ಸಂಯೋಜಿಸಿರುವನೆಂದು ತೋರುತ್ತದೆ. ಜಿನಸೇನರ 'ಹರಿವಂಶ ಪುರಾಣ'ದ ವಿಶಿಷ್ಟ ಕಥಾಮಾರ್ಗವು ಕರ್ಣಪಾರ್ಯನ ಕೃತಿಯ ಮೂಲಕವಾಗಿ ಕನ್ನಡದ ಈಚಿನ ಎಲ್ಲ ನೇಮಿಚರಿತ್ರಕಾರರಿಂದಲೂ ಸ್ವೀಕೃತವಾಗಿರುವ ಹಾಗೆ ಕಂಡುಬರುತ್ತದೆ.

ಅಗ್ಗಳ ಕವಿ (೧೧೮೯) ಪೂರ್ವ ಪರಂಪರೆಯನ್ನು ಹಿಡಿದು ತನ್ನ 'ಚಂದ್ರಪ್ರಭ ಪುರಾಣ' ಎಂಬ ೧೬ ಆಶ್ವಾಸಗಳ ಚಂಪುವನ್ನು ರಚಿಸಿ, ಅದರಲ್ಲಿ ಎಂಟನೆಯ ತೀರ್ಥಂಕರನ ಚರಿತ್ರೆಯನ್ನು ನಿರೂಪಿಸಿದ್ದಾನೆ. ಪ್ರಾಕ್ತನ ಪರಮಾಚಾರ್ಯ ಶ್ರೌತಸೇತು ಬಲದಿಂದ ಚಂದ್ರಪ್ರಭ ಚರಿತೆಯನ್ನು ದಾಟಿದೆನೆಂಬುದು ಆತನ ಹೇಳಿಕೆ ದೇಶಿಗಣಾಗ್ರಗಣ್ಯ ಗುಣ ನಂದಿಯ ಶಿಷ್ಯ ಪರಂಪರೆಯ ವೀರನಂದಿ (೯೭೮) ಸಂಸ್ಕೃತದಲ್ಲಿ ರಚಿಸಿರುವ 'ಚಂದ್ರ ಪ್ರಭ ಚರಿತ' ಅಗ್ಗಳನಿಗೆ ಮೂಲ (ಡಿ. ಎಲ್. ನರಸಿಂಹಾಚಾರ್: ಅಗ್ಗಳದೇವ, ಪ್ರಕ: ೩೫-೪) ಕಥಾಸಂವಿಧಾನ, ಆನುಪೂರ್ವಿ, ವರ್ಣನೆಗಳಲ್ಲಿ ಪರಸ್ಪರ ಹೋಲುತ್ತವೆ. ಕಥಾರಂಭ ಎರಡಲ್ಲಿಯೂ ತೊಡಗುವುದು ಪದ್ಮನಾಭ ಭವದಿಂದಲೇ ಇತರ ಕಥೆ ಉಪ ಕಥೆಗಳೂ ಒಂದೇ ಕ್ರಮದಲ್ಲಿ ಬಂದಿವೆ. ವರ್ಣನಗಳು ಸಹ ಸಮಾನ ಸಂದರ್ಭಗಳಲ್ಲಿ ನಿಯೋಜಿತವಾಗಿವೆ. ಆಂತರಿಕ ವಿವರಗಳಲ್ಲಿಯ ಸಾಮ್ಯ ಹೆಚ್ಚಾಗಿರುವಂತೆಯೇ, ವೀರ ನಂದಿಯ ಪದ್ಯಗಳನ್ನು ಅಗ್ಗಳ ಕನ್ನಡಕ್ಕೆ ಭಾಷಾಂತರಿಸುತ್ತ ಮುಂದುವರಿದು ಸಹ ಕಾಣುತ್ತದೆಯೆಂದು ತೋರಿಸಲಾಗಿದೆ (ಅದೇ. ೩೨-೩೩)

ನಾಗಚಂದ್ರನ (ಸು. ೧೧೩೦-೪೦ / ಈಗ ಸು. ೧೧ನೆಯ ಶ.) 'ಮಲ್ಲಿನಾಥ ಪುರಾಣ' ೧೯ನೆಯ ತೀರ್ಥಂಕರನ ಚರಿತ್ರೆ ಕಥೆ ದಿಗಂಬರ ಶಾಖೆಗೆ ಸೇರಿದ್ದು; ಬಹುಶಃ ಮುಖ್ಯವಾದ ಆಕರ 'ಉತ್ತರ ಪುರಾಣ' ಮೂಲದಲ್ಲಿ ಸ್ವಲ್ಪವಾಗಿದ್ದ ವಸ್ತುವನ್ನು ವರ್ಣನ ವಿಸ್ತಾರದಿಂದ ಕವಿ ಬೆಳಸಿರುವಂತೆ ತೋರುತ್ತದೆ.

ಕರ್ಣಪಾರ್ಯನ ಬಳಿಕ ನೇಮಿಚಂದ್ರ (ಸು. ೧೧೯೦) ಸಹ ಒಂದು 'ನೇಮಿನಾಥ ಪುರಾಣ'ವನ್ನು ರಚಿಸಿದ್ದಾನೆ. ಕಥೆ ಅಸಮಗ್ರವಾಗಿರುವುದರಿಂದ ಇದು ರೂಢಿಯಲ್ಲಿ 'ಅರ್ಧನೇಮಿ ಪುರಾಣ' ಎನಿಸಿದೆ. ನೇಮಿಚಂದ್ರನು ಮಹಾಪುರಾಣ ಕಥಾಸಂಪ್ರದಾಯ ವನ್ನು ಅನುಸರಿಸಿ, ಬಲುಮಟ್ಟಿಗೆ ಗುಣಭದ್ರರ 'ಉತ್ತರ ಪುರಾಣ'ವನ್ನು ಮುಖ್ಯ ಆಕರ ವಾಗಿ ಸ್ವೀಕರಿಸಿರುವಂತಿದೆ. ಇತರ ಸಂಸ್ಕೃತ ಪ್ರಾಕೃತ ನೇಮಿ ಚರಿತ್ರೆಗಳ ಉತ್ತಮಾಂಶ ಗಳನ್ನೂ ಬಳಸಿರಬಹುದು ಕೃತಿಯ ಭಾಗವತ ಕಥಾ ಭಾಗದಲ್ಲಿ ವೈದಿಕ ಸಾಹಿತ್ಯದ ವಿಷ್ಣುಪುರಾಣ ಭಾಗವತಗಳ ಪ್ರಭಾವವನ್ನೂ ಗಮನಿಸಬಹುದಾಗಿದೆ. ಕೆಲವೆಡೆಯ ಕಥಾ ವ್ಯತ್ಯಾಸಗಳೂ ಲೋಪಗಳೂ ನೇಮಿಚಂದ್ರನ ಸ್ವತಂತ್ರ ಪ್ರವೃತ್ತಿಯನ್ನು ಸಾರತಕ್ಕವಾಗಿವೆ.

ಆಚಣ್ಣನು (೧೧೯೦-೧೨೨೨) ವರ್ಧಮಾನ ಮಹಾವೀರನ ಕಥೆಯನ್ನು ಕುರಿತ ಹಾಗೆ ವರ್ಧಮಾನ ಪುರಾಣವನ್ನು ರಚಿಸಿದ್ದಾನೆ. ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ

ರಚಿತವಾಗಿರುವ ವರ್ಧಮಾನ ಚರಿತೆಗಳಲ್ಲಿ ಯಾವುದು ಆಚಣ್ಣನಿಗೆ ಮೂಲವೆಂಬುದನ್ನು ತಿಳಿಯಬೇಕಾಗಿದೆ, ಹಾಗೆಯೇ ನಾಗವರ್ಮನ (೧೦೪೨) 'ವೀರವರ್ಧಮಾನ ಪುರಾಣ'ದ ಅನುಸರಣೆಯನ್ನೂ ಗುರುತಿಸುವ ಅಗತ್ಯವಿದೆ. ಅಸಗ, ನಾಗವರ್ಮ ಮತ್ತು ಇತರ ಕವಿಗಳ ವರ್ಧಮಾನ ಚರಿತ್ರೆಗಳನ್ನು ಆಚಣ್ಣನ ಕೃತಿಯೊಂದಿಗೆ ಹೋಲಿಸಿನೋಡುವುದು ಫಲಕಾರಿಯಾದುದು.

ಬಂಧುವರ್ಮನು (ಸು. ೧೨೦೦) 'ಜೀವ ಸಂಬೋಧನೆ' ಮತ್ತು 'ಹರಿವಂಶಾಭ್ಯುದಯ'ಗಳೆಂಬ ಎರಡು ಗ್ರಂಥಗಳ ಕರ್ತೃ. ಈತನ 'ಜೀವ ಸಂಬೋಧನೆ' ನಯಸೇನನ 'ಧರ್ಮಾಮೃತ'ದ ಹಾಗೆ ಪರಿಚ್ಛೇದಕ್ಕೆ ಒಂದೊಂದು ಕಥೆಯಂತೆ ದ್ವಾದಶ ಪರಿಚ್ಛೇದಗಳಲ್ಲಿ ಜೈನ ಸಿದ್ಧಾಂತದ ಅಧ್ರುವ, ಅಶರಣ, ಏಕತ್ವ ಮುಂತಾದ ದ್ವಾದಶಾನುಪ್ರೇಕ್ಷೆಗಳನ್ನು ಸರಳವಾಗಿ ವಿವರಿಸಿರುವ ಕನ್ನಡ ಆಗಮ ಗ್ರಂಥವಾಗಿದೆ. ಈ ಕೃತಿಯ ರಚನೆಯಲ್ಲಿ ಕುಂದಕುಂದರ ಪ್ರಾಕೃತ ಗ್ರಂಥ 'ಬಾರಸ ಅಣುವೆಕ್ಖ', ಸ್ವಾಮಿಕುಮಾರನ 'ಕಾರ್ತಿಕೇಯಾನುಪ್ರೇಕ್ಷಾ'ಗಳಂತಹ ಅನುಪ್ರೇಕ್ಷೆಯ ಕೃತಿಗಳನ್ನು ನೋಡಿರುವನೆಂದು ಭಾವಿಸಬಹುದಾಗಿದೆ. ಅಲ್ಲದೆ ಜಟಾಸಿಂಹ ನಂದಿಯ 'ವರಾಂಗ ಚರಿತ', ಹರಿಷೇಣನ 'ಬೃಹತ್ಕಥಾಕೋಶ' ಮೊದಲಾದುವನ್ನು ಭಿನ್ನ ಭಿನ್ನ ಕಥೆಗಳ ಸಲುವಾಗಿ ಅವನು ಬಳಸಿರುವನೆಂದು ತೋರಿಸಲಾಗಿದೆ. (ಶುಭಚಂದ್ರ: ಜೀವಸಂಬೋಧನ, ಕಲಿಸಂಕಸಾಚ, ೪–೨, ಪು. ೧೦೮೮). 'ಹರಿವಂಶಾಭ್ಯುದಯ' ನೇಮಿಚರಿತ್ರೆಯೇ ಆಗಿದೆ. ಹರಿವಂಶ ಪುರಾಣ ಕಥಾ ಸಂಪ್ರದಾಯದಲ್ಲಿ ನಡೆದಿರುವ ಈ ಕೃತಿ ಕರ್ಣಪಾರ್ಯನ ಕೃತಿಯನ್ನು ಹೆಚ್ಚಿನ ಮಟ್ಟಿಗೆ ಹೋಲುವಂತೆ ತೋರುತ್ತದೆ.

ಜನ್ನಕವಿ (೧೨೦೯) 'ಯಶೋಧರ ಚರಿತ' ಮತ್ತು 'ಅನಂತನಾಥ ಪುರಾಣ'ಗಳ ಕರ್ತೃ. ಮೊದಲಿನದು ವಾದಿರಾಜನ ಸಂಸ್ಕೃತ 'ಯಶೋಧರ ಚರಿತ'ದ (೧೦೨೪) ಕನ್ನಡ ಭಾಷಾಂತರ. ಜನ್ನನು ಮೂಲವನ್ನು ಬಳಸಿರುವ ರೀತಿಯನ್ನು ಈ ಉಕ್ತಿಗಳಿಂದ ತಿಳಿಯಬಹುದು: "....ಒಟ್ಟಿನಲ್ಲಿ ಜನ್ನನ ಕನ್ನಡ ಕೃತಿ ವಾದಿರಾಜನ ಸಂಸ್ಕೃತ ಕೃತಿಯ ಸರಳಾನುವಾದ ಎನ್ನಬಹುದು. ಆದರೂ ಕನ್ನಡ ಬರವಣಿಗೆಯ ಓಟವನ್ನಾಗಲಿ ಅಚ್ಚುಕಟ್ಟನ್ನಾಗಲಿ ಸುಡಿಗಟ್ಟನ್ನಾಗಲಿ ನೋಡಿದರೆ ಅದು ಭಾಷಾಂತರವೆಂದು ಹೇಳುವಂತಿಲ್ಲ. ಅನ್ಯಭಾಷೆಯ ಕಾವ್ಯದ ಆತ್ಮವನ್ನು ಗ್ರಹಿಸಿ ಸ್ವಭಾಷೆಯ ನೈಸರ್ಗಿಕತೆಯಿಂದ ಪ್ರತಿಬಿಂಬಿಸುವ ಇಂಥ ಅನುವಾದ ಶೈಲಿ ಮೊದಲಿನಿಂದಲೂ ನಮ್ಮ ಕನ್ನಡ ಕವಿಗಳ ಒಂದು ಹಿರಿಯ ತನಿ ಗುಣ (ಕ.ವೆಂ.ರಾಘವಾಚಾರ್, 'ಯಶೋಧರ ಚರಿತೆ', ಪೀಠಿಕೆ, ಪು. ೩೪). "ಜನ್ನನ ಕೃತಿ ವಾದಿರಾಜನ ಕೃತಿಯ ಅನುವಾದವೆಂದ ಮಾತ್ರಕ್ಕೆ ಕನ್ನಡದ್ದು ಸಂಸ್ಕೃತದ್ದರ ಪಡಿಯಚ್ಚೆಂದಲ್ಲ; ಕನ್ನಡ ಕವಿಯ ಕೈವಾಡವಿಲ್ಲವೆಂದಲ್ಲ. ಜನ್ನಕವಿ ಎಡೆಯರಿತು ಕೆಲ

ವನ್ನು ಹಿಗ್ಗಿಸಿದ್ದಾನೆ, ಕೆಲವನ್ನು ಅಡಕಿಸಿದ್ದಾನೆ. ಮೂಲದಲ್ಲಿಯ ಅನಗತ್ಯವೆಂದು ತೋರಿದ ಒಂದೆರಡು ಅಂಶಗಳನ್ನು ಬಿಟ್ಟಿದ್ದಾನೆ. ಭಾವಪುಷ್ಟಿಗಾಗಿಯೂ ಅರ್ಥಪ್ರಸಾದ ಕ್ಕಾಗಿಯೂ ಮೂಲದಲ್ಲಿಲ್ಲದ್ದನ್ನು ಹೊಸದಾಗಿ ಸೇರಿಸಿದ್ದಾನೆ (ಅದೇ, ಪ್ರ. ೩೪). ಹಾಗೆಯೇ ಈ ಹೇಳಿಕೆಗಳನ್ನೂ ಗಮನಿಸಬಹುದು: "ಜನ್ನನು ತನ್ನ ಕಾವ್ಯದ ಪ್ರತಿ ಯೊಂದು ಪದ್ಯವನ್ನೂ ವಾದಿರಾಜನ ಕಾವ್ಯದ ಪದ್ಯಗಳನ್ನೇ ಮನಸ್ಸಿನಲ್ಲಿಟ್ಟುಕೊಂಡು ಬರೆದಿದ್ದರೂ ತಾನು ಮುಟ್ಟಿದುದೆಲ್ಲವನ್ನೂ ಚಿನ್ನವನ್ನಾಗಿ ಮಾಡಿರುವನು (ಡಿ. ಎಲ್. ನರಸಿಂಹಾಚಾರ್, 'ಜನ್ನನೂ ವಾದಿರಾಜನೂ', ಕಸಾಪ,, ೧೫–೪, ಪ್ರ. ೨೯೮). ಇನ್ನು ಎರಡನೆಯ ಕೃತಿಯನ್ನಾದರೂ ಪೂರ್ವಸೂರಿಗಳ ಕೃತಿಗಳನ್ನು ಅನುಸರಿಸಿಯೇ ಬರೆದಿರುವ ನೆನ್ನಬೇಕು. ಗುಣಭದ್ರಾಚಾರ್ಯರು ಸಂಸ್ಕೃತದಲ್ಲಿ ಪದ್ಯರೂಪದಲ್ಲಿ ಬರೆದಿರುವ ಜೈನ ಉತ್ತರ ಪುರಾಣದಲ್ಲಿಯೂ ಚಾವುಂಡರಾಯನು ಕನ್ನಡ ಗದ್ಯರೂಪದಲ್ಲಿ ಬರೆದಿರುವ ತ್ರಿಷಷ್ಟಿ ಶಲಾಕಾ ಪುರುಷ ಪುರಾಣದಲ್ಲಿಯೂ ಬರುವ ಅನಂತಜಿನನ ಕಥೆ ಜನ್ನನಿಗೆ ಆಧಾರವೆಂದು ತೋರುತ್ತದೆ (ಕ.ವೆಂ. ರಾಘವಾಚಾರ್, ಪೂರ್ವೋಕ್ತ, ಪ್ರ. ೧೬–೧೮)".

ಪಾರ್ಶ್ವ ಪಂಡಿತನು (೧೨೦೪–೨೨) 'ಪಾರ್ಶ್ವನಾಥ ಪುರಾಣ'ದ ಕರ್ತೃ. ಇದು ೨೩ನೆಯ ತೀರ್ಥಂಕರನ ಚರಿತ್ರೆ. ಕೃತಿಕರ್ತೃ ಜಿನಸೇನರ 'ಪಾರ್ಶ್ವಾಭ್ಯುದಯ', ವಾದಿರಾಜನ 'ಪಾರ್ಶ್ವನಾಥ ಚರಿತ್ರ', ಗುಣಭದ್ರರ 'ಉತ್ತರ ಪುರಾಣ' ಹಾಗೂ 'ಚಾವುಂಡರಾಯ ಪುರಾಣ'ಗಳಲ್ಲಿ ಯಾವುವನ್ನು ಎಷ್ಟರಮಟ್ಟಿಗೆ ಅನುಸರಿಸಿರುವನೆಂಬುದು ಸಂಶೋಧನೆಯ ವಿಷಯವಾಗಿದೆ.

ಇಮ್ಮಡಿ ಗುಣವರ್ಮನು (ಸು. ೧೨೧೫) ೯ನೆಯ ತೀರ್ಥಂಕರನ ಸಂಬಂಧವಾದ 'ಪುಷ್ಪದಂತ ಪುರಾಣ'ವನ್ನು ರಚಿಸಿದ್ದಾನೆ. "ಪೂರ್ವದೊಳ್ ಗಣಧರಾದಿ ಮಹಾಮುನಿ ಸತ್ಕವೀಶ್ವರರ್ ಮಾಡಿದ ಪುಷ್ಪದಂತ ಜಿನನಾಥ ಪುರಾಣಮನಿಂದು ಕನ್ನಡಂ ಮಾಡುವೆಂ" ಎಂದಿರುವುದರಿಂದ 'ಉತ್ತರ ಪುರಾಣ'ವೋ ಮತ್ತೆ ಯಾವುದಾದರೂ ಪುರಾಣವೋ ಕೃತಿಗೆ ಮೂಲವಾಗಿರಬಹುದು. 'ಉತ್ತರ ಪುರಾಣ'ದ ೬೨ ಶ್ಲೋಕಗಳ ಕಥೆ ಇಲ್ಲಿ ೧೪ ಆಶ್ವಾಸ ಗಳ ವ್ಯಾಪ್ತಿಗೆ ಹಿಗ್ಗಿರುವುದು ಆಶ್ಚರ್ಯವನ್ನುಂಟುಮಾಡುವುದಾಗಿದೆ.

ಆಂಡಯ್ಯ (ಸು. ೧೨೩೫) 'ಕಬ್ಬಿಗರ ಕಾವ' ರಚಿಸಿದ ಕವಿ. ವೈದಿಕ ಕಥಾಮೂಲದ ಶಿವಮನ್ಮಥರ ವಿರಸವನ್ನು ಸ್ವತಂತ್ರವಾಗಿಯೂ ಸ್ವಾರಸ್ಯವಾಗಿಯೂ ಪರಿವರ್ತಿಸಿರುವ "ಅಚ್ಚಗನ್ನಡ'ದ ಕೃತಿಯಿದು. ಇದಕ್ಕೆ 'ಸಂಸ್ಕೃತ ಸಹೋದರಿ' ಎಂಬ ಹೆಸರೂ ಉಂಟೆಂದು ತಿಳಿಯಲಾಗಿದೆ. ಕವಿ ಹರಿಹರನ 'ಗಿರಿಜಾ ಕಲ್ಯಾಣ', ಕಾಳಿದಾಸನ 'ಕುಮಾರ ಸಂಭವ'ಗಳಿಂದ ಪ್ರೇರಿತನಾಗಿ, ನಾಗಚಂದ್ರ ನೇಮಿಚಂದ್ರರ ಕೃತಿಗಳಲ್ಲಿ ದೊರೆಯುವ ಸೂಚನೆಗಳಿಂದ (ಮಲ್ಲಿ ಪ್ರ. ೨–೫೬; ಲೀಲಾ ಪ. ೧–೬೫) ಮದನ ವಿಜಯದ ಕಲ್ಪನೆ ಯನ್ನು ವಿಸ್ತಾರವಾಗಿ ಮೂರ್ತಗೊಳಿಸಿರಬಹುದು. ತದ್ಭವಗಳು ಮತ್ತು ದೇಶ್ಯ ಶಬ್ದ ಗಳನ್ನು ಮಾತ್ರವೇ ಬಳಸಿರುವ ವಿಶಿಷ್ಟ ಭಾಷಾ ವೈಲಕ್ಷಣ್ಯದ ಕೃತಿಯಿದು.

ಕಮಲಭವನ (ಸು. ೧೨೩೫) 'ಶಾಂತೀಶ್ವರ ಪುರಾಣ' ಕನ್ನಡದ ಎರಡನೆಯ ಶಾಂತಿನಾಥ ಚರಿತ್ರೆ. ಕಮಲಭವನು 'ಶ್ರೀ ಪುರಾಣ'ದಲ್ಲಿ ಉಕ್ತವಾದ ಕಥೆಯನ್ನು ಅನುಸರಿಸಿರುವನೆಂಬ ಸೂಚನೆಯನ್ನು ಗಾಢವಾಗಿ ಪರಿಶೀಲಿಸಬೇಕಾಗಿದೆ. ಪೊನ್ನ ಕಮಲಭವರ ನಡುವೆ ಕೆಲವು ವ್ಯತ್ಯಾಸಗಳುಂಟೆಂದು ತಿಳಿಯಲಾಗಿದೆ.

ಮಹಾಬಲ ಕವಿಯ (೧೨೫೪) 'ನೇಮಿನಾಥ ಪುರಾಣ' ಕನ್ನಡದ ನೇಮಿಚರಿತ್ರೆಗಳಲ್ಲಿ ಐದನೆಯದು. 'ಉತ್ತರ ಪುರಾಣ'ದ ಅನುಸರಣೆ ಸ್ಪಷ್ಟವಿಲ್ಲ; ಪೂರ್ವಪ್ರಸಿದ್ಧ ಕನ್ನಡ ಕವಿಗಳ ನೇಮಿಚರಿತ್ರಗಳಲ್ಲಿ ಕರ್ಣಪಾರ್ಯನು ಹಿಡಿದ ಹರಿವಂಶ ಪುರಾಣ ಮಾರ್ಗವನ್ನೇ ಈತನೂ ಅನುಸರಿಸಿರುವನಾದರೂ ಬಂಧುವರ್ಮನ ಹಾಗೆ ಈತನೂ ವಿಶೇಷವಾಗಿ ಕರ್ಣಪಾರ್ಯನ ನೇಮಿನಾಥ ಪುರಾಣವನ್ನೇ ಗಮನಿಸಿರುವುದು ಶಕ್ಯ. ಈ ಮೂಲವಲ್ಲದೆ ನೇಮಿಚಂದ್ರ ಬಂಧುವರ್ಮರ ಕೃತಿಗಳ ಸಹಾಯವನ್ನೂ ಪಡೆದಿರಬಹುದು.

ಹಸ್ತಿಮಲ್ಲನ (೧೨೯೦) 'ಆದಿಪುರಾಣ' ಗದ್ಯ ಕೃತಿಯಲ್ಲಿ ಪೂರ್ವಪುರಾಣ ಸಂಪ್ರದಾಯ ಪಂಪನ ಆದಿಪುರಾಣದ ಮೂಲಕವಾಗಿ ಮುಂದುವರಿದಿದೆ. ಈ ಕವಿ ಉಭಯ ಭಾಷಾ ಕವಿಯಾಗಿ ಸಂಸ್ಕೃತದಲ್ಲಿಯೂ ಕಾವ್ಯ ನಾಟಕಗಳನ್ನು ರಚಿಸಿರುವಂತೆ ತೋರುತ್ತದೆ. ಹಸ್ತಿಮಲ್ಲ ಎಂಬ ಹೆಸರಿನ ಸಂಸ್ಕೃತ ಕನ್ನಡ ಕವಿಗಳ ಭೇದಾಭೇದತ್ವದ ವಿಚಾರದಲ್ಲಿ ಸ್ವಲ್ಪ ಮಟ್ಟಿನ ತೊಡಕು ಇರುವಂತಿದೆ.

'ಪುಣ್ಯಾಸ್ರವ' ಕೃತಿಯ ಕರ್ತೃ ನಾಗರಾಜ ಕವಿ (೧೩೩೧) ಪೂಜೆ ಗುರೂಪಾಸ್ತಿ ಮುಂತಾದ ಜೈನ ಗೃಹಸ್ಥ ಧರ್ಮಗಳನ್ನು ಆಚರಿಸಿದ ಪುಣ್ಯಪುರುಷರ ಕಥೆಗಳನ್ನು ವಿವರಿಸಿದ್ದಾನೆ, ತನ್ನ ಕೃತಿಯಲ್ಲಿ. ಕನ್ನಡ 'ಪುಣ್ಯಾಸ್ರವ' ಸಂಸ್ಕೃತದಿಂದ ಭಾಷಾಂತರಗೊಂಡದ್ದೆಂದು ಕವಿಯೇ ತಿಳಿಸಿದ್ದಾನೆ. ಈ ಕನ್ನಡ ಕೃತಿಗೆ ಮೂಲ ರಾಮಚಂದ್ರ ಮುಮುಕ್ಷುವಿನ 'ಪುಣ್ಯಾಸ್ರವ ಕಥಾಕೋಶ'ವೆನ್ನುವುದು ತುಲನೆಯಿಂದ ವಿಶದಪಡುತ್ತದೆ. ಮೂಲನಿಷ್ಠೆ, ವಿಸ್ತರಣ, ಕಾವ್ಯಗುಣ ಸಮಾವೇಶ, ಸರಳತೆ ಸ್ಪಷ್ಟತೆ ಇವನ್ನು ನಾಗರಾಜನ ಭಾಷಾಂತರ ಗುಣಗಳೆಂದು ತಿಳಿಯಲಾಗಿದೆ (ದೇ. ಜವರೇಗೌಡ: ನಾಗರಾಜ, ಕಲಿಸಂ ಕನಾಜ., ೪–೨, ಪು. ೧೨೬೭) ಇಲ್ಲಿಯ ಸುದರ್ಶನನ ಕಥೆಯನ್ನು ನೇಮರಸನು (೧೪೮೪) ಮತ್ತೆ ಕೃತಿಗೊಳಿಸಿದ್ದಾನೆ.

ಬಾಹುಬಲಿ ಪಂಡಿತನ (೧೩೫೨) 'ಧರ್ಮನಾಥ ಪುರಾಣ' ೧೫ನೆಯ ತೀರ್ಥಂಕರನ ಚರಿತ್ರೆ ಕವಿಯೇ ವ್ಯಕ್ತವಾಗಿ "ಮೊದಲೊಳ್ ತದ್ಧರ್ಮ ಶರ್ಮಾಭ್ಯುದಯ ಮನೊಲವಿಂದೋದಿ ಕರ್ಣಾಟದಿಂ ಮತ್ತದನೀಗಳ್ ಪೇಳ್ವೆನ್" ಎಂದು ತನ್ನ ಸಂಕಲ್ಪವನ್ನು ತಿಳಿಸಿರುವುದರಿಂದ ಕೃತಿಯ ಮೂಲ ತಿಳಿದಂತಾಗಿದೆ. ಹರಿಚಂದ್ರನ (ಸು. ೮೦೦) ಸಂಸ್ಕೃತ ಕೃತಿ 'ಧರ್ಮಶರ್ಮಾಭ್ಯುದಯ'ದೊಂದಿಗೆ ಬಾಹುಬಲಿ ಪಂಡಿತನ ಕೃತಿಯನ್ನು ತುಲನೆ ಮಾಡಿ ನೋಡಿದರೆ, ಎರಡೂ ಹತ್ತಿರದಿಂದ ಹೋಲುತ್ತವೆ. ಅನೇಕ ಕಡೆ ಕನ್ನಡ ಕಾವ್ಯದ

ಪದ್ಯಗಳು ಸಂಸ್ಕೃತ ಕಾವ್ಯದ ಶಬ್ದಾನುವಾದಗಳೋ ಭಾವಾನುವಾದಗಳೋ ಆಗಿವೆ (ಎನ್. ಬಸವಾರಾಧ್ಯ: ಬಾಹುಬಲಿ ಪಂಡಿತ, ಕಪಿಸಂಕಸಂಚ. ೫–೧, ಪು. ೬೩೦–೩೩).

ವೃತ್ತವಿಲಾಸ (ಸು. ೧೩೬೦) ವಿರಚಿತವಾದ 'ಧರ್ಮ ಪರೀಕ್ಷೆ' ನಯಸೇನ, ಬಂಧುವರ್ಮ ಮತ್ತು ನಾಗರಾಜ ಕವಿಗಳ ಕೃತಿಗಳ ಹಾಗೆ ಜೈನಧರ್ಮದ ಮಹತ್ತ್ವವನ್ನು ಕಥೆಗಳ ಮೂಲಕ ತಿಳಿಸುವ ಒಂದು ಕಥಾ ಕಾವ್ಯ. "ಮುನ್ನಿನ ಚಾರು ಸಂಸ್ಕೃತದ ಧರ್ಮ ಪರೀಕ್ಷೆಯ ನೋದಿಯಲ್ಲನುಂ। ಕನ್ನಡದಿಂದಲರ್ಥವಿಸಬಲ್ಲವನಿಲ್ಲದೊಡಾಗದು" ಎಂದು ಮನಸ್ಸಿಗೆ ತಂದುಕೊಂಡು ತಾನು ಕನ್ನಡದಲ್ಲಿ ಚಂಪೂರೂಪವಾಗಿ ನಿರೂಪಿಸಿರುವುದಾಗಿ ಕವಿಯೇ ಹೇಳಿಕೊಂಡಿರುವುದರಿಂದ (೧–೩೭) ಮೂಲದ ಬಗೆಗೆ ಸೂಚನೆ ದೊರೆತಂತಾಗಿದೆ. ಜಯರಾಮನ ಗಾಥಾನಿಬದ್ಧ 'ಧರ್ಮಪರೀಕ್ಷೆ'ಯನ್ನು ಅನುಸರಿಸಿ ಅಮಿತಗತಿ ತನ್ನ ಸಂಸ್ಕೃತ 'ಧರ್ಮಪರೀಕ್ಷೆ'ಯನ್ನು (೧೦೧೪) ಬರೆದಿರಬಹುದು, ಹರಿಷೇಣನ ಅಪಭ್ರಂಶ 'ಧರ್ಮಪರೀಕ್ಷೆ' (೯೮೮) ಆತನಿಗೆ ಗೊತ್ತಿದ್ದರೂ ಇರಬಹುದು ಎಂಬುದಾಗಿ ಭಾವಿಸಲಾಗಿದೆ (ಎ. ಎನ್. ಉಪಾಧ್ಯೆ; ಧರ್ಮಪರೀಕ್ಷೆ–ಪೂರ್ವಾಖ್ಯಾನ, ಪ್ರಕ., ೧೯೪೫). ಜಯರಾಮ ಹರಿಷೇಣರ ಪ್ರಾಕೃತ ಧರ್ಮಪರೀಕ್ಷೆಗಳ ಸಂಪ್ರದಾಯ ಅಮಿತಗತಿಯ ಸಂಸ್ಕೃತ ಕೃತಿಯ ಮೂಲಕ ವೃತ್ತವಿಲಾಸದಲ್ಲಿ ಬಂದಿರಬಹುದು.

ಬಾಹುಬಲಿ ಪಂಡಿತನ ಅನಂತರದಲ್ಲಿ ಮಧುರ (೧೪೧೦) 'ಧರ್ಮನಾಥ ಪುರಾಣ' ಬರೆದಿದ್ದಾನೆ. ಇವನು ಆಕರವನ್ನು ತಿಳಿಸಿಲ್ಲ. ಹರಿಚಂದ್ರನ 'ಧರ್ಮಶರ್ಮಾಭ್ಯುದಯ'ವನ್ನೇ ಇವನೂ ಅನುಸರಿಸಿರುವುದು ಸಾಧ್ಯವೆಂದು ತಿಳಿಯುವುದಕ್ಕೆ ಆಧಾರಗಳಿವೆ. ಶಾಂತಣವರ್ಣಿಯ (ಸು. ೧೪೭೦) 'ಅನಂತ ಕುಮಾರಿ ಚರಿತೆ'ಯ ವಸ್ತು 'ಯಶಸ್ತಿಲಕ ಚಂಪೂ'ವಿನ ಸಂಪ್ರದಾಯಕ್ಕೆ ಸೇರಿದುದೆಂದೂ ನಯಸೇನನ 'ಧರ್ಮಾಮೃತ'ದ ಸಪ್ತಮ ಭಾಗದ ಕಥೆಯನ್ನು ಈ ಕವಿ ಅನುಸರಿಸಿರುವನೆಂದೂ ಕೃತಿಯ ಸಂಪಾದಕರು ತಿಳಿಸಿದ್ದಾರೆ. ಆದಿಯಪ್ಪನ (ಸು. ೧೪೫೦) 'ಧನ್ಯಕುಮಾರ ಚರಿತ' ಪೂರ್ಣಭದ್ರ (೧೨೫೨), ಭದ್ರಗುಪ್ತ (೧೩೬೦), ದಯಾವರ್ಧನ (೧೪೦೫) ಈ ಮುಂತಾದ ಪೂರ್ವಕವಿಗಳ ಧನ್ಯಕುಮಾರ ಚರಿತ್ರೆಗಳಲ್ಲಿ ಯಾವುದನ್ನು ಅನುಸರಿಸಿರುವನೋ ತಿಳಿಯಬೇಕಾಗಿದೆ. ಈತನ ಇನ್ನೊಂದು ರಚನೆ 'ಪಟಹಸ್ತನ ಚರಿತೆ'.

ಪ್ರಸಿದ್ಧವಾದ ಭಾಸ್ಕರ ಕವಿರಚಿತ (೧೪೨೪) 'ಜೀವಂಧರ ಚರಿತೆ' ಷಟ್ಪದಿನಿಬದ್ಧವಾದುದು. ಕನ್ನಡದಲ್ಲಿ ರಚಿತವಾದ ಸಮಾನ ವಸ್ತುವಿನ ಪ್ರಥಮ ಸ್ವತಂತ್ರ ಕೃತಿ. ಕವಿಯೇ "ವಾದಿಮದಗಜಸಿಂಹಸೂರಿಗ। ಳಾದಿಯಲಿ ನವಸಂಸ್ಕೃತದೆ ಸಂ। ಪಾದಿಸಿದ ಭೂವಿನುತ ಜೀವಂಧರ ಚರಿತವನು॥ ಪೇದಿಸುವೆನು" (೧–೩೫) ಎಂಬುದಾಗಿ ಮೂಲವನ್ನು ಸೂಚಿಸಿದ್ದಾನೆ. ವಾದೀಭ ಸಿಂಹಸೂರಿಯ (ಸು. ೧೦೦೦) 'ಗದ್ಯ ಚಿಂತಾಮಣಿ' ಮತ್ತು 'ಕ್ಷತ್ರ ಚೂಡಾಮಣಿ'ಗಳಲ್ಲಿ, ಭಾಸ್ಕರ ವಿಶೇಷವಾಗಿ ಎರಡನೆಯದನ್ನು ಆಧಾರವಾಗಿ ಬಳಸಿರುವಂತೆ ಕಂಡುಬರುತ್ತದೆ. ತೆರಕಣಾಂಬಿ ಬೊಮ್ಮರಸನ (ಸು. ೧೪೮೫)

'ಜೀವಂಧರ ಚರಿತ್ರೆ'ಗೆ ಬಹುಶಃ ಭಾಸ್ಕರನ ಕೃತಿಯೇ ಮೂಲ. ಇದೇ ಕವಿಯು 'ಸನತ್ಕುಮಾರ ಷಟ್ಪದಿ' (ಸನತ್ಕುಮಾರ ಚರಿತೆ) ಕನ್ನಡ 'ವಡ್ಡಾರಾಧನೆ'ಯ ಕಥೆಯನ್ನು ಅನುಸರಿಸಿದೆ.

೧೫ನೆಯ ಶ. ದ ಜೈನ ಕವಿಗಳಲ್ಲಿ ಕಲ್ಯಾಣಕೀರ್ತಿ (೧೪೩೯) ಖ್ಯಾತನು. ಈತನ 'ಜ್ಞಾನ ಚಂದ್ರಾಭ್ಯುದಯ' ವಾಸವೇಂದುವಿನ ಪ್ರಾಕೃತ 'ಜ್ಞಾನಚಂದ್ರ ಚರಿತ'ವನ್ನು ಅನುಸರಿಸಿದೆಯೆಂದೂ (೧-೫) 'ನಾಗಕುಮಾರ ಚರಿತೆ' ಜಯದೇವಾದಿಗಳ ಸಂಸ್ಕೃತ ಫಣಿಕುಮಾರ ಚರಿತವನ್ನು ಅನುಸರಿಸಿದೆಯೆಂದೂ (೧-೭) ಕವಿಯ ಮಾತಿನಿಂದಲೇ ತಿಳಿಯುತ್ತದೆ. 'ಕಾಮನ ಕಥೆ' ಸೋಮಕೀರ್ತಿಯ ಸಂಸ್ಕೃತ 'ಪ್ರದ್ಯುಮ್ನ ಚರಿತೆ'ಯನ್ನು ಆಧರಿಸಿ ರಚಿತವಾಗಿದೆಯೆಂದು ಅದರ ಸಂಪಾದಕರು ತಿಳಿಸಿದ್ದಾರೆ.

೧೬ನೆಯ ಶ. ದ ಪ್ರಸಿದ್ಧ ಜೈನ ಕವಿಗಳಲ್ಲಿ ಒಬ್ಬನಾದ ಮೂರನೆಯ ಮಂಗರಸನು ಕೆಲವು ಜೈನ ಮಹಾಪುರುಷ ಚರಿತ್ರೆಗಳನ್ನು ಬರೆದಿದ್ದಾನೆ. ಜಿನಸೇನರ 'ಪೂರ್ವಪುರಾಣ'ದಲ್ಲಿ ನಿರೂಪಿತವಾಗಿರುವ, ಭರತ ಚಕ್ರವರ್ತಿಯ ಸೇನಾಪತಿ ಜಯನೃಪನ ಚರಿತೆಯೇ 'ಜಯನೃಪ ಕಾವ್ಯ'ದ ವಿಷಯ. 'ಪೂರ್ವಪುರಾಣ' ರತ್ನಶೇಖರ ಸೂರಿಯ ಪ್ರಾಕೃತ 'ಶ್ರೀಪಾಲ ಚರಿತೆ' ಈ ಮೊದಲಾದ ಆಕರಗಳಲ್ಲಿ ಯಾವುದನ್ನು ಆಧರಿಸಿ ಈತನ 'ಶ್ರೀಪಾಲ ಚರಿತೆ' ರಚಿತವಾಗಿದೆಯೋ ತಿಳಿಯಬೇಕಾಗಿದೆ. ಹಾಗೆಯೇ 'ಸಮ್ಯಕ್ತ್ವ ಕೌಮುದಿ'ಗೆ ಹರಿಷೇಣಾದ್ಯರ ಜೈನ ಕಥಾಕೋಶಗಳಲ್ಲಿ ವಸ್ತು ದುದುಗಿರುವಂತಿದೆ. ಈ ಕವಿಯ ಪ್ರಸಿದ್ಧ ಕಾವ್ಯ 'ನೇಮಿಜಿನೇಶ ಸಂಗತಿ' ಕರ್ಣಪಾರ್ಯಾದ್ಯರ ಕೃತಿಗಳನ್ನು ಅವಲಂಬಿಸಿರುವ ಹಾಗಿದೆ. ಮಂಗರಸನಲ್ಲದೆ ವರ್ಧಮಾನ ಮತ್ತು ದೇವರಸರೆಂಬವರ ಸಾಂಗತ್ಯದ ಶ್ರೀಪಾಲ ಚರಿತ್ರೆಗಳೂ ಇವೆ.

ವರ್ಧಮಾನ ಪುರಾಣಗಳ ಶ್ರೇಣಿಯಲ್ಲಿ ಇಮ್ಮಡಿ ನಾಗವರ್ಮ (೧೦೪೨), ಆಚಣ್ಣ ಇವರ ಚಂಪೂ ಕಾವ್ಯಗಳ ಅನಂತರದಲ್ಲಿ ಪದ್ಮಕವಿಯ (೧೫೨೮) 'ವರ್ಧಮಾನ ಚರಿತೆ'ಯೇ ಮೂರನೆಯದಾಗಿದೆ. ಈ ಕವಿ ತನ್ನ ಕಥಾ ನಿರೂಪಣೆಗೆ ವಿವಿಧ ಮೂಲಗಳನ್ನು ಆಶ್ರಯಿಸಿರುವನೆಂದೂ ಸಂಸ್ಕೃತ ಮಹಾಪುರಾಣ, ನಾಗವರ್ಮ ಆಚಣ್ಣರ ಕನ್ನಡ ವರ್ಧಮಾನ ಪುರಾಣಗಳು ಈ ಕೆಲವು ಮೂಲಗಳನ್ನು ನೋಡಿರುವನೆಂದೂ, ಆ ಕೃತಿಯ ಸಂಪಾದಕರು ಭಾವಿಸಿದ್ದಾರೆ. ಇಲ್ಲಿಯೇ ಜಿನಸೇನ ದೇಶವ್ರತಿಯ (ಸು. ೧೬೦೦) 'ವರ್ಧಮಾನ ಪುರಾಣ'ವನ್ನೂ ಪ್ರಸ್ತಾಪಿಸಬಹುದು. ಈ ಕವಿ 'ಉತ್ತರ ಪುರಾಣ'ವನ್ನೇ ತನ್ನ ಕಥೆಗೆ ಆಧಾರವನ್ನಾಗಿ ಮಾಡಿಕೊಂಡು ಕೆಲವು ಸಣ್ಣಪುಟ್ಟ ವ್ಯತ್ಯಾಸಗಳನ್ನು ಮಾಡಿರುವನೆಂಬುದು ಕೃತಿಯ ಸಂಪಾದಕರ ಅಭಿಪ್ರಾಯ.

ಇನ್ನೊಬ್ಬ ತೀರ್ಥಂಕರ ನೇಮಿನಾಥನ ಸಂಬಂಧವಾದ ಪುರಾಣಗಳಲ್ಲಿ ಗುಣವರ್ಮ, ಕರ್ಣಪಾರ್ಯ, ನೇಮಿಚಂದ್ರ, ಬಂಧುವರ್ಮ, ಮಹಾಬಲ ಇವರ ಕೃತಿಗಳ ಅನಂತರದಲ್ಲಿ ಸಾಳ್ವಕವಿ (ಸು. ೧೫೫೦) ರಚಿಸಿದ, 'ಸಾಳ್ವ ಭಾರತ' ಎಂಬ ರೂಢಿಯ ಹೆಸರಿನ,

'ನೇಮಿನಾಥ ಪುರಾಣ' ಆರನೆಯದು. ಇದಾದರೂ ಇತರ ನೇಮಿ ಚರಿತ್ರೆಗಳ ಹಾಗೆಯೇ ಹರಿವಂಶ ಪುರಾಣ ಮಾರ್ಗದ ಕೃತಿಯೇ ಆಗಿದ್ದು, ಕವಿ ಪ್ರಾಯಃ ಕರ್ಣಪಾರ್ಯ ನೇಮಿಚಂದ್ರರ ಕೃತಿಗಳನ್ನು ವಿಶೇಷವಾಗಿ ಗಮನಿಸಿರುವಂತೆ ತೋರುತ್ತದೆ.

ಈ ಶತಮಾನದ ರತ್ನಾಕರವರ್ಣಿ (೧೫೫೭) ಬಹು ಪ್ರಸಿದ್ಧನಾದ ಕವಿ. 'ಭರತೇಶ ವೈಭವ' ಇವನ ಜನಪ್ರಿಯ ಕಾವ್ಯ. ಇದು ಸಾಂಗತ್ಯರೂಪವಾಗಿದೆ. ಇಲ್ಲಿ ಕವಿ ನಾಯಕ ವ್ಯಕ್ತಿ ಭರತ ಚಕ್ರವರ್ತಿಯ ಪಾತ್ರವನ್ನು ಚಿತ್ರಿಸಿರುವ ರೀತಿ ರೂಢಿಗತ ದೃಷ್ಟಿಯಿಂದ ಭಿನ್ನವಾದುದು. ಜೈನ ಮತ್ತು ಭಾಗವತ ಕವಿಗಳ ದೃಷ್ಟಿ ಈ ಕವಿಯಲ್ಲಿ ಬಲುಮಟ್ಟಿಗೆ ಪ್ರತಿಫಲಿಸಿದೆ. ಜಿನಸೇನ ಪಂಪಾದ್ಯರಾದ ಸಂಸ್ಕೃತ ಕನ್ನಡ ಕವಿಗಳಲ್ಲಿಯ ಕಥಾವಸ್ತುವನ್ನು ತಕ್ಕ ಮಾರ್ಪಾಡುಗಳೊಂದಿಗೆ ಇಲ್ಲಿ ರತ್ನಾಕರನು ಅಳವಡಿಸಿ, ಬಲುಮಟ್ಟಿಗೆ ಸ್ವತಂತ್ರ ಮಾರ್ಗದಲ್ಲಿ ಕೃತಿಯನ್ನು ನಿರ್ವಹಿಸಿರುವಂತೆ ತೋರುತ್ತದೆ.

ಸಂಸ್ಕೃತ ಪ್ರಾಕೃತ ಕಥಾ ಸಾಹಿತ್ಯದಲ್ಲಿ ನಾಗಕುಮಾರನ ಕಥೆ ಸಾಕಷ್ಟು ಜನಪ್ರಿಯವಾದುದು. ಈ ವಸ್ತುವನ್ನು ಹಿಡಿದು ಬರೆದ ಕೃತಿ ಬಾಹುಬಲಿಯ (ಸು. ೧೫೬೦) ಸಾಂಗತ್ಯಬಂಧದ 'ನಾಗಕುಮಾರ ಚರಿತೆ' ಕವಿ ಪರಮೇಷ್ಠಿಗಳು ಚಿತ್ತರಿಸಿದ ಸತ್ಕಥೆಯ ವಸ್ತುವನ್ನೇ ತಾನು ವರ್ಣಕವಾಗಿ ಮಾಡಿರುವೆನೆಂದು ಕವಿ ಹೇಳಿಕೊಂಡಿರುವನಾದರೂ (೧-೮೦) ಈ ವಿಚಾರ ಜಿಜ್ಞಾಸೆಗೆ ಯೋಗ್ಯವಾಗಿದೆ. ಕೃತಿಯವಸ್ತು ಶ್ರೀ ಪಂಚಮಿಯ ಕಥೆ (ನೋಡಿ: ಹಂಪ ನಾಗರಾಜಯ್ಯ; ಫಣಿಕುಮಾರ 'ಕಥಾ ಸಾಹಿತ್ಯ' ೧೯೭೭) ಈ ಕಥಾವಸ್ತು ಬೊಮ್ಮಣ, ಚಂದ್ರಸಾಗರವರ್ಣಿ ಮೊದಲಾದವರಿಂದಲೂ ಕೃತಿಗೊಂಡಿದೆ.

ಶ್ರುತಕೀರ್ತಿ (೧೫೬೭) ರಚಿಸಿದ 'ವಿಜಯಕುಮಾರ ಚರಿತೆ' ವಿಜಿತೇಂದ್ರಿಯಳಾಗಿ ಕಾಮನನ್ನು ಗೆದ್ದ ಹೆಣ್ಣೊಬ್ಬಳ ಕಥೆ. "ಉತ್ತರ ದೇಶದೊಳಾರ್ಯ ಭಾಷೆಯೊಳು ಚೆ| ಲ್ವೆತ್ತಿರಲೀ ಸತ್ಕತೆಯನು| ವಿಸ್ತರಿಸುವುದು ಕನ್ನಡದೊಳಗೆ" ಎಂಬ ಜೈನೋತ್ತರ ಪ್ರಾರ್ಥನೆಯಂತೆ ಕವಿ ಇದನ್ನು ಬರೆದಿದ್ದಾನೆ. ಮೂಲವನ್ನು ಗುರುತಿಸುವುದು ಸಾಧ್ಯವಾಗಿಲ್ಲ.

ಎಂಟನೆಯ ತೀರ್ಥಂಕರನಾದ ಚಂದ್ರಪ್ರಭನ ಚರಿತ್ರೆಗಳ ಶ್ರೇಣಿಯಲ್ಲಿ ವೀರನಂದಿಯ ಕೃತಿ ಸಂಪ್ರದಾಯಕ್ಕೆ ಸೇರಿದ ಅಗ್ಗಳನ 'ಚಂದ್ರಪ್ರಭ ಪುರಾಣ'ವನ್ನು ಅನುಸರಿಸಿ ನಿಟ್ಟೂರು ದೊಡ್ಡಣಾಂಕನು (೧೫೭೮) ತನ್ನ 'ಚಂದ್ರಪ್ರಭ ಚರಿತ್ರೆ'ಯನ್ನು ಭಾಮಿನೀ ಷಟ್ಪದಿಯಲ್ಲಿಯೂ ಪಿರಿಯ ಪಟ್ಟಣದ ದೊಡ್ಡಯ್ಯನು (ಸು. ೧೫೫೦) ತನ್ನ 'ಚಂದ್ರಪ್ರಭ ಚರಿತೆ'ಯೆಂಬುದನ್ನು ಸಾಂಗತ್ಯದಲ್ಲಿಯೂ ರಚಿಸಿದ್ದಾರೆ. ದೊಡ್ಡಯ್ಯ ತನ್ನ ಕೃತಿಯಲ್ಲಿ "ಚಂದ್ರಪ್ರಭ ಪುರಾಣವ ಪೇಳ್ದ ವಿಜಯ ಕ| ವೀಂದ್ರ"ನನ್ನು (೧-೩೨) ಸ್ಮರಿಸಿರುವುದು ಗಮನಾರ್ಹವಾಗಿದ್ದರೂ, ಆ ಕೃತಿ ಈಗ ದೊರೆಯುತ್ತಿಲ್ಲ.

ಜನ್ನ ಕವಿಯ ಅನಂತರದಲ್ಲಿ ಚಿಕ್ಕ ಪದ್ಮಣ್ಣ ಶೆಟ್ಟಿ (೧೭೬೧) ತಾನೂ ಒಂದು ಅನಂತನಾಥ ಚರಿತ್ರೆಯನ್ನು 'ಅನಂತನಾಥ ಚರಿತೆ' ಎಂಬ ಹೆಸರಿನಲ್ಲಿ ಬರೆದಿದ್ದು, ತನ್ನ ಈ

ಸಾಂಗತ್ಯ ಗ್ರಂಥವನ್ನು ಜನ್ನ ಕವಿಯ ಚಂಪೂರೂಪದ 'ಅನಂತನಾಥ ಪುರಾಣ'ವನ್ನೇ ಆಧಾರವಾಗಿಟ್ಟುಕೊಂಡು ಬರೆದಿರುವನೆಂದು ಕೃತಿಯ ಸಂಪಾದಕರು ತಿಳಿಸಿದ್ದಾರೆ.

ಪೂಜ್ಯಪಾದ ಯೋಗಿಯ (ಸು. ೧೬೦೦) 'ಜ್ಞಾನಚಂದ್ರ ಚರಿತೆ' ಪಾಯಣ ವರ್ಣಿಯ ಮಾತಿನಂತೆ ವಾಸವಚಂದ್ರನ ಪ್ರಾಕೃತ ಜ್ಞಾನ ಚಂದ್ರಚರಿತೆಯ ಕನ್ನಡರೂಪ ವೆಂದು ತಿಳಿಯುವುದು. ಆ ಪ್ರಾಕೃತ ಗ್ರಂಥವನ್ನು ನೋಡಿ ಪೂಜ್ಯಪಾದಯೋಗಿ ಕರ್ನಾಟಕ ಷಟ್ಪದಿಯಲ್ಲಿ ಬರೆದುದನ್ನು ಸಾಂಗತ್ಯ ರೂಪವಾಗಿ ತಾನು ರಚಿಸಿರುವುದಾಗಿ ಪಾಯಣವರ್ಣಿಯ ಹೇಳಿಕೆ ಕಲ್ಯಾಣ ಕೀರ್ತಿಯ ಅನಂತರದ ಕವಿಗಳ ಕೃತಿಗಳು ಇವು. ಪಾಯಣವರ್ಣಿಯ (೧೬೫೯) ಕೃತಿ ೪೫ ಸಂಧಿಗಳ ವಿಸ್ತಾರವಾದ ಸಾಂಗತ್ಯ ಕೃತಿ. ಈತನು 'ಸಮ್ಯಕ್ತ್ವ ಕೌಮುದಿ'ಯ ಕರ್ತೃ ಪಾಯಣವ್ರತಿ (ಸು. ೧೬೦೦) ಮತ್ತು 'ಸನತ್ಕುಮಾರ ಚರಿತೆ'ಯ ಕರ್ತೃ ಪಾಯಣಮುನಿ (೧೬೦೬) ಇವರಿಂದ ಭಿನ್ನನೆಂದು ಕವಿ ಚರಿತೆಕಾರರು ಭಾವಿಸಿದ್ದಾರೆ.

ಜೈನ ಪುರಾಣ ಕಥೆಗಳಲ್ಲಿ ವರಾಂಗನೃಪನ ಕಥೆಯೂ ಸಂಸ್ಕೃತ ಪ್ರಾಕೃತ ಸಾಹಿತ್ಯ ದಲ್ಲಿ ಪ್ರಸಿದ್ಧವಾದದ್ದು. ಜಟಾಸಿಂಹ ನಂದಿಗಳ (ಸು. ೭ನೆಯ ಶ.) 'ವರಾಂಗ ಚರಿತ' ಸಂಸ್ಕೃತದಲ್ಲಿದ್ದು, ಪ್ರಾಯಃ ಇದನ್ನು ಅವಲಂಬಿಸಿ ಈಚೆಗೆ ವರ್ಧಮಾನನೆಂಬವನು (೧೫ ನೆಯ ಶತಮಾನದ ಅನಂತರ) ತನ್ನ 'ವರಾಂಗ ಚರಿತ'ವನ್ನು ಸಂಸ್ಕೃತದಲ್ಲಿ ರಚಿಸಿದ ನೆಂದು ತಿಳಿಯುವುದು. ಕನ್ನಡದಲ್ಲಿಯೂ ಹಿಂದಿಯಲ್ಲಿಯೂ ಇರುವ ವರಾಂಗ ಚರಿತೆಗಳಿಗೆ ಈ ಗ್ರಂಥ ಮೂಲವಾಗಿದೆಯೆನ್ನುವುದು ವಿದ್ವಾಂಸರ ಅಭಿಪ್ರಾಯ ಧರಣಿ ಪಂಡಿತನು (ಸು.೧೬೫೦) ವರ್ಧಮಾನಮತಿಯ ಹೆಸರನ್ನು ಹೇಳಿರುವುದರಿಂದ ಅವನಿಗೆ ವರ್ಧಮಾನನ 'ವರಾಂಗ ಚರಿತ'ವೇ ಮೂಲವಾಗಿತ್ತೆಂದು ಭಾವಿಸಲಾಗಿದೆ (ಡಿ. ಎಲ್. ನರಸಿಂಹಾಚಾರ್: ಜಟಾಸಿಂಹ ನಂದಿಯ ವರಾಂಗ ಚರಿತೆ, ಕಸಾಪ: ೨೫-೩, ಪು. ೧೪೫-೪೬).

ಪಾರ್ಶ್ವನಾಥನ ಶಾಸನದೇವಿಯಾದ ಪದ್ಮಾವತಿಯ ಚರಿತೆಯನ್ನು ಪದ್ಮನಾಭನು (ಸು. ೧೬೮೦) ಬರೆದಿದ್ದಾನೆ. ಇದೇ 'ಜಿನದತ್ತರಾಯ ಚರಿತ್ರೆ'. ಮೂಲ ಎಲ್ಲಿಯದೋ ತಿಳಿಯದು. ನಾಗವನ (ಸು. ೧೭೦೦) ಕೃತಿ 'ಮಾಣಿಕಸ್ವಾಮಿ ಚರಿತ್ರೆ' ಆದಿತೀರ್ಥಂಕರನ ಇನ್ನೊಂದು ಹೆಸರು ಮಾಣಿಕಸ್ವಾಮಿ. ರಚನೆಯಲ್ಲಿ ವಿಮಲಸೂರಿಯ ಪಉಮ ಚರಿಯ ವನ್ನು ಅನುಸರಿಸಿದ್ದಾನೆಂದೂ 'ಪಂಪ ರಾಮಾಯಣ' 'ಕುಮುದೇಂದು ರಾಮಾಯಣ' ಗಳನ್ನು ಓದಿಕೊಂಡು ಕವಿ ಈ ಭಾಗವನ್ನು ಬರೆದಿರಬಹುದೆಂದೂ ಕೃತಿಯ ಸಂಪಾದಕರು ಭಾವಿಸಿದ್ದಾರೆ.

ಶಾಂತಿಕೀರ್ತಿಮುನಿ (೧೭೩೨) ಪೊನ್ನ ಕಮಲಭವರ ಅನಂತರದಲ್ಲಿ ಶಾಂತಿನಾಥನ ಕಥೆಯನ್ನು 'ಶಾಂತೀಶ್ವರ ಚರಿತೆ' ಎಂಬ ಹೆಸರಿನಲ್ಲಿ ರಚಿಸಿದ್ದಾನೆ: ಹಾಗೆಯೇ 'ಪುರುದೇವ ಚರಿತೆ' ಎಂಬ ಆದಿನಾಥನ ಕಥೆಯನ್ನು (೧೭೭೯) ಕೃತಿಗೊಳಿಸಿದ್ದಾನೆ. ಈತ ಪಾರ್ಶ್ವನಾಥ ಚರಿತೆಯನ್ನು ರಚಿಸಿದಂತೆ ತಿಳಿದು ಬರುತ್ತದೆ. ಮೂಲಗಳು ವಿಶದಪಡಬೇಕಾಗಿದೆ.

ದೇವಚಂದ್ರನ ಹಾಗೆ ಚರಿತ್ರೆ, ಪುರಾಣ ಮತ್ತು ಐತಿಹ್ಯದ ಸಂಗತಿಗಳನ್ನು ಬೆರಸಿ ಕೆಲವು ಕೃತಿಗಳನ್ನು ಚಂದ್ರಸಾಗರ ವರ್ಣಿ (೧೮೧೦) ರಚಿಸಿದ್ದು, ಇವುಗಳಲ್ಲಿ ಸಾಂಗತ್ಯ ದಲ್ಲಿರುವ ಕೃತಿಗಳನ್ನು ಹೊರತುಪಡಿಸಿ, 'ನಾಗಕುಮಾರ ಷಟ್ಪದಿ', 'ಪರಶುರಾಮ ಭಾರತ', 'ಚಂದನೆಯ ಕಥೆ', 'ಸ್ಮರ ಕೊರವಂಜಿ' ಈ ಕೆಲವು ಪುರಾಣ ಕಥೆಗಳೇ ಆಗಿರು ವುದು ಸ್ವಾಭಾವಿಕವೇ ಆಗಿದೆ, ಪುಷ್ಪದಂತಾದ್ಯರಾದ ಕವಿಗಳಲ್ಲಿ ಪ್ರತಿಪಾದ್ಯವಾಗಿರುವ ಕತೆ ಮೊದಲಿನದು, ಹರಿವಂಶ ಪುರಾಣದೊಳಗಿನ ಉಪಾಖ್ಯಾನಗಳಿಗೆ ಸಂಬಂಧಿಸಿದ್ದು, ಎರಡು ಮತ್ತು ನಾಲ್ಕನೆಯವು ಎಂಬುದಾಗಿ ಸಾಮಾನ್ಯವಾಗಿ ತಿಳಿಯಬಹುದಾಗಿದೆ. ಚಾರುಕೀರ್ತಿ ಪಂಡಿತನದೋ (೧೮೧೫) ಚಂದ್ರಸಾಗರ ವರ್ಣಿಯದೋ ಆಗಿರುವ 'ಭವ್ಯ ಜಿನ ಚಿಂತಾಮಣಿ' ಎಂಬ ಕಾವ್ಯ ಸಕಲ ಭೂಷಣನೆಂಬವನ ಸಂಸ್ಕೃತ ಗ್ರಂಥದ ಪರಿವರ್ತನ ವೆನ್ನಲಾಗಿದೆ ('ಕರ್ಣಾಟಕ ಕವಿ ಚರಿತೆ', ಸಂ. ೩, ಪು. ೪೭೪)

೨. ವೈಷ್ಣವ

ಈ ಶ್ರೇಣಿಯ ಸಾಹಿತ್ಯ ರುದ್ರಭಟ್ಟನ (ಸು. ೧೧೮೫) 'ಜಗನ್ನಾಥ ವಿಜಯ'ದಿಂದ ಮೊದಲಾಗುತ್ತದೆ. ಕೃಷ್ಣನ ಜನನ ಮೊದಲುಗೊಂಡು ಬಾಣಾಸುರ ಯುದ್ಧದವರೆಗೆ ವಿಷ್ಣು ಪುರಾಣದ ಕಥೆ ಇಲ್ಲಿ ವರ್ಣಿತವಾಗಿದೆ. ಅಲ್ಲಿಯ ಐದಾರನೆಯ ಅಂಶಗಳ ಕೃಷ್ಣ ಚರಿತೆಯೇ ವಸ್ತು. ಭಾರತ ಭಾಗವತಗಳಲ್ಲಿಯ ಪ್ರಸ್ತುತ ಭಾಗಗಳ ಪ್ರಭಾವವೂ ಆಗಿರ ಬೇಕು. ವಿಷ್ಣುಪುರಾಣದ ಸರಣಿ ಪೆಚ್ಚಾಗಿ ಸರಳ ಕಥಾನಕದ್ದಾದರೆ ಜಗನ್ನಾಥ ವಿಜಯದ ರೀತಿ ವಿಸ್ತಾರವಾದ ಪ್ರೌಢ ಕಾವ್ಯದ್ದು. ಕೃಷ್ಣ ಜನ್ಮದಿಂದ ಸಾಲ್ವವಧೆಯವರೆಗೆ ೧೮ ಆಶ್ವಾಸಗಳಲ್ಲಿ ಈ ಕಥೆ ಹರಡಿದೆ. ಕವಿ ವಿಷ್ಣುಪುರಾಣವನ್ನು ಕಥಾಂಶದಲ್ಲಿ ಅನುಸರಿಸಿರು ವುದೇ ಹೆಚ್ಚು. ಆದರೆ ಪ್ರೌಢವಾದ ವಿಸ್ತರಣೆಯಲ್ಲಿ ಅವನದೇ ಕೈವಾಡವಿದೆ. ಹೀಗೆ ಮಾಡುವಾಗ ರಸಾವೇಶಭರದಲ್ಲಿ ಕೆಲವು ವ್ಯತ್ಯಾಸಗಳನ್ನು ಮಾಡಿದ್ದಾನೆ (ರಂ. ಶ್ರೀ. ಮುಗುಳಿ: ಕನ್ನಡ ಸಾಹಿತ್ಯ ಚರಿತ್ರೆ, ಪು. ೧೯೩-೯೪) ವಿಷ್ಣುಪುರಾಣದ ಆಧಾರದ ಮೇಲೆ ವೈಷ್ಣವ ಭಕ್ತಿ ಕಾವ್ಯವನ್ನು ಕನ್ನಡದಲ್ಲಿ ರಚಿಸಿದ ಮೊದಲನೆಯ ಕವಿಯೆಂದರೆ ರುದ್ರಭಟ್ಟನು. ಹೀಗೆಯೇ ಈಚೆಗೆ ವಿಷ್ಣು ಭಕ್ತನಾದ ಅಮಾತ್ಯ ಪೋಲಾಳ್ವ ದಂಡನಾಥನು (೧೨೨೪) 'ಹರಿಚಾರಿತ್ರ' ಎಂಬ ಷಟ್ಪದೀ ಗ್ರಂಥವನ್ನು ಬರೆದಿದ್ದ ವಿಷಯ ಶಾಸನೋಕ್ತ ವಾಗಿದೆ. ಇದು ದೊರೆತಿಲ್ಲ, ಅಲ್ಲದೆ ಭಾಗವತ, ಹರಿವಂಶ ಮತ್ತು ವಿಷ್ಣುಪುರಾಣಗಳಲ್ಲಿ ಪ್ರಾಯಃ ದೊರೆಯುವ ಬಲಿಚಕ್ರವರ್ತಿಯ ಪುತ್ರ ಬಾಣನ ವೃತ್ತಾಂತವನ್ನು ಆಶ್ರಯಿಸಿ ಚೌಂಡರಸನು (೧೩೦೦) ರಚಿಸಿದ್ದಂತೆ ತೋರುವ 'ಬಾಣಾಸುರ ವಿಜಯ' ಸಹ ಇನ್ನೂ ದೊರೆತಿಲ್ಲ.

ಹರಿದಾಸರ ಕೃಷ್ಣಭಕ್ತಿ ಪರಿಸಮ್ಪೂರ್ಣತತ್ತ್ವಗಳ ಬೆಳವಣಿಗೆಗೆ ಭಾಗವತ ವಿಷ್ಣು ಪುರಾಣಗಳು ಮಿಗಿಲಾಗಿ ಒದಗಿವೆ. ದಾಸಕೂಟದ ಮೊದಲಿಗರೆಂದು ಖ್ಯಾತರಾದ ನರಹರಿ ತೀರ್ಥ ಶ್ರೀಪಾದರಾಯ, ವ್ಯಾಸರಾಯ, ಪುರಂದರದಾಸ, ಕನಕದಾಸ ಮೊದಲಾದವರ

ಕೀರ್ತನೆಗಳಲ್ಲಿ ಇದನ್ನು ನಾವು ಗಮನಿಸಬಹುದಾಗಿದೆ. ಪುರಂದರದಾಸರ ಕೃಷ್ಣ ಮಹಿಮೆಯ ಹಾಡುಗಳಲ್ಲಿಯಂತೂ ಹಲವಾರು ಸನ್ನಿವೇಶಗಳು ಪ್ರಸ್ತಾಪಗೊಂಡಿವೆ, ವ್ಯಕ್ತಿಗಳು ಕಾಣಿಸಿಕೊಂಡಿದ್ದಾರೆ. ಇವರಲ್ಲಿ ಕೆಲವರು ಸಂಸ್ಕೃತದಲ್ಲಿಯೂ ಕೆಲವು ಪ್ರೌಢವಾದ ಸಿದ್ಧಾಂತ ಗ್ರಂಥಗಳನ್ನು ರಚಿಸಿದ್ದಾರೆ. ಶ್ರೀಪಾದ ರಾಜರು 'ವಾಗ್ವಜ್ರ' ಎಂಬ, ವಾದಿರಾಜರು 'ಯುಕ್ತಿ ಮಲ್ಲಿಕಾ', 'ತೀರ್ಥ ಪ್ರಬಂಧ', 'ಸರಸ ಭಾರತೀ ವಿಲಾಸ', 'ರುಕ್ಮಿಣೀಶ ವಿಜಯ' ಎಂಬ ಸಂಸ್ಕೃತ ಗ್ರಂಥಗಳನ್ನು ರಚಿಸಿದರೆಂದು ತಿಳಿಯುವುದನ್ನಿಲ್ಲಿ ಉದಾಹರಿಸಬಹುದು.

ವಿಷ್ಣು ಪಾರಮ್ಯದ ಭಾಗವತ ಪುರಾಣವಂತೂ ವೈಷ್ಣವ ಕವಿಗಳಿಗೆ ಕಾಮಧೇನು. ನಾರಾಯಣ ಕವಿ (ಸು. ೧೫೫೦) 'ಭಾಗವತ ಸಂಹಿತಾರ್ಥ'ವೆಂಬ ಹೆಸರಿನಲ್ಲಿ ಆ ಪುರಾಣದ ತಾತ್ಪರ್ಯವನ್ನು ಗದ್ಯರೂಪವಾಗಿ ಸಂಗ್ರಹಿಸಿದ್ದಾನೆ. ಚಾಟು ವಿಠಲನ 'ಭಾಗವತ' (ಸು. ೧೫೩೦) ಭಾಮಿನೀ ಷಟ್ಪದಿಯ ಬಹುದೊಡ್ಡ ಗ್ರಂಥ. ಶುಕ ಪ್ರಣೀತ ಮೂಲ ಮಹಾ ಭಾಗವತವನ್ನು ಮೊದಲ ಸಲ ಕನ್ನಡಕ್ಕೆ ತಂದ ಕೀರ್ತಿ ಬಹುಶಃ ಈತನದು. ಕೃಷ್ಣ ಕಥೆಯ ವೃತ್ತಾಂತಗಳ ಮೂಲಕ ವೈಷ್ಣವ ಭಕ್ತಿಯು ಹಾಗೂ ತತ್ತ್ವದ ನಿರೂಪಣೆ ಮೂಲಾನುಸಾರವಾಗಿ, ಸಹಜವಾಗಿ ಇಲ್ಲಿ ಬಂದಿದೆ.

ಕೃಷ್ಣನ ಮತ್ತು ಆತನ ಪುತ್ರ ಪೌತ್ರರ ಕಥೆಗಳನ್ನು ಕನಕದಾಸರು (ಸು. ೧೫೫೦) 'ಮೋಹನ ತರಂಗಿಣಿ' ಎಂಬ ಸರಸವಾದ ಸಾಂಗತ್ಯ ಕೃತಿಯಲ್ಲಿ ನಿರೂಪಿಸಿದ್ದು, ಇಲ್ಲಿ ಮನ್ಮಥ ದಹನ, ಕಾಮೋತ್ಪತ್ತಿ, ಶಂಬನಾಸುರ ವಧೆ, ಅನಿರುದ್ಧನ ಲೀಲೆ, ಬಾಣಾಸುರ ವಿಜಯ ಮುಂತಾದ ಪ್ರಕರಣಗಳು ಬಂದಿವೆ. ವಿವಿಧ ಕಥಾ ಮೂಲಗಳಿಂದ ವಸ್ತು ಸಂಗ್ರಹ ಮಾಡಿರಬಹುದು. ಕಥಾ ವಸ್ತು ಭಾರತ ಭಾಗವತಗಳಲ್ಲಿ, ಹರಿವಂಶ ವಿಷ್ಣು ಪುರಾಣಗಳಲ್ಲಿ ಪರಿಚಿತವಾಗಿರುವುದೇ ಆಗಿದೆ.

ಪುರಾಣಗಳು ಎಂದಿನಿಂದಲೂ ಕನ್ನಡ ಕವಿಗಳಿಗೆ ಕೃತಿ ವಸ್ತುವನ್ನು ಒದಗಿಸುವ ಅಕ್ಷಯ ಪಾತ್ರೆಗಳು ಎನ್ನುವಂತೆ ಒದಗಿವೆ. ರಾಮಚಂದ್ರ ಗುರು ಶಿಷ್ಯನೆಂಬವನು (ಸು. ೧೫೫೦) 'ಆದಿತ್ಯ ಪುರಾಣ'ವನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದಾನೆ. ಇದು ಬಹುಶಃ ಉಪ ಪುರಾಣಗಳಲ್ಲಿ ಸೇರಿರುವ ಸೌರ ಪುರಾಣವೇ ಇರಬಹುದು. ಬ್ರಹ್ಮಾಂಡ ಪುರಾಣಾಂತರ್ಗತ ದಶಾಧ್ಯಾಯ ಪರಿಮಿತವಾದ 'ಶ್ರೀ ರಂಗ ಮಾಹಾತ್ಮ್ಯೆ'ವನ್ನು "ಸರ್ವ ಜನರ್ಗೆ ಸುಲಭವಾಗಿ ತಿಳಿವಂತೆ ಕರ್ಣಾಟಕ ಭಾಷಾ ರಚನೆಯಿಂ" ರಚಿಸಿರುವುದಾಗಿ ರಂಗಾಚಾರ್ಯನೆಂಬ ಕವಿ (ಸು. ೧೫೭೦) ತಿಳಿಸಿದ್ದಾನೆ. ಇದು ಗದ್ಯ ರೂಪವಾಗಿ ಹತ್ತು ಪರಿಚ್ಛೇದಗಳನ್ನು ಒಳಗೊಂಡಿದೆ. ಸೋಮನಾಥ ಕವಿ (ಸು. ೧೬೦೦) ಭಾಗವತ ಕಥಾ ಭಾಗವಾದ 'ಅಕ್ರೂರ ಚರಿತೆ'ಯನ್ನೂ ಸರಹರಿ ಕವಿ (ಸು. ೧೬೫೦) 'ಪ್ರಹ್ಲಾದ ಚರಿತ್ರೆ'ಯನ್ನೂ ರಚಿಸಿದ್ದಾರೆ. ನಾರದೀಯ ಪುರಾಣೋಕ್ತವಾದ ರುಕ್ಮಾಂಗದ ರಾಜನ ಕಥೆ

ಕನ್ನಡ ಕವಿಗಳಿಗೆ ಮೆಚ್ಚಾದುದು. ಇದರಲ್ಲಿ ಮಾಂಧಾತ್ರ ರಾಜನಿಗೆ ವಸಿಷ್ಠನು ಬೋಧಿಸಿದ ಹರಿವಾಸರದ ಮಾಹಾತ್ಮ್ಯೆ ನಿರೂಪಿತವಾಗಿದೆ. ಹೀಗೆ ರಚಿತವಾದ ರುಕ್ಮಾಂಗದ ಚರಿತೆಗಳಲ್ಲಿ, ಸೋಮನಾಥನ (ಸು. ೧೬೫೦) 'ರುಕ್ಮಾಂಗದ ಚರಿತೆ', ಶೇಷ ಕವಿಯ (ಸು. ೧೬೫೦) 'ರುಕ್ಮಾಂಗದ ಚರಿತೆ' ಎರಡೂ ಸಾಂಗತ್ಯ ಕೃತಿಗಳು; ಚಿಕ್ಕುಪಾಧ್ಯಾಯನ (೧೬೮೧) 'ರುಕ್ಮಾಂಗದ ಚರಿತೆ' ಒಂದು ಚಂಪೂ ಕೃತಿ. ವೆಂಕಯಾರ್ಯ (ಸು. ೧೬೫೦) ವಿರಚಿತ 'ಕೃಷ್ಣಲೀಲಾಭ್ಯುದಯ' ಭಾಗವತ ದಶಮಸ್ಕಂಧದ ಕಥೆಯನ್ನು ಸಂಗ್ರಹಿಸಿದ ಭಾಮಿನೀ ಷಟ್ಪದಿಯ ರಚನೆ. ಗುರು ಪ್ರಸಾದನು (ಸು. ೧೬೫೦) 'ವೈರಾಗ್ಯ ಪುರಾಣ'ವೆಂದೂ ಕರೆಯುವ 'ಸುಯೋಗ ಚಾರಿತ್ರ'ವೆಂಬ ವಾರ್ಧಕ ಷಟ್ಪದಿಯ ಕೃತಿಯಲ್ಲಿ ಯೌವನಾಶ್ವ–ಪ್ರಭಾವತಿಯರ ಮಗ ಸುಯೋಗನಿಗೆ ಭಾರದ್ವಾಜನು ವೈರಾಗ್ಯ ಬೋಧಿಸಿದ ಕಥೆಯಿದೆ.

ಚಿಕ್ಕದೇವರಾಜ (೧೬೭೨–೧೭೦೪) ಮೈಸೂರರಸರಲ್ಲಿ ಸಾಹಿತ್ಯವನ್ನು ಮಿಗಿಲಾಗಿ ಪೋಷಿಸಿದ ಮಹನೀಯನು. ಈತನು ಸ್ವತಃ ಹರಿವಂಶ ಕಲಿತವಾದ ಅಶ್ವಮೇಧಿಕ ಪರ್ವದಲ್ಲಿ ಉಕ್ತವಾಗಿರುವ 'ಶೇಷ ಧರ್ಮ'ಕ್ಕೆ ಒಂದು ಕನ್ನಡ ಟೀಕೆಯನ್ನು ಗದ್ಯದಲ್ಲಿ ರಚಿಸಿದ್ದಾನೆ. ಈತನ ಆಸ್ಥಾನದ ಚಿಕ್ಕುಪಾಧ್ಯಾಯನಂತೂ (೧೬೭೨) ಕನ್ನಡ ವೈಷ್ಣವ ಪುರಾಣ ಕಥಾ ಸಾಹಿತ್ಯಕ್ಕೆ ವಿಶೇಷವಾಗಿ ಕೊಡುಗೆಯಿತ್ತವನು. ಈತ ರಚಿಸಿದ ಇಂತಹ ಗ್ರಂಥಗಳ ಸಂಖ್ಯೆ, ಗಾತ್ರ, ವಿಷಯ ವೈವಿಧ್ಯಗಳು ವಿಸ್ಮಯಕರವಾದವು. ದೊರೆಯ ಸಂತೋಷಕ್ಕಾಗಿ 'ಶೇಷ ಧರ್ಮ'ವನ್ನು ಗದ್ಯ ರೂಪವಾಗಿ ಅನುವಾದಿಸಿದ್ದಾನೆ. 'ಕಮಲಾಚಲ ಮಾಹಾತ್ಮ್ಯೆ'ವೆಂಬ ಚಂಪು ಭವಿಷ್ಯೋತ್ತರ ಪುರಾಣದ ತೀರ್ಥ ಕಾಂಡದಲ್ಲಿಯ ಹಿಮವದ್ಗೋಪಾಲ ಸ್ವಾಮಿ ಬೆಟ್ಟದ ಮಾಹಾತ್ಮ್ಯೆವನ್ನು ಕುರಿತ ಕೃತಿ. 'ಹಸ್ತಿಗಿರಿಯ ಮಾಹಾತ್ಮ್ಯೆ' ಬ್ರಹ್ಮಾಂಡ ಪುರಾಣದ ತೀರ್ಥ ಕಾಂಡದೊಳಗಿನ ಕಂಚಿಯ ಮಾಹಾತ್ಮ್ಯೆವನ್ನು ಕುರಿತಿದೆ. ಇದೂ ಚಂಪುವೇ. 'ರುಕ್ಮಾಂಗದ ಚರಿತೆ' ನಾರದೀಯ ಪುರಾಣೋಕ್ತವಾದದ್ದು: ಇನ್ನೊಂದು ಚಂಪು, ಈ ಕವಿ ಮೂಲ 'ವಿಷ್ಣು ಪುರಾಣ'ವನ್ನು ಚಂಪೂ ಹಾಗೂ ಗದ್ಯ ರೂಪದಲ್ಲಿ ಅನುವಾದಿಸಿದ್ದಾನೆ. 'ಯದುಗಿರಿ ಮಾಹಾತ್ಮ್ಯೆ' ಮೇಲು ಕೋಟೆಯ ಮಹಿಮೆಯನ್ನು ಕುರಿತುದು; ನಾರದೀಯ ಪುರಾಣೋಕ್ತವಾದದ್ದು. ಇದು ಗದ್ಯರೂಪವಾಗಿದೆ. 'ಬ್ರಹ್ಮಾಂಡ ಪುರಾಣ'ದ ಪುಣ್ಯಕ್ಷೇತ್ರ ಮಾಹಾತ್ಮ್ಯೆ ಖಂಡದಲ್ಲಿ ನಾರದನು ಭೃಗು ಋಷಿಗೆ ಹೇಳಿದ ತಿರುಪತಿಯ ಮಹಿಮೆಯನ್ನು ಕವಿ 'ವೆಂಕಟಗಿರಿ ಮಾಹಾತ್ಮ್ಯೆ'ವೆಂಬ ಹೆಸರಿನಲ್ಲಿ ಗದ್ಯ ರೂಪವಾಗಿ ಕನ್ನಡಿಸಿದ್ದಾನೆ. ಹೀಗೆಯೇ ಈ ಕವಿ ಬ್ರಹ್ಮಾಂಡ ಪುರಾಣಾಂತರ್ಗತವಾದ 'ಶ್ರೀ ರಂಗ ಮಾಹಾತ್ಮ್ಯೆ'ವನ್ನು ಗದ್ಯ ರೂಪವಾಗಿ ಹತ್ತು ಅಧ್ಯಾಯಗಳಲ್ಲಿ ಕನ್ನಡಿಸಿದ್ದಾನೆ. 'ಪಶ್ಚಿಮ ರಂಗ ಮಾಹಾತ್ಮ್ಯೆ' ಒಂದು ಸಾಂಗತ್ಯ ಕೃತಿ; ಬ್ರಹ್ಮಾಂಡ ಪುರಾಣದೊಳಗೆ ಶಂಕರ–ನಾರದ ಸಂವಾದ ರೂಪವಾಗಿ ಬಂದಿರುವ ಶ್ರೀರಂಗಪಟ್ಟಣದ ಮಹಿಮೆ ಇಲ್ಲಿಯ ವಿಷಯ. ಸಂಸ್ಕೃತ ಭಾಷೆಯ

'ಶುಕಸಪ್ತತಿ'ಯ ಅನುವಾದ ಗದ್ಯರೂಪವಾಗಿದ್ದು, ಈ ಜನಪ್ರಿಯ ಕೃತಿ ವಸ್ತು ಅಗ್ನಿ ಭೂಭುಜನಿಗೆ ಶುಕ ಮಹರ್ಷಿ ನಿರೂಪಿಸಿದ ಪತಿವ್ರತೆಯರ ಮಹಿಮೆಯನ್ನು ಕುರಿತುದು ಎನ್ನಲಾಗಿದೆ. ಚಿಕ್ಕುಪಾಧ್ಯಾಯನ 'ಶುಕಸಪ್ತತಿ' ಹೊರ ಬಂದ ಅವಧಿಯಲ್ಲಿಯೇ, ಭಾಮಿನೀ ಷಟ್ಪದಿಯ ರೂಪದಲ್ಲಿ ಇನ್ನೊಂದು 'ಶುಕಸಪ್ತತಿ' ಶರಜಾ ನಾಗಮಂತ್ರಿಯಿಂದ (ಸು. ೧೬೮೦) ರಚಿತವಾಗಿ ಹೊರ ಬಂದಿದೆ.

ತಿಮ್ಮ ಕವಿ (೧೬೭೭) ಕೂಡ ಚಿಕದೇವರಾಜನ ಆಶ್ರಿತ ಕವಿ. ಈತ ಚಂಪೂ ರೂಪವಾಗಿ ರಚಿಸಿದ 'ವೆಂಕಟಗಿರಿ ಮಾಹಾತ್ಮ್ಯೆ' 'ಪಶ್ಚಿಮರಂಗ ಮಾಹಾತ್ಮ್ಯೆ' 'ಯಾದವ ಗಿರಿ ಮಾಹಾತ್ಮ್ಯೆ'ಗಳು ಕ್ರಮವಾಗಿ ತಿರುಪತಿ, ಶ್ರೀರಂಗಪಟ್ಟಣ ಮತ್ತು ಮೇಲುಕೋಟೆ ಕ್ಷೇತ್ರಗಳ ಮಹಿಮೆಗಳನ್ನು ನಿರೂಪಿಸಿರುವ ಕೃತಿಗಳಾಗಿವೆ. ಇವುಗಳಲ್ಲಿ ಯಾದವಗಿರಿಯ ಮಹಿಮೆಯನ್ನು ವರ್ಣಿಸುವ ಸಂಸ್ಕೃತ ಕನ್ನಡ ಗ್ರಂಥಗಳಲ್ಲಿ ಹಲವಿದ್ದು, ಚಿಕ್ಕುಪಾಧ್ಯಾಯನು ಸಾಂಗತ್ಯ ಮತ್ತು ಗದ್ಯಗಳಲ್ಲಿಯೂ ವೆಂಕಟಾರ್ಯ ಶಿಷ್ಯನೆಂಬವನು ಭಾಮಿನೀ ಷಟ್ಪದಿಯಲ್ಲಿಯೂ ಮುಮ್ಮಡಿ ಕೃಷ್ಣರಾಜರು ಗದ್ಯದಲ್ಲಿಯೂ ರಚಿಸಿರುವ ಕನ್ನಡ ಕೃತಿಗಳ ಸಾಲಿಗೆ ತಿಮ್ಮನ ಕೃತಿಯೂ ಸೇರುತ್ತದೆ.

ಚಿಕದೇವರಾಜನ ಆಶ್ರಿತ ವರ್ಗದ ಇನ್ನೊಬ್ಬ ಕವಿ ಮಲ್ಲಿಕಾರ್ಜುನ ಕವಿ (೧೬೭೮) ಚಿಕ್ಕುಪಾಧ್ಯಾಯನ ಪ್ರೇರಣೆಯಂತೆ ತಾನೂ ಒಂದು 'ಶ್ರೀ ರಂಗ ಮಾಹಾತ್ಮ್ಯೆ'ವನ್ನು ಚಂಪೂ ರೂಪವಾಗಿ ಬರೆದಿದ್ದಾನೆ. ಮಲ್ಲರಸನ (೧೬೮೦) 'ದಶಾವತಾರ ಚರಿತೆ' ವಿಷ್ಣುವಿನ ದಶಾವತಾರಗಳನ್ನು ವರ್ಣಿಸಿರುವ ಚಂಪೂ ಕೃತಿ. ಈ ಕೃತಿಗೆ ವಿಷ್ಣು ಪುರಾಣ ಮತ್ತು ಪಂಚರಾತ್ರಾಗಮ ಮುಖ್ಯ ಆಕರಗಳಾಗಿವೆ; ಕೃಷ್ಣಾವತಾರದ ಭಾಗ ಮಾತ್ರ ಭಾಗವತದ ದಶಮಸ್ಕಂದವನ್ನು ಹೆಚ್ಚಾಗಿ ಅವಲಂಬಿಸಿದೆ. ಇದೇ ಪೋಷ್ಯ ವರ್ಗದ ಶೃಂಗಾರಮ್ಮ (ಸು. ೧೬೮೫) ತಿರುಪತಿಯ ಶ್ರೀನಿವಾಸ ದೇವರಿಗೂ ಪದ್ಮಿನಿಗೂ ನಡೆದ ವಿವಾಹದ ಕಥೆಯನ್ನು 'ಪದ್ಮಿನೀ ಕಲ್ಯಾಣ' ಎಂಬ ಹೆಸರಿನಿಂದ ಸಾಂಗತ್ಯದಲ್ಲಿ ಬರೆದಿದ್ದಾಳೆ. ಈ ಕಥೆಯು ಸ್ಕಾಂದ ಪುರಾಣದ ವೆಂಕಟಾಚಲ ಮಾಹಾತ್ಮ್ಯೆವೆಂಬ ಭಾಗದಲ್ಲಿ ಬರುವ ಪದ್ಮಾವತಿ-ವೆಂಕಟೇಶ್ವರರ ವಿವಾಹದ ಕಥಾ ವಸ್ತುವಿನ ಮೇಲೆ ಸಿದ್ಧವಾಗಿರಬಹುದು. ಚನ್ನಿಗನು (ಸು. ೧೭೦೦) 'ಪ್ರಹ್ಲಾದ ಚರಿತೆ' (= ನರಸಿಂಹ ಚಾರಿತ್ರ) ಎಂಬ ಕೃತಿ ಯನ್ನು, ಭಾಗವತ ಪುರಾಣಾಂತರ್ಗತವಾದ ವಸ್ತುವುಳ್ಳುದನ್ನು, ಸಾಂಗತ್ಯ ರೂಪವಾಗಿ ಬರೆದಿದ್ದಾನೆ. ಹೀಗೆಯೇ ಕೃಷ್ಣ ಕವಿ (೧೭೦೦) ತನ್ನ 'ಕೃಷ್ಣ ಕರ್ಣಾಮೃತ'ವೆಂಬ ಭಾಮಿನೀ ಷಟ್ಪದಿಯ ಕೃತಿಯನ್ನು ರಚಿಸಿದ್ದು, ಇದೂ ಭಾಗವತದ ದಶಮಸ್ಕಂದ ದೊಳಗಿನ ಕಥೆಯೇ ಆಗಿದೆ.

ವೆಂಕಟಾರ್ಯನೆಂಬ ಗುರುವಿನ ಶಿಷ್ಯನೊಬ್ಬ (ಸು. ೧೭೦೦) 'ಯಾದವ ಗಿರಿ ಮಾಹಾತ್ಮ್ಯೆ' ಮತ್ತು 'ಕೃಷ್ಣ ಗೋಪೀ ವಿಲಾಸ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾನೆ.

ಇವುಗಳಲ್ಲಿ ಮೊದಲನೆಯದು ಚಿಕ್ಕುಪಾಧ್ಯಾಯ, ತಿಮ್ಮ ಕವಿಗಳ ಕೈಯಲ್ಲಿ ಕೃತಿವಸ್ತು ವಾಗಿರುವುದು. ಎರಡನೆಯದು ನಂದಗೋಪಾಲನ ಲೀಲಾ ವಿನೋದಗಳನ್ನು ವರ್ಣಿಸಿರುವ ಸಾಂಗತ್ಯ ಕೃತಿ. ಈ ಕೃತಿ ಬಾಲ ವಿಲಾಸ ಶತಕ, ವೇಣು ವಿಲಾಸ ಶತಕ ಮತ್ತು ಶೃಂಗಾರ ಸಪ್ತತಿ ಎಂಬ ಮೂರು ಭಾಗಗಳಲ್ಲಿದೆ. ಇದೇ ಅವಧಿಯ ವಿಜಯ ವೆಂಕಟ ರಮಣ ಕವಿ (ಸು. ೧೭೦೦) ವಾರ್ಧಕ ಷಟ್ಪದಿಯಲ್ಲಿ 'ಭಗವಚ್ಚರಿತ್ರೆ' ರಚಿಸಿದ್ದಾನೆ. ಇದರಲ್ಲಿ ಭಾಗವತ ಪುರಾಣೋಕ್ತವಾದ ಧ್ರುವ ಚರಿತೆ ಮೊದಲಾದ ವಿಷಯಗಳು ಬಂದಿವೆ. ಶ್ರೀ ಶೈಲೇಂದ್ರ್ಯನು (ಸು. ೧೭೦೦) ಸಾಂಗತ್ಯದಲ್ಲಿ 'ಕೃಷ್ಣ ಚಾರಿತ್ರ'ವನ್ನು ನೂರು ಪದ್ಯ ಗಳಲ್ಲಿ ರಚಿಸಿದ್ದಾನೆ. ಇದೇ ಅವಧಿಯ 'ಕೃಷ್ಣ ಕಥೆ' ಸಂಧ್ಯಂತದಲ್ಲಿ 'ವೆಂಕಟ ಶೌರಿ' ಎಂಬ ಅಂಕಿತವಿಟ್ಟ ಅಜ್ಞಾತ ಕರ್ತೃಕವಾದ ವಿಸ್ತೃತ ವಾರ್ಧಕ ಷಟ್ಪದಿಯ ರಚನೆಯಾಗಿದೆ. ಭಾಗವತ ವಿಷ್ಣು ಪುರಾಣಾದಿ ಮೂಲಗಳಲ್ಲಿಯ ಕೃಷ್ಣನ ಲೀಲೆಗಳೂ ಮಹಿಮೆಗಳೂ ವೈಷ್ಣವ ಕವಿಗಳಿಗೆ ಎಂದೂ ಪ್ರಿಯವಾದವೇ.

ಹದಿನೆಂಟನೆಯ ಶತಮಾನದ ಆದಿಭಾಗದಲ್ಲಿಯೂ ಪುರಾಣ ಕಥಾ ಸಾಹಿತ್ಯ ಎಂದಿನಂತೆ ಕನ್ನಡದಲ್ಲಿ ಮುನ್ನಡೆಯಿತು. ಭಾಗವತವನ್ನು ಒಳಗೊಂಡಂತೆ ಮಹಾ ಪುರಾಣ ಉಪ ಪುರಾಣಗಳಲ್ಲಿಯ ವಿಷ್ಣುವಿನ ಮಹಿಮೆಗಳೂ ಅವತಾರಗಳೂ ವಿಷ್ಣುಭಕ್ತರ ಚರಿತ್ರೆ ಗಳೂ ಕ್ಷೇತ್ರ ಮಾಹಾತ್ಮ್ಯಗಳೂ ಕನ್ನಡ ಭಾಷೆಯಲ್ಲಿ ಅವತರಿಸುತ್ತಲೇ ಸಾಗಿದುದನ್ನು ನಾವು ಕಾಣುತ್ತೇವೆ.

ಕಳಲೆ ವೀರರಾಜನ ಆಶ್ರಿತ ಕವಿಯಾದ ಚನ್ನಯ್ಯ (ಸು. ೧೭೨೦) 'ಪದ್ಮಿನೀ ಪರಿಣಯ'ವೆಂಬ ಸಾಂಗತ್ಯ ಗ್ರಂಥವನ್ನು ರಚಿಸಿದ್ದಾನೆ. "ಕೃತಿ ವಾರಹ ಪುರಾಣದ ಕಥ" (೧-೫೪) ಎಂಬುದಾಗಿ ಕವಿ ತಿಳಿಸಿದ್ದರೂ ದೊರೆತಿರುವ ವರಾಹ ಪುರಾಣಗಳಲ್ಲಿ ಈ ಕಥೆ ಕಂಡು ಬರುವುದಿಲ್ಲವೆಂದೂ ಸ್ಕಾಂದ ಪುರಾಣದಲ್ಲಿ ಸದೃಶ ಕಥೆಯುಂಟೆಂದೂ ಸಂಪಾದಕರು ತಿಳಿಸಿದ್ದಾರೆ. ಶೃಂಗಾರಮ್ಮನ 'ಪದ್ಮಿನೀ-ಕಲ್ಯಾಣ'ದ ಪ್ರಸ್ತಾವದಲ್ಲಿ ಈಗಾಗಲೇ ಇದನ್ನು ಗಮನಿಸಿದೆ. ಲಕ್ಷ್ಮ ಕವಿ (೧೭೨೬) ವಾರ್ಧಕ ಷಟ್ಪದಿಯಲ್ಲಿ ಒಂದು 'ರುಕ್ಮಾಂಗದ ಚರಿತೆ'ಯನ್ನು ರಚಿಸಿದ್ದು, ಇವನು ಸೋಮನಾಥ, ಶೇಷ ಕವಿ ಮತ್ತು ಚಿಕ್ಕುಪಾಧ್ಯಾಯರ ನಂತರ ಈ ಕಥಾವಸ್ತುವನ್ನು ನಿರ್ವಹಿಸಿದ ನಾಲ್ಕನೆಯ ಕವಿಯಾಗಿದ್ದಾನೆ. ಯಕ್ಷಗಾನ 'ರುಕ್ಮಾಂಗದ ಚರಿತೆ'ಯನ್ನು ರಚಿಸಿದ ಅಳಿಯ ಲಿಂಗರಾಜನು (೧೮೫೦) ಐದನೆಯವನು.

ಮೈಸೂರರಸು ದೊಡ್ಡ ಕೃಷ್ಣರಾಜನ (೧೭೧೩-೩೧) ರಾಣಿ ಚೆಲುವಾಂಬೆ (ಸು. ೧೭೨೫) ಹಲವು ಕನ್ನಡ ಕೃತಿಗಳನ್ನು ರಚಿಸಿ ಖ್ಯಾತಳಾಗಿದ್ದಾಳೆ. ಈಕೆಯ ಕೃತಿಗಳಲ್ಲಿ 'ವರನಂದೀ ಕಲ್ಯಾಣ' ಮೇಲು ಕೋಟೆ ಚೆಲುವರಾಯ ಸ್ವಾಮಿಗೂ ದಿಹಲಿಯ ಬಾದಶಹನ ಮಗಳು ವರನಂದಿಗೂ ನಡೆದ ಮದುವೆಯನ್ನು ವರ್ಣಿಸುವ ಕಾವ್ಯ. ಚಿಂತಾಮಣಿಯ ಅಂಕಿತದಲ್ಲಿ ಶ್ರೀನಿವಾಸನೆಂಬ ಕವಿ ಆಗ್ನೇಯ ಪುರಾಣೋಕ್ತವಾದ 'ತುಲಾ ಕಾವೇರೀ

ಮಾಹಾತ್ಮ್ಯೆ'ಕ್ಕೆ ಗದ್ಯರೂಪವಾದ ಕನ್ನಡ ವ್ಯಾಖ್ಯಾನವನ್ನು 'ಚೆಲುವರಾಜಕಾ ವಾಣೀ ವಿಲಾಸ' ಎಂಬ ಹೆಸರಿನಲ್ಲಿ ಬರೆದಿರುವಂತೆ ತೋರುತ್ತದೆ. ರಂಗಯ್ಯನೆಂಬ (ಸು ೧೭೬೦) ಕವಿ ಕೂಡ 'ಕಾವೇರೀ' ಮಾಹಾತ್ಮ್ಯೆ' ಎಂಬ ಒಂದು ಕೃತಿಯನ್ನು ಭಾಮಿನೀ ಷಟ್ಪದಿಯಲ್ಲಿ ರಚಿಸಿದ್ದಾನೆ. ಆಧಾರ ಸ್ಕಾಂದ ಪುರಾಣವೆಂದು ತಿಳಿಯುವುದು.

ವಿಶೇಷವಾಗಿ ಶೈವ ಪುರಾಣ ಸಂಬಂಧಿಯಾದ ಕೃತಿಗಳ ಕರ್ತೃವಾಗಿರುವ ಕಳಲೆ ನಂಜರಾಜನು (ಸು. ೧೭೪೦) 'ಹರಿವಂಶ'ವೊಂದರ ಕವಿಯೂ ಆಗಿದ್ದಾನೆ. ಮೈಸೂರ ರಸರ ಸಮುದಾಯಕ್ಕೆ ಸೇರಿದ ಗೋಪಾಲರಾಜನು (ಸು. ೧೭೪೦) 'ಭವಿಷ್ಯೋತ್ತರ ಪುರಾಣೋಕ್ತವಾದ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಮಹಿಮೆಯನ್ನು 'ಕಮಲಾಚಲ ಮಾಹಾತ್ಮ್ಯೆ'ವೆಂಬ ಹೆಸರಿನಲ್ಲಿ ಗದ್ಯರೂಪವಾಗಿ ಬರೆದಿದ್ದಾನೆ. ಇದೇ ವಸ್ತುವಿನ ಚಂಪುವೊಂದನ್ನು ಈ ಮೊದಲೇ ಚಿಕ್ಕುಪಾಧ್ಯಾಯನು ರಚಿಸಿದ್ದನು. ಸ್ವಾಮಿ ಕವಿ (ಸು. ೧೭೫೦) ಬಿಳಿಯ ಕಲ್ಲು ರಂಗಸ್ವಾಮಿಯ ಪಾರಿಜಾತ ಪ್ರಸಂಗವನ್ನು ಯಕ್ಷಗಾನವಾಗಿ ಬರೆದಿದ್ದು, ಈ ಕೃತಿಯ ವಸ್ತು ಪ್ರಾಯಃ ಹರಿವಂಶದೊಳಗಿನದು.

ಭಾಗವತ ಪುರಾಣ ಕಥೆಯಾದ 'ಗಜೇಂದ್ರಮೋಕ್ಷ' ದ್ವಿಪದೀ ರೂಪವಾದ ಒಂದು ಚಿಕ್ಕ ಕೃತಿ; ಕರ್ತೃ ಯಾರೆಂಬುದು ತಿಳಿಯದು (ಸು. ೧೭೫೦) ತಿಪ್ಪಯಾರ್ಯನ (ಸು. ೧೭೫೦) 'ಕಾಳಿಯ ಮರ್ದನ' 'ಕುಚೇಲೋಪಾಖ್ಯಾನ'ಗಳು ಭಾಗವತ ಮೂಲದ ಯಕ್ಷಗಾನ ರಚನೆಗಳು, ಹರಿದಾಸ ಕವಿ (ಸು. ೧೭೫೦) ಭಾಮಿನೀ ಷಟ್ಪದಿಯಲ್ಲಿ 'ಸಂಕ್ಷೇಪ ಭಾಗವತ' ರಚಿಸಿದ್ದಾನೆ; ಆತ್ಮಾರಾಮನು ಬರೆದಿರುವ ಕನ್ನಡ ಷಟ್ಪದಿಯ ಸಂಕ್ಷೇಪವೆಂಬುದಾಗಿ ಹೇಳಿರುವುದು ಬಹುಶಃ ಚಾಟು ವಿಠಲನ ಕನ್ನಡ ಭಾಗವತವನ್ನೇ ಇರಬಹುದು. ರಾಮಾಯಣ ಕರ್ತೃವಾಗಿ ಖ್ಯಾತನಾಗಿರುವ ವೆಂಕಾಮಾತ್ಯ ಕವಿ (ಸು. ೧೭೭೦) ಲಕ್ಷ್ಮೀದೇವಿಯ ಅವತಾರಾದಿ ವಿಷಯಗಳನ್ನು ವರ್ಣಿಸಿ 'ರಮಾಭ್ಯುದಯ' ವೆಂಬ ಚಂಪೂಕೃತಿಯನ್ನು ಬರೆದಿದ್ದಾನೆ.

ಮೈಸೂರರಸನಾದ ಬೆಟ್ಟದ ಚಾಮರಾಜನಿಗೆ (೧೭೭೦-೭೬) ಉಪಾಧ್ಯಾಯನಾಗಿದ್ದ ಸಿಂಗರಾಚಾರ್ಯನು (ಸು. ೧೭೭೦) ೧೦ ಅಧ್ಯಾಯಗಳಲ್ಲಿ ಗದ್ಯರೂಪವಾದ 'ಶ್ರೀರಂಗ ಮಾಹಾತ್ಮ್ಯೆ' ಬರೆದಿದ್ದಾನೆ. ಮೂಲ ಬ್ರಹ್ಮಾಂಡ ಪುರಾಣ, ಮಲ್ಲಿಕಾರ್ಜುನನ ಅನಂತರದಲ್ಲಿ ಈ ವಿಷಯ ಕುರಿತು ಬರೆದ ಎರಡನೆಯ ಕವಿಯಿವನು. ಮಾನ ಮಧುರೆ ದಾಸನು (ಸು. ೧೭೮೦) ಭಾಗವತ ಪುರಾಣಾಂತರ್ಗತವಾದ 'ಸುದಾಮ ಕಥೆ'ಯನ್ನೂ 'ಜಲ ಕ್ರೀಡೆ', 'ರಾಸ ಕ್ರೀಡೆ'ಗಳನ್ನೂ ಬರೆದಿದ್ದಾನೆ. ರಂಗಾಚಾರ್ಯನ (ಸು. ೧೮೦೦) 'ಪ್ರಹ್ಲಾದ ಚರಿತೆ' ಒಂದು ಯಕ್ಷಗಾನ ಬಹುಶಃ ಚನ್ನಿಗನ ಬಳಿಕ ಈ ವಸ್ತುವಿನ ಮೇಲೆ ಬರೆದ ಎರಡನೆಯ ಕವಿಯಿವನು. "ಭವಿಷ್ಯೋತ್ತರ ಪುರಾಣದಲಿ ಪೇಳಿರುವುದನು ಕರಿಸಿ ಪೇಳ್ವೆ" ಎಂಬ ಸಂಕಲ್ಪದೊಂದಿಗೆ ಕವಿ ಪರಿಶೇಷನೆಂಬವನು (ಸು. ೧೮೦೦) 'ಶ್ರೀನಿವಾಸ

ಕಲ್ಯಾಣ' ಎಂಬ ಯಕ್ಷಗಾನವನ್ನು ಸಿದ್ಧಮಾಡಿದ್ದಾನೆ. ಭಸ್ಮಾಸುರನ ಕಾಳಗ ಕುರಿತ ಅಜ್ಞಾತ ಕರ್ತೃಕವಾದ ಯಕ್ಷಗಾನವೂ ಇದೇ ಕಾಲದ್ದಾಗಿರಬಹುದು.

ಮೈಸೂರರಸು ಮುಮ್ಮಡಿ ಕೃಷ್ಣರಾಜನ (೧೭೯೪-೧೮೬೮) ಹೆಸರಿನಲ್ಲಿ ಬಹು ಸಂಖ್ಯೆಯ ಪೌರಾಣಿಕ ಗ್ರಂಥಗಳಿವೆ. ಇವುಗಳಲ್ಲಿ ಕೆಲವು ವೈಷ್ಣವ ಪುರಾಣ ಕಥೆಗಳು. 'ಉಷಾ ಪರಿಣಯ' ಭಾರತ ಭಾಗವತಗಳ, ಹರಿವಂಶ ವಿಷ್ಣುಪುರಾಣಗಳ ಒಂದು ಕಥೆ. 'ಕೃಷ್ಣ ಕಥಾ ರತ್ನಾಕರ' ಭಾಗವತ ದಶಮಸ್ಕಂಧದ ಹಾಗೂ ಹರಿವಂಶ ವಿಷ್ಣುಪುರಾಣ ಭಾರತಾದ್ಯನೇಕ ಗ್ರಂಥಗಳ ಸಾರಸಂಗ್ರಹ'ಭಾಗವತ ಪುರಾಣ'ಕ್ಕೆ ಶ್ರೀಧರೀಯ ವ್ಯಾಖ್ಯಾನಾನುಸಾರವಾಗಿ ಕನ್ನಡದಲ್ಲಿ ಬರೆದ ಟೀಕೆಯೇ 'ಕೃಷ್ಣರಾಜ ವಾಣೀ ವಿಲಾಸ' ಎಂಬುದಾಗಿ ಪ್ರಸಿದ್ಧವಾಗಿದೆ. ಹರಿವಂಶದ ಪಾರಿಜಾತಾಪಹರಣದ ಕಥೆಯನ್ನು ಒಳಕೊಂಡದ್ದು 'ಭಾಮಾಕಥೆ'. ಈತನ ಹೆಸರಿನಲ್ಲಿಯೇ ಇರುವ 'ಅಖಂಡ ಕಾವೇರೀ ಮಾಹಾತ್ಮ್ಯೆ', 'ಅರ್ಕ ಪುಷ್ಕರಿಣೀ ಮಾಹಾತ್ಮ್ಯೆ', 'ಉತ್ತರ ಗೀತೆ', 'ಕೃಷ್ಣ ಕಥಾಸಾರ ಸಂಗ್ರಹ', 'ತುಲಾ ಕಾವೇರೀ ಮಾಹಾತ್ಮ್ಯೆ', 'ದೇವೀ ಭಾಗವತ ತಾತ್ಪರ್ಯ ಟೀಕೆ', 'ಭಕ್ತವಿಲಾಸ ದರ್ಪಣ', 'ಯಾದವಗಿರಿ ಮಾಹಾತ್ಮ್ಯೆ', 'ಹರಿವಂಶ' ಈ ಕೆಲವು ರಚನೆಗಳು ಕೂಡ ವೈಷ್ಣವ ಮತ್ತು ಅನ್ಯ ಪುರಾಣಗಳೊಳಗಿನ ಕಥಾ ಪ್ರಸಂಗಗಳೇ ಆಗಿರುವಂತೆ ತೋರುತ್ತವೆ. ಇವುಗಳಲ್ಲಿ 'ತುಲಾ ಕಾವೇರೀ ಮಾಹಾತ್ಮ್ಯೆ', 'ಯಾದವಗಿರಿ ಮಾಹಾತ್ಮ್ಯೆ'ಗಳು ಕ್ರಮವಾಗಿ ಆಗ್ನೇಯ ಮತ್ತು ನಾರದೀಯ ಪುರಾಣಗಳೊಳಗಿನವು ಎಂದು ಹಿಂದೆಯೇ ಹೇಳಿದೆ. 'ದೇವಿ ಭಾಗವತ' 'ಹರಿವಂಶ'ಗಳು ವೈಷ್ಣವಪರ ಪುರಾಣಗಳು. ಈ ದೊರೆಯ ಹೆಸರಿನಲ್ಲಿರುವ ವಿಸ್ತಾರವಾದ ಗ್ರಂಥ ಸಮುದಾಯವನ್ನು ಆತನ ಸೂಚನೆಯಂತೆ ಆತನ ಆಸ್ಥಾನ ಪಂಡಿತರಲ್ಲಿ, ಆಶ್ರಿತ ವರ್ಗದವರಲ್ಲಿ ಕೆಲವರು ಬರೆದು ಅಂಕಿತ ಮಾಡಿರುವುದು ಸಾಧ್ಯ.

ಮುಮ್ಮಡಿ ಕೃಷ್ಣರಾಜನ ಕಾಲದಲ್ಲಿಯೇ ಇದ್ದಿರಬಹುದಾದ ಗುರುಕೃಷ್ಣ (ಸು. ೧೮೩೦) ಸತ್ಯಭಾಮೆ ತನ್ನ ಚಿತ್ತವಲ್ಲಭನನ್ನು ನಾರದನಿಗೆ ದಾನವಿತ್ತ ಸತ್ಕಥೆ ವಸ್ತುವಾಗಿರುವ 'ಕೃಷ್ಣಸ್ವಾಮಿಯ ದಾನಕೊಟ್ಟ ಪದ' ಎಂಬ ರಚನೆಯನ್ನು ಸಾಂಗತ್ಯ ರೂಪವಾಗಿ ೧೫೭೭ ಪದ್ಯಗಳಲ್ಲಿ ರಚಿಸಿದ್ದಾನೆ. ಅಲ್ಲದೇ ಭಾಗವತ ಪುರಾಣಾರ್ಥ ವಿವರಣ ರೂಪವಾದ 'ಕೃಷ್ಣ ಬಾಲಲೀಲೆ'ಯನ್ನು ಚೌಪದದಲ್ಲಿ ನಿರೂಪಿಸಿದ್ದಾನೆ. ಯಕ್ಷಗಾನ ಕವಿ ಗೇರುಸೊಪ್ಪೆ ಶಾಂತಯ್ಯ (ಸು. ೧೮೩೦) ರಚಿಸಿರುವ ಯಕ್ಷಗಾನ ಕೃತಿಗಳಲ್ಲಿ 'ಏಕಾದಶೀ ಪ್ರಸಂಗ'ವೂ ಸೇರಿದ್ದು, ಇದು ರುಕ್ಮಾಂಗದನ ಕಥೆಯೇ ಇರಬಹುದು. ಇದೇ ಅವಧಿಯಲ್ಲಿ, ಇದೇ ಕಥೆ ಇದೇ ರೂಪದಲ್ಲಿ 'ಕೃಷ್ಣರಾಜ ಮುಖೋಲ್ಲಾಸ' ಎಂಬ ಹೆಸರಿನಿಂದ ರಚಿತವಾಗಿರುವುದು ಸಹ ಕಂಡುಬರುತ್ತದೆ. ಇದು ಅಜ್ಞಾತ ಕರ್ತೃಕವಾದ್ದು. ಸೀತಾರಾಮ ಸೂರಿ (ಸು. ೧೮೪೦) ಮತ್ತೊಬ್ಬ ಮುಮ್ಮಡಿ ಕೃಷ್ಣರಾಜನ ಆಶ್ರಿತ. ಇವನ 'ಸಹಸ್ರಾಯು ಕಥೆ' ಎಂಬುದು "ಬ್ರಹ್ಮಾಂಡೋಪ ಪುರಾಣದ ಉತ್ತರ ಭಾಗದಲ್ಲಿರುವ ಲಲಿತೋಪಾಖ್ಯಾನದ ಪೂರ್ವ ಖಂಡದಲ್ಲಿಯ ಹಯಗ್ರೀ ವಾಗಸ್ತ್ಯ ಸಂವಾದ ರೂಪವಾದ

೨೪ ಅಧ್ಯಾಯಗಳ ಕರ್ನಾಟಕ ಟೀಕೆ" ಎಂಬುದಾಗಿ ತಿಳಿಯುವುದು. ಸುಬ್ರಹ್ಮಣ್ಯ ಕವಿ (೧೮೪೦) ವಿರಚಿತವಾದ 'ಶಂಬರಾಸುರನ ಕಾಳಗ'ವೂ ಒಂದು ಯಕ್ಷಗಾನವಾಗಿದ್ದು. "ಪರಮ ಶುಕಮುನಿ ಪರೀಕ್ಷಿತ ನೃಪಾಲಗೆ ಪೇಳ್ದ ವರಮಹಾಭಾಗವತ ಸಾರದೊಳ್ ಸ್ಮರ ಜನಿಸಿ ರತಿಯ ಕೈಪಿಡಿದ ಸಂಗತಿ" ಇಲ್ಲಿಯ ಕಥಾವಸ್ತುವಾಗಿದೆ ಎಂದರೆ ಈ ಕೃತಿಯ ಮೂಲ ಭಾಗವತವೆಂದಾಯಿತು. ವೀರಶೈವ ಕವಿ ದೇವಲಾಪುರದ ಸಂಜುಡನ (೧೮೫೧) 'ಸಮುದ್ರ ಮಥನದ ಕಥೆ' ವೈಷ್ಣವ ಪುರಾಣ ಸಂಬಂಧಿಯಾಗಿರುವಂತೆ ತೋರುತ್ತದೆ. ರಂಗಶಾಸ್ತ್ರಿ (೧೮೪೯) 'ಪ್ರಹ್ಲಾದ ಚರಿತ್ರೆ'ಯ ಕನ್ನಡ ಟೀಕೆಯನ್ನು 'ವಿದ್ವತ್ ಪ್ರತೋಷಿಣಿ' ಎಂಬ ಹೆಸರಿನಲ್ಲಿ ರಚಿಸಿದ್ದಾನೆ. ಕೃತಿಯ ಮೂಲ ನರಸಿಂಹ ಪುರಾಣ. ಅಪರಾಳ ತಮ್ಮಣ್ಣನ (ಸು. ೧೮೫೦) 'ಕೃಷ್ಣ ಪಾರಿಜಾತ' ಸುಪರಿಚಿತ ಕಥಾ ವಸ್ತುವಿನ ಯಕ್ಷಗಾನರೂಪ.

ಮುಮ್ಮಡಿ ಕೃಷ್ಣರಾಜನ ಹಾಗೆ ವಿಸ್ತಾರವಾದ ಪೌರಾಣಿಕ ಕಥಾ ಸಮುದಾಯದ ಕರ್ತೃ ಎಂದರೆ ಆ ದೊರೆಯ ಅಳಿಯನೇ ಆದ ಅಳಿಯ ಲಿಂಗರಾಜ (೧೮೨೩–೭೪). ಈತನು 'ಕೃಷ್ಣ ಬಾಲಲೀಲೆ' 'ಪಾರಿಜಾತಾಪಹರಣ', 'ರುಕ್ಮಾಂಗದ ಚರಿತ್ರೆ' :'ಸ್ಯಮಂತ ಕೋಪಖ್ಯಾನ' ಈ ಕೆಲವು ವೈಷ್ಣವ ಪುರಾಣ ಕಥೆಗಳ ಯಕ್ಷಗಾನಗಳನ್ನು ರಚಿಸಿದ್ದಾನೆ, ಈತನ 'ಪ್ರಭಾವತೀ ಪರಿಣಯ' ವಾರ್ಧಕ ಷಟ್ಪದಿಯಲ್ಲಿರುವ ದೊಡ್ಡ ಗ್ರಂಥ ಇದರಲ್ಲಿ "ಹರಿವಂಶದೊಳಗೆ ರಂಜಿಪ ರುಕ್ಮಿಣೀಕುಮಾರನು ದನುಜಸುತೆಯ ಪ್ರಭಾವತಿಯನೊಲಿಸಿ ಪರಿಣಯುವಾದ" ಕಥೆ ಬಂದಿದೆ. 'ಸ್ಯಮಂತಕೋಪಾಖ್ಯಾನ'ವಂತೂ ಭಾಗವತಾದಿಗಳಲ್ಲಿ ಬರುವ ಕಥೆಯೇ ಆಗಿದೆ.

೩. ಶೈವ, ವೀರಶೈವ

ವೀರಶೈವ ಕವಿಗಳಲ್ಲಿ ಅಗ್ರಗಣ್ಯನಾದ ಹರಿಹರನು (ಸು. ೧೨೦೦) ವಿರಚಿಸಿದ 'ಗಿರಿಜಾ ಕಲ್ಯಾಣ'ದ ವಸ್ತು ಶೈವಪುರಾಣ ಸಂಬಂಧವಾದುದು. "ಹರಿಹರನು ಯಾವ ಕಥೆಯನ್ನು ಅವಲಂಬಿಸಿದ್ದಾನೆಂದು ಹೇಳುವುದು ಕಷ್ಟ. ಲಿಂಗ ಮಹಾಪುರಾಣದಲ್ಲಿಯೂ ಶಿವ ಮಹಾಪುರಾಣದಲ್ಲಿಯೂ ಈ ಕಥೆ ಇದೆ. ಕಾಳಿದಾಸನ 'ಕುಮಾರ ಸಂಭವ'ವೂ ಉದ್ಭಟ ದೇವನ 'ಕುಮಾರ ಸಂಭವ'ವೂ ಹರಿಹರನಿಗಿಂತ ಪ್ರಾಚೀನವಾಗಿದ್ದು, ಇದೇ ಕಥೆಯನ್ನು ನಿರೂಪಿಸಿವೆ. ಹರಿಹರನು ಹಳೆಯ ಕಥೆಯನ್ನೇ ತೆಗೆದುಕೊಂಡಿದ್ದರೂ ತನ್ನವೇ ಆದ ಕೆಲವು ಮಾರ್ಪಾಡುಗಳನ್ನು ಅಲ್ಲಲ್ಲಿ ಮಾಡಿದ್ದಾನೆ. ಕೆಲವೆಡೆ ಕಾಳಿದಾಸನ ಪ್ರಭಾವ ಇರುವಂತೆ ಕಾಣುತ್ತದೆ. ಆದರೂ ಅವನ ಕಾವ್ಯ ನವ್ಯವಾಗಿದೆ. ಇದಕ್ಕೆ ಕಾರಣ ಹೊಸ ಸಂದರ್ಭಗಳ ಸೃಷ್ಟಿ ಮತ್ತು ಕಥೆ ಹೇಳುವ ಹೊಸ ರೀತಿ" (ಡಿ. ಎಲ್. ನರಸಿಂಹಾಚಾರ್: ಹಂಪೆಯ ಹರಿಹರ, ೧೯೪೮, ಪು. ೯, ೧೦) ನೀಲಕಂಠ ನಾಗನಾಥಾ ಚಾರ್ಯ ಸಂಸ್ಕೃತದಲ್ಲಿ ಬರೆದಿರುವ 'ವೀರ ಮಾಹೇಶ್ವರಾಚಾರ ಸಂಗ್ರಹ'ವೆಂಬ ದೊಡ್ಡ

ಗ್ರಂಥದಲ್ಲಿ "ದೇಶ ಭಾಷೆಯಲ್ಲಿ ಪುರಾತನರ ಚಾರಿತ್ರ್ಯವನ್ನು ಕೃತಿ ಮಾಡಿದ ಹಂಪೆಯ ಹರೀಶ್ವರನಿಗೆ ನಮಿಸುತ್ತೇನೆ" ಎಂದಿದ್ದಾನೆ. ಶಿವಭಕ್ತರ ರಗಳೆಗಳ ಕರ್ತೃವಾಗಿ ಹರಿಹರನ ಪ್ರಶಸ್ತಿ ಸಂಸ್ಕೃತ ಸಾಹಿತ್ಯದಲ್ಲಿ ಹೀಗೆ ಕೀರ್ತಿತವಾಗಿದೆಯೆನ್ನಬಹುದು.

ಕೆರೆಯ ಪದ್ಮರಸನು (ಸು. ೧೨೦೦) ಕನ್ನಡದಲ್ಲಿ 'ದೀಕ್ಷಾಬೋಧೆ'ಯನ್ನೂ ಸಂಸ್ಕೃತದಲ್ಲಿ 'ಸಾನಂದ ಚರಿತೆ'ಯನ್ನೂ ಬರೆದಿದ್ದು, ಸಂಸ್ಕೃತ ಕೃತಿ ದೊರೆತಿಲ್ಲ. 'ದೀಕ್ಷಾ ಬೋಧೆ'ಯಲ್ಲಿ ಬಹುಸಂಖ್ಯೆಯಲ್ಲಿ ಸಂಸ್ಕೃತ ಶ್ಲೋಕಗಳು ಸಾಕ್ಷಿಗಳೆಂಬುದಾಗಿ ಉದ್ಧೃತ ವಾಗಿವೆ. ಇವನ ಮಗ ಕುಮಾರ ಪದ್ಮರಸನು (ಸು. ೧೨೬೦) ಕನ್ನಡ 'ಸಾನಂದ ಚರಿತ್ರೆ'ಯ ಕರ್ತೃವಾಗಿದ್ದಾನೆ. "ಹರಚರಮೂರ್ಪರ ಪರಮ। ವಿರಚಿತ ಶ್ಲೋಕ ಬಂ। ಧುರ ದೇವ ಭಾಷೆಯಂ ಕನ್ನಡಿಸಿದೆಂ॥" (೧-೧೦) ಎಂಬುದಾಗಿ ತಿಳಿಸಿದ್ದಾನೆ. ಈ ಕೃತಿಗೆ ಪ್ರೇರಣೆ ಮತ್ತು ಆಕರ ತಂದೆ ಕೆರೆಯ ಪದ್ಮರಸನ ಸಂಸ್ಕೃತ 'ಸಾನಂದ ಚರಿತೆ'ಯೇ ಸ್ಕಾಂದ ಪುರಾಣದಲ್ಲಿಯ ನಂದಿ ಸನತ್ಕುಮಾರನಿಗೆ ನಿರೂಪಿಸಿದ ಪೂರ್ಣವಿತ್ತ ಋಷಿಯ ಪುತ್ರ ಸಾನಂದನ ಚರಿತೆಯೇ ಕೃತಿಯ ವಿಷಯ.

ಹರಿಹರನ ಶಿಷ್ಯ ರಾಘವಾಂಕನು 'ಹರಿಶ್ಚಂದ್ರ ಚಾರಿತ್ರ್ಯವನ್ನು (ಸು. ೧೨೩೦) ರಚಿಸಿದ್ದಾನೆ: ಇತರ ಕೆಲವು ಕೃತಿಗಳೂ ಇವೆ. ಈ ಕೃತಿಯ ಕಥಾವಸ್ತು ದೇವೀ ಭಾಗವತ, ಮಾರ್ಕಂಡೇಯ ಪುರಾಣ ಮೊದಲಾದ ಪುರಾಣಗಳಲ್ಲಿಯೂ ರಾಮಾಯಣ ಭಾರತಾದಿ ಇತಿಹಾಸ ಗ್ರಂಥಗಳಲ್ಲಿಯೂ ಐತರೇಯ ಬ್ರಾಹ್ಮಣ ಮುಂತಾದ ವೈದಿಕ ಗ್ರಂಥ ಗಳಲ್ಲಿಯೂ ಉಪಾಖ್ಯಾನ ರೂಪದಲ್ಲಿ ಕಂಡುಬರುತ್ತದೆ. ಆರ್ಯಕ್ಷೇಮೀಶ್ವರನ 'ಚಂಡ ಕೌಶಿಕ' ನಾಟಕದಲ್ಲಿಯೂ ಈ ಕಥೆ ಬರುತ್ತದೆ. ಈ ಹಲವು ಗ್ರಂಥಗಳಲ್ಲಿ ಕಂಡುಬರುವ ಕಥಾ ರೀತಿಗೂ ರಾಘವಾಂಕನ ಗ್ರಂಥದಲ್ಲಿ ಕಂಡುಬರುವ ಕಥಾ ರೀತಿಗೂ ಹೋಲಿಕೆ ವ್ಯತ್ಯಾಸಗಳುಂಟು. "ಹರಿಶ್ಚಂದ್ರ ಕಾವ್ಯಕ್ಕೆ ಯಾವುದೊಂದು ಪುರಾಣವೂ ಸಂಪೂರ್ಣ ವಾಗಿ ಆಧಾರವಾಗಲಾರದು. ರಾಘವಾಂಕನು ನಾಟಕೀಯತೆಯ ಅನುಕರಣವನ್ನು ಚಂಡ ಕೌಶಿಕ ನಾಟಕದಿಂದಲೂ ವಿಶ್ವಾಮಿತ್ರನು ಹರಿಶ್ಚಂದ್ರನಿಗೆ ಕೊಟ್ಟ ಕಷ್ಟ ಪರಂಪರೆಗಳನ್ನೂ ಹಾಗೆ ಕೊಟ್ಟದ್ದರಿಂದಲೇ ಹರಿಶ್ಚಂದ್ರನ ಸತ್ಯಸಂಧತೆ ಪ್ರಕಾಶನಕ್ಕೆ ಬಂದಿತೆಂಬ ಭಾವವನ್ನು ಮಾರ್ಕಂಡೇಯ ಪುರಾಣ ದೇವೀ ಭಾಗವತಗಳಿಂದಲೂ ದೇವೇಂದ್ರನ ಒಡ್ಡೋಲಗ, ವಸಿಷ್ಠ ವಿಶ್ವಾಮಿತ್ರರಿಗೆ ನಡೆದ ಸಂವಾದ ಪ್ರತಿಜ್ಞೆ ಮತ್ತು ಹರಿಶ್ಚಂದ್ರ ಕಾವ್ಯದಲ್ಲಿ (ಸ್ಥಲ ೨ ಪದ್ಯ ೧೮-೧೯ ಮತ್ತು ಸ್ಥಲ ೧೨, ಪದ್ಯ ೮, ೫೨, ೨೩) ಆನುಷಂಗಿಕವಾಗಿ ಬರುವ ಕಥಾ ಭಾಗ ಇವುಗಳನ್ನೆಲ್ಲಾ ದೇವಿ ಭಾಗವತದಿಂದಲೂ ತೆಗೆದುಕೊಂಡಿರಬಹುದೆಂದು ಊಹಿಸ ಬಹುದು (ಸಂ. ಎಸ್. ಬಸವಾರಾಧ್ಯ, ಎಸ್. ಬಸಪ್ಪ: 'ಹರಿಶ್ಚಂದ್ರ ಕಾವ್ಯಂ', ಪೀಠಿಕೆ ಪು. ೩೦) ರಾಘವಾಂಕನ 'ವೀರೇಶ ಚರಿತೆ' ವೀರಭದ್ರನು ದಕ್ಷಯಜ್ಞವನ್ನು ಧ್ವಂಸ ಮಾಡಿದ ಕಥೆಯನ್ನು ಹೇಳುತ್ತದೆ. ಕಥಾ ರೀತಿಯಲ್ಲಿ ಹರಿಹರನ 'ವೀರಭದ್ರ ರಗಳೆ'ಯ

ಪ್ರಭಾವವುಂಟು. ಕೃತಿ ವಸ್ತುವೇನೋ ಭಾರತ ಭಾಗವತಗಳಲ್ಲಿಯೂ ವಾಯು ಮತ್ತು ಶಿವ ಪುರಾಣಗಳಲ್ಲಿಯೂ ಬರುವಂತಹುದಾಗಿದೆ.

ಗಣ್ಯರಾದ ವೀರಶೈವ ಪುರಾಣ ಕವಿಗಳಲ್ಲಿ ಸೇರುವ ಪಾಲ್ಕುರಿಕೆ ಸೋಮನಾಥನು (ಸು. ೧೩೦೫) ಸಂಸ್ಕೃತ, ಕನ್ನಡ, ತೆಲುಗು ಮೂರು ಭಾಷೆಗಳಲ್ಲಿಯೂ ಕೃತಿ ರಚನೆ ಮಾಡಿದ್ದಾನೆ. ಸಂಸ್ಕೃತದಲ್ಲಿ 'ಬಸವ ರಾಜೀಯ', 'ಅನ್ಯವಾದ ಕೋಲಾಹಲ'ಗಳಿವೆ. ತೆಲುಗಿನಲ್ಲಿ 'ಆರಾಧ್ಯ ಚರಿತ್ರ', 'ಬಸವ ಪುರಾಣ'ಗಳಿವೆ. 'ವೃಷಾಧಿಪ ಶತಕ'ವೆಂಬ ಈತನ ಇನ್ನೊಂದು ತೆಲುಗು ಗ್ರಂಥವು ಸಂಸ್ಕೃತ ದ್ರಾವಿಡ ಮಣಿ ಪ್ರವಾಳ ಕರ್ಣಾಟ ಮಹಾರಾಷ್ಟ್ರಗಳಲ್ಲಿ ಬರೆದಿರುವ ಪದ್ಯಗಳನ್ನು ಒಳಗೊಂಡಿದೆಯೆಂಬುದಾಗಿ ಕವಿ ಚರಿತೆ ಕಾರರು ತಿಳಿಸಿದ್ದಾರೆ. 'ಶೀಲ ಸಂಪಾದನೆ'ಯೆಂಬ ವಚನ ಗ್ರಂಥದಲ್ಲಿ ಅಲ್ಲಲ್ಲಿ ಸಂಸ್ಕೃತ ಶ್ಲೋಕಗಳೂ ಇವೆ. ಗುರು ರಾಜನ 'ಪಂಡಿತ ಚರಿತ್ರ' ಈ ಕವಿಯ 'ಆರಾಧ್ಯ ಚಾರಿತ್ರ'ದ ಸಂಸ್ಕೃತ ಪರಿವರ್ತನೆಯೆಂದು ತಿಳಿಯುವುದು.

ಪದ್ಮಣಾಂಕನ (ಸು. ೧೩೮೫) 'ಪದ್ಮರಾಜ ಪುರಾಣ'ದಲ್ಲಿ ಅಲ್ಲಲ್ಲಿ "ಶ್ರುತಿ ಸ್ಮೃತಿಗಳ ವಾಕ್ಯಗಳನ್ನು ಪದ್ಯಗಳಲ್ಲಿ ಹೊಂದಿಕೆಯಾಗುವಂತೆ ಸೇರಿಸಿ ಬರೆದಿದ್ದಾನೆ." ಅಲ್ಲದೆ ಈತನಿಗೆ ಸಂಸ್ಕೃತದ ಬಳಕೆಯಲ್ಲಿ ವಿಶೇಷವಾದ ವ್ಯಾಮೋಹವೂ ಪ್ರೌಢಿಮೆಯೂ ಇದ್ದಿತೆಂದು ಹೇಳಲವಕಾಶವಿದೆ. ಶತಕ ತ್ರಯದ ಕರ್ತೃ ಮೊಗ್ಗೆಯ ಮಾಯಿದೇವನು (ಸು. ೧೪೩೦) 'ಅನುಭವ ಸೂತ್ರ'ವೆಂಬ ಸಂಸ್ಕೃತ ಗ್ರಂಥವನ್ನು ರಚಿಸಿದ್ದಾನೆ. "ಮಲ್ಲಿಕಾರ್ಜುನ ಕವಿ ವಲ್ಲಭ ಸಂಸ್ಕೃತ| ದಲ್ಲಿ ಸಮರ್ಥನು ನೀನು|| ಇಲ್ಲಿ ಸಕಲ ಭಕ್ತ ಜನರು ಕೇಳ್ವಂದದೆ| ಸೊಲ್ಲಿಸು ಕನ್ನಡ ಭಾಷೆಯಲಿ||" ಎಂಬುದಾಗಿ ನಂಜೇಶ್ವರನೆಂಬವನು ಕೋರಲಾಗಿ, ಮಲ್ಲಿಕಾರ್ಜುನನು 'ಶ್ವೇತನ ಸಾಂಗತ್ಯ'ವನ್ನು ರಚಿಸಿದನು. ಇದರಲ್ಲಿ "ಪ್ರೇತ ಪತಿಯು ಸೊಕ್ಕನು ಮುಱಿದ ಭೂತನಾಥನ ಲೀಲೆ"ಯನ್ನು ಹೇಳಿದೆ.

ಚತುರ್ಮುಖ ಬೊಮ್ಮರಸನು (ಸು. ೧೫೦೦) ತನ್ನ 'ರೇವಣ ಸಿದ್ಧೇಶ್ವರ ಪುರಾಣ'ವೆಂಬ ವಾರ್ಧಕ ಷಟ್ಪದಿಯ ಕಾವ್ಯದ ರಚನೆಗೆ ಈಶಾನ್ಯ ಶಿವ ಗುರು ಸಂಸ್ಕೃತದಲ್ಲಿಯೂ ಹರೀಶ್ವರನು ರಗಳೆಯ ರೂಪವಾಗಿಯೂ ಬರೆದ ರೇವಣ ಸಿದ್ಧ ಚರಿತೆಯ ಉಭಯ ಮತವನ್ನರಿದು ಪ್ರವೃತ್ತನಾದುದಾಗಿ ಹೇಳಿಕೊಂಡಿದ್ದಾನೆ.

ಸುರಂಗ ಕವಿ (ಸು. ೧೫೦೦) 'ತ್ರಿಷಷ್ಟಿ ಪುರಾತನ ಚರಿತ್ರೆ'ಯೆಂಬ ಚಂಪುವನ್ನು ರಚಿಸಿ, ಇದರಲ್ಲಿ ಉಪಮನ್ಯು ಮುನಿ ಕಣಾದನಿಗೆ ಹೇಳಿದ ಚರಿತೆಯನ್ನು ಲೈಂಗ ಪುರಾಣ ದಲ್ಲಿದ್ದಂತೆ ಬರೆದುದಾಗಿ ಹೇಳಿಕೊಂಡಿದ್ದಾನೆ. ಹೀಗೆಯೇ ಬ್ರಹ್ಮಾಂಡ ಮತ್ತು ಸ್ಕಾಂದ ಪುರಾಣಗಳಲ್ಲಿ ಉಕ್ತವಾದ ದೇವಾಂಗ ಋಷಿಯ ಚರಿತೆಯನ್ನು 'ದೇವಾಂಗ ಪುರಾಣ'ವೆಂಬ ಹೆಸರಿನಲ್ಲಿ ಭಾಮಿನೀ ಷಟ್ಪದಿಯ ರೂಪವಾಗಿ ಸಿದ್ಧಮಲ್ಲಾರ್ಯನೆಂಬವನು

(ಸು. ೧೫೦೦) ರಚಿಸಿದ್ದಾನೆ. ಇದೇ ವಸ್ತುವನ್ನು ಕುರಿತು ಇನ್ನೊಂದು 'ದೇವಾಂಗ ಪುರಾಣ'ವನ್ನು ಈಚೆಗೆ ಸಾಂಗತ್ಯದಲ್ಲಿ ದೇವನೆಂಬುವನು (ಸು. ೧೬೨೫) ಬರೆದಿದ್ದಾನೆ. "ಬ್ರಹ್ಮಾಂಡ ಪುರಾಣದೊಳ್ ವಸ್ತ್ರದ ನಿರ್ಮಿಸೆ ಪಡೆದ ದೇವಾಂಗ ಚಾರಿತ್ರದ ಪೇಳ್ವೆನು" ಎಂದು ಮೂಲವನ್ನು ಸೂಚಿಸಿಯೂ ಇದ್ದಾನೆ.

ಗುಬ್ಬಿ ಮಲ್ಲಣಾರ್ಯನು (೧೫೧೩) ರಚಿಸಿದ 'ವೀರಶೈವಾಮೃತ ಪುರಾಣ'ವೆಂಬ ವಿಸ್ತೃತ ವಾರ್ಧಕ ಷಟ್ಪದಿಯ ಕಾವ್ಯದಲ್ಲಿ ವೇದಾಗಮ ಪುರಾಣೇತಿಹಾಸ ಸ್ಮೃತಿಗಳಿಂದ ವಾಕ್ಯಗಳು ಸಾಕ್ಷಿಗಳಾಗಿ ಉದ್ಧೃತವಾಗಿವೆ. ಈ ಗ್ರಂಥಕ್ಕೂ ನೀಲಕಂಠ ನಾಗ ನಾಥಾ ಚಾರ್ಯನು ಸಂಸ್ಕೃತದಲ್ಲಿ ಬರೆದಿರುವ 'ವೀರಮಾಹೇಶ್ವರಾಚಾರ ಸಂಗ್ರಹ' ಕೃತಿಗೂ ಸಂಗತಿ ಗಳಲ್ಲಿ ಸಾದೃಶ್ಯಗಳುಂಟು. ಈ ಕವಿಯು ವಾತೂಲಾಗಮದ ಟೀಕೆಯನ್ನೂ ಬರೆದಿದ್ದಾನೆ. ಸತ್ಯೇಂದ್ರ ಚೋಳನ ಕಥೆಯಾಗಿರುವ 'ಭಾವ ಚಿಂತಾರತ್ನ' ಈತನ ಇನ್ನೊಂದು ಕೃತಿ.

ವೀರಭದ್ರ ರಾಜನು (ಸು. ೧೫೩೦) ಬರೆದಿರುವ 'ವೀರಭದ್ರ ವಿಜಯ' ದಕ್ಷಾಧ್ವರ ಧ್ವಂಸದ ಕಥೆಯನ್ನು ಕುರಿತಿದೆ. ಚೆನ್ನಣ್ಣನ (ಸು. ೧೬೫೦) 'ವೀರೇಶ್ವರ ಚರಿತೆ'ಯ ವಸ್ತುವೂ ಇದೇ ಆಗಿದೆ. ದಾನಪ್ಪಾರ್ಯನ (ಸು. ೧೫೫೦) 'ಶಿವ ಸಂವಾದಿನಿ' ಶಿವ ಭಕ್ತಿಯ ಅನೇಕ ಕಥೆಗಳ ಸಂಗ್ರಹವಾದ ಪುರಾಣ, ಸಂಸ್ಕೃತ ಭಿಕ್ಷಾಟನ ಕಾವ್ಯದ ಆಧಾರದ ಮೇಲೆ ಗುರುಲಿಂಗ ವಿಭು (ಸು. ೧೫೫೦) ಕನ್ನಡದಲ್ಲಿ 'ಭಿಕ್ಷಾಟನ ಚರಿತೆ'ಯನ್ನು ರಚಿಸಿದ್ದಾನೆ. "ಧರೆಯೊಳಗೆ ಗೋಪಾಲಕೃಷ್ಣ ಹದಿನಾರು ಸಾವಿರ ಗೋಪಿಯರೊಳಿಹುದು ನೋಡಬೇಕೆಂದು ಪುರಹರನು ಭಿಕ್ಷುಕನಾಗಿ ದ್ವಾರಾವತಿಗೆ ಬಂದ ಪರಿ" ಇಲ್ಲಿಯ ಕಥೆ. ಚೋಳ ದೊರೆಯ ಔದಾರ್ಯವನ್ನು ಪರೀಕ್ಷಿಸಲು ಭಿಕ್ಷಾರ್ಥಿಯಾಗಿ ಹೋದ ಶಿವನ ಕಥೆ ವಸ್ತುವಾದ ಸಂಸ್ಕೃತ 'ಭಿಕ್ಷಾಟನ ಕಾವ್ಯ' (ಸು. ೧೬ ನೆಯ ಶ.) ದಿಂದ ಬೇರೆಯಾದೊಂದು ಸಂಸ್ಕೃತ ಮೂಲ ಕನ್ನಡ ಕೃತಿಗೆ ಇದ್ದಿರಬಹುದೇನೋ ತಿಳಿಯದು.

ತಿರಮಲ ಭಟ್ಟನು (ಸು. ೧೬೦೦) 'ಪದ್ಮ ಪುರಾಣ'ದ ಉತ್ತರ ಖಂಡದಲ್ಲಿರುವ ಶಿವ ಗೀತೆಯ ಕನ್ನಡ ಭಾಷಾಂತರವನ್ನು ಅದೇ ಹೆಸರಿನಲ್ಲಿ ತಂದಿದ್ದಾನೆ. ಇದಕ್ಕೆ ಆತನು ಒಂದು ತೆಲುಗು ಟೀಕೆಯನ್ನೂ ನೋಡಿ ಕೊಂಡ ಹಾಗೆ ತೋರುತ್ತದೆ. ಗೋವಿಂದ ಕವಿಯು (ಸು. ೧೬೦೦) 'ನಂದಿ ಮಾಹಾತ್ಮ್ಯೆ'ವನ್ನು ರಚಿಸಿದ್ದು, ಬ್ರಹ್ಮಾಂಡ ಪುರಾಣದಲ್ಲಿ ವ್ಯಾಸ ಮುನಿ ಹೇಳಿದ ನಂದಿಯ ಮಾಹಾತ್ಮ್ಯೆಯನ್ನು ವರ್ಣಿಸಿರುವುದನ್ನು ಆಧರಿಸಿ ತನ್ನ ರಚನೆಯನ್ನು ಸಿದ್ಧಪಡಿಸಿರುವಂತೆ ತಿಳಿಯುವುದು. ಲಿಂಗ ಮಹಾಪುರಾಣ ಮೊದಲಾದ ಮೂಲಗಳಲ್ಲಿಯೂ ಈ ಕಥೆಯ ಕೆಲವಂಶಗಳಿವೆ.

ಉಭಯ ಕವಿತಾ ವಿಶಾರದನಾದ ಷಡಕ್ಷರ ದೇವನು (೧೬೫೫) ಸಂಸ್ಕೃತ ಕನ್ನಡ ಗಳೆರಡರಲ್ಲಿಯೂ ಸಮಾನವಾಗಿ ಭಾಷಾ ಪ್ರೌಢಿಮೆ ಪಡೆದಿದ್ದವನು. ಪಾಲ್ಕುರಿಕೆ ಸೋಮನಾಥನ ತೆಲುಗು 'ಬಸವ ಪುರಾಣ' ಭೀಮ ಕವಿಯಿಂದ ಕನ್ನಡಕ್ಕೆ ಹಾಗೂ ಶಂಕರ

ಕವಿಯಿಂದ ಸಂಸ್ಕೃತಕ್ಕೆ ಅನುವಾದವಾಗಿದ್ದು, ಆ ಸಂಪ್ರದಾಯದ ಕಥೆಯನ್ನೇ ಷಡಕ್ಷರಿ ತನ್ನ 'ವೃಷಭೇಂದ್ರ ವಿಜಯ'ದಲ್ಲಿ ಅನುಸರಿಸಿರುವನೆಂದು ತಿಳಿಯುವುದು. 'ಶಬರ ಶಂಕರ ವಿಲಾಸ' ಮಹಾಭಾರತದ ಉಪಾಖ್ಯಾನವಾಗಿದ್ದು, ಶೈವ ಪಾರಮ್ಯ ಶೈವಾನುಗ್ರಹಗಳೇ ಕೃತಿಯ ಧ್ಯೇಯವಾಗಿದೆ. ಈತನು 'ಕವಿ ಕರ್ಣ ರಸಾಯನ'ವೆಂಬ ಕೃತಿಯನ್ನು ಸಂಸ್ಕೃತದಲ್ಲಿಯೇ ರಚಿಸಿದ್ದಾನೆ. ಪ್ರೌಢವಾದ ಚಂಪೂ ಶೈಲಿಯನ್ನು ಪುನರುಜ್ಜೀವಿಸಿದ ಹೊಸ ಕಾಲದ ಕವಿಗಳಲ್ಲಿ ಷಡಕ್ಷರಿ ಗಣ್ಯನು.

ಕನ್ನಡದಲ್ಲಿ 'ಶಂಕರ ಸಂಹಿತೆ'ಯನ್ನು ಬರೆದ ಮುಮ್ಮಡಿ ತಮ್ಮ (ಸು. ೧೬೬೫) ಸಂಸ್ಕೃತದಲ್ಲಿ 'ಕೌಮುದೀ ವ್ಯಾಖ್ಯಾನ' ಮತ್ತು 'ರಸಿಕ ಮನೋರಂಜನ' ಎಂಬೆರಡು ಗ್ರಂಥಗಳನ್ನೂ ಬರೆದಿದ್ದಾನೆ. ಕರ್ಣಾಟಕಾಂಧ್ರ ಸಂಸ್ಕೃತ ಕವಿತೆ ತನ್ನಲ್ಲಿ ನೆಲೆಗೊಂಡಿರುವುದಾಗಿ ತಾನೇ ಹೇಳಿಕೊಂಡಿದ್ದಾನೆ. ಕೃತಿಯಲ್ಲಿ ಕುಮಾರ ಜನನ, ತಾರಕಾಸುರ ವಧೆ, ದಕ್ಷಾಧ್ವರ ಧ್ವಂಸ ಮುಂತಾದ ಪೌರಾಣಿಕ ಸಂದರ್ಭಗಳು ಪ್ರತಿಪಾದಿತವಾಗಿವೆ. ಮತ್ಸ್ಯ ಸ್ಕಾಂದ ಮೊದಲಾದ ಪುರಾಣಗಳಲ್ಲಿರುವ ವಿಷಯವೇ ಇದು.

ಸಂಪಾದನೆಯ ಪರ್ವತೇಶ್ವರನು (೧೬೯೮) 'ಚತುರಾಚಾರ್ಯ ಪುರಾಣ'ವೆಂಬ ಗ್ರಂಥದ ಕರ್ತೃವಾಗಿದ್ದು, ಇಲ್ಲಿ ವೇದೋಪನಿಷತ್ತುಗಳ, ಪುರಾಣಾಗಮಗಳ ಹಲವು ವಿಷಯಗಳು ಸಂಗ್ರಹಿತವಾಗಿವೆ. ಕವಿ ಚರಿತೆಕಾರರು "ಇದರಲ್ಲಿ ವೇದ, ಉಪನಿಷತ್ತು, ಕಾಮಿಕಾಗಮ, ವೀರಾಗಮ, ವಾತೂಲ ಪಾರಮೇಶ್ವರ ತಂತ್ರಗಳು, ಲೈಂಗ ಶೈವಗಳು, ಪಾದ್ಮೋತ್ತರ, ಸ್ಕಾಂದ, ಷಟ್ಸ್ಥಲ ಜ್ಞಾನ ದೀಪಿಕೆ, ಗುರು ಬಸವೇಶ್ವರನ ಷಟ್ಕಾವ್ಯ, ಸಿದ್ಧಾಂತ ಶಿಖಾಮಣಿ, ನಿಜಗುಣನ ವಿವೇಕ ಚಿಂತಾಮಣಿ ಇವುಗಳಿಂದ ಹಲವು ವಿಷಯಗಳು ಸಂಗ್ರಹಿತವಾಗಿವೆ" ಎಂಬುದಾಗಿ ಬರೆದಿದ್ದಾರೆ. ಬಸವ ರಾಜೇಂದ್ರನು (ಸು. ೧೭೦೦) ಸ್ಕಾಂದ ಪುರಾಣದ ಶಂಕರ ಸಂಹಿತೆಯಲ್ಲಿ ಶಿವ ರಹಸ್ಯ ಕಾಂಡದೊಳಗಿನ ಉಪದೇಶ ಕಾಂಡದಲ್ಲಿ ಉಕ್ತವಾದ ವಸ್ತುವಿನಿಂದ 'ಮಹಾ ವಿಭೂತಿ ಮಹಿಮೆ'ಯೆಂಬ ೨೨ ಅಧ್ಯಾಯಗಳ ಗದ್ಯ ಗ್ರಂಥ ಬರೆದಿದ್ದಾನೆ.

ಪರಮ ಭಕ್ತನ (ಸು. ೧೭೦೦) 'ಘೋರಾಸುರ ಯುದ್ಧ'ವೆಂಬ ವಾರ್ಧಕ ಷಟ್ಪದೀ ಕಾವ್ಯವು ಕೈಲಾಸದಲ್ಲಿ ಶಿವನ ಆಜ್ಞಾನುಸಾರವಾಗಿ ನಿರಂಜನ ಮುನಿ ಪಾರ್ವತಿಗೆ ನಿರೂಪಿಸಿದ, ಇಂದ್ರ ವೈರಿ ತ್ವಷ್ಟೃವಿನ ಪುತ್ರನಾದ ಘೋರಾಸುರನನ್ನು ಶಿವಭಕ್ತನೊಬ್ಬನು ಜಯಿಸಿದ ವೃತ್ತಾಂತವನ್ನು ವಸ್ತುವನ್ನಾಗಿ ಪಡೆದಿದೆ. ಪುರಾಣ ಮೂಲ ಯಾವುದೆಂದು ತಿಳಿಯದು. ವೈದ್ಯೇಶ್ವರ ಭಕ್ತನೆಂಬುದಾಗಿ ಹೆಸರನ್ನು ಊಹಿಸಿರುವ ಕವಿ (೧೭೧೫) ಸ್ಕಾಂದ ಪುರಾಣದೊಳಗಿನ ಸೇತು ಮಾಹಾತ್ಮ್ಯವನ್ನು ಭಾಮಿನೀ ಷಟ್ಪದಿಯಲ್ಲಿ ಕೃತಿಗೊಳಿಸಿದ್ದಾನೆ. ಇಮ್ಮಡಿ ಮುರಿಗೆಯ ಗುರುಸಿದ್ಧನ (೧೭೩೦) 'ಹಾಲಾಸ್ಯ ಪುರಾಣ' ಸ್ಕಾಂದ ಪುರಾಣದೊಳಗೆ ಬರುವ ಮಧುರೆಯ ಮೀನಾಕ್ಷಿ ಸುಂದರೇಶ್ವರನ ೬೪ ಲೀಲೆಗಳ

ಕಥನವನ್ನು ಆಶ್ರಯಿಸಿ, ಆ ಲೀಲೆಗಳನ್ನು ಕನ್ನಡದಲ್ಲಿ ಚಂಪೂ ರೂಪವಾಗಿಯೂ ನಾನಾ ಛಂದೋಬಂಧಗಳಲ್ಲಿಯೂ ನಿರೂಪಿಸಿರುವ ಕೃತಿ. ಇದೇ ವಸ್ತು ಈ ಮೊದಲು ಸೋಮಯ ಸದಾಶಿವ ರಾಜನಿಂದ (೧೭೭೪–೯೭) 'ವರ್ಣಕ' ರೂಪವಾಗಿ ನಿರೂಪಣೆ ಗೊಂಡಿತ್ತು; ಅನಂತರದಲ್ಲಿ ವೆಂಕಟೇಶನಿಂದ (ಸು. ೧೭೪೦) ಚಂಪೂರೂಪದಲ್ಲಿಯೂ ಕಳಲೆ ನಂಜ ರಾಜನಿಂದ (೧೭೪೦) ಮತ್ತು ಮುಮ್ಮಡಿ ಕೃಷ್ಣರಾಜರಿಂದ (೧೭೯೪–೧೮೬೮) ಗದ್ಯ ರೂಪವಾಗಿಯೂ ನಿರೂಪಣೆಗೊಂಡಿತು. ಅನಂತರದ ಈ ರಚನೆಗಳು 'ಹಾಲಾಸ್ಯ ಮಾಹಾತ್ಮ್ಯೆ'ವೆನಿಸಿ ಪ್ರಸಿದ್ಧಗೊಂಡವು. (ವಿವರಗಳಿಗೆ: ಸಂ. ಜಿ. ಜಿ. ಮಂಜುನಾಥನ್, 'ಹಾಲಾಸ್ಯ ಪುರಾಣಂ') ಮಹಾದೇವನು (ಸು. ೧೭೩೫) "ಅಷ್ಟಾದಶ ಪುರಾಣಗಳಿಗೆ ಮೊದಲೆನಿಸಿದ ಬ್ರಹ್ಮೋತ್ತರ ಪುರಾಣ"ದ ಕನ್ನಡ ಭಾಷಾಂತರವನ್ನು 'ಬ್ರಹ್ಮೋತ್ತರ ಖಂಡ'ವೆಂಬ ಹೆಸರಿನಿಂದ ಭಾಮಿನೀ ಷಟ್ಪದಿ ರೂಪವಾಗಿ ಹೊರ ತಂದಿದ್ದಾನೆ.

ಕಳಲೆ ನಂಜರಾಜನು (ಸು. ೧೭೪೦) ಕೆಲವು ಶೈವ ಪುರಾಣಗಳ ಮಾಹಾತ್ಮ್ಯೆ ಗಳಿಗೆ ಕನ್ನಡ ಟೀಕೆಗಳನ್ನು ಬರೆದಿದ್ದಾನೆ. ಸ್ಕಾಂದ ಪುರಾಣದೊಳಗಿನ ವಾದ 'ಹಾಲಾಸ್ಯ ಮಾಹಾತ್ಮ್ಯೆ', 'ಭದ್ರಗಿರಿ ಮಾಹಾತ್ಮ್ಯೆ', 'ಭಕ್ತ ವಿಲಾಸ ದರ್ಪಣ', 'ಸೇತು ಮಹಿಮಾ ದರ್ಶ', 'ಶಿವ ಧರ್ಮೋತ್ತರ', 'ವಿಘ್ನೇಶ್ವರ ವ್ರತ ಕಲ್ಪ' ಇವು ಟೀಕೆಗಳು, ಭಾಷಾಂತರಗಳು; 'ಹರದತ್ತಾಚಾರ್ಯ ಮಾಹಾತ್ಮ್ಯೆ' ಭವಿಷ್ಯೋತ್ತರ ಪುರಾಣೋಕ್ತ ವಾದ ಹರದತ್ತಾಚಾರ್ಯ ಚರಿತ್ರದ ಭಾಷಾಂತರ: 'ಶಿವಗೀತೆ' ಪದ್ಮ ಪುರಾಣಾಂತರ್ಗತ ವಾದ ಶಿವಗೀತೆಯ ಭಾಷಾಂತರ. 'ಕಕುದ್ಗಿರಿ ಮಾಹಾತ್ಮ್ಯೆ' ಶಿವಗಂಗೆಯ ಮಹಿಮೆ ಯನ್ನೂ 'ಗರಳ ಪುರೀ ಮಹಿಮಾದರ್ಶ' ನಂಜನಗೂಡಿನ ಮಹಿಮೆಯನ್ನೂ ನಿರೂಪಿಸು ತ್ತವೆ. ಇದೇ ರೀತಿಯಲ್ಲಿ 'ಕಾಶೀ ಮಹಿಮಾರ್ಥ ದರ್ಪಣ', 'ಕಾಶೀಕಾಂಡ', 'ಮಾರ್ಕಂಡೇಯ ಪುರಾಣ', 'ಶೈವ ಧರ್ಮ' ಇವು ಸಹ ಪ್ರಾಯಃ ಆಯಾ ಹೆಸರಿನ ಸಂಸ್ಕೃತ ಗ್ರಂಥಗಳ ಭಾಷಾಂತರಗಳೋ, ಟೀಕೆಗಳೋ ಇರುತ್ತವೆ.

ಗೋಪಾಲ ರಾಜನೆಂಬ (ಸು. ೧೭೮೦) ಕವಿ ಭವಿಷ್ಯೋತ್ತರ ಪುರಾಣೋಕ್ತವಾದ 'ಕಮಲಾಚಲ ಮಾಹಾತ್ಮ್ಯೆ'ವನ್ನು ಗದ್ಯರೂಪವಾಗಿ ೯ ಅಧ್ಯಾಯಗಳಲ್ಲಿ ರಚಿಸಿದ್ದಾನೆ. ಇದು ಚಿಕ್ಕುಪಾಧ್ಯಾಯ ಕವಿಯ ಚಂಪೂ ಕೃತಿಯ ಅನಂತರದಲ್ಲಿ ಬಂದ ಹಿಮವದ್ಗೋಪಾಲ ಸ್ವಾಮಿ ಬೆಟ್ಟದ ಮಹಿಮೆ ಕುರಿತ ಎರಡನೆಯ ಕೃತಿ. ಶಾಲ್ಯದ ಕೃಷ್ಣರಾಜನ (೧೭೪೮) 'ಧರ್ಮ ಗುಪ್ತ ಚರಿತೆ' ಸ್ಕಾಂದ ಪುರಾಣದ, ಬ್ರಹ್ಮೋತ್ತರ ಕಾಂಡದಲ್ಲಿಯ, ಶನಿ ಪ್ರಶಂಸಾವಸರದಲ್ಲಿ ಉಕ್ತವಾದ ಧರ್ಮ ಗುಪ್ತ ರಾಯನ ಕಥೆಯ ಕನ್ನಡ ರೂಪ. ಇದು ಯಕ್ಷಗಾನ. ಈ ಮೊದಲೇ ಅಜ್ಞಾತ ಕರ್ತೃಕವಾದ 'ಧರ್ಮ ಗುಪ್ತ ಚರಿತೆ' (ಸು. ೧೭೦೦) ಯೊಂದು ರಚಿತವಾಗಿದ್ದಂತೆ ಗುರುತಿಸಲಾಗಿದೆ.

ಬಬ್ಬೂರು ರಂಗ (ಸು. ೧೭೫೦) ರಚಿತವಾದ 'ಅಂಬಿಕಾ ವಿಜಯ'ದಲ್ಲಿ ಆದಿಶಕ್ತಿ

ಯಾದ ದೇವಿ ರಕ್ತ ಬೀಜಾಸುರನನ್ನು ವಧಿಸಿದ ಕಥೆಯೂ ಮಾರ್ಕಂಡೇಯ ಚರಿತವೂ ಬಂದಿವೆ. ಕಥಾವಸ್ತು ದೇವೀ ಭಾಗವತ ಹಾಗೂ ಮಾರ್ಕಂಡೇಯ ಪುರಾಣಗಳೊಳಗಿನದು. ಸೂತನು ಪರೀಕ್ಷಿತನಿಗೆ ಹೇಳಿದ 'ಗಿರಿಜಾ ಕಲ್ಯಾಣ'ದ ಕಥೆಯನ್ನು ತಾನು ಯಕ್ಷಗಾನವಾಗಿ ಬರೆದಂತೆ ಗಂಗ (ಸು. ೧೭೫೦) ತಿಳಿಸಿದ್ದಾನೆ. ಚಿದಾನಂದಾವಧೂತನ (ಸು. ೧೭೫೦) 'ದೇವೀ ಮಾಹಾತ್ಮ್ಯೆ' ಸಂಸ್ಕೃತ 'ದೇವೀ ಮಾಹಾತ್ಮ್ಯ'ದ ಭಾಷಾಂತರ ಮುಮ್ಮಡಿ ಕೃಷ್ಣರಾಜನ ಹೆಸರಿನಲ್ಲಿಯೂ ಒಂದು 'ದೇವೀ ಮಾಹಾತ್ಮ್ಯೆ'ಇವೆ. ಇಲ್ಲಿಯ ವಿಷಯ 'ಮಾರ್ಕಂಡೇಯ ಪುರಾಣ'ದೊಳಗಿನ ಸಪ್ತಶತಿಯ ಮಂತ್ರಾರ್ಥ ವಿವರಣೆ. ಈತನ ಹೆಸರಿನಲ್ಲಿಯೇ ಇರುವ ಇನ್ನೊಂದು ಕೃತಿ 'ಶಂಕರ ಸಂಹಿತೆ' ಮುಮ್ಮಡಿ ತಮ್ಮನ ಕೃತಿಯ ಬಳಿಕಣ ಎರಡನೆಯ ಕೃತಿ ಇದೇ ಹೆಸರಿನ ಅಜ್ಞಾತ ಕೃತಿ ಈಚೆಗೆ ಇನ್ನೊಂದು ಬಂದಿದೆ (ಸು. ೧೮೦೦).

ನಿಶ್ಚಿಂತಾತ್ಮನೆಂಬವನ (ಸು. ೧೭೫೦) 'ವೀರಭದ್ರ ಲೀಲಾ ವಿಜಯ' ಕವಿಯೇ ತಿಳಿಸುವಂತೆ ದಧೀಚಿ ಮುನಿ ಸೂತನಿಗೆ ಲಕ್ಷ್ಯ ಗ್ರಂಥವಾಗಿ ಹೇಳಿದುದನ್ನು ಸಂಗ್ರಹಿಸಿ ಕನ್ನಡದಲ್ಲಿ ಬರೆದುದು. ಕಥೆ ಶಿವ ವಾಯು ಮೊದಲಾದ ಪುರಾಣಗಳಲ್ಲಿ ಬರುವುದೇ ಆಗಿರಬೇಕು. ಅಯ್ಯಪ್ಪನೆಂಬ ಕವಿ (೧೭೬೭) ಶರ ಷಟ್ಪದಿಯಲ್ಲಿ 'ದೇವಾಂಗ ಪುರಾಣ'ವನ್ನು ರಚಿಸಿದ್ದಾನೆ. ಇದು ದೇವರ ದಾಸಿಮಯ್ಯನ ಚರಿತೆಯೆಂದೂ ದೇವ ಕವಿಯು ಸಂಸ್ಕೃತ ಪುರಾಣವನ್ನು ಅನುಸರಿಸಿ ಕನ್ನಡದಲ್ಲಿ ಬರೆಯಲಾಗಿದೆಯೆಂದೂ ಭಾವಿಸಲಾಗಿದೆ. ('ದೇವರ ದಾಸಿಮಾರ್ಯ ಪ್ರಶಸ್ತಿ', ಪು. ೩೬೭-೬೪) ವಿರೂಪಾಕ್ಷ ದೇಶಿಕನೆಂಬ ಕವಿಯಿಂದ (೧೯ನೆಯ ಶ.) ಈಚೆಗೆ ರಚಿತವಾದ 'ದೇವರ ದಾಸಿಮಯ್ಯನ ಪುರಾಣ' ಸಹ ಕವಿಯ ಮಾತಿನಂತೆ ಸಂಸ್ಕೃತ ಕೃತಿಯ ಕನ್ನಡ ರೂಪವಾಗಿದೆ (ಅದೇ, ಪು. ೨೬೨-೬೩) ಹೀಗಿದ್ದರೆ ಸಿದ್ಧಮಲ್ಲಾರ್ಯನ 'ದೇವಾಂಗ ಪುರಾಣ'ದಿಂದ ಇದು ಭಿನ್ನವಾದ್ದು.

ಅಜ್ಞಾತ ಕರ್ತೃಕವಾದ 'ಸಹ್ಯಾದ್ರಿ ಖಂಡ' ೮೯ ಸಂಧಿಗಳೂ ೩,೨೭೨ ಪದ್ಯಗಳೂ ಇರುವ ವಿಸ್ತಾರವಾದ ಭಾಮಿನೀ ಷಟ್ಪದಿಯ ಕಾವ್ಯವಾಗಿದ್ದು (ಸು. ೧೭೮೦), ಇದರಲ್ಲಿ ಸಹ್ಯಾದ್ರಿ ಪ್ರಾಂತದ ತೀರ್ಥಕ್ಷೇತ್ರಗಳ ಮಹಿಮೆಯನ್ನೂ ಇತರ ಪುರಾಣ ಪ್ರಸಂಗಗಳನ್ನೂ ನಿರೂಪಿಸಲಾಗಿದೆ. ಅನೇಕ ಉಪಾಖ್ಯಾನಗಳಿಂದ ಕೂಡಿ ಈ ಕೃತಿ ಒಂದು ಕಥಾಕೋಶವೆಂಬಂತೆ ರಂಜನೀಯವಾಗಿದೆ. ಇದು ಸ್ಕಾಂದ ಪುರಾಣದಲ್ಲಿ ದೊರೆಯುವ ಸಹ್ಯಾದ್ರಿ ಖಂಡದ ತೀರ್ಥಕ್ಷೇತ್ರಗಳ ಭಾಗಗಳನ್ನು ಆಧರಿಸಿ ಅಥವಾ ಸಂಕಲಿಸಿ ಸಂಸ್ಕೃತದಲ್ಲಿ ಸಿದ್ಧವಾದ 'ಸಹ್ಯಾದ್ರಿ ಖಂಡ'ವೆಂಬ ಕೃತಿಯನ್ನು ಮೂಲವಾಗಿಟ್ಟುಕೊಂಡು ಸಿದ್ಧವಾಗಿದೆಯೆಂದು ಭಾವಿಸಲಾಗಿದೆ.

ವೆಂಕಟರಾಮಾಶಾಸ್ತ್ರಿ (೧೮೨೩) ಭವಿಷ್ಯ ಪುರಾಣದೊಳಗಿನ 'ಅಮಾಸೋಮವಾರ ವ್ರತ' ಮತ್ತು ಸ್ಕಾಂದ ಪುರಾಣದೊಳಗಿನ 'ಪವಿತ್ರಾರೋಪಣ ಕಲ್ಪ'ಗಳಿಗೆ ಕನ್ನಡ ಟೀಕೆಗಳನ್ನು ಬರೆದಿದ್ದಾನೆ. 'ಧನುರ್ಮಾಸ ಮಹಿಮೆ' ಭವಿಷ್ಯೋತ್ತರ ಪುರಾಣದೊಳಗಿನದು.

ಅಳಿಯ ಲಿಂಗರಾಜನು (೧೮೨೩--೭೪) 'ಗಿರಿಜಾ ಕಲ್ಯಾಣ', 'ಜಲಂಧರ ಕಾಳಗ', 'ತಾರಕ ವಧೆ', 'ಪಂಚವಿಂಶತಿ ಲೀಲೆ' ಎಂಬ ಕೆಲವು ಶೈವ ಪೌರಾಣಿಕ ಕೃತಿಗಳನ್ನು ರಚಿಸಿದ್ದು, ಇವಾದರೂ ಶಿವ, ಸ್ಕಾಂದ ಮೊದಲಾದ ಪುರಾಣಗಳಲ್ಲಿ ಬರುವಂತಹ ಕಥೆಗಳೇ ಆಗಿವೆ. ಅಜ್ಞಾತ ಕರ್ತೃಕವಾದ 'ಸಿರಿಯಾಳ ಚರಿತ್ರೆ' (ಸು. ೧೮೩೦) ಶಿವಲೀಲಾಮೃತ ಗ್ರಂಥದೊಳಗಿನದೆಂದು ತಿಳಿಯುವುದು.*

□ □

* ಇದು ಆರ್. ನರಸಿಂಹಾಚಾರ್ಯರ 'ಕರ್ನಾಟಕ ಕವಿ ಚರಿತೆ'ಯ ಸಂಪುಟಗಳನ್ನೂ ಕೆಲವು ಸಂಪಾದಿತ ಗ್ರಂಥಗಳನ್ನೂ ಗಮನಿಸಿ ಸಿದ್ಧಪಡಿಸಿರುವ ಒಂದು ಸಮೀಕ್ಷಾ ಲೇಖನವಾಗಿದೆ. ಸಂಸ್ಕೃತ-ಕನ್ನಡ ಬಾಂಧವ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಸಮೀಕ್ಷಿಸಿರುವ ಈ ಲೇಖನದ ಮುಖ್ಯವಾದ ಉದ್ದೇಶವೆಂದರೆ, ಕನ್ನಡ ಪುರಾಣ ಸಾಹಿತ್ಯದ ಒಂದು ಒಟ್ಟು ನೋಟವನ್ನು ಕೊಡುವುದೇ ಆಗಿದೆ. ಬರೆಹದ ವ್ಯಾಪ್ತಿ ೧೯ನೆಯ ಶ.ದ ಪೂರ್ವಭಾಗದವರೆಗೆ ಮಾತ್ರ. ಅಲ್ಲಲ್ಲಿಯ ಅಭಿಪ್ರಾಯಗಳಿಗೆ ದೃಢೀಕರಣವೂ ತಿದ್ದುಪಾಟುಗಳೂ ಬೇಕಾಗಬಹುದೆಂದು ಅರಿಕೆ ಮಾಡಬೇಕಾಗಿದೆ. ಉಪಸಂಹಾರ ವಾಕ್ಯಗಳಿಗೆ 'ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸಾಹಿತ್ಯ ಚರಿತ್ರೆ'ಯ ಮೊದಲನೆಯ ಸಂಪುಟವನ್ನು (ಪು. ೬೪೦-೬೯) ಅಭ್ಯಾಸಿಗಳು ನೋಡಬಹುದಾಗಿದೆ.

ವಿದೇಶಗಳಲ್ಲಿ ಜಗದ್ಗುರುಗಳು

—ಪ್ರೊ. ಎ. ಎಲ್. ಹಿರೇಮಠ

ಈ ಜಾಗತಿಕ ಧರ್ಮ ಮತ್ತು ಶಾಂತಿ ಪರಿಷತ್ತನ್ನು ಕ್ಯೂಟೋ (ಜಪಾನ)ದಲ್ಲಿ ನೆರವೇರಿಸಲು ಪೂರ್ವಭಾವಿಯಾಗಿ ಇದಕ್ಕೊಂದು ಹಿನ್ನೆಲೆ ಇದೆ. ೧೯೬೭ರ ಜನವರಿ ತಿಂಗಳಲ್ಲಿ ದಿಲ್ಲಿಯಲ್ಲಿ ಒಂದು ಪ್ರಾಸ್ತಾವಿಕ ಸಭೆಯನ್ನು ಕರೆಯಲಾಯಿತು. ಆಗ ಭಾರತದ ರಾಷ್ಟ್ರಪತಿಯಾಗಿದ್ದ ಶ್ರೀ ಝಕೀರ ಹುಸೇನರು ಆ ಪರಿಷತ್ತನ್ನು ಉದ್ಘಾಟಿಸಿದರು. ಉಪ ಪ್ರಧಾನಿಯಾಗಿದ್ದ ಶ್ರೀ ಮುರಾರ್ಜಿಭಾಯಿ ದೇಸಾಯಿ ಇವರು ಸಮಾರೋಪ ಮಾಡಿದರು. ಸುಮಾರು ೫೦ ರಾಷ್ಟ್ರಗಳ ಅನೇಕ ಪ್ರತಿನಿಧಿಗಳು ಆ ಸಭೆಯಲ್ಲಿ ಭಾಗವಹಿಸಿದ್ದರು. ಆಗ ರಚಿಸಲ್ಪಟ್ಟ ಕಾರ್ಯಕಾರಿ ಸಮಿತಿಯು ಜಾಗತಿಕ ಪರಿಷತ್ತನ್ನು ಕ್ಯೂಟೋದಲ್ಲಿ ಅಕ್ಟೋಬರ ತಿಂಗಳಲ್ಲಿ ಕರೆಯಬೇಕೆಂದು ಠರಾಯಿಸಿತು. ವಿನಾಶೋನ್ಮುಖವಾದ ಈ ಜಗತ್ತನ್ನು ಗಂಡಾಂತರದಿಂದ ಪಾರು ಮಾಡಲು ವಿಶ್ವದ ಒಳಿಯ ಮುತ್ಸದ್ದಿಗಳು ಧರ್ಮಪರಿಪಾಲಕರು, ಗುರುತರ ಹೊಣೆಯನ್ನು ಹೊತ್ತು ಈ ಕಾರ್ಯವನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಆ ಸಭೆ ನಿರ್ಣಯಿಸಿತು. ದಿಲ್ಲಿಯ ಆರ್ಚ ಬಿಶಪ್ ಏಂಜೆಲೋ ಫರ್ನಾಂಡೀಸ್‌ರ ಅಧ್ಯಕ್ಷತೆಯಲ್ಲಿ ಕಾರ್ಯಕಾರಿ ಮಂಡಳವೊಂದು ರಚಿಸಲ್ಪಟ್ಟಿತು. ಅಮೇರಿಕೆಯ ಡಾ|| ಹೋಮರ ಜಾಕ್ ಎಂಬವರು ಈ ಮಂಡಳದ ಪ್ರಧಾನ ಕಾರ್ಯದರ್ಶಿಗಳಿದ್ದಾರೆ. ಸದ್ಯಃ ಪರಿಷತ್ತಿನ ಕಚೇರಿಯು ನ್ಯೂಯಾರ್ಕನಲ್ಲಿ ಸ್ಥಾಪಿಸಲ್ಪಟ್ಟಿದೆ. ಈ ವಿಶ್ವಧರ್ಮ–ಶಾಂತಿ ಪರಿಷತ್ತಿನ ಆಮಂತ್ರಣವನ್ನು ಮನ್ನಿಸಿ ನಮ್ಮ ಪೂಜ್ಯ ಜಗದ್ಗುರುಗಳವರು ದಿಲ್ಲಿಗೆ ಹೋಗಿ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. ಕ್ಯೂಟೋದಲ್ಲಿ ಜರುಗಿದ ಈ ಸಮ್ಮೇಲನಕ್ಕೆ ಭಾರತದ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಕಳಿಸುವ ಜವಾಬ್ದಾರಿಯು ಮಹಾತ್ಮಾ ಗಾಂಧಿ ಪ್ರತಿಷ್ಠಾಪನ ಮಂಡಳದವರದಾಗಿತ್ತು. ಆದುದರಿಂದ ಆ ಮಂಡಳದ ಅಧ್ಯಕ್ಷರಾದ ಡಾ|| ರಂಗನಾಥ ದಿವಾಕರರು ಜಗದ್ಗುರುಗಳಿಗೆ ಆಮಂತ್ರಣವನ್ನು ನೀಡಿದರು. ಇಷ್ಟೇ ಅಲ್ಲ ಗುರುಗಳೊಡನೆ ವಿದೇಶ ಪ್ರವಾಸದಲ್ಲಿ ಅವರ ಸಂಗಡವೇ ಇದ್ದು ಸರ್ವ ಅನುಕೂಲಗಳನ್ನೊದಗಿಸಲು ಸಹ ಸಿದ್ಧತೆ ಮಾಡುವ ಭರವಸೆಯನ್ನಿತ್ತರು ಮತ್ತು ಅದೇ ರೀತಿ ಗುರುಗಳ ವಿದೇಶ ಪ್ರವಾಸದ ಕಾರ್ಯಕ್ರಮವನ್ನು ಡಾ|| ದಿವಾಕರರ ನಿರ್ದೇಶನದಂತೆ ಶ್ರೀಮಠದಲ್ಲಿ ನಾನೇ ತಯಾರಿಸಿದೆ. ನಾವು ಸಂದರ್ಶಿಸಬೇಕಾದ ಇಂಡೋನೇಶಿಯಾ, ಮಲೇಶಿಯಾ, ಹಾಂಗ್‌ಕಾಂಗ್, ಥಾಯಿಲ್ಯಾಂಡ್, ಸಿಂಗಾಪೂರ ದೇಶಗಳಲ್ಲಿರುವ ಭಾರತ ರಾಯಭಾರಿ ಕಚೇರಿಗೆ ಪತ್ರ ವ್ಯವಹಾರ ಮಾಡಿ ಗುರುಗಳ ಮತ್ತು ಅವರ ಪರಿವಾರದ ಯಾವತ್ತು

ಕಾರ್ಯಕ್ರಮಗಳಲ್ಲಿ ಗುರುಗಳೊಡನೆ ಭಾಗವಹಿಸಿ ಯಶಸ್ವಿಯಾಗಿ ನಿರ್ವಹಿಸಿ ಶ್ರೇಯೋಭಿವೃದ್ಧಿಯನ್ನುಂಟು ಮಾಡಿದರು. ಈ ಘನತೆಗಾಗಿ ಡಾ|| ರಂಗನಾಥ ದಿವಾಕರರಿಗೆ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನರ್ಪಿಸುವೆ.

ನನ್ನ ಭಾಗ್ಯೋದಯ

ಅನಿರೀಕ್ಷಿತ ಘಟನೆಗಳು ಕಲ್ಪನೆಗೂ ನಿಲುಕದ ಪರಿಣಾಮವನ್ನುಂಟು ಮಾಡುತ್ತವೆ. ಇವುಗಳ ನೆಲೆಯೇನು ಬೆಲೆಯೇನು ಎಂಬುದನ್ನು ಊಹಿಸುವುದು ಸುಲಭವಲ್ಲ. ಅವೆಲ್ಲವೂ ಜಗನ್ನಿಯಾಮಕನ ನಿಯಂತ್ರಣಕ್ಕೆ ಅಧೀನವಾದ ವಿಷಯವೆಂದು ನಂಬಬೇಕಲ್ಲದೆ ಗತ್ಯಂತರವಿಲ್ಲ. ೧೯೭೦ನೇ ಇಸ್ವಿಯ ಅಗಸ್ಟ: ಅಕ್ಟೋಬರ್ ತಿಂಗಳುಗಳು ನನ್ನ ಜೀವನದಲ್ಲಿ ಮಹೋದಗ್ರಕುಲ, ಪುಣ್ಯ ಸಂಚಯದ ಆವಿರ್ಭಾವ. ಪೂಜ್ಯ ಗುರುವರೇಣ್ಯರ ಆಪ್ತ ಕಾರ್ಯದರ್ಶಿಯಾಗಿ ಭಾರತದ ಪ್ರತಿನಿಧಿಯಾಗಿ ಅವರೊಡನೆ ವಿದೇಶ ಪ್ರಯಾಣ ಮಾಡುವ ಮಹದ್ಭಾಗ್ಯ ನನ್ನದಾಗಿತ್ತು. ಇಂಥ ಮಂಗಳಮಯವಾದ ಕನಸನ್ನು ಸಹ ಕಂಡರಿಯದವ ನಾನು. ಆಗಾಗ್ಗೆ ಶ್ರೀಮಠಕ್ಕೆ ಹೋಗುವದು ನನ್ನ ಪರಿಪಾಠ. ಬಾಲ್ಯದಲ್ಲಿ ನನ್ನ ಪೋಷಣೆಯಾದದ್ದು ಈ ಮಠದಲ್ಲಿ.

ನನ್ನ ಅಧ್ಯಯನದ ಪ್ರಗತಿಗಾಗಿ ಜೀವನದ ಉಚ್ಛ್ರಾಯತೆಗಾಗಿ ಹಿಂದಿನ ಲಿಂ. ಗುರುಸಿದ್ಧ ರಾಜಯೋಗೀಂದ್ರರು ಅನೇಕ ವಿಧವಾಗಿ ಕಾರುಣ್ಯಾದಾರ್ಯವನ್ನು ನೀಡಿ ಮುಂದೆ ನಡೆಸಿದ್ದಾರೆ. ಹೆಚ್ಚೇನು ನಾನು ಮೂರುಸಾವಿರಮಠದ ಗುರುಸಾರ್ವಭೌಮರ ಕಾರುಣ್ಯದ ಕಂದನಾಗಿ ಬೆಳೆದು ಬಂದಿರುವೆ. ಪೂಜ್ಯ ಜಗದ್ಗುರು ಗಂಗಾಧರ ರಾಜಯೋಗೀಂದ್ರರು ಜಾಗತಿಕ ಧರ್ಮ ಮತ್ತು ಶಾಂತಿ ಪರಿಷತ್ತಿನಲ್ಲಿ ಭಾಗವಹಿಸಲು ಜಪಾನಕ್ಕೆ ಹೋಗುವರೆಂಬುವ ವಿಷಯವನ್ನು ಕೇಳುತಲಿದ್ದೆ. ಗುರುಗಳೊಡನೇ ಆಗ್ನೇಯೇಶಿಯಾ ರಾಷ್ಟ್ರಗಳಿಗೆ ಪೋಗುವ ಭಾಗ್ಯವನ್ನು ನಾನು ಪಡೆದಿರುವೆನೆಂಬ ಸಂದೇಹ ನನಗಿತ್ತು. ಅದೆಷ್ಟೋ ಮಾನ್ಯರು ಗುರುಗಳೊಡನೆ ಹೋಗಲು ಸಿದ್ಧರಿರುವರೆಂದೂ ಈ ವಿಷಯವಾಗಿ ಸಮಾಲೋಚನೆ ನಡೆಯುತ್ತಿದೆಯೆಂದೂ ಅಲ್ಲಲ್ಲಿ ನನ್ನ ಸ್ನೇಹಿತರು ಮಾತನಾಡುತ್ತಿದ್ದರು. ಅಗಷ್ಟ ತಿಂಗಳಿನ ಅದೊಂದು ಮಂಗಲ ದಿನ ಪೂಜ್ಯ ಗುರುವರ್ಯರು ಪ್ರಾತಃಕಾಲದ ಲಿಂಗಾರ್ಚನೆಯನ್ನು ತೀರಿಸಿಕೊಂಡು ಸಿಂಹಾಸನದಲ್ಲಿ ಆಸೀನರಾಗಿದ್ದರು. ಪ್ರಶಾಂತ ಮುಖಮುದ್ರೆ ಪೂಜೆಯ ಮಂಗಲಮಯ ತೇಜೋವಿಲಾಸ, ಮಂದಸ್ಮಿತ ಕಾರ್ಯಭಾರದ ಗುರುತರ ಹೊಣೆಯ ಗಾಂಭೀರ್ಯ ಇವುಗಳನ್ನು ಅಂದು ನಾನು ಅವರಲ್ಲಿ ಕಂಡೆ. ನನ್ನ ಮೇಲೆ ಕೃಪಾದೃಷ್ಟಿಯನ್ನು ಬೀರಿದರು. ಕಾರುಣ್ಯಾಮೃತ ಶೀತಲ ಕಿರಣವನ್ನು ಚೆಲ್ಲಿದರು. ಮೌನವನ್ನು ಮುರಿದು ಮಾತನಾಡಿದರು. "ಹಿರೇಮಠರೇ ನಿಮ್ಮ ಭಾಗ್ಯದ ಬಾಗಿಲು ತೆರೆದಂತಾಯ್ತು. ನೀವೆ ನಮ್ಮೊಡನೆ ಜಪಾನದ ವಿದೇಶ ಪ್ರವಾಸದಲ್ಲಿ ಆಪ್ತ ಕಾರ್ಯದರ್ಶಿಯಾಗಿ ಬರಬೇಕೆಂಬ ಪ್ರೇರಣೆಯಾಗಿದೆ. ಜನಾಭಿಪ್ರಾಯವೂ ಹೀಗೆಯೇ ಇದೆ. ಗುರುದೇವನ ಪರೋಕ್ಷ ಇಚ್ಛೆಯೂ ಹಾಗೇ ಇದ್ದಿರಬಹುದು. ಈ ವಿಷಯವನ್ನು ಇಂದೇ

ಇತ್ಯರ್ಥ ಮಾಡಬೇಕಾಗಿದೆ. ಅದಕ್ಕಾಗಿಯೇ ನಿಮಗೆ ಕರೆಯಲು ಕಳಿಸಿದ್ದೆ. ಡಾಕ್ಟರ ದಿವಾಕರರನ್ನು ಕಂಡು ಮುಂದಿನ ವಿಷಯುವನ್ನು ಸಮಾಲೋಚಿಸಿ ಕಾರ್ಯಪ್ರವೃತ್ತರಾಗಿರಿ. ಶ್ರೀ ಗುರುಸಿದ್ಧೇಶನು ನಿಮಗೆ ಕಲ್ಯಾಣ ಮಾಡಲಿ" ಎಂದು ಅಮೃತಾಯಮಾನವಾದ ವಚನವನ್ನಿತ್ತರು. ಒಂದು ಕ್ಷಣ, ನೀರವ ಹೃದಯ ಭಾವದಿಂದ ತುಂಬಿತು, ಆನಂದ ತುಂದಿಲನಾದೆ, ಮಾತು ಮೌನದಲ್ಲಿ ಲೀನವಾಯಿತು. ಕೃತಜ್ಞತೆ ಜಾಗೃತವಾಯಿತು. ನುಡಿ ಹೊರಹೊಮ್ಮಿತು. ಪೂಜ್ಯರ ಕೃಪೆಗೆ ಪಾತ್ರನಾದೆ. ಶ್ರೀ ಮಠದ ವಾತ್ಸಲ್ಯದಲ್ಲಿ ಬೆಳೆದ ನನ್ನ ಜನ್ಮಜಾಯಮಾನ ಸಾರ್ಥಕವಾಯಿತೆಂದು ಮನದಲ್ಲಿಯೇ ಮಾತನಾಡಿ, ಕೃತಜ್ಞತಾ ಪ್ರಣಾಮಗಳನ್ನರ್ಪಿಸಿ ಅಪ್ಪಣೆಯನ್ನು ಶಿರಸಾವಹಿಸಿ ಕಾರ್ಯ ಪ್ರವೃತ್ತನಾಗುವೆನೆಂದು ಸನ್ನಿಧಿಗೆ ಅರಿಕೆ ಮಾಡಿಕೊಂಡೆ. ಪ್ರಾಸಂಗಿಕ ವಿಷಯಗಳನ್ನು ಸಮಾಲೋಚಿಸಿ ಆಶೀರ್ವಾದ ಪಡೆದುಕೊಂಡು ಡಾ. ದಿವಾಕರರನ್ನು ಕಾಣಲು ಅವರ ನಿವಾಸಕ್ಕೆ ಹೊರಟೆ. ಗುರುಗಳು ಫೋನುಮಾಡಿ ನಾನು ಅವರೆಡೆಗೆ ಬರುವೆನೆಂಬುದನ್ನು ತಿಳಿಸಿದ್ದರು. ಅವರು ನನ್ನ ನಿರೀಕ್ಷಣೆಯಲ್ಲಿದ್ದರು. ಡಾ. ದಿವಾಕರರ ಪರಿಚಯ ನನಗಿತ್ತು. ಆದರೆ ನನ್ನ ಪರಿಚಯ ಅವರಿಗೆ ಅಷ್ಟೊಂದಿರಲಿಕ್ಕಿಲ್ಲ. ನನ್ನನ್ನು ಬಾಗಿಲಲ್ಲಿ ಕಂಡೊಡನೆಯೇ ಒಳಗೆ ಕರೆದು ತಮ್ಮ ಪಾರ್ಶ್ವದಲ್ಲಿ ಕುಳ್ಳಿರಿಸಿಕೊಂಡರು, ಅದೆಷ್ಟು ಆತ್ಮೀಯತೆಯಿಂದ ನನ್ನನ್ನು ಕಂಡುಕೊಂಡರೆಂಬುದನ್ನು ಇಲ್ಲಿ ಮೂಡಿಸಲಾರೆ ಮನವರಿತಿದೆ. ಅವರೋರ್ವ ರಾಷ್ಟ್ರೀಯ-ಧಾರ್ಮಿಕ-ಶೈಕ್ಷಣಿಕ-ರಾಜಕೀಯ-ಸಾಮಾಜಿಕ ಪ್ರಜ್ಞೆಯುಳ್ಳ ಸಭ್ಯಗೃಹಸ್ಥರು. ಜೀವನದ ತುಂಬೆಲ್ಲ ಅನುಭವದ ಅನೇಕ ಅಂತಸ್ತುಗಳನ್ನು ಏರಿದ ವ್ಯಕ್ತಿತ್ವ ಅವರದು. ಮಾಗಿದ ಜೀವನದಲ್ಲಿ ಮಗೆಮಗಿಸುವ ಸ್ವಾನುಭವದ ಪರಿಮಳವನ್ನು ಬೀರುವವರವರು. ಈ ಇಳಿ ವಯಸ್ಸಿನಲ್ಲಿಯೂ ಅವಿಶ್ರಾಂತವಾಗಿ ಪರಿಶ್ರಮವಹಿಸುವ ಬಾಳು ಅವರದು. ಏರಿಳಿತಗಳನ್ನು ಅರಿತ ಅವರು ಜೀವನದ ಮೌಲ್ಯವನ್ನು ತಮ್ಮಿಂದ ತಾವೇ ಬಂದೊದಗಿದ ಸುಪ್ರಸಂಗಗಳ ಸದ್ವಿನಿಯೋಗ, ಸಾರ್ಥಕ ನಿರ್ವಹಣೆ ಇತ್ಯಾದಿ ಅನೇಕ ವಿಷಯಗಳನ್ನು ಸಮಕ್ಷಮ ಚರ್ಚಿಸಿ ಪ್ರಯಾಣದ ಸಿದ್ಧತೆ ಮಾಡಲು ತಿಳಿಸಿದರು. ವಿಶ್ವಧರ್ಮ ಶಾಂತಿ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ. ಹೋಮರ ಜಾಕ್ ಇವರಿಗೆ ನನ್ನ ವಿಷಯ ತಿಳಿಸಿ ಭಾರತದ ಪ್ರತಿನಿಧಿಗಳಿಗಿರಬೇಕಾದ ಸ್ಥಾನಮಾನಗಳನ್ನು ದೊರಕಿಸಿಕೊಟ್ಟರು. ಕ್ಯೂಟೋದಲ್ಲಿ ಜರುಗಿದ ಮಹಾಸಭೆಯ ವೇದಿಕೆಯಲ್ಲಿ ವಿಚಾರವಿನಿಮಯಕ್ಕೊಳಗಾಗಲಿದ್ದ ವಿಷಯಗಳ ರೂಪರೇಷೆಯನ್ನು ತಿಳಿಸಿದರು. ಪೂಜ್ಯರು ಆಂಗ್ಲ ಭಾಷೆಯಲ್ಲಿ ಭಾಷಣವನ್ನು ಮಾಡಬೇಕಾಗಿದ್ದುದರಿಂದ ಸಂಬಂಧಿಸಿದ ವಿಷಯಗಳ ಅಧ್ಯಯನವು ಅಜಸ್ರವಾಗಿ ನಡೆಯಿತು. ಅನೇಕ ವಿಷಯಗಳ ವಿಮರ್ಶೆ ಮಾಡಿದೆವು-ಅನೇಕ ಗ್ರಂಥಗಳ ವಿಚಾರ ಸರಣಿಯನ್ನು ತಿಳಿದೆವು. ಮಾನ್ಯ ಮಿತ್ರರ ಅನೇಕ ಸಲಹೆ ಸಹಕಾರಗಳನ್ನು-ಸ್ವೀಕರಿಸಿದೆವು. ಹೀಗೆ ಪೂಜ್ಯರ ಆಪ್ತಕಾರ್ಯದರ್ಶಿಯಾಗಿ ವಿನಮ್ರತೆಯಿಂದ ನಿಷ್ಠೆಯಿಂದ ಕಾರ್ಯೋನ್ಮುಖನಾದೆನು.

ಪ್ರಯಾಣದ ಶುಭ ಮುಹೂರ್ತ

ಪ್ರಯಾಣದ ಸಿದ್ಧತೆಯಲ್ಲಿ ದಿನಗಳುರುಳಿದುದು ತಿಳಿಯಲೇ ಇಲ್ಲ. ಹೊರಡುವ ದಿನ ಬಂದೇಬಿಟ್ಟಿತು. ಕನ್ನಡ ನಾಡಿನ ಹೆಮ್ಮೆಯ ಹಬ್ಬ ವಿಜಯದಶಮಿ ಸಂಭ್ರಮೋಜ್ವಲತೆಯ ಬೆಳಕನ್ನು ಬೀಗಿತು. ಅಕ್ಟೋಬರ ದಿನಾಂಕ ೧೨ ಚೈತ್ರೋತ್ಸವದ ಮಂಗಲಮಯ ಚಂದ್ರವಾರ ಗಗನಮಂಡಲ ಮಧ್ಯಬಿಂದುವಿನಿಂದ ಸರಿದು ಪಶ್ಚಿಮ ದಿಗಂತದೆಡೆ ದಿನಮಣಿ ಸಾಗಿದನು. ಮಹೇಂದ್ರ ಮುಹೂರ್ತದಲ್ಲಿ ಪೂಜ್ಯ ಸನ್ನಿಧಿಯವರು ಹೊರಡಲನುವಾದರು. ಮಠದ ಪಟಾಂಗಣದಲ್ಲಿ ಜನಸಮ್ಮರ್ದ ಕಿಕ್ಕಿರಿದು ತುಂಬಿದೆ. ಮಂಗಲತೂರ್ಯನಾದಗಳು ಮೊಳಗಿದವು. ಭಕ್ತಸಮೂಹ ಮಣಿದು ನಮಿಸಿತು. ಮನ್ನೆಯರು ಮಂಗಳ ನೀರಾಜನವನ್ನು ಬೆಳಗಿದರು. ಕುಸುಮಸ್ತಬಕಗಳ ಸುರಿಮಳೆ, ಮಠದ ಆನೆಗಳು ಗುರುಗಳ ಕೊರಳಿಗೆ ವಿಜಯಮಾಲೆಯನ್ನು ತೊಡಿಸಿ, ಚಾಮರವನ್ನು ಬೀಸಿ ಗುರುಗಳ ಕಾರು ಹೊರಡಲು ಅನುವು ಮಾಡಿಕೊಟ್ಟವು. ಹುಬ್ಬಳ್ಳಿಯೇ ಮಠದಲ್ಲಿತ್ತು ನೆರೆದ ಜನಸ್ತೋಮದ ಜಯ ಜಯಕಾರ ಧ್ವನಿ ಪ್ರತಿಧ್ವನಿತವಾಗುತ್ತಿರುವಂತೆಯೇ ಪೂಜ್ಯರ ಕಾರು ಮಹಾದ್ವಾರದ ಹೊರವಲಯವನ್ನು ದಾಟಿ ರಾಜವೀಧಿಯಲ್ಲಿ ಸಾಗಿತು. ನೂರಾರು ಕಾರುಗಳು ಹಿಂಬಾಲಿಸಿದವು. ಹುಬ್ಬಳ್ಳಿಯನ್ನು ಹಿಂದುಳಿಸಿ ಕಾರು ಮುಂದ ಮುಂದೆ ವೇಗದಿಂದ ಸಾಗಿ ನಮ್ಮ ಹೆಮ್ಮೆಯ ಕನ್ನಡ ನಾಡಿನ 'ಸೀಮ್ಲಾ' ಬೆಳಗಾವಿಯನ್ನು ತಲುಪಿತು. ಸಂಧ್ಯಾಸಮಯ ಸಮೀರಣನ ಶೀತಲಸ್ಪರ್ಶ, ಬೆಳಗಾವಿಯ ಚೆಲ್ವಾಂತ ಮಾಮರಗಳ ಮನೋಹರ ವೀಧಿಯಲ್ಲಿ ಗುರುವರ್ಯರ ಕಾರು ಪ್ರಶಾಂತವಾಗಿ ಸಾಗಿ, "ಸಾಂಬರೆ" ವಿಮಾನ ನಿಲ್ದಾಣದಲ್ಲಿ ಆಧ್ಯತೆಯಿಂದ ನಿಂತಿತು. ಗುರುಗಳನ್ನು ಕರೆದು ತಂದ ಗೌರವವನ್ನು ಹೊತ್ತು ನಿಂತಂತಿದೆ. ನೂರಾರು ಕಾರುಗಳು, ಸಹಸ್ರಾರು ಜನ, ಕರುನಾಡಿನ ಹರಗುರು ಚರಮೂರ್ತಿಗಳು, ಭಕ್ತ ಬಾಂಧವರು ಹಿಗ್ಗಿನ ಸುಗ್ಗಿಯನ್ನು ಸವಿದು. ಪೂಜ್ಯಪಾದರನ್ನು ಬೀಳ್ಕೊಡಲು ಬಂದಿರುವರು, ವೀರಶೈವ ಧರ್ಮಗುರುಗಳು ವಿದೇಶ ಪ್ರಯಾಣ ಮಾಡುವದು ಬಹುಶಃ ಇದೇ ಮೊದಲು. ನೆರೆದ ಜನಸ್ತೋಮದ ಆನಂದ ನಿರ್ಭರತೆ ವಿಯೋಗಕಾತುರತೆ, ಹರ್ಷ ಹಾರೈಕೆ ಸುಖ ಪ್ರವಾಸಗಮನಾಗಮನ ಪ್ರಾರ್ಥನೆ. ಇವೆಲ್ಲವುಗಳನ್ನು ನೋಡಿ ಸಹಿಸುವದೇ ದುಸ್ತರವಾಯಿತು. ಸಂಯಮಶೀಲತೆಯಿಂದ ಸಹಿಸಿದರು ಗುರುಗಳು. ಅಂದಿನ ಆ ಭಾವನಾವಿರ್ಭಾವದ ಸಿರಿಯನ್ನು ನೋಡುವದೇ ಒಂದು ಭಾಗ್ಯ. ಗುರುಗಳು ಮೌನವನ್ನು ಮುರಿದು ಮಾತನಾಡಿದರು. "ಬಂಧುಗಳೇ ಕರ್ತವ್ಯದ ಕರೆಗೆ ಓಗೊಟ್ಟು ಬಹುದೂರ ಹೋಗಿಬರುವೆ, ಶರಣರ ಸಂದೇಶವನ್ನು ಸಾರಿ ಹೇಳಿ ವಿಶ್ವದಲ್ಲಿ ಶಾಂತಿ ಸ್ಥಾಪಿಸಲು ಹೋಗಿ ಬರುವೆ, ಮಾನವ ಕುಲದ ಕಲ್ಯಾಣವೆ ಸರ್ವರ ಗುರಿಯಾಗಿರಲಿ, ನಿಮ್ಮೆಲ್ಲರ ಶುಭೇಚ್ಛೆ ನಮಗೆ ಮಂಗಲಕರವಾಗಲಿ, ಸ್ವಾಮಿಯ ಕೃಪೆಯಿರಲಿ, ಇನ್ನು ಹೊರಟೆವು" ಎಂದು ಕೈ ನೀಡಿ ಹರಸಿದರು. ಜಯಜಯ ಧ್ವನಿಯು ಉದ್ಘೋಷಿಸುವಾಗಲೇ, ವಿಮಾನ ಭೈರವ ಧ್ವನಿಯಿಂದ ಆಶ್ವಾಸನೆಯನ್ನು ನೀಡಿ, ನಿಮ್ಮೆಲ್ಲರನ್ನು ಕಣ್ತುಂಬಿಕೊಂಡು, ಗಗನಾಂಗಣದಲ್ಲಿ

ಸ್ವಚ್ಛಂದವಾಗಿ ಹೊರಟೇ ಬಿಟ್ಟಿತು. ಮುಂಬೈ "ಶಾಂತಾಕ್ರುಝ" ವಿಮಾನ ನಿಲ್ದಾಣದಲ್ಲಿ ಇನ್‌ಕಮ್‌ಟ್ಯಾಕ್ಸ್ ಸುಪ್ರೀಂಕೋರ್ಟ್ ಎಡ್ವೋಕೇಟರಾದ ಶ್ರೀ ಶರಚ್ಚಂದ್ರ ಜವಳಿಯವರ ಆತಿಥ್ಯ ಸ್ವೀಕರಿಸಿ ಕಲಕತ್ತೆಯಲ್ಲಿ ಇನ್‌ಕಮ್‌ಟ್ಯಾಕ್ಸ್ ಅ. ಕಮೀಶನರ್ ಶ್ರೀ ಹೊಸಮನಿಯವರಲ್ಲಿ ಆತಿಥ್ಯವನ್ನು ಕೈಕೊಂಡು ದಿನಾಂಕ ೧೫-೧೦-೭೦ರಂದು ವಿಮಾನಯಾನ ಮಾಡಿ "ಓಸಾಕಾ" ವಿಮಾನ ನಿಲ್ದಾಣದಲ್ಲಿ ಗಗನನೌಕೆಯಿಂದ ಇಳಿದೆವು.

ವಿಶ್ವಧರ್ಮಶಾಂತಿ ಪರಿಷತ್ತಿನ ಅಧಿಕಾರಿಗಳು ಸ್ವಾಗತಗೈದು ಅಲ್ಲಿಂದ ನಮ್ಮನ್ನು ಕಾರಿನಲ್ಲಿ ಕರೆದುಕೊಂಡು ಕ್ಯೂಟೋ ಗ್ರ್ಯಾಂಡ್ ಹೋಟೆಲಿನಲ್ಲಿ ಅತ್ಯಾಧುನಿಕ ಸಲಕರಣೆಗಳಿಂದ ಸುಸಜ್ಜಿತವಾದ ಬಿಡಾರಕ್ಕೆ ನಮ್ಮನ್ನು ಕರೆದೊಯ್ದರು. ಅಂದು ನಮಗೆಲ್ಲ ವಿಶ್ರಾಂತಿ. ಪೂಜ್ಯರ ನಿತ್ಯಕ್ರಿಯೆಗಳಿಗಾಗಲೀ, ಲಿಂಗಾರ್ಚನಾದಿ ಧಾರ್ಮಿಕವಿಧಿಗಳಿಗಾಗಲೀ ಯಾವುದೇ ವ್ಯತ್ಯಯ ಬಾರದಂತೆ ವ್ಯವಸ್ಥೆಯನ್ನೇರ್ಪಡಿಸಿದ್ದರು. ಧಾರ್ಮಿಕ ಸಂಪ್ರದಾಯದಂತೆ ಗುರುಗಳು ಸ್ನಾನ ಪೂಜಾ ತೀರ್ಥ ಪ್ರಸಾದಗಳನ್ನು ಯಥಾವಿಧಿ ಪೂರೈಸಿಕೊಳ್ಳುತ್ತಿದ್ದರು. ಅಕ್ಟೋಬರ ದಿನಾಂಕ ೧೫ರಿಂದ ೨೫ರ ವರೆಗೆ ಗುರುಗಳು ಕೇವಲ ಹಣ್ಣು-ಹಂಪಲ ಹಾಲು ಇವುಗಳಿಂದಲೇ ತೃಪ್ತಿಯನ್ನು ಹೊಂದುತ್ತಿದ್ದರು. ವಿದೇಶಗಳಲ್ಲಿಯೂ ಕೂಡ ಗುರುಗಳು ಕೈಕೊಂಡ ಸ್ವಯಂಸೇವ ಪೂಜಾನಿಷ್ಠೆ ಶುದ್ಧ ಪ್ರಸಾದ ಸೇವನೆ ನಿಷ್ಠುರ ವ್ರತಪಾಲನೆ ಇವುಗಳನ್ನು ನೋಡಿ ಅತ್ಯಂತ ಸಮೀಪವರ್ತಿಯಾದ ನನಗೂ ಆಶ್ಚರ್ಯವನ್ನುಂಟು ಮಾಡಿದವು. ಪ್ರಾತಃಕಾಲ ೫ ಘಂಟೆಗೆ ಎದ್ದು ೮-೩೦ರ ಒಳಗಾಗಿ ಪೂಜಾ ಪ್ರಸಾದಗಳನ್ನು ತೀರಿಸಿ ಸಭೆಗೆ ಹೋಗಲು ತಯಾರಾದರೆಂದರೆ ಪುನಃ ರಾತ್ರಿ ೮ ಘಂಟೆಯವರೆಗೆ ಹಾಗೆಯೇ ನಿರಾಹಾರದಿಂದ ಇರುತ್ತಿದ್ದರು. ಮಧ್ಯಾಹ್ನದಲ್ಲಿ ಪರಿಷತ್ತಿನ ಮಂದಿರದಲ್ಲಿ ಎಲ್ಲ ಪ್ರತಿನಿಧಿಗಳ ಊಟದ ವ್ಯವಸ್ಥೆ ಪೂರೈಸುತ್ತಲಿತ್ತು. ಆದರೆ ಗುರುಗಳು ಆ ಸಮಯದಲ್ಲಿ ಒಂದೆಡೆ ಕುಳಿತು ಪರಿಷತ್ತಿನಲ್ಲಿ ಚರ್ಚಿಸಲ್ಪಡಲಿರುವ ವಿಷಯಗಳ ಚಿಂತನ ಮಾಡುತ್ತ ಕಾಲ ಕಳೆಯುತ್ತಿದ್ದರು. ತಮಗೆ ಹಸಿವು ಆಗುವದಿಲ್ಲವೇ ಎಂದು ನಾನು ಸಲ್ಗೆಯಿಂದ ಕೇಳಿದರೆ ಅದನ್ನು ವಿಚಾರಿಸಲೂ ಸಮಯವಿಲ್ಲ, ಓರೇಮತಲೇ, 'ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ' ಎಂಬ ಗೀತೆಯ ಮಾತನ್ನು ಮರೆತಿರುವಿರಾ ಎಂದು ಕೇಳಿ ಮಂದಸ್ಮಿತರಾಗುತ್ತಿದ್ದರು. ಇದು ಶ್ರೀಗಳ ಸಂಯಮ ಜೀವನ.

ಕ್ಯುಟೋದಲ್ಲಿ ಸಮ್ಮೇಳನದ ಪ್ರಾರಂಭ

ಅಕ್ಟೋಬರ ದಿನಾಂಕ ೧೬, ಶುಕ್ರವಾರ ಪ್ರಾತಃಕಾಲ ೯.೩೦ ಗಂಟೆಗೆ ವಿಶ್ವಧರ್ಮ ಶಾಂತಿ ಪರಿಷತ್ತಿನ ಪೂರ್ಣಾಧಿವೇಶನ (Plenary Session) ಪ್ರಾರಂಭವಾಯಿತು. ಕ್ಯುಟೋದಿಂದ ಸಮಾಸುಮಾರು ಅಂತರದಲ್ಲಿರುವ ಅಂತರರಾಷ್ಟ್ರೀಯ ಸಭಾಮಂದಿರಕ್ಕೆ (International Conference Hall) ಪ್ರತಿನಿಧಿಗಳನ್ನೆಲ್ಲರನ್ನೂ ಕರೆದೊಯ್ಯುತ್ತಿದ್ದರು. ಆ ಭವ್ಯ ಸೌಧ ಸುತ್ತುವರಿದ ಗಿರಿಶಿಖರ ಶ್ರೇಣಿಗಳ ಮಧ್ಯದಲ್ಲಿ ಪ್ರಕೃತಿಯ ಚೆಲುವನ್ನೇ

ಮೈಯಾಂತು ನಿಂತಂತಿವೆ. ಅತ್ಯಾಧುನಿಕ ವಿದ್ಯುದ್ದೀಪ ರಚನೆಯಿಂದ, ಅನೇಕ ಯಾಂತ್ರಿಕ ಸಲಕರಣೆಗಳಿಂದ, ಟೆಲಿವಿಜನ್, ಚಲನಚಿತ್ರ, ವ್ಯವಸ್ಥೆ, ಟೇಪರಿಕಾರ್ಡಿಂಗ್, ವಿವಿಧ ವರ್ಣ ರಂಜಿತ ಚಿತ್ರ, ಶಿಲ್ಪಕಲೆ ಸೀತಲಾಗಾರ ರಚನೆ ಇತ್ಯಾದಿ ವೈವಿಧ್ಯಗಳಿಂದ ಮೆರಗು ಪಡೆದಿದೆ. ಜಪಾನದ ಅತ್ಯಂತ ಪ್ರಭಾವಿ ಧರ್ಮವಾದ ಬೌದ್ಧ ಮತದ ಸಾಕ್ಷಾತ್ ಪ್ರತೀಕವಾದ ಆ ಕ್ಯಟೋ ನಗರಕ್ಕೆ ಈ ಮಂದಿರ ಕಳಸಪ್ರಾಯವಾಗಿ ಕಂಗೊಳಿಸುತ್ತದೆ.

ಈ ವಿಶ್ವಧರ್ಮ ಮತ್ತು ಶಾಂತಿ ಪರಿಷತ್ತಿಗೆ ಪ್ರಪಂಚದ ನಾಲ್ವತ್ತು ರಾಷ್ಟ್ರಗಳಿಂದ ಮೂರು ನೂರಕ್ಕೂ ಮೇಲ್ಪಟ್ಟು ಪ್ರತಿನಿಧಿಗಳು ಪ್ರತ್ಯಕ್ಷ ಭಾಗವಹಿಸಿದ್ದರು. ಜಗತ್ತಿನಲ್ಲಿ ಶಾಂತಿ ಪ್ರತಿಷ್ಠಾಪನೆಯಾಗುವಂತೆ ಕಾರ್ಯನಿರ್ವಹಣೆಯನ್ನು ರೂಪಿಸಲು ಧರ್ಮಗುರುಗಳೂ ಧರ್ಮಪರಿಪಾಲಕರೂ ಧಾರ್ಮಿಕ ಪ್ರವೃತ್ತಿಯುಳ್ಳವರೂ ವಿಶ್ವಶಾಂತಿಯಲ್ಲಿ ಆಸಕ್ತಿಯುಳ್ಳ ವರೂ ಹೀಗೆ ಒಂದು ಕಡೆ ವಿವಿಧ ಮತ ಪಂಥ ಪಂಗಡಗಳ ಜನರು ಸೇರಿದ್ದು ಪ್ರಪಂಚದ ಇತಿಹಾಸದಲ್ಲಿಯೇ ಅದ್ವಿತೀಯವಾದ ಘಟನೆಯಾಗಿತ್ತೆಂದು ಹೇಳಬಹುದು. ಹಿಂದೂ, ಜೈನ, ಸೀಖ, ಬೌದ್ಧ, ಕ್ರಿಶ್ಚಿಯನ್, ಮುಸ್ಲಿಂ, ಬಾಹಾಯಿ, ಅಹಮ್ಮದೀಯ, ಫಾರಸಿ, ಸಿಂಟೋ-ಕನ್‌ಫ್ಯೂಶಿಯನ್, ಚೀನ, ಜ್ಯೂ ಮುಂತಾದ ಭಿನ್ನ ಭಿನ್ನ ಧರ್ಮದವರು ತಮ್ಮ ಪ್ರಭೇದಗಳನ್ನು ಮರೆತು ಮಾನವ ಧರ್ಮದ ಸರ್ವೋತ್ತಮ ಧ್ಯೇಯವನ್ನು ಚರ್ಚಿಸಿ ಶಾಂತಿಯನ್ನು ಪ್ರಸ್ಥಾಪಿಸಲು ಭಾವಕ್ಕೆ ಆಸ್ಪದವಿರಲಿಲ್ಲ. ಕನಿಷ್ಠ, ಗರಿಷ್ಠ, ಹೆಚ್ಚು, ಕಡಿಮೆ, ಮೇಲೆ, ಕೆಳಗೆ ಎಂಬ ಕ್ಷುಲ್ಲಕ ವಿಚಾರಗಳ ಗೊಂದಲವಿರಲಿಲ್ಲ. ವಿಶ್ವಬಾಂಧವ್ಯವೇ ಸರ್ವರ ಗುರಿಯಾಗಿತ್ತು ಸೌಹಾರ್ದತೆ ಸಹಿಷ್ಣುತೆ, ಸಹಕಾರ ಭಾವನೆ ಇವೇ ಉತ್ತಮ ಆದರ್ಶಗಳಾಗಬೇಕೆಂದು ಸಾರಿ ಹೇಳಲು ಕೂಡಿದಂತಿತ್ತು ಈ ಮಾನ್ಯಾಜನಸ್ತೋಮ. ೧. ಮಾನವೀಯ ಹಕ್ಕು ಬಾಧ್ಯತೆಗಳ ಸಂರಕ್ಷಣೆಯಿಂದ ಕೂಡಿದ ಶಾಂತಿ, ೨. ಆರ್ಥಿಕ ಸಾಮಾಜಿಕ ದೃಷ್ಟಿಯಿಂದ ಹಿಂದುಳಿದ ರಾಷ್ಟ್ರ ಪ್ರಗತಿಪರವಾದ ಶಾಂತಿ, ೩. ಮಾರಕ ಶಸ್ತ್ರಾಸ್ತ್ರಗಳ ಸಂನ್ಯಾಸಯುಕ್ತವಾದ ಶಾಂತಿ ಇತ್ಯಾದಿ ವಿಷಯಗಳು ವಿಶೇಷ ಆಸ್ಥೆಯಿಂದ ಈ ಸಭೆಯಲ್ಲಿ ಚರ್ಚಿಸಲ್ಪಡುತ್ತಿದ್ದವು. ಶಾಂತಿ ಸ್ಥಾಪನೆಗೆ ಅವಶ್ಯವಿದ್ದ ಶಿಕ್ಷಣ ಪ್ರಸಾರ, ಜ್ಞಾನ ಪ್ರಸಾರದ ಸಾಧನಗಳ ಮೂಲಕ ಶಾಂತಿ ಪ್ರಚಾರ, ಅವಶ್ಯವಿದ್ದ ಕಾಯಿದೆ ಕಾನೂನು ರಚಿಸುವದು, ವಿವಿಧ ಧರ್ಮದವರು ಪರಸ್ಪರ ಸಹಕರಿಸಿ, ಶಾಂತಿ ಪ್ರಸ್ಥಾಪಿಸು ವಂತೆ ಮಾಡುವದು ಇತ್ಯಾದಿ ಕ್ರಮಗಳಿಂದ ಕಾರ್ಯೋಪಕ್ರಮವನ್ನು ಮಾಡಬೇಕೆಂದು ವಿಶ್ವಧರ್ಮ ಶಾಂತಿ ಸಮ್ಮೇಳನವು ನಿರ್ಣಯಿಸಿತು. ಈ ಸಮ್ಮೇಳನಕ್ಕೆ ಜಗತ್ತಿನ ನಾನಾ ಭಾಗಗಳಿಂದ ಪ್ರತಿನಿಧಿಗಳಲ್ಲದ ಅನೇಕ ಪ್ರತಿಷ್ಠಿತ ವ್ಯಕ್ತಿಗಳು ಬಂದಿದ್ದರು. ದ್ವಾರಕಾ ಪೀಠದ ಮತ್ತು ಕಾಶ್ಮೀರ ಪೀಠದ ಶಂಕರಾಚಾರ್ಯರ ಪ್ರತಿನಿಧಿಗಳು, ರಾಮಕೃಷ್ಣ ಮಿಶನ್, ಭಾರತೀಯ ವಿದ್ಯಾಭವನ ಈ ಸಂಸ್ಥೆಗಳಿಂದಲೂ ಪ್ರತಿನಿಧಿಗಳು ಭಾಗವಹಿ ಸಿದ್ದರು. ಸರಾಸರಿ ಒಂದು ವಾರದವರೆಗೆ ನಡೆದ ಈ ಸಮ್ಮೇಳನ ಮತ್ತು ಉಪಸಮಿತಿ ಗಳಲ್ಲಿ ಭಾಗವಹಿಸಿದ ಪ್ರತಿಷ್ಠಿತ ವ್ಯಕ್ತಿಗಳು ಮಾನವೀಯ ದೃಷ್ಟಿಕೋನದಿಂದ ತಮ್ಮ ತಮ್ಮ

ವಿಷಯುಗಳನ್ನು ಪ್ರಸ್ತಾಪಿಸುತ್ತಿದ್ದರು. ಪರಿಷತ್ತಿನ ಗೌರವ ಕಾರ್ಯದರ್ಶಿ ರೆ. ಕೋಶೋ ಓಟಾನಿ (Rev Kosho ohtoni) ಜಪಾನಿನ ಧರ್ಮ ಸಂಸ್ಥೆಯ ಅಂತರರಾಷ್ಟ್ರೀಯ ನಿರ್ವಾಚನಾಧಿಕಾರಿ ರೆ. ನಿಕ್ಕೋ ನಿವ್ಯಾನೋ (Rev Nikho Niwano), ಧಾರ್ಮಿಕ ಸ್ವಾತಂತ್ರ್ಯದ ಅಂತರರಾಷ್ಟ್ರೀಯ ಸಂಘದ ಅಧ್ಯಕ್ಷ ಮತ್ತು ಕ್ರಿಯಾ ಸಮಿತಿಯ ಪ್ರತಿನಿಧಿ ಡಾ. ದಾನಾ ಮ್ಯಾಕ್‌ಲೀನ್ ಗ್ರಿಲೆ (Dr Dana Mclean Greeley, Chairman of the World Conferance as President of the International Association for Religious Freedom) ಆರ್ಚಬಿಶಪ್ ಆ್ಯಂಜಲೋ ಫರ್ನಾಂಡಿಸ್ (Arch Bishop Angelo Fernandes), ಪ್ರೊ: ಆರ್. ಜೆ. ವೆಬ್ಲೋಸ್ಕಿ (Prof: R. J. Webloky, Professor of Comparative Religion, Habrew University, Jerusalem) ಡಾ: ಯುಗೆನ್ ಕಾರಸನ್ ಬ್ಲೇಕ್ (Dr. Eugene Carson Blake Council Societies of the World Council of Churches) ಸರ್ ಮೊಹಮ್ಮದ ಝಾಫ್ರುಲ್ಲಾಖಾನ (President of the International Court of Justice Hague) ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ. ಹೋಮರ ಜಾಕ್ (Dr. Homer A. Jack) ಡಾ. ರಂಗನಾಥ ದಿವಾಕರ ಮುಂತಾದ ಪ್ರತಿಷ್ಠಿತ ವ್ಯಕ್ತಿಗಳು ಧರ್ಮ ಮತ್ತು ಶಾಂತಿ ಪರಸ್ಪರ ಸಂಬಂಧ ವನ್ನು ಅವಶ್ಯಕತೆಯನ್ನು ಒಳ್ಳೇ ವಿದ್ವತ್ಪೂರ್ಣವಾಗಿ ಸಭೆಯಲ್ಲಿ ಪ್ರಸ್ತಾಪಿಸಿದರು.

ಪೂಜ್ಯ ಜಗದ್ಗುರುಗಳ ಭಾಷಣ

ಈ ಮಹಾಸಭೆಯ ಕಾರ್ಯಕ್ರಮಗಳ ಪುಸ್ತಿಕೆಯು ಮೊದಲೇ ಪ್ರಕಟವಾಗಿತ್ತು. ಈ ಪರಿಷತ್ತಿನ ವೈಶಿಷ್ಟ್ಯವೆಂದರೆ, ಉಪಸಮಿತಿಗಳಲ್ಲಿ ಮತ್ತು ಕ್ರಿಯಾ ಸಮಿತಿಗಳಲ್ಲಿ ಜಾಗತಿಕ ಧರ್ಮ ಮತ್ತು ಶಾಂತಿ ಸಮನ್ವಯ ವಿಷಯವಾಗಿ ಅತ್ಯಂತ ನಿಷ್ಠೆಯಿಂದ ವಿಚಾರವಿನಿಮಯ ಮಾಡಿ, ಕಾರ್ಯರೂಪದಲ್ಲಿ ತರುವ ರೂಪರೇಷೆಯನ್ನು ಸಿದ್ಧಗೊಳಿಸುವದಾಗಿತ್ತು. ಆದುದರಿಂದ ಭಾಷಣಗಳಿಗೆ ವಿಶೇಷ ಮಹತ್ವವಿರಲಿಲ್ಲ. ಜಗದ್ಗುರುಗಳ ಭಾಷಣದ ಒಂದು ಪ್ರತಿಯನ್ನು ಪರಿಷತ್ತಿಗೆ ಮೊದಲೇ ಕಳಿಸಿ, ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲು ಕೇಳಿಕೊಂಡಿದ್ದೆವು. ಆದರೆ ಸಮಯಾಭಾವದಿಂದ ಆದಾಗಲೇ ಕೊನೆಗೊಮ್ಮೆ ಕಾರ್ಯ ಕ್ರಮ ಪಟ್ಟಿಯು ಪೂರ್ಣ ಸಿದ್ಧವಾಗಿದ್ದ ಮೂಲಕ, ನಮ್ಮ ಗುರುಗಳಿಗೆ ಭಾಷಣ ಮಾಡಲು ಸಮಯವನ್ನು ದೊರಕಿಸಲು ಸ್ವಲ್ಪ ತೊಂದರೆಯಾಯಿತು. ಆದರೂ ನಮ್ಮ ಗುರುವರ್ಯರ ಸ್ಥಾನಮಾನ ವಿದ್ವತ್ತು ಯೋಗ್ಯತೆ, ಜಾಗತಿಕ ಶಾಂತಿ ಪ್ರತಿಷ್ಠಾಪನೆಗಾಗಿ ಅವರಲ್ಲಿರುವ ಕಳಕಳಿ, ಅವರ ಆಗಮನದ ನೈಜೋದ್ದೇಶದ ಮಹತಿ, ಈ ಮಹಾಸಭೆಯ ಆದರ್ಶ, ಧರ್ಮಗುರುಗಳಿಗೂ ಧರ್ಮಪರಿಷತ್ತಿಗೂ ಇರುವ ಅನ್ಯೋನ್ಯ ಸಾರ್ಥಕ ಸಂಬಂಧ, ಇತ್ಯಾದಿ ವಿಷಯುಗಳನ್ನು ಕಮೀಟಿಯ ಹಿರಿಯರೆದುರಿಗೆ ಪರಿಣಾಮಕಾರಿಯಾಗಿ ಪ್ರಸ್ತಾಪಿಸಿದ ಮೇಲೆ ಶ್ರೀ ಎಂಜಿಲೋ ಫರ್ನಾಂಡಿಸರ ಅಧ್ಯಕ್ಷತೆಯಲ್ಲಿ ಕೂಡಿದ ವಿಷಯ

ನಿಯಾಮಕ ಕಮಿಟಿಯ ಸದಸ್ಯರು. ಗುರುಗಳ ಆಗಮನ ಉದ್ದೇಶವನ್ನು ಮನಗಂಡು, ಕಾರ್ಯಭಾರದ ಗೌರವವನ್ನರಿತು ತಾ: ೧೬-೧೦-೬೦ ರಂದು ಪೂರ್ಣಾಧಿವೇಶನದಲ್ಲಿ ಭಾಷಣ ಮಾಡಲು ಸಮಯವನ್ನು ಒದಗಿಸಿಕೊಟ್ಟರು. ಅಂದಿನ ಸಭೆಗೆ ಪ್ರೊ. ಮಹಮ್ಮದ್ ಹುಸೇನ್ ಎಂಬವರು ಅಧ್ಯಕ್ಷತೆ ವಹಿಸಿದ್ದರು. ಅಂದು ಮಧ್ಯಾಹ್ನ ೨-೩೦ ಘಂಟೆಗೆ ಸರಿಯಾಗಿ ಪ್ರಧಾನ ಕಾರ್ಯದರ್ಶಿ, ಡಾ: ಹೋಮರ ಜಾಕ್‌ರಿಂದ ನನಗೆ ಒಂದು ನಿವೇದನೆ ಪತ್ರ ಬಂತು.

"Dear Prof. Hiremath, Let Your Swamiji H. H. Raja-yogeendra deliver his address. Please lead him to the platform exactly at 2-30 p. m. Give a brief note of introduction of Swamiji to Prof. Husain."

ಪ್ರಧಾನ ಕಾರ್ಯದರ್ಶಿಗಳ ನಿರ್ದೇಶದಂತೆ ಪೂಜ್ಯ ಗುರುಗಳನ್ನು ವ್ಯಾಸಪೀಠಕ್ಕೆ ಕರೆದು ತಂದೆ. ಡಾ. ಹೋಮರ ಜಾಕರು ಸ್ವಾಗತಿಸಿ ಆಸನವನ್ನು ಅಲಂಕರಿಸಲು ಕೇಳಿ ಕೊಂಡರು. ಗುರುಗಳು ಪೀಠಾಸೀನರಾದ ಮೇಲೆ ಡಾ. ಹುಸೇನರು ಶ್ರೀಗಳ ಪರಿಚಯ ಮಾಡಿಕೊಟ್ಟರು. ಶ್ರೀಗಳ ಪ್ರಶಾಂತ ಮುಖಮುದ್ರೆ, ಕಾಷಾಯುವೇಷ, ಲಲಾಟದಲ್ಲಿ ವಿಭೂತಿಯ ತ್ರಿವಳಿ, ಕೈಯಲ್ಲಿ ಯೋಗದಂಡ, ಇವುಗಳನ್ನು ನೋಡಿ ನೆರೆದ ಪ್ರಜ್ಞಾವಂತ ಜನ ಗೌರವಾನಂದಗಳನ್ನು ವ್ಯಕ್ತಪಡಿಸಿದರು. ಪೂಜ್ಯರು ಸಭೀಕರ ಕರತಾಡನ ಹರ್ಷೋದ್ಗಾರಗಳ ನಡುವೆ ತಮ್ಮ ಭಾಷಣವನ್ನು ಪ್ರಾರಂಭಿಸಿದರು. "Fellow Seekers of Peace" ಎಂಬುದಾಗಿ ತಮ್ಮ ಭಾಷಣವನ್ನು ಪ್ರಾರಂಭಿಸಿದ ಕೂಡಲೇ ಇಡೀ ಜನಸ್ತೋಮ ಏಕಮುಖವಾಗಿ ಅಭಿನಂದನೆಯ ಆನಂದೋದ್ಗಾರಗಳನ್ನು ದೀರ್ಘವಾದ ಕರತಾಡನಗಳ ಮೂಲಕ ಪ್ರದರ್ಶಿಸಿದರು. ಚಿತ್ರ ಗ್ರಾಹಕರು ಫ್ಲ್ಯಾಶ್‌ಗನ್ನುಗಳ ಪ್ರಭಾವಳಿಯನ್ನೇ ಬೆಳಗಿದರು. ಒಂದೆರಡು ನಿಮಿಷ ಎಲ್ಲೆಲ್ಲಿಯೂ ಮೌನ. ಪೂಜ್ಯ ಗುರುಗಳು ಧರ್ಮ ಮತ್ತು ಶಾಂತಿ ಸಮನ್ವಯ ವಿಚಾರವನ್ನು ಕೂಲಂಕಷವಾಗಿ ವಿಮರ್ಶಿಸಿ- "ವೀರಶೈವ ಧರ್ಮವು ವಿಶ್ವ ಧರ್ಮಕ್ಕೆ ಪೂರಕವಾಗಿದೆ. ವೀರಶೈವ ಶರಣರು ಸಾರಿ ಹೇಳಿದ ಕಾಯಕವೇ ಕೈಲಾಸವೆಂಬ ವಿಚಾರವು ವಿಶ್ವಗ್ರಾಹಿಯಾಗಿದೆ. ಇದೂ ಅಲ್ಲದೆ ಜಾತ್ಯಾತೀತ ಭಾವನೆ ಮಾನವೀಯ ಮೌಲ್ಯಗಳು, ಕ್ರಿಯಾಜ್ಞಾನ, ಸಮನ್ವಯ, ಬಹಿರಂತರಂಗಶುದ್ಧಿ, ಆಚಾರವಿಚಾರದಲ್ಲಿ ಶುಚಿ ಸದ್ಭಾವನೆ, ಲೋಕಕಲ್ಯಾಣ, ಅವಿರತ ಸೇವೆ, ವಿಶ್ವಬಾಂಧವ್ಯ, ಸಹಕಾರಿ ಜೀವನದ ಅವಶ್ಯಕತೆ ಇತ್ಯಾದಿ ವಿಷಯಗಳನ್ನು ನಿರೂಪಿಸಿದರು. ಇದೂ ಅಲ್ಲದೆ ವೀರಶೈವ ಶರಣರು ವಿಚಾರಕ್ಕಿಂತಲೂ ಆಚಾರಕ್ಕೆ, ಕರ್ತವ್ಯ ಪ್ರತಿಷ್ಠೆಗಿಂತಲೂ ಕಾಯಕ ನಿಷ್ಠೆಗೆ ಮಹತ್ವವನ್ನು ಕೊಟ್ಟಿರುವರೆಂಬುದನ್ನು ವಿಶದಪಡಿಸಿದರು. ಈ ತತ್ವಗಳನ್ನು ಕೃತಿಯಲ್ಲಿ ತರುವದರಿಂದಲೇ ಜಗತ್ತಿನಲ್ಲಿ ಶಾಂತಿಯನ್ನು ಪ್ರಸ್ಥಾಪಿಸಬಹುದು. ಇದೇ ವೀರಶೈವರ ಬಾಳಿನ ಉಸಿರು" ಎಂಬುದಾಗಿ ಒಕ್ಕೀ

ಅಸ್ಖಲಿತವಾಗಿ ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ಅನೇಕ ವಿದ್ವಾಂಸರು ಗುರುಗಳಿಗೆ ಹೃತ್ಪೂರ್ವಕ ಅಭಿನಂದನೆಗಳನ್ನರ್ಪಿಸಿದರು. ಸಭೀಕರು ಹರ್ಷ ನಿರ್ಭರತೆಯಿಂದ ಆಲಿಸಿದರು. ಇನ್ನೊಂದು ವೈಶಿಷ್ಟ್ಯವೆಂದರೆ, ಭಾರತದಿಂದ ಬಂದ ಅನೇಕ ಪ್ರತಿನಿಧಿಗಳಲ್ಲಿ ನಮ್ಮ ಜಗದ್ಗುರುಗಳೋರ್ವರಿಗೆ ಆ ಮಹಾಸಭೆಯಲ್ಲಿ ಜಾಗತಿಕ ಸಮ್ಮೇಲನದಲ್ಲಿ ಭಾಷಣ ಮಾಡಲು ಅವಕಾಶ ದೊರೆತದ್ದು ನಿಜವಾಗಿಯೂ ನಮ್ಮ ದೇಶಕ್ಕೂ ನಮ್ಮ ನಾಡಿಗೂ ಸಮಾಜಕ್ಕೂ ದೊರೆತ ಅಪೂರ್ವ ಗೌರವವೆಂದು ಹೇಳಲೇಬೇಕು. ಭಾರತೀಯ ಧಾರ್ಮಿಕ ಇತಿಹಾಸದಲ್ಲಿ ವೀರಶೈವ ಧರ್ಮಗಳು ವಿದೇಶ ಪ್ರಯಾಣ ಮಾಡಿ ಇಂಥ ಭವ್ಯವಾದ ಸಮ್ಮೇಲನದಲ್ಲಿ ಭಾಷಣ ಮಾಡಿ ಪ್ರತಿಷ್ಠೆಯನ್ನು ಗಳಿಸಿದ್ದೊಂದು ನಮ್ಮ ಧರ್ಮದ ಐತಿಹಾಸಿಕ ಘಟನೆಯಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ. ನಿತ್ಯದ ಕಾರ್ಯಕ್ರಮದಂತೆ ಗುರುಗಳು ಕ್ರಿಯಾ ಸಮಿತಿಗಳಲ್ಲಿಯೂ ಭಾಗವಹಿಸಿ ಸಮಯೋಚಿತ ಸೂಚನೆಗಳನ್ನು ಮಾಡುತ್ತಿದ್ದರು. ಮಹಾಸಭೆಯಲ್ಲಿ ಗುರುಗಳು ಅತಿಮುಖ್ಯವಾದ ೧೦ ಸೂಚನೆಗಳನ್ನು ಮಂಡಿಸಿದರು. ಅದರಲ್ಲಿ ಮೊದಲನೆಯ ಸೂಚನೆಯನ್ನು–"A World Parliament of religious consisting of the representatives of all the religions in the World should be set up." ಜಗತ್ತಿನ ಎಲ್ಲ ಧರ್ಮಗಳ ಪ್ರತಿನಿಧಿಗಳ ಪ್ರಾತಿನಿಧ್ಯವುಳ್ಳ ಒಂದು ಮಹಾಸಭೆಯನ್ನು ಸ್ಥಾಪಿಸಬೇಕೆಂದು ಮಂಡಿಸಿದ್ದರು. ಈ ಸೂಚನೆಯು ಇದಾಗಲೇ ಕಾರ್ಯರೂಪಕ್ಕೆ ಬಂದು ನ್ಯೂಯಾರ್ಕ್‌ದಲ್ಲಿ ಈ ಸಂಸ್ಥೆ ಸ್ಥಾಪಿಸಲ್ಪಟ್ಟಿದೆ. ಭಾರತದಿಂದ ೧೫ ಪ್ರತಿನಿಧಿಗಳು ಆಯ್ಕೆಯಾಗಿದ್ದಾರೆ. ಅದರಲ್ಲಿ ಕರ್ನಾಟಕದಿಂದ ೧. ಪೂಜ್ಯ ಜಗದ್ಗುರುಗಳು ೨. ಡಾ. ರಂಗನಾಥ ದಿವಾಕರ ಮತ್ತು ೩. ಪ್ರೊ. ಎ. ಎಲ್. ಹಿರೇಮಠ ಇವರುಗಳು ಆಯ್ಕೆಯಾಗಿದ್ದಾರೆಂದು ಪ್ರಧಾನ ಕಾರ್ಯದರ್ಶಿ ಡಾ. ಹೋಮರ ಜಾಕರು ತಿಳಿಸಿದ್ದಾರೆ.

ಗುಜರಾಥ ಯೂನಿವರ್ಸಿಟಿಯ ಉಪಕುಲಪತಿ ಡಾ. ಉಮಾಶಂಕರ ಜೋಶಿ, ಮಹಾರಾಷ್ಟ್ರದ ಸರ್ವೋದಯ ಕಾರ್ಯ ಧುರೀಣ ಶ್ರೀ ಶಂಕರರಾವ ದೇವ, ಪಂಜಾಬು ಯೂನಿವರ್ಸಿಟಿಯ ಪ್ರೊ: ಡಾ. ಶೇಷಗಿರಿರಾವ, ಸಿಂಗಾಪೂರದ ಐ. ಪಿ. ಸೇಲ್ಸ ಮ್ಯಾನೇಜರ್, ಪಾರಸಿ ಧರ್ಮದ ಸದ್ಗೃಹಸ್ಥ ಶ್ರೀ ಬಿ. ಆರ್. ವಕೀಲ ಇನ್ನೂ ಹಲ ಕೆಲವು ಪ್ರತಿನಿಧಿಗಳೊಡನೆ ಪೂಜ್ಯ ಗುರುಗಳು ಪ್ರಾಸಂಗಿಕವಾಗಿ ವಿಚಾರ ವಿನಿಮಯ ಮಾಡುತ್ತಿದ್ದರು.

ಪತ್ರಿಕಾ ಪ್ರತಿನಿಧಿಗಳ ಸಂದರ್ಶನ

ಮರುದಿನ ದಿನಾಂಕ: ೧೮–೧೦–೧೯೭೦ ರಂದು ಅಮೇರಿಕೆಯ ಪತ್ರಿಕಾ ಪ್ರತಿನಿಧಿಗಳು ಪರಿಷತ್ತಿನ ಸಭಾಮಂದಿರದ ಒಂದು ಖೋಲಿಯಲ್ಲಿ ಗುರುಗಳ ಸಂದರ್ಶನವನ್ನು ಪಡೆದುಕೊಂಡರು. ವೀರಶೈವ ಧರ್ಮದ ತತ್ವ, ಲಿಂಗ, ವಿಭೂತಿ, ರುದ್ರಾಕ್ಷಿ, ಇವುಗಳ ಧಾರಣೆಯ ಮಹತ್ವ, ಕಾವಿಯ ಉಡುಗೊರೆಯ ವೈಶಿಷ್ಟ್ಯ, ಶ್ರೀಗಳವರ ಧಾರ್ಮಿಕ,

ಸಾಮಾಜಿಕ ಕಾರ್ಯಕ್ಷೇತ್ರ ಇತ್ಯಾದಿ ಅನೇಕ ಅನುಷಂಗಿಕ ವಿಷಯಗಳನ್ನು ವಿಚಾರಿಸಿ ಟೇಪ್ ರೆಕಾರ್ಡ್ ಮಾಡಿಕೊಂಡು ಫೋಟೋ ತೆಗೆದುಕೊಂಡರು. ಶ್ರೀಗಳವರ ಭಾಷಣದ ಪ್ರತಿಗಳನ್ನು ಪರಿಚಯ ಪತ್ರಿಕೆಯನ್ನು, ವಿಭೂತಿಯ ಗಟ್ಟಿಗಳನ್ನು, ಗುರುಗಳ ಆಶೀರ್ವಾದ ರೂಪದಲ್ಲಿ ಸ್ವೀಕರಿಸಿದರು. ಇದನ್ನು ನೋಡಿದರೆ ಭಾರತೀಯ ಗುರುಗಳ ಬಗ್ಗೆ ವಿದೇಶಿಯರು ಎಷ್ಟೊಂದು ಗೌರವವನ್ನು ಹೊಂದಿರುವರೆಂಬುದು ವ್ಯಕ್ತವಾಯಿತು.

ಮರುದಿನ ಸಭಾಭವನದಲ್ಲಿ ವಿಶ್ರಾಂತಿ ಧಾಮದ ಒಂದು ಭಾಗದಲ್ಲಿ ಗುರುಗಳು ಸುಖಾಸೀನರಾಗಿದ್ದರು. ಜಪಾನಿನ ಮಿ. ಇವಾಓ ಪಿ.ಹಿನೊ (Mr. Iwao P. Hino) ಎಂಬವರು ಊಮೋಟೋ (Oomoto) ಎಂಬ ಧಾರ್ಮಿಕ ವೃತ್ತ ಪತ್ರಿಕೆಯ ಸಂಪಾದಕರು ಶ್ರೀಗಳನ್ನು ಸಂದರ್ಶಿಸಿದರು. ಗುರುಗಳನ್ನು ಕಂಡು ತಮ್ಮದೇ ಆದ ಪದ್ಧತಿಯಿಂದ ಅಭಿವಂದಿಸಿ ಭಾರತೀಯ ಧರ್ಮಗಳ ಬಗ್ಗೆ, ಮಠಗಳ ಕಾರ್ಯಕ್ಷೇತ್ರಗಳ ಬಗ್ಗೆ ತುಲನಾತ್ಮಕ ವಿಚಾರ ವಿನಿಮಯವನ್ನು ಮಾಡಿದರು. ಗುರುಗಳ ಸಮಗ್ರ ಭಾಷಣ ವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದರು. ಈಗಲೂ ತಮ್ಮ ಪತ್ರಿಕೆಯನ್ನು ಸಮಗೆ ಕಳಿಸುತ್ತಿರುವರು.

ಶ್ರೀ ಕೆ. ವಿ. ನಾರಾಯಣ ಎಂಬುವವರು 'ಹಿಂದೂ'-ದೂರ ಪ್ರಾಚ್ಯ ವರದಿಗಾರರು. ಇವರು ಮೈಸೂರಿನವರು. ನಾವು ವಾಸ್ತವ್ಯ ಮಾಡಿದ ಕ್ಯೂಟೋ ಗ್ರ್ಯಾಂಡ್ ಹೋಟೆಲಿನ ರೂಮಿನಲ್ಲಿ ಗುರುಗಳನ್ನು ಸಂದರ್ಶಿಸಿ ಪ್ರಾಸ್ತಾವಿಕ ವಿಚಾರಗಳನ್ನು ತಿಳಿದುಕೊಂಡು ಆಶೀರ್ವಾದ ಪಡೆದುಕೊಂಡರು.

ಕ್ಯೂಟೋ ನಾರಾ ಚೇರಾಗಳ ದರ್ಶನ

ಕ್ಯೂಟೋದ ಹೆ ಇನ್ ಮಂದಿರ (He in Shrine) ಚಿಯೊನಿನ್ ದೇವಾಲಯ (Chionin) ಕರುಣಾಳು ದೇವತೆ (Godess of Mercy) ಮತ್ತು ನಾರಾದಲ್ಲಿ ತೊಡ್ಜೇಜಿ (Todaji) ಮಂದಿರ, ಸರುಸ್ವಾ ಹೊಂಡ (Saruswa Pond) ಟೆನ್ರಿಕ್ಯೋ ಮಂದಿರ (Tenrikyo), ಟೆನ್ರಿ ಸಂಕೋಕನ್ ವಸ್ತು ಸಂಗ್ರಹಾಲಯ (Tenri Sankokan of Museum of University) ಶೋಶೋ ಇನ್ ಅರಮನೆ (Shoso-in) ಇತ್ಯಾದಿ ಬೌದ್ಧರ ಪ್ರಾಚೀನ ಧಾರ್ಮಿಕ ಅವಶೇಷಗಳನ್ನು ನೋಡಿದೆವು. ಇವುಗಳಲ್ಲಿ ಟೆನ್ರಿಕ್ಯೋ ಧಾರ್ಮಿಕ ಮಂದಿರ ಶಿಶುವಿಹಾರದಿಂದ ಪ್ರಾರಂಭಿಸಿ ವಿಶ್ವವಿದ್ಯಾಲಯದ ಉಚ್ಚ ಶಿಕ್ಷಣದವರೆಗೆ ಧಾರ್ಮಿಕ ವಿದ್ಯೆಯನ್ನು ಸಾಂಸ್ಕೃತಿಕ ಸಂಪ್ರದಾಯಗಳ ಅಧ್ಯಯನವನ್ನು ನೀಡುತ್ತದೆ. ಇಲ್ಲಿಯ ವೈದ್ಯ ಶಾಲೆಯಲ್ಲಿ ಔಷಧಿಯೊಂದಿಗೆ ಆಧ್ಯಾತ್ಮಿಕ ಶುಶ್ರೂಷೆಯನ್ನು ರೋಗಿಗಳಿಗೆ ನೀಡಲಾಗುತ್ತದೆಯೆಂದು ತಿಳಿಸಿದರು. ಇಲ್ಲಿ ವಿಶ್ವವಿಖ್ಯಾತ ವಸ್ತು ಸಂಗ್ರಹಾಲಯವೂ ಪುಸ್ತಕ ಭಂಡಾರಗಳೂ ಇವೆ. ಪರಿಷತ್ತಿನ ಯೋಜಕರೇ ಈ ಪ್ರವಾಸವನ್ನು ಏರ್ಪಡಿಸಿದ್ದರಿಂದ ಒಳ್ಳೇ ಶಿಸ್ತಿನಿಂದ

ನಮಗೆಲ್ಲರಿಗೂ ತಿಳಿಯುವಂತೆ ದರ್ಶನೀಯ ಸ್ಥಾನಗಳ ವೈಶಿಷ್ಟ್ಯವನ್ನು ವಿವರಿಸಿ ತೋರಿಸಿದರು. ಈ ಪ್ರವಾಸದಲ್ಲಿ ಗುರುಗಳು ಅತ್ಯಂತ ಔತ್ಸುಕ್ಯವನ್ನು ತೋರಿ ಅಲ್ಲಲ್ಲಿಯ ವೈಶಿಷ್ಟ್ಯಗಳನ್ನು ಟಿಪ್ಪಣಿ ಮಾಡಲಿಕ್ಕೆ ನನಗೆ ಹೇಳುತ್ತಿದ್ದರು. (ಪರಂಜ್ಯೋತಿಯ ಡಿಸೆಂಬರ ತಿಂಗಳಿನ ಸಂಚಿಕೆಯಲ್ಲಿ ಗುರುಗಳು, ಪ್ರೇಕ್ಷಣೀಯ ಸ್ಥಾನಗಳ ವಿಶಾಲ ವರ್ಣನೆಯನ್ನು ಪ್ರಕಟಿಸಿದ್ದಾರೆ. ಅಲ್ಲಿ ನೋಡಬಹುದು).

ಒಸಾಕಾ ಸಂದರ್ಶನ

ದಿನಾಂಕ: ೨೦-೧೦-೭೦ ರಂದು ಒಂದು ಕಾರ್ಯದ ನಿಮಿತ್ತ ಓಸಾಕಾ ನಗರಕ್ಕೆ ಹೋಗಬೇಕಾಯ್ತು. 'ದಿ ನ್ಯಾಶನಲ್ ಬ್ಯಾಂಕ್ ಆಫ್ ಅಮೇರಿಕಾ'ದಲ್ಲಿ ಕೆಲಸವಿತ್ತು. ಟ್ರೈನಿನಲ್ಲಿ ೫೦ ಮೈಲು ಪ್ರವಾಸ ಮಾಡಿ ಟ್ಯಾಕ್ಸಿ ತೆಗೆದುಕೊಂಡು ಬ್ಯಾಂಕಿಗೆ ಹೋದೆವು. ಟ್ಯಾಕ್ಸಿ ಡ್ರಾಯವರನ ಪ್ರಾಮಾಣಿಕತೆಯನ್ನು ನೋಡಿ ಆಶ್ಚರ್ಯವಾಯಿತು ತನಗೆ ಕಾಯಿದೆ ಪ್ರಕಾರ ಸಲ್ಲುವದಕ್ಕಿಂತಲೂ ಹೆಚ್ಚಿಗೆ ಒಂದು ಪೈಸೆಯನ್ನು ಸಹ ತೆಗೆದುಕೊಳ್ಳಲು ಒಪ್ಪಲಿಲ್ಲ. "ನಾವು ಸಂತೋಷದಿಂದ ಕೊಡುತ್ತೇವೆ ತೆಗೆದುಕೊಳ್ಳಿರಿ ಎಂದು ಹೇಳಿದರೆ "It is a crime if I accept it more" ನಾನು ಹೆಚ್ಚಿಗೆ ತೆಗೆದುಕೊಂಡರೆ ಅಪರಾಧವಾಗುವದು ಎಂದು ನುಡಿದು ನಮ್ಮನ್ನು ಆಶ್ಚರ್ಯಚಕಿತರನ್ನು ಮಾಡಿದ. ಬ್ಯಾಂಕಿನ ಒಳಗೆ ಹೋದೆವು. ಬ್ಯಾಂಕಿನ ಪರಿಚಾರರು ಒಳ್ಳೇ ವಿನಯದಿಂದ ಕರೆದೊಯ್ದು ಗುರುಗಳಿಗೆ ಪೀಠವನ್ನು ಕೊಟ್ಟು ಅಭಿವಂದಿಸಿ ಮ್ಯಾನೇಜರನಿಗೆ ನಮ್ಮ ವಿಷಯ ತಿಳಿಸಿದನು. ನಮಗೆ ಒಂದು ಚೆಕ್‌ನ್ನು ಅಮೇರಿಕೆಯಿಂದ ಶ್ರೀಗಳ ಶಿಷ್ಯರು ಕಳಿಸಿದ್ದರು. ಅದನ್ನು ಕ್ಯಾಶ್ ಮಾಡಿಸಬೇಕಾಗಿತ್ತು. ಬ್ಯಾಂಕಿನ ಮ್ಯಾನೇಜರ್ ಜಪಾನ ಮಹಿಳೆ-ನಮ್ಮ ಚೆಕ್‌ನ್ನು ಶ್ರೀಗಳ ಸಹಿ ಮಾಡಿಸಿ, ಕೊಟ್ಟೆವು. "ಚೆಕ್ಕಿನ ಬಗ್ಗೆ ಮಾಹಿತಿ (Advice) ಬಂದಿಲ್ಲ. ಚೆಕ್ ಕಳಿಸಿದವರ ಸಹಿಯ ದಾಖಲೆಯೂ (Speciman Signature) ನಮ್ಮಲ್ಲಿರುವದಿಲ್ಲ. ಅದಕ್ಕೇನು ಮಾಡುವದು? ಎಂದು ಬ್ಯಾಂಕ್ ಕ್ಯಾಶಿಯರನು ಕೇಳಿದನು. ಆ ಮೇಲೆ ಮ್ಯಾನೇಜರ ಮಹಿಳೆ ಅತಿ ವಿನಯದಿಂದ ಗುರುಗಳಿಗೆ ಕೈ ಮುಗಿದು ಆಸನವನ್ನು ಕೊಟ್ಟು ಕುಳ್ಳಿರಿಸಿ "ತಾವು ಯಾವ ದೇಶದಿಂದ ಬಂದಿರುವಿರಿ, ಕಾಯಕವಾವುದು, ಹೋಗುವದೆಲ್ಲಿಗೆ" ಎಂಬುದಾಗಿ ಪರಸ್ಪರ ಶೀಲ ಸೌಜನ್ಯಕ್ಕೆ ಭಂಗ ಬರದಂತೆ ನಮ್ಮನ್ನು ಕೇಳಿದಳು. ಅದಕ್ಕೆ "ನಾವು ಭಾರತ ದೇಶದವರು, ಕರ್ನಾಟಕದಿಂದ ಬಂದವರು, ಗುರುಗಳು ವೀರಶೈವ ಧರ್ಮದ ಪೀಠಾಚಾರ್ಯರು, ವಿಶ್ವಧರ್ಮ ಶಾಂತಿ ಪರಿಷತ್ತಿಗೆ ಬಂದ ಭಾರತದ ಪ್ರತಿನಿಧಿಗಳು. ಕ್ಯೂಟೋದಲ್ಲಿ ಪರಿಷತ್ತಿನ ಕಾರ್ಯ ಪೂರೈಸಿದ ಕೂಡಲೇ ಟೋಕಿಯೋಕ್ಕೆ ಹೋಗಿ ಅಲ್ಲಿಂದ ಆಗ್ನೇಯೇಶಿಯಾ ರಾಷ್ಟ್ರಗಳಿಗೆ ಭೆಟ್ಟಿಕೊಟ್ಟು ಪರಿಷತ್ತಿನ ಫಲಶ್ರುತಿಯನ್ನು ಅಲ್ಲಿಯ ರಾಷ್ಟ್ರೀಯರಿಗೆ ತಿಳಿಸಿ, ಮರಳಿ ನಮ್ಮ ದೇಶಕ್ಕೆ ಹೋಗಬೇಕಾಗಿದೆ." ಎಂದೆವು. ಮ್ಯಾನೇಜರ-ಮಹಿಳೆಯು ಬಹಳ ಸಂತೋಷಪಟ್ಟು,

ನಮ್ಮ ಚೆಕ್ಕನ್ನು ಕ್ಯಾಶ್ ಮಾಡಿ ನಮಗೆ ಡಾಲರ್ಸ್ ಕೊಡಲು ಹೇಳಿದಳು. ನಮಗೆ ಆಶ್ಚರ್ಯವಾಯಿತು. ಚೆಕ್ಕು ಕ್ಯಾಶ್ ಆಗಲು ಅವಶ್ಯವಾದ ಮಾಹಿತಿ ದೊರೆತಿಲ್ಲವೆಂದು ನಿಮ್ಮ ಕ್ಯಾಶಿಯರ್ ಹೇಳಿದರು, ಅದು ಹೇಗೆ ನೀವು ನಮ್ಮ ಚೆಕ್ಕನ್ನು ಪಾಸ್ಮಾ ಮಾಡಿದಿರಿ ಎಂದು ಕೇಳಿದೆವು. ಅದಕ್ಕೆ ಆ ಮಹಿಳೆ "Yes, but you have come here from India the holy land in which Lord Buddha was born, and His Holiness is a saint, I have positive trust and reverence in you the Indians, if the cheque is not jenuine I may loose some money, but, I can't loose good people like you" "ಭಾರತದೇಶ ಬುದ್ಧದೇವನ ಜನ್ಮಭೂಮಿ, ನೀವು ಪುಣ್ಯರಾಷ್ಟ್ರದ ಜನ. ಸ್ವಾಮೀಜಿಯವರು ಯೋಗಿಗಳಾಗಿದ್ದಾರೆ. ನೀವು ಕೊಟ್ಟ ಚೆಕ್ ಮೋಸದ್ದಿದ್ದರೆ ನಾನು ಕೆಲ ಹಣವನ್ನು ಕಳೆದುಕೊಳ್ಳಬಹುದು, ಆದರೇನಂತೆ? ನಿಮ್ಮನ್ನು ಮಾತ್ರ ಖಂಡಿತ ಕಳೆದುಕೊಳ್ಳಲಾರೆ" ಎಂದು ಉತ್ತರಿಸಿದಳು.

ಇದನ್ನು ಕೇಳಿದೊಡನೆ ನಾವು ಕ್ಷಣ ಹೊತ್ತು ಸುಮ್ಮನಾದೆವು. ಭಾರತೀಯರನ್ನು ಈ ಜನ ಎಷ್ಟು ಗೌರವದಿಂದ ಪ್ರೀತಿಸುವರಲ್ಲಾ ಎಂದು ವಿಸ್ಮಯಾನಂದವಾಯಿತು. ಹಣವನ್ನು ಪಡೆದೆವು. ಗುರುಗಳಿಗೆ ಪುನಃ ವಂದಿಸಿದಳು. ನಮ್ಮ ಕೈಚೀಲದಲ್ಲಿದ್ದ ಕೆಲವು ಹಣ್ಣುಗಳನ್ನು ತೆಗೆದುಕೊಂಡು ಗುರುಗಳು ಮಹಿಳೆಗೂ ಕ್ಯಾಶಿಯರನಿಗೂ ಆಶೀರ್ವಾದ ಕೊಟ್ಟರು. ಕೃತಜ್ಞತೆಯ ಭಾವದಿಂದ ನಮ್ಮ ಕಣ್ಣು ನೀರಿಟ್ಟವು. ನಮ್ಮನ್ನು ಒಸಾಕಾ ಸ್ಟೇಶನ್ನಿಗೆ ಕರೆದುಕೊಂಡು ಹೋಗಿ ತಿಕೀಟು ತೆಗೆಯಿಸಿ ಸುರಕ್ಷಿತವಾಗಿ ಕ್ಯೋಟೋ ಮುಟ್ಟುವಂತೆ ವ್ಯವಸ್ಥೆ ಮಾಡಿ ಬರಬೇಕೆಂದು ಹೇಳಿ ತಮ್ಮ ಸೇವಕನನ್ನು ನಮ್ಮೊಡನೆ ಕಳಿಸಿಕೊಟ್ಟಳು. ಈ ಚಿರಸ್ಮರಣೀಯವಾದ ಘಟನೆ ಚಿರಂತನವಾಗಿ ನಮ್ಮಲ್ಲಿ ಉಳಿಯಿತು.

ಟೋಕಿಯೋ ವಾಸ್ತವ್ಯ

ಟೋಕಿಯೋದ ಬೌದ್ಧ ಸಮಾಜದ ಅಧ್ಯಕ್ಷ ನಿಕಿಓ ನಿವ್ಯಾನೋ ಅವರ ಆಮಂತ್ರಣದ ಮೇರೆಗೆ ನಾವು ಟೋಕಿಯೋಕ್ಕೆ ಹೊರಟೆವು. ದಿನಾಂಕ: ೨೨ ಅಕ್ಟೋಬರ್ ಗುರುವಾರ ಕ್ಯೋಟೋದಿಂದ ಟೋಕಿಯೋಕ್ಕೆ ಬುಲೆಟ್ ಟ್ರೈನಿನಲ್ಲಿ ಪ್ರಯಾಣ ಮಾಡಿದೆವು. ಇದು ಜಗತ್ತಿನಲ್ಲಿಯೇ ಅತಿವೇಗದ ರೈಲ್ವೆ ಟ್ರೈನ್. ತಾಸಿಗೆ ೧೨೦ ಮೈಲು ಇದರ ವೇಗದ ಮಿತಿ. ೩೫೦ ಮೈಲು ದೂರ ಪ್ರವಾಸವನ್ನು ಕೇವಲ ೨.೪೫ ಘಂಟೆಯಲ್ಲಿ ಮುಗಿಸಿದೆವು. ಈ ಟ್ರೈನಿನಲ್ಲಿಯೇ ಸ್ನಾನ ಉಪಹಾರ-ಊಟದ ವ್ಯವಸ್ಥೆಯಿತ್ತು. ಪೂಜ್ಯ ಗುರುಗಳು ಕಟ್ಟಾ ವ್ರತನಿಷ್ಠರು. ಆತಿಥೇಯ ವರ್ಗದವರು ಅನಪೇಕ್ಷಿತ ಉಪಹಾರ ಸ್ವೀಕರಿಸಲು ಕೇವಲ ಹಣ್ಣು ಹಾಲನ್ನಾದರೂ ಸ್ವೀಕರಿಸಲು ಕೇಳಿಕೊಂಡರು. ಗುರುಗಳು "ಸ್ನಾನ ಪೂಜೆಯಿಲ್ಲದೆ ಏನೂ ಸ್ವೀಕರಿಸಲಿಕ್ಕಾಗದು, ಇದು ನಮ್ಮ ಧರ್ಮಾನುಬಂಧನೆ"

ಎಂಬುದಾಗಿ ತಿಳಿಸಿ ಕೆಲವು ಹಣ್ಣುಗಳನ್ನು ಅವರಿಗೆ ಆಶೀರ್ವದಿಸಿದರು. ಶ್ರೀಗಳ ಅಸಾಮಾನ್ಯ ಶೀಲ ನಿಷ್ಠೆಯನ್ನು ಅಲ್ಲಿದ್ದವರು ನೋಡಿ ಆಶ್ಚರ್ಯಪಟ್ಟರು.

ಸೌಂದರ್ಯ ನಗರಿ ಟೋಕಿಯೋ. ವಿಶಾಲ ರಾಜಬೀದಿಗಳು, ೬೦-೭೦ ಮೇಲಂತಸ್ತಿನ ಸೌಧಗಳು ೧ ಕೋಟಿ ೧೦ ಲಕ್ಷ ಜನಸಂಖ್ಯೆ ಅತಿವಿಶಾಲ ನಗರ, ದಾರಿಯುದ್ದಕ್ಕೂ ಸಹಸ್ರಾರು ಕಾರುಗಳು, ಚಿತ್ರವಿಚಿತ್ರರಂಗ ರಂಜನೀಯ ರಮಣೀಯಕತೆಯಿಂದ ಕೂಡಿದ ಪಣ್ಯಾವೀದಿಗಳು- ಸಂಪದ್ಭರಿತ ಅಂಗಡಿಗಳ ಸಾಲುಗಳು ಶ್ರೀಮಂತ ಸಂತೃಪ್ತ ಜನಸ್ತೋಮ ವಿದ್ಯುದ್ದೀಪಗಳ ರಚನಾಚಾತುರಿಯಿಂದ ವಿವಿಧ ಬಣ್ಣ ಚಿತ್ತರದಿಂದ ಚೆಲ್ವಾಂತ ಶ್ರೀಮಂತ ನಗರವನ್ನು ನೋಡಿದರೆ ಗಗನದ ತಾರಾಮಂಡಲವೇ ಪ್ರತಿಬಿಂಬಿತವಾಗಿರುವದೋ ಏನೋ ಎಂಬುವಂತೆ ಭಾಸವಾಗುತ್ತದೆ. ಈ ನಗರವನ್ನು ಕಾರಿನಲ್ಲಿ ಸಂಚರಿಸುತ್ತ ನವ್ಯ ನಾಗರಿಕತೆಯ ಸಕಲರ ಅನುಕೂಲತೆಗಳನ್ನರಿತು ನಿರ್ಮಾಣಗೊಂಡ 'ಇಂಪೀರಿಯಲ್' ಬಂದೆವು. ಅಲ್ಲಿಯೇ ಅತಿಥಿಗಳೆಲ್ಲರಿಗೂ ವಾಸ್ತವ್ಯವನ್ನು ಬೌದ್ಧ ಸಂಘದವರು ಏರ್ಪಡಿಸಿದ್ದರು. ಗುರುಗಳು ಸಾಂಪ್ರದಾಯಕವಾದ ಪೂಜಾ ವಿಧಿವಿಧಾನಗಳನ್ನು ತಮಗಾಗಿ ಮೊದಲಿಗೆ ವ್ಯವಸ್ಥಿತವಾಗಿ ನಿಯಮಿತವಾದ ವಿಶಾಲ ರೂಮಿನಲ್ಲಿ ತೀರಿಸಿಕೊಂಡ ನಂತರ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ಬಂದೆವು. ಆ ದಿನ ರಾತ್ರಿ ವಿಶ್ರಾಂತಿ ಪಡೆದೆವು. ಮರುದಿನ ಬೌದ್ಧಸಮಾಜದ ಅಧ್ಯಕ್ಷರಾದ ಶ್ರೀ ನಿವ್ಯಾನೋ ಇವರು ಸಮ್ಮೇಲನಕ್ಕೆ ಬಂದಿದ್ದ ಪ್ರತಿನಿಧಿಗಳೆಲ್ಲರನ್ನು ತಮ್ಮ ಸಂಘದ ಮಹಾಮಂದಿರಕ್ಕೆ ಕರೆದೊಯ್ದು ಸ್ವಾಗತಿಸಿದರು ಫುಮನ್ ಹಾಲ್ (Fuman Hall) ಬೌದ್ಧರ ಪ್ರಾರ್ಥನಾಮಂದಿರ. ಇದೊಂದು ರಾಜಭವನ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ, ಕಟ್ಟಿದ ಈ ಬೃಹನ್ಮಂದಿರಕ್ಕೆ ಅತಿ ಎತ್ತರದ ಗೋಲಾಕೃತಿಯ ಕಲಶವಿದೆ. ವಿಶಾಲ ರಂಗಮಂಟಪ-ಸಭಾಭವನವಂತೂ ೫ ಸಾವಿರ ಜನರಿಗೆ ಇಂಬುಕೊಡುವ ಬೆಲೆ ಬಾಳುವ ಆಸನಾಲಂಕಾರ ಪರಿಕರದಿಂದ ಸಿದ್ಧವಾಗಿ ಪ್ರೇಕ್ಷಕರ ಮನಸ್ಸನ್ನು ಸೆಳೆಯುತ್ತದೆ. ಟೋಕಿಯೋ ಸಂಪದಭಿವೃದ್ಧಿಯ ವೈಭವವನ್ನು ನಾವಿಲ್ಲಿ ಕಂಡೆವು. ನೂರಾರು ಸಣ್ಣ ಬಾಲಿಕೆಯರು ಸ್ವಾಗತಿಸಿ ಪೂಮಾಲೆಯ ಮಳೆಗರೆದು ಒಳಗೆ ಕರೆದೊಯ್ದರು. ಮಕ್ಕಳನ್ನು ನೋಡಿ ಗುರುಗಳ ಮನಸ್ಸು ಅರಳಿತು. ತರುಣ ವಿದ್ಯಾರ್ಥಿ ವಿದ್ಯಾರ್ಥಿನಿಯರು ವೀರರಸಪ್ರಧಾನವಾದ ರಾಜಕೀಯ ದೃಶ್ಯಗಳನ್ನು ಆಡಿ ತೋರಿಸಿದರು. ಕವಾಯಿತು ಮಾಡಿದರು. ರಾಷ್ಟ್ರಾಭಿಮಾನ ದ್ಯೋತಕವಾದ ಸಂಗೀತದೊಡನೆ ಕುಣಿಕುಣಿದು ಮನವನ್ನು ತಣಿಸಿದರು. ಇದನ್ನು ನೋಡಿ ಗುರುಗಳು ಒಳ್ಳೆ ಅಭಿಮಾನವನ್ನು ವ್ಯಕ್ತಪಡಿಸಿದರು. ವ್ಯಾಸಪೀಠದ ಮೇಲೆ ಹಲವು ಪ್ರತಿಷ್ಠಿತ ವ್ಯಕ್ತಿಗಳೊಡನೆ ಗುರುಗಳು ಕುಳಿತಿದ್ದರು. ಅಧ್ಯಕ್ಷರಾದ ನಿವ್ಯಾನೋ ಇವರಿಗೆ ಇಂಗ್ಲೀಷ ಅಷ್ಟೊಂದು ಚನ್ನಾಗಿ ಬರುತ್ತಿರಲಿಲ್ಲ. ತಮ್ಮ ದುಭಾಷಿಯ ಸಹಾಯದಿಂದ ಗುರುಗಳ ಆದರ್ಶ- ಅವರ ಸಮಾಜ ಸೇವೆ- ಶಿಕ್ಷಣ ಪ್ರಸಾರ ಇತ್ಯಾದಿ ವಿಷಯಗಳನ್ನು ತಿಳಿದುಕೊಂಡು ಬಹಳ ಸಂತೋಷಪಟ್ಟರು. "ಧರ್ಮಕ್ಕಾಗಿ ಜಗತ್ತಿನ ಶಾಂತಿಗಾಗಿ ನಾವೆಲ್ಲರೂ

ಕಟಿಬದ್ಧರಾಗೋಣ. ಮಾನವ ಹಿತವೇ ನಮ್ಮೆಲ್ಲರ ಗುರಿಯಾಗಲಿ" ಎಂಬುದಾಗಿ ಕೆಲವರು ಭಾಷಣ ಮಾಡಿದರು. ೪ ತಾಸಿನವರೆಗೂ ನಡೆದ ಈ ಕಾರ್ಯಕ್ರಮ ನಮಗೆ ತಿಳಿಯದಂತೆ ಕೊನೆಗೊಂಡಿತು. ಅಲ್ಲಿ ನೆರೆದ ಸಹಸ್ರಾರು ಜನ ಮಾನ್ಯರು ಮಹಿಳೆಯರು ತಮ್ಮ ಜಪಾನಿ ಪದ್ಧತಿಯ ವಂದನೆಗಳನ್ನರ್ಪಿಸುತ್ತ ಮೈಯನ್ನು ತಟ್ಟಿ ಕೈಕುಲಕಿ ತುಂಬಿದ ಹೃದಯದಿಂದ ಮಾತು ಮೌನವಾಗಿ ಪ್ರಾಂಜಲ ಮನಸ್ಸಿನಿಂದ ನಮಗೆಲ್ಲ ಶುಭಾಶಯಗಳನ್ನು ಕೋರಿ ಬೀಳ್ಕೊಟ್ಟರು. ಗುರುಗಳು ಇವೆಲ್ಲವನ್ನು ಶಾಂತ ಗಾಂಭೀರ್ಯದಿಂದ ನಿರೀಕ್ಷಿಸುತ್ತ ಭಾವಜೀವಿಗಳಾಗಿ ಮಂದಿರದ ಹೊರಗೆ ಬಂದರು. "ಈ ಜನ ಇಷ್ಟು ಮುಂದುವರಿಯಲಿಕ್ಕೆ ಅವರ ಪ್ರಾಮಾಣಿಕತೆ, ಉದ್ಯೋಗಶೀಲತೆ, ಅನ್ಯೋನ್ಯ ತಿಳುವಳಿಕೆ ಮತ್ತು ಸಹಕಾರ ಸಾಹಸವೃತ್ತಿ, ಸಂಘಟನಾ ಶಕ್ತಿ, ರಾಷ್ಟ್ರ-ಧರ್ಮಾಭಿಮಾನ ಮುಂತಾದ ಗುಣಗಳೇ ಕಾರಣ. ಇವೇ ಇವರನ್ನು ಮೇಲೆತ್ತಿವೆ. ೨೫-೨೬ ವರ್ಷಗಳ ಹಿಂದೆ ಅಗ್ನಿಜ್ವಲನದಿಂದ, ಭೂಕಂಪದಿಂದುಂಟಾದ ವಿನಾಶದಿಂದ ಎರಡನೇ ಮಹಾಯುದ್ಧದಲ್ಲಿ ಸೂರೆಗೊಂಡ ಬಾಂಬುಗಳ ಧಾಳಿಯಿಂದ ಹುರುಪಳಿಸಿ ಜರ್ಜರಿತವಾದ ಈ ದೇಶ ತನ್ನ ಕರ್ತೃತ್ವ ಶಕ್ತಿಯಿಂದ ಸಾಹಸಪ್ರವೃತ್ತಿಯಿಂದ ಸತತೋದ್ಯೋಗದಿಂದ ತನ್ನ ಪುನರುತ್ಥಾನವನ್ನು ಕಂಡಿದೆ. ಜಾಜ್ವಲ್ಯಮಾನವಾಗಿ ಬೆಳಗುತ್ತಲಿದೆ. ವೈಜ್ಞಾನಿಕ, ತಾಂತ್ರಿಕ, ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ. ಆದರೆ ನಮ್ಮ ದೇಶದ ಗತಿಯೇನು? ಗಮ್ಯವಾವುದು? ಎಂದು ಉದ್ಗಾರ ತೆಗೆದರು. ನಿಸ್ಸಂಗಿಗಳಾದ ನಾವು-ನಮ್ಮಂಥವರು-ಸಮಾಜಕ್ಕೂ, ದೇಶಕ್ಕೂ ತದ್ವಾರಾ ವಿಶ್ವಕ್ಕೂ ಅವಿರತ ಪರಿಶ್ರಮವಹಿಸಿ, ಮಾನವ ಜೀವನದ ಮೌಲ್ಯಗಳನ್ನು ಜನತೆಗೆ ಬೋಧಿಸಿ ಜಾಗ್ರತೆಯನ್ನುಂಟುಮಾಡಬೇಕು. ಜಾತೀಯ ಸಂಕೋಲೆಯನ್ನು ಕಿತ್ತೊಗೆದು ಧರ್ಮದ ವ್ಯಾಪ್ತಿಯನ್ನು ಇನ್ನೂ ವಿಶಾಲ ಮಾಡಿ ಜಗತ್ತೇ ತನ್ನ ಕುಟುಂಬವೆಂದು ತಿಳಿದು ಮಹೋನ್ನತ ಧ್ಯೇಯಧೋರಣೆಗಳನ್ನು ರೂಪಿಸಿ ಕಾರ್ಯಪ್ರವೃತ್ತರಾಗಬೇಕು. ಅಂದರೇನೆ ನಮ್ಮ ಜನ್ಮ ಸಾರ್ಥಕವಾದಂತಾಗುವದು" ಎಂದು ನನಗೆ ಆಗಾಗ್ಗೆ ಅರುಹುತ್ತಿದ್ದರು. ಜಪಾನಿನ ಪ್ರಯಾಣವನ್ನು ಪೂರೈಸಿ ಹಾಂಗ್‌ಕಾಂಗಿಗೆ ಪ್ರಯಾಣ ಬೆಳೆಸಿದೆವು.

ಹಾಂಗಕಾಂಗದಲ್ಲಿ ಶ್ರೀಗಳವರು

ಶನಿವಾರ ದಿನಾಂಕ: ೨೪-೧೦-೧೯೭೦ ರಂದು ಟೋಕಿಯೋದಿಂದ ವಿಮಾನ ಪ್ರಯಾಣ ಮಾಡಿ ಹಾಂಗಕಾಂಗ್‌ಗೆ ತಲುಪಿದೆವು. ವಿಮಾನ ನಿಲ್ದಾಣದಲ್ಲಿ ಭಾರತದ ರಾಯಭಾರಿ ಆಫೀಸಿನವರು ಸ್ವಾಗತಿಸಿದರು. ಹಾಂಗ್‌ಕಾಂಗ್ ಸುಂದರ ನಗರ. ಸರಾಸರಿ ೭೦ ಲಕ್ಷ ಜನವಸತಿ. ಉತ್ಕೃಷ್ಟ ಬಂದರ, ಕೌಲೂನ ಹಾಂಗ್‌ಕಾಂಗ್‌ನ್ನು ಸಮುದ್ರವು ವಿಭಾಗಿಸಿದೆ ಚೀನದ ಆಗ್ನೇಯ ದಿಕ್ಕಿನಲ್ಲಿ ಪರ್ವತದ ಎತ್ತರವಾದ ಇಳುಕಲಿನಲ್ಲಿ ವಿಸ್ತಾರವಾಗಿ ಹಬ್ಬಿದೆ, ಈ ನಗರ. ವಿಸ್ತೀರ್ಣವಾದ ಸಾಗರ, ಉನ್ನತವಾದ ಗಿರಿಶಿಖರ ಇವುಗಳ ಪರಸ್ಪರ ಸಖ್ಯವನ್ನು ಪಡೆದು ಪ್ರಕೃತಿಯ ಚೆಲ್ವನ್ನಾಂತು ನವನಾಗರಿಕತೆಯ ಆಕರ್ಷಣ

ಸಾಮಗ್ರಿಗಳೊಡಗೂಡಿ ಔನ್ನತ್ಯದಿಂದ ನಿಂತಿವೆ ಈ ನಗರ. ನಮ್ಮ ಪರಿವಾರದಲ್ಲಿ ಶ್ರೀಗಳು ಡಾ. ರಂಗನಾಥ ದಿವಾಕರರು, ಶ್ರೀಮತಿ ಚಂದ್ರಿಕಾ ಗುತ್ತಲ ಮತ್ತು ನಾನು, ಡಾ. ದಿವಾಕರರ ನಿರ್ದೇಶನದ ಮೇರೆಗೆ ನಾವು ನೋಡಲಿರುವ ಆಯಾಯ ದೇಶಗಳಲ್ಲಿರುವ ಭಾರತ ರಾಯಭಾರಿ ವರ್ಗದವರು ನಮಗೆಲ್ಲರಿಗೂ ವ್ಯವಸ್ಥೆ ಮಾಡಿದ್ದರು. ಹಾಂಗ್‌ಕಾಂಗಿನಲ್ಲಿ 'ಅಲ್ಬಾ' (Alba) ಹೊಟೇಲಿನಲ್ಲಿ ವ್ಯವಸ್ಥೆ ಏರ್ಪಡಿಸಿದ್ದರು. ಅಲ್ಲಿ ವಾಸ್ತವ್ಯವನ್ನು ಮಾಡಿದೆವು. ಮರುದಿನ ಭಾರತದ ಹಾಯಕಮೀಶನರ ಶ್ರೀ ಸಿದ್ಧಾರ್ಥಾಚಾರಿ ಅವರನ್ನು ಭೇಟ್ಟಿಯಾದೆವು. ಮೈಸೂರಿನವರಾದ ಅವರ ಆತ್ಮೀಯತೆಯನ್ನು ಹೇಳುವದೆಂತು? ಗುರುಗಳನ್ನು ಅತ್ಯಂತ ಗೌರವದಿಂದ ಬರಮಾಡಿಕೊಂಡು ಯೋಗಕ್ಷೇಮವನ್ನು ವಿಚಾರಿಸಿದರು. ಧರ್ಮಗುರುಗಳು ಹೀಗೆ ವಿದೇಶ ಪ್ರವಾಸ ಮಾಡಿ ಅಲ್ಲಲ್ಲಿಯ ವೈಶಿಷ್ಟ್ಯಗಳನ್ನರಿತು ನಮ್ಮ ದೇಶದಲ್ಲಿ ಪುನರುತ್ಥಾನ ಕಾರ್ಯವನ್ನು ಕೈಗೊಳ್ಳಬೇಕೆಂಬ ವಿಷಯವಾಗಿ ಗುರುಗಳೊಡನೆ ಸಂಭಾಷಣೆ ಮಾಡಿದರು. ಅಲ್ಲಿಂದ ಹ್ಯಾಪೀ ವ್ಯಾಲಿ (Happy Valey) ಎಂಬಲ್ಲಿರುವ ಹಿಂದೂ ಟೆಂಪಲ್ಲಿಗೆ (Hindu Temple) ನಮ್ಮನ್ನು ಕರೆದುಕೊಂಡು ಹೋದರು. ಭಾರತೀಯ ವರ್ತಕರು ಆ ಸ್ಥಲದ ಸ್ವಾಯತ್ತತೆಯನ್ನು ಪಡೆದುಕೊಂಡು ಅಲ್ಲಿ ಒಂದು ಸುಂದರವಾದ ದೇವಾಲಯವನ್ನು ಕಟ್ಟಿದ್ದಾರೆ. ಗಾಂಧಿ ಸ್ಮಾರಕ ಲೈಬ್ರರಿಯನ್ನು ಸ್ಥಾಪಿಸಿದ್ದಾರೆ. ಶ್ರೀ ಶೀತಲ ಎಂಬುವವರು ಈ ಸಂಸ್ಥೆಯ ವ್ಯವಸ್ಥಾಪಕರು. ಶ್ರೀ ಶರ್ಮಾ ಎಂಬುವವರು ಈ ದೇವಾಲಯದ ಅರ್ಚಕರು ನಮ್ಮೆಲ್ಲರನ್ನು ಸ್ವಾಗತಿಸಿದರು. ಡಾ. ದಿವಾಕರರು ಶಾಂತಿ ಪರಿಷತ್ತಿನ ಧ್ಯೇಯ ಧೋರಣೆಗಳನ್ನು ವಿವರಿಸಿದರು. ಗುರುಗಳಿಂದ ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ತಿಳಿದು ಸಂತೋಷಪಟ್ಟರು. ಮರುದಿನ ನಾವು ಜಕಾರ್ತಕ್ಕೆ ಪ್ರಯಾಣ ಬೆಳೆಸಿದೆವು.

ಜಕಾರ್ತದಲ್ಲಿ

ದಿನಾಂಕ ೨೬ ರಂದು ಹಾಂಗಕಾಂಗದಿಂದ ವಿಮಾನಯಾನದಿಂದ ಹೊರಟು ೭-೮ ತಾಸು ಪ್ರಯಾಣ ಮಾಡಿ ಇಂಡೋನೇಶಿಯಾದ ರಾಜಧಾನಿ ಜಕಾರ್ತಾ ತಲುಪಿದೆವು. ವಿಮಾನ ನಿಲ್ದಾಣದಲ್ಲಿ ಭಾರತದ ರಾಯಭಾರಿ ಶ್ರೀ ಎನ್. ಬಿ. ಮೆನನ್ ಮತ್ತು ತಮ್ಮ ಸಿಬ್ಬಂದಿಯವರು ಸ್ವಾಗತಿಸಿದರು. ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಕೆ. ಪ್ರತಾಪ ಎಂಬುವವರು ಅಲ್ಲಿಯ "ಪ್ರೀತಂ ಸಿಂಗ" ಎಂಬ ಪಂಜಾಬಿ ಶ್ರೀಮಂತ ವರ್ತಕರ ಮನೆಯಲ್ಲಿ ನಮ್ಮ ವಾಸ್ತವ್ಯಕ್ಕೆ ವ್ಯವಸ್ಥೆಯನ್ನು ಮಾಡಿದ್ದರು. ಶ್ರೀ ಪ್ರೀತಂ ಸಿಂಗ ಇವರು ಅತ್ಯಂತ ಧಾರ್ಮಿಕರು, ಅವರ ಮಕ್ಕಳು ಸಹ ಅಷ್ಟೇ ಸುಶೀಲರು ಗುರುಗಳನ್ನು ಅತಿ ಭಕ್ತಿ ಭಾವನೆಯಿಂದ ಏನೊಂದೂ ಅನಾನುಕೂಲವಾಗದಂತೆ ಮೂರು ದಿವಸಗಳ ಪರ್ಯಂತ ಗುರುಗಳ ವ್ಯವಸ್ಥೆಯನ್ನು ಮಾಡಿದರು. ಕರ್ಮ ಧರ್ಮ ಸಂಯೋಗದಿಂದ ದೀಪಾವಳಿ ಹಬ್ಬವನ್ನು ಅವರ ಮನೆಯಲ್ಲಿಯೇ ನೆರವೇರಿಸಿದೆವು. ಭಾರತೀಯರಾದ ಶ್ರೀ ಪ್ರೀತಂ ಸಿಂಗ ಮತ್ತು ಅವರ ಬಳಗದವರು ನಮ್ಮ ಸಂಸ್ಕೃತಿಯಂತೆ ಪರಂಪರೆಯಂತೆ ತಮ್ಮ ಅಂಗಡಿಗೆ

ಗುರುಗಳನ್ನು ಕರೆದುಕೊಂಡು ಹೋಗಿ, ಲಕ್ಷ್ಮೀ–ಸರಸ್ವತೀ ಪೂಜೆಯನ್ನು ಮಾಡಿ ಗುರುಗಳ ಸನ್ನಿಧಿಯಲ್ಲಿ ಸಕಲ ವಿಧಿ ವಿಧಾನಗಳನ್ನು ಒಳ್ಳೇ ವೈಭವದಿಂದ ಆಚರಿಸಿ ಗುರುಗಳ ಆಶೀರ್ವಾದವನ್ನು ಫಲ ಮಂತ್ರಾಕ್ಷತೆಯನ್ನು ಪಡೆದುಕೊಂಡರು. ಇವರ ಮನೆಯಲ್ಲಿ ಭಾರತ ದೇಶವನ್ನು ಬಿಟ್ಟು ೧೨ ದಿವಸಗಳಾದ ಮೇಲೆ ಅನ್ನವನ್ನು ಊಟ ಮಾಡಿದೆವು. ಮರು ದಿವಸ ಸೆಂಟ್ರಲ್ ಮ್ಯುಜಿಯಂ, ನೋಡಲು ಹೊರಟೆವು. ಪ್ರಾಚೀನ ಮತ್ತು ಅರ್ವಾಚೀನ ಐತಿಹಾಸಿಕ ಅವಶೇಷಗಳನ್ನು ಭಿನ್ನ ಭಿನ್ನ ಸಂಸ್ಕೃತಿಗಳ ಪ್ರತೀಕಗಳಾದ ವಸ್ತುಗಳ ಸಂಗ್ರಹ ವನ್ನು ಶಿವಲಿಂಗಮೂರ್ತಿಗಳನ್ನು ನಟರಾಜನ ವಿಗ್ರಹವನ್ನು ನಾವು ಕಂಡೆವು. ಭಾರತೀಯ ಧಾರ್ಮಿಕ ಸಂಸ್ಕೃತಿಯ ಸಂಪರ್ಕದ ಸಾಕ್ಷಾತ್ ಸಾಕ್ಷಿಗಳನ್ನು ಇಸ್ಲಾಂ ಧರ್ಮದ ರಾಜಧಾನಿ ಯಲ್ಲಿ ಕಂಡು ಗುರುಗಳು ಅತ್ಯಂತ ಪ್ರಭಾವಿತರಾದರು. ಆ ದಿನ ಮಧ್ಯಾಹ್ನ ಭಾರತೀಯ ಮಹಿಳಾ ಸಂಘದವರ (Indian women's Association) ಆಮಂತ್ರಣದಂತೆ ಪ್ರಿ. ರಾಮು ಇವರೊಡನೆ ಅಲ್ಲಿಗೆ ದಯಮಾಡಿಸಿ ಆ ಸಂಘದಲ್ಲಿ ಭಾರತೀಯ ಮಹಿಳೆಯರ ಪವಿತ್ರ ಆದರ್ಶಗಳನ್ನು ನಿರೂಪಿಸಿ ವಿಶೇಷತಃ ಅಕ್ಕಮಹಾದೇವಿ ಬಸವೇಶ್ವರ ಇವರ ಬಗ್ಗೆ ಹಿಂದಿಯಲ್ಲಿ ಒಂದು ಗಂಟೆಯ ಕಾಲ ಸುಶ್ರಾವ್ಯ ಭಾಷಣ ಮಾಡಿದರು. ಮರುದಿನ ರಾಯಭಾರಿ ವರ್ಗದವರು ಭೋಜನ ಸಮಾರಂಭಗಳನ್ನು ಏರ್ಪಡಿಸಿದ್ದರು ಮತ್ತು ಮಹಾತ್ಮಾ ಗಾಂಧಿ ಸ್ಕೂಲಿನ ಪ್ರಿ. ರಾಮ ಅವರು ಸಹ ಭೋಜನಕೂಟವನ್ನು ಏರ್ಪಡಿಸಿದ್ದರು. ತಾವು ಭೋಜನ ಸಮಾರಂಭಗಳಲ್ಲಿ ಗುರುಗಳು ಸಕ್ರಿಯವಾಗಿ ಭಾಗ ವಹಿಸದಿದ್ದರೂ ಸಹ ಅಲ್ಲಿಗೆ ಬಂದು ಸಮಾರಂಭಕ್ಕೆ ಆಗಮಿಸಿದ ಸಭ್ಯಗೃಹಸ್ಥರೊಡನೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ವಿಷಯಗಳ ಬಗ್ಗೆ ಲಘು ಚರ್ಚೆಯನ್ನು ಮಾಡು ತ್ತಿದ್ದರು. ಅವರಿಗೆ ಕೇವಲ ಜ್ಞಾನಾಮೃತವೇ ಭೋಜನಕ್ಕಿಂತಲೂ ಹೆಚ್ಚಿಗೆ ಆನಂದ ವನ್ನುಂಟು ಮಾಡುತ್ತಿದ್ದಿರಬಹುದು. ಗುರುಗಳ ಸಂಯಮಶೀಲ ಜೀವನದ ಉದಾತ್ತತೆ ಯನ್ನು ನೋಡಿ ಅಲ್ಲಿಯ ಜನರು ಭಯ ಭಕ್ತಿಯಿಂದ ವಿನೀತರಾಗುತ್ತಿದ್ದರು; ಈ ಭೋಜನ ಕೂಟದ ಸಮಾರಂಭಕ್ಕೆ ಆಮಂತ್ರಿತರಾದವರಲ್ಲಿ ಮುಸಲ್ಮಾನ ಮಹಿಳೆ ಮಾಜಿ ಉಪಸಚಿವೆ, ಶ್ರೀಮತಿ ಕರ್ತಿನಿ (ಕಾತ್ಯಾಯನೀ) ಎಂಬುವರು ಶ್ರೀಗಳನ್ನು ಕಂಡು, ಅವರು ಧರಿಸಿದ ಭಸ್ಮದ ಬಗ್ಗೆ, ಅವರು ತೊಟ್ಟ ಕಾವಿಯ ಅರವಿಯ ಬಗ್ಗೆ, ಲಿಂಗಧಾರಣೆಯ ಬಗ್ಗೆ ಅನೇಕ ಪ್ರಶ್ನೆಗಳನ್ನು ಕೇಳಿದರು. ಶ್ರೀಗಳು ತಾತ್ವಿಕವಾಗಿ, ವೈಜ್ಞಾನಿಕವಾಗಿ ಸಮರ್ಪಕ ಉತ್ತರ ವನ್ನು ಹೇಳಿ ಶಿವಲಿಂಗವನ್ನು, ಭಸ್ಮದ ಗಟ್ಟಿಯನ್ನು ಅವರಿಗೆ ಆಶೀರ್ವದಿಸಿ ಪ್ರತಿ ದಿವಸ ಪೂಜೆ ಮಾಡಲು ತಿಳಿಸಿದರು. ಶ್ರೀಮತಿ ಕರ್ತಿನಿ ಕೃತಜ್ಞತಾಭಾವದಿಂದ ಗುರುಗಳಿಗೆ ವಂದನೆಗಳನ್ನರ್ಪಿಸಿದಳು. ಮರುದಿನ ತರುಣ ಸಂಘಕ್ಕೆ (youth centre) ಭೆಟ್ಟಿ ಕೊಟ್ಟು, ಗುರುದ್ವಾರವನ್ನು ಸ್ವಾತಂತ್ರ್ಯ ಸ್ತಂಭವನ್ನು (piller of liberty) ನೋಡಿಕೊಂಡು ಬಂದೆವು. ಪ್ರೀತಂ ಸಿಂಗರಿಗೂ, ನಮ್ಮನ್ನು ಬೀಳ್ಕೊಡಲು ಬಂದ ಜನರಿಗೂ ಫಲಾಶೀರ್ವಾದ ಮಾಡಿ ಮುಂದಿನ ಪ್ರಯಾಣದ ಸಿದ್ಧತೆಯನ್ನು ಮಾಡಿದೆವು.

ಸಿಂಗಾಪೂರದಲ್ಲಿ

ದಿನಾಂಕ ೨೯, ಗುರುವಾರ ವಿಮಾನಯಾನದಿಂದ ಜಕಾರ್ತಾದಿಂದ ಹೊರಟು ಸಿಂಗಾಪುರಕ್ಕೆ ಬಂದೆವು. ಭಾರತೀಯ ರಾಯಭಾರಿ ವರ್ಗದವರು ಸ್ವಾಗತಿಸಿದರು. ಇದು ಅಂತರರಾಷ್ಟ್ರೀಯ ವ್ಯಾಪಾರ ಕೇಂದ್ರ. ಇಲ್ಲಿಯ ಬಂದರ, ವಿಮಾನ ನಿಲ್ದಾಣ ಅತ್ಯಂತ ಪ್ರಸಿದ್ಧವಿರುವವು. ಚೀನ-ಜಪಾನ-ಮಲಯಾ-ತಮಿಳ-ಇಂಗ್ಲಿಷ್ ಹಿಂದಿ ಭಾಷೆಗಳ ನ್ನಾಡುವ ಜನರನ್ನೊಳಗೊಂಡ, ಸರಾಸರಿ ೭೦ ಲಕ್ಷ ಜನಸಂಖ್ಯೆಯುಳ್ಳ ಈ ಸುಂದರ ನಗರ ಅಂತರರಾಷ್ಟ್ರೀಯ ಬಾಂಧವ್ಯದ ಪ್ರತೀಕವಾಗಿದೆ. ಇಲ್ಲಿರುವ ರಾಮಕೃಷ್ಣಾಶ್ರಮದಲ್ಲಿ ನಮಗೆ ಇಳಿದುಕೊಳ್ಳುವ ವ್ಯವಸ್ಥೆ ಮಾಡಿದ್ದರು. ಈ ಆಶ್ರಮದ ಅಧ್ಯಕ್ಷರಾದ ಶ್ರೀ ಸ್ವಾಮೀ ಸಿದ್ಧಾತ್ಮಾನಂದಜೀ ಅವರು ಕ್ಯೋಟೋದ ಸಭೆಯಲ್ಲಿ ಗುರುಗಳನ್ನು ಸಂದರ್ಶಿಸಿ, ಸಿಂಗಾಪೂರದಲ್ಲಿ ರಾಮಕೃಷ್ಣಾಶ್ರಮದಲ್ಲಿರುವ ಬಗ್ಗೆ ಆಶ್ರಮದ ಕಾರ್ಯಕರ್ತ ರಿಗೆ ಮೊದಲೇ ತಿಳಿಸಿದ್ದರು. ಆಶ್ರಮದ ವ್ಯವಸ್ಥಾಪಕರಾದ ಸ್ವಾಮೀ ದಾಮೋದರಾ ನಂದಜಿ ಮತ್ತು ಸ್ವಾಮೀ ಅಜ್ಞೆಯಾನಂದಜೀ ಇವರು ಗುರುಗಳ ವಾಸ್ತವ್ಯದಲ್ಲಿ ಬಹಳ ವ್ಯವಸ್ಥೆಯನ್ನೇರ್ಪಡಿಸಿದ್ದರು. ಶ್ರೀ ರಾಮಕೃಷ್ಣಾಶ್ರಮ ನಿಜವಾಗಿಯೂ ಪುಣ್ಯಧಾಮ. ಭಾರತೀಯ ಧಾರ್ಮಿಕ ಸಂಸ್ಕೃತಿಯನ್ನು ಪ್ರಪ್ರಥಮವಾಗಿ, ವಿದೇಶಗಳಲ್ಲಿ ಪ್ರಸಾರ ಮಾಡಿ ವೇದ ವೇದಾಂತದ ಅಮರ ಸಂದೇಶವನ್ನು ಪಾಶ್ಚಾತ್ಯ ದಿಗ್ದಿಗಂತಗಳಲ್ಲಿ ಅನುರಣಿತವಾಗು ವಂತೆ ತಮ್ಮ ಸಿಂಹನಾದದಿಂದ ಘೋಷಿಸಿದ ಸ್ವಾಮೀ ವಿವೇಕಾನಂದರಿಂದ ಸ್ಥಾಪಿಸಲ್ಪಟ್ಟು ಸ್ಫೂರ್ತಿಯನ್ನು ಪಡೆದ ಶಾಂತಿಧಾಮವಿದು. ಇಲ್ಲಿಯಂತೂ ಶ್ರೀಗಳು ತಮ್ಮ ಮೂರು ಸಾವಿರಮಠದಲ್ಲಿರುವಂತೆ ಅತ್ಯಂತ ಆನಂದದಿಂದ ಇದ್ದರು. ಪತ್ರಿ ಪುಷ್ಪಗಳ ವಾಟಿಕೆಗಳಿಂದ ವಿಸ್ತಾರಗೊಂಡ ಸುಂದರ ಆರಾಮ, ನಗರದ ಗಜಿಬಿಜಿಯಿಂದ ದೂರವಿದ್ದ ಪ್ರದೇಶ. ನಿಸರ್ಗದ ರಮಣೀಯತೆ, ಪ್ರಶಾಂತ ಪವಿತ್ರ ವಾತಾವರಣದಿಂದ ಕೂಡಿದ ಪ್ರಾರ್ಥನಾ ಮಂದಿರ (Prayer Hall) ಇತ್ಯಾದಿಗಳು ಗುರುಗಳಿಗೆ ಬಹಳ ಹಿಡಿಸಿದವು. ಇಲ್ಲಿ ಅನಾಥ ಮಕ್ಕಳ ಪಾಲನೆಪೋಷಣೆ ಒಳ್ಳೆ ವ್ಯವಸ್ಥಿತವಾಗಿ ನಡೆಯುತ್ತಿದೆ. ಮೂರುಸಾವಿರಮಠದಲ್ಲಿರು ವಂತೆಯೇ ದೇವತಾ ಪ್ರಾರ್ಥನೆ-ಭಜನೆಗಳ ಕಾರ್ಯಕ್ರಮವೂ ಪ್ರತಿನಿತ್ಯ ಕ್ರಮಬದ್ಧವಾಗಿ ನಡೆಯುತ್ತದೆ. ಇದೆಲ್ಲವನ್ನು ಶ್ರೀಗಳು ನಿರೀಕ್ಷಿಸಿ ಅತ್ಯಂತ ಪ್ರಫುಲ್ಲಚಿತ್ತರಾಗಿ ೨ ದಿನಗಳನ್ನು ಕಳೆದರು. ಶ್ರೀಮಠದಲ್ಲಿರುವಂತೆ ತಮ್ಮ ತ್ರಿಕಾಲ ಪೂಜೆಯನ್ನು ನೆರವೇರಿಸುತ್ತಿದ್ದರು. ಅಲ್ಲಿಂದ ಹೊರಡುವ ಮುಂದೆ ಇಲ್ಲಿರುವ ಅನಾಥಾಶ್ರಮದ ಸಹಾಯಾರ್ಥವಾಗಿ ೫೦ ಡಾಲರ ಹಣವನ್ನು ದೇಣಿಗೆಯಾಗಿ ಕೊಟ್ಟರು ಮತ್ತು ಮಠದ ವ್ಯವಸ್ಥಾಪಕ ಸ್ವಾಮಿಗಳಿಗೆ ವಿಭೂತಿ, ಲಿಂಗ ಮತ್ತು ಕೆಲವು ಪುಸ್ತಕಗಳನ್ನು ಆಶೀರ್ವದಿಸಿದರು. ಸಿಂಗಾಪೂರದಲ್ಲಿ ಭಾರತದವರಾದ ಶ್ರೀ 'ಜುಮಾಭಾಯ್' ಎಂಬುವವರು ಆಗರ್ಭ ಶ್ರೀಮಂತರು. ಗಾಂಧೀ ತತ್ವನಿಷ್ಠರು, ಭೋಜನಕೂಟವನ್ನು ತಮ್ಮ ಮನೆಯಲ್ಲಿ ಏರ್ಪಡಿಸಿದ್ದರು, ಭೋಜನ ಕೂಟಕ್ಕೆ ನಗರದ ಪ್ರತಿಷ್ಠಿತ ವ್ಯಕ್ತಿಗಳೂ, ಭಾರತದ ಹಾಯ್‌ಕಮೀಶನರ ಶ್ರೀ ಪ್ರೇಮ

ಭಾಷಿಯಾ ಮತ್ತು ರಾಯಭಾರಿ ವರ್ಗದವರೂ ಬಂದಿದ್ದರು. ಶ್ರೀಗಳೊಡನೆ ಸಾಮಾಜಿಕ, ಧಾರ್ಮಿಕ ವಿಷಯುಗಳನ್ನು ಚರ್ಚಿಸಿ ಅತ್ಯಂತ ಸಂತೋಷಪಟ್ಟರು. ಮರುದಿನ ನಮ್ಮನ್ನು ಕೌಲಾಲಂಪುರಕ್ಕೆ ಬೀಳ್ಕೊಟ್ಟರು.

ಕೌಲಾಲಂಪುರದಲ್ಲಿ

ಸಿಂಗಾಪೂರದಿಂದ ಮಲೇಶಿಯಾ ದೇಶದ ರಾಜಧಾನಿ ಕೌಲಾಲಂಪುರಕ್ಕೆ ದಿನಾಂಕ ನವೆಂಬರ್ ೧೮ರಂದು ವಿಮಾನಯಾನದಿಂದ ಪ್ರಯಾಣ ಬೆಳೆಸಿ ತಲುಪಿದೆವು. ಭಾರತದ ರಾಯಭಾರಿ ಕಚೇರಿಯ ಮುಖ್ಯಾಧಿಕಾರಿಗಳಾದ ಶ್ರೀ ಗುಪ್ತಾ ಅವರು ಸ್ವಾಗತಿಸಿದರು. ಭಾರತದ ಓವರ್-ಸಿ-ಬ್ಯಾಂಕಿನ (Overseas Bank of India) ಮುಖ್ಯ ಅಕೌಂಟಂಟ ರಾದ ಶ್ರೀ ದೊರೆಸ್ವಾಮಿ ಅಯ್ಯರ ಇವರ ಬಂಗ್ಲೆಯಲ್ಲಿ ಗುರುಗಳ ವಾಸ್ತವ್ಯದ ವ್ಯವಸ್ಥೆ ಯನ್ನು ಮಾಡಿದ್ದರು. ಅವರಲ್ಲಿ ವಿಶ್ರಾಂತಿ ಪಡೆದೆವು. ಅದೇ ದಿನ ಸಾಯಂಕಾಲ ಸ್ವಾಮೀ ವಿವೇಕಾನಂದ ಭವನದಲ್ಲಿ ಸಭೆಯನ್ನೇರ್ಪಡಿಸಿದ್ದರು. ಶ್ರೀ ಸ್ವಾಮೀ ಪ್ರಣವಾನಂದಜೀ ಇವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಗುರುಗಳು ವಿವೇಕಾನಂದರ ಜೀವನ ಕರ್ತೃತ್ವ ಶಕ್ತಿ ಹಿಂದೂ ಧರ್ಮದ ಪುನರುತ್ಥಾನ ಮತ್ತು ಜಾಗತಿಕ ಶಾಂತಿ ಇತ್ಯಾದಿ ವಿಷಯುಗಳ ಬಗ್ಗೆ ಭಾಷಣ ಮಾಡಿದರು. ಡಾ. ದಿವಾಕರರು ಮತ್ತು ಇತರರು ಪರಿಷತ್ತಿನ ಫಲಶ್ರುತಿಯ ಬಗ್ಗೆ ವ್ಯಾಖ್ಯಾನ ಕೊಟ್ಟೆವು.

ಮರುದಿನ ಸ್ವಾಮೀ ಶಿವಾನಂದಜೀ ಇವರಿಂದ ಸ್ಥಾಪಿಸಲ್ಪಟ್ಟ ದೈವೀಜೀವನ ಸಂಸ್ಥೆಗೆ (The Divine Life Society) ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸ್ವಾಮೀ ಪ್ರಣವಾ ನಂದಜೀ ಇವರ ಆಮಂತ್ರಣದ ಮೇರೆಗೆ ಗುರುಗಳು ಅಲ್ಲಿಗೆ ದಯಮಾಡಿಸಿದರು. ಗುರು ಗಳನ್ನು ಬರಮಾಡಿಕೊಂಡು ಸಂಸ್ಥೆಯ ಕಾರ್ಯಕಲಾಪಗಳ ಪರಿಚಯವನ್ನು ಮಾಡಿ ಕೊಟ್ಟರು. ಆಶ್ರಮದ ಸಂಚಾಲಕರು ಕೈಕೊಂಡ ಭಾರತೀಯ ತತ್ವ ಪ್ರಚಾರ ಸಂಘಟನೆ ಧಾರ್ಮಿಕ ಗ್ರಂಥ ಪ್ರಕಟನೆಯ ಕಾರ್ಯ ಇವುಗಳನ್ನು ನೋಡಿ ಗುರುಗಳು ಮೆಚ್ಚಿಕೊಂಡು ಅತ್ಯಂತ ಆತ್ಮೀಯತೆಯಿಂದ ೨-೩ ಘಂಟೆಗಳ ಕಾಲ ನಮ್ಮ ದೇಶದ ಧಾರ್ಮಿಕ ವಿಷಯ ಗಳನ್ನು ಕುರಿತು ವಿಚಾರ ವಿನಿಮಯ ಮಾಡಿದರು. ಈ ಚರ್ಚೆಯಲ್ಲಿ ಡಾ. ದಿವಾಕರರು ಮತ್ತು ನಾನು ಭಾಗವಹಿಸಿದ್ದೆವು. ಅಲ್ಲಿಯೇ ಆಶ್ರಮದ ಅತಿ ಸನಿಹದಲ್ಲಿರುವ ಗಿರಿಶಿಖರ ದಲ್ಲಿ ಗಿರಿಯ ಗರ್ಭವನ್ನೇ ಕೊರೆದು ವಿಸ್ತಾರ ವಿಸ್ತೃತ ಸಾಂದ್ರತೆಯನ್ನು ನಿರ್ಮಿಸಿ ಕೊಂಡಂತಿರುವ ವಿರೂಪಾಕ್ಷವಾದ 'ಬಟು' ಗವಿಗಳನ್ನು ನೋಡಲು ಹೊರಟೆವು. ಇದೊಂದು ನಿಸರ್ಗದ ಭವ್ಯದೃಶ್ಯ. ಗಗನಚುಂಬಿಯಾದ ಗಿರಿಯ ತುದಿಯ ಒಂದು ಭಾಗ ದಿಂದ ಆಕಾಶಗಂಗೆ ಹರಿಯುತ್ತಿದೆ. ಗಿರಿಯ ಗರ್ಭದಲ್ಲಿ ಹಿರಿದಾದ ಪಡಸಾಲೆಯಲ್ಲಿ ಒಂದೆಡೆ ಕಾರ್ತಿಕೇಯ ಸ್ವಾಮಿಯ ಮೂರ್ತಿಯು ವಿರಾಜಮಾನವಾಗಿ ಬೆಳಗುತಲಿದೆ. ಆ ಭಾಗ ದಲ್ಲಿರುವ ಭಾವಿಕ ಜನಗಳಿಗೆ ಇದೊಂದು ಯಾತ್ರಾ ಸ್ಥಳ. ಲಕ್ಷಾಂತರ ಜನರು ಜಾತಿ ವಿಜಾತಿಗಳ ಭೇದವನ್ನು ಮರೆತು ಈ ದೇವಸೇನಾನಿ, ಷಣ್ಮುಖಿ ಸ್ವಾಮಿಯ ಜಾತ್ರೆಯಲ್ಲಿ

ಭಾಗವಹಿಸುತ್ತಿರುವಂತೆ. ಈ ದೃಶ್ಯವನ್ನು ನೋಡಿ ಗುರುಗಳು ಮಹೋನ್ನತಿಯಲ್ಲಿ ನಮ್ರತೆಯನ್ನು, ಜಡದಲ್ಲಿ ಚೈತನ್ಯ ಶಕ್ತಿಯನ್ನು ಪವಿತ್ರತೆಯನ್ನು ಕಂಡು, ಭಾವ ಮೌನರಾಗಿ ಕೆಲ ಹೊತ್ತು ಅಲ್ಲಿಯೇ ಕುಳಿತು ಆನಂದಪಟ್ಟರು. ಕೌಲಾಲಂಪುರದ ಈ ಭವ್ಯ ದೃಶ್ಯವನ್ನು ನೋಡಿ ದಾರಿಯುದ್ದಕ್ಕೂ ಪ್ರಕೃತಿಯ ಹಚ್ಚು ಹಸುರಿನ ಚೆಲುವನ್ನು, ಗಿರಿಕಂದಗಳ ಘನತೆ ಗಂಭೀರತೆಗಳನ್ನು ನಿರೀಕ್ಷಿಸುತ್ತ ಪ್ರಶಾಂತ ನಗರಕ್ಕೆ ಹಿಂತಿರುಗಿದೆವು. ಅಲ್ಲಿರುವ ಮಹಮ್ಮದೀಯ ಧರ್ಮದ ಪ್ರತಿಷ್ಠೆಯನ್ನು ಹೊತ್ತು ನಿಂತಂತಿರುವ ಮಸೀದೆಗೆ ಬಂದೆವು. ಇದು ಅಸಾಮಾನ್ಯ. ಸೌಂದರ್ಯದಿಂದ ಕೂಡಿದೆ. ಕೋಟ್ಯಾಂತರ ಹಣವನ್ನು ಖರ್ಚುಮಾಡಿ ಕಟ್ಟಿಸಿದ್ದಾರೆ. ನಾವು ಮಂದಿರವನ್ನು ಬರಗಾಲಿನಿಂದ ಪ್ರವೇಶಿಸಬೇಕು. ನಾವು ಪ್ರವೇಶಿಸುವಂತೆ ನಮ್ಮ ಪ್ರತಿಬಿಂಬವನ್ನು ಕಾಣುತ್ತೇವೆ. ಅತ್ಯಂತ ಹೊಳಪುಳ್ಳ ಶಿಲೆಗಳನ್ನು ಕೆತ್ತಿರೋಣದರಿಂದ ಚತುಷ್ಕೋಣಾಕಾರದ ಮಧ್ಯ ಮಂಟಪದಲ್ಲಿ ನಿರ್ಮಲ ನೀರಿನಿಂದ ತುಂಬಿದ ಪುಷ್ಕರಿಣಿ ಇರುವುದೋ ಹೇಗೆ ಎಂಬ ಭ್ರಾಂತಿ ಬಂದು ಮಹಾಭಾರತ ಕಾಲದ ಇಂದ್ರಪ್ರಸ್ಥನಗರಿಯಲ್ಲಿದ್ದ ಪಾಂಡವರ ಅರಮನೆಯ ಸಭಾಭವನದ ವರ್ಣನೆಯ ವಿಚಾರ ಮನಸ್ಸಿನಲ್ಲಿ ಮಿಂಚಿತು. ಗುರುಗಳೊಡನೆ ಈ ಮಹಮ್ಮದೀಯ ಧರ್ಮದ ಪ್ರಾರ್ಥನಾ ಶಾಲೆಯ ಸಿರಿಗರಿಮೆಯನ್ನು ಮನವಾರೆ ಮಾತನಾಡಿದೆನು. ಅಲ್ಲಿಂದ ಪ್ರಸಿದ್ಧವಾದ ವಸ್ತು ಸಂಗ್ರಹಾಲಯಕ್ಕೆ ರಾಯಭಾರಿ ವರ್ಗದವರು ಕರೆದುಕೊಂಡು ಹೋದಾಗ ಅಲ್ಲಿರುವ ವಿಶಾಲವಾದ ಪ್ರಾಚೀನ-ನವೀನ ವಿವಿಧ ವಸ್ತುಗಳನ್ನು ನೋಡಿದೆವು. ಅಲ್ಲಿ ಚಂದ್ರಲೋಕದಿಂದ ಭೂಲೋಕಕ್ಕೆ ತೆಗೆದುಕೊಂಡು ಬಂದ ಚಂದ್ರಶಿಲೆಯ ಒಂದು ಸಣ್ಣ ತುಣುಕನ್ನು ಕಂಡೆವು. ಅದು ಒಂದು ಕಾಜಿನ ಗುಂಡಿನಂತೆ ಹೊಳಪುಳ್ಳದ್ದಾಗಿದೆ. ಅದನ್ನು ನೋಡಿ ಬಹಳ ಆನಂದಪಟ್ಟರು ಗುರುಗಳು.

ಕೌಲಾಲಂಪುರದಲ್ಲಿ ಗುರುಚರಣಸೇವೆಯ ಪ್ರಸಂಗವೊಂದು ಒದಗಿತ್ತು. ಮಲೇಶಿಯಾದ ಉದ್ಯೋಗ ಸಂಪರ್ಕ ಮಂತ್ರಿಗಳಾದ ಶ್ರೀ ವಿ. ಜಿ. ಸಂಬಂಧನ್ ಅವರ ಪತ್ನಿಯವರು ರಾಯಭಾರಿ ಔತಣಕ್ಕೆ ಆಮಂತ್ರಿತರಾಗಿ ಬಂದಿದ್ದರು. ಪೂಜ್ಯ ಗುರುಗಳನ್ನು ಅಲ್ಲಿ ಸಂದರ್ಶಿಸಿ ಪ್ರಭಾವಿತರಾಗಿ ತಮ್ಮ ಮನೆಗೆ ಕರೆದುಕೊಂಡು ಹೋದರು. ಮಂತ್ರಿಗಳಾದ ಶ್ರೀ ಸಂಬಂಧನ್ ಇವರು ಗುರುಗಳನ್ನು ತಮ್ಮ ಮನೆಯ ಮಹಾದ್ವಾರದಲ್ಲಿ ಸ್ವಾಗತಿಸಿ, ಒಳಗೆ ಕರೆದೊಯ್ದು ಪೀಠದ ಮೇಲೆ ಕೂಡ್ರಿಸಿ ನಮಸ್ಕರಿಸಿದರು. ಭಾರತೀಯರಾದ ಇವರು ಮತ್ತು ಇವರ ಪತ್ನಿಯರು ಗುರುಗಳ ಪಾದಪೂಜೆಯನ್ನು ಒಳ್ಳೇ ವೈಭವದಿಂದ, ಭಕ್ತಿಯ ಆನಂದೋದ್ರೇಕದಿಂದ ಮಂಗಲ ಸಂಗೀತದೊಡನೆ ನೆರವೇರಿಸಿದರು. ಶ್ರೀಮತಿ ಸಂಬಂಧನ್ ಇವರು ವೀಣಾವಾದನ ಕಲೆಯಲ್ಲಿ ಕರ್ನಾಟಕ ಗಾಯನದಲ್ಲಿ ನಿಪುಣರು. ಸಂದರ್ಭಕ್ಕನುಸರಿಸಿ ಸಂಸ್ಕೃತ ರಚಿತವಾದ "ಲಿಂಗಾಷ್ಟಕವನ್ನು" ಒಳ್ಳೇ ಭಾವನಿರ್ಭರತೆಯಿಂದ ಹಾಡಿ ಸರ್ವರನ್ನು ಭಾವಪರವಶರನ್ನಾಗಿ ಮಾಡಿದರು. ಇವರಿಗೆ ಸಂಸ್ಕೃತವೆಂದರೆ ಪಂಚಪ್ರಾಣ ತಾವು ಬಿ.ಎ.ದವರೆಗೆ ಸಂಸ್ಕೃತವನ್ನು ಅಭ್ಯಾಸಮಾಡಿರುವೆವೆಂದು ತಿಳಿಸಿದರು.

ನಾನು ಸಂಸ್ಕೃತ ಪ್ರಾಧ್ಯಾಪಕನೆಂದು ತಿಳಿದು ಕಾಳಿದಾಸನ "ಮಾಳವಿಕಾಗ್ನಿ ಮಿತ್ರ" ನಾಟಕದ ನಾಂದಿ ಶ್ಲೋಕದ ಈಶ್ವರಸ್ತವನವನ್ನು ಬರೆಸಿಕೊಂಡು ಅರ್ಥವಿವರಣೆಯನ್ನು ತಿಳಿದು ಕೊಂಡು ಗುರುಗಳ ಸನ್ನಿಧಿಯಲ್ಲಿ ತಂತ್ರಿಯ ವಾದ್ಯದೊಡನೆ ಸ್ವರಗಳನ್ನು ಮೇಳೈಸಿ, ತಾಳ ಲಯಬದ್ಧವಾಗಿ ಹಾಡಿ ಸರ್ವರನ್ನು ಆನಂದಪಡಿಸಿದರು. ಭಾರತೀಯರು ಎಲ್ಲಿದ್ದರೂ ತಮ್ಮ ಧಾರ್ಮಿಕ ಪರಂಪರೆಯನ್ನು ಸಂಸ್ಕೃತಿಯ ಸಂಬಂಧವನ್ನು ಬಿಡದೆ ಮುಂದುವರೆಸಿ ಕೊಂಡು ಹೋಗುವರೆಂಬ ಪ್ರತ್ಯಕ್ಷ ಉದಾಹರಣೆಯನ್ನು ಇವರಲ್ಲಿ ಕಾಣಬಹುದು ಎಂದು ಗುರುಗಳು ಉದ್ಗಾರ ತೆಗೆದರು. ಗುರುವರ್ಯರಿಗೆ ಭಕ್ತಿಕಾಣಿಕೆಯನ್ನರ್ಪಿಸಿ ಫಲಮಂತ್ರಾಕ್ಷತೆ ಯನ್ನು ಗುರುಗಳಿಂದ ಸ್ವೀಕರಿಸಿ ಕೃತಕೃತ್ಯರಾದೆವೆಂದು ಹೇಳಿ,ಸಂತೋಷದಿಂದ ಬೀಳ್ಕೊಟ್ಟರು.

ಥಾಯ್‌-ಲ್ಯಾಂಡಿನ ಬ್ಯಾಂಗ್‌ಕಾಕಿನಲ್ಲಿ

ಬೌದ್ಧ ಧರ್ಮದ ಕೇಂದ್ರಸ್ಥಾನವಾದ ಬ್ಯಾಂಗ್‌ಕಾಕ್ ನಗರಕ್ಕೆ ದಿನಾಂಕ ೩, ನವೆಂಬರ್‌ದಂದು ವಿಮಾನ ಮಾರ್ಗವಾಗಿ ಬಂದಿಳಿದೆವು. ಪದ್ಧತಿಯಂತೆ ರಾಯಭಾರಿಯ ಸಿಬ್ಬಂದಿಯ ಮುಖ್ಯಸ್ಥರಾದ ಶ್ರೀ ತಿಪಾಠಿ ಎಂಬುವರು ನಮ್ಮ ಪರಿವಾರದವರನ್ನು ಸ್ವಾಗತಿ ಸಿದರು. ಬ್ಯಾಂಗ್‌ಕಾಕ್ ನಗರದಲ್ಲಿ "ಥಾಯ್‌-ಭಾರತ ಮಂದಿರ"ವೆಂಬ ವಿಶಾಲ ವಾದ ಮಂದಿರವಿದೆ. ಅಲ್ಲಿಯೇ ನಮ್ಮೆಲ್ಲರ ವಾಸ್ತವ್ಯಕ್ಕೆ ವ್ಯವಸ್ಥೆಯನ್ನು ಏರ್ಪಡಿಸಿದ್ದರು. ಥಾಯ್ ಭಾಷೆಯನ್ನು ಅರಿತ ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀ ಶರ್ಮಾ ಅವರು ನಮ್ಮೊಡನೆ ಇರುತ್ತಿದ್ದರು. ಶ್ರೀ ಸಚಿದೇವ ಎಂಬ ಸದ್ಗೃಹಸ್ಥರು ದೊಡ್ಡ ಶ್ರೀಮಂತರು, ಮಿಲ್ಲುಗಳ ಮಾಲೀಕರು ಮತ್ತು ಡೈರೆಕ್ಟರು. ಅತ್ಯಂತ ಸಾದಾ ಖಾದಿ ಉಡುಪನ್ನು ಧರಿಸಿದವರು ಇದ್ದರೂ ತಮ್ಮ ಶೀಲ ಸೌಜನ್ಯದಿಂದ ಔದಾರ್ಯ-ಘನತೆಗಳಿಂದ ಅತ್ಯಂತ ಪ್ರಭಾವಶಾಲಿಗಳಾಗಿ ಕಾಣುತ್ತಿದ್ದರು. ಇವರು ೨ ಸಾವಿರ ವಿದ್ಯಾರ್ಥಿಗಳ ಹೈಸ್ಕೂಲನ್ನು ನಡೆಸುತ್ತಾರೆ. ಭಾರತದಿಂದ ಬಂದವರಿಗೆ ಆತಿಥ್ಯವನ್ನು ಅರ್ಪಿಸುತ್ತಾರೆ. ಗುರುಗಳನ್ನು ಅತ್ಯಂತ ಗೌರವಾದರಗಳಿಂದ ಪುರಸ್ಕರಿಸಿ ಪೂಜಾ ಪ್ರಸಾದಗಳಿಗೆ ಎಲ್ಲ ವ್ಯವಸ್ಥೆಯನ್ನು ಮಾಡಿದರು. ತಮ್ಮ ಸಹೋದರರಾದ ಶ್ರೀ ಸುರಜಭಾನ ಸಚಿದೇವ ಎಂಬವರನ್ನು ನಮ್ಮೊಡನೆ ಕಳಿಸಿ ಸುಂದರ ನಗರವನ್ನು ತೋರಿಸಿ ನಮಗೆ ಬೇಕಾದ ಸಾಮಾನುಗಳನ್ನು ಕೊಡಿಸಲು ಹೇಳಿಕಳಿಸಿದ್ದರು. ಇಲ್ಲಿ ವಿಶೇಷವೆಂದರೆ ಬೌದ್ಧ ಧರ್ಮದ ಮುಖ್ಯ ಗುರು ಗಳೊಡನೆ ಸಂದರ್ಶನ. ಬೌದ್ಧ ಧರ್ಮದ ಮುಖ್ಯ ಗುರುಗಳನ್ನು (His Holiness Supreme Patriarch of Thiland) ಸಂದರ್ಶಿಸಲು ರಾಯಭಾರಿ ವರ್ಗದವರು ವ್ಯವಸ್ಥೆ ಮಾಡಿದ ಪ್ರಕಾರ ಅವರ ಅರಮನೆಯಂತಿರುವ ಗುರುಮಠದಲ್ಲಿ ಗುರುಗಳು ಮತ್ತು ಪರಿವಾರದವರು ಅವರನ್ನು ಕಂಡೆವು. ದುಭಾಷಿ ಶ್ರೀ ಶರ್ಮರ ಮುಖಾಂತರ ಉಭಯ ಗುರುವರೇಣ್ಯರು ಧರ್ಮ ಮತ್ತು ವಿಶ್ವಶಾಂತಿಯ ತುಲನಾತ್ಮಕ ವಿಮರ್ಶೆ ಮಾಡಿದರು. ಅಲ್ಲಿ ಬ್ಯಾಂಗ್‌ಕಾಕನಲ್ಲಿರುವ ಬೌದ್ಧ ಸಂನ್ಯಾಸಿಗಳ ವಿಶ್ವವಿದ್ಯಾಲಯಕ್ಕೆ(Mahachulalong Koruraja Vidyalaya) ಭೆಟ್ಟಿ ಕೊಟ್ಟೆವು. ಅಲ್ಲಿ ಕಲಿಯುವವರೂ ಕಲಿಸುವವರೂ

ಆಡಳಿತ ವರ್ಗದವರೂ ಎಲ್ಲರೂ ಬುದ್ಧ ಸಂನ್ಯಾಸಿಗಳೇ. ಗುರುಗಳು ತಮ್ಮ ಧ್ಯೇಯ ಧೋರಣೆಗಳ ಮನೀಷೆಗೆ ಅತ್ಯಂತ ಸಮೀಪವಾದ ಈ ಸಂಸ್ಥೆಯನ್ನು ನೋಡಿ ಬಹಳ ಸಂತೋಷ ವ್ಯಕ್ತಮಾಡಿದರು. "ಸರ್ವಃ ಸಂಗಧೇಷುನ್ನಿಷ್ಯತಿ" ಎಂದು ಕಾಳಿದಾಸನು ಅಭಿಜ್ಞಾನ ಶಾಕುಂತಲದಲ್ಲಿ ವ್ಯಕ್ತಪಡಿಸಿದ ವಾಕ್ಯ ನೆನಪಿಗೆ ಬಂದಿತು. ಗುರುಗಳಿಗೆ ತಿಳಿಸಿದೆನು. ಉಭಯರೂ ನಕ್ಕು ನಲಿದಾಡಿದೆವು. ಇಂಥ ಸಂಸ್ಥೆಯನ್ನೇ ತಾವೂ ಕೂಡಾ ತಮ್ಮ ನಾಡಿನಲ್ಲಿ ಸ್ಥಾಪಿಸುವದು ಹಿತಕರವೆಂಬ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ರಾಯಭಾರಿ ವರ್ಗದವರು ನಮ್ಮ ವಿದೇಶ ಪಯಣದ ಕೊನೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಿ, ತಾಯ್ನಾಡಿಗೆ ಮರಳಿ ತೆರಳಲು ತುಂಬಿದ ಹೃದಯದಿಂದ ಬೀಳ್ಕೊಟ್ಟರು.

ತಾಯ್ನಾಡಿಗೆ ಮರು ಪ್ರಯಾಣ

ದಿನಾಂಕ ೫-೧೧-೧೯೭೦ರಂದು ವಿದೇಶ ಪ್ರಯಾಣವನ್ನು ಮುಕ್ತಾಯಮಾಡಿ, ತಾಯ್ನಾಡಿಗೆ (ಭಾರತಕ್ಕೆ) ವಿಮಾನದಲ್ಲಿ ಮರಳಿದೆವು. ಕಲಕತ್ತೆಯಲ್ಲಿ ಇನ್‌ಕಮ್‌ಟ್ಯಾಕ್ಸ್ ಆ. ಕಮೀಶನರ್, ಶ್ರೀ ಎಮ್. ಪಿ. ಹೊಸಮನಿಯವರ ಆತಿಥ್ಯದಲ್ಲಿ ೨ ದಿವಸ ನಿಂತು ಅಲ್ಲಿ ದರ್ಶನೀಯ ಸ್ಥಳಗಳನ್ನು ನೋಡಿಕೊಂಡು, ಸ್ವಾಮೀ ವಿವೇಕಾನಂದ-ರಾಮಕೃಷ್ಣರ ಬೇಲೂರ ಮಠಕ್ಕೆ ಹೋಗಿ ಅಲ್ಲಿಯ ಸ್ವಾಮಿಗಳನ್ನು ಸಂದರ್ಶಿಸಿ, ಅಲ್ಲಿಂದ ದಿಲ್ಲಿಗೆ ಪಯಣ ಬೆಳೆಸಿ ಅಲ್ಲಿ ಕೋ-ಆಪರೇಟಿವ್ ಡೆ. ರಜಿಸ್ಟ್ರಾರ್, ಶ್ರೀ ಸಿ. ಆರ್. ಹಿರೇಮಠರಲ್ಲಿ ೨ ದಿವಸ ಆತಿಥ್ಯ ಪಡೆದೆವು. ದಿನಾಂಕ ೧೦ರಂದು ಮುಂಬೈಗೆ ಪ್ರಯಾಣ ಮಾಡಿ ಅಲ್ಲಿ ನನ್ನ ಸಹಾಧ್ಯಾಯಿಗಳೂ, ಮಿತ್ರರೂ ಮತ್ತು ಪೂಜ್ಯರ ಸತ್ಸೇವೆಗೆ ಪಾತ್ರರೂ ಆದ ಇನ್‌ಕಮ್ ಟ್ಯಾಕ್ಸ್ ಆ. ಕಮೀಶನರ್, ಶ್ರೀ ಪಿ. ಆರ್. ಹಿರೇಮಠರಲ್ಲಿ ಒಂದು ದಿನವಿದ್ದು ಅವರಲ್ಲಿ ಪೂಜೆ ತೀರಿಸಿಕೊಂಡು ಅವರೆಲ್ಲರಿಗೂ ಆಶೀರ್ವದಿಸಿ ದಿನಾಂಕ ೧೧-೧೧-೭೦ರಂದು ಮುಂಬೈಯಿಂದ ವಿಮಾನ ಮಾರ್ಗವಾಗಿ ಹೊರಟು ಬೆಳಗಾವಿಯ ವಿಮಾನ ನಿಲ್ದಾಣದಲ್ಲಿ ಸನ್ನಿಧಿಯವರು ವಿಮಾನದಿಂದ ಇಳಿದರು. ವಿದೇಶ ಪ್ರವಾಸ ಮಾಡಿ ಜಾಗತಿಕ ಧರ್ಮ ಶಾಂತಿ ಪರಿಷತ್ತಿನಲ್ಲಿ ಭಾರತದ ಸಂದೇಶವನ್ನು ಬೀರಿ ಸುಖರೂಪವಾಗಿ ಬಂದ ಗುರುವರ್ಯ ರನ್ನು ಸ್ವಾಗತಿಸಲು ಮಹಾಜನಗಳು, ಸ್ವಾಮಿಗಳು ವಿಮಾನ ನಿಲ್ದಾಣದಲ್ಲಿ ನೆರೆದಿದ್ದರು. ಸರ್ವರ ಹಾರ್ದಿಕ ಸ್ವಾಗತವನ್ನು ಸ್ವೀಕರಿಸಿ, ಮಧ್ಯಾಹ್ನ ೧ ಘಂಟೆಗೆ ಮಹಾಸನ್ನಿಧಿಯವರು ಶ್ರೀ ಮಠಕ್ಕೆ ದಯಮಾಡಿಸಿದರು.

ಕೊನೆಯ ಮಾತು

ಶ್ರೀ ಗಂಗಾಧರ ರಾಜಯೋಗೀಂದ್ರರು ಆದರ್ಶ ಜೀವಿಗಳು, ವಿದ್ಯಾಲಂಕೃತರು, ಉತ್ತಮ ವಾಗ್ಮಿಗಳು, ಸದಾಚಾರ ಶೀಲರು, ಭಾಗ್ಯವಂತರು. ಧರ್ಮದ ಮಹಾಪೀಠ ವನ್ನಲಂಕರಿಸಿದರೂ ಅಹಂಕಾರದ ಸುಳಿವಿಲ್ಲ. ಮಹೋದಾರ ಕಾರ್ಯಗಳನ್ನು ಗೈಯ್ಯ ಬೇಕೆಂಬ ಹುಮ್ಮಸ ಅವರಲ್ಲಿದೆ. ತಮ್ಮ ಮಠದ ಸಿರಿಸಂಪತ್ತೆಲ್ಲಾ ಪರೋಪಕಾರಕ್ಕೆ ವಿನಿಯೋಗವಾಗಬೇಕೆಂಬ ಧ್ಯೇಯಧೋರಣೆಯುಳ್ಳವರಾಗಿ ಅನೇಕ ಶಿಕ್ಷಣ ಸಂಸ್ಥೆಗಳನ್ನು

ನಡೆಸಿಕೊಂಡು ಬಂದಿದ್ದಾರೆ. ಅಂತರಂಗ ಬಹಿರಂಗಗಳಲ್ಲಿಯೂ ಆಧ್ಯಾತ್ಮಿಕ ಪ್ರಗತಿಯು ಸಮನ್ವಯವಾಗಬೇಕೆಂದು ಬಯಸಿ ಶ್ರೀ ಮಠದಲ್ಲಿ ಕುಮಾರ ಶಿವಯೋಗಿ ಸಂಘವನ್ನು ಸ್ಥಾಪಿಸಿ, ಆ ದಿಶೆಯಲ್ಲಿ ಪ್ರವೃತ್ತಿಯುಳ್ಳ ಶಿವಯೋಗ ಸಾಧಕ ವಟುಗಳಿಗೆ ಯೋಗ-ಆಸನ-ಆಧ್ಯಾತ್ಮಿಕ ಅಧ್ಯಯನ ಮುಂತಾದ ವಿಷಯಗಳ ವ್ಯಾಸಂಗದ ಸಲುವಾಗಿ ವ್ಯವಸ್ಥೆಯನ್ನು ಮಾಡಿದ್ದಾರೆ. ತಮ್ಮ ಕಾರ್ಯಕ್ಷೇತ್ರದ ಕ್ಷಿತಿಜವನ್ನು ಇನ್ನು ವಿಸ್ತರಿಸಿ ಅವಿಶ್ರಾಂತ ಪರಿಶ್ರಮ ವಹಿಸಿ, ಸಮಾಜದ ಸರ್ವಾಂಗೀಣ ವಿಕಾಸಕ್ಕಾಗಿ ದುಡಿಯಬೇಕೆಂಬ ಧ್ಯೇಯ ನಿಷ್ಠೆಯುಳ್ಳವರಾಗಿದ್ದಾರೆ, ಅವರ ಕರ್ತವ್ಯಪ್ರಜ್ಞೆ, ಕಾಯಕನಿಷ್ಠೆ, ಸ್ವಯಂ ಸೇವೆಯಲ್ಲಿ ಅಭಿರುಚಿ, ಧಾರ್ಮಿಕಶ್ರದ್ಧೆ, ಮಾನವತಾ ಪ್ರೇಮ, ವಿಶಾಲ ಮನೋಭಾವ, ಅವ್ಯಾಜ ಪ್ರೇಮ, ಪರೋಪಕಾರಬುದ್ಧಿ, ಸದಾಚಾರ ಜೀವನ ಧಾರ್ಮಿಕ ಕ್ರಿಯೆಗಳಲ್ಲಿ ನಿಷ್ಠೆ ಇತ್ಯಾದಿ ಗುಣಗಳು ಅವರ ಜೀವನದ ಘನತೆಯನ್ನು ಊರ್ಜಿತಗೊಳಿಸಲು ಕಾರಣಗಳಾಗಿವೆ. ಸಂಕುಚಿತ ಭಾವನೆ ಅವರಿಗೆ ಎಂದಿಗೂ ಸೇರುವದಿಲ್ಲ. ಗುರುಗಳು ಸದಾ ಅಧ್ಯಯನಶೀಲರು ಈ ಜಗತ್ತಿನ ವಿಶಾಲಾಸತ್ಯಗಳನ್ನು ತಿಳಿಯಲು ಏನಾದರೊಂದು ಗ್ರಂಥವನ್ನು ಓದುತ್ತಲೇ ಇರುತ್ತಾರೆ. ಈ ವಿಶಾಲವಾದ ಜಗತ್ತನ್ನು ಪ್ರತ್ಯಕ್ಷವಾಗಿ ಅರಿಯಲು ಈ ವಿದೇಶ ಪ್ರವಾಸವು ಒಂದು ಸುಯೋಗವನ್ನು ಒದಗಿಸಿತು, ಆಂಗ್ಲಭಾಷೆಯು ಅಂತರಾಷ್ಟ್ರೀಯ ಪ್ರಭಾವವನ್ನರಿತು ಗುರುಗಳು ಇಂಗ್ಲೀಷ್ ಭಾಷೆಯನ್ನು ಹೆಚ್ಚಿಗೆ ಅಭ್ಯಾಸ ಮಾಡಲು ತಮ್ಮದೇ ಆದ ಏರ್ಪಾಡನ್ನೂ ಮಾಡಿಕೊಂಡಿದ್ದಾರೆ. ಸಾಧ್ಯವಾದರೆ ಪಾಶ್ಚಾತ್ಯ ದೇಶಗಳಲ್ಲಿಯೂ ಕೆಲವು ಕಾಲ ಸಂಚರಿಸಿ, ಅನುಕೂಲವಾದ ಪರಿಸ್ಥಿತಿಯೊದಗಿದಲ್ಲಿ ಪರದೇಶದಲ್ಲಿ ಒಂದು ಮಠವನ್ನು ಸ್ಥಾಪಿಸಿ, ಆಧ್ಯಾತ್ಮ ವಿದ್ಯೆಯನ್ನು ಕಲಿಸಲು ಏರ್ಪಾಡು ಮಾಡಬೇಕೆಂಬ ಬಲವಾದ ಇಚ್ಛೆಯುಳ್ಳವರಾಗಿದ್ದಾರೆ. ಕೇವಲ ವಿಜ್ಞಾನದ ಪ್ರಗತಿಯಿಂದ ಮಾನವ ಕುಲದ ಕಲ್ಯಾಣವಾಗಲಾರದು. ವಿಜ್ಞಾನದೊಡನೆ ಆಧ್ಯಾತ್ಮದ ಸಮನ್ವಯವಾಗಬೇಕು, ಧರ್ಮವು ವಿಜ್ಞಾನ ದೃಷ್ಟಿಕೋನವನ್ನಿರಿಸಿಕೊಳ್ಳಬೇಕು, ಮಾನವ ತನ್ನನ್ನು ತಾನು ಅರಿತುಕೊಳ್ಳಬೇಕು, ಅಂದರೇನೆ ಈ ಲೋಕದಲ್ಲಿ ಶಾಂತಿ ಸಮೃದ್ಧಿಗಳು ನೆಲೆಸಬಹುದು ಎಂಬ ವಿಚಾರವನ್ನು ವಿದೇಶ ಸಂಚಾರದಲ್ಲಿ ಅನೇಕ್ಕೋ ಸಲ ನನ್ನ ಎದುರು ಪ್ರಸ್ತಾಪಿಸಿದ್ದುಂಟು, ಸಮಗ್ರವಾದ ಒಂದು ತಿಂಗಳ ವಿದೇಶ ಪ್ರವಾಸದಲ್ಲಿ ಅವರ ಸಂಗಾತಿಯಾಗಿ ಸಂಚರಿಸಿದ ನಾನು ಅವರ ಉದಾತ್ತ ಮನೋಭೂಮಿಕೆಯನ್ನು ಅರಿತುಕೊಂಡೆ. ಅವರ ಜೀವನದ ಗುರಿಯು ದಿಗ್ದರ್ಶನವಾಯ್ತು. ಶ್ರೀಗಳು ಸ್ವಭಾವತಃ ಮೃದು. ಆದರೆ ತಮ್ಮ ಜೀವನ ಕೊನೆಗೊಳ್ಳಬೇಕೆಂಬ ಮನೀಷೆಯುಳ್ಳವರು. ಹೆಚ್ಚೇನು? ನಮ್ಮ ನಾಡಿನ ಭಾಗ್ಯ ನಮ್ಮ ಧರ್ಮದ ಶುಭೋದಯ. ನಿಜವಾಗಿಯೂ, ನಮ್ಮ ನಾಡಿಗೆ, ನುಡಿಗೆ ಸಂಸ್ಕೃತಿಗೆ ಅವರಿಂದ ಅಪ್ರತಿಮ ಸೇವೆ ಸಲ್ಲುವ ಭವಿಷ್ಯವಿದೆಯೆಂದು ನಂಬಿರುವೆ. ಈ ಲೇಖನ ಕುಸುಮಸ್ತಬಕವನ್ನು ಶ್ರೀಗುರು ಚರಣಸರೋಜಗಳಲ್ಲಿ ಅರ್ಪಿಸಿ ಕೃತಾರ್ಥನಾಗುವೆ.

□ □

ಸಂಸ್ಮರಣೆಗಳು

—ಶ್ರೀಮನ್ ಮಹಾರಾಜ ನಿರಂಜನ ಜಗದ್ಗುರು
ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರು,
ತೋಂಟದಾರ್ಯಮಠ, ಡಂಬಳ-ಗದಗ.

ಪ್ರವೇಶ

ನಾನು ಬಿಜಾಪೂರ ಜಿಲ್ಲೆಯ ಸಿಂದಗಿಯ ಹಿರೇಮಠದ ಉತ್ತರಾಧಿಕಾರಿ 'ಮರಿ' ಯಾಗಿ ಮೂರುಸಾವಿರಮಠವನ್ನು ಸೇರಿದ ಕಾಲ ೧೯೬೨ ಜೂನ ತಿಂಗಳು. ನಮ್ಮ ಗುರುಗಳು ಶ್ರೀ ಮ.ಘ.ಚ. ಶಾಂತವೀರ ಪಟ್ಟಾಧ್ಯಕ್ಷರು. ಇವರು ಪ್ರಾತಃ ಸ್ಮರಣೀಯ ರಾದ ಲಿಂ. ಹಾನಗಲ್ ಕುಮಾರ ಶಿವಯೋಗಿಗಳವರ ಸೇವೆಯಲ್ಲಿ ಬಹುಕಾಲವಿದ್ದವರು. ಯೋಗ ಸಾಧನೆಯಲ್ಲಿ ಬಲ್ಲಿದರು. ಸಮಾಜ ಸೇವೆಯಲ್ಲಿ ಇಹ-ಪರದ ಸಾರ್ಥಕತೆ ಕಂಡವರು. ಪಟ್ಟಾಧ್ಯಕ್ಷರು ಶಿವಯೋಗಮಂದಿರದಲ್ಲಿ ಸಾಧಕರಾಗಿದ್ದಾಗ ಹುಬ್ಬಳ್ಳಿಯ ಸದ್ಯದ ಶ್ರೀ ಜಗದ್ಗುರುಗಳು ವಟುಗಳು. ಅಂದಿನ ಸಾಧಕ ವಟುಗಳಲ್ಲಿಯ ಸ್ನೇಹ, ವಾತ್ಸಲ್ಯ ಬಾಳಿನುದ್ದಕ್ಕೂ ಬೆಳೆದು ಬಂದುದೇ ಗುರುಗಳು ನನ್ನನ್ನು ಮೂರುಸಾವಿರಮಠಕ್ಕೆ ತರಲು ಕಾರಣ. ಆಧುನಿಕ ಶಿಕ್ಷಣದಿಂದ ಸುಸಂಸ್ಕೃತರಾದ ತಪಸ್ಸಿನಿಂದ ಪಕ್ವಗೊಂಡ ಶ್ರೀ ಜಗದ್ಗುರುಗಳ ಸಾನ್ನಿಧ್ಯ 'ನಮ್ಮ ಹುಡುಗ'ನಿಗೂ ದೊರೆಯಲೆಂಬ ಗುರುಗಳ ಎದೆಯ ಹಂಬಲ ನನ್ನನ್ನು ಮೂರುಸಾವಿರಮಠಕ್ಕೆ ತಂದಿತು.

ಪ್ರಾರಂಭ

ಶ್ರೀಮಠದಲ್ಲಿ ನನ್ನ ಹೊಸ ಬದುಕು ಪ್ರಾರಂಭ. ಆಗ, ನನ್ನ ದೃಷ್ಟಿಯಲ್ಲಿ ಹುಬ್ಬಳ್ಳಿ ಎಂದರೆ ಅಮರಾವತಿ. ೧೨-೧೩ರ ಕಿಶೋರನಾದ ನಾನು ಈ ಮಠವನ್ನು, ನಗರವನ್ನು, ಬೆರಗುಗಣ್ಣಿನಿಂದಲೇ ನೋಡಿದ್ದೆ. ಈ ಮಠದ ಬಗೆಗೆ ಆಗಾಗ ಗುರುಗಳು ಹೇಳಿದ್ದನ್ನು ಕೇಳಿದ್ದೆನಷ್ಟೇ. ಹೀಗಾಗಿ ಅದು ನನ್ನ ಕನಸಿನ ಕೈಲಾಸ, ಅನುಭವಮಂಟಪ ವಾಗಿತ್ತು. ಅಲ್ಲಿಯೇ ನನ್ನ ಬಾಳಿನ ಬಹುಭಾಗ ಕಳೆಯಬೇಕಾಗಿದೆ ಎಂಬ ಕಲ್ಪನೆಯೂ ಆಗ ಇರಲಿಲ್ಲ.

ಹುಬ್ಬಳ್ಳಿಯ ಮಠಕ್ಕೆ ಬಂದ ಮೊದಲ ದಿನವೇ ಅದರ ಉನ್ನತ ಮಹಾದ್ವಾರ ಅಲ್ಲಿಯ ಭೀಮ ಗಾತ್ರದ ಎರಡು ಆನೆಗಳು, ಶಾಂತ ಗದ್ದುಗೆ, ಸುಂದರ ಸದರು, ಮಹಾ ಮಠದ ವಿಶಾಲತೆ, ಗಂಭೀರತೆ, ನಿರ್ಮಲತೆ, ನನಗೆ ಅನಿರ್ವಚನೀಯ ಆನಂದ ನೀಡಿದವು. ಶ್ರೀಗಳ ದರ್ಶನ, ಅವರ ಅಂತಃಕರಣದ ಎರಡು ಮಾತುಗಳು ನನ್ನ ಮನಸ್ಸಿಗೆ ತಂಪೆರೆದವು.

ಮಠ-ಮಂದಿರಗಳು ಬೃಹತ್ತಾಗಿರುವುದು ಒಂದು ಸಂಕೇತ. ಮಠಾಧಿಪತಿಗಳು ಈ ಮಠಗಳಿಗಿಂತ ಉದಾರತೆಯಲ್ಲಿ, ಅಂತಃಕರಣದಲ್ಲಿ ಸಹಸ್ರ ಪಟ್ಟು ದೊಡ್ಡವರು ಎಂಬುದನ್ನು ತೋರಿಸುತ್ತವೆ ಎನಿಸಿತು.

ಶ್ರೀಮಠಕ್ಕೆ ಬಂದ ಎರಡನೇ ದಿನ, ಶ್ರೀಗಳ ಅಪ್ಪಣೆಯಂತೆ ಪ್ರಸಾದ ನಿಲಯದ ಅಧಿಕೃತ ವಿದ್ಯಾರ್ಥಿಯಾಗಿ ಆಯ್ಕೆಯಾದೆ. ಪ್ರಸಾದನಿಲಯದ ವಿದ್ಯಾರ್ಥಿಗಳಲ್ಲಿ ಹೈಸ್ಕೂಲ ವಿದ್ಯಾರ್ಥಿಗಳೇ ಹೆಚ್ಚು. ಅವರ ವಸತಿ ಶ್ರೀಮಠದ ಎರಡನೇ ಅಂತಸ್ತಿನ ವಿಶಾಲವಾದ ಪ್ರಾಂಗಣ. ಅದು ೪೦-೫೦ ವಿದ್ಯಾರ್ಥಿಗಳಿಂದ ತುಂಬಿದ್ದು, ಸದಾ ಚಟುವಟಿಕೆಯಿಂದ ಇರುತ್ತಿದ್ದುದರಿಂದ ಅದಕ್ಕೆ ಹಳೇ ವಿದ್ಯಾರ್ಥಿಗಳು "ದುರ್ಗದ ಬೈಲ" ಎಂದು ಹೆಸರಿಟ್ಟಿದ್ದರು. ವಿದ್ಯಾರ್ಥಿಗಳಾದರೂ ಅಷ್ಟೇ ಆ ಹೆಸರಿಗೆ ಚ್ಯುತಿಬಾರದಂತೆ ಶಕ್ತಿಮೀರಿ ಶ್ರಮಿಸುತ್ತಿದ್ದರು.

ಬಿಸಿಲುನಾಡಿನ, ಬಯಲು ಸೀಮೆಯ ನನ್ನ ಮೇಲೆ ಹುಬ್ಬಳ್ಳಿಯ ತಂಪು ಹವೆ ಯುದ್ಧ ಹೂಡಿತು. ಆರೋಗ್ಯದ ಮೇಲೆ ತೀವ್ರವಾದ ಪ್ರಭಾವ ಬೀರಿತು. ಹೊಸ ಸ್ಥಳ, ತಂಟೆತಗಾದಿಯ ಹುಡುಗರು. ಸ್ವಭಾವತಃ ಅಂಜುಬುರಕ, ಸಂಕೋಚ ಸ್ವಭಾವದ ನಾನು ಇಲ್ಲಿಯ ವಾತಾವರಣದಿಂದ ಎದೆಗೆಟ್ಟೆ, ಕೆಚ್ಚಿನಂತನವನು ಚಿಕ್ಕೆಯಂತಾದೆ. ನನ್ನ ದುರ್ಬಲತೆಯನ್ನು ಗಮನಿಸಿ ಗುರುಗಳು ನನ್ನನ್ನು ನಮ್ಮ ಕಡೆಯವರಾದ ಭೂಮರೆಡ್ಡಿ ಇಂಜಿನಿಯರಿಂಗ್ ಕಾಲೇಜ ಪ್ರಾಧ್ಯಾಪಕ ಶ್ರೀ ಎನ್. ಜಿ. ಬಿರಾದಾರ, ಪಾಟೀಲರ ಮನೆಯಲ್ಲಿಟ್ಟರು. ಮಕ್ಕಳೋಪಾದಿಯಲ್ಲಿ ಅವರು ನನ್ನನ್ನು ಸಲುಹಿದರು. ನನಗೆ ಸ್ವಲ್ಪ ಧೈರ್ಯ ಬರುತ್ತಲೇ ಮರುವರ್ಷ ಮತ್ತೆ ಮೂರುಸಾವಿರಮಠದ ಪ್ರಸಾದನಿಲಯವನ್ನು ಸೇರಿದೆ. ನನ್ನ ಅಧ್ಯಯನ ಜೆ. ಜಿ. ಹೈಸ್ಕೂಲಿನಲ್ಲಿ ಮುಂದುವರೆಯಿತು.

ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ ಸ್ಥಾಪನೆ

ಹುಬ್ಬಳ್ಳಿಯ ಜಗದ್ಗುರುಗಳವರ ಕರ್ತೃಶಕ್ತಿ ಅಗಾಧ. ವೀರಶೈವ ಧರ್ಮೋದ್ಧಾರ ಕಾರ್ಯದಲ್ಲಿ ಅವರ ಪಾತ್ರ ಬೆರಗುಗೊಳಿಸುವಂತಹುದು. ಅವರು ಗೈದ ಸಹಸ್ರ ಶುಭ ಕಾರ್ಯಗಳಲ್ಲಿ ಸಂಘ-ಸ್ಥಾಪನೆಯೂ ಒಂದು.

ನನಗಿಂತ ಮೊದಲೇ ಶ್ರೀಮಠಕ್ಕೆ ಶಿವಯೋಗಮಂದಿರದಿಂದ ಬಂದಿದ್ದ ಸವಣೂರಿನ ಶ್ರೀ ಮಹಾಂತದೇವರು ಹನ್ನೆ ಕ್ಲಾಸಿನಲ್ಲಿ ಓದುತ್ತಿದ್ದರು. ಹುಬ್ಬಳ್ಳಿಯ ಅಕ್ಕಿಹೊಂಡ ಹೊಸಮಠದ ಶ್ರೀ ಚಂದ್ರಶೇಖರದೇವರು ಹೈಸ್ಕೂಲಿಗೆ ಬರುತ್ತಿದ್ದರು. ಕೆಲವೇ ದಿನಗಳಲ್ಲಿ ಮಂದಿರದಿಂದ ಬೇಲಗಿಯ ಶ್ರೀ ಮಹೇಶ್ವರ ದೇವರು, ಕಲ್ಯಾಣದ ಶ್ರೀ ಪ್ರಭುದೇವರು ಬಂದರು. ಶ್ರೀಮಠದಲ್ಲಿ ಸಾಧಕರ ಸಂಖ್ಯೆ ಯೋಗಾಯೋಗದಿಂದ ಬೆಳೆದಾಗ ಹುಬ್ಬಳ್ಳಿ ಜಗದ್ಗುರುಗಳವರ ಚಿತ್ತದಲ್ಲೊಂದು ವಿಚಾರ ಮೂಡಿತು. ಕಾಶಿಯಲ್ಲಿ ತಾವು ಇದ್ದಾಗ ಕಂಡ "ಶ್ರೀರಾಮಕೃಷ್ಣ ಮಿಶನ್"ದಂತೆ ಸಮಾಜ ಸೇವಾ ಸಾಧಕರಿಗೆ ಒಂದು

ತರಬೇತಿ ಸಂಘ ಬೇಕು. ಆಧುನಿಕ ವೀರಶೈವ ಸಮಾಜಕ್ಕೆ ಸತ್ವಪೂರ್ಣರಾದ, ತೇಜೋಮೂರ್ತಿ ಸಾಧಕರ ತರಬೇತಿಯಾಗಬೇಕು. ನವ ಮನ್ವಂತರಕ್ಕನುಗುಣವಾಗಿ ಅಧ್ಯಯನ, ಚಿಂತನ, ಸಾಧನೆ ಸಾಗಬೇಕು. ಶೋಧನೆ ಬೋಧನೆಗಳಿಂದ ನಿದ್ರಿತ ಸಮಾಜವನ್ನು ಬಡೆದೆಬ್ಬಿಸುವ ಪುರುಷ ಸಿಂಹರನ್ನು ತಯಾರಿಸಬೇಕು. ದೈಹಿಕವಾಗಿ, ಮಾನಸಿಕವಾಗಿ ಶುದ್ಧ ಚಾರಿತ್ರ್ಯವುಳ್ಳ ಪರಿಪೂರ್ಣ ಪುರುಷೋತ್ತಮರನ್ನು ನಿರ್ಮಾಣ ಮಾಡುವ ಕಮ್ಮಟವೊಂದನ್ನು ಸ್ಥಾಪಿಸಬೇಕೆಂಬ ಹಿರಿಯ ಹಂಬಲ ಶ್ರೀ ಜಗದ್ಗುರುಗಳಲ್ಲಿ ಚಿಗುರೊಡೆಯಿತು. ಅವರ ಮನದಲ್ಲಿ ಒಂದು ಒಳ್ಳೆಯ ವಿಚಾರ ಮೂಡಿತೆಂದರೆ ಸಾಕು. ಅದಕ್ಕೊಂದು ಸ್ವರೂಪ ಕೊಡುವವರೆಗೂ ವಿಶ್ರಮಿಸುತ್ತಿರಲಿಲ್ಲ. ಮೂಡಿದ ವಿಚಾರವು ಆಚಾರಕ್ಕಿಳಿದಾಗಲೇ ಅವರಿಗೆ ತೃಪ್ತಿ, ಸಮಾಧಾನ. ಸಂಘ-ಸ್ಥಾಪನೆಯ ಯೋಚನೆ ಅಂಕುರವಾದುದೆ ತಡ. ಹುಬ್ಬಳ್ಳಿಯ ಹೊಸಮಠ ಶ್ರೀಗಳು, ಯರಡೆತ್ತಿನ ಮಠದ ಶ್ರೀಗಳು, ನವಲಗುಂದ ಗವಿಮಠದ ಶ್ರೀಗಳು, ಸವದಿ ಶ್ರೀಗಳು ಮೊದಲಾದ ಮಹನೀಯರ ಜತೆ ಸಮಾಲೋಚಿಸಿ, ಸಮಾಜ ಸೇವಾಸಾಧಕರ ತರಬೇತಿಗಾಗಿ ದಿನಾಂಕ ೧೨-೧೨-೧೯೬೫ ರಂದು ಶಿವಯೋಗಿ ಸಂಘವನ್ನು ನವಲಗುಂದ ಗವಿಮಠದ ಶ್ರೀ ಲಿಂ. ಬಸವಲಿಂಗ ಮಹಾಸ್ವಾಮಿಗಳವರಿಂದ ಉದ್ಘಾಟನೆ ಮಾಡಿಸಿದರು.

ವಿದ್ಯಾರ್ಥಿಯಾಗಿ

ಬಾಳಿನ ಬಂಗಾರ ಕಾಲವೆಂದು ತಿಳಿದ ವಿದ್ಯಾರ್ಥಿ ಜೀವನವನ್ನೆಲ್ಲ ಸಂಘದ ಆಶ್ರಯದಲ್ಲಿ ಸಾರ್ಥಕವಾಗಿ ಕಳೆದೆ. ನನ್ನ ತನು, ಮನ, ಬುದ್ಧಿ ರೂಪಗೊಂಡದ್ದು ಅಲ್ಲಿಯೇ ಅಲ್ಲಿಯ ಸುಸಂಸ್ಕೃತ ವಾತಾವರಣವು ಬೆಳೆಯುವ ನನ್ನ ಮನದ ಮೇಲೆ ಅಗಾಧ ಪರಿಣಾಮ ಬೀರಿತು.

ನಾನು ಹೈಸ್ಕೂಲ ವಿದ್ಯಾರ್ಥಿಯಾಗಿದ್ದಾಗಲೇ ಬದುಕಿನ ಮಹತ್ತರ ತಿರುವನ್ನು ದಾಟಿದ್ದೆ. ಇಂದು ಒಂದು ಹಂತದಲ್ಲಿ ನಿಂತು ನಿರೀಕ್ಷಿಸಿದಾಗ ವಿಸ್ಮಿತನಾಗುತ್ತೇನೆ. ಒಂದೊಂದು ಸಲ ಮೋಜೆನಿಸುತ್ತಿದೆ.

ಆಗ ನಾನು ಶಾಲೆ ಓದಿಗಿಂತ ಹೊರಗಿನ ಓದಿನಲ್ಲಿ ಹೆಚ್ಚು ಆಸಕ್ತಿ ತಾಳುತ್ತಿದ್ದೆ. ಮನಮಿಡಿಯುವ ಕತೆ ಕಾದಂಬರಿಗಳನ್ನು ಓದಿ ತೀವ್ರವಾಗಿ ಉದ್ವೇಗಗೊಳ್ಳುತ್ತಿದ್ದೆ. ಅನೇಕ ಸಲ ಕಣ್ಣೊರಿಸಿಕೊಂಡದ್ದೂ ಉಂಟು. ಕಾದಂಬರಿಯ ಪಾತ್ರಗಳನ್ನು ನಿಜ ಜೀವನದಲ್ಲಿ ಅರಸುತ್ತಿದ್ದೆ. ಕನಸಿನ ಗಾಳಿಗೋಪುರಗಳನ್ನು ಕಟ್ಟುತ್ತಿದ್ದೆ.

ಈ ಕಾಲದಲ್ಲಿಯೇ ನಾನು ಮಾನಸಿಕ ದ್ವಂದ್ವದ ದುಂದುಗದಲ್ಲಿ ಸಿಕ್ಕಿದ್ದು ಮಠದ ಸ್ವಾಮಿಯಾಗುವದಕ್ಕಿಂತ ಚೆನ್ನಾಗಿ ಅಭ್ಯಾಸಮಾಡಿ ಸಾಹಿತಿ, ಪ್ರಾಧ್ಯಾಪಕನಾಗಿರಬೇಕೆಂಬ ಹುಚ್ಚು ಮಚ್ಚಾಯಿತು. ಸ್ವಾಮಿಯಾಗಲು ನನ್ನ ಮೇಲೆ ಅಂತರಂಗಿನ ಹಾಗೂ ಬಾಹ್ಯ ಒತ್ತಡಗಳಿಲ್ಲದಿದ್ದಲ್ಲಿ ಇಂದು ಯಾವುದಾದರೊಂದು ಮಹಾವಿದ್ಯಾಲಯದಲ್ಲಿ ಪ್ರಾಧ್ಯಾಪಕನಾಗಿರುತ್ತಿದ್ದೆನೋ ಏನೋ?

ನಾನು ಮಠದ ಮರಿಯಾಗಲೇಬೇಕು ಎಂಬ ವಿಷಯದತ್ತ ನನಗೂ ನನ್ನ ಗುರುಗಳಿಗೂ ವಾದ ವಿವಾದವಾಗಿ ಅವರು ತುಂಬ ನೊಂದರು. ಬಂಧುಗಳು ದೂರವಾದರು, ಸ್ನೇಹಿತರು ಸನಿಹ ಬಾರದಾದರು. ಎಲ್ಲ ವಿಧದಿಂದಲೂ ನಾನು ಏಕಾಂಗಿಯಾದೆ. ಬಾಳ ಕಡಲಿನ ಈಜಾಟದ ಆರಂಭದ ಹಂತದಲ್ಲಿ ಒಂಟಿಯಾದೆ. ಸುತ್ತೆಲ್ಲ ಕಪ್ಪು ಸಮುದ್ರ ಎಂಥ ಧೈರ್ಯಶಾಲಿಯಲ್ಲೂ ಹೆದರಿಕೆ ಹುಟ್ಟಿಸುವ ಅಂಧಕಾರ ಎದೆ ಹೆಪ್ಪುಗಟ್ಟಿಸುವ ಸಮುದ್ರದ ಕೊರೆತ. ನಾನೊಬ್ಬನೆ ಈಜುತ್ತಿದ್ದೇನೆ. ಭವಿಷ್ಯದ ಬಗ್ಗೆ ಎದೆ ತುಂಬ ಹೆದರಿಕೆ. ಈಜಿ ಈಜಿ ಕೈಸೋತಿದೆ. ಮೈ ಬಳಲಿದೆ. ಇನ್ನೂ ಒಂದು ಅಡಿಯೂ ಮುಂದೆ ಸಾಗಲಾರೆ. ಸಮುದ್ರದಾಳಕ್ಕೆ ಮುಳುಗುತ್ತಿದ್ದೇನೆ. ಅಯ್ಯೋ ಮುಳುಗಿದೆ.... ಎನ್ನುವುದರಲ್ಲಿಯೇ ಒಬ್ಬ ಮಹಾತ್ಮ ಕೈಹಿಡಿದೆತ್ತಿ ತೀರದತ್ತ ಒಯ್ದಂತೆ ಬದುಕಿನ ಈಜಾಟದಲ್ಲಿ ನಿರಾಶೆಯ ಸುಳಿಗೆ ಸಿಕ್ಕ ಮುಳುಗುತ್ತಿದ್ದ ನನ್ನನ್ನು ಹುಬ್ಬಳ್ಳಿ ಶ್ರೀ ಜಗದ್ಗುರುಗಳವರ ಪ್ರೀತಿ, ವಿಶ್ವಾಸವು ಕೈಹಿಡಿದೆತ್ತಿತು. ಅವರು ನನ್ನ ಅಂತರಂಗದ ನೋವನ್ನರಿತು ಸಂತೈಸಿ, ಪ್ರೀತಿ ವಾತ್ಸಲ್ಯದ ಧಾರೆಯನ್ನೆರೆದರು. ಮನೋವೇದನೆಯಿಂದ ನನ್ನನ್ನು ಮುಕ್ತನಾಗಿ ಮಾಡಲು ಕೆಲವು ದಿನಗಳ ಮಟ್ಟಿಗೆ ಶಿವಯೋಗ ಮಂದಿರಕ್ಕೆ ಕರೆದೊಯ್ದರು. ಶಿವಯೋಗ ಮಂದಿರದ ಒಂದು ಮಾಸದ ವಾಸ, ನೆನಪಿನಿಂದ ಎಂದೂ ಮಾಸದು. ಅದು ನನ್ನನ್ನು ಬಹಳಷ್ಟು ಪರಿವರ್ತಿಸಿತು, ಅಲ್ಲಿಯ ಪ್ರಶಾಂತ ಪರಿಸರ, ನಿಯಮಿತ ಜೀವನ ಸಾತ್ವಿಕ ಆಹಾರ, ವಿಹಾರ ಓದು, ಸಾಧಕರ ಸ್ನೇಹ ನನ್ನನ್ನು ಹೊಸ ಜೀವನದತ್ತ ಆಕರ್ಷಿಸಿದವು. ಮಂದಿರದಿಂದ ಮೂರುಸಾವಿರಮಠಕ್ಕೆ ತೆರಳಿದಾಗ ನನ್ನ ಒಳಗೂ ಹೊರಗೂ ತುಂಬ ಬದಲಾವಣೆ. ಈಗ ಮೊದಲಿನ ಶಾಲಾ ಬಟ್ಟೆಗಳನ್ನು ಬಿಟ್ಟು, ಲುಂಗಿ ಜುಬ್ಬವನ್ನು ಧರಿಸಿದೆ. ಆಚಾರ ವಿಚಾರಗಳಲ್ಲಿ ಬಹಳಷ್ಟು ಬದಲಾಗಿದೆ. ನನ್ನ ಈ ಹೊಸ ಜೀವನವು ಜಗದ್ಗುರುಗಳಿಗೆ ತುಂಬ ಸಂತೋಷ ತಂದಿತು. ಇನ್ನು ಮೇಲೆ ನೀವು 'ದೇವರು' 'ಸಿದ್ಧರಾಮ ದೇವರು' ಎಂದು ಹೊಸ ಬಾಳ್ವೆ ಸಾಗಿಸಲು ಅಣಿಯಾದ ನನಗೆ ಹೊಸ ಹೆಸರಿಟ್ಟರು. ನಿಜಕ್ಕೂ ಅದೊಂದು ಪುನರ್ಜನ್ಮವೇ.

ಎಲ್ಲವೂ ಹೊಂದಿಕೆಯಾಯಿತಾದರೂ ಯಾವ ಶಾಲೆಯಲ್ಲಿ ಬಾಲಕನಾಗಿ ಓಡಾಡಿಕೊಂಡಿದ್ದೆನೋ ಅದೇ ಶಾಲೆಯಲ್ಲಿ ಈ ವೇಷದಲ್ಲಿ ಹೋಗಬೇಕಾಗಿ ಬಂದಾಗ ಏನೋ ಸಂಕೋಚ, ನಾಚಿಕೆ. ನಾನು ಯಾಕಾದರೂ ಈ ವೇಷ ಧರಿಸಲು ಒಪ್ಪಿದೆನೋ ಎಂಬ ಮುಜುಗರ. ಎಲ್ಲ ಸಹಪಾಠಿಗಳು ಗೇಲಿಮಾಡುವರೋ ಎಂಬ ಹೆದರಿಕೆ, ಮೊದಲು ಕೆಲ ದಿನ ಶಾಲೆಗೆ ಹೋಗಲಿಲ್ಲ. ಕೊನೆಗೆ ಹೊಸಮಠ ಶ್ರೀಗಳ ಹಾಗೂ ಹುಬ್ಬಳ್ಳಿ ಜಗದ್ಗುರುಗಳ ಅಂತಃಕರಣ ವಿಶ್ವಾಸಕ್ಕೆ ಧೈರ್ಯದಿಂದ ಹೋದೆ. ಮುಂದೆ ಎಲ್ಲದಕ್ಕೂ ಹೊಂದಿಕೊಂಡೆ.


ಪ್ರತಿನಿತ್ಯ ಸಂಸ್ಕೃತ ಅಭ್ಯಾಸಕ್ಕಾಗಿ ಹೊಸಮಠಕ್ಕೆ ಹೋಗುತ್ತಿದ್ದೆ. ಹೊಸ ಮಠದ ಶ್ರೀಗಳು ಸಂಸ್ಕೃತದಲ್ಲಿ ಪಂಡಿತರು, ಲೋಕಾನುಭಾವಿಗಳು, ವಿಚಾರ ಶೀಲರು, ನ್ಯಾಯ ನಿಷ್ಠುರರು. ಅವರು ಓದಿದ್ದು ಸ್ವಲ್ಪ, ಸಾಧಿಸಿದ್ದು ಬಹಳ. ಯಾವದೇ ವಿಷಯವಿರಲಿ



ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ
ಗಂಗಾಧರ ಪ್ರೌಢಶಾಲೆ ಹಾಗೂ ಪದವಿಪೂರ್ವ ವಿದ್ಯಾಲಯ, ಹುಬ್ಬಳ್ಳಿ.




ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ
ಶ್ರೀಮತಿ ಸುಧಾ ಆರ್. ಶೆಟ್ಟಿ ಬಾಲಿಕೆಯರ ಪ್ರೌಢಶಾಲೆ, ಹುಬ್ಬಳ್ಳಿ



ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘ ಶಿಶುವಿಹಾರ ಮತ್ತು ಹಿಂದಿ ವಿದ್ಯಾಲಯ, ಹುಬ್ಬಳ್ಳಿ




ಶ್ರೀ ಜಗದ್ಗುರು ಮೂರುಸಾವಿರಮಠದ ಕಲ್ಯಾಣ ಮಂಟಪ.



ಶ್ರೀ ಜಗದ್ಗುರು ಗುರುಸಿದ್ಧೇಶ್ವರ ವಿದ್ಯಾರ್ಥಿ ನಿಲಯ ಮೂರುಸಾವಿರಮಠ ಹುಬ್ಬಳ್ಳಿ.



ಶ್ರೀ ಜಗದ್ಗುರು ಮೂರುಸಾವಿರಮಠದ ಕೇಂದ್ರ ಕಾರ್ಯಾಲಯ, ಹುಬ್ಬಳ್ಳಿ.



ಶ್ರೀ ಜಗದ್ಗುರು ಮೂರುಸಾವಿರಮಠದ ಕುಮಾರೇಶ್ವರ ಅತಿಥಿಗೃಹ



ಶ್ರೀ ಜಗದ್ಗುರು ಮೂರುಸಾವಿರಮಠದ ವಿದ್ಯಾವರ್ಧಕ ಸಂಘದ ಸಭಾಭವನ, ಹುಬ್ಬಳ್ಳಿ



ಶ್ರೀ ಜಗದ್ಗುರು ಗಂಗಾಧರ ಪ್ರಾಥಮಿಕ ಶಾಲೆ ಮೂರುಸಾವಿರ ಮಠ, ಹುಬ್ಬಳ್ಳಿ.



ಶ್ರೀ ಜಗದ್ಗುರುಗಳವರೊಂದಿಗೆ ಶಿವಯೋಗಮಂದಿರ ಸಾಧಕರು–ವಟುಗಳು ಮತ್ತು ಪಂಡಿತರು.



ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ರ್‍ಯಾಂಗ್ಲರ್ ಡಾ|| ಡಿ. ಸಿ. ಪಾವಟೆ
ಮತ್ತು ಲಿಂ|| ಶ್ರೀ ಎಸ್. ಆರ್. ಕಂಠಿಯವರು ಮೂರುಸಾವಿರಮಠಕ್ಕೆ ಆಗಮಿಸಿದಾಗ



ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ನಿಜಲಿಂಗಪ್ಪನವರು ಮತ್ತು
ಶ್ರೀ ವೀರೇಂದ್ರ ಪಾಟೀಲರು ಮೂರುಸಾವಿರಮಠಕ್ಕೆ ಆಗಮಿಸಿದಾಗ.




ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ
ಶ್ರೀ ವಿಜಯಮಹಾಂತೇಶ ಲಲಿತಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ.



ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆಯ
ಕ್ಷಯರೋಗ ವಿಭಾಗದ ಕಟ್ಟಡ, ಘಟಪ್ರಭಾ.



“ ಧ್ಯಾನಧಾಮ ” ಶಿವಯೋಗ ಮಂದಿರ.



“ಶ್ರೀಬಸವ ಮಂಗಲ ಭವನ” ಶಾಖಾ ಮೂರುಸಾವಿರಮಠ, ಧಾರವಾಡ.




ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ, ಘಟಪ್ರಭಾ.



ಭಾರತದ ಮಾಜಿ ಉಪರಾಷ್ಟ್ರಪತಿ ಶ್ರೀ ಬಿ. ಡಿ. ಜತ್ತಿ, ಮಾಜಿ ಮುಖ್ಯಮಂತ್ರಿ ದಿ॥ ಶ್ರೀ ದೇವರಾಜ ಅರಸ
ಹಾಗೂ ಮಾಜಿ ಕೇಂದ್ರ ಸಚಿವೆ ಡಾ॥ ಸರೋಜಿನಿ ಮಹಿಷಿ ಅವರು
ಶ್ರೀ ಜಗದ್ಗುರು ಗುರುಸಿದ್ಧೇಶ್ವರರ ಗದ್ದುಗೆ ದರ್ಶನ ಪಡೆಯುತ್ತಿರುವಾಗ ತೆಗೆದ ಚಿತ್ರ.




ಜಪಾನ ದೇಶದಲ್ಲಿರುವ "ಕ್ಯೂಟೊ"ದ ಸಭಾಭವನದಲ್ಲಿ ಶ್ರೀ ಮೂರುಸಾವಿರಮಠದ ಜಗದ್ಗುರುಗಳು



ಷಟಸ್ಥಲದ್ಯೋತಕ ಜಗದ್ಗುರು ಮೂರುಸಾವಿರಮಠದ ಮಹಾದ್ವಾರ, ಹುಬ್ಬಳ್ಳಿ




ಶ್ರೀ ಜಗದ್ಗುರು ಮೂರುಸಾವಿರಮಠದ ಒಳಗಿನ ಮಹಾದ್ವಾರ



ಶ್ರೀ ಜಗದ್ಗುರು ಮೂರುಸಾವಿರಮಠದ ವಿಹಂಗಮ ನೋಟ.



ಹುಬ್ಬಳ್ಳಿ-ಧಾರವಾಡ ರಸ್ತೆಯಲ್ಲಿರುವ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ಶಾಪಿಂಗ್ ಕಾಂಪ್ಲೆಕ್ಸ.



ಶ್ರೀ ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಮಹಿಳಾ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ.



ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ ಮಹಿಳೆಯರ ವಸತಿ ನಿಲಯ, ಹುಬ್ಬಳ್ಳಿ.



ಮೂರುಸಾವಿರಮಠದ ಉದ್ಯೋಗ ನಿರತ ಮಹಿಳೆಯರ ವಸತಿ ನಿಲಯ, ಹುಬ್ಬಳ್ಳಿ.



ಶ್ರೀ ಜಗದ್ಗುರು ಮೂರುಸಾವಿರಮಠ



ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ವಿದ್ಯಾಲಯ ಹಾಗೂ ಪರಂಜ್ಯೋತಿ ಮಾಸಪತ್ರಿಕೆಯ ಕಾರ್ಯಾಲಯವನ್ನೊಳಗೊಂಡ ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳದ ಆಡಳಿತ ಕಚೇರಿ.

ಅದನ್ನು ಹೊಸದೃಷ್ಟಿಕೋನದಿಂದ ನೋಡಿ, ಹೊಸದಾಗಿ ಪರಿವರ್ತಿಸುವ ಕಲೆ ಅವರಿಗೆ ರಕ್ತಗತ. ಕೆಲಸದಲ್ಲೂ ಅಷ್ಟೇ ದಕ್ಷತೆ ಒಂದು ಕೆಲಸ ಆಗಬೇಕು ಎಂದು ಮನಸ್ಸಿನಲ್ಲಿ ಬಂದರೆ ಸಾಕು, ಏನೇ ಕಷ್ಟ ನಷ್ಟ ಬಂದರೂ ಪರಿಗಣಿಸದೇ ಪೂರೈಸಿಬಿಡುವ ಪಣ, ಗುಣ ಅವರದು. ಅವರ ಪ್ರತಿನಿತ್ಯ ಪಾಠದಲ್ಲಿ ಜೀವನ ಪಾಠವೇ ಹೆಚ್ಚಾಗಿರುತ್ತಿತ್ತು.

ನನ್ನ ಬಾಳು ಬೇರಿಗೆ ನೀರುಗೊಬ್ಬರವನ್ನಿತ್ತು ಕಾಪಾಡಿದ ಇನ್ನೊಂದು ಅಂತಃಕರಣದ ಹಸ್ತ ಶ್ರೀಮಠದ ಕೋಠಿ ಖೋಲಿಯ ಸೊಲಬಪ್ಪಜ್ಜ. ನನ್ನ ಬದುಕಿನಂಗಳದಲ್ಲಿ ಬಹುಕಾಲ ಅಚ್ಚೊತ್ತಿ ಉಳಿಯುವ ವ್ಯಕ್ತಿ ಆತ. ಮೂರುಸಾವಿರಮಠದ ಏಳ್ಗೆಗಾಗಿ ತನ್ನನ್ನು ಸಮರ್ಪಿಸಿಕೊಂಡ ಮಹಾಜೀವ. ದೇವರು ಎಲ್ಲಿದ್ದಾನೆಯೆಂದರೆ ದೇವರಂಥ ಮನುಷ್ಯನಲ್ಲಿ, ಅನ್ನುವದಾದರೆ ಅಜ್ಜ ದೇವರಂತಹ ಮನುಷ್ಯ. ಆ ಅಂತಃಕರಣ, ಪ್ರೀತಿ, ಕಳಕಳಿ ಯಾರಲ್ಲಿ ಸಿಕ್ಕೀತು, ಶ್ರೀಮಠದ ಸೇವೆಗೆ ಅವನಿಗೆ, ಹಗಲು ರಾತ್ರಿ ಎರಡು ಅಷ್ಟೇ. ಊಟ ನಿದ್ರೆ ಯಾವಾಗ ಮಾಡುತ್ತಿದ್ದನೋ ಸದಾ ಕೆಲಸ. ಎಲ್ಲದರ ಬಗ್ಗೆಯೂ ಗಮನ. ಮಠದ ಸಂಪತ್ತು ಅವನ ಕೈಯಲ್ಲಿ ಇದ್ದರೂ ಒಂದು ದಿನ ಅಹಂಕಾರದಿಂದ ಬೀಗಲಿಲ್ಲ. ನಾನು ಸ್ವಾಮಿಯ ಸೇವಾಧಾರಿ ಎಂಬುದನ್ನು ಮರೆಯಲಿಲ್ಲ. ನಮ್ಮಂಥ ಸಾಧಕರು ಅವನ ವಾತ್ಸಲ್ಯದ ಅಂತಃಕರಣ ಸವಿಯನ್ನುಂಡಿದ್ದಾರೆ. ಅಂಥ ಕಕ್ಕುಲತೆ, ತ್ಯಾಗ, ನಿಸ್ಪೃಹತೆ, ಸೇವಾಜೇಷ್ಠತೆಯುಳ್ಳ ಮತ್ತೊಬ್ಬ ವ್ಯಕ್ತಿಯನ್ನು ನಾನು ಇನ್ನೂ ಕಾಣಬೇಕಾಗಿದೆ.

ಸಾಧಕ

ಸಂಘದ ನನ್ನ ಸಾಧಕ–ಜೀವನವು ಅವಿಸ್ಮರಣೀಯ. ಸಾಧಕ ಜೀವನದ ಪ್ರಾರಂಭದ ದಿನಗಳಲ್ಲಿ ಮೌನವೇ ನನ್ನ ಜತೆ. ಮಾತನಾಡಿದರೂ ಅದು 'ಟೆಲಿಗ್ರಾಫಿಕ್ ಭಾಷೆ'ಯಲ್ಲಿ. ಹತ್ತು ಮಾತಿಗೆ ಒಂದು ಮಾತು. ಮಾತು ಬರದ ಮೂದೇವಿ, ಅಹಂಕಾರಿಯೆಂದು ಜೊತೆಯವರು ಹಂಗಿಸುತ್ತಿದ್ದರು. 'ಮಠದಲ್ಲಿ ಓಡಾಡಿಕೊಂಡಿದ್ದ ಹುಡುಗ, ಇವನೆಂಥ ಸ್ವಾಮಿಯಾಗುತ್ತಾನೆ, ಒಂದು ತಿಂಗಳ ಮಂದಿರದಲ್ಲಿದ್ದ ಮಾತ್ರಕ್ಕೆ ಸ್ವಾಮಿತ್ವ ಬರುವದೇ?' ಎಂಬ ಕಿಟಕಿ ಮಾತನ್ನು ಕೇಳಿ ಚೇಳು ಕುಟುಕಿದಂಥ ವೇದನೆ, ವ್ಯಥೆ ಹೃದಯವನ್ನು ಹಿಂಡುತ್ತಿದ್ದರೂ ಮಾತನಾಡುವ ಛಾತಿಯಿಲ್ಲದೆ ಇರುಳೆಲ್ಲ ಅತ್ತು ತಲೆದಿಂಬು ತೊಯ್ಯುತ್ತಿತ್ತು. ಹಾಸಿಗೆ ಹೊದಿಕೆಗಳಿಗೆ ಮಾತು ಬಂದಿದ್ದರೆ ಅವು ನನ್ನ ವೇದನೆಯನ್ನು ನನಗಿಂತ ಚೆನ್ನಾಗಿ ಹೇಳಬಹುದಿತ್ತು. ಇಂಥ ಕಾಲದಲ್ಲಿ ನನಗೆ ಆಶ್ರಯವಾಗಿ ನಿಂತ ಸ್ನೇಹಿತ ಪುಸ್ತಕ. ಮುಂಚಿನಿಂದಲೂ ಓದುವ ಶೋಕಿ, ಕೈಗೆ ಸಿಕ್ಕ ಕಾಗದವನ್ನೆಲ್ಲ ಓದುವ ಚಟ. ಅದುವೇ ನನಗೆ ನೋವು ಮರೆಯಲು ಸಹಾಯಕಾರಿ. ಹಳೇ ಪುಸ್ತಕ ವ್ಯಾಪಾರಿಗಳಲ್ಲಿ ಕಡಿಮೆ ದರದಲ್ಲಿ ಕಸ್ತೂರಿ, ಕಥೆ, ಕಾದಂಬರಿಗಳನ್ನು ತಂದು ಓದುತ್ತಿದ್ದೆ. ಓದು ವಿಶಾಲವಾದಂತೆ ಚಿಂತನ ಹೆಚ್ಚಾದಂತೆ ನನ್ನಲ್ಲಿ ಸ್ಥೈರ್ಯ, ಧೈರ್ಯ, ಆತ್ಮವಿಶ್ವಾಸಗಳು ಮೂಡತೊಡ

ಗಿದವು. ಓದಿ ಅರಗಿಸಿಕೊಂಡದ್ದನ್ನ ಆಚರಣೆಗೆ ತರಲು ಪ್ರಯತ್ನಿಸುತ್ತಿದ್ದೆ. ಆ ಸಾಧನೆಯಲ್ಲಿಯ ತೃಪ್ತಿ ನನಗೆ ಉಳಿದೆ ಎಲ್ಲೂ ಸಿಕ್ಕುತ್ತಿರಲಿಲ್ಲ. ಹೀಗಾಗಿ ಓದು ನನಗೊಂದು ಹುಚ್ಚಾಯಿತು. ಹೊಟ್ಟೆ ಬಟ್ಟೆ ಕಟ್ಟಿ ಸಂಗ್ರಹಿಸಿದ ಪುಸ್ತಕಗಳು-ಎರಡು-ಮೂರು ಸಾವಿರ. ಸಾಧಕ ಜೀವನದಲ್ಲಿಯ ಈ ಜ್ಞಾನ ರಾಶಿಯನ್ನು ಕೂಡಿರುವ ಕಲೆ ನನ್ನ ಬೆಳವಣಿಗೆಗೆ ಇನ್ನಷ್ಟು ಬಲವನ್ನು ನೀಡಿತು.

ನನ್ನ ಬಾಳನ್ನು ತಿದ್ದಿದವುಗಳಲ್ಲಿ ನನ್ನ ಪ್ರತಿನಿತ್ಯದ ವಾಯು ವಿಹಾರವೂ ಒಂದು. ಆಹಾರ ತಪ್ಪಿಸಿದರೂ ವಿಹಾರ ತಪ್ಪಿಸುತ್ತಿರಲಿಲ್ಲ. ಕೇಶ್ವಾಪೂರ ರೋಡಿನಿಂದ ನಗರ ಬಿಟ್ಟು ಐದಾರು ಮೈಲು ದೂರ ಹೋಗುತ್ತಿದ್ದೆ. ಅಲ್ಲೊಂದು ಮೈಲುಗಲ್ಲು, ಅದುವೇ ನನ್ನ ವಿಶ್ರಾಂತಿ ತಾಣ. ಅಲ್ಲಿ ಕುಳಿತು ಅನೇಕ ರೀತಿಯಾಗಿ ವಿಚಾರಿಸಿದ್ದುಂಟು, ಮೌನ ಚಿಂತನೆಗೆ ಆ ಸ್ಥಳ ತುಂಬ ಪ್ರಶಸ್ತವಾಗಿತ್ತು. ಈ ವಾಯು-ವಿಹಾರ ನನಗೆ ಶಾರೀರಿಕ ಹಾಗೂ ಮಾನಸಿಕ ಬಲವನ್ನು ನೀಡಿತು. ಹಲವಾರು ಆದರ್ಶಗಳನ್ನು ಕಲಿಸಿತು. ಆ ಆದರ್ಶಗಳ ಸಾಧನೆಗಾಗಿ ಹಗಲಿರುಳೂ ಯತ್ನಿಸಿದೆ. ಹುಬ್ಬಳ್ಳಿ ಮಠಕ್ಕೆ ಬಂದ ಅತಿಥಿಗಳ ಸೇವೆ ಮಾಡುತ್ತಿದ್ದೆ. ಶ್ರೀಮಠಕ್ಕೆ ನಾಡಿನ ನಾನಾ ಮೂಲೆಗಳಿಂದ ಸಾಹಿತಿಗಳು, ಕವಿಗಳು, ಕಲಾವಿದರು, ರಾಜಕಾರಣಿಗಳು, ಬಡವರು, ಬಲ್ಲಿದರು, ಭಾವುಕರು ಎಲ್ಲ ರೀತಿಯ ಜನರು ಬರುತ್ತಿದ್ದುದರಿಂದ ಕ್ರಮೇಣ ಅವರೊಡನೆ ಸಂಪರ್ಕಿಸಿದಂತೆ ಬದುಕನ್ನು ಹತ್ತಿರವಾಗಿ ನೋಡುವ ದೃಷ್ಟಿ ಬಂದಿತು. ನಗರದ ಖ್ಯಾತ ಭಾವುಕ ಕವಿ ಪಾಲಿ ಗಂಗಪ್ಪನವರ, ಹೆಬಸೂರ ಮಾಸ್ತರರ ಹಾಗೂ ಸಾಹಿತ್ಯ ಮಂಟಪದ ಕವಿಗಳ ಪರಿಚಯ ಬಂದಂತೆ ನನ್ನಲ್ಲಿ ಮಾತನಾಡುವ ಧೈರ್ಯ ಹೆಚ್ಚಾಗಹತ್ತಿತು.

ಬೋಧಕ

ಹಂತಹಂತವಾಗಿ ವರ್ಷದಿಂದ ವರ್ಷಕ್ಕೆ ನನ್ನ ಬೆಳವಣಿಗೆ ಕಂಡ ಜಗದ್ಗುರುಗಳಿಗೆ ತುಂಬ ತೃಪ್ತಿ. ಅವರ ಜತೆ ಮಾತನಾಡುವುದೆಂದರೆ ಭಯ. ಎದುರು ನಿಂತು ಮಾತನಾಡುವದೇ ಕಷ್ಟ ಎಂದುಕೊಂಡಿರುವಾಗ ಅವರ ವಾತ್ಸಲ್ಯ, ಅಂತಃಕರಣ, ವಿಶ್ವಾಸವು ಮೈಛಳಿ ಬಿಡಿಸಿತು. ನಿಧಾನವಾಗಿ ಅವರೆದುರು ಪ್ರವಚನ ಮಾಡತೊಡಗಿದೆ. ಪ್ರತಿ ಪ್ರವಚನಕ್ಕೂ ಅವರಿಂದ ಸಿಕ್ಕ 'ಶಹಬಾಸ್'ಗಿರಿಯಿಂದ ನಾನು ತುಂಬ ಉತ್ಸಾಹಿತನಾದೆ.

ಅವರ ಜತೆ ಕಾರ್ಯಕ್ರಮಗಳಿಗೆ ಹೋಗಲು ಪ್ರಾರಂಭಿಸಿದೆ. ಮಗುವಿನಂತಹ ಸ್ವಭಾವವಿದ್ದವರು ಮಹಾತ್ಮರುಗಳು ಎಂದು ಹೇಳುವದುಂಟು. ನಾನು ಹುಬ್ಬಳ್ಳಿ ಜಗದ್ಗುರುಗಳಲ್ಲಿ ಕಂಡದ್ದು ಮಗುವಿನಂತಹ ಸರಳತೆ, ನಿರ್ಮಲತೆ. ಇಂದಿನವರೆಗೂ ಅವರು ಯಾರಿಗೂ ಬಿರುಸು ಮಾತನಾಡಿದ್ದನ್ನು, ಒಬ್ಬರ ಮೇಲೆ ಕೋಪಗೊಂಡಿದ್ದನ್ನೂ ಕಂಡಿಲ್ಲ. ನಾವು ದೊಡ್ಡವರು, ಜಗದ್ಗುರುಗಳು ಎಂಬ ಅಹಂಕಾರದಿಂದ ಗಾವುದ ದೂರ ಇದ್ದು, ಎಲ್ಲರ ಜತೆ ಸರಳವಾಗಿ ನಡೆದುಕೊಳ್ಳುತ್ತಾರೆ. ಅವರ ಕಾರ್ಯತತ್ಪರತೆ,

ಮನೋದಾರ್ಢ್ಯ, ಎಲ್ಲರಲ್ಲಿ ಬೆರೆತುಕೊಳ್ಳುವ ರೀತಿ ತಮಗೆ ಅಸೂಯೆ ಪಟ್ಟವರನ್ನು ನಿರಸೂಯತೆಯಿಂದ ಕಾಣುವ ಗುಣ, ಅವರನ್ನು ತುಂಬ ದೊಡ್ಡವರನ್ನಾಗಿ ಮಾಡಿದೆ. ಅವರಿಗೆ ಸದಾ ಕೆಲಸಬೇಕು. ಇವರ ಕೈಯಲ್ಲಿ ಕೆಲಸ ದಣಿದೀತೆ ಹೊರತು, ಇವರು ದಣಿದದ್ದಿಲ್ಲ. ಇಂಥ ದಿವ್ಯ ಚೇತನ ಎದುರಿಗಿರುವಾಗ ಸಾಧನೆ ಸಫಲವಾಗುವದರಲ್ಲಿ ಸಂದೇಹವೇನು? ನಾನು ಬೆಳೆಯುತ್ತ ಹೋದಂತೆ ಬಾಳು ನನಗೆ ಹೊಸಹೊಸ ಪಾಠಗಳನ್ನು ಕಲಿಸಿತು. ಅರಿವೇ ಗುರುವಾಯ್ತು. ನಿರಂತರ ಓದು ಬದುಕಿನ ಚಿಂತನ ಮಂಥನ ಬದುಕಿನ ಹತ್ತು ಮುಖದ ಸಂದರ್ಶನ ನನ್ನನ್ನು ಬಹಳಷ್ಟು ತಿದ್ದಿದವು. ನಾನು ಕಂಡುಂಡ ಅನುಭವಗಳನ್ನೇ ಹಲವಾರು ಮಾಧ್ಯಮದಲ್ಲಿ ಹೇಳುತ್ತಿದ್ದುದರಿಂದ ಉತ್ತಮ ಬೋಧಕನೆನಿಸಿದೆ.

ವ್ಯವಸ್ಥಾಪಕ

ಶ್ರೀ ಜಗದ್ಗುರುಗಳ ನಿಕಟ ಸಂಪರ್ಕ ಬಂದಂತೆ 'ಪರಂಜ್ಯೋತಿ' ಹಾಗೂ ಸಂಘದ ವ್ಯವಸ್ಥಾಪಕನಾಗಿ ತುಂಬ ಪರಿಶ್ರಮ ಪಟ್ಟೆ. 'ಪರಂಜ್ಯೋತಿ' ಮಾಸಪತ್ರಿಕೆ ನನಗೆ ಬಹಳಷ್ಟು ಕಲಿಸಿತು. ಕಲಿಯಬೇಕೆಂಬ ನನ್ನ ಕುತೂಹಲ ಪ್ರಿಂಟಿಂಗ್ ಕಲಿಸಿತು. ಪರಿಣತ ಪ್ರಿಂಟರನ ಕುಶಲತೆ ಬಂದನಂತರ ಅದನ್ನು ಬಿಟ್ಟೆ. ಕಂಪೋಜ ಕಲಿಯಲು ಪ್ರಯತ್ನ ಪಟ್ಟೆ, ಅದು ನನ್ನದಲ್ಲವೆನಿಸಿತು.

ಪರಂಜ್ಯೋತಿಯಲ್ಲಿ 'ಸಾಧಕ' 'ಬಂಡುಣಿ' 'ಪ್ರತ್ಯಕ್ಷದರ್ಶಿ' ಹೆಸರಿನಿಂದ ಲೇಖನಗಳನ್ನು ಬರೆಯುತ್ತಿದ್ದೆ, ಈ ಕಾರ್ಯದಲ್ಲಿ ಶ್ರೀ ಸನ್ನಿಧಿಯವರ ಮಾರ್ಗದರ್ಶನ, ಇನ್ನೊಬ್ಬ ಸಹೃದಯಿ ಶ್ರೀ ಪಲ್ಯಾಳರ ಸಹಾಯ ನೆನೆಯುವಂತಹದು ಇದೇ ಅವಧಿಯಲ್ಲಿ ಬಂದ ಶ್ರೀ ಜಗದ್ಗುರುಗಳವರ ದ್ವಾದಶ ವಾರ್ಷಿಕೋತ್ಸವ ಸಮಾರಂಭವಲ್ಲಿ ಎರಡು ತಿಂಗಳವರೆಗೆ ಪ್ರೆಸ್ ಹಗಲು ರಾತ್ರಿ ದುಡಿಯಿತು. ಹನ್ನೆರಡು ಪುಸ್ತಕಗಳಲ್ಲಿ ಒಂಬತ್ತು ಪುಸ್ತಕ, ದೊಡ್ಡ ಗಾತ್ರ, ವಿಶೇಷ ಸಂಚಿಕೆ ಪರಂಜ್ಯೋತಿ ಪ್ರೆಸ್ಸಿನಲ್ಲಿ ಅಚ್ಚುಗೊಂಡವು. ಶ್ರೀಮಠದಲ್ಲಿ ಹನ್ನೊಂದು ವರ್ಷದ ಇರುವಿಕೆ ನನ್ನನ್ನೂ ಮಠದ ಮಗುವನ್ನಾಗಿ ಮಾಡಿತ್ತು. ಮಠದ ಕೆಲಸವು ಕೆಲಸ ಎನ್ನುವಷ್ಟು ತಾದಾತ್ಮ್ಯತೆ ಬಂದಿತು. ಪಾಠಶಾಲೆಯಿರಲಿ, ಪ್ರೆಸ್ ಇರಲಿ, ಬೋರ್ಡಿಂಗ್ ಇರಲಿ, ಸಂಘ ಇರಲಿ, ಹಾಸ್ಟೇಲ್ ಇರಲಿ ಎಲ್ಲೆಡೆಯೂ ಲಕ್ಷ್ಯ. ಬಂದು ಹೋದವರ ಬಗ್ಗೆಯೂ ಆಸ್ಥೆ, ಅಕ್ಕರೆ. ಸನ್ನಿಧಿಯವರ ಪತ್ರವ್ಯವಹಾರದ ಕಾರ್ಯ ಎಲ್ಲದರಲ್ಲಿಯೂ ತ್ರಿಕರಣಪೂರ್ವಕ ದುಡಿದೆ. ನನ್ನನ್ನು ಅರ್ಥ ಮಾಡಿಕೊಂಡ ಶ್ರೀಗಳು ನನ್ನ ಸಲಹೆ ಸೂಚನೆಗಳಿಗೆ ಅಸ್ತು ಎನ್ನುತ್ತಿದ್ದರು. ಒಂದೊಂದು ಸಲ ವೈಚಾರಿಕ ಭಿನ್ನತೆಯೂ ಬರುತ್ತಿತ್ತು. ಆಗಿನ ಅವರ ವರ್ತನೆ ತುಂಬಾ ದೊಡ್ಡದು. ನನ್ನ ಮೇಲೆ ತಮ್ಮ ಅಭಿಪ್ರಾಯದ ಒತ್ತಡವನ್ನು ಎಂದೂ ಹೇರಲಿಲ್ಲ. ಇದು ಕಂಡವಳಿಗೆ ಬಾರದು.

ಸಂಘದ ವ್ಯವಸ್ಥೆ

ಲಿಂಗವಂತ ಧರ್ಮದ ಯಾವನೇ ಮಠದ ಉತ್ತರಾಧಿಕಾರಿಗೆ ಸಂಘದಲ್ಲಿ ಪ್ರವೇಶ ವಿದೆ. ಉತ್ತರಾಧಿಕಾರಿಗಳಲ್ಲದವರ ಸಂಖ್ಯೆ ಕಡಿಮೆ. ಸಂಘದಲ್ಲಿ ಒಂದರಿಂದ ಇಪ್ಪತ್ತು ಸದಸ್ಯರಿರುವದುಂಟು. ಹಿರಿಯ ಸಾಧಕರೇ ಸಂಘದ ಮೇಲ್ವಿಚಾರಕ, ಸಂಚಾಲಕರು. ಈ ನೇಮಕ ಸಂಘದ ಮಹಾಪೋಷಕರಾದ ಶ್ರೀ ಜಗದ್ಗುರುಗಳಿಂದ ಸಾಧಕರ ಒಪ್ಪಿಗೆಯ ಮೇರೆಗೆ ನಡೆಯುತ್ತಿದೆ.

ಪ್ರತಿನಿತ್ಯ ಪ್ರಾತಃಕಾಲ ೪.೩೦ ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ಅಧ್ಯಯನ. ೬ ಗಂಟೆಗೆ ಸಂಚಾಲಕರ ನಿರ್ದೇಶನದಲ್ಲಿ ಯೋಗಾಸನ. ಮಧ್ಯಾಹ್ನ ೧೨ ಗಂಟೆಗೆ ಸ್ನಾನ, ಪೂಜೆ, ಪ್ರಸಾದ; ಸಾಯಂಕಾಲ ಶಿವಾನುಭವ ಶಾಸ್ತ್ರ, ಪ್ರವಚನ. ಸರದಿಯಂತೆ, ಹದಿನೈದು ದಿನಗಳಿಗೊಮ್ಮೆ ನಡೆಯುವ ಪಾಕ್ಷಿಕ ಸಭೆಯಲ್ಲಿ ಧರ್ಮ, ಸಂಸ್ಕೃತಿ, ಸಾಹಿತ್ಯಗಳಿಗೆ ಸಂಬಂಧಿಸಿದ ಉಪನ್ಯಾಸ. ವರ್ಷಕ್ಕೊಂದು ಕೈಬರಹದ ಸಂಪುಟ, 'ಧರ್ಮತರಂಗಿಣಿ' ಸಂಘದ ಸಾಧನೆಗೆ ಸಾಕ್ಷಿ.

ಪ್ರತಿವರ್ಷ ಲಿಂ. ಹಾನಗಲ್ ಕುಮಾರ ಶಿವಯೋಗಿಗಳ ಪುಣ್ಯ ದಿನಾಚರಣೆ ಸಂದರ್ಭದಲ್ಲಿ ಸಂಘದ ವಾರ್ಷಿಕೋತ್ಸವ. ಅಂದು ಸಾಧಕರು ಪಕ್ಷೇತರ ಚಟುವಟಿಕೆಗಳ ಪ್ರದರ್ಶನಕ್ಕೊಂದು ಸದವಕಾಶ. ಸಂಘಕ್ಕಾಗಿ ಪ್ರತ್ಯೇಕ ಕಾರ್ಯಾಲಯ. ಪ್ರತಿ ಮೂರು ನಾಲ್ಕು ಜನ ಸಾಧಕರಿಗೊಂದು ಒಪ್ಪ ಓರಣದಿಂದ ಒಡಗೂಡಿದ ಕೋಣೆ, ಸ್ನಾನದ ಮನೆ, ಪೂಜಾ ಮನೆ. ದಿನಕ್ಕೆರಡು ಹೊತ್ತು ಸತ್ವಪೂರ್ಣ ಆಹಾರ, ವಿವಿಧ ವಿಷಯ ಗಳನ್ನು ಕುರಿತು ಸಹಸ್ರ ಗ್ರಂಥಗಳ ದೊಡ್ಡ ಗ್ರಂಥಾಲಯ. ದಿನಪತ್ರಿಕೆ, ನಿಯತಕಾಲಿಕೆಗಳ ವಾಚನಾಲಯ, ಗೋಶಾಲೆ, ಹೂತೋಟ, ತರಕಾರಿತೋಟ, ಯೋಗಮಂದಿರ, ಸಭೆ ಸಮ್ಮೇಳನಗಳಿಗೆ ಶಿವಾನುಭವಮಂಟಪ, ಪ್ರಿಂಟಿಂಗ್ ಪ್ರೆಸ್, ಪರಂಜ್ಯೋತಿ ಮಾಸಪತ್ರಿಕೆ. ಒಟ್ಟಿನ ಮೇಲೆ ಸಂಘದಲ್ಲಿ ವ್ಯಕ್ತಿತ್ವದ ಸಮಗ್ರ ವಿಕಾಸಕ್ಕೆ ಬೇಕಾದ ಎಲ್ಲ ಅವಕಾಶಗಳನ್ನು ಕಲ್ಪಿಸಲಾಗಿದೆ. ಈ ಅವಕಾಶವನ್ನೆಲ್ಲ ಸದುಪಯೋಗಪಡಿಸಿಕೊಂಡೆ ಎಂಬುದು ಎಂಥ ಅಭಿಮಾನ.

ಸಂಘದ ಸಾಧಕರಲ್ಲಿ ಎರಡು ವರ್ಗ, ಸಂಸ್ಕೃತ ಅಭ್ಯಾಸದವರು ಒಂದಾದರೆ, ಇನ್ನೊಂದು ಇಂಗ್ಲೀಷ್ ಅಭ್ಯಾಸಿಗಳದು. ಸಂಸ್ಕೃತ ಅಭ್ಯಸಿಸುವ ಸಾಧಕರು ಕಲಕತ್ತ, ಮೈಸೂರು ಸಂಸ್ಕೃತ ಪರೀಕ್ಷೆಗಳನ್ನು ಕಟ್ಟಬೇಕು. ಮಠದಲ್ಲಿ ನಡೆಯುವ ಶಾಸ್ತ್ರ, ಪುರಾಣ ಪ್ರವಚನ ಅಧ್ಯಯನಗಳಲ್ಲಿ ಭಾಗವಹಿಸಬೇಕು. ಗಾಯನದಲ್ಲಿ ಆಸಕ್ತಿ ಇದ್ದವರಿಗೆ ಸಂಗೀತ ಪಾಠವೂ ಉಂಟು. ಇಂಗ್ಲೀಷ ವಿಭಾಗದ ಸಾಧಕರು ತಮ್ಮ ಹೈಸ್ಕೂಲ ಕಾಲೇಜು ಅಥವಾ ವಿಶ್ವವಿದ್ಯಾಲಯದ ಅಭ್ಯಾಸದೊಂದಿಗೆ ಸಂಸ್ಕೃತವನ್ನೂ ಕಡ್ಡಾಯವಾಗಿ ಕಲಿಯ ಬೇಕು. ಆಚಾರ, ವಿಚಾರ, ಸೇವಾಭಾವ, ಇವು ಎರಡೂ ವರ್ಗದವರು ಪಾಲಿಸಬೇಕಾದ

ಸಾಮಾನ್ಯ ನಿಯಮಗಳು. ಆಚಾರ ಶೀಲರಾಗಬೇಕು ಎಂದಾಗ ಆಚಾರವೆಂದರೆ ಬರೀ ಸಾಂಪ್ರದಾಯಿಕ ನಡೆಯಲ್ಲ. ಆಚಾರವೆಂದರೆ ನಡೆ, ಒಳ್ಳೆಯ ನಡೆ, ಸ್ವಾವಲಂಬನದ ನಡೆ. ಸಾಧಕ ಬ್ರಹ್ಮಚಾರಿಯಾಗಿರಬೇಕು. ತಣ್ಣೀರು ಸ್ನಾನ ಮಾಡಬೇಕು. ಹಿರಿಯ ಸಾಧಕರು ಸಂಜೆ ಮುಂಜಾವುಗಳಲ್ಲಿ ಎರಡು ಹೊತ್ತು ಸ್ನಾನ ಮಾಡಬೇಕು. ಪ್ರತಿನಿತ್ಯ ಕೆಲ ಸಮಯ ವಾದರೂ ಧ್ಯಾನ, ಲಿಂಗಾರ್ಚನೆ ಆಧ್ಯಾತ್ಮಿಕ ಸಾಧನೆಯಲ್ಲಿ ಕಾಲ ಕಳೆಯಬೇಕು. ತನ್ನ ಬಟ್ಟೆಗಳನ್ನು ತಾನೇ ತೊಳೆದುಕೊಳ್ಳಬೇಕು. ಕೊಠಡಿಯನ್ನು ಸ್ವಚ್ಛವಾಗಿ ಇಟ್ಟುಕೊಳ್ಳ ಬೇಕು. ಸಂಚಾಲಕರಿಗೆ ವಿಧೇಯನಾಗಿದ್ದುಕೊಂಡು, ಶ್ರೀಮಠದ ಸೇವೆ ಸಲ್ಲಿಸುತ್ತಿರಬೇಕು. ಸಂಘದ ವಿಚಾರಸಂಕೀರಣ, ಸಭೆ, ಸ್ಪರ್ಧೆಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಪಠ್ಯೇತರ ಚಟುವಟಿಕೆಗಳು ಆತ್ಮವೋಚಿತವಾಗಿರಬೇಕು. ಮೇಲು ಕೀಳು ಭಾವವಿಲ್ಲದೆ ಸೇವೆಗೈಯ್ಯಬೇಕು. ಈ ವ್ಯವಸ್ಥೆ ಪಲವು ಹನ್ನೆರಡು ಭಾಗದಿಂದ ಬಂದ ನಮ್ಮನ್ನು ಬೌದ್ಧಿಕವಾಗಿ, ಮಾನಸಿಕವಾಗಿ, ಸ್ನೇಹ ತಂತುವಿನಿಂದ ಬಿಗಿಯುತ್ತಿತ್ತು.

ಸ್ನೇಹ-ರಂಗ

ನನ್ನ ಸಂಘ ಜೀವನದ ಅಪೂರ್ವತೆ ಇರುವದು, ನಾಗಳಿಸಿದ ಸ್ನೇಹ ರಂಗದಲ್ಲಿ. ಪ್ರಾರಂಭದಲ್ಲಿ ಕೆಲ ವರ್ಷಗಳನ್ನು ಬಿಟ್ಟರೆ ಇತ್ತೀಚಿನ ೪-೫ ವರ್ಷಗಳ ಜೀವನ ಅದೊಂದು ಜೇನು ತೊಟ್ಟ, ರಸಘಟ್ಟಿ. ಹೆಚ್ಚು ಕಡಿಮೆ ಸಮ ವಯಸ್ಸಿನ ಸಮಾನ ವಿಚಾರದ ನಮ್ಮಲ್ಲಿ ವಿದ್ಯಾರ್ಥಿ ಜೀವನದ ಸಾಮಾನ್ಯವಾದ ಅಸೂಯೆ, ಮಾತ್ಸರ್ಯ ಎಂದೂ ಕಾಣಲಿಲ್ಲ. ಹೊರಗಿನವರು ಅದನ್ನು ಬಿತ್ತದರೆ ಮೊಳಕೆಯೊಡೆಯಗೊಡುತ್ತಿರಲಿಲ್ಲ. ಚಿಕ್ಕವ, ದೊಡ್ಡವ, ಧನಿಕ, ಬಡವ, ಹಳಬ. ಹೊಸಬ ಎಂಬ ಭಾವ ನಮ್ಮಿಂದ ತುಂಬ ದೂರ. ವಾರದಲ್ಲಿ ಒಂದು ದಿನವಾದರು ಸಾಹಿತ್ಯ-ವಾಚನ, ಧರ್ಮ, ಸಾಮಾಜಿಕ ಚಿಂತನ, ವಾದ-ವಿವಾದ ನಡೆಯುತ್ತಿತ್ತು. ಈ ಚರ್ಚೆಗಳು ಪರಸ್ಪರರಲ್ಲಿ ತಿಳುವಳಿಕೆಯನ್ನು ಹೆಚ್ಚಿಸಿ ನಮ್ಮನ್ನು ಮತ್ತಷ್ಟು ಹತ್ತಿರಕ್ಕೆ ತಂದುವೆ ಹೊರತು ಬಿನ್ನತೆಯ ಅಪಸ್ವರ ಹೊರಡಿಸಲಿಲ್ಲ. ನಮ್ಮಲ್ಲಿಯು ತಪ್ಪುಗಳು ನಡೆಯುತ್ತಿದ್ದವು. ನಾವಾರೂ ಹುಟ್ಟಿನಿಂದಲೆ ಪರಮಹಂಸರಾಗಿರಲಿಲ್ಲ. ತಪ್ಪಿದಾಗ ಸಹಜವಾಗಿ ಅವನ್ನು ಒಪ್ಪಿ ಮುಂದೆ ಹಾಗೆ ನಡೆಯದಂತೆ ಎಚ್ಚರ ವಹಿಸು ತ್ತಿದ್ದೆವು. ಎಂತಹದೆ ಸಮಸ್ಯೆಯನ್ನು ಸಮಾಧಾನವಾಗುವ ಹಾಗೆ ಪರಿಹರಿಸಿ ಅಲ್ಲಿ ನಗೆಯುಕ್ಕುವಂತೆ ಮಾಡುತ್ತಿದ್ದೆವು.

ಸಮ ವಯಸ್ಸಿನ ಸಮಾನ ವಿಚಾರ ಧೋರಣೆಯ ಹಿರಿಯ ಸಾಧಕರ ನಮ್ಮ 'ಟೀಮು' ಬಲು ಸುಂದರವಾಗಿತ್ತು: ನಮ್ಮಲ್ಲಿಯ ಆ ಒಡನಾಟ, ಮಾತುಕತೆಯ ರಸ ನಿಮಿಷಗಳನ್ನು ಶಬ್ದದಲ್ಲಿ ಹಿಡಿದಿಡುವದು ಅಸಾಧ್ಯ. ನಾನು ಏನಾದರೂ ಹೊಸ ಸಾಹಿತ್ಯಿಕ. ಸಾಮಾಜಿಕ, ಧಾರ್ಮಿಕ ವಿಷಯವನ್ನು ಕುರಿತು ಹೇಳುತ್ತಿದ್ದರೆ "ದುಂಡು ಮೇಜಿನ ಪರಿಷತ್ತೇ" ನೆರೆಯುತ್ತಿತ್ತು ಲಕ್ಷ್ಯಕೊಟ್ಟು ಕೇಳುವ ಆ ತನ್ಮಯತೆ ಮಧ್ಯದಲ್ಲಿ ಒರುವ ಸಲುಗೆಯ

ಜೋಕು, ಆ ಪರ್ಷ, ಆ ಹುರುಪು ಇನ್ನೆಂದು ದೊರೆತಾವು? ಒಂದಕ್ಕಿಂತ ಒಂದು ಅಪೂರ್ವ. ಒಬ್ಬೊಬ್ಬರು ಒಂದೊಂದು ತರಹ. ಪ್ರತಿಭಾನ್ವಿತ ಮಧುರ ಮಾತುಗಾರ 'ಆನಂದಂ' (ಷಡಕ್ಷರಿ ದೇವರು) ಶಿಸ್ತಿನ ಜೀವನ, ಕೊಂಚ ಬಿಗುವಾನವ ತೆಲಸಂಗದವರು (ತೆಲಸಂಗದ ಮಲ್ಲಿಕಾರ್ಜುನ ದೇವರು). ನಿಃಸ್ವಾರ್ಥ ಪ್ರವೃತ್ತಿಯ ಕಲ್ಯಾಣದ ಪ್ರಭುದೇವರು ಕೃತ್ರಿಮವನರಿಯದ ಶಿವಕುಮಾರ ದೇವರು. ಮಹೇಶ್ವರ ದೇವರು ಯೋಗಿ ಬಾಳಿಗೆ, ಅಕುಟಿಲ ಮನದ 'ಪ್ಯಾಂಟಮ್' (ರುದ್ರಾಕ್ಷಿಮಠದ ವಿಶ್ವನಾಥ ದೇವರು) ಶಾಂತ ಸರೋವರದಂತಹ ಕೂಡಲದೇವರು. ಹಾಲು ಹೃದಯದ ಶಿವಯೋಗಿ ದೇವರು, ಸೌಮ್ಯ ಸ್ವಭಾವದ ಪೋರಟಗಿ ದೇವರು, ಎರಡೆತ್ತಿನಮಠದ ದೇವರು ನಾವೆಲ್ಲ ಒಂದೇ ಕುಟುಂಬ ದವರೆನ್ನುವಷ್ಟು ಅನ್ಯೋನ್ಯವಾಗಿ ಸಂಘದ ಸುವಿಶಾಲ ಸ್ನೇಹದಾಲದಡಿಯಲ್ಲಿ ಬೆಳೆದು, ಸದ್ಯ ಒಂದೊಂದು ದಿಕ್ಕಿಗೆ ನಾವು ಹೊಂದಿದ ಸಾಧನೆ, ಸಂಸ್ಕಾರದ ಬಲದಿಂದ ಸೇವೆ ಮಾಡುತ್ತಿದ್ದೇವೆ. ಅಂದಿನ ಸ್ನೇಹ ಬಾಂಧವ್ಯವನ್ನಿಂದೂ ಉಳಿಸಿಕೊಂಡಿದ್ದೇವೆ.

ನಾನು ಶ್ರೀ ಕುಮಾರೇಶ್ವರ ಸಂಘವನ್ನು ಸೇರಿದ್ದು, ಹೊಸ ಮನುಷ್ಯನಾಗಿ ಹೊಸ ಹೆಸರಿನಿಂದ, ಬಿಟ್ಟದ್ದು ಹೊಸ ಮನುಷ್ಯನಾಗಿ. ಹೊಸ ಹೆಸರಿನಿಂದ, ಸೇರುವ ಪೂರ್ವದಲ್ಲಿ ಕಾಡು ಕಲ್ಲಾಗಿದ್ದೆ. ಬಿಡುವ ಪೂರ್ವದಲ್ಲಿ ಸುಂದರ ಮೂರ್ತಿಯಾದೆ. ನನ್ನ ದೇಹ ಅಲ್ಲಿಯ ಅನ್ನದಿಂದ ಬೆಳೆದಿದೆ. ನನ್ನ ಬುದ್ಧಿ ಅಲ್ಲಿಯ ಜ್ಞಾನದಿಂದ ಬೆಳೆದಿದೆ. ಒಟ್ಟು ನಾನು ಸಂಘದ ನಿರ್ಮಾಣ.

ಇಂದು ಸಂಘದ ಚಟುವಟಿಕೆಗಳು ವಿಸ್ತಾರವಾಗಿವೆ. ಅವನ್ನೆಲ್ಲ ಕಂಡಾಗ ನಾನು ಇನ್ನೂ ಕೆಲ ದಿನವಾದರೂ ಅಲ್ಲಿ ಇರಬಾರದಾಗಿತ್ತೆ ಎನಿಸುತ್ತದೆ. ದ್ವಾದಶ ವರ್ಷದ ಈ ಸಮಾರಂಭದಂತೆಯೇ ಈ ಸಂಘವು ಶತವರ್ಷದ ಸಮಾರಂಭವನ್ನು ಏರ್ಪಡಿಸುವ ಸುಯೋಗ ಬರಲಿ, ಸಾವಿರ ವರುಷ ಸಾವಿರದ ಬದುಕಿ, ಧರ್ಮ, ಸಂಸ್ಕೃತಿ, ಸಮಾಜಗಳ ರಕ್ಷಣೆಗೆ ಯೋಗ್ಯ ಸ್ವಾಮಿಗಳನ್ನು ತಯಾರಿಸುತ್ತಿರಲಿ, ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಉತ್ತರೋತ್ತರ ಅಭಿವೃದ್ಧಿ ಹೊಂದಿ ಅವರ ಧರ್ಮಕೀರ್ತಿ ದಶ ದಿಕ್ಕುಗಳಲ್ಲಿ ಹರಡುವಂತೆ ಸ್ವಾಮಿ ಸಿದ್ಧಲಿಂಗನು ಅನುಗ್ರಹಿಸಲಿ ಎಂದು ತುಂಬು ಹೃದಯದೊಡನೆ ಹಾರೈಸಿ, ಲೇಖನಿಗೆ ಮಂಗಲ ಮಾಡುವೆ.

□□

ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು

—ಶ್ರೀ ಮ.ನಿ.ಜ. ಮಲ್ಲಿಕಾರ್ಜುನ ಮುರುಘರಾಜೇಂದ್ರ
ಮಹಾಸ್ವಾಮಿಗಳು, ಆನಂದಪುರ.

'ಮಹಾ ವ್ಯಕ್ತಿಯ ನಿಜವಾದ ಯೋಗ್ಯತೆ ಪ್ರಕಟವಾಗುವದು ಸಣ್ಣ ಕಾರ್ಯಗಳ ಮೂಲಕ ಅಲ್ಲ, ಆತ ಮಹತ್ತಾದ ಕಾರ್ಯಗಳ ಹೊಣೆ ಹೊತ್ತಾಗ' ಎಂಬ ಕನ್‌ಫ್ಯೂಷಿಯಸ್‌ನ ಮಾತಿಗೆ ಹಾನಗಲ್ ಶ್ರೀ ಕುಮಾರ ಶಿವಯೋಗಿಗಳು ಒಂದು ನಿದರ್ಶನ. ನಮ್ಮ ಸಮಾಜವು ಅಜ್ಞಾನಾಂಧಕಾರದಲ್ಲಿ ಮುಳುಗಿರುವಾಗ ಕೋಲ್ಮಿಂಚಿನಂತೆ ವ್ಯಕ್ತಿಯಾಗಿ ಜನಿಸಿ, ಶಕ್ತಿಯಾಗಿ ವಿಕಾಸಹೊಂದಿ, ಸಂಸ್ಥೆಯಾಗಿ ಕಾರ್ಯ ಗೈದರು. ವೀರಶೈವ ಧರ್ಮದ ಪ್ರಗತಿಗಾಗಿ ಸಕಲ ಜೀವಾತ್ಮರ ಲೇಸಿಗಾಗಿ ತಮ್ಮನ್ನು ಅವಲಂಬಿಸಿ ವಿಕಾಸವಾಗುವುದು ಮನುಷ್ಯಗುಣ ವ್ಯಕ್ತಿಯು ಸಮಾಜದ ಅಂಗ. ಸಮಾಜವು ರಾಷ್ಟ್ರದ ಒಂದು ಭಾಗ. ವ್ಯಕ್ತಿಯ ಉನ್ನತಿಯು ಸಮಾಜಕ್ಕೂ, ಸಮಾಜದ ಅಭ್ಯುದಯವು ರಾಷ್ಟ್ರಕ್ಕೂ ಒಂದಕ್ಕೊಂದು ಪೂರಕ. ಈ ತತ್ತ್ವವನ್ನರಿತ ಶ್ರೀ ಕುಮಾರ ಶಿವಯೋಗಿಗಳು ಅಖಿಲ ಭಾರತ ವೀರಶೈವ ಮಹಾಸಭೆ ಸ್ಥಾಪಿಸಿ, ಸಮಾಜದ ಸಂಘಟನೆಗೆ ಬುನಾದಿ ಹಾಕಿದರು. ಆದರ್ಶ ಮಠಾಧೀಶರ ನಿರ್ಮಾಣಕ್ಕೆ ಧರ್ಮ ಸಾಹಿತ್ಯ ಸಂಸ್ಕೃತಿಗಳ ರಕ್ಷಣೆಗಾಗಿ ಶಿವಯೋಗಮಂದಿರ ನಿರ್ಮಿಸಿದರು. ಇವುಗಳ ಪರಿಣಾಮ ಸರ್ವಶ್ರುತ. ಇಂತಹ ಕಾರಣಿಕ ಯುಗಪುರುಷ ದಿವ್ಯ ಧ್ಯೇಯಾದರ್ಶಗಳ ಭವ್ಯ ಬುನಾದಿಯ ಮೇಲೆ ಜನ್ಮವೆತ್ತ ಸಂಘವೇ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ.

ಮಹಾನ್ ತತ್ತ್ವಜ್ಞಾನಿ ಸಾಕ್ರಟೀಸ ಒಂದಕ್ಷರ ಬರೆಯದಿದ್ದರೂ ಅವರ ಆತ್ಮೀಯ ಶಿಷ್ಯ, ಪ್ಲೇಟೋ ಆತನ ಸಿದ್ಧಾಂತವನ್ನು ವಿಶ್ವವ್ಯಾಪಕಗೊಳಿಸಿದ. ರಾಮ ಕೃಷ್ಣರ ತತ್ವ ವಿವೇಕಾನಂದರಿಂದ ಲೋಕಪ್ರಿಯವಾಯಿತು. ಅಂತೆಯೇ ಶ್ರೀ ಕುಮಾರೇಶ್ವರರ ಸಂಕಲ್ಪಗಳು, ಅವರ ಕರುಣೆಯ ಕಂದರೂ ಅವರ ಶಿವಯೋಗ ಮಂದಿರದಲ್ಲಿ ಅಧ್ಯಯನ ಗೈದವರೂ ಆದ ಹುಬ್ಬಳ್ಳಿ ಮೂರುಸಾವಿರಮಠದ ಶ್ರೀ ಜಗದ್ಗುರು ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರಿಂದ ನೆರವೇರಿದವು. ವೀರಶೈವ ಧರ್ಮ ತತ್ವಗಳನ್ನು ದೇಶವಿದೇಶಗಲ್ಲಿ ಬಿತ್ತರಿಸಿ ಬಂದಿದ್ದಾರೆ, ವಿಶ್ವಧರ್ಮವಿದು ಮಾತನ್ನು ದೃಢಪಡಿಸಿದ್ದಾರೆ. ವೀರಶೈವ ಧರ್ಮದ ಇತಿಹಾಸದಲ್ಲಿ ಹುಬ್ಬಳ್ಳಿ ಶ್ರೀ ಮೂರುಸಾವಿರಮಠದ ಪಾತ್ರ ಹಿರಿದಾದುದು. ಸದ್ಯದ ಶ್ರೀ ಜಗದ್ಗುರುಗಳವರು ಸುವ್ಯವಸ್ಥಿತ ಸಮಾಜ ರಚನೆಗಾಗಿ ಶ್ರಮಿಸುತ್ತಿದ್ದಾರೆ. ಆದರ್ಶ ನೇತಾರರೆನಿಸಿದ್ದಾರೆ. ಅವರ ಆಶ್ರಯದಲ್ಲಿ ಹಲವಾರು ಸಂಘ ಸಂಸ್ಥೆಗಳು ತಲೆ

ಯೆತ್ತಿ ನಿಂತಿವೆ. ಅವುಗಳಲ್ಲಿಯೇ ಬಹುಮುಖ್ಯವಾದುದು ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ. ಇದು ಹನ್ನೆರಡರ ಹಳೆಯ ಹರೆಯದಲ್ಲಿದ್ದರೂ ಸಾಧಿಸಿದ ಪ್ರಗತಿ ಗಮನಾರ್ಹವಾಗಿದೆ ಇದೊಂದು ಶಿವಯೋಗಿಗಳ ತರಬೇತಿ ಕೇಂದ್ರ. ಜನತೆಗೆ ದಾರಿ ತೋರುವ ಮಠಾಧೀಶರನ್ನು ಸಮಾಜಕ್ಕೆ ನೀಡಿದೆ, ನೀಡುತ್ತಲಿದೆ. ಧರ್ಮ ಹಾಗೂ ಮಠಗಳ ಸ್ಥಾನ ಕೆಳಗಿಳಿಯುತ್ತಿರುವ ಈ ವಿಕ್ಷಿಪ್ತ ಕಾಲದಲ್ಲಿ ಧರ್ಮ ಹಾಗೂ ಮಠಗಳನ್ನು ಸಮರ್ಥ ರೀತಿಯಲ್ಲಿ ಎತ್ತಿ ಹಿಡಿಯುವ ಧರ್ಮದರ್ಶಿಗಳ ಅವಶ್ಯಕತೆಯನ್ನು ಪೂರೈಸಲು ಪಣತೊಟ್ಟು ಕಾರ್ಯಪ್ರವೃತ್ತವಾಗಿದೆ. ಯೋಗಿಗಳೆಂದರೆ ಗಿರಿ ಗಂವರಗಳಲ್ಲಿರುವ ಕಾಲ ಒಂದಿತ್ತು. ಈಗ ಭಿನ್ನವಾಗಿದೆ. ಸಮಾಜವೊಡನೆ ನಿಕಟ ಸಂಪರ್ಕ ಹೊಂದಿ ಲೌಕಿಕ ಪಾರಮಾರ್ಥವೆರಡನ್ನು ಕೂಡಿ ನಡೆಸುವ ಜಾಣರಾಗಬೇಕಾಗಿದೆ. ಬಹು ಭಾಷಾ ಪಂಡಿತರಾಗಿ ದೇಶ ವಿದೇಶಗಳಲ್ಲಿ, ಮನೆ ಮನೆಗೂ, ಮನ ಮನಕ್ಕೂ, ಧರ್ಮ ಸಂದೇಶಗಳ ವಾಹಕರಾಗಬೇಕಾಗಿದೆ. ಈ ದಿಶೆಯ ಶಿಕ್ಷಣವು ಸಂಘದ ಸಾಧಕರಿಗೆ ದೊರೆಯುತ್ತಿದೆ. ಹುಬ್ಬಳ್ಳಿ ಶ್ರೀ ಜಗದ್ಗುರುಗಳವರ ನಿರಂತರ ಮಾರ್ಗದರ್ಶನದಲ್ಲಿ ಸಂಘ ಅತ್ಯಂತ ಜನಪ್ರಿಯವಾಗಿದ್ದು ಸಮಾಜದ ಆಶಾಕಿರಣವಾಗಿದೆ.

ಕಲ್ಯಾಣದ ಕ್ರಾಂತಿಯು ನಾಡಿನ ತುಂಬೆಲ್ಲ ಹರಡಿದ್ದ ಶರಣರನ್ನು ತನ್ನತ್ತ ಆಕರ್ಷಿಸಿದಂತೆ, ಶ್ರೀ ಸಂಘದ ದಿವ್ಯ ಧ್ಯೇಯಾದರ್ಶಗಳು ನಮ್ಮನ್ನು ಆಕರ್ಷಿಸಿದವು. ಶಿವಯೋಗಮಂದಿರ ಆಧ್ಯಾತ್ಮ ಶಿಕ್ಷಣ ಪೂರೈಸಿದ ನಂತರ ಇತರ ಉನ್ನತ ವ್ಯಾಸಂಗಕ್ಕೆ ಕಾಶಿಗೆ ಹೊರಡಬೇಕೆಂದಿದ್ದಾಗ ಶ್ರೀ ಸಂಘದ ಸಾಧಕರಾಗಿ ೧೯೬೯ರಲ್ಲಿ ಸೇರಿದುದು ಒಂದು ಯೋಗಾಯೋಗ, ಸುಯೋಗ. ಸಂಘದ ಕಾರ್ಯಕ್ಷೇತ್ರ ವ್ಯಾಪಕವಾದುದು.

ಇಲ್ಲಿ ಜ್ಞಾನ ಕ್ರಿಯೆಗಳು ಸಮನ್ವಯಗೊಂಡಿವೆ. ಸಾಧಕರ ಪುಸ್ತಕ ಜ್ಞಾನ, ಧಾರ್ಮಿಕ ಸಾಹಿತ್ಯಿಕ ಕ್ಷೇತ್ರಗಳ ಕ್ರಿಯೆ ಇವೆರಡರ ಅನುಭವದ ಜೇಂಗೊಡ ಶ್ರೀ ಸಂಘ. ಎತ್ತಣ ಮಾಮರ ಎತ್ತಣ ಕೋಗಿಲೆಯಂತೆ ನಾವುಗಳೆಲ್ಲ ಸಂಘದ ಸಮರಸ ಜೀವನ ನಡೆಸುತ್ತಿದ್ದೆವು. ಎಲ್ಲರೂ ಸಾಧನೆಯತ್ತ ಏಕಮುಖವಾಗಿ ಪ್ರವಹಿಸುತ್ತಿದ್ದುದು ವಿಶೇಷ. ಸಮಾಜಶಾಸ್ತ್ರದ ವಿಕಾಸ ತತ್ತ್ವದಂತೆ ಸಂಘ ಜೀವನ ಪ್ರಾಣಿಗಳಿಗೂ ಅನಿವಾರ್ಯವಾಗಿರುವಾಗ ಪ್ರಗತಿಪರ ಮಾನವನಿಗೆ ಅನಿವಾರ್ಯವಾಗುವಲ್ಲಿ ಅಚ್ಚರಿ ಏನು, ಆ ದೃಷ್ಟಿಯಿಂದ ಇದು ಆದರ್ಶ ಸಂಘ.

ಸಾಧಕರ ಹಿರಿ ಕಿರಿತನ ವಯದಿಂದಲ್ಲ, ಅನುಭವದಿಂದ. ವಿವಿಧ ಭಾಷೆ ಸಂಸ್ಕೃತಿಗಳ ಸಾಧಕರು ಒಂದೆಡೆ ಸೇರಿದ್ದರೂ ಪರಸ್ಪರ ಅರಿವು ಒಲವಿತ್ತು. ಯಾವುದೇ ಭಿನ್ನತೆ ಏಕತೆಗೆ ತೊಡಕಾಗಲಿಲ್ಲ. ಕಿರಿಯರಿಗೆ ಹಿರಿಯರಿಂದ ಹಿರಿಯರಿಗೆ ಶ್ರೀ ಜಗದ್ಗುರುಗಳವರಿಂದ ಮಾರ್ಗದರ್ಶನವು ನಿರಂತರವಾಗಿ ದೊರೆಯುತ್ತಿತ್ತು. ಪ್ರತಿಯೊಬ್ಬ ಸಾಧಕರ ವೈಯಕ್ತಿಕ ಪ್ರಗತಿಯ ಬಗೆಗೂ ಅತ್ಯಂತ ಆಸ್ಥೆ ವಹಿಸುವ ವಾತ್ಸಲ್ಯ ಮೂರ್ತಿ ಶ್ರೀ ಜಗದ್ಗುರು

ಗಳವರದು. ಅವರ ಸರಳ ಸೌಜನ್ಯತೆ, ಕಾರ್ಯಕ್ಷಮತೆ ಸಾಧಕರಿಗೆ ದಾರಿದೀಪವಾದರೆ, ಕರ್ತೃ ಜಗದ್ಗುರು ಗುರುಸಿದ್ಧೇಶ್ವರನ ಪವಿತ್ರ ಪರಿಸರವು ದಿವ್ಯ ಚೇತನ. ನಿತ್ಯದ ಕಾರ್ಯ ಚಟುವಟಿಕೆಗಳು ಮಾನಸಿಕ, ಶಾರೀರಿಕ ಪ್ರಗತಿಗೆ ಪ್ರೇರಕ. ಧ್ಯಾನ, ಪೂಜಾ, ಅಧ್ಯಯನ, ಚರ್ಚಾಗೋಷ್ಠಿ, ಲೇಖನ ಸ್ಪರ್ಧೆ ಮಾನಸಿಕ ಸ್ಥಿರತೆಗೆ ನೆರವಾದರೆ, ಆಸನ, ಇತರ ಕಾರ್ಯಕ್ಷೇತ್ರಗಳ ಸಕ್ರಿಯ ಸೇವೆ ಶಾರೀರಿಕ ದೃಢತೆ ಪೋಷಕ. ವಿದ್ಯೆ ವಿನಯ ಪಾತ್ರತೆ, ಸಾಮಾಜಿಕ ಹಿತಚಿಂತನೆ; ಸಾಧಕರಿಗೆ ಸಹಜ ಸಿದ್ಧ 'ಅಧ್ಯಯನನಿರತ ರಾಗಿದ್ದರೂ ಸಮಾಜದ ಆಗುಹೋಗುಗಳತ್ತ ಲಕ್ಷ್ಯ.ಪಟ್ಟಣದ ನಟ್ಟ ನಡುವಿದ್ದರೂ ನವನಾಗರಿಕತೆಯ ಸೋಂಕಿಲ್ಲ, ಆಧ್ಯಾತ್ಮ ಜೀವನಕ್ಕೆಕುಂದಿಲ್ಲ. ಬಹುಮುಖ ಪ್ರತಿಭೆಯ ಸಾಧಕರಿದ್ದರಂತೂ ಪ್ರತಿಭೆಗೆ ತಕ್ಕ ಪುರಸ್ಕಾರ. ಒಬ್ಬ ಆದರ್ಶ ಮಠಾಧೀಶರಿಗೆ ಏನೆಲ್ಲ ಅರ್ಹತೆಗಳು ಬೇಕೋ ಅವು ಇಲ್ಲಿ ಸುಲಭ ಸಾಧ್ಯ.

ಈಗಾಗಲೇ ಅನೇಕ ಸಾಧಕರು ಮಠಾಧೀಶರಾಗಿದ್ದು, ಸಂಘದ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದ್ದಾರೆ, ಪ್ರಗತಿಯ ಪ್ರತೀಕರೆನಿಸಿದ್ದಾರೆ. ಸಂಘದ ಸ್ಥಾನ ಸಮಾಜದಲ್ಲಿ ಗಣನೀಯವಾದುದು. ಇಲ್ಲಿ ಕಟ್ಟಿಕೊಂಡ ಜನದ ಬುತ್ತಿ ನಮ್ಮ ಭವಿಷ್ಯದ ಬಾಳಿನ ದಾರಿಯ ಬುತ್ತಿಯಾಗಿದೆ. ನಮ್ಮ ಸಾಧಕ ಜೀವನದ ಎಂಟು ವರ್ಷಗಳ ನಂಟಿನ ಗಂಟು ಬಿಚ್ಚಲಾರದಂತಹುದು. ಶಿವಯೋಗ ಮಂದಿರದಲ್ಲಿ ಹಾಕಿದ ಅಡಿಪಾಯದ ಮೇಲೆ ಪರಿಪೂರ್ಣ ವ್ಯಕ್ತಿತ್ವದ ಮಹಾನ್ ಸೌಧದ ನಿರ್ಮಾಣ ಮಾಡುವಲ್ಲಿ ಒಂದು ಸಂಘದ ಪಾತ್ರ ಮಹತ್ವಪೂರ್ಣವಾದುದು. ಸಾಧಕರು ಸಮಾಜ ಪ್ರೇಮಿಗಳೂ ಜ್ಞಾನಿಗಳೂ ಆಗಿರುವುದರಿಂದ ಭವಿಷ್ಯ ಉಜ್ವಲ. ಅಂತೆಯೇ "ಇಲ್ಲಿ(-ಸಂಘದಲ್ಲಿ) ಸಲ್ಲುವರು ಅಲ್ಲಿಯೂ(-ಸಮಾಜದಲ್ಲಿಯೂ) ಸಲ್ಲುವರಯ್ಯ" ಎಂಬುದು ಇಂದಿನ ಅನುಭವ.

ಸಾಧಕ ಜೀವನದ ಸಂಸ್ಮರಣೆ ಸದಾ ಸಂಸ್ಮರಣೀಯ ಹಾಗೂ ಚೇತೋಹಾರಿ ಅಂತಹವುಗಳಲ್ಲಿ ನಮ್ಮ ವಿದೇಶ ಯಾತ್ರೆ ಅವಿಸ್ಮರಣೀಯ.

ಮಾನವನಿಗೆ ಇಂದು ಬೇಕಾಗಿರುವದು ಶಾಂತಿ. ಶಾಂತಿ ಇಲ್ಲದ ಬಾಳಿಗೆ ನೆಮ್ಮದಿ ಇಲ್ಲ. ಇದನ್ನು ಹೊಂದಲು ಏಕೈಕ ದಾರಿ, ಅದು ಧರ್ಮ. ಈ ಸಿದ್ಧಾಂತದ ಮೇಲೆ ಸರ್ವಧರ್ಮ ಸಮ್ಮೇಳನ ಸಿಂಗಪುರದಲ್ಲಿ ೧೯೭೬ರಲ್ಲಿ ನಡೆಯಿತು. ೩೦೦ ಜನ ಪ್ರತಿನಿಧಿ ಗಳಲ್ಲಿ ವೀರಶೈವಧರ್ಮದ ಪ್ರತಿನಿಧಿಗಳು ನಾವಿಬ್ಬರೂ ಭಾಗವಹಿಸಿದ್ದೆವು.

ನಾವೆಲ್ಲರೂ ಆರು ದಿನಗಳ ಸಮ್ಮೇಳನದಲ್ಲಿ ಧರ್ಮದ ಮೂಲಕ ಶಾಂತಿ ಪಡೆಯಲು ಸಾಧ್ಯವೆಂದು, ನಂಬಿ ನ್ಯಾಯಯುತ ಹಾಗೂ ಯುದ್ಧ ರಹಿತ ಶಾಂತಿ, ಜಾಗತಿಕ ನವೀನ ಅರ್ಥರಚನೆ ಮತ್ತು ಧರ್ಮಗಳ ಸಮನ್ವಯ ಕುರಿತು ಚರ್ಚಿಸಿದೆವು. ಧರ್ಮಗಳ ಸೌಹಾರ್ದತೆ ಯಿಂದ ಶಾಂತಿ ಸಾಧ್ಯವೆಂಬ ಶರಣರ ವಚನಗಳ ಆಧಾರದಿಂದ ಮಂಡಿಸಲಾಯಿತು. ಮುಕ್ತಾಯ ಸಮಾರಂಭದಲ್ಲಿ ಹಿಂದೂ ಧರ್ಮದ ಪ್ರಾರ್ಥನೆಯನ್ನು ನಿರ್ವಹಿಸುವ ಅವಕಾಶ ನಮ್ಮದಾಯಿತು.

ವಿದೇಶಗಳ ಜನಜೀವನ, ಸಂಸ್ಕೃತಿ ಮೊದಲಾದವುಗಳ ಅಧ್ಯಯನದೊಂದಿಗೆ ಪ್ರೇಕ್ಷಣೀಯ ಸ್ಥಳಗಳನ್ನು, ಫ್ರಾಂಚ್ ಮೊದಲಾದ ರಾಷ್ಟ್ರಗಳನ್ನು ಸಂದರ್ಶಿಸಲಾಯಿತು. ಸಮ್ಮೇಳನ ಯಶಸ್ವಿಯಾಗಿ ನಡೆದು ನಿರ್ಣಯಗಳನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಿದೆವು. ಶ್ರೀ ಸಂಘದ ಸಾಧಕರಾಗಿದ್ದಾಗಲೇ ಈ ಧರ್ಮಯಾತ್ರೆಯಲ್ಲಿ ಪಾಲ್ಗೊಳ್ಳುವ ಅವಕಾಶ ದೊರೆತದ್ದು ಸುದೈವ, ಶ್ರೀ ಕುಮಾರೇಶನ ಸಂಕಲ್ಪ. ಜಾಗತಿಕ ಧರ್ಮ ಸಮ್ಮೇಳನದ ಸದಸ್ಯರಾದ ಪೂಜ್ಯ ಶ್ರೀ ಮೂರುಸಾವಿರಮಠದ ಜಗದ್ಗುರುಗಳವರು ಈ ಕಾರ್ಯಕ್ಕೆ ಪ್ರೇರೇಪಿಸಿದರು. ಅವರ ಚೇತನಾಪೂರ್ಣ ಹರಕೆಯ ಫಲವೇ ಈ ವಿದೇಶ ಯಾತ್ರೆ. ಇದೊಂದು ಸಾಧಕ ಜೀವನದ ಮರೆಯಲಾಗದ ಸುಸ್ಮರಣೆ.

ಶ್ರೀ ಸಂಘದ ದಿವ್ಯ ಸಂದೇಶಗಳನ್ನು ಸಾಮಾಜಿಕ ರಂಗದಲ್ಲಿ ಕಾರ್ಯರೂಪಕ್ಕೆ ತರಲಿರುವುದೇ ಮುಂದಿನ ಗುರಿ. ಇಂದಿನ ಯುಗದಲ್ಲಿ ಮಠಾಧೀಶರು ಬಹು ಜಾಗೃತರಾಗಿರಬೇಕು. ಎಲ್ಲರೂ ಸಂಘದ ಶಕ್ತಿಯಿಂದ ಸಮಾಜದ ಬೆಳವಣಿಗೆಗೆ ಶ್ರಮಿಸಬೇಕೆಂದು ಕಂಕಣಬದ್ಧರಾಗಬೇಕು. ಇಂತಹ ಆದರ್ಶ ಸಾಧಕರು ಶ್ರೀ ಸಂಘದಿಂದ ಹೊರಬರಲಿ. ಶ್ರೀ ಜಗದ್ಗುರುಗಳವರ ಕೃಪೆಯಿಂದ ಸಂಘ ಬೆಳೆದು ಜನಮನವನ್ನು ಬೆಳಗಲೆಂಬುವೇ ಹಿರಿಯಾಸೆ.

ಮೂರುಸಾವಿರಮಠದ ಮಡಿಲ ವಿವಿಧ ವಿದ್ಯಾ ಸಂಸ್ಥೆಗಳು

೧) ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘ, ಹುಬ್ಬಳ್ಳಿ
೨) ಶ್ರೀ ಜಗದ್ಗುರು ಗಂಗಾಧರ ಗಂಡುಮಕ್ಕಳ ಪ್ರೌಢಶಾಲೆ, ಹುಬ್ಬಳ್ಳಿ
೩) ಶ್ರೀ ಮೂರುಸಾವಿರಮಠ ಹೆಣ್ಣುಮಕ್ಕಳ ಪ್ರೌಢಶಾಲೆ, ಹುಬ್ಬಳ್ಳಿ
೪) ಹೆಣ್ಣುಮಕ್ಕಳ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ
೫) ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆ, ಹುಬ್ಬಳ್ಳಿ
೬) ಶ್ರೀ ಜಗದ್ಗುರು ಗಂಗಾಧರ ಸಂಸ್ಕೃತ ಮಹಾವಿದ್ಯಾಲಯ, ಹುಬ್ಬಳ್ಳಿ
೭) ಶ್ರೀ ಕುಮಾರೇಶ್ವರ ವೈದಿಕ ಜ್ಯೋತಿಷ್ಯ ಪಾಠಶಾಲೆ, ಹುಬ್ಬಳ್ಳಿ
೮) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಕೀರ್ತನ ಮಹಾವಿದ್ಯಾಲಯ, ಹುಬ್ಬಳ್ಳಿ
೯) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಜನರಲ್ ಹಾಸ್ಟೇಲ್, ಹುಬ್ಬಳ್ಳಿ
೧೦) ಅಕ್ಕಿ ಉಳವಪ್ಪ ವಿದ್ಯಾರ್ಥಿನಿಲಯ, ಹುಬ್ಬಳ್ಳಿ
೧೧) ಶ್ರೀ ಕುಮಾರೇಶ್ವರ ಶಿವಯೋಗಿ ಸಂಘ, ಹುಬ್ಬಳ್ಳಿ
೧೨) ಶ್ರೀ ಕುಮಾರೇಶ್ವರ ಅತಿಥಿಗೃಹ, ಹುಬ್ಬಳ್ಳಿ
೧೩) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಪೂಜಾ ಸೇವಾ ಸಮಿತಿ, ಹುಬ್ಬಳ್ಳಿ
೧೪) ಸಂಸ್ಕೃತಿ ಪ್ರಚಾರೋಪನ್ಯಾಸ ಮಾಲೆ, ಹುಬ್ಬಳ್ಳಿ
೧೫) 'ಪರಂಜ್ಯೋತಿ' ಧಾರ್ಮಿಕ ಮಾಸಪತ್ರಿಕೆ, ಹುಬ್ಬಳ್ಳಿ
೧೬) ಕನ್ನಡ ಗ್ರಂಥ ಪುರಸ್ಕಾರ ಸಮಿತಿ, ಹುಬ್ಬಳ್ಳಿ
೧೭) ವೀರಶೈವ ಭಾರತಿ, ಹುಬ್ಬಳ್ಳಿ
೧೮) ಲಿಂಗರಾಜ ಪ್ರಸಾದ ನಿಲಯ, ಹುಬ್ಬಳ್ಳಿ
೧೯) ಗುರುಸಿದ್ಧೇಶ್ವರ ಗ್ರಂಥಾಲಯ, ಹುಬ್ಬಳ್ಳಿ
೨೦) ಶ್ರೀ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ, ಹುಬ್ಬಳ್ಳಿ
೨೧) ಅಸುಂಡಿ ಚನ್ನಮಲ್ಲಪ್ಪ ಕಲ್ಯಾಣಮಂಟಪ, ಹುಬ್ಬಳ್ಳಿ
೨೨) ಬಸವ ಮಂಗಲ ಭವನ, ಧಾರವಾಡ
೨೩) ಹೆಣ್ಣುಮಕ್ಕಳ ವಸತಿಗೃಹ, ಹುಬ್ಬಳ್ಳಿ
೨೪) ಶ್ರೀ ಜಗದ್ಗುರು ಮೂರುಸಾವಿರಮಠ ಗ್ರಂಥಮಾಲೆ, ಹುಬ್ಬಳ್ಳಿ
೨೫) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಸಹಕಾರಿ ಆಸ್ಪತ್ರೆ, ಘಟಪ್ರಭಾ
೨೬) ನರ್ಸುಗಳ ಶಾಲೆ, ಘಟಪ್ರಭಾ (Schoal of Nureses)
೨೭) ಕ್ಷಯರೋಗ ಆಸ್ಪತ್ರೆ, ಘಟಪ್ರಭಾ

೨೮) ಶ್ರೀ ಜಗದ್ಗುರು ಗಂಗಾಧರ ಬಡರೋಗಿಗಳ ಉಚಿತ ಪ್ರಸಾದ ನಿಲಯ, ಘಟಪ್ರಭಾ

೨೯) ಕಾರ್ಯನಿರತ ಮಹಿಳೆಯರ ವಸತಿಗೃಹ, ಹುಬ್ಬಳ್ಳಿ

೩೦) ಶ್ರೀ ಜಗದ್ಗುರು ಗಂಗಾಧರ ಹಿಂದಿ ವಿದ್ಯಾಲಯ, ಹುಬ್ಬಳ್ಳಿ

೩೧) ವಿಜಯಮಹಾಂತೇಶ್ವರ ಲಲಿತ ಕಲಾ ಮಹಾವಿದ್ಯಾಲಯ, ಹುಬ್ಬಳ್ಳಿ

೩೨) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ನರ್ಸರಿ ಶಾಲೆ, ಹುಬ್ಬಳ್ಳಿ

೩೩) ಅನ್ನದಾಸೋಹ ಸಮಿತಿ, ಮೂರುಸಾವಿರಮಠ, ಹುಬ್ಬಳ್ಳಿ

೩೪) ವಿಶ್ವವಿಭೂತಿ ಬಸವೇಶ್ವರ ಪ್ರಸಾದನಿಲಯ ಮೂರುಸಾವಿರಮಠ, ಹುಬ್ಬಳ್ಳಿ

೩೫) ಶ್ರೀ ಜಗದ್ಗುರು ಗುರುಸಿದ್ಧೇಶ್ವರ ಕಲ್ಯಾಣಮಂಟಪ ಓಲೆಮಠ, ಹುಬ್ಬಳ್ಳಿ

೩೬) ಇಂಗ್ಲೀಷ್ ಮೀಡಿಯಮ್ ಸ್ಕೂಲ, ಹುಕ್ಕೇರಿ

೩೭) ಶ್ರೀ ಜಗದ್ಗುರು ಗಂಗಾಧರ ಗ್ರಂಥ ಭಾಂಡಾರ, ಹುಬ್ಬಳ್ಳಿ

೩೮) ವಿಶ್ವವೀರಶೈವ ಚೆನ್ನಬಸವೇಶ್ವರ ಸಂಶೋಧನ ಕೇಂದ್ರ, ಹುಬ್ಬಳ್ಳಿ

ಹಬ್ಬಿಹರಡಿದ ಕಾವಿಯ ಬಳ್ಳಿ
ಮೂರುಸಾವಿರಮಠದ ಯೋಗಬಳ್ಳಿ

ಶ್ರೀ ಜಗದ್ಗುರು ಮೂರುಸಾವಿರಮಠದ ಶ್ರೀ ಕುಮಾರೇಶ್ವರ ಶಿವಯೋಗಿ ಸಂಘದ ಆಶ್ರಮದಲ್ಲಿ ಪೂಜ್ಯ ಜಗದ್ಗುರುಗಳ ಸಮಗ್ರ ಮಾರ್ಗದರ್ಶನದಲ್ಲಿ ಅಧ್ಯಯನ ಗೈದು ಉತ್ಕ್ರಾಂತಿ ಸಂಪಾದಿಸಿ ಮಠಾಧೀಶರಾದವರ ಹೆಸರುಗಳು ಇಂತಿವೆ–

೧ ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು, ತೋಂಟದಾರ್ಯಮಠ, ಗದಗ–ಡಂಬಳ.

೨ ಶ್ರೀ ಜಗದ್ಗುರು ಉಮಾಪತಿ ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀಶೈಲ ಸಂಸ್ಥಾನಮಠ, ಶ್ರೀಶೈಲ.

೩ ಶ್ರೀ ಮ. ನಿ. ಪ್ರ. ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು, ಮುರುಘರಾಜೇಂದ್ರಮಠ, ಆನಂದಪುರಂ.

೪ ಶ್ರೀ ಜಗದ್ಗುರು ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು, ಸಿದ್ಧಸಂಸ್ಥಾನಮಠ, ನಿಡಸೋಸಿ.

೫ ಶ್ರೀ ಫಕೀರಮಲ್ಲಿಕಾರ್ಜುನದೇವರು, ಜಗದ್ಗುರು ಫಕೀರೇಶ್ವರಮಠ, ಶಿರಹಟ್ಟಿ.

೬ ಶ್ರೀ ಮ. ನಿ. ಪ್ರ. ಜಡೆಯ ಶಾಂತಲಿಂಗಸ್ವಾಮಿಗಳು, ದುಧನಿ–ನಿಂಬಾಳ.

೭ ಶ್ರೀ ಮ. ನಿ. ಪ್ರ. ರೇವಣಸಿದ್ಧಸ್ವಾಮಿಗಳು ಗದ್ದುಗೆಮಠ, ಕಲಬುರ್ಗಿ

೮ ಶ್ರೀ ಮ. ನಿ. ಪ್ರ. ಸಿದ್ಧಲಿಂಗಸ್ವಾಮಿಗಳು ಎರಡೆತ್ತಿನಮಠ, ಹುಬ್ಬಳ್ಳಿ

೯ ಶ್ರೀ ಮ. ನಿ. ಪ್ರ. ಸಿದ್ಧಲಿಂಗಸ್ವಾಮಿಗಳು ವಿರಕ್ತಮಠ, ಮೊರಟಗಿ

೧೦ ಶ್ರೀ ಮ. ನಿ. ಪ್ರ. ವಿರುಪಾಕ್ಷಸ್ವಾಮಿಗಳು ರುದ್ರಮುನೀಶ್ವರಮಠ, ಬೇಕಲಪರ್ವಿ

೧೧ ಶ್ರೀ ಮ. ನಿ. ಪ್ರ. ಶಿವಾನಂದಸ್ವಾಮಿಗಳು ವಿರಕ್ತಮಠ ಕರ್ಜಗಿ (ಮಹಾರಾಷ್ಟ್ರ)

೧೨ ಶ್ರೀ ಮ. ನಿ. ಪ್ರ, ಮರುಳಸಿದ್ಧಸ್ವಾಮಿಗಳು ವಿರಕ್ತಮಠ, ಮಾಡ್ಯಾಳ

೧೩ ಶ್ರೀ ಮ. ನಿ. ಪ್ರ. ಮಹಾಂತಸ್ವಾಮಿಗಳು ಕಲ್ಮಠ, ಸವಣೂರ

೧೪ ಶ್ರೀ ಮ. ನಿ. ಪ್ರ. ಶಿವಲಿಂಗಸ್ವಾಮಿಗಳು ಬಣ್ಣದಮಠ, ಶಿರ್ಶಿ–ಹುದಿಗನೂರ

೧೫ ಶ್ರೀ ಮ. ನಿ. ಪ್ರ. ಚನ್ನವೀರಸ್ವಾಮಿಗಳು ಸುವರ್ಣಗಿರಿ ವಿರಕ್ತಮಠ, ಕಪೋತಗಿರಿ

೧೬ ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯರು ರುದ್ರಸ್ವಾಮಿಮಠ, ನಿಡಗುಂದಿ

೧೭ ಶ್ರೀ ಷ. ಬ್ರ. ಚನ್ನಬಸವ ಶಿವಾಚಾರ್ಯರು ಹಿರೇಮಠ, ಮಟಮರಿ

೧೮ ಶ್ರೀ ಷ. ಬ್ರ. ಶಾಂತವೀರ ಶಿವಾಚಾರ್ಯರು ಹಿರೇಮಠ, ಬಂದರವಾಡ

೧೯ ಶ್ರೀ ಷ. ಬ್ರ. ಗುರುನಂಜೇಶ್ವರ ಶಿವಾಚಾರ್ಯರು ಗುರುನಂಜೇಶ್ವರಮಠ, ಕೂಡಲ

೨೦ ಶ್ರೀ ಷ. ಬ್ರ. ಚನ್ನವೀರ ಶಿವಾಚಾರ್ಯರು ಹಿರೇಮಠ, ನರಗುಂದ

೧೫ ಶ್ರೀ ಕುಮಾರೇಶ್ವರ ವೈದಿಕ ಪಾಠಶಾಲೆ, ಹಾವೇರಿ
೧೬ ಶ್ರೀ ವೀರೇಶ್ವರ ಪುಣ್ಯಾಶ್ರಮ, ಗದಗ
೧೭ ಶ್ರೀ ಕಾಡಸಿದ್ಧೇಶ್ವರ ಪ್ರೌಢಶಾಲೆ, ಹುಕ್ಕೇರಿ
೧೮ ಶ್ರೀ ಕುಮಾರೇಶ್ವರ ಆಯುರ್ವೇದ ಚಿಕಿತ್ಸಾಲಯ, ಧಾರವಾಡ
೧೯ ಶ್ರೀ ಕುಮಾರೇಶ್ವರ ಉಚಿತ ಆಯುರ್ವೇದ ಚಿಕಿತ್ಸಾಲಯ, ಧಾರವಾಡ
೨೦ ಶ್ರೀ ವಿಜಯ ಮಹಾಂತೇಶ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ, ಇಲಕಲ್ಲ
೨೧ ಕನ್ನಡ ಗಂಡುಮಕ್ಕಳ ಪ್ರಾಥಮಿಕ ಶಾಲೆ, ಮಲ್ಲಾಪೂರ
೨೨ ಕನ್ನಡ ಗಂಡುಮಕ್ಕಳ ಪ್ರಾಥಮಿಕ ಶಾಲೆ, ಕುಸುಗಲ್ಲ
೨೩ ರಾಷ್ಟ್ರೀಯ ರಕ್ಷಣಾ ನಿಧಿ ಸಮಿತಿ, ಭಾರತ ಸರಕಾರ
೨೪ ಬಡವಿದ್ಯಾರ್ಥಿಗಳ ನಿಧಿ ಸಮಿತಿ, ಕರ್ನಾಟಕ ರಾಜ್ಯ ಸರಕಾರ
೨೫ 'ಬಸವ ಭವನ' ನಿರ್ಮಾಣ ಸಮಿತಿ, ಮುಂಬೈ
೨೬ ಹೆಣ್ಣುಮಕ್ಕಳ ಪ್ರಾಥಮಿಕ ಶಾಲೆ, ಹುಬ್ಬಳ್ಳಿ
೨೭ ಗಂಡುಮಕ್ಕಳ ಪ್ರಾಥಮಿಕ ಶಾಲೆ, ಹುಬ್ಬಳ್ಳಿ
೨೮ ಪ್ರಾಥಮಿಕ ಶಾಲೆ, ಶಿರಬಡಗಿ
೨೯ ಶ್ರೀ ಗುರುಸಿದ್ಧೇಶ್ವರ ಸಹಕಾರಿ ಬ್ಯಾಂಕ, ಹುಬ್ಬಳ್ಳಿ
೩೦ ವೀರಶೈವ ಸಂಘಟನಾ ಸಮಿತಿ, ಹುಬ್ಬಳ್ಳಿ
೩೧ ಕೆಲವು ಮಠಗಳ ಜೀರ್ಣೋದ್ಧಾರಕ್ಕಾಗಿ ಸಹಾಯ ನೀಡಿದ್ದು
೩೨ ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರಮಠ ಕೈಗಾರಿಕಾತರಬೇತಿ ಸಂಸ್ಥೆ, ಇಲಕಲ್ಲ
೩೩ ಪ್ರಾಥಮಿಕ ಶಾಲೆ, ಘಟಪ್ರಭಾ
೩೪ ಭೂಮರಡ್ಡಿ ಇಂಜನಿಯರಿಂಗ ಕಾಲೇಜ, ಹುಬ್ಬಳ್ಳಿ
೩೫ ನೀಲಕಂಠೇಶ್ವರ ಹಾಯ್‌ಸ್ಕೂಲ ಯಾದವಾಡ, ಜಿ॥ ಬೆಳಗಾಂವ
೩೬ ಪ್ರಾಥಮಿಕ ಶಾಲೆ, ಕಮರಿಪೇಟೆ, ಹುಬ್ಬಳ್ಳಿ
೩೭ ವಿಶ್ವ ಹಿಂದೂ ಪರಿಷತ್‌ಗೆ ಸಹಾಯ ಧನ
೩೮ ದತ್ತಮಂದಿರ ಗುರುಸಿದ್ಧೇಶ್ವರ ನಗರ, ಹುಬ್ಬಳ್ಳಿ
೩೯ ಅಮ್ಮ ಹಾಸ್ಟೇಲ್, ಬೆಂಗಳೂರು
೪೦ ಶ್ರೀ ಜಗದ್ಗುರು ಗಂಗಾಧರ ಅಂಗವಿಕಲರ ಸಂಸ್ಥೆ, ವೀರಾಪೂರ ಓಣಿ, ಹುಬ್ಬಳ್ಳಿ
೪೧ ಶ್ರೀ ಜಗದ್ಗುರು ಗಂಗಾಧರ ಮೂರುಸಾವಿರಮಠ ಹಾಸ್ಪಿಟಲ್, ಸಸಿವಾಳ (ತಾ. ಅರಸಿಕೆರೆ, ಜಿ. ಹಾಸನ)
೪೨ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಶಿಷ್ಯವೇತನ.

ಶ್ರೀ ಜಗದ್ಗುರು ಮ



ವಿರಮಠ, ಹುಬ್ಬಳ್ಳಿ



ಶ್ರೀ ಮೂರುಸಾವಿರಮಠ ದರ್ಶನ

ಹುಬ್ಬಳ್ಳಿ ಶ್ರೀ ಜಗದ್ಗುರು ಮೂರುಸಾವಿರಮಠವು ಶೈಕ್ಷಣಿಕವಾಗಿ ಕನ್ನಡ ನಾಡಿಗೆ ಮೊದಲ ಕೊಡುಗೆಗಳನ್ನು ಉಡುಗೊರೆಯಾಗಿ ನೀಡಿದ ಅಗ್ರಗಣ್ಯ ಮಠ. ಈಗಾಗಲೇ 38 ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಸಂಸ್ಥೆಗಳನ್ನು ನಡೆಸುತ್ತ ಬಂದು 45 ಸಾಮಾಜಿಕ, ಶೈಕ್ಷಣಿಕ ಸಂಸ್ಥೆಗಳಿಗೆ ಸಹಾಯ ಸಹಕಾರ ನೀಡಿದ ಐತಿಹಾಸಿಕ ಘನತೆ ಪಡೆದ ಮಹಾಮಠವಾಗಿದೆ. ನಾಡಿನ ಮಠಗಳಲ್ಲಿಯೇ ಸಾಹಿತ್ಯ ವಾಙ್ಮಯೇತಿಹಾಸಕ್ಕೆ ಶ್ರೀ ಜಗದ್ಗುರು ಮೂರುಸಾವಿರಮಠವು ನೀಡಿದ ಅಮೋಘ ಕೊಡುಗೆ ಆದರ್ಶವಾದುದು. ಈಗಾಗಲೇ 600 ಗ್ರಂಥಗಳ ಪ್ರಕಟನಾ ಯೋಜನೆ ಮಾಡಿ 400 ಅತ್ಯುತ್ತಮ ಗ್ರಂಥಗಳನ್ನು ಕನ್ನಡ, ಹಿಂದಿ, ಇಂಗ್ಲೀಷ್, ತಮಿಳು, ಬಂಗಾಲಿ, ಮರಾಠಿ ಮುಂತಾದ ಭಾಷೆಗಳಲ್ಲಿ ಪ್ರಕಟಿಸಿದೆ. ಕರ್ನಾಟಕದ ಇತಿಹಾಸದಲ್ಲಿಯೇ ವೀರಶೈವ ಜಗದ್ಗುರುಗಳಲ್ಲಿ ಮೊದಲ ಬಾರಿಗೆ ಮೂರುಸಾವಿರಮಠದ ಜಗದ್ಗುರು ಶ್ರೀ ಗಂಗಾಧರ ರಾಜಯೋಗೀಂದ್ರರು ವಿದೇಶಕ್ಕೆ ಹೋಗಿ ಧಾರ್ಮಿಕ ಜಾಗೃತಿ ಮಾಡಿದ್ದು ಆದರ್ಶಯುತವಾದುದು. ಮಹಿಳೆಯರಿಗಾಗಿ ಶಿಶುವಿಹಾರದಿಂದ ಕಾಲೇಜದವರೆಗೆ ಅತ್ಯುನ್ನತ ಶಿಕ್ಷಣಕ್ಕಾಗಿ ಹೋರಾಡಿ ಬೆಳೆಸಿ ಉತ್ತರ ಕರ್ನಾಟಕದಲ್ಲಿ ಭದ್ರಬುನಾದಿ ಹಾಕಿದ ಶ್ರೀ ಮಠ. ಬರಗಾಲ ದಲ್ಲಿ ಜಗದ್ಗುರುಗಳು ಪಾದಯಾತ್ರೆ ಮಾಡಿ ನೂರಾರು ಗಂಜೀ ಕೇಂದ್ರ ಪ್ರಾರಂಭಿಸಿ ಲಕ್ಷಾಂತರ ನಿರ್ಗತಿಕರಿಗೆ ಆಶ್ರಯ ನೀಡಿದ ಮಠ. 20 ನೆಯ ಶತಮಾನದಲ್ಲಿ ಪ್ರಪ್ರಥಮವಾಗಿ 101 ಗುರು-ವಿರಕ್ತರೊಂದಿಗೆ ಧರ್ಮ ಜಾಗೃತಿಗಾಗಿ ಜಗದ್ಗುರುಗಳವರು ಪಾದಯಾತ್ರೆ ಮಾಡಿ ಜನಜೀವನಕ್ಕೆ ಸುಖ ನೀಡಿದ ಚೈತನ್ಯಶಕ್ತಿ. ಹಿಂದೂ ಮುಸ್ಲಿಂ ಬಾಂಧವರಲ್ಲಿ ಸಹೋದರ ಭಾವನೆ ಯನ್ನು ಅರಳಿಸಿದ ಆದರ್ಶಮಠ. ಕರ್ನಾಟಕ, ಆಂಧ್ರ, ಮಹಾರಾಷ್ಟ್ರದ ಮಠಗಳಿಗೆ ನೂರಾರು ಧರ್ಮ ಗುರುಗಳನ್ನು ನೀಡಿದ ಶಿವಯೋಗ ಕೇಂದ್ರ. ಸಹಕಾರಿ ಕ್ಷೇತ್ರದಲ್ಲಿ ಅಗ್ರಗಣ್ಯ ಪಂಕ್ತಿಯಲ್ಲಿ ನಿಲ್ಲಬಲ್ಲ ಬೃಹತ್ ಪ್ರಮಾ ಣದ ಆಸ್ಪತ್ರೆಯನ್ನು ಹಾಗೂ ಶ್ರೀ ಗುರುಸಿದ್ಧೇಶ್ವರ ಬ್ಯಾಂಕು ನಡೆಯಿಸಿ ಮತ್ತು ಬಡರೋಗಿಗಳಿಗೆ ಉಚಿತ ಆಹಾರ ಸೌಲಭ್ಯ ಒದಗಿಸಿ ಮಾನವೀಯ ಕಲ್ಯಾಣ ಮಾಡುತ್ತಿರುವ ಮಠವಾಗಿದೆ. ಮಹಾತ್ಮಾ ಬಸವೇಶ್ವರರ ತತ್ವವಾದ ''ಕಾಯಕವೇ ಕೈಲಾಸ'' ಇದು ಈ ಮೂರುಸಾವಿರಮಠದ ಪರಮ ಗುರಿ.

★ ★ ★